START

START

START

START

START

MICRO FILMED
BY
KARNATAKA STATE
ARCHIVES
1992

MICRO FILMED
BY

KARNATAKA STATE
ARCHIVES
1992

ARS 38 APP 90-91

ಜಯಂತಿ ಮಾಸ ಪತ್ರಿಕೆ

ಸೆಪ್ಟೆಂಬರ್ 1939 ಪುಟ 277
ರಿಂದ ಮುಂದುವರಿಸಲಾಗಿದೆ.

ಕೃಪೆ-
(ಬೆಟಗೇರಿ ಯವರ ಸಂಗ್ರಹ ದ್ವಾರಾ)

ARS 38 APP 90-91

ಜಯಂತಿ ಮಾಸ ಪತ್ರಿಕೆ

ಸೆಪ್ಟೆಂಬರ್ 1939 ಪುಟ 277

ರಿಂದ ಮುಂದುವರಿಸಲಾಗಿದೆ.

ಕೃಪೆ :-

(ಬೆಟಗೇರಿ ಯವರ ಸಂಗ್ರಹ, ಧಾರವಾಡ)

ನಮ್ಮ ಪ್ರೇಮಾ ಭಾಳ ಗುಲಾಮು ಹುಡುಗಿ !

★ ಪೇಟೆಯೊಳಗಿನ ಅಂಗಡಿಗಳನ್ನೆಲ್ಲ ಸುತ್ತಿದೆವು; ಎಲ್ಲೆಲ್ಲೂ ಆಕೆಯ ಮನಸ್ಸಿಗೆ ಬರುವಂಥ ಫ್ರಾಕಿನ ಅರಿವೆ ಸಿಗಲಿಲ್ಲ; ಕೊನೆಗೆ

ಶ್ರೀಲಕ್ಷ್ಮೀ ವಸ್ತ್ರಭಾಂಡಾರಕ್ಕೆ ಹೋದೆವು !

- ಅಲ್ಲಿಯ ಬಗೆಬಗೆಯ ಚಿತ್ರವಿಚಿತ್ರದ ಬಟ್ಟೆಗಳನ್ನು ನೋಡಿಯೆ ಪ್ರೇಮಾ, ಹಾಗೆ ಕುಣಿದಾಡ ತೊಡಗಿದಳು. ಎಷ್ಟು ಅವಳಿಗೆ ಆನಂದ !
- ಯಾವ ಬಟ್ಟೆ ತೋರಿಸಿದರೂ 'ಇದು ನನಗೆ ಬೇಕು' ಎನ್ನತೊಡಗಿದಳು.
- ತುಂಬ ಬೆಡಗಿನ ಬಟ್ಟೆ ! ಬಣ್ಣಬಣ್ಣದ ನೆರಿಗಿನ ಬಟ್ಟೆ ! ಯಾರಿಗೆ ಎಂತಹದು ಬೇಕೋ ಅಂತಹ ಬಟ್ಟೆ ಅಲ್ಲಿ ಸಿಕ್ಕುವುದು.
- ಅಂದು ಅಂಗಡಿಯಿಂದ ಪ್ರೇಮಿಯನ್ನು ಹೊರಕ್ಕೆ ಕರೆತರಬೇಕಾದರೆ ಸಾಕಾಗಿಹೋಯಿತು.

ಶ್ರೀಲಕ್ಷ್ಮೀ ವಸ್ತ್ರಭಾಂಡಾರ (ಮೋಟಾರ್ ಸ್ಟ್ಯಾಂಡಿನ ಹತ್ತಿರ) ಧಾರವಾಡ.

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾರವಾಡ.

ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು !

- ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.
- ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ ಎಲ್ಲರ ನಂಬಿಗೆಗೂ ತಕ್ಕುದಾಗಿದೆ.
- ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡ ನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೆ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷ ವಿವರಕ್ಕೆ ಬರೆಯಬೇಕು :—

ಎಮ್. ಗೋವರ್ಧನರಾವ್ ಮ್ಯಾನೇಜರ್

The United Karnatak Insurance Co. Ltd., DHARWAR.

Printer K. R. Bhise Karnatak Printing Works, Dharwar. Edited and published by M. G. Patil at the Jayanti Office, Dharwar.

ಜಯಂತಿ

೪ ಆಣೆ

ಸಪ್ಟಂಬರ ೧೯೪೯

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೩—೦—೦ .... ವ್ಹಿ. ಪಿ. ಯಿಂದ ೩-೫-೦ .... ಬಿಡಿಸಂಚಿಕೆಗೆ ೪ ಆಣೆ.

ಸಂಪಾದಕರು :

ಪಾಟೀಲ ಮಾಧವರಾಯರು   ಬೆಟಗೇರಿ ಕೃಷ್ಣಶರ್ಮರು

೨ನೆಯ ವರ್ಷ	ಸಪ್ಟಂಬರ್ ೧೯೩೯	೫ನೆಯ ಸಂಚಿಕೆ

ಮುಖ್ಯ ವಿಷಯಗಳ ಪರಿವಿಡಿ

ನಮ್ಮ ದಾರಿ (ವಿಚಾರ ತರಂಗಿಣಿ)	ಶ್ರೀ. ' ಸಾಮಾಜಿಕ '	೨೭[illegible]
ಹೊಸ ಹಾದಿಗರು (ಚಿತ್ರ)	ಶ್ರೀ. ಅಗ್ನಿಹೋತ್ರಿ, ಜಮಖಂಡಿ	೨೭[illegible]
ಸಂಪಾದಕೀಯ	ಸಂಪಾದಕರು	೨[illegible]
ಮಂಗನ ಮಲ್ಲಿನಾಥತನ	' ಮಲ್ಲಿನಾಥ '	೨[illegible]
ಪಶ್ಚಿಮದಲ್ಲಿ ಪ್ರಳಯಕಾಲ (ರಾಜಕಾರ್ಯವಿಮರ್ಶ)	' ಚಾಡಿಯ ಚಾಣಕ್ಯ '	೨[illegible]
ಪಲ್ಲೂಸ ಸೇಡು (ನಾಗಪ್ಪನ ಕಥೆ)	ಪ್ರೊ. ಎನ್. ಎಂ. ಕುಲಕರ್ಣಿ, ಎಂ. ಎ.	೨[illegible]
ಅಪೌರುಷೇಯಾಃ ವೇದಾಃ (ವಾದಭೂಮಿ)	ಶ್ರೀ. ಜೋಶಿ ಶಾಮಾಚಾರ್ಯರು	೨[illegible]
ಮಿತ್ರ, ಮಂಗಪ್ಪ (ಸಣ್ಣ ಕತೆ)	ಶ್ರೀ. ಬಿ. ಕೆ. ರಾಮಚಂದ್ರರಾವ್ ಎಲ್.ಎಲ್. ಬಿ.	೨[illegible]
ಸಾರಾಸಾರ ವಿಚಾರ (ಕವನ)	ಶ್ರೀ. ' ಶ್ರೀಧರ ' ಪುಣೆ	೩೦[illegible]
ಕನ್ನಡ ಮರಾಠೀ ವಾದವು ಹೇಗೆಹುಟ್ಟಿತು ? (ಇತಿಹಾಸ)	ಶ್ರೀ. ಮುದುವೀಡು ಕೃಷ್ಣರಾಯರು	೩೦[illegible]
ಪ್ರಣಯಪರೀಕ್ಷೆ (ವಿನೋದ ಚಿತ್ರ)	ಶ್ರೀ. ಕೃಷ್ಣಮೂರ್ತಿ ಪುರಾಣಿಕ ಬಿ. ಎ.	೩[illegible]
ನನ್ನ ದಕ್ಷಿಣ ಹಿಂದುಸ್ಥಾನದ ಯಾತ್ರೆ (ಪ್ರವಾಸವರ್ಣನೆ)	ಶ್ರೀ. ಬೆಂಗೇರಿ ಪ್ರಹ್ಲಾದರಾಯರು	೩[illegible]
ಕುಡುಕರ ಕುರುಕ್ಷೇತ್ರ (ಆಧುನಿಕ ಪುರಾಣ)	ಶ್ರೀ. ' ಶ್ರೀರಂಗ '	೩[illegible]
ಬುದ್ಧಿಗೇಡಿ ಭಗವಂತ (ಚರ್ಚಾತ್ಮಕ ಪ್ರಬಂಧ)	ಶ್ರೀ. ಜೋಗಳೇಕರ ಪಾಂಡುರಂಗರಾಯರು ಬಿ. ಎ	೩[illegible]
ಗೋಡೆಯ ಮೇಲಿನ ಚಿತ್ರ (ಹರಟೆಗಾರನ ಮೋಜು)	ಶ್ರೀ. ಹುಯಿಲಿಗೋಳ ರಾಮಚಂದ್ರರಾಯರು	೩[illegible]
ಸರ್. ಪಿ. ರಾಘವೇಂದ್ರರಾವ್ (ವ್ಯಕ್ತಿ ಪರಿಚಯ)	ಶ್ರೀ. ಪಾಟೀಲ ಹನುಮಂತರಾಯರು ಎಂ. ಎ.	೩[illegible]
ಸತ್ಯದ ಸಮಾಧಿಯೆ ? (ಸಂಭಾಷಣ ಪತ್ರ)	.. ..	೩[illegible]
ಉಡಿಗೆ-ತೊಡಿಗೆಯ ಬೆಡಗು (ಚಡ್ಡಿ)	ಶ್ರೀ. ಹಳಪೇಟೆ ಚಿಂತಾಮಣಿರಾಯರು	೩೩
ಪುಸ್ತಕ ವಿಮರ್ಶೆ	ಬೇರೆಬೇರೆ ವಿಮರ್ಶಕರು	೩೩[illegible]
ಸಾದರ ಸ್ವೀಕಾರ	.. ..	೩೩
ನಗೀಗೆ ನೇವಿದ್ಯ	ಶ್ರೀ. ' ನಕಲೀ ನಾರಾಯಣಾಚಾರ್ಯ '	೩೩
ನಾಲ್ಕಾ ನಿಟ್ಟಿನ ನೋಟ	ಶ್ರೀ. ' ನಿರೀಕ್ಷಕರು '	೩೩
ಕನ್ನಡಿಗರಿಬ್ಬರ ಪಶ್ಚಿಮಯಾತ್ರೆ	.. ..	೩೪
ನಮ್ಮ ಅಲ್ಲಲ್ಲಿಯ ಏಜಂಟರು	.. ..	೩೪

ಸಂಚಿಕೆ ೫
ಸೆಪ್ಟೆಂಬರ್
ವರ್ಷ ೨
೧೯೩೯

ನಮ್ಮ ದಾರಿ

ಎಲ್ಲರೂ ಒಂದೆ ಕಡೆಗೆ ಮುಖ ಮಾಡಿ ಹೊರಟಿದ್ದಾರೆ, ಹೊರಡಲಿ! ಅವರು ತಮ್ಮ ದಾರಿಯಲ್ಲಿಯ ಸುಖ-ದುಃಖದ ಕತೆಗಳನ್ನು ನಮಗೆ ಹೇಳಿಯೇ ಹೇಳುವರು; ಅಲ್ಲದೆ ಅದೇ ದಾರಿಯಿಂದ ನಡೆದ ಪಯಣಿಗರ ಅನುಭವದ ಕತೆಗಳನ್ನು ನೂರಾರು ಈಗಾಗಲೆ ಕೇಳಿದ್ದೇವೆ. ಹೀಗಿರುವಾಗ ನಾವೂ ಅದೇ ದಾರಿಯಿಂದ ಹೋಗುವುದೇಕೆ? ನಡೆ, ತಿರುಗು, ಎಲ್ಲರೂ ಹೋಗುವ ದಾರಿಯ ವಿರುದ್ಧ ದಿಶೆಯನ್ನು ಹಿಡಿದು ನಡೆಯೋಣ!

ಜನ ನಗುವರೆಂದು ನಾಚಿಕೆಯೇ ನಿನಗೆ? ಹಿರಿಯರು ಬೈಯುವರೆಂಬ ಹೆದರಿಕೆಯೆ ನಿನಗೆ? ಯಾರೂ ಕಾಣದುದನ್ನು ಕಾಣಬೇಕಾರು? ಯಾರೂ ತಿಳಿಯದುದನ್ನು ತಿಳಿಯಬೇಕಾರು? ಅದಕ್ಕೆ ಹೊಸ ದಾರಿಗಳನ್ನು ಹುಡುಕಿ ನಡೆಯುವವರೇ ಬೇಕು! ನಗಲಿ, ಬೈಯಲಿ, ಒಂದಸೂ ನಾವು ಎಣಿಕೆಗೆ ತರಲಾಗದು.

ತಗ್ಗುಗಳಿರಬಹುದು, ಹಿಗ್ಗುಗಳಿರಬಹುದು; ಮುಳ್ಳುಗಳಿರಬಹುದು, ಕಲ್ಲುಗಳಿರಬಹುದು; ಯಾರೂ ಹೋಗದಿರುವಲ್ಲಿ ಹಾದಿ ಬೀಳಬೇಕು ಹೇಗೆ? ಆ ತಗ್ಗು-ಹಿಗ್ಗುಗಳನ್ನೂ ಆ ಮುಳ್ಳು-ಕಲ್ಲುಗಳನ್ನೂ ದಾಟ ಹೋದ ಮೇಲೆ ನಮಗೆ ಯಾವ ಅಮರನಂದನ ಸಿಕ್ಕುವುದೋ ಯಾರು ಬಲ್ಲರು? ಸಿಕ್ಕಲಾರದೆಂದು ಖಂಡಿತವಾಗಿ ಹೇಳುವವರಾರು?

ಹೋದ ದಾರಿಯಿಂದಲೆ ಹೋಗುವವರು ಗೊತ್ತಿದ್ದ ಚೆಲುವನ್ನೆ ಕಾಣುತ್ತಾರೆ. ಹೊಸ ದಾರಿಯನ್ನು ಹಿಡಿದವರು ಗೊತ್ತಿಲ್ಲದ ಚೆಲುವನ್ನು ಹೊರಗೆಳೆಯುತ್ತಾರೆ. ನಾವದನ್ನು ಮಾಡೋಣ! ಎಲ್ಲರ ದಾರಿಯನ್ನು ಬಿಡೋಣ; ನಮ್ಮದೇ ದಾರಿಯಲ್ಲಿ ನಡೆಯೋಣ!

—ಸಾಮಾಜಿಕ

ಹೊಸ ಹಾದಿಗರು

ಹೋಗೋಣ ನಾವಿನ್ನು ಸೀಮೆಯನು ದಾಟಿ”



ಕರ್ಣಾಟಕದ ಅಪಪ್ರಚಾರ

ಪುಣೆಯಲ್ಲಿ ಹೊರಡುವ 'ಸಹ್ಯಾದ್ರಿ'ಯ ಜುಲೈ ತಿಂಗಳ ಸಂಚಿಕೆಯಲ್ಲಿ ದಿವಂಗತ ಕಡಪಾ ರಾಘವೇಂದ್ರರಾಯರ ಘನತೆಗೆ ಕುಂದು ತರುವಂತಹ ಮಾತುಗಳು ಪ್ರಕಟವಾಗಿದ್ದುದು ಕಳೆದ ಸಂಚಿಕೆಯ ಸಂಪಾದಕೀಯದ ಮುಖಾಂತರ ನಮ್ಮ ವಾಚಕರಿಗೆ ತಿಳಿದಿದೆಯಷ್ಟೆ! ಅದನ್ನು ನಾವು ಉಪೇಕ್ಷೆ ಮಾಡಿಬಿಟ್ಟಿದ್ದರೆ ಮಹಾರಾಷ್ಟ್ರದಲ್ಲೆಲ್ಲ ಅದು ನಿಜವೆಂದು ಕಲ್ಪಿಸಲ್ಪಡುವಂತಾಗಿ, ದಿವಂಗತ ಕಡಪಾ ಅವರ ವಿಷಯದಲ್ಲಿಯೂ ಕನ್ನಡಿಗರ ವಿಷಯದಲ್ಲಿಯೂ ತಪ್ಪು ಅಭಿಪ್ರಾಯವು ಹರಡುವ ಸಂಭವವಿದ್ದಿತು. ಆದರೆ ನಮ್ಮ ಸ್ನೇಹಿತರಾದ ಶ್ರೀಮಾನ್ ಜೋಶಿ ಶಂಕರರಾಯರು ಕರ್ಣಾಟಕದ ಮರ್ಯಾದೆಯ ದೃಷ್ಟಿಯಿಂದ ಆ ವಿಷಯವನ್ನು ತೀರ ಹಸಿಗೆ ಹಚ್ಚಿದುದರಿಂ[ದ] ಸಂಗತಿಯು ಹೊರಕ್ಕೆ ಬಂದಿತು. ಈ ಸುಳ್ಳುಸುದ್ದಿಗೆ [illegible] ಕರ್ತರು ಇನ್ಯಾರೂ ಅಲ್ಲ; ಕರ್ಣಾಟಕದಲ್ಲಿಯೆ ಹುಟ್ಟಿ ಬ[illegible] ಕರ್ಣಾಟಕದ ಅನ್ನದಿಂದಲೆ ಪರಿಪೋಷಿತವಾಗುತ್ತಿರುವ 'ಹೆ[illegible] ಮರಾಟಿಗ' ವ್ಯಕ್ತಿಯೊಂದು. ಈಗ ಬಹಳ ದಿನಗಳ ಹಿಂದೆ ಆ ವ್ಯಕ್ತಿ 'ಸಹ್ಯಾದ್ರಿ'ಯಲ್ಲಿ ಬರೆದ ಲೇಖನದ್ವಾರದಿಂದ ಮಹಾರಾಷ್ಟ್ರದ ತುಂಬ ಈ ಸುಳ್ಳುಸುದ್ದಿಯನ್ನು 'ಬ್ರಾಡ್‌ಕಾಸ್ಟ್' ಮಾಡಿದ್ದಿತು; ಆದರೆ ಆ ವಿಷಯ ಕನ್ನಡಿಗರ ಕಣ್ಣೆದುರು ಬಂದಿರಲಿಲ್ಲ. ಈಗ ಶ್ರೀ. ರಾನಡೆಯೆಂಬುವವರೊಬ್ಬರು ಮತ್ತೊಂದು ಸಲ ಆ ಸುಳ್ಳುಸುದ್ದಿಯನ್ನೆ ನಿಜವೆಂದು ನಂಬಿ ಪ್ರಕಟಿಸಿದರು. ಕನ್ನಡಿಗರ ದೃಷ್ಟಿಯಿಂದ ಅವರು ಇದೊಂದು ಉಪಕಾರವನ್ನೆ ಮಾಡಿದರೆಂದು ಹೇಳಬೇಕು. ಏಕೆಂದರೆ ವಸ್ತುಸ್ಥಿತಿ ಹೊರಬಿದ್ದು ಸುಳ್ಳುಗಾರ ತನ್ನ ತಪ್ಪನ್ನೊಪ್ಪಿ ಕನ್ನಡಿಗರೆಲ್ಲರಲ್ಲಿ ಕ್ಷಮೆಯನ್ನು ಕೇಳುವ ಸಂದರ್ಭ ಶ್ರೀ. ರಾನಡೆಯವರ ಲೇಖನದ ಮೂಲಕವಾಗಿಯೆ ಒದಗಿಬಂದಿತು. 'ಸಹ್ಯಾದ್ರಿ' ಮಾಸಪತ್ರಿಕೆಯು ಈ[illegible]ಲಾದರೂ ನಡೆದುಹೋದ ತಪ್ಪನ್ನು ಪ್ರಕಟಿಸಿ, ಮರಾಟಿಗರ[ಲ್ಲಿ] ಹರಡಿಕೊಂಡಿರುವ ಕನ್ನಡಿಗರ ವಿಷಯಕ ದುರಭಿಪ್ರಾಯವನ್ನು ಹೊಡೆದುಹಾಕಬೇಕೆಂದು ಸ್ನೇಹಭಾವದಿಂದ ನಾವು ಅದಕ್ಕೆ ಸೂಚಿಸುತ್ತೇವೆ. ಸುಳ್ಳುಸುದ್ದಿಯನ್ನು ಹರಡಿ ಕ್ಷಮೆಕೇಳಿಕೊಳ್ಳುವ ಸಂದರ್ಭವನ್ನು ತಂದುಕೊಂಡ ಶ್ರೀಯುತ ಭಾತಕಾಂಡೆಯವರೂ ಹುಟ್ಟಿಬೆಳೆದ ಕನ್ನಡನಾಡಿನ ಋಣವನ್ನು ಸರಿಯಾದ ರೀತಿಯಲ್ಲಿ ತಿಳಿದುಕೊಂಡು ನಡೆಯಬೇಕೆಂದು ಅವರನ್ನೂ ನಮ್ರವಾಗಿ ಬೇಡಿಕೊಳ್ಳುತ್ತೇವೆ. ಪ್ರಾಂತದ ಮರ್ಯಾದೆಯ ಪ್ರಶ್ನೆ ಬಂದಾಗ ಯಾವ ಕನ್ನಡಿಗನೂ ಉಪೇಕ್ಷಾಭಾವದಿಂದ ಸುಮ್ಮನೆ ಕುಳಿತು ಬಿಡದೆ ತನ್ನ ಪಕ್ಷದ ನ್ಯಾಯವಿಚಾರವನ್ನು ಖಂಡಿತವಾಗಿ ಮಂಡಿಸುತ್ತಿರಬೇಕೆಂದು ನಮ್ಮವರನ್ನು ವಿನ್ನವಿಸಿಕೊಳ್ಳುತ್ತೇವೆ.

ದೀಪಾವಳಿಯ ವಿಶೇಷಸಂಚಿಕೆ

ಕಳೆದ ವರ್ಷದ ದೀಪಾವಳಿಗೆ ಹೊರಡಿಸಿದ ಜಯಂತಿಯ ವಿಶೇಷ ಸಂಚಿಕೆಗಳು ಹೊರಕ್ಕೆ ಹೊರಟ ಎಂಟುದಿನಗಳಲ್ಲಿಯೆ ತೀರಿಹೋದುವು. ಅನೇಕ ಜನ ಗ್ರಾಹಕರನ್ನು ಇಲ್ಲವೆಂದು ಹೇಳಿ ನಿರಾಶೆಗೊಳಿಸಬೇಕಾಯಿತು. ಈ ಸಲ ಹಾಗಾಗದಂತೆ ನೋಡಿಕೊಳ್ಳುವುದು ಅಗತ್ಯ. ಆದುದರಿಂದ ಏಜಂಟರು ತಮಗೆ ಎಷ್ಟೆಷ್ಟು ಪ್ರತಿಗಳು ಬೇಕೆಂಬುದನ್ನು ಸಪ್ಟಂಬರ್ ಕೊನೆಯೊಳಗಾಗಿ ಬರೆದು ತಿಳಿಸಬೇಕು. ಆ ಸಂಚಿಕೆಯೊಂದನ್ನೆ ಅಪೇಕ್ಷಿಸುವ ಗ್ರಾಹಕರೂ ಸಪ್ಟಂಬರ ಕೊನೆಯೊಳಗಾಗಿ ತಮ್ಮ ಹೆಸರುಗಳನ್ನು ಕಾರ್ಯಾಲಯಕ್ಕೆ ಕಳಿಸುವ ಏರ್ಪಾಡು ಮಾಡಬೇಕು.

ಜಾಹೀರಾತುಗಳನ್ನು ಕೊಡುವವರು ಕೂಡಲೆ ಪತ್ರವ್ಯವಹಾರವನ್ನು ಪ್ರಾರಂಭಿಸಬೇಕು. ಕನ್ನಡಿಗರೆಲ್ಲರಿಗೂ ಮುದ್ದಿನ ಪತ್ರಿಕೆಯಾದ ಜಯಂತಿಯು ಅಖಿಲಕರ್ಣಾಟಕದ ಮೂಲೆಮೂಲೆಗಳಲ್ಲಿಯೂ ಹೋಗುತ್ತದೆ, ಅಲ್ಲದೆ ಭಾರತದ ಬೇರೆ ಬೇರೆ ಪ್ರಾಂತಗಳಲ್ಲಿಯೂ ವಿದೇಶಗಳಲ್ಲಿಯೂ ಇರುವ ಕನ್ನಡಿಗರ ಕೈಯಲ್ಲಿಯೂ [ಜ]ಯಂತಿ ನಲಿಯುತ್ತದೆ. ವಿಶೇಷವಾಗಿ ಕಾಲೇಜಿನ ವಿದ್ಯಾರ್ಥಿ[illegible] ಸುಶಿಕ್ಷಿತ ಮಹಿಳೆಯರಿಗೂ ಅವಶ್ಯಕವಿರುವ ಸಾಮಾನು[illegible]ಹೀರಾತು ಜಯಂತಿಯಲ್ಲಿ ಪ್ರಕಟವಾದರಂತೂ ವರ್ತಕರಿಗೆ ಲಾಭವಾಗುವುದೆಂಬುದನ್ನು ಅವರು ಅನುಭವದಿಂದಲೆ [illegible]ಡಿಕೊಳ್ಳಬಹುದು.

ಲೇಖಕರಿಗೆ :—

[illegible]ಯ ವಿಶೇಷಸಂಚಿಕೆಗಾಗಿ ಲೇಖನ ಕಳುಹಲು [illegible] ಪ್ರಸಿದ್ಧ ಲೇಖಕರನ್ನು ಬರೆದು ಕೇಳಿಕೊಂಡಾಗಿದೆ. [illegible] ಸಪ್ಟಂಬರ [illegible]ನೆಯ ತಾರೀಖಿನೊಳಗಾಗಿ ತಮ್ಮ [illegible]ಗಳನ್ನು ಕಳುಹಬೇಕು. ಅದಕ್ಕಿಂತ ತಡೆಯಾಗಿ [illegible] ಚಿತ್ರಗಳನ್ನು ಬರೆಯಿಸಲಿಕ್ಕಾಗದೆ ಆ ಲೇಖನ [illegible]ಚಿಕೆಯಲ್ಲಿ ಪ್ರಕಟಿಸಲಿಕ್ಕೆ ಸಾಧ್ಯವಾಗುವುದಿಲ್ಲ. [illegible] ಪತ್ರ ಬಾರದಿದ್ದವರೂ ವಿಶೇಷಸಂಚಿಕೆಗಾಗಿ [illegible]ಯ ಲೇಖನಗಳನ್ನು ಅವಶ್ಯವಾಗಿ ಕಳುಹಬೇಕು. [illegible] [ಜ]ಯಂತಿಯಲ್ಲಿ ಎಡೆ ದೊರೆಯುವುದು. ಅಲ್ಲದೆ ಪ್ರತಿ[illegible]ಯೋಗ್ಯವೆಂದು ನಿರ್ಣಯವಾಗುವುಗಳಿಗೆ ಪ್ರತಿಫಲವನ್ನೂ ತಕ್ಕಮಟ್ಟಿಗೆ ಸಲ್ಲಿಸಲಾಗುವುದು.

ತಿದ್ದುಪಡೆ

ಇದೇ ಸಂಚಿಕೆಯ [illegible]ನೆಯ ಪುಟದಲ್ಲಿ ಅಚ್ಚಾದ ಚಿತ್ರದ ಕೆಳಗೆ 'ಅನಂತ ಸರಸ್ಸಿನ ದೃಶ್ಯ' ಎಂದು ತಪ್ಪಾಗಿ ಪ್ರಕಟವಾಗಿದೆ. 'ತಿರುಪತಿಯಲ್ಲಿಯ ಶ್ರೀವರಾಹಸ್ವಾಮಿಯ ದೇವಾಲಯ' ಎಂದು ಅದನ್ನು ತಿದ್ದಿಕೊಳ್ಳಬೇಕು.

—ಸಂಪಾದಕರು.

ಮುದ್ರಾರಾಕ್ಷಸ

ಶಿಕ್ಷಣಾಲಯಗಳಲ್ಲಿ ಜಾತೀಯತೆಯ ಪ್ರಚಾರ' ಎಂಬ ಲೇಖವೊಂದು ಅಗ್ರಪತ್ರಿಕೆಯಲ್ಲಿ-ಅಲ್ಲ- ಅಗ್ರಲೇಖವೊಂದು—ಕನ್ನಡ ಪತ್ರಿಕೆಯಲ್ಲಿ ಬಂದಿದೆ, ಅದರರ್ಥವನ್ನು ಸ್ಪಷ್ಟೀಕರಿಸುವಿರಾ ?– ಎಂದು ವಾಚಕರೊಬ್ಬರು ಮಂಗರಾಯನನ್ನು ಕೇಳಿದ್ದಾರೆ. ವಾಚಕರ ಮನೋವೃತ್ತಿಯ ಅನುಭವ ಈಗ ಮಂಗರಾಯನಿಗೆ ಸಾಕಷ್ಟಿದೆ, ಅದಕಾಗಿ ಈ ಪ್ರಶ್ನೆ ಬರುವುದೆಂದು ಮುಂಚೆಯೆ ಹಂಚಿಕೆ ಹಾಕಿ ಸ್ಥಿತಿಗತಿಗಳನ್ನು ಅರಿತುಕೊಂಡಿದ್ದಾನೆ. ಪತ್ರಿಕೆಯಲ್ಲಿ ಬಂದ ವಾಕ್ಯವು ಅಚ್ಚಿನ ದೋಷವೆಂದೂ, 'ಮುದ್ರಣಾಲಯಗಳಲ್ಲಿ ಜಾತೀಯತೆಯ ಪ್ರಚಾರ' ಎಂದು ತಿದ್ದಿ ಓದಿಕೊಳ್ಳಬೇಕೆಂದೂ ತಿಳುಹಿಸಲು ಮಂಗರಾಯನಿಗೆ ಅಧಿಕೃತವಾಗಿ ಬೇಡಿಕೊಳ್ಳಲಾಗಿದೆ. ಇದೀಗ ಸರಿಯಾಯಿತಲ್ಲವೆ ? ಕರ್ನಾಟಕ ಕಾಲೇಜಿನ ಚುನಾವಣೆಗಳಿಗಿಂತ ಕಾಂಗ್ರೆಸ್ ಚುನಾವಣೆಗಳೂ, ವಿದ್ಯಾರ್ಥಿ ಚರ್ಚಾಮಂಡಳಗಳಿಗಿಂತ ರಾಮದುರ್ಗ ಪ್ರಕರಣ ಮಂಡಳಗಳೂ ಹೆಚ್ಚು ಮಹತ್ತ್ವದ್ದಲ್ಲವೇ ? ಹೋಗಲಿ, ಜಾತೀಯತೆ ಇರದಿದ್ದರೆ ಇಂದಿನ ಅನೇಕ ಕನ್ನಡ ಸಂಪಾದಕರು ಆ ಮೆಟ್ಟಲಿಗೆ ಮುಟ್ಟುತ್ತಿರಲಿಲ್ಲ. ಹೀಗಿರುವಾಗ ತಮ್ಮ ಕಾಲಮೇಲೆ ತಾವೇ ಕಲ್ಲುಹಾಕಿಕೊಳ್ಳುವಂತಹ ಲೇಖಗಳನ್ನು ಅವರು ಎಂದಾದರೂ ಬರೆಯಬಹುದೆ– ಎಂದು ಸಂಶಯಪಡುವ ಕಾರಣವೂ ಇಲ್ಲ. ಯಾಕೆಂದರೆ, ಅಚ್ಚಿನ ದೋಷಕ್ಕೆ ಇಂಗ್ಲಿಶದಲ್ಲಿ Printer's Devil ಎಂದಿದ್ದ ಆ ಪದವನ್ನು 'ಮುದ್ರಾರಾಕ್ಷಸ' ಎಂದು ಭಾಷಾಂತರಿಸಿಲ್ಲವೆ ! ಅದರ ಗೂಢವೇನು ? ಇಂತಹವುಗಳಿಗೆ ಚಾಣಕ್ಯನೀತಿಯೆ ಕಾರಣ ಎಂದು ಇರಬಹುದಲ್ಲವೆ ? ಚಾಣಕ್ಯ ಬ್ರಾಹ್ಮಣ, ಚಂದ್ರಗುಪ್ತ ಅಬ್ರಾಹ್ಮಣ– ಸಾಕು, ರಂಗಯ್ಯನ ಹುಣ್ಣಿಗೆ ಮಂಗಯ್ಯನ ಮಾತೇಕೆ ?

* * *

ಸಂಸಾರದ ಸಿಪ್ಲಿಕ್ ಬೋರ್ಡು

ಅನೇಕ ಭಾಷೆ-ಜಾತಿ–ನೀತಿಗಳಿಂದ ಛಿನ್ನವಿಚ್ಛಿನ್ನವಾದ ಭರತಖಂಡವನ್ನು ಏಕಮೇವಾದ್ವಿತೀಯ ಛತ್ರಾಧಿಪತ್ಯದಲ್ಲಿರಿಸಲು ಪರಮಾತ್ಮನು Discipline(=ಶಿಸ್ತು) ಎಂಬ ಅವತಾರವನ್ನು ತಾಳಿರುವನಷ್ಟೆ ? ರಾಮನು ಇಕ್ಷ್ವಾಕುಕುಲದಲ್ಲಿ, ಕೃಷ್ಣನು ಯಾದವಕುಲದಲ್ಲಿ ಜನ್ಮತಾಳಿದಂತೆ, ಶಿಸ್ತು ಕಾಂಗ್ರೆಸಿನ ಕುಲದಲ್ಲಿ ಜನ್ಮತಾಳಿದೆಯಷ್ಟೆ. ನಮ್ಮ ಪ್ರಾಂತದಲ್ಲಾದರೂ ವ್ಯವಹಾರ ಜೀವನದ ವ್ಯತ್ಯಾಸಗಳನ್ನು ಈ ಶಿಸ್ತು ಹೇಗೆ ಕೇಂದ್ರೀಕರಿಸುತ್ತಿದೆ ಎಂಬುದಕ್ಕೆ ಇತ್ತೀಚಿನ ಒಂದು ಸತ್ಕಾರ್ಯ ಮಂಗರಾಯನ ದೃಷ್ಟಿಯನ್ನು ಸೆಳೆದಿದೆ. ಚುನಾವಣೆ ಎಂಬುದು ಯಾವಾಗಲೂ ಪಕ್ಷ-ಪಂಗಡಗಳಿಗೆ ಕಾರಣ. ಅದಕಾಗಿ ಚುನಾವಣೆಯಲ್ಲಿ ಏಕತಂತ್ರತೆಯನ್ನು ಹುಟ್ಟಿಸಲು ಸಿಪ್ಲಿಕ್‌ಬೋರ್ಡುಗಳಿವೆ. ಇದುವರೆಗೆ ಸ್ಥಾನಿಕ ಸಂಸ್ಥೆ–ಶಾಸನ ಸಭೆಗಳ ಚುನಾವಣೆಯಲ್ಲಿಯೆ ಶ್ರದ್ಧೆ ವಹಿಸಿದ ಸಿಪ್ಲಿಕ್‌ಬೋರ್ಡುಗಳು ಇನ್ನು ಮುಂದೆ ಕರ್ನಾಟಕದಲ್ಲಿ ಬ್ಯಾಂಕುಗಳ ಚುನಾವಣೆ, ಡಿರೆಕ್ಟರರ ಚುನಾವಣೆ, ಸಾರ್ವಜನಿಕ ಸಭೆಗಳ ಅಧ್ಯಕ್ಷರ ಚುನಾವಣೆ– ಹೀಗೆ ಎಲ್ಲ ಚುನಾವಣೆಗಳಲ್ಲಿ ಕಾಂಗ್ರೆಸ್ ಎಂಬ ಒಂದೇ ಪಕ್ಷದ, ಏಕಮತದ, ಏಕತಂತ್ರತೆಯ ಆಡಳಿತೆಯನ್ನು ತರಲಿವೆ ಎಂಬುದು ನಮ್ಮ ಪ್ರಾಂತಕ್ಕೆ ಹೆಮ್ಮೆಯ ವಿಷಯ. ಈ ಸಂದರ್ಭದಲ್ಲಿ ಮಂಗರಾಯನದೊಂದು ಸವಿನಯ ಸೂಚನೆ ಇದೆ:– ಉತ್ತರಕರ್ನಾಟಕದಲ್ಲಿ ಕೆಲವು ಕಾಂಗ್ರೆಸಿಗರು ಒಂದು ವರಸಂಶೋಧನ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಅದನ್ನೂ ಸಿಪ್ಲಿಕ್‌ಬೋರ್ಡು ತನ್ನ ಅಧೀನತೆಯಲ್ಲಿ ತಂದುಕೊಳ್ಳಬೇಕು. ಈಗಿದ್ದ ಸಂಸ್ಥೆಯೇನು ಕೇವಲ ಬ್ರಾಹ್ಮಣಸಮಾಜಕ್ಕೆ ಸಂಬಂಧಿಸಿದಯಂತೆ. ಹೀಗೆ ಜಾತೀಯತಾ ಸಂಸ್ಥೆಯ ಸದಸ್ಯರಿದ್ದ ಕೆಲವು ಕಾಂಗ್ರೆಸಿಗರ ಮೇಲೆ ವರ್ಕಿಂಗ್ ಕಮಿಟಿಯು ನಿರ್ಣಯದಂತೆ ಶಿಸ್ತುಭಂಗೋಪಾಯವನ್ನು ಕೈಕೊಳ್ಳಬೇಕು. ವಾಚಕರೆ, ಹೆಚ್ಚಿಗೆ ಹೇಳುವುದೇನಿದೆ ? ವ್ಯಕ್ತಿಸ್ವಾತಂತ್ರ್ಯದ, ನಿಷ್ಪಕ್ಷಪಾತದ, ತರುಣರ ಆದರ್ಶಭೂತವಾದ ಕಾಂಗ್ರೆಸ್ಸು ವಿವಾಹವಿಷಯವನ್ನು ತನ್ನ ಅಧೀನತೆಯಲ್ಲಿ ಇಟ್ಟುಕೊಳ್ಳದಿದ್ದರೆ– ಗಂಡಹೆಂಡಂದಿರಲ್ಲಿ ಪರಸ್ಪರ ಸತ್ಯದೃಷ್ಟಿಯಾಗಲಿ ಅಹಿಂಸಾವೃತ್ತಿಯಾಗಲಿ ಬರುವುದು ಹೇಗೆ ? ಬೋಲೊ, ಸಿಪ್ಲಿಕ್ ಮುಹೂರ್ತ ಬೋರ್ಡುಧಾನ !

* * *

'ಕರ್ನಾಟಕ ಫ್ರಂಟಿತ'

ಮಂಗರಾಯನ ಮಾಹಾತ್ಮ್ಯದಿಂದ ನಿರ್ಮಾಣವಾಗುತ್ತಲಿರುವ ಆಧುನಿಕ ಕನ್ನಡ ಶಬ್ದಕೋಶಕ್ಕೆ ಮೇಲೆ ಕಾಣಿಸಿದ ಹೊಸ ಶಬ್ದವನ್ನು 'ಸೇರಿಸಿಕ್ಯಾಶಿ ಕೋಷ ವಾಧಾಯಿಸುವ' ಸುದಿನಸವಿಂದು. ಅದರರ್ಥವೇನೆಂದು ಕೇಳುವಿರಾ ? 'ಕನ್ನಡ ಪಂಡಿತ'. ಆದರೂ ಅದಕ್ಕೊಂದು ವಿಶಿಷ್ಟ ಅರ್ಥವಿದೆ. ಹಳೆಯ ಪದ್ಧತಿಯಿಂದ ಕಲಿತವರಿಗೆ 'ಪಂಡಿತ' ಎಂದೂ, ಆಧುನಿಕ ಶಾಸ್ತ್ರೀಯ ಪದ್ಧತಿಯಿಂದ ಕಲಿತವರಿಗೆ 'ಫ್ರಂಟಿತ' ಎಂದೂ ಶಬ್ದಭೇದ. ಬಿ. ಎ. ಎಮ್. ಎ. ಮೊದಲಾದ ಬಿರುದಾವಳಿ

ಗಳ ಅಸ್ಥಿಮಾಲಿಕೆಯನ್ನು ಕೊರಳಲ್ಲಿರಿಸಿ, ಎಲ್‌ಎಲ್. ಬಿ. ಎಂಬ ಅರ್ಧಚಂದ್ರನನ್ನು ಧರಿಸಿ, ನಿರುದ್ಯೋಗಸ್ಮಶಾನವಾಸವನ್ನು ವರಿಸಿ, ಹಾ(ಲಾಹ)ಲಗೆರೆಯ ವಿಷವನ್ನು ಕಂಠದಲ್ಲಿ ಸೇರಿಸಿ—ವೃಷಭವಾಹನನಾಗಿ ಮಂದಗತಿಯಿಂದ ಅಕಾಂಡತಾಂಡವವನ್ನಾಡುವ ಕಲಿಯುಗದ ಸಾಂಬ-ಸದಾಶಿವ-ಸದಾನಂದ ತ್ರಿಮೂರ್ತಿಯೆ ಈ 'ಪ್ರಂಟಿತ'ರ ಆರಾಧ್ಯದೇವತೆ. ಈ 'ಪ್ರಂಟಿತ'ರು 'ಪಂಡಿತ'ರಂತೆ ಉದರಂಭರಣವೃತ್ತಿಯವರಲ್ಲ; ಯಾಕೆಂದರೆ, ಉದರಂಭರಿತರೇ ಇವರು! ಅದಕಾಗಿ 'ಹಂಬಲದ ಸಂಪಾದಕ' ಎಂಬ ಹೊಸತೊಂದು ಜಾತಿಯನ್ನೇ ಇವರು ನಿರ್ಮಿಸಿದ್ದಾರೆ. 'ಸಂಬಳದ ಸಂಪಾದಕ' ಜಾತಿಗಿಂತ ಇದು ಬೇರೆ. ಮಂಗರಾಯನಿಗೆ ಇವರ ಸೂಕ್ಷ್ಮ ಪರಿಚಯ ಹೇಗಾಯಿತೆಂದು ಕೇಳಬೇಡಿರಿ. ಮರಾಠಿಮರಿಗಳಾಗಿ, ಇಂಗ್ಲಿಶ್ ಅರಿಯದವರಾಗಿ ಕನ್ನಡದಲ್ಲಿ ಕೈಹಾಕಲೆಣಿಸುವವರೂ ಕೀಲೋತ್ಪಾಟಿಯಾದ ಮಂಗರಾಯನೂ ವ್ಯವಸಾಯಬಂಧುಗಳಲ್ಲವೆ?

* * *

ತಲೆಕೆಳಗಾದ ತಳಹದಿ

'ಮುಂಬಯಿ, ಪುಣೆ, ಅಹಮ್ಮದಾಬಾದ, ಸುರತ ಪಟ್ಟಣಗಳ ನಗರಸಭೆಯವರು ತಂತಮ್ಮ ಆಡಳಿತೆಗೊಳಗಾಗಿದ್ದ ಪ್ರಾಥಮಿಕ ಶಿಕ್ಷಕರಿಗಾಗಿ ತಮ್ಮದೇ ಆದ ಟ್ರೇನಿಂಗ್ ಕಾಲೇಜುಗಳನ್ನು ಸ್ಥಾಪಿಸಿಕೊಂಡಿದ್ದಾರೆ. ಧಾರವಾಡ ನಗರಸಭೆಯವರೂ ಹಾಗೆ ಮಾಡಬಾರದೇಕೆ?' ಎಂದು ಶಿಕ್ಷಣದ ಉಪಮಂತ್ರಿಗಳಾದ ಶ್ರೀಮತಿ ಹಂಸಾ ಮೆಹತಾ ಇವರು ಧಾರವಾಡದಲ್ಲಿ ಒಂದು ಭಾಷಣದಲ್ಲಿ ಕೇಳಿದ್ದಾರೆ. ಆ ಪ್ರಶ್ನೆಗೆ ನಾಗರಿಕರ, ನಗರಸಭೆಯವರ ವತಿಯಿಂದ ಉತ್ತರಕೊಡುವ ಹೆಮ್ಮೆಯ ಭಾಗ್ಯವು ಮಂಗರಾಯನಿಗೆ ದೊರಕಿದೆ. ಧಾರವಾಡ ನಗರಸಭೆಯವರು ಈ ವಿಷಯವನ್ನು ಅಲಕ್ಷ್ಯ ಮಾಡಿಲ್ಲ. ಇಷ್ಟೇಕೆ— ಮೇಲೆ ಕಾಣಿಸಿದ ನಗರಸಭೆಗಳಿಗಿಂತ ಒಂದು ಹೆಜ್ಜೆ ಮುಂದಿಟ್ಟಿದ್ದಾರೆ ನಮ್ಮ ನಗರಸಭೆಯವರು ಎಂದು ಹೇಳಬಹುದು. ಯಾವುದನ್ನು ಮಾಡಿದರೂ ಅದಕ್ಕೆ ಯೋಗ್ಯ ತಳಹದಿ ಬೇಕಲ್ಲವೆ, ಅದು ಶಾಶ್ವತವಾಗಿ ಉಳಿಯುವಂತೆ ಮಾಡಬೇಕಲ್ಲವೆ? ಅದಕಾಗಿ, ಕೆಲಗೆರೆಯಲ್ಲಿ ಮೊದಲು ಕೆಸರನ್ನು ತೆಗೆಯುವಂತೆ ನಗರಸಭಾಸದಸ್ಯರಿಗಾಗಿಯೆ ಮೊದಲೊಂದು ಟ್ರೇನಿಂಗ್ ಕಾಲೇಜನ್ನು ಸ್ಥಾಪಿಸುವವರಿದ್ದಾರೆ. ಇಲ್ಲವಾದರೆ ಸದಸ್ಯರು ಮೊದಲಿನಂತೆ, ಶಿಕ್ಷಕರು ಟ್ರೇಂಡ್- ಆದರೆ ಚುನಾವಣೆಯ ಕಾಲದಲ್ಲಿ ಅವರು ಸದಸ್ಯರಿಗೆ ಸಹಾಯಮಾಡದಷ್ಟು ಉದ್ದಾಮರಾಗಬಹುದಲ್ಲವೆ? ಇದೊಂದು ಉದಾಹರಣೆ. ಅದಕಾಗಿ ಮೊದಲು ನಗರಸಭೆಯ ಸದಸ್ಯರಿಗಾಗಿಯೆ ಕಾಲೇಜನ್ನು ಸ್ಥಾಪಿಸುವುದು ಯೋಗ್ಯ. ಆದರೆ ಇನ್ನೂ ಸ್ಥಾಪಿಸಿಲ್ಲವೇಕೆ— ಎಂದು ಆತುರರಾಗಿ ಕೇಳಬೇಡಿರಿ. ಸದ್ಯಕ್ಕೆ ನಮ್ಮ ನಗರಪಾಲಕರು ಎಡಲ್ಟ್ ಎಜ್ಯುಕೇಶನ್ (Adult Education) ಕ್ಲಾಸುಗಳಲ್ಲಿ ಕಲಿಯುತ್ತಿದ್ದಾರೆ. ಪ್ರಾಥಮಿಕ ತರಗತಿ ಮುಗಿಯಲಿ- ಆಮೇಲೆ- ಎಂದರೆ- ಅಥವಾ ಮುಗಿಯುವುದೊ ಇಲ್ಲವೊ?- ಆದ್ದರಿಂದ ಮುಂದಿನ ವಿಚಾರವನ್ನು ತಡೆಯೋಣ. ಮಂಗರಾಯ ಭವಿಷ್ಯವನ್ನೂ ಹೇಳಬಲ್ಲ, ಆದರೂ..!

* * *

ಬೋಸರಿಗೆ ಬಹಿಷ್ಕಾರ

" ನಡಿ ನಡಿ! ಪಾಖಂಡೀ— ನಾಸ್ತಿಕ ಇದ್ದೀ ನೀನು? ಆಚಾರ್ಯರಿಗೆ—ಗುರುಗಳಿಗೆ—ವಿರೋಧವಾಗಿ ಮಾತನಾಡತೀಯಾ? ಏ ದಬ್ಬಿಹಾಕರೋ ಇವನ್ನ!

ಕರ್ನಾಟಕದ ಮುನ್ನಡೆ

(ಅ) ಕರ್ನಾಟಕ ಪ್ರಾಂತೀಯ ಹಿಂದೀ ಪ್ರಚಾರಕ ಸಭೆಯ ಅಧ್ಯಕ್ಷರಿಗೆ ಕ್ಷಮಾಯಾಚನೆ ಮಾಡದ್ದಕ್ಕಾಗಿ ಕನ್ನಡಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಹೊರಡುವ 'ಕನ್ನಡ ನುಡಿ'ಯ ಸಂಪಾದಕರು ರಾಜೀನಾಮೆ ಕೊಟ್ಟರು.

(ಬ) ಕೆಲವು ಸಂಘ-ಸಂಸ್ಥೆಗಳು ತಮ್ಮ ಇಂಗ್ಲಿಷ್ ಹೆಸರಿನಲ್ಲಿ 'United Karnataka' ಎಂಬ ಶಬ್ದಗಳನ್ನು ಸೇರಿಸುತ್ತಿವೆಯಷ್ಟೆ; 'Karnataka United' ಎಂಬ ಶಬ್ದರಚನೆಯೊಡನೆ ಇದರ ಗೊಂದಲಮಾಡಿಕೊಳ್ಳಬಾರದೆಂದೂ ಇವೆರಡೂ ಪರಸ್ಪರ ವಿರುದ್ಧಾರ್ಥ ಉಳ್ಳವುಗಳೆಂದೂ ಮುಖಂಡರು ಘೋಷಣೆಯನ್ನು ಹೊರಡಿಸಿದ್ದಾರೆ.

ಪಶ್ಚಿಮದಲ್ಲಿ ಪ್ರಲಯಕಾಲ

‘ ಚಾಡಿಯ ಚಾಣಕ್ಯ ’

ಯುದ್ಧವಾದರೆ ಯುಗ ಬದಲಾಯಿಸಬಹುದೆ ?

ಸದ್ಯಕ್ಕೆ ಕ್ರಾಂತಿಯ ಕಾಲವಿದೆಯೆ, ಬರಿಯೆ ಸಂಕ್ರಾಂತಿಯ ಸೂಚಕವಿದೆಯೆ ?

★

ಯುರೋಪದಲ್ಲಿ ಸಮರಜ್ವಾಲೆ ಹೊತ್ತುವುದರಲ್ಲಿದೆ; ಅಗ್ನಿಕುಂಡದಲ್ಲಿ ಉರುವಲು ತುಂಬಿದ್ದು ಈಗಾಗಲೆ ಹೊಗೆಯು ಕಪ್ಪಾಗಿ, ದಪ್ಪಾಗಿ ಏಳುತ್ತಲಿದೆ.

ಈ ಯುದ್ಧವು ತಪ್ಪುವಂತಿಲ್ಲ ಎಂದು ಒಂದು ಅಭಿಪ್ರಾಯ; ಈ ಯುದ್ಧವನ್ನು ತಪ್ಪಿಸಲು ಯತ್ನಿಸುವುದೆಂದರೆ ಮುತ್ಸದ್ದಿತನವನ್ನು ಮೂಲೆಗುಂಪಾಗಿರಿಸಿದಂತೆ ಎಂದು ಇನ್ನೊಂದು ಅಭಿಪ್ರಾಯ.

ಪ್ರತ್ಯಕ್ಷ ಸಂಬಂಧವಿಲ್ಲದೆ ಈ ಯುದ್ಧದಲ್ಲಿ ಭಾಗ ವಹಿಸಬಾರದು ಎಂದು ಒಂದು ಧೋರಣೆ; ವಿಶ್ವ-ಸಂಸ್ಕೃತಿಯ ದೃಷ್ಟಿಯಿಂದ ಈ ಯುದ್ಧದಲ್ಲಿ ಪ್ರತ್ಯಕ್ಷವಾಗಿಯೆ ಭಾಗವಹಿಸುವುದು ಪ್ರತಿಯೊಬ್ಬ ವಿವೇಕ-ಬುದ್ಧಿಯ ಮಾನವನ ಕರ್ತವ್ಯ ಎಂದು ಇನ್ನೊಂದು ಧೋರಣೆ.

ಭಾರತವಲ್ಲಾದರೂ ಅನೇಕ ರಾಷ್ಟ್ರಧುರೀಣರು ಈ ಪ್ರಶ್ನೆಗೆ ಹೆಚ್ಚಾಗಿ ಲಕ್ಷ್ಯ ಪೂರೈಸುತ್ತಿದ್ದಾರೆ. ಯುದ್ಧವು ಪ್ರಾರಂಭವಾದೊಡನೆ, ಇಂಗ್ಲಂಡವು ರಣಾಂಗಣಕ್ಕೆ ಧುಮುಕಿದ ಪಕ್ಷಕ್ಕೆ (ಒಂದು ವೇಳೆ ಧುಮುಕದೆ ಇದ್ದರೂ ಕೂಡ) ಭಾರತೀಯರು ಯಾವ ಧೋರಣೆಯನ್ನು ತಾಳಬೇಕು ಎಂಬುದು ಮಹತ್ತ್ವದ ಪ್ರಶ್ನೆಯಾಗಿದೆ. ಪ್ರತಿಯೊಂದು ರಾಜಕೀಯ ಪಕ್ಷದ ಸಂಸ್ಥೆಯಲ್ಲಾಗಲಿ ಸಮ್ಮೇಳನದಲ್ಲಾಗಲಿ ಈ ವಿಷಯವಾಗಿ ಈಗಾಗಲೆ ಗೊತ್ತುವಳಿಗಳು ಸ್ವೀಕೃತವಾಗುತ್ತಲಿವೆ.

ಆದ್ದರಿಂದ ಇನ್ನು ಬರಬಹುದಾದ ಯುದ್ಧದ ತಾತ್ತ್ವಿಕ ಸ್ವರೂಪವೇನು, ಮಹತ್ತ್ವವೇನು ?

★

ಮೇಲಿನ ಪ್ರಶ್ನೆಯನ್ನು ಇಂದಿನ ಜಗತ್ತಿನ ಪ್ರತಿಯೊಬ್ಬ ನಾಗರಿಕನು ತನ್ನನ್ನು ತಾನು ಕೇಳಿಕೊಳ್ಳಬೇಕಾಗಿದೆ. ಒಂದು ವಿಷಯವನ್ನು ಮಾತ್ರ ಮೊದಲು ಲಕ್ಷ್ಯದಲ್ಲಿಡಬೇಕಾಗುವುದು. ಶಸ್ತ್ರವು ಏನೇ ಹೇಳಲಿ, ತರ್ಕವು ಏನೇ ತೋರಿಸಲಿ–ಎರಡು ಪ್ರಬಲ ರಾಷ್ಟ್ರಗಳಲ್ಲಿ ಯುದ್ಧವು ಪ್ರಾರಂಭವಾದರೆ ಇಂದಿನ ಸ್ಥಿತಿಯಲ್ಲಿ ಯಾವ ರಾಷ್ಟ್ರಕ್ಕೂ ಹೊರಗುಳಿದುಕೊಳ್ಳಲು ಶಕ್ಯವೆ ಆಗುವುದಿಲ್ಲ. ಕೆಲವು ರಾಷ್ಟ್ರಗಳು ಸಂಧಾನ (Treaty) ಗಳಿಂದ ಪರಸ್ಪರ ಸಂಬದ್ಧವಾಗಿವೆ; ಮಿಕ್ಕುಳಿದ ಎಲ್ಲ ರಾಷ್ಟ್ರಗಳು ವ್ಯಾಪಾರ–ವ್ಯವಹಾರಗಳ ದೃಷ್ಟಿಯಿಂದ ಒಂದನ್ನೊಂದು ಅತ್ಯಂತ ಆಂತರಿಕವಾಗಿ ಹೊಂದಿಕೊಂಡು ನಿಂತಿವೆ. ಸಮುದ್ರದ ನೀರಿಗೆ ಒಂದು ಕಡೆ ಭರತಿ ಏರಿದರೆ ಅದೇ ಕಾಲಕ್ಕೆ ಜಗತ್ತಿನ ಇನ್ನೊಂದು ಭಾಗದಲ್ಲಿ ಕೊರತೆ ಕಾಣುವುದಂತೆ. ಹೀಗೆ ಹೊಯ್ದಾಡುವ, ಒಂದನ್ನೊಂದು ಹುಟ್ಟಿಸಿ ಹರಿವ ತೆರೆಗಳಂತೆ ರಾಷ್ಟ್ರಗಳು ಪರಸ್ಪರ ಸಂಬದ್ಧವಾಗಿವೆ. ಆದಕಾರಣ ಒಪ್ಪಲಿ ಒಪ್ಪದಿರಲಿ, ತಾತ್ಕಾಲಿಕವಾಗಿಯಾಗಲಿ ತರುವಾಯದಲ್ಲಾಗಲಿ, ಸಾಮಾನ್ಯವಾಗಿ ಪ್ರತಿಯೊಂದು ರಾಷ್ಟ್ರಕ್ಕೆ ಯುದ್ಧದಲ್ಲಿ ಸೇರಲೇಬೇಕಾಗುವುದು.

ಯುದ್ಧದಲ್ಲಿ ಭಾಗವಹಿಸುವುದು ವ್ಯವಹಾರದಿಂದ ಅನಿವಾರ್ಯವೆನಿಸುವುದರಿಂದ ಆ ಯುದ್ಧಕ್ಕೆ ಸಂಬಂಧಿಸಿದ ಎಲ್ಲ ಸ್ಥಿತಿ-ಗತಿಗಳನ್ನು ಮೊದಲು ಅರಿತುಕೊಳ್ಳುವುದು ಪ್ರತಿಯೊಬ್ಬನ ಕರ್ತವ್ಯವಾಗಿದೆ. ಇಂದು ಯುದ್ಧವು ಬರುವುದೆ ಖಂಡಿತವಾದರೆ ಆ ಅನಿಷ್ಟಕ್ಕೆ ಹಿಟ್ಲರನೆ ಕಾರಣನೆನಿಸುವನೆಂದು ಸಾಮಾನ್ಯ ಮನುಷ್ಯನು ಕೂಡ ತಿಳಿದಿದ್ದಾನೆ. ಇದಕ್ಕಾಗಿ ಹಿಟ್ಲರನ ಮೇಲೆ ಪಾಪದ ಹೊರೆಯನ್ನು ಹೊರಿಸುವ ಮುಂಚೆ ಒಂದೆರಡು ಮಾತುಗಳನ್ನು ಸ್ಮರಣೆಗೆ ತಂದುಕೊಳ್ಳಬೇಕು. ಹಿಟ್ಲರನ ದೇಶಾಭಿಮಾನವು ತೀವ್ರತರದ್ದಿದೆ; ಯಾವ ರೀತಿಯಿಂದಲೂ ಜರ್ಮನಿಗೆ ಅನಿಷ್ಟ

ಇಲ್ಲವೆ ಅಪಾಯ ಇಲ್ಲವೆ ಅಪಮಾನ ಸಂಭವಿಸಬಾರದೆಂದು ಅವನ ಹೃದಯದಲ್ಲಿ ಕಳಕಳಿ ಕುದಿಯುತ್ತಲಿದೆ. ಯುದ್ಧದ ಪ್ರಸಂಗ ಬಂದರೆ, ಜಯವಾಗಲಿ ಅಪಜಯವಾಗಲಿ, ಅಪಾರವಾದ ಅರ್ಥಹಾನಿ ಪ್ರಾಣಹಾನಿಗಳು ಜರ್ಮನಿಗೆ ತಪ್ಪುವಂತಿಲ್ಲ. ಇದನ್ನು ಹಿಟ್ಲರನು ಅರಿತಿದ್ದಾನೆ. ಆದರೂ ಆ ಕಳಕಳಿಯ ದೇಶಾಭಿಮಾನವು ಯುದ್ಧವನ್ನು ಅನಿವಾರ್ಯಮಾಡುತ್ತಿದೆಯಲ್ಲ? ಹಿಟ್ಲರನ ದೇಶಾಭಿಮಾನದಲ್ಲಿಯೆ ತಕ್ಕು ಇದೆಯೆ, ವೈಯಕ್ತಿಕವಾದ ಸೊಕ್ಕು ಇದೆಯೆ, ಇಲ್ಲವೆ ಯುದ್ಧವಲ್ಲದೆ ಮತ್ತಾವುದರಿಂದಲೂ ಬಿಡಿಸಲಾಗದ ಸಮಸ್ಯೆಗಳಿವೆಯೆ? ೧೯೧೪ರ ಯುದ್ಧದ ಕಾಲದಿಂದ ಜರ್ಮನಿಗಾಗಿ ಮಿಕ್ಕ ರಾಷ್ಟ್ರಗಳ ದ್ವೇಷವಿದೆ, ಜರ್ಮನಿಯನ್ನು ಹತ್ತಿಕ್ಕಬೇಕೆಂಬ ಹಟವಿದೆ. ವೆರ್ಸಾಯಿ ಒಪ್ಪಂದವು ಜರ್ಮನಿಗೆ ಘಾತುಕವಿದೆ, ಅಪಮಾನಕಾರಕವಿದೆ, ಜರ್ಮನ ಶಕ್ತಿ-ಸಂಸ್ಕೃತಿ ಸಂಪತ್ತುಗಳಿಗೆ ತಕ್ಕುದಾಗುವಂತೆ ಬೆಳೆಯಗೊಡಬಾರದೆಂಬ ಅಸೂಯೆ ಇದೆ. ಒಟ್ಟಾರೆ ಇಂದಿನ ರಾಜಕೀಯ ಜಗತ್ತಿನಲ್ಲಿ ಜರ್ಮನಿಗೆ ಅನ್ಯಾಯವೆ ಆಗುತ್ತಲಿದೆ. ನ್ಯಾಯ ಆಗಬೇಕೆಂದು ಆಶೀರ್ವದಿಸಲು ಕೂಡ ಯಾರಿಗೂ ಇಚ್ಛೆ ಇಲ್ಲ— ಎಂದು ಹಿಟ್ಲರನ ನಾಯಕತ್ವದ ಕೆಳಗಿದ್ದ ಜರ್ಮನಿಯ ತಕರಾರು ಪತ್ರ.

ಮೇಲಿನ ಎಲ್ಲ ಮಾತುಗಳಲ್ಲಿ ಸತ್ಯಾಂಶವಿದೆ ಎಂದು ಇತ್ತೀಚಿನ ಇತಿಹಾಸ ಬಲ್ಲವರು ಒಪ್ಪಲೇಬೇಕಾಗುವುದು. ಯುದ್ಧದ ತರುವಾಯದ ಜರ್ಮನಿಗೆ ಕೈದಿಯಂತೆ ಬಂಧನಗಳನ್ನು ಹಾಕಲಾಗಿತ್ತು. ಅವುಗಳನ್ನು ತೆಗೆದೊಗೆಯಬೇಕೆಂಬ ಇಚ್ಛೆ ದೂರದಲ್ಲಿರಲಿ, ಅದಕ್ಕೆ ಅನುಕೂಲ ಪ್ರಸಂಗಗಳೊದಗಿದಾಗ ಕೂಡ ಪ್ರಮುಖವಾಗಿ ಫ್ರಾನ್ಸವು ವಿರೋಧವನ್ನೊಡ್ಡುತ್ತಿತ್ತು. ಯುದ್ಧ ಮುಗಿದ ಎಂಟು ವರ್ಷಗಳ ತರುವಾಯದಲ್ಲಿ ಜರ್ಮನಿಗೆ ರಾಷ್ಟ್ರಸಂಘದಲ್ಲಿ ಪ್ರವೇಶವು—ಈಶ್ವರೀ ಪ್ರಸಾದದಂತೆ —ದೊರೆಯಿತು. ಇಷ್ಟಾದರೂ ಜರ್ಮನಿಗೆ ಸಮಾನ ಹಕ್ಕುಗಳಿರಲಿಲ್ಲ, ಮೂಲಭೂತ ಸ್ವಾತಂತ್ರ್ಯಗಳಿರಲಿಲ್ಲ. ಈ ದೃಷ್ಟಿಯಿಂದ ಸಹಾಯಕ ರಾಷ್ಟ್ರಗಳು ಅನ್ಯಾಯವನ್ನು ಬಗೆದದ್ದುಂಟು. ಆದರೆ ಆ ಅನ್ಯಾಯವನ್ನೆ ಎದೆಗುದಿಯಾಗಿಟ್ಟುಕೊಂಡು ಕಿಡಿಗೇಡಿತನವನ್ನು ಹೂಡಲು ಹಿಟ್ಲರನಿಗೆ ಅಧಿಕಾರವಿಲ್ಲ. ಯಾಕೆಂದರೆ ಹಿಟ್ಲರನ ಪ್ರಾಬಲ್ಯ ಸುರುವಾಗುವ ಮುಂಚೆಯೆ ಪರಿಸ್ಥಿತಿಯು ಬದಲಾಯಿಸತೊಡಗಿತ್ತು, ಫ್ರಾನ್ಸವು ಕೂಡ ಜರ್ಮನಿಯನ್ನು ಸಹಾನುಭೂತಿಪರ ದೃಷ್ಟಿಯಿಂದ ನೋಡತೊಡಗಿತ್ತು. ಧೋರಣೆಯ ಈ ಬದಲಾವಣೆಗೆ ಹಿಟ್ಲರನು ಹೆಚ್ಚಿನ ಅವಕಾಶವನ್ನು ಕೊಡಲಿಲ್ಲ. ತನ್ನ ನಾಯಕತ್ವವು ಭದ್ರವಾಗಿರಬೇಕೆಂದು, ಬೇಕಾದುದೆನಿಸಬೇಕೆಂದು ಅವನು ಮೊದಲಿನ ಅನ್ಯಾಯಗಳ ಪಲ್ಲವಿಯನ್ನೆ ಹಾಡತೊಡಗಿದನು. ಅದೇ ಹಾಡನ್ನು ಕೇಳಿಕೇಳಿದ ಬೇಜಾರದಲ್ಲಿ ತನ್ನವರೂ ಅನ್ಯರೂ ಮಬ್ಬಿನಿಂದ ಮೈಮರೆಯುತ್ತಿರುವಾಗ, ಏಕಪಕ್ಷೀಯ (unilateral) ನಿರ್ಣಯಗಳನ್ನು ಕೈಕೊಳ್ಳಲನುವಾದನು. ಮೊದಮೊದಲು ಯಾರೂ ಅವನ ಕೃತಿಗಳ ಮಹತ್ತ್ವವನ್ನು ಗಮನಿಸಲಿಲ್ಲ. ಈ ಅಲಕ್ಷ್ಯದಿಂದ ಪ್ರೋತ್ಸಾಹಿತನಾದ ಹಿಟ್ಲರನು ಇಂದು ಏಕಪಕ್ಷೀಯ ಧೋರಣೆಯ ಕೊನೆಯ ಮೆಟ್ಟಲಿಗೆ ಡಾಂಜಿಗ (Danzig) ವನ್ನು ನುಂಗಲು ಬಾಯ್ದೆರೆದಿದ್ದಾನೆ; ಆ ಬಕಾಸುರನ ಬಾಯಿಯಲ್ಲಿ ನೋಡಲಾಗಿ ಇಂದು ಅವನ ಹೃದಯವು ಎಲ್ಲರಿಗೆ ಸ್ಪಷ್ಟವಾಗಿ ಕಾಣತೊಡಗಿದೆ.

ಜರ್ಮನ್ ಜನತೆಯನ್ನು ಎಚ್ಚರಿಸುವ ಹಿಟ್ಲರನ ಉತ್ಸಾಹವಾಣಿ

ಈ ಪರಿಸ್ಥಿತಿಯಲ್ಲಿ ನಾವು ಕೇಳಬೇಕಾದ ಮೊದಲ ಮಾತೆಂದರೆ ಇದು:— ಅನ್ಯಾಯದ ಪ್ರತೀಕಾರವನ್ನು ಏಕಪಕ್ಷೀಯ ವೃತ್ತಿಯಿಂದ ಸಾಧಿಸಿಕೊಳ್ಳುವುದು ಹಿತಕರವೆ ಅಲ್ಲವೆ? ಅನ್ಯಾಯದ ಪ್ರತೀಕಾರಕ್ಕೆ ಅಸಹಕಾರ ಮತ್ತು ಹೃದಯಪರಿವರ್ತನೆ ಇವೆರಡೆ ನ್ಯಾಯವಾದ ಉಪಾಯಗಳು ಎಂಬ ಮಾತ ಮೈಯುಂಡ ನಮಗೆ ಈ ಪ್ರಶ್ನೆಯ ಮಹತ್ತ್ವ ಹೆಚ್ಚಾಗಿದೆ; ಯಾಕೆಂದರೆ, ತೋರಿಕೆಯಲ್ಲಿ ಹಿಟ್ಲರನಿಗೆ ಫಲ ದೊರೆತಿದೆ, ನಮ್ಮ ಧ್ಯೇಯವಿನ್ನೂ ಕನಸು

ನಲ್ಲಿಯೇ ಇದೆ. ಅದಕ್ಕಾಗಿ ಹಿಟ್ಲರನ ಹಾದಿಯು ಸರಿಯಾದದ್ದೆಂದು ಹೇಳಬಹುದೆ? ಹಾಗೆ ನಮ್ಮ ಮನವರಿಕೆಯಾದರೆ ಯುದ್ಧಸಂಕಟದಲ್ಲಿ ಹಿಟ್ಲರನಿಗೆಯೆ ನಾವು ಬೆಂಬಲವನ್ನು ಕೊಡಬೇಕಾಗುವುದಲ್ಲವೆ? ಆದ್ದರಿಂದ ಈ ಏಕಪಕ್ಷೀಯ ಪದ್ಧತಿಯನ್ನು ಸೂಕ್ಷ್ಮವಾಗಿ ಅರಿತುಕೊಳ್ಳೋಣ. ಅಥವಾ ಇದರಲ್ಲಿ ಸೂಕ್ಷ್ಮತೆಯಾದರೂ ಏನಿದೆ? ಎರಡೂ ಪಕ್ಷಗಳಿಗೆ ಸಮ್ಮತವಿಲ್ಲದ ನಿರ್ಣಯವೆಂದರೆ ನಿರಂತರ ಕಲಹಕ್ಕೆ ಕಾರಣ ಎಂದು ಸಾಮಾನ್ಯನು ಕೂಡ ತನ್ನ ಅನುಭವದಿಂದ ಹೇಳಬಹುದು. ಅನ್ಯಾಯಕ್ಕೆ ಪ್ರತೀಕಾರ ದೊರೆತಷ್ಟಕ್ಕೆ ಮುಗಿಯಲಿಲ್ಲ; ಮುಂದೆ 'ಮತ್ತೊಮ್ಮೆ' ಅಂತಹ ಅನ್ಯಾಯವಾಗದಂತೆ ನೋಡಿಕೊಳ್ಳಬೇಕು, ಹಾಗಾಗಿಸುವಂತಹ ನಿರ್ಣಯವನ್ನೆ ಕೈಕೊಳ್ಳಬೇಕು. ಇದರಲ್ಲಿ ಪ್ರಾಮಾಣಿಕತೆಯೂ ಇದೆ, ಮುತ್ಸದ್ದಿತನವೂ ಇದೆ. ಅವನ್ನು ಬಿಟ್ಟು ಹಿಟ್ಲರನು ಇಂದು ಕೇವಲ ತನಗೊಬ್ಬನಿಗೆ ಬೇಕಾದದ್ದು ನ್ಯಾಯ, ಅದನ್ನು ಸಾಧಿಸಿಕೊಳ್ಳುವುದು ಕರ್ತವ್ಯ ಎಂದು; ಅದರಂತೆಯೆ ಆಚರಿಸಿದರೆ; ಆ ಆಚರಣೆಯಲ್ಲಿ ಅವನಿಗೆಯೆ ಜಯ ದೊರೆಕಿದರೆ, ನಾಳೆ ಬೇಕಾದ ರಾಷ್ಟ್ರವೂ ಅದೇ ಧೋರಣೆಯನ್ನು ಸ್ವೀಕರಿಸಬಹುದಲ್ಲವೇ? ಹೀಗಾದರೆ ಶಾಂತಿಯೂ ಇಲ್ಲ, ಸಂಪತ್ತಿಯೂ ಇಲ್ಲ, ಶಾಶ್ವತ ಕಲಹಪ್ರಸಂಗಗಳು ಮಾತ್ರ ತಪ್ಪುವುದಿಲ್ಲ. ಈ ಮಾತಿಗೆ ಹಿಟ್ಲರನು ಸಂಶಯವನ್ನೆತ್ತಬಹುದು. ಎದುರಾಳಿಗಳಲ್ಲಿ ನ್ಯಾಯಬುದ್ಧಿ ಇಲ್ಲವೆ ಅದಕ್ಕಾಗಿ ಇಚ್ಛೆ ಇದ್ದಿಲ್ಲವಾದರೆ? ಈ ಮಾತನ್ನು ಭಾರತೀಯ ಧೋರಣೆಯೂ ಒಪ್ಪಿಕೊಂಡಿದೆ. ಆದರೆ ಎದುರಾಳಿಗಳಲ್ಲಿ ಹೃದಯ ಪರಿವರ್ತನವನ್ನು ಮಾಡುವುದು ಶಕ್ಯವೆಂದೂ ಅದಕ್ಕಾಗಿ ತನ್ನಲ್ಲಿ ಸತ್ಯ-ಅಹಿಂಸೆಗಳನ್ನೊಳಗೊಂಡ ಆತ್ಮಶಕ್ತಿ ಬೇಕೆಂದೂ ಭಾರತೀಯನ ಆಶಾವಾದ; ಹಿಟ್ಲರನು ಮಾತ್ರ ಹತ್ತು ವರ್ಷಗಳ ಕಟು ಅನುಭವದಿಂದ ಎದುರಾಳಿಗಳಲ್ಲಿ ಹೃದಯಪರಿವರ್ತನವೆಂದರೆ ಉಸುಕಿನಲ್ಲಿ ಎಣ್ಣೆ ಹುಡುಕಿದಂತೆ ಎಂದು ನಿರ್ಣಯಕ್ಕೆ ಬಂದಿದ್ದಾನೆ.

ಇಂದು ಯುದ್ಧವಾದರೆ ಅದನ್ನು ಇನ್ನೊಂದು ದೃಷ್ಟಿಯಿಂದಲೂ ನೋಡಬೇಕಾಗುವುದು. ಒಂದು ರಾಷ್ಟ್ರದ ರಾಜ್ಯಪದ್ಧತಿ ಇನ್ನೊಂದು ರಾಷ್ಟ್ರದ ಗೊಡವೆ ಅಲ್ಲ ಎಂದು ಅನೇಕ ಮುತ್ಸದ್ದಿಗಳು ಹೇಳುತ್ತಿದ್ದಾರೆ. ಜರ್ಮನಿಯಲ್ಲಿ ರಾಷ್ಟ್ರಸತ್ತಾವಾದ (National Socialism) ಇದ್ದ ಮಾತ್ರಕ್ಕೆ ಅದನ್ನೊಪ್ಪದ ರಾಷ್ಟ್ರವು ಕೂಡಲೆ ಜರ್ಮನಿಯೊಡನೆ ಯುದ್ಧ ಹೂಡಬೇಕೆಂದು ಯಾವ ಪ್ರಾಮಾಣಿಕ ಮನುಷ್ಯನೂ ಹಟ ತೊಡುವುದಿಲ್ಲ. ಆದರೆ ಈ ಪರಿಸ್ಥಿತಿಯಲ್ಲಿ ಒಂದು ತೊಡಕು ಇದೆ. ಇಂದು ಬೇರೆ ಯಾವುದೆ ಕಾರಣಕ್ಕಾಗಿ ಜರ್ಮನಿಗೂ ಇಂಗ್ಲಂಡಕ್ಕೂ ಯುದ್ಧ ಪ್ರಾರಂಭವಾಯಿತೆನ್ನೋಣ, ಜರ್ಮನಿಗೆ ವಿಜಯವಾಯಿತು ಎಂದೂ ಇಟ್ಟುಕೊಳ್ಳೋಣ. ಆಗ ವಿಜಯಶಾಲಿಯಾದ ಜರ್ಮನ್ ರಾಜ್ಯಪದ್ಧತಿಯು ಸೋತ ಮತ್ತು ಮಿತ್ರ ರಾಷ್ಟ್ರಗಳಲ್ಲಿ ರೂಢಿಪ್ರಿಯವಾಗುವುದು ಸಹಜವಾಗಿದೆ, ಹೆಚ್ಚು ಸಂಭವನೀಯವೂ ಆಗಿದೆ. ಇದಕ್ಕಾಗಿ ಜರ್ಮನ್ ರಾಷ್ಟ್ರಸತ್ತಾವಾದವು ಘಾತುಕ ಎಂದೊಪ್ಪುವ ಎಲ್ಲರೂ ಮುಂಚೆಯೆ ಇಂಗ್ಲಂಡಿನ ನೆರವಿಗೆ ಬಂದು ಜರ್ಮನಿಗೆ ಜಯ ದೊರೆಕದಂತೆ ನೋಡಿಕೊಳ್ಳಬೇಕೆ — ಎಂಬುದೂ ಒಂದು ಪ್ರಶ್ನೆಯೆ ಆಗಿದೆ.

ಜರ್ಮನ್ ರಾಜ್ಯಪದ್ಧತಿಯಲ್ಲಿ ವ್ಯಕ್ತಿಗೆ ಹೆಚ್ಚಿನ ಸ್ವಾತಂತ್ರ್ಯವಿಲ್ಲ. ರಾಷ್ಟ್ರ (State) ಎಂದರೆ ಒಬ್ಬ ನಾಯಕನಿಗೇ ವ್ಯಕ್ತಿಯು ಎಲ್ಲ ಅಧಿಕಾರಗಳನ್ನು ಒಪ್ಪಿಸಬೇಕಾಗುವುದು. ವ್ಯಕ್ತಿಸ್ವಾತಂತ್ರ್ಯದ ಮತ್ತು ಪ್ರಜಾಪ್ರಭುತ್ವದ ದೃಷ್ಟಿಯಿಂದ ಇದು ಹಿತಕರವೆ ಅಲ್ಲವೆ ಎಂಬ ಪ್ರಶ್ನೆಗೆ ಮೊದಲು ಇನ್ನೊಂದು ಪ್ರಶ್ನೆಯನ್ನು ನಾವು ಕೇಳಬೇಕಾಗಿದೆ. ಇಂದಿನ ಆಡಳಿತಕ್ರಮದಲ್ಲಿ ವ್ಯಕ್ತಿಸ್ವಾತಂತ್ರ್ಯಕ್ಕೆ ಸ್ಥಾನವಿದೆಯೆ? ಇಂದಿನ ರಾಜ್ಯವ್ಯವಹಾರವನ್ನು ನಡೆಸುವ ಅಧಿಕಾರ-ಅನುಕೂಲ-ಯೋಗ್ಯತೆಗಳು ಸರ್ವಸಾಮಾನ್ಯ ವ್ಯಕ್ತಿಗಿರುವುವೆ? ಇದ್ದಿಲ್ಲವಾದರೆ ಆ ವ್ಯಕ್ತಿಸ್ವಾತಂತ್ರ್ಯದ ಮಹತಿ ಮತ್ತು ಆವಶ್ಯಕತೆ ಯಾಕೆ?

ಹೀಗೆ ಅನೇಕ ದೃಷ್ಟಿಗಳಿಂದ ಅನೇಕ ಮಹತ್ವದ ತತ್ವಗಳು ಒದಗಬಹುದಾದ ಯುದ್ಧದ ವಿಷಯದಲ್ಲಿ ಅಡಕವಾಗಿವೆ. ಅವುಗಳೊಡನೆ ಇನ್ನೂ ಒಂದು ಮಾತಿದೆ. ತತ್ವವನ್ನು ನಂಬಿ ಅದಕ್ಕಾಗಿ ಹೋರಾಡಿ ಅನರ್ಥವನ್ನು ತಂದುಕೊಳ್ಳುವುದು

ಅಹಿಂಸಾಪ್ರಚಾರಕ ಗಾಂಧಿಯವರ ಶಾಂತಿಪಾರ

ಜಾಣತನವೊ, ಇಲ್ಲವೆ ತಾನು-ತನ್ನ ದೇಶ ಇವು ಹೇಗಾದರೂ ಸುಖದಿಂದ, ಶಾಂತಿಯ ಸಂಪತ್ತಿನಿಂದ ಉಳಿದರೆ ಸಾಕು ಎಂಬುವುದು ಜಾಣತನವೊ !

ಅದಕಾಗಿ ಮೇಲೆಯೆ ಕೇಳಿದೆ: —

ಬರಬಹುದಾದ ಯುದ್ಧವು ಕ್ರಾಂತಿಯನ್ನು ತರುವುದೆ, ಇಲ್ಲವೆ ಸಂಕ್ರಾಂತಿ (Transition) ಯ ಸಂದರ್ಭ ಮಾತ್ರ ಎನಿಸುವುದೆ ?

— ಕಿವಿಮಾತು —

ನಮ್ಮ 'ಕಿವಿಮಾತು' ಮೊದಮೊದಲು ಅನೇಕರಿಗೆ ಕಹಿಯಾಗಿ ಕಂಡಿತಾದರೂ ಇತ್ತೀಚೆಗೆ ಅದನ್ನು ಅಪೇಕ್ಷಿಸುವವರ ಸಂಖ್ಯೆ ಹೆಚ್ಚಾಗುತ್ತಲಿರುವುದು ನಮ್ಮ ಸಾಹಿತ್ಯದ ಒಳ್ಳೆಯ ಭವಿಷ್ಯಕ್ಕೆ ಗುರುತಾಗಿದೆ. ಈ ಸಲ ಅವಕಾಶವಿರಲಿಲ್ಲ. ಈ ಕೊರತೆಯನ್ನು ಮುಂದಿನ ಸಂಚಿಕೆಯಲ್ಲಿ ತುಂಬಿಕೊಡುತ್ತೇವೆ. —ಸಂ. ಜ.

ಮುಂದಿನ ಸಂಚಿಕೆಯಲ್ಲಿ

ನಿರಾಹಾರ (ನಾಗಪ್ಪನ ಕತೆ)
ಪ್ರೊ. ಎನ್. ಎಂ. ಕುಲಕರ್ಣಿ ಎಂ. ಎ.

ಸೋಲರಿಯದ ಜಪಾನಿಯರ ವ್ಯಾಪಾರ ಪಣ
ಪ್ರೊ. ಡಾ. ಎನ್ ಎನ್. ಗೋಡಬೋಲೆ
ಎಂ. ಎ; ಬಿ. ಎಸ್‌ಸಿ. ಇತ್ಯಾದಿ.

ಗೋದಿ ನಾಗರ (ಪತ್ತೇದಾರಿ ಕಥೆ)
ಶ್ರೀ. ಎನ್. ಸೂರಪ್ಪ ಚಿತ್ರದುರ್ಗ

ಸಹಶಿಕ್ಷಣ (ಚರ್ಚಾತ್ಮಕ ಪ್ರಬಂಧ)
ಶ್ರೀ. ಜೋಶಿ ಶಾಮಾಚಾರ್ಯರು ಬೆಳಗಾಂವಿ

ಸ್ನೇಹದ ಸಮಾಧಿ (ಸಣ್ಣಕತೆ)
ಶ್ರೀ. ಬಸವರಾಜ ಕಟ್ಟೀಮನಿ, ಗದಗು

ಪ್ರಣಯದ ಪರಿಸಮಾಪ್ತಿ (ವಿನೋದಚಿತ್ರ)
ಶ್ರೀ. ಕೃಷ್ಣಮೂರ್ತಿ ಪುರಾಣಿಕ ಬಿ. ಎ.

ಇವಲ್ಲದೆ 'ಶ್ರೀರಂಗ'ರ ಹಂಟೆಗಳೂ ಬೇರೆ ಲೇಖನ-ಕವಿತೆಗಳೂ ಶ್ರೀಮಾನ್ ಮುದವೀಡು ಕೃಷ್ಣರಾಯರ ಲೇಖನವೂ ಬರುತ್ತದೆ. ಮುಂದಿನ ಸಂಚಿಕೆಯಿಂದ ವಿದ್ಯಾರ್ಥಿಗಳಿಗಾಗಿ ಎರಡು ಪುಟಗಳನ್ನು ಕಾಯ್ದಿರಿಸಲಾಗುವುದು. ಅದರಲ್ಲಿ ಅಲ್ಲಲ್ಲಿಯ ಮಿಡಲ್ ಸ್ಕೂಲ್ ಹೈಸ್ಕೂಲುಗಳಲ್ಲಿಯ ವಿದ್ಯಾರ್ಥಿಗಳ ಸಾಹಿತ್ಯ ನಿರ್ಮಾಣ ಪ್ರಯತ್ನಗಳನ್ನು ವಿಮರ್ಶೆಗಳೊಂದಿಗೆ ಪ್ರಕಟಿಸಲಾಗುವುದು. ಕರ್ನಾಟಕದಲ್ಲಿಯ ಪ್ರತಿಯೊಂದು ಹೈಸ್ಕೂಲ್ ಮಿಡಲ್ ಸ್ಕೂಲಿನ ವಿದ್ಯಾರ್ಥಿಗಳೂ ಇದರಲ್ಲಿ ಭಾಗ ವಹಿಸಬೇಕು. ಅಲ್ಲಲ್ಲಿಯ ಕನ್ನಡ ಅಧ್ಯಾಪಕರು ಈ ಕಾರ್ಯಕ್ಕಾಗಿ ತಮ್ಮ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಬೇಕಾಗಿ ಬಿನ್ನಹ.

ನೀವು ಯಾವಾಗ ಅನ್ನುವಿರಿ ?

ಅದು ತಿರುಗಿ ಬರುವದಿಲ್ಲವೆಂದು ಖಾತ್ರಿ ಆದಾಗ ಅಲ್ಲವೆ?
ಆದರೆ ನಿಮಗೆ ಎಂದಾದರೂ ಹೀಗೆ ಖಾತ್ರಿ ಅನಿಸಿರುವದೋ ಹೇಗೆ?

ದಮ್ಮಿನ ಬಾಧೆಯು ಬಹು ತ್ರಾಸದಾಯಕ ಇದ್ದುದರಿಂದ ಅದನ್ನು ನಿವಾರಿಸಿಕೊಳ್ಳುವ ಸಹಜ ಮಾರ್ಗವನ್ನು ಬಿಟ್ಟು ದಮ್ಮು ಹತ್ತಿದವನು ಆರಾಮದ ಆಶೆಯಿಂದ ಸಿಕ್ಕ ಸಿಕ್ಕ ಉಪಾಯಗಳಿಗೆ ಮೊರೆ ಹೋಗುತ್ತಾನೆ. ಐದು ಹತ್ತು ಮಿನಿಟುಗಳಲ್ಲಿ ದಮ್ಮನ್ನು ನೆಟ್ಟಗೆ ಮಾಡುವ ಪ್ರತಿಜ್ಞೆಯ ಪೇಟೆಯಲ್ಲಿಯ ಪೇಟಂಟ ಔಷಧಗಳು ಅವನನ್ನು ಸಹಜವಾಗಿ ಮೋಹಗೊಳಿಸುವವು. ಔಷಧ ಪುಡಿ, ಎಫಿಡ್ರಿನ್‌ದ ಗುಳಿಗೆಗಳಂಥ ಕ್ಷಣಿಕ ಗುಣಕಾರಿ ಮತ್ತು ತಾತ್ಪೂರ್ತಿಕ ಉಪಾಯದ ನಾದದಿಂದ ನೀವು ಅವರ ಗುಲಾಮರಾಗಿ ಕಾಯಂ ದಮ್ಮಿನವರಾಗಿ ಉಳಿದದ್ದು ಬಹಳ ತಡ ಮಾಡಿ ಲಕ್ಷಕ್ಕೆ ಬರುತ್ತದೆ.

ದಮ್ಮು ಹತ್ತಿದವನ ಪ್ರಕೃತಿಯು ಒಳಗಿಂದೊಳಗೆ ಕೆಟ್ಟಿರುತ್ತದೆ. ದಮ್ಮು ಕೇವಲ ಬಾಹ್ಯ ಲಕ್ಷಣ. ಆದ್ದರಿಂದ ದಾಹಾ ಅನ್ನುವುದರಲ್ಲಿ ಗುಣಮಾಡಿಕೊಳ್ಳುವ ಆಶೆ ಹಿಡಿಯುವದು ಹುಚ್ಚುತನವೇ ಸರಿ. ಉಸುರಾಡಿಸುವದನ್ನು ನಿಯಮಿತ ಮತ್ತು ದಷ್ಟಪುಷ್ಟ ಮಾಡುವ ಔಷಧಗಳೇ ದಮ್ಮನ್ನು ಗುಣಪಡಿಸಬಲ್ಲವು. ಆದರೆ ಈ ಔಷಧಿಗಳು ಗುಣಕಾರಿಯಾಗಬೇಕಾದರೆ ಅವುಗಳೊಂದಿಗೆ ನಿಯಮಿತ ಶೌಚಶುದ್ಧಿಯಾಗಿ ಪಚನಶಕ್ತಿಯು ಸುಧಾರಿಸುವ ಮತ್ತು ಶಕ್ತಿಯನ್ನು ಹೆಚ್ಚಿಸುವ ಯೋಜನೆಯು ಆಗಲಿಕ್ಕೆ ಬೇಕು.

ಪುರೋಹಿತ ಶ್ವಾಸಹಾರಿ (ಕಂಪೌಂಡ) ಯಲ್ಲಿ ಈ ತರದ ಕಲ್ಪಾಗದಂಥ ಮತ್ತೂ ಸಮತೋಲ ಮಿಶ್ರಣವು ಸಾಧ್ಯವಾಗಿದ್ದರಿಂದ, ದಮ್ಮಿನ ಮೂಲಕಾರಣವನ್ನು ಹುಡುಕಿ ಅದರ ಮೇಲೆ ತನ್ನ ಪ್ರಭಾವವನ್ನು ಬೀರಿ, ದಮ್ಮನ್ನು ಮೆಲ್ಲ ಮೆಲ್ಲನೆ ಆದರೆ ಖಂಡಿತವಾಗಿ ನೆಟ್ಟಗೆ ಮಾಡುವ ಪ್ರಾಪ್ತಿಯು ಔಷಧದಲ್ಲಿ ಅದು ಅನೇಕ ವರ್ಷಗಳಿಂದ ಅಗ್ರೇಸರತ್ವ ಪಡೆದಿದೆ. ದಮ್ಮು, ಕೆಮ್ಮು, ಬೆಳಗು ಮುಂಜಾನೆ ಉಸಿರು ಗಟ್ಟುವದು, ಗಂಟಲು ಉರಿಯುವಂಥ ಕೆಮ್ಮು ಮತ್ತು ಪುಪ್ಪುಸದ ಯಾವತ್ತೂ ವಿಕಾರಗಳಿಗೆ ಅದರಿಂದ ಗುಣವಾಗುತ್ತದೆ.

ರೂ. ೨, ರೂ. ೩-೮-೦, ರೂ. ೬ ಈ ಕಿಮ್ಮತ್ತುಗಳಲ್ಲಿ ಸಣ್ಣ ದೊಡ್ಡ ಬಾಟಲಿಗಳು ಸರ್ವತ್ರ ದೊರೆಯುತ್ತವೆ.

ಉತ್ಪಾದಕರ ವಿಳಾಸ:

ಡಾ. ಪುರೋಹಿತ ಫಾರ್ಮಸಿ, ಕೊಲ್ಹಾಪುರ
ಅಥವಾ ಮುಂಬಯಿಯ ಯಾವದೇ ಔಷಧ ಅಂಗಡಿಕಾರರ ಕಡೆಯಿಂದ

ಪುರೋಹಿತ ಶ್ವಾಸಹಾರಿ

ಪಲ್ಲೂನ ಸೇಡು

★

ಪ್ರೊ. ಎನ್. ಎಂ. ಕುಲಕರ್ಣಿ, ಎಂ. ಎ.
ಹಿಂದೂ ಯುನಿವರ್ಸಿಟಿ, ಬನಾರಸ

ಅವರಿಂದ

ಉಳ್ಳವನಾದ ತಂದೆ ಕಲಿಯಲಿಕ್ಕೆ ದುಡ್ಡು ಕೊಡದೆ ಹೋದರೆ ಬಲ್ಲಿದನಾದ ಮಗನು ಮಾಡಬೇಕೇನು? ಪಲ್ಲೂ ಏನೇನು ನಾಟಕ ನಾಡಿ ತಂದೆಯ ಹಣದ ಗಂಟನ್ನೆತ್ತಿದ ಗೊತ್ತೇ? ಪಾಪ, ಪೊಲಿಸ್ ಇನ್‌ಸ್ಪೆಕ್ಟರರೂ ಅವನ ಮಂಕುಬೂದಿಗೆ ಬಲಿಬಿದ್ದರು. ಭಲೆ ಪಲ್ಲೂ!

★

ನಿತ್ಯಕ್ರಮದಂತೆ ನಮ್ಮೂರ ನಾಗಪ್ಪ ಅದೇ ಅಂಗಡಿಗೆ ಬಂದು ತನ್ನ ಮೂಲೆಯ ಸ್ಟೂಲಿನ ಮೇಲೆ ಕುಳಿತು ಚಹಾ ತರಲಿಕ್ಕೆ ಹೇಳಿದ. ಚಹದ ಕೂಡ 'ಬಿಸಿ ಬಿಸಿ ಪುರಿ–ಭಾಜಿಯ ಪ್ಲೇಟೊಂದು ಬಂದಿತು. 'ನಾನು ಚಹ ಮಾತ್ರ ಹೇಳಿದ್ದು, ಇದೆಲ್ಲಿಂದ ಬಂತು ಪುರೀ!' ಎಂದು ನಾಗಪ್ಪ ವಿಚಾರಿಸಿದ. ಅಷ್ಟರಲ್ಲಿ ಅಂಗಡಿಯ ಮಾಲಕನು ಬಂದು ಹೇಳಿದ: "ಇದು ನಿಮ್ಮ ಈ ದಿನದ ಇನಾಮು! ನಾಗಪ್ಪನವರೇ, ನೀವು ನಮ್ಮಲ್ಲಿ ಬರುವುದರಿಂದ ನಮ್ಮ ಗಿರಾಕಿಗಳು ಹೆಚ್ಚಾಗ ಹತ್ತಿವೆ. ನೀವು ಸಂಕೋಚಪಡಬಾರದು.." ಎಂದವನೇ ಅವನು ಒಳಗೆ ಹೋದ. ಡಿಕ್ಕೀಗೆ ದಿನಾಲು ಒಂದು ಬಿಸ್ಕೀಟ್ ಚೂರು ಮಾತ್ರ ಸಿಕ್ಕುತ್ತಿತ್ತು. ಈ ದಿನ ಪುರಿಯೂ ಬಂತು. ತಿಂಬ ಆಸ್ಥೆಯಿಂದ ತಿನ್ನುತ್ತ ಅದು, ತನ್ನ ಮೇಜಿನ ಬುಡದಲ್ಲಿ ಕಿಸಿಸುಕಾಣುತ್ತ ಕುಳಿತಿತು. ನಾಗಪ್ಪನ ಕಥೆಗಳನ್ನು ಕೇಳಲು ಊರ ಜನರೆಲ್ಲ ಅಂಗಡಿಗೆ ಬರುತ್ತಿದ್ದರು. ಅಂತೆಯೇ ಆ ದಿನ ಅಂಗಡಿಯ ಮಾಲಕನ ಉತ್ಸಾಹದ ಪುರೀ ಪ್ಲೇಟು ಸಿಕ್ಕಿದ್ದಿತು. ದಿನೇ ದಿನೇ ನಾಗಪ್ಪನ ಜನಪ್ರಿಯತೆಯು ಬಲವಾಗಿ ಬೆಳೆಯ ಹತ್ತಿತ್ತು. ಅವನ ಅನುಭವಕ್ಕೆ ಮಿತಿಮೀರೆ ಇಲ್ಲದಂತೆ ಮುಂದಿಗೆ ಏರುತ್ತಿತ್ತು. ಯಾವ ವಿಷಯ ನಡೆದಿದ್ದರೂ ನಾಗಪ್ಪ ಅದಕ್ಕೆ ಸಮಂಜಸವಾದ ತನ್ನ ಕಥೆಯೊಂದನ್ನು ಹೇಳಿ ಜನರ ಮೆಚ್ಚಿಕೆಗೆ ಪಾತ್ರನಾಗುತ್ತಿದ್ದ. ಇಂದು ನಾಗಪ್ಪ ಪುರೀ-ಚಹಾ ಮುಗಿಸಿ ತಾಂಬೂಲ ಸೇವನೆ ಮಾಡುತ್ತ ಕುಳಿತಿದ್ದ. ಮಗ್ಗುಲಲ್ಲಿ ಕುಳಿತ ಎರಡು ಗಿರಾಕಿಗಳು ಏನೇನನೋ ಮಾತನಾಡುತ್ತಿದ್ದರು. "ಜುಗ್ಗ* .... ಜೀನತನ.. ಮಹಾಖಟ್ಟು.." ಮುಂತಾದ ಕೆಲವೊಂದು ಶಬ್ದಗಳು ಮಾತ್ರ ನಾಗಪ್ಪನಿಗೆ ಕೇಳಬಂದುವು. ಇದು ಯಾವ ಸಂಗತಿ ಎಂಬ ಕುತೂಹಲದಿಂದ ಸರಿಯಾಗಿ ಮಾತು ಕೇಳುವಂತೆ ಸ್ಟೂಲನ್ನು ಸರಿಸಿ ಅವನು ಕುಳಿತುಕೊಂಡ.

"..ಈ ಸೈತಾನೀ ಸರಕಾರವು ನಷ್ಟವಾಗಿ ಹೋಗಬೇಕು! ಸಾವಿರಾರು ಜನ ಭಾರತೀಯರು ಆಹುತಿಯಾಗದ ವಿನಾ ನಮಗೆ ಸ್ವಾತಂತ್ರ್ಯ ಸಿಕ್ಕಲಾರದು.."

"ನಾ ಏನು ಹೇಳೋದು ಮತ್ತ, ಅವನಂಥಾ ಖಟ್ಟಾ ಆಸಾಮಿ ಹಗಲು ದೀವಿಗೀ ಹಚ್ಚಿ ಹುಡುಕಿದರೂ ಸಿಗೋದಿಲ್ಲ"

"ಅಷ್ಟು ಜೀನತನವಿದ್ದರೆ ಮದುವೇ ಏಕೆ ಮಾಡಿಕೊಂಡ? ಸಂಸಾರಕ್ಕೆ ಖರ್ಚು ಮಾಡಬೇಕಾಗುವುದಿಲ್ಲವೇ....?"

"ಹೆಂಡತಿಯಿಂದ ದುಡ್ಡು ಸಿಕ್ಕೀತು ಅಂತಮಾಡಿಕೊಂಡ; ಅವನ ಮಾವಗ ಗಂಡುಮಕ್ಕಳಿಲ್ಲ.."

* 'ಜುಗ್ಗ' ಎಂದರೆ ಜೀನ, ಕೃಪಣ

"ಸರಿ, ಸರಿ; ಈಗ ತಿಳೀತು, ಅಂತೂ ದುಡ್ಡನ್ನಿಟ್ಟು ಲಗ್ನ ಮಾಡಿಕೊಂಡಾ ಅನ್ನಿ.. "

ನಾಗಪ್ಪನಿಗೆ ತುಂಬ ಕುತೂಹಲವೆನಿಸಿತು. ಗಂಟಲು ಸರಿಪಡಿಸಿಕೊಂಡು ಕೇಳಿದ: "ಏನು ಸ್ವಾಮಿ ಅದಾವ ಜುಗ್ಗನ ವಿಷಯ? ಬಹಳೇ ಖಟ್ಟಾ ಆಸಾಮಿ ಅಂತಿದ್ರಿ?"

"ಒಹೋ, ನಾಗಪ್ನೋರೆ, ನಿಮ್ಮ ಅನುಭವಕ್ಕೆ ಮೀರಿದ ಒಂದು ಸಂದರ್ಭವಿದೆ ಇಲ್ಲಿ. ಆ ನಮ್ಮ ಮರಡೂರ ಮಲ್ಲಪ್ಪ ಮೊನ್ನೆ ಮೊನ್ನೆ ಲಗ್ನವಾದ. ಅವನ ಜುಗ್ಗುಸ್ವಭಾವ ತಮಗೆ ಗೊತ್ತಿಲ್ಲ. ನೀರು ಕಾಯಿಸಲಿಕ್ಕೆ ಕಟ್ಟಿಗೆ ಕುಳ್ಳು ಖರ್ಚು ಎಂದು ಒಂದು ಬಾಲ್ದಿ ನೀರು ಬಿಸಿಲಿನಲ್ಲಿಟ್ಟು ಸ್ನಾನಮಾಡುತ್ತಿರುತ್ತಾನೇ ಅವ. ಅಲ್ಲದೆ ಹಾಲು–ಮೊಸರು ಎಂದೂ ಕೊಳ್ಳುವುದಿಲ್ಲ. ಏಕೆಂತೀರೋ? ಇಲ್ಲಿ ಕೇಳ್ರಿ, ಮೊಸರು ಮಾರುವವರು ಬಂದಾಗ ಅವರು ತಂದ ಎಲ್ಲ ಮೊಸರನ್ನೂ ದೊಡ್ಡದೊಂದು ಬಕೀಟಿನಲ್ಲಿ ಹಾಕಿಸುತ್ತಿದ್ದ. ಗೌಳಿಗರಿಗೆ ತುಂಬ ಸಂತೋಷ; ಲಗ್ನ–ಮುಂಜಿ ಇದ್ದವರು ಕೂಡ ಅವನಂತೆ ಮೊಸರು ಖರೀದಿ ಮಾಡುತ್ತಿರಲಿಲ್ಲ. ಆ ಮೇಲೆ ಮೊಸರಿನ ಧಾರಣಿ ಕೇಳುವುದು; 'ಎರಡಾಣೆಗೆ ಸೇರು' ಎಂದು ಗೌಳಿಗರು ಹೇಳಿದರೆ 'ಒಂದಾಣೆಗೆ ಎರಡು ಸೇರಿನಂತೆ ಕೊಡುವಂತಿದ್ದರೆ ಕೊಡು' ಎಂದು ಬಿಡುತ್ತಿದ್ದ. ಸರಿ, ಗೌಳಿಗರು ಸಿಟ್ಟಿನಿಂದ ಎಲ್ಲ ಮೊಸರನ್ನೂ ಪುನಃ ತಮ್ಮ ಗಡಿಗೆಯಲ್ಲಿ ಹಾಕಿಕೊಂಡು ಹೊರಡುವರು. ಆ ಮೇಲೆ ಮಲ್ಲಪ್ಪ ಬಾಲ್ದಿಗೆ ಹತ್ತಿದ ಮೊಸರನ್ನು ತೆಗೆದು ನೀರು ಕೂಡಿಸಿ, ಅದರಿಂದಾದ ಮಜ್ಜಿಗೆಯನ್ನು ಎಂಟೆಂಟು ದಿನ ಊಟಮಾಡುತ್ತಿದ್ದ. ಆ ಮೇಲೆ...."

"ಸರಿ, ಸರಿ, ಸ್ವಾಮಿ ಆ ಆಸಾಮಿ ಏನೋ ಬಲವಾದ ಜೀನನೆಂದು ತೋರುತ್ತದೆ. ಆದರೂ ನನ್ನ ಅನುಭವದಲ್ಲಿಯೂ ಒಬ್ಬಿಬ್ಬರು ಜುಗ್ಗರನ್ನು ಕಂಡಿದ್ದೇನೆ. ನಿಮಗೆ ವೇಳೆಯಿದ್ದರೆ... "

"ಅಗತ್ಯ ಹೇಳಬೇಕು ನಾಗಪ್ನೋರೇ! ಈಗ ನಮಗೆ ಏನೂ ಕೆಲಸವಿಲ್ಲ!"

"ನಮ್ಮ ತಮ್ಮ ಶ್ರೀನಿವಾಸರಾಯ ಲೋಕಲ್‌ಬೋರ್ಡ್ ಕೆಂಟ್ರ್ಯಾಕ್ಟರನಾಗಿದ್ದ.." ಎಂದು ನಾಗಪ್ಪ 'ಪಲ್ಲೂನ ಸೇಡನ್ನು' ಈ ಪ್ರಕಾರ ಹೇಳಿದ: —

"ಕಂಟ್ರಾಕ್ಟಿನಲ್ಲಿ ಚೆನ್ನಾಗಿ ಹಣ ದುಡಿದಿದ್ದ. ಹೆಂಡತಿಯು ಚಿಕ್ಕ ವಯಸ್ಸಿನಲ್ಲಿಯೆ ತೀರಿ, ಒಂದು ಗಂಡು ಮಗು ಮಾತ್ರ ಉಳಿದಿತ್ತು. ಅದನ್ನು ಪ್ರಲ್ಹಾದನೆಂದು ಕರೆಯುತ್ತಿದ್ದ. ಸ್ವಭಾವದಿಂದ ನಮ್ಮ ತಮ್ಮ ಅತಿ ಜೀನ. ಆದರೂ ಒಂದೇ ಒಂದು ಮಗುವಿದ್ದು ಅದನ್ನು ತುಂಬಾ ಪ್ರೀತಿಯಿಂದ ಸಲಹಿದ್ದ. ಆದರೆ ಪಲ್ಲೂ ದೊಡ್ಡವನಾದ ಮೇಲೆ ತಂದೆಯನ್ನು ಹಿರಣ್ಯಕಶ್ಯಪನಂತೆ ದಂಡಿಸಿದ..ಎಂದು ನಾನು ಒಮ್ಮೆಲೇ ಹೇಳಿದರೆ ನಿಮಗೆ ನಂಬಿಗೆಯಾಗಲಿಕ್ಕಿಲ್ಲ. ಅದಕ್ಕೆ ಪಲ್ಲೂನ ತಾರುಣ್ಯ-ಜೀವನವನ್ನು ತಿಳಿದುಕೊಳ್ಳುವುದು ಅವಶ್ಯವಿದೆ. ತಂದೆಯು ಜುಗ್ಗನೆಂದು ಚಿಕ್ಕ ಪಲ್ಲೂಗೆ ತಿಳಿದಿದ್ದಿಲ್ಲ. ನಮ್ಮೂರ ಮ್ಯುನಿಸಿಪಲ್ ಶಾಲೆಯಲ್ಲಿಯೇ ಮ್ಯಾಟ್ರಿಕ್ ವರೆಗೆ ಪಲ್ಲೂ ಓದಿದ. ಮ್ಯಾಟ್ರಿಕ್ ಪಾಸಾಗಿ ಕಾಲೇಜಿಗೆ ಸೇರಬೇಕೆಂದು ಯೋಚನೆಮಾಡಿದಾಗ ಪಲ್ಲೂನಿಗೆ ಮೊದಲನೆಯ ಅನುಭವವಾಯಿತು. ತಂದೆಯನ್ನು ಕಾಲೇಜಿನ ಫೀ ಸಲುವಾಗಿ ದುಡ್ಡು ಕೇಳಿದಾಗ, ತನ್ನಲ್ಲಿ ಒಂದು ಕವಡಿ ಕೂಡ ಇಲ್ಲವೆಂದು ನಮ್ಮ ತಮ್ಮ ಹೇಳಿದ! ಅಲ್ಲದೆ, "ಕಾಲೇಜಿನಿಂದ ಏನು ಫಾಯಿದೆ ಅದೆ? ನಾನು ಇನೆಯ ಈಯತ್ತೆಯಿಂದ ಮುಂದೆ ಹೋಗದೆ ಇಷ್ಟೆಲ್ಲ ದುಡಿದೆ. ಏನಾದರೂ ನಮ್ಮ ಸಾಹೇಬರಿಗೆ ಹೇಳಿ ಲೋಕಲ್ ಬೋರ್ಡಿನಲ್ಲಿ ಕೆಲಸ ಕೊಡಿಸುತ್ತೇನೆ.." ಎಂದು ಏನೇನೋ ಉಪದೇಶವನ್ನೇ ಪ್ರಾರಂಭಮಾಡಿದ. ಪಲ್ಲೂಗೆ ಇದು ಸರಿಬರಲಿಲ್ಲ. ಅಪ್ಪನು ಸಾವಿರಾರು ರಾಮಟಂಕೆಯ ವರಹಗಳನ್ನು ಕತ್ತಲುಖೋಲಿಯಲ್ಲಿ ಇಟ್ಟದ್ದು ಅವನಿಗೆ ಗೊತ್ತಿತ್ತು. ಆದರೆ ಅವುಗಳನ್ನು ಉಪಯೋಗಮಾಡುವುದು ಸ್ವಲ್ಪ ತನ್ನ ಹುಡುಗಬುದ್ಧಿಗೆ ಮೀರಿದ ಮಾತಾದುದರಿಂದ ಹಿಂದು-ಮುಂದು ನೋಡುತ್ತಿದ್ದ. ಕರನ್ಸೀ ನೋಟುಗಳಿದ್ದರೆ ಕೆಲಸ ಸಾಗಿಸಿಬಿಡುತ್ತಿದ್ದ. ಆದರೆ ಆ ವರಹಗಳು 'ವರಾಹ'ದಂತೆ ಸ್ವಲ್ಪ ಗಡುಚು ವಿಷಯವಾಗಿದ್ದುವು. ಆದರೂ ತಂದೆಯ ಬಳಿ ತನ್ನನ್ನು ಕಾಲೇಜಿಗೆ ಕಳಿಸಲಿಕ್ಕೆ ಸಾಕಷ್ಟು ಹಣವಿದೆಯೆಂಬುದನ್ನು ಮಾತ್ರ ಸಂಪೂರ್ಣವಾಗಿ ನಂಬಿಕೊಂಡಿದ್ದನವ. ಹೀಗಿದ್ದೂ 'ತನ್ನಲ್ಲಿ ಒಂದು ಕವಡಿ ಕೂಡ ಇಲ್ಲ, ಕಾಲೇಜಿಗೇಕೆ ಹೋಗುವುದು?' ಮುಂತಾದ ಪ್ರಶ್ನೆಗಳನ್ನು ಕೇಳುತ್ತಿದ್ದುದರಿಂದ, ಪಲ್ಲೂಗೆ ತಂದೆಯ ಮೇಲೆ ಕೋಪ ಬಂದಿತ್ತು. ಸಂಗಡಿಗರೆಲ್ಲ ಟರ್ಮ್ ಫೀ ತುಂಬಿ ಕಾಲೇಜು ಸೇರತೊಡಗಿದ್ದರು. ಅಲ್ಲದೆ ಅನೇಕ ಜನ ಗುರುತಿನವರು "ನಿನಗೇನಾಗಿದೆಯೋ ಧಾಡಿ, ನಿಮ್ಮಪ್ಪ ಬೋರ್ಡಿನಲ್ಲಿ ಚೆನ್ನಾಗಿ ಹೊಡ್ಡ್ ಮಾಡಿದ್ದಾನೆ" ಎಂದು ಚೇಷ್ಟಿಸುತ್ತಿದ್ದರು. ಈ ರೀತಿಯಾಗಿ ತಂದೆಯಿಂದ ಹಣ ದೊರಕಿಸುವುದು ಪಲ್ಲೂನಿಗೆ ಒಂದು ದೊಡ್ಡ ಸಮಸ್ಯೆಯೇ ಆಗಿತ್ತು. ಅನೇಕ ಉಪಾಯದಿಂದ ತಂದೆಯನ್ನು ಪೀಡಿಸಿ ಕೇಳಿದ. ತಾನು ಫಸ್ಟ್‌ಕ್ಲಾಸ್ ಫಸ್ಟ್ ಎಂ. ಎ. ಆಗಿ, ತಿಂಗಳಿಗೆ ಮುನ್ನೂರು ರೂಪಾಯಿ ದುಡಿದು ತರುತ್ತೇನೆಂದೂ, ಇಲ್ಲದಿದ್ದರೆ ಆಯ್. ಸಿ. ಎಸ್. ಆಗಿ ಕಲೆಕ್ಟರನಾಗುವೆನೆಂದೂ, ಏನೂ ಇಲ್ಲದಿದ್ದರೆ ಬಿ. ಎ., ಎಲ್ಎಲ್. ಬಿ. ಆಗಿ ದೊಡ್ಡ ವಕೀಲನಾಗುವೆನೆಂದೂ ತನ್ನ ಭಾವೀ ಜೀವನದ ಚಿತ್ರವನ್ನು ಒಳ್ಳೇ ಬಣ್ಣಗಳಿಂದ ತುಂಬಿ ತೋರಿಸಿದ. ಆಗಿನ ತನ್ನ ಕೇಸನ್ನು ತಂದೆಯ ಎದುರಿನಲ್ಲಿ ಚರ್ಚಿಸುವಾಗ, ಪಲ್ಲೂನ ಭಾವೀ ವಕೀಲಿಯ ಚಾತುರ್ಯವು ಆಗಲೇ ಕಂಡುಬರುತ್ತಿತ್ತು. ಆದರೆ ನಮ್ಮ ತಮ್ಮ ಇಂತಹ ಚಿತ್ರಗಳಿಗೂ ಚರ್ಚೆಗಳಿಗೂ ಸೊಪ್ಪುಹಾಕುವವನಲ್ಲ. ಅವನು ಹೇಳುವುದು ಒಂದೇ ಒಂದು ಮಾತು.

"ನನಗೆಲ್ಲಾ ಗೊತ್ತಿದೆ ಪಲ್ಲೂ. ನಿನ್ನ ಭಾವೀ ಡಿಗ್ರಿ ವೈಭವ! ಇದ್ದ ನನ್ನ ನಾಲ್ಕು ದುಡ್ಡನ್ನು ಈಗ ತೀರಿಸಿ ಮುಂದೆ ಗ್ರ್ಯಾಜ್ಯು ಏಟ್ ಆಗಿ ಬಂದು, ದಿನಾಲು ಟಾಯಿಮ್ಸ್ ಪತ್ರದಲ್ಲಿಯ ನೋಟೀಸುಗಳಿಗೆ ಅರ್ಜಿ ಕಳಿಸುತ್ತ ಟಪ್ಪಾಲ್ ಖರ್ಚು ಬೆಳೆಯಿಸುವುದು; ಅದರ ವಿನಾ ಬೇರೆ ಯಾವ ಕಾರ್ಯವೂ ಗ್ರ್ಯಾಜ್ಯುಯೇಟರಿಂದ ಆಗಲಿಕ್ಕೆ ಶಕ್ಯವಿಲ್ಲ. ಕೈಯಲ್ಲಿದ್ದ ವಸ್ತುವಿಗೆ ಕನ್ನಡಿ ಏಕೆ!

ದಿನಾಲು ನೋಡುವುದಿಲ್ಲವೇ ನಮ್ಮ ಗ್ರ್ಯಾಜ್ಯುಏಟ್ ಬಳಗದವರನ್ನು ?" ಎಂದು ತನ್ನ ಉಪನ್ಯಾಸವನ್ನೇ ಹೂ ಡು ತ್ತಿ ದ್ದ. ಪಲ್ಲೂನಿಗೆ ಏನುಮಾಡಬೇಕೆಂಬುದು ತೋರಲಿಲ್ಲ. ಆದರೂ ಒಂದು ಆಶೆ ಅವನಿಗೆ; ಅದೆಂದರೆ ಅವಧಿಯ ಆಶೆಯಷ್ಟೇ! 'ಕಾಲೇಜು ಪ್ರಾರಂಭವಾಗಲಿಕ್ಕೆ ಇನ್ನೂ ತಿಂಗಳಿಗೆ ಹೆಚ್ಚಾದ ಅವಕಾಶವಿತ್ತು. ಅಷ್ಟರಲ್ಲಿ ಏನಾದರೂ ಆಗುವ್ವದು!' ಎಂದು ಆಶಾವಾದದಲ್ಲಿ ತಂದೆಯ ಹಣವನ್ನು ಯಾವ ರೀತಿಯಿಂದ ಬಿಚ್ಚಿಸುವುದು ಎಂಬ ಪ್ರಶ್ನೆಗೆ ಉತ್ತರ ಹುಡುಕತೊಡಗಿದ. ಸಾಮ-ದಾನ-ಭೇದೋಪಾಯಗಳು ವಿಫಾರಿದ್ದುವು. ಇನ್ನು ಒಂದೇ ಒಂದು ಉಪಾಯ ಉಳಿದಿತ್ತು; ಅದು ದಂಡ! ತಂದೆಯನ್ನು ದಂಡಿಸುವುದು ಹೇಗೆ? ಜನರೇನು ಅಂದಾರು? ಅಲ್ಲದೆ ನಮ್ಮ ತಮ್ಮ ಸ್ವ ಭಾ ವ ದಿಂ ದ ಜೀನನಾದರೂ ಮಗನನ್ನು ತುಂಬ ಮಮತೆಯಿಂದ ಸಲಹಿದ್ದ. ಇದು ಪಲ್ಲೂನಿಗೂ ತಿಳಿಯಹತ್ತಿತು. ಆದರೂ ಮಾಡುವುದೇನು' ಎಂದುಕೊಂಡ ಪಲ್ಲೂ. ತನ್ನ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಒಂದು ಪ್ರಶ್ನೆಯನ್ನು ಚೆನ್ನಾಗಿ ಬಿಡಿಸಿದ್ದ; ಅದು ಒಂದು ನಿಬಂಧ. ಅದರ ವಿಷಯ: "Be cruel in order to be kind" ಎಂದು ಇತ್ತು. ಅದನ್ನು ಚೆನ್ನಾಗಿ ಅಭ್ಯಸಿಸಿದ್ದ. ಈಗ ಆ ನಿಬಂಧದಲ್ಲಿ ಚರ್ಚಿಸಿದ ವಿಷಯವನ್ನು ಕಾರ್ಯಭೂಮಿಯಲ್ಲಿ ತರುವ ಪ್ರಸಂಗ ಒದಿತು. ವಿಚಾರಿಸಿದ: ತಾನು ತಂದೆಯ ಬಳಿ ಕೈನೀಡಿ ಹೊಡೆಯಲಿಕ್ಕೆ ಬೇರೆ ದುಡ್ಡು ಕೇಳುತ್ತಿರಲಿಲ್ಲ. ಅಲ್ಲದೆ ಅಷ್ಟು ದುಡ್ಡು ಇಟ್ಟುಕೊಂಡು ಮಾಡುವುದಾದರೂ ಏನು? ತಾನೊಬ್ಬನೇ ಮಗ ತಂದೆಗೆ. ಇನ್ನು ಆ ಹಣ ವಾರಸಾನಾತೆಯಿಂದ ಬರುವ ವರೆಗೆ ಕಾದರೆ ಕಲಿಯುವ ಕಾಲ (ಕಲಿ ಕಾಲ!) ಮುಗಿಯುತ್ತಿತ್ತು. ಅಂತೂ ಅನೇಕ ರೀತಿಯಿಂದ, ಸಾಧಕ-ಬಾಧಕ ಪ್ರಮಾಣಗಳಿಂದ ವಿಚಾರಿಸಿ ನೋಡಿದ. ಪಲ್ಲೂನಿಗೆ ಒಂದೇ ಒಂದು ರೀತಿ ಕಂಡು ಬರುತ್ತಿತ್ತು: 'ತಂದೆಯಿಂದ ಆ ವರಹಗಳನ್ನು ವಿದ್ಯಾಭ್ಯಾಸದ ಸಲುವಾಗಿ ಬಿಚ್ಚಿಸಲಿಕ್ಕೇ ಬೇಕು' ಎಂದು. ಆದರೆ ಹೇಗೆ?..ಎಂಬ ಪ್ರಶ್ನೆಗೆ ಇನ್ನೂ ಉತ್ತರ ದೊರೆತಿರಲಿಲ್ಲ.

ಆ ಕಾಲಕ್ಕೆ ಪಲ್ಲೂ ನನ್ನಲ್ಲಿ ಬಂದ; 'ಕಕ್ಕನಿಂದಲಾದರೂ ವಶೀಲಿ ಹಚ್ಚಿಸೋಣ' ಎಂದು ತಿಳಿದು ಬಂದಿದ್ದ. ನನಗೆ ಆಗ ಇನ್ನೂ ಸರ್ವಿಸ್ ಇತ್ತು. ನಾನೂ ತಮ್ಮನಿಗೆ ತಿಳಿಸಿಹೇಳಿದೆ; ಆದರೆ ಅವನ ಜೀನತನದ ಸ್ವಭಾವವನ್ನು ಚಿಕ್ಕಂದಿನಿಂದಲೂ ನಾನು ಅರಿತವನಾದುದರಿಂದ, ನನಗೆ ಅವನ 'ವಿದ್ಯಾನಿಷೇಧ' ಪಂಥವು ಆಶ್ಚರ್ಯವೆನಿಸಲಿಲ್ಲ. ಆದರೂ ನನಗೆ ಪಲ್ಲೂನ ಮೇಲೆ ಮಮತೆ ಬಹಳ. ಅವನು ಕಾಲೇಜಿಗೆ ಹೋದರೆ ನಿ ಜ ವಾ ಗಿ ಯೂ ಲಾಭಹೊಂದುವನೆಂದು ನನಗೆ ಭರವಸೆಯಿತ್ತು. ನಾನೇ ದುಡ್ಡು ಕೊಡಬೇಕೆಂದರೆ ನನಗೆ ಆಗ ಪಗಾರ ಹದಿನೆಂಟು ರೂಪಾಯಿ ಮಾತ್ರ ಇತ್ತು. "ಏನಾದರೂ ಹಂಚಿಕೆಮಾಡಲಿಕ್ಕೇ ಬೇಕು, ಕಕ್ಕಾ" ಎಂದು ಪಲ್ಲೂ ಪದೇ ಪದೇ ಕೇಳುತ್ತಿದ್ದ. ದಿನಾಲು ನಾನು ಪತ್ರಹಂಚಿ ಮನೆಗೆ ಬಂದಾಗ "ಅಪ್ಪ ಏನೆಂದ, ಕಕ್ಕಾ?" ಎಂಬ ಪ್ರಶ್ನೆಯೊಂದನ್ನೆ ಪಲ್ಲೂ ಮಾಡುತ್ತಿದ್ದ. ನನಗೂ ಇದು ಒಂದು ಸಮಸ್ಯೆಯೇ ಆಯಿತು. ಅನೇಕ ಸಾರೆ ಪಲ್ಲೂ '**ದಂಡ**'ದ ಉಪಾಯವನ್ನು ಸೂಕ್ಷ್ಮವಾಗಿ ಸೂಚಿಸಿದ್ದ. ಆದರೆ ಇದು ನನಗೆ ಸಮಂಜಸ ತೋರಲಿಲ್ಲ. ನನ್ನ ಎಲ್ಲ ಪ್ರಯತ್ನಗಳೂ ನಿಷ್ಫಲವಾದುವು.

ಕಾಲೇಜು ತೆರೆಯುವ ದಿನಗಳು ಸಮೀಪಿಸಹತ್ತಿದವು. ಪಲ್ಲೂ ಮ್ಯಾಟ್ರಿಕ್ ಪಾಸಾದಂದಿನಿಂದ ಹೊತ್ತುಹೋಗಲಿಕ್ಕೆ ಪತ್ತೇದಾರಿ ಕಥೆಗಳನ್ನು ಓದುತ್ತಿದ್ದ. ಅಲ್ಲದೆ '**ಕ್ರಾಂತಿಕಾರಕ**' ಚಳವಳಿಯ ಮಾಹಿತಿಯನ್ನೂ ಓದುತ್ತಿದ್ದ. ಎಲ್ಲಕ್ಕಿಂತಲೂ 'ಕ್ರಾಂತಿಕಾರಕ' ಚಳವಳಿಯುವರ ವೃತ್ತಾಂತ ಅವನನ್ನು ಆ ಕಾಲಕ್ಕೆ ಬಲವಾಗಿ ಆಕರ್ಷಿಸಿತ್ತು. ತಾನೂ ಒಂದು ಬಗೆಯ 'ಕ್ರಾಂತಿ'ಯನ್ನೇ ಹೂಡಿದ್ದನಷ್ಟೇ ಸಣ್ಣ ಪ್ರಮಾಣದ ಮೇಲೆ? ಕಾಲೇಜಿನ ದಿನ ಸಮೀಪಿಸಿದಂತೆ ಈ 'ಕ್ರಾಂತಿ'ವಾದವೂ ಅವನಲ್ಲಿ ಬೆಳೆಯಹತ್ತಿತು. ಅವನ ತಲೆಯಲ್ಲಿ ಅನೇಕ ಅದ್ಭುತ ಸನ್ನಿವೇಶಗಳೂ—ವಿಚಾರಗಳೂ ಬರಹತ್ತಿದುವು. ಇವುಗಳ ಪರ್ಯವಸಾನ ತಂದೆಯ ಮೇಲಿನ ಸೇಡುತೀರಿಸುವುದರಲ್ಲಿ ಆಯಿತೆಂದು ಹೇಳಿದರೆ ನೀವು ಭಯಪಡಬಾರದು. ಏಕೆಂದರೆ 'ಕ್ರಾಂತಿ'ಕಾರರ ಉಪಾಯಗಳನ್ನು ಪಲ್ಲೂ ಓದುತ್ತಿದ್ದರೂ ಅವನ ಸ್ವಭಾವ 'ಕ್ರಾಂತಿ' ಹೊಂದಿದ್ದಿಲ್ಲ. ಆದರೂ ಈ ಎಲ್ಲ ವೃತ್ತಾಂತವನ್ನೋದಿಕೊಂಡು, ಒಂದು ಯುಕ್ತಿಯನ್ನು ಹೂಡಿದ. ಆದರಿಂದಲೇ ಅವನು ತಂದೆಯ ಜೀನತನವನ್ನು ತೊಲಗಿಸಿದ; ತನ್ನ ಮನೀಷೆಯನ್ನೂ ಪೂರ್ಣಮಾಡಿಕೊಂಡ.

ಆ ಕಾಲಕ್ಕೆ ನಮ್ಮ ವೃತ್ತಪತ್ರಗಳು ಬಂಗಾಲೀ ಜನರ ಕ್ರಾಂತಿಕಾರಕ ಚಳವಳಿಯ ವೃತ್ತಾಂತವನ್ನು ದಿನಾಲು ಪ್ರಸಿದ್ಧಿಸುತ್ತಿದ್ದುವು. ಅಲ್ಲದೆ ನಮ್ಮ ಪ್ರಾಂತದಲ್ಲಿ ಕೂಡ ಕೆಲವು ತರುಣರು ಈ ಚಳವಳಿಗೆ ಮನಸೋತು ಅಲ್ಲಲ್ಲಿ ಗುಪ್ತಸಭೆಗಳನ್ನೂ ಪತ್ರಿಕೆಗಳನ್ನು ಹಂಚುವುದನ್ನೂ ನಡೆಯಿಸಿದ್ದರು; ಇದು ಪಲ್ಲೂನಿಗೂ ಗೊತ್ತಿತ್ತು. ಪೋಲೀಸರು ತುಂಬ ಜಾಗ್ರತೆಯಿಂದ ಇಂತಹ ತರುಣರನ್ನು ಕಾಯುತ್ತಿದ್ದರು. ಏನಾದರೂ ಸ್ವಲ್ಪ ಸಂಶಯ ಬಂದರೆ ಸಾಕು, ಅಂತಹ ತರುಣರನ್ನು ದಂಡಿಸುತ್ತಿದ್ದರು. ಆದರೆ ಪಲ್ಲೂ ಶಾಂತರೀತಿಯಿಂದ ಕ್ರಾಂತಿಯನ್ನು ಜಾರಿಯಲ್ಲಿ ತರಬೇಕೆಂಬ ಮತದವ, ಸದ್ಯ ಆ 'ಕ್ರಾಂತಿ' ಅವನ ಮನೆಯ ವಿಷಯದಲ್ಲಿ ಮಾತ್ರ ಆಗಬೇಕಾಗಿತ್ತು. ಸುಮ್ಮನೆ ದೊಡ್ಡ ದೊಡ್ಡ ಸಭೆಗಳನ್ನು ಹೂಡಿ ಬೆಳಗಾಗುವುದರಲ್ಲಿಯೇ ಜಗತ್ತನ್ನು ಸುಧಾರಿಸುವ ಹುಚ್ಚು ಪಲ್ಲೂನಿಗಿರಲಿಲ್ಲ, "Charity begins at home" ಎನ್ನುವ ಪಾಠವನ್ನು ಸಾಲೆಯಲ್ಲಿ ಕಲಿತಿದ್ದ; ಅದನ್ನು ಮರೆತಿದ್ದಿಲ್ಲ. ಅಂತೆಯೇ ಮೊದಲು ತಂದೆಯನ್ನು ತನ್ನ 'ಕ್ರಾಂತಿಗೆ' ಬಲಿಕೊಡಲು ಯೋಚಿಸಿದ, ಪೋಲೀಸರು ಸ್ವಲ್ಪ ಸಂಶಯ ಬಂದರೆ ಕೂಡ 'ಕ್ರಾಂತಿಕಾರಕ' ಜನರೊಂದಿಗೆ ಜಾಗ್ರತೆಯಿಂದಿರುತ್ತಿದ್ದುದನ್ನು ಅರಿತುಕೊಂಡು, ನಮ್ಮೂರ ಪೋಲೀಸ್ ಇನ್ಸ್ಪೆಕ್ಟರರಿಗೇ ತನ್ನ ವಿಷಯದಲ್ಲಿ ಸಂಶಯಬರುವಂತೆ ನಟಿಸಹತ್ತಿದ. ಸೋವಿಯೆಟ್ ರಶ್ಯಾದ ವಿಷಯವಾಗಿ ವ್ಯಾಖ್ಯಾನಕೊಡುವುದು, ಕ್ರಾಂತಿಕಾರಕ ಪುಸ್ತಕಗಳನ್ನೋದುವುದು ಇತ್ಯಾದಿ ಕಾರ್ಯಕ್ಕೆ ಪ್ರಾರಂಭಮಾಡಿದ. ಈ ಕೆಲಸ ಅತ್ಯಂತ ಜಾಗ್ರತೆಯಾಗಿ ಆಗಬೇಕಾಗಿತ್ತು; ಕಾಲೇಜು ತೆರೆಯಲಿಕ್ಕೆ ಒಂದು ವಾರ ಮಾತ್ರ ಉಳಿದಿತ್ತು. ಅಂತೆಯೇ

ಶೀಘ್ರವಾಗಿ 'ಕ್ರಾಂತಿ'ಕಾರಕನಾಗತೊಡಗಿದುದು ನಮ್ಮ ಪಲ್ಲೂ. ನಿಜವಾದ ಕ್ರಾಂತಿಕಾರರು ಅಧಿಕಾರಿಗಳನ್ನು ಕಂಡರೆ ಅಂಜಿ ತಮ್ಮ ಕಾರ್ಯಗಳನ್ನು ಗುಪ್ತವಾಗಿ ಮಾಡುವರಷ್ಟೇ? ಆದರೆ ಪಲ್ಲೂ ತದ್ವಿರುದ್ಧವಾಗಿ ವರ್ತಿಸಹತ್ತಿದ; ಇದರಿಂದಲೇ ಅಧಿಕಾರಿಗಳು ಪಲ್ಲೂನ ನಿಜವಾದ ಧ್ಯೇಯವನ್ನು ಅರಿತುಕೊಳ್ಳಬೇಕಾಗಿತ್ತು. ಆದರೆ ನಮ್ಮ ಅಧಿಕಾರಿಗಳಿಗೆ ಆ ತರದ ವಿಚಾರಸೂಕ್ಷ್ಮತೆ ಕಡಿಮೆ. ಅಂತೆಯೇ ಪಲ್ಲೂ ಎರಡೇ ದಿನದಲ್ಲಿ ಅಧಿಕಾರಿಗಳ ದೃಷ್ಟಿಯಿಂದ ಕ್ರಾಂತಿಕಾರ'ನಾಗಿಬಿಟ್ಟ. ಅಂದಿನಿಂದ ಪೋಲೀಸರು ಇವನ ಎಲ್ಲ ಕಾರ್ಯಗಳನ್ನೂ ಸೂಕ್ಷ್ಮವಾಗಿಯೂ ಜಾಗರೂಕತೆಯಿಂದಲೂ ಪರೀಕ್ಷಿಸತೊಡಗಿದರು. ಅಂತೂ ಪಲ್ಲೂನ ನಟನೆ ಸಾಧಿಸಿತು.

ಎಲ್ಲರಿಗಿಂತಲೂ ನಮ್ಮೂರ ಪೋಲೀಸ ಇನ್ಸ್ಪೆಕ್ಟರರಿಗೆ ಪಲ್ಲೂನ ವಿಷಯದಲ್ಲಿ ತುಂಬ ಸಂಶಯ. ಪಲ್ಲೂ ತುಂಬಾ ಉತ್ತೇಜನವನ್ನೇ ಕೊಡುತ್ತಿದ್ದ. ಅವರ ಈ ಸಂಶಯಕ್ಕೆ—ಒಂದು ದಿನ ಪೋಲೀಸ್ ಇನ್ಸ್ಪೆಕ್ಟರರು ಬರುವ ಸಮಯಕ್ಕೆ ಸರಿಯಾಗಿ, ಪಲ್ಲೂ ನಮ್ಮೂರ ಮಾರ್ಕೆಟಿನ ಸ್ಥಳದಲ್ಲಿ ಕೂಗಿ ಕೂಗಿ ವ್ಯಾಖ್ಯಾನ ಕೊಡುತ್ತಿದ್ದ. ನಮ್ಮ ಜನರು ವ್ಯಾಖ್ಯಾನ ಕೇಳಲಿಕ್ಕೆ ಬಹಳೇ ಆತುರಪಡುವರೆಂದು ನಿಮಗೆ ಹೇಳಬೇಕಾಗಿಲ್ಲವಷ್ಟೇ! ಅದರಲ್ಲಿಯೂ ಈ ಹೊಸ ಸ್ವಾತಂತ್ರ್ಯಯುಗದಲ್ಲಿ ಗಾಂಧೀಟೊಪ್ಪಿಗೆ ಹಾಕಿಕೊಂಡು, ಬೈಲು ಜಾಗೆಯಲ್ಲಿ ಒಂದು ಮುರುಕು ಮೇಜಿಟ್ಟು, ವ್ಯಾಖ್ಯಾನ ಪ್ರಾರಂಭ ಮಾಡಿದರೆ ಸಾಕು; ನೂರಾರು ಜನರು ಕೂಡಿಬಿಡುವರು, ಎರಡು ಮೂರು ಸಲ ಜಯಘೋಷಮಾಡಿದರಂತೂ ತೀರಿಯೆ ಹೋಯಿತು. ದೊಡ್ಡದೊಂದು ಜಾತ್ರೆಯೇ ನೆರೆದುಬಿಡುವುದು. ಪಲ್ಲೂ ಜಾಗೆಯನ್ನೂ, ವೇಳೆಯನ್ನೂ ಚೆನ್ನಾಗಿಯೇ ಸಾಧಿಸಿದ್ದ; ಅಂದು ನಮ್ಮೂರ ಸಂತೆ. ಇನ್ಸ್ಪೆಕ್ಟರ ಸಾಹೇಬರ ಮೋಟರು ಬರುವಷ್ಟರಲ್ಲಿ ಗಟ್ಟಿಯಾಗಿ **'ವಂದೇಮಾತರಂ' 'ಜಿಂದಾಬಾದ್'** ಮುಂತಾಗಿ ಒದರಿಬಿಟ್ಟ. ನೆರೆದ ಜನರೂ ಅದೇ ಘೋಷವನ್ನೇ ಎತ್ತಿಕೊಂಡು ಬಲವಾಗಿ ಕೂಗಿಬಿಟ್ಟರು. ಸಾಹೇಬರು ಮೋಟಾರು ನಿಲ್ಲಿಸಲು ಹೇಳಿ ಹೊರಕ್ಕೆ ಬಂದರು, ಅವರು ಕೇಳಿದ ಪಲ್ಲೂನ ವ್ಯಾಖ್ಯಾನ ಬಹಳವಿರಲಿಲ್ಲ. ಸ್ವಲ್ಪದರಲ್ಲಿಯೇ ಅವರಿಗೆ ಅವನ ವ್ಯಾಖ್ಯಾನದ ವಿಷಯ ತಿಳಿಯಿತು. ಪಲ್ಲೂ ಹೇಳುತ್ತಿದ್ದ :

"ದೇಶಬಂಧುಗಳೇ, ಭಾರತಮಾತೆಗೆ ಸ್ವಾತಂತ್ರ್ಯತರುವ ಇಚ್ಛೆ ನಿಮ್ಮಲ್ಲಿದ್ದರೆ, ನಿಮ್ಮ ಪೂರ್ವಜರ ಸಂಸ್ಕೃತಿಯನ್ನು ಕಾಯ್ದುಕೊಳ್ಳುವ ಆಶೆಯಿದ್ದರೆ, ಪುರಾತನದಿಂದ ನಡೆದು ಬಂದ ಈ ಆರ್ಯಭೂಮಿಯ ಧರ್ಮವನ್ನುಳಿಸಿಕೊಳ್ಳುವ ಅಭಿಮಾನ ವಿದ್ದರೆ, ಇಷ್ಟೆಲ್ಲ ದೊರಕಿಸಲಿಕ್ಕೆ ಒಂದೇ ಒಂದು ಮಾರ್ಗ, ಒಂದೇ ಒಂದು ಯುಕ್ತಿ, ಒಂದೇ ಒಂದು ಉಪಾಯ. ಆ ಮಾರ್ಗ, ಆ ಯುಕ್ತಿ, ಆ ಉಪಾಯ ಕ್ರಾಂತಿಯಿಂದ! ಅನ್ಯಾಯವಾಗಿ ಅನಾಥರನ್ನು ಶೃಂಖಲಾಬದ್ಧರನ್ನಾಗಿ ಮಾಡಿದ ಈ ಸೈತಾನೀ ಸರಕಾರವು ನಷ್ಟವಾಗಿ ಹೋಗಬೇಕು. ಸಾವಿರಾರು ಜನ ಭಾರತೀಯರು ಆಹುತಿಯಾಗದ ವಿನಾ ನಮಗೆ ಸ್ವಾತಂತ್ರ್ಯವು ಸಿಕ್ಕಲಾರದು. ಆದ್ದರಿಂದ ಜಾಗೃತರಾಗಿರಿ, ಕ್ರಾಂತಿಕಾರರಾಗಿರಿ! ,,,,"

ಇತ್ಯಾದಿಯಾಗಿ ಒಳ್ಳೇ ಆವೇಶದ ನಟನೆಯಲ್ಲಿ ವ್ಯಾಖ್ಯಾನ ನಡೆಯಿಸಿದ್ದ ಪಲ್ಲೂ. ಸಾಹೇಬರು ಪಲ್ಲೂನ ಹೆಸರು-ವಿಳಾಸಗಳನ್ನು ತೆಗೆದುಕೊಂಡು ಮೋಟಾರನ್ನು ಏರಿದರು. ಪಲ್ಲೂನ ವ್ಯಾಖ್ಯಾನ ಸಾಹೇಬರ ಸಲುವಾಗಿಯೆ ಇದ್ದುದರಿಂದ, ಅವರು ಹೋದಕೂಡಲೆ ಅವನು ತನ್ನ ವ್ಯಾಖ್ಯಾನ ಮುಗಿಸಿ ಮನೆಯ ಕಡೆಗೆ ತೆರಳಿದ. 'ಅದರ ಈ ನಾಟಕದಿಂದಲೇ ನನ್ನ ಮುಕ್ತಿಯಾಗಬೇಕು' ಎಂದುಕೊಂಡು, ಪೋಲೀಸ್ ವಾರಂಟಿನ ಮಾರ್ಗವನ್ನು ಚಾತಕಪಕ್ಷಿಯಂತೆ ನಿರೀಕ್ಷಿಸುತ್ತ ತನ್ನ ಕೋಣೆಯಲ್ಲಿ ಕುಳಿತಿದ್ದ.

ವಾರಂಟು ಬರಲಿಲ್ಲ; ಆದರ ಬದಲಾಗಿ ಸಾಹೇಬರೇ ಇವನಲ್ಲಿಗೆ ಬಂದರು. ಪಲ್ಲೂನು ಮಾರ್ಕೆಟಿನಲ್ಲಿ ಕೊಟ್ಟ ವ್ಯಾಖ್ಯಾನ, ಅವನು ಜನರ ಮೇಲೆ ಮಾಡಿದ ಪರಿಣಾಮ ಇವುಗಳನ್ನೆಲ್ಲ ಸಾಹೇಬರು ನೋಡಿದ್ದರಷ್ಟೇ ? ಅವರಿಗೆ 'ಇಂತಹ ತರುಣರಿಂದ ಸರಕಾರಕ್ಕೆ ಒಂದು ಹಿತವಾದ ಕಾರ್ಯವಾಗುವುದು' ಎಂದು ತಿಳಿದು, ಪಲ್ಲೂನನ್ನು ಮತಾಂತರಗೊಳಿಸಲು ಬಂದಿದ್ದರು. ಇಂತಹ ತರುಣರನ್ನು ಜೇಲಿನಲ್ಲಿ ಹಾಕುವುದು ಕೇವಲ ಮೂರ್ಖತನವೆಂಬುದು ಸಾಹೇಬರಿಗೆ ಕೂಡ ಕಂಡು ಬಂತು. ಅಂತೆಯೇ ಅಂದು ಅವರು ಪಲ್ಲೂನ ಬಗ್ಗೆ ಬಂದಿದ್ದರು. ಒಳ್ಳೆಯ ಹಿತೋಕ್ತಿಯಿಂದ ಪಲ್ಲೂನ ಎದುರು ಅವನು ಮಾಡುವ ಕಾರ್ಯದ ಗಂಡಾಂತರಗಳನ್ನು ಚಿತ್ರಿಸಿದರು. ಅಲ್ಲದೆ ಇಂತಹ ತರುಣರಿಂದ ಸರಕಾರಕ್ಕೆ ಅದೆಷ್ಟು ಅಭಿಮಾನ, ಗೌರವ, ಯಶಸ್ಸು ಬರುವುದೆಂದು ತಿಳಿಸಿ ಹೇಳಿದರು. ಅಲ್ಲದೆ ಅಂದಿನಿಂದಲೆ ಪಲ್ಲೂನಿಗೆ 'ಕ್ರಾಂತಿಕಾರಕ' ಚಳವಳಿ ಬಿಟ್ಟು ಸರಕಾರದಲ್ಲಿ ಕೆಲಸಮಾಡಲು ಹೇಳಿದರು. ಒಳ್ಳೆಯದೊಂದು ಸ್ಥಾನವನ್ನೂ, ವೇತನವನ್ನೂ ಕೊಡಿಸುವೆನೆಂದು ಉತ್ತೇಜಿಸಿದರು. ಸಾಹೇಬರು ಇದನ್ನೆಲ್ಲ ಹೇಳುತ್ತಿದ್ದಾಗ ಪಲ್ಲೂನ ಮನದಲ್ಲಿ ಯಾವುದೋ ಒಂದು ವಿಚಾರ ಮಿಂಚಿನಂತೆ ಬಂದು ಹೋಯಿತು. ಅದನ್ನೇ ಸೂಕ್ಷ್ಮವಾಗಿ ವಿಚಾರಿಸುತ್ತ ಕುಳಿತುಕೊಂಡ; ಸಾಹೇಬರು ಕೇಳಿದರು.

"ನಾನು ಹೇಳಿದ್ದು ಸಮಂಜಸವೆನಿಸಿತೇ ನಿನಗೆ?"

"ಅಗತ್ಯವಾಗಿ ಮಾಡುವೆ, ಸಾಹೇಬ್; ನಾನೇನು ಮಾಡಬೇಕು ಎನ್ನುವಿರಿ!"

"ಸದ್ಯ ನೀನು ನಿನ್ನ 'ಕ್ರಾಂತಿ' ಕಾರ್ಯವನ್ನು ಬಿಟ್ಟುಬಿಡು, ಇಷ್ಟೇ ನಾನು ಈಗ ಹೇಳುವುದು; ಅಲ್ಲದೆ ಸಾಧ್ಯವಿದ್ದಮಟ್ಟಿಗೆ ಇಂತಹ ವಿಚಾರದ ತರುಣರನ್ನೂ ದೊಡ್ಡವರನ್ನೂ ಕುರಿತು ನಮಗೆ ತಿಳಿಸುತ್ತಿರು. ಮುಂದೆ ನಿನ್ನ ಕೆಲಸನೋಡಿ, ಬೇರೆ ಯಾವದಾದರೊಂದು ಮಾರ್ಗಕ್ಕೆ ಹಚ್ಚುವೆವು."

"ಅಪ್ಪಣೆ, ಸಾಹೇಬ್, ತಮ್ಮ ಉಪಕಾರ ಬಹಳವಾಯಿತು. ಆದರೆ ನಾನು ಹೀಗೆ ಏಕಾಏಕಿ ಮತಾಂತರ ಹೊಂದಿದುದನ್ನು ನಿಮ್ಮ ಜನರು ನಂಬುವರೋ ಎಂದು ಶಂಕೆ ನನಗೆ!"

"ಅದಕ್ಕೆ ಬಿಲ್ಕುಲ್ ಕಾಳಜೀ ಬೇಡ! ನಿನಗೆ ಅಧಿಕಾರಿಗಳಿಂದ ಯಾವುದೂ ತಸ್ಟೀ ಆಗದಂತೆ ಮಾಡುವೆನು!"

ಈ ರೀತಿಯಾಗಿ ಪಲ್ಲೂ 'ಕ್ರಾಂತಿಕಾರ'ನಿಂದ ಶಾಂತವೃತ್ತಿಯುವನಾದ. ಎಲ್ಲವೂ ನಟನೆಯೆ ಎಂಬುದನ್ನು ನಿಮಗೆ ಹೇಳಬೇಕಾಗಿಲ್ಲವಷ್ಟೇ? ಪಲ್ಲೂನ ಸಮಸ್ಯೆ ವಿದ್ಯೆಯದು; ತಂದೆಯಿಂದ ಹಣ ಬಿಚ್ಚಿಸುವುದು. ಅವನಿಗೆ ಕ್ರಾಂತಿಯೂ, ಶಾಂತಿಯೂ ಅದಕ್ಕೆ ಸಾಧನೆಯಾಗಿದ್ದುವು. ಸಾಹೇಬರು ಹೀಗೆ ಒಮ್ಮಿಂದೊಮ್ಮೆ ತಮ್ಮ ಕೃಪಾಕಟಾಕ್ಷ ತೋರಿಸಿದುದೂ ಆ ಸಾಧನೆಗೆ ಸಹಾಯವೇ ಆಯಿತು. ಕಾಲೇಜು ತೆರೆಯುವುದು ಮೂರೇ ದಿನವಿತ್ತು. ಅಷ್ಟರಲ್ಲಿ ಟರ್ಮಿನ ಫೀ ತುಂಬಲೇ ಬೇಕಿತ್ತು. ಅಂತೂ ತಾನು ವಿಚಾರಿಸಿದ ಯುಕ್ತಿಯನ್ನು ಇನ್ನೂ ತೀವ್ರ ಕಾರ್ಯಕ್ಷೇತ್ರದಲ್ಲಿ ತಂದು, ತಂದೆಗೆ 'ದಂಡ'ವನ್ನು ವಿಧಿಸಿಯೆ ತೀರಬೇಕಾಯಿತು. ಅದರಂತೆ ಮಾಡಲು ಇನ್ನಾವ ಬಾಧೆಯೂ ಇರಲಿಲ್ಲ. ಇದರಿಂದ ತಂದೆಗೆ ಬಲವಾದ ನೈತಿಕಸಿಡಿಲು ಬಡಿಯುವುದೇನೋ ನಿಜ; ಆದರೆ ಆ ಸಿಡಿಲಿನ ಪರಿಣಾಮದಿಂದ ತನ್ನಲ್ಲಿ ಜ್ಞಾನಸಂಪರ್ಜನ್ಯವಾಗುವುದೆಂದು ಕಂಡು ಈಗ ಹಿಂದೆಗೆಯಲಿಲ್ಲ. "Cruel in order to be kind" ಎನ್ನುವದು ನಿಜವೇ.. ಎಂದು ಮನಗಂಡನು.

ಮರುದಿವಸವೇ ಪಲ್ಲೂನು ಸಾಹೇಬರ ಕಚೇರಿಗೆ ಹೋದ. ಮುಖದ ಮೇಲೆ ಗಂಭೀರಮುದ್ರೆಯನ್ನು ತಂದಿದ್ದ. ನಟನೆಯಲ್ಲಿ ಪಲ್ಲೂ ಎಂದಿಗಾದರೂ ನಿಪುಣ. ಅವನನ್ನು ಆಗ ನೀವು ನೋಡಿದ್ದರೆ ನಿಜವಾಗಿಯೂ ಯಾವುದೋ ಒಂದು ಅದ್ಭುತ ಗಂಡಾಂತರದಿಂದ ಪಾರಾಗುವ ಹಂಚಿಕೆ ಮಾಡುವವನಂತೆ ಕಾಣುತ್ತಿದ್ದ. ಸಾಹೇಬರೂ ಇವನ ಮುಖ ನೋಡಿ ಆಶ್ಚರ್ಯಪಟ್ಟರು. ಅಲ್ಲದೆ ಪಲ್ಲೂನು ಸಾಹೇಬರನ್ನು "Private" ರೀತಿ ಕಾಣಬೇಕೆಂದು ಹೇಳಿದ ಮೇಲಂತೂ ಅವರಿಗೆ 'ಇವನು ನಿಜವಾಗಿಯೂ ಏನೋ ಮಹತ್ತ್ವದ ಕಾರ್ಯಕ್ಕೆ ಬಂದಿದ್ದಾನೆ' ಎಂದು ಎನಿಸಿತು. ತಮ್ಮ "Private" ಕೋಣೆಯಲ್ಲಿ ಪಲ್ಲೂನನ್ನು ಕರೆದೊಯ್ದರು. ಪಲ್ಲೂ ಒಳಗೆ ಬಂದವನೇ ಬಾಗಿಲುಮುಚ್ಚಿ, "ಯಾರೂ ಇಲ್ಲವಷ್ಟೇ?" ಎಂದು ಸಂಕೇತದಿಂದ ಕೇಳಿದನು. ಸಾಹೇಬರಿಗೆ ಆತುರತೆ ಹೆಚ್ಚಿತು.

"ಅದೇನು ಅಂತಹ ಗೌಪ್ಯ? ಇದು ನನ್ನ "Private" ಸ್ಥಳ, ಯಾವುದರದೂ ಸಂಕೋಚವಿಲ್ಲದೆ ಹೇಳಬೇಕು."

"ಸಾಹೇಬರೇ, ಕೆಲಸ ಬಹಳ ಸೂಕ್ಷ್ಮದ್ದು; ಮಹತ್ತ್ವದ್ದು. ಈ ದಿನ ನಮ್ಮ ಕಾರ್ಯದ ಯಶಸ್ಸಿನ ಮೇಲೆ ಸರಕಾರದ ಕ್ಷೇಮವೂ, ಸ್ಥಿರತೆಯೂ ಅವಲಂಬಿಸಿದೆ. ಬಹು ಜಾಗ್ರತೆಯಾಗಿ ಕೆಲಸವಾಗಬೇಕು.."

"ಒಳ್ಳೆ, ಒಳ್ಳೆ, ಏನದು ಕಾರ್ಯ? ಶೀಘ್ರವಾಗಿ ಹೇಳು!"

"ಸಾಹೇಬರೇ ನಮ್ಮ ಮನೆಯಲ್ಲಿಯೇ ಒಂದು 'ಕ್ರಾಂತಿಕಾರಕ' ಸಂಘವಿದೆ. ನನಗೆ ಕೂಡ ಗೊತ್ತಾಗದಂತೆ ಅದು ಬೆಳೆಯುತ್ತಿದೆ; ಎಂದ ಮೇಲೆ ಅದು ಎಷ್ಟು ಗೌಪ್ಯವಾಗಿ ನಡೆದಿದೆ ಎಂಬುದನ್ನು ನೀವೇ ಊಹಿಸಿರಿ. ನಾನು ಇಂದೆಯೇ ಅದನ್ನೆಲ್ಲ ಕಂಡು ಹಿಡಿದೆ. ಇಲ್ಲಿಯ ಸ್ಥಾನಿಕ ಸರಕಾರವನ್ನೂ, ಜೇಲನ್ನೂ ನಾಳೆಯ ದಿನವೆ ಬೆಂಕಿ ಹಚ್ಚುವ ಮಸಲತ್ತು ನಡೆದಿದೆ. ಎಲ್ಲ ಸಿದ್ಧತೆಯೂ ಆಗಿದೆ. ನಿಮಗೆ ಖಾತ್ರಿ ಮಾಡಿಕೊಡಬೇಕೆಂದರೆ ನೀವು ಈ ದಿನ ರಾತ್ರಿಯ ೯ ಇಲ್ಲವೆ ೧೦ ಗಂಟೆಗೆ ನಮ್ಮಲ್ಲಿ ಬರಬೇಕು. ನಾನು ನಿಮ್ಮ ದಾರಿಯನ್ನು ಕಾಯುತ್ತಿರುತ್ತೇನೆ"

"ಎಂದರೆ ಎಷ್ಟು ಜನ ಪೋಲೀಸರು ಬೇಕು?"

"ಹೆಚ್ಚಿಗೇನೂ ಬೇಡ ಸಾಹೇಬ್, ತಾವು ಮತ್ತು ಇನ್ನಿಬ್ಬರು ಪೋಲೀಸರು ಬಂದರೆ ಸಾಕು. ಮುಖ್ಯ ಆ ಸಂಘದ ಕಾಗದ-ಪತ್ರಗಳು ನಮ್ಮ ಕೈಸೇರಬೇಕಾಗಿವೆ. ಅವುಗಳಲ್ಲಿ ಎಲ್ಲ ಅವರ ಯುಕ್ತಿಗಳನ್ನೂ ಬರೆದಿಡಲಾಗಿದೆ. ಅವು ನಮಗೆ ಸಿಕ್ಕರೆ ಆ ಸಂಘವನ್ನು ಮುರಿಯುವುದು ಬಲು ಸುಲಭ ಕಾರ್ಯ. ಕಾರಣ ತಾವು ತಮ್ಮ ಮೋಟರ್ ತಕ್ಕೊಂಡು ಇಬ್ಬರು ಪೋಲೀಸರೊಂದಿಗೆ ಬಂದುಬಿಡಿರಿ; ನೀವು ಬಂದಾಗ ನಾನು ಮುಂದಿನ ಕಾರ್ಯಕ್ರಮ ತಿಳಿಸುವೆನು. ಸೂಕ್ಷ್ಮವಾದ ಕೆಲಸ; ಎಲ್ಲವೂ ಎಚ್ಚರಿಕೆಯಿಂದ ನಡೆಯಬೇಕು."

"ಅಗತ್ಯವಾಗಿ ಬರುವೆ; ನಿಜವಾಗಿಯೂ ನಿನ್ನಿಂದ ಸರಕಾರಕ್ಕೆ ಅತ್ಯಂತ ಉಪಕಾರವಾಗುತ್ತಲಿದೆ. ಇದನ್ನು ಮರೆಯಗೊಡುವುದಿಲ್ಲ."

"ಸಾಹೇಬರೇ, ನಾನು ನನ್ನ ಕರ್ತವ್ಯಮಾಡುತ್ತೇನೆ. ನನಗೆ ಯಾವ ಧನ್ಯವಾದವೂ ಬೇಡ. ಮುಖ್ಯವಾಗಿ ನೀವು ರಾತ್ರಿಯ ೧೦ ಗಂಟೆಗೆ ತಪ್ಪದೆ ಬಂದುಬಿಡಿರಿ, ಎಂದರಾಯಿತು!"

ಸರಿ. ಈ ಸುದ್ದಿಯನ್ನು ಸಾಹೇಬರಿಗೆ ತಿಳಿಸಿ ಪಲ್ಲೂ ಲಗುಬಗೆಯಿಂದ ಮನೆಗೆ ಬಂದ. ತೀವ್ರವಾಗಿ ತನ್ನ ಹಾಸಿಗೆ, ಟ್ರಂಕು, ಪುಸ್ತಕಗಳನ್ನು ಸರಿಯಾಗಿ ಕಟ್ಟಿಟ್ಟುಕೊಂಡ. ಆಗಲೇ ೯ ಹೊಡೆಯಲಿಕ್ಕೆ ಬಂದಿತ್ತು. ಮೇಜಿನ ಮೇಲಿಟ್ಟ ರೈಲ್ವೇ ಗಾಯಿಡನ್ನು ತೆರೆದು ನೋಡಿದ "೧೦-೪೫ಕ್ಕೆ ಮೇಲ್ ಡಿಪಾರ್ಚರ್" ಎಂದು ಖಾತ್ರಿಮಾಡಿಕೊಂಡ. ಪಲ್ಲೂನ ಮನದಲ್ಲಿ ಆ ರಾತ್ರಿ ಅನೇಕ ಕಲ್ಪನಾತರಂಗಗಳು ಬರುತ್ತಿದ್ದುವು. ಕಾಲೇಜಿನ ಭವ್ಯವಾದ ಕಟ್ಟಡ, ಹಾಸ್ಟೆಲ್ಲುಗಳ ವಾತಾವರಣ ಇವೇ ಅವುಗಳಲ್ಲಿ ಮೇಲ್ಪೇಲುತ್ತಿದ್ದುವು. ಕ್ಷಣಕ್ಕೊಮ್ಮೆ ಕಿಟಕಿಯೊಳಗಿಂದ ನೋಡುತ್ತಿದ್ದ. ಮೋಟಾರಿನ ಶಬ್ದವಾದಕೂಡಲೆ ತಿರುಗಿ ನೋಡುತ್ತಿದ್ದ. ಆ ಸಂದರ್ಭದಲ್ಲಿ ಅರ್ಧಗಂಟೆ ಕಳೆಯುವುದು ಅರ್ಧವರ್ಷವಾದಂತಾಯಿತು. ೯॥ ಆಯಿತು. ಆ ಮೇಲೆ ಮೇಜಿನ ಮುಂದೆ ಕುಳಿತು ಒಂದು ಪತ್ರವನ್ನು ಬರೆದು ಸರಿಯಾಗಿ ಮಡಿಸಿ, ಪಾಕೀಟಿನಲ್ಲಿಟ್ಟು ಮೇಜಿನ ಮೇಲಿಟ್ಟ. ಪುನಃ ಹಾಸಿಗೆ-ಟ್ರಂಕು ನೋಡಿ, ಇಟ್ಟ ಪತ್ರವನ್ನು ನೋಡಿ, ಒಂದು ದೀರ್ಘವಾದ ಉಸಿರನ್ನು ಬಿಟ್ಟ. ೧೦-೧೫ಕ್ಕೆ ಸಾಹೇಬರ ಮೋಟಾರು ಬಂದಿತು. ಕೂಡಲೇ ಪಲ್ಲೂ ಹೊರಗೆ ಬಂದವನೇ ಶೀಘ್ರವಾಗಿ ದೀಪ ಆರಿಸಲಿಕ್ಕೆ ಹೇಳಿದ. ಆ ಮೇಲೆ ಸಾಹೇಬರಿಗೆ ಹೀಗೆ ಹೇಳಿದ:

"ತಾವು ಸಕಾಲಕ್ಕೆ ಬಂದಿರಿ, ಸದ್ಯ ಸಂಘದ ಸೆಕ್ರೆಟರಿ ಮೇಲಿನ ಖೋಲಿಯಲ್ಲಿ ಮಲಗಲಿದ್ದಾನೆ. ನೀವೂ, ಈ ಪೋಲೀಸರೂ ನನ್ನ ಹಿಂದೆ ಬರಬೇಕು. ಕಾಗದಪತ್ರಗಳಿಟ್ಟ

ಕೋಣೆಗೆ, ಆ ಸೆಕ್ರೆಟರಿ ಮಲಗಿದ ಕೋಣೆಯೊಳಗಿನಿಂದಲೇ ಹೋಗಬೇಕು. ಸೆಕ್ರೆಟರಿ ತುಂಬ ಖಟ್ಯಾ ಆಸಾಮಿ! ನಾನು ಒಳಹೊಕ್ಕ ಕೂಡಲೆ ನನ್ನನ್ನು ಹಿಡಿಯಲಿಕ್ಕೆ ಬರುವ್ರನು ಕಟ್ಟಿಟ್ಟ ಮಾತೇ. ತಕ್ಷಣವೇ ನೀವು ಮೂವರೂ ಅವನನ್ನು ಗಟ್ಟಿಯಾಗಿ ಹಿಡಿದು ಕೂಡಿಸಬೇಕು. ನಾನು ಒಳಹೊಕ್ಕು ಎಲ್ಲ ಕಾಗದ-ಪತ್ರದ ಪೆಟ್ಟಿಗೆಯನ್ನೂ ತೆಗೆದುಕೊಂಡು, ಕೆಳಕ್ಕೆ ಹೋಗಿ ಮೋಟಾರಿನ ಹಾರ್ನ್ ಮಾಡುವ ವರೆಗೂ ತಾವು ಸೆಕ್ರೆಟರಿಯನ್ನು ಬಿಡಬಾರದು. ಆ ಮೇಲೆ ತಾವು ಇಷ್ಟವಿದ್ದಂತೆ ಮಾಡಬಹುದು. ತಿಳಿಯಿತೇ! ಆಸಾಮಿ ಬಹಳೇ ಖಟ್ಯಾ, ಜೋಕೆ. ಏನು ಮಾಡಿದರೂ ಬಿಡಬಾರದು. ನಾನು ಹಾರ್ನ್ ಮಾಡುವ ತನಕ ಹಾಗೇ ಹಿಡಿದಿರಬೇಕು" ಎಂದು ಹೇಳಿ ಸಾಹೇಬರನ್ನೂ ಪೋಲೀಸರನ್ನೂ ಹಿಂದೆ ಬರಹೇಳಿ, ತಾನು ಮುಂದೆ ಹೊರಟ ಪಲ್ಲೂ. ಮೇಲಿನ ಕೋಣೆಗೆ ಬಂದಕೂಡಲೆ ಗದ್ದಲಮಾಡಬಾರದೆಂದು ಸನ್ನೆಯನ್ನು ಮಾಡಿ, ಸಾವಕಾಶವಾಗಿ ಬಾಗಿಲನ್ನು ತೆರೆದ. ಚಿಲಕದ ಸಪ್ಪಳವಾಗಿ ನನ್ನ ತಮ್ಮ ಎದ್ದುಕುಳಿತ. ಅವನಿಗೆ ಎಂದಿಗಾದರೂ ನಿದ್ರೆಯೇ ಕಡಿಮೆ. ವರಹಗಳ ಚಿಂತೆಯೇ ಚಿಂತೆ. ಬಾಗಿಲನ್ನು ಯಾರು ತೆರೆದರೆಂದು ನೋಡುವಷ್ಟರಲ್ಲಿ ಪಲ್ಲೂ ಗಡಿಬಿಡಿಯಿಂದ ವರಹಗಳಿದ್ದ ಕೋಣೆಯನ್ನು ಹೊಕ್ಕ. "ಯಾರದು?" ಎಂದವನೇ ನಮ್ಮ ತಮ್ಮ ಹಾಸಿಗೆಯಿಂದ ಎದ್ದು ಓಡಲಿಕ್ಕಿದ್ದ; ಆದರೆ ಯಾರೋ ಅವನನ್ನು ಗಟ್ಟಿಯಾಗಿ ಹಿಡಿದು ಕೂಡಿಸಿದರು. ಇನ್ನಾರಿರಬೇಕು.. ಸಾಹೇಬರೂ, ಪೋಲೀಸರೂ ಕೂಡಿಯೇ ಅವನನ್ನು ಹಾಸಿಗೆಯ ಮೇಲೆ ಹಿಡಿದು ಕೂಡಿಸಿದರು. ನಮ್ಮ ತಮ್ಮ ಎಂದಿಗಾದರೂ ಧೈರ್ಯದವ. ಆದರೂ ಮೂರು ಜನರೊಂದಿಗೆ ಒಬ್ಬನೇ ಏನು ಮಾಡುವುದು! ಆ ವೇಳೆ ಕೂಗಿಕೊಳ್ಳಬೇಕೆಂದ! "ಏ ಪಲ್ಲೂ, ಪಲ್ಲೂ, ಕಳ್ಳರೋ, ಕ...." ಸಾಹೇಬರು ಕೂಡಲೇ ಅವನ ಬಾಯಿಮುಚ್ಚಿದರು. ಅಷ್ಟರಲ್ಲಿ ಪಲ್ಲೂ ಗಡಿಬಿಡಿಯಿಂದ ಕೈಯಲ್ಲಿ ಒಂದು ಪೆಟ್ಟಿಗೆ ಹಿಡಿದುಕೊಂಡು ಮೋಟಾರಿನ ಬಳಿ ಬಂದ. ಆದರೆ ಅವನು ಹಾರ್ನ್ ಬಾರಿಸುವಷ್ಟು ಮೂರ್ಖನಿರಲಿಲ್ಲ. ಕೂಡಲೇ ಮೋಟಾರಿನಲ್ಲಿ ಹಾಸಿಗೆ, ಟ್ರಂಕು, 'ವರಹ'ದ ಪೆಟ್ಟಿಗೆ ಎಲ್ಲವನ್ನೂ ಇಟ್ಟು, ನೇರವಾಗಿ ಸ್ಟೇಶನ್ನಿಗೆ ಮೋಟಾರನ್ನು ಬಿಟ್ಟ. ಆಗ ೧೦-೩೫ ಆಗಿತ್ತು. ಐದೇ ಮಿನೀಟಿನಲ್ಲಿ ಸ್ಟೇಶನ್ನಿಗೆ ಬಂದು, ಟಿಕೀಟ್ ತೆಗೆದು ಮೇಲನ್ನು ಹತ್ತಿದ. ಗಾಡಿಯು ಕಾಲೇಜಿದ್ದ ನಗರಕ್ಕೆ ತೆರಳಿತು.

ಇತ್ತ ೧೦ ೧೫ ನಿಮಿಷಗಳ ವರೆಗೂ ಮೋಟಾರಿನ ಹಾರ್ನ್ ಆಗಲಿಲ್ಲವೆಂದೂ, ಮತ್ತು ನನ್ನ ತಮ್ಮನು "ಕ್ರಾಂತಿ ಸಂಘ"ದ ಸೆಕ್ರೆಟರಿ ಇರಲಾರನೆಂದೂ ಸಂಶಯಬಂದು ಸಾಹೇಬರು, ಕೆಳಗೆ ನೋಡಿಬರಲು ಒಬ್ಬ ಪೋಲೀಸನನ್ನು ಕಳಿಸಿದರು. ಮೋಟಾರು ಇಲ್ಲವೆಂದು ಅವನು ಹೇಳಿದಮೇಲಂತೂ ಅವರಿಗೆ ಏನೋ ಮೋಸವಾಯಿತೆಂದು ನಿಶ್ಚಯವಾಯಿತು. ಆಗ ನಮ್ಮ ತಮ್ಮ ಹೇಳಿದ: "ಅಯ್ಯೋ ನನ್ನ ವರಹಗಳು, ನನ್ನ ರಾಮಟೆಂಕಿಯ ವರಹಗಳು. ಎಷ್ಟು ದಿನದಿಂದ ಕಾದಿಟ್ಟಿದ್ದೆ. ಮಗನು ಕಾಲೇಜಿಗೆ ದುಡ್ಡು ಬೇಕೆಂದರೂ ಕೊಟ್ಟಿದ್ದಿಲ್ಲ. ಅಯ್ಯೋ ವರಹಾ!" ಎಂದು ಕಿರುಚತೊಡಗಿದ. ಸರಿ ಎಲ್ಲರೂ ಪಲ್ಲೂನ ಖೋಲಿಗೆ ಬಂದರು. ಮೇಜಿನ ಮೇಲೆ ಪತ್ರವಿತ್ತು. ತಂದೆಗೆ ಬರೆದುದದು:—

"ಶ್ರೀ. ರವರ ಚರಣಕಮಲಗಳಲ್ಲಿ ಬಾಲಕ ಪಲ್ಲೂನ ದಂಡವತ್ ಪ್ರಣಾಮಗಳು. ಇಲ್ಲಿಯವರೆಗೆ ತಮಗೆ ತಮ್ಮ ವರಹಗಳಿಂದ ನಿದ್ರೆಯೇ ಹತ್ತುತ್ತಿದ್ದಿಲ್ಲವಾದ್ದರಿಂದ, ತಮ್ಮ ಪ್ರಕೃತಿ ಕೆಟ್ಟೀತೆಂದು ಅವುಗಳ ಭಾರ ಕಡಿಮೆಮಾಡಿದ್ದೇನೆ. ಈ ಪತ್ರ ತಾವು ಓದುವಾಗ ಬಹಳವಾಡಿ ನಾನು ಕಾಲೇಜಿನಲ್ಲಿರಬಹುದು. ಅದೇನೇ ಇರಲಿ, ಸಾಹೇಬರ ಮೋಟಾರನ್ನು ಸ್ಟೇಶನ್ನಿನಲ್ಲಿಯೇ ಬಿಟ್ಟಿದ್ದೇನೆ. ಅವರಿಗೆ ಜರೂರ್ ಅದನ್ನು ತೀವ್ರವಾಗಿ ಒಯ್ಯಲಿಕ್ಕೆ ಹೇಳಬೇಕು. ಅನಿವಾರ್ಯ ಕಾರಣಕ್ಕಾಗಿ ತೊಂದರೆಕೊಟ್ಟದ್ದಕ್ಕೆ ಕ್ಷಮಿಸಬೇಕು. ತೀವ್ರವಾಗಿ ಮಗನು ಗ್ರ್ಯಾಜ್ಯುಯೇಟ್ ಆಗಲೆಂದು ಆಶೀರ್ವದಿಸಬೇಕು ವಿಶೇಷ ಹಿಂದಿನಿಂದ ಬರೆಯುವೆ. ಇತಿ ನಮಸ್ಕಾರಗಳು"

ವಿಧೇಯ,

ಪಲ್ಲೂ."

ಸಾಹೇಬರು—ಪತ್ರ ಓದುವುದು ಮುಗಿದ ಕೂಡಲೆ—ತಮ್ಮ ಮೈಯನ್ನು ಚಿವುಟಿಕೊಂಡರು: ಇದೇನು ಕನಸೋ, ನನಸೋ ಎಂದು ತಿಳಿದುಕೊಳ್ಳಲಿಕ್ಕೆ. ಮೈಗೆ ನೋವೆನಿಸಿದುದರಿಂದ ಇದು ಸ್ವಪ್ನವಲ್ಲವೆಂದು ಖಾತ್ರಿಯಾಯಿತು. ಪತ್ರ ಮುಗಿದ ಮೇಲೆ ನಮ್ಮ ತಮ್ಮನಿಗೆ ಬಡಿದ ಸಿಡಿಲು, ಸಾಹೇಬರಿಗೆ ಆದ ಆಶ್ಚರ್ಯ ಇದನ್ನೆಲ್ಲ ಹೇಳಲು ನನಗೆ ಸಾಧ್ಯವಿಲ್ಲ. ಅದನ್ನು ನೀವೇ ಊಹಿಸಿರಿ. ಕೊನೆಗೆ ಸಾಹೇಬರು ಎಂದುದನ್ನು ಮಾತ್ರ ಅಷ್ಟು ಹೇಳಿ ಮುಗಿಸುತ್ತೇನೆ.

"ಯಜಮಾನರೇ, ನಿಮ್ಮ ಪತ್ರ ಈ ದಿನ ಮಾಡಿದ ಸಾಹಸ ಇವುಗಳ ಮೇಲಿಂದ ಹೇಳಬೇಕಾದರೆ, ಇನ್ನು ಸ್ವಲ್ಪೇ ವರ್ಷಗಳಲ್ಲಿ ಅವನು ಪೋಲೀಸ್ ಸು ಪ ರಿಂ ಟೆಂ ಡೆಂ ಟ ನಾ ಗು ತ್ತಾ ನೆ, ಸುಪರಿಂಟೆಂಡೆಂಟ್! ತಿಳಿಯಿತೇ? ಬರುತ್ತೇನೆ, ನಮಸ್ಕಾರ, ತಡವಾದರೆ ಮೋಟಾರು ಹೋದೀತು!" ಎಂದವರೇ ಸ್ಟೇಶನ್ನಿಗೆ ಹೊರಟರು ಸಾಹೇಬರು.

ಗಿರಾಕಿಗಳು ನಾಗಪ್ಪನ ಅನುಭವಕ್ಕೆ ಮಿತಿಯೇ ಇಲ್ಲವೆಂದು ಎನ್ನುತ್ತ ತಮ್ಮ ತಮ್ಮ ಮನೆಗೆ ತೆರಳಿದರು. ನಾಗಪ್ಪ ಡಿಕ್ಕಿಯೊಂದಿಗೆ ಮಧ್ಯಾಹ್ನದ ಊಟಕ್ಕೆ ನಡೆದ.





(ಶ್ರೀಮಾನ್ ನೆಗಳೂರ ರಂಗನಾಥರಾಯರ ಬರೆಹದ ವಿಮರ್ಶೆ)

ಜಯಂತಿಯ ' ಮೇ ' ತಿಂಗಳ ಸಂಚಿಕೆಯಲ್ಲಿ, ಶ್ರೀಮಾನ್ ನೆಗಳೂರ ರಂಗನಾಥರಾಯರು ಬರೆದ, " ಅಪೌರುಷೇಯಾಃ ವೇದಾಃ" ಎಂಬುದೊಂದು ಬರೆಹವು ಪ್ರಕಟವಾಗಿದೆ. ಆದರಲ್ಲಿ, ಬರೆಹಗಾರರು, ಕೆಲವು ಅಸಿದ್ಧವಿಧಾನಗಳನ್ನು ಮಾಡಿ, ಆಭಾಸಿಕ ಕಾರಣಗಳನ್ನು ತೋರಿಸಿ, ವೇದಗಳು ಪೌರುಷೇಯವೆಂದೂ, ನಿರುಪಯುಕ್ತವಾದುವೆಂದೂ, ಸಿದ್ಧಿಸಿ ತೋರಿಸಲು ಹೆಣಗಿದ್ದಾರೆ. ಅವರು ಮಾಡುತ್ತಿದ್ದ ವಿಧಾನಗಳು, ತೋರಿಸಿದ ಕಾರಣಗಳು, ಅವರ ಆ ಗುರಿಯನ್ನು ಸಾಧಿಸಲು ಎಷ್ಟೊಂದು ಸಮರ್ಥವಾಗಿವೆಯೆಂಬುದನ್ನು ನೋಡುವುದೇ ಈ ಬರೆಹದ ಉದ್ದೇಶವಾಗಿದೆ. ಈ ಬರೆಹವು 'ವಿತಂಡ'ದ (ಸ್ವಪಕ್ಷ ಸ್ಥಾಪನಾಹೀನೋ ಪರಪಕ್ಷ ದೂಷಣೀಯೋ ವಿತಂಡಃ) ರೀತಿಯನ್ನವಲಂಬಿಸುವುದರಿಂದ, ತಾನು ಯಾವ ಸಿದ್ಧಾಂತವನ್ನೂ ಇಡಬಯಸುವುದಿಲ್ಲವೆಂಬ ಮಾತು ಮೊದಲು ಹೇಳಬೇಕಾದುದು.

ಮೊದಲು ಎಲ್ಲ ವಿಷಯಗಳನ್ನೂ ಬದಿಗಿಟ್ಟು, ಬರೆಹಗಾರರನ್ನೊಂದು ಮಾತನ್ನು ಕೇಳಬಯಸುತ್ತೇನೆ : " ನೀವು ಮೊದಲು 'ಇಂದಿನ ಸಮಾಜದಲ್ಲಿಯ ಹೀನ ಸ್ಥಿತಿಯನ್ನೂ, ತಿಕ್ಕಾಟವನ್ನೂ, ಹೇಸಿತನವನ್ನೂ, ಕಷ್ಟವನ್ನೂ, ಅತೃಪ್ತಿಯನ್ನೂ, ನೋಡಿದರೆ, ಸನಾತನವೆಂದು ಹೇಳುವ ಆ ವೇದಗಳು ನಮ್ಮ ಸಹಾಯಕ್ಕೆ ಬರಲೊಲ್ಲವೇಕೆ ? ' ಎಂದು ಕೇಳಿ, ಮುಂದೆ ಕೆಲವು

★

ಉಪಯುಕ್ತತೆ ಅನುಪಯುಕ್ತತೆ ಇವುಗಳಿಂದ ವೇದಗಳಿಂದ ವೇದಗಳ ಅಪೌರುಷೇಯತ್ವವನ್ನಾಗಲಿ, ಪೌರುಷೇಯತ್ವವನ್ನಾಗಲಿ ಸಾಧಿಸಲು ಬರುವುದಿಲ್ಲ. ವೈದಿಕ ನಿಘಂಟು, ಯಾಸ್ಕನ ನಿರುಕ್ತ, ಅವಟ-ಮಹೀಧರರು ಬರೆದ ಭಾಷ್ಯಗಳು, ಮಧ್ವಾಚಾರ್ಯರು ಬರೆದ ಋಗ್ಭಾಷ್ಯ ಇವನ್ನೆಲ್ಲ ಶ್ರೀಮಾನ್ ನೆಗಳೂರರವರು ನೋಡಿಯೆ ಇಲ್ಲವೆಂದು ತೋರುವುದು.

★

ಪಂಕ್ತಿಗಳಲ್ಲಿಯೆ ಬರೆಯುತ್ತಿದ್ದೀರಿ; ' ಈ ನಾಗರಿಕ ನವಯುಗ, ' ' ನಮ್ಮ ವಿವಿಧ ವಿಶಾಲಜೀವನ ' ಎಂದು. ನಿಮ್ಮ ನನ್ನಿಯ ನವಯುಗ, ವೈಯಾರದ ವಿಶಾಲ ಜೀವನ, ಇವುಗಳಿಗೆ ಹೀನಸ್ಥಿತಿ, ತಿಕ್ಕಾಟ, ಹೇಸಿತನ ಕಷ್ಟ, ಅತೃಪ್ತಿ, ಇವೆಲ್ಲ ಲಕ್ಷಣಗಳೆ? ಅದಿರಲಿ; ಸನಾತನವೆಂದು ಹೇಳಿಸಿಕೊಳ್ಳುತ್ತಿರುವ ವೇದಗಳು ಈಗ ಸಹಾಯಕ್ಕೆ ಬಾರದಿದ್ದಲ್ಲಿ, ಅವು ಪೌರುಷೇಯವಾದುವೇಕೆ? ಎಂಬುದು ತಿಳಿಯುವುದು ತುಸು ಬಿಗಿಯಾದ ಮಾತು. ಉಪಯುಕ್ತತೆ—ಅನುಪಯುಕ್ತತೆಗಳಿಂದ ಅಪೌರುಷೇಯತ್ವ ಪೌರುಷೇಯತ್ವಗಳನ್ನು ಸಿದ್ಧಿಸಿ ತೋರಿಸಬಹುದಾದರೆ, ಇಂದು ನಮಗೆ ಉಪಯುಕ್ತವಾದ ಕಪ್ಪು-ಬಸಿಗಳು, ಮೋಟಾರು-ಸಾಯ್ಕಲ್ಲುಗಳು, ಟೇನಿಸ್ ರ್ಯಾಕೇಟುಗಳು ಇವೆಲ್ಲ ಅಪೌರುಷೇಯವಾಗಬೇಕಾಯಿತಲ್ಲ! ಅಪೌರುಷೇಯತ್ವದಲ್ಲಿ ಉಪಯುಕ್ತತೆ ಇದೊಂದು ಲಕ್ಷಣಾಂಶವಿದ್ದಿರಬಹುದು. ಆದರೂ ಅದನ್ನು ಸಾಪೇಕ್ಷವೆಂದೆ ಹೇಳಬೇಕಾಗುವುದು. ಅಪೌರುಷೇಯವೆಂದು ಹೇಳಿಸಿಕೊಳ್ಳುವ ಗ್ರಂಥವಾಗಲಿ, ಶಬ್ದವಾಗಲಿ, ಅದು ಹೇಳಿದಂತೆ ನಸುವೂ ಹೆಚ್ಚು ಕಡಿಮೆಯಾಗದೆ ಸಮಾಜವು ನಡೆಯುತ್ತಿದ್ದರೂ ಉಪಯೋಗವಾಗದಲ್ಲಿ, ಅದಕ್ಕೆ ದೋಷ ತಟ್ಟಬಹುದು. ಔಷಧವನ್ನು ತಕ್ಕೊಳ್ಳದೆಯೆ ಅದನ್ನು ಪೆಟ್ಟಿಗೆಯಲ್ಲಿಟ್ಟು 'ಗುಣವಾಗಲೊಲ್ಲದೇಕೆ? ' ಎಂದು ದೂಷಿಸಿದರೆ ಔಷಧದ ತಪ್ಪೇನು? ಇಂದು ಸಮಾಜವು ಹಾಗೆ ನಡೆಯುತ್ತಿದ್ದು, 'ಇದು ಹೀಗೇಕೆ ? ' ಎಂದು ಬರೆಹಗಾರರು ಕೇಳಿ ಇದ್ದರೆ ಒಳಿತಿತ್ತು. ನಿಜವಾಗಿ ನೋಡಿದರೆ, ಮೂರುಸಾವಿರ ವರುಷಗಳಿಗೆ ಹಿಂದೆಯೆ ನಮ್ಮ ಸಮಾಜವು ವೇದಾಜ್ಞೆಯನ್ನು ಉಲ್ಲಂಘಿಸಿ ಹೊರಟಿದೆ. ಇಲ್ಲಿ ಬರಬೇಕಾದ ಪ್ರಶ್ನೆಗಳಿವು — ವೇದಗಳು ಮಾನವನ ಜೀವನಮಾರ್ಗಕ್ಕೆಯಾವುದೊಂದು ಕ್ರಮವನ್ನು ಹಾಕಿಕೊಟ್ಟಿವೆಯೆ? ಅಥವಾ

ಇಲ್ಲವೆ? ಲೇಖಕರು 'ಹಾಕಿಯೆ ಕೊಟ್ಟಿಲ್ಲ' ಎಂದು ಅಭಿಪ್ರಾಯಪಡುತ್ತಿದ್ದರೆ, 'ಹಾಕಿ ಕೊಟ್ಟಿವೆ,' ಎಂದು ತೋರಿಸಲು ಸಿದ್ಧರಿದ್ದೇವೆ. 'ಹಾಕಿ ಕೊಟ್ಟಿವೆ'ಎಂದು ಒಪ್ಪುತ್ತಿದ್ದರೆ, 'ಕೆಲವು ಯಾವುದೊಂದು ಕಾಲದಲ್ಲಿಯೆ ಆಗಲಿ, ಉಪಯುಕ್ತವಾಗಿದ್ದುವೆ ಇಲ್ಲವೆ?' ಎಂದು ಮತ್ತೆ ಕೇಳಬೇಕಾಗುವುದು. ಹಿಂದೆ ಎಂದೋ ಒಂದು ಕಾಲಕ್ಕೆ ಉಪಯುಕ್ತವಿದ್ದಿರಬಹುದೆಂದು ಬರೆಹಗಾರರೂ ಒಪ್ಪುತ್ತಿದ್ದಾರೆ. ಆದರೆ ಇಂದಿನ 'ವಿವಿಧ ವಿಶಾಲ' ಜೀವನಕ್ಕೆ ಅವುಗಳ ಉಪಯೋಗವಿಲ್ಲವೆಂಬುದಿಷ್ಟೆ ಅವರ ಹಟ. ಆದರೆ ನಮ್ಮ ಜೀವನವು ವಿವಿಧವೂ, ವಿಶಾಲವೂ ಆಗಿದೆಯೆಂದು ಸಿದ್ಧವಾಗುತ್ತಿದ್ದರೆ, ವೇದಗಳ ಅನುಪಯುಕ್ತತೆಯೂ ಸಿದ್ಧಿಸಲಿ. ಅದಕ್ಕಾಗಿ 'ವಿವಿಧ ವಿಶಾಲ ಜೀವನ' ಎಂದರೇನು? ನಿಜವಾಗಿಯೂ ನಮ್ಮ ಜೀವನವು ವಿವಿಧ ವಿಶಾಲವಾಗಿದೆಯೆ? ಎಂಬುದನ್ನು ನೋಡುವುದು ಈಗ ಪ್ರಸ್ತುತವಾಗಿದೆ.

ಮೊದಲು ಜೀವನದ ವಿವಿಧತೆಯೆಂದರೇನು? ವಿಶಾಲತೆಯೆಂದರೇನು? ಎಂಬುದನ್ನು ನೋಡುವಾ. ಜೀವನಕ್ಕೆ ಅತ್ಯವಶ್ಯವಾಗಿ ಕೆಲಸಮಾಡುತ್ತಿದ್ದ, ಹಿಂದಿನ ಕಾಲದ ಮೂಲಶಕ್ತಿಗಳಲ್ಲಿ ಇಂದು ಮತ್ತೆ ಹೊಸತಾದ ಶಕ್ತಿಗಳು ಬಂದು ಕೂಡಿದ್ದರೆ, ಅದಕ್ಕೆ ವಿವಿಧತೆಯೆನ್ನಬಹುದು. ಮೊದಲಿದ್ದ ಶಕ್ತಿಗಳೆ ಇಂದು ಬಹಳವಾಗಿ ಬೆಳೆದಿವೆಯೆಂದು ಕಂಡುಬಂದರೆ ಅದಕ್ಕೆ ವಿಶಾಲವೆನ್ನಬಹುದು. ಹಾಗೆ ಏನಾದರೂ ಆಗಿದೆಯೆ ಎಂಬುದನ್ನು ನೋಡೋಣ. ಜಗತ್ತಿನಲ್ಲಿ ಜೀವತತ್ತ್ವವು ಜನ್ಮವೆತ್ತಿದಂದಿನಿಂದ ನಡೆದ ಆದರ ಪ್ರತಿಯೊಂದು ಕ್ರಿಯೆಯ ಹಿಂದೆ ಹಿಂದೆ ಹೋಗಿ, ಅನುಮಾನದಿಂದ, ಅನೇಕ ಪ್ರಯೋಗಗಳಿಂದ, ಜ್ಞಾತ ಇತಿಹಾಸದ ಬಲದಿಂದ, ಜೀವತತ್ತ್ವವು ಪ್ರತಿನಿತ್ಯವೂ ಹೋರಾಡಿ ಕೊನೆಗೆ ಸಾಧಿಸುವ ಫಲದೃಷ್ಟಿಯಿಂದ, ಅದೆಷ್ಟು ಸೂಕ್ಷ್ಮವಾಗಿ ನೋಡಿದರೂ, ಎಂದಿನಿಂದ ಇಂದಿನವರೆಗೂ ಎರಡೆರಡು ಬೇಡಿಕೆಗಳು ಜೀವನದ ಗುರಿಯಾಗಿವೆ. ಒಂದು **ಕ್ಷುಧೆ** (ಹಸಿವು); ಇನ್ನೊಂದು ಕಾಮ (ಸಂಭೋಗೇಚ್ಛೆ) ಬದುಕುವುದಕ್ಕಾಗಿ ಹಸಿವೆ (Self preservation); **ಬೆಳೆಯುವ**ದಕ್ಕಾಗಿ ಕಾಮ (Race preservation). ಜೀವನದ ಯಾವ **ಹೋರಾಟ**ವನ್ನೂ ನೋಡಿರಿ; ಅದರ ಹಿಂದೆ ಇವೆರಡರಲ್ಲಿಯ ಯಾವುದೆ ಒಂದು ಅಡಗಿರುವುದನ್ನು ಕಾಣಬಹುದು, ಎಂದರೆ ಇವೆರಡೇ ಮೂಲಶಕ್ತಿಗಳಿಂದ ನಿಸರ್ಗವು ತನ್ನ ಗುರಿಯನ್ನು ಸಾಧಿಸುತ್ತಿದೆ. ಇನ್ನು ಮಾನವ ಪ್ರಾಣಿಯ ಉತ್ಪತ್ತಿಯ ಇತಿಹಾಸವನ್ನು ನೋಡಹೋದರೆ, ಇದುವರೆಗಿನ ಸಂಶೋಧಕರಲ್ಲಿ ಮುಖ್ಯವಾಗಿ ಎರಡು ಪಂಗಡಗಳಿದ್ದುವು. ಈಗಿದ್ದ ಮಾನವೀಯ ಮಾದರಿಯು ಮೂಡಿ ೨ ಲಕ್ಷ ವರ್ಷವಾಯಿತೆಂದೆನ್ನುವರು ಕೆಲವರು; ೨೦ ಲಕ್ಷ ವರುಷವಾಯಿತೆಂದೆನ್ನುವರು ಹಲವರು. ಈಗಂತು ಮತ್ತೆ ಒಬ್ಬಿಬ್ಬರು, ಎರಡು ಕೋಟಿ ವರುಷದಾಚೆಗೆ ಒಯ್ಯಬೇಕೆನ್ನುತ್ತಿದ್ದಾರೆ. ಯಾವುದು ನಿಜವಿದ್ದರೂ, ಈಗಿದ್ದ ಮಾನವಜಾತಿಯ ಇಷ್ಟೊಂದು ದೀರ್ಘಾಯುಷ್ಯದಲ್ಲಿ ಇದುವರೆಗಂತು ಇಂದ್ರಿಯ ರಚನೆಯಲ್ಲಿಯೂ ಮೂಲಗುಣ-ಶಕ್ತಿಗಳಲ್ಲಿಯೂ ಹೆಚ್ಚು-ಕಡಿಮೆಯಾಗಲಿ, ಬದಲಾವಣೆಯಾಗಲಿ, ಎಳ್ಳಷ್ಟು ಆದುದು ಕಂಡುಬರುವುದಿಲ್ಲವೆಂದು ಸುಮಾರಾಗಿ ಎಲ್ಲ ವಿಜ್ಞಾನಿಗಳೂ ಅಭಿಪ್ರಾಯಪಡುತ್ತಾರೆ. ಹಾಗೆ ಹೆಚ್ಚು-ಕಡಿಮೆಯಾದುದನ್ನಾಗಲಿ, ಇವೆರಡನ್ನೂ ಬಿಟ್ಟು ಮತ್ತೆ ಹೊಸ ಶಕ್ತಿಗಳು ಬಂದುಕೂಡಿದುದನ್ನಾಗಲಿ, ಬರೆಹಗಾರರು ಸಪ್ರಮಾಣವಾಗಿ ತೋರಿಸಲು ಸಿದ್ಧರಿದ್ದರೆ, ಅದರಿಂದ ಬರವಮಾಡಿಕೊಳ್ಳುತ್ತೇವೆ. ಹಾಗಾಗದಿದ್ದಲ್ಲಿ, '**ವಿವಿಧ-ವಿಶಾಲಜೀವನಕ್ಕೆ**' ಅರ್ಥವೇನು? ಇನ್ನು ಇವೆರಡೂ ಸಾಧ್ಯಗಳನ್ನು ಸಾಧಿಸಲು, ಆಯಾಕಾಲದ ಮಾನವನ ಸಾಧನಗಳಾಗಲಿ ರೀತಿಯಾಗಲಿ, ಬೇರೆ ಬೇರೆಯಾಗಿರಬಹುದು. **ಸಾಧನಗಳು ವಿವಿಧವಾದರೆ, ವಿಶಾಲವಾದರೆ ಸಾಧ್ಯವು ವಿಶಾಲವಾದಂತಲ್ಲ.** ಬರೆಹಗಾರರು ಸಾಧನಗಳಿಗೇ ಸಾಧ್ಯವೆಂದು ಭ್ರಮಿಸಿ, ಅದನ್ನು ವಿಶಾಲವೆಂದು ಭಾವಿಸಿ, ಓದುಗರನ್ನೂ ಭ್ರಮೆಗೊಳಿಸುತ್ತಿದ್ದಾರೆ. ಇನ್ನು ಯಾವ ಸಾಧನಗಳು ಮಾನವನ ಗುರಿಗೆ ಹಿತಕರವಾದುವೆಂಬ ಮಾತು ಬೇರೆ. ಅದು ಇಲ್ಲಿ ಪ್ರಸ್ತುತವಿಲ್ಲ. ಮೇಲಾಗಿ ಅದರ ಉತ್ತರವನ್ನು ಭಾರತೀಯರ ಮೂರು-ನಾಲ್ಕು ಸಾವಿರ ವರುಷದ ಇತಿಹಾಸವೆ ಕೊಡುತ್ತ ನಿಂತಿದೆ. ಇಷ್ಟೇ ಅದನ್ನು ಕಿವಿಗೊಟ್ಟು ಕೇಳಬೇಕು. ಇನ್ನು 'ದಯಾಧರ್ಮ, ವಿಶ್ವಬಂಧುತ್ವ, ಸಮತೆ ಶಾಂತಿ ಇವು ಈ ಹೊಸಯುಗದ ಮಾನವನ ಹೆಗ್ಗುರಿಯಾಗಿವೆ' ಎಂದು ಯಾರಾದರೂ ತೋರಿಸಬಹುದು. ಆದರೆ ವೈರ, ಕ್ರೋಧ, ದ್ವೇಷ, ಅಸೂಯೆ ಈರ್ಷೆ, ಮದ, ಮತ್ಸರ ಪ್ರೇಮ, ದಯೆ ಶಾಂತಿ ಇವೆಲ್ಲ ಭಾವ-ವಿಭಾವಗಳು ಈ ಎರಡು ಮೂಲಶಕ್ತಿಗಳ ಮಕ್ಕಳೊ, ಮೊಮ್ಮಕ್ಕಳೊ, ಮಕ್ಕಳಾಶೆ ಹಿಂಗಲು ಇವುಗಳಲ್ಲಿಯ ಕೆಲವದರಿಂದ ತಕ್ಕೊಂಡ ದತ್ತಕ ಮಕ್ಕಳೊ ಎಂಬುದನ್ನು ಸಾಧಾರವಾಗಿ ತೋರಿಸಬಹುದು. ಅಲ್ಲದೆ 'ಇವೆಲ್ಲ ಒಂದೊಂದು ಸೋಗಿನಿಂದ, ಅವೆರಡನ್ನೆ ಪರಂಪರೆಯಿಂದ ಸಾಧಿಸುತ್ತಿವೆ' ಎಂಬುದನ್ನೂ ನಿರ್ಧರಿಸಿ ತೋರಿಸಬಹುದು. ಇನ್ನು ನಾವು ನಮ್ಮ ಗುರಿಯನ್ನು ಸಾಧಿಸಲು ವಿಧವಿಧದ ಸಾಧನಗಳನ್ನು ನಿರ್ಮಿಸಿಕೊಂಡುದರಿಂದಲೆ ಮುಂದುವರಿದವರೆಂದು ಹೇಳಿಕೊಳ್ಳುತ್ತಿದ್ದರೆ, "**ಕ್ರಿಯಾಸಿದ್ಧಿಃ ಸತ್ತ್ವೇ ಭವತಿ ಮಹತಾಂ ನೋಪಕರಣೇ**" ಎಂಬ ನ್ಯಾಯದಂತೆ, **ತೀರ ಕಡಿಮೆ ಸಾಧನಗಳಿಂದ ಸಾಧ್ಯವನ್ನು ಸಾಧಿಸಬಲ್ಲವನೆ ಸಮರ್ಥನೆಂದೂ, ಬಹುಸಾಧನಗಳನ್ನವಲಂಬಿಸುವವನು ದುರ್ಬಲನೆಂದೂ** ಒಪ್ಪಬೇಕಾಗುವುದು. ಒಂದು ಬಗೆಯಿಂದ ನೋಡಿದರೆ, ಸಾಧ್ಯದ ನೇರವಾದ, ನಿಚ್ಚಳವಾದ ಜ್ಞಾನವಿಲ್ಲದುದಕ್ಕೂ, ಅದನ್ನು ಸಾಧಿಸಲು ಸಾಕಷ್ಟು ಶಕ್ತಿ ಇಲ್ಲದುದಕ್ಕೂ ಅನೇಕ ಸಾಧನಗಳನ್ನವಲಂಬಿಸಬೇಕಾಗುತ್ತದೆ. ನಾವು ಜಗತ್ತಿನಲ್ಲಿಯ ಯಾವುದೇ ಜನಾಂಗದ ಮಧ್ಯಕಾಲೀನ ವಾಙ್ಮಯಗಳನ್ನೋ ದಂತಕಥೆಗಳನ್ನೋ ನೋಡಿದರೆ, ಅದರಲ್ಲಿ ಯಾವುದಾದರೊಂದು ಬಗೆಯ ಯೋಗಶಕ್ತಿಯ ಕಲ್ಪನೆಯು ಕಂಡು

ಬರುವುದು. ಆ ಶಕ್ತಿಬಲದಿಂದ ಮಾನವನು ಯಾವ ಸಾಧನಗಳೂ ಇಲ್ಲದೆಯೆ ಎಂತಹ ಅದ್ಭುತಕರ್ಮಗಳನ್ನೂ ಮಾಡಿ ತೋರಿಸು ವನೆಂದು ಅವರ ನಂಬುಗೆ. ಈ ವಿಜ್ಞಾನ ಯುಗದಲ್ಲಿಯೂ ನಮ್ಮಲ್ಲಿ ಮಾತ್ರವಲ್ಲ, ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಕೂಡ ಇದನ್ನು ಒಪ್ಪುವ ವಿದ್ವಾಂಸರೂ ಇದ್ದಾರೆಂಬುದು, "ಥೀ ಆಸಫೀ" ಗ್ರಂಥಗಳನ್ನು ನೋಡಿದರೆ ತಿಳಿದುಬರುವುದು. 'ಇದು ಹೀಗೇಕೆ?' ಎಂಬುದನ್ನು ಸೂಕ್ಷ್ಮವಾಗಿ ನೋಡಿದರೆ, ಮಾನವನ ಬಲವು, ನೈಸರ್ಗಿಕವಾಗಿಯೆ ಸಾಧನಗಳನ್ನು ಕಡಿಮೆಮಾಡಿಕೊಳ್ಳಬೇಕೆಂ ಬುದರ ಕಡೆಗೆ, ಎಂದರೆ ಸಮರ್ಥನಾಗ ಬೇಕೆಂಬುದರ ಕಡೆಗೇ ಹೆಚ್ಚಾಗಿದೆ ಎಂಬುದು ಕಂಡುಬರುವುದು. ಯೋಗಶಕ್ತಿ ಎಂಬುದಿರಲಿ, ಇಲ್ಲದಿರಲಿ; ಅದು ಸಾಧನನಿರಪೇಕ್ಷವಾಗಿ ಸಾಧ್ಯವನ್ನು ಸಾಧಿಸಬಲ್ಲ ಶಕ್ತಿಸಂಪಾದನೆಯ ಮಾನ ವೀಯ ಬಯಕೆಯನ್ನು ಸೂಚಿಸುವುದೆಂಬ ಮಾತು ನಿಜವಾಗಿದೆ. ಇಲ್ಲಿ ನಾನು ಹೇಳುವು ದಿದು:- **ಉಪಯುಕ್ತತೆ ಅನುಪಯು ಕ್ತತೆ, ಇವುಗಳಿಂದ ವೇದಗಳ ಅಪೌರು- ಷೇಯತ್ವವನ್ನಾಗಲಿ, ಪೌರುಷೇಯತ್ವ ವನ್ನಾಗಲಿ, ಸಾಧಿಸಲು ಬರುವುದಿಲ್ಲ.** ಮಾನವನ ಮಾದರಿಯಾಗಲಿ, ಇಲ್ಲವೆ ಅವನ ಸಾಧ್ಯವಾಗಲಿ, ಬೇರೆಯಾಗಿದೆಯೆಂದು ಸಿದ್ಧವಾಗುವವರೆಗೆ ಬರೆಹಗಾರರು ವೇದಗಳ ಮೇಲೆ ಹೊರಿಸುತ್ತಿರುವ ಅನುಪ- ಯುಕ್ತತೆಯ ದೋಷವೂ ಅವುಗಳಿಗೆ ತಟ್ಟುವಂತಿಲ್ಲ.

ಶ್ರೀಯುತರು "ಜೀವನದ ಪ್ರವಾಹವು ಮುಂದೆ ಮುಂದೆ ಸಾಗುತ್ತಿರುವಾಗ ನಾವು ನಮ್ಮ ಕಾಲುಗಳನ್ನು ೫ ಸಾವಿರ ವರುಷಗಳ ಹಿಂದೆ ನೂಕಿ, ಮೊಗವನ್ನು ಮಾತ್ರ ಮುಂದೆ ದೂಡುವುದು ಲೇಸೆ?" ಎಂದು ಕೇಳುತ್ತಿದ್ದಾರೆ. 'ಮುಂದೆ ಸಾಗು ತ್ತಿದೆ' ಎಂದರೆ 'ಎಲ್ಲಿ?' ಎಂದು ಕೇಳ ಬೇಕಾಗುತ್ತದೆ. ಹೀಗೆಯೆ ಮುಂದೆ ಸಾಗುವುದೆಂದು ಭಾವಿಸಿದರೆ 'ಕೊನೆಗೆ ಇದರ ನಿಲ್ದಾಣವೆಲ್ಲಿ?' ಎಂಬ ಪ್ರಶ್ನೆ ಬಂದು ನಿಲ್ಲುತ್ತದೆ. ಇದಕ್ಕೆ ಉತ್ತರವಿದೆಯೆ ಬರೆಹಗಾರರ ಹತ್ತಿರ? ಮೇಲಾಗ ಮುಂದೆಯೆ ಸಾಗಿದೆಯೆಂಬುದಕ್ಕೆ ಗಮಕ ವಾವುದು? ಒಂದು ವೇಳೆ ಮತ್ತೆ ಹಿಂದೆಯೆ ಏಕೆ ನಡೆದಿರಲಿಕ್ಕಿಲ್ಲ! ಈ ಮುಂದೆ ಸಾಗು ವಿಕೆಯು ಈಗ ಎಲ್ಲರೂ ಒಂದು ವಿಶಿಷ್ಟ- ಅರ್ಥದಲ್ಲಿ ಉಪಯೋಗಿಸುವ ಪ್ರಗತಿಯ ಪರ್ಯಾಯಶಬ್ದವೆ ಆದುದಾದರೆ, ಆ ಪ್ರಗತಿ ಭ್ರಮೆಯೆಂಬುದನ್ನು ಮೇಲೆ ಹೇಳಿಯೆ ಇದೆ. ಶ್ರೀ. ನೆಗಳೂರರು "ಇಂದಿನ ನಮ್ಮ ಆಚಾರಗಳು ಕಾಲಗತಿಯ ಮಡುವಿನಲ್ಲಿ ಸಿಕ್ಕಿ ತಾವೆ ಮಾರ್ಪಾಟು ಹೊಂದುತ್ತಲಿದ್ದರೂ" ಎನ್ನುವರು; ಹೊಂದದಿದ್ದರೆಯೆ ಒಳಿತಾಗು ತ್ತಿದ್ದಿತೇನೊ? ಕಣ್ಣಿದ್ದು ಕುರುಡರಂತೆ ಮಡುವಿನಲ್ಲಿ ಸಿಕ್ಕಿ ಒದ್ದಾಡಿ ವೇದಗಳನ್ನು ಬೈಯತೊಡಗಿದರೆ, ಅವು ನಿಮ್ಮನ್ನು ನೋಡಿ ನಗುತ್ತಲೂ ಇರಬಹುದು. "ವೇದಗಳು ಎಂದು ರಚಿಸಲ್ಪಟ್ಟುವು ಅಂದಿನಿಂದಲೂ ಇಂದಿನ ವರೆಗೆ ಬದಲು ಆದುದನ್ನೂ ಮಾರ್ಪಟ್ಟುದನ್ನೂ ವಿಮರ್ಶಿಸಿ ನೋಡಿದರೆ" ಎಂದು ಬರೆಯುತ್ತಾರೆ. ಇದರಿಂದ 'ವೇದಗಳಲ್ಲಿಯೆ ಬದಲಾವಣೆ ಯಾಗಿದೆಯೊ! ಇಲ್ಲವೆ ನಮ್ಮ ಆಚಾರಗಳು ಬದಲಾಗಿವೆಯೋ' ಎಂಬ ವಿಷಯದಲ್ಲಿ ಬರೆಹಗಾರರ ಆಶಯವು ಸ್ಪಷ್ಟವಾಗುವು ದಿಲ್ಲ. ಈಗ ಉಪಲಬ್ಧವಿದ್ದ ವೇದಗಳಲ್ಲಿ ಯಂತೂ- ಸಂಹಿತೀಕರಣವಾದ ಬಳಿಕ, ಎಂದರೆ ಸುಮಾರಾಗಿ ಎರಡುವರೆ ಸಾವಿರ ವರುಷಗಳೀಚೆಗೆ, ಯಾವ ಬದಲಾವಣೆಯೂ ಆಗಿಲ್ಲವೆಂದು ವೇದವಾಙ್ಮಯದ ಅಭ್ಯಾಸಿ ಗಳು ಖಂಡಿತವಾಗಿ ಹೇಳುತ್ತಾರೆ. ನಮ್ಮ ಆಚಾರಗಳಲ್ಲಿ ಮಾತ್ರ ಬೇಕಾದಷ್ಟು ಬದಲಾವಣೆಗಳಾಗಿವೆ. ಜೈನರಿಂದ, ಬೌದ್ಧರಿಂದ, ಮತ್ತೆ ಸಿಕ್ಕಸಿಕ್ಕವರಿಂದ ಅಲ್ಲದ ಸಲ್ಲದ ಆಚಾರಗಳನ್ನು ಎತ್ತಿಕೊಂಡು ವಿಪರ್ಯಸ್ತರಾಗಿ (ವಿದ್ರೂಪಿಗಳಾಗಿ), ಇಂದು ನಾವು ಮತ್ತೆ ಆ ವೇದಗಳಿಗೆ "ನೀವೇಕೆ ಬದಲಾಗಲೊಲ್ಲಿರಿ?" ಎಂದು ಕೇಳತೊಡಗಿದರೆ ಪಾಪ ಅದು ಅವುಗಳ ದುರ್ದೈವ. ಇನ್ನು "ವೇದಗಳಿಗೆ ಸಾಕಷ್ಟು ಟೀಕೆ-ಟಿಪ್ಪಣಿಗಳು ಕೂಡ ಇಲ್ಲ. ಪೂಜ್ಯ ಸಾಯಣಾಚಾರ್ಯರನ್ನು ಬಿಟ್ಟರೆ ಅವುಗಳಿಗೆ ಅರ್ಥವನ್ನು ಹಚ್ಚಲಿಕ್ಕೆ ಹೋದ ವ ಬಲ್ಲಿದರೇ ಇಲ್ಲ" ಎಂಬುದೊಂದು ವಿಧಾನ ವಿದೆ. **ವೈದಿಕ ನಿಘಂಟು, ಯಾಸ್ಕನ ನಿರುಕ್ತ, ಅವಟಿ-ಮಹೀಧರರು ಬರೆದ ಭಾಷ್ಯಗಳು, ಮಧ್ವಾಚಾರ್ಯರು ಬರೆದ ಋಗ್ಭಾಷ್ಯ ಇವನ್ನೆಲ್ಲ ಶ್ರೀ ಮಾನ್** ನೆಗಳೂರ ಅವರು ನೋಡಿಯೆ ಇಲ್ಲವೆಂದು ತೋರುತ್ತದೆ. ಮೇಲಿನ ತಮ್ಮ ವಿಧಾನಕ್ಕೆ ಕಾರಣವನ್ನು ತೋರಿಸ ಹೋಗಿ "ಆಗ ಭಾಷೆ ಇನ್ನೂ ಬಾಲ್ಯಾವಸ್ಥೆಯಲ್ಲಿತ್ತು. ಎಲ್ಲ ಭಾವನೆಗಳನ್ನು ಹೇಳಲು ಬೇರೆ ಬೇರೆ ಶಬ್ದಗಳು ಇರಲಿಲ್ಲ." ಎಂದೆನ್ನುತ್ತಾರೆ. ಹೀಗೆನ್ನುವ ಮೊದಲು ಅಜಸ್ರವಾದ ವೈದಿಕಶಬ್ದಸೃಷ್ಟಿಯ ಕಡೆಗೆ ಒಮ್ಮೆ ಕಣ್ಣೆತ್ತಿಯಾದರೂ ನೋಡಬೇಕಾಗಿತ್ತು. ಈಗಿದ್ದ ಸಂಸ್ಕೃತಕ್ಕಿಂತಲೂ ವೈದಿಕ- ಕಾಲದ ಶಬ್ದಸಂಪತ್ತಿ ಹೆಚ್ಚಾಗಿದ್ದು, ಪ್ರಯೋಗಗಳೂ ರೂಪಗಳೂ ಹೆಚ್ಚಾಗಿದ್ದು ವೆಂಬುದನ್ನು ನೋಡುತ್ತೇವೆ. ವೇದದಲ್ಲಿ ಸಂಕೇತಾರ್ಥವಿದೆ. ಅದು ಈಗ ಇಲ್ಲ. ತುಬಂತದ ಹತ್ತು-ಹನ್ನೆರಡು ರೂಪಗಳು ವೇದದಲ್ಲಿ ದೊರೆಯುತ್ತಿದ್ದು, ಈಗ ಒಂದೆ ಒಂದು ಉಳಿದಿದೆ. ಮುಂದೆ ಪಾಣಿನೀಯ ವ್ಯಾಕರಣದ ಕಟ್ಟು ಬಹಳೇ ಬಿಗಿಯಾದುದ ರಿಂದ, ಸುಂದರವಾಗಿ ಬೆಳೆಯುತ್ತಿದ್ದ ಸಂಸ್ಕೃತ ಭಾಷೆ ಕುಂದಿಹೋಯಿತೆಂದು ಭಾಷಾಶಾಸ್ತ್ರಜ್ಞರ ಅಭಿಪ್ರಾಯವಿದೆ. ಹೀಗಿದ್ದು, ಅವರು ಮಾಡುತ್ತಿರುವ ಮೇಲಿನ ವಿಧಾನವು ಸಾಹಸದ್ದೇ ಎನ್ನಬೇಕು. ಒಂದು ವೇಳೆ ಈಗ ನಾವು ಪ್ರೌಢವೆಂದು ಹೊಗಳಿಕೊಳ್ಳುತ್ತಿದ್ದ ಈ ನಮ್ಮ ಭಾಷೆಯು ಮೂರು-ನಾಲ್ಕು ಸಾವಿರ ವರುಷಗಳಿಗೆ ಮುಂದೆ ಜೀವದಿಂದುಳಿದರೆ, ಅಂದಿನವರು ಈ ನಮ್ಮ ಭಾಷೆಗೂ ಬಾಲ್ಯಾವಸ್ಥೆಯ ಭಾಷೆಯೆಂದು ಜಳಿಯಬಹುದು. ಏಕೆಂದರೆ ಯಾವ ಭಾಷೆಯೂ ಬಹು ದೀರ್ಘಕಾಲ ಕಳೆಯಲು ಬೇರೆ ರೂಪವನ್ನು ತಾಳುತ್ತ ಹೋಗುತ್ತದೆ. ಆದರಂತೆ ಮಾನವನ ಜೀವನೋಪಕರಣಗಳೂ ಹೆಚ್ಚು-ಕಡಿಮೆ ಯಾಗುತ್ತವೆ. ಅಂದಿನ ಉಪಕರಣಗಳಿಗೆ, ಈ ನಮ್ಮ ಭಾಷೆಯಲ್ಲಿ ಶಬ್ದಗಳಿರದು ದಕ್ಕೂ, ಮತ್ತು ಅಂದಿನ ಮಾನವನು ತಾನು ಬಳಸುತ್ತಿದ್ದ ಭಾಷೆಯನ್ನು



ಹೆಚ್ಚಾಗಿ ಪ್ರೀತಿಸುತ್ತಿರುವುದರಿಂದಲೂ, ಇಂದಿನ ನಮ್ಮ ಭೂತಕಾಲದ ಭಾಷೆಯನ್ನು ಬಾಲಭಾಷೆಯೆಂದು ಏಕೆ ಭಾವಿಸಲಿಕ್ಕಿಲ್ಲ? ಇಷ್ಟಕ್ಕೆ ಬಿಡದೆ ಈ ಲೇಖಕರು ವೇದ-ಕಾಲದ ಜನಜೀವನವು ಅನಾಗರಿಕವಾಗಿದ್ದಿತೆನ್ನುವ ದೊಡ್ಡ ಸಾಹಸಕ್ಕೂ ಕೈಯಿಕ್ಕಿದ್ದಾರೆ. ನಾಗರಿಕರೆಂದರೇನು? ನಗರಗಳನ್ನು ರಚಿಸಿಕೊಂಡು ಅಲ್ಲಿ ಸ್ಥಾಯಿಯಾದವರಲ್ಲವೆ? ಒರೆಹಗಾರರು ವೈದಿಕಕಾಲದ ಜನರನ್ನು ಕಾಡುಜನರೆಂದು ಭಾವಿಸುತ್ತಿರುವರೆ? ರಾಜ್ಯ, ಸಾಮ್ರಾಜ್ಯ, ಸ್ವರಾಜ್, ಸ್ವರಾಜ್ಯ, ಮುಂತಾದ ಶಬ್ದಗಳು, ಅಧಿರಾಜ, ಮಂತ್ರಿ, ಸೇನಾಪತಿ, ಸಮರ-ಸಚಿವ ಮುಂತಾದ ಅಧಿಕಾರಿವರ್ಗವು, 'ಅದ್ರಿಬುಧ' ಎಂಬ ಅಭೇದ್ಯವಾದ ಕೋಶಾಗಾರ, ಶತ್ರುಸೈನ್ಯದಿಂದ ಬರುವ ಬಡಿತಗಳಿಂದ ಮುಖ್ಯಸ್ಥಳಗಳನ್ನು ಸಂರಕ್ಷಿಸಲೆಂದು ಉಕ್ಕಿನಿಂದ ರಚಿಸಿದ ಕೋಟೆ-ಕೊತ್ತಳಗಳು, ಅವನ್ನು ಕಾಪಾಡುವ ದುರ್ಗರಕ್ಷಕರು, ಅನೇಕ ಬಗೆಯ ಆಯುಧಗಳು, ನಗರರಚನೆ, ನಗರಾಧ್ಯಕ್ಷರು, ಸಭೆಗಳು, ಐದಾರು ಬಗೆಯ ಕಾರಾಗೃಹಗಳ ಹೆಸರುಗಳು ನೂರು ಜನ ಕೂಡಿ ಹುಟ್ಟು ಕಡಿದು ನಡೆಯಿಸುವ 'ಅರಿತ್ರ' ಎಂಬ ಭವ್ಯವಾದ ನೌಕೆ ಇಷ್ಟೆಲ್ಲ ನಾಗರಿಕತ್ವದ ಸುಧಾರಣೆಯ ಕುರುಹುಗಳು ವೇದದಲ್ಲಿ ದೊರೆಯುತ್ತಿರುವಾಗ, ಅನಾಗರಿಕರೆಂದು ಕರೆಯುವ ಧೈರ್ಯವೆ ದೊಡ್ಡದೆಂದೇ ಹೇಳಬೇಕು. ಇನ್ನೂ ಇಂತಹವೆಷ್ಟೋ ವೇದಕಾಲದ ಉನ್ನತ ಸ್ಥಿತಿದರ್ಶಕ ಶಬ್ದಗಳದೊಂದು ಪಟ್ಟಿಯನ್ನೆ ಕೊಡಬಹುದಾಗಿತ್ತು. ಆದರೆ ವಿಸ್ತಾರ-ಭಯದ ಮೂಲಕ ಬಿಡಬೇಕಾಗಿದೆ.

ಇನ್ನುಮುಂದೆ ಲೇಖಕರು "ಇನ್ನೂ ಒಂದು ಕಾರಣವೆಂದರೆ ವೇದಗಳ ಅರ್ಥವನ್ನೋ ಭಾವವನ್ನೋ ಸುಲಭರೀತಿಯಲ್ಲಿ ಹೇಳಿಯಿದೆ ಉಪನಿಷತ್ತಿನಲ್ಲಿ" ಎಂದು ಬರೆದು, ಉಪನಿಷತ್ತುಗಳೆಂದರೆ ವೇದಗಳ ಅರ್ಥವನ್ನೆ ಪ್ರಕಟಿಸುವ ಗ್ರಂಥಗಳೆಂದು ತಾವೆ ಒಪ್ಪುತ್ತಿದ್ದಾರೆ. ಈ ವಿಷಯದಲ್ಲಿ ನಿಜವಾದ ಸಂಗತಿ ಏನೇ ಇರಲಿ, ಅವರೇ ಒಪ್ಪುತ್ತಿದ್ದಾರೆಂದ ಮೇಲೆ ನಾವೂ ಒಪ್ಪುತ್ತೇವೆ. ಉಪನಿಷತ್ತುಗಳ ವಿಷಯಕ್ಕೆ 'ಶೋಪೆನ್ ಹಾವರ್' ಎಂಬ ಪಾಶ್ಚಾತ್ಯ ತತ್ತ್ವಜ್ಞಾನಿಯು "ಉಪನಿಷತ್ತುಗಳಲ್ಲಿ ಮಾನವೀಯ ಬುದ್ಧಿ, ಜ್ಞಾನ ಇವುಗಳ ಉಚ್ಚತಮ ಫಲ ಮತ್ತು ಮನುಷ್ಯನ ಶಕ್ತಿಗೇ ಮೀರಿದ ದೈವೀಕಲ್ಪನೆಗಳು ಇರುವುದರಿಂದ, ಉಪನಿಷತ್ಕಾರರನ್ನು ಮಾನವರಲ್ಲಿ ಕಷ್ಟದಿಂದಲೇ ಎಣಿಸಬೇಕಾದೀತು" ಎಂದು ಅಭಿಪ್ರಾಯಪಟ್ಟಿದ್ದಾನೆ. "ಉಪನಿಷತ್ಕಾರರಿಗೆ ಶಾಸ್ತ್ರೀಯ ರೀತಿಯಿಂದ ವ್ಯವಸ್ಥಿತವಾಗಿ 'ಜೀವನ-ರಹಸ್ಯವು' ಒಂದು ವೇಳೆ ತಿಳಿದಿರಲಿಕ್ಕಿಲ್ಲ. ಆದರೂ ಆ ವಿಷಯದೊಡನೆ ಅವರು ತಾದಾತ್ಮ್ಯರಾಗಿ, ಆ ವಿಷಯದ ಮೇಲೆ ಒಳಿತಾಗಿ ಬೆಳಕು ಹಿಡಿದಿದ್ದಾರೆ. ವೇದಗ್ರಂಥಗಳು ಈಶ್ವರನಿರ್ಮಿತವಾದುವೆಂಬ ಕಲ್ಪನೆ ಸಯುಕ್ತಿಕವೆಂಬುದನ್ನು ವೈದಿಕ ಜ್ಞಾನ-ಕಾಂಡವು ಸಿದ್ಧಿಸಿಕೊಡುತ್ತಿದೆ. ಉಪನಿಷತ್ತುಗಳಲ್ಲಿ ಜಗತ್ತಿನಲ್ಲಿ ಎಲ್ಲಿಯೂ ಸಿಕ್ಕದ ತತ್ತ್ವಜ್ಞಾನವಿದೆ" ಎಂದು ಡಾಯ್‌ಸೇನ್ ಎಂಬೊಬ್ಬ ಪಾಶ್ಚಾತ್ಯ ಅಭ್ಯಾಸಿಯು ಹೇಳುತ್ತಾನೆ (Deussen System des Vedanta p. 50. 59). ಹೀಗಿದ್ದು ಮುಂದೆ "ಅಂತಹದೇನಿದೆ ವೇದದಲ್ಲಿ?" ಎಂದು ಕೇಳಿದರೆ, ಕೊಡುವ ಉತ್ತರವಿಷ್ಟೆ "ಒಮ್ಮೆ ಪೂರ್ತಿಯಾಗಿ ವೇದಗಳನ್ನು ಓದಿ ನೋಡಿ" ಎಂಬುದು.

ಶ್ರೀಯುತರು ಮಾಡುವ ಇನ್ನೊಂದು ವಿಧಾನವಿದು :- "ಮಾನವನ ಬುದ್ಧಿಗೆ ಮಿತಿಯಿದೆ. ಯಾವನೊಬ್ಬನ ಬರೆವಣಿಗೆ ಆ ಕಾಲಕ್ಕೆ ಸಿಕ್ಕುವ ಜ್ಞಾನಭಾಂಡಾರವನ್ನವಲಂಬಿಸುವುದು" ಎಂದು ಏನೇನನ್ನೋ ಬರೆದಿರುವರಾದರೂ, ಅವರಿಗೆ ಹೇಳಬೇಕಾದುದು ಇಷ್ಟು: "ವೇದಗಳು ಕೊಡುವ ಜ್ಞಾನವು ಆ ಕಾಲಕ್ಕೆ ತಕ್ಕಂತಿದ್ದು, ಅವುಗಳಲ್ಲಿಯ ವಿಚಾರ ೫ ಸಾವಿರ ವರ್ಷಗಳಿಗೆ ಹಿಂದಿನ ಜ್ಞಾನದಿಂದ ಮೇರೆವಡೆದಿದೆ" ಎಂತಲೆ ಅದು ಇಂದು ನಮಗೆ ಉಪಯೋಗಬೀಳಲಾರದು ಎಂದು. ಹಾಗಾದರೆ ಇಂದಿನ ಜ್ಞಾನವೂ ಹಾಗೆಯೆ ಮೇರೆವಡೆದಿರುವುದರಿಂದ ಇದು ಮುಂದಿನವರಿಗೂ ಉಪಯೋಗವಿಲ್ಲ. ಏನು! ಮಾನವನು ಜಗತ್ತಿನಲ್ಲಿ ಇದುವರೆಗೆ ಮಾಡಿದ ಜ್ಞಾನಸಾಧನೆ, ಸಂಶೋಧನೆ, ಇವೆಲ್ಲ ಮುಂದೆ ಬಹುಕಾಲ ಬಾಳುವ ತನ್ನ ವಂಶಕ್ಕೆ ಸಮೃದ್ಧ ಫಲವನ್ನು ಕೊಡುವುದಕ್ಕಲ್ಲದೆ, ಒರೆಹಗಾರರ ಅಭಿಪ್ರಾಯದಂತೆ ಎಲ್ಲವೂ ವ್ಯರ್ಥವೆ? "ಹೊಸಹೊಸ ಯೋಜನೆಗಳಿಂದ ಇಂದು ನಾವು ಅಗ್ನಿಯನ್ನು ಅದೆಷ್ಟು ವಿವಿಧರೀತಿಗಳಿಂದ ಉಪಯೋಗಿಸಿಕೊಂಡಿದ್ದರೂ, ಮೊದಲು ಅಗ್ನಿಯನ್ನು ಸಂಶೋಧಿಸಿದ ಮಾನವನ ಅದ್ಭುತ ಬುದ್ಧಿಯನ್ನು ನಾವು ಯಾವಾಗಲೂ ಹೊಗಳಬೇಕು" ಎಂದು ಸಂಶೋಧಕರು ಅನ್ನುವರಲ್ಲ! ಆದರೆ

ಸೇಫ್ಟಿ ರೇಝರ್ ೨ ಬ್ಲೇಡು ಸಮೇತ,
೫ ಆಣೆಗೆ ಒಂದು ಸೆಟ್ಟು.

೧ ಬ್ಲೇಡಿಗೆ ೬ ಉತ್ತಮ ಕ್ಷೌರ!
೫ ಬ್ಲೇಡಿಗೆ ೪ ಆಣೆ

ಲ್ಲಿಯೆ ಮತ್ತೆ ಇದಕ್ಕೆ ವಿಸಂಗತವಾಗಿ ಬರೆಯುತ್ತಾರೆ : " ಅದರ ತಂದೆಯ ಕಾಲದ ಜ್ಞಾನವು ತಂದೆ-ತಾಯಿಗಳಿಂದ ಬಂದು, ಬುದ್ಧಿಶಕ್ತಿಯಿಂದ ಈಗಿನ ಜಗತ್ತನ್ನು ತಿಳಿದು ತನ್ನ ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತದೆ. ಆ ಹೆಚ್ಚಿಸಿಕೊಂಡ ಜ್ಞಾನವನ್ನು ಮತ್ತೆ ತನ್ನ ಮಕ್ಕಳಿಗಾಗಿ ಇಡುತ್ತದೆ. ಎಂದು ಅಪರಿಹಾರ್ಯವಾದ ಅಧ್ಯಾಹಾರ.) ಹಾಗಾದರೆ ತಂದೆ-ತಾಯಿಗಳಿಂದ ಬರುತ್ತಿರುವ ಜ್ಞಾನವು—ನಮ್ಮ ಭಾರತೀಯರ ಇಂದಿನ ಜ್ಞಾನವು—ಪರಂಪರೆಯಿಂದ ಹಿಂದೆ ಹಿಂದೆ ಸರಿಯುತ್ತ ಮತ್ತೆ ವೇದಗಳು ಕೊಟ್ಟಿರುವ ಜ್ಞಾನಕ್ಕೆ ತಾಕಿದರೆ? ಅದಕ್ಕೆ ಬರೆಹಗಾರರ ತಡೆ ಯಾವುದು ?

ಓದುಗರೆ ! ಇದೊಂದು ಹೊಸ ವಿಧಾನವನ್ನು ನೋಡಿ : " ವೇದಗಳು ಮಾನವಮಾತ್ರರಿಂದ ರಚಿತವಾದುವಲ್ಲವೆಂದು ತಿಳಿದುಕೊಂಡರೆ ' ಮಾನವನಿಂದ ಅವುಗಳಿಗೆ ಟೀಕೆ-ಟಿಪ್ಪಣಿ ಬರೆಯಲಿಕ್ಕೆ ಹೇಗೆ ಸಾಧ್ಯವಾಗುವುದು? ಎಂಬ ಪ್ರಶ್ನೆ ಬರುವುದು. ದೇವನು ಬರೆದುವುಗಳ ಮೇಲೆ ಮಾನವನು ಟೀಕೆ ಬರೆಯುವನೆಂದ ಮೇಲೆ, ದೇವನಿಂದ ತಿಳಿಸಿಹೇಳಲಿಕ್ಕೆ ಆಗದುದನ್ನು ಮಾನವನು ಮಾಡಲು ಸಮರ್ಥನಾಗುವನೆಂಬ ಮಾತು ಸಿದ್ಧವಾಗುತ್ತದೆ." ಭೇಷ್ ! ಒಳ್ಳೆಯ ವಿಧಾನ ! ಯಾವುದೊಂದು ಗ್ರಂಥದ ಕರ್ತನಿಗೆ ತಿಳಿಯದಿದ್ದ ವಿಷಯವನ್ನು ತಿಳಿಸುವ ಕೆಲಸ ಟೀಕಾಕಾರನದೆಂದು ಯಾರು ಹೇಳಿದರೋ, ಹಾಗೆ ಹೇಗೆ ಭಾವಿಸಿದರೋ ಕಾಣೆವು. ನಮ್ಮಲ್ಲಿ ಸಾಮಾನ್ಯವಾಗಿ ಸಂಸ್ಕೃತಟೀಕೆಗಳು ಎರಡುಬಗೆಯವು. ಒಂದು ಲಲಿತವಾಙ್ಮಯಗಳ ಮೇಲೆ ಇದ್ದುವು; ಇನ್ನೊಂದು ಶಾಸ್ತ್ರೀಯ ಗ್ರಂಥಗಳ ಮೇಲೆ ಬರೆದುವು. ಮೊದಲನೆದರಲ್ಲಿ ಟೀಕಾಕಾರನು ಮಾಡುತ್ತಿರುವ ಕೆಲಸವೆಂದರೆ, ಕವಿಯು ಯಾವುದೊಂದು ಭಾವವನ್ನೋ ರಸವನ್ನೋ ಅಲಂಕಾರವನ್ನೋ ತುಸು ಶಬ್ದಗಳಲ್ಲಿ, ಒಂದು ವಿಶಿಷ್ಟ ರೀತಿಯಲ್ಲಿ ಒಂದು ಬಗೆಯಭಾಷೆಯ ಬಿಗುಹಿನಿಂದ ಇಡುವನು. ಆ ಭಾವ, ಆ ರಸ, ಅಲಂಕಾರಗಳನ್ನು ಆಯಾಶಾಸ್ತ್ರಗಳ ಸಹಾಯದಿಂದ ಅಭ್ಯಾಸಿಗಳಿಗೆ ಉಪಕಾರಿಯಾಗುವಂತೆ ವಿಶದಮಾಡಿ ತೋರಿಸುವುದು. ಕಠಿನ ಶಬ್ದಗಳಿಗೆ ಸುಲಭ ಶಬ್ದಗಳಿಂದ ಅರ್ಥ ಹೇಳುವುದು. ಅದರಲ್ಲಿ ಬಂದ ಪ್ರಯೋಗ-ರೂಪಗಳನ್ನು ವ್ಯಾಕರಣದ ರೀತಿಯಿಂದ ತೋರಿಸುವುದು ಇದು. ಇನ್ನು ಶಾಸ್ತ್ರೀಯ ಗ್ರಂಥಗಳ ಮೇಲೆ ಬರೆಯುವ ಟೀಕೆಯ ಉದ್ದೇಶ: ಆ ಗ್ರಂಥದ ಸಿದ್ಧಾಂತದ ಮೇಲೆ ಬರಲಿರುವ ಆಕ್ಷೇಪಣೆ, ಮೂಲಗ್ರಂಥದ ಸಿದ್ಧಾಂತಕ್ಕೆ ವಿರುದ್ಧವಾದ ಸಿದ್ಧಾಂತ, ಇವುಗಳನ್ನು ಅನೇಕ ಶಾಸ್ತ್ರಗಳ ಸಹಾಯದಿಂದ ಖಂಡಿಸಿ, ಗ್ರಂಥಕಾರನ ಸಿದ್ಧಾಂತವನ್ನು ಮಂಡಿಸುವುದು. ಹೀಗಿದ್ದು, ಎಂದೂ ಕೇಳದ ಮೇಲಿನ ವಿಧಾನವನ್ನು ಇಂದು ಹೊಸತಾಗಿ ಕೇಳುತ್ತಿದ್ದೇವೆ. ಈ ಮೇಲಿನ ವಿಚಿತ್ರವಿಧಾನದಿಂದಲೆ " ದೇವನ ಭಾಷೆ ದೇವನಿಗೇ ತಿಳಿಯುವುದು, ಮಾನವನಿಗಲ್ಲ. ಅಥವಾ ಮಾನವನಿಗೆ ತಿಳಿಯುವುದೆಂದಮೇಲೆ ದೇವನದಲ್ಲ " ಸರಿ. ಸರಳವಾದ ನ್ಯಾಯಪದ್ಧತಿ. ಆದರೆ ದೇವನದೊಂದು ಬೇರೆ ಭಾಷೆಯಿದೆಯೆಂಬುದನ್ನು ನಾವು ಇದುವರೆಗೂ ಕೇಳಿದ್ದಿಲ್ಲವಲ್ಲ. ಆದರೂ ಲೇಖಕರಿಗೆ ಹೀಗೆ ಹೇಳಬಯಸುತ್ತೇವೆ : " ನಿಮ್ಮಂತೆ ನಾವು ದೇವರನ್ನು ಪಶು-ಪಕ್ಷಿಯಂತೆ ಎಂದು ಭಾವಿಸಿಲ್ಲ. ನಮ್ಮ ದೇವನು ಇದ್ದುದೆ ಆದರೆ ಅವನು ಸರ್ವಜ್ಞನು, ಸರ್ವಸಮರ್ಥನು; ವಿಶ್ವದ ಎಲ್ಲ ಭಾಷೆಗಳು ಅವನಿಂದೆ ಹೊರಡುವವು. ಅವನು ಯಾವುದೆ ಭಾಷೆಯಲ್ಲಿ ಮಾತನಾಡಬಲ್ಲ. ತನ್ನ ಆಜ್ಞೆಯನ್ನು ಕೊಡಬಲ್ಲ " ಎಂದು. ಇದರ ಮುಂದೆ " ವೇದಾಧಿಕಾರವನ್ನು ಕೆಲವರಿಗೆ ಮಾತ್ರ ಇಟ್ಟುದು ಅನ್ಯಾಯವೂ ಅಸಂಗತವೂ ಆಗಿದೆಯೆಂಬ ಭಾವವನ್ನು ವ್ಯಕ್ತಮಾಡಿ ಚೇಷ್ಟೆಮಾಡಿದ್ದಾರೆ. ನಾವೂ ಇದಕ್ಕೆ ಪ್ರತ್ಯುತ್ತರವೆಂದು " ಸ್ವಾಮಿ, ಉಪಯೋಗವು ತುಸುವೂ ಇಲ್ಲದುದನ್ನು ನಾವು ಇಟ್ಟುಕೊಂಡರೂ ನಿಮಗೆ ಅಸೂಯೆಯೆ ? " ಎಂದು ಕೇಳುತ್ತೇವೆ. ಹಾಗೆ ಏಕೆ ಮಾಡಿದರೆಂಬುದು ಇಲ್ಲಿ ಪ್ರಸ್ತುತವಿಲ್ಲದ ಸಮಾಜಶಾಸ್ತ್ರದ ವಿಷಯ.

ವೇದಗಳಿಗೆ ಅಪೌರುಷಯವೆಂದುದೇಕೆ? ಎಂಬುದನ್ನು ಹೇಳಹೊರಟು ಆಫ್ರಿಕೆಯಲ್ಲಿಯ ಯಾವುದೋ ಒಂದು ಕಾಡು-ಜನರಂತಹ ಜನರ ಭಾವನೆಗಳನ್ನೋ, ತಿಳವಳಿಕೆಗಳನ್ನೋ ತಂದು ಮಾಂತ್ರ ಆರ್ಯರ ಕೊರಳಿಗೆ ತಳಕುಹಾಕಿದ್ದಾರೆ. ಅದಕ್ಕಾಗಿ ನಾವು ಬರೆಹಗಾರರನ್ನು ವಿನಯದಿಂದ ಕರೆಯುತ್ತೇವೆ " ವೇದಗಳಲ್ಲಿ ಇಂತಹವುಗಳನ್ನು ತೋರಿಸಿ ಕೊಡಬನ್ನಿ " ಎಂದು. ಇಷ್ಟೆ ಅಲ್ಲ, ಇಂದು ನಮಗೆ ಅನೇಕ ಪ್ರಯೋಗಗಳಿಂದ ಗೊತ್ತಾಗುತ್ತಿದ್ದ ಲೈಂಗಿಕಶಾಸ್ತ್ರದ (Sexology) ಸಿದ್ಧಾಂತಗಳು, ಸಮ-ಸಮಾಪವಾಗಿ ವೈದಿಕ ಆರ್ಯರಿಗೂ ಗೊತ್ತಿದ್ದುವೆಂಬ ಮಾತು ಕಂಡುಬರುವುದನ್ನೂ ಸೂಚಿಸುತ್ತೇವೆ. ಇನ್ನು ಅವರ ಕೊನೆಯ ವಿಧಾನವೆಂದರೆ ವೇದಕಾಲದಲ್ಲಿ ತಾಮ್ರವೊಂದೇ ಗೊತ್ತಿದ್ದಿತೆಂಬುದು ಇದೂ ಅಸಿದ್ಧವಾದ ಮಾತು. ಅವರಿಗೆ ಬಂಗಾರ, ತಾಮ್ರ, ಬೆಳ್ಳಿ, ಕಂಚು, ಕಬ್ಬಿಣ, ಉಕ್ಕು ಇವೆಲ್ಲ ಗೊತ್ತಿದ್ದವೆಂದು ಕಂಡುಬಂದಿದೆ. ಇರಲಿ, ಸಂಪಾದಕರು ' ವಿ.ಸೂ.' ಯಲ್ಲಿ ಬರೆಹಗಾರರದು ಸ್ವತಂತ್ರವಿಚಾರದ ದಾರಿ ಎಂದು ಹೇಳಿದ್ದಾರೆ. ಸ್ವತಂತ್ರವಿಚಾರದ ದಾರಿ ಬೇಕೆಂಬ ಮಾತು ನಮಗೂ ಮಾನ್ಯವಿದೆ. ಆದರೂ ಸ್ವತಂತ್ರವಿಚಾರದ ದಾರಿಗೂ ಒಂದು ದಾರಿ ಇದೆ ಎಂಬುದನ್ನು ಯಾವ ಬರೆಹಗಾರರೂ ಮರೆಯಕೂಡದು.

ವಸಂತ

ಸಂಪಾದಕರು—
ಟಿ. ಎನ್. ಕೆ. ಕುಲಕರ್ಣಿ, ಎಂ.ಎ.

(ಸಚಿತ್ರ ಲಲಿತ ಮಾಸಪತ್ರಿಕೆ)

ಕರ್ನಾಟಕದ ಸುಪ್ರಸಿದ್ಧ ಲೇಖಕರ ಲೇಖನಗಳನ್ನೋದಿರಿ !

ಬೆಲೆ ೨ ಆಣೆ.

ವಸಂತ ಆಫೀಸ್, ಗದಗು

ಮಿತ್ರ, ಮಂಗಪ್ಪ

★

ಶ್ರೀ. “ರಾಮು”

[ಒ. ಹೆನ್ರಿಯವರ 'Telemachus, Friend' ಎಂಬ ಕಥೆಯ ಅನುವಾದ]

ಹರಿಹರಪ್ಪ ಮಂಗಪ್ಪರ ಪಣದಲ್ಲಿ ಹರಿಹರಪ್ಪನು ಸಂಪೂರ್ಣವಾಗಿ ಗೆದ್ದ. ಅಷ್ಟೊಂದು ಪ್ರೀತಿಯಿಂದ ಹೆಂಡತಿಯಾಗಿದ್ದ ಚೆಂದಮ್ಮ, ಹರಿಹರಪ್ಪನ ಕಿವಿಗೆ ಮರದ ಕಡೆಗೋಲಿನಿಂದ ಏತಕ್ಕಾಗಿ ಹೊಡೆದಿರಬಹುದು?

★

“ಇಂಥಾ ಬೆಳದಿಂಗಳ ರಾತ್ರಿ ಬಂದರೆ ಒಂಟಿಯಾಗಿರುವವರಿಗೆ ಎಷ್ಟು ಕಷ್ಟ ಅಲ್ವೆ?” ಎಂದಳು.

ಧಾರವಾಡದಿಂದ ಚಿತ್ರದುರ್ಗಕ್ಕೆ ಹಿಂದಿರುಗಿ ಬರುತ್ತಾ ಹರಿಹರದಲ್ಲಿ ಇಳಿದೆನು;— ತುಂಗಭದ್ರೆಯಲ್ಲಿ ಮಿಂದು ಹರಿಹರೇಶ್ವರನ ದರ್ಶನಪಡೆಯುವ ಸಲುವಾಗಿ. ರೈಲ್ವೆ ಸ್ಟೇಷನ್ನಿಗೆ ಹತ್ತಿರದಲ್ಲೇ ಇದ್ದ ಹೋಟಲಿನಲ್ಲಿ ತಂಗಿದೆನು. ಆ ಹೋಟಲು ಮಾಲೀಕನ ಬಲಗಿವಿಯನ್ನು ನೋಡಿ, ಸ್ವಲ್ಪ ಕುತೂಹಲದಿಂದಲೇ, ‘ಯಾವ ಪ್ರಾಣಿಯ ದಂತಪಂಕ್ತಿಗಳಿಗೆ, ಪಂಜರಪ್ರಹಾರಕ್ಕೆ, ಅದು ಸಿಕ್ಕು ಹಾಗೆ ವಿಕಾರಾಕೃತಿಯನ್ನು ಹೊಂದಿದೆ?’ ಎಂದು ಪ್ರಶ್ನಿಸಿದೆನು. ಬೇಟೆಯಾಡುವ ಹವ್ಯಾಸವು ನನಗೆ ಸ್ವಲ್ಪ ಇದ್ದುದರಿಂದ, ಕಾಡುಮೃಗಗಳಿಂದ ಆಗಬಹುದಾದ ಅನಿರೀಕ್ಷಿತ ಅನಾಹುತವನ್ನು ತಿಳಿದುಕೊಳ್ಳುವ ಆಸಕ್ತಿ ನನಗಿತ್ತು.

“ಈ ಕಿವಿಯೆ! ಹ! ಹಾ!! ಈ ಕಿವಿ— ಈ ಕಿವೀ ಆವಿಚ್ಛಿನ್ನ ಸ್ನೇಹದ ಕುರುಹು!” ಎಂದು ಹರಿಹರಪ್ಪ ಹೋಟಲ ಮಾಲೀಕನು, ತನ್ನ ಕಿವಿಯನ್ನು ಮೃದುವಾಗಿ ನವರಿಕೊಳ್ಳುತ್ತಾ ಹೆಮ್ಮೆಯಿಂದ ಹೇಳಿದನು.

“ದುರ್ಘಟನೆಯೆ?” ಎಂದು ನಾನು ಪುನಃ ಒತ್ತಾಯಮಾಡಿ ಕೇಳಿದೆನು.

“ಸ್ನೇಹವು ದುರ್ಘಟನೆಯಲ್ಲ” ಎಂದು ಹರಿಹರಪ್ಪನು ವೇದಾಂತಹೇಳುವವನಂತೆ, ಗಾಂಭೀರ್ಯದಿಂದ ಹೇಳಿದನು.

ನಾನು ಸುಮ್ಮನಿದ್ದೆನು. ಮುಖದಲ್ಲಿ ಕುತೂಹಲವನ್ನು ವ್ಯಕ್ತಗೊಳಿಸಿದೆನು.

ಕೈಯಲಿದ್ದ ಬೀಡಿಯನ್ನು ತುಟಿಗಳಿಗೆ ಹಚ್ಚಿ, ಕಡ್ಡಿಯನ್ನು ಕೆರೆದು ಬೀಡಿಹಚ್ಚಿಸಿ, ದೀರ್ಘವಾಗಿ ಉಸಿರೆಳೆದು, ಬಾಯಿಂದ ಸಣ್ಣಗೆ ಹೊಗೆಯನ್ನು ಬಿಟ್ಟು, ಆ ಹೊಗೆಯ ಕೊಳವೆಯಲ್ಲಿ ಕಡ್ಡಿಯನ್ನು ಆರಿಸಿ ಬಿಸಾಕಿ, ನಂತರ ಮೂಗಿನಲ್ಲಿ ಯಥೇಚ್ಛವಾಗಿ ಹೊಗೆ ಯಾಡಿಸಿ, ಹರಿಹರಪ್ಪನು ಹೇಳತೊಡಗಿದನು:

“ಹಿಂದೆ ನನಗೊಬ್ಬ ಸ್ನೇಹಿತನಿದ್ದನು; ಅವನ ಹೆಸರು ಮಂಗಪ್ಪ. ಅವನ ಮುಖವನ್ನು ನೋಡೇ ಆ ಹೆಸರು ಇಟ್ಟಿದ್ದರು ಎಂದು ಕಾಣುತ್ತೆ. ಆದರೂ ನನಗೂ ಅವನಿಗೂ ಬಹಳ ಸ್ನೇಹ ವಿತ್ತು. ಪರಮಾಪ್ತ ಗೆಳೆಯರಾಗಿದ್ದೆವು. ನಾವು ಒಟ್ಟಿಗೆ ಹುಟ್ಟಿ ಬೆಳೆದವರು. ಇಬ್ಬರೂ ಒಂದೇ ಊರಿನವರು. ಒಟ್ಟಿಗೆ ಶಾಲೆಯನ್ನು ಸೇರಿ, ಜತೆಯಾಗಿಯೇ ಫೇಲಾಗಲಾರಂಭಿಸಿದೆವು. ನಮ್ಮ ನಮ್ಮ ಮನೆಯವರು ನಮ್ಮನ್ನು ಒಟ್ಟಿಗೆ ಶಾಲೆಯಿಂದ ಬಿಡಿಸಿಬಿಟ್ಟರು. ಅನಂತರ ಜಂಟಿಯಾಗಿ ಕೂಲಿಕೆಲಸ, ಕಳ್ಳತನ, ದೇಶಸಂಚಾರ, ಭಿಕ್ಷಾಟನೆ ಹೀಗೆ ಒಂದೊಂದಾಗಿ ಮಾಡಿ, ಕಡೆಯದರಲ್ಲಿ ಸ್ವಲ್ಪ ದುಡ್ಡು ಸಂಪಾದಿಸಿದೆವು. ಅನಂತರ ಜಂಟಿಯಾಗಿ ಏಳು ವರ್ಷಗಳ ತನಕ ಹತ್ತಿಯ ವ್ಯಾಪಾರಮಾಡಿದೆವು. ಹಾಗೆ ವ್ಯಾಪಾರ ಮಾಡುತ್ತಿರುವಾಗ, ಏಳನೆಯ ವರ್ಷದಲ್ಲಿ ಒಂದು ಸಂಜೆ ನಾವಿಬ್ಬರೂ ಹತ್ತಿಯಖರೀದಿಗೆಂದು ಈ ಊರಿಗೂ ಬಂದು, ಆಗಲೇ ಹೊತ್ತಾಗಿ

ದ್ದುದರಿಂದ ಯಾವುದಾದರೂ ಹೋಟಲಿನಲ್ಲಿ ತಂಗಿದ್ದು, ಮರುದಿವಸ ಗಿರಾಕಿಗಳನ್ನು ಹುಡುಕಬೇಕೆಂದು ಒಟ್ಟಿಗೆ ಮನಸ್ಸು ಮಾಡಿ, ಹೊಟಲ ಒಳಹೊಕ್ಕೆವು.

ಗಂಟುಮೂಟೆಗಳನ್ನಿಟ್ಟು ಕುಳಿತರೆ, ನಮ್ಮನ್ನು ವಿಚಾರಿಸಿಕೊಳ್ಳಲಿಕ್ಕೆ ಯಾರು ಬರುತ್ತಾರೆ ಅಂತೀರಿ. ಹೋಟೆಲ ಮಾಲೀಕಳು ಚೆಂದವ್ವ. ಆಕೆ ವಿಧವೆ. ವಯಸ್ಸು ಮೂವತ್ತಕ್ಕೆ ಏರಿರಲಿಲ್ಲ. ಚೆಂದವ್ವನು ಹೇಗಿದ್ದಳೆಂದರೆ, ಸಂನ್ಯಾಸಿಗೇ— ಹಣ್ಣು ಹಣ್ಣು ಮುದಿ ಸಂನ್ಯಾಸಿಗೇ—ಮದುವೆ ಹುಚ್ಚು ಹಿಡಿಸುವಹಾಗಿದ್ದಳು. ಅವಳ ಮುಖದ ಕೆಂಪು, ಮುಂಜಾನೆ ಆಕಾಶದಲ್ಲಿಯ ಎರಚಿದ ರಂಗು. ತುಟಿಗಳು ಗುಲಾಬಿದಳಗಳು. ನಮ್ಮ ಹೆಸರು, ಕುಲ, ಕಸಬನ್ನು ವಿಚಾರಿಸಿ, ನಮಗೆ ಇಳಿದುಕೊಳ್ಳುವುದಕ್ಕೆ ಕೊಠಡಿಯನ್ನು ತೋರಿಸುತ್ತಾ "ನಿಮ್ಮ ಊರು ಯಾವುದು?" ಎಂದಳು.

"ಬೆನ್ನೂರು" ಎಂದು ನಾನು ಆಸಕ್ತಿಯಿಂದ ಉತ್ತರಕೊಟ್ಟೆನು. ಅವಳೊಡನೆ ಮಾತನಾಡುವುದಕ್ಕೆ ನನಗೆ ಬಹಳ ಇಷ್ಟವಾಗಿತ್ತು. ಅದುವರೆಗೂ ಹೆಂಗುಸರ ಹತ್ತಿರ ಹೆಚ್ಚು ಮಾತನಾಡಿದವನೇ ಅಲ್ಲ ನಾನು.

"ಚಿಕ್ಕ ಬೆನ್ನೂರು" ಎಂದು, ತಾನು ಮೆಲ್ಲುತ್ತಿದ್ದ ಎಲಡಕೆಯ ಮುದ್ದೆಯ ಮಧ್ಯ ಧ್ವನಿಯನ್ನು ತೂರಿಸಿ ಮಂಗಪ್ಪನು ಕಿರಿಚಿದನು;— ನನ್ನ ಮಾತಿಗೆ ವಿರೋಧವಾಗಿ, ಹೆಚ್ಚಿನ ವಿದ್ಯೆಯನ್ನು ಪ್ರದರ್ಶಿಸುವುದಕ್ಕಾಗಿ, ಆತ್ಮಪ್ರಶಂಸೆಗಾಗಿ.

ನಮ್ಮಿಬ್ಬರ ಸ್ನೇಹದ ಬಿರುಕನ್ನು ನಾನು ಕೂಡಲೇ, ಮಂಗಪ್ಪನ ಆ ಪ್ರತಿಷ್ಠೆಯಲ್ಲಿ ಗಮನಿಸಿಬಿಟ್ಟೆನು. ನನ್ನ ಮಾತಿಗೆ ಅಡ್ಡಬಂದರೆ ನನಗೆ ಮಿತಿಮೀರಿದ ಕೋಪಬರುತ್ತೆಂದು ಜನ್ಮದಾರಭ್ಯ ಮಂಗಪ್ಪನು ತಿಳಿದಿಕೊಂಡಿದ್ದರೂ, ಇದುವರೆಗೂ ಅದೇ ಕಾರಣದಿಂದ ನನ್ನ ಮಾತಿಗೆ ಒಂದು ಮಾತನ್ನೂ ಎದುರು ಆಡದಿದ್ದರೂ, ಆ ದಿವಸ ಚೆಂದವ್ವನೆದುರಿಗೆ ನನ್ನ ಮಾತಿಗೆ ಅಡ್ಡಬಂದು, ತನ್ನ ಟಾವುಟವನ್ನು ಹಾರಿಸಿದನು. ನಿಜ, ಭೂಗೋಳದ ಪುಸ್ತಕದಲ್ಲಿ ಚಿಕ್ಕಬೆನ್ನೂರು ಎಂತಲೇ ಬರೆದಿದೆ; ಆದರೆ ಇದುವರೆಗೂ ಮಂಗಪ್ಪನೇ ಮಂಗನ ಹಾಗೆ 'ಬೆನ್ನೂರು' ಎಂದೇ ಹೇಳುತ್ತಿದ್ದ!

ನಾನು ಎದುರು ಮಾತನಾಡಲಿಲ್ಲ. ಸುಮ್ಮನಾಗಿಬಿಟ್ಟೆನು. ಆ ರಾತ್ರಿ ಅಲ್ಲಿಯೇ ತಂಗಿದ್ದು, ಬೆಳಗ್ಗೆ ಗಿರಾಕಿಗಳನ್ನು ಹುಡುಕಿಕೊಂಡು ಹೊರಟೆವು. ನಮ್ಮಿಬ್ಬರ ಮನಸ್ಸಿನಲ್ಲಿಯೂ ಯಾವ ವಿಷಯವು ಕುದಿಯುತ್ತಿತ್ತು ಎಂಬುದನ್ನು ಅರಿಯದಿರಲಿಕ್ಕೆ ನಮ್ಮ ಸ್ನೇಹವೇನೂ ಇಂದು ನಿನ್ನೆಯದಾಗಿರಲಿಲ್ಲ.

ದಾರಿಯಲ್ಲಿ ಮಂಗಪ್ಪನು, ಇದ್ದಕ್ಕಿದ್ದಹಾಗೆ, "ನೋಡು ಹರಿಹರ, ನನ್ನ ವಂಶದ ಅಭಿವೃದ್ಧಿಗಾಗಿ, ನಾನು ಸತ್ತನಂತರ ನನ್ನ ಕರ್ಮಾದಿಗಳನ್ನು ಮಾಡಲು ಸಂತಾನ ಹೊಂದುವುದರ ಸಲುವಾಗಿ, ತಿಳಿಯಿತೇ—ಚೆಂದವ್ವನಿಗೆ ಒಳ್ಳೆಯ ಗಂಡಸನ್ನು ಒದಗಿಸಿಕೊಡುವುದರ ಸಲುವಾಗಿ, ಅವಳನ್ನು *ಸೀರುಡಿಕೆ ಲಗ್ನ ಆಗಬೇಕೆಂದಿದ್ದೇನೆಂಬುದು ನಿನ್ನ ಅರಿವಿಗೂ ಬಂದಿದೆಯಷ್ಟೆ?" ಎಂದನು. ಮಂಗಪ್ಪನ ಮಾತೇ ಹಾಗೆ—ಸುತ್ತುಗೊಂಡು, ಸುತ್ತುಗೊಂಡು, 'ಭೈರ್ಗಿ ಕೊರ್ದಂಗೆ'.

ನಾನು "ಓಹೊ! ತಿಳಿಯದೆ ಏನು? ನಿನ್ನೆ ರಾತ್ರಿ ನನ್ನ ಮಾತಿಗೆ ಅಡ್ಡಲಾಗಿ ನೀನು 'ಚಿಕ್ಕಬೆನ್ನೂರು' ಎಂತ ಭೂಗೋಳದ ಮೇಷ್ಟರಂತೆ, ಪೋಲೀಸಿನವನ ದರ್ಪದಿಂದ ಹೇಳಿದಾಗಲೇ, ನಿನ್ನ ಮನಸ್ಸು ನನ್ನ ಜನ್ಮಕ್ಕೆ ಗಂಟುಬೀಳಲಿರುವ ಚೆಂದವ್ವನ ಕಾಲುಬೆರಳುಗಳಲ್ಲಿ ಸಿಕ್ಕು, ಬೋನಿಗೆ ಬಿದ್ದ ಇಲಿಯಹಾಗೆ ಚಿಲಿಪಿಲಿ, ಪಿಲಿಚಿಲಿ ಎಂತ ಒದ್ದಾಡುತ್ತಾ ಇದೆ ಎನ್ನುವುದನ್ನು ತಿಳಿದುಕೊಂಡೆ. ಅಪ್ರೆ ನೋಡು, ಮಂಗಪ್ಪ! ಹರಿಹರನ ಕೈಹಿಡಿಯಲಿರುವ ಚೆಂದವ್ವನಿಗೆ ಅತ್ತೆಮನೆಯ ಹೆಸರು ಸೀತಾಗಿರಿಜೆ ಎಂದು ಇಡೋಣವೇ ಅಥವಾ ಶ್ರೀಗೌರಿ ಎಂದು ಇಡೋಣವೇ ಎಂತ ನಾನು ಆಲೋಚನೆ ಮಾಡುತ್ತಿರುವುದು ನಿನಗೆ ತಿಳಿದಿದೆ, ತಾನೆ?" ಎಂದು, ಅವನಷ್ಟೇ ಉದ್ದವಾಗಿ ಹೇಳಿಬಿಟ್ಟೆನು.

ಕಡ್ಡಿಕೆರೆದು ಬೀಡಿ ಹತ್ತಿಸಿದ ನಂತರ, ಮಂಗಪ್ಪನು, 'ನಮ್ಮಿಬ್ಬರಿಗೂ ಮಧ್ಯ ದಾರಿ ಬಿಡುತ್ತದೆ, ಹಾಗಾದರೆ, ಇನ್ನ್ಯಾವ ವಿಷಯವಾಗಿದ್ದರೂ, ನಿನಗೇ ಇರಲಿ ನನಗೆ ಬೇಡ ಎನ್ನುತ್ತಿದ್ದೆ. ಆದರೆ ನೋಡು ಹರಿಹರ, ಹೆಂಗುಸಿನ ಕಡೆಗಣ್ಣಿನ ನೋಟ ಎನ್ನುವುದು ಹೊಳೆಯಲ್ಲಿಯ ಸುಳಿಯ ಹಾಗೆ. ಸ್ನೇಹದ ದೋಣಿಯನ್ನು ಗಿರ್ರನೆ ತಿರುಗಿಸಿ ತಳಕ್ಕೆ ಒಯ್ದು ನುಚ್ಚುನೂರು ಮಾಡುತ್ತೆ, ಒಂದು ಕ್ಷಣದಲ್ಲಿ. ನಮ್ಮ ಸ್ನೇಹ ಈಗ ಚೆಂದವ್ವನ ದೃಷ್ಟಿಗೆ ಬಿದ್ದಿದೆ. ಅದರ ಬಿರುಗಾಳಿಗೆ ಸಿಕ್ಕಿದೆ' ಎಂದು ವ್ಯಾಖ್ಯಾನಮಾಡಿದನು. ಬೀಡಿ ಹಚ್ಚಿದನೆಂದರೆ ಆಯ್ತು, ಓದಿದವರು ಮಾತಾಡಿದ ಹಾಗೇ ಮಂಗಪ್ಪನು ಮಾತನಾಡುವುದು. ಅದರಲ್ಲೂ ಜೈಮಿನಿಯನ್ನು ಸಹ ಚಿಕ್ಕಂದಿನಿಂದ ಬಾಯಿಪಾಠಮಾಡಿದ್ದನು. ಅರ್ಧ ಮುಕ್ಕಾಲು ಬೀಡಿ ಸೇದಿದನಂತರ—ಬೀಡಿಯನ್ನು ಸೇದಿದ ಹಾಗೂ ಅವನು ಬುದ್ಧಿವಂತರ ಹಾಗೆ ಮಾತಾಡುವುದು ಹೆಚ್ಚಾಗುತ್ತೆ—ಅವನು "ಅರ್ಜುನ ಮಳೆಗೆ ಅಡ್ಡಬಾಣ ಹೂಡಿ ಸ್ನೇಹಿತ ಅಗ್ನಿಗೆ ಸಹಾಯ ಮಾಡಿ ಹಾವಿನ ಹಗೆ ಕಟ್ಟಿಕೊಂಡ ಹಾಗೆ, ಕರ್ಣ ರಾಜ್ಯಬಿಟ್ಟು ದುರ್ಯೋಧನನಿಗೆ ಸಹಾಯಮಾಡಿ ಸಾವು ಕಟ್ಟಿಕೊಂಡಹಾಗೆ, ಬೇರೆ ಯಾವುದರಲ್ಲಾದರೂ ಸೈ, ನಾನು ನಿನಗೆ ಬೆಂಬಲ; ಆದರೆ ಚೆಂದವ್ವನ ವಿಷಯದಲ್ಲಿ ಮಾತ್ರ ನಮ್ಮನಮ್ಮ ಹುಷಾರಿ ನಮಗೆ. ಇದರಲ್ಲಿ ಪಾಂಡವರ ಹಾಗಲ್ಲಾ" ಎಂದನು.

ಆಮೇಲೆ ನಾನೂ ಬೀಡಿ ಹತ್ತಿಸಿದೆನು. ಮಂಗಪ್ಪನಿಗೆ ಉತ್ತರ ಕೊಡಲು, ಬೀಡಿಹತ್ತಿಸದೇ ಇದ್ದರೆ ಆಗುವುದಿಲ್ಲ. ನನಗೆ ಬುದ್ಧಿ ಚುರುಕು ಆಗುತ್ತೆ— ಬೀಡಿ ಹೊಗೆ ಗಂಟಲಲ್ಲಿ ಇಳಿದರೆ ಅರ್ಧ ಬೀಡಿ ಮುಗಿದಮೇಲೆ ನಾನು ಕೆಲವು ನಿಯಮಗಳನ್ನು ರಚಿಸಿ ಹೇಳಿದೆನು; "ನನ್ನದೂ, ನಿನ್ನದೂ, ಪುರಾತನ ಕಾಲದ ಸ್ನೇಹ,

---

* ಕೆಲವು ಮತಸ್ಥರಲ್ಲಿ ಬಹಳ ಹಿಂದಿನಕಾಲದಿಂದ ನಡೆದುಕೊಂಡು ಬಂದಿರುವ ವಿಧವಾವಿವಾಹದ ಹೆಸರು.

ಮಂಗಪ್ಪ. ದೋಣಿಹಾಗೆ ಎಂತ ನೀನೇ ಹೇಳಿದೆ. ದೋಣಿ ಇರುವುದು ನದಿಯನ್ನು ದಾಟುವುದಕ್ಕೆ-ನದಿಯಲ್ಲಿ ಮುಳುಗುವುದಕ್ಕಲ್ಲ ಚೆಂದವ್ವ ನಮ್ಮ ಸ್ನೇಹದ ಮಧ್ಯ ಏತಕ್ಕೆ ಬರಬೇಕು? ಇಬ್ಬರೂನೂ ಅವಳನ್ನ ಲಗ್ನ ಆಗುವುದಕ್ಕೆ ಪ್ರಯತ್ನಮಾಡುತ್ತಿದ್ದೇವೆ. ಮಾಡೋಣ. ಆದರೆ ನಮ್ಮ ನಮ್ಮ ಪ್ರಯತ್ನದಲ್ಲಿ ಒಬ್ಬರಿಗೊಬ್ಬರಿಗೆ ಮೋಸ ಬೇಡ. ಇಬ್ಬರೂ ರಾಜಾರೋಷಾಗೇ ಪ್ರಯತ್ನ ಮಾಡೋಣ. ಗುಟ್ಟೇ ಬೇಡ. ಒಬ್ಬರ ಬೆನ್ನ ಹಿಂದೆ ಒಬ್ಬರು ಪ್ರಯತ್ನ ಮಾಡುವುದು ಬೇಡ. ಇಬ್ಬರೂ ಇದ್ದಾಗಲೇ ಪ್ರಯತ್ನ ನಡೆಯಬೇಕು. ಒಬ್ಬನ ಸಮಕ್ಷಮದಲ್ಲೇ ಇನ್ನೊಬ್ಬನ ಪ್ರೇಮ ಸಲ್ಲಾಪ ನಡೆಯಬೇಕು. ಒಬ್ಬೊಬ್ಬರೇ ಇದ್ದಾಗ ಚೆಂದವ್ವನ ಜತೆ ಮಾತೇ ಆಡಕೂಡದು. ಹೀಗೆ ಬಹಿರಂಗವಾಗಿ ಅವಳನ್ನು ಗೆಲ್ಲುವುದಕ್ಕೆ ಇಬ್ಬರೂ ಜಂಟಿಯಲ್ಲೇ ಸ್ನೇಹಿತರಾಗಿ ಪ್ರಯತ್ನ ಮಾಡೋಣ. ಅವಳು ಯಾರನ್ನಾದರೂ ವರಿಸಲಿ. ಅನಂತರ ಸೋತವರು ಹೊರಟುಹೋಗಲಿ. ಸ್ನೇಹ ಏಕೆ ನುಚ್ಚುನೂರಾಗಬೇಕು!"

ನನ್ನ ಬೆನ್ನಿನ ಮೂಳೆಗಳೆಲ್ಲವೂ ಪುಡಿಪುಡಿಯಾಗುವಹಾಗೆ, ನನ್ನ ಬೆನ್ನಿನಮೇಲೆ ಸ್ನೇಹದಿಂದ ಚಪ್ಪರಿಸಿ ಮಂಗಪ್ಪನು ಹೇಳಿದನು: "ಭೇಷ್! ಹರಿಹರ. ನಿನ್ನ ಬುದ್ಧಿ ಬಲು ಚುರುಕು. ಅದಕ್ಕೇ ನೀನು ಲೆಕ್ಕದಲ್ಲಿ ಫೇಲಾಗುತ್ತಿರಲಿಲ್ಲ. ನೀನು ಹೇಳಿದ್ದು ಸರಿ. ನಾವಿಬ್ಬರೂ ಜಂಟಿಯಾಗಿ ಪ್ರಯತ್ನಮಾಡೋಣ. ಅವಳು ಯಾರಿಗಾದರೂ ಓಟು ಕೊಡಲಿ" ಎಂದನು.

ಹೀಗೆ 'ಚೆಂದವ್ವನ ಸೀರುಡಿಕೆ' ವಿಷಯದಲ್ಲಿ ನಾವು ಕಾನೂನುಗಳನ್ನೂ ಷರತ್ತುಗಳನ್ನೂ ರಚಿಸಿಕೊಂಡು, ಒಬ್ಬರಿಗೊಬ್ಬರು ಮೋಸಮಾಡುವುದಿಲ್ಲವೆಂದು ನಮ್ಮ ಸ್ನೇಹದ ಮೇಲೆ ಆಣೆ ಇಟ್ಟೆವು. ಈ ಮದುವೆ ಇತ್ಯರ್ಥವಾಗುವ ವರೆಗೂ ಈ ಊರನ್ನೂ, ಹೋಟಲನ್ನೂ ಬಿಡಕೂಡದೆಂದು ಇಲ್ಲಿಯೇ ಬೇರುಬಿಟ್ಟೆವು.

ಹೋಟಲು ಹಿಂದೆ ಅಂಗಳದಲ್ಲಿ ಒಂದು ದೊಡ್ಡ ಜಗುಲಿ ಇದೆ. ಅದರ ಎದುರಿಗೆ ಇನ್ನೊಂದು ಜಗುಲಿ ಇದೆ. ಸಾಧಾರಣವಾಗಿ, ಸಂಜೆ ಅಥವಾ ಬೆಳುದಿಂಗಳ ರಾತ್ರಿಯಲ್ಲಿ ಚೆಂದವ್ವನು ತನಗೆ ಕೆಲಸವಿಲ್ಲದಿದ್ದಾಗ ಅಲ್ಲಿ ಕುಳಿತುಕೊಂಡು ಕಾಲಕಳೆಯುವುದು ವಾಡಿಕೆಯಾಗಿತ್ತು. ನಾವಿಬ್ಬರೂ ಇದನ್ನು ಗಮನಿಸಿದ್ದು, ಚೆಂದವ್ವನೊಡನೆ ಮಾತನಾಡಲು ಹೊಂಚುಹಾಕುತ್ತ ಕಾದಿದ್ದು, ಹೋಟಲ ಗಿರಾಕಿಗಳು ಹೊರಟುಹೋದಮೇಲೆ ಕೆಲಸವಿಲ್ಲದಾಗ ಚೆಂದವ್ವನು ಹಿತ್ತಲ ಜಗಲಿಯನ್ನು ಹತ್ತಿದಳು ಎಂದರೆ ನಾವುಗಳು ಜತೆಯಾಗಿ ಒಬ್ಬರ ಹೆಗಲಮೇಲೊಬ್ಬರು ಕೈಹಾಕಿಕೊಂಡು ವಯಸ್ಸಾದ ಲವ-ಕುಶರಂತೆ ಹೋಗಿ ಎದುರುಕಟ್ಟೆಯ ಮೇಲೆ ಕುಳಿತುಕೊಳ್ಳುತ್ತಿದ್ದೆವು. ನಾವಿಬ್ಬರೂ ಅಪರೂಪ ಸ್ನೇಹಿತರಾಗಿ ಇದ್ದೆವು. ಇಂತಹ— ಚೆಂದವ್ವನನ್ನು ಲಗ್ನವಾಗುವಂತಹ— ಮಹತ್ತರ ವಿಷಯದಲ್ಲಿ ಸಹ ಒಬ್ಬರಿಗೊಬ್ಬರು ಮೋಸ ಮಾಡುತ್ತಿರಲಿಲ್ಲ. ಒಬ್ಬರನ್ನೊಬ್ಬರು ಶಂಕಿಸುತ್ತಲೂ ಇರಲಿಲ್ಲ. ಚೆಂದವ್ವನಿಗೆ ನಮ್ಮ ಏರ್ಪಾಡು ಗೊತ್ತಾಗಿ, ನಮ್ಮಿಬ್ಬರಲ್ಲಿ ಯಾರು ಉತ್ತಮ ಎನ್ನುವ ತೊಡಕಿಗೆ ಬಿದ್ದಿದ್ದಳು ಎಂದು ಕಾಣುತ್ತೆ.

ಮೂರು ನಾಲ್ಕು ದಿವಸಗಳಾದ ಮೇಲೆ ಒಂದು ರಾತ್ರಿ— ಮಂಗಪ್ಪನು ಇನ್ನೂ ಬಂದಿರಲಿಲ್ಲ— ನಾನು ಊಟ ಮಾಡಿಬಿಟ್ಟು, ಬೀಡಿ ಸೇದಲು ಹಿತ್ತಲ ಕಡೆಗೆ ಬಂದು ನನ್ನ ಮಾಮೂಲಿನ ಜಾಗದಲ್ಲಿ ಕುಳಿತುಕೊಂಡೆನು. ಬೆಳುದಿಂಗಳು ಹಾಲಾಗಿತ್ತು. ಸ್ವಲ್ಪ ಹೊತ್ತಿನಲ್ಲೇ ಚೆಂದವ್ವನು ತನ್ನ ಕೆಲಸಗಳನ್ನೆಲ್ಲಾ ಹಾಗೆಯೇ ಬಿಟ್ಟು ಅಂಗಳದಲ್ಲಿ ಬಂದು ನಿಂತುಕೊಂಡು, ನನ್ನನ್ನು ಮಾತನಾಡಿಸುವುದಕ್ಕೆ ಮೊದಲು ಮಾಡಿದಳು. ನಾನು ಒಂದು ಮಾತಿಗೂ ಉತ್ತರ ಕೊಡಲಿಲ್ಲ. 'ಮಂಗಪ್ಪನಿಗೆ ಮೋಸಮಾಡಿದ ಹಾಗಾಗುತ್ತೆ' ಎಂದು ನನ್ನ ಮತ. ಕಡೆಗೆ ಚೆಂದವ್ವನು--ಹೆಂಗುಸು ಮಾತಿಗೆ ಷುರು ಮಾಡಿದರೆ ನಿಲ್ಲಿಸುತ್ತಾಳೆಯೆ?— ಆ ಮಾತು ಈ ಮಾತು ಆಡುತ್ತಾ ನನ್ನ ಪಕ್ಕದಲ್ಲಿ ಕುಳಿತುಬಿಟ್ಟಳು. ಹೇಗೆ ಅಂತೀರಿ, ನನ್ನ ಪಕ್ಕದಲ್ಲಿ ಕುಳಿತಿದ್ದು ಅವಳಿಗೇ ಗೊತ್ತಿಲ್ಲದಂತೆಯೂ, ತಾನು ಪ್ರತಿನಿತ್ಯ ಕುಳಿತಿದ್ದ ಜಾಗದಲ್ಲೇ ಕುಳಿತುಕೊಂಡಳೆಂದೇ ತಿಳಿದುಕೊಂಡಿದ್ದಂತೆಯೂ ಕುಳಿತುಕೊಂಡಳು. ಅನಂತರ, ಕೊಂಕುತ್ತಾ, ಬಳುಕುತ್ತಾ, ಮೃದುವಾಗಿ, ಮೆಲ್ಲನೆ "ಇಂಥಾ ಬೆಳದಿಂಗಳ ರಾತ್ರಿ ಬಂದರೆ, ಒಂಟಿಯಾಗಿರುವವರಿಗೆ ಎಷ್ಟು ಕಷ್ಟ ಅಲ್ವೆ?" ಎಂದಳು—ಪಾಟೀ ಸವಾಲು ನಡೆಸಿಯಿದಳು.

ನಾನು ಕೂಡಲೆ ಎದ್ದುಬಿಟ್ಟೆನು. ಸೋಮಾರಿತನದಿಂದ ಮೈಮುರಿದು ಆಕಳಿಸುತ್ತಾ ಬಿದ್ದುಕೊಂಡಿರುವ ಕಾನಸ್ಟೇಬಲು, ಪೋಲೀಸ್ ಸುಪರಿಂಟೆಂಟರ ದೂರದ ಕಾರನ್ನು ನೋಡಿದೊಡನೆ ಛಂಗನೆ ಹಾರಿ ನೆಟ್ಟಗೆ ಕಂಭದಂತೆ ನಿಲ್ಲುವಂತೆ ನಿಂತುಕೊಂಡು, "ನೋಡು ಚೆಂದವ್ವ, ನಿನ್ನ ಮಾತಿಗೆ ಉತ್ತರ ಕೊಡಲು ಮಂಗಪ್ಪನು ಬರುವವರೆಗೂ ನಾನು ಕಾದಿರಬೇಕು. ನಮ್ಮ ಸ್ನೇಹದ ಮೇಲೆ ಆಣೆ ಇಟ್ಟುಬಿಟ್ಟಿದ್ದೇನೆ" ಎಂದೆನು. ಅನಂತರ ಚೆಂದವ್ವನಿಗೆ ನಮ್ಮ ಏರ್ಪಾಡುಗಳನ್ನೂ, 'ಚೆಂದವ್ವನ ಸೀರುಡಿಕೆ' ಕಾನೂನುಗಳನ್ನೂ ವ್ಯಕ್ತಪಡಿಸಿದೆನು. ಚೆಂದವ್ವನು ಗಂಭೀರವಾಗಿ ಎಲ್ಲವನ್ನೂ ಕೇಳಿ, ಸ್ವಲ್ಪಹೊತ್ತು ಸುಮ್ಮನಿದ್ದು, ಅನಂತರ ಗಿಳಿಯ ಹಾಗೆ ಕಿಲಕಿಲನೆ ನಕ್ಕಳು. ಹಿಂದುಗಡೆಯ ಮರದಮೇಲೆ ತೂಕಡಿಸುತ್ತಿದ್ದ ಗೂಬೆಯೊಂದು ಎದುರುತ್ತರವನ್ನು ಕೊಟ್ಟು ಮೋಸ ಹೋಯಿತು. ಅಷ್ಟುಹೊತ್ತಿಗೆ ಮಂಗಪ್ಪನು ಅಲ್ಲಿಗೆ ಬಂದನು.

ಮಂಗಪ್ಪನು ಜುಟ್ಟಿಗೆ ಹೊಸ ಮಲ್ಲಿಗೆ ಹಾರವನ್ನು ಸುತ್ತಿದ್ದನು. ಎಲಡಿಕೆ ಜಗಿದು ಬಾಯಿ ಕೆಂಪಗೆಮಾಡಿಕೊಂಡಿದ್ದನು. ಮೀಸೆಗೆ ವ್ಯಾಸಲೀನನ್ನು ಬಳಿದು ಬಳಿದು ತಿರುಹಿದ್ದನು. ಹೊಸ ಷರಟನ್ನು ತೊಟ್ಟು, ಬಟ್ಟೆಗಳಿಗೆ ಸೆಂಟನ್ನು ಹಚ್ಚಿದ್ದನು. ಹಿಂದಿನ ದಿನವೇ ಕ್ಷೌರಮಾಡಿಸಿಕೊಂಡಿದ್ದರೂ ಪುನಃ ಆ ಸಂಜೆ ಕ್ಷೌರಮಾಡಿಸಿಕೊಂಡಿದ್ದರಲ್ಲಿ ಸಂದೇಹವಿರಲಿಲ್ಲ. ಅವನು ಬಂದೊಡನೆ ನಾನು ಪುನಃ ಚೆಂದವ್ವನ ಬಳಿ ಮೊದಲಿನಂತೆ ಕುಳಿತುಕೊಂಡು "ನಿನ್ನ ಪ್ರಶ್ನೆಗೆ ಈಗ ಉತ್ತರ ಹೇಳ್ತೀನೆ ಚೆಂದವ್ವಾ—ಅಲ್ವೆ? ಕಷ್ಟ ಅಲ್ವೆ! ಅದರಲ್ಲೂ ನಿನ್ನಂತಹ ಹೆಣ್ಣಿನ ಕೈಹಿಡಿಯಬೇಕೆಂದಿರುವ ನನ್ನಂಥವನ ಪಾಡು ಹೇಳುವುದಕ್ಕೇ ತೀರದು" ಎಂದೆನು.

ಮಂಗಪ್ಪನು ಚೆಂದವ್ವನ ಆ ಕಡೆಗೆ ಕುಳಿತುಕೊಂಡು, ಇನ್ನೇನನ್ನೂ ಮಾತನಾಡದೆ, ಅರ್ಜುನನು ಕುದುರೆ ಕಾಯುತ್ತಾ ಹೋದಾಗ ಎದುರು ಸಿಕ್ಕಿದ ಹೆಣ್ಣುಹುಲಿಯನ್ನೋ ಏನೋ, ಲಗ್ನವಾದ ಕಥೆಯನ್ನು ಹೇಳಿದನು. ಚೆಂದವ್ವನ ಲಗ್ನಕ್ಕೆ ಪೈಪೋಟಿ ನಮ್ಮಿಬ್ಬರಲ್ಲಿ ಪ್ರಾರಂಭವಾದ ಲಾಗಾಯ್ತು, ಮಂಗಪ್ಪನು ಅನುಸರಿಸುತ್ತಿದ್ದ ಪ್ರಣಯನೀತಿಯನ್ನು ನಾನು ಗಮನಿಸಿ ಕಂಡುಹಿಡಿದಿದ್ದೆ. ಚೆಂದವ್ವನನ್ನು ಗೆಲ್ಲುವುದಕ್ಕೆ ಅವನು ತೊಟ್ಟ ಬಾಣ, ಲಗ್ನದ ಕಥೆಗಳನ್ನೂ, ಗಂಡಹೆಂಡಿರ ಪ್ರೇಮದ ಕಥೆಗಳನ್ನೂ ಹೇಳಿ ಚೆಂದವ್ವನ ಹೃದಯವನ್ನು ಗೆಲ್ಲುವುದು. ಈಗಾಗಲೇ ಅವನು, ರಾಮ-ಸೀತೆ, ನಳ-ದಮಯಂತಿ, ಸಾವಿತ್ರಿ-ಸತ್ಯವಾನ, ದ್ರೌಪದಿ-ಪಾಂಡವರ ಕಥೆಗಳನ್ನು ಮುಗಿಸಿದ್ದನು. ಕಡೆಯ ಗುಂಪಿನವರ ಕಥೆಯನ್ನು ಹೇಳಿ ಮುಗಿಸಿದಾಗ, ಮಂಗಪ್ಪನು, "ಆದ್ರೆ, ಚೆಂದವ್ವಾ, ನೀನು ಹೆದರಬೇಡ ನೀನು ನನ್ನ ಲಗ್ನ ಆದ್ರೆ, ಪಾಂಡವರ ಹಾಗೆ ನಾನು ನಿನ್ನನ್ನು ಯಾರೊಡನೆಯೂ ಹಂಚಿಕೊಳ್ಳುವುದಿಲ್ಲ" ಎಂದು ಹೇಳಿದ್ದನು. ಚೆಂದವ್ವನು ಆ ಮಾತಿಗೆ ಸ್ವಲ್ಪ ಅಸಮ್ಮತಿಯನ್ನೇ ಸೂಚಿಸಿದ್ದಳು- ಹಂಚಿಕೊಡದಿರುವ ವಿಷಯಕ್ಕಲ್ಲ, ತನ್ನ ವಿಷಯದಲ್ಲಿ ಆ ಮಾತಿನ ಅವಶ್ಯಕತೆ ಇರಲಿಲ್ಲವೆಂದು.

ಆದರೆ, ನಾನು ಹಿಡಿದಿದ್ದ ಮಾರ್ಗ ಬೇರೆಯಾಗಿತ್ತು. ನಾನು ಮಂಗಪ್ಪನ ಹಾಗೆ ಮಾತಿನವನಲ್ಲ. ಆದ್ದರಿಂದ ಕಥೆಗಳನ್ನು ಹೇಳುವ ಬುದ್ಧಿವಂತಿಕೆಗೆ ಹೋಗದೆ ಕಾರ್ಯದಲ್ಲಿ ತೊಡಗಿದ್ದೆನು. ಬೀಡಿ ಹಚ್ಚಿ, ತಲೆಮೇಲೆತ್ತಿ, ಕಥೆಹೇಳಲಿಕ್ಕೆ ಮಂಗಪ್ಪನು ಶುರುಮಾಡಿದನೆಂದರೆ, ನಾನು ಮೆಲ್ಲನೆದ್ದು ಮರುಕ್ಷಣದಲ್ಲಿ ಚೆಂದವ್ವನ ಪಕ್ಕದಲ್ಲಿ ಉದ್ದೇಶಪೂರ್ವಕವಾಗಿ ಅಲ್ಲವೆಂಬಂತೆ—ಆಕಸ್ಮಾತ್ ಆದಂತೆ, ಕುಳಿತುಬಿಡುತ್ತಿದ್ದೆ. ನೋಡಿ; ಹೆಣ್ಣಿನ ಕೈಹಿಡಿಯಬಯಸುವವರು, ಹೆಣ್ಣಿನ ಕೈಯನ್ನು ಹೇಗೆ ಹಿಡಿದುಕೊಳ್ಳಬೇಕು ಎಂಬುದನ್ನು ತಿಳಿದುಕೊಂಡಿರಬೇಕು. ಅದು ಬಂದ್ರೆ, ಹೆಣ್ಣು ಬಂದಳು ಅಂತ ತಿಳಿಯಿರಿ! ನನ್ನ ಅನುಸಂಧಾನ ಹೇಗೆ ಅಂದರೆ;—ಈಗ ನೋಡಿ; ಅಡ್ಡಗೋಡೆಯ ಮೇಲೆ ಬಿಸಿಲು ಕಾಸುತ್ತಾ ಕುಳಿತಿರುವ ಬೆಕ್ಕು, ತನ್ನನ್ನು ಹೊಡೆಯಲು ಕೈಲಿ ಕಲ್ಲನ್ನು ಹಿಡಿದುಕೊಂಡು ಮೆಲ್ಲನೆ ಬರುತ್ತಿರುವ ಹುಡುಗನನ್ನು ಕಂಡೂ ಕಾಣದ ಹಾಗೆ, ನೋಡುತ್ತಾ, ಅಳ್ಳಾಡದೇ ಮೈಮುರಿದುಕೊಂಡು ಕುಳಿತಿರುತ್ತೆ. ಆ ಹುಡುಗ, ತನ್ನ ಕೈಲಿ ಕಲ್ಲೇ ಇಲ್ಲದಹಾಗೂ, ತಾನು ಬೆಕ್ಕನ್ನೇ ನೋಡದವನ ಹಾಗೂ, ಬೆಕ್ಕು ತನ್ನನ್ನು ನೋಡದೇ ಇದ್ದಹಾಗೂ ನಟಿಸುತ್ತಾನೆ;—ಹಾಗೆ ನೋಡಿ, ನನ್ನ ಉಪಾಯ. ಮಂಗಪ್ಪನ ಕಥೆಗಳನ್ನು ಕಿವಿಗೊಟ್ಟು ಮೈಮರೆತು ಕೇಳುತ್ತಿದ್ದವಳ ಹಾಗೆ ಚೆಂದವ್ವನು ಕುಳಿತಿರುತ್ತಿದ್ದಳು. ಅವಳು ಮೈಮರೆತು ಕಥೆಯನ್ನು ಕೇಳುತ್ತಿದ್ದಾಳೆ ಎಂದು ನಾನು ನಂಬಿದವನಂತೆ ನಟಿಸುತ್ತಾ, ನನ್ನ ಕಡೆ ಚಾಚಿ ಬಿದ್ದಿದ್ದ ಅವಳ ಕೈಯನ್ನು ಮೆಲ್ಲನೆ—ಹೂವನ್ನು ಹಿಡಿದುಕೊಳ್ಳುವಂತೆ— ಸ್ವಲ್ಪಸ್ವಲ್ಪವಾಗಿ ನಿಧಾನವಾಗಿ ಹಿಡಿದುಕೊಳ್ಳುತ್ತಿದ್ದೆ. ಅವಳ ಕೈಯನ್ನು ನಾನು ಹಿಡಿದುಕೊಂಡಿರುವುದು ನನಗೆ ಗೊತ್ತಿದೆ ಎನ್ನುವುದು, ಅವಳಿಗೆ ಗೊತ್ತಿದೆ ಎಂದು ನನಗೆ ಗೊತ್ತಿಲ್ಲದವನಂತೆ ಇರುತ್ತಿದ್ದೆ. ಅದು ನೋಡಿ ಬುದ್ಧಿವಂತಿಕೆ. ಅನಂತರ ಮಂಗಪ್ಪನ ಕಥೆಯಲ್ಲಿ ಪ್ರೇಮ, ಲಗ್ನ ಈ ವಿಷಯಗಳು ಬಂದಾಗಲೆಲ್ಲಾ ಮೆಲ್ಲನೆ ಅವಳ ಕೈಯನ್ನು ಒತ್ತುತ್ತಿದ್ದೆ— ಹೂವನ್ನು ಮುತ್ತಿಟ್ಟಹಾಗೆ. ಚೆಂದವ್ವನು ಮಂಗಪ್ಪನ ಕಥೆಯನ್ನೆ ಕೇಳುತ್ತಿರಲಿಲ್ಲವೆಂದು ನಾನು ಪತ್ತೆ ಸಹ ಮಾಡಿದ್ದೆನು.

ಒಂದು ದಿನ ಸಂಜೆ ಚೆಂದವ್ವನು ಅಕ್ಕಿಮಾಡುತ್ತಾ ಕುಳಿತಿದ್ದಳು. ನಾನು ಕಣ್ಣುಗಳಿಂದ ಅವಳ ರೂಪವನ್ನೂ, ಬಾಯಿಂದ ಬೀಡಿಯನ್ನೂ ಸೇದುತ್ತಾ ಕುಳಿತುಕೊಂಡಿದ್ದೆನು. ಬೀಡಿ ಎಲ್ಲಾ ಮುಗಿದಮೇಲೆ, ನಾನು— ಇದು 'ಚೆಂದವ್ವ ಸೀರುಡಿಕೆ' ನಿಯಮಗಳಿಗೆ ವಿರೋಧವಲ್ಲವೆಂದೇ ಈಗಲೂ ನನ್ನ ಅಭಿಮತ:— ಅವಳನ್ನು "ಚೆಂದವ್ವಾ, ಮಂಗಪ್ಪನನ್ನು ಲಗ್ನವಾಗಿ ಮಂಗವ್ವನೆಂಬ ಕೋತಿ ಹೆಸರು ಇಟ್ಟುಕೊಳ್ಳುವುದು ಚೆಂದವೋ, ನನ್ನನ್ನು ಲಗ್ನವಾಗಿ ಶ್ರೀಗೌರಿ ಎಂಬ ಮುದ್ದಿನ ಹೆಸರಿಟ್ಟುಕೊಳ್ಳುವುದು ಚೆಂದವೋ' ಎಂದು ಕೇಳಿದೆನು.

ಅವಳ ಮುಖ ಆರತಿ ಬೆಳೆದಹಾಗಾಯ್ತು. ಗುಲಾಬಿದಳಗಳ ತುಟಿಗಳನ್ನು ಮೆಲ್ಲನಗಲಿಸಿ, ಹೇಳುತ್ತಾಳೆ— ನಗುವಿನ ಹೊಳೆಯಲ್ಲಿ ಮಾತುಗಳನ್ನು ತೇಲಿಸುತ್ತಾ— "ಮಂಗಪ್ಪನ್ನ ಯಾರು ಲಗ್ನ ಆಗ್ತಾರೆ ಬಿಡು. 'ಶ್ರೀಗೌರೀ'ನೇ ಚೆನ್ನ. ನಾನು ಕೂಡಲೇ ಎದ್ದುಹೋಗಿ ಅವಳನ್ನು ತಬ್ಬಿಕೊಂಡು - ಉಹು, ಕೊಡಲಿಲ್ಲ; ನಮ್ಮ ಕಾನೂನಿಗೆ ವಿರೋಧವೆಂದು. ಅನಂತರ ಚೆಂದವ್ವನು ಮೆಲ್ಲನೆ ನನ್ನ ಕೈಯಿಂದ ಬಿಡಿಸಿಕೊಂಡು "ಒಂದು ವಿಷಯಕ್ಕಲ್ಲದಿದ್ದರೆ ನಿನ್ನನ್ನು ಲಗ್ನ ಆಗುತ್ತಿರಲಿಲ್ಲ" ಎಂದಳು.

"ಏನು?" ಎಂದು ಕೇಳಿದೆನು.

"ಅಷ್ಟು ನಿರ್ವಂಚನೆಯ ಸ್ನೇಹವುಳ್ಳವ ನೀನು, ನಿರ್ವಂಚನೆಯ ಗಂಡನಾಗುವುದರಲ್ಲಿ ಸಂದೇಹವಿಲ್ಲದಿರುವುದರಿಂದ. ಹೆಂಡತಿಯರನ್ನು ಯಾವ ವಿಧದಲ್ಲಿಯಾದರೂ ಮೋಸಗೊಳಿಸದ ಗಂಡಂದಿರು ಅಪರೂಪ, ನೋಡು."

ಐದುನಿಮಿಷಗಳಲ್ಲಿ ಮಂಗಪ್ಪನು ಬಂದು, ಕುಳಿತುಕೊಂಡು, ಬೀಡಿಹಚ್ಚಿ, ಸರಸರನೆ ಪ್ರಾರಂಭಿಸಿದನು; "ಚೆಂದವ್ವಾ, ಚೆಂದಾನೆ ಕಥೆಯೊಂದು ಹೇಳುತ್ತೇನೆ, ಕೇಳು. ನಿನ್ನಂಥ ಚೆಲುವೆಯ ಕಥೆ ಅದು: ನನ್ನಂಥ ಶೂರನ ಕಥೆ ಅದು. ಅವರಿಬ್ಬರೂ ಲಗ್ನ ಆದ ಕಥೆ ಅದು. ತ್ರೇತಾಯುಗದಲ್ಲಿ—," ಎಂದು ಹೇಳುತ್ತಿದ್ದನು. ಅಷ್ಟುಹೊತ್ತಿಗೆ ನಾನು ಮಧ್ಯ ಬಾಯಿಹಾಕಿ, "ಚೆಂದವ್ವಾ, ನನ್ನ ಲಗ್ನ ಆಗುತ್ತೀಯಾ?" ಎಂದು ಕೇಳಿಬಿಟ್ಟೆನು.

ಕಥೆ ಹೇಳುತ್ತಿದ್ದ ಮಂಗಪ್ಪನು, ಹಾಗೆಯೇ ಬಾಯಿಬಿಟ್ಟು, ಶಬ್ದವನ್ನು ಗಂಟಲಿನಲ್ಲೇ ತಡೆಹಿಡಿದು, ಮಂಗನಂತೆಯೇ ನೋಡಲಾರಂಭಿಸಿದನು.

ಚೆಂದವ್ವನು, ನಾಚಿ, ತಲೆತಗ್ಗಿಸಿ, ಎದುರಿಗೆ ಬಿದ್ದಿದ್ದ ಅಕ್ಕಿಯನ್ನು ಚಪ್ಪಟೆಯಾಗಿ ಹಲಗೆಯಂತೆ ಮಾಡಿ, ಅದರ ಮೇಲೆ "ಹೂ" ಎಂದು ಬೆರಳಿನಿಂದ ಬರೆದಳು.

ಮಂಗಪ್ಪನು ಕಥೆಯನ್ನು ಮುಂದುವರಿಸಲೇ ಇಲ್ಲ. ನನ್ನ ಬೆನ್ನಿನ ಮೇಲೆ ಶಹಭಾಷ್‌ಗಿರಿಯ ಪೆಟ್ಟಿನ ಮಳೆಗರೆದು, "ಭಲೆ, ಹರಿಹರ, ನೀನೇ ಗೆದ್ದೆ. ಆದರೂ ನಮ್ಮ ಸ್ನೇಹ ತಪ್ಪಲಿಲ್ಲ" ಎಂದು ಹೇಳಿದನು.

ಮರುದಿನವೇ ಕಡೆಯ ಲಗ್ನವಾದ್ದರಿಂದ, ಆ ದಿವಸವೇ ಅಯ್ಯನವರು ನನ್ನ, ಚೆಂದವ್ವನ ಲಗ್ನವನ್ನು ನೆರವೇರಿಸಿದರು. ಅದೇ ಸಂಜೆ ಮಂಗಪ್ಪನು ಬೇರೊಂದು ಹೋಟಲಿಗೆ ತನ್ನ ಸಾಮಾನುಗಳನ್ನು ಸಾಗಿಸಿ ಬಿಟ್ಟನು. ಆ ರಾತ್ರಿ ಹಬ್ಬದ ಊಟವನ್ನು ಮಾಡಿಸಿದ್ದೆವು. ಊಟವಾದ ನಂತರ ಮಂಗಪ್ಪನು ತನ್ನ ಹೋಟಲ ಕಡೆಗೆ ಹೊರಡಲು, ನಾನು ಹಿತ್ತಲ ಜಗುಲಿಯ ಮೇಲೆ ಬಂದು ಕುಳಿತು, ಬೀಡಿ ಹಚ್ಚಿದೆನು. ನನಗೆ ಹಿಂದಿನದೆಲ್ಲವೂ, ಚೆಂದವ್ವನನ್ನು ಲಗ್ನ ಆಗಲಿಕ್ಕೆ ನಾನೂ ಮಂಗಪ್ಪನೂ ಪೈಪೋಟಿ ನಡೆಸಿದ್ದೂ, ಎಷ್ಟೋ ವೇಳೆ ಅವನಿನ್ನೂ ಬಾರದಿದ್ದಾಗ ಅದೇ ಜಗುಲಿಯ ಮೇಲೆ ಅವನಿಗಾಗಿ ಕಾಯುತ್ತಾ ಕುಳಿತಿರುತ್ತಿದ್ದದ್ದೂ ನೆನಪಿಗೆ ಬಂದು, ಮೈಮರೆತು ಕುಳಿತುಬಿಟ್ಟೆನು. ಹತ್ತು ಗಂಟೆ ಹೊಡೆಯುವ ಹೊತ್ತಿಗೆ ಹತ್ತು ಬೀಡಿಗಳ ಸೇ ಮುಗಿಸಿರಬೇಕು.

ಒಳಗಡೆ ಚೆಂದವ್ವನು, ತನ್ನ ಕೆಲಸಗಳನ್ನೆಲ್ಲಾ ಮುಗಿಸಿಕೊಂಡು, ನಮ್ಮ ಹಾಸಿಗೆಗಳನ್ನು ಹಾಸಿ, ನಾನು ಇನ್ನೂ ಹೊರಗಡೆಯೇ ಇದ್ದುದರಿಂದ "ಒಳಗಡೆ ಬರುತ್ತೀಯೋ ಇಲ್ಲವೋ? ಹಿತ್ತಲ ಬಾಗಲು ಹಾಕಬೇಕು" ಎಂದು ನನ್ನ ಬೆನ್ನ ಹಿಂದಿನಿಂದ ಹೇಳಿದಳು.

ನಾನು, "ಹೆ! ಹೇ! ತಡೆ, ತಡೆ! ಮಂಗಪ್ಪನು ಬರುವವರೆಗೂ—" ಎಂದು ಹೇಳುತ್ತಿದ್ದೆ. ಅಷ್ಟರಲ್ಲಿ ಈ ಬಲಗಿವಿಗೆ ರಿವಾಲ್ವರಿನಿಂದ ಹೊಡೆದಹಾಗಾಯ್ತು, ನೋಡಿ, ಆದರೆ ಅದು ರಿವಾಲ್ವರೇ ಅಲ್ಲ. ಹಿತ್ತಲ ಬಾಗಿಲ ಚಿಲಕಕ್ಕೆ ಸಿಕ್ಕಿಸಲು ಪದ್ಧತಿಯಂತೆ ಚೆಂದವ್ವನು ಕೈಲಿ ತಂದಿದ್ದ ಮರದ ಕಡಗೋಲು!"

ರೋಗಪರೀಕ್ಷೆಯ ಕೈಪಿಡಿ!
ರೋಗಚಿಕಿತ್ಸೆಯ ಕೈಗನ್ನಡಿ!

ಜೀವನ-ರಸಾಯನ-ಚಿಕಿತ್ಸಾ-ಶಾಸ್ತ್ರ

ಎಂದರೆ

ಹನ್ನೆರಡು-ಕ್ಷಾರ-ಚಿಕಿತ್ಸಾಪದ್ಧತಿ!

ಲೇಖಕರು:
ಡಾ. ಗೋ. ಸ. ಪಳಸುಲೆ L.M.&S. ಪುಣೆ
ಕನ್ನಡಿಸಿದವರು:
ಶ್ರೀ. ನಾ. ತಿ. ದಾತಾರ ಬಿ. ಎ. ಬೆಳಗಾಂವಿ

೮೫೦ ಪುಟಗಳ ಹೊಳಪಿನ ಹಾಳೆಯ ಕ್ಯಾಲಿಕೊ ಬೈಂಡಿನ ಸುಂದರ ಹೊತ್ತಿಗೆ!
ಬೆಲೆ: ಮೂರೇ ರೂಪಾಯಿಗಳು.

ಪುಸ್ತಕ ದೊರೆಯುವ ಸ್ಥಳ:
೧. ಮನೋಹರ ಗ್ರಂಥ ಭಾಂಡಾರ, ಧಾರವಾಡ
೨. ಸ್ಟುಡಂಟ್ಸ್ ಓನ್ ಬುಕ್‌ಡಿಪೊ, ಧಾರವಾಡ
Head office:- Shri Krishna Homoeo Pharmacy
Budhwar Peth, Poona.

ರಾಮದುರ್ಗ ದುರಂತ ವಿಚಾರಣೆಯಲ್ಲಿ
ಪಕ್ಷ-ಪ್ರತಿಪಕ್ಷಗಳಿವೆ
ಆದರೆ
ಶ್ರೀರಂಗರ ಸಾಹಿತ್ಯದ ವಿಷಯದಲ್ಲಿ ಮಾತ್ರ
ಎಲ್ಲರದೂ ಒಂದೇ ಅಭಿಪ್ರಾಯ.

★

'ಸಾಮಾಜಿಕ ನಾಟಕಕ್ಕೆ ಸಹಜವಾದ ಶೈಲಿ ಶ್ರೀರಂಗರದು. ಜತೆಯಲ್ಲಿ ಅವರ ಪರಿಹಾಸ್ಯದ ರೀತಿಯೊಂದಿದೆ. ಇವೆರಡರ ಸೇರುವಿಕೆಯಿಂದ ಇವರ ಕತ್ತರಿ ಕತ್ತರಿಸುವ ಚುರುಕು ಹೆಚ್ಚು.' —ಸಾಹಿತ್ಯಪರಿಷತ್ ಪತ್ರಿಕೆ

'ಇವರಿಗೆ (ಶ್ರೀರಂಗರಿಗೆ) ನಾಟಕವು ಒಂದು ವಿನೋದವಲ್ಲ; ಧ್ಯೇಯದರ್ಶನ ಅಥವಾ ಕಲಾಚಿತ್ರವಲ್ಲ; ಇದು ಸಮಾಜಜೀವನದ ಕೈಗನ್ನಡಿ; ಅದರ ಸಂಸ್ಕರಣಕ್ಕೆ ಸಾಧನ.' —ಪ್ರಬುದ್ಧ ಕರ್ನಾಟಕ

'ಒಂದು ಶಬ್ದದಲ್ಲಿ ಬೇಕಾದಷ್ಟು ಮಹಾಭಾರತಗಳನ್ನು ಹೊರಡಿಸಬಲ್ಲರು (ಶ್ರೀರಂಗರು).'
—ಜಯ ಕರ್ನಾಟಕ

ವಿ. ಸೂ:— ಇವರ ಬೇಕಾದ ಗ್ರಂಥಕ್ಕಾಗಿ 'ಜಯಂತಿ' ಕಾರ್ಯಾಲಯಕ್ಕೆ ಬರೆಯಿರಿ.

ಸಾರಾಸಾರ ವಿಚಾರ

(ಲಾವಣಿ ಧಾಟಿ) ★ ಶ್ರೀ. ಶ್ರೀಧರ, ಪುಣೆ

ಹೊಸತು

೧

ಸಾರಾಸಾರಾ ವಿಚಾರ್ ಮಾಡಿದರ
ಹೊಸದೆ ಎಲ್ಲವೀ ನೆಲದಾಗ !
ಹೂವು ಬಿದ್ದದೆಯೊ ವಿಶ್ವವೆಲ್ಲವಿದು
ಹಳೆಯದೆಂಬುವರ ಕಣ್ಣಾಗ !

೨

ಬೀಜ ಮಾಯವಾಗಿ ಸಸೀಯಾಗತ್ಯದ
ಹೂವು ಹುಟ್ಟತ್ಯದ ತಲಿಯಾಗ !
ಹೂವಿನ ಹೊಟ್ಯಾಗ ತೆನೀ ಹುಟ್ಟತ್ಯದ
ಹೊಸಾ ಕಾಳು ತೆನಿ ಹೊಟ್ಯಾಗ !

೩

ದಿನಾದಿನಾ ಹೊಸ-ಹೊಸದು ಹೂಬಿಸಿಲು
ಹುಣ್ವಿ-ಹುಣ್ಣಿವಿಗೆ ಹೊಸಾ ಪರಿ !
ಸಂಜಿ-ಸಂಜಿಗೂ ಹೊಸಾ ಚಿಕ್ಕಿಗಳು
ಮೋಡ-ಮೋಡದೊಳು ಹೊಸಾ ಪರಿ !

೪

ವಸಂತ ಋತುವಿನ ಸಿರಿಯ ನೋಡಿರೋ
ಹೊಸಾ ಚಿಗುರು ಗಿಡ-ಗಿಡದಾಗ !
ಶ್ರಾವಣಮಾಸದ ಸೊಗಸು ನೋಡಿರೋ
ಹೊಸಾ ಹಸರು ನೆಲ-ನೆಲದಾಗ !

೫

ಹೊಳೀಯೊಳಗ ಹೊಸ-ಹೊಸಾ ತೆರೀ ನಿಮಿ-
ನಿಮಿಷದೊಳಗ ಹೊಸದೊಂದು ಪರಿ !
ತೆರೀ ತೆರೀಯಾಗ ಹೊಸಾಸುಳೀ ಪ್ರತಿ-
ಯೊಂದು ತೆರಿಯ ಮ್ಯಾಲ್ ಹೊಸಾನೊರೀ!

೬

ಶಬ್ದ ಶಬ್ದದೊಳು ಹೊಸದೆ ಅರ್ಥಝರಿ
ಕಾವ್ಯ-ಕಾವ್ಯದೊಳು ಹೊಸಾ ರಸಾ !
ಹೊಸಹೊಸ ಕಾವ್ಯದಿ ಬಂದ ಭಾವಗಳು
ಹೊತ್ತು-ಹೊತ್ತಿಗೂ ಹಸಾಹಸಾ !

೭

ಹೊಸತನದಿಂದಲಿ ತುಂಬಿ ತುಳುಕತ್ಯದ
ವಿಶ್ವರೂಪವಿದು ಬಲುಸೊಗಸಾ !
ಮಕ್ಕಳ ಮುಖದೊಳು ಬರುವ ನಗೀ ಹಾಂಗ
ನಿಮಿಷ-ನಿಮಿಷಕೂ ಹೊಸಾಹೊಸಾ !

ಹಳೇದು

೧

ಸಾರಾಸಾರಾ ವಿಚಾರ್ ಮಾಡಿದರ
ಧರಣಿಯೊಳಗ ಹೊಸತೇನಿಲ್ಲ !
ಹಳೇ ಮಾತಿಗೊಂದು ಹೊಸಾ ಹೆಸರು ಹಾಕಿ
ಹಿಗ್ಗಿ ಓಡತ್ಯದ ಜಗವೆಲ್ಲಾ !

೨

ಹಳೆಯ ಜೋಳ ನೆಲದೊಳಗ ಬಿತ್ತಿದರ
ಹೊಸಾ ದಂಟು ಕಾಣುವದು ಬರೆ !
ಹೊಸಾದಂಟು, ಹೊಸತೆನೀ, ಹೊಸಾಬೆಳೀ,
ಹೊಸಾಕಾಳು ಅಂಬೋದು ಬರೇ !

೩

ಹಳೆಯ ಕುಸುಬಿ ಹಾಕಿ ಹಳೆಯ ಗಾಣದಾಗ
ಹಿಂಡಿಬಿಡಲು ಸಂಜೆಯು ತನಕಾ
ಹೊಸಾ ಎಣ್ಣಿಯೆಂದು ನೆಕ್ಕಿ ನೆಕ್ಕತಾರ
ಹೊಸಾ ಜನರು ಬದುಕಿರುವನಕಾ !

೪

ಹಳೆಯ ಹತ್ತಿಯನು ನೂತು ನೆಯ್ದು ಬಾ-
ಕಾಗಿ ಹರಿದು ಬಣ್ಣವ ಮಾಡಿ,
ಹೊಸಾಸೀರಿ, ಹೊಸಹೊಸಾ ಕುಪ್ಪಸವ-
ನುಟ್ಟು ಲೋಕ ಕುರೀತ್ಯದ ಹಾಡಿ !

೫

ಹಳೆಯ ಎಮ್ಮಿಯನು ಹಿಂಡಿ ಹಾಲಿನೊಳು
ಹಾಕಿ ಹಳೆಯ ಜಿಗಟನ ಬೆಲ್ಲಾ,
ಹೊಸಾಖೀರು ಪರಮಾನ್ನವೆಂದು ಬರೆ
ಸುರಿದೆ ಸುರಿಯುತ್ಯದ ಜನವೆಲ್ಲಾ !

೬

ಹಳೆಯ ಶಬ್ದಗಳ ಹಳೆಯ ಧಾಟಿಯೊಳು
ಹೆಣೆದು ಕಟ್ಟತಾರ ಕೀಳ್ಗವನಾ !
ಹೊಸಾ ಶಬ್ದ, ಹೊಸರಸಾ, ಹೊಸಾ ಕವಿ-
ಯೆಂದು ಹಾಡತಾರ ಹಳಕವನಾ !

೭

ಎಲ್ಲಿ ನೋಡಿದರು ಹಳೆಯತನವು ತಾ
ತುಂಬಿ ತುಳುಕತ್ಯದ ಜಗದಾಗ
ಸೂರ್ಯ-ಚಂದ್ರ-ನಕ್ಷತ್ರ-ವೃಕ್ಷ-ಹೂ-
ಬಳ್ಳಿ, ಹೊಸಾವೇನಿದರಾಗ ?

ಇರೋದು

೧

ಸಾರಾಸಾರಾ ವಿಚಾರ್ ಮಾಡಿದರ
ಹಳೆಯದೆಲ್ಲವಿದು ಹೊಸಾಹೊಸಾ !
ಹೊಸದು ಹಳೇದೆಂಬ ವಿಚಾರ ಸುಳ್ಳದು
ತತ್ತ್ವ ತಿಳಿಯಬೇಕು ತುಸಾತುಸಾ !

೨

ನಿರಾಕಾರ ಪರಮಾತ್ಮ ತುಂಬಿಹನು
ವಿಶ್ವಚಕ್ರದೊಳಗ್ಯ ಹೊರಗ್ಯ !
ನಿತ್ಯ ನಿಂತುಕೊಂಡು ವಿಶ್ವ ನಡಸತಾನ
ಬೆರಸಿ ಹಳೇದನ ಹೊಸದ್ರೊಳಗ !

೩

ಹುಲುಸು ಮಣ್ಣಿನಾಗ ಬೀಜ ಬಿತ್ತಿದರ
ಮಳೀ ಹೊಡೆದರ‍್ಯ ರಪಾರಪಾ—
ಬೆಳೀ ತುಂಬಿ ಹೊಲ ಹೊನ್ನು ಆಗತ್ಯದ
ನೆಲಾ ತೊಯಿದರ‍್ಯ ತಪಾತಪಾ !

೪

ನೆಲಾ ಮಣ್ಣು ಮಳಿ ನೇಮ ಒಟ್ಟುಗೂಡಿ
ಬೀಜ ಆಗತ್ಯದ ಹೊಸಾ ಸಸಿ !
ನೇಮವೆಂದರೇ ಧರ್ಮರೂಪದಿಂದ
ದೇವ ಮಾಡತಾನ ಹೊಸಾ ಕಸಿ !

೫

ಸೂರ್ಯ-ಚಂದ್ರ-ನಕ್ಷತ್ರ-ಚಿಕ್ಕಿ-ಗ್ರಹ
ಎಲ್ಲ ದೇವರಿಗೆ ಅಧೀನಾ !
ಒಂದೆ ಶಕ್ತಿಯಿಂದ ನಡೆವ ಮಾತಿನಾಗ
ಹೊಸದು ಹಳೇದೆಂದರೇನಣ್ಣಾ !

೬

ಮಾಡಿಮಾಡಿಸುವ ಶಕ್ತಿ ನೋಡಿರೋ
ಆದಿಶಕ್ತಿ ಬಲು ಪುರಾತನಾ;
ಅರಳಿಬೋದತ್ಯದ ತಗ್ಗಿ ಬಾಗುತ್ಯದ
ಪುಡಿಪುಡಿಯಾಗ್ತ್ಯದ ಪ್ರತಿಕ್ಷಣಾ !

೭

ಶ್ರೀಧರಕಾವ್ಯದ ಭಾವ-ರಸಗಳ್ಹಾಂಗ
ಹೊಸಾ ವಿಶ್ವವಿದು ತಿಳಿರಣ್ಣಾ !
ಪ್ರೇಮದ ಕಣ್ಣಿಂದೋದಿ ನೋಡಿದರ
ನಿತ್ಯ ಹೊಸದು ವಿಶ್ವದ ಬಣ್ಣಾ !

ಕನ್ನಡ ಮರಾಠೀ ವಾದವು ಎಲ್ಲಿ, ಯಾರಿಂದ, ಹೇಗೆ ಹುಟ್ಟಿತು?

★

ಕನ್ನಡ-ಮರಾಠಿವಾದದ ಇತಿಹಾಸ ನಿಜವಾಗಿಯೂ ಅನೇಕಜನ ಕನ್ನಡಿಗರಿಗೇ ಗೊತ್ತಿಲ್ಲ! ನಮ್ಮಲ್ಲಿಯ ಬಹುಜನರು ಮರಾಠಿ ಪತ್ರಿಕೆಗಳಲ್ಲಿಯ ಆಕ್ಷೇಪಾತ್ಮಕ ಲೇಖನಗಳನ್ನು ಓದುವರು; ಅದೇ ನಿಜವೆಂದು, ತಮ್ಮವರನ್ನೆ ದುರಭಿಮಾನಿಗಳೆಂದು ಆಕ್ಷೇಪಿಸುವರು. ಅಂತಹರು ಈ ಬರೆಹವನ್ನು ಮನದೆರೆದು ಓದಿಕೊಳ್ಳಲಿ!

— ೧ —

ಈಗ ಸುಮಾರು ಇಪ್ಪತ್ತು ವರ್ಷಗಳಿಂದ "ಕನ್ನಡ ಮರಾಠೀ ವಾದ"ವು ಮಹಾರಾಷ್ಟ್ರದ ಹಾಗು ಕರ್ನಾಟಕ ದೊಳಗಿನ ಮರಾಠೀ ವರ್ತಮಾನಪತ್ರ ಮಾಸಿಕಗಳಲ್ಲಿ ಅಖಂಡವಾಗಿ ತಲೆಯೆತ್ತಿ ತಾಂಡವವನ್ನಾಡಿಸಿದೆ. "ಕನ್ನಡಿಗರು ಕುತ್ಸಿತ ಮನಸ್ಸಿನವರು; ಮಹಾರಾಷ್ಟ್ರದ ಮತ್ತು ಮರಾಠೀ ಭಾಷೆಯ ಉತ್ಕರ್ಷವು ಅವರಿಗೆ ಸಹನವಾಗದಾಗಿದೆ; ಈ ಅಸಹನೀಯ ಗುಣದ ಮೂಲಕ ಅವರಲ್ಲಿ ಮಹಾರಾಷ್ಟ್ರ ಹಾಗು ಮರಾಠೀ ಭಾಷೆಗಳ ವಿಷಯವಾಗಿ ಅತ್ಯಂತ ತೀವ್ರತರದ ದ್ವೇಷಬುದ್ಧಿ ಹುಟ್ಟಿದೆ; ಇದನ್ನು ಎಲ್ಲ ಕಡೆಯ ಮಹಾರಾಷ್ಟ್ರೀಯರು ಸುಸಂಘಟಿತವಾದ ರೀತಿಯಿಂದ ಎದುರಿಸಿ, ಮಹಾರಾಷ್ಟ್ರವಿದ್ವೇಷಿಗಳಾದ ಕನ್ನಡಿಗರ ಪಾರುಪತ್ಯವನ್ನು ಸಕಾಲಕ್ಕೆ ಮಾಡಬೇಕು" ಎಂಬಿವೇ ವಿಚಾರಗಳು ಮುಖ್ಯವಾಗಿ ಲೇಖನಗಳಲ್ಲಿ ಹೊರಬೀಳುತ್ತ ಬಂದಿವೆ. ಕನ್ನಡಿಗರು ಕರ್ನಾಟಕದಲ್ಲಿ ಸತ್ತ್ವರಕ್ಷಣೆಗಾಗಿ, ಸ್ವಭಾಷೆಯ ರಕ್ಷಣೆಗಾಗಿ, ನ್ಯಾಯವಾದ ಮಾರ್ಗದಿಂದ ತುಸು ಕೈಕಾಲು ಅಲುಗಾಡಿಸಿದರೆ ಸಾಕು; ಇಂಥ ಸಂದರ್ಭದಲ್ಲಿ ಮಹಾರಾಷ್ಟ್ರದವರೆನಿಸುವ ಒಬ್ಬಿಬ್ಬರ ಸಂಬಂಧ ಬಂದರೆ ತೀರಿತು; ಕನ್ನಡಿಗರ ಹಾಗು ಕನ್ನಡ ಚಳವಳಿಯ ಹೆಸರಿನಿಂದ ಕಲ್ಲೊಡೆದು ಕೋಲಾಹಲವನ್ನೆಬ್ಬಿಸಲು ಇತ್ತಕಡೆಯ ಮರಾಠಿಯ ಲೇಖಕರು ತಮ್ಮ ಲೆಕ್ಕಣಿಕೆಗಳನ್ನು ಮಸೆದರೆ! ಪುಣೆಯ ಕೇಸರಿಯಂಥ ಪ್ರಬುದ್ಧವೂ ಪ್ರೌಢವೂ ಎಂದು ಹೆಸರಾದ ಪತ್ರಿಕೆಗಳೂ ಕೂಡ ತಮ್ಮವರು ಬರೆದದ್ದನ್ನು ವೇದಪ್ರಾಮಾಣ್ಯದಂತೆ ಪರಿಗ್ರಹಿಸಿ, ಪ್ರಸಿದ್ಧಿಪಡಿಸಿ ಮೇಲೆ ತಮ್ಮವೆರಡು ಪ್ರೋತ್ಸಾಹಸಪರ ವಾಕ್ಯಗಳನ್ನು ಬರೆದುವೆ! ಹೀಗಾಗಿ ಕರ್ನಾಟಕದ ಏಕೀಕರಣ, ಕನ್ನಡದ ಸಂರಕ್ಷಣ, ಕರ್ನಾಟಕದಲ್ಲಿ ಕನ್ನಡದ ವರ್ಚಸ್ವವನ್ನು ಉಳಿಸಿಕೊಳ್ಳೋಣ, ಬೆಳಸಿಕೊಳ್ಳೋಣ— ಇವುಗಳ ಅನುಸಂಧಾನದಿಂದ ಕೆಲಸಮಾಡತಕ್ಕ ಕನ್ನಡಿಗರೆಲ್ಲರೂ "ಪೆಡಂಭೂತ"ರೆಂದು ಚಿತ್ರಿಸುವ ಹೇಯವಾದ ಉಪಕ್ರಮವು ಮಹಾರಾಷ್ಟ್ರದಲ್ಲಿ ಒಂದೇಸಮನೆ ನಡೆದಿದೆ.

ಮೂಲತಃ ಕರ್ನಾಟಕ ದ್ವೇಷ ಮತ್ತು ಕರ್ನಾಟಕ ಏಕೀಕರಣಕ್ಕೆ ವಿರೋಧ ಎಂಬ ಎರಡು ಕಟ್ಟುಗಂಬಗಳ ಮೇಲೆ ಏರಿಸಲಾಗುತ್ತಿರುವ ಕನ್ನಡಿಗರ ಕನ್ನಡತನದ ವಿಷಯಕವಾದ ಅಪಪ್ರಚಾರದ ಗೋಪುರವು, ಮಹಾರಾಷ್ಟ್ರದಲ್ಲಿ ಎಷ್ಟೇ ಎತ್ತರ ಹಬ್ಬುತ್ತ ನಡೆದರೂ ಕನ್ನಡಿಗರು ಅದಕ್ಕೆ ಉತ್ತರವಾದಿಗಳಾಗಿ ಮಾಡುವುದೇನು? ಯಾರು ಏನೇ ಹೆಸರಿಟ್ಟರೂ, ಎಷ್ಟೇ ದುಷ್ಪ್ರಚಾರ ಮಾಡಿದರೂ, ಕನ್ನಡಿಗರು ತಮ್ಮ ವ್ಯಕ್ತಿತ್ವವನ್ನು ಉಳಿಸಿಕೊಂಡು ಬೆಳಸಿಕೊಳ್ಳಲು ಅವಶ್ಯಕವಾದ, ತಮ್ಮ ಪವಿತ್ರವೂ, ನಿರ್ದುಷ್ಟವೂ, ನಿಷ್ಕಲಂಕವೂ ಆದ ಕರ್ತವ್ಯವನ್ನು ಎಂದಿಗೂ ಬಿಟ್ಟವರಲ್ಲ: ದುರಾರಾಧ್ಯ ದುಷ್ಪ್ರಚಾರಕರ ಬಾಯಿಗೆ ಹತ್ತಿ ಮಾಡುವುದೇನು' ಎಂಬ ವಿಚಾರದಿಂದ ಕನ್ನಡತನದ ಪುರಸ್ಕರ್ತರಾರೂ ಮಹಾರಾಷ್ಟ್ರದೊಳಗಿನ ಈ ಅಪಪ್ರಚಾರಕ್ಕೆ ತಡೆಗಟ್ಟಲು ಕೈಯಿಕ್ಕಲಿಲ್ಲ. ಒಬ್ಬಿಬ್ಬರು ನಿಜಸ್ಥಿತಿಯನ್ನು ತಿಳುಹಿಸಿ ನಿಷ್ಕಾರಣವಾಗಿ ಬೆಳೆಯ ಬಹುದಾದ ವಿಮನಸ್ಕತೆಯನ್ನು ತಡೆಯಲು ಯತ್ನಿಸಿದರೆ, ಇಂಥ ಬರಹಗಳಿಗೆ ಮಹಾರಾಷ್ಟ್ರದ ಪತ್ರಿಕೆಗಳಲ್ಲಿ ಇಂಬು ದೊರೆಯದಿದ್ದ ದೃಷ್ಟಾಂತಗಳೂ ಉಂಟು. ಹೀಗೆ ಮಹಾರಾಷ್ಟ್ರದ ಪತ್ರಿಕೆಗಳಲ್ಲಿ ಅಖಂಡವಾಗಿ ಅವ್ಯಾಹತವಾಗಿ ನಡೆದ ದುರ್ನೀತ

ಶ್ರೀಮಾನ್ ಮುದವೀಡು ಕೃಷ್ಣರಾಯರು

ಅವರಿಂದ

ದುಷ್ಪ್ರಚಾರದಿಂದಲೂ, ಕರ್ನಾಟಕದೊಳಗೆ ನೆಲೆನಿಂತ ಮಹಾರಾಷ್ಟ್ರೀಯರ ಎದುರೆದುರು ವಿರೋಧದಿಂದಲೂ ಕನ್ನಡಿಗರು ಬೆದರಲಿಲ್ಲ, ಬೆಚ್ಚಲಿಲ್ಲ; ತಮ್ಮ ಸ್ವತ್ವಸಂರಕ್ಷಣೆಯ ಕಾರ್ಯಕದಲ್ಲಿ ಎಳ್ಳಕಾಳಷ್ಟೂ ಹಿಂದಡಿಯಿಡಲಿಲ್ಲ, ಮಾತ್ರವಲ್ಲ; ಕೊಲ್ಹಾಪುರ, ಸಾಂಗ್ಲಿ, ಸೊಲ್ಲಾಪುರಗಳ ವರೆಗೆ ಹಬ್ಬಿದ ತಮ್ಮ ನಿಸರ್ಗಸಿದ್ಧ ಪ್ರದೇಶದಲ್ಲಿ ಕನ್ನಡತನವನ್ನು ಪುನಶ್ಚ ಪ್ರಸ್ಥಾಪಿತಗೊಳಿಸುವ ಕಾರ್ಯವನ್ನು ಹಾಗೆಯೇ ಮುಂದುವರಿಸುತ್ತ, ಶ್ರೇಯಸ್ಸನ್ನು ದೊರಕಿಸುತ್ತ ಸಾಗಿಯೇ ಇದ್ದಾರೆ. ಕನ್ನಡನಾಡಿನ ಈ ವಾಯವ್ಯೋತ್ತರ ಗಡಿಯನ್ನು ಅತ್ಯಂತ ದಕ್ಷತೆಯಿಂದ ರಕ್ಷಿಸುವುದಕ್ಕೆ ಅಲ್ಲಲ್ಲಿ ಒಳ್ಳೇ ನುರಿತ ದಂಡನಾಯಕರಂತಿರುವ ಪ್ರಮುಖ ಕಾರ್ಯಕರ್ತರನ್ನು ಕಾಪಿಗಿಟ್ಟಂತೆ—ಇಟ್ಟುಬಿಟ್ಟಿದ್ದಾರೆ! 'ಮುಂದೇನು ಗತಿ? ಹೀಗೆ ಇವರಿಗೆ ಸಡಿಲು ಕೊಟ್ಟರೆ ತುಂಗಭದ್ರೆಯ ವರೆಗೆ ಮಹಾರಾಷ್ಟ್ರವೆಂದು ಸಾಧಿಸುವ ತಮ್ಮ ಹವಣಿಕೆಗೆ ಮೂಗುದಾಣ ಬಿದ್ದರೆ, ಕೃಷ್ಣೆಯ ದಕ್ಷಿಣದಲ್ಲಿ ನೆಲಸಿರುವ ಮಹಾರಾಷ್ಟ್ರೀಯರ ಅವಸ್ಥೆಯೇನು?'.. ಎಂಬ ದೀರ್ಘ ವಿವಂಚನೆಯು ಇತ್ತಕಡೆಯ ಮರಾಟರ ಕರುಳುಗಳನ್ನು ಕೊರಗಿಸುತ್ತಿರಲೂ ಸಾಕು.

ಕರ್ನಾಟಕದಲ್ಲಿದ್ದು ಕನ್ನಡಿಗರೊಂದಿಗೆ ಹೊಂದಿಕೊಳ್ಳಲಾರದ ಮಹಾರಾಷ್ಟ್ರೀಯರ ಈ ಮನೋರೋಗ ನಿವಾರಣೆಗೆ ಚಿಕಿತ್ಸೆಯನ್ನು ಶೋಧಿಸಲು ಸಭೆ-ಸಮ್ಮೇಲನಗಳನ್ನು ಜರುಗಿಸಿ ವಿಚಾರ ಮಾಡಿದ್ದಾಯಿತು. ಮಹಾರಾಷ್ಟ್ರದ ಪ್ರಬಲವಾದ ಪ್ರಖ್ಯಾತವಾದ ಪ್ರಸಿದ್ಧವಾದ ಮಹಾಜನರ ಬೆಂಬಲವನ್ನು ಪಡೆದು, ಸ್ಪರ್ಧಮನೀಯರಾಗಿ ಬೆಳೆಯುತ್ತ ನಡೆದ ಕನ್ನಡಿಗರನ್ನು ಎದುರಿಸಬೇಕೆಂದು ನಿರ್ಣಯಿಸಲಾಯಿತು. ಗದುಗಿನ **ಡಾ. ಚಾಫೇಕರರು** "ದಕ್ಷಿಣ ಮಹಾರಾಷ್ಟ್ರ"ದೊಳಗಿನ ಮಹಾರಾಷ್ಟ್ರೀಯರ "ನಿಯೋಗಿ"ಗಳಾಗಿ ಪುಣೆಗೆ ಹೋಗಿ, ಅಲ್ಲಿಯ ವಸಂತವ್ಯಾಖ್ಯಾನ ಮಾಲೆಯ ಸಂಧಿಯನ್ನು ಸಾಧಿಸಿ, ತಮ್ಮ ಕರ್ತೃತ್ವ ಮತ್ತು ವಕ್ತೃತ್ವಶಕ್ತಿ ಸರ್ವಸ್ವವನ್ನೂ ಉಪಯೋಗಿಸಿ, ತಮ್ಮ ಒಡಲೊಳಗಿನ ಕುದಿಯನ್ನೆಲ್ಲ ಬಯಲಿಗಿಟ್ಟು ತೋಡಿಕೊಂಡದ್ದಾಯಿತು. "ದಕ್ಷಿಣ ಮಹಾರಾಷ್ಟ್ರದೊಳಗಿನ ಮಹಾರಾಷ್ಟ್ರೀಯರ ಮೇಲೆ ಕನ್ನಡಿಗರ ಅಸಂಖ್ಯಾತ ಜುಲುಮೆಗಳು ನಡೆದಿವೆ; ಇಪ್ಪತ್ತು ವರ್ಷಗಳ ಹಿಂದೆ **ಕಡಪಾ ಎಂಬವನೊಬ್ಬನು ವರ್ತಮಾನ ಪತ್ರಗಳಲ್ಲಿ ಲೇಖ ಬರೆದು ಈ ವಾದವನ್ನು ಹುಟ್ಟಿಸಿದನು;** ಭಾವನಾಪ್ರಧಾನ ಕನ್ನಡಿಗರು ಇದಕ್ಕೆ ಮನಸೋತರು. ನಮ್ಮ ಉತ್ಕರ್ಷವು ಅವರಿಗೆ ಸಹನವಾಗುವುದಿಲ್ಲ; ನಮ್ಮನ್ನೂ ನಮ್ಮ ಭಾಷೆಯನ್ನೂ ಅಲ್ಲಿ ಅವರು ಉಳಿಯಗೊಡುವ ಲಕ್ಷಣವಿಲ್ಲ; ಕನ್ನಡಿಗರ ಈ ಅತಿರೇಕದ ನಡತೆಗೆ ತಡೆಗಟ್ಟಿ ನಮ್ಮತ್ವಕ್ಕೆ ನಮ್ಮನ್ನು ಉಳಿಸಿಕೊಳ್ಳುವ ಮಹತ್ಕಾರ್ಯದಲ್ಲಿ ನಮಗೆ ಅಖಂಡ ಮಹಾರಾಷ್ಟ್ರದ ಬೆಂಬಲಬೇಕಾಗಿದೆ: ಈ ಬಗೆಯ ನೆರವು ದೊರೆಯದಿದ್ದರೆ ನಮಗೆ ತರಣೋಪಾಯವಿಲ್ಲ; ನಮ್ಮನ್ನು ಅಸಹಾಯರನ್ನಾಗಿ ಬಿಡಬೇಡಿರಿ." ಎಂಬ ಮಾತುಗಳೇ ಡಾಕ್ಟರ್ ಮಹಾಶಯರ ನಿಯೋಗಸಂದೇಶದ ಸಾರವಾಗಿರುವುವೆಂದು ಹೇಳಬಹುದು. "**ರಾಜಕಾರಣನಿಪುಣತೆಯು ಮಹಾರಾಷ್ಟ್ರಕ್ಕೇ ಮೀಸಲಾಗಿದೆ**" ಎಂಬ ಮಹಾರಾಷ್ಟ್ರೀಯರ ಮಹಾಸಿದ್ಧಾಂತವನ್ನು ಡಾಕ್ಟರ್‌ಸಾಹೇಬರು ಸಾರ್ಥಕಗೊಳಿಸಿದರೆನ್ನಬೇಕು! ಯುರೋಪದ ರಾಜಕಾರಣದೊಳಗಿನ **ಸುಡೇಟನ್** ಪ್ರಾಂತದ ಜರ್ಮನರು **ಹಿಟ್ಲರನ** ಮುಂದೆ ತಮ್ಮ ಗೋಳು ತೋಡಿಕೊಂಡು, ಇಂಗ್ಲಂಡದ ಮುಖ್ಯ ಪ್ರಧಾನರ ಮಧ್ಯಸ್ಥಿಕೆಯಿಂದ ಇಡೀ ಝೆಕ್ ರಾಷ್ಟ್ರವನ್ನು ಜರ್ಮನಿಯೊಳಗೆ ಸಮಾವೇಶಗೊಳಿಸಿದ ದೃಷ್ಟಾಂತವನ್ನು ಡಾಕ್ಟರ್ ಮಹಾಶಯರು ಕಣ್ಣುಮುಂದಿಟ್ಟುಕೊಂಡು, ಈ ನಿಯೋಗವನ್ನಂಗೀಕರಿಸಿರಬಹುದೇ? ಮಹಾರಾಷ್ಟ್ರೀಯ ಹಿಟ್ಲರನೊಬ್ಬನು ಮುಂದೆ ಬಂದು, ಭಾರತೀಯ ರಾಜಕಾರಣದ ಸರ್ವಶ್ರೇಷ್ಠ ಸಂಸ್ಥೆಯಾದ ಕಾಂಗ್ರೆಸ್ಸಿನಲ್ಲೊಬ್ಬ ಚೆಂಬರಲೇನರನ್ನುಂಟುಮಾಡಿ, ತುಂಗಭದ್ರೆಯ ವರೆಗಿನ ದಕ್ಷಿಣ ಮಹಾರಾಷ್ಟ್ರವನ್ನು ಮೂಲ ಮಹಾರಾಷ್ಟ್ರದೊಳಗೆ ಎಳೆದುಕೊಳ್ಳಬಹುದೆಂಬ ಸವಿಗನಸುಗಳನ್ನು ಡಾಕ್ಟರ್ ಮಹಾಶಯರು ಕಾಣುತ್ತಿರಬಹುದೆ?

ಬ್ರಿಟಿಷರು ಹಿಂದುಸ್ಥಾನದ ಬೇರೆ ಬೇರೆ ಭಾಗಗಳನ್ನು ಬೇರೆ ಬೇರೆಯವರಿಂದ ಗೆದ್ದುಕೊಂಡರೂ, ಈ ಪ್ರದೇಶವನ್ನು ಮಹಾರಾಷ್ಟ್ರ ಸಾಮ್ರಾಜ್ಯವನ್ನು ಮುಳುಗಿಸಿಯೇ ತಮ್ಮ ಅಂಕಿತ ಮಾಡಿಕೊಂಡರು. ಈಗ ಬ್ರಿಟಿಷರ ಆಧಿಪತ್ಯಕ್ಕೆ ಅಳಿಗಾಲ ಬಂದಿರುವ ಹೊತ್ತಿನಲ್ಲಿ, ಮಹಾರಾಷ್ಟ್ರೀಯ ವರ್ಚಸ್ವಕ್ಕೆ ಅಧೀನವಾದ 'ರಾಜ್ಯವ್ಯವಸ್ಥೆಯನ್ನು—ಇಡಿಯೆ ಹಿಂದುಸ್ಥಾನದಲ್ಲಾಗದಿದ್ದರೂ—ಇತ್ತಕಡೆಯ ಪ್ರದೇಶದಲ್ಲಾದರೂ ಯಾಕೆ ಪ್ರಸ್ಥಾಪಿಸಬಾರದೆಂಬ ಹವಣಿಕೆಯು ಹಲಕೆಲವು ಮಹಾರಾಷ್ಟ್ರೀಯರಲ್ಲಿ ನೆಲಸಿರುವುದು ಸ್ವಾಭಾವಿಕವಾಗಿದೆ. ಲೋಕಮಾನ್ಯರ ಹಿಂದಿನಿಂದ ಕಾಂಗ್ರೆಸ್ಸಿನ ಸೂತ್ರಗಳು ಮಹಾರಾಷ್ಟ್ರೀಯ ಪರಂಪರೆಯ ಕೈಯೊಳಗಿಂದ ಜಾರಿಹೋದ ಕಾಲಕ್ಕೆ, ಮಹಾರಾಷ್ಟ್ರದ ಆಂತರಿಕ ಭಾವನೆಗಳು ಎಷ್ಟೊಂದು ನೊಂದುಕೊಂಡವೆಂಬುದು ಆ ಕಾಲದ ಆಗು-ಹೋಗುಗಳನ್ನರಿತವರು ಮನಗಂಡ ಮಾತಾಗಿದೆ. "ರಾಜಕಾರಣದಲ್ಲಿ ನುರಿತವರೆಂದರೆ ಮಹಾರಾಷ್ಟ್ರೀಯರೇ" ಎಂಬ ದರ್ಪೋಕ್ತಿಗಳನ್ನು ಆಗ ಕೇಳದವರಾರು? ಮಹಾರಾಷ್ಟ್ರವನ್ನು "**ಬೃಹನ್ಮಹಾರಾಷ್ಟ್ರ**"ವನ್ನಾಗಿ ಬೆಳಸಬೇಕೆಂಬ ಹಂಬಲವು, ಮಹಾರಾಷ್ಟ್ರೀಯರ ಮಹತ್ವಾಕಾಂಕ್ಷೆಗೆ ಪ್ರಬಲವಾದ ಸಾಕ್ಷಿಯಾಗಿದೆ. ಮಹಾರಾಷ್ಟ್ರೀಯರ ಈ ಮನೋವೃತ್ತಿಯನ್ನು ಸೂಕ್ಷ್ಮವಾಗಿ ನಿರೀಕ್ಷಿಸಿದರೆ ಡಾ. ಚಾಫೇಕರರ ನಿಯೋಗ-ಗೋಷ್ಠಿಯ ಗುಟ್ಟು ಏನಿರಬಹುದೆಂಬ ಸಂಶಯವು ಯಾರಿಗೂ ಉಳಿಯಲಾರದು. ಕನ್ನಡಿಗರ ಸ್ವಸಂರಕ್ಷಣೆಯ ಚಟುವಟಿಕೆಗಳು ಹೆಚ್ಚಾಗಿ ಕಳೆಕಟ್ಟುತ್ತ ನಡೆದಂತೆ ಒಂದು ಕಾಲಕ್ಕೆ ಸಾಮ್ರಾಜ್ಯ-ಭೋಗಿಗಳಾಗಿದ್ದ ಇತ್ತಕಡೆಯ ಮರಾಟರ ಪ್ರತಿಷ್ಠೆಗೂ ವರ್ಚಸ್ವಕ್ಕೂ ಕುಂದಕವುಂಟಾಗುವಂತೆ ಕಾಣುವುದು ಕೂಡ ಡಾಕ್ಟರ್ ಮಹಾಶಯರಂತಹ ಅಭಿಮಾನಧನರಿಗೆ ಹೇಗೆ ಸಹ್ಯವಾಗಬೇಕು? ಇದೇ ಆವೇಶದಿಂದ ಡಾಕ್ಟರ್ ಮಹಾಶಯ್ರೊಂದು ಪಟ್ಟಣಕ್ಕೆ ಬಿಜಯಂಗೈದು ಅಲ್ಲಿ ಏನೇನನೋ ಸುಪಸ ತಲೆ-ಸೊಟ್ಟೊಂದು ಸಗಡಬಗಡು ಕಲೆಹಾಕಿ, ತಮ ಜನಾಂಗವನ್ನೇ ನೆಲದಲ್ಲಿ ಅವುಗಳನ್ನೆಲ್ಲ ಮನಸಾರೆ ಬೆಳಸಿ, ಕ

ಆಕಳಾಸಕಳಾ ಹೀಯಾಳಿಸಿ, ತಮ್ಮ ಕಾಲ್ಪನಿಕ ಸಂಕಟಗಳನ್ನೆಲ್ಲ ಬಾಯಾರೆ ತೋಡಿಕೊಂಡು, ಮಹಾರಾಷ್ಟ್ರದ ಲೋಕಶಕ್ತಿಗೆ ಮೊರೆಯಿಟ್ಟು ಶರಣುಹೊಕ್ಕಿರುತ್ತಾರೆ.

ತಾವು ಸರ್ವಜ್ಞರೂ ಸರ್ವಸಾಕ್ಷಿಗಳೂ ಇದ್ದಂತೆ ಭಾವನೆ ಮಾಡಿಕೊಂಡು, ಮಹಾರಾಷ್ಟ್ರೀಯರು ಅರಿಯದ ವಿಷಯಗಳನ್ನು ಕೂಡ ತಮಗೆ ಇಷ್ಟವಾದ ರೀತಿಯಲ್ಲಿ ಹುಟ್ಟಿಸಿ ಬೆಳಸಿ, ಸ್ವಮತ ಸಮರ್ಥನಪೂರ್ವಕ ಸ್ವಪಕ್ಷಮಂಡನ ಮಾಡುವ ಕಾರ್ಯದಲ್ಲಿ ತುಂಬ ನಿಷ್ಣಾತರಿರುವರೆಂಬುದನ್ನು ಕನ್ನಡಜನಾಂಗಕ್ಕೆ ಬೇರೆ ಹೇಳಬೇಕಾಗಿಲ್ಲ. ಕನ್ನಡ-ಮರಾಠೀ ವಾದದ ಹುಟ್ಟಿನ ದುಷ್ಕೀರ್ತಿಯನ್ನು ಕರ್ನಾಟಕ ಕಾರ್ಯಧುರಂಧರ **ದಿವಂಗತ ಕಡಪಾ ರಾಘವೇಂದ್ರರಾಯರ** ತಲೆಗೆ ಕಟ್ಟಿ, ಆ ಪುಣ್ಯಪುರುಷನ ವಿಷಯವಾಗಿ ಮಹಾರಾಷ್ಟ್ರದ ಲೋಕಮತವನ್ನೇ ಪ್ರಕ್ಷುಬ್ಧಗೊಳಿಸುವ ಪ್ರಯೋಗವನ್ನು ಮಹಾರಾಷ್ಟ್ರೀಯರು ನಡಿಸಿರುವುದು ಇದೇ ಬಗೆಯ ಮನೋಭೂಮಿಕೆಯ ದೃಷ್ಟಾಂತವಾಗಿದೆ. **ದಿವಂಗತ ಕಡಪಾರಾಯರು ಶ್ರೀರಾಮದಾಸರ ದಾಸಬೋಧವನ್ನು ಹಾಗೆಯೇ ಲೋಕಮಾನ್ಯರ ಕೇಸರಿಯನ್ನು ಧಾರವಾಡದ ಸಭೆಯಲ್ಲಿ ಸುಟ್ಟರೆಂಬ ನಿರರ್ಥಕವಾದ ನಿಷ್ಪ್ರಯೋಜಕವಾದ ದೌರ್ಜನ್ಯಪರಿಪೂರ್ಣವಾದ ಸುಳ್ಳು ಸಂಗತಿಯನ್ನು ಹುಟ್ಟಿಸಿ,** ಕನ್ನಡಿಗರ ವಿಷಯವಾಗಿ ಅಪಪ್ರಚಾರವನ್ನು ನಡೆಯಿಸಿರುವ ಮಹಾರಾಷ್ಟ್ರೀಯರಿಗೆ ಸ್ವಮತ ಸಮರ್ಥನದ ಮುಂದೆ ವಿವೇಕದ ವಿಚಾರವೇ ಉಳಿಯುವುದಿಲ್ಲವೆಂಬುದು ಸ್ಪಷ್ಟವಾಗಿದೆ. ಸ್ವಧರ್ಮ, ಸ್ವಸಂಸ್ಕೃತಿ ಸ್ವದೇಶ ಇವುಗಳ ಸಾತ್ತ್ವಿಕ ಅಭಿಮಾನವನ್ನು ಮಹಾರಾಷ್ಟ್ರೀಯರಲ್ಲಿ ಜಾಗೃತಗೊಳಿಸುವುದಕ್ಕಾಗಿ ಶ್ರೀ. ಗಣಪತ್ಯುತ್ಸವ, ಶ್ರೀಶಿವಾಜೀ ಉತ್ಸವಾದಿಗಳ ಉಪಕ್ರಮ ಮಾಡಿದ ಲೋಕಮಾನ್ಯರು ಮುಸಲ್ಮಾನರ ವಿಷಯಕವಾದ ದ್ವೇಷಬುದ್ಧಿಯಿಂದ ಹಾಗೆ ಮಾಡಿದರೆಂದು ಹೇಳುವುದೂ ಕರ್ನಾಟಕದ ಚಟುವಟಿಕೆಗಳು ಮಹಾರಾಷ್ಟ್ರದ ದ್ವೇಷದಿಂದ ಪ್ರಾದುರ್ಭವಿಸಿರುವುವೆಂದು ಹೇಳುವುದೂ ಅಷ್ಟೇ ಸಮಂಜಸವಾಗಿವೆ. ಲೋಕಮಾನ್ಯರು ಪುಣೆಯ ಸಭೆಯೊಂದರಲ್ಲಿ ಮುಸಲ್ಮಾನರ ಕುರಾಣವನ್ನು ಸುಟ್ಟರೆಂದು ಇಂದು ಯಾವನಾದರೂ ಕಲೆತಿರುಕನು ಸಾರಹತ್ತಿದರೆ ಆತನ ಬಡಬಡಿಕೆಗೆ ಕೊಡಬಹುದಾದ ಬೆಲೆಯನ್ನೇ, ದಿವಂಗತ ಕಡಪಾರಾಯರು ದಾಸಬೋಧವನ್ನು ಸುಟ್ಟರೆಂಬ ಹುಯಿಲಿಗೆ ಕೊಡಬೇಕಾಗಿದೆ. ಲೋಕಮಾನ್ಯರ ಕೇಸರಿಯು ಅವರ ತರುವಾಯ ಕಾಂಗ್ರೆಸ್ಸಿನ ವಿರುದ್ಧವಾಗಿಯೂ ಕರ್ನಾಟಕದ ಆಶೆ-ಆಕಾಂಕ್ಷೆಗಳ ವಿರುದ್ಧವಾಗಿಯೂ ಶಿಷ್ಟಾಚಾರವನ್ನು ಮೀರಿ ಪ್ರಚಾರ ಮಾಡಹತ್ತಲು ಕರ್ನಾಟಕದಲ್ಲಿ ಕೇಸರಿಗೆ ಬಹಿಷ್ಕಾರ ಹಾಕಬೇಕೆಂಬ ಚಳವಳಿ ನಡೆದದ್ದೇನೋ ನಿಜ. ಈ ಪ್ರಚಾರದಲ್ಲಿ ದಿವಂಗತ ಕರ್ಪೂರ ಶ್ರೀನಿವಾಸರಾಯರೂ ಕರ್ನಾಟಕ ಕ[illegible]ಪುರೋಹಿತರಾಗಿರುವ ಶ್ರೀಮಾನ್ ಆಲೂರ ವೆಂಕಟರಾಯರೂ ಹೊಣೆ[illegible]ರಾಗಿದ್ದಾರೆ. ದಿವಂಗತ ಕಡಪಾರಾಯರು ಧಾರವಾಡದ ಸಭೆಯಲ್ಲಿ [illegible]ರಿಯನ್ನು ನಿಷೇಧಿಸಿರಬಹುದೇ ವಿನಾ ಅದನ್ನು ಸುಟ್ಟರೆಂಬುದು ಅ[illegible]ಕ್ತ ಸುಳ್ಳು. ಈ ಮಾತುಗಳ ಸತ್ಯಾಸತ್ಯತೆಯ ವಿಷಯವಾಗಿ ಪತ್ರಿಕೆಗಳಲ್ಲಿ ವಾದವೇ ನಡೆದಿರುವಾಗ ಹೆಚ್ಚಿಗೆ ಹೇಳುವ ಕಾರಣವೇ ಇಲ್ಲ. ಕನ್ನಡ-ಮರಾಠೀ ವಾದಕ್ಕೆ ಈ ಭಾಗದಲ್ಲಿ ಆರಂಭವಾದಾಗ ದಿವಂಗತ ಕಡಪಾ ಅವರಾಗಲಿ, ಗದುಗಿನ ಡಾ. ಚಾಫೇಕರರಾಗಲಿ ಕಡಪಾರಾಯರನ್ನು ಮನ ಬಂದಂತೆ ಹಳಿಯಲು ಮುಂದಾಗಿರುವ ಮಹಾರಾಷ್ಟ್ರದ ಬೇರೆ ಲೇಖಕರಾಗಲಿ, ಇವರಾರೂ ಇನ್ನೂ ಜಗತ್ತಿನ ಬೆಳಕನ್ನೇ ಕಂಡಿದ್ದಿಲ್ಲ. ಈ ವಾದದ ಗುಟ್ಟು, ಹುಟ್ಟು, ಬೆಳಗೆ, ಹಬ್ಬುಗೆಗಳನ್ನೆಲ್ಲ ಕಣ್ಣಾರೆಕಂಡು, ಅದರೊಳಗೆ ಮನವರಿತು ಬೆರೆತು ಸುರಿತು ಹಣ್ಣಾದವರನೇಕರು ಇಂದಿಗೂ ಕರ್ನಾಟಕದಲ್ಲಿ ಬದುಕಿದ್ದಾರೆ. ಇಂಥವರನ್ನೆಲ್ಲ ಗಂಡುಸುತನದಿಂದ ಎದುರಿಸುವ ಧೈರ್ಯವಿಲ್ಲದೆ ಸತ್ತು ಸ್ವರ್ಗದಲ್ಲಿರುವ ಮಹಾಪುರುಷ ಕಡಪಾ ರಾಘವೇಂದ್ರರಾಯರ ಮೇಲೆ ಕೈ ಮಾಡಿ, ಬಾಯಿ ಹರಿಬಿಟ್ಟು, ತಮ್ಮ ತೀಟೆಯನ್ನು ತೀರಿಸಿಕೊಳ್ಳಬಯಸುವ ಶಿಖಂಡಿಗಳು ಮಹಾರಾಷ್ಟ್ರದಲ್ಲಿ ಹುಟ್ಟಿರುವುದು ಒಂದುಬಗೆಯಿಂದ ಮಹಾರಾಷ್ಟ್ರಕ್ಕೇ ಕಲಂಕವಾಗಿದೆ. "Never speak ill of the dead" ಎಂಬುದೊಂದು ಇಂಗ್ಲಿಷ್ ಗಾದೆಯು ಸತ್ತವರ ದುರ್ಗುಣಗಳನ್ನು ಕೆದರಿ ತೆಗೆಯಬಾರದೆಂಬ ಸೌಜನ್ಯವನ್ನು ಕಲಿಸುತ್ತದೆ. ಸತ್ತವರಲ್ಲಿ ಇಲ್ಲದ ಸಲ್ಲದ ದುರ್ಗುಣಗಳನ್ನು ಆರೋಪಿಸಿ ಮನಬಂದಂತೆ ಹಳಿಯುವುದು ಸೌಜನ್ಯವೂ ಅಲ್ಲ ; ವಿವೇಕವೂ ಅಲ್ಲ; ಶುದ್ಧ ಹೇಡಿತನ (Cowardice) ವೆಂಬುದು ಸ್ವಯಂಸಿದ್ಧವಾಗಿದೆ.

ಕನ್ನಡ-ಮರಾಠೀ ವಾದವು ೧೮೯೬ರಲ್ಲಿ ಧಾರವಾಡದಲ್ಲಿ ಮೊದಲು ಒಡಮೂಡಿತು. ೧೮೯೬ರ ಮುಂದೆ ಧಾರವಾಡಕ್ಕೆ ಹೊಸದಾಗಿ ಬಂದ ವಿದ್ಯಾರ್ಥಿಗಳು ಸ್ವಭಾಷೆಯಾದ ಮರಾಠಿಯ ವಿಷಯದಲ್ಲಿ ತುಂಬಾ ಆಸ್ಥೆಯನ್ನು ವಹಿಸುತ್ತಿದ್ದರು. ಇಂಥವರಲ್ಲಿ **ರಾ. ಬ. ಮರಾಠೆ** ಸಬ್‌ಜಜ್ಜರು ಹಾಗು ಎಜ್ಯುಕೇಶನಲ್ ಇನ್ಸ್‌ಪೆಕ್ಟರರಾಗಿ ಬಂದಿದ್ದ **ಸಹಸ್ರಬುದ್ಧೆ**ಯವರು ಪ್ರಮುಖರು. ಎಂಜಿನಿಯರ್ ಖಾತೆಯಲ್ಲಿ ಕೆಲಸಮಾಡುತ್ತಿದ್ದ **ಕೃಷ್ಣಾಜೀ ಆಬಾಜಿ ಗುರೂಜೀ** ಎಂಬವರೊಬ್ಬರು ಸಾತಾರೆಯಿಂದ ಇಲ್ಲಿಗೆ ವರ್ಗವಾಗಿ ಬಂದರು. ಇವರೆಲ್ಲರಲ್ಲಿ ಸಾರ್ವಜನಿಕ ಚಟುವಟಿಕೆಗಳ ಉತ್ಸಾಹವು ಚೆನ್ನಾಗಿಯೆ ಮೈಗೂಡಿಕೊಂಡಿತ್ತು. ಹೊಸದಾಗಿ ಇಲ್ಲಿಗೆ ವಕೀಲಿಯ ವ್ಯವಸಾಯಕ್ಕೆ ಬಂದು ನಿಂತ **ವಿಶ್ವನಾಥರಾವ ಹೇರ್ಲೇಕರರೂ** ಮತ್ತೆ ಒಬ್ಬಿಬ್ಬರೂ ಇವರೊಳಗೆ ಕೂಡಿಕೊಂಡು ಕೆಲಸಮಾಡುವುದರಲ್ಲಿ ಮುಂದುವರಿದರು. ಇವರ ಪ್ರಯತ್ನಗಳಿಗೆ ಸಾರ್ವಜನಿಕ ಕೆಲಸಗಳ ಅಭಿಲಾಷೆಯುಳ್ಳವರೆಲ್ಲರೂ ಕನ್ನಡಿಗರು ಮರಾಟಿಗರೆಂಬ ಭೇದಭಾವವಿಲ್ಲದೆ ನೆರವಾಗುತ್ತಿದ್ದರು. ಗುರೂಜಿಯವರು ಗೋರಕ್ಷಣ ಸಂಸ್ಥೆಯ ಕಾರ್ಯಕ್ಕೆ ಉಪಕ್ರಮ ಮಾಡಿದರು. ಗುರೂಜಿಯವರ ವಕ್ತೃತ್ವವೆಂದರೆ ಅದೊಂದು ಪ್ರಭಾವಶಾಲಿಯಾದ ಮೋಹಿನೀಮಂತ್ರ. ಅವರಿಗೆ ಇಂಗ್ಲಿಷಿನ ಜ್ಞಾನವಿಲ್ಲದಿದ್ದರೂ ಆಶ್ಚರ್ಯಕಾರಕವಾದ ಬಹುಶ್ರುತತ್ವವು ಅವರ ವ್ಯಾಖ್ಯಾನಗಳಲ್ಲಿ ಹೊರಹೊಮ್ಮುತ್ತಿತ್ತು. ಗೋರಕ್ಷಣ ವಿಷಯಕವಾದ ಪ್ರಚಾರವೆಲ್ಲವೂ ಮರಾಠಿಯಲ್ಲಿಯೇ ಸಾಗಹತ್ತಿತು. **ರಾ. ಬ. ಮಥಾಳೆಯವರು** ತಮ್ಮದೊಂದು ವ್ಯಾಖ್ಯಾನದಲ್ಲಿ

ಮಹಾರಾಷ್ಟ್ರೀಯರ ಸದ್ಗುಣಗಳನ್ನು ಹೊಗಳಿ ಮರಾಠೀ ಭಾಷೆಯ ಸೊಬಗನ್ನು ಬಣ್ಣಿಸಿದ್ದೂ ನನಗೆ ಪೂರ್ಣವಾಗಿ ನೆನಪಿನಲ್ಲಿದೆ. ಎಜ್ಯುಕೇಶನ್ ಇನ್ಸ್‌ಪೆಕ್ಟರರಾಗಿದ್ದ ಸಹಸ್ರಬುದ್ಧೆಯವರಂತೂ ತಮ್ಮ ಡಿಪಾರ್ಟ್‌ಮೆಂಟಿನಲ್ಲಿ ಆದಷ್ಟು ಮರಾಠಿಯನ್ನು ವಿಸ್ತರಿಸಲು ಹವಣಿಸಹತ್ತಿದ್ದರು. ತಮ್ಮ ಅಧಿಕಾರದಲ್ಲಿ—ಶಕ್ಯವಾದ ಮಟ್ಟಿಗೆ—ಮರಾಠೀ ಭಾಷೆಯನ್ನು ಇಲ್ಲಿ ಪ್ರಚಾರ ಮಾಡಲು ಅವರು ಹಿಂದೆ ಮುಂದೆ ನೋಡಲಿಲ್ಲ. ೧೮೯೩ ರಿಂದ ೧೮೯೬ ರ ವರೆಗಿನ ಇವರ ಚಟುವಟಿಕೆಗಳಿಗೆ ಯಾವ ಕನ್ನಡಿಗರೂ ವಿರೋಧ ಮಾಡಲಿಲ್ಲ. ಎಲ್ಲರೂ ಇವರೊಡನೆ ಸಹಕಾರದಿಂದಲೆ ನಡೆಯುತ್ತಿದ್ದರು. ೧೮೯೬ ರಲ್ಲಿ ಧಾರವಾಡ ವಕ್ತೃತ್ವೋತ್ತೇಜಕ ಸಭೆಯನ್ನು ಸ್ಥಾಪಿಸಿ, ಎರಡು ತಿಂಗಳು ಮೊದಲು ಕನ್ನಡ ಮರಾಠೀ ಎರಡೂ ಭಾಷೆಗಳಲ್ಲಿ ಬೇರೆ ಬೇರೆ ವಿಷಯಗಳನ್ನಿಟ್ಟು ಪ್ರಕಟಿಸಿ, ಪಾರಿತೋಷಕ ಕೊಡುವ ಉಪಕ್ರಮವನ್ನು ಕೈಕೊಂಡರು. ೨-೩ ದಿವಸಗಳ ಕಾರ್ಯ ಮುಗಿದನಂತರ ಮರುದಿವಸಕ್ಕೆ ೨೪ ತಾಸುಗಳ ಅವಧಿಯಿಂದ ಮಾತನಾಡತಕ್ಕವರಿಗೆ ೧೦ ರೂಪಾಯಿಯ ವಿಶಿಷ್ಟ ಪಾರಿತೋಷಕವೆಂದು ಸಾರಿದರು. ಮಾತ್ರ ಈ ಪರೀಕ್ಷೆಯು ಮರಾಠೀ ಭಾಷೆಯಲ್ಲಿಯಷ್ಟೇ ನಡೆಯುವುದೆಂದು ಹೇಳಿದರು. ವಕ್ತೃತ್ವೋತ್ತೇಜಕ ಸಭೆಯ ಕಾರ್ಯಕಾರಿ ಮಂಡಲದ ಈ ನಿರ್ಣಯವು ಕನ್ನಡಕ್ಕೆ ಅನ್ಯಾಯಮಾಡುವಂತಹದೆಂದು ದಿವಂಗತ ವಕೀಲ **ಹೊನ್ನಾಪುರಮಠ ಗದಿಗೆಯ್ಯನವರು** ಸಭೆಯಲ್ಲಿಯೇ ಆಕ್ಷೇಪವೆತ್ತಿದರು. ಕವಿಮಾಟಿಯವರು ತಮ್ಮ ಹಟ ಬಿಡಲೊಲ್ಲರು. ಧಾರವಾಡದ ಕನ್ನಡ ಜನತೆಯು ಇದನ್ನು ಪ್ರತಿಭಟಿಸಿ ನಿಂತಿತು. ಸಭಾಸ್ಥಾನವಾಗಿದ್ದ ಗರಗದವರ ಥೇಟರು ಗದಗದಿಸಿಹೋಯಿತು. ಕೊನೆಗೆ ವಕೀಲ **ಘಾಟಕ ಗುರುನಾಥರಾಯರು** ಆ ವಿಷಯದ ಮೇಲೆ ಕನ್ನಡದಲ್ಲಿ ಮಾತನಾಡುವ ಧೀರರೇ ಇಲ್ಲ. ಯಾರಾದರೂ ಇದ್ದರೆ ಮುಂದೆ ಬಂದು ಮಾತನಾಡಿ ೧೦೦ ಕ್ಕೆ ೬೦ ರಂತೆ ಗುಣಗಳನ್ನು ದೊರಕಿಸಿದರೆ, ತಾವು ೧೫ ರೂಪಾಯಿ ಪಾರಿತೋಷಕ ಕೊಡುವುದಾಗಿ ಈರ್ಷೆಯಿಂದ ಸಾರಿ, ಪರಿಸ್ಥಿತಿಯನ್ನು ಶಾಂತಗೊಳಿಸಿದರು.

ಮರುದಿವಸ ಸಂಜೆಯ ೬ ಗಂಟೆಯೊಳಗೆ ಕನ್ನಡ ಭಾಷಣಕ್ಕೆ ೮ ಜನರು, ಮರಾಠಿಗೂ ಸುಮಾರು ಅಷ್ಟೇ ಜನರು ಸ್ಪರ್ಧಾಳುಗಳಾಗಿ ಹೆಸರು ಬರೆಯಿಸಿದರು. ಒಂದೇ ದಿವಸ ಎಲ್ಲರ ಪರೀಕ್ಷೆ ಮುಗಿಯುವುದು ಅಸಾಧ್ಯವೆಂದು ಕನ್ನಡಿಗರನ್ನು ಮೊದಲು ಪರೀಕ್ಷಿಸುವುದಾಗಿ ಕವಿಮಾಟಿಯವರು ಗೊತ್ತುಪಡಿಸಿದರು. ಈ ವ್ಯವಸ್ಥೆಯಿಂದ ಮರಾಠಿಯವರಿಗೆ ೪೮ ತಾಸಿನ ಅವಧಿ ದೊರೆಯುವುದಲ್ಲದೆ, ಕನ್ನಡಿಗರ ವಿಷಯವಿವೇಚನೆಯ ದಾರಿಯೂ ಅವರಿಗೆ ಮಾರ್ಗದರ್ಶಕವಾಗುವುದೆಂದು ಕನ್ನಡಜನತೆಯಿಂದ ಆಕ್ಷೇಪವೆತ್ತಲಾಯಿತು. ಆದರೂ ಕವಿಮಾಟಿಯವರು ಕೇಳಲಿಲ್ಲ, ಕನ್ನಡಿಗರ ಪರೀಕ್ಷೆ ಅಂದೆಯೆ ನಡೆಯಿತು. ಮರುದಿನ ಮರಾಠಿಯವರ ಪರೀಕ್ಷೆಯಾಯಿತು. ಕನ್ನಡಿಗರಲ್ಲಿ ನಾನೂ ನನ್ನ ಮಿತ್ರರಾಗಿದ್ದ **ವಿಶ್ವನಾಥ ಜೋಶಿ**ಯವರೂ (ಇವರೇ ಮುಂದೆ ಹುಬ್ಬಳ್ಳಿಯಲ್ಲಿ ವಕೀಲರಾಗಿದ್ದು ಅಸಹಕಾರದ ಆಂದೋಲನದಲ್ಲಿ ಒಂದು ವರ್ಷ ಶಿಕ್ಷೆಯನ್ನು ಅನುಭೋಗಿಸಿ ಬಂದವರು; ಕಾಂಗ್ರೆಸ್ಸಿನ ಚಟುವಟಿಕೆಗಳಲ್ಲಿ ಭಾಗವಹಿಸಿದರೆಂದು ಪೆನಶನ್ ಕಳಕೊಂಡಿದ್ದ ನಿವೃತ್ತ ಎಜ್ಯುಕೇಶನಲ್ ಇನ್ಸ್‌ಪೆಕ್ಟರ್ ಜೋಶಿ ವಿನಾಯಕರಾಯರ ಅಣ್ಣಂದಿರ ಮಕ್ಕಳು.) ಸ್ಪರ್ಧೆಗೆ ನಿಂತಿದ್ದೆವು. ಧಾರವಾಡದ ಸುಪ್ರಸಿದ್ಧ ಕನ್ನಡ ವಿದ್ವಾಂಸರಾಗಿದ್ದ **ವೆಂಕಟ ರಂಗೋ ಕಟ್ಟಿ, ರಾಮಚಂದ್ರ ಹಣಮಂತ ದೇಶಪಾಂಡೆ, ಅಣ್ಣಾರಾವ ಸವದಿ,** ಮೊದಲಾದವರು ಕನ್ನಡ ಭಾಗಕ್ಕೆ ಪರೀಕ್ಷಕರಾಗಿದ್ದರು. "ಹಿಂದುಸ್ಥಾನದ ಜನಸಂಖ್ಯೆಯ ಪ್ರಮಾಣವು ಬೆಳೆಯುತ್ತ ನಡೆದಿರುವುದೆಂಬ ಸಂಗತಿಯನ್ನು ಲಕ್ಷ್ಯಕ್ಕೆ ತಂದುಕೊಂಡು, ಮುಂದಿನ ಹಿಂದೀ ಜನಾಂಗದ ಬಡತನವನ್ನು ನಿವಾರಿಸಲು ಯಾವ ಉಪಾಯಗಳನ್ನು ಕೈಕೊಳ್ಳಬೇಕು?" ಎಂಬುದೇ ಉಪನ್ಯಾಸದ ವಿಷಯವಾಗಿತ್ತು.

* * *

ಪರಿಣಾಮ ಹೇಳಿ ಪಾರಿತೋಷಕ ಹಂಚುವ ಸಮಾರಂಭದ ದಿವಸ, ಥೇಟರು ಬಿರಿಯುವಂತೆ ಜನಸಂದಣಿ; ಹಾಯಸ್ಕೂಲಿನ ಹೆಡ್‌ಮಾಸ್ತರರಾಗಿದ್ದ ಕೇಸ್ಕರ ಎಂಬವರು ಅಧ್ಯಕ್ಷರಾಗಿದ್ದರು. ತಾತ್ಕಾಲಿಕ ವಿಷಯವನ್ನು ಹೇಳಿದವರೂ ಅವರೇ. ಮರಾಠೀ ಜನರ ಪರಿಣಾಮ ಹೇಳಿ ಕವಿಮಾಟಿಯ ಹತ್ತು ರೂಪಾಯಿಯ ಪಾರಿತೋಷಕವು ಯಾರಿಗೆಂಬುದನ್ನು ಕಾರ್ಯದರ್ಶಿಗಳು ಸಾರಿ, ಕನ್ನಡಿಗರೊಳಗೆ ಮುದುವೇಡಕರರಿಗೆ ೬೨ ಗುಣಗಳು ಬಿದ್ದಿವೆಯಾದರೂ ಗುರುನಾಥರಾಯರು ತಮ್ಮ ಕರಾರುಗಳನ್ನು ಅವರು ಪೂರ್ಣ ಮಾಡಿಲ್ಲವಾದ ಮೂಲಕ ಪಾರಿತೋಷಕ ಕೊಡಲಾರೆವೆಂದು ಹೇಳುತ್ತಾರೆಂದೂ ಹೇಳಿದರು. ಆಗ ಥೇಟರಿನ ತುಂಬೆಲ್ಲ ಕರಾರು ಮುರಿದದ್ದೇನೆಂಬ ಪ್ರಶ್ನೆಯ ಸುರಿಮಳೆಯ ಕೋಲಾಹಲ. ಆಗಿನ ತರುಣರ ಪೀಳಿಗೆಯ ಮುಖಂಡರು **ಗದಿಗೆಯ್ಯನವರು.** ಅವರು ತಮ್ಮ ವಾಗ್ಝರಿಯಿಂದ ಗುರುನಾಥರಾಯರಿಗೆ ಆಹ್ವಾನವನ್ನೇ ಕೊಟ್ಟರು. ಬಹಳ ಹೊತ್ತು ತಿಕ್ಕುಮುಕ್ಕಾಟವಾದನಂತರ '**ಮುದುವೇಡಕರನ** ಕೈಯಲ್ಲಿ ಟಿಪ್ಪಣೆಗಳ ಕಾಗದವಿತ್ತು, ಆದುದರಿಂದ ಅವನು ತನ್ನ ಹಕ್ಕನ್ನು ಕಳೆದುಕೊಂಡಿದ್ದಾನೆ' ಎಂದು ಗುರುನಾಥರಾಯರ ಪರವಾಗಿ ಕಾರ್ಯದರ್ಶಿಗಳು ಸಾರಿದರು. ಆಗ ನಾನೇ ಸ್ವಸಮರ್ಥನೆಗಾಗಿ ವೇದಿಕೆಯನ್ನೇರಬೇಕಾಯಿತು, "ನನ್ನ ಕೈಯಲ್ಲಿ ಎರಡು ಬೆರಳು ಅಗಲವಾದ ಒಂದು ಗೇಣುದ್ದವಾದ ಕಾಗದದ ಚೂರು ಇದ್ದದ್ದೇನೋ ನಿಜ; ಅದರಲ್ಲಿ ಟಿಪ್ಪಣೆಗಳಿರಲಿಲ್ಲ. ವಿಷಯವು ಉದ್ದೋಉದ್ದವಿದ್ದುದರಿಂದ ಅದನ್ನು ಬರೆದುಕೊಂಡು ಬಂದೆ; ನನಗೆ ಓದಿ ಮುಂದೆ ವಿವೇಚನಮಾಡಬೇಕಾಯಿತು. ಮೇಲಾಗಿ ಕೈಯಲ್ಲಿ ಟಿಪ್ಪಣೆಗಳ ಕಾಗದವಿರಕೂಡದೆಂಬ ಕರಾರು ಮೊದಲು ಹೇಳಲಾಗಿದ್ದಿಲ್ಲ. ಪರೀಕ್ಷಕರಾಗಲಿ, ಸ್ವತಃ ಗುರುನಾಥರಾಯರಾಗಲಿ ನನ್ನ ಕೈಯೊಳಗಿನ ಕಾಗದದಿಂದ ಮುಂದೆ ಅನರ್ಥವಾದೀತೆಂಬ ಎಚ್ಚರವನ್ನೂ ನನಗೆ ಕೊಡಲಿಲ್ಲ. ಆದುದರಿಂದ ಗುರುನಾಥರಾಯರ ಈಗಿನ ವಾದವು ನಿರರ್ಥಕವಾಗಿದೆ. ಅವರು ಪಾರಿತೋಷಕ ಕೊಡದಿದ್ದರೂ ಮಹತ್ತ್ವವಿದ್ದಲ್ಲ. ಪಾರಿತೋಷಕದ ೧೫ ರೂಪಾಯಿಗಳ ಆಶೆಯಿಂದ ನಾನು ಮಾತನಾಡಲು ಬಂದವನಲ್ಲ, ಕನ್ನಡಿಗರ ಮೇಲೆ ಮಾಡಲಾದ ದೋಷಾ-

ಡೋಂಗರೆ ಇವರ ಬಾಲಾಮೃತವು

ಸೊರಗಿ ಕಡ್ಡಿಯಂತಾಗಿ ನಿರ್ಬಲರಾದ

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ರೋಪಣೆಯು ನಿವಾರಣೆಯಾಗಬಹುದಾದರೆ ನೋಡಬೇಕೆಂಬ ನಿರಿಚ್ಛಾಪ್ರವೃತ್ತಿಯಿಂದ ನಾನು ಬಂದದ್ದು. ವಾಗ್ದೇವಿಯ ಅನುಗ್ರಹದಿಂದ ಕನ್ನಡಕುಲಕ್ಕೇ ಇಂದು ಜಯದೊರೆಯಿತು. ಇಷ್ಟೇ ಸಾಕು. ಇದರ ಮುಂದೆ ೧೫ ರೂಪಾಯಿಗಳ ಬೆಲೆಯೇನು ! " ಎಂದು ನಾನು ಸ್ಪಷ್ಟೀಕರಣಮಾಡಿದೆನು. ಕೊನೆಗೆ ಪರೀಕ್ಷಕರು ತಮ್ಮತಮ್ಮೊಳಗೆ ಮಾತನಾಡಿಕೊಂಡು ನನಗೆ ೧೫ ರೂಪಾಯಿಗಳ ಪಾರಿತೋಷಕವನ್ನು ಕೊಟ್ಟೇಬಿಟ್ಟರು. ನಾನು ಅವುಗಳೊಳಗಿನ ೫ ರೂಪಾಯಿಗಳನ್ನು ಗುರುನಾಥರಾಯರ ಶ್ರೀಜಗದ್ಗುರು ಶಂಕರಾಚಾರ್ಯ ಸಂಸ್ಕೃತಪಾಠಶಾಲೆಗೂ ೫ ರೂ. ಗಳನ್ನು ಕರ್ನಾಟಕ ವಿದ್ಯಾವರ್ಧಕಸಂಘಕ್ಕೂ ೫ ರೂಪಾಯಿಗಳನ್ನು ನಾವೇ ಯುವಕರು ಮಾಡಿಕೊಂಡಿದ್ದ "**ಪ್ರಾಚ್ಯ ಕ್ರೀಡಾ ಸಂವರ್ಧಕ ಮಂಡಲ**"ಕ್ಕೂ ಅಲ್ಲಿಂದಲ್ಲೇ ಕಾಣಿಕೆಯಾಗಿ ಹಂಚಿಬಿಟ್ಟೆನು. ಗುರುನಾಥರಾಯರೂ ಆ ೫ ರೂಪಾಯಿಗಳನ್ನು ಒಳ್ಳೇ ಕ್ರೀಡಾವಿನೋದಭಾವದಿಂದ ಸ್ವೀಕರಿಸಿದರು. ಸಭೆ ಮುಗಿದು ಮನೆಗೆ ಹೋಗುವಾಗ **ವೆಂಕಟ ರಂಗೋ ಕಟ್ಟಿ, ರಾಮಚಂದ್ರ ಹಣಮಂತ ದೇಶಪಾಂಡೆ** ಇವರು ನನ್ನ ಬೆನ್ನು ತಟ್ಟಿ " ಇಂದು ನೀನು ಧಾರವಾಡದ ಕನ್ನಡಿಗರ ಮಾನ ಉಳಿಸಿದೆ " ಎಂದು ಅಭಿನಂದಿಸಿದರು. " ನಿಮ್ಮ ಹರಕೆಯ ಫಲವೇ ಇದು " ಎಂದು ನಾನು ಅವರಿಗೆ ಅಭಿವಂದಿಸಿದೆನು. ಪರೀಕ್ಷಕರು ಮೊದಲು ಕೊಟ್ಟ ಗುಣಗಳನ್ನು ಪಕ್ಷಪಾತಬುದ್ಧಿಯಿಂದ ತಿದ್ದಿ ಹೆಚ್ಚಿಗೆ ಮಾಡಿದರೆಂಬ ಕವಿಗಾಟಿಯ ಆಕ್ಷೇಪವನ್ನು ಬಯಲಿಗೆ ಕೆಡವದೆ, ಗುರುನಾಥರಾಯರು ತಾವೇ ಜನರ ಆಕ್ಷೇಪಕ್ಕೆ ಗುರಿಯಾಗುವ ಹೊಣೆ ಹೊತ್ತರೆಂಬುದು ಹಿಂದಿನಿಂದ ತಿಳಿದು ಬಂದಿತು.

ಈ ವಿಷಯವಾಗಿ ಮುಂಬಯಿಯ "ಇಂದುಪ್ರಕಾಶ"ವೆಂಬ ಮರಾಠೀ ದೈನಿಕದಲ್ಲಿ " ಮರಾಠೀ ವಿರುದ್ಧ ಕಾನಡೀ" ಎಂಬುದೊಂದು ಲೇಖವು ಕೂಡಲೆ ಪ್ರಸಿದ್ಧವಾಯಿತು. ಅದಕ್ಕೆ ನಾನು ಮರಾಠಿಯಲ್ಲಿಯೇ ಉತ್ತರ ಬರೆದು ಕಳಿಸಿದೆನು. ಅದನ್ನೂ ಅವರು ಮುದ್ರಿಸಿದರು. ಹೀಗೆ ನಾಲ್ಕಾರು ಲೇಖ-ಪ್ರತಿಲೇಖಗಳು ಆಗ ಉತ್ತರ-ಪ್ರತ್ಯುತ್ತರಗಳಾಗಿ ಪ್ರಸಿದ್ಧವಾಗಿವೆ. ಮೂಲ ಲೇಖಗಳೆಲ್ಲ **ಕೃಷ್ಣಾಜಿ ಆಬಾಜಿ ಗುರೂಜಿಯವರವೇ** ಎಂಬುದು ಅವರ ಬಾಯಿಯಿಂದಲೇ ನನಗೆ ತಿಳಿಯಿತು. ಗುರೂಜಿಯವರು ನನಗೆ ವಸ್ತುತಃ ವಕ್ತೃತ್ವ ಕಲೆಯನ್ನು ಕಲಿಸಿದ ಸಾಕ್ಷಾತ್ ಗುರುಗಳು; ವಿಷಯಗಳ ಅಭ್ಯಾಸವನ್ನು ಹೇಗೆ ಮಾಡಬೇಕೆಂಬುದನ್ನಾರಂಭಿಸಿ ನಿಲುವು, ಭಾವಭಂಗಿಗಳ ಅಂಗವಿನ್ಯಾಸ ವಿಕ್ಷೇಪಗಳನ್ನು ಪ್ರತ್ಯಕ್ಷ ನನಗೆ ಕಲಿಸಿದವರೇ ಅವರು. ಮಾಘ ಫಾಲ್ಗುಣ ತಿಂಗಳುಗಳಲ್ಲಿ, ಮದೀಹಾಳದ ಹತ್ತಿರದ ಹೊಲಗಳ ಒಂದು ಬಾಂದಿನ ಮೇಲೆ ತಾವು ನಿಂತು, ಎದುರು ಬಾಂದಿಗೆ ನನ್ನನ್ನು ನಿಲ್ಲಿಸಿ ಗಾಳಿಗೆ ಎದುರಾಗಿ ತಮಗೆ ಕೇಳಿಸುವಂತೆ ಗಟ್ಟಿಯಾಗಿ ಮಾತನಾಡಲು ಹಚ್ಚಿ, ನನ್ನ ಕಂಠತ್ರಾಣಕ್ಕೆ ವ್ಯಾಯಾಮ ಕೊಟ್ಟು, ನನ್ನ ಧ್ವನಿಗೆ ಒಂದು ಬಗೆಯ ಸ್ಥಿರತೆಯನ್ನು ತರಲು ಕಾರಣರಾದವರೂ ಅವರೇ. ಹೀಗೆ ಗುರೂಜಿಯವರಿಗೂ ನನಗೂ ಗುರುಶಿಷ್ಯ ಸಂಬಂಧವಿದ್ದಮೂಲಕ ತಮ್ಮ ಲೇಖಗಳಿಗೆ ಪ್ರತಿಯಾಗಿ ನಾನು ಬರೆದುವುಗಳನ್ನು ನೋಡಿ ಸಂತೋಷಪಟ್ಟು ನನ್ನ ಮನೆಗೆ ಬಂದು ನನ್ನನ್ನು ತಬ್ಬಿಕೊಂಡು ಅಭಿನಂದಿಸಿದರು. " ಕೃಷ್ಣಾ, ನನ್ನಾ ನಿನ್ನಾ ಈ ಲೇಖನ ಯುದ್ಧವು ಪುರಾಣಕಾಲದ ಪರಶುರಾಮ-ಭೀಷ್ಮರ ಯುದ್ಧವಾದಂತಾಯಿತು; ನಾನು ಸೋತೆನು; ನಿನ್ನಂಥ ಶಿಷ್ಯನಿಂದ ಸೋಲು ಬಂದದ್ದೂ ನನಗೊಂದು ಭೂಷಣವೇ " ಎಂದು ಕಣ್ಣಲ್ಲಿ ನೀರು ತಂದು ನುಡಿದರು. ನನ್ನ ವಿಷಯಕವಾದ ಈ ಅಕೃತ್ರಿಮ ವಾತ್ಸಲ್ಯವು ಗುರೂಜಿಯವರಲ್ಲಿ ಕೊನೆಯವರೆಗೆ ಇದ್ದಿತು. ವಾದದ ಮಟ್ಟಿಗೆ ವಾದ; ವಾದದ ಪರ್ಯವಸಾನವು ದ್ವೇಷವಲ್ಲವೆಂದು ತಿಳವಳಿಕೆಯುಳ್ಳವರು ತಿಳಿದು ನಡೆಯುತ್ತಾರೆ. ಯಥಾರ್ಥವಾದಿತ್ವಕ್ಕೆ ವಿಪರೀತ ಬಣ್ಣ ಬಳಿದು ಅದನ್ನು ದ್ವೇಷದ ಪುಟ್ಟಕ್ಕೆ ಏರಿಸುವ ನರರಾಕ್ಷಸರ ದುಷ್ಟಪ್ರವೃತ್ತಿಯ ಬೆಳವಣಿಗೆಯ ಮೂಲಕವಾಗಿಯೇ ನಮ್ಮ ದೇಶವು- ಅದರಲ್ಲಿಯೂ ನಮ್ಮ ಕರ್ನಾಟಕವು ಈಗ ಅಧಃಪಾತಕ್ಕೆ ಇಳಿಯಹತ್ತಿದೆ.

ಕನ್ನಡಮರಾಠೀವಾದದ "**ಉಪಕ್ರಮ**" ಅಥವಾ "ರಂಗಪ್ರವೇಶ"ವೆಂಬ ಮೊದಲನೆಯ ಘಟ್ಟವು ಇಲ್ಲಿಗೆ ಮುಗಿದಂತಾಯಿತು. ಇನ್ನು ಮುಂದಿನ ಘಟ್ಟಗಳನ್ನು ಕ್ರಮಶಃ ಹತ್ತುಪ ಸಂಕಲ್ಪವನ್ನರುಹಿ, ಸದ್ಯಕ್ಕೆ ಇಲ್ಲಿಗೇ ವಿಶ್ರಮಿಸಬೇಕಾಗಿದೆ.

॥ ಸಿರಿಗನ್ನಡಂಗೆಲ್ಗೆ ॥

ಪ್ರಣಯಪರೀಕ್ಷೆ

★

(ಒಂದು ವಿನೋದ ಚಿತ್ರ)

ಮೀಸಲು ಮೀಸೆಯ ರಾಮೂನ ಪರಿಚಯ ಜಯಂತಿಯ ವಾಚಕರಿಗೆ ಇದ್ದೇ ಇದೆ. ಅವನ ಆದರ್ಶಪ್ರಣಯದ ಹಾರಯಿಕೆಯನ್ನು ಕೌಟುಂಬಿಕ ಸಂಪ್ರದಾಯ ಹೇಗೆ ಹಳಸಂಡವಾಗಿಸಿತು ನೋಡಿ! ರಾಮೂನನ್ನು ನೋಡಿದರೆ ತಮಗೆ ಮುನಿಸೋ ಮರುಕವೋ?

★

ಅನೇಕ ದಿನಗಳಿಂದ ಹೆಂಡತಿಯ ದಿವ್ಯ ಸಾಂನಿಧ್ಯವನ್ನು ಬಯಸಿ ಬಾಯಿಚಪ್ಪರಿಸುತ್ತಲಿದ್ದ ರಾಮೂನಿಗೆ ಇಂದು ಅವಳು ತನ್ನ ಮನೆತುಂಬ ಓಡಾಡುತ್ತಿರುವುದನ್ನು ಕಂಡು ಎಷ್ಟು ಆನಂದವಾಗಿರಲಿಕ್ಕಿಲ್ಲ! ಅವಳ ಗಾಢಪರಿಚಯಕ್ಕಾಗಿ ಅವನು ಪಟ್ಟ ಪರಿಶ್ರಮವೆಷ್ಟು? ಮದುವೆಯ ಮೊದಲು ಅವಳೊಡನೆ ಮಾತನಾಡಿ ಕೃತಾರ್ಥನಾಗಲು ಅವನು ಕಲ್ಪಿಸಿದ ಸನ್ನಿವೇಶಗಳೆಷ್ಟು? ದುರ್ದೈವದಿಂದ ಯಾವ ಸನ್ನಿವೇಶದಲ್ಲಿಯೂ ಅವನು ಕೃತಕಾರ್ಯನಾಗದಿದ್ದರೂ, ಅವನ ಗಂಡುಸಾಹಸಕ್ಕಾಗಿಯಾದರೂ ನಾವು ಅಭಿಮಾನಪಡಲೇಬೇಕು. ರಾಮೂ ಕ್ರಾಂತಿಪುರುಷನೆಂಬುದನ್ನು ನಾನು ಮತ್ತೆ ಹೇಳಬೇಕಾಗಿಲ್ಲ. ಸಮಾಜದ ಮೂಢರೂಢಿಗಳನ್ನು ಕಡಿಯಲು ಬದ್ಧಕಂಕಣನಾದ ಮಹಾಪುರುಷನೆಂಬುದನ್ನೂ ನೀವು ಮರೆಯಬಾರದು. ದೈವಾಯತ್ತವಾಗಿ ಬಂದ ತನ್ನ ಪ್ರಣಯಜೀವನವನ್ನು ಆದರ್ಶವಾಗಿ ನಡೆಯಿಸಬೇಕೆಂಬುದೇ ಸದ್ಯದ ಅವನ ಹಂಬಲ. ಅದಕ್ಕಾಗಿ ಅವನು ಓದಿದ ಪುಸ್ತಕಗಳೆಷ್ಟು? ನೋಡಿದ ಚಲಚ್ಚಿತ್ರಗಳೆಷ್ಟು? ಓದಿದ ಪುಸ್ತಕಗಳಲ್ಲೆಲ್ಲಾ ಪ್ರಣಯಸಂದರ್ಭ ಬಂದಲ್ಲಿ ಕೆಂಪುಮಸಿಯ ಗುರುತುಮಾಡಿಟ್ಟುಕೊಂಡು, ಹೆಂಡತಿಯು ಬಂದೊಡನೆ ಅವುಗಳನ್ನು ಅವಳೊಡನೆ ಪ್ರಯೋಗಮಾಡಿಯೆ ತೀರಬೇಕೆಂಬ ಆತುರವೆಷ್ಟು? ನಟ-ನಟಿಯರ ಭಾವಚಿತ್ರಗಳ ಪ್ರಣಯಸಂದರ್ಭ ಚಿತ್ರಗಳ ಸಂಗ್ರಹವೆಷ್ಟು? ಈ ದೇಶದ, ಪರದೇಶದ, ಅಲ್ಲದೆ ಸ್ವರ್ಗದ ಪ್ರಣಯ ಚಿತ್ರಗಳೆಲ್ಲ ರಾಮೂನ ಕೋಣೆಯಲ್ಲಿ. ಈ ಕೆಲಸದಲ್ಲಿ ರಾಮೂ ಮಾನವ, ದಾನವ, ಜಾನವ ವೈಷಮ್ಯವನ್ನು ತೋರದೆ, ತುಂಬ ನಿಷ್ಪಕ್ಷಪಾತಿಯಾಗಿದ್ದನೆಂಬುದು ಹೆಮ್ಮೆಯ ವಿಷಯ. ಎಷ್ಟಾದರೂ ರಾಮೂ ಆದರ್ಶಪ್ರಣಯವನ್ನು ಸಾಧಿಸಲು ಹೆಣಗಾಡುವ ಆದರ್ಶಪ್ರಣಯಿಯಷ್ಟೆ.

ಹೆಂಡತಿ ಮನೆಗೆ ಬರುವಳೆಂಬ ವರ್ತಮಾನ ಬಂದೊಡನೆಯೆ ರಾಮೂನಿಗೆ ತನ್ನ ಜವಾಬುದಾರಿಯ ಅರಿಕೆಯಾಗಿರಬೇಕು. ಅಂತೆಯೇ ಈಗ ಅವನಿಗೆ ಸೂರ್ಯ-ಚಂದ್ರಮರ ಪ್ರಕಾಶವು ಪ್ರಣಯದ ಬೆಳುದಿಂಗಳಾಗಿಬಿಟ್ಟಿತು. ತನ್ನ ಭಾವೀ ಪ್ರಣಯ ಕಾರ್ಯಕ್ರಮದ ಯೋಜನೆಯ ಸಿದ್ಧತೆಯಲ್ಲಿ ರಾಮೂನಿಗೆ ವೇಳೆ ಸಾಲದಾಯಿತು. ತನ್ನ ಹೆಂಡತಿಯೊಡನೆ, ಅವಳ ಗಂಡನಾದ ತಾನು ಯಾವ ರೀತಿಯಿಂದ ವರ್ತಿಸಬೇಕು? ತಾಯಿ-ತಂದೆಗಳು ಯಾವ ರೀತಿಯಿಂದ ವರ್ತಿಸುವಂತೆ ಕೇಳಿಕೊಳ್ಳಬೇಕು? ಅವಳಿಗೆ ಒಗ್ಗುವ ಮನೆಗೆಲಸಗಳ ಪ್ರಮಾಣವು ತಾಸಿಗೆ ಎಷ್ಟು ಮಿನಿಟುಗಳ ವರೆಗೆ ಇರತಕ್ಕದ್ದು. ಅವಳು ಕೇವಲ ಅಡಿಗೆಯ ಮನೆಯ ಆರಾಧ್ಯದೇವತೆಯಾಗದಂತೆ ಹೇಗೆ ನೋಡಿಕೊಳ್ಳಬೇಕು? ಇದಕ್ಕಾಗಿ ತಾಯಿಗೆ ಕೆಲಸಕೊಡುವಾಗ ಕೆಲವು ಅತಿ ಮಹತ್ವದ ಸೂಚನೆಗಳನ್ನು ಕೊಡಲೇಬೇಕು. ತನ್ನ ಹೆಂಡತಿಯು ತಾಯಿಗೆ ಸೊಸೆಯಾದರೂ ತನಗೆ ಆದರ್ಶಪತ್ನಿ, ಅವಳ ಭವಿಷ್ಯದಲ್ಲಿ ತನ್ನ ಭವಿಷ್ಯವು ಜಾಜ್ವಲ್ಯವಾಗಿದೆ.... ಅವಳು ದಿನಾಲು ಕೆಲವು ಪುಟಗಳನ್ನಾದರೂ ಓದಲೇಬೇಕು. ದಾಂಪತ್ಯವಿಜ್ಞಾನವನ್ನು ಸಂಪೂರ್ಣವಾಗಿ ಅಭ್ಯಾಸಮಾಡಿ ತಾನು ಕೇಳಿದ ಪ್ರಶ್ನೆಗೆ ಉತ್ತರಕೊಡುವಂತೆ ನೋಡಿಕೊಳ್ಳುವುದು ಅನಿವಾರ್ಯವಾದ ವಿಷಯ. ಅವಳಿಗೆ ತಿಳಿಯದಿದ್ದರೆ ಅವಳು ಕೂಡಲೆ ತನ್ನೊಡನೆ ಚರ್ಚಿಸಿ ಸಂಶಯ ಪರಿಹಾರಮಾಡಿಕೊಳ್ಳಬೇಕು. ಇದಕ್ಕೆ ಹಿರಿಯರು ಆಕ್ಷೇಪಣೆ ಎತ್ತದಂತೆ ನೋಡಿಕೊಳ್ಳಬೇಕು. ತಾನು ಓದುವಾಗ ಅವಳು ಯಾವಾಗಲೂ ಮಂದಸ್ಮಿತಳಾಗಿ ತಾಸಿಗೆ ನಾಲ್ಕೆಂಟು ಸಾರೆಯಾದರೂ ಸುಳಿದುಹೋಗಬೇಕು. ಹೀಗೆ ಒಂದಲ್ಲ- ಎರಡಲ್ಲ- ಸಾವಿರ ವಿಚಾರಗಳು ರಾಮೂನ ಪ್ರಣಯಪೂರಿತ ಮಿದುಳನ್ನು ಕೆಣಕಿಬಿಟ್ಟುವು. ಈಗ ರಾಮೂನಿಗೆ ಹೆಂಡತಿಯು ಬರುವ ವಿಚಾರವೇ ವಿಚಾರ. ಅವಳು ಬರುವ ದಿನ ಸಮೀಪಿಸಿದಂತೆ ರಾಮೂ ಸರ್ವಸನ್ನಾಹದಿಂದ ಸುಸಜ್ಜಿತನಾಗತೊಡಗಿದ. ಕೆಂಪು ಮಸಿಯಿಂದ ಗುರುತುಹಾಕಿಟ್ಟ ಪುಸ್ತಕಗಳ ಆ ಹಾಳೆಗಳಲ್ಲಿ ಒಳ್ಳೇ ಜಾಗರೂಕತೆಯಿಂದ ಬುಕ್ ಮಾರ್ಕುಗಳನ್ನು ಹಾಕಿ, ಅವುಗಳನ್ನು ಸಾಲಾಗಿ ಸೆಲ್ಫಿನ ಮೇಲೆ ಜೋಡಿಸಿದ. ಪ್ರಣಯಚಿತ್ರಗಳನ್ನೆಲ್ಲ ಅವುಗಳ ಯೋಗ್ಯತಾನುಸಾರವಾಗಿಯೂ ಸಂದರ್ಭ-ಮಹತ್ವಾನುಸಾರವಾಗಿಯೂ ಗೋಡೆಗೆ

ಶ್ರೀ. ಕೃಷ್ಣಮೂರ್ತಿ ಪುರಾಣಿಕ
ಬಿ. ಎ., (ಆನರ್ಸ)

“ಅವಳು ಸತ್ತುಹೋದಳೇ ಅವ್ವಾ? ನೀನೇಕೆ ಚಹಾ ತರುವೆ?”

ಅಂಟಿಸಿದ. ತಾಯಿಗೆ ಹೇಳಬೇಕಾದ್ದನ್ನೆಲ್ಲ ಹೇಳಲು ಪ್ರಯತ್ನಿಸಿದ. ರಮಾಬಾಯಿಯವರು ಎಲ್ಲವನ್ನೂ ಸಾವಧಾನದಿಂದ ಕೇಳಿಕೊಂಡು 'ಇದೇನು ರಾಮೂ! ಹೇಳಿದ್ದನ್ನೆಲ್ಲ ನೆನಪಿಟ್ಟು ಅದರಂತೆ ಸಂಸಾರ ಸಾಗಿಸುವುದು ಸಾಧ್ಯವೇ ನೋ ಹುಚ್ಚಪ್ಪಾ! ನಿನ್ನ ಹೆಂಡತಿ ನನ್ನ ಸೊಸೆಯಲ್ಲವೇನಪ್ಪಾ!' ಎಂದು ತುಸು ವ್ಯಂಗ್ಯ ಬೆರೆತ ನಗೆ ಬೆರೆಸಿ ನುಡಿದುಬಿಟ್ಟರು. ರಾಮೂನಿಗೆ ತಾಯಿಯ ಉತ್ತರದಿಂದ ಆಗಬೇಕಾದಷ್ಟು ಸಮಾಧಾನವು ಆಗಲಿಲ್ಲವೆಂದು ಹೇಳಬೇಕೆ? ರಾಮೂನನ್ನು ನಿರೀಕ್ಷಿಸುತ್ತಿದ್ದ ಮುಕುಂದರಾಯನಿಗೆ ಇವನ ಈ ಹುಚ್ಚುಚ್ಚಾರವು ಅವಿವೇಕಕ್ಕಿಟ್ಟು ಅನರ್ಥದಲ್ಲಿ ಕೊನೆಗಾಣಬಹುದೆಂಬ ಅಂಜಿಕೆಹುಟ್ಟಿದರೂ 'ಅನುಭವದಿಂದ ಎಲ್ಲವೂ ಸರಿಹೋಗುವುದು' ಎಂದುಕೊಂಡುಬಿಟ್ಟರು. ಆ ದಿನವೂ ಬಂದಿತು; ರಾಮೂನ ಹೆಂಡತಿಯೂ ಬಂದಳು.

೨

ಹೊಸ ಹರೆಯದ ಒಯ್ಯಾರದಲ್ಲಿ ರಾಮೂನ ಹೆಂಡತಿಯು ಅತ್ತೆಯ ಮನೆಯಲ್ಲಿ ಬಲಗಾಲನ್ನಿಟ್ಟಳು. ಭಾಗ್ಯಲಕ್ಷ್ಮಿಯ ಬರವನ್ನೇ ನಿರೀಕ್ಷಿಸಲು, ಅವಳ ದೇಹಸೌಷ್ಟವವನ್ನು ಕಣ್ಣುತುಂಬಾ ನೋಡಿ ಧನ್ಯತಮನಾಗಲು ಆತುರನಾದ ರಾಮೂ, ಅವಳನ್ನು ಅನನ್ಯಮನಸ್ಕನಾಗಿ ಕಣ್ಣಿಟ್ಟು ನೋಡಿದ. ಅವನ ಸಂತೋಷದ ಒಡ್ಡೊಡೆದು ಅಧೀರತೆಯಲ್ಲಿ ಪರ್ಯವಸಾನವಾಯಿತು.

ಚಲುವೆ; ಮೇಲಾಗಿ ಹರೆಯದ ಹೊಸ ಹುಡುಗಿ; ಚೆಲುವಿಕೆಗೆ ಹರೆಯದ ಜೋಡಣೆ. ಎಂದಬಳಿಕ ಕೇಳುವುದೇನು? ಮಾವಿನಹಣ್ಣಿಗೆ ಜೇನುತುಪ್ಪ ತೊಡೆದಂತೆ. ಅವಳ ಚೆಲುವಿಕೆಗೆ ಹರೆಯವು ಕಾರಣವಾಗಿತ್ತೋ; ಇಲ್ಲವೆ ಅವಳ ಹರೆಯವು ಚೆಲುವಿಕೆಯಿಂದ ತುಂಬಿ ತುಳುಕುತ್ತಿತ್ತೋ ಹೇಳಲಾರೆವು. ಪ್ರಾಯಶಃ ಎರಡೂ ಒಂದಕ್ಕೊಂದು ಕಾರಣವಾಗಿರಬಹುದು. ಹಸನ್ಮುಖಿ; ಹಿತವಾದ ನಗು; ಮಿತವಾದ ಮಾತು; ಅವಳ ಲಕ್ಷಣ. ತುಂಬಿದ ಮೈಕಟ್ಟಿಗೆ ಒಪ್ಪಿ ಒನಪುಕೊಡುವಂತಹ ವಸ್ತ್ರ, ಅದರಲ್ಲಿ ಓರಣವಿತ್ತೇ ಹೊರತು ಒಯ್ಯಾರ ಸಾಧನವಿರಲಿಲ್ಲ. ಕೊರಳಲ್ಲಿ ಗುಂಡಿನ ಸರವು ಇದ್ದದ್ದು ಅವಳಿಗೆ ಗೊತ್ತಿಲ್ಲದೆ ಜನರು ನೋಡಲಿ ಎಂದು ಹಾಕಿದುದಲ್ಲ. ಹೆಣೆದ ಜಡೆಗೆ ಒಂದು ಬಂಗಾರದ ಹೂವು. ಇಷ್ಟು ಅವಳನ್ನು ಕಂಡಕೂಡಲೆ ಹೇಳಬಹುದು. ನವನಾಗರಿಕತೆಯ ರೂಪರೇಷೆಯು ಕೂಡ ಅವಳ ವಸ್ತ್ರಾಭರಣದಲ್ಲಿರದಿದ್ದರೂ ಅವಳು ಚೆಲುವೆಯೆಂಬುದನ್ನು ಅಲ್ಲಗಳೆಯಲು ಯಾರಿಗೂ ಸಾಧ್ಯವಿಲ್ಲ. ಅವಳು ಮನೆತನಸ್ಥರ ಮಗಳೂ, ಮನೆತನಸ್ಥರ ಸೊಸೆಯೂ ಇಂದು ಹೇಗಿರುವರೋ ಹಾಗಿದ್ದಳು. ಆದರೆ ಕ್ರಾಂತಿಪುರುಷ ರಾಮೂನ ಮಡದಿಯಾಗಿ ಹೇಗೆ ಕಂಗೊಳಿಸುವಳೋ ನೋಡಬೇಕು. ಯಾಕೆಂದರೆ ರಾಮೂ ಆದರ್ಶಪ್ರಣಯಿ. ಅವನ ಪ್ರಣಯದೇವತೆಯು ಪುಸ್ತಕಗಳಿಂದ ರೂಪುಗೊಂಡಿದ್ದಳು. ಚಲಚ್ಚಿತ್ರ ತಾರೆಯರ ಪರಿಚಯದಿಂದ ಎದ್ದು ನಿಂತಿದ್ದಳು.

* * *

ರಾಮೂನಿಗೆ ಅನ್ನಪೂರ್ಣಾದೇವಿಯ ಸಾಕ್ಷಾತ್ಕಾರವೆಂದಾಯಿತೋ ನಾವರಿಯೆವು. ಇತ್ತಿತ್ತಲಾಗಿ ಅವನು ಏನಾದರೊಂದು ನೆವಮಾಡಿ ಅಡಿಗೆಯಮನೆಗೆ ಎಡತಾಕುವ ಪರಿಪಾಠವನ್ನು ಇಟ್ಟುಬಿಟ್ಟಿರುವ. ಕೆಲಸವಿದ್ದಾಗ ಕರೆದರೂ ಕೂಡ ಅಡಿಗೆಯ ಮನೆಗೆ ಬಾರದ ಮಗನ ಈ ವಿಲಕ್ಷಣ ವರ್ತನೆಯನ್ನು ಕಂಡು ರಮಾಬಾಯಿಯವರಿಗೆ ಅಷ್ಟು ಅಚ್ಚರಿಯಾಗದಿದ್ದರೂ, ತಮ್ಮ ಎದುರಿಗೇ ತಮ್ಮ ಮಗನೆಂಬುವನು ಹೆಂಡತಿಯೊಡನೆ ಮಾತನಾಡುವ ಅವಿವೇಕತನವನ್ನು ಮಾಡಹತ್ತಿದನಲ್ಲಾ ಎಂಬ ಕೊರಗು ದಿನದಿನವೂ ಹೆಚ್ಚಾಗಿ, ತಾಯ್ತನದ ಅಡಿಗಲ್ಲೆ ಅದಿರಹತ್ತಿತೆಂದು ಕೊರಗು ವಿಕೋಪಕ್ಕಿಟ್ಟಿತು. ಇದಕ್ಕೆ ಬೆಂಬಲವಾಗುವಂತೆ ಇನ್ನೊಂದು ಕಾರಣವೂ ಆಯಿತು. ಹೆಂಡತಿ ಬಂದ ಮೇಲೂ ರಮಾಬಾಯಿಯವರೇ ರಾಮೂನ ಕೋಣೆಗೆ ಚಹಾ ಒಯ್ಯುತ್ತಿದ್ದರು. ರಾಮೂನಿಗೆ ಇದು ಅಸಹನೀಯವಾಗಿ ಪರಿಣಮಿಸಿತು. ತಾಯಿಯ ಈ ವರ್ತನೆಯಿಂದ ತನ್ನ ಆದರ್ಶ ಪ್ರಣಯಕ್ಕೆ ಖಂಡಿತವಾಗಿಯೂ ಬಲವಾದ ಪೆಟ್ಟು ಬೀಳಹತ್ತಿದೆ ಎಂಬುದನ್ನು ಅವನು ಕಂಡುಕೊಂಡು ಅದಕ್ಕೆ ಏನಾದರೊಂದು ಉಪಾಯವನ್ನು ಯೋಚಿಸದೆ ನಿರ್ವಾಹವಿಲ್ಲವೆಂದು ತಿಳಿದುಕೊಂಡ. ಆ ದಿನ ರಮಾಬಾಯಿಯವರು ಇವನ ಕೋಣೆಗೆ ಚಹದ ಬಟ್ಟಲನ್ನು ಒಯ್ದಾಗ ಇವನು ಕೇಳಿ 'ಅವಳು ಸತ್ತುಹೋದಳೇ ಅವ್ವಾ! ನೀನೇಕೆ ಚಹಾ ತರುವಿ? ನಿಮ್ಮ ಹಳೆಯ ಹಾಳು ಕಲ್ಪನೆಗಳಿಗೆ ಮುಳ್ಳು ಹಚ್ಚಲಿ!' ಎಂದುಬಿಟ್ಟ. ಮಗನ ಈ ಅನಾದರ ರೀತಿಯನ್ನು ಕಂಡು ರಮಾಬಾಯಿಯವರಿಗೆ ಅತ್ಯಂತ ಕಳವಳವಾಗಿ, ಕಳವಳವು ಕೋಪದಲ್ಲಿ ಕಳಕಳಿಸಿ, ಅವರೂ ಗಡುಸಾದ ದನಿಯಲ್ಲಿ "ಬಂದು ಮೂರು ದಿನವಾಯಿತಪ್ಪಾ, ಎಷ್ಟು ಕಕ್ಕುಲತೆ? ಒಂಬತ್ತು ತಿಂಗಳು ಹೊತ್ತು ಹಡೆದ ತಾಯಿ ಚಹದ ಬಟ್ಟಲನ್ನು ತಂದು ಕೊಟ್ಟರೆ ನಿನಗೆ ಅದು ವಿಷದ ಬಟ್ಟಲಾಯಿತಲ್ಲವೆ? ಈಗಿನ ಕಾಲ, ನನ್ನ ಕರ್ಮ ನೀನೇನು ಮಾಡೀ!" ಎಂದು ಕಣ್ಣೊರಸಿಕೊಂಡರು. ರಾಮೂ ಕಕ್ಕಾಬಿಕ್ಕಿಯಾಗಿ "ಹಾಗಲ್ಲ. ಅವ್ವಾ ನಾನೆಂದದ್ದು, ಅವಳು ನನ್ನೊಡನೆ ಮೈಚಳಿಬಿಟ್ಟು ಮಾತನಾಡಲು, ನನ್ನ ಹೃದಯದ ಗಾಢ ಪರಿಚಯ ಮಾಡಿಕೊಳ್ಳಲು, ಆದರ್ಶಪ್ರಣಯವನ್ನು ಸಾಧಿಸಲು, ಇಂತಹ ಚಹಾಸನ್ನಿವೇಶಗಳು ಉಪಯೋಗವಾಗುವುವು. ಹೊಸ ಗಂಡ

ಹೆಂಡಂದಿರು ಮನಬಿಚ್ಚಿ ಮಾತನಾಡಿದರೆ ಅವರವರ ಮನಸ್ಸು ಅವರವರಿಗೆ ತಿಳಿದು ಪ್ರಪಂಚದ ಅರಿವಾಗುವುದು. ದಾಂಪತ್ಯ ವೆಂದರೆ ಅದೊಂದು ಸೂಕ್ಷ್ಮ ಜೀವನ ಪರೀಕ್ಷಾ ಕಾಲ. ಮುಂದಿನ ನಮ್ಮ ಭವಿತವ್ಯತೆಯನ್ನೂ, ಅದರ ರೂಪರೇಷೆ ಯನ್ನೂ ನಾವು ನಮ್ಮ ಇಂದಿನ ದಾಂಪತ್ಯ ಜೀವನದ ಅಡಿಗಲ್ಲಿನ ಮೇಲೆಯೇ ಭದ್ರ-ಪಡಿಸಬೇಕಾಗುವದು—ಆದುದರಿಂದ ನಾವಿಬ್ಬರು ಮಾತನಾಡುವ ಸಂದರ್ಭ ಗಳನ್ನು ನೀನಾಗಿಯೇ ಕಲ್ಪಿಸುವುದನ್ನು ಬಿಟ್ಟು..ನನಗಾಗಿ ನೀನೇ ಚಹಾ ....'' ರಾಮೂ ಮಾತು ಮುಗಿಸುವ ಲಕ್ಷಣ ತೋರಿಸಲಿಲ್ಲವಾದುದರಿಂದ, ರಮಾಬಾಯಿ ಯವರು ತುಂಬಾ ಕೋಪದಿಂದ "ಭಾಳ ಛಲೋ ಮಾತಾಡಿದೆಪ್ಪಾ! ಗೇಣು ಹುಡುಗ, ತಾನು ಹೆಂಡತಿಯೊಡನೆ ಮಾತನಾಡುವ ನಂತೆ. ಹಾಗೆಲ್ಲ ಅವಿವೇಕತನ ಮಾಡ ಬಾರದು. ಹಿರಿಯರಿರುವಾಗ ಅದೇನು ಛಲೋನೋ ಹೆಂಡತಿಯೊಡನೆ ಮಾತನಾ ಡೂದು? ನಿನ್ನ ಉದ್ಧಟತನ ಮಿತಿಮೀರಿದೆ ಎಂದು ಗೋಳ್ಯಾಡತಾರ; ಖಬರು ಅದs ನs ನಿನಗ!....'' ರಾಮೂನಿಗೆ ಏನೂ ತಿಳಿಯದಂತಾಯಿತು. "ಅದೇನವ್ವಾ, ನಾನು ಮಾಡಿದ ಉದ್ಧಟತನ?" ಎಂದು ಕೇಳಿ ಉತ್ತರಕ್ಕಾಗಿ ಕಾತರಭಾವದವನಾಗಿ ನಿರೀಕ್ಷಿಸತೊಡಗಿದ. "ಇದಕ್ಕೂ ಎಂಥ ಉದ್ಧಟತನ ಬೇಕೋ? ಹೆಂಡತಿಯ ಕೂಡ ಮಾತನಾಡುತ್ತಿಯಲ್ಲ..ನಾ ಏರಲಿಕ್ಕ! ನಾ ಜೀವಂತ ಇರಲಿಕ್ಕೆ ಅವಳಿಗೆ ಹಾಲು ಹಾಕು, ಮೊಸರು ಹಾಕು, ನೀರು ಕಾದಾವಿಲ್ಲೋ ನೋಡು, ಧೋತರಾ ನೀರಿಗಿ ಹಾಕು!..ಏನಪಾ ಇದು. ನಾವೇನು ಸಂಸಾರ ಮಾಡೇ ಇಲ್ಲs? ನೀ ಹುಟ್ಟಿ ಐದು ವರುಷ ಆಗೂತನಕಾ ಮಾವ ನವರು ಜೀವಂತಿದ್ರು. ಒಂದಿನಾ ಅರೇ ಅವರು ಹೀಂಗ ನನ್ನೊಡನೆ ಮಾತಾ-ಡಿದ್ದು..ಏನ್ ಹುಚ್ಚುಚ್ಚಾರ ಮಾಡತೀ?" ಎಂದು ರಮಾಬಾಯಿಯವರು ಚಹದ ಬಟ್ಟಲನ್ನು ಮೇಜಿನ ಮೇಲೆ ಇಕ್ಕರಿಸಿ ಹೋದರು.. ರಾಮೂನ ಕಣ್ಣುಗಳು ನಿಚ್ಚಳವಾದುವು. ತನ್ನ ಪ್ರಣಯದ ಪರೀಕ್ಷಾ ಕಾಲವೇ ಬಂದಿತೆಂದು ಭಾವಿಸಿದ. ತಾನು ಹಾಕಿಟ್ಟುಕೊಂಡ ಕಾರ್ಯಕ್ರಮ ವೆಂತಹದು? ಆದರ್ಶಪ್ರಣಯದ ಕಲ್ಪನಾ ಚಿತ್ರವೆಂತಹದು? ಮನೆಯಲ್ಲಿ ನಡೆಯುತ್ತಿ ರುವ ಈ ಅನಾಹುತದ ದಾವಾನಲವೇನು? "**ನನ್ನ ಮನೆಯಲ್ಲಿ ನನ್ನ ಹೆಂಡತಿಯೊಡನೆ ನಾನು** ಬಹಿರಂಗವಾಗಿ ಮಾತಾಡುವುದನ್ನು ಹಿರಿಯರು ಸಹಿಸಲಾರರಂತೆ! ಇದು ಅವಿವೇಕತನವಂತೆ!" ತಾಯಿಯ ಮಾತು ಗಳು ರಾಮೂನ ಅಭಿಮಾನವನ್ನು ಒಂದರೆ ಕ್ಷಣ ಕೆಣಕಿದುವು. ತಾಯಿಯ ಪ್ರೇಮದಲ್ಲಿ ಸ್ವಾರ್ಥವನ್ನು ಗುರುತಿಸಿದ. "ಇಷ್ಟು ದಿನ ನನ್ನ ಆದರಕ್ಕೆ ಪಾತ್ರಳಾದ ತಾಯಿ ...... ಛೀ.. ಎಷ್ಟಾದರೂ ತಾಯಿ.." ರಾಮೂನಿಗೆ ಏನೂ ತಿಳಿಯ ದಾಯಿತು. ತನ್ನ ನಿರ್ಧಾರದಂತೆ ಆದರ್ಶ ಪ್ರಣಯವನ್ನು ಸಾಧಿಸಲು ಹೆಣಗಹತ್ತಿದರೆ ತಾಯಿ ಸಹಿಸಳು, ತಾಯಿ ಹೇಳಿದಂತೆ ಕೇಳುವುವೆಂದರೆ ಪ್ರಣಯಕ್ಕೆ ತಿಲಾಂಜಲಿ! ರಾಮೂನ ಧೈರ್ಯವು ಕುಸಿಬಿದ್ದಿತು. ತಾನೊಬ್ಬ ಹೇಡಿಯೆಂದೇ ಭಾವಿಸಿದ. ಕಡೆಗೆ ತಾಯಿ ಬದುಕುವ್ವದು ಕೆಲಕಾಲ. ತಾನು ಬದುಕುವುದು ಅದಕ್ಕೂ ಹೆಚ್ಚಿನ ಕಾಲ. ತಾಯಿಯ ಮೂಢ ಕಲ್ಪನೆಗಳನ್ನು ಲೆಕ್ಕಿಸು ವುದು ಗಂಡುಸಿನ ಹೇಡಿತನ. ಹೇಗಾದರೂ ಆಗಲಿ, ತನ್ನ ಪ್ರಣಯವನ್ನು ಸಾಗಿಸ ಬೇಕೆಂದು ನಿರ್ಧಾರಮಾಡಿದ. ಹೀಗೆ ಮಾಡುವಾಗ ಅವನು ತನ್ನ ತಾಯಿಯ ವಿರುದ್ಧ ಬಂಡಾಯವನ್ನೇ ಹೂಡಬೇಕಾಗು ವುದೆಂದು ಬೆದರಿದ, ನಡುಗಿದ: ಏನಾದ ರೇನು ರಾಮೂ ಕ್ರಾಂತಿ ಪುರುಷ ತಾನೇ? ತನ್ನ ವಿಚಾರಗಳನ್ನು ಕಾರ್ಯರಂಗಕ್ಕೆ ಇಳಿಸಿಯೇ ತೀರಬೇಕೆಂದು ಮತ್ತೆ ನಿರ್ಧಾರ ವನ್ನು ಮಾಡಿದ.

೩

ಹೊತ್ತು ಮುಳುಗುತ್ತ ಬಂದುದರಿಂದ ರಾಮೂ ತನ್ನ ವಿಚಾರಪೂರಿತ ಮಿದುಳಿಗೆ ಗಾಳಿ ಹಾಕಬೇಕೆಂದು ಹೊರಬಿದ್ದ. ಪಡಸಾಲೆಯಲ್ಲಿ ರಮಾಬಾಯಿಯವರು ಅಳುತ್ತ ಕುಳಿತಿದ್ದರು. ರಾಮೂ ಮತ್ತೆ ಗಾಬರಿಯಾದ "ಏನವ್ವಾ ಇದು?" ಎಂದು ಅಂಜುತ್ತ ಕೇಳಿದ. "ಏನಿಲ್ಲ ಮಾರಾಯಾ ಬೇಕಾದ್ದು ಮಾಡು. ದೇವರು ನನ್ನ ಕಣ್ಣು ಮುಚ್ಚಬೇಕು." ಎಂದು ರಮಾಬಾಯಿಯವರು ಸುದೀರ್ಘವಾದ ನಿಟ್ಟುಸಿರನ್ನಿಟ್ಟರು. ಅವರು ಬಿಟ್ಟ ಆ ನಿಟ್ಟುಸಿರು ರಾಮೂನ ಎದೆಯನ್ನೇ ಸೀಳಿ ತೆಂಬಂತೆ ತೋರುತ್ತದೆ. ಆ ನಿಟ್ಟುಸಿರಿನ ಸುಟ್ಟ ವಾಸನೆಯಿಂದ ಕಮರಿದಂತವನಾಗಿ ರಾಮೂ, ಆ ಊರಿನ ಕೆರೆಯ ದಂಡೆಯ ಮೇಲೆಹೋಗಿ ಕುಳಿತು ವಿಚಾರಿಸತೊಡಗಿದ ವಿಚಾರಮಾಡಿದಂತೆ ವಿಚಾರವೇ ಬೆಳೆಯಿ ತಲ್ಲದೆ ಅದರ ಸಮಸ್ಯೆ ಬಗೆಹರಿಯದಂತಾ ಯಿತು: "ಸ್ವಾತಂತ್ರ್ಯವಿಲ್ಲದ ಮನೆಯಲ್ಲಿ ಕ್ರಾಂತಿಯನ್ನು ಸಾಧಿಸುವುದು ಅಸಾಧ್ಯ. ನನ್ನಲ್ಲಿ ತಾಯಿಯ ಪ್ರೇಮವಿದೆ. ಅದಕ್ಕಾಗಿ ಮನೆಯಲ್ಲಿದ್ದರೆ ಆದರ್ಶ ಪ್ರಣಯವು ದೂರದ ಮಾತು. ಮನೆಯನ್ನು ಬಿಡಲೇ ಬೇಕು. ಎಲ್ಲಿಯಾದರೂ ದೂರ ಹೋಗಿ ಹೆಂಡತಿಯೊಡನೆ ಆದರ್ಶ ಪ್ರಣಯವನ್ನು ಸಾಧಿಸಬೇಕು. ಆದರೆ ಎಲ್ಲಿಗೆ? ಎಲ್ಲಿಗೆ ಹೋಗಬೇಕು?" ರಾಮೂನ ವಿಚಾರ-ಶಕ್ತಿಯು ಕುಂಠಿತವಾಯಿತು. 'ಎಲ್ಲಿಗೆ?' ಎಂಬ ಪ್ರಶ್ನೆಗೆ 'ಮನೆಗೆ' ಎಂಬ ಉತ್ತರ ವಲ್ಲದೆ ಇನ್ನೊಂದು ಉತ್ತರವೇ ಬೆಳಗಲಿಲ್ಲ "..ನನಗೆ ಬೇಕಾದದ್ದು ಆದರ್ಶ ಜೀವನ..

"ಬಂದು ಮೂರುದಿನವಾಯಿತು; ಎಷ್ಟು ಕಳ್ಕುಲತೆಯುಪ್ಪಾ?"

(೩೧೩ ನೆಯ ಪುಟ ನೋಡಿರಿ!)

ನನ್ನ ದಕ್ಷಿಣ ಹಿಂದುಸ್ಥಾನದ ಯಾತ್ರೆ

ಮದರಾಸಿನಿಂದ ತಿರುಪತಿಗೆ—

★

ಕಂಚಿಗೆ ಹೋಗಿ ಬಂಗಾರದ ಹಲ್ಲಿಗಳನ್ನು ಮುಟ್ಟಿಬಂದರೆ ಎಷ್ಟು ಜನರಿಂದ ನೀವು ನಮಸ್ಕರಿಸಿಕೊಳ್ಳಬೇಕಾದೀತು! ಶೇಷಾಚಲದ ತಲೆ-ಬಾಲ-ನಡುಗಳು ಯಾವುವೆಂಬುದು ಗೊತ್ತೇ? ತಿರುಪತಿಯ ವೆಂಕಪ್ಪನ ಚಿಕ್ಕಮಾವ ತೋಂಡಮಾನನೇ ಅವನಿಗೆ ಗುಡಿ ಕಟ್ಟಿಸಿಕೊಟ್ಟನಂತೆ!

★

ಕಂಚಿ ಅಥವಾ ಕಾಂಜೀವರಂ:—

ಮದ್ರಾಸಿನಿಂದ ಸುಮಾರು ೪೦ ಮೈಲಿನ ಮೇಲಿರುವ ಈ ಪುರಾತನ ಕ್ಷೇತ್ರದಲ್ಲಿ ಸುಮಾರು ೬೨ ಸಾವಿರ ಜನವಸತಿಯಿದೆ— ಇಲ್ಲಿ ಸುಮಾರು ಹದಿನಾಲ್ಕು ಛತ್ರಗಳಿವೆ. ೭ನೆಯ ಶತಮಾನದಲ್ಲಿ ಹುಯೆನ್ ತ್ಸಾಂಗ್ ಎಂಬ ಚೀನದೇಶದ ಪ್ರವಾಸಿಯು ಹಿಂದುಸ್ಥಾನದಲ್ಲಿ ಪ್ರವಾಸಮಾಡಿ ವರ್ಣಿಸಿದ ಸ್ಥಳಗಳಲ್ಲಿ ಕಂಚಿಯು ಉಲ್ಲೇಖಿಸಿದೆ. ಈ ಕಡೆಯ ಬೌದ್ಧಧರ್ಮದ ಕೇಂದ್ರವಾದ ಕಂಚಿಯಲ್ಲಿ ಶ್ರೀಶಂಕರಾಚಾರ್ಯರು ಬಂದು ತಳವೂರಿ, ಆರ್ಯಧರ್ಮದ ಪ್ರಚಾರವನ್ನು ಸಾಗಿಸಿದರು. ಇಲ್ಲಿಯ ಕಾಮಾಕ್ಷಿಯ ಗುಡಿಯಲ್ಲಿ ಈಗಲೂ ಶಂಕರಾಚಾರ್ಯರ ಮೂರ್ತಿಯುಂಟು. ಅನಂತರ ರಾಮಾನುಜಾಚಾರ್ಯರು ಇಲ್ಲಿ ವೈಷ್ಣವಮತದ ಪ್ರಚಾರಮಾಡಿದರು. ಆದುದರಿಂದಲೇ ಇಲ್ಲಿ ಅನೇಕ ಶೈವರ ಹಾಗೂ ವೈಷ್ಣವರ ಗುಡಿಗಳುಂಟು. ಪಟ್ಟಣದ ಒಂದು ಭಾಗಕ್ಕೆ ಶಿವಕಂಚಿ ಅಥವಾ ದೊಡ್ಡಕಂಚಿ ಎಂತಲೂ, ಇನ್ನೊಂದು ಭಾಗಕ್ಕೆ ವಿಷ್ಣುಕಂಚಿ ಅಥವಾ ಚಿಕ್ಕಕಂಚಿ ಎಂತಲೂ ಹೆಸರು. ಇಲ್ಲಿಂದ ೨ ಮೈಲು ಅಂತರದ ಮೇಲಿರುವ ತಿರುಪರತ್ತಿಕುಂಡ್ರಂ ಎಂಬಲ್ಲಿ ಜೈನಗುಡಿಯೂ ಮಸೀದೆಯೂ ವಿಜಾಪುರದ ಫಕೀರನಾದ ಹಜರತ್ತ ಸಾಹೇಬ್ ಅಮಿರ್ ಅವಲ್ಯಾ ಎಂಬವನ ಗೋರಿಯೂ ಇರುತ್ತವೆ. ಅಶೋಕನು ಕಂಚಿಯಲ್ಲಿ ಸ್ತೂಪಗಳನ್ನು ಕಟ್ಟಿಸಿದನೆಂದು ಹೇಳುತ್ತಾರೆ.

ಕ್ರಿಸ್ತಶಕದ ೬೪೦ನೆಯ ವರ್ಷದ ಸುಮಾರಿಗೆ ಚಾಲುಕ್ಯರ ಪುಲಿಕೇಶಿಯು, ಕಂಚಿಯ ಚೋಳಭೂಪನನ್ನು ಸೋಲಿಸಿ, ಪಟ್ಟಣವನ್ನು ಸುಟ್ಟನೆಂದು ಹೇಳುತ್ತಾರೆ. ಅನಂತರ ಇದು ಬಹಳ ಕಾಲದವರೆಗೆ ಪಲ್ಲವರ ರಾಜಧಾನಿಯಾಗಿತ್ತು. ೧೭೫೧ ಹಾಗೂ ೧೭೫೨ರಲ್ಲಿ ಕ್ಲೈವನು ಈ ಪಟ್ಟಣವನ್ನು ವಶಮಾಡಿಕೊಂಡನು. ೧೭೫೭ರಲ್ಲಿ ಫ್ರೆಂಚರು ಈ ಪಟ್ಟಣವನ್ನು ಸುಟ್ಟರು. ೧೭೮೦ರಲ್ಲಿ ಹೈದರ ಅಲಿಯು ಇದನ್ನು ಸುಲಿದನು.

ಅರ್ಥಶಾಸ್ತ್ರವನ್ನು ಬರೆದು ಸುಖ್ಯಾತನಾದ ಹಾಗೂ ಮೌರ್ಯ ಚಂದ್ರಗುಪ್ತನ ಮಂತ್ರಿಯಾದ ಚಾಣಕ್ಯನು ಕಂಚಿಯಲ್ಲಿ ಹುಟ್ಟಿದವನು.

“ದಕ್ಷಿಣಕಾಶಿ”ಯೆಂದು ಪ್ರಸಿದ್ಧವಿದ್ದ ಈ ಕ್ಷೇತ್ರವನ್ನು “ನಗರೇಷು ಕಂಚೀ” ಎಂದು ವರ್ಣಿಸಿರುವರು. ಭರತವರ್ಷದ ಏಳು ಮಹತ್ವದ ಪವಿತ್ರಕ್ಷೇತ್ರಗಳಲ್ಲಿ (ಸಪ್ತಪುರಿಗಳಲ್ಲಿ) ಇದೊಂದು.

ಶಿವಕಂಚಿ ಎಂಬ ಭಾಗವು ರೇಲ್ವೆಸ್ಟೇಶನ್ನಿಗೆ ಹೊಂದಿ ಇರುವುದು. ಪಟ್ಟಣವು ೫-೬ ಮೈಲುಗಳವರೆಗೆ ಹಬ್ಬಿದ್ದು, ಎಲ್ಲಕಡೆಗೂ ವಿಸ್ತೀರ್ಣವಾದ ರಾಜಮಾರ್ಗಗಳಿವೆ. ಮಾರ್ಗದ ಎರಡೂಬದಿಗೆ ತೆಂಗು ಮುಂತಾದ ಗಿಡಗಳನ್ನು ಹಚ್ಚಿರುವುದರಿಂದ, ವಿಶೇಷ ಶೋಭೆಯುಂಟಾಗಿದೆ. ವಿಷ್ಣುಕಂಚಿಯು ನಿಲ್ದಾಣದಿಂದ ಸುಮಾರು ೨ ಮೈಲು ಅಂತರದ ಮೇಲಿದೆ.

ಏಕಾಂಬರೇಶ್ವರನ ದೇವಾಲಯವು ತುಂಬ ವಿಸ್ತಾರವಾದುದಿದ್ದು ಸುಮಾರು ೨೫ ಎಕರೆಯವರೆಗೆ ಹಬ್ಬಿದೆ. ಇದರ ಮುಖ್ಯ ಗೋಪುರವನ್ನು ವಿಜಯನಗರದ ಕೃಷ್ಣದೇವರಾಯನು ಕಟ್ಟಿಸಿದನು. ಈ ಗುಡಿಯಲ್ಲಿ ಪಂಚಲಿಂಗಗಳಲ್ಲೊಂದಾದ “ಪೃಥ್ವೀಲಿಂಗ”ವಿರುತ್ತದೆ.

ಮಧುರೆಯ ಮೀನಾಕ್ಷಿಯಂತೆ ಕಂಚಿಯ ಕಾಮಾಕ್ಷಿಯೂ ಪ್ರಸಿದ್ಧ. ಆದರೆ ಈ ಗುಡಿಯು ಮಧುರೆಯ ಗುಡಿಯಷ್ಟು ಸುಂದರವಲ್ಲ.

ಕಂಚಿಯ ಏಕಾಂಬರೇಶ್ವರನ ಗುಡಿ

ಇನ್ನು ವಿಷ್ಣುಕಂಚಿಯು:— ಹಸ್ತಿಗಿರಿಯೆಂದು ಪ್ರಸಿದ್ಧವಿದ್ದ ಎತ್ತರದ ಸ್ಥಳದಮೇಲೆ, ಬ್ರಹ್ಮನು ತಪಸ್ಸನ್ನಾಚರಿಸಿ ವಿಷ್ಣುವಿನಿಂದ ವರವನ್ನು ಪಡೆದುಕೊಂಡ ಸ್ಥಳದಲ್ಲಿ ವರದರಾಜನ ಗುಡಿಯಿರುತ್ತದೆ. ಈ ಗುಡಿಯಲ್ಲಿ **ಚೋಳ** ಹಾಗೂ **ವಿಜಯನಗರ** ಕಾಲದ ಕಲ್ಬರೆಹಗಳಿರುತ್ತವೆ. ಈ ಗುಡಿಯು ಬಹು ಪುರಾತನವಾದುದೂ ಥಸಾಧ್ಯವಾದುದೂ ಇರುತ್ತದೆ. ೯ನೆಯ ಶತಮಾನದಲ್ಲಿ ಬಾಳಿದ 'ತಿರುಮಂಗಾಯ್ ಆಳ್ವಾರ್' ಎಂಬ ವೈಷ್ಣವ ವಿಭೂತಿ ಪುರುಷನು, ವರದರಾಜನನ್ನು ತನ್ನ ಕವಿತೆಗಳಲ್ಲಿ ಸ್ತೋತ್ರಮಾಡಿರುವನು. ಪ್ರತಿವರ್ಷ ವೈಶಾಖಮಾಸದಲ್ಲಿ ಇಲ್ಲಿ ಜರುಗುವ ಗರುಡೋತ್ಸವವು ತುಂಬ ಪ್ರೇಕ್ಷಣೀಯವಾಗಿರುವದು. ಆಗ ಇಲ್ಲಿ ದೊಡ್ಡ ಜಾತ್ರೆ ಕೂಡುತ್ತದೆ.

ಇಲ್ಲಿ ಗರ್ಭಗುಡಿಯ ಹಿಂಬದಿಗೆ ಬಲಗಡೆಯ ಮೂಲೆಗೆ ಬಂಗಾರದ ಎರಡು ಹಲ್ಲಿಗಳನ್ನು ಜಂತಿಗೆ ಕೂಡಿಸಿರುವರು. ಸಾಯಂಕಾಲದ ೫ ಗಂಟೆಗೆ ನಾವು ವರದರಾಜನ ದರ್ಶನ ಪೂಜಾದಿಗಳನ್ನು ತೀರಿಸಿಕೊಂಡು, ಈ **ಹಲ್ಲಿಗಳ** ಕಡೆಗೆ ಬಂದೆವು. ಜಂತಿಯವರೆಗಿದ್ದ ನಿಚ್ಚಣಿಕೆಯನ್ನು ಏರಿ ಈ ಹಲ್ಲಿಗಳನ್ನು ಮುಟ್ಟಬೇಕಾಗುತ್ತದೆ. ಅದಕ್ಕೆ ಫೀ ಕೊಡಬೇಕು.

ಸಗರರಾಜನ ಮಗನಾದ **ಅಸಮಂಜಾಸನ** ಆತನ ಹೆಂಡತಿ ಇಬ್ಬರೂ ಘೋರವಾದ ಪಾಪಕರ್ಮಗಳನ್ನು ಮಾಡಿದ್ದರಿಂದ ಅವರಿಗೆ ಹಲ್ಲಿಗಳ ಜನ್ಮ ಬಂದಿರಲು, **ಉಪಮನ್ಯುವು** ಅವುಗಳನ್ನು ವಿಷ್ಣುಕಂಚಿಯಲ್ಲಿರುವ **ಅನಂತಸರಸ್ಸಿನಲ್ಲಿ** ತೊಳೆದು ವರದ-ರಾಜನ ಸೇವೆಮಾಡಿಸಲಾಗಿ ಅವರಿಗೆ ಮೋಕ್ಷಪ್ರಾಪ್ತಿಯಾಯಿತು. ಆಗ ಉಲ್ಲಸಿತನಾದ ಉಪಮನ್ಯುವು ಶ್ರೀವರದರಾಜನ ಪ್ರೇರಣೆಯ ಮೇರೆಗೆ ಈ ಸಂಗತಿಯ ಸ್ಮರಣಾರ್ಥವಾಗಿ ಎರಡು ಬಂಗಾರದ ಹಲ್ಲಿಗಳನ್ನು ಮಾಡಿಸಿ, ಅವುಗಳನ್ನು ಈಗಿದ್ದ ಸ್ಥಳದಲ್ಲಿ ಸ್ಥಾಪಿಸಿದನು. ಆ ಮೇಲೆ ವರದರಾಜನು ಪ್ರಸನ್ನನಾಗಿ ಕೊಟ್ಟ ವರವೇನೆಂದರೆ:— "ನನ್ನ ದರ್ಶನ ತೆಗೆದುಕೊಂಡವನು ಶಾಪ, ವ್ಯಾಧಿ, ಪಾಪದಿಂದ ಮುಕ್ತನಾಗುವನು. ಮತ್ತು ಹಲ್ಲಿಗಳು ಮೈಮೇಲೆ ಬೀಳುವುದರಿಂದ ತಟ್ಟುವ ಪಾಪವು ಇಂಥವರಿಗೆ ಸೋಂಕಲಾರದು." ಕಂಚಿಯ ಈ ಕಥೆಯನ್ನು ಭಾವಿಕರೆಲ್ಲರೂ ಭಕ್ತಿಯಿಂದನಂಬುತ್ತಾರೆ.

ಸಾಯಂಕಾಲ ನಾವು ಕಂಚಿಯಿಂದ ಹೊರಟು ರಾತ್ರಿಯ ೯ ಗಂಟೆಗೆ ಮದ್ರಾಸ್ ಪಟ್ಟಣಕ್ಕೆ ತಲುಪಿದೆವು. ಇಲ್ಲಿಗೆ ನಮ್ಮ ಸೌಥ್ ಇಂಡಿಯನ್ ರೇಲ್ವೆಯ ಪ್ರವಾಸವು ಮುಗಿಯಿತು. ನಾವು ಪ್ರವಾಸಮಾಡಿದ ದಾರಿಯುದ್ದಕ್ಕೂ ಈ ರೇಲ್ವೆಯ ನೌಕರರು ನಮ್ಮ ಸಂಗಡ ಬಹು ಗೌರವದಿಂದ ನಡೆದುಕೊಂಡರು. ತಮ್ಮಲ್ಲಿಯ ಕೆಲಸಗಾರರನ್ನು ಇಷ್ಟೊಂದು ಹತೋಟಿಯಲ್ಲಿಟ್ಟುಕೊಂಡು, ಪ್ರವಾಸಿಗರಿಗೆ ಅವರಿಂದ ಎಲ್ಲ ಬಗೆಯಿಂದಲೂ ಅನುಕೂಲವಾಗುವಂತೆ ಏರ್ಪಾಡು ಮಾಡಿದುದು, ಎಸ್. ಆಯ್. ರೇಲ್ವೆ ಕಂಪನಿಯವರ ಅಭಿನಂದನೀಯ ಕಾರ್ಯ.

ಮರುದಿನ ಮುಂಜಾನೆ ೧೦ ಗಂಟೆಗೆ ನಾವು ಎಂ. ಎಸ್. ಎಂ. ಸೆಂಟ್ರಲ್ ಸ್ಟೇಶನ್ನಿನಿಂದ ಮದ್ರಾಸನ್ನು ಬಿಟ್ಟು, ೬ ಗಂಟೆಯ ಸುಮಾರಿಗೆ ತಿರುಪತಿ ನಿಲ್ದಾಣಕ್ಕೆ ಬಂದೆವು. ದಾರಿಯಲ್ಲಿ ನೊಲ್ಲಾಪುರದ ಮಿತ್ರರು ಭೆಟ್ಟಿಯಾದರು. ಅವರೂ ತಿರುಪತಿಗೆ ಹೊರಟಿದ್ದರು. **ಗೋವಿಂದರಾಜನ** ಪಟ್ಟಣದಲ್ಲಿ ಉಪಾಹಾರ ತೀರಿಸಿಕೊಂಡು, ಬಿಂದೆರಡು ರೂಪಾಯಿಗಳ "ಕಾಸು"ಗಳನ್ನು ತೆಗೆದುಕೊಂಡು ಬೆಟ್ಟದ ಕಡೆಗೆ ಹೊರಟೆವು.

ತಿರುಪತಿ ಈಸ್ಟ್ ಅಥವಾ **ಗೋವಿಂದರಾಜನ ಪಟ್ಟಣದಲ್ಲಿ** ತಿರುಪತಿ ದೇವಸ್ಥಾನ ಸಮಿತಿಯವರು ಯಾತ್ರಿಕರಿಗಾಗಿ ನಾಲ್ಕು ಛತ್ರಗಳನ್ನಿಟ್ಟಿರುವರು. ಇವುಗಳಲ್ಲಿ ನಿಲ್ದಾಣದ ಹತ್ತಿರವಿರುವ ಛತ್ರವು ಹೊಸದೂ ದೊಡ್ಡದೂ ಇದೆ. ಇಳಿದುಕೊಳ್ಳಲು ಇಲ್ಲಿ ಬೇಕಾದಷ್ಟು ಕೋಣೆಗಳುಂಟು. ಅಡಿಗೆ ಮಾಡಲು ಪಾತ್ರೆಗಳೂ ಇಲ್ಲಿ ೩ ದಿವಸಗಳ ವರೆಗೆ ದೊರೆಯುವವು. ಹೆಚ್ಚಿನ ಸಾಮಾನುಗಳನ್ನು ಇಲ್ಲಿಯ ಕಚೇರಿಯವರ ಸ್ವಾಧೀನಮಾಡಿ, ಬೆಟ್ಟವನ್ನೇರಬಹುದು. ಈ ಛತ್ರದ ಅಟ್ಟದ ಮೇಲೆ ಇರುವ ಕೋಣೆಗಳಲ್ಲಿ ವಿದ್ಯುದ್ದೀಪ, ಕುರ್ಚಿ, ಪಲ್ಲಂಗಗಳ ವ್ಯವಸ್ಥೆಯಿದ್ದು ಇವುಗಳಿಗೆ ದಿನಾಲು ೦-೮-೦ ಆಣೆ ಬಾಡಿಗೆ ಬೀಳುತ್ತದೆ.



ಅನಂತ ಸರಸ್ಸಿನ ದೃಶ್ಯ

ನನ್ನ ದಕ್ಷಿಣ ಹಿಂದುಸ್ತಾನದ ಯಾತ್ರೆ

ಮದರಾಸಿನಿಂದ ತಿರುಪತಿಗೆ—

★

ಕಂಚಿಗೆ ಹೋಗಿ ಬಂಗಾರದ ಹಲ್ಲಿಗಳನ್ನು ಮುಟ್ಟಿಬಂದರೆ ಎಷ್ಟು ಜನರಿಂದ ನೀವು ನಮಸ್ಕರಿಸಿಕೊಳ್ಳಬೇಕಾದೀತು! ಶೇಷಾಚಲದ ತಲೆ-ಬಾಲ-ನಡುಗಳು ಯಾವುವೆಂಬುದು ಗೊತ್ತೇ? ತಿರುಪತಿಯ ವೆಂಕಪ್ಪನ ಚಿಕ್ಕಮಾವ ತೋಂಡಮಾನನೇ ಅವನಿಗೆ ಗುಡಿ ಕಟ್ಟಿಸಿಕೊಟ್ಟನಂತೆ!

★



ಚಿ ಅಥವಾ ಕಾಂಜೀವರಂ:—

ಮದ್ರಾಸಿನಿಂದ ಸುಮಾರು ೪೦ ಮೈಲಿನ ಮೇಲಿರುವ ಈ ಪುರಾತನ ಕ್ಷೇತ್ರದಲ್ಲಿ ಸುಮಾರು ೬೨ ಸಾವಿರ ಜನವಸತಿಯಿದೆ-ಇಲ್ಲಿ ಸುಮಾರು ಹದಿನಾಲ್ಕು ಛತ್ರಗಳಿವೆ. ೭ನೆಯ ಶತಮಾನದಲ್ಲಿ **ಹುಯೆನ್‌ತ್ಸಾಂಗ್** ಎಂಬ ಚೀನದೇಶದ ಪ್ರವಾಸಿಯು ಹಿಂದುಸ್ತಾನದಲ್ಲಿ ಪ್ರವಾಸಮಾಡಿ ವರ್ಣಿಸಿದ ಸ್ಥಳಗಳಲ್ಲಿ **ಕಂಚಿಯ** ಉಲ್ಲೇಖವಿದೆ. ಈ ಕಡೆಯು ಬೌದ್ಧಧರ್ಮದ ಕೇಂದ್ರವಾದ ಕಂಚಿಯಲ್ಲಿ **ಶ್ರೀಶಂಕರಾಚಾರ್ಯರು** ಬಂದು ತಳವೂರಿ, ಆರ್ಯಧರ್ಮದ ಪ್ರಚಾರವನ್ನು ಸಾಗಿಸಿದರು. ಇಲ್ಲಿಯ ಕಾಮಾಕ್ಷಿಯ ಗುಡಿಯಲ್ಲಿ ಈಗಲೂ ಶಂಕರಾಚಾರ್ಯರ ಮೂರ್ತಿಯುಂಟು. ಅನಂತರ **ರಾಮಾನುಜಾಚಾರ್ಯರು** ಇಲ್ಲಿ ವೈಷ್ಣವಮತದ ಪ್ರಚಾರಮಾಡಿದರು. ಆದುದರಿಂದಲೇ ಇಲ್ಲಿ ಅನೇಕ ಶೈವರ ಹಾಗೂ ವೈಷ್ಣವರ ಗುಡಿಗಳುಂಟು. ಪಟ್ಟಣದ ಒಂದು ಭಾಗಕ್ಕೆ **ಶಿವಕಂಚಿ** ಅಥವಾ ದೊಡ್ಡಕಂಚಿ ಎಂತಲೂ, ಇನ್ನೊಂದು ಭಾಗಕ್ಕೆ ವಿಷ್ಣುಕಂಚಿ ಅಥವಾ ಚಿಕ್ಕಕಂಚಿ ಎಂತಲೂ ಹೆಸರು. ಇಲ್ಲಿಂದ ೨ ಮೈಲು ಅಂತರದ ಮೇಲಿರುವ **ತಿರುಪರತ್ತಿಕುಂಡ್ರಂ** ಎಂಬಲ್ಲಿ ಜೈನಗುಡಿಯೂ ಮಸೀದೆಯೂ ವಿಜಾಪುರದ ಫಕೀರನಾದ ಹಜರತ್ತ ಸಾಹೇಬ್ ಅಮಾರ್ ಅವಲ್ಯಾ ಎಂಬವನ ಗೋರಿಯೂ ಇರುತ್ತವೆ. **ಅಶೋಕನು ಕಂಚಿಯಲ್ಲಿ ಸ್ತೂಪಗಳನ್ನು ಕಟ್ಟಿಸಿದ ನೆಂದು ಹೇಳುತ್ತಾರೆ.**

ಕ್ರಿಸ್ತಶಕದ ೪೭೫ನೆಯ ವರ್ಷದ ಸುಮಾರಿಗೆ **ಚಾಲುಕ್ಯರ ಪುಲಿಕೇಶಿಯು**, ಕಂಚಿಯ ಚೋಳಭೂಪನನ್ನು ಸೋಲಿಸಿ, ಪಟ್ಟಣವನ್ನು ಸುಟ್ಟನೆಂದು ಹೇಳುತ್ತಾರೆ. ಅನಂತರ ಇದು ಬಹಳ **ಕಾಲದವರೆಗೆ** ಪಲ್ಲವರ ರಾಜಧಾನಿಯಾಗಿತ್ತು. ೧೭೫೧ ಹಾಗೂ ೧೭೫೨ರಲ್ಲಿ **ಕ್ಲೈವನು** ಈ ಪಟ್ಟಣವನ್ನು ವಶಮಾಡಿಕೊಂಡನು. ೧೭೫೮ರಲ್ಲಿ ಫ್ರೆಂಚರು ಈ ಪಟ್ಟಣವನ್ನು ಸುಟ್ಟರು. ೧೭೮೦ರಲ್ಲಿ ಹೈದರ ಅಲ್ಲಿಯು ಇದನ್ನು ಸುಲಿದನು.

ಅರ್ಥಶಾಸ್ತ್ರವನ್ನು ಬರೆದು ಸುಪ್ರಖ್ಯಾತನಾದ ಹಾಗೂ **ಮೌರ್ಯ ಚಂದ್ರಗುಪ್ತನ** ಮಂತ್ರಿಯಾದ **ಚಾಣಕ್ಯನು** ಕಂಚಿಯಲ್ಲಿ ಹುಟ್ಟಿದವನು.

"**ದಕ್ಷಿಣಕಾಶಿ**"ಯೆಂದು ಪ್ರಸಿದ್ಧವಿದ್ದ ಈ ಕ್ಷೇತ್ರವನ್ನು "ನಗರೇಷು ಕಂಚೀ" ಎಂದು ವರ್ಣಿಸಿರುವರು. ಭರತವರ್ಷದ ಏಳು ಮಹತ್ವದ ಪವಿತ್ರಕ್ಷೇತ್ರಗಳಲ್ಲಿ (ಸಪ್ತಪುರಿಗಳಲ್ಲಿ) ಇದೊಂದು.

ಶಿವಕಂಚಿ ಎಂಬ ಭಾಗವು ರೇಲ್ವೆಸ್ಟೇಶನ್ನಿಗೆ ಹೊಂದಿ ಇರುವುದು. ಪಟ್ಟಣವು ೫–೬ ಮೈಲುಗಳವರೆಗೆ ಹಬ್ಬಿದ್ದು, ಎಲ್ಲಕಡೆಗೂ ವಿಸ್ತೀರ್ಣವಾದ ರಾಜಮಾರ್ಗಗಳಿವೆ. ಮಾರ್ಗದ ಎರಡೂಬದಿಗೆ ತೆಂಗು ಮುಂತಾದ ಗಿಡಗಳನ್ನು ಹಚ್ಚಿರುವುದರಿಂದ, ವಿಶೇಷ ಶೋಭೆಯುಂಟಾಗಿದೆ. ವಿಷ್ಣುಕಂಚಿಯು ನಿಲ್ದಾಣದಿಂದ ಸುಮಾರು ೨ ಮೈಲು ಅಂತರದ ಮೇಲಿದೆ.

ಏಕಾಂಬರೇಶ್ವರನ ದೇವಾಲಯವು ತುಂಬ ವಿಸ್ತಾರವಾದುದಿದ್ದು ಸುಮಾರು ೨೫ ಎಕರೆಯವರೆಗೆ ಹಬ್ಬಿದೆ. ಇದರ ಮುಖ್ಯ ಗೋಪುರವನ್ನು ವಿಜಯನಗರದ ಕೃಷ್ಣದೇವರಾಯನು ಕಟ್ಟಿಸಿದನು. ಈ ಗುಡಿಯಲ್ಲಿ ಪಂಚಲಿಂಗಗಳಲ್ಲೊಂದಾದ "**ಪೃಥ್ವೀಲಿಂಗ**"ವಿರುತ್ತದೆ.

ಮಧುರೆಯ ಮೀನಾಕ್ಷಿಯಂತೆ ಕಂಚಿಯ **ಕಾಮಾಕ್ಷಿಯೂ** ಪ್ರಸಿದ್ಧ. ಆದರೆ ಈ ಗುಡಿಯು ಮಧುರೆಯ ಗುಡಿಯಷ್ಟು ಸುಂದರವಲ್ಲ.



ಕಂಚಿಯ ಏಕಾಂಬರೇಶ್ವರನ ಗುಡಿ

ಇನ್ನು ವಿಷ್ಣುಕಂಚಿಯು:— ಹಸ್ತಿಗಿರಿಯೆಂದು ಪ್ರಸಿದ್ಧವಿದ್ದ ಎತ್ತರದ ಸ್ಥಳದಮೇಲೆ, ಬ್ರಹ್ಮನು ತಪವನ್ನಾಚರಿಸಿ ವಿಷ್ಣುವಿನಿಂದ ವರವನ್ನು ಪಡೆದುಕೊಂಡ ಸ್ಥಳದಲ್ಲಿ ವರದರಾಜನ ಗುಡಿಯಿರುತ್ತದೆ. ಈ ಗುಡಿಯಲ್ಲಿ **ಚೋಳ** ಹಾಗೂ **ವಿಜಯನಗರ** ಕಾಲದ ಕಲ್ಬರಹಗಳಿರುತ್ತವೆ. ಈ ಗುಡಿಯು ಬಲು ಪುರಾತನವಾದುದೂ ಧನಾಢ್ಯವಾದುದೂ ಇರುತ್ತದೆ. ೯ನೆಯ ಶತಮಾನದಲ್ಲಿ ಬಾಳಿದ '**ತಿರುಮಂಗಾಯ್ ಆಳ್ವಾರ್**' ಎಂಬ ವೈಷ್ಣವ ವಿಭೂತಿ ಪುರುಷನು, ವರದರಾಜನನ್ನು ತನ್ನ ಕವಿತೆಗಳಲ್ಲಿ ಸ್ತೋತ್ರಮಾಡಿರುವನು. ಪ್ರತಿವರ್ಷ ವೈಶಾಖಮಾಸದಲ್ಲಿ ಇಲ್ಲಿ ಜರುಗುವ **ಗರುಡೋತ್ಸವವು** ತುಂಬ ಪ್ರೇಕ್ಷಣೀಯವಾಗಿರುವುದು. ಆಗ ಇಲ್ಲಿ ದೊಡ್ಡ ಜಾತ್ರೆ ಕೂಡುತ್ತದೆ.

ಇಲ್ಲಿ ಗರ್ಭಗುಡಿಯ ಹಿಂಬದಿಗೆ ಬಲಗಡೆಯ ಮೂಲೆಗೆ ಬಂಗಾರದ ಎರಡು **ಹಲ್ಲಿಗಳನ್ನು** ಜಂತಿಗೆ ಕೂಡಿಸಿರುವರು. ಸಾಯಂಕಾಲದ ೫ ಗಂಟೆಗೆ ನಾವು ವರದರಾಜನ ದರ್ಶನ ಪೂಜಾದಿಗಳನ್ನು ತೀರಿಸಿಕೊಂಡು, ಈ **ಹಲ್ಲಿಗಳ** ಕಡೆಗೆ ಬಂದೆವು. ಜಂತಿಯವರೆಗಿದ್ದ ನಿಚ್ಚಣಿಕೆಯನ್ನು ಏರಿ ಈ ಹಲ್ಲಿಗಳನ್ನು ಮುಟ್ಟಬೇಕಾಗುತ್ತದೆ. ಅದಕ್ಕೆ ಫೀ ಕೊಡಬೇಕು.

ಸಗರರಾಜನ ಮಗನಾದ **ಅಸಮಂಜಾಸನ** ಅವನ ಹೆಂಡತಿ ಇಬ್ಬರೂ ಘೋರವಾದ ಪಾಪಕರ್ಮಗಳನ್ನು ಮಾಡಿದ್ದರಿಂದ ಅವರಿಗೆ ಹಲ್ಲಿಗಳ ಜನ್ಮ ಬಂದಿರಲು, **ಉಪಮನ್ಯುವು** ಅವುಗಳನ್ನು ವಿಷ್ಣುಕಂಚಿಯಲ್ಲಿರುವ **ಅನಂತಸರಸ್ಸಿನಲ್ಲಿ** ತೊಳೆದು ವರದರಾಜನ ಸೇವೆಮಾಡಿಸಲಾಗಿ ಅವರಿಗೆ ಮೋಕ್ಷಪ್ರಾಪ್ತಿಯಾಯಿತು. ಆಗ ಉಲ್ಲಸಿತನಾದ ಉಪಮನ್ಯುವು ಶ್ರೀವರದರಾಜನ ಪ್ರೇರಣೆಯ ಮೇರೆಗೆ ಈ ಸಂಗತಿಯ ಸ್ಮರಣಾರ್ಥವಾಗಿ ಎರಡು ಬಂಗಾರದ ಹಲ್ಲಿಗಳನ್ನು ಮಾಡಿಸಿ, ಅವುಗಳನ್ನು ಈಗಿದ್ದ ಸ್ಥಳದಲ್ಲಿ ಸ್ಥಾಪಿಸಿದನು. ಆ ಮೇಲೆ ವರದರಾಜನು ಪ್ರಸನ್ನನಾಗಿ ಕೊಟ್ಟ ವರವೇನೆಂದರೆ: "ನನ್ನ ದರ್ಶನ ತೆಗೆದುಕೊಂಡವನು ಶಾಪ, ವ್ಯಾಧಿ, ಪಾಪದಿಂದ ಮುಕ್ತನಾಗುವನು. ಮತ್ತು ಹಲ್ಲಿಗಳು ಮೈಮೇಲೆ ಬೀಳುವುದರಿಂದ ತಟ್ಟುವ ಪಾಪವು ಇಂಥವರಿಗೆ ಸೋಂಕಲಾರದು." ಕಂಚಿಯ ಈ ಕಥೆಯನ್ನು ಭಾವಿಕರೆಲ್ಲರೂ ಭಕ್ತಿಯಿಂದ ನಂಬುತ್ತಾರೆ.

ಸಾಯಂಕಾಲ ನಾವು ಕಂಚಿಯಿಂದ ಹೊರಟು ರಾತ್ರಿಯ ೯ ಗಂಟೆಗೆ **ಮದ್ರಾಸ್** ಪಟ್ಟಣಕ್ಕೆ ತಲುಪಿದೆವು. ಇಲ್ಲಿಗೆ ನಮ್ಮ ಸೌಥ್ ಇಂಡಿಯನ್ ರೇಲ್ವೆಯ ಪ್ರವಾಸವು ಮುಗಿಯಿತು. ನಾವು ಪ್ರವಾಸಮಾಡಿದ ದಾರಿಯುದ್ದಕ್ಕೂ ಈ ರೇಲ್ವೆಯ ನೌಕರರು ನಮ್ಮ ಸಂಗಡ ಬಹು ಗೌರವದಿಂದ ನಡೆದುಕೊಂಡರು. ತಮ್ಮಲ್ಲಿಯ ಕೆಲಸಗಾರರನ್ನು ಇಷ್ಟೊಂದು ಹತೋಟಿಯಲ್ಲಿಟ್ಟುಕೊಂಡು, ಪ್ರವಾಸಿಗರಿಗೆ ಅವರಿಂದ ಎಲ್ಲ ಬಗೆಯಿಂದಲೂ ಅನುಕೂಲವಾಗುವಂತೆ ಏರ್ಪಾಡು ಮಾಡಿದುದು, **ಎಸ್. ಆಯ್. ರೇಲ್ವೆ** ಕಂಪನಿಯವರ ಅಭಿನಂದನೀಯ ಕಾರ್ಯ.

ಮರುದಿನ ಮುಂಜಾನೆ ೧೦ ಗಂಟೆಗೆ ನಾವು **ಎಂ. ಎಸ್. ಎಂ. ಸೆಂಟ್ರಲ್** ಸ್ಟೇಶನ್ನಿನಿಂದ ಮದ್ರಾಸನ್ನು ಬಿಟ್ಟು, ೩ ಗಂಟೆಯ ಸುಮಾರಿಗೆ **ತಿರುಪತಿ** ನಿಲ್ದಾಣಕ್ಕೆ ಬಂದೆವು. ದಾರಿಯಲ್ಲಿ ಸೊಲ್ಲಾಪುರದ ಮಿತ್ರರು ಭೆಟ್ಟಿಯಾದರು. ಅವರೂ ತಿರುಪತಿಗೆ ಹೊರಟಿದ್ದರು. **ಗೋವಿಂದರಾಜನ** ಪಟ್ಟಣದಲ್ಲಿ ಉಪಾಹಾರ ತೀರಿಸಿಕೊಂಡು, ಒಂದೆರಡು ರೂಪಾಯಿಗಳ "ಕಾಸು"ಗಳನ್ನು ತೆಗೆದುಕೊಂಡು ಬೆಟ್ಟದ ಕಡೆಗೆ ಹೊರಟೆವು.

ತಿರುಪತಿ ಈಸ್ಟ್ ಅಥವಾ **ಗೋವಿಂದರಾಜನ ಪಟ್ಟಣದಲ್ಲಿ** ತಿರುಪತಿ ದೇವಸ್ಥಾನ ಸಮಿತಿಯವರು ಯಾತ್ರಿಕರಿಗಾಗಿ ನಾಲ್ಕು ಛತ್ರಗಳನ್ನಿಟ್ಟಿರುವರು. ಇವುಗಳಲ್ಲಿ ನಿಲ್ದಾಣದ ಹತ್ತಿರವಿರುವ ಛತ್ರವು ಹೊಸದೂ ದೊಡ್ಡದೂ ಆಗಿದೆ. ಇಳಿದುಕೊಳ್ಳಲು ಇಲ್ಲಿ ಬೇಕಾದಷ್ಟು ಕೋಣೆಗಳುಂಟು. ಅಡಿಗೆ ಮಾಡಲು ಪಾತ್ರೆಗಳೂ ಇಲ್ಲಿ ೫ ದಿವಸಗಳ ವರೆಗೆ ದೊರೆಯುವುವು. ಹೆಚ್ಚಿನ ಸಾಮಾನುಗಳನ್ನು ಇಲ್ಲಿಯ ಕಚೇರಿಯವರ ಸ್ವಾಧೀನಮಾಡಿ, ಬೆಟ್ಟವನ್ನೇರಬಹುದು. ಈ ಛತ್ರದ ಅಟ್ಟದ ಮೇಲೆ ಇರುವ ಕೋಣೆಗಳಲ್ಲಿ ವಿದ್ಯುದ್ದೀಪ, ಕುರ್ಚಿ, ಪಲ್ಲಂಗಗಳ ವ್ಯವಸ್ಥೆಯಿದ್ದು ಇವುಗಳಿಗೆ ದಿನಾಲು ೦-೮-೦ ಅಣೆ ಬಾಡಿಗೆ ಬೀಳುತ್ತದೆ.

ಅನಂತ ಸರಸ್ಸಿನ ದೃಶ್ಯ

ದೇವಸ್ಥಾನದ ನಾಲ್ಕು ಛತ್ರಗಳಲ್ಲದೆ ಇನ್ನೂ ಆರು ಛತ್ರಗಳು ಇಲ್ಲಿ ಇರುವುವು. ಇವುಗಳ ಜೊತೆಗೆ ಹಲವಾರು ಊಟದ ಮನೆಗಳೂ, ಕಾಫೀ ಹೋಟೆಲುಗಳೂ ಇಲ್ಲಿ ಇರುವುದರಿಂದ ಪ್ರಯಾಣಿಕರಿಗೆ ಯಾವತರದ ತೊಂದರೆಯೂ ಆಗುವುದಿಲ್ಲ.

ನಿಲ್ದಾಣದಿಂದ ಬೆಟ್ಟದ ಓರೆಯ ವರೆಗೆ ಸುಮಾರು ಎರಡು ಮೈಲುಗಳ ವರೆಗೆ ಜಟಕಾದಲ್ಲಿ ಹೋದೆವು. ಇಲ್ಲಿಂದ ಬೆಟ್ಟದ ಮೇಲಿರುವ ಶ್ರೀವೆಂಕಟೇಶನ ದೇವಸ್ಥಾನವು ಸುಮಾರು ೭ ಮೈಲಿನ ಮೇಲಿರುವುದು. ಅಲ್ಲಿಯ ವರೆಗೆ ದಾರಿಯುದ್ದಕ್ಕೂ ಸ್ವಚ್ಛ ಪ್ರಕಾಶದ ವಿದ್ಯುದ್ದೀಪಗಳ ಹಾಗೂ ಪಾವಟಿಗೆಗಳ ವ್ಯವಸ್ಥೆಯುಂಟು. ಹಗಲಿರುಳು ಸದಾಕಾಲದಲ್ಲಿಯೂ ಇಲ್ಲಿ ಯಾತ್ರಿಕರ ತಂಡವನ್ನು ಕಾಣಬಹುದು.

ಜೋಡುಗಳನ್ನು ಮೆಟ್ಟಿಕೊಂಡು ಬೆಟ್ಟವನ್ನು ಏರುವಂತಿಲ್ಲ. ಕಾರಣ ನಾವು ಬೆಟ್ಟದ ಕೆಳಗಿರುವ ಕಾಫೀ ಹೋಟೆಲಿನಲ್ಲಿ ನಮ್ಮ ಜೋಡುಗಳನ್ನು ಬಿಟ್ಟೆವು.

ಇಬ್ಬರು ಹುಡುಗರನ್ನು ಎತ್ತಿಕೊಳ್ಳಲು ಎರಡು ಆಳುಗಳನ್ನೂ, ಸಾಮಾನು ಹೊರಲು ಎರಡು ಆಳುಗಳನ್ನೂ ಎಂಟು ಆಣೆಗೆ ಒಬ್ಬನಂತೆ ಗೊತ್ತುಮಾಡಿಕೊಂಡು ನಾವು ಹೊರಟೆವು. ಈ ಕೂಲಿಯ ಜನರ ಕಡೆಗೆ ಗಂಟುಗಳನ್ನು ಒಪ್ಪಿಸಿದರೆ ತೀರಿತು; ನಮಗಿಂತಲೂ ಮೊದಲು ಅವರು ಗುಡಿಗೆ ಹೋಗಿ, ನಮ್ಮ ದಾರಿಯನ್ನು ಕಾಯುತ್ತಾ ಕುಳಿತಿರುವರು.

ಶ್ರೀಮಂತರು, ಸ್ಥೂಲದೇಹದವರು, ಅಶಕ್ತರು, ಹುಡುಗರು ಇವರಿಗಾಗಿ **ಡೋಲಿಗಳ** ವ್ಯವಸ್ಥೆ ಇರುವುದು. ಒಂದು ಡೋಲಿಗೆ ಒಂದೂವರೆಯಿಂದ ಎರಡು ರೂಪಾಯಿಗಳ ವರೆಗೆ ಬಾಡಿಗೆ ಬೀಳುತ್ತದೆ. ಇಷ್ಟು ಭಾರವಾದ ಗಂಟುಗಳನ್ನೂ ಹಾಗೂ ಮನುಷ್ಯರನ್ನೂ ಹೊತ್ತುಕೊಂಡು ಈ ಜನರು ಭರಭರನೆ ಗುಡ್ಡವನ್ನು ಹತ್ತುವ ಹಾಗೂ ಇಳಿಯುವ ನೋಟವು ಆಶ್ಚರ್ಯವನ್ನುಂಟುಮಾಡುತ್ತದೆ.

ಗಾಳಿಗೋಪುರದ ವರೆಗಿನ ಒಂದು ಮೈಲು ಅಂತರವನ್ನು ಹತ್ತಬೇಕಾದರೆ ಹೊಸಬರಿಗೆ ತೊಂದರೆಯಾಗುತ್ತದೆ. ನಿಲುಗಡೆ ಇಲ್ಲದೆ ಒಂದೇಸಮನೆ ಪಾವಟಿಗೆಗಳನ್ನು ಹತ್ತಬೇಕಾದರೆ ಕಾಲು ನೋತು, ಹಣ್ಣಾಗಿ, ಪಾಂಥಸ್ಥನು ಬೆವತು ಹೋಗುತ್ತಾನೆ. ಆದರೆ ಮುಂದೆ ಅಲ್ಲಲ್ಲಿ ಸಪಾಟಾದ ದಾರಿ ಹತ್ತುವುದರಿಂದ, ಮಾರ್ಗಾಯಾಸವು ಕಡಿಮೆಯಾಗುವುದಲ್ಲದೆ ಅಲ್ಲಲ್ಲಿ ಪ್ರಸ್ಥಾಪಿತವಾದ ಕಾಫೀ ಹೋಟಲುಗಳಲ್ಲಿ ಉಪಹಾರವು ದೊರೆಯುವುದರಿಂದ ವಿಶ್ರಾಂತಿಯನ್ನು ಪಡೆದು ಮುಂದೆ ಹೊರಡಬಹುದು. ಕೊನೆಯ ಬೆಟ್ಟವಾದ **"ಮೊಣಕಾಲುಮುರಿ"** ಬೆಟ್ಟಕ್ಕೆ ಬರುವಷ್ಟರಲ್ಲಿ ಯಾತ್ರಿಕನು ದಣಿದು ಹಣ್ಣಾಗಿರುತ್ತಾನೆ. ಅಷ್ಟರಲ್ಲಿ ಮತ್ತೆ ಈ ದೊಡ್ಡ ಬೆಟ್ಟವನ್ನು ಕಂಡು "ಉಸ್ಸೆಂದು" ಉಸುರುಗರೆಯುವವರೆಷ್ಟೋ ಜನ.



ತಿರುಪತಿಯ ಶ್ರೀನಿವಾಸನ ದೇವಾಲಯದ ಒಂದು ನೋಟ

ಗೋವಿಂದರಾಜನ ಪಟ್ಟಣದಿಂದ ಬೆಟ್ಟದ ಮೇಲಿನ ಗುಡಿಯ ವರೆಗೂ ದಾರಿಯ ಎರಡೂ ಬದಿಗೆ ಭಿಕ್ಷುಕರ ಸೈನ್ಯವೇ ಬೀಡಾರ ಮಾಡಿರುತ್ತದೆ. ಕೆಲವರಂತೂ ಮೈಲು-ಅರ್ಧಮೈಲಿನವರೆಗೆ ಬೆನ್ನುಹತ್ತಿ ಕಾಡುತ್ತಾರೆ. ಒಬ್ಬರಿಗೆ ಒಂದು ಕಾಸು ಕೊಟ್ಟರೆ ತೀರಿತು. ದೊಡ್ಡದೊಂದು ಹಿಂಡೇ ಗಂಟುಬೀಳುತ್ತದೆ. ಕೆಲವು ಭಿಕ್ಷುಕರು ಮುಳ್ಳಿನ ಹಾಸಿಗೆಯಮೇಲೆ ಮಲಗಿರುತ್ತಾರೆ. ಕೆಲವರು ದೇಹದ ಕೆಲಭಾಗವನ್ನು ಭೂಮಿಯಲ್ಲಿ ಹೂತುಕೊಂಡಿರುತ್ತಾರೆ. ಕೆಲವರು ಒಂಟಿಗಾಲಿನಿಂದ ನಿಂತಿರುತ್ತಾರೆ. ಇನ್ನು ಕೆಲವರು ನಾನಾತರದ ಸೋಗುಹಾಕಿಕೊಂಡು ದಾರಿಯಲ್ಲಿ ಹೋಗುವವರ ಮನದಲ್ಲಿ ದಯೆಯು ಉತ್ಪನ್ನವಾಗುವಂತೆ ಹಲವು ವಿಧದಿಂದ ಪ್ರಯತ್ನಿಸುತ್ತಾರೆ. ಅಂತೂ ಬಿಕ್ಷೆಬೇಡಿ ಉಪಜೀವನ ಸಾಗಿಸಿಕೊಳ್ಳುವುದು, ವಿವಿಧ ರೀತಿಯಲ್ಲಿ ತರತರದ ವೇಷಭೂಷಣಗಳಿಂದ ಹಾಗೂ ಒಂದೇ ಸಮನೆ ಕಾಡಿ ಜನರಿಂದ ಹಣ ಸೆಳೆದುಕೊಳ್ಳುವುದು ಇವು ಈ ಬಿಕ್ಷುಕರಿಗೆ ಒಂದು ಉದ್ಯೋಗವಾಗಿಬಿಟ್ಟಿವೆ. ಈ ಉದ್ಯೋಗದಲ್ಲಿ ಇವರು ನಿಷ್ಣಾತರಾಗಿರುವರು. ಜನರಿಗೆ ಇದೊಂದು ಪಿಡುಗು.

ವಿಶೇಷ ಆಯಾಸ ತೊಂದರೆಗಳಿಲ್ಲದೆ ನಾವು ರಾತ್ರಿಯ ೮ ಗಂಟೆಯ ಸುಮಾರಿಗೆ '**ತಿರುಪತಿ ವೆಂಕಪ್ಪ**' ನ ಗುಡಿಗೆ ಬಂದೆವು. ಮೈಸೂರು ಮಹಾರಾಜರ ಛತ್ರನಲ್ಲಿ ನಮಗೊಂದು ಕೋಣೆಯೂ ಸಿಕ್ಕಿತು. ಬೆಟ್ಟದ ಮೇಲೆ ಕೂಡ ನಾಲ್ಕಾರು ಛತ್ರಗಳು ಇವೆಯಲ್ಲದೆ ಅಲ್ಲಿ ಬಾಡಿಗೆಯ ಮನೆಗಳೂ ದೊರೆಯುತ್ತವೆ. ಉತ್ತರಾದಿ ಮಠವೂ ಇಲ್ಲಿ ಇರುವುದು. ಮೈಸೂರ ಛತ್ರದಲ್ಲಿ ನಮ್ಮ ಸಾಮಾನುಗಳನ್ನಿರಿಸಿ ಕೂಡಲೇ ಗುಡಿಗೆ ಬಂದೆವು. ಮರುದಿನವೇ ಮುಕ್ಕೋಟಿ

ದ್ವಾದಶಿ ಇದ್ದಿತಾದುದರಿಂದ ಗರ್ಭಗುಡಿಯ ಹಿಂಬದಿಗಿರುವ ಸ್ವರ್ಗದ ಬಾಗಿಲನ್ನು ತೆರೆದಿದ್ದರು. ಇದು ವರ್ಷದಲ್ಲಿ ಮೂರೇದಿವಸ ತೆರೆದಿರುತ್ತದೆ. ಕಾರಣ ಈ ಕಾಲಕ್ಕೆ ಇಲ್ಲಿ ಯಾತ್ರಿಕರ ಗದ್ದಲವು ವಿಶೇಷ. ನಾವು ತಾಸೆರಡುತಾಸು ಗುಡಿಯಲ್ಲಿ, ಸ್ವರ್ಗದ ಬಾಗಿಲಲ್ಲಿ, ಗುಡಿಯಸುತ್ತಲೂ ಹಬ್ಬಿರುವ ಆ ಚಿಕ್ಕ ಊರಿನ ಬೀದಿ ಗಳಲ್ಲಿ ತಿರುಗಾಡಿ ಅನಂತರ ವಿಶ್ರಮಿಸಿದೆವು. ಡಿಸೆಂಬರ್–ಜಾನ್ಯು ವರಿಗಳಲ್ಲಿ ಇಲ್ಲಿ ವಿಪರೀತ ಚಳಿ ಇರುತ್ತದೆ. ಗುಡಿಯಲ್ಲಿ ಜನರು ಕಲ್ಲಲ್ಲಿ ಬೆಂಕಿಹೊತ್ತಿಸಿ ಕಾಸಿಕೊಳ್ಳುತ್ತ ಕುಳಿತಿದ್ದರು. ಈ ಸ್ಥಳವು ತುಂಬ ಎತ್ತರವಿದ್ದುದರಿಂದ, ಮೇತಿಂಗಳಲ್ಲಿ ಕೂಡ ಇಲ್ಲಿಯ ಹವೆಯು ತಂಪಾಗಿರುವದು.

ಈ ದೇವಸ್ಥಾನವಿರುವ ಬೆಟ್ಟಕ್ಕೆ '**ವೆಂಕಟಾಚಲ**' ಎಂದು ಹೆಸರು. ಈ ಬೆಟ್ಟದ ಸಾಲು ಇಲ್ಲಿಂದ ಪ್ರಾರಂಭವಾಗಿ ಕರ್ನೂಲಿನ ವರೆಗೂ ಹಬ್ಬಿರುವದು. ಇದೆಲ್ಲಕ್ಕೂ '**ಶೇಷಾಚಲ**' ಎಂದು ಹೆಸರು. ವೆಂಕಟಾಚಲದ ಏಳು ಗುಡ್ಡಗಳು ಆದಿಶೇಷನ ಏಳು ಹೆಡೆಗಳೆಂದೂ, ನಂದ್ಯಾಳದ ಹತ್ತಿರವಿರುವ **ಅಹೋಬಲನರಸಿಂಹ ದೇವಸ್ಥಾನದ** ಭಾಗವು ಈ ಶೇಷನ ಮಧ್ಯಭಾಗವೆಂದೂ, ಕರ್ನೂಲಿನ ಹತ್ತಿರವಿರುವ ಶ್ರೀಶೈಲವು ಕೊನೆಯಭಾಗ ಅಥವಾ ಬಾಲ ವೆಂದೂ ಜನರು ತಿಳಿದುಕೊಳ್ಳುತ್ತಾರೆ. ಹರಿ, ಹರ, ಬ್ರಹ್ಮಾದಿ ಗಳಲ್ಲಿ ಶ್ರೇಷ್ಠನನ್ನು ನಿಶ್ಚಯಿಸುವುದಕ್ಕೆ ಹೊರಟ ಭೃಗುಮುನಿಯು ಬ್ರಹ್ಮ-ಹಾಗೂ ಶಿವನ ಅನಾಸ್ಥೆಯಿಂದ ಚು ಗು ಪ್ಸಿ ತ ನಾ ಗಿ ವೈಕುಂಠಕ್ಕೆ ಒಂದು, ಕ್ರೋಧದಿಂದ ಶ್ರೀಹರಿಯ ಎದೆಗೆ ಒದೆದನು. ಇದಕ್ಕಾಗಿ ವಿಷ್ಣುವು ಸಿಟ್ಟಿಗೇಳದೆ ಮುನಿಯನ್ನು ಸಂತೈಸಿದು ದಕ್ಕಾಗಿ ಲಕ್ಷ್ಮಿಯು ಸಿಟ್ಟಿನಿಂದ ಕೊಲ್ಹಾಪುರಕ್ಕೆ ಹೋದಳೆಂದೂ, ವಿಷ್ಣುವು ವೆಂಕಟಾಚಲವಾಸಿಯಾದನೆಂದೂ ಕ ಥೆ ಯು ಂ ಟು. ಕಲಿಯುಗವು ಮುಗಿಯುವವರೆಗೆ ಇಲ್ಲಿಯೇ ಇರುವುದಾಗಿ ಅವನು ವಾಗ್ದಾನಮಾಡಿರುವನಂತೆ. ವರಾಹದೇವರ ನಿವಾಸಸ್ಥಾನವಾದ ಈ ಸ್ಥಳದಲ್ಲಿ ವಾಸಮಾಡುವುದಕ್ಕಾಗಿ, ಹಣಕೊಡುವ ಬದಲು ತನ್ನ ಭಕ್ತರು ಮೊದಲು **ವರಾಹದೇವರ ದರ್ಶನ ಪೂಜಾದಿ** ಗಳನ್ನು ತೀರಿಸಿಕೊಂಡು ಅನಂತರ ತನ್ನ ದರ್ಶನಕ್ಕೆ ಬರಬೇಕೆಂದು ಶ್ರೀನಿವಾಸನು ಹೇಳಿರುವನು. ಆದರಂತೆ, ಈಗಲೂ ಶ್ರೀನಿವಾಸನ ಭಕ್ತರು ಮೊದಲು ವರಾಹದೇವರ ಗುಡಿಗೆ ಹೋಗಿ, ಆ ಮೇಲೆ ಶ್ರೀನಿವಾಸನ ಗುಡಿಗೆ ಹೋಗುವುದುಂಟು.

ಈ ರೀತಿ ಬೆಟ್ಟದ ಮಧ್ಯದಲ್ಲಿ ಏಕಾಕಿಯಾದ ವಿಷ್ಣುವು, ಕಲಿಯುಗದ ಪ್ರಾರಂಭದಲ್ಲಿ ನಾರಾಯಣಪುರದ ಚೋಳವಂಶಜ ನಾದ ಆಕಾಶರಾಜನ ಮಗಳಾದ ಹಾಗು ಲಕ್ಷ್ಮಿಯ ಅವತಾರ ವಾದ ಪದ್ಮಾವತಿಯನ್ನು ಮದುವೆಯಾದನು. ಈ ಪದ್ಮಾವತಿಯ ಜನ್ಮಭೂಮಿಯು ಪದ್ಮಸರೋವರದಲ್ಲಿರುವುದು. ಈ ಲಗ್ನಕ್ಕಾಗಿ ಕುಬೇರ ನಿಂದ ೧೪ ಲಕ್ಷ ರಾಮಟಂಕಿಗಳು ವರಹಗಳನ್ನು ಶ್ರೀನಿವಾಸನು ಸಾಲವಾಗಿ ತೆಗೆದುಕೊಂಡನು. ಕೊಲ್ಹಾಪುರದಲ್ಲಿದ್ದ ಲಕ್ಷ್ಮಿಗೆ, ಈಗೆ ಜವ್ದಾಗಿರುವುದೆಂದು ಸೂರ್ಯನ ಕಡೆಯಿಂದ ಸುಳ್ಳೇ ಹೇಳಿ ಕಳುಹಲು, ಅವಳು ಧಾವಿಸಿ ಬರಲು ವಿವಾಹದ ಸಿದ್ಧತೆ ನಡೆದಿತ್ತು. ಲಕ್ಷ್ಮಿಯ ಸಮಕ್ಷಮದಲ್ಲಿ **ಪದ್ಮಾವತಿ-ಶ್ರೀನಿವಾಸರ** ವಿವಾಹವು ಜರುಗಿತು. ಅನಂತರ ಕೆಲಕಾಲದ ಮೇಲೆ **ಆಕಾಶರಾಜನು** ಮರಣ ಹೊಂದಲು, ಆಕಾಶರಾಜನ ತಮ್ಮನಾದ **ತೋಂಡಮಾನನು** ತಾನೇ ಪಟ್ಟಕ್ಕೆ ಬಾಧ್ಯಸ್ಥನೆಂದು ಆಕಾಶರಾಜನ ಮಗನಾದ ವಸುದಾನನ ಕೂಡ ಕದನವನ್ನು ಪ್ರಾರಂಭಿಸಿದನು. ಶ್ರೀನಿವಾಸ-ಪದ್ಮಾವತಿಯರ ಮಧ್ಯಸ್ಥಿಕೆಯಿಂದ ಈ ನ್ಯಾಯವು ಬಗೆಹರಿದು, ಶ್ರೀನಿವಾಸನಿಗೆ ೩೨ ಗ್ರಾಮಗಳು ಪಾರಿತೋಷಿಕವಾಗಿ ದೊರೆತುವು. ಉಳಿದ ರಾಜ್ಯದಲ್ಲಿ ಇಬ್ಬರೂ ಸರಿಪಾಲು ಹಂಚಿಕೊಂಡರು. ಶ್ರೀನಿವಾಸನ ಸೂಚನೆಯ ಮೇರೆಗೆ ತೋಂಡಮಾನನು ವೆಂಕಟಾ ಚಲದಲ್ಲಿ ಮಹೋನ್ನತವಾದ ಮಂದಿರವನ್ನೂ ಮತ್ತು ಆ ಗಿರಿಯನ್ನು ಏರುವುದಕ್ಕಾಗಿ ಪಾವಟಿಗೆಗಳಿಂದ ಯುಕ್ತವಾದ ವಿಸ್ತೀರ್ಣ ಮಾರ್ಗವನ್ನೂ ರಚಿಸಿ, ನಡುನಡುವೆ ಮಂಟಪಗಳನ್ನೂ ಕೂಪ ಗಳನ್ನೂ ಮಾಡಿಸಿದನು.

ಮುಂದೆ ಇತಿಹಾಸಕಾಲದಲ್ಲಿ, ವಿಜಯನಗರದ ರಾಜರು ಚಂದ್ರಗಿರಿಯನ್ನು ತಮ್ಮ ರಾಜಧಾನಿಯನ್ನು ಮಾಡಿಕೊಂಡಮೇಲೆ, ಶ್ರೀನಿವಾಸನನ್ನೇ ತಮ್ಮ ಕುಲದೈವವೆಂದು ಪೂಜಿಸಹತ್ತಿದರು. ಅದಕ್ಕೂ ಮೊದಲು **ಶ್ರೀಕೃಷ್ಣದೇವರಾಯನು** ಈ ಗುಡಿಗೆ ಹೇರಳವಾಗಿ ದಾನಧರ್ಮಾದಿಗಳನ್ನು ಮಾಡಿದ್ದು, ಅವನ ಹಾಗೂ ಅವನ ರಾಣಿಯರಾದ **ತಿರುಮಲಾದೇವಿ** ಹಾಗೂ **ಚಿನ್ನಾದೇವಿ** ಯರ ಕಂಚಿನ ಮೂರ್ತಿಗಳು ಈಗಲೂ ಈ ಗುಡಿಯಲ್ಲಿರುತ್ತವೆ. ಈ ಮೂರೂ ಮೂರ್ತಿಗಳ ಮೇಲೆ ಸ್ಪಷ್ಟವಾದ ಕನ್ನಡ ಹೆಸರುಗಳಿರು ತ್ತವೆ. ಇವರ ಜೊತೆಗೆ **ಶ್ರೀವೆಂಕಟಪತಿರಾಯನ** ಕಲ್ಲಿನ ಮೂರ್ತಿಯಿದೆ. ಅಂತೂ ಈ ಗುಡಿಗೆ ವಿಜಯನಗರದ ರಾಯರು ಬಹಳ ಧನಸಹಾಯ ಮಾಡಿರುವರು. ಗುಡಿಯ ಮಹಾದ್ವಾರದ ಮೇಲಿನ ಗೋಪುರವು ವಿಜಯನಗರದ ಮಾದರಿಯದು.

ಡಾ|| ಫರ್ಗ್ಯುಸನ್ನರ ಮತದಂತೆ, "ಕಲೆಯ ದೃಷ್ಟಿಯಿಂದ ಈ ಗುಡಿಯ ಕಟ್ಟಡವು ಅಷ್ಟೇನು ಮಹತ್ತ್ವದ್ದಿರುವುದಿಲ್ಲ. **ಕಂಚಿ, ಶ್ರೀರಂಗಂ** ಗಳಲ್ಲಿಯ ಗುಡಿಗಳಷ್ಟು ಇದು ವಿಸ್ತಾರವಿಲ್ಲ. **ರಾಮೇಶ್ವರದ** ಗುಡಿಯಲ್ಲಿರುವ ಸುಂದರ ಹಾಗೂ ವಿಸ್ತೀರ್ಣ ವಾದ ಪವಳಿಗಳೂ ಇಲ್ಲಿರುವುದಿಲ್ಲ. **ಮಧುರೆ- ಹಳೇಬೀಡು, ಬೇಲೂರಿನ** ಗುಡಿಗಳಲ್ಲಿಯ ಸೂಕ್ಷ್ಮ ಕೆತ್ತನೆಯ ಕೆಲಸವೂ ಇಲ್ಲಿ ದೊರೆಯಲಾರದು. ಆದರೂ ಮದ್ರಾಸ್ ಇಲಾಖೆಯಲ್ಲಿ ಇದಕ್ಕಿಂತ ಹೆಚ್ಚಿನ ಪವಿತ್ರವಾದ ಹಾಗೂ ಜಾಗೃತವಾದ ದೇವಸ್ಥಾನವು ಬೇರೊಂದಿಲ್ಲ" ಸುಮಾರು ೭೦ ವರ್ಷಗಳ ಹಿಂದೆ ಫರ್ಗ್ಯುಸನ್ನರು ವರ್ಣಿಸಿದ ಈ ಗುಡಿಯ ಮಹತ್ತ್ವವು ಇಂದಿಗೂ ಅಬಾಧಿತವಾಗಿ ಸಾಗಿದೆ. ದಕ್ಷಿಣದ ಕಡೆಯ ಹೆಣ್ಣುಮಕ್ಕಳು ಅತ್ಯಂತ ಶ್ರದ್ಧೆಯಿಂದ ಇಲ್ಲಿ ವೇಣೀದಾನಮಾಡುವುದು, ಸ್ವಾಮಿಯ ದರ್ಶನಕ್ಕೆ ಒಂದೇ ಸವನೆ ಮುಗಿಬೀಳುವ ಭಕ್ತರ ತಂಡವು, ಪೂಜೆ ಅರ್ಚನೆ ಹಾಗೂ ಖಜಾನೆಕ್ಕಾಗಿ ಪ್ರತಿದಿವಸ ಜಮೆಯಾಗುವ ಹಣದ ರಾಶಿ ಇವುಗಳನ್ನೆಲ್ಲ ನೋಡಿದರೆ ಈ ಮಾತಿನ ಸತ್ಯತೆಯು ಒಡೆದು ಕಾಣುವುದು.

ಕುಡುಕರ ★ ★ ಕುರುಕ್ಷೇತ್ರ

ಇಲ್ಲವೆ

ಉನ್ಮತ್ತರ ಉದ್ಯೋಗಪರ್ವ

★

ಜನಮೇಜಯರಾಯನಿಗೆ ವೈಶಂಪಾಯನಋಷಿಗಳು ಹಿಂದೆ ಮಹಾಭಾರತಪುರಾಣವನ್ನು ಹೇಳಿದರು. ಮಹಾಭಾರತದ ತಿರುಳು ಎಂದರೆ ದಾಯಾದಿಗಳ ಹೊಡೆದಾಟ. ಅಂತಹ ಹೊಡೆದಾಟ ದ್ವಾಪರಾಂತ್ಯದಲ್ಲಿ ಒಂದೆ ಒಂದು ನಡೆದಿದ್ದರೆ ನಮ್ಮ ಕಲಿಯುಗ ಮಧ್ಯದಲ್ಲಿ ನೂರಾರು ನಡೆದಿವೆ. ಒಂದೊಂದಕ್ಕೂ ಒಂದೊಂದು ಮಹಾಭಾರತ ಹೊರಡಬಹುದು. ಅಂತಹ ಮಹಾಭಾರತಗಳಲ್ಲಿಯದೇ ಇದೊಂದು ಭಾಗ!

★

ಶ್ರೀ. ಶ್ರೀರಂಗ

ಶ್ರೀಮನ್ನಾರಾಯಣನಿಗೆ ಕೂಡ ಹೆಚ್ಚಿಗೆ ತಡೆಯದಂತಾಗಿ ತಟ್ಟನೆ ಆವತಾರ ಧರಿಸಿ ಧರೆಗಿಳಿದು ಬಂದನು.

ಆಗ ಜನಮೇಜಯನು ಮತ್ತೆ ಕೇಳುವಂಥಾತ್ತನಾಗುತ್ತಾನೆ:—

'ಹೇ ವಿಪ್ರೋತ್ತಮ ವೈಶಂಪಾಯನನೆ, ಮುಂದಣ ಕಥಾವಿಸ್ತಾರವನ್ನಾಲಿಸೋಣ ಎಂಬೀ ಕುತೂಹಲದಿಂದ ಕಳವಳಗೊಂಡಿದೆ ನನ್ನ ಮನಸ್ಸು. ದಾನವರು ಮುಂಬಾಪುರಿಯಲ್ಲಿ ಬಂದುದು ಹೇಗೆ? ಸರ್ವಶಕ್ತಿಯುತನಾದ, ಮಾಯಾವಿಯಾದ ಮಹಾತ್ಮನಾದ ಭಗವಂತನು ಅವರನ್ನು ಮರುಳುಗೊಳಿಸಿದ್ದು ಹೇಗೆ? ಭಗವದ್ಭಕ್ತರ ಈ ವಿಜಯಕಥಾಶ್ರವಣದಿಂದ ನನ್ನ ಕರ್ಣಕಿಲ್ಬಿಷವನ್ನು ಪುನೀತಗೊಳಿಸು, ಪರಮರ್ಷಿಯೆ!'

ದಾವಕಾಲದ ಜನಮೇಜಯನೃಪಾಲಕನ ಕುತೂಹಲವಂ ಕಂಡು ಹರ್ಷಪುಳಕಿತ ಮೈಯವನಾಗಿ, ವಿಕಾಸಕುಣಿತದ ಮೊಗದವನಾಗಿ ಜಿತೇಂದ್ರಿಯನಾಗಿ— ತಾತ್ಪರ್ಯಾರ್ಥ, ಕವಿಮ್ಮ ಗಂಟಲು ಸರಿಪಡಿಸಿಕೊಂಡವನಾಗಿ— ವೈಶಂಪಾಯನ ಮಹಾನುಭಾವನು ಮಾತನಾಡುವಂಥಾತ್ಮನಾಗುತ್ತಾನೆ, ಅದೇನೆಂದರೆ:—

'ಹೇ ಧರಣೀಪಾಲ ಜನಮೇಜಯನೆ, ದಾನವರು ಪ್ರವೇಶ ಮಾಡಿದ ಮುಂಬಾಪುರಿಯನದೇ ವರ್ಣಿಸುವೆ? ಕ್ರೂರಮಾಯಿಗಳೂ, ಪಿಶಾಚಲೋಭಲುಬ್ಧರೂ ಆದ ರಾಕ್ಷಸರು ತಮ್ಮ ಮಾಯೆಯಿಂದ ಪುರವನ್ನೇ ಮುಚ್ಚಿಬಿಟ್ಟರು. ಗಾಯವಿಲ್ಲದೆ ರಕ್ತವನ್ನು ಹೀರಿ ಮಾನವರನ್ನು ಸಾಯಹೊಡೆಯುವ ಕಪಟಯಂತ್ರಗಳಿಂದ, ತಾನು ಬಿದ್ದರೆ ಬೀದಿಗೆ ಬೀದಿಯನ್ನೆ ಕೆಡಹುವಂತೆ ಉನ್ನತವಾದ ಸೌಧಂಗಳಿಂದ, ಕಾಂಚನಮೃಗದಂತೆ ಹೊರಗಿನಿಂದಲೆ ಮೋಹಿಸುವಂತಹ ಮಾದಕವಿಷಯಗಳಿಂದ— ನಗರವೆಂಬುದೊಂದು ನರಕದೊಡೆಯನ ರಾಜಧಾನಿಯಾಯಿತು. ಹೇ ಮಹೀಪಾಲಾ, ದಾನವರ ಮಾಯೆಗೆ— ದೀಪಕ್ಕೆ ಹುಳುಗಳಂತೆ— ಲಕ್ಷಾವಧಿ ಮಾನವರು ಮೋಹಿತರಾಗಿ ಬಂದರು. ನಗರವೆಲ್ಲ ಕಟ್ಟಡಗಳಿಂದಲೆ ತುಂಬಿ ಜನರಿಗೆ ನಿಲ್ಲಲು ಕೂಡ ಸ್ಥಳ ದೊರೆಯದಂತಾಯಿತು. ನೀಲಬಣ್ಣದ ಬೀದಿಗಳಿಂದ ಭೂಮಿ ಆಕಾಶವಾಯಿತು. ದೂಳುಬಣ್ಣದ ಧೂಮಮೇಘರಾಜಿಗಳಿಂದ ಆಕಾಶ ಭೂಮಿಯಾಯಿತು.

ಸುರರ ಈ ಘೋರಮಾಯೆಯಿಂದ ಬಸವಳಿದು, ಬಾಯಾರಿ, ...ದು, ಬೆಂಡಾಗಿ ಮಾನವಕುಲವು ಭೋಯೆಂದು ಮೊರೆಯಿಟ್ಟಿತು.

'ಇತ್ತ ಸ್ವರ್ಗದಲ್ಲಿ ದಿನೇದಿನೇ ದೇವತೆಗಳು ಕ್ಷೀಣರಾಗ-...ತ್ತಿದರು. ಭೋ ರಾಜನ್, ದೇವತೆಗಳಾದರೇನು? ಭೃತ್-...ಯುಸಗಳಿಲ್ಲದಾಗ ಪುಷ್ಟಿಬರುವುದು ಹೇಗೆ? ಭೂಲೋಕದಲ್ಲಿ ...ಕ್ಷಸರ ಉಪಟಳ ಹೆಚ್ಚಾದಂತೆ ಯಜ್ಞಯಾಗಾದಿಗಳು ...ಗ್ಗಿದುವು; ಅದಕಾಗಿ ಆಹಾರವಿಲ್ಲದಂತಾಗಿ ದೇವತೆಗಳ ದೇಹ-...ಸು ಮುಗ್ಗಿದುವು. ಇಷ್ಟೇಕೆ ಶಕ್ತಿಹೀನರಾದ, ಸತ್ತ್ವಹೀನರಾದ ...ವತೆಗಳು ಕೊನೆಗೆ ರಾಕ್ಷಸರ ದಾಸಾನುದಾಸರಾಗಬೇಕಾ-...ತು. ಕೇಳು, ಧರಿತ್ರೀಪಾಲನೆ, ಅಗ್ನಿಯು ಯಜ್ಞಕುಂಡವನ್ನು ...ಟ್ಟು, ದಾನವರ ಯಂತ್ರಕುಂಡಗಳಲ್ಲಿ ಕುದಿಯಬೇಕಾಯಿತು; ...ಣನಿಗೆ ರಾಕ್ಷಸರ ಆಹಾರ-ಯುದ್ಧಸಾಮಗ್ರಿಗಳನ್ನು ಹೊತ್ತು ...ಡು ಹಗಲಿರುಳೂ ಬೆನ್ನುಬಾಗಿಸಬೇಕಾಯಿತು; ವಾಯುವು ...ಕ್ಷಾತ್ತಾಗಿ ದರ್ಪೋದ್ಧತ ದೈತ್ಯರಿಗೆ ಚಮರಿಯನ್ನು ಬೀಸ-...ಕಾಯಿತು. ಮಹೇಂದ್ರನ ಯಾತನೆಯನ್ನಂತೂ ಹೇಳಲಳವಲ್ಲ. ...ಭಾದಿಗಳು ಮುಂಬಾಪುರಿಯಲ್ಲಿ ದಾಸಿಯರಾಗಿ ದಾನವನೆದುರು ...ರ್ತನಮಾಡಬೇಕಾಯಿತು.

'ಹೀಗೆ ಏಕಕಾಲಕ್ಕೆ ಭೂಲೋಕ-ಸ್ವರ್ಗಲೋಕಗಳೆರಡರಲ್ಲೂ ...ಕ್ಷಸರ ಉಪಟಳದಿಂದ ಹಾಹಾಕಾರವೆದ್ದಿರಲು, ಇತ್ತ ಆದಿ-...ನಾರಾಯಣನು ಕ್ಷೀರಸಾಗರದಲ್ಲಿ ಸುಖಶಯ್ಯೆಗೆಯ್ಯುತ್ತಿದ್ದಾನೆ.'

...ನಮೇಜಯನು ಕಳವಳದಿಂದ ಕೈಮುಗಿದು ಕೇಳುತ್ತಾನೆ:—

'ಭೋ ತಾಪಸೋತ್ತಮನೆ, ಮಹಾತ್ಮನಾದ ಮಧುಸೂದನನ ...ಯೆ ಅಗಾಧವಾದದ್ದು! ಇಷ್ಟೊಂದು ಧರ್ಮಹ್ರಾಸಮಾಡಿ-...ಗ ಮಾನವರು ಆ ಭಗವಂತನಿಗೆ ಮೊರೆಇಟ್ಟಿದ್ದರೆ, ಆ ...ಣಾರ್ದ್ರಹೃದಯನು ಕಣ್ದೆರೆಯದೆ ಇರುತ್ತಿರಲಿಲ್ಲ. ಆದು ...ಗಾಯಿತೆಂಬ ಹೃದಯಂಗಮ ಕಥಾಭಾಗವನ್ನು ಕೇಳಲು ...ತ್ಕಂಠನಾಗಿದ್ದೇನೆ, ಭಗವನ್!'

ವೈಶಂಪಾಯನನು ಆಗ ವಿಕಸಿತವದನನಾಗಿ ಮುಂದುವರಿ-...ತ್ತಾನಲ್ಲಾ:—

'ಭೂಪಾಲನೆ, ಅಂದಿನ ಆ ಘೋರಜೀವನದ ಮುಂದಣ ಕಥೆ-...ನ್ನು ಕೇಳು. ಆದಿನಾರಾಯಣನು ತನ್ನ ಮಾಯೆಯಾದ ...ಕ್ಷ್ಮಿಯೊಡನೆ ವಿರಮಿಸುತ್ತಿರುವಾಗ ಅವನಲ್ಲಿ ಹೋಗಿ ಮೊರೆ ...ಡುವ ಸಾಹಸ ಮಾನವರು ಮಾಡಲಸಮರ್ಥರಾದರು. ಆದಾನ ...ರಣವೆಂತೆಂದೆನೆ: ರಾಕ್ಷಸರ ದಾಸರಾದ ಮಾನವರಿಗೆ ಮೈಗೆ ...ಕಷ್ಟಾಗಿ ಸುತ್ತಿಕೊಳ್ಳಲು ಬಟ್ಟೆ ಕೂಡ ಇರಲಿಲ್ಲ. ಈ ...ತಿಯಲ್ಲಿ ಲಕ್ಷ್ಮೀನಾರಾಯಣನನ್ನು ಕಾಣುವುದು ಹೇಗೆ? ...ವಾಗಿ ಭಗವಂತನು ಏಕಾಕಿಯಾಗಿರುವ ಸಮಯವನ್ನು ...ನುಗಿದು ಕಾಯಲೇಬೇಕಾಯಿತು. ದೇವತೆಗಳಾದರೂ ಬಂದು ...ರೆ ಇಡಬೇಕೆಂದರೆ ದೈತ್ಯರ ಮೋಹನಾಸ್ತ್ರದಿಂದ ಅವರು ಕೂಡ ...ಧಿಸಲ್ಪಟ್ಟಿದ್ದಾರೆ.'

ಜನಮೇಜಯನು ಆಶ್ಚರ್ಯಪರವಶೀಭೂತನಾಗಿ, ನಯವಾಗಿ ತಲೆಬಾಗಿ ಕೇಳುತ್ತಾನೆ:—

'ದೇವತೆಗಳನ್ನು ಬಾಧಿಸುವುದೇನು? ಮೋಹನಾಸ್ತ್ರವೇನು? ಭೋ, ಋಷಿಪುಂಗವಾ, ಭಯದಿಂದ ನನ್ನ ದನಿ ನಡುಗುತ್ತಿದೆ, ಆದರೂ ಕೇಳುತ್ತೇನೆ. ಅದಾವ ಮೋಹನಾಸ್ತ್ರ? ಅದನ್ನು ರಾಕ್ಷಸರು ಸಂಪಾದಿಸಿದ್ದು ಹೇಗೆ? ಅಂತಹ ಶಕ್ತಿಯನ್ನು ಭಗವಂತನು ಸಣ್ಣಾಗಿಸಿ ಸೋಲಿಸಿದ ರೋಮಹರ್ಷಕ ಕತೆಯನ್ನು ಕೇಳಲು ಆತುರನಾಗಿದ್ದೇನೆ, ಆತ್ಮಜ್ಞಾನಿಯೆ.

ಈ ವಚನವನ್ನಾಲಿಸಿದ ಮಾತ್ರಕ್ಕೆ ವೈಶಂಪಾಯನನು ಕ್ಷಣಮಾತ್ರ ಭಕ್ತಿಪರವಶನಾಗಿ ಕಣ್ಮುಚ್ಚಿ, ಕೈಮುಗಿದು ಕುಳಿತನು. ಮುಂದೆ ಕ್ರಮೇಣ ಕಣ್ದೆರೆದು, ಕೈ ಸರಿದು ಭಾವಾವೇಶಯುಕ್ತ ಗಂಭೀರ-ಸ್ವರದಲ್ಲಿ ಉಪಾಚಿಸುವಂಥಾತ್ತನಾದನು:—

'ಹೇ, ಜನಮೇಜಯಾ, ಈ ಕತೆಯನ್ನು ಕೇಳಿದವರು ಧನ್ಯರು, ಕಣ್ಣಾರೆ ಕಂಡವರು ಭಕ್ತಶ್ರೇಷ್ಠರೆ ಸರಿ. ಭಗವಂತನು ಮೋಹಿನಿಯ ವೇಷದಿಂದ ತಮ್ಮನ್ನು ವಂಚಿಸಿ ಅಮೃತದಾನ ತಪ್ಪಿಸಿದ್ದಕ್ಕಾಗಿ ದೈತ್ಯರ ದ್ವೇಷವು ಎಂದಿನಿಂದಲೂ ಕುದಿಯುತ್ತಿದ್ದಿತು. ಆ ದ್ವೇಷಸಾಧನೆಗಾಗಿ ಕೊನೆಗೆ ಈ ಮಾಯಾವಿಗಳು ಮಾಯಾ-ಅಮೃತವನ್ನು ಹುಟ್ಟಿಸಿದರು, ಮದಿರೆ ಎಂದು ಅದಕ್ಕೆ ಹೆಸರಿಟ್ಟರು. ಅದೇ ಆ ಮೋಹನಾಸ್ತ್ರ. ನೃಪೋತ್ತಮಾ, ಕೇಳುವಂತಹನಾಗು, ಈ ಮದಿರೆಗೆ ಸಾಕ್ಷಾತ್ತಾಗಿ ಬಲರಾಮನೆ ಮೋಹಿಸಿದನು, ಈ ಮದಿರೆಯಿಂದ ಮದೋನ್ಮತ್ತರಾಗಿಯೆ ವೇದಋಷಿಗಳು 'ಋಕ್ಕು'ಗಳನ್ನು ಕಂಡರು; ಇನ್ನು ಚಿಕ್ಕವರ ಪಾಡೇನು, ಮುಂಬಾಪುರಿಯಲ್ಲಿ ಸಿಕ್ಕವರ ಪಾಡೇನು?

'ಹೀಗೆ ಪ್ರಪಂಚವೆಲ್ಲ ಮೋಹಪರವಶವಾದ ಒಂದು ಕಾಲದಲ್ಲಿ ಲಕ್ಷ್ಮೀಸ್ವರೂಪಳಾದ ಮಾಯಾದೇವಿಗೆ ನಿದ್ರಾಭಂಗವಾಯಿತು. ಲೋಕಮಾತೆ ಕಣ್ದೆರೆದು ನೋಡಿದಳು, ಎಲ್ಲಿಯೊ ಆರ್ತಸ್ವರ ಕೇಳಿಬಂದಂತಾಯಿತು. ಆದರೆ ಆಶ್ಚರ್ಯ! ಕಣ್ಣಿಗಲ್ಲದೆ ಬಾಯಿಗೆ ನೀರು ಬಿಟ್ಟಿತು ಮಾಯೆಗೆ. ತನ್ನ ಆವಾಸವಾದ ಕಮಲದ ವಾಸನೆಗಿಂತಲೂ ಹೆಚ್ಚಾಗಿ ಮೋಹಕವಾದ ಒಂದು ವಾಸನೆಯಿಂದ ಮೂಗು ಅರಳಿತು, ಕುತೂಹಲ ಕೆರಳಿತು, ಕೂಡಲೆ ಮಾಯೆಯೆ ತೆರಳಿತು ಅಲ್ಲಿಂದ. ವಕ್ಷಃಸ್ಥಲದಲ್ಲಿ ನೆಲಸಿರ್ದ ಲಕ್ಷ್ಮಿಯು ಹೀಗೆ ಸದ್ದಿಲ್ಲದೆ ಹೋದೊಡನೆ, ನಾರಾಯಣನ ನಿದ್ದೆಯು ಹಗುರಾಯಿತು; ಕಣ್ದೆರೆದು ನೋಡಿದರೆ ಕ್ಷೀರಸಾಗರಕನ್ಯೆ ಮಾಯವಾಗಿದ್ದಾಳೆ! ತಟ್ಟನೆ ಭಗವಂತನು ಕಣ್ಮುಚ್ಚಿ ಯೋಗದಿಂದ ಎಲ್ಲವನ್ನೂ ಕಂಡನು!

'ಹೇ ನೃಪಾಲಾ, ಭಗವಂತನ ಆ ಯೋಗದೃಶ್ಯವನ್ನು ಕೇಳಿದರೆ ಮೈಗೆ ಮುಳ್ಳುಬರುವುದು, ಕಿವಿಗೆ ಸುಳ್ಳು ಎನಿಸುವುದು. ಲಕ್ಷ್ಮಿ ಭೂಲೋಕದಲ್ಲಿದ್ದಾಳೆ! ಬಾಡಿ ಬಡಕಾಗಿದ್ದಾಳೆ, ಆದರೂ ಮದದಿಂದ ಸಿಡುಕಾಗಿದ್ದಾಳೆ! ಮಾನವರನ್ನು ಮರೆತು ದಾನವರಲ್ಲಿ ಬೆರೆತಿದ್ದಾಳೆ!

ಪೇಟೆಂಟ್ ಮತ್ತು ಟ್ರೇಡಮಾರ್ಕ್ ರೆಜಿಸ್ಟ್ರೇಶನ್ನಿನ ಬಗ್ಗೆ
ಸಿ. ಜಿ. ಅನುಂದ್ ಆ್ಯಂಡ್ ಕಂಪನಿ
೭ ಜತೀನ್‌ದಾಸ ರೋಡ್, ಕಲಕತ್ತಾ
ಇವರಿಗೆ ಬರೆಯಿರಿ.
ವೆಚ್ಚ ಕಡಿಮೆ! ಹೆಚ್ಚಿನ ಸಂರಕ್ಷಣೆ!

'ಹೆಚ್ಚಿಗೆ ಹೇಳುವುದೇನು? ಶ್ರೀಮನ್ನಾರಾಯಣನಿಗೆ ಕೂಡ ಹೆಚ್ಚಿಗೆ ತಡೆಯದಂತಾಗಿ ತಟ್ಟನೆ ಅವತಾರ ಧರಿಸಿ ಧರೆಗಿಳಿದು ಬಂದನು. ಬಡಕಾದ ಕಟ್ಟು, ಬರಿಯದಾದ ಮೈ, ಬಿದ್ದ ಹಲ್ಲು, ಬೀಳಬಾರದೆನುವಂತೆ ಕೈಯಲ್ಲಿ ಹಿಡಿದ ಕೋಲು; ಈ ವೇಷದ ಪರಮಾತ್ಮನನ್ನು ದಾನವರು ಗುರುತಿಸಬಹುದೆ? ಇಷ್ಟೇಕೆ? ಮಹಿಪನೆ, ಸಾಕ್ಷಾಲ್ಲಕ್ಷ್ಮಿಗೆ ಸೂಚಿತವಾಗದೆ ಹೋಯಿತು—ಎಷ್ಟೋ ಕಾಲದ ವರೆಗೆ.

'ಇಂತು ಅವತಾರವನ್ನು ತಾಳಿದ ಭಗವಂತನು ರಾಕ್ಷಸರ ಮಾಯೆಯನ್ನರಿತು, ಮೋಹನಾಸ್ತ್ರವನ್ನು ಮುರಿಯುವ ಸನ್ನದ್ಧತೆಯನ್ನು ಶೀಘ್ರದಲ್ಲಿಯೆ ಸಜ್ಜುಗೊಳಿಸಲನುವಾದನು. ಇತ್ತ ರಾಕ್ಷಸರೂ ಸನ್ನದ್ಧರಾದರು.

'ಹೇ ಜನಮೇಜಯಾ, ಆ ಎರಡು ಸೈನ್ಯಗಳು ಒಂದನ್ನೊಂದು ಎದುರಿಸಿ ನಿಂತ ದೃಶ್ಯವನ್ನು ಯಾರು ಬಣ್ಣಿಸಬಲ್ಲರು? ದೇವತೆಗಳೆಲ್ಲರೂ ಭೂಮಿಯಲ್ಲಿಯೆ ಸಿಕ್ಕುಬಿದ್ದಿದ್ದಿಲ್ಲವಾದರೆ ನಿಶ್ಚಯವಾಗಿ ಆಗ ಆಕಾಶದಿಂದ ಪುಷ್ಪವೃಷ್ಟಿಯಾಗಬಹುದಾಗಿತ್ತು. ಆದರೇನು! ದೇವತೆಗಳೆಲ್ಲರೂ ಆ ಮಧ್ಯರಾತ್ರಿಯ ಸಮಯಕ್ಕೆ ಮದಿರಾಮೋಹನಾಸ್ತ್ರದಿಂದ ಬಂಧಿತರಾಗಿ ನಿಶ್ಚೇಷ್ಟರಾಗಿದ್ದಾರೆ. ಮಾನವರಾತೂ ಮಣ್ಣುಪಾಲಾಗಿದ್ದಾರೆ. ಹೀಗಾಗಿ ಭಗವಂತನ ನೇತೃತ್ವದಲ್ಲಿ ಬರಿಯೆ ಹುಡುಗರ ಮತ್ತು ಹೆಂಗುಸರ ಅಕ್ಷೋಹಿಣೀ ಸೈನ್ಯವಿದೆ. ಇತ್ತ ರಾಕ್ಷಸರು ರಥಾದಿವಾಹನಗಳಿಂದ ಸಕಲ ಶಸ್ತ್ರಾಸ್ತ್ರಗಳಿಂದ ಸಮೇತರಾಗಿದ್ದಾರೆ. ಎರಡೂ ಸೈನ್ಯಗಳಲ್ಲಿ ಜಯಜಯಕಾರ; ಅಥವಾ ಭಗವಂತನ ಸೈನ್ಯದಲ್ಲಿ ಹುಡುಗರ ಚೀತ್ಕಾರ, ಹೆಂಗುಸರ ಹಾಹಾಕಾರ; ದಾನವಪಕ್ಷದಲ್ಲಿ ವೀರರ ಹೂಂಕಾರ.

ತುಮುಲಯುದ್ಧದ ಮಹತಿಯನ್ನೂ ಮೋಜನ್ನೂ ಕೇಳ, ಮಂಧಾತ್ಮನಾಗು, ಹೇ ಪೃಥ್ವೀಶಾ, ಅಥವಾ ಹೆಂಗುಸರು ಹುಡುಗರೂ ಇರುವಾಗ ಯುದ್ಧಮಾಡುವುದು ಅದೆಂತಹ ಕ್ಷಾತ್ರಧರ್ಮ? ಅದಕಾಗಿ ಭಗವಂತನು ತಟ್ಟನೆ ತನ್ನ ಲೀಲೆಯಿಂದ ಜಯಘೋಷವನ್ನು ಗದ್ದರಿಸಿದನು. ಇತ್ತ ರಾಕ್ಷಸರು ಯುದ್ಧ ಮಾಡಬೇಕೆನ್ನುತ್ತಾರೆ, ಇತ್ತ ಭಗವಂತನು ಜಯಘೋಷವನ್ನು ಗದ್ದರಿಸುತ್ತಾನೆ. ಕೇಳು ಧಾತ್ರೀಪರಿತ್ರಾಣಾ, ಭಗವಂತನ ಬಾಯಿಗದ್ದರಿಕೆಯ ಮುಂದೆ ರಾಕ್ಷಸರ ಯುದ್ಧ-ಸಿದ್ಧತೆಗಳು ತಡೆಯುವುವೆ? ಆ ಜಯಘೋಷದ ನಿನಾದವು ವಿಶ್ವಮಂಡಲವನ್ನು ವ್ಯಾಪಿಸಿತು. ಕೊನೆಗೆ ಭಗವಂತನಿಗೆ ಜಯವಾಯಿತು, ಭಕ್ತರಿಗೆ ಅಪಾಯ ತಪ್ಪಿತು, ದೈತ್ಯರಿಗೆ ನಿರುಪಾಯವೆನಿಸಿತು.

'ಭೋ ಭೂಮಿಪಾಲಾ, ಈ ಅದ್ಭುತ ಕಥೆಯನ್ನಾಲಿಸಿದ ಬ್ರಾಹ್ಮಣನು ಬೇಕಾದ್ದನ್ನು ನಂಬುವ ಶಕ್ತಿಯುತನಾಗುವನು, ಕ್ಷತ್ರಿಯನು ಕ್ಷತವಿಲ್ಲದೆ ರಾಯನಾಗುವನು, ವೈಶ್ಯನು ವ್ಯವಹಾರ ಬಿಟ್ಟೋಡುವನು, ಶೂದ್ರನು ಸ್ವರ್ಗವನ್ನು ಸೇರುವನು.'

ಶಾಂತಿಭ್ರಾಂತಿರ್ವಾಂತಿಃ

ಎಲ್ಲಕ್ಕಿಂತ ಅಗ್ಗ! ಎಲ್ಲಕ್ಕಿಂತ ಉತ್ತಮ!
ಮಿಕ್ಕ ಬ್ಲೇಡುಗಳಿಗಿಂತ ಅಚ್ಚುಕಟ್ಟಾದ ಹೆಚ್ಚಿನ ಕೆಲಸ!



೪ ಆಣೆಗೆ ೧೦ ಬ್ಲೇಡು!

(೩೮೯ ನೆಯ ಪುಟದಿಂದ ಮುಂದುವರಿದುದು.)
ಅದರ ಸಾಧನೆಗಾಗಿ' ಆದರ್ಶ ಪ್ರಣಯ.. ನಾವು ಮಾನವರು ನಮಗೆ ವಿಚಾರಶಕ್ತಿಯಿದೆ. ದಾಂಪತ್ಯಜೀವನವಿದೆ. ನಾವು ಕತ್ತೆಗಳಲ್ಲ...... ಹೆಂಡತಿಯು ಕೇವಲ ಮನೆಯ ದಾಸಿಯಲ್ಲ..ಮನದ ರಾಣಿ.. ಅವಳನ್ನು ಕರೆದುಕೊಂಡು ದೂರ ಹೋಗಬೇಕು. ಅವಳಿಗೆ ಸೃಷ್ಟಿಸೌಂದರ್ಯದ ಪರಿಚಯ ಮಾಡಿಕೊಡಬೇಕು. ಕೇವಲ ಭೋಗ್ಯವಸ್ತುವಿನ ಹಾಗೆ ಹೆಂಡತಿಯನ್ನು ನಡೆಯಿಸಿಕೊಳ್ಳುವ ಗಂಡನು ನಾನಾಗಲಾರೆ.... 'ರಾಮೂ' ಎಂಬ ಕೂಗನ್ನು ಕೇಳಿ ಬೆಚ್ಚಿ ಬಿದ್ದ ಕ್ರಾಂತಿ ಪುರುಷ. "ಏನಪ್ಪಾ ರಾತ್ರಿ ಹತ್ತು ಗಂಟೆಯಾದರೂ ಮನೆಗೆ ಬರಬಾರದೆ? ಬರುಬರುತ್ತ ಬಹಳ ಬುದ್ಧಿವಂತನಾಗ ಹತ್ತಿರುವಿ ಬಿಡು" ಮುಕುಂದರಾಯರ ದನಿ. ರಾಮೂನಿಗೆ ಮನೆಗೆ ಹೋಗಬಾರದೆಂದೆನ್ನಿಸಿತು. ಆದರೆ ಹೋಗುವುದಾದರೂ ಎಲ್ಲಿಗೆ? ಮೇಲಾಗಿ ಮುಕುಂದರಾಯರು ಹತ್ತಿರದಲ್ಲಿ. ರಾಮೂ ಏಳದಿರುವುದನ್ನು ಕಂಡು ಮುಕುಂದರಾಯರು ಗಡುಸಾದ ದನಿಯಲ್ಲಿ 'ಮನೆಗೆ ಬರುವುದಿಲ್ಲವೇನೋ?' ಎಂದರು. ರಾಮೂ ಏನೋ ಹೇಳಬೇಕೆನ್ನುವಾಗಲೇ ಮುಕುಂದರಾಯರು ಮುಂದೆ ಹೊರಟಿದ್ದರು. ರಾಮೂ ಅವರನ್ನು ಹಿಂಬಾಲಿಸಿದ. ಮನೆಯ ಹಾದಿ ಹಾಗೇ ಹಿಡಿದ. ದಾರಿಯಲ್ಲಿ ಆ ಮನಸು ಮಾಡಿದ ವಿಚಾರಗಳೆಷ್ಟು? ಕಲ್ಪಿಸಿದ ಸನ್ನಿವೇಶಗಳೆಷ್ಟು? ಎಷ್ಟಾದರೂ ರಾಮೂ ಕ್ರಾಂತಿಪುರುಷ ತಾನೆ???

★

ತಮ್ಮ ಮಕ್ಕಳು ಸ್ವತಂತ್ರವಿಚಾರದ— ಪ್ರಭಾವಶಾಲಿಗಳಾದ— ನಾಗರಿಕರಾಗಬೇಕೆಂಬ ಹಂಬಲಿರಬೇಕು ತಾಯ್ತಂದೆಗಳಿಗೆ. ಅದಕ್ಕನುಗುಣವಾಗಿ ಹಿರಿಯರು ಒಂದು ದೊಡ್ಡ ಸ್ವಾರ್ಥತ್ಯಾಗವನ್ನು ಮಾಡಬೇಕಾಗುವುದು. ಆ ಸ್ವಾರ್ಥತ್ಯಾಗವೆಂದರೆ ತಮ್ಮ ಮೂಢಭಾವನೆ, ಅಂಧಶ್ರದ್ಧೆ, ನೀತಿಯಕಲ್ಪನೆ ಮೊದಲಾದುವುಗಳ ಹೊರೆಯನ್ನು ತಮ್ಮ ಸಂತಾನದ ಮೇಲೆ ಒತ್ತಾಯದಿಂದ ಹೇರಲಾಗದು.

★

ಶ್ರೀಮಾನ್ ಜೋಗಳೇಕರ ಪಾಂಡುರಂಗರಾಯರು,
ಬಿ. ಎ., ಎಸ್. ಟಿ. ಸಿ.

ಹಿಂದಿನಾ ಚಂದದಿಂ। ದಂಥನಾದವ ಮುಂದ।
ಹಿಂದಿನಂದವನುಂಡು ಮಿಗಿಲಾದ ವಮುಂದು।
ಹಿಂದಿನಿಂ ಚೆಂದ ಸರ್ವಜ್ಞ ॥

ಎಲ್ಲರಂತೆ ನಾನೂ ಮೊದಲು ಮೂಢ ಭಾವಿಕನೇ ಇದ್ದೆ. ನಮ್ಮ ಕೌಟುಂಬಿಕ ಹಾಗು ಸಾಮಾಜಿಕ ವಾತಾವರಣವೇ ಆ ರೀತಿಯಾಗಿದೆ. ವಿ ಚಾ ರ, ಉ ಚ್ಚಾ ರ, ಆಚಾರ ಇವುಗಳಲ್ಲಿ ಕಿರಿಯರಿಗೆ ಮೊದಲಿನಿಂದಲೂ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಡುವ ಪ್ರಾಜ್ಞರಾದ ಹಿರಿಯರು ಎಷ್ಟು ಜನ? ಕಿರಿಯರೆಂದರೆ ತಮ್ಮ ಕೈಯಲ್ಲಿ ಸಿಕ್ಕ ಅ ಸ ಹಾ ಯ ರಾ ದ ಸೆರೆಯಾಳುಗಳೆಂದೇ ತಿಳಿಯುವವರು ಹಿರಿಯರು ಜಗತ್ತಿನಲ್ಲೆಲ್ಲ! ಕಿರಿಯರ ಜನ್ಮಕ್ಕೆ ತಾವು ನಿಮಿತ್ತಕಾರಣರಾಗಿರುವುದೊಂದು, ಅಶ್ವಮೇಧಮಾಡಿ ಸಿಕ್ಕಂಥ ದೊಡ್ಡ ಅಧಿಕಾರವೇ ತಮಗೆ ಪ್ರಾಪ್ತವಾಗಿರುವುದೆಂದು ಭಾ ವಿ ಸು ವು ದಿಲ್ಲವೇ ನಮ್ಮ ಹಿರಿಯರು? ತಾಯ್ತಂದೆಗಳು ಮತ್ತು ಉಳಿದ ಕಕ್ಕ, ಮಾವ, ಅಜ್ಜಿ ಮೊದಲಾದ ಹಿರಿಯ ಸಂಬಂಧಿಕರು ಅಜ್ಞಾನದ ಮೂಲಕ ಅಹಂಕಾರಕ್ಕೀಡಾಗಿ ತಮ್ಮ ಆಚಾರ-ವಿಚಾರಗಳೇ ಜಗತ್ತಿನಲ್ಲಿ ಶ್ರೇಷ್ಠವಾದುವುಗಳೆಂದು ತಿಳಿದು, ಅವುಗಳನ್ನು ನಿಃ ಶಂ ಕ ಮ ನ ದಿಂ ದ ತಮ್ಮ ಕೈಯ್ಯಲ್ಲಿ ಸಿಕ್ಕ ಕಿರಿಯರ ಮೇಲೆ ಹೇರುವುದು ತಮ್ಮದೊಂದು ಪವಿತ್ರ ಕರ್ತವ್ಯವೆಂದು ನಂಬುವರಲ್ಲವೇ? ಮೂಢ ಭಾವಿಕತನದ ಅರ್ಥಾತ್ ಕು ರು ಡು ನಂಬುಗೆಯ ಉಗಮವು ಇದೆ. ಇ ಡಿ ಯ ಪ್ರಪಂಚದಲ್ಲಿಯ ಸಂಕುಚಿತ ಹಾಗು ಹಿಂಸಾತ್ಮಕ ಸ್ವಾಭಿಮಾನದಿಂದ, ವಿನಾಕಾರಣ ಜಾತಿ, ಧರ್ಮ, ನಾಡು, ನುಡಿ ಮೊ ದ ಲಾ ದ ವಿಷಯಗಳಲ್ಲಿ ಮತ್ಸರವನ್ನುಂಟುಮಾಡಿ, ಒಂದೇ ಒಂದು ಕುಟುಂಬವೆಂದು ಬಾಳಬಹುದಾದ ಮಾನವರನ್ನೆಲ್ಲ ಕಂಡರಾಗದ, ಹಗೆಗಳಂತೆ ಹರಿದು-ಹಂಚುವ, ದಾನವೀಯ ಸಂ ಪ್ರ ದಾ ಯ ದ ಆರಂಭವಾದದ್ದೂ ಇಲ್ಲಿಯೇ!

ನಮ್ಮ ಭಾರತದಲ್ಲಿ ಜಾತೀಯ ಭಾವನೆಯನ್ನು ತೊರೆಯಿರೆಂದು ಬಿಟ್ಟೂಬಿಡದಂತೆ ಕೂಗುತ್ತಿರುವರು.., ನಮ್ಮ ರಾಷ್ಟ್ರೀಯ ಭಾವನೆಯುಳ್ಳ ಮುಂದಾಳುಗಳು; ಆದರೆ, ಅವರ ಈ ಕೂಗಾಟಕ್ಕೆ 'ಕಿಕ್ಕಿರಿದು ನೆರೆದ' ಸಾರ್ವಜನಿಕ ಸಭೆಗಳಲ್ಲಿ 'ಅಮೋಘವಾಣಿ'ಯಿಂದ ಮಾಡಲಾಗುವ, 'ಉ ಜ್ವ ಲ' ಭಾಷಣಗಳಿಗೆ ಕಿವಿಗಡಿದು ಹಾ ಕು ವಂ ಥ ಚಪ್ಪಾಳೆಗಳು ಬೀಳುವುವೇನೋ ನಿಜ! ಆದರೆ, ನುಡಿಜಾಣ್ಮೆಯ ಮ ದ್ಯ ವ ನ್ನು ಕುಡಿದು, ಮೈ ಮ ರೆ ತು, ಚಪ್ಪಾಳೆ ಬಾರಿಸುವ ಮೂ ಢ ರಾ ದ ಕೇಳುಗರ (ಇವರಲ್ಲಿ ಇಮ್ಮಡಿ, ಮುಮ್ಮಡಿ, ಅದೇಕೆ-ನಾಲ್ಮಡಿ ಪದವೀಧರರೂ ಇರುವರು!) ಹೃದಯದಲ್ಲಿ ಏ ನಾ ದ ರೂ ಬದಲಾವಣೆಯಾಗುತ್ತದೆಯೇ? ಎ ಳ್ಳ ಷ್ಟೂ ಇಲ್ಲ! ಅದೇಕೆ, 'ದೇ. ಭ.', 'ಸ ರ ದಾ ರ' ಮುಂತಾದ ಮೋಹಕ ಬಿರುದಾವಳಿಗಳನ್ನು ಹೊತ್ತ ನಮ್ಮ ಮುಂದಾಳುಗಳ ಹೃದಯದಲ್ಲಿಯಾದರೂ, ಅವರ ನಾಲಗೆಯ ಮೇಲೆ ಕುಣಿದಾಡುವ ವಿಶಾಲ ಭಾವನಾತರಂಗಗಳು ನೆಲಸಿರುವವೋ? ಸಂದೇಹವಿದೆ! ಜಾತೀಯಭಾವನೆ, ಪ್ರಾಂತೀಯ ಭಾವನೆ ಮೊದಲಾದುವುಗಳು ನಮ್ಮೆಲ್ಲರ ಹೃದಯಗಳಲ್ಲಿ ಅಭೇದ್ಯವಾದ ಕೋಟೆಗಳನ್ನು

ಕಟ್ಟಿಕೊಂಡಿವೆ. ಹೀಗಾಗುವುದರ ಮೂಲ ಕಾರಣವೇನು? ಗೃಹಶಿಕ್ಷಣದ ಹೊರತು ಬೇರೊಂದಿಲ್ಲ. ಬಾಲ್ಯದಲ್ಲಿ ಒದಗುವ ದುಷ್ಟ ಸಂಸ್ಕಾರಗಳು, ವಿದ್ಯಾಲಯದಲ್ಲಿ ದೊರಕುವ ಸುಷ್ಟು ಸಂಸ್ಕಾರಗಳನ್ನು ಹಾಳುಮಾಡಿ ಬಿಡುವುವು; ಅಂತೆಯೇ, ಮೂರ್ಖ ಪಂಡಿತರ ಹಾಗು ಇಮ್ಮಡಿ, ಮುಮ್ಮಡಿ 'ಅಶಿಕ್ಷಿತ' ಪದವೀಧರರ ಗುಂಪುಗಳು ಎಲ್ಲೆಡೆಗೂ ಕಾಣುವುವು. ಅಸಂಖ್ಯ ಕುರುಡು ನಂಬುಗೆಗಳಲ್ಲಿ, ಈ ಬ್ರಹ್ಮಾಂಡಕ್ಕೆ, ಈ ಅನಂತ ವಿಶ್ವಕ್ಕೆ ನಾಯಕನಾದ ಒಬ್ಬ 'ಬುದ್ಧಿಗೇಡಿ ಭಗವಂತ'ನೂ ಇದ್ದೇ ಇರುವನು ಎಂಬುದೂ ಒಂದು!

ನಾನು ಬಿ. ಎ., ಕ್ಲಾಸಿನಲ್ಲಿದ್ದಾಗ ವೇದಾಂತವನ್ನು ಐಚ್ಛಿಕವಿಷಯವನ್ನಾಗಿ ತಕ್ಕೊಂಡಂದಿನಿಂದ ನನ್ನ ವಿಚಾರದಲ್ಲಿ ಕ್ರಾಂತಿಯುಂಟಾಯಿತು. ಅದುವರೆಗೆ ನಾನು ದೇವರಲ್ಲಿ, ಮನೆತನದ ಸಂಪ್ರದಾಯಗಳಲ್ಲಿ, ಸ್ವಜಾತೀಯ ಸಂಸ್ಕೃತಿಯಲ್ಲಿ ತುಂಬ ನಿಷ್ಠೆಯುಳ್ಳವನು; ಆದರೆ, ವೇದಾಂತವು ಎಲ್ಲ ಶಾಸ್ತ್ರಗಳ ಶಾಸ್ತ್ರವೆಂದೆನಿಸಿಕೊಳ್ಳುತ್ತದೆ; ನಿಜವಾದ ವೇದಾಂತ-ವಿದ್ಯಾರ್ಥಿಯು ಪೂರ್ವಗ್ರಹ ದೂಷಿತ ಭಾವನೆಗಳನ್ನಾಗಲಿ, ಹಾಗೆಯೇ ಗ್ರಹಿಸಿಕೊಂಡ ಸಿದ್ಧಾಂತಗಳನ್ನಾಗಲಿ ಲಾಲಿಸನು! 'ದೇವರು ಇರುವನೇ?' ಎಂಬ ಪ್ರಶ್ನೆ, ದೇವರು ಇರುವನೆಂಬ ನನ್ನ ದೃಢಭಾವನೆಯ ಕೋಟೆಯನ್ನು ಮುತ್ತಿ, ಅದರ ಮೇಲೆ ತಾರ್ಕಿಕ ಸಿಡಿಗುಂಡಿನ ಮಳೆಯನ್ನು ಸುರಿಸಿ, ನನ್ನ ನಚ್ಚಿನ, ಮೆಚ್ಚಿನ ಭದ್ರ ಕೋಟೆಯನ್ನು ಶೀಘ್ರದಲ್ಲಿಯೇ ನೆಲಸಮ ಮಾಡಿಬಿಟ್ಟಿತು. ನನ್ನ ಮೂಢ ಭಾವನೆಯ ನಾಶವನ್ನು ಕಂಡು ನಾನು ಬಹಳ ಕಳವಳಗೊಂಡೆ! ಅದನ್ನು ಮತ್ತೆ ಅಭೇದ್ಯವಾಗಿ ಕಟ್ಟಲು ಹೆಣಗಿದೆ; ಆದರೆ, ಬುದ್ಧಿಯ ವಿಘಾತುಕ ಚಟುವಟಿಕೆಯ ಮುಂದೆ ನನ್ನ ಭಾವನೆಯ ವಿಧಾಯಕ ಕಾರ್ಯವು ತಳವೂರಿ ನಿಲ್ಲಲು ಅಕ್ಷಮವಾಯಿತು. ಹೋಯಿತು ನನ್ನ ಮೂಢ ಭಾವನೆ! ಒಡೆದ ನನ್ನ ದೇವರು!! 'ಜಗತ್ತಿಗೆ ಒಬ್ಬನೆ ಒಬ್ಬ ಒಡೆಯನಿಲ್ಲವೇ ಇಲ್ಲ' ಎಂಬುದಾಗಿ ಮನಗಂಡೆ ನಾನು! ಅಂತಹ ಈಶನೊಬ್ಬನು ಇದ್ದುದೇ ಆದರೆ ಅವನು ಅಪೂರ್ಣ; ಅಂತೆಯೇ, ಬುದ್ಧಿಗೇಡಿ ಭಗವಂತನೇ ಇರಬೇಕೆಂದೂ ನನ್ನ ಮನವರಿಕೆಯಾಯಿತು.

ಜಗತ್ತಿನೊಳಗಿನ ಸಾಂಪ್ರದಾಯಿಕ ವೇದಾಂತಿಗಳ ರೀತಿಯೆಲ್ಲ ಒಂದೆ. ಪ್ರಖ್ಯಾತ ಫ್ರೆಂಚ್ ವೇದಾಂತಿಯಾದ ವ್ಹಾಲ್ಟೇರನು ಇದರ ವಿಚಾರದಲ್ಲಿ ಹೀಗೆ ಹೇಳಿದ್ದಾನೆ: "When he to whom something is said does not understand; and when he who says something does not understand himself you have metaphysics" ಎಂದರೆ ಕೇಳುವಗೆ ತಾನು ಏನು ಕೇಳುತ್ತಿರುವೆನೆಂಬುದು ಎಷ್ಟೂ ತಿಳಿಯಬಾರದು; ತಾನು ಏನು ಹೇಳುತ್ತಿರುವೆನೆಂಬುದು ಹೇಳುವವನಿಗೂ ತಿಳಿಯಬಾರದು; ಇದಕ್ಕೆ ವೇದಾಂತವೆನ್ನುವರು; ಅರ್ಥಾತ್ ಕುರುಡು ನಂಬುಗೆಯ ಸಾಂಪ್ರದಾಯಿಕ ವೇದಾಂತವಿದು! ನಾನು ಮೊದಲು ದೇವರು ಇರುವನೆಂದು ನಂಬಿದುದು ಯಾವ ಕಾರಣಕ್ಕಾಗಿ? ಏನಾ ಕಾರಣ! ಚಿಕ್ಕಂದಿನಲ್ಲಿಯೇ ದೇವರಿಗೆ ಕೈಮುಗಿಯುವುದೂ, ಅವನ ತೀರ್ಥಪ್ರಸಾದಗಳನ್ನು ತಕ್ಕೊಳ್ಳುವುದೂ, ಗಾಣಿಗನ ಎತ್ತು ಸುತ್ತುವರಿಯುವಂತೆ ದೇವರ ಗರ್ಭಗುಡಿಯನ್ನು ಸುತ್ತುವರಿಯುವುದೂ, ಪರೀಕ್ಷೆ ಪಾಸಾಗುವದಕ್ಕಾಗಿ ಅಸತ್ಯ ಸತ್ಯನಾರಾಯಣನನ್ನು ಬೇಡಿಕೊಳ್ಳುವುದೂ, ಇವೇ ಮೊದಲಾದ ದುಶ್ಚಟಗಳಿಗೆ ಈಡುಮಾಡಿದರು. . ಪಾಪ—ನನ್ನನ್ನು ನನ್ನ 'ಪೂಜ್ಯ' ಗುರುಹಿರಿಯರು! ಇಂತಹ ಹೊಲಸು ವಾತಾವರಣದಲ್ಲಿ ನಾನು ಹುಟ್ಟಿ ಬೆಳೆದವನೆಂದ ಮೇಲೆ ದೇವರ ಅಸ್ತಿತ್ವದ ಬಗ್ಗೆ ನನ್ನ ಮನಸ್ಸಿನಲ್ಲಿ ಸಂದೇಹವಾದರೂ ಹುಟ್ಟುವುದೆಂತು? ನನಗೆನಿಸಿತು, ನನ್ನ ಹಿರಿಯರ ಮೂಲಕ ಮನೆತನವು ಹೇಗೆ ಸುವ್ಯವಸ್ಥಿತವಾಗಿ ಅರ್ಥಾತ್ ಅವ್ಯವಸ್ಥಿತವಾಗಿ ನಡೆಯುವುದೋ; ಅಥವಾ ನಮ್ಮ ದೇಶದ ಆಡಳಿತವು ನಮ್ಮ 'ದಯಾಳು' ಕೇಂದ್ರ ಸರಕಾರದ ಮೂಲಕ ಹೇಗೆ ಸಮತೆಯಿಂದ ಅರ್ಥಾತ್ ವೈಷಮ್ಯದಿಂದ ನಡೆಯುವುದೋ ಹಾಗೆಯೇ, ಈ ಪ್ರಪಂಚದ ಯಾವತ್ತೂ ಘಟನೆಗಳು ಇವೇ ಮಾದರಿಯ ಒಬ್ಬ ಮತಿಗೆಟ್ಟ ಸುಲ್ತಾನನ ಹಾಗು ಮತಿಹೀನ ಸಲಹೆಗಾರರ ಮೂಲಕ ಸಾಗುತ್ತಿದೆಯೆಂದು. ಸಾರಿಸಾರಿ ಹೇಳುವರು ನಮ್ಮ ಹಳಬರು ಈ ವಿಶ್ವವು ಸುವ್ಯವಸ್ಥಿತವಾಗಿ ಸಾಗುತ್ತಿರುವುದೆಂದು. ನಂಬುವುದಕ್ಕೇ ಮೊದಲು ಆಧಾರವಿಲ್ಲ. ಸುವ್ಯವಸ್ಥೆ ಇದೇಯೇ ಈ ಜಗತ್ತಿನಲ್ಲಿ? ಬೇಗೆ, ರೋಗ, ಅತಿವೃಷ್ಟಿ, ಅನಾವೃಷ್ಟಿ, ಭೂಕಂಪ, ಬರ, ಅರಬು, ಮಹಾಯುದ್ಧ ಮೊದಲಾದುವುಗಳಿಂದ ಜರ್ಜರಿತವಾದ ನಮ್ಮ ಈ ಪೊಡವಿಯು ಸುವ್ಯವಸ್ಥಿತವಾಗಿ ನಡೆದಿರುವುದೆಂದು ಗಂಡುದನಿಯಿಂದ ಹೇಳುವವನ ಗಂಟಲೆಯನ್ನು ನೋಡಿಯಾದರೂ ನೋಡಬೇಕೆಂದು ನನ್ನ ಹೆಬ್ಬಯಕೆ! ಇಷ್ಟು ಅವ್ಯವಸ್ಥಿತವಾಗಿ ನಡೆದ ಜಗತ್ತಿನ ಕರ್ತನು ಪರಿಪೂರ್ಣನೂ, ಸರ್ವಶಕ್ತಿಮಂತನೂ, ಕರುಣಾಸಾಗರನೂ, ಸರ್ವಸಾಕ್ಷಿಯೂ ಇರುವನೆಂದು ನಂಬುವುದೆಂತು; ನಮ್ಮ ಜಗತ್ಕರ್ತನ ಮಹಿಮೆಯನ್ನು ತಿಳಿಯುವುದಕ್ಕೆ ಮಾನದಂಡ (standard) ವಾದರೂ ಅವುದು? ಅರ್ಥಾತ್ ಅವನ ಕೃತಿಯಾದ ಈ ಜಗತ್ತೇ! ಈ ಜಗತ್ತಂತೂ ನಿಃಸಂದೇಹವಾಗಿ ಅಪೂರ್ಣವಾಗಿರಬಹುದು. ಅಸಂಖ್ಯ ಜನರು ಒತ್ತಟ್ಟಿಗೆ ಹಸಿವೆಹಸಿವೆಯೆಂದು ಸಾಯುತ್ತಿದ್ದರೆ, ಅತ್ತ ಲಕ್ಷಕೊಬ್ಬಿಬ್ಬರು ಅಜೀರ್ಣವಾಗುವಷ್ಟು ತಿಂದು ಅಗ್ನಿಮಾಂದ್ಯದಿಂದ ನರಳುತ್ತಿರುವರು. ಪಾಪ! ಇತ್ತ ಉಪಸರ್ಗಗಳಿಂದುಬಿಡುವಿಲ್ಲದೆ ರಟ್ಟೆಮುರಿದು ಹೊಟ್ಟೆಗಿಲ್ಲದೆ ದುಡಿದು ದುಡಿದು ಸವೆಯುವ ಕೋಟ್ಯವಧಿ ಜನರಿದ್ದರೆ, ಅತ್ತ ಬಡವರ ರಕ್ತವನ್ನು ಹೀರಿ ರಕ್ಕಸರಂತೆ ಕೊಬ್ಬಿ ಒಂದು ಗಳಿಗೆಯಲ್ಲಿ ಸಾವಿರಾರಾವೃತ್ತಿ ಆಕಳಿಸುತ್ತ, ಹೂವಿನ ಹಾಸುಗೆಯಮೇಲೆ ಅತ್ತಿಂದಿತ್ತ ಹೊರಳಾಡುವುದೇ ಮುಖ್ಯೋದ್ಯೋಗವನ್ನಾಗಿ ಮಾಡಿಕೊಂಡ, ರಿಣಗೂಳು ತಿನ್ನುವ ನರಭಕ್ಷಕರ ಅರ್ಥಾತ್ ಶ್ರೀಮಂತರ ಕಿರಿತಂಡಗಳ ತಾಂಡವನೃತ್ಯವು ನಡೆದಿರುವುದು. ಅಹಹಾ!!! ಎಂತಹ ಸುವ್ಯವಸ್ಥಿತವಾದ ಪ್ರಪಂಚವಿದು? ಇಂತಹ

ಆದರ್ಶರೀತಿಯಿಂದ ಜಗತ್ತಿನ ಆಡಳಿತವನ್ನು ಸ್ವರ್ಗವೆಂಬ ತನ್ನ ರಾಜ್ಯಧಾನಿಯಲ್ಲಿ ಇದ್ದು, ತನ್ನ ಮಕ್ಕಳೆನಿಸಿಕೊಳ್ಳುವವರಿಗೆ ಎಂದೂ ದರ್ಶನವನ್ನು ಕೊಡದೆ, ಯಾರಾದರೂ ನೋಡಿಯಾರೆಂಬ ಅಂಜಿಕೆಯಿಂದ ಅಂತಃಪುರದೊಳಗಿನ ಹೆಂಗಳೆಯರಂತೆ ಪರದೆಯ ಹಿಂದೆಯೇ ಇದ್ದು, ತನ್ನ ಮಕ್ಕಳ, ಮರಿಮಕ್ಕಳ ಗೋಳಾಟವು ಕೇಳಿಸದಂತೆ ಕಿವಿಯಲ್ಲಿ ಬೊಟ್ಟು ಇಟ್ಟುಕೊಂಡು, ಅಗಮ್ಯರೀತಿಯಿಂದ ಸಾಗಿಸುವ ಜಗದೀಶನ ಲೀಲೆಯು ನಿಜವಾಗಿಯೇ ಅಗಾಧವಾದುದದು! ಅಪೂರ್ಣಜಗತ್ತಿನ ಕರ್ತನಾದರೂ ಅಪೂರ್ಣನೇ ಎಂದು ಸಿದ್ಧವಾಗುವದಿಲ್ಲವೇ? ಸರಿಯಾಗಿ ಇಕ್ಕಲಿಕ್ಕೆ ಬಾರದಂಥ ಬಾಗಿಲನ್ನು ಮಾಡಿದ ಬಡಿಗನು ಮಹಾಮೂರ್ಖನೆಂಬುದು ಸಿದ್ಧವಾಗುವುದಿಲ್ಲವೇ? ಕರ್ತನ ಮಹಿಮೆಯನ್ನು ಅವನ ಕೃತಿಯಿಂದಲೇ ಅರಿಯಬೇಕಲ್ಲವೇ? ಈ ಜಗತ್ತೇ ನಮ್ಮ ಭಗವಂತನ ಕೃತಿಯು. ಈ ಕೃತಿಯಂತೂ ಎಷ್ಟು ಹೀನವಾಗಿರುವುದೆಂಬುದು ಕಣ್ಣುಳ್ಳವರಿಗೆ ಒಡೆದು ಕಾಣದಿರದು. ಕಣ್ಣುಳ್ಳ ಕುರುಡರಿಗೆ ಮಾತ್ರ ಅರ್ಥಾತ್ ಜರದ ಶಾಲು ಹೊತ್ತುಕೊಂಡು ಗುಡಿ-ಗುಂಡಾರಗಳಲ್ಲಿ ಅಶಿಕ್ಷಿತ ಜನರ ಮುಂದೆ—ಸುಶಿಕ್ಷಿತ ಮೂರ್ಖರ ಮುಂದೆ—ತಿರುಳಿಲ್ಲದ ಪುರಾಣಗಳ ಹಳಸಿದ ಹೂರಣವನ್ನು ನೀಡುವ ನಮ್ಮ ಕೊಳೆತ ಮಿದುಳಿನ 'ಪ್ರಾಜ್ಞ' ಪುರಾಣಿಕರ ಹಾಗು ಅವರ ಮಾದರಿಯ ಕುರುಡು ನಂಬುಗೆಯವರಿಗೆ ಈ '**ಬುದ್ಧಿಗೇಡಿ ಭಗವಂತ**'ನು ಸರ್ವಜ್ಞನಾಗಿ ಕಾಣುವನು! ಈ ಪಕ್ಷಪಾತಿಶಿರೋಮಣಿಯು ಎಲ್ಲರನ್ನೂ ಸಮನಾಗಿ ನೋಡುವನಂತೆ!! ಕಟುಕನಲ್ಲಿ ಕಾಣುವಷ್ಟು ಕಾರುಣ್ಯವಿಲ್ಲದವನು 'ಕರುಣಾಸಾಗರನಾಗಿ' ತೋರುವನು. ಗೋಷಾದೊಳಗಿನ '**ಬೇಗಮ್ಮ**'ನಲ್ಲಿರುವಷ್ಟು ಸಹ ಚೈತನ್ಯವಿಲ್ಲದ ಭಗವಂತನು 'ಕರ್ತುಮಕರ್ತುಂ ಅನ್ಯಥಾಕರ್ತುಂ' ಶಕ್ತಿಯುಳ್ಳವನಂತೆ! ಆದರೆ ಇವೆಲ್ಲ ಕ್ರೌರ್ಯ, ವೈಷಮ್ಯಾದಿಗಳು ದೇವರ **ಮಾಯಾ** ಅಥವಾ **ಲೀಲಾ** ಎಂದು ಮೂಢಭಾವಿಕರು ಸಮಾಧಾನವನ್ನು ಮಾಡಿಕೊಳ್ಳುವರು. ಧನ್ಯ ಧನ್ಯ! ಅವರ ಈ ಸಮಾಧಾನಕ್ಕೆ!! ಲೀಲಾ ಅಥವಾ ಮಾಯಾ ಎಂಬ ಗೀರ್ವಾಣ ಶಬ್ದಗಳಿಗೆ ಅಚ್ಚಗನ್ನಡದಲ್ಲಿ ಹೇಗೆ ಅರ್ಥವನ್ನು ಹೇಳಬೇಕು? ನಾನಂತೂ ಅಚ್ಚಗನ್ನಡದಭಿಮಾನಿ! ತಾವೂ ಹಾಗೆಯೇ ಇರುವಿರಿ. ಈ ಲೀಲಾ ಮತ್ತು ಮಾಯಾ ಇವುಗಳ ಅರ್ಥವು ತಮಗೆ ಆಗಿರುವುದೋ? ಅರ್ಥಾತ್ ಭಗವಂತನ ಸೆರಗಿನಲ್ಲಿ ಬರುವ ತಿಳಿಗೇಡಿತನವನ್ನು ಹೋಗಲಾಡಿಸುವಷ್ಟು ಅರ್ಥವುಳ್ಳವುಗಳಾಗಿರುವವೋ ಈ ಶಬ್ದಗಳು? ನನಗಂತೂ ಇವು ನಿರರ್ಥಕವಾಗಿಯೂ, ವ್ಯರ್ಥವಾಗಿಯೂ, ತೋರಿವೆ! ಮೂಢಭಾವಿಕರು ದೇವರ, ಆರ್ಯರ ಭಾಷೆಯಾದ ಸಂಸ್ಕೃತದಲ್ಲಿ ಯಾವುದಕ್ಕೆ ಮಾಯಾ ಅಥವಾ ಲೀಲೆಯೆನ್ನುವರೋ ಅದಕ್ಕೆ ನಮ್ಮ ಮಾನವರ, ದ್ರಾವಿಡರ ಭಾಷೆಯಲ್ಲಿ ಹುಡುಗಾಟ ಅಥವಾ ಹುಚ್ಚಾಟವೆನ್ನುವೆವು.

'ಕಟ್ಟಡವನ್ನು ಕಂಡೊಡನೆ ಅದನ್ನು ಕಟ್ಟಿದ ಉಪ್ಪಾರನು ಇರಲೇಬೇಕೆಂಬ ಊಹೆಯ ಮೇರೆಗೆ 'ಈ ಸೃಷ್ಟಿಯಾದರೂ ಕಟ್ಟಡದಂತಹ ಒಂದು ಕೃತಿ ಇದ್ದು ಅದರ ಕರ್ತನು ಇರುವುದು ಸ್ವಾಭಾವಿಕ' ಎಂದು ನಂಬಿ, ದೇವರ ಅಸ್ತಿತ್ವವನ್ನು ಊಹಿಸಿರುವರಷ್ಟೇ? ಕಟ್ಟಡದಲ್ಲಿ ಅದನ್ನು ಕಟ್ಟಿದವನ ರಚನಾಚಾತುರ್ಯವು ಮೂಡಿರುವುದೆಂಬುದು ಸ್ಪಷ್ಟವಾದ ಸಂಗತಿ; ಹಾಗೆಯೆ ನಮ್ಮ ಈ ವಿಶ್ವದಲ್ಲಿಯೂ ಅದರ ಕರ್ತನಾದ ಜಗದೀಶನ ಕರ್ತೃತ್ವ ಮೊದಲಾದ ಗುಣಗಳು ಪ್ರತಿಬಿಂಬಿಸಿರಲಿಕ್ಕೆ ಸಾಕು! ಆದರೆ, ನಾವು ಮೇಲೆ ನೋಡಿದಂತೆ ಈ ವಿಶ್ವವು ಆದರ್ಶಕೃತಿಯಲ್ಲವೆಂಬುದು ಸಿದ್ಧವಾಗುತ್ತದೆ. ಎಂದಮೇಲೆ ಇದರ ಕರ್ತನು ಅಪೂರ್ಣನೆಂಬುದೇ ಸಿದ್ಧವಾಗುವುದು. ಅಂತೆಯೇ ಎಚ್. ಜಿ. ವೆಲ್ಸ್ ಮುಂತಾದ ಇದೀಗಿನ ಪಂಡಿತರು ಜಗದೀಶನು ಅಪೂರ್ಣನೆಂದೇ ಪ್ರತಿಪಾದಿಸುತ್ತಾರೆ; ಆದರೆ, ನಮ್ಮ ಭಾವಿಕರಿಗೆ ಅಪೂರ್ಣ ಜಗದೀಶನ ಕಲ್ಪನೆ ಸರಿಗಾಣಲಿಕ್ಕಿಲ್ಲ! ಅದು ಹೋಗಲಿ, ಈ ವಿಶ್ವವನ್ನು ಕಟ್ಟಡದಂತಹ ಒಂದು ಕೃತಿ ಎಂದು ಮನ್ನಿಸಲಿಕ್ಕೆ ಯಾವುದಿದೆ ಆಧಾರ? ಇದರ ವಿಚಾರವನ್ನೇ ಆಸ್ತಿಕರು ಮಾಡುವುದಿಲ್ಲ. ಈಶನು ಹೇಗೆ ಸ್ವಯಂಭುವು ಆಗಿರುವನೋ ಹಾಗೆಯೇ ಈ ವಿಶ್ವವೂ ಅನಾದಿ ಮತ್ತು ಸ್ವಯಂಸಿದ್ಧವಾದುದೆಂದು ಏಕೆ ನಂಬಬಾರದು?'

ಈಶನು ಜಗತ್ತಿಗೆ ನಿಮಿತ್ತಕಾರಣನೋ? ಅಥವಾ ಉಪಾದಾನ ಕಾರಣನೂ ಇರುವನೊ? ಶಂಕರ, ರಾಮಾನುಜಾದಿ ಭಾಷ್ಯಕಾರರು, ಈಶನು ಜಗತ್ತಿಗೆ ನಿಮಿತ್ತಕಾರಣನಿರುವನಲ್ಲದೆ ಉಪಾದಾನಕಾರಣನೂ ಇರುವನೆಂದು ಪ್ರತಿಪಾದಿಸಿದ್ದಾರೆ; ಎಂದರೆ ಕಟ್ಟಡದ ಕಲ್ಲು, ಗಚ್ಚು ಮೊದಲಾದ ವಸ್ತುಗಳೂ ಅವನೇ; ಮತ್ತು ಅವಕ್ಕೆ ವಿಶಿಷ್ಟರೂಪವನ್ನು ಕೊಟ್ಟವನೂ ಅವನೇ ಎಂದು ಅರ್ಥ. ಅದ್ವೈತ ಮತ್ತು ವಿಶಿಷ್ಟಾದ್ವೈತ ವಾದಗಳ ಭೂಮಿಕೆ ಇದು. ಆದರೆ, ಮಧ್ವಾದಿ ದ್ವೈತವಾದಿಗಳು ಈ ಜಗತ್ತೇ ಈಶನೆಂದು ನಂಬಲಿಕ್ಕೆ ಸಿದ್ಧರಿಲ್ಲ. ಈಶನು ಉಪ್ಪಾರನಂತೆ ಬರಿ ನಿಮಿತ್ತಕಾರಣನೆಂದು ಪ್ರತಿಪಾದಿಸುತ್ತಾರೆ. ಇವುಗಳಲ್ಲಿ ಯಾವುದೇ ವಾದವನ್ನು ಸ್ವೀಕರಿಸಿದರೂ ಈ ಜಗತ್ತು ಅಪೂರ್ಣವಾದುದೆಂಬುದನ್ನು ಅಲ್ಲಗಳೆಯಲಿಕ್ಕೆ ಬರುವುದಿಲ್ಲ. ಅಲ್ಲದೆ ಅಪೂರ್ಣಕೃತಿಯ ಕರ್ತನು ಪೂರ್ಣನೆಂದು ನಂಬುವುದು ತರ್ಕವಿರುದ್ಧ ಸಂಗತಿ. ಹೀಗಿದ್ದರೂ ಸೃಷ್ಟಿಕರ್ತನು ಪರಿಪೂರ್ಣನೇ ಎಂದು ನಂಬಲಿಕ್ಕೆ ಮೂಢಭಾವಿಕರ ಹೊಲ್ಲೆದೆಯೇ ಬೇಕು!!

ಇನ್ನು 'ಪ್ರಪಂಚದಲ್ಲಿ ಕಂಡುಬರುವ ವೈಷಮ್ಯಾದಿ ದೋಷಗಳಿಗೆ ಈಶನು ಹೊಣೆಯಲ್ಲ' ಎಂದು ಪ್ರತಿಪಾದಿಸಲಿಕ್ಕೆ ಕರ್ಮವಾದ, ಮಾಯಾವಾದ ಮುಂತಾದುವುಗಳು ಮುಂದೆಬರುವುವು. 'ನಮಗೆ ಕಾಣುವ ವೈಷಮ್ಯ, ನೈರ್ಘೃಣ್ಯಾದಿಗಳು ಆಭಾಸಾತ್ಮಕವಾದುವುಗಳು. ಅವು ಶಾಶ್ವತವಾದುವುಗಳಲ್ಲ; ಅವು ಮಿಥ್ಯಾ! ಅಜ್ಞಾನಮೂಲಕ ಹಾಗೆ ತೋರುವುವು,' ಮುಂತಾದ ಮಾತುಗಳನ್ನು ಹೇಳಿ ಸಮಾಧಾನಪಡಿಸಲು ಯತ್ನಿಸುವರು ಮಾಯಾವಾದಿಗಳು. ಆದರೆ, ನಾವು ಕಣ್ಣಾರೆ ಕಾಣುವ, ಹೆಜ್ಜೆಹೆಜ್ಜೆಗೆ ಅನುಭವಿಸುವ ಈ ಸಂಗತಿಗಳು ಸುಳ್ಳೆಂದು ನಂಬಲಿಕ್ಕೆ

ಮಾಯಾವಾದಿಗಳ ಮಾಯಾನುಭವ ಎದೆಯೇ ಬೇಕು! ಹಿಟ್ಲರನ ತಾಪದಿಂದ ಬಳಲುವ ಅಸಹಾಯ ಯಹೂದಿಗಳು, ತಾವು ಪ್ರತ್ಯಕ್ಷ ಅನುಭವಿಸಿದ ಮತ್ತು ಅನುಭವಿಸುವ ಗೋಳಾಟವು ಮಿಥ್ಯಾ, ಕೇವಲ ಆಭಾಸ ಎಂದು ನಂಬಬಹುದೇ? ಭವ್ಯ ದೇವಾಲಯದಲ್ಲಿ ಸವಿಯೂಟವನ್ನುಂಡು ಕೊಬ್ಬಿಯ ಮೇಲೆ ಕೈಯಾಡಿಸುತ್ತ ಶಾಂಕರಭಾಷ್ಯವನ್ನು ಬಿಚ್ಚಿ ಹೇಳುವ ವೇದಾಂತಶಿರೋಮಣಿಗಳಿಗೆ ಅದೇನೋ 'ಮಿಥ್ಯಾ' ಎಂದೆನಿಸಬಹುದು. ದ್ವೈತವಾದಿಗಳಾದರೂ ತಮ್ಮ ಈಶನು ಜಗತ್ತಿನ ಕುಂದು-ಕೊರತೆಗಳಿಗೆ ಹೊಣೆಯಲ್ಲವೆಂದು ಸಿದ್ಧಮಾಡಲು ಕರ್ಮವಾದವನ್ನು ಅಂಗೀಕರಿಸಿರುವರು. ಜಗತ್ತಿನಲ್ಲಿ ನಡೆವ ಮಂಗಾಟಕ್ಕೆ ಕರ್ಮವೇ ಹೊಣೆಯಂತೆ! ಜಗದೀಶನು ಮಾತ್ರ ಬರಿಯ ಕರ್ಮಾಧ್ಯಕ್ಷನಂತೆ! ಕರ್ಮದ ಮಂಗಾಟಕ್ಕೆ ತಡೆಯನ್ನುಂಟುಮಾಡದ ಅಧ್ಯಕ್ಷಶಿರೋಮಣಿಯು ಆವನ ಭಕ್ತರಂತೆಯೇ ಕಣ್ಣುಳ್ಳ ಕುರುಡ ಎಂಬುದು ಸಿದ್ಧವಾಗುವುದಿಲ್ಲವೆ? ಕರ್ಮದಲ್ಲಿ ಕೈಹಾಕಲಿಕ್ಕೆ ಆವನಿಗೆ ಬರುವುದಿಲ್ಲವೆಂದರೆ ಆವನು ಸರ್ವಶಕ್ತಿವಂತನೆಂಬ ನಂಬುಗೆಗೆ ಬಾಧೆಯುಂಟಾಗುತ್ತದೆ. ಕೈಹಾಕಲಿಕ್ಕೆ ಬರುವುದೆಂದು ನಂಬಿದರೆ 'ವೈಷಮ್ಯಾದಿಗಳನ್ನು ಆವನು ಏಕೆ ನಾಶಗೊಳಿಸುವುದಿಲ್ಲ?' ಎಂಬ ಪ್ರಶ್ನೆ ಬರುವದು. ಇದಕ್ಕೆ ಸಮಾಧಾನಕಾರಕ ಉತ್ತರವನ್ನು ಕೊಡದೆ' ಇದೆಲ್ಲ ಭಗವಂತನ ಲೀಲೆ! ಅದು ಅಗಮ್ಯವಾದುದು! ಭಗವಂತನು ಶಿಷ್ಟರ ಪಾಲನ, ದುಷ್ಟರ ದಮನಮಾಡುವವನೇ' ಎಂದು ನಂಬಬೇಕಂತೆ! ಆದರೆ, ಈ ಸಂಸ್ಕೃತ 'ಲೀಲೆ'ಯ ಕನ್ನಡ ಅರ್ಥವನ್ನು ನಾವು ಈ ಮೊದಲೇ ಹೇಳಿದ್ದೇವೆ. ಈ ತೊಡಕುಗಳನ್ನು ದುರ್ಲಕ್ಷಿಸಲಿಕ್ಕೆ ನಮ್ಮ ಶ್ರುತಿಗಳಿಗೆ ಮೊರೆಹೋಗಬೇಕು ಎನ್ನುವರು ಭಾವಿಕರು.

ತಾರ್ಕಿಕರ ಪೆಟ್ಟುಗಳನ್ನು ತಪ್ಪಿಸಲಿಕ್ಕೆ ಶ್ರುತಿರೂಪದ ಢಾಲು ಹಿಡಿದಿರುವರು ಭಾವಿಕರು. ಆದರೆ ಪುಣೆ ಪಟ್ಟಣದ ಸುತ್ತು ಮರಿದು ಧಾಬಳಿಗಳನ್ನು ಕಟ್ಟಿ, ಅದನ್ನು ಆಂಗ್ಲರಿಂದ ಸಂರಕ್ಷಿಸುವುದು ಇಮ್ಮಡಿ ಬಾಜೀರಾಯನಿಗೆ ಎಷ್ಟರ ಮಟ್ಟಿಗೆ ಸಾಧ್ಯವಾಯಿತೋ ಅಷ್ಟೇ, ಈಶನನ್ನು ಜಗತ್ತಿನ ಕುಂದು-ಕೊರತೆಗಳಿಂದ ಮುಕ್ತಮಾಡಲಿಕ್ಕಾಗಿ ಎತ್ತಿಹಿಡಿದ ದೈವವಾದ, ಆಪ್ತವಾಕ್ಯ, ಅಗಾಧ ಲೀಲೆ ಮೊದಲಾದುವುಗಳು ಸಮರ್ಥವಾಗಿವೆ.

ಅಂತೂ ಸೃಷ್ಟಿಗೆ ಕರ್ತನಿದ್ದುದೇ ಆದರೆ ಆವನು ಅಪೂರ್ಣನಾಗಿ ಇರುವನೆಂಬುದು ಸಿದ್ಧವಾದುದು. ಆದರೆ, ಅಪೂರ್ಣ ಕರ್ತನಿರುವನೆಂದು ನಂಬುವುದಕ್ಕಿಂತ ಸೃಷ್ಟಿಯು ಎಂದರೆ, ಈ ವಿಶ್ವವು ಅನಾದಿ ಮತ್ತು ಸ್ವಯಂಭು ಎಂದು ನಂಬುವುದೇ ಲೇಸು. ಇದೊಂದು ಅಸಂಖ್ಯ ವಿವಿಧಶಕ್ತಿಗಳುಳ್ಳ ಘಟಕಗಳ ಸಂಘಾತವಿರಬಹುದು. ಇವೆಲ್ಲ ಘಟಕಗಳ ಸಹಕಾರ್ಯದಿಂದ ಮತ್ತು ತಾಕಲಾಟದಿಂದ ಈ ವಿಶ್ವದ ಚಟುವಟಿಕೆಗಳು ಸಾಗಿರುವವು. ಈ ಘಟಕಗಳು ಅಪೂರ್ಣವಾದುವುಗಳಾದ್ದರಿಂದ ಜಗತ್ತಿನಲ್ಲಿ ವಿಷಮತೆ ಮೊದಲಾದ ದೋಷಗಳು ಕಂಡುಬರುತ್ತವೆ. ಮತ್ತು ಈ ದೋಷಗಳು ಅಳಿಯಬೇಕಾದರೆ ಯಾವತ್ತೂ ಘಟಕಗಳು ಸತ್ಪಕ್ಷಪಾತಿಯಾಗಿ ಸಹಕರಿಸಬೇಕಾಗುವುದು. ಕೆಲಸವಿಲ್ಲದೆ ಕಾಲ್ಪನಿಕ ದೇವರ ಬೆನ್ನುಹಿಡಿಯುವುದೇಕೆ? ನಮ್ಮ ಅಪೂರ್ಣತ್ವದಲ್ಲಿಯ ವಿಶ್ವದ ಘಟಕಗಳಾದ ನಾವೆಲ್ಲರೂ (ಚಲಾಚಲ) ಆಕ್ರಮಣಶೀಲರಾಗದೆ ಬಾಂಧವ್ಯದಿಂದ ನಡೆದರೆ, ನಮ್ಮ ಅಪೂರ್ಣತ್ವವನ್ನು ಎಷ್ಟೋ ಪಾಲು ಕಳೆದುಕೊಳ್ಳಲು ಸಾಧ್ಯವಿದೆ.

ಇನ್ನು ಈಶವಾದಿಗಳಿಗೆ ದೊಡ್ಡದೊಂದು ಅಂಜಿಕೆ ಇದೆ. ಅದಾವುದೆಂದರೆ, ಜನರು ನಾಸ್ತಿಕರಾದೊಡನೆ ನೀತಿಯೇ ಇಲ್ಲದಂತಾಗುವುದು— ಎಂದು. ವಾಸ್ತವಿಕವಾಗಿ ಆಸ್ತಿಕರು ನೀತಿವಂತರೇ ಇರುತ್ತಾರೆಂದು ಹೇಳಲಾಗದು. ಮೂರು ಸಲ ಜಳಕಮಾಡಿ ನೂರು ಸಲ ದೇವರನ್ನು ಸುತ್ತುವರಿದು ನಡತೆಯಲ್ಲಿ ನೀತಿಯನ್ನು ಮೆಟ್ಟಿ ತುಳಿಯುವ ಭಾವಿಕರನ್ನು ನಾವು ಎಲ್ಲೆಲ್ಲಿಯೂ ಕಾಣಬಹುದು; ಎಂದಮೇಲೆ, ದೇವರಿರುವನೆಂದು ನಂಬುವವರು ನೀತಿವಂತರಾಗಿಯೇ ಇರುತ್ತಾರೆಂದು ಸಿದ್ಧವಾಗುವುದಿಲ್ಲ. ದೇವರಲ್ಲಿ ನಂಬಿಗೆ ಇಲ್ಲದ ಎಷ್ಟೋ ಜನರು ಆದರ್ಶನೀತಿಯನ್ನು ಆಚರಿಸುತ್ತಾರೆ. ನೀತಿಗೂ ಆಸ್ತಿಕ್ಯಭಾವನೆಗೂ ಕಾರ್ಯ-ಕಾರಣ ಸಂಬಂಧವಿಲ್ಲ. ನಾವು ನೀತಿಯನ್ನು ಬಿಟ್ಟರೆ ದೇವರು ನಮ್ಮನ್ನು ದಂಡಿಸಬಹುದೆಂಬ ಅಂಜಿಕೆ ಅತ್ಯವಶ್ಯವಾದುದೆಂದು ನಂಬಲಿಕ್ಕೆ ನಮ್ಮ ಗ್ರಾಮ್ಯ ಹಾಗು ದುಷ್ಟಸಂಸ್ಕಾರಗಳೇ ಹೊಣೆ. ಆದ್ದರಿಂದ ಜನರು ಎಲ್ಲೆಲ್ಲಿಯೂ ನೀತಿವಂತರಾಗಬೇಕೆಂಬ ಇಚ್ಛೆ ಇದ್ದರೆ— ಅದು ಇದ್ದೇ ಇದೆ— ಮೊಟ್ಟಮೊದಲು ಮನೆಯೊಳಗಿನ ತಾಯ್ತಂದೆ ಮೊದಲಾದ ಪಾಲಕರ ಅನಿಷ್ಟ ಸಂಸ್ಕಾರಗಳನ್ನು ಹೋಗಲಾಡಿಸಬೇಕು! ತಮ್ಮ ಮಕ್ಕಳು ಸ್ವತಂತ್ರವಿಚಾರದ ಪ್ರಭಾವಶಾಲಿ ನಾಗರಿಕರಾಗಬೇಕೆಂಬ ಹಂಬಲವಿರಬೇಕು ತಾಯ್ತಂದೆಗಳಿಗೆ; ಮತ್ತು ಅದಕ್ಕನುಗುಣವಾಗಿ ಹಿರಿಯರು ಒಂದು ದೊಡ್ಡ ಸ್ವಾರ್ಥ-ತ್ಯಾಗವನ್ನು ಮಾಡಬೇಕಾಗುತ್ತದೆ. ಆ ಸ್ವಾರ್ಥತ್ಯಾಗವೆಂದರೆ ತಮ್ಮ ದೇವರು, ದಿಂಡರು, ಧರ್ಮ, ಕರ್ಮ, ಊಟ, ಉಡುಗೆ ಮುಂತಾದುವುಗಳನ್ನು ಚೊಕ್ಕ ಚಿನ್ನದಂತೆ ಇರುವ ತಮ್ಮ ನಿಷ್ಪಾಪ ಮಕ್ಕಳ ಮೇಲೆ ಹೇರಬಾರದೆಂಬುದೇ! ಚೆಲೋ ಚಟಗಳನ್ನು, ಸರ್ವಮಾನ್ಯ ನೈತಿಕತತ್ತ್ವಗಳನ್ನು (ಸತ್ಯ, ಅಹಿಂಸೆ) ಚಿಕ್ಕಮಕ್ಕಳಿಗೆ ಹಿರಿಯರು ಕಲಿಸಬಾರದೆಂದು ನಾನು ಎನ್ನುವುದಿಲ್ಲ; ಆದರೆ, ವಾದಾಸ್ಪದ ಸಂಗತಿಗಳಾದ ದೇವರು, ಸಂಧ್ಯಾವಂದನೆ, ನಮಾಜು, ಕ್ರಿಸ್ತ ಅಥವಾ ಶೈವದೀಕ್ಷೆ ಮೊದಲಾದುವುಗಳ ವಿಷಯದಲ್ಲಿ ಮಾತ್ರ ಹಿರಿಯರು ಆತ್ಮ-ಸಂಯಮನ ಮಾಡಬೇಕು. ಜಗತ್ತಿನಲ್ಲಿ ದೇವಧರ್ಮ ಮೊದಲಾದುವುಗಳ ನೆಪದಿಂದ ಎಷ್ಟು ಹಿಂಸೆಯಾಗಿರುವುದೆಂಬುದಕ್ಕೆ ಇತಿಹಾಸವೇ ಸಾಕ್ಷಿಯಾಗಿದೆ. ಧಾರ್ಮಿಕರೆಂದೆನಿಸಿಕೊಳ್ಳುವವರೇ ಧರ್ಮವನ್ನು ಒತ್ತಿ ತುಳಿದು ಅಧರ್ಮವನ್ನು ಎತ್ತಿಹಿಡಿದಿದ್ದಾರೆಂದರೆ ಅತಿಶಯೋಕ್ತಿಯಾಗಲಾರದು. ಆದ್ದರಿಂದ ಜನರಲ್ಲಿ ವಿನಾಕಾರಣ ಜಾತೀಯ, ಧಾರ್ಮಿಕ ಮೊದಲಾದ ಭಾವನೆಗಳನ್ನು ಸೇರಿಸಿ, ಅವರಲ್ಲಿ ಕೆಲಸವಿಲ್ಲದೆ ಜಂಗಡಗಳನ್ನುಂಟುಮಾಡಿ,

(೩೩೪ ನೆಯ ಪುಟ ನೋಡಿರಿ.)

ಗೋಡೆಯ ಮೇಲಿನ ಚಿತ್ರ ★

★

ಸ್ವಲ್ಪ ಕಲ್ಪಕತೆ ಇದ್ದರಾಯಿತು; ಎಂತೆಂತಹರನ್ನೂ ಕುತೂಹಲಿಗಳನ್ನಾಗಿ ಮಾಡಿ ಕುಳ್ಳಿರಿಸಬಹುದು. ವಾಸುದೇವರಾಯರು ಹೇಳಿದ ಭಿಂತೀಕರರ ಮರಣದ ಹೃದಯದ್ರಾವಕ ಕತೆಯು ಯಾರ ಆತುರವನ್ನು ಹಿಡಿದಿಡಲಾರದು ?

★

ಶ್ರೀ. ಹುಯಿಲಿಗೋಳ ರಾಮಚಂದ್ರರಾಯರು
ಬಿ. ಎಸ್‌ಸಿ.

"ನಿಮಗೆ ಮುಖ್ಯವಾದ ಒಂದು ಸಂಗತಿಯನ್ನು ತಿಳಿಸಬೇಕಾಗಿದೆ.... ನಿಮ್ಮ ಅಡ್ರೆಸ್ ಕೊಡುವಿರಾ ?" ಎಂದು ಇಂಗ್ಲಿಷಿನಲ್ಲಿ ಕೇಳಿದೆ.

ಮೊನ್ನೆ ನಮ್ಮ ಮನೆಯಲ್ಲಿಯ ತಾಂಬೂಲ ಸಮಾರಂಭಕ್ಕೆ ನನ್ನ ಮಿತ್ರರು ಅನೇಕರು ನೆರೆದಿದ್ದರು. ಹರಟೆ ಹೊಡೆಯುತ್ತ ಕುಳಿತಾಗ ಒಬ್ಬೊಬ್ಬರು ತಮ್ಮ ಜೀವನದಲ್ಲಿ ಆದ, ಕಂಡ ಅನೇಕ ಸೋಜಿಗದ ಸುದ್ದಿಗಳನ್ನು ಒಂದೊಂದಾಗಿ ವರ್ಣಿಸತೊಡಗಿದರು. ತಮ್ಮ ಜೀವನದಲ್ಲಿ ದೈವೀಶಕ್ತಿಯ ಪರಿಣಾಮವು ಎಷ್ಟರ ಮಟ್ಟಿಗೆ ಆಗುವುದು ಎಂಬುದರ ಬಗ್ಗೆ ಎಲ್ಲರೂ ಒಂದೊಂದು ಕಥೆಯನ್ನೇ ಹೇಳಿದರು. ಆದರೆ ನನ್ನ ಗೆಳೆಯನಾದ ರಂಗನ ಜೊತೆಯಲ್ಲಿ ಬಂದ ವಾಸುದೇವರಾಯರು ಮಾತ್ರ ಸುಮ್ಮನೆ ಕುಳಿತು ಕೇಳುತ್ತಿದ್ದರು. ಕುತೂಹಲವನ್ನು ಸಾಕಷ್ಟು ತೋರಿಸುತ್ತಿದ್ದರೂ ಒಂದು ಮಾತನ್ನು ಕೂಡ ಆಡಿರಲಿಲ್ಲ.

ನಮ್ಮ ರಂಗನೇ ಅವರನ್ನು ಕೇಳಿದ : "ಏನ್ರೀ ನೀವೇನಾದರೂ ಹೇಳ್ರಿ, ಹಾಂಗs ಕೂತೀರಲ್ಲ" ಎಂದು. ವಾಸುದೇವರಾಯರು ಒಂದು ಸಿಗರೇಟನ್ನು ಹೊತ್ತಿಸಿ ಮೆಲ್ಲಗೆ ಪ್ರಾರಂಭಮಾಡಿದರು. "ನನಗೇನೂ ಕಟ್ಟುಕಥೆಯಮೇಲೆ ಅಷ್ಟು ವಿಶ್ವಾಸವಿಲ್ಲ. ಸತ್ಯವು ಕಲ್ಪನೆಗಿಂತಲೂ ಅದೆಷ್ಟೋ ಸೋಜಿಗವಾದುದು ಎಂದು ನನ್ನ ಮತ. ನಾನು ಹೇಳುವ ಸಂಗತಿಯು ಈಗ ಎರಡು ವರ್ಷಗಳಿಂದ ನನ್ನ ಮನಸಿನಲ್ಲಿದೆ ; ವಿಚಿತ್ರವಾಗಿ ಅದು ಈ ಹೊತ್ತೇ ಕೊನೆಗಂಡಿತು" ಎಂದರು. "ಹಾಗಾದರೆ ಹೇಳ್ರಿ ಹೇಳ್ರಿ" ಎಂದು ನಾವೆಲ್ಲರೂ ಒತ್ತಾಯಪಡಿಸಿದೆವು.

"ಈಗ ಎರಡು ವರ್ಷಗಳಿಂದಲೂ ನಾನು ಹನುಮಾನ್‌ಗಲ್ಲಿಯಲ್ಲಿಯೇ ಇರುತ್ತಿದ್ದೇನೆ. ನಾನು ಈಗ ಇರುವ ಹಳೆಯಮನೆಯಲ್ಲಿಯೇ ನಡೆದ ಸಂಗತಿಯಿದು" ಎಂದು ಒಮ್ಮೆ ಹೊಗೆ ಬಿಟ್ಟು

ರಾಯರು ತಮ್ಮ ಕತೆಗೆ ಮೊದಲು ಮಾಡಿದರು: " ನನಗಿಂತಲೂ ಮೊದಲು ಬಾಡಿಗೆಗೆ ಇದ್ದ ಜನರು ಆ ಮನೆಯ ಗೋಡೆಗಳ ಮೇಲೆ ಗೀಟು ಹಾಕಿ, ಕೆದರಿ, ಏನೇನನೋ ಚಿತ್ರಗಳನ್ನು ತೆಗೆದಿದ್ದಾರೆ. ಅವರ ಈ ಕಲೆಗೆ ಪ್ರಕೃತಿಯ ಸಹಾಯಮಾಡಿದಂತೆ ಕಾಣುತ್ತದೆ. ಗೋಡೆಗಳಿಗೆ ನವುಳು ಹತ್ತಿ ಅಲ್ಲಲ್ಲಿ ಗೋಡೆಗಳ ಮೆತ್ತಿಗೆಯು ಬಿದ್ದುಹೋಗಿದೆ. ಇವೆರಡೂ ಕಾರ್ಯಗಳು ಸೇರಿ ಮಾಡಿದ ಕೃತಿಯು ತರತರದ ಚಿತ್ರಗಳ ರೂಪವನ್ನು ತಾಳಿದೆ. ನಾನು ಮಲಗುವ ಕೋಣೆಯಲ್ಲಿಯೂ ಅನೇಕ ಚಿತ್ರಗಳಿವೆ ಇಂತಹವು. ಅವುಗಳಲ್ಲಿ ಒಂದರಮೇಲೆ ಮಾತ್ರ ನನ್ನ ದೃಷ್ಟಿಯು ಬಹಳ ಸಲ ಹೋಗಿದೆ. ಅದು ನನ್ನ ಮಂಚದ ಪಕ್ಕದಲ್ಲಿಯೇ ಇದ್ದುದರಿಂದ ನನ್ನ ಮನಸ್ಸನ್ನು ಸೆಳೆಯಿತು. ಆ ಮನೆಗೆ ಹೋದಂದಿನಿಂದ ಪ್ರತಿದಿನ ಏಳುವಾಗಲೂ, ಮಲಗುವಾಗಲೂ ಅದರ ಕಡೆಗೆ ನೋಡಿ ನೋಡಿ ನನ್ನ ಕುತೂಹಲವು ಹೆಚ್ಚಿತು. ಅದರ ಆಕಾರವೇ ಕಾರಣ ಅದಕ್ಕೆ. ಅದೊಂದು ಮನುಷ್ಯನ ಮುಖವನ್ನು ಹೋಲುತ್ತಿತ್ತು. ಹಾಗೆಯೇ ನೋಡುತ್ತಾ ಕುಳಿತರೆ ನಿಜವಾಗಿ ಮನುಷ್ಯನೇ ಎಂಬ ಭಾಸವನ್ನುಂಟುಮಾಡುವುದು. ಈ ಮನುಷ್ಯನಂತೆಯೆ ಒಬ್ಬ ಮನುಷ್ಯನು ಎಲ್ಲಿಯಾದರೂ ಇರಬಹುದೇ ? ಎಂಬ ವಿಚಾರವನ್ನು ಅನೇಕ ಸಲ ಮಾಡಿದ್ದೇನೆ.

ಈಗ ಆರುತಿಂಗಳ ಹಿಂದೆ ನನಗೆ ಇನ್‌ಫ್ಲುಎಂಝಾ ಆದಾಗ ಎಲ್ಲಿಯೂ ಹೊರಗೆ ಹೋಗಲಿಕ್ಕೆ ಆಗಲಿಲ್ಲ. ಹಾಸಿಗೆಯನ್ನೇ ಹಿಡಿದಿದ್ದೆ. ಯಾವುದೋ ಒಂದು ಪುಸ್ತಕವನ್ನು ಓದುವುದು ಇಲ್ಲವೆ ಆ ಮುಖದ ಕಡೆಗೆ ಬಿಟ್ಟುಬಿಡದೆ ನೋಡುವದು ಇವೇ ಉದ್ಯೋಗಗಳು. ಹೀಗೆ ಹದಿನೈದು ದಿನಗಳನ್ನು ಕಳೆಯುವ ಹೊತ್ತಿಗೆ, ಆ ಮುಖದಲ್ಲಿ ಒಂದುತರದ ಕಳೆಯು ಕಾಣಲಾರಂಭಿಸಿತು. ಅದು ಒಂದು ನಿಜವಾದ ವ್ಯಕ್ತಿ ಎಂಬ ಭರವಸೆಯನ್ನುಂಟುಮಾಡಿತು. ಅದರಂತಹ ಒಬ್ಬ ಮನುಷ್ಯನು ಎಲ್ಲಿಯಾದರೂ ಇರುವನೆಂದಿದ್ದ ಬರಿಯ ಕಲ್ಪನೆಯು ದೃಢವಿಶ್ವಾಸವಾಗಿ ಪರಿಣಮಿಸಿತು.

ನಾನು ಬೇನೆಯಿಂದ ಎದ್ದಬಳಿಕ, ನನ್ನ ದೈನಿಕ ಕಾರ್ಯಗಳಲ್ಲಿ ಮನಸ್ಸುಹಾಕುವುದನ್ನು ಬಿಟ್ಟು, ಆ ಚಿತ್ರಗತ ವ್ಯಕ್ತಿಯ ಶೋಧದಲ್ಲಿ ಹಾಕಿದೆ. ಪೇಟೆಯಲ್ಲಿ ಹೋದಾಗ ಯಾವಾಗಲೂ ಜನರ ಮುಖಗಳನ್ನೇ ತೀಕ್ಷ್ಣವಾಗಿ ಪರಿಶೀಲಿಸುವುದು. ಗುಂಪುಗಳಿದ್ದಲ್ಲಿ ಹೋಗುವುದು. . ಹೀಗೆಯೇ ನಡೆಯಿತು. ' ಎಲ್ಲಿದ್ದರೂ ಆ ಮನುಷ್ಯನನ್ನು ನೋಡಬೇಕು' ಎಂಬ ಆಶೆಯು ಪ್ರಬಲವಾಯಿತು. ಕೇವಲ ಆ ವ್ಯಕ್ತಿಯನ್ನು ಹುಡುಕುವುದೇ ಉದ್ಯೋಗವಾಯಿತು. ಬಸು ನಿಲ್ದಾಣಗಳಿಗೆ ಹೋಗುವುದು; ದೊಡ್ಡ ಸಭೆಗಳಿಗೆ, ಲೆಕ್ಚರುಗಳಿಗೆ, ನಾಟಕ-ಸಿನೇಮಾ ಗೃಹಗಳಿಗೆ ಹೋಗುವುದು; ಸುಮ್ಮನೆ ಜನರ ಮುಖಗಳನ್ನು ಬಿಟ್ಟುಬಿಡದೆ ನೋಡುವುದು; ಆ ವ್ಯಕ್ತಿಯು ಸಿಕ್ಕದಿದ್ದರೆ ಹತಾಶನಾಗಿ ತಿರುಗುವುದು. ರಸ್ತೆಯ ಮೇಲಿನ ಪೋಲೀಸನು ಕೂಡ ನನ್ನನ್ನು ಹುಚ್ಚನೆಂದೇ ಭಾವಿಸಿರಬೇಕು. ಆದರೆ ನಾನು ಕೇವಲ ಪುರುಷರ ಮುಖಗಳನ್ನು ನೋಡುತ್ತಿದ್ದೆನೇ ಹೊರತು ಸ್ತ್ರೀಯರನ್ನು ನಾನೆಂದೂ ನೋಡಲಿಲ್ಲ. ಇಷ್ಟಾದರೂ ನನ್ನ ಹುಚ್ಚು ನನ್ನನ್ನು ಬಿಡಲೇ ಇಲ್ಲ. ದಿನದಿನಕ್ಕೂ ಬಲವಾಯಿತು. ಎಷ್ಟು ಹುಡುಕಿದರೂ ಸಿಕ್ಕಲೇ ಇಲ್ಲ " ಎಂದು ರಾಯರು ತಮ್ಮ ಹಣೆಯ ಬೆವರನ್ನು ಒರಸಿಕೊಂಡರು " ಆಮೇಲೆ? " ಎಂದು ನಾವು ಕುತೂಹಲವನ್ನು ಪ್ರದರ್ಶಿಸಿದೆವು.

" ಕೊನೆಗೆ ಒಂದು ದಿನ ಆ ವ್ಯಕ್ತಿಯನ್ನು ಕಂಡೆ " ಎಂದು ನಿಟ್ಟುಸಿರುಬಿಟ್ಟು ಆರಿಹೋದ ಸಿಗರೇಟನ್ನು ಪುನಃ ಹೊತ್ತಿಸಿ ಕತೆಗೆ ಪ್ರಾರಂಭಿಸಿದರು ವಾಸುದೇವರಾಯರು. "ನಮ್ಮೂರ ರೇಲ್ವೆಸ್ಟೇಷನ್ನಿನಲ್ಲಿ ಇಬ್ಬರು ಹೆಣ್ಣುಮಕ್ಕಳನ್ನು ಕರೆದುಕೊಂಡು ಒಂದನೆಯ ತರಗತಿಯ ಡಬ್ಬಿಯಲ್ಲಿ ಕುಳಿತಿದ್ದನು. ನನ್ನ ಸಂಶಯವೆಲ್ಲವೂ ನಿವಾರಣೆಯಾಯಿತು. ಅದೇ ವ್ಯಕ್ತಿ. ಆ ಹಣೆ, ಅಗಲವಾದ ಕಣ್ಣುಗಳು, ಅದೇ ಡೊಂಕು ಮೂಗು, ಚಿಕ್ಕ ಕಿವಿ ಎಲ್ಲವೂ ಆ ಚಿತ್ರದಲ್ಲಿದ್ದಂತೆಯೇ. ಮನಸ್ಸಿಗೆ ಹಿಡಿಸಲಾರದಷ್ಟು ಆನಂದವಾಯಿತು. ಕೂಡಲೆ ಮಾತನಾಡಿಸಬೇಕೆಂದು ಪ್ರಯತ್ನಮಾಡಿದೆ. ರೈಲುಬಿಟ್ಟಿತು. ಹತ್ತಿರ ಟಿಕೆಟ್ಟು ಇಲ್ಲದಿದ್ದರೂ ನಾನೊಂದು ಡಬ್ಬಿಯಲ್ಲಿ ಹತ್ತಿದೆ. ಅವನ ಹಿಂದೆ ಹೋಗಿಬಿಡುವುದು, ಅವನನ್ನು ಮಾತನಾಡಿಸುವುದು ಇಷ್ಟೇ ನನ್ನ ತಲೆಯಲ್ಲಿದ್ದುದು ಆಗ.

ಬೆಳಗಾಂವಿಯಲ್ಲಿ ಆತನು ಕೆಳಗಿಳಿದನು. ಇದೇ ಹೊತ್ತು ಎಂದು ಆತನ ಹತ್ತಿರ ಹೋದೆ. ಎದೆಯು ಡಬ ಡಬ ಬಡಿದುಕೊಳ್ಳುತ್ತಿತ್ತು. ' ನಿಮಗೆ ಒಂದು ಮುಖ್ಯವಾದ ಸಂಗತಿಯನ್ನು ತಿಳಿಸುವುದಿದೆ. ನಿಮ್ಮ ಅಡ್ರೆಸ್ಸು ಕೊಡುವಿರಾ ? ' ಎಂದು ಇಂಗ್ಲಿಷಿನಲ್ಲಿ ಕೇಳಿದೆ. ಆ ವ್ಯಕ್ತಿಗೆ ನನ್ನ ವರ್ತನೆಯು ಬಹಳ ವಿಚಿತ್ರವಾಗಿ ಕಂಡಿರಬಹುದು. ನನ್ನನ್ನು ಹುಚ್ಚನೆಂದೇ ನಿರ್ಧರಿಸಿರಬೇಕು. ಇವನ ಜೊತೆಗೆ ಏನು ಮಾತು ಎಂತಲೋ ಏನೋ, ತನ್ನ ವ್ಹಿಜಿಟಿಂಗ್ ಕಾರ್ಡು ಕೊಟ್ಟುಬಿಟ್ಟನು. ಅದನ್ನು ತೆಗೆದುಕೊಂಡವನೇ ಓದಿದೆ. ಒಂದು ಮೂಲೆಯಲ್ಲಿ ನಿಂತು ನೋಡಿದೆ.

ಹನುಮಂತರಾವ್ ಭಿಂತೀಕರ್

ಹಾರ್ನಬೀ ರೋಡ್,

ಮುಂಬಯಿ

ಎಂದು ಬರೆದಿತ್ತು; ಕಣ್ಣಿಗೆ ಕತ್ತಲು ಕವಿಯಿತು. ಮುಂದೇನು ಆಯಿತೋ ಏನೋ.

ನಾನು ಏಳುವ ಹೊತ್ತಿಗೆ ಆಸ್ಪತ್ರೆಯಲ್ಲಿಯ ನರ್ಸ್ ಒಬ್ಬಳು ಬಂದು "ಸ್ವಸ್ಥವಾಗಿದೆಯೇ?" ಎಂದಳು. ಸ್ವಲ್ಪ ಚೇತರಿಸಿಕೊಂಡು " ಹುಂ " ಎಂದೆ. ಅಲ್ಲಿಂದ ಹೊರಗೆ ಬರುವುದರೊಳಗಾಗಿ ನನ್ನ ಮುಂಬೈಯಲ್ಲಿಯ ಮಿತ್ರರೆಲ್ಲರಿಗೂ ಕಾಗದಹಾಕಿದೆ . . ಆ ವ್ಯಕ್ತಿಯ ಸಂಪೂರ್ಣ ಪರಿಚಯವನ್ನು ಕೊಡಿರೆಂದು. ಎಲ್ಲರಿಂದಲೂ ಅದೇ ಉತ್ತರ, ಅಷ್ಟೇ ಪರಿಚಯ: ಅವನೊಬ್ಬ ದೊಡ್ಡ ಲಕ್ಷಾಧೀಶ. ಅವನ ಊರು ಎಲ್ಲಿಯೋ ಸಾತಾರಾದ ಹತ್ತಿರ. . ಎಂದು. ಅದರ ಮೇಲೆ ಏನು ಮಾಡಿದರೂ ಹೆಚ್ಚಿಗೆ ಹಕೀಕತ್ತು ಸಿಗಲಿಲ್ಲ.

ಮೊನ್ನೆ ರಾತ್ರಿ ಏನೋ ಯೋಚನೆಮಾಡುತ್ತ ಮಲಗುವ ಹೊತ್ತಿಗೆ, ರಾತ್ರಿ ಒಂದು ಗಂಟೆಯಾಗಿತ್ತು. ಹೀಗಾಗಿ ನಿನ್ನೆ

ಬೇಗಿನಲ್ಲಿ ಏಳುವುದಕ್ಕೆ ತಡವಾಯಿತು. ಸೂರ್ಯನ ಕಿರಣಗಳು ನನ್ನ ಕೋಣೆಯನ್ನು ಪ್ರವೇಶಿಸಿದ್ದುವು. ಕಣ್ಣನ್ನು ಉಜ್ಜುತ್ತ ಎದ್ದೆ. ದಿನದಂತೆ ಗೋಡೆಯ ಕಡೆಗೆ ನೋಡಿದೆ, ಆದರೆ ಬೆಚ್ಚಿಬಿದ್ದೆ. ಪ್ರತಿದಿನವೂ ಸ್ವಚ್ಛವಾಗಿ ಕಾಣುವ ಚಿತ್ರವು ಅಂದು ಮಸಕಾಗಿ ಹೋಗಿತ್ತು. ಮನಸ್ಸಿಗೆ ಮಂಕುಹಿಡಿಯಿತು. ಎದ್ದು ಮೋರೆ ತೊಳೆದುಕೊಂಡು ವರ್ತಮಾನಪತ್ರವನ್ನು ಓದುವ ಆಶೆಯಿಂದ ತೆಗೆದುಕೊಂಡರೆ ಅದರ ಮೇಲೆ ದೊಡ್ಡ ಅಕ್ಷರಗಳಿಂದ ಬರೆದಿತ್ತು.. "**ಬೊಂಬಾಯಿ ಲಕ್ಷಾಧೀಶರಿಗೆ ಅಪಘಾತ**' ಎಂದು. ಒಳಗೆ ನೋಡಿದರೆ ಹನುಮಂತರಾವ್ ಛಿಂತೀಕರರು ಮೋಟಾರಿನಲ್ಲಿ ಸಿಕ್ಕು ಬಹಳ ಗಾಯಹೊಂದಿರುವರೆಂದೂ ಆಸ್ಪತ್ರೆಯಲ್ಲಿ ಬಹಳ ಚಿಂತಾಜನಕಸ್ಥಿತಿಯಲ್ಲಿರುವರೆಂದೂ ಬರೆದಿತ್ತು. ನೀವೆಲ್ಲರೂ ನೋಡಿರಬಹುದು ನಿನ್ನಿನ ಪೇಪರಿನಲ್ಲಿ ಈ ಸುದ್ದಿಯನ್ನು. ಪೇಟೆಯಲ್ಲಿ ಹೋಗಿ ಮನೆಗೆ ಬರುವಹೊತ್ತಿಗೆ ಗೋಡೆಯ ಮೇಲಿನ ಚಿತ್ರವು ಸಂಪೂರ್ಣವಾಗಿ ಅಳಿಸಿಹೋಗಿತ್ತು. ಮಧ್ಯಾಹ್ನದ ಪೇಪರಿನಲ್ಲಿ ಅವರ ನಿಧನದ ವಾರ್ತೆಯನ್ನು ಓದಿದೆ. ಬಹಳವಾಗಿ ಚಿತ್ರವು ಅಳಿಸುವುದೂ, ಅವರ ಮರಣವೂ ಏಕಕಾಲಕ್ಕೆ ಆಗಿರಲು." ಎಂದು ಹೇಳಿ ರಾಯರು ಸುಮ್ಮನಾದರು..

"ಬಹಳ ಚಮತ್ಕಾರವಾದ ಸಂಗತಿ" ಎಂದು ನಾವೆಲ್ಲರೂ ಆಶ್ಚರ್ಯವನ್ನು ಸೂಚಿಸಿದೆವು. "ಇದರಲ್ಲಿ ಮೂರು ಸೋಜಿಗದ ವಿಷಯಗಳಿವೆ." ಎಂದರು ವಾಸುದೇವರಾಯರು. "ಏನು ಏನು?" ಎಂದೆವು. "ಮೊದಲನೆಯದು ಗೋಡೆಯ ಮೇಲಿನ ಚಿತ್ರಕ್ಕೂ ಅದರ ಇರುವಿಕೆಗೂ ಮತ್ತು ಒಂದು ನಿಜವಾದ ವ್ಯಕ್ತಿಯ ಜೀವನಕ್ಕೂ ಇರುವ ನಿಕಟಸಂಬಂಧ. ಎರಡನೆಯದು ಆ ವ್ಯಕ್ತಿಯ ಹೆಸರು ಮತ್ತು ಆ ಚಿತ್ರದ ಸ್ಥಳ ಇವುಗಳಿಗೆ ಇರುವ ಹೋಲಿಕೆ" ಎಂದು ಎದ್ದರು. "ಹೌದು ನೋಡ್ರಿ, ಬಹಳ ವಿಚಿತ್ರ. ಹೀಂಗ ಇರೂದು ಅಗ್ದೀ ಅಪರೂಪ" ಎಂದು ನಾವು ಎನ್ನುವ ಹೊತ್ತಿಗೆ, ವಾಸುದೇವರಾಯರ ಬಾಗಿಲಿಗೆ ಹೋಗಿದ್ದರು. "ಮತ್ತೆ ಮೂರನೆಯದು?" ಎಂದು ನಮ್ಮೊಳಗೆ ಯಾರೋ ಉಸುರಿದರು. "ಅದೇನೂ ಅಷ್ಟು ಮಹತ್ವದ್ದಲ್ಲ. ಈಗ ಅರ್ಧ ಗಂಟೆಯಲ್ಲಿ ನಾನೇ ಕಲ್ಪಿಸಿದೆ ಈ ಕಥೆಯನ್ನು" ಎಂದು ಹೇಳಿಯೇ ಬಿಟ್ಟರು. "ಏನೋ ರಂಗಾ,—" ಎಂದು ನಾನು ಎನ್ನುವ ಹೊತ್ತಿಗೆ ನಮ್ಮ ರಂಗನೂ ಇರಲಿಲ್ಲ ಅಲ್ಲಿ. *

* ಇಂಗ್ಲಿಷ್ ಕತೆಯೊಂದನ್ನು ಓದಿದ ನೆನಪಿನಿಂದ ಬರೆದುದು.

★ ಕರ್ಣಾಟಕ ಜನಜೀವನ ★

(ಸಂಶೋಧನಾತ್ಮಕ ಗ್ರಂಥ)

ಬರೆದವರು : ಬೆಟಗೇರಿ ಕೃಷ್ಣಶರ್ಮ

ಮುಂಬಯಿ ಸರಕಾರದ ಸಂಸ್ಕೃತಿ ಸಂಶೋಧನ ಸಮಿತಿಯ ಪ್ರೋತ್ಸಾಹದಿಂದ ಪ್ರಕಟವಾಗಿದೆ.

ಮೊನ್ನೆ ಮೊನ್ನೆಯೆ ಅಚ್ಚಾಗಿ ಹೊರಕ್ಕೆ ಬಂದಿದೆ.

ಪ್ರೊ. ಜಾಗಿರದಾರರು ವಿಚಾರಪ್ರಚೋದಕ ಮುನ್ನುಡಿಯನ್ನು ಬರೆದಿದ್ದಾರೆ.

ಸುಂದರ ಪ್ರತಿಗೆ ೧-೮-೦. ಕ್ಯಾಲಿಕೊ ಪ್ರತಿಗೆ ೨-೦-೦

ಬೇಕಾದವರು 'ಜಯಂತಿ' ಕಾರ್ಯಾಲಯಕ್ಕೆ ಬರೆಯಿರಿ!

(೩೦ನೆಯ ಪುಟದಿಂದ ಮುಂದುವರಿದುದು.)

ಗತ್ತಿನ ಐಕ್ಯವನ್ನು ಹೋಗಲಾಡಿಸುವ ಸ್ತಿಕವಾದವನ್ನೇ ನಿರ್ಮೂಲಿಸಿದರೆ, ಲ್ಲಿಡೆಗೂ ನಾಸ್ತಿಕವಾದವು ಹಬ್ಬಿ, ಜನರು ಪ್ರಯತ್ನವಾದಿಗಳಾಗಿ, ಎಲ್ಲರೂ ಸಮರೆಂಬ ವನೆಯನ್ನು ತಾಳಿ ಸಮತೆಯಿಂದ ಲ್ಲರೂ ಪ್ರೀತಿಯಿಂದ ನಡೆಯಬಹು ಾಗಿದೆ.

ಒಳ್ಳೆಯ ಸಂಸ್ಕಾರಗಳಲ್ಲಿ ಬೆಳೆದ ನಾಗ- ರಿಕನು ಈ ರೀತಿ ಬುದ್ಧನಾಗಿರುವನು, ಬುದ್ಧಿಶಾಲಿಯಾಗಿರುವನು. ನೀತಿವಂತ- ನಾಗಲಿಕ್ಕೆ ಅವನಿಗೆ ದೇವರ ಅವಶ್ಯಕತೆ ಇಲ್ಲ. ಅಹಿಂಸೆಯಿಂದಿರಲಿಕ್ಕೆ ಅವನಿಗೆ ಪಾದ್ರಿ, ಜಂಗಮ, ಆಚಾರ್ಯ, ಮುಲ್ಲಾ, ಮೊದಲಾದವರು ಕಿವಿಯಲ್ಲಿ ಹೇಳಿದ ಸಾಂಪ್ರದಾಯಿಕ ಧರ್ಮ ಬೇಕಿಲ್ಲ. ಜ್ಞಾನವನ್ನು ತಾಳಲಿಕ್ಕೆ 'ಹೇಳಿದವರಿಲ್ಲದಾ ಕೇಳಿಕೆ'ಗಳ ಆವಶ್ಯಕತೆ ಇಲ್ಲ. ಅವನ ಬುದ್ಧಿಯೇ ಅವನಿಗೆ ಗುರು. ಬುದ್ಧಿಗೇಡಿ ಭಗವಂತನು ಜಗದೀಶನೆಂದು ನಂಬಿ ನಾವು ಅವನ ಆಡಿಯಾಳ್ಗಳಾಗುವುದಕ್ಕಿಂತ ನಮ್ಮ ವಿಶ್ವವು ನಿರೀಶ್ವರವಾದುದೆಂದು ನಂಬಿ, ಅದರ ಗುಣ-ದೋಷಗಳಿಗೆ ನಾವೆಲ್ಲರೂ ಒಟ್ಟಾರೆ ಹೊಣೆ ಎಂದು ಅರಿತು ವಿಶ್ವದ ಸುಧಾರಣೆಗಾಗಿ, ಪ್ರಯತ್ನವಾದಿಗಳಾದ ನಾಸ್ತಿಕರಾಗುವುದೇ ಲೇಸವಲ್ಲವೇ?

ಬುದ್ಧಿಯಿಂದರಿಯುವುದು |
ಬುದ್ಧನಾಪದ್ಧತಿಯು |
ಬುದ್ಧನಂ ಸಹ ಬುದ್ಧಿಯೊಪ್ಪದೆಯೆ
ನಂಬರು |
ಬುದ್ಧರೆಂಬವರು ಸರ್ವಜ್ಞ ||

ಕನ್ನಡಿಗರಾದ ಅಕೌಂಟೆಂಟ್ ಜನರಲ್ಲರು

★

ಸರ್. ಪಿ. ಆರ್. ರಾವ್ ಅವರು.

ಸರ್. ಪಿ. ರಾಘವೇಂದ್ರರಾವ್

ಎಂ. ಎ., ಸಿ. ಐ. ಇ

★

ಕನ್ನಡದೇವಿಯ ಹೊಟ್ಟೆಯಿಂದಲೆ ಹುಟ್ಟಿ, ತಮ್ಮ ಬುದ್ಧಿಶಕ್ತಿಯಿಂದ ಎಲ್ಲೆಲ್ಲಿಯೊ ಮಿಂಚಿ ಮಿರುಗುತ್ತಿರುವ ಕನ್ನಡಿಗರು ಎಷ್ಟೋ ಜನರು. ಆದರೆ ಸರ್. ಪಿ. ರಾಘವೇಂದ್ರರಾಯರಂತೆ ಕನ್ನಡತನದ ಅರಿವನ್ನು ಕಾಯ್ದುಕೊಂಡಿರುವವರು ತೀರ ಕಡಿಮೆ. ಕರ್ನಾಟಕದ ಸಂಘಟನೆಗೆ ಈ ಹೊರಗಿನ ಜನರ ಕನ್ನಡದ ಅರಿವೂ ತುಂಬ ಅವಶ್ಯಕ ವಿಷಯವಾಗಿದೆ; ಆ ದ ರೆ.... !

★

ಸಂದರ್ಶನವೆಂದರೆ ಒಂದು ಪರೀಕ್ಷೆಯಿದ್ದಂತೆ! ಹೊಸ ಹೊಸ ಪ್ರಶ್ನೆಗಳಿಗೆ ಉತ್ತರಗಳನ್ನು ಸಿದ್ಧಮಾಡಬೇಕಾದರೆ ವಿದ್ಯಾರ್ಥಿಗಳಿಗೆ ತುಂಬ ಪರಿಶ್ರಮಪಡಬೇಕಾಗುವಂತೆ, ಆ ಪ್ರಶ್ನೆಗಳನ್ನು ತೆಗೆಯುವ ಪರೀಕ್ಷಕರಿಗೂ ಅವುಗಳನ್ನು ಹುಡುಕಿ ತೆಗೆಯುವುದೊಂದು ಬಹು ತೊಂದರೆಯ ಕೆಲಸ. ಅದರಂತೆಯೆ ಸಂದರ್ಶನದ ವಿಷಯ. ಆ ದಿನ ಮುಂಜಾನೆ ೧೧ ಗಂಟೆಗೆ ನಾನು ಮುಂಬಯಿ ಸರಕಾರದ **ಅಕೌಂಟೆಂಟ್ ಜನರಲ್ಲರಾದ ಸರ್ ಪಣಂಬೂರು ರಾಘವೇಂದ್ರರಾಯರನ್ನು** ಕಾಣಲಿಕ್ಕೆ ಹೋದಾಗ ಅವರು 'ಹಂ ಏನು ಕೇಳುವುದಿದೆ ಕೇಳಿರಿ' ಎಂದು ಆಹ್ವಾನ' ಮಾಡಿ, ಎಂತಹ ಪ್ರಶ್ನೆಗಳು ಬಂದರೂ ಎದುರಿಸುವ ಸಿದ್ಧತೆಯಿಂದ ನನ್ನೆದುರು ಕುಳಿತುಕೊಂಡರು. ಆದರೆ ನಾನು ಮಾತ್ರ ಆಗ ಕೊಂಚ ದಿಗಿಲುಬಡೆದವನಂತಾದೆ. ಏನು ಕೇಳಬೇಕೆಂಬುದು ಒಮ್ಮೆಲೆ ಹೊಳೆಯದಾಯಿತು. ಅದಕ್ಕಾಗಿ ತುಸುವೇಳೆ ಸುಮ್ಮನಿದ್ದೆ. ಆದರೆ ಆ ನನ್ನ ಪೇಚಾಟವನ್ನು ಕಂಡು ಅವರಿಗೆ ಕನಿಕರ ಬಂದಿತೋ ಏನೋ! ಅವರು ಒಮ್ಮೆಲೆ "ಕೊಂಚ ತಡೆಯಿರಿ, ನನ್ನ ಗೆಳೆಯರೊಬ್ಬರು ಒಂದು ಪತ್ರಿಕೆಯಲ್ಲಿ ಒಳಗಣೆ ನನ್ನ ವಿಷಯವಾಗಿ ಒಂದೆರಡು ಮಾತುಗಳನ್ನು ಬರೆದಿರುವರು. ಅದನ್ನು ನಿಮಗೆ ತಂದುಕೊಡುವೆ, ಅದು ನಿಮಗೇನಾದರೂ ಸಹಾಯಕಾರಿಯಾಗುವುದೇನೋ ನೋಡಿರಿ. ಆಮೇಲೆ ಮತ್ತೇನನಾದರೂ ಕೇಳುವುದಿದ್ದರೆ ಕೇಳುವಿರಂತೆ" ಎಂದು ಹೇಳಿ ಎದ್ದರು. ನಾನು ಹಾಗೆಯೆ ಆಗಲಿ' ಎನ್ನುವಷ್ಟರಲ್ಲಿ ಅವರು ಅದನ್ನು ತೆಗೆದುಕೊಂಡು ಬಂದೇ ಬಿಟ್ಟಿದ್ದರು. ಅದಕ್ಕೆ ಮತ್ತೆ ನಾನು "ಇದಂತೂ ಆಯಿತು, ಇನ್ನು ನಾನು ಒಂದೆರಡು ಸಂಗತಿಗಳನ್ನು ಕೇಳುವೆ" ಎಂದೆ. "ಹುಂ ಆಗಲಿ" ಎಂದು ನಗುತ್ತ ಅವ[ರು] ನನ್ನ ಬಳಿಯಲ್ಲಿ ಬಂದು ಕುಳಿತರು.

* * *

ಸರ್ ರಾಘವೇಂದ್ರರಾವ್ ಅವರ ಊರು ಮಂಗಳೂರಿನಿ[ಂದ] ಆರುಮೈಲಿನ ಮೇಲಿದ್ದ **ಪಣಂಬೂರು** ಎಂಬುದು. ಇವ[ರು] ೧೮೮೯ನೆಯ ಇಸವಿಯ ಮೇ ೨೪ನೆಯ ತಾರೀಖಿನ ದಿನ ಜನಿ[ಸಿ] ಕುಂದಾಪುರ ಹಾಯ್‌ಸ್ಕೂಲಿನಲ್ಲಿ ಮಾಧ್ಯಮಿಕ ಶಿಕ್ಷಣವ[ನ್ನು] ಪಡೆದರು. ಮುಂದೆ ಮಂಗಳೂರಿನ ಗವ್ಹರ್ನಮೆಂಟ್ ಕಾಲೇ[ಜಿ]ನಲ್ಲಿಯೂ, ಮದ್ರಾಸ್ ಕ್ರಿಶ್ಚನ್ ಕಾಲೇಜಿನಲ್ಲಿಯೂ ಉ[ಚ್ಚ] ಶಿಕ್ಷಣವನ್ನು ಪಡೆದರು. ಇವರದು ಮೊದಲಿನಿಂದಲೂ ಗಣಿ[ತ] ವಿಷಯದ ಮೇಲೆ ತುಂಬ ಪ್ರೀತಿ. ಆದರೂ ಇವರು ಬಿ.[ಎ.] ಪರೀಕ್ಷೆಗೆ ಕನ್ನಡವನ್ನು ತೆಗೆದುಕೊಂಡಿದ್ದರು. ಎಂ.[ಎ.] ಪರೀಕ್ಷೆಗೆ ಅಭ್ಯಾಸಮಾಡುವಾಗ ಇವರು ಸಂಸ್ಕೃತ ಹಾಗೆ ಫ್ರೆಂಚ್ ವಿಷಯಗಳನ್ನು ಐಚ್ಛಿಕವಿಷಯವನ್ನಾಗಿ "ಭ್ಯಾಸಮಾ[ಡು]ತ್ತಿದ್ದರು.

ಸರ್ ಪಿ. ಆರ್. ರಾವ್ ಅವರು ತಮ್ಮ ವರ್ಗದಲ್ಲಿ ಮೊದಲಿ[ನಿಂ]ದಲೂ ಅಗ್ರಗಣಿಗಳು. ಮದ್ರಾಸ್ ಯುನಿವ್ಹರ್ಸಿಟಿಯ ಮ್ಯಾಟ್ರಿ

ಪ್ರೊ. ಪಾಟೀಲ ಹನುಮಂತರಾಯರು ಎಂ. ಎ.,

ಅರವಿಂದ

ಪರೀಕ್ಷೆಯಲ್ಲಿ ಇವರು ಪ್ರಥಮಸ್ಥಾನವನ್ನು ಪಡೆದರು. ಮುಂದೆ ಮಂಗಳೂರು ಕಾಲೇಜಿನ ಎಫ್. ಎ. ಪರೀಕ್ಷೆಯಲ್ಲಿಯೂ, ಯುನಿವರ್ಸಿಟಿಯ ಬಿ. ಎ. ಪರೀಕ್ಷೆಯಲ್ಲಿಯೂ ತಮ್ಮ ಮೊದಲನೆಯ ಸ್ಥಾನವನ್ನೇನೂ ಬಿಡಲಿಲ್ಲ. ಬಿ ಎ. ಪರೀಕ್ಷೆಯಲ್ಲಿ ಇವರಂತೆಯೆ ಗಣಿತ, ಕನ್ನಡ ಹಾಗು ಇಂಗ್ಲಿಷ್ ವಿಷಯಗಳನ್ನು ತೆಗೆದುಕೊಂಡು ಮೊದಲು ನಂಬರು ಬಂದ ಇಬ್ಬರಲ್ಲಿ ಇವರೊಬ್ಬರು; ಇನ್ನೊಬ್ಬರು ಕೆಲಕಾಲ ಕಲಕತ್ತೆಯ ಹಾಯ್‌ಕೋರ್ಟಿನಲ್ಲಿ ನ್ಯಾಯಮೂರ್ತಿಗಳಾಗಿದ್ದ **ಸರ್ ಬಿ. ಎನ್. ರಾವ್**, ಎಂ. ಎ., ಐ. ಸಿ. ಎಸ್., ಸಿ. ಐ. ಇ. ಅವರು. ೧೯೦೬ ನೆಯ ಇಸವಿಯಲ್ಲಿ ಪ್ರಥಮಸ್ಥಾನವನ್ನು ಪಡೆದ **ಸರ್ ಬಿ. ಎನ್. ರಾವ್** ಅವರೂ, ೧೯೦೮ ರಲ್ಲಿ ಮೊದಲನೆಯ ಸ್ಥಾನವನ್ನು ಪಡೆದ **ಸರ್ ಪಿ. ಆರ್. ರಾವ್** ಅವರೂ ದಕ್ಷಿಣಕನ್ನಡ ಜಿಲ್ಲೆಯವರೇ ಎಂಬುದು ಕರ್ನಾಟಕಕ್ಕೆ ಒಂದು ಅಭಿಮಾನದ ಸಂಗತಿ !

ಮೊದಲೆ ಗಣಿತದಲ್ಲಿ ಪ್ರಾವೀಣ್ಯ; ಅದರಲ್ಲಿ ಪರೀಕ್ಷೆಯಲ್ಲಿ ಉಚ್ಚ-ಸ್ಥಾನವನ್ನೂ ಪಡೆದಿದ್ದರು. ಅದಕ್ಕಾಗಿ ಇವರಿಗೆ ಐ. ಸಿ. ಎಸ್.ಗೆ ಹೋಗಲು ಕೂಡಲೆ ಧನಸಹಾಯವು ದೊರೆಯುವಂತಿತ್ತು. ಆದರೆ ಸಾಂಪ್ರದಾಯಿಕವಾದ ಇವರ ಕುಟುಂಬದಲ್ಲಿ ಕೆಲವರು ಅದಕ್ಕೆ ಅಸಮ್ಮತಿಯನ್ನು ತೋರಿಸಲು, ಆಗ ಇವರು ಐ. ಸಿ. ಎಸ್. ಪರೀಕ್ಷೆಗಾಗಿ ಇಂಗ್ಲಂಡಿಗೆ ಹೋಗುವುದನ್ನು ಬಿಟ್ಟುಬಿಟ್ಟರು. ಆದರೆ ಈಗ ಇವರು ಎಷ್ಟೋ ಜನ ಐ. ಸಿ. ಎಸ್. ಆಫೀಸರರಿಗಿಂತ ಉತ್ತಮವಾದ ಪದವಿಯಲ್ಲಿರುವರು, ಆ ಮಾತು ಬೇರೆ !

೧೯೧೩ನೆಯ ಇಸವಿಯಲ್ಲಾದ Competetive Examination ನಲ್ಲಿ **ರಾಘವೇಂದ್ರರಾವ್** ಅವರ ಆಯ್ಕೆಯಾಗಿ, ಇವರು **ಇಂಡಿಯನ್ ಆಡಿಟ್** ಮತ್ತು **ಅಕೌಂಟ್ಸ್** ಖಾತೆಯನ್ನು ಸೇರಿದರು. ಮುಂದೆ ಅಕೌಂಟ್ಸಿನ ವಿವಿಧಕಚೇರಿಗಳಲ್ಲಿ ಇವರು ಕೆಲಸ ಮಾಡಿ, ೧೯೨೧ ರಲ್ಲಿ Government of India Secretariatಇನ ಹಣಕಾಸಿನ ಖಾತೆಯಲ್ಲಿ ಪ್ರವೇಶಿಸಿದರು. ಆ ಸ್ಥಳದ ಆಯ್ದು ವರುಷಗಳ ಅವಧಿಯಲ್ಲಿಯೆ ಅವರು, Lee Commissionಇನ ಕಾರ್ಯದರ್ಶಿಯೆಂದೂ ಕೆಲಸಮಾಡಿದರು. ಮುಂದೆ ೧೯೨೬ ರಲ್ಲಿ ರೇಲ್ವೆ ಡಿಪಾರ್ಟ್‌ಮೆಂಟಿನಲ್ಲಿ ಹೋಗಿ, ೧೯೩೮ ರಲ್ಲಿ Director of Finance ಎಂದೂ, ೧೯೩೯-೪೭ರ ವರೆಗೆ Financial Commissioner ಎಂದೂ ಇದ್ದರು. ಈ ಸ್ಥಾನವು ದೊರೆತ ಮೊದಲನೆಯ ಭಾರತೀಯರೆಂದರೆ ಇವರೆ ! ಆ ಜಾಗೆಯ ಐದುವರುಷಗಳು ಮುಗಿಯುತ್ತಲೆ, ಈಗ ಇವರು ಈ ಪ್ರಾಂತದ ಅಕೌಂಟಂಟ್ ಜನರಲ್ಲರೆಂದು ನಿಯಮಿಸಲ್ಪಟ್ಟಿದ್ದಾರೆ. ೧೯೪೨ನೆಯ ಇಸವಿಯ ಫೆಬ್ರುವರಿ ತಿಂಗಳಲ್ಲಿ ಇವರಿಗೆ '**ಸರ್**' ಪದವಿಯು ದೊರೆತಿದೆ.

ಸರ್ **ರಾಘವೇಂದ್ರರಾವ್** ಅವರದು ಶಾಂತಸ್ವಭಾವ. ಮೊದಲನೆಯ ಸಲ ನಾವು ಅವರನ್ನು ಭೆಟ್ಟಿಯಾಗಿ ಇಂತಹ ಕೆಲಸಕ್ಕೆ ಬಂದಿದ್ದೇವೆ ಎಂದು ಹೇಳಿದರೆ ಅವರು "ನನಗೆ ಹೀಗೆ 'ಜಾಹೀರಾತು' ಮಾಡಿಕೊಳ್ಳುವುದು ಸೇರುವುದಿಲ್ಲ" ಎಂದರು. ಆದರೆ ಮುಂದೆ ಸಂದರ್ಶನದ ಕಾಲಕ್ಕೆ ನಾನು "ಮುಂಬಯಿಯಲ್ಲಿ ಇಷ್ಟೊಂದು ಕನ್ನಡಸಂಸ್ಥೆಗಳಿವೆ. ಅವುಗಳ ಕೈಯಿಂದ ನೀವು ಹೇಗೆ ಪಾರಾಗಿರುವಿರಿ?" ಎಂದು ಚೇಷ್ಟೆಗಾಗಿ ಕೇಳಿದೆ. ಅದಕ್ಕವರು ಹೇಳತೊಡಗಿದರು: "ನಾನೇನು ಪಾರಾಗಿಲ್ಲ. ಎಷ್ಟೋಸಲ ಭಾಷಣಕ್ಕೆಂದು ಹೋಗಿರುವೆ. ಅದಕ್ಕಾಗಿಯೆ ಇಂತಹ ತೊಂದರೆಯ ಪ್ರಸಂಗಗಳು ಬಹಳ ಬರಬಾರದು ಎಂದು, ನಾವು ಇವೆಲ್ಲ ಸಂಸ್ಥೆಗಳನ್ನು ಒಂದುಗೂಡಿಸುವ ಯೋಜನೆಯನ್ನು ಕೆಲವು ದಿನ ಮಾಡಿದೆವು. ಇಲ್ಲಿ ಕನ್ನಡಿಗರು ಬಹಳ ಜನರಿರುವರು. ಕನ್ನಡಸಂಸ್ಥೆಗಳೂ ತುಂಬ ಇವೆ. ಅವುಗಳಿಗೆ ಮಾಡಬೇಕಾದ ಕೆಲಸವೂ ಸಾಕಷ್ಟಿದೆ. ಆದರೆ ಆ ಸಂಸ್ಥೆಗಳ ಸಂಖ್ಯೆಯು ದೊಡ್ಡದಿರುವುದರಿಂದ, ಈಗ ಯಾವ ಸಂಸ್ಥೆಯೂ ಏನನ್ನೂ ಮಾಡಲಾರದು.... ಹೀಗಾಗಿದೆ. ಈಗ ಭಾಷೆಯದೇ ಒಂದು ಪ್ರಶ್ನೆ. ನಿಮ್ಮ ಧಾರವಾಡ ಕನ್ನಡವು ತುಂಬ ಮರಾಟಿಯಿಂದ ಬೆರೆತುಹೋಗಿರುತ್ತದೆ; ಆದರೆ ಮೈಸೂರಿನ ಕನ್ನಡ ಹಾಗಿರುವುದಿಲ್ಲ. ಅದರಲ್ಲಿ ಕೊಂಚ ಇಂಗ್ಲಿಷ್ ಮಿಶ್ರಣವಿದ್ದರೂ ಅದೆಷ್ಟೋ ವಾಸಿ. ಮುಂಬಯಿಯಂತಹ ಊರಲ್ಲಿ ಈ ಎಲ್ಲ ಸೀಮೆಗಳ ಜನರಿರುವುದರಿಂದ, ಅವರೆಲ್ಲರೂ ಒಂದೆಡೆ ಸೇರಿದರೆ ಮಾತನಾಡುವ ಕನ್ನಡವೂ, ಬರೆಯುವ ಕನ್ನಡವೂ ಮೈಸೂರು, ಮಂಗಳೂರು, ಧಾರವಾಡ ಮುಂತಾದ ಎಲ್ಲ ಸೀಮೆಗಳಲ್ಲಿಯೂ ಒಂದಾಗುವಂತೆ ಮಾಡುವ ಹಂಚಿಕೆಗಳನ್ನು ಹಾಕಲೂ, ಯೋಜನೆಗಳನ್ನು ಕೈಕೊಳ್ಳಲು ಶಕ್ಯವಾಗುತ್ತದೆ...." ಎಂದು ತಡೆದರು. ಒಂದು ನಗೆಮಾತಿನಿಂದ ಆರಂಭಮಾಡಿದವರು, ಕನ್ನಡಸಂಸ್ಥೆಗಳ ವಿಷಯವಾಗಿ ತಮ್ಮ ಅನುಭವಗಳನ್ನೂ ಕನ್ನಡನುಡಿಯ ಬಗೆಗೆ ತಮ್ಮ ಚೊಕ್ಕಟವಾದ ಅಭಿಪ್ರಾಯವನ್ನೂ ಮಂಡಿಸಿದರು. ನಾನು ಅವರ ಮಾತಿನ ಓಘವನ್ನು ತಡೆಯಬಾರದೆಂದು ಸುಮ್ಮನಿದ್ದೆ. ಅಷ್ಟರಲ್ಲಿಯೆ ಅವರು ಮುಂದುವರಿಸಿದರು:

"....ಅದೇ ಕರ್ನಾಟಕ ಏಕೀಕರಣದ ಮಾತು ಬೇರೆ. ನಿಜವಾಗಿ ನೋಡಿದರೆ ನಾನು ಆ ವಿಷಯವಾಗಿ ಅಷ್ಟೇನು ಆಳವಾಗಿ ಅಂಕೆ-ಸಂಖ್ಯೆಗಳ ಅಭ್ಯಾಸವನ್ನು ಮಾಡಿಲ್ಲ.. ಮತ್ತು ಸರಕಾರದ ಈ ಹುದ್ದೆಯಲ್ಲಿದ್ದು ಅದರ ವಿಷಯವಾಗಿ ಹೆಚ್ಚು ಸಂಗತಿಗಳನ್ನು ಆಡಲೂ ನನಗೆ ಬರುವಂತಿಲ್ಲ. ಆದರೂ ಒಂದೆರಡು ಶಬ್ದಗಳನ್ನು ಹೇಳುವೆ. ಕರ್ನಾಟಕದ ಏಕೀಕರಣದ ವಿಚಾರವು ಎಲ್ಲಾ ಕನ್ನಡಿಗರಿಗೂ ತುಂಬ ಆವಶ್ಯಕವಾದುದು. ಅದರ ಪರವಾಗಿ ಪ್ರತಿಯೊಬ್ಬ ಕನ್ನಡಿಗನು ಶಕ್ತಿಮೀರಿ ಪ್ರಯತ್ನಿಸುವುದು ಸಹಜ. ಆದರೆ ಅದರ ಕಾರ್ಯವು ಮಾತ್ರ ಎಡರುಗಳಿಂದ ತುಂಬಿದೆ...."

ಇಷ್ಟು ಮಾತನಾಡುತ್ತಿರುವಾಗಲೆ, ಆ ಹಾಲಿನಲ್ಲಿದ್ದ ರೇಡಿಯೋದ ಧ್ವನಿಯು ಅವರಿಗೆ ತೊಂದರೆಯನ್ನುಂಟುಮಾಡಿದಂತೆ ಕಂಡಿತು. ಅವರು ಅದನ್ನು ನಿಲ್ಲಿಸಿ, ತಮ್ಮ ಮಾತಿಗೆ ಉದಾಹರಣೆಯೆಂದು ಆ ರೇಡಿಯೋದ ಸಂಗತಿಯನ್ನೆ ಹೇಳಿದರು. "ಆಗ ನೋಡಿರಿ. ಈ ರೇಡಿಯೋದ ಮೇಲೆ ಇಲ್ಲಿಯಾಗಲಿ, ಮದ್ರಾಸಿನಲ್ಲಿ

ಯಾಗಲಿ ಕನ್ನಡದಲ್ಲಿ ಕಾರ್ಯಕ್ರಮಗಳೇ ಇರುವುದಿಲ್ಲ. ಜನರನ್ನು ರಂಜಿಸುವುದಕ್ಕೂ, ಬೋಧಿಸುವುದಕ್ಕೂ ಇದು ಉತ್ಕೃಷ್ಟವಾದ ಸಾಧನ; ಆದರೆ ಅದರ ಲಾಭವು ಮೈಸೂರಿನ ಆಕಾಶವಾಣಿಯ ಹೊರತು ಈ ಭೇದಭಾವದ ಮೂಲಕ ಕನ್ನಡಿಗರಿಗೆ ಇಲ್ಲವೆ ಇಲ್ಲ'' ಎಂದು ಹೇಳಿದರು. ಆಗ ನಾನು All India Radio ದವರು ಮುಂಬೈ ಕೇಂದ್ರದಲ್ಲಿ ಜೂನ್ ೩ನೆಯ ತಾರೀಕು ಶುಕ್ರವಾರ ದಿಂದ, ಒಂದು ಬಿಟ್ಟು ಒಂದು ಶುಕ್ರವಾರ 'ಕನ್ನಡಸಾಹಿತ್ಯ ಮತ್ತು ಜೀವನ' ಈ ವಿಷಯದ ಮೇಲೆ ಬೇರೆ ಬೇರೆಯ ವಿದ್ವಾಂಸರ ಎಂಟು ಭಾಷಣಗಳನ್ನು ಏರ್ಪಡಿಸಿದ್ದಾರೆ'' ಎಂಬ ಸುದ್ದಿಯನ್ನು ಹೇಳಿದೆ. ಅದನ್ನು ಕೇಳಿ ಅವರು ಮೆಲ್ಲಗೆ ತುಸು ನಕ್ಕರು.

ಸಾಹಿತ್ಯ, ರಾಜಕಾರಣ ಮುಂತಾದ ವಿಷಯಗಳ ಮೇಲೆ ಈ ರೀತಿಯ ವಿಚಾರಗಳನ್ನು ವ್ಯಕ್ತಗೊಳಿಸಬಲ್ಲ ಇವರ ಬಗೆಯಲ್ಲಿ ವಿನೋದಕ್ಕೆ ತುಂಬ ಎಡೆಯಿದೆ. ಒಂದು ಮೋಜಿನ ವಿಷಯವನ್ನು ಇಲ್ಲಿ ಕೊಡಬಹುದು ದೃಷ್ಟಾಂತವೆಂದು. ೧೯೩೦ನೆಯ ಇಸವಿ ಯಲ್ಲಿ ಇವರು ಯುರೋಪ್, ಇಂಗ್ಲಂಡ್, ಜಪಾನ್ ಮುಂತಾದ ದೇಶಗಳನ್ನು ನೋಡಲಿಕ್ಕೆಂದು ಶ್ರೀಮತಿ ರಾವ್ ಅವರನ್ನು ಕೂಡಿ ಕೊಂಡು ಇಲ್ಲಿಂದ ಹೊರಡುವಾಗ, ತಮ್ಮ ಹಿರಿಯ ಮಗುವಿಗೆ 'ನನ್ನ ತಾಯಿಯ ವಿಷಯವಾಗಿ ಜಾಗರೂಕನಾಗಿರಪ್ಪ– ಆಕೆಗೆ ವಯಸ್ಸಾಗಿದೆ' ಎಂದು ಹೇಳಿಹೋಗಿದ್ದರಂತೆ. ಮುಂದೆ ಇವರು ಲಂಡನ್ನಿನಲ್ಲಿ ಇದ್ದಾಗ ಇವರ ಹಿರಿಯಮಗನಿಂದ ಒಂದು ಪತ್ರವು ಬಂದಿತಂತೆ. ಅದರಲ್ಲಿ 'ಇಲ್ಲಿ ನಾವು ನಿಮ್ಮ ತಾಯಿಯ ಕಾಳಜಿಯನ್ನು ಚೆನ್ನಾಗಿ ತೆಗೆದುಕೊಳ್ಳುತ್ತಲಿದ್ದೇವೆ' ಎಂದು ಬರೆದಿದ್ದಿತಂತೆ. ಅದಕ್ಕೆ ಉತ್ತರ ವಾಗಿ ಸರ್ ರಾಘವೇಂದ್ರರಾಯರು 'ನಾನೂ ಇಲ್ಲಿ ನಿಮ್ಮ ತಾಯಿಯ ಕಾಳಜಿಯನ್ನು ಚೆನ್ನಾಗಿ ತೆಗೆದುಕೊಳ್ಳುತ್ತಲಿದ್ದೇನೆ' ಎಂದು ಬರೆದು ಕಳುಹಿದ್ದರು.. ಅದೇ ಕಾಲಕ್ಕೆ ಅವರು ಯುರೋಪಿನ ಬಹುಭಾಗವನ್ನೂ, ಇಂಗ್ಲಂಡನ್ನೂ ನೋಡಿಕೊಂಡು ಬಂದುದಲ್ಲದೆ, ಉತ್ತರಧ್ರುವದ ಬಳಿಯಲ್ಲಿರುವ ಸ್ಪಿಟ್ಸ್‌ಬರ್ಗ್ ಎಂಬ ದ್ವೀಪಕ್ಕೂ ಹೋಗಿ ಬಂದರು. ಅದಕ್ಕೆ "The land of the Midnight Son" ಎನ್ನುತ್ತಾರಂತೆ. 'ಅಲ್ಲಿ ಎರಡು ಮೂರು ತಿಂಗಳವರೆಗೆ ಸೂರ್ಯಾಸ್ತವೇ ಆಗುವುದಿಲ್ಲ. ಅದು ಬಹು ರಮಣೀಯವಾದ ಸ್ಥಲ' ಎಂದು ರಾಯರು ಹೇಳಿದರು.

ಮುಂದೆ ೧೯೩೬ನೆಯ ಇಸವಿಯಲ್ಲಿ ರಾಯರು ಜಪಾನ್, ಹಾಂಗಕಾಂಗ್, ಸಿಂಗಾಪುರ ಮೊದಲಾದ ಸ್ಥಳಗಳನ್ನು ನೋಡಲಿ ಕ್ಕೆಂದು ತೆರಳಿದ್ದರು. "ಜಪಾನಿನಲ್ಲಿ ಎದ್ದುಕಾಣುವ ಸಂಗತಿ ಗಳೇನು" ಎಂದು ನಾನು ಕೇಳಿದೆ; ಅದಕ್ಕೆ ಅವರು "ಅಲ್ಲಿಗೆ ನಾನೇನು ಔದ್ಯೋಗಿಕ ಅಥವಾ ಶೈಕ್ಷಣಿಕ ಮೊದಲಾದ ಉದ್ದೇಶಗಳನ್ನಿಟ್ಟು ಕೊಂಡು ಹೋಗಿದ್ದಿಲ್ಲ. ಕೇವಲ ಅಲ್ಲಿಯ ವಿಖ್ಯಾತವಾದ ರಮ್ಯಸ್ಥಲಗಳನ್ನು ದರ್ಶಿಸಲಿಕ್ಕೆ ಹೋಗಿದ್ದೆ" ಎಂದು ಹೇಳಿದರು. "ನೀವು ಮೊನ್ನೆ ಇಂಗ್ಲಂಡಿಗೆ ಹೋಗುವಾಗ ನಿಮ್ಮ ಜನರು ಅಡ್ಡಿ ಮಾಡಲಿಲ್ಲವೇ!'' ಎಂದು ನಾನು ಸಹಜವಾಗಿ ಕೇಳಿದೆ. "ಇಲ್ಲ; ಆಗ ನಾನು ಶ್ರೀಮತಿ ರಾವ್ ಅವರನ್ನು ಕೂಡಿಕೊಂಡು ಹೋಗಿದ್ದೆ. ಕಾರಣ ಯಾವ ವಿಚಾರವೂ ಅಡ್ಡಿ ಬರಲಿಲ್ಲ" ಎಂದು ಹೇಳಿ ನಕ್ಕು, "..ಆದರೆ ಜಪಾನಿನಲ್ಲಿ ನನಗೆ ಒಂದು ವಿಷಯವು ಮಾತ್ರ ಒಡೆದು ಕಂಡಿತು, ಅದೆಂದರೆ ಆ ಜನರ ಸೌಜನ್ಯ ಹಾಗೂ ಒರಣ! ಪ್ರತಿಯೊಂದು ಪಟ್ಟಣ, ಹಳ್ಳಿ, ಬೀದಿಯನ್ನು ಮೊದಲುಮಾಡಿ ಕೊಂಡು ಎಲ್ಲ ಸ್ಥಳಗಳೂ ಸ್ವಚ್ಛವಾಗಿವೆ. ಪರಸ್ಥಳದವರು ಕೇಳಿದ ಪ್ರಶ್ನೆಗಳಿಗೆ, ಪರದೇಶದವರು ಕೇಳಿದ ಸಂಗತಿಗಳಿಗೆ ಸಪ್ರಮಾಣ ವಾಗಿಯೂ, ಆದರಪೂರ್ವಕವಾಗಿಯೂ ಉತ್ತರಗಳನ್ನು ಅಲ್ಲಿ ಯವರು ಸಲ್ಲಿಸುತ್ತಾರೆ. ಬೀದಿಯ ಮೇಲಿನ ಸಾಮಾನ್ಯ ವ್ಯಕ್ತಿಯು ಕೂಡ ನಮ್ರಭಾವದಿಂದ ಪರಕೀಯರ ಸಂಗಡ ಮಾತನಾಡುತ್ತಾನೆ. ಇದಲ್ಲದೆ ಇನ್ನೊಂದು ಮಹತ್ವದ ಮಾತೆಂದರೆ ನಮ್ಮ ದೇಶದಲ್ಲಿ ಯಂತೆ ನಮಗೆ ಜಪಾನಿನಲ್ಲಿ ತಿರುಕರನ್ನು ನೋಡಲು ಸಿಕ್ಕುವುದಿಲ್ಲ" ಎಂದು ಮೆಲುನಗೆಯೊಂದಿಗೆ ಹೇಳಿದರು.

ಆ ಮೇಲೆ ತುಸುವೇಳೆ ನಾವು ಸುಮ್ಮನೆ ಕುಳಿತುಕೊಂಡೆವು, ನನ್ನ ಪ್ರಶ್ನೆಗಳಂತೂ ಎತ್ತಲೋ ಮಾಯವಾಗಿ ಹೋಗಿದ್ದುವು. ಅವರು ತಾವಾಗಿಯೆ ಅದೆಷ್ಟೊ ಸಂಗತಿಗಳನ್ನು ಹೇಳಿದರು. ಅಷ್ಟರಲ್ಲಿ ನನ್ನ ಕೇಳೋಣವೆಲ್ಲ ಮುಗಿಯಿತೇನೋ ಎಂದು ತಿಳಿದು, ಅವರು ನನಗೆ ಆ ದಿವಾಣಖಾನೆಯೊಳಗಿನ ಬಗೆಬಗೆಯ ವಸ್ತು ಗಳನ್ನು ತೋರಿಸಿದರು. ಮೇಜಿನ ಮೇಲೆ ಇಟ್ಟ ಚೆಂದ ಚೆಂದದ ಆಟಿಗೆಗಳು, ಗೋಡೆಗಳಿಗೆ ತೂಗುಹಾಕಿದ ಸುಂದರವಾದ ಜಪಾನಿನ ಚಿತ್ರಗಳು ಇವುಗಳನ್ನೆಲ್ಲ ತೋರಿಸುತ್ತಿರುವಾಗ ಅವರ ಇಬ್ಬರು ಮಕ್ಕಳು ಬಂದು 'ಇವರು ಯಾರು?' ಎಂದು ಅವರನ್ನು ಕೇಳಿದರು. ಅಷ್ಟರಲ್ಲಿ ನಾನು ನನ್ನ ಸಂಗಡ ಒಯ್ದ ಜಯಂತಿಯ ಕೆಲವು ಸಂಚಿಕೆಗಳನ್ನು ತೋರಿಸಿದೆ. ಅವುಗಳನ್ನು ತಿರುವಿಹಾಕುತ್ತ ಅವರು "ಈ ಮಾಸಿಕವನ್ನು ನಾನು ನೋಡಿರಲೇ ಇಲ್ಲವಲ್ಲ! ಇದರ ಅಚ್ಚು, ಕಟ್ಟು ಹಾಗೂ ಒಳಗಿನ ವಿಷಯಗಳು ತುಂಬ ಆಧುನಿಕವಾಗಿ ಇವೆಯಲ್ಲ! ಭಾರತದಲ್ಲಿ ನೋಡಲು ಸಿಕ್ಕುವ ಇಂದಿನ ಯಾವ ಮಾಸಿಕದ ಜೊತೆಯಲ್ಲಿಯೂ ಇದು ಹೆಮ್ಮೆಯಿಂದ ನಿಲ್ಲಬಹುದು'' ಎಂದರು. ನನಗೆ ಅವರ ಮಾತುಗಳನ್ನು ಕೇಳಿ ಕೊಂಚ ಹುರುಪು ಬಂದಂತಾಗಿ, ನಾನು **ಜಯಂತಿಯ** ಕೆಲವು ವೈಶಿಷ್ಟ್ಯಗಳನ್ನು ಹಾಗೂ ಅಲ್ಪಾವಧಿಯಲ್ಲಿಯೆ ಅದು ಪಡೆದ ಮನ್ನಣೆಯನ್ನು ಕುರಿತು ಒಂದೆರಡು ಮಾತುಗಳನ್ನು ಹೇಳಿದೆ.

ಸರ್ ರಾಘವೇಂದ್ರರಾಯರ ತಂದೆಯವರಾದ ಶ್ರೀ. ಪಣಂಬೂರು ಕೃಷ್ಣರಾಯರು ಸಬ್-ರಜಿಸ್ಟ್ರಾರರಿದ್ದರು. ಅವರ ಬಗೆಗೂ ಹಾಗೂ ತಮ್ಮ ಗುರುಗಳಾದ ಶ್ರೀ. ಬಂಟವಾಳ ರಘುನಾಥ ರಾಯರ ಬಗೆಗೂ ಇವರದು ತುಂಬ ಪೂಜ್ಯಭಾವವಿರುತ್ತದೆ. ಇವರು ಒಮ್ಮೆ ಮಂಗಳೂರಿಗೆ ಹೋದಾಗ ಸಂಭವಿಸಿದ ಒಂದು ಸನ್ನಿ ವೇಶವು ತುಂಬ ಉದ್ಬೋಧಕವಾದದ್ದಿರುತ್ತದೆ. ಆಗ ಇವರು ಕುಂದಾಪುರ ಹಾಯಸ್ಕೂಲಿನಲ್ಲಿ ತಮ್ಮ ಗುರುಗಳ ಭಾವಚಿತ್ರದ ಅನಾವರಣ ಸಮಾರಂಭವನ್ನು ನೆರವೇರಿಸಲು ಅಲ್ಲಿಗೆ ಹೋಗಿದ್ದರು. ಅಲ್ಲಿಯ ತಮ್ಮ ವಾಸವನ್ನೂ, ಕೆಲಸಗಳನ್ನೂ ಮುಗಿಸಿಕೊಂಡು ಇವರು ಹುಡದಿಮಕ್ಕಳೊಂದಿಗೆ ಮರಳಿ ಸಿಮ್ಲಾಕ್ಕೆ ಹೊರಟಿದ್ದ ರಂತೆ! ಆಗ ಇವರನ್ನು ಬೀಳ್ಕೊಡಲು ನಿಲ್ದಾಣದ ಮೇಲೆ ಇವರ

ಗುರುಗಳಾದ **ಶ್ರೀ. ಬಂಟವಾಳ ರಘುನಾಥರಾಯರು** ಬಂದಿದ್ದರಂತೆ. ಗಾಡಿಯು ಹೊರಡಲು ಇನ್ನು ತುಸುವೆ ವೇಳೆಯಿದ್ದಾಗ ಸರ್ ರಾಘವೇಂದ್ರರಾವ್ ಅವರು ತಮ್ಮ ಗುರುಗಳ ಪಾದಗಳ ಮೇಲೆ ಮಸ್ತಕವನ್ನಿಟ್ಟು ನಮಸ್ಕರಿಸಿ ಗಾಡಿಯಲ್ಲಿ ಹತ್ತಿದರಂತೆ. ಪ್ಲಾಟಫಾರ್ಮಿನಮೇಲೆ ನಿಂತ ಜನರೆಲ್ಲರೂ ಅವಾಕ್ಕಾಗಿ ನೋಡುತ್ತ ನಿಂತರಂತೆ. ಇಂತಹ ಮುದುಕನಿಗೆ, ತುಂಬ ಯುರೋಪಿಯನ್ ಪೋಷಾಕು ಮಾಡಿದ ಈ 'ಮಹಾಪುರುಷನು' ಏಕೆ ಹೀಗೆ ದೀರ್ಘದಂಡವನ್ನು ಹಾಕಿರಬಹುದು !— ಎಂದು ಅವರಿಗೆ ದಿಗಿಲು ಬಿದ್ದಿತಂತೆ. ಕೆಲವರು ಅವರು ಇವರ ತಂದೆಯಿರಬಹುದೆಂದೂ, ಕೆಲವರು ಮಾವನಿರಬಹುದೆಂತೂ ತರ್ಕಿಸಿ, ತಮ್ಮ ತಮ್ಮ ಕೆಲಸಕ್ಕೆ ತೆರಳಿರಬಹುದು. ಇಂದಿನ ಪೀಳಿಗೆಯ ಜನರಲ್ಲಿ ಈ ಬಗೆಯ ಗುರುಶಿಷ್ಯಭಾವವು ನೋಡಲಿಕ್ಕೆ ಸಿಕ್ಕಬಹುದೆ ?

ಸರ್ ಪಿ.ಆರ್. ರಾವ್ ಅವರು ಮೊದಲಿನಿಂದಲೂ ಇಂತಹ ದೊಡ್ಡ ದೊಡ್ಡ ಸ್ಥಾನಗಳಲ್ಲಿ ಕೆಲಸಮಾಡುತ್ತ ಬಂದಿದ್ದರೂ, ಅವರದು ಬಹಳೇ ಸಾದಾ-ಜೀವನ ಮತ್ತು ಸೌಮ್ಯವಾದ ಸ್ವಭಾವ. ಅವರ ಪ್ರಿಯತಮವಾದ 'ಹೌಸು' ಎಂದರೆ ಓದುವುದು. ಈಗ ಕೂಡ ಅವರು ದಿವಸದ ಬಹುಕಾಲ ಓದುವುದರಲ್ಲಿಯೆ ಕಳೆಯುತ್ತಾರೆ. ಅದರಲ್ಲಿಯೂ ಪ್ರಪಂಚದ ವಿವಿಧಭಾಷೆಗಳಲ್ಲಿ ಅವರ ಆಸಕ್ತಿ ಬಹಳ. ಅವರ ಗಣಿತ ವಿಷಯದ ಮೇಲಿನ ಪ್ರಭುತ್ವವು ಅವರ ಕುಟುಂಬದಲ್ಲಿ ಆನುವಂಶಿಕವಾಗಿ ಬಂದಂತೆ ತೋರುತ್ತದೆ. ಯಾಕೆಂದರೆ ಇವರು ತಮ್ಮ ಪ್ರತಿಯೊಂದು ಪರೀಕ್ಷೆಯಲ್ಲಿ ಗಣಿತವಿಷಯವನ್ನ ಮುಖ್ಯವಾದುದನ್ನಾಗಿ ಇಟ್ಟುಕೊಂಡಿದ್ದರು. ಇವರ ಜ್ಯೇಷ್ಠ ಪುತ್ರರೂ ಗಣಿತವನ್ನೆ ತೆಗೆದುಕೊಂಡು ದಿಲ್ಲಿ ಮತ್ತು ಲಾಹೋರಿನ ಎಂ.ಎ. ತರಗತಿಯನ್ನು ಪಡೆದು, ಮುಂದೆ ಇಂಗ್ಲಂಡಿಗೆ ಹೋಗಿ ಅಲ್ಲಿ ಲಂಡನ್ ಯುನಿವ್ಹರ್ಸಿಟಿಯ ಬಿ. ಎಸ್‌ಸಿ. (ಆನರ್ಸ್) ಆಗಿರುವರು. ಈಗ ಅವರು ಐ. ಸಿ. ಎಸ್. ಪರೀಕ್ಷೆಯ ಸಿದ್ಧತೆಯನ್ನು ಮಾಡುತ್ತಿರುವರು. ಮತ್ತು ಇವರ ಹಿರಿಯ ಮಗಳು ಸಹ ಮುಂಬಯಿ **ಎಲ್‌ಫಿನ್‌ಸ್ಟನ್** ಕಾಲೇಜಿನಲ್ಲಿ ಕಲಿತು, ಗಣಿತವಿಷಯದಲ್ಲಿಯೆ **ಬಿ. ಎ.** ಆಗಿರುತ್ತಾರೆ. ಇವರ ಎರಡನೆಯ ಮಗನು ಕೂಡ ಈಗ **ಸೆಂಟ್ ಝೇವಿಯರ್ ಕಾಲೇಜಿನಲ್ಲಿ** ಗಣಿತವನ್ನು ಪ್ರಧಾನವಿಷಯವಾಗಿಟ್ಟುಕೊಂಡು, ಇಂಟರ್ ಸಾಯನ್ಸ್ ಕ್ಲಾಸಿನಲ್ಲಿರುವನು. ಚಿಕ್ಕಮಕ್ಕಳಿಗೆ ಮನೆಯಲ್ಲಿಯೆ ಕನ್ನಡವನ್ನೂ ಇಂಗ್ಲಿಷ್ ಭಾಷೆಯನ್ನೂ ಕಲಿಸುತ್ತಾರೆ. ಶ್ರೀಮತಿ ರಾವ್ ಅವರು ಮನೆಯಲ್ಲಿಯೆ ಅಭ್ಯಾಸಮಾಡಿ ತಕ್ಕಮಟ್ಟಿಗೆ ಸಂಸ್ಕೃತ ಮತ್ತು ಇಂಗ್ಲಿಷಿನಲ್ಲಿ ಬಲ್ಲವರಾಗಿದ್ದಾರೆ.

ಸರ್ ರಾಘವೇಂದ್ರರಾವ್ ಅವರು ತಮ್ಮ ಚಿಕ್ಕ ವಯಸ್ಸಿನಲ್ಲಿಯೆ ತಂದೆಯವರನ್ನು ಕಳೆದುಕೊಂಡರು. ಇವರ ತಂದೆಯವರಾದ ಶ್ರೀ. ಪಣಂಬೂರು ಕೃಷ್ಣರಾಯರು ತಮ್ಮ ಕೆಲಸದಲ್ಲಿ ತೋರಿಸುವ ದಕ್ಷತೆಗಾಗಿಯೂ, ಜನರಲ್ಲಿ ತಾಳಿರುವ ಪ್ರೇಮಲ ಸ್ವಭಾವಕ್ಕಾಗಿಯೂ ಅಲ್ಲಿ ತುಂಬ ಪ್ರಿಯರಾಗಿದ್ದರು. ಅವರ ಅವೇ ಗುಣಗಳನ್ನು ಸರ್. ಪಿ.ಆರ್. ರಾವ್ ಅವರಲ್ಲಿಯೂ ಕಾಣಬಹುದು. ಅದಕ್ಕೆಂತಲೇ ಇವರು ಅಲ್ಪಕಾಲದಲ್ಲಿಯೆ ಇಂತಹ ದೊಡ್ಡ ಪದವಿಯನ್ನು ಪಡೆದಿರುವರು.

"ನೀವು ಪೆನ್ಶನ್ ತೆಗೆದುಕೊಂಡ ಮೇಲೆ ಯಾವ ಊರಲ್ಲಿ ವಾಸಿಸಬೇಕೆಂದು ಮಾಡಿರುವಿರಿ ?" ಎಂದೆ ನಾನು ಮೆಲ್ಲಗೆ. ಅದಕ್ಕೆ ಅವರು ನಮ್ಮ ಬಾಲಕರ ವಿದ್ಯಾಭ್ಯಾಸದ ದೃಷ್ಟಿಯಿಂದಲೂ, ಆರೋಗ್ಯದ ದೃಷ್ಟಿಯಿಂದಲೂ ಯೋಗ್ಯವೆನಿಸುವ ಒಂದು ಸ್ಥಲವನ್ನು ಆರಿಸಬೇಕಾಗಿದೆ. ಇನ್ನೂ ಅದರ ಬಗೆಗೆ ನಿರ್ಧಾರವನ್ನೇನು ಮಾಡಿಲ್ಲ. ಯಾಕೆಂದರೆ ನನ್ನದಿನ್ನೂ ನಾಲ್ಕೈದುವರುಷಗಳ ಸರ್ವ್ಹಿಸು ಇರುತ್ತದೆ. ಮುಂದೆ ನಮಗೆ ಬೆಂಗಳೂರು ಇಲ್ಲವೆ ಮಂಗಳೂರು ಅನುಕೂಲವಾದ ಸ್ಥಳವಾಗಬಹುದು ಎನಿಸುತ್ತದೆ" ಎಂದರು.

ಅಷ್ಟರಲ್ಲಿ ನಮ್ಮ ಮಾತುಕತೆಗಳೂ ಮುಗಿದಂತಾದವು. ವೇಳೆಯೂ ಬಹಳವಾಗಿತ್ತು. ಆಗ ನಾನು 'ಹೊರಡುತ್ತೇನೆ' ಎಂದು ಹೇಳಿ ಹೊರಹೊರಟೆ. ಬಾಗಿಲವರೆಗೆ ನನ್ನನ್ನು ಬೀಳ್ಕೊಡಲಿಕ್ಕೆಂದು ರಾಯರೂ ಬಂದರು. ಬಾಗಿಲಲ್ಲಿ ನಾವು ಕೈ ಕುಲುಕಿಸಿದೆವು. ನಾನು ನಡುವೆ ಅವರ ಮುಖದ ಕಡೆಗೆ ನೋಡಿದೆ. ಕನ್ನಡಕದೊಳಗಿಂದ ಕಾಣುವ ಅವರ ಕಣ್ಣುಗಳಲ್ಲಿ ಆತ್ಮೀಯತೆ, ದೀರ್ಘೋದ್ಯೋಗವು ಹಣೆಯ ಮೇಲೆ ಕೆಡವಿದ ನೆಳಲು, ಪ್ರತಿಯೊಬ್ಬರ ಸಂಗಡ ಮಾತನಾಡುವಾಗ ಮೆಲ್ಲಗೆ ಅರಳುವ ನಗೆಹೂವು ಇವು ಮೂರೂ ನನಗೆ ಗೋಚರವಾದುವು.



ಉದ್ಯೋಗ ಮಂದಿರ ಧಾರವಾಡ

ಇವರಲ್ಲಿಯ 'ದಂತಪ್ರಭಾ' 'ಅಭ್ಯಂಗಚೂರ್ಣ' ಗಳು ನಿಮ್ಮ ದೇಹವನ್ನು ನಿರ್ಮಲವಾಗಿರಿಸುವುವು.
ಒಗೆಬಗೆಯ ಹಿಟ್ಟುಗಳು, ಶುದ್ಧವಾದ ಮಸಾಲೆ, ಮೆಂತೆಯಹಿಟ್ಟು, ಸಾರಿನಪುಡಿ ಇವೆಲ್ಲ
ನಿಮಗೆ ಪರಿಶುದ್ಧವಾದ ಆಹಾರಸಾಮಗ್ರಿಯನ್ನು ಒದಗಿಸಿಕೊಡುವವು.

ಸತ್ಯದ ಸಮಾಧಿಯೆ?*

ಬಾಬು ಸುಭಾಷರು ಕಾಂಗ್ರೆಸ್ ಅಧ್ಯಕ್ಷರಿಗೆ ಬರೆದ ಪತ್ರ

◆

- ಅಲ್ಪಮತೀಯರಿಗೆ ಬಂಡನ್ನೆಬ್ಬಿಸುವ ಅಧಿಕಾರವಿದೆಯೆಂದು ಮಹಾತ್ಮಾ ಗಾಂಧಿಯವರೆ ಹೇಳಿದ್ದಾರೆ.
- ಸುಭಾಸ ಬೋಸರು ಬಹುಸಂಖ್ಯಾಕರ ವಿರುದ್ಧ ಬಂಡನ್ನೆಬ್ಬಿಸುವಷ್ಟು ದೂರ ಹೋಗಿಲ್ಲ.
- ವಿರೋಧವನ್ನು ಲೆಕ್ಕಿಸದೆ ಬಹುಸಂಖ್ಯಾಕರು ಸ್ವೀಕರಿಸಿದ ನಿರ್ಣಯಗಳನ್ನು ಅವರು ಬರಿಯೆ ಟೀಕಿಸುತ್ತಿದ್ದಾರಷ್ಟೆ.

ನಿಷೇಧ ಮತ್ತು ನಿಯಮಪ್ರಾಪ್ತ ಹಕ್ಕು

"ರಾಂಚಿಯಿಂದ ಜುಲೈ ೧೬ ಕ್ಕೆ ಬರೆದ ನಿಮ್ಮ ಪತ್ರಕ್ಕೆ ಉತ್ತರ ಬರೆಯಲು ತಡವಾದುದಕ್ಕೆ ವಿಷಾದಿಸುತ್ತೇನೆ. ಮುಂಬಯಿ A. I. C. C. ಅಧಿವೇಶನದಲ್ಲಿ ಸ್ವೀಕೃತವಾದ ಕೆಲವು ಗೊತ್ತುವಳಿಗಳ ವಿರುದ್ಧ ನಿಷೇಧಯೋಜನೆಯನ್ನು ಮಾಡಿದ್ದಕ್ಕಾಗಿ ನನ್ನ ಜವಾಬನ್ನು ಕೇಳಿರುವಿರಷ್ಟೆ. ಮೊದಲು ಒಂದು ಮಾತನ್ನು ನಿಮ್ಮ ಲಕ್ಷ್ಯಕ್ಕೆ ತರಬಯಸುತ್ತೇನೆ. **ಯಾವುದಾದರೊಂದು ಗೊತ್ತುವಳಿಗಾಗಿ ನಿಷೇಧ ವ್ಯಕ್ತಮಾಡುವುದು ಬೇರೆ, ಅದನ್ನು ವಿರೋಧಿಸುವುದಾಗಲಿ ಮೀರುವುದಾಗಲಿ ಬೇರೆ.** ಇಲ್ಲಿಯ ವರೆಗೆ ನಾನು ಮಾಡಿದ್ದೇನು? A. I. C. C. ಯ ಎರಡು ಗೊತ್ತುವಳಿಗಳ ವಿರುದ್ಧ ನಿಷೇಧವನ್ನು ವ್ಯಕ್ತಪಡಿಸಿರುವೆ. **A. I. C. C. ಯಲ್ಲಿ ಸ್ವೀಕೃತವಾದ ಯಾವುದೆ ಗೊತ್ತುವಳಿಗಾಗಿ** ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಿಯಮಪ್ರಾಪ್ತ (Constitutional) ಹಕ್ಕು ಅಲ್ಲವೆ?

ನಿಯಮಪ್ರಾಪ್ತ ಹಕ್ಕಿನ ಮರ್ಯಾದೆ ಏನು?

"A. I. C. C. ಯ ಅಧಿವೇಶನ ಜರುಗಿದ ನಂತರ ಅಲ್ಲಿ ಸ್ವೀಕೃತವಾದ ಗೊತ್ತುವಳಿಗಳ ಬಗ್ಗೆ ಅನೇಕ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದು ರೂಢಿಯೆ ಆಗಿದೆ ಎಂಬುದನ್ನು ನೀವು ಒಪ್ಪಲು ಸಾಕು. A. I. C. C. ಯ ಗೊತ್ತುವಳಿಗಳ ಬಗ್ಗೆ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಹಕ್ಕು ಕಾಂಗ್ರೆಸ್ಸಿಗರಿಗೆ ಇದೆ ಎಂದು ಒಪ್ಪಿಕೊಂಡ ಪಕ್ಷದಲ್ಲಿ, ಅನುಕೂಲ ಅಭಿಪ್ರಾಯಗಳನ್ನಷ್ಟೆ ವ್ಯಕ್ತಪಡಿಸಬೇಕು, ಪ್ರತಿಕೂಲ ಅಭಿಪ್ರಾಯಗಳನ್ನಲ್ಲ ಎಂಬ ಮರ್ಯಾದೆಯನ್ನು ಹಾಕುವುದು ತರವೆನಿಸುವುದಿಲ್ಲ. ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಹಕ್ಕು ನಮಗೆ ನಿಯಮಪ್ರಾಪ್ತವಾಗಿದ್ದರೆ, 'ಅನುಕೂಲ-ಪ್ರತಿಕೂಲ' ಎಂಬ ಪ್ರಶ್ನೆಯೆ ಹೊರಡುವುದಿಲ್ಲ. ಪ್ರತಿಕೂಲ ಅಭಿಪ್ರಾಯಗಳಿಗೆಯೆ ತಡೆಹಾಕಲಾಗುವುದೆಂಬ ಧ್ವನಿ ನಿಮ್ಮ ಪತ್ರದಲ್ಲಿ ಎದ್ದುಕಾಣುವುದು.

ನಾಗರಿಕಸ್ವಾತಂತ್ರ್ಯವೆಂದರೇನು?

"ಅನೇಕ ವಿಷಯಗಳ ಸಂಬಂಧವಾಗಿ ನಮಗೂ ಬ್ರಿಟಿಶರಿಗೂ ಹೋರಾಟ ನಡೆದಿದೆ; ಆ ವಿಷಯಗಳಲ್ಲಿ ನಾಗರಿಕಸ್ವಾತಂತ್ರ್ಯ (Civil Liberty) ವೂ ಒಂದಾಗಿದೆ. ನಾಗರಿಕಸ್ವಾತಂತ್ರ್ಯದಲ್ಲಿ ಭಾಷಣಸ್ವಾತಂತ್ರ್ಯವೂ ಅಡಕವಾಗಿದೆ ಎಂದು ನನ್ನ ಎಣಿಕೆ. ಆದರೆ A. I. C. C. ಯ ಇಲ್ಲವೆ ಕಾಂಗ್ರೆಸಿನ ಬಹುಮತದವರೊಡನೆ ಒಪ್ಪದವರಿಗೆ ಭಾಷಣಸ್ವಾತಂತ್ರ್ಯವಿಲ್ಲ ಎಂಬುದು ನಿಮ್ಮ ಅಭಿಪ್ರಾಯವಾಗಿದೆ. ಬ್ರಿಟಿಶ ಸರಕಾರದವರನ್ನು ಎದುರಿಸುವಾಗ ಬೇಕಾದ ಭಾಷಣಸ್ವಾತಂತ್ರ್ಯವು ಕಾಂಗ್ರೆಸನ್ನು ಇಲ್ಲವೆ ಅದಕ್ಕೆ ಅಧೀನವಾದ ಸಂಸ್ಥೆಯನ್ನು ಎದುರಿಸುವಾಗ ಸಲ್ಲದೆಂದರೆ—ಇದೆಂತಹ ವಿಲಕ್ಷಣ ಪರಿಸ್ಥಿತಿ!

ಅಲ್ಪಮತದವರ ಭಾಷಣಸ್ವಾತಂತ್ರ್ಯ

"ನಮ್ಮ ದೃಷ್ಟಿಯಿಂದ ದೇಶಕ್ಕೆ ವಿಘಾತಕವೆನಿಸಿದ ಗೊತ್ತುವಳಿಗಳನ್ನು ಟೀಕಿಸುವ ಅಧಿಕಾರ ನಮಗಿಲ್ಲವೆಂದರೆ ಪ್ರಜಾತತ್ತ್ವದ ಒಂದು ಅಧಿಕಾರವೆ ನಮಗಿಲ್ಲವೆಂದಂತಾಯಿತು. ಕಾಂಗ್ರೆಸಿನ ಒಳಗಲ್ಲದೆ ಹೊರಗೆಯೆ ಮಾತ್ರ, ಪ್ರಜಾತತ್ತ್ವಗಳನ್ನು ಆಚರಣೆಯಲ್ಲಿ ತರಬೇಕೆ? ಬುದ್ಧಿಪೂರ್ವಕವಾಗಿ ಈ ಪ್ರಶ್ನೆಯನ್ನು ಕೇಳುತ್ತಿರುವೆ ನಾನು. A. I. C. C. ಯಲ್ಲಿ ಒಮ್ಮೆ ಸ್ವೀಕೃತವಾದ ನಿರ್ಣಯವನ್ನು ಪುನರ್ವಿಚಾರಣೆಯಿಂದ, ಉಪಸೂಚನೆಗಳಿಂದ, ಬದಲಾವಣೆಗಳಿಂದ ಇಲ್ಲವೆ ತಟಸ್ಥವಾಗಿರಿಸುವುದರಿಂದ ಮತ್ತೊಂದು ಅಧಿವೇಶನವು ಅದನ್ನು ಬದಲಾಯಿಸಬಲ್ಲದೆಂಬುದಕ್ಕೆ ತಾವು ಒಪ್ಪುವಿರಷ್ಟೆ? A. I. C. C. ಯ ನಿರ್ಣಯದ ವಿರುದ್ಧವಾಗಿ ಮೇಲಧಿಕಾರದ ಸಂಸ್ಥೆಯಾದ ಕಾಂಗ್ರೆಸಿನ ಮಹಾಧಿವೇ

---

* ಮೊನ್ನಿನ ವರ್ಕಿಂಗ್ ಕಮಿಟಿಯ ಅಧಿವೇಶನದಲ್ಲಿ ಬಾಬು ಸುಭಾಷರ ಮೇಲೆ ಅದು ಕಡುತರವಾದ ಶಿಸ್ತುಭಂಗೋಪಾಯವನ್ನು ಕೈಕೊಂಡಿತಷ್ಟೆ. ಆ ನಿರ್ಣಯದ ಜೊತೆಗೆ ಆ ಸಂದರ್ಭದಲ್ಲಿ ಬೋಸ—ಪ್ರಸಾದ ಪತ್ರವ್ಯವಹಾರವನ್ನೂ ಪ್ರಕಟಿಸಿದೆ. ಸುಭಾಷರ ಪತ್ರವು ಅತ್ಯಂತ ಮನನೀಯವಾದ್ದರಿಂದ ಅದರ ಭಾಷಾಂತರವನ್ನು ಇಲ್ಲಿ ಕೊಡಲಾಗಿದೆ. ಈ ಸಂದರ್ಭದಲ್ಲಿ ಹೋದ ಸಲದ ನಮ್ಮ ನಾ. ಸಿ. ನೋಟ ಓದಿದರೆ 'ಜಯಂತಿ'ಯ ಸೂಕ್ಷ್ಮ ಮತ್ತು ದೂರದೃಷ್ಟಿ ವಾಚಕರನ್ನು ಬೆರಗುಗೊಳಿಸಬಹುದು. —ಸಂ. ಜ.

ನಕ್ಕೆ ನಾವು ಅಪೀಲು ಮಾಡಬಲ್ಲೆವು ಎಂಬುದನ್ನಾದರೂ ಒಪ್ಪುವಿರಲ್ಲವೆ? ಇದಲ್ಲದೆ ಬಹುಮತದವರನ್ನು ತಮ್ಮ ಪಕ್ಷಕ್ಕೆ ಒಲಿಸಿಕೊಳ್ಳಲು ಪ್ರಚಾರಕಾರ್ಯವನ್ನು ಮಾಡುವ ಅಧಿಕಾರವು ಅಲ್ಪಮತದವರಿಗಿದೆ ಎಂಬ ಮಾತನ್ನೂ ತಾವು ಒಪ್ಪಬಹುದಲ್ಲವೆ?

ಭಾಷಣಸ್ವಾತಂತ್ರ್ಯವೂ ಪ್ರಚಾರಕಾರ್ಯವೂ

“ಸಾರ್ವಜನಿಕ ಸಭೆಗಳಿಂದಾಗಲಿ ವೃತ್ತಪತ್ರಗಳ ಮುಖಾಂತರವಾಗಲಿ ಅಲ್ಲದೆ ಕಾಂಗ್ರೆಸಿಗರ ಎದುರು ನಮ್ಮ ವಿಚಾರಗಳನ್ನು ನಾವು ಬೇರೆ ಯಾವರೀತಿಯಿಂದ ಇಡಬಹುದಾಗಿದೆ? ಕಾಂಗ್ರೆಸು ಎಂದರೆ ಏನೊ ನಾಲ್ಕಾರು ಜನರ ಸಂಸ್ಥೆ ಎನುವಂತಿಲ್ಲ. ೪೫ ಲಕ್ಷದ ವರೆಗೆ ಅದರ ಸದಸ್ಯತ್ವದ ಸಂಖ್ಯೆ ಮುಟ್ಟಿದೆ ಎಂದು ನನ್ನ ಅಂದಾಜು. ಪತ್ರಿಕೆಗಳಲ್ಲಿ ಬರೆಯುವ, ಸಭೆಗಳನ್ನು ಕೂಡಿಸುವ ಅಧಿಕಾರ ನಮಗಿದ್ದರೆ ಮಾತ್ರ ಅನೇಕ ಕಾಂಗ್ರೆಸ್ ಕಾಲಾಳು (rank and file) ಗಳಿಗೆ ನಮ್ಮ ಸಂದೇಶವನ್ನು ಮುಟ್ಟಿಸಿ ಅವರನ್ನು ಒಲಿಸುವ ಆಶೆ ನಮಗಿದೆ.

ನಿರ್ಣಯಕ್ಕೆ ನಿತ್ಯತ್ವವಿದೆಯೆ?

“A. I. C. C. ಯಲ್ಲಿ ಒಮ್ಮೆ ಸ್ವೀಕೃತವಾದ ಗೊತ್ತುವಳಿಯು ವೇದವಾಕ್ಯದಂತೆ ತ್ರಿಕಾಲಾಬಾಧಿತವಾದದ್ದು ಎಂಬ ಅಭಿಪ್ರಾಯ ನಿಮಗಿದ್ದರೆ ಅದರ ಟೀಕೆಯನ್ನು ನಿಗ್ರಹಿಸುವ ನಿಮ್ಮ ಯೋಜನೆಯು ಯೋಗ್ಯವೆ ಎನಿಸುವುದು. ಆದರೆ ಪುನರ್ವಿಚಾರಣೆಯಿಂದ, ಉಪಸೂಚನೆಗಳಿಂದ ಬದಲಾವಣೆಗಳಿಂದ ಇಲ್ಲವೆ ತಟಸ್ಥವಾಗಿರಿಸುವದರಿಂದ ಒಮ್ಮೆ ಸ್ವೀಕೃತವಾದ ನಿರ್ಣಯವನ್ನು A. I. C. C. ಯ ಇನ್ನೊಂದು ಅಧಿವೇಶನದಲ್ಲಾಗಲಿ ಕಾಂಗ್ರೆಸಿನ ಮಹಾಧಿವೇಶನದಲ್ಲಾಗಲಿ ಮತ್ತೊಮ್ಮೆ ಚರ್ಚಿಸುವ ಅಧಿಕಾರ ನಮಗಿದೆ ಎಂದು ಒಪ್ಪಿಕೊಂಡರೆ, ನೀವು ನಡೆಯಿಸಿದ ವಿರೋಧನಿಗ್ರಹವು ಹೇಗೆ ಸಯುಕ್ತಿಕವೆನಿಸುವುದೆಂಬುದು ನನಗಂತೂ ತಿಳಿಯದಾಗಿದೆ.

ಶಿಸ್ತು ಸಂಘಟನೆಗಾಗಿ, ಷಂಢೀಕರಣಕ್ಕಾಗಿ ಅಲ್ಲ.

“ಶಿಸ್ತು ಎಂಬ ಶಬ್ದಕ್ಕೆ ನೀವು ಕೊಡುವ ಅರ್ಥವು ನನಗೆ ಸಮ್ಮತವಾಗುವ ಸಂಭವವಿಲ್ಲ. ಸ್ವತಃ ನಾನು ಶಿಸ್ತನ್ನು ಬಿಗಿಯಾಗಿ ಪಾಲಿಸುವವನೇ ಇರುವೆ; ಆದರೆ ‘ಶಿಸ್ತಿ’ನ ಹೆಸರಿನಲ್ಲಿ ಪೋಷಕವಾಗಬಹುದಾದ (ವಿಧಾಯಕ) ಟೀಕೆಯನ್ನೇ ನೀವು ತಡೆಯುತ್ತಿದ್ದೀರಿ ಎಂದು ನನ್ನ ಹೆದರಿಕೆ. ನಿಯಮಪ್ರಾಪ್ತವಾದ ಮತ್ತು ಪ್ರಜಾತತ್ವಕ್ಕನುಸರಿಸಿದ (ಮೂಲಭೂತ) ಹಕ್ಕುಗಳನ್ನೇ ಕಸಿದುಕೊಳ್ಳುವುದು ಶಿಸ್ತು ಎನಿಸದು. ಇದಲ್ಲದೆ ನಮ್ಮ ದೃಷ್ಟಿಯಿಂದ ದೇಶಕ್ಕೆ ಅನರ್ಥಕ ಎನಿಸುವ ಗೊತ್ತುವಳಿಗಳನ್ನು ವಿರೋಧಿಸಲು ನಮಗೆ ನಿಯಮಪ್ರಾಪ್ತ ಮತ್ತು ಪ್ರಜಾತತ್ವಾನುಸಾರಿಕ ಅಧಿಕಾರದ ಜೊತೆಗೆ ಈ ಎರಡು ಗೊತ್ತುವಳಿಗಳ ಯೋಗ್ಯಾಯೋಗ್ಯತೆಗಳನ್ನೂ ನೋಡಬಹುದಾಗಿದೆ. ಈಗ ತಿಳಿಯುವುದು ನಮ್ಮ ನಿಷೇಧವು ಅವಶ್ಯವೆ ಆಗಿತ್ತೆಂದು.”

ಈ ಗೊತ್ತುವಳಿಗಳ ಫಲಾಫಲವಿಚಾರ

“ಇವೆರಡು ಗೊತ್ತುವಳಿಗಳನ್ನು ಆಚರಣೆಯಲ್ಲಿ ತಂದರೆ ಕೆಳಗೆಕಾಣಿಸಿದ ಪ್ರಸಂಗಗಳು ಉದ್ಭವಿಸುವುವೆಂದು ನಮ್ಮ ಅಭಿಪ್ರಾಯ:—

(೧) ಶಾಸನಬದ್ಧತೆ (Constitutionalism) ಯ ಕಡೆಗೆ ಎಳೆಯುತ್ತಿರುವ ಪ್ರವಾಹಕ್ಕೆ ಜೋರುಬಂದಂತಾಗುವುದು,

(೨) ಕಾಂಗ್ರೆಸ್ ಸಂಸ್ಥೆಗಳಿಗಿಂತ ಪ್ರಾಂತಿಕ ಮಂತ್ರಿಮಂಡಳಗಳಿಗೆ ಮಹತ್ತ್ವ, ಶಕ್ತಿ, ಅಧಿಕಾರ ಹೆಚ್ಚುವುವು,

(೩) ಕಾಂಗ್ರೆಸ್ಸು ಮತ್ತು ಸಾಮಾನ್ಯ ಜನತೆಗಳ ನಡುವೆ ಒಂದು ಕೃತ್ರಿಮ (ನಿರರ್ಥಕ) ಅಂತಃಪಟ ಹಿಡಿದಂತಾಗುವುದು,

ಕೊನೆಯದಾಗಿ (೪) A. I. C. C. ಯು ಕಾಂಗ್ರೆಸಿನ ಕಾಲಾಳ್ಗಳಿಂದ ದೂರವಾಗುವುದು. ಇದಲ್ಲದೆ ಕಾಂಗ್ರೆಸಿನ ಕ್ರಾಂತಿಕಾರಕ ಮನೋವೃತ್ತಿಯೆ ಈ ಗೊತ್ತುವಳಿಗಳಿಂದ ಕರಗಿಹೋಗಬಹುದಾಗಿದೆ. ಹೀಗಿರುವಾಗ, ದೇಶದ ಅತ್ಯಂತ ಹಿತದೃಷ್ಟಿಯಿಂದ, ಈ ಗೊತ್ತುವಳಿಗಳನ್ನು ಆಚರಣೆಯಲ್ಲಿಯೆ ತರಲಾರದಂತೆ ಕೂಡಲೆ ವ್ಯವಸ್ಥೆ ಮಾಡಬೇಕು; ತರುವಾಯ ಯೋಗ್ಯರೀತಿಯಿಂದ ಅವುಗಳನ್ನು ಬದಲಾಯಿಸಬೇಕು ಇಲ್ಲವೆ ಮೂಲೆಗಿರಿಸಬೇಕು.

ಹಿಂದಿನ ಆಧಾರ

“೧೯೨೨ರ ಗಯಾ ಕಾಂಗ್ರೆಸಿನ ಕಾಲಕ್ಕೂ ಆ ತರುವಾಯದಲ್ಲೂ ಜರುಗಿದ ಕೆಲವು ಘಟನೆಗಳನ್ನು ಈ ಸಂದರ್ಭದಲ್ಲಿ ನಿಮ್ಮ ಲಕ್ಷ್ಯಕ್ಕೆ ತಂದುಕೊಡುವುದು ನನಗೆ ಅನಿವಾರ್ಯವಾಗಿದೆ. ಆ ಕಾಲಕ್ಕೆ ಸ್ವರಾಜ್ಯಪಕ್ಷವು ಏನು ಮಾಡಿತೆಂಬುದನ್ನು ಮರೆಯಬಾರದಂತೆ ಅನುಗ್ರಹಿಸಿರಿ. ಗಯಾ ಕಾಂಗ್ರೆಸಿನ ಗೊತ್ತುವಳಿಯನ್ನು A. I. C. C. ಯು ಸುಧಾರಿಸಿದ (Amended) ಮೇಲೆ ಗುಜರಾಥ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಅದನ್ನು ವಿರೋಧಿಸಲು ನಿರ್ಣಯಿಸಿತು. ದಯವಿಟ್ಟು ಇದನ್ನೂ ತಾವು ಮರೆಯಬಾರದು.

ಇಂದಿನ ನಮ್ಮ ಆಚರಣೆ

“ಕೊನೆಯದಾಗಿ, ಮಹಾತ್ಮಾ ಗಾಂಧಿಯವರು ‘ಯಂಗ್ ಇಂಡಿಯಾ’ದಲ್ಲಿ ಬರೆದದ್ದನ್ನೂ ಮರೆಯಬೇಡಿರಿ. ನೆನಪಿನಿಂದಲೆ ನಾನಿದನ್ನು ಹೇಳುತ್ತಿರುವೆ. ‘ಅಲ್ಪಮತೀಯರಿಗೆ ಬಂಡನ್ನೆಬ್ಬಿಸುವ ಅಧಿಕಾರವಿದೆ’ (ಎಂದು ಅವರು ಬರೆದದ್ದು). ಬಹುಸಂಖ್ಯಾಕರ ನಿರ್ಣಯದ ವಿರುದ್ಧ ಬಂಡನ್ನೆಬ್ಬಿಸುವಷ್ಟು ದೂರ ನಾವಿನ್ನೂ ಸಾಗಿಲ್ಲ. ವಿರೋಧವನ್ನು ಲೆಕ್ಕಿಸದೆ ಬಹುಸಂಖ್ಯಾಕರು ಸ್ವೀಕರಿಸಿದ ನಿರ್ಣಯಗಳನ್ನು ಟೀಕಿಸುವುದಷ್ಟೆ ನಾವು ಈಗ ಮಾಡಿದ್ದು; ನಮಗೆ ಆ ಸ್ವಾತಂತ್ರ್ಯವೂ ಇರುವುದೆಂದು ಭಾವಿಸಿದ್ದು.

ಮಹಾಭೂತವು ಭೂತವಾದರೆ ಪಾತಕಿಗಳ ಅಗ್ರಗಣ್ಯ ನಾನು!

“ಯಾವುದನ್ನು ನಾವು ನಮ್ಮ ಮೂಲಭೂತ ಹಕ್ಕು ಎಂದು ತಿಳಿದಿರುವೆವೊ ಅದನ್ನು ನೀವು ಭೂತ ಎಂದು ಭಾವಿಸಿದ್ದಕ್ಕೆ ನನಗೆ ಆಶ್ಚರ್ಯವಾಗಿದೆ. ನನ್ನ ಈ ಜವಾಬು ತಮಗೆ ಸಮಾಧಾನಕಾರಕ-

(೩೩೦ ನೆಯ ಪುಟ ನೋಡಿರಿ.)

ಚಿಕ್ಕ ಹುಡುಗಿಯರು, ಫ್ರಾಕ್ ಇಲ್ಲವೆ ಪರಕರಗಳೊಳಗೆ ತೊಡುವುದಕ್ಕಾಗಿ ಈಗಿನ ಕಾಲದಲ್ಲಿ ಇದನ್ನು ಉಪಯೋಗಿಸುವರು. ಹೊಸಬಗೆಯ ಫ್ರಾಕ್ ಅಥವಾ ತೆಳುವಾದ ಪರಕರಗಳನ್ನುಟ್ಟಾಗ ಚಡ್ಡಿ ಅತ್ಯವಶ್ಯವಾಗಿ ಬೇಕು.



ಚಡ್ಡಿ

(ಅಂಡರ್ ವೇರ್)

★

ಶ್ರೀ. ಹಳಪೇಟೆ ಚಿಂತಾಮಣಿರಾಯರು

ಅಳತೆ:— ಆಸನ (Seat) ೨೪ ಇಂಚು; ಉದ್ದ ೧೨ ಇಂಚು.

ಚಿತ್ರಿಸುವುದು:—

ಮುಂಭಾಗ

ಬ, ಅ, ಕ ಕಾಟಕೋನ.



ಅ, ಉ = ೭" ಎಂದರೆ ಆಸನದ ೧/೩—೧".

ಅ, ಕ = ೧೨" ಉದ್ದ.

ಉ ಮತ್ತು ಕ ಬಿಂದುಗಳನ್ನು ಮುಂದೆ ಎಳೆ.

ಉ, ಗ = ೯" ಎಂದರೆ ಆಸನದ ೧/೩+೧".

ಗ, ಖ = ೨" ಎಂದರೆ ಆಸನದ ೧/೧೨.

ಖ ವನ್ನು ಮೇಲಕ್ಕೆಳೆದು ಬ ಕ್ಕೆ ಕೂಡಿಸು.

ಗ, ಬ ಚಿತ್ರದಂತೆ ತೆಗೆ.

ಕ, ಚ = ೮" ಎಂದರೆ ಆಸನದ ೧/೩.

ಗ, ಚ ಕೂಡಿಸು.

ಹಿಂಭಾಗ

ಮುಂಭಾಗವನ್ನು ಅರಿವೆಯ ಮೇಲಿಟ್ಟುಕೊಂಡೇ ಹಿಂಭಾಗವನ್ನು ಚಿತ್ರಿಸು.

ಗ, ರ = ೧ ೧/೩".

ಚ, ತ = ೧ ೧/೩".

ರ, ತ ಕೂಡಿಸು.

ಬ, ಮ = ೧/೩".

ಮ, ಜ = ೧".

ರ, ಮ, ಜ ಚಿತ್ರದಂತೆ ಕೂಡಿಸು.

ಜ, ಅ ಕೂಡಿಸು.

ಕತ್ತರಿಸುವುದು:— ಚಿತ್ರದಲ್ಲಿರುವಂತೆ ಮುಂಭಾಗಕ್ಕೆ ೨, ಹಿಂಭಾಗಕ್ಕೆ ೨, ಹೀಗೆ ನಾಲ್ಕು ತುಕುಡಿಗಳು ಬೇಕು. (ಅ, ಕ ಭಾಗಕ್ಕೆ ಈ ತುಂಡುಗಳನ್ನು ಅಖಂಡವಾಗಿಯೂ ಇಡಬಹುದು.)

ಕತ್ತರಿಸುವಾಗ:— ಕ, ಚ ದ ಕೆಳಗೆ ೨ ಇಂಚು ಅರಿವೆಯನ್ನು ಮಡಿಚುವುದಕ್ಕಾಗಿ ಹೆಚ್ಚಿಗೆ ಇಡಬೇಕು.

ಹಾಗೂ ಬ, ಅ. ಅ, ಜ. ಭಾಗಕ್ಕೂ ೧/೨ ಇಂಚು ಅರಿವೆಯನ್ನು ಹೆಚ್ಚಿಗೆ ಇಡಬೇಕು.

ಬೇಕಾಗುವ ಅರಿವೆ:—

೨೭" ಅಗಲವುಳ್ಳ ಅರಿವೆಯು ೧ ವಾರ ಬೇಕು.

(ಇದರಲ್ಲಿ ಅರಿವೆ ಉಳಿಯುವುದು. ಬಿಳಿಯದನ್ನಾಗಲಿ ಒಂದೇ ಬಣ್ಣದ ಅರಿವೆಯನ್ನಾಗಲಿ ತೆಗೆದುಕೊಂಡರೆ ಹೆಚ್ಚು ಅನುಕೂಲ; ಅರಿವೆ ಉಳಿಯದಂತೆ — ಅಡ್ಡಕೂಡಿಸಿ ಆದರೂ — ಕತ್ತರಿಸಲು ಬರುವುದು.)

(೩೨೯ ನೆಯ ಪುಟದಿಂದ ಮುಂದುವರಿದುದು.)

ವೆನಿಸುವುದೆಂದು ಆಶಿಸುತ್ತೇನೆ. ಒಂದು ವೇಳೆ ಹಾಗೆನಿಸದೆ ಶಿಸ್ತು ಭಂಗೋಪಾಯವನ್ನೆ ಕೈಕೊಳ್ಳಲು ನೀವು ನಿರ್ಣಯಿಸಿದರೆ, ನನಗೆ ಸಂತೋಷವೆ ಇದೆ; ನನ್ನ ದೃಷ್ಟಿಯಿಂದ ಯೋಗ್ಯವಾದ ಒಂದು ತತ್ತ್ವಕ್ಕಾಗಿ ನಾನು ಅದಕ್ಕೆ ನಗೆಮೊಗದಿಂದಲೇ ಸಿದ್ಧನಾಗುವೆ. ಕೊನೆಗೆ ಬೇಡುವುದಿಷ್ಟೆ: ಜುಲೈ ೯ಕ್ಕೆ ನಡೆದುದಕ್ಕಾಗಿ ಯಾವ ಕಾಂಗ್ರೆಸಿಗನಿಗಾದರೂ ದಂಡನೆಯನ್ನು ಮಾಡುವಾಗ ನನ್ನನ್ನೂ ದಂಡಿಸಬೇಕು. ಜುಲೈ ೯ ಕ್ಕೆ ಅಖಿಲಭಾರತ ದಿನಾಚರಣೆಯನ್ನು ಮಾಡಿದ್ದು ಅಪರಾಧವೆನಿಸಿದರೆ ಅಪರಾಧಿಗಳ ಅಗ್ರಗಣ್ಯ ನಾನೇ ಎಂದು ಒಪ್ಪಿಕೊಳ್ಳುವೆ. "

೧೧೦. ನಾದಲೀಲೆ

ಶ್ರೀ. 'ಅಂಬಿಕಾತನಯದತ್ತ'ರ ಕವನ ಸಂಗ್ರಹ

ಇದರಲ್ಲಿ ಶ್ರೀಮಾನ್ ಬೇಂದ್ರೆಯವರ ಹೊಸ ಹಳೆಯ ೫೦ ಕವನಗಳು ಸಂಗ್ರಹಿತವಾಗಿರುತ್ತವೆ. ಕನ್ನಡಿಗರಿಗೆಲ್ಲ ಸುಪರಿಚಿತರಾದ ಶ್ರೀ. 'ಶ್ರೀನಿವಾಸ (ಮಾಸ್ತಿ ವೆಂಕಟೇಶ ಐಯ್ಯಂಗಾರ್)' ಅವರು ವಿಶದವಾದ ಮುನ್ನುಡಿಯನ್ನು ಬರೆದು, ಅದರಲ್ಲಿ 'ಅಂಬಿಕಾತನಯದತ್ತರ' ಕವಿತೆಗಳಲ್ಲಿ ಆಡಕವಾಗಿರುವ ಗುಣಗಳೆಂತಹವೆಂಬುದನ್ನು ತುಂಬುತುಂಬಾದ ಮಾತಿನಲ್ಲಿ ಹೇಳಿರುತ್ತಾರೆ. ಅವರು ಮುನ್ನುಡಿಯ ಕೊನೆಯಲ್ಲಿ ಹೇಳಿರುವ ಈ ಮಾತನ್ನು ಅನೇಕರು ಲಕ್ಷ್ಯದಲ್ಲಿ ಇಡುವಂತಹದಿದೆ:—

"....ಎಲ್ಲ ಒಳ್ಳೆಯದಕ್ಕೂ ದಾರಿದ್ರ್ಯ ಅಡಸಿರುವ ನಮ್ಮ ಈಗಿನ ಸ್ಥಿತಿಯಲ್ಲಿ ಹೀಗೆ ಒಳ್ಳೆಯ ಮಾತಿಗೂ ಸ್ವಲ್ಪ ಬರವೇ ಬಂದಿದೆ. ಯಾರಾದರೂ ಅವನ್ನು ಹೆಚ್ಚಾಗಿ ಹೇಳಿದರೆ ಸಹತನದಲ್ಲಿ ದುಂದುಮಾಡುವವನ ವಿಷಯ ಹೇಗೆ ಬೇಸರ ಹುಟ್ಟಬಹುದೊ ಹಾಗೆ ನಮ್ಮ ಮನಕ್ಕೆ ಬೇಸರವೂ ಹುಟ್ಟುತ್ತದೆ. ಆದರೆ ಒಳ್ಳೆಯ ಮಾತು ಕೊಟ್ಟರೆ ಹೆಚ್ಚವಾಗುವ ಬೀಳವಲ್ಲ ಆಗಿಯಲ್ಲ, ಅದು ನಿಜವಾದಲ್ಲಿ ಅದನ್ನು ಹೇಳುವುದಕ್ಕೆ ಸಂಕೋಚಪಡಬೇಕಾದದ್ದಿಲ್ಲ. ನಾನು ಸಂಕೋಚವಿಲ್ಲದೆ ಬೇಂದ್ರೆಯವರ ವಿಷಯವಾಗಿ ಇದನ್ನು ಹೇಳುತ್ತೇನೆ. ಇವರ ಕಾವ್ಯ Promising ಮಾತ್ರವಲ್ಲ; ಇದರಲ್ಲಿ Fulfilment ಎನ್ನುವುದು ಬಂದಿದೆ."

ಸಹೃದಯ ಶ್ರೀನಿವಾಸರು ಹೇಳುವಂತೆ ಒಳ್ಳೆಯದಿದ್ದುದನ್ನು ಒಳ್ಳೆಯದೆಂದು ಹೇಳಲು ಮಾತಿನ ಕೃಪಣತನವನ್ನು ತೋರಿಸಲಾಗದೆಂಬುದೇನೊ ಸರಿಯಾದ ಮಾತು. ಅದರಂತೆಯೆ ಕೃತಿಯ ವಿಮರ್ಶೆಯನ್ನು ನಿಷ್ಪಕ್ಷಪಾತ ಬುದ್ಧಿಯಿಂದ ಮಾಡುವ ಪ್ರಾಮಾಣಿಕ ವಿಮರ್ಶಕರಿಗೆ ಇಲ್ಲದ್ದೊಂದು ವಿಪರೀತ ಬಣ್ಣವನ್ನೆಳೆದು ಅವರ ಪ್ರಾಮಾಣಿಕತೆಯ ವಿಚಾರದಲ್ಲಿ ಸಂಶಯಗೊಳ್ಳಬಾರದೆಂಬುದೂ ಸರಿಯಾದ ಮಾತು. ಒಬ್ಬ ಕೃತಿಕಾರನ ಕೃತಿಗಳಲ್ಲಿಯೆ ಕೆಲವು ಅಪ್ರತಿಮವಾಗಿ ಇರಬಹುದು. ಇನ್ನು ಕೆಲವು ಸರ್ವಸಾಮಾನ್ಯವಾಗಿ ಇರಬಹುದು. ಬೇರೆ ಕೆಲವು ಕಾರಣಾಂತರಗಳಿಂದ ಕ್ಲಿಷ್ಟವಾಗಿಯೊ, ಅರ್ಥಹೀನವಾಗಿಯೊ, ಆಭಾಸಯುಕ್ತವಾಗಿಯೊ ಇರಬಹುದು. ವಿಮರ್ಶಕ ಒಳ್ಳೆಯದನ್ನು ಮನವಾರೆ ಹೊಗಳುವನು; ಜಳ್ಳನ್ನು ಜಳ್ಳೆಂದು ನಿರ್ವಿಕಾರಬುದ್ಧಿಯಿಂದಲೆ ಹೇಳುವನು. ಆದರೆ ಸದ್ಯದ ಕರ್ನಾಟಕದಲ್ಲಿ—ಬಹಳ ಜನರಿಗೆ ಬರಿಯ ಹೊಗಳಿಕೆಯೆ ಬೇಕಾಗಿರುವುದರಿಂದಲೊ ಏನೊ—ನಿಜವಾದ ವಿಮರ್ಶಕನ ಬೆಲೆಯನ್ನರಿತುಕೊಳ್ಳುವವರು ಎಲ್ಲಿಯೊ ಕೆಲವು ಜನರು. ನಾನಿಲ್ಲಿ ಹೇಳುತ್ತಿರುವುದು ಪ್ರಸ್ತುತ ಕಾವ್ಯಸಂಗ್ರಹವನ್ನೂ ಕಾವ್ಯಕರ್ತೃವನ್ನೂ ಸಂಬಂಧಿಸಿದುದಲ್ಲ. ವಿಮರ್ಶೆಯ ಕ್ಷೇತ್ರದಲ್ಲಿ ಕಂಡುಂಡ ಮಾತು.

'ನಾದಲೀಲೆ' ಯಲ್ಲಿಯ ಬಹಳ ಕವನಗಳು 'ಗರಿ' ಯಲ್ಲಿಯ ಕವನಗಳಂತೆಯೆ ಬಹುಜನಪ್ರಿಯವಾದುವುಗಳಾಗಿವೆ. ಆದರೆ 'ಗರಿ' ಯ ಕವನಗಳಿಗಿಂತ ಇಲ್ಲಿಯ ಕವನಗಳಲ್ಲಿರುವ ವೈಶಿಷ್ಟ್ಯವೆಂದರೆ ಇದರಲ್ಲಿಯ ಹೆಚ್ಚಿನ ಕವನಗಳು ಇತ್ತೀಚೆಗೆ ಬರೆದುವುಗಳು. ಎಂತಲೆ ಇವುಗಳಲ್ಲಿ ಭಾವದ ಹದಗಾರಿಕೆ ಹೆಚ್ಚಾಗಿದೆ. ಮಾತು ಹಣ್ಣಾಗಿ ರುಚಿಕೊಡುತ್ತಲಿದೆ. ಕವನಗಳ ಗತಿಯೂ ನಾದವೂ ಕಿವಿ-ಮನಗಳನ್ನು ಹಿಡಿದು ನಿಲ್ಲಿಸುವಂತಿವೆ. 'ಆಡುವ ಮಾತನ್ನೆಲ್ಲ ಕಾವ್ಯಮಾಡುವ ಮನೋಧರ್ಮ ಶ್ರೀ. ಬೇಂದ್ರೆಯವರಲ್ಲಿದೆ' ಎಂಬ 'ಶ್ರೀನಿವಾಸರ' ಮಾತನ್ನು ಸತ್ಯಮಾಡುವ ಪ್ರತಿಭೆಯಿಂದ ಕೂಡಿವೆ.

ಈ ಸಂಗ್ರಹದಲ್ಲಿ ಕವಿಯ ಕೆಲವು ಆತ್ಮಗೀತಗಳೂ, ಕೆಲವು ಜೀವನಗೀತಗಳೂ, ಕೆಲವು ಸಾಮಾಜಿಕ ಸಮಸ್ಯೆಗಳನ್ನೊಳಗೊಂಡ ಕವನಗಳೂ ಇವೆ. 'ಏಳು ಕನ್ನಿಕೆಯರು' 'ಚೆನ್ನ' ಮೊದಲಾದ ಒಂದೆರಡು, ಕನಸನ್ನೆ ಕವನವನ್ನಾಗಿ ಹೆಣೆದುವುಗಳು ಇವೆ. 'ಪಾರಿಜಾತ' 'ಶ್ರಾವಣ' ದಂತಹ ವರ್ಣನಾತ್ಮಕ ಕವನಗಳು ೩–೪ ಇವೆ. 'ಕವನ' 'ಭಾವಗೀತ'ಗಳಂತಹ ನಿರಾಕಾರ ವಿಷಯಗಳಿಗೆ ಆಕಾರಗಳನ್ನು ಕಲ್ಪಿಸಿ ಹಾಡಿದ ರೂಪಕಗೀತಗಳೂ ಇವೆ.

ಕನಸಿನ ಕವನಗಳೂ ಕವಿಯ ವೈಯಕ್ತಿಕ ಜೀವನಕ್ಕೆ ಹೆಚ್ಚಾಗಿ ಸಂಬಂಧಿಸಿದ 'ಶಕುನದ ಹಕ್ಕಿ' 'ನಾಲಗೆ' 'ಮಲ್ಲಾಡದ ಗಿಣಿಯೆ' 'ನಾಯಕ' 'ಎದೆಯ ಒಕ್ಕಲಿಗ' 'ನಿರ್ಭಯಾ' ಮೊದಲಾದ ಆತ್ಮಗೀತಗಳೂ, ದರ್ಶನಸಮತೆಯ ಅಭಾವದ ಮೂಲಕ ಬಹುಜನರಿಗೆ ಹೆಚ್ಚಾಗಿ ರುಚಿಸದಿರುವ ಸಂಭವವಿದೆ. ಆದರೆ 'ಬನ್ನಿ ಬನ್ನಿ ಕನಸುಗಳೆ' 'ತಾಯಿ-ಕೂಸು' 'ಋತುಗಾನ' 'ಚಿಗುರೆ' 'ಇದೊ ಪಂಜರ' 'ಅದುವರೆಗೂ' 'ಅನಂತ ಪ್ರಣಯ' ಮೊದಲಾದುವು ಕವಿಯ ವೈಯಕ್ತಿಕ ಅನುಭವಗಳಾದರೂ ದರ್ಶನಸ್ಪಷ್ಟತೆಯ ಮೂಲಕ ಇವು ಹಲವರಿಗೆ ರುಚಿಸಬಹುದಾಗಿದೆ. ಸಾಮಾಜಿಕ ಸಮಸ್ಯೆಗಳನ್ನು ವಿವರಿಸಿ ತೋರಿಸುವ ರೌದ್ರಭಾವದ 'ಮನುವಿನ ಮಕ್ಕಳು' 'ಯಜ್ಞ' 'ಅನ್ನಾವತಾರ' 'ಭೂಮಿತಾಯಿಯ ಚೊಚ್ಚಲಮಗ' 'ಕುರುಡು ಕಾಂಚಾಣ' 'ಸಿಟ್ಟು-ಸಾಂತಿ' 'ಮೊದಲಗಿತ್ತಿ' 'ಹೆಣದಹಿಂದೆ' ಮೊದಲಾದ ಕವನಗಳೂ 'ನೀ ಹೀಂಗ ನೋಡಬ್ಯಾಡ ನನ್ನ' 'ನಾನು ಬಡವಿ' 'ಮನದನ್ನೆ' ಮೊದಲಾದ ಜೀವನಗೀತಗಳೂ ತಮ್ಮ ಕಲಾಪರಿಪೂರ್ಣ

ತೆಯ ಮೂಲಕ ಈಗಲೆ ಅನೇಕ ಜನರ ಮನದಲ್ಲಿ ಮನೆಮಾಡಿರುವುವು. ಕೆಲವಂತೂ ಬೀದಿಪಾಡಾಗಿರುವಷ್ಟು ಲೋಕಪ್ರಿಯವಾಗಿರುವುವು.

ಶ್ರೀ. ಬೇಂದ್ರೆಯವರ ಕವನಗಳನ್ನು ಭಾವಸಾಮಗ್ರ್ಯದ ದೃಷ್ಟಿಯಿಂದ ಕಲಾ-ಪರಿಪೂರ್ಣವಾದುವುಗಳೆಂದು ಹೇಳಬಹುದಾದರೂ ಲಕ್ಷಣಶಾಸ್ತ್ರಜ್ಞರು ತಮ್ಮ ದೃಷ್ಟಿಯಲ್ಲಿ, ಕಾವ್ಯಾಂಗಗಳಲ್ಲಿ ಹಲವು ದೋಷಗಳನ್ನು ಕಂಡುಹಿಡಿಯಬಹುದಾಗಿದೆ. ಒಂದೊಂದು ಸಲ ಪುನರುಕ್ತಿಯೆನಿಸಬಹುದು, ಇನ್ನೊಂದು ಕಡೆ ಶಬ್ದದ ಅನುಚಿತತೆ ಎನಿಸಬಹುದು. ಮತ್ತೊಂದು ಕಡೆ ಪ್ರಾಸಕ್ಕಾಗಿ ಎಳೆದು ತಂದ ಮಾತೆನಿಸಬಹುದು. ಬೇರೆ ಕೆಲವು ಕಡೆ ಭಾವಕ್ಲಿಷ್ಟತೆ ಕಾಣಬಹುದು. ಆದರೆ ಲಕ್ಷಣಶಾಸ್ತ್ರಜ್ಞರು ತಮ್ಮ ಕೃತಿಗಳಲ್ಲಿ ಇಂತಿಂತಹ ದೋಷಗಳನ್ನು ಕಂಡೆಕಾಣುವರೆಂಬ ತಿಳಿವಳಿಕೆ ಶ್ರೀ. ಬೇಂದ್ರೆಯವರಲ್ಲಿ ಇದೆಯೆಂಬುದನ್ನು ನಾವು ಬಲ್ಲೆವು. ಇವು ಅವರ ಲಕ್ಷಣದೃಷ್ಟಿಗೂ ದೋಷಗಳಾಗಿಯೆ ತೋರುವುವು. ಆದರೆ ಬೇಂದ್ರೆಯವರ ಕೃತಿಯು 'ಮಾರ್ಗ'ಕ್ಕಿಂತ 'ದೇಸಿ'ಯನ್ನು ಹೆಚ್ಚಾಗಿ ಅನುಸರಿಸುತ್ತ ಹೊರಟುದರಿಂದ, ಬೆಲ್ಲದೊಂದಿಗೆ ಬೆರೆದಿರುವ ಕಸುರು-ಕಸಗಳಂತೆ ದೋಷಗಳೂ ಸವಿಯಾಗಿ ಹೋಗಿರುವುವು. 'ನಾದಲೀಲೆ'ಯಿದು ಶ್ರೀ. ಬೇಂದ್ರೆಯವರ ನಾಲ್ಕನೆಯ ಕಾವ್ಯಸಂಗ್ರಹ. ಇದನ್ನೋದಿದವರು ಅವರ ಮುಂದಿನ ಸಂಗ್ರಹವನ್ನು ಅಪೇಕ್ಷಿಸಿದರೆ ಅದೊಂದು ಆಶ್ಚರ್ಯದ ಮಾತಲ್ಲ.

—ಕೆ. ಕೆ. ಎಸ್.

೧೨೨. ಹರಿಭಕ್ತಿ ಸುಧೆ

ಲೇಖಕರು :

ಶ್ರೀ. ರಂಗನಾಥ ರಾಮಚಂದ್ರ ದಿವಾಕರರು

ಇದು ದಾಸಸಾಹಿತ್ಯದೊಳಗಿಂದ ಆಯ್ದುತೆಗೆದ ಬೇರೆ ಬೇರೆ ದಾಸರ ಕೀರ್ತನೆಗಳ ಸಂಗ್ರಹ. ಉಗಾಭೋಗ, ಸುಳಾದಿಗಳೂ ಕೆಲವು ಇವೆ. ಈ ಸಂಗ್ರಹದಲ್ಲಿಯ ಕೀರ್ತನೆಗಳನ್ನು ಭಾವಾನುಸಾರಿಯಾಗಿ ಬೇರೆ ಬೇರೆ ಭಾಗಗಳಲ್ಲಿ ಅಡಕಗೊಳಿಸಿರುವರಲ್ಲದೆ ಪ್ರತಿಯೊಂದು ಭಾಗದ ಪ್ರಾರಂಭದಲ್ಲಿಯೂ ಆದರಲ್ಲಿ ಅಡಕವಾದ ಕೀರ್ತನೆಗಳ ವೈಶಿಷ್ಟ್ಯವನ್ನು ಕುರಿತು ಹೇಳಲಾಗಿದೆ. ಗ್ರಂಥದ ಮೊದಲು ಒಟ್ಟು ಭಕ್ತಿಯನ್ನೂ ವೈಷ್ಣವದಾಸರ ಭಕ್ತಿಯನ್ನೂ ದಾಸಸಾಹಿತ್ಯವನ್ನೂ ಕುರಿತು ಸ್ಥೂಲವಾಗಿ ಚರ್ಚಿಸಿದ ಮುನ್ನುಡಿಯೂ ಇದೆ. ಕೊನೆಗೆ ಬೇರೆ ಬೇರೆ ಎಳು ಪರಿಶಿಷ್ಟಗಳಿದ್ದು ಅವುಗಳಲ್ಲಿ '**ದಾಸರ ಪರಿಚಯ**' '**ಕಥಾಸಂದರ್ಭಗಳು**' ಎಂಬುವು ಉಪಯುಕ್ತ ವಿಷಯಗಳಿಂದ ಕೂಡಿದುವುಗಳಾಗಿವೆ.

ದಾಸಸಾಹಿತ್ಯದ ಒಳ್ಳೆಯ ಸಂಗ್ರಹ ನಮ್ಮಲ್ಲಿ ಸಿಕ್ಕುತ್ತಲೆ ಇಲ್ಲ. ನಾಲ್ಕಾರು ಕಡೆಗೆ ದಾಸಸಾಹಿತ್ಯದ ಕೆಲಕೆಲವು ಸಂಗ್ರಹಗಳು ಪ್ರಕಟವಾಗಿವೆಯಾದರೂ ಅವುಗಳಲ್ಲಿ ಸಂಗ್ರಹಕಾರರ ವ್ಯಕ್ತಿತ್ವದ ಮೂಲಕ ಮೂಲದಲ್ಲಿ ಎಷ್ಟೆಷ್ಟೊ ವಿಕಾರಗಳು ಬಂದುಬಿಟ್ಟಿರುವುವು. ನಿಜವಾಗಿಯೂ ಸರ್ವಮಾನ್ಯವಾಗುವಂತೆ ದಾಸಸಾಹಿತ್ಯವನ್ನು ಸಂಗ್ರಹಿಸಬೇಕಾದರೆ ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಪ್ರಚಾರದಲ್ಲಿರುವ ಬೇರೆ ಬೇರೆಯ ಪಾಠಾಂತರಗಳನ್ನು ಸಂಗ್ರಹಿಸಿ ಪ್ರಕಟಿಸಬೇಕಾಗುವುದು. ಅದು ಒಬ್ಬರಿಂದಲೆ ನೀಗುವ ಕೆಲಸವಲ್ಲ. ಯಾವುದಾದರೊಂದು ಸಾಹಿತ್ಯಸಂಸ್ಥೆಯೊ ಧಾರ್ಮಿಕ ಸಂಸ್ಥೆಯೊ ಈ ಕೆಲಸವನ್ನು ಕೈಕೊಂಡು ಎಲ್ಲ ಭಾಗದ ದಾಸಸಾಹಿತ್ಯಾಭ್ಯಾಸಿಗಳದೊಂದು ಮಂಡಲವನ್ನೇರ್ಪಡಿಸಿ, ಅದರ ಮೂಲಕ ಸಂಗ್ರಹಕಾರ್ಯವನ್ನು ಮಾಡಬೇಕು. ಹೀಗೆ ಮಾಡದೆ ವೈಯಕ್ತಿಕವಾಗಿ ಈ ಕಾರ್ಯಕ್ಕೆ ಯಾರೇ ಕೈಹಾಕಲಿ, ಅವರ ಕಾರ್ಯದಲ್ಲಿ ಲೋಪ-ದೋಷಗಳುಳಿಯುವುದು ಸ್ವಾಭಾವಿಕವಾಗಿದೆ. ಆದರಂತೆಯೆ ಈ 'ಹರಿದಾಸ ಸುಧೆ'ಯಲ್ಲಿಯೂ ಲೋಪದೋಷಗಳಿಗೆ ಆಸ್ಪದವಿದೆಯೆಂದು ಹೇಳಬಹುದು. ಆದರೂ ಬೇರೆ ಬೇರೆ ದಾಸರ ಇಷ್ಟೊಂದು ಕೀರ್ತನೆಗಳು ಒಂದೆ ಒಂದು ಸಂಗ್ರಹದಲ್ಲಿ ಸಿಕ್ಕುವಂತೆ ಮಾಡಿದುದು ದಾಸಸಾಹಿತ್ಯದ ಅಭಿಮಾನಿಗಳಿಗೆ ಒಂದು ಉಪಕಾರವೆ ಸರಿ. ಶ್ರೀಮಾನ್ ದಿವಾಕರರು ಇದೇ ಗ್ರಂಥದ ಎರಡನೆಯ ಭಾಗವಾಗಿ ದಾಸಸಾಹಿತ್ಯವಿಮರ್ಶಾತ್ಮಕ ಗ್ರಂಥವೊಂದನ್ನು ಬರೆಯಲಿದ್ದಾರೆ. ಅದನ್ನು ಆತುರದಿಂದಲೂ ಆದರದಿಂದಲೂ ನಿರೀಕ್ಷಿಸುತ್ತಿರುವೆವು.

—ಸಂ..... ಕೆ

೧೨೩. ಕ್ಷಮಾ ಅಥವಾ ಗುರುಕಾಣಿಕೆ

ಬರೆದವರು:- ಶ್ರೀ. ನಾ. ಭ. ಮಳಲಿ

ಇದೊಂದು ಚಿಕ್ಕ ನಾಟಕ. ಮಹಾಭಾರತದಿಂದ ಆಯ್ದುಕೊಂಡ ಸನ್ನಿವೇಶವೊಂದನ್ನು ಒಳಗೊಂಡಿದೆ. ಬರೆದ ಭಾಷೆಯು ರೀತಿ ಒಂದು ಗತಿಯಲ್ಲಿರುವುದರಿಂದ ಸರಳರಗಳೆಯಲ್ಲಿ ಬರೆದಿರುವರೇನೊ ಎಂದು ಆಭಾಸವಾಗುವಂತಿದೆ.

ಮಹಾಭಾರತದ ವಿವಿಧ ಸನ್ನಿವೇಶಗಳೂ ವಿವಿಧ ಪಾತ್ರಗಳೂ ಇನ್ನೂ ಎಷ್ಟೆಷ್ಟು ಜನರಿಗೆ ತಮ್ಮ ಭಾವಗಳನ್ನರಳಿಸಿ ತೋರಿಸುವುದಕ್ಕೆ ನೆರವುಕೊಡಲಿರುವುವೇನೋ! ಇದರಲ್ಲಿ ಗದಾಯುದ್ಧದಲ್ಲಿ ದುರ್ಯೋಧನ ತೊಡೆಯುಡಿದು ಬಿದ್ದ ದೃಶ್ಯದಿಂದ ಮೊದಲುಗೊಂಡು, ಅಶ್ವತ್ಥಾಮನ ನೆತ್ತಿಯ ರತ್ನವನ್ನು ಕಿತ್ತುಕೊಳ್ಳುವವರೆಗಿನ ಕಥೆ ಅಡಕವಾಗಿದೆ. ಗ್ರಂಥಕರ್ತರು ಹರಿದಾಸರಾದುದರಿಂದಲೇನೊ ಈ ನಾಟಕದಲ್ಲಿಯ ಪಾತ್ರಗಳೆಲ್ಲ– ಜನಸಾಮಾನ್ಯರನ್ನು ಮಾತ್ರ ಮೆಚ್ಚಿಸುವಂತೆ– ಸ್ಥೂಲರೇಷೆಗಳಿಂದ ಚಿತ್ರಿತವಾಗಿವೆ. ಅದಕ್ಕಾಗಿಯೆ ಅವುಗಳ ಮಾತುಗಳು ಕೂಡ ತುಂಬ ಕೃತಕವಾಗಿ ಕಾಣುತ್ತಲಿವೆ. ಇದರಲ್ಲಿ ಚಿತ್ರಿತನಾದ ಕೃಷ್ಣನನ್ನೂ ಪಾಂಡವರಲ್ಲಿಯ ಅನೇಕರು ಅವನ ವಿಷಯದಲ್ಲಿ ತಳೆದ ತಿರಸ್ಕಾರಬುದ್ಧಿಯನ್ನೂ ನೋಡಿದರೆ, ಕೃಷ್ಣನ ವ್ಯಕ್ತಿತ್ವದ ವಿಚಾರದಲ್ಲಿ ಯಾವ ಸ್ಥಿರವಾದ ಉದಾತ್ತಭಾವನೆಯೂ ನೆಲಸುವಂತಿಲ್ಲ. ಭೀಮಸೇನನಂತೂ ಹಳ್ಳಿಯ ಬಯಲಾಟದ ಭೀಮಸೇನನಾಗಿದ್ದಾನೆ. ಹುಯ್ಯೆಂದು ರೇಗುವುದಕ್ಕೂ ತಡೆಯಿಲ್ಲ; ಸುಯ್ಯೆಂದು ಸಿಟ್ಟುಸಿರಿಳಿಸಲಿಕ್ಕೂ ತಡೆಯಿಲ್ಲ. ದ್ರೌಪದಿಯ ಪಾತ್ರದ ಕೆಲ ಮನೋಹಾರಿಯಾಗಿದೆಯಾದರೂ ಅದಕ್ಕೆ ತಕ್ಕ ಬೆಳವಣಿಗೆಯಿರದುದರಿಂದ ನಿರರ್ಥಕವಾಗಿದೆ. ನಾಟಕಕಾರ ತನ್ನ ಸಂಸ್ಕಾರಬಲ ಕಲಾಬಲಗಳಿಂದ ಪಾತ್ರರಚನೆ ಮಾಡಿದ

ಒಂದೊಂದು ಪಾತ್ರದಲ್ಲಿಯೂ ಒಂದೊಂದು ವ್ಯಕ್ತಿತ್ವವನ್ನು ಕಾಣುವೆವು. ಅದು ಇಲ್ಲದೆ ಹೋದರೆ ಎಲ್ಲ ಪಾತ್ರಗಳಲ್ಲಿಯೂ ಕೃತಿಕಾರನ ಕಲೆಯ ಮೊಂಡುತನವೆ ನೋಡಲು ಸಿಕ್ಕುವದು. ಹೀಗಾಗದಿರಬೇಕಾದರೆ ಕೃತಿಕಾರ ಮಾನವಸ್ವಭಾವವನ್ನು ವಿವಿಧ ಮುಖದಿಂದ ಅಭ್ಯಸಿಸಿ ಕಂಡುಕೊಳ್ಳಬೇಕಾಗುತ್ತದೆ. ಪ್ರಸ್ತುತ ಲೇಖಕರು ಈ ಮಾತನ್ನು ಲಕ್ಷ್ಯದಲ್ಲಿಟ್ಟುಕೊಂಡು ಮುಂದಿನ ತಮ್ಮ ಕೃತಿಗಳಲ್ಲಿ ತಮ್ಮ ಕಲೆಯನ್ನೆಳಿಸಿ ತೋರಿಸುವರೆಂದು ನಮ್ಮ ಹಾರೈಕೆ

—ಬಿ. ಪಿ. ಎಸ್. ರಾವ್

೮೮. ಸಾಮ್ಯವಾದ

ಬರೆದವರು:

ಶ್ರೀ. ಕುಲಕರ್ಣಿ ರಾಮಚಂದ್ರರಾಯರು ಬಿ.ಎ. ಮತ್ತು ಶ್ರೀ. ಬುರ್ಲಿ ಬಿಂದುಮಾಧವ ಅವರು.

ಇಂದಿನ ರಾಜಕೀಯ ಜೀವನದಲ್ಲಿ ಅನೇಕ ದೊಡ್ಡ ದೊಡ್ಡ ವ್ಯಕ್ತಿಗಳ ಮನಸ್ಸಿನಲ್ಲಿಯೂ ಈ 'ಸಾಮ್ಯವಾದ'ದ ವಿಚಾರ ಮನೆಮಾಡಿದೆ. ಕೆಲವು ದೊಡ್ಡವರೆನ್ನುವವರೇ ಹೇಳುವರು: ರಾಷ್ಟ್ರಕ್ಕೆ ಇದು ಖಂಡಿತ ತಾರಕಶಕ್ತಿಯೆಂದು. ಬೇರೆ ಕೆಲವು ಜನ ದೊಡ್ಡವರೇ ಹೇಳುವರು ಇದು ಖಂಡಿತ ಮಾರಕಶಕ್ತಿಯೆಂದು. ನಮ್ಮಲ್ಲಿಯ ಶಿಕ್ಷಣದ ವೈಷಮ್ಯದ ಮೂಲಕ ಕಲಿತವರ ಮಾತನ್ನು ಕಲಿಯದವರು ಕೇಳಬೇಕಾಗುವದು. ಕಲಿತವರೆಲ್ಲ ಮುಂದಾಳುಗಳು, ಕಲಿಯದವರಷ್ಟು ಅನುಯಾಯಿಗಳು. ಮುಂದಾಳುಗಳಲ್ಲಿ ಹೆಚ್ಚಿನ ಜನರು, ಸಾಮ್ಯವಾದದ ಸ್ವರ್ಗೀಯ ಪ್ರಪಂಚವನ್ನು ಜನರೆದುರು ಬಣ್ಣಿಸುತ್ತ ಹೊರಟಿರುವರು. ಕೆಲವು ಜನರು—ಅವರು ಬಂಡವಾಳಗಾರರ ಪಕ್ಷಪಾತಿಗಳೆಂಬ ನಿಂದೆಗೆ ಗುರಿಯಾಗಿರುವರು— ಸಾಮ್ಯವಾದವನ್ನು ಅಲ್ಲಗಳೆಯುತ್ತಿರುವರು; ರಾಷ್ಟ್ರಕ್ಕೆ ಅದು ಘಾತಕವೆಂದು ಹೇಳುತ್ತಿರುವರು.

ಯಾವ ತತ್ತ್ವದಲ್ಲಿಯೂ ಪರಿಪೂರ್ಣತೆಯಿರದು; ಒಂದು ಒಪ್ಪಿನ ಜೊತೆಗೆ ಒಂದು ತಪ್ಪು ನಿಂತಿರುವದು; ಒಂದು ತಪ್ಪಿನ ಜೊತೆಗೆ ಒಂದು ಒಪ್ಪು ನಿಂತಿರುವದು. ಆ ತತ್ತ್ವ ಬೇಕಾದವರು ಅದರಲ್ಲಿಯ ಒಪ್ಪುಗಳನ್ನೆ ಬಣ್ಣಿಸುತ್ತ ಹೋಗುವರು. ಬೇಡವಾದವರು ಬರಿಯ ತಪ್ಪುಗಳನ್ನೆ ತೋರಿಸುತ್ತ ತಿರುಗುವರು. ಕ್ವಿನೈನು ಮಲೇರಿಯವನ್ನು ಹೊಡೆದುಹಾಕುವದಾದರೂ ಶರೀರದಲ್ಲಿ ಅನಾವಶ್ಯಕ ಉಷ್ಣತೆಯನ್ನು ಹೆಚ್ಚಿಸುವದು. ಆದರೆ ಮಲೇರಿಯಾ ರೋಗಿಗೆ ಕ್ವಿನೈನು ಆವಶ್ಯಕ ಔಷಧಿ. ಹಾಗೆಯೆ ಸಾಮ್ಯವಾದವೂ ಇಂದಿನ ಸಾಮಾಜಿಕ ರೋಗಕ್ಕೆ ಆವಶ್ಯಕ ಉಪಾಯವೆಂದು ಹಲವರ ಅಭಿಪ್ರಾಯ. ಹೀಗಿರುವಾಗ ಅಂತಹ ಸಾಮ್ಯವಾದದ ಹುಟ್ಟು-ಗುಟ್ಟು-ಗುರಿಗಳೆಂತಹವೆಂಬುದರ ಪರಿಚಯ ಕನ್ನಡ ಜನಸಾಮಾನ್ಯಕ್ಕೆ ಆಗಲೆಬೇಕಲ್ಲವೆ! ವಿಂಚಿನ ಬಳ್ಳಿಯ ಸಂಚಾಲಕರು ಕೇವಲ ಸಾಮ್ಯವಾದದ ಪರಿಚಯಮಾಡಿಕೊಡುವ ಉದ್ದೇಶದಿಂದ ಈ ಗ್ರಂಥವನ್ನು ಪ್ರಕಟಿಸಿರುವೆವೆಂದು ಹೇಳಿರುವರಾದರೂ, ಲೇಖಕರಿಬ್ಬರೂ ಆತ್ಮೀಯತೆಯ ಭಾವಸಾಮರಸ್ಯದಿಂದ ಸಾಮ್ಯವಾದವನ್ನು ಈ ಗ್ರಂಥದಲ್ಲಿ ವಿವರಿಸಿರುವದನ್ನು ನೋಡಿದರೆ, ಲೇಖಕರ ಉದ್ದೇಶವು ಸಾಮ್ಯವಾದದ ಪ್ರಚಾರವೆ ಇದ್ದಂತೆ ತೋರುವದು. ಏನೆ ಇರಲಿ, ಸಾಮ್ಯವಾದವನ್ನು ಯಾವ ದೃಷ್ಟಿಯಿಂದ ಪರಿಚಯ ಮಾಡಿಕೊಳ್ಳಬೇಕೆನ್ನುವವರಿಗೂ ಈ ಗ್ರಂಥ ಸಂಪೂರ್ಣವಾಗಿ ಸಹಾಯ ಮಾಡುವಂತಿದೆ. ಭಾಷೆ ಸರಳವಾಗಿದ್ದು ತೊಡಕಿಲ್ಲದೆ ವಿಷಯವನ್ನು ತಿಳಿಸುತ್ತಲಿದೆ. ಈ ಕಾಲದಲ್ಲಿ ಬಾಳುವವರು ಇಂದಿನ ವಿಚಾರಪ್ರವಾಹಗಳಾದ ಈ ಸಾಮ್ಯವಾದ, ಸಮಾಜವಾದ ಸರ್ವಾಧಿಕಾರಿವಾದ, ಬಹುಜನಮತವಾದ ಮೊದಲಾದುವುಗಳನ್ನು ಖಂಡಿತವಾಗಿ ಅರಿತುಕೊಳ್ಳಲೆಬೇಕು. ಅದಕ್ಕಾಗಿ ಪ್ರತಿಯೊಬ್ಬನೂ ಈ ಗ್ರಂಥವನ್ನು ಓದಲೇಬೇಕು. ಮುದ್ರಣ ಬಂಧನ ಮುದ್ದಾಗಿವೆ.

—ಸಂ......ಕ

ವಿಮರ್ಶೆಗೆ ಗ್ರಂಥಗಳನ್ನು ಕಳುಹುವವರು ದಯೆಯಿಟ್ಟು ಎರಡೆರಡು ಪ್ರತಿಗಳನ್ನು ಕಳುಹುವದನ್ನು ಮರೆಯಲಾಗದು. ಸಂ. ಜಯಂತಿ.

ಜಯಂತಿಯ ತರುಣ ಬರೆಹಗಾರರೊಬ್ಬರು

ಶ್ರೀ. ಜೋಶಿ ಶಾಮಾಚಾರ್ಯರು.

ಇವರು ಬೆಳಗಾಂವಿ ಜಿಲ್ಲೆಯ ಅಥಣಿಯ ನಿವಾಸಿಗಳು. ಮಾರ್ಕೆಟಿನಲ್ಲಿ ಬೆಲೆಗೆ ನಿಲ್ಲುವಂತಹ ಮುದ್ರಿಕೆಯ ಶಿಕ್ಷಣವನ್ನೇನೂ ಇವರು ಪಡೆದಿಲ್ಲ. ಕಡು ಸನಾತನಿಗಳಾದ ಅಜ್ಜಂದಿರ ಸಂರಕ್ಷಣೆಯಲ್ಲಿ ಇವರಬಾಲ್ಯವೆಲ್ಲ ಹೋದುದರಿಂದ, 'ಸ್ವರಾಜ್ಯಭಾಷೆಯ ಲಿಪಿ'ಯಾದ ಕನ್ನಡ ಲಿಪಿಯನ್ನು ಕೂಡ ಇವರು ಕಲಿಯಲಿಲ್ಲ. ಮೊದಲಿನಿಂದಲೂ ಬರಿಯ ಸಂಸ್ಕೃತದ ಅಧ್ಯಯನವನ್ನೆ ನಡೆಯಿಸಿಕೊಂಡು ಬಂದವರಿವರು. ಸಾಂಪ್ರದಾಯಿಕ ತರ್ಕವನ್ನೂ, ಸಾಹಿತ್ಯವನ್ನೂ, ವೇದಾಂತವನ್ನೂ ಇವರು ಸ್ವಯಂಸ್ಫೂರ್ತಿಯಿಂದಲೆ ಪರಿಚಯಮಾಡಿಕೊಂಡಿರುವರು. ದ್ವೈತ ಅದ್ವೈತ ವೇದಾಂತಗಳೆರಡನ್ನೂ ಸೂಕ್ಷ್ಮವಾಗಿ ಅಭ್ಯಾಸಿಸಿರುವರು. ಓದುವನಾದ ಬಹಳವಿದ್ದುದರಿಂದ ಹೊಸ ಹೊಸ ವಿಚಾರಗಳನ್ನು ತಲೆಯಲ್ಲಿ ತುಂಬಿಕೊಳ್ಳುವರು. ಬುದ್ಧಿ ಮೊನೆಯಾದುದು. ಯಾವುದೇ ಒಂದು ವಿಷಯವನ್ನು ಮೇಲೆ ಮೇಲೆ ನೋಡಿ ಬಿಡದೆ ಅದನ್ನು ವಿವಿಧರೀತಿಯಲ್ಲಿ ವಿಶ್ಲೇಷಿಸಿ ನೋಡುವ ಶಕ್ತಿಯುಳ್ಳವರು. ಯಾವಾಗಲೂ ಸಂಪ್ರದಾಯ—ಸುಧಾರಣೆಗಳು ಇವರ ಮನದಲ್ಲಿ ಕುಸ್ತಿಯನ್ನು ಹಿಡಿದಿರುತ್ತವೆ. ಆದರೆ ಸಂಪ್ರದಾಯದ ಕಡೆಗೆ ಇವರದು ಹೆಚ್ಚಿನ ಪ್ರೀತಿ. ಬುದ್ಧಿಯ ಮೊನೆಗೆ ಸರಿಯಾಗಿ ಮಾತಿನ ಹದನೂ ಇದೆ. ವಯಸ್ಸಿನ ಮಾನದಿಂದ ಇವರನ್ನು ತರುಣರೆಂದು ಹೇಳಲಿಕ್ಕೆ ಬಾರದಿದ್ದರೂ ಸಾಹಿತ್ಯ ಕ್ಷೇತ್ರದಲ್ಲಿ ನಿನ್ನೆ ಮೊನ್ನೆಯೆ ಕಾಲಿಕ್ಕಿದವರು; ಎಂತಲೆ ತರುಣರು.

ಸಾದರಸ್ವೀಕಾರ

೪೨. **ಸ್ವದೇಶಾಭಿಮಾನಿ:**— (ಸಚಿತ್ರ ವಾರಪತ್ರಿಕೆ.) ಸಂಪಾದಕರು ಶ್ರೀ. ಎ. ಎಸ್. ಕಾಮತ, ಶಾರದಾ ಪ್ರೆಸ್, ತೇರುಬೀದಿ, ಮಂಗಳೂರು. ಡೆಮ್ಮೈ ಫೋಲಿಯೊ ೨೦ ಪುಟಗಳು; ವಾ. ವರ್ಗಣಿ ೨-೧೪-೦, ಬಿಡಿಸಂಚಿಕೆ ೦-೩-೦.

ಬಹುದಿವಸಗಳಿಂದ ನಡೆದುಕೊಂಡು ಬಂದ ಪತ್ರಿಕೆಯಿದಾದರೂ ಹೊಸ ಕಾಲಕ್ಕೆ ತಕ್ಕುದಾದ ಅಂತರಂಗ-ಬಹಿರಂಗಗಳಿಂದ ಕೂಡಿದುದಾಗಿದೆ. ಶ್ರೀ. ಕೋ. ಶಿ. ಕಾರಂತರ ಲೇಖನ ವೈವಿಧ್ಯವನ್ನು ಇದರ ಪ್ರತಿಯೊಂದು ಸಂಚಿಕೆಯಲ್ಲಿಯೂ ಕಾಣಬಹುದು. ಜನಸಾಮಾನ್ಯರನ್ನು ಬಹುಶ್ರುತರನ್ನಾಗಿ ಮಾಡಲು ನಿಜವಾಗಿಯೂ ಒಳ್ಳೆಯದಾದ ಪತ್ರಿಕೆ.

೪೩. **ಕಾರಣ ಪುರುಷ:**- (ಸಾಮಾಜಿಕ ಕಾದಂಬರಿ) ಬರೆದವರು ಪ್ರೊ. ರಂ. ಶ್ರೀ. ಮುಗಳಿ, ಎಂ. ಎ., ಬಿ. ಟಿ. ಅವರು. ಧಾರವಾಡದ ಮನೋಹರಗ್ರಂಥಮಾಲೆಯ ೩೬ನೆಯ ಪ್ರಕಟನೆಯಿದು. ಕ್ರಾ. ೮. ೧೮೬ ಪುಟಗಳು. ಬೆಲೆ ೧-೦-೦.

೪೪. **ಸಹ್ಯಾದ್ರಿ:**— (ಮರಾಟಿ ಮಾಸ ಪತ್ರಿಕೆ). ಸಂಚಾಲಕರು ಶ್ರೀಮಾನ್ ನ. ಚಿಂ. ಕೇಳಕರರು. ವ್ಯವಸ್ಥಾಪಕರು. ಶ್ರೀಮಾನ್ ದಿ.ವಿ. ಕಾಳೆಯವರು. ಪುಣೆಯ ಕೇಸರಿ ಟ್ರಸ್ಟ ಕಾರ್ಯಾಲಯದಿಂದ ಪ್ರಕಟವಾಗುವುದು. ಕ್ರಾ. ೪ ದ ೮೦ ಪುಟಗಳು. ವಾ. ವ. ೩-೮-೦; ಬಿಡಿಸಂಚಿಕೆಗೆ ೦-೬-೦.

ಮಹಾರಾಷ್ಟ್ರದಲ್ಲಿ ಸಾಂಪ್ರದಾಯಿಕ ಸದಭಿರುಚಿಗೆ ಅವಿರೋಧವಾಗದಂತಹ ಅಭ್ಯಾಸ ಪೂರ್ಣಲೇಖನಗಳನ್ನು ಪ್ರಕಟಿಸುವ ಉತ್ತಮವರ್ಗದ ಪತ್ರಿಕೆಯಿದೊಂದು. ದೇಶ-ವಿದೇಶದ ಸಾಮಾಜಿಕ-ರಾಜಕೀಯ ವಿಷಯಗಳನ್ನು ಚರ್ಚಿಸಿ ಬರೆದ ಲೇಖನಗಳೂ ಇರುವುವು. ಪಂಡಿತ ಲೇಖಕರಿಂದ ಬರೆಯಿಸಿದ ಸಾಹಿತ್ಯವಿಷಯಕ ಲೇಖನಗಳೂ ಪ್ರಕಟವಾಗುವುವು. ಆದರೆ ಕರ್ನಾಟಕದ—ಕನ್ನಡಿಗರ—ವಿಷಯಕವಾದ ಅಜ್ಞಾನದ ಮೂಲಕ ಕನ್ನಡಿಗರ ಜೀವನವನ್ನೂ ಆಶೆ-ಆಕಾಂಕ್ಷೆಗಳನ್ನೂ ವಿಕೃತವಾಗಿ ಮೂಡಿಸಿ ತೋರಿಸುವ ಲೇಖನಗಳು ಇದರಲ್ಲಿ ಪ್ರಕಟವಾಗುವುದು ವಿಷಾದದ ಮಾತಾಗಿದೆ. ಜೂಲೈ ಸಂಚಿಕೆಯಲ್ಲಿ ಶ್ರೀ. ರಾನಡೆ ಎಲ್ ಎಲ್. ಬಿ. ಎಂಬವರು ಬರೆದ ಲೇಖನವು ಇದಕ್ಕೆ ಉದಾಹರಣೆಯಾಗಿದೆ. ಪ್ರಾಂತೀಯ ಭಾವನೆಯ ನಿಜವಾದ ಕಲ್ಪನೆಯಿದ್ದ ಸಹ್ಯಾದ್ರಿಯ ಸಂಚಾಲಕವರ್ಗದಿಂದ ಈ ಬಗೆಯ ಅಪಪ್ರಚಾರ ನಡೆಯುವುದು, ಕರ್ನಾಟಕ-ಮಹಾರಾಷ್ಟ್ರಗಳ ಸ್ನೇಹಸಂವರ್ಧನೆಯ ದೃಷ್ಟಿಯಿಂದ ಅಪಾಯಕಾರಿಯೆಂಬುದನ್ನು ನಾವು ಬೇರೆಯಾಗಿ ಹೇಳಬೇಕಾಗಿಲ್ಲ.

೪೫. **ಶ್ರೀಶಾಂತೀಶ್ವರ ಚರಿತ್ರ:**— (ಸಾಂಗತ್ಯಗ್ರಂಥ) ಶಾಂತಿಕೀರ್ತಿಮುನಿ ವಿರಚಿತ. ಸಂಪಾದಕರು ಎಂ. ನೇಮಿರಾಜ ಮೈಸೂರು. ಪ್ರಕಾಶಿಕೆಯರು ಶ್ರೀಮತಿ ಪದ್ಮಾವತಮ್ಮನವರು, ಸಾಲಿಗ್ರಾಮ. ಪದ್ಮಾವತೀಗ್ರಂಥಮಾಲೆಯ ೧ನೆಯಗ್ರಂಥ; ಡೆಮಿ ೮. ೬೦+೯೬ ಪುಟ. ಬೆಲೆ ೧-೮-೦.

೪೬. **ಭಾಷೆ ಮತ್ತು ಬರವಣಿಗೆ:**— (ಡೆ. ೮. ೧೪ ಪುಟ.)

೪೭. **ಸಮಾಜರಚನೆ:**—(ಡೆ ೮. ೧೮ ಪುಟ.)

೪೮. **ಮತಧರ್ಮ:**— (ಡೆ. ೮. ೩೪ ಪುಟ.)

೪೯. **ಅತೀಂದ್ರಿಯವಾಗಿ ತೋರುವ ಕೆಲವು ವಿದ್ಯಮಾನಗಳು:**—(ಡೆ. ೮. ೩೨ ಪುಟ.)

ಇವೆಲ್ಲ ಬೆಂಗಳೂರಿನ ಮಕ್ಕಳ ಪುಸ್ತಕ ಮಾಸಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳ ಪುನರ್ಮುದ್ರಣಗಳು. ಸಣ್ಣಸಣ್ಣ ಕೈಹೊತ್ತಿಗೆಗಳ ರೂಪದಲ್ಲಿ ಹೊರಟಿವೆ. ಬರೆದವರು ಶ್ರೀಯುತರುಗಳಾದ ಎಚ್. ನಾರಾಯಣರಾವ್ ಬಿ. ಎ. ಕೆ. ಪಿ. ರಾಮನಾಥಯ್ಯ ಎಂ. ಎ. ಅವರು. ಇವುಗಳ ಬೆಲೆ ಗೊತ್ತಾಗುವಂತಿಲ್ಲ.

೫೦ **ರಾಯ ಮತ್ತು ರಾಯವಾದ:**- ಲೇಖಕರು ಶ್ರೀ. ಸ. ರಂ, ಸುಂಠಣಕರ ಮತ್ತು ಶ್ರೀ. ಕೆ. ರಾಮರಾವ. ಕ್ರಾ. ೮ ೧೩೩ ಪುಟ; ಬೆಲೆ. ೦-೧೨-೦. ಪ್ರಕಾಶಕರು ಶ್ರೀ. ಆರ್. ವಿ. ಜಠಾರ ಬಿ. ಎ., ಎಲ್ ಎಲ್. ಬಿ. ಅವರು.

೫೧ **ಕಂಬನಿ:**— (ಕಥಾಸಂಗ್ರಹ) ಬರೆದವರು ಸ್ವರ್ಗೀಯ ಶ್ರೀಮತಿ ಬಿ. ಟಿ. ಜಿ. ಕೃಷ್ಣ ಅವರು. ಧಾರವಾಡದ ಮನೋಹರ ಗ್ರಂಥಭಾಂಡಾರದವರ ಪ್ರಕಟನೆ. ಕ್ರಾ. ೮. ಸುಮಾರು ೧೬೦ ಪುಟ; ಬೆಲೆ ಸಾದಾ ಪ್ರತಿಗೆ ೧-೦-೦; ಕ್ಯಾಲಿಕೊ ಪ್ರತಿಗೆ ೧-೮-೦.

೫೨ **ಮುಂದುವರಿದ ಜಪಾನು:**— (ಪರಿಚಯಾತ್ಮಕ ಗ್ರಂಥ) ಲೇಖಕರು ಶ್ರೀಮಾನ್ ಕೆ. ಎಲ್. ನಂಜಪ್ಪ ಟೋಕಿಯೊ. ಧಾರವಾಡದ ಮಿಂಚಿನ ಬಳ್ಳಿಯ ೪ನೆಯ ವರ್ಷದ ೩ನೆಯ ಕುಡಿ. ಬೆಲೆ ಸಾದಾಪ್ರತಿಗೆ ೧-೦-೦; ಕ್ಯಾಲಿಕೊ ಪ್ರತಿಗೆ ೧-೮-೦.

೫೩ **Kanara Brotherhood Journal:** (ಷಾಣ್ಮಾಸಿಕ ಪತ್ರಿಕೆ). ಸಂಪಾದಕರು ಶ್ರೀ. ಆರ್. ಕೆ. ಪ್ರಭು ದಿ ಕ್ಯಾನರಾ ಬ್ರದರ್ ಹುಡ್, ೩೦೨-B, ವಿಟ್ಠಲಭಾಯಿ ರೋಡ್ ಗಿರಗಾಂವ್- ಬಾಂಬೆ ಇಲ್ಲಿ ಪ್ರಕಾಶಗೊಂಡಿದೆ. ರೊಯಲ್ ೪ ದ ೪೦ ಪುಟ; ಬೆಲೆ ಸದಸ್ಯರಿಗೆ ಇಲ್ಲ; ಇತರರಿಗೆ ೦-೮-೦.

ನಮ್ಮ ಕಡೆಗೆ ಬಂದುದಿದು ೩ನೆಯ ವರ್ಷದ ೩ನೆಯ ಸಂಚಿಕೆ. ಒಟ್ಟು ನಲವತ್ತು ಪುಟಗಳಲ್ಲಿ ೨೦ ಪುಟ ಇಂಗ್ಲಿಷಿಗೆ ೧೨ ಪುಟ ಮರಾಟಿಗೆ ೮ ಪುಟ ಕನ್ನಡಕ್ಕೆ ಕೊಟ್ಟಿರುವರು. 'ಕ್ಯಾನರಾ' (ಕನ್ನಡವಲ್ಲ) ಡಿಸ್ಟ್ರಿಕ್ಟಿನವರಾದ ಇವರು ಕನ್ನಡವನ್ನು ಮರೆತೇ ಇಲ್ಲವಲ್ಲಾ ಎಂದು ಆಶ್ಚರ್ಯಪಡುವಂತಿದೆ. ಆದರೂ ಒಂದು ವಿಷಯವೆಂದರೆ ಕನ್ನಡ ಕಾಯ್ದುಕೊಂಡಿರುವವರು ದಕ್ಷಿಣಕನ್ನಡ ಜಿಲ್ಲೆಯವರು ಮಾತ್ರವೆಂಬುದನ್ನು ಮರೆಯಲಾಗದು.

ನಿಮಗೆ ದೀಪಾವಳಿಯ ಸಂಪೂರ್ಣ ಸೊಗಸು-ಸೌಂದರ್ಯಗಳನ್ನು
ಅನುಭವಿಸಬೇಕೆನಿಸುವುದಿಲ್ಲವೆ ?

ಹಾಗಾದರೆ ಅದಕ್ಕಾಗಿ ಏನು ಮಾಡಬೇಕೆಂಬ ವಿಚಾರವಿದೆ ನಿಮ್ಮದು ?

ಇನ್ನೇನೂ ಬೇಕಾಗಿಲ್ಲ !

ಜಯಂತಿಯ ದೀಪಾವಳಿ ಸಂಚಿಕೆ

ತರಿಸಿಕೊಂಡು ಬಿಡಿರಿ ಸಾಕು ! **ಇನ್ನೇನೂ ಬೇಡ !**

★

ಹುಡುಗರ ತಿಂಡಿ-ತಿನಿಸುಗಳ ಆಶೆ ಬಿಡಿಸುವುದು ! ಹೆಂಗುಸರ ಒಡವೆ-ತೊಡವುಗಳ ತಾಪ ಕಡಿಮೆಮಾಡುವುದು ! ನಿಮ್ಮ ಸಂಸಾರತಾಪಗಳೆಲ್ಲವೂ ಓಡಿಹೋಗುವುವು !

★ ★

ಏಕೆಂದರೆ ಜಯಂತಿ ನಿಮ್ಮೆಲ್ಲರನ್ನೂ ಆನಂದದ ಕಡಲಿನಲ್ಲಿ ತೇಲಿಸಿ ಹೊಸ ವಿಚಾರಗಳ ಆಗಸದಲ್ಲಿ ಹಾರಾಡಿಸಿ ಬಿಡುವುದು !

★ ★ ★

ಕನ್ನಡನಾಡಿನ ಹಿರಿಯ ಲೇಖಕರ ಬರೆಹದ ಸವಿಯೂಟವೆಡೆ ಎನಿಸುವುದಿದು !
ಸಾಂಪ್ರದಾಯಿಕ ಬುದ್ಧಿಯ ಕಗ್ಗತ್ತಲೆಗೆ ಸಾಲುದೀಪವಂತೆ ಬೆಳಕನ್ನು ಕೊಡುವುದಿದು !
ಪ್ರತಿ ಸಂಚಿಕೆಗಿಂತ ಹೆಚ್ಚು ಪುಟಗಳು ! ಹೆಚ್ಚು ಚಿತ್ರಗಳು ! !

★ ★

ಏಜಂಟರೂ ವಾಚಕರೂ ಮೊದಲೆ ತಮ್ಮ ಬೇಡಿಕೆ ಕಳಿಸಬೇಕು !

★

ನವ್ಹಂಬರ್ ಸಂಚಿಕೆಯೇ ದೀಪಾವಳಿಯ ಸಂಚಿಕೆ !

ಜಾಹೀರಾತು ಕೊಡುವವರೂ ಬೇಗನೆ ಪತ್ರವ್ಯವಹಾರ ಮಾಡಬೇಕು !

ಜಯಂತಿ ಕಾರ್ಯಾಲಯ, ಧಾರವಾಡ

ನಗೀಗೆ ನೇವಿದ್ಯ

ತಮ್ಮ ಗುರುತು ಹತ್ತಲಿಲ್ಲ....

"ನೀವು ಕಳೆದ ಏಕಾದಶೀ ದಿವಸ ಈ ಅಂಗಡಿಗೆ ಬಂದಿದ್ದಿರೇನು . . . . ಚಹಾ ಕುಡೀಲಿಕ್ಕೆ ?"

"ಹ. . ಹ. . ಹೌದರಿ ! ಯಾಕ ಗುರುತು ಹತ್ತಿತೇನು ?"

"ತಮ್ಮ ಗುರುತು ಹತ್ತಲಿಲ್ಲ. . ತಮ್ಮ ಕೈಯೊಳಗಿನ ಕೊಡೆಯ ಗುರುತು ಹತ್ತಿತು. ಆ ಕೊಡೆ ನನ್ನದು."

* * *

ಕೂಸಿನ ಅಳು-ನಗು

ಅಕೆ:— ಇಲ್ಲಿ ನೋಡ್ರಿಲ್ಲೆ; ಈ ಕೂಸಿಂದೊಂದು ನೋಜಿಗ ಅದ ! ನನ್ನ ಕಂಡ ಕೂಡಲೆ ಅಳಲಿಕ್ಕೇ ಹತ್ತತದ !

ಅತ:— ಸರಿ, ಏನೂ ಅಡ್ಡಿಯಿಲ್ಲ . . ಸಣ್ಣದದ ಅಂತ ಈಗ ಅಳತದ; ಮುಂದ ದೊಡ್ಡದಾತಂದರ ಈ ನಿನ್ನ ಸ್ವರೂಪಾ ನೋಡಿದಾಗೆಲ್ಲಾ ನಗಲಿಕ್ಕೆ ಹತ್ತತದ !

* * *

ಎಂಥಾ ಛಲೋ ಅದ !

ಗುಂಡೇರಾಯರ ಮನೆಗೆ ಅವರ ಗೆಳೆಯ ಬಂಡೇರಾಯರು ಹೆಂಡತಿಯೊಂದಿಗೆ ಬಂದಿದ್ದರು. ಗುಂಡೇರಾಯರ ಹೆಂಡತಿ ತಮ್ಮ ಹೊಸ ಪಸುಮಗುವನ್ನು ತಂದು ಬಂದವರಿಗೆ ತೋರಿಸಿದರು. ಆಗ ಗುಂ ಡೇ ರಾ ಯ ರು ನುಡಿದರು :

"ವಾ ! ನಿಮ್ಮದೇನಿದು ? (ಹೆಂಡತಿಯ ಕಡೆಗೆ ನೋಡುತ್ತ) ನೋಡು, ಥೇಟ ಅಪ್ಪನ್ಹಾಂಗನ ಅದ ಅಲ್ಲನ ಕೂಸು ?"

ಗುಂಡೇರಾಯರ ಹೆಂಡತಿ ಹೇಳಿದರು:

"ಛೇ, ಛೇ! ಅದ್ಯಾಕರೀ, ಎಂಥಾ ಛಲೋ ಅದ !"

ನೆಳಲು-ಬಿಸಿಲು

ಗಂಡ:— ಹೆಂಡತಿಯೆಂದರೆ ಗಂಡನ ನೆಳಲು ಇದ್ದಂತೆ ಇರಬೇಕು.

ಹೆಂಡತಿ:— ಹೌದು. . ಗಂಡ ಎಂದರೆ ಹೆಂಡತಿಗೆ ಬಿಸಿಲುಇದ್ದಂತೆ ಇರತಾನ. ಅಲ್ಲೇ?

* * *

ದೇವರು-ಭಕ್ತ

ದೇವರು:— (ಪ್ರತ್ಯಕ್ಷನಾಗಿ) ಭಕ್ತಶ್ರೇಷ್ಠಾ! ನಿನ್ನ ಭಕ್ತಿಗೆ ಮೆಚ್ಚಿದೆ. ವರ ಬೇಕಾದರೆ ಬೇಡಿಕೊ !

ಭಕ್ತ:— ದೇವಾ, ನನಗ ವರಾ ಏನೂ ಬೇಕಾಗಿಲ್ಲ; ಕನ್ಯಾಬೇಕಾಗೇದ. . ಮದಿವೀ ಮಾಡಿಕೊಳ್ಳಿಕ್ಕೆ. ಮದಿವೀ ಮಾಡಿಕೊಂಡು ನನಗ ಕನ್ಯಾಹುಟ್ಟಿದ ಮ್ಯಾಲ ವರದ ಮಾತು!

* * *

ಸರಕಾರದ ಒಪ್ಪಿಗೆ

ಹಿರಿಯ:— (ಹೊಸ ಪದವೀಧರನನ್ನು ಕಂಡು) ಏನಪಾ, ಈಗಿನ ಹುಡುಗರು ನೀವು! ಚಂಡಿಕಿಲ್ಲಾ, ಜನಿವಾರಿಲ್ಲಾ, ಗಂಧಿಲ್ಲಾ, ಅಕ್ಷತಿ ಇಲ್ಲಾ, ನಿಮಗ್ಯಾರು ಬ್ರಾಹ್ಮಣಾ ಅಂತ ಅನಬೇಕು ?

ತರುಣ:— ಉಳಿದವರು ಅಂದರ ಏನು, ಬಿಟ್ಟರ ಏನು? ಸರಕಾರ ಸ್ವತಃ ನಮ್ಮ ಬ್ರಾಹ್ಮಣ್ಯ ಒಪ್ಪಿಗೋತದ. ಅದು ಒಪ್ಪಿಗೋಳದಿದ್ದರ ನಮಗೆಲ್ಲಾ ನೌಕರೀ ಕೊಡಬೇಕಾಗತದ !

* * *

ನುಡಿದಂತೆ ನಡೆಯುವವರು !

ವಿಮಲಾ:— ನೀ ಬೇಕಾದದ್ದು ಹೇಳು, ಮುಂದಿನ್ನ ಆಡಿಕೊಳ್ಳೂದೇನೂ ಒಳ್ಳೇದಲ್ಲ.

ಕಮಲಾ:— ನಿನ್ನ ಮಾತು ಖರೇ ಅದ ನೋಡು. ಅದರಂತೇನ ಮನೀವಿಷ್ಯ ಹೊರಗ ಹಾಕೂದೂ ಒಳ್ಳೇದಲ್ಲ ನೋಡು !

ವಿಮಲಾ:— ಅದನ ಅಂತೀನಿ; ನಮ್ಮ ನೆರಿಮನೀ ಗೋದೂಬಾಯಿ ಇಲ್ಲನ. . ಆಕಿ ಯಾವಾಗಲೂ ತಮ್ಮ ಅತಿಗೀ ನಿಂದಾನs ಮಾಡತಿರತಾಳ. . ಆಕೀ ಡೌಲರೇ ಎಷ್ಟs ತಾಯಿಾ ಅಂತೀನಿ !

ಕಮಲಾ:— ಆಕಿದೇನು ಡೌಲುಹೇಳ್ತೀ, ನೋಡಿಲ್ಲs ನಮ್ಮ ಮುನ್ಯಾಗ ನಮ್ಮ ನಾದನೀ ಡೌಲು. . ಆಕೀ ಅಷ್ಟ ಬೈತಲೇನು, ಹುಬ್ಬ ನ್ಯಾಗಿನ ಕುಂಕುಮೇನು. . ತಿಂಗಳಿಗೆ ಎರಡೆರಡು ರುಪಾಯಿ ಬರೇ ವಾಸನೀ ಎಣ್ಣಿಗೆ ಹಾರತಾವ !

* * *

ಕಸಕ್ಕೆ ಕಾರಣ

ಗಂಡ:— ಈ ಖುರ್ಚಿ ತೊಗೊಂಡು ಇನ್ನೂ ಹತ್ತು ದಿನಾ ಆಗಿಲ್ಲ. . ಇಷ್ಟರೊಳಗs ಎಷ್ಟು ಧೂಳು ಕೂತsದಿದು ?

ಹೆಂಡತಿ:— ಕೂಡದs ಏನು ಮಾಡೀತು? ಮನೀಗೆ ಬಂದವರು ಯಾರೂ ಅದರ ಮ್ಯಾಲ ಕೂಡೂದೆ ಇಲ್ಲ !

* * *

ಹಣ್ಣಿನ ಹೋಳಿನ ಪಾಲು

ತಾಯಿ:— ಆಲ್ಲೋ ಶಂಕರಾ, ಬಾಳೂನ ಕೈಯೊಳಗ ಹಣ್ಣಿನ ಹೋಳು ಸಣ್ಣದು ಕಾಣಸತದ ? ಅವನs ಆರಿಸಿ ತೊಗೊಳ್ಳಲಿಲ್ಲೇನು ?

ಶಂಕರ:— ಸ್ವತಃ ಅವನೇ ತೊಗೊಂಡಾನ. ನಾ ಎರಡೂ ಹೋ ಳು ಅವನ ಮುಂದ ಹಿಡಿದು, ನಿನಗ ಸಣ್ಣ ಹೋಳು ಬೇಕೋ, ಎರಡೂ ಹೋಳು ಬ್ಯಾಡೋ ಅಂತ ಕೇಳಿದೆ. ಅಂವ ಸಣ್ಣದನ್ನೇ ತೊಗೊಂಡು ಬಿಟ್ಟ.

'ನರಸಿಂಹ' ಪತ್ರಿಕೆಯಿಂದ ಆಯ್ದು ಪುನಃ

* * *

ಬಿಸಿಲ ಬೇಗೆಗೆ ಉಪಾಯ

ಮಗ:— ಏನಪ್ಪಾ ಇದು ಬಿಸಿಲು! ಮೈಯೆಲ್ಲಾ ಕಾಯ್ದು ಹೋಗೇದ. ಕೈ-ಕಾಲು

...ಯಾಗಿ ಬಿಟ್ಟಾನ. ಒಂದು ದುಡ್ಡಿನ ...ರ್ಫ (ಆಯಿಸ್) ನಾದರೂ ಕೊಂಡು ...ಳ್ಳಲೇ ?

ತಂದೆ:— ಛೀ ಛೀ! ಇದಕ್ಯಾತಕ್ಕೊ ...ಡ್ಡು ಹಾಳ್ ಮಾಡೂದು! ನಿಂದ್ರು, ...ನ್ನೊಂದು ನಿನಗ ದೆವ್ವದ ಕಥೀ ...ಳತೀನಿ.. ನಿನ್ನ ಕೈಕಾಲು ತಾಂವs ಥಣ್ಣ ...ಗಿ ಹೋಗತಾವ!

* * *

ಸಮೀಪದ ಸಂಬಂಧ

ವೀರಣ್ಣ:— ಏನು ಮಾರಣ್ಣಾ, ನಿನಗs ...ರಪ್ಪಗs ದೂರದ್ದೇನೋ ಹತ್ತಗಡೀ ...ದ್ಹಾಂಗ ಕಾಣತೈತಿ ಅಲ್ಲs ?

ಮಾರಣ್ಣ:— ದೂರದ್ಹ್ಯಾಕಪಾ, ಸನೇದ ...ತ್ತಗಡೀನs ಐತಿ! ನಮ್ಮ ನಾಯಿ ಅವನ್ನ ...ಯಿ ಒಂದ ತಾಯಿಯಾ ಹೊಟ್ಟೆಂದs ಒಂದs ...ಳದಲೇ ಹುಟ್ಟೇದಾವು!

* * *

ಬರದೇ ಏನು?

ಆತ:— ನಮ್ಮಪ್ಪ ಮಾಡಿದ್ಹಾಂಗ ಭಕ್ಕರೀ ...ನಗ ಮಾಡಲಿಕ್ಕೆ ಬರೂದೇ ಇಲ್ಲ ನೋಡು!

ಆಕೆ:— ಬರದೇ ಏನು, ಎಲ್ಲಾ ...ರತ್ತದ! ಆದರ ಅಂಥಾ ಹಸಿಬಿಸಿ ಭಕ್ರೀ ...ಂದು ಪಚನಮಾಡಿಕೊಳ್ಳುವಷ್ಟು ನಿಮ್ಮ ...ಚನೇಂದ್ರಿಯ ಸಶಕ್ತ ಇಲ್ಲಲಾ, ನಿಮ್ಮ ...ಪ್ಪನ ಹಾಂಗ!

* * *

ಆಚಾರ್ಯರ ಅನುಭವ

ಆಚಾರ್ಯರು ತುಂಬ ಆವೇಶಪೂರ್ಣ-...ದ ಭಾಷೆಯಲ್ಲಿ ಎದೆ ತಟ್ಟಿ ತಟ್ಟಿ ಮಾತ-...ಡುತ್ತಿದ್ದರು:

"ನೋಡ್ರಿ, ನಾನು ನನ್ನ ದಿನದ ಅನುಭವ ...ಿಂದ ನಿಮಗ ಹೇಳತೀನಿ; ಈರುಳ್ಳಿ, ...ಳ್ಳುಳ್ಳಿ, ಬದನೇಕಾಯಿ, ಮೂಲಂಗಿ ಇವು ...ಗಳನ್ನೆಲ್ಲಾ ತಿನ್ನೂದರಿಂದ ಮನುಷ್ಯ ದಿನ ...ದಿನಕ್ಕ ನೀತಿಗೆಟ್ಟುಹೋಗತಿರತಾನ. ಅಂವ ...ಹೇಳತಿರೂದೇ ಒಂದು. ಮಾಡತಿರೂದು ...ಮತ್ತೊಂದು. ಇದು ನನ್ನ ಅನುಭವದ ...ವಿಷಯು!"

* * *

ಯಾರದರೀ ಹೆಣ?

ಶವವೊಂದನ್ನು ಹೊತ್ತುಕೊಂಡು ಜನ ಸ್ಮಶಾನಕ್ಕೆ ಹೊರಟಿದ್ದರು. ಅದನ್ನು ನೋಡಿದ ರಾಯರಿಗೆ ಕುತೂಹಲವುಂಟಾಗಿ ಎದುರಿಗೆ ಬರುವ ಜಟ್ಟರನ್ನು ಕೇಳಿದರು:

"ಯಾರದರೀ ಈ ಹೆಣ?"

"ಯಾರದೆಂದು ಕೇಳಿದಿರಾ? ನನಗೂ ಗೊತ್ತಿಲ್ಲ ಸಸ್ವಾಮಿ! ಆದರ.. ನನಗನಸತದ: ಆ ಸಿದಿಕೀ ಮ್ಯಾಲ ಮಲಗ್ಯಾನಲ್ಲಾ.. ಅವಂದs ಇರಬೇಕು. ಹೌದು.. ಖಂಡಿತ ಅವಂದೇ ಇರಬೇಕು!"

* * *

ನ. ನಾ.

ಇದ್ದಲ್ಲೇ ಅದ

ಹೊಸತಾಗಿಯೆ ಪಟ್ಟಣ ನೋಡಲಿಕ್ಕೆ ಹೋದ ಒಬ್ಬ ಮನುಷ್ಯನು ಕೂಡುದಾರಿಯಲ್ಲಿ ನಿಂತು, ಎದುರು ಬರುತ್ತಿರುವ ಗೃಹಸ್ಥನೊಬ್ಬನನ್ನು ಕೇಳಿದ.

"ಈ ಎದುರಿಗಿನ ರಸ್ತೆ ಎಲ್ಲಿಗೆ ಹೋಗೇದ ರಾಯರs?"

ಗಂಭೀರಸ್ವರದಲ್ಲಿಯೆ ಆ ಗೃಹಸ್ಥ ಉತ್ತರ ಕೊಟ್ಟ.

"ಈ ರಸ್ತೇನs? ಇದು ಎಲ್ಲಿಗೂ ಹೋಗಿಲ್ಲ. ನಾನು ಚಿಕ್ಕವನಿರುವಾಗಿನಿಂದಲೂ ನೋಡತೀನಿ, ಇದ್ದಲ್ಲೇ ಅದ."

— ಇಂದಿರಾಬಾಯಿ ಕುಲಕರ್ಣಿ.

ಬರಕ್ಕೆ ಕಾರಣ

ಗುಂಡೂರಾಯರು:— ನೋಡ್ರಿ ಖಂಡೇರಾಯರs; ನಿಮ್ಮನ್ನ ನೋಡಿದಾಗೆಲ್ಲಾ ನನಗನಸತದ; ನೀವs ಬರಗಾಲದಾಗ ಬದಕಿದವರ್ಹಾಂಗ ಇದ್ದೀರಿ ಅಂತ!

ಖಂಡೇರಾಯರು:— ಮತ್ತ ನಿಮ್ಮನ್ನ ನೋಡಿದಾಗ ನನಗೂ ಅನಸತದ ನಮ್ಮ ಆ ಬರಗಾಲಕ್ಕ ನೀವs ಕಾರಣಾ ಅಂತ!



ಅಂತಃಕಲಹದ ಅತಿರೇಕ

ಮೊನ್ನೆ ವರ್ಧಾದಲ್ಲಿ ಸೇರಿದ ವರ್ಕಿಂಗ್ ಕಮಿಟಿಯ ಅಧಿವೇಶನದಲ್ಲಿ ಬಾಬು ಸುಭಾಷರ ಮೇಲೆ ಶಿಸ್ತುಭಂಗೋಪಾಯವನ್ನು ಕೈಕೊಳ್ಳುವ ನಿರ್ಣಯವಾಯಿತು. ಈ ನಿರ್ಣಯಕ್ಕಾಗಿ ಮಹತ್ತ್ವವನ್ನೂ ಅದರ ಮೇಲೆ ತಮ್ಮ ಅಭಿಪ್ರಾಯವನ್ನೂ ಕೊಡದೆ ಇದ್ದ ಪಕ್ಷಗಳಾಗಲಿ ಪತ್ರಿಕೆಗಳಾಗಲಿ ಒಂದೂ ಇಲ್ಲವೆಂದೇ ಹೇಳಬಹುದು. ನಿರ್ಣಯವು ಯೋಗ್ಯ ಎಂದು ಒಪ್ಪಿಕೊಳ್ಳುವವರೂ ಕೂಡ ಒಂದಿಲ್ಲೊಂದು ರೀತಿಯಿಂದ ತಮ್ಮ ವಿಷಾದವನ್ನು ವ್ಯಕ್ತಪಡಿಸಿದ್ದಾರೆ. ಬಾಬು ಸುಭಾಷರ ವ್ಯಕ್ತಿತ್ವ, ನಿಸ್ಸೀಮ ಸ್ವಾರ್ಥತ್ಯಾಗ, ಅನುಪಮ ದೇಶಭಕ್ತಿ ಇವು ಯಾರ ಮನಸ್ಸನ್ನೂ ಮೋಹಿಸದೆ ಬಿಟ್ಟಿಲ್ಲ. ಆದರೆ ಇಂದಿನ ಪ್ರಸಂಗದಲ್ಲಿ ಈ ನಿರ್ಣಯವನ್ನು ಕೇವಲ ತಾತ್ತ್ವಿಕದೃಷ್ಟಿಯಿಂದ ನೋಡುವುದೆ ಪ್ರತಿಯೊಬ್ಬನ ಕರ್ತವ್ಯವಾಗಿದೆ. ಬಾಬು ಸುಭಾಷರ ಕೃತಿಗಳಿಂದಲೆ ಈ ನಿರ್ಣಯವು ಅನಿವಾರ್ಯವಾಯಿತೆಂದು ಹೇಳುವ ಪಕ್ಷ ಒಂದಿದೆ; ಬಾಬು ಸುಭಾಷರನ್ನು ಅಂತಹ ಕೃತಿಗಳಿಗಾಗಿ ಉದ್ರೇಕಗೊಳಿಸಿದ ವರ್ಕಿಂಗ್ ಕಮಿಟಿಯ ಕುಟಿಲತನವೆ ಇಂದಿನ ಪ್ರಸಂಗವನ್ನು ತಂದಿದೆ ಎಂಬ ಇನ್ನೊಂದು ಪಕ್ಷವಿದೆ. ಆ ಮಾತನ್ನು ನಾವಿಲ್ಲಿ ಅನೇಕ ಸಲ ಚರ್ಚಿಸಿದ್ದೇವೆ. ಒಮ್ಮೆ ನಿರ್ಣಯವಾದ ಮೇಲೆ ಪರಸ್ಪರ ದೋಷಾರೋಪಣೆ ಮಾಡುವುದು ಬುದ್ಧಿಯ ಲಕ್ಷಣವಲ್ಲ, ಕಾಲದ ಸದುಪಯೋಗವಲ್ಲ. ನಿರ್ಣಯದಿಂದುಂಟಾದ ಪರಿಸ್ಥಿತಿಯನ್ನು ತಿಳಿದುಕೊಳ್ಳುವುದು ಮೊದಲ ಕರ್ತವ್ಯ.

ಕಾಂಗ್ರೆಸು ಪಕ್ಷಸಂಸ್ಥೆಯೆ, ದೇಶಸಂಸ್ಥೆಯೆ ?

ಇಂದಿನ ವರೆಗೆ ಕಾಂಗ್ರೆಸ್ಸೆಂದರೆ ಅಖಿಲಭಾರತದ ಸುಖದುಃಖಗಳನ್ನು ಬಲ್ಲ, ಹೊಣೆ-ಹಾರೈಕೆಗಳನ್ನು ಹೊತ್ತ ಒಂದೇ ಒಂದು ಸಂಸ್ಥೆ ಎಂಬ ಪ್ರತೀತಿ ಇದೆ. ಜಾತಿ-ಮತ-ಸಂಪತ್ತುಗಳ ಭೇದವಿಲ್ಲದೆ ಎಲ್ಲರನ್ನೂ ಒಂದುಗೂಡಿಸಿದ ಸಂಸ್ಥೆ ಇದು ಎಂದೂ ಹೇಳಲ್ಪಡುತ್ತಿತ್ತು. ಆ ಮಾತನ್ನು ಒಪ್ಪಿಕೊಂಡರೂ ಇಂದಿನ ಮೇಲ್ಕಾಣಿಸಿದ ನಿರ್ಣಯದಿಂದ ಪರಿಸ್ಥಿತಿ ಬೇರೆಯಾಯಿತಲ್ಲವೆ—ಎಂದು ಸಂದೇಹಪಡುವಂತಿದೆ. ಬಾಬು ಸುಭಾಷರ ಮೇಲೆ ಶಿಸ್ತುಭಂಗೋಪಾಯವನ್ನು ಕೈಕೊಂಡುದೂ ಖರೆ-ಸರೀಮಾಸ ಪ್ರಭೃತಿಗಳ ಮೇಲೆ ಕೈಕೊಂಡುದೂ—ತಾತ್ತ್ವಿಕ ದೃಷ್ಟಿಯಿಂದ ಬೇರೆಯಾಗಿವೆ ಎಂಬುದನ್ನು ಮೊದಲು ಲಕ್ಷ್ಯದಲ್ಲಿಡಬೇಕಾಗಿದೆ. ಇದುವರೆಗೆ ಅನೇಕರು ವೈಯಕ್ತಿಕ ಆಚರಣೆಗಾಗಿ ಶಿಸ್ತಿನ ಗುಂಡಿಗೆ ಗುರಿಯಾಗಿದ್ದರು. ಆದರೆ ಸುಭಾಷರ ಮಾತು ಹಾಗಲ್ಲ. ಅವರು ತಮ್ಮದೊಂದು ಧೋರಣೆಯನ್ನು ಸಾರಿದರು; ಆ ಧೋರಣೆಗಾಗಿ ಚುನಾವಣೆಯನ್ನು ಹೋರಾಡಿದರು; ಚುನಾವಣೆಯಲ್ಲಿ ಬಹುಮತದಿಂದ ಜಯವನ್ನು ದೊರಕಿಸಿದರು; ಬಹುಮತದ ಬೆಂಬಲವು ಅಧಿಕಾರಸ್ಥಾನದಲ್ಲಿ ಸಹಾಯಕ್ಕೆ ಬರಲಾರದೆಂದು ಕಂಡು ಅಧ್ಯಕ್ಷಪದಕ್ಕೆ ರಾಜೀನಾಮೆಯನ್ನು ಕೊಟ್ಟರು; ಮುಂದೆ ಇಂತಹ ಧೋರಣೆಗೆ ತಡೆಹಾಕಲು ಎ. ಆಯ್. ಸಿ. ಸಿ. ಯವರು ಮಹತ್ತ್ವದ ತತ್ತ್ವಗಳನ್ನೊಳಗೊಂಡ ನಿರ್ಣಯಗಳನ್ನು ಗೊತ್ತುಮಾಡಿದರು; ತಮ್ಮ ಧೋರಣೆಗೂ ಬಹುಮತವಿದೆ ಎಂದು ತಿಳಿದು ಸುಭಾಷರು ಈ ನಿರ್ಣಯಗಳನ್ನು ಸಾರ್ವಜನಿಕವಾಗಿ ನಿಷೇಧಿಸುವ ಕಾರ್ಯಕ್ರಮದ ಏರ್ಪಾಟು ಮಾಡಿದರು; ಆಮೇಲೆ ರಾಷ್ಟ್ರಾಧ್ಯಕ್ಷರು ಈ ನಿಷೇಧಪ್ರದರ್ಶನವನ್ನು ತಡೆಯಬೇಕೆಂಬ ಆಜ್ಞೆಯನ್ನು ಹೊರಡಿಸಿದರು; ಸುಭಾಷರು ಅದನ್ನು ಲೆಕ್ಕಿಸಲಿಲ್ಲ. ಈ ಕೊನೆಯ ಮಾತಿಗಾಗಿಯೆ ಇಂದು ಸುಭಾಷರಮೇಲೆ ಶಿಸ್ತುಭಂಗೋಪಾಯವನ್ನು ಕೈಕೊಂಡಿದ್ದರೂ ಮೇಲೆ ವಿವರಿಸಿದ ಉತ್ತರೋತ್ತರಗಳನ್ನು ಮರೆಯುವಂತಿಲ್ಲ. ಇಂದಿನ ಸುಭಾಷರ ಶಿಕ್ಷೆಯಿಂದ ಅವರೊಬ್ಬರಿಗೆಯೆ ಅಲ್ಲದೆ, ಒಂದು ವ್ಯಕ್ತಿಗಲ್ಲದೆ—ಅವರಿಗೆ ಚುನಾವಣೆಯಲ್ಲಿ ಬಹುಮತವನ್ನು ಕೊಟ್ಟ ಎಲ್ಲರಿಗೆ, ಅವರ ಧೋರಣೆಯನ್ನು ಅನುಕರಿಸುವ, ಸ್ವೀಕರಿಸುವ ಸಾವಿರಾರು ತರುಣ ದೇಶಭಕ್ತರಿಗೆ ಕಾಂಗ್ರೆಸಿನ ಅಧಿಕಾರಸ್ಥಾನಗಳು ಮುಚ್ಚಲ್ಪಟ್ಟಿವೆ ಎಂದು ಹೇಳಬಹುದಲ್ಲವೆ? ಮುಸ್ಲಿಂ ಲೀಗ್, ಹಿಂದು ಮಹಾಸಭಾ, ಕೂಲಿಕಾರರ ಸಂಘ, ಕಿಸಾನ್ ಸಂಸ್ಥೆ, ಯುವಕಪರಿಷತ್ತುಗಳು, ಸಮಾಜವಾದಿ-ಸಾಮ್ಯವಾದಿ ಸಂಸ್ಥೆಗಳು—ಈಗ ಸುಭಾಷ ಪಕ್ಷ! ಇಷ್ಟೊಂದು ಸಾಂಸ್ಕೃತಿಕ, ಆರ್ಥಿಕ, ಧಾರ್ಮಿಕ ಸಂಘಗಳನ್ನು ಹೊರಗಿಟ್ಟು ಕಾಂಗ್ರೆಸ್ಸು ಯಾರ ಪರವಾಗಿ ಮಾತನಾಡುವುದು? ಕಾಂಗ್ರೆಸ್ಸು ಯಾವ ಜನಸಮೂಹದ ಪ್ರತಿನಿಧಿಯು? ಈ ಪ್ರಶ್ನೆಗಳ ಉತ್ತರವು ಮುಂದಿನ ಚುನಾವಣೆಯ ಕಾಲಕ್ಕೆಯೆ ಸ್ಪಷ್ಟವಾಗಿ ದೊರೆಯಬಹುದಾದ್ದರಿಂದ ಅನೇಕರು ಅವುಗಳನ್ನು ಅಲಕ್ಷ್ಯ ಮಾಡಿದ್ದಾರೆ, ಕೆಲವರು ಅಲ್ಲಗಳೆಯಲು ಯತ್ನಿಸಿದ್ದಾರೆ, ಇನ್ನೂ ಅನೇಕರು ಅರಿಯದೆ ಹೋಗಿದ್ದಾರೆ.

ಇದೊಂದು ಪಕ್ಷಸಂಘಟನೆ

ಇಂದಿನ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಎಂಬುದು ಕೇವಲ ಒಂದು ಪಕ್ಷವನ್ನು ಸಂಘಟಿಸುವ ಸಂಸ್ಥೆಯೆ ಆಯಿತೆಂದು ನಿರ್ವಿವಾದ

ವಾಗಿ ಹೇಳಬಹುದು. ಆ ಪಕ್ಷವು ಯಾವುದು, ಅದರ ಧೋರಣೆ ಏನು ಎಂಬುದನ್ನು ತಿಳಿದುಕೊಳ್ಳುವುದು ಸುಲಭ ಮಾತಾಗಿದೆ. ಇಂದಿನ ವರ್ಕಿಂಗ್ ಕಮಿಟಿಯನ್ನಾಗಲಿ, ಎ. ಆಯ್. ಸಿ. ಸಿ. ಯನ್ನಾಗಲಿ ನೋಡಿದೊಡನೆ ಒಂದು ಸಂಗತಿ ಕಣ್ಣುಕುಕ್ಕುವುದು. ಅಖಿಲಭಾರತೀಯ ಪಾರ್ಲಮೆಂಟರಿ ಸಬ್‌ಕಮಿಟಿಯ ಸಹಾಯಕರು ವರ್ಕಿಂಗ್ ಕಮಿಟಿಯಲ್ಲಿದ್ದಾರೆ; ಸಾಮಾನ್ಯ ಎಲ್ಲ ಕಾಂಗ್ರೆಸ್ ಮಂತ್ರಿಮಂಡಳಗಳಲ್ಲಿಯ ಎಲ್ಲ ಮಂತ್ರಿಗಳೂ ಉಪಮಂತ್ರಿಗಳೂ ಎ. ಆಯ್. ಸಿ. ಸಿ. ಯಲ್ಲಿದ್ದಾರೆ. ಅಂತೂ ಸುಧಾರಣೆಗಳನ್ನು ನಡೆಸಬೇಕೆಂಬ ಶಕ್ತಿಯ ಮತ್ತು ಹಟದ ಮೇಧಾವಿ-ಮಾಯಾವಿಗಳೇ ಇಂದಿನ ಕಾಂಗ್ರೆಸ್ ಸೂತ್ರಸಂಚಾಲಕರಾಗಿದ್ದಾರೆ.

ಮುಂದಿನ ಬಿಕ್ಕಟ್ಟು

ಸದ್ಯಕ್ಕೆ ಕಾಂಗ್ರೆಸಿನ ಮುಂದಿದ್ದ ಬಿಕ್ಕಟ್ಟು ಬ್ರಿಟಿಶರ ತಂತ್ರಕ್ಕೆ ಸಂಬಂಧಿಸಿಲ್ಲ, ತನ್ನಲ್ಲಿಯ ತಾಕಲಾಟಕ್ಕೇ ಸಂಬಂಧಿಸಿದೆ. ಸುಭಾಷರು ಬಂಗಾಲ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಿದ್ದಾರೆ. ವರ್ಕಿಂಗ್ ಕಮಿಟಿಯ ಆಜ್ಞೆಯನ್ನು ಅವರು ಮನ್ನಿಸುವುದಿಲ್ಲವಾದರೆ ತಮ್ಮ ಅಧಿಕಾರಪದವನ್ನು ಬಿಟ್ಟುಕೊಡಬೇಕು; ಅವರಿಗೆ ಇದುವರೆಗೆ ಆ ಕಮಿಟಿಯ ಬಹುಮತದ ಬೆಂಬಲವಿದ್ದಿತು; ಅದು ಹಾಗೆಯೆ ಉಳಿದರೆ ಇನ್ನೊಬ್ಬ ಅಧ್ಯಕ್ಷನಿಗೆ ಬಹುಮತ ದೊರಕುವುದು ಹೇಗೆ? ಇನ್ನು ಸುಭಾಷರಾಗಲಿ ಅವರೊಡನೆ ಪ್ರಾಂತಿಕ ಕಮಿಟಿಯಾಗಲಿ ಆ ಆಜ್ಞೆಯನ್ನು ಮನ್ನಿಸದಿದ್ದರೆ— ? ವರ್ಕಿಂಗ್ ಕಮಿಟಿಯು ಹೊಸತೊಂದು ಪ್ರಾಂತಿಕ ಕಮಿಟಿಯನ್ನು ನಿರ್ಮಿಸಬೇಕಾಗುವುದು. ಸುಭಾಷರ ಕಮಿಟಿಯು ಅಸ್ತಿತ್ವದಲ್ಲಿಯೆ ಉಳಿಯಬಹುದು. ಅಂತೂ ಬ್ರಿಟಿಶರಿಗೂ ಸಾಧಿಸಲು ಧೈರ್ಯವಾಗದ ಬಂಗಾಲ ವಿಭಜನೆ (Bengal Partition) ಯನ್ನು ಕಾಂಗ್ರೆಸ್ಸು ಸಾಧಿಸಿ ಶ್ರೇಯ ತಂದುಕೊಂಡಿತೆನಬಹುದೆ?

ಕನ್ನಡ ಮತ್ತು ಹಿಂದಿ

ಶ್ರೀ. ದಿವಾಕರರು ಆಚಾರ್ಯ ಕಾಲೇಲ್‌ಕರರೊಡನೆ ಹಿಂದೀ ಪ್ರಚಾರಕ್ಕಾಗಿ ಕರ್ನಾಟಕದಲ್ಲಿ ಸಂಚರಿಸಿದರಷ್ಟೆ. ಆ ಸಂಬಂಧದಲ್ಲಿ 'ಕನ್ನಡ ನುಡಿ'ಯ ಸಂಪಾದಕರು ತಮ್ಮದೊಂದು ಅಭಿಪ್ರಾಯವನ್ನು ಪ್ರಕಟಿಸಿದ್ದರು. ಆ ಅಭಿಪ್ರಾಯದಿಂದ ಶ್ರೀ. ದಿವಾಕರರಿಗೆ ನೋವು ಉಂಟಾದುದೂ, ಅದರಂತೆ ಅವರು 'ಕನ್ನಡ ನುಡಿ, ಸಂಪಾದಕರಿಂದ ಕ್ಷಮಾಯಾಚನೆಯನ್ನೂ ಕೋರಿದುದೂ, ಅದಕ್ಕಾಗಿ ಸಂಪಾದಕ ಮಂಡಳದಲ್ಲಿಯೆ ಭಿನ್ನಾಭಿಪ್ರಾಯವಾಗಿ ಸಂಪಾದಕರಾದ ಶ್ರೀ. ಆ. ನ. ಕೃಷ್ಣರಾಯರು ರಾಜೀನಾಮೆಯನ್ನು ಕೊಟ್ಟುದೂ ಸರ್ವಶ್ರುತವಾಗಿದೆಯಷ್ಟೆ. ಈ ವಿಷಾದಕರ ಘಟನೆಯಿಂದ ಕನ್ನಡ-ಹಿಂದೀ ವಾದಕ್ಕೆ ಮತ್ತೆ ಮೂರ್ತಸ್ವರೂಪ ಬಂದಿದೆ. ಈ ಮಾತಿನ ಮಹತ್ತ್ವವನ್ನು ಕಂಡು ಅತ್ಯುತ್ತಮವಾಗಿ ಅದರ ಊಹಾಪೋಹವನ್ನು ಮಾಡಿದ 'ಪ್ರಜಾಮತ'ದ ಅಗ್ರಲೇಖವು ಕನ್ನಡಾಭಿಮಾನಿಗಳಿಗೆ ತತ್ತ್ವತಃ ಅಭಿಮತವಾಗುವುದರಲ್ಲಿ ಸಂದೇಹವಿಲ್ಲ ಎಂದು ನಮ್ಮ ಅಭಿಪ್ರಾಯ. ಅದಕ್ಕಾಗಿ ಈ ವಿಷಯವಾಗಿ ಅವರ ಕೊನೆಯ ಮಾತುಗಳನ್ನು ಇಲ್ಲಿ ಕಾಣಿಸಿದ್ದೇವೆ: —

ಮುಂಬೈ ಶಿಕ್ಷಣಮಂತ್ರಿಗಳ ಕಾರ್ಯದರ್ಶಿನಿಯವರಾದ ಶ್ರೀಮತಿ ಹಂಸಾ ಮೇಹತಾರವರು ಧಾರವಾಡಕ್ಕೆ ಬಂದಾಗ ಸ್ಟೇಷನಿನಲ್ಲಿ ತೆಗೆದುಕೊಂಡ ಛಾಯಾಚಿತ್ರ.

" ಶ್ರೀ. ದಿವಾಕರರು ತಮ್ಮ ಬಳ್ಳಾರಿಯ ಅಧ್ಯಕ್ಷ ಭಾಷಣದಲ್ಲಿ ಹಿಂದಿಯ ಮಾತೆತ್ತಿ 'ಪರಪ್ರಾಂತ್ಯಗಳೊಡನೆ ಸಂಬಂಧ ಬರುವವರು ಮಾತ್ರ ಅದನ್ನು ಕಲಿಯಬೇಕು; ಇತರರು ಕಲಿಯುವುದು ಆವಶ್ಯಕವಿಲ್ಲ; ಅದನ್ನು ಒತ್ತಾಯದಿಂದ ಕಲಿಸಬಾರದು ಎಂಬ ಮುಂತಾದ ಆಕ್ಷೇಪಗಳು ನಮ್ಮ ಮುಂದೆ ಬರುತ್ತಿವೆ. ವ್ಯಾವಹಾರಿಕ ಸಂಭಾಷಣೆಯ ಪೂರ್ತಿಯ ಹಿಂದುಸ್ಥಾನಿಯನ್ನು ಕಲಿಸಿದರೆ, ಹಾಗೂ ಪರೀಕ್ಷೆಯ ದೃಷ್ಟಿಯಿಂದ ಒತ್ತಾಯ ಮಾಡದಿದ್ದರೆ ಈ ಆಕ್ಷೇಪಗಳು ಕಡಿಮೆಯಾಗುವುವು' ಎಂದು ಹೇಳಿದರಷ್ಟೆ. ಕರ್ನಾಟಕ ಹಿಂದೀ ಪ್ರಚಾರ ಕಾರ್ಯವನ್ನು ಪ್ರಚಾರ ಸಭಾಧ್ಯಕ್ಷರಾದ ಅವರು ಈ ದೃಷ್ಟಿಯಿಂದ ನಡೆಯಿಸುತ್ತಿದ್ದಾರೆಯೆ?

"ಬಳ್ಳಾರಿ ಮತ್ತು ಧಾರವಾಡದ ಟ್ರೈನಿಂಗ್ ಕಾಲೇಜುಗಳಲ್ಲಿ ಒತ್ತಾಯದ ಹಿಂದೀ ಶಿಕ್ಷಣ ಆರಂಭವಾಗಿರುವುದೂ ಬೊಂಬಾಯಿ ವಿಶ್ವವಿದ್ಯಾಲಯದ ಆರ್ಟ್ಸ್ ಕಾಲೇಜುಗಳಲ್ಲಿ ಒತ್ತಾಯದ ಹಿಂದೀ ಶಿಕ್ಷಣ ಆರಂಭಿಸಲು ಮಾಡಿದ ಪ್ರಯತ್ನವೂ ಈ ನೀತಿಗನುಸಾರವಾಗಿದೆಯೆ?

" ಕರ್ನಾಟಕದಲ್ಲಿ ಹಿಂದೀ ಪ್ರಚಾರ ಮಾಡುವ ವಿಧಾನವನ್ನು ತಮಗೆ ಸರಿದೋರಿದಂತೆ ನಿರ್ಣಯಿಸಲು ಪ್ರಚಾರ ಸಭಾಧ್ಯಕ್ಷರು (ಶ್ರೀ. ದಿವಾಕರರು) ಸ್ವತಂತ್ರರೆ? ಇಲ್ಲವೆ 'ಮೇಲಿನಿಂದ' ಬರುವ ಆಜ್ಞೆಯಂತೆ ಅವರು ನಡೆಯಬೇಕೆ?

" ಮೇಲಿನಿಂದ ಆಜ್ಞೆಕೊಡುವವರು ಕನ್ನಡದ ಹಿತವನ್ನು ಗಮನಿಸಿ ವರ್ತಿಸುವರೆ? ಕನ್ನಡದ ಸಮಸ್ಯೆಗಳು ಅವರಿಗೆ ಗೊತ್ತೆ?"

(ಪ್ರಜಾಮತ ೨೦-೮-೧೯೩೯, ಪು. ೩೪)

ಕನ್ನಡ-ಹಿಂದೀ ವಾದದ ವಿಷಯವಾಗಿ ನಾವು ಆಗಾಗ ಬರೆದಿದ್ದೇವೆ. ಆ ಧೋರಣೆಯನ್ನನುಸರಿಸಿಯೆ ಮೇಲಿನ ಪ್ರಶ್ನೆಗಳನ್ನು ಶ್ರೀ. ದಿವಾಕರರೆದುರು ಹಟದಿಂದ ಇಡಬಯಸಿದ್ದೇವೆ. ವಿಷಯದ ಮಹತ್ತ್ವವನ್ನೂ, ಶೀಘ್ರದಲ್ಲಿಯೆ ಕೂಡಲಿರುವ ಸಾಹಿತ್ಯಸಮ್ಮೇಳನವನ್ನೂ ನೆನೆದು ಶ್ರೀಯುತರು ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ಸಾರಬೇಕೆಂದು ನಮ್ಮ ಕೋರಿಕೆ.

ರಶಿಯಾ-ಜರ್ಮನಿ ಒಪ್ಪಂದ

ಪರರಾಷ್ಟ್ರರಾಜಕಾರಣದಲ್ಲಿ ಹೋದ ತಿಂಗಳು ಜರುಗಿದ ಅತ್ಯಂತ ಮಹತ್ತ್ವದ ಘಟನೆ ಎಂದರೆ ೪೪ ತಾಸುಗಳ ಒಳಗಾಗಿ ಜರ್ಮನಿ-ರಶಿಯಾಗಳು ತಂತಮ್ಮೊಳಗೆ ಒಪ್ಪಂದವನ್ನು ಮಾಡಿಕೊಂಡದ್ದು. ನಾಝಿ ಮತ್ತು ಬೊಲ್‌ಶೆವ್ಹಿಕ್ ಮತಾನುಯಾಯಿಗಳು ಕಳೆದ ಆರು ವರ್ಷಗಳವರೆಗೆ ಪರಸ್ಪರರಿಗಾಗಿ ತೋರಿಸಿದ ದ್ವೇಷಸಾಹಿತ್ಯದಲ್ಲಿ ಅವಾಚ್ಯಶಬ್ದ ಒಂದೂ ಉಳಿದಿರಲಿಲ್ಲ, ಕಲುಷಿತ ಕಲ್ಪನಾಶಕ್ತಿ ಸಾಲುತ್ತಿದ್ದಿಲ್ಲ. ಹೀಗಿರುವಾಗ ಈ ಅಕಲ್ಪನೀಯ ಘಟನೆ ಜರುಗಿತು ಹೇಗೆ? ಒಂದೆಡೆ ಫ್ರಾನ್ಸ್-ಬ್ರಿಟನ್ನುಗಳು ತನಗಾಗಿ ತೋರಿಸಿದ ತಾತ್ಸಾರಕ್ಕಾಗಿ ರಶಿಯಾ ಅತ್ಯಂತವಾಗಿ ಅಸಹ್ಯಗೊಂಡಿದೆ; ಇನ್ನೊಂದೆಡೆ ಡಾಂತ್ಸಿಗವನ್ನು ವಶಪಡಿಸಿಕೊಳ್ಳಲು ಬೇಕಾದ ಉಪಾಯವನ್ನು ಕೈಕೊಳ್ಳುವಷ್ಟು ಜರ್ಮನಿ ಮತಿಭ್ರಾಂತಿಗೊಂಡಿದೆ. ಈ ಮಾನಸಿಕ ಅಸಹನೆಯು ಇಂದಿನ ಘಟನೆಗೆ ಕಾರಣವೆಂದು ಹೇಳಬಹುದು. ಸದ್ಯಕ್ಕೆ ಈ ಘಟನೆಯಿಂದ ಇಂದಿನ ರಾಜಕಾರಣದ ಮೇಲೆ ಯಾವ ಪರಿಣಾಮವಾಗಬಹುದೆಂಬುದಿಷ್ಟನ್ನೆ ನೋಡಬೇಕಾಗಿದೆ.

ಒಂದು ಕಲ್ಲು, ಎರಡು ಹಕ್ಕಿ

ಈ ಒಪ್ಪಂದದಿಂದ ರಶಿಯಾದ ಸ್ಥಾನವು ಅಂತರರಾಷ್ಟ್ರೀಯ ವ್ಯವಹಾರದಲ್ಲಿ ಮೇಲಿನ ಮಟ್ಟಕ್ಕೆ ಮುಟ್ಟಿತೆನ್ನಲು ಅಡ್ಡಿ ಇಲ್ಲ. ರಶಿಯಾದ ಪರಿಸ್ಥಿತಿ ವಿಶಿಷ್ಟವಾದುದಿದೆ. ಒಂದೆಡೆ ಯುರೋಪವನ್ನು ಮುಟ್ಟಿದೆ, ಇನ್ನೊಂದೆಡೆ ಏಸಿಯಾಖಂಡವನ್ನೂ ಬಳಸಿಟ್ಟು ನಿಂತಿದೆ. ಯುರೋಪದಲ್ಲಿ ಜರ್ಮನಿ, ಏಸಿಯಾದಲ್ಲಿ ಜಪಾನ್—ಇವು ರಶಿಯಾಕ್ಕೆ ಪ್ರಬಲವಾದ ಶತ್ರುಗಳು. ಇಂದಿನ ವರೆಗೆ ಜಪಾನ್-ಜರ್ಮನಿ-ಇಟಲಿ ಈ ಮೂವರು ಬೊಲ್‌ಶೆವ್ಹಿಕರನ್ನು ಬಗ್ಗುಬಡಿಯುವಂತೆ ತಂತಮ್ಮೊಳಗೆ (Anti-Comintern) ಒಪ್ಪಂದವನ್ನು ಮಾಡಿಕೊಂಡಿದ್ದಾರೆ. ಸದ್ಯದ ಒಪ್ಪಂದದಿಂದ ಅದು ಮುರಿಯಿತು, ಅರ್ಥಾತ್ ಇನ್ನು ಮುಂದೆ ರಶಿಯಾದ ವಿರುದ್ಧ ಜಪಾನಕ್ಕೆ ಜರ್ಮನಿಯ ಸಹಾಯ ದೊರೆಯುವುದು ಅಸಂಭವ ಎಂದು ಹೇಳಬಹುದು. ಆದ್ದರಿಂದ ಏಸಿಯಾದಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡು ರಶಿಯಾದೇಶವು ಯುರೋಪದ ಕಡೆಗೆ ಹೆಚ್ಚಿನ ಏಕಾಗ್ರತೆಯಿಂದಲೂ ಶಕ್ತಿ-ಸಾಮಗ್ರಿಗಳಿಂದಲೂ ಕೂಡಿ ನೋಡಬಹುದು. ಜರ್ಮನಿಯ ಆಕ್ರಮಣಶೀಲತೆ, ಪ್ರಜಾತತ್ತ್ವಘಾತುಕ ಧೋರಣೆ—ಇವುಗಳಿಗೆ ತಡೆಹಾಕಲು ರಶಿಯಾಕ್ಕೆ ಈ ಒಪ್ಪಂದದಿಂದ ಸಾಧ್ಯವಾಗಬಹುದೆ? ಇಲ್ಲವೆ ರಶಿಯಾದೇಶವೂ ನ್ಯಾಯಬುದ್ಧಿಯನ್ನೂ ಪ್ರಜಾತತ್ತ್ವಗಳನ್ನೂ ಸ್ವಾರ್ಥಕ್ಕಾಗಿ ಮೂಲೆಗಿರಿಸಿತೆ? ಇವೇ ಮಹತ್ತ್ವದ ಪ್ರಶ್ನೆಗಳಾಗಿವೆ. ಈ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವು ಈಗ ಪ್ರಕಟವಾದ ಕರಾರುಗಳಿಂದ ಸ್ಪಷ್ಟವಾಗುವುದಿಲ್ಲ. ತೋರಿಕೆಗೆ ರಶಿಯಾರಾಷ್ಟ್ರವು ಹಿಟ್ಲರನಿಗೆ ಡಾಂತ್ಸಿಗ್ ನುಂಗಲು ಸಹಾಯಮಾಡುವಂತೆಯೆ ಇದೆ.

ಆದರೂ—

ಇಷ್ಟಿದ್ದರೂ ಸಂಶಯಕ್ಕೂ ಗೊಂದಲಕ್ಕೂ ಆಸ್ಪದವನ್ನು ಕೊಡುವ ಅನೇಕ ಸಂದರ್ಭಗಳು ಇದರಲ್ಲಿ ಅಡಕವಾಗಿವೆ. ಡಾಂತ್ಸಿಗವು ದೊಡ್ಡ ತುತ್ತು. ಅದನ್ನು ನುಂಗಲು ಹಿಟ್ಲರನು ಬಾಯ್ದೆರೆದಾಗ ಸ್ಟಾಲಿನನು ತನ್ನ ಬೊಟ್ಟುಗಳನ್ನು ಹಿಟ್ಲರನ ದವಡೆಯಲ್ಲಿಟ್ಟು ಗುಟಕರಿಸಲು ಸಹಾಯಮಾಡಬಹುದೆಂಬ ಚಿತ್ರವೇನೊ ಸೊಗಸಾಗಿದೆ. ಆದರೆ ಹಿಟ್ಲರನ ನೀತಿಯನ್ನು ಯಾರು ಅರಿಯರು! ಕೊಟ್ಟ ವಚನವನ್ನು ಮುರಿಯುವ ಅಪ್ರಾಮಾಣಿಕ ಶಿರೋಮಣಿ ಅವನು. ಸ್ಟಾಲಿನನ ಬೊಟ್ಟು ಕಡಿದೊಗೆವ ಕಿಡಿಗೇಡಿ ವಿಚಾರ ಅವನಿಗೆ ಸಹಜವೆನಿಸಬಹುದು. ಆ ಸಂದರ್ಭದಲ್ಲಿ ಇನ್ನೊಂದು ಕೈಯಿಂದ ಸ್ಟಾಲಿನನು ಜರ್ಮನಿಯ ಹಲ್ಲು ಮುರಿವುದರಲ್ಲಿ ಸಂದೇಹವಿಲ್ಲ. ಹಾಗೆ ನೋಡಿದರೆ ಫ್ರಾನ್ಸ್-ಬ್ರಿಟನ್ನುಗಳಿಗೆ ಎದುರಾಗುವ ಉದ್ದೇಶ ಸ್ಟಾಲಿನನಿಗಿಲ್ಲ. ಆದರೆ ಫ್ರಾನ್ಸಕ್ಕಾಗಲೀ

ಕಂಬನಿ

ದಿವಂಗತಾ

ಮಿಸೆಸ್. ಬಿ. ಟಿ. ಜಿ. ಕೃಷ್ಣ

ಇವರ ಕಥಾಸಂಗ್ರಹ

ಶ್ರೀ. ಬೇಂದ್ರೆಯವರ ಮುನ್ನುಡಿ,

ಶ್ರೀ. 'ದತ್ತಾತ್ರೇಯ' ಅವರ

'ನಾನು ಕಂಡ ಗೌರಮ್ಮ'

ಇವುಗಳೊಡನೆ

ಬೆಲೆ: ಒಂದು ರೂಪಾಯಿ

ಶ್ರೀ. ಬೇಂದ್ರೆಯವರು ಮುನ್ನುಡಿಯಲ್ಲಿ ಹೀಗೆ ಹೇಳಿದ್ದಾರೆ:

"ಈ ಹನ್ನೆರಡೂ ಕತೆಗಳು ಒಂದಿಲ್ಲೊಂದು ವಿಧದಿಂದ ಹೆಣ್ಣು ಗಂಡಿನ ಜೀವನದ, ಅವರ ಭಾಗ್ಯ-ದುರ್ಭಾಗ್ಯದ, ಅವರ ಪ್ರಣಯದ ಆಖ್ಯಾನಗಳಾಗಿವೆ. ಗಂಡಸಿನ ದೌರ್ಜನ್ಯ, ದಾರಿದ್ರ್ಯ-ಕುರೂಪತೆಗಳ ದೌರ್ಭಾಗ್ಯ, ಹೆಂಗಸಿನ ಯುಗಯುಗದ ದುರ್ವಿಧಿ-ವಿಲಾಸ, ಸಮಾಜದ ವಿಪರೀತ ದುರ್ಬುದ್ಧಿ, ಶಿಷ್ಟಾಚಾರಗಳ ಅಂಧ ನಿರೋಧ ಇವೇ ಮೊದಲಾದ ಕಾರಣಗಳಿಂದ ಸ್ತ್ರೀಯರಿಗಾಗುವ ದುಃಖಕ್ಕಾಗಿ ಗೌರಮ್ಮನವರ ಕರುಳಿನ ತಂತಿಯಿಂದ ಮಿಡಿದು ಬಂದ ಮೂಕಶೋಕವು ಹೃದಯಭೇದಕವಾಗಿಯೂ ಹೃದಯಬೋಧಕವಾಗಿಯೂ ಆಗಿರುವುದು."

ಕತೆಗಾತಿಯ ಭಾವಚಿತ್ರವಿದೆ.

ಶ್ರೀ. ಬೇಂದ್ರೆಯವರ "ತಂಗಿ ಗೌರಮ್ಮ" ಎಂಬ ಕವಿತೆಯಿದೆ.

ಮನೋಹರ ಗ್ರಂಥಭಾಂಡಾರ ಧಾರವಾಡ

ಇಂಗ್ಲೆಂಡಕ್ಕಾಗಲಿ, ಪೋಲಾಂದಿಗಾಗಲಿ ತನ್ನ ಸಹಾಯಬೇಡ, ಬೇಕಾದರೆ ಸೇವೆಬೇಕು—ಎಂಬ ಧೋರಣೆ ಆ ರಾಷ್ಟ್ರಗಳಿಗಿರುವಾಗ ಸ್ಟಾಲಿನನಿಗೆ ಬೇರೆ ಉಪಾಯವೆ ಇರಲಿಲ್ಲ. ಇಷ್ಟೇಕೆ– ರಶಿಯಾದ ಸಹಾಯ ಆವಶ್ಯಕವೆನಿಸಿದರೆ, ಫಲಕಾರಿಯಾಗಬೇಕಾದರೆ ಪೂರ್ವಕ್ಕೆ ಜಪಾನಿನ ಹಾವಳಿಯನ್ನು ತಡೆಯುವುದಗತ್ಯವಾಗಿತ್ತು. ಇಂದು ಸ್ಟಾಲಿನನು ಅದನ್ನು ಸಾಧಿಸಿಕೊಂಡಿದ್ದಾನೆ. ಮುಂದೇನಾಗಬಹುದೆಂದು ನಿಶ್ಚಿತವಾಗಿ ಹೇಗೆ ಹೇಳಬಹುದು? ಒಪ್ಪಂದದಲ್ಲಿ ಪ್ರಾಮಾಣಿಕತೆ ಬೇಕೆಂಬ ಮಾತು ಜರ್ಮನಿಗೆ ಸಮ್ಮತವಿಲ್ಲದ ರೂಢಿ; 'ಶಠಂ ಪ್ರತಿ ಶಾಠ್ಯಂ' ಎಂಬುದು ಸ್ಟಾಲಿನನ ಧೋರಣೆ. ಅದಕಾಗಿ ನಡೆದುದನ್ನಷ್ಟೆ ನಂಬಿ ಮುಂದಿನದಕ್ಕೆ ಆತುರರಾಗುವ ಪ್ರಸಂಗವಿದು ಎನಬಹುದು.

ರೇಡಿಯೊ ಮತ್ತು ಕನ್ನಡ

ಮುಂಬಯಿ ರೇಡಿಯೊ ಸ್ಟೇಷನಿನವರು ವಿದ್ಯಾರ್ಥಿಗಳಿಗಾಗಿ ತಿಂಗಳಲ್ಲಿ ಎರಡು ಸಲ—ಹದಿನೈದು ಮಿನಿಟುಗಳ ವರೆಗೆ ಮಾತ್ರ—ತಮ್ಮ ಅಲೆಯಂಚೆಯೊಂದಿಗೆ ಕನ್ನಡ ಮಾತುಗಳನ್ನು ಹರಿಯಿಸುತ್ತಿದ್ದಾರಷ್ಟೆ! ನಡುವೆ ಅದಾವ ಬೆಕ್ಕು ಸೀತಿತೋ! ಮುಂದೆ ಈ ಕನ್ನಡಮಾತನ್ನು ಹರಿಯಿಸಲಾರೆವೆಂದು ಹೇಳಿದರಂತೆ—ಸ್ಟೇಷನಿನ ವ್ಯವಸ್ಥಾಪಕರು. ಹಾಗೆಂದು ಕರ್ಣಾಟಕದಲ್ಲಿಯ ಎಲ್ಲ ಹೈಸ್ಕೂಲುಗಳಿಗೂ ಬರೆದು ಕೇಳಿದ್ದರಂತೆ. ಹೈಸ್ಕೂಲಿನ ಯಾವ ವಿದ್ಯಾರ್ಥಿಯೂ ಈ ಭಾಷಣಮಾಲೆಯನ್ನು ಉಪಯೋಗ

ಆರೋಗ್ಯಮಂದಿರ

ಆಯುರ್ವೇದ ವಿಷಯಕ ಸಚಿತ್ರಮಾಸಪತ್ರಿಕೆ

ಪನವೇಲದ ಧೂತಪಾಪೇಶ್ವರ ಕಂಪನಿಯ ಕನ್ನಡ ಮುಖ-ಪತ್ರಿಕೆಯಾಗಿ ಇದು ಹೊರಡುತ್ತಲಿದೆ. ತಜ್ಞರಾದ ಲೇಖಕರಿಂದ ಬರೆಯಲಾದ ಆಯುರ್ವೇದ ವಿಷಯಕ ಲೇಖನಗಳೂ, ಆರೋಗ್ಯವಿಷಯಕ ಲೇಖನಗಳೂ, ಬೇರೆ ಬೇರೆ ವೈದ್ಯರ ಅನುಭವಪೂರ್ಣವಾದ ನಿದಾನ-ಚಿಕಿತ್ಸಾ ವಿಚಾರಗಳೂ ಬರುವುವು. ಪ್ರತಿಯೊಬ್ಬ ಕುಟುಂಬಿಯೂ ಇದನ್ನು ಓದುತ್ತಲಿದ್ದರೆ ಮನೆಯಲ್ಲಿ ಸ್ವಾಸ್ಥ್ಯವು ನೆಲೆಯಾಗಿ ನಿಲ್ಲದೆ ಇರದು.

ವಾರ್ಷಿಕ ಚಂದಾ ೧—೮—೦

ಬಿಡಿ ಸಂಚಿಕೆಗೆ ೦—೨—೦

ಆರೋಗ್ಯಮಂದಿರ ಕಾರ್ಯಾಲಯ,

ಯುನೈಟೆಡ್ ಎಜೆನ್ಸೀಜ್, ಹುಬ್ಬಳ್ಳಿ.

ಮಾಡಿಕೊಳ್ಳುತ್ತಿದ್ದಿಲ್ಲವೆಂದು ಅವರಿಗಾರೋ ಸುದ್ದಿಯನ್ನು ಕೊಟ್ಟಿದ್ದರಂತೆ. ಆಶ್ಚರ್ಯದ ಮಾತು. ರೇಡಿಯೋ ಅನುಕೂಲತೆಯಿದ್ದ ಊರುಗಳಲ್ಲೆಲ್ಲ ಭಾಷಣವಿದ್ದ ದಿನದ ಗಡಬಡಿಯನ್ನು ಯಾರು ನೋಡಿಲ್ಲ? ವಿದ್ಯಾರ್ಥಿಗಳು, ವಿದ್ಯಾರ್ಥಿಗಳಲ್ಲದವರು; ಹುಡುಗರು, ಹಿರಿಯರು; ಗಂಡುಸರು, ಹೆಂಗುಸರು; ಸುಶಿಕ್ಷಿತರು, ಅಶಿಕ್ಷಿತರು ಜಾತ್ರೆಜಾತ್ರೆಯಾಗಿ ರೇಡಿಯೊ ಯಂತ್ರಗಳಿದ್ದಲ್ಲಿಗೆ ಧಾವಿಸುತ್ತಿರುತ್ತಾರೆ. ಭಾಷಣ ಕೇಳುವ ಕುತೂಹಲಕ್ಕಾಗಿ ಎಂದೂ ಹೋಟಲುಗಳ ಮುಖವನ್ನು ಕಾಣದ ತೀರ ಸನಾತನಿಗಳು ಕೂಡ ಅಂದು ಹೋಟಲುಗಳಲ್ಲಿ ಬಂದು ಕುಳಿತಿರುತ್ತಾರೆ. ಎರಡೆರಡು ದಿನ ರೇಡಿಯೊ ಭಾಷಣಗಳನ್ನು ಕುರಿತು ಚರ್ಚಿಸುತ್ತಾರೆ, ವಿಮರ್ಶೆ ಮಾಡುತ್ತಾರೆ. ಇದೆಲ್ಲ ನಿಜವಿದ್ದೂ ಈ ಭಾಷಣ-ಮಾಲೆಯ ಪ್ರತ್ಯಕ್ಷ ಉಪಯೋಗವಾಗುತ್ತಿಲ್ಲವೆಂದು ಯಾವ ಹಲ್ಲಿ ವ್ಯವಸ್ಥಾಪಕರ ಕಿವಿಯಲ್ಲಿ ಲೊಟಲೊಟಿಸಿರಬಹುದು? ಸರಿ, ಈಗ ಮತ್ತೆ ಯಾವ ಊರ ಅರಸನಿಗೆ ಏನಾಯಿತೋ! ಕನ್ನಡ ಭಾಷಣಮಾಲೆಯನ್ನು ಮುಂದೆಯೂ ಸಾಗಿಸುವರೆಂಬ ಬಗ್ಗೆ—ಇನ್ನೂ ಅನಧಿಕೃತವೇ ಎನ್ನಿ—ಸುದ್ದಿ ಬಂದಿದೆ. ಈ ಸುದ್ದಿ ನಿಜವಿದ್ದರಂತೂ ಒಳ್ಳೆಯದೆ, ಇಲ್ಲವಾದರೆ ಅದರ ಬಗ್ಗೆ ಕನ್ನಡಿಗರು ಕಸುವಿನಿಂದ ಚಳವಳಿ ನಡೆಯಿಸುವುದು ತುಂಬ ಅಗತ್ಯ. ಈ ಮೊದಲು ನಾವು ವಿದಿತಪಡಿಸಿದಂತೆ ಮುಖ್ಯ ಕಾರ್ಯಕ್ರಮಗಳಲ್ಲಿಯೂ ಕನ್ನಡ ಭಾಷೆಯ ಕಾರ್ಯಕ್ರಮಗಳಿಗೆ ಎಡೆಕೊಡುವುದು ತುಂಬ ಆವಶ್ಯಕವಾದ ಮಾತಾಗಿದೆ. ಹಗಲು ಮೂರು ಗಂಟೆಯ ಕಾಲವೆಂದರೆ ಎಲ್ಲರಿಗೂ ದಿನದ ಕಾರ್ಯಕಲಾಪದ ಕಾಲ. ನೌಕರರೂ, ವ್ಯಾಪಾರಸ್ಥರೂ ಆಗ ಮನೆಯಲ್ಲಿ ಕೂಡ ಇರರು. ವಿದ್ಯಾರ್ಥಿಗಳಿಗಾಗಿಯೆ ಆಗಲೊಲ್ಲದೇಕೆ—ಆಗುವ ಭಾಷಣಗಳನ್ನು ತಾವೂ ಕೇಳಬೇಕೆಂದು ಎಷ್ಟೊಂದು ಅಪೇಕ್ಷಿಸಿದರೂ ಹಲವು ಜನರಿಗೆ ಅದು ಅಸಾಧ್ಯವಾಗುತ್ತಿದೆ. ಮುಖ್ಯ ಕಾರ್ಯಕ್ರಮಗಳಲ್ಲಿ ಕನ್ನಡಕ್ಕೆ ಅವಕಾಶ ದೊರೆತರೆ ಅದರ ಉಪಯೋಗ ಕನ್ನಡ ಜನತೆಗೆ ಹೆಚ್ಚಾಗಿ ಆಗಬಹುದಾಗಿದೆ. ಸಾರ್ವಜನಿಕ ಸಂಸ್ಕೃತಿ ಪ್ರಚಾರವನ್ನೆ ಗುರಿಯನ್ನಾಗಿಟ್ಟುಕೊಂಡ ರೇಡಿಯೊ ಸಂಸ್ಥೆಯವರು, ಕನ್ನಡಿಗರಿಗಾಗಿ ಅನುಕೂಲ ಏರ್ಪಾಡನ್ನು ಮಾಡಿಕೊಡಬೇಕೆಂದು ನಮ್ಮ ಬಿನ್ನಹ.

ರೇಡಿಯೊ ಭಾಷಣ ಕೇಳಬೇಕು ಹೇಗೆ?

ಕನ್ನಡದಲ್ಲಿ ಕಾರ್ಯಕ್ರಮಗಳು ನಡೆದರೆ ಅವುಗಳನ್ನು ಕೇಳುವುದಕ್ಕೆಂದು ವಿದ್ಯಾರ್ಥಿಗಳಿಗಾಗಿಯೂ ಜನಸಾಮಾನ್ಯರಿಗಾಗಿಯೂ ನಮ್ಮಲ್ಲಿಯ ಯಾವ ಸ್ಥಳೀಯ ಸಾರ್ವಜನಿಕ ಸಂಸ್ಥೆಗಳೂ ಏರ್ಪಾಡನ್ನು ಮಾಡಿಲ್ಲ. ಉತ್ತರ ಕರ್ನಾಟಕದಲ್ಲಿಯ ಸುಮಾರು ೪೦-೪೨ ರಷ್ಟು ಹೈಸ್ಕೂಲುಗಳಲ್ಲಿ ರೇಡಿಯೊ ಯಂತ್ರವನ್ನಿಟ್ಟಿರುವ ಹೈಸ್ಕೂಲು ಒಂದೋ ಎರಡೋ! ಗವರ್ನರರೊ ಮಂತ್ರಿಗಳೊ ಬಂದರೆ ಮಾನಪತ್ರ ಕೊಡಲಿಕ್ಕೆಂದು ಸಾರ್ವಜನಿಕ ಹಣವನ್ನು ಸಾವಿರಸಾವಿರವಾಗಿ ಹಾರಿಸುವ ಮ್ಯುನಿಸಿಪಾಲಿಟಿ, ಲೋಕಲ್-ಬೋರ್ಡುಗಳೂ ಯಾವ ಊರಲ್ಲಿಯೂ ರೇಡಿಯೊ ಯಂತ್ರಗಳನ್ನಿರಿಸಿಲ್ಲ (ದಕ್ಷಿಣ ಕನ್ನಡ ಜಿಲ್ಲೆಯ ಒಂದೆರಡು ಪಟ್ಟಣಗಳಲ್ಲಿ ಅಲ್ಲಿಯ

ಜಯಂತಿಯ ದೀಪಾವಳಿಯ ಸಂಚಿಕೆ ಓದಲು ಮರೆಯಬೇಡಿರಿ !

ಸ್ಥಳೀಯಸಂಸ್ಥೆಯವರು ಇರಿಸಿದ್ದಾರೆಂದು ಕೇಳಿದ್ದೇವೆ.) ನಿಜವಾಗಿಯೂ ಕರ್ಣಾಟಕದಲ್ಲಿ ಜನಸಾಮಾನ್ಯರಿಗೆ ರೇಡಿಯೊ ಯಂತ್ರಗಳ ಪರಿಚಯಮಾಡಿ ಕೊಟ್ಟವರೆಂದರೆ ಹೋಟಲುಗಳ ಮಾಲಕರು. ಸದ್ಯ ನಡೆದಿರುವ ಕನ್ನಡ ಭಾಷಣಗಳು ಕನ್ನಡಿಗರ ಕಿವಿಗೆ ಬೀಳುತ್ತಿರುವುದು ಹೋಟಲು ಮಾಲಕರ ಉಪಕಾರದಿಂದಲೆ. ಅಲ್ಲಲ್ಲಿ ಒಬ್ಬಿಬ್ಬರು ಶ್ರೀಮಂತರು ತಮ್ಮಲ್ಲಿ ರೇಡಿಯೊ ಯಂತ್ರಗಳನ್ನು ಇಟ್ಟುಕೊಂಡವರು ಇದ್ದರೂ, ಅವರಲ್ಲಿ ಸಾರ್ವಜನಿಕರಿಗೆ ಪ್ರವೇಶ ಹೇಗೆ ಸಿಕ್ಕಬೇಕು? ಅಲ್ಲದೆ ನಮ್ಮ ಶ್ರೀಮಂತ ಜನರ ಮನಸಿನಲ್ಲಿ ನೆಲೆಮಾಡಿರುವ ಕನ್ನಡಿಗರ ವಿಷಯಕವಾದ 'ಇನ್ಫೀರಿಯಾರಿಟಿ ಕಾಂಪ್ಲೆಕ್ಸ್' ಉ, ಕನ್ನಡ ಭಾಷೆಯ ಕಾರ್ಯಕಲಾಪ ನಡೆದಾಗ ಉಪೇಕ್ಷೆಯಿಂದ ರೇಡಿಯೊ ಯಂತ್ರಗಳನ್ನು 'ಬಂದ್' ಮಾಡಿ ಇರಿಸುವಷ್ಟು ಬಲವಾಗಿದೆ. ಇದುದರಿಂದಲೆ ಅಲ್ಲಲ್ಲಿಯ ಎಲ್ಲ ಸಾರ್ವಜನಿಕ ಸಂಸ್ಥೆಗಳೂ ವಿದ್ಯಾಸಂಸ್ಥೆಗಳೂ ರೇಡಿಯೊ ಕಾರ್ಯಕಲಾಪಗಳು ಎಲ್ಲರಿಗೂ ಕೇಳಲಿಕ್ಕೆ ಸಿಕ್ಕುವಂತೆ ಏರ್ಪಾಡುಮಾಡಬೇಕಾದುದು ತುಂಬ ಅಗತ್ಯವಾದ ಮಾತಾಗಿದೆ.

ಕನ್ನಡ ಸಾಹಿತ್ಯ ಪರೀಕ್ಷೆಗಳು

ಪರೀಕ್ಷೆ-ಪದವಿಗಳ ಮೋಹವನ್ನು ಹುಟ್ಟಿಸುತ್ತಲೆ ಹಿಂದಿಯು ಇಂದು ಪ್ರಾಂತೀಯ ಭಾಷೆಗಳ ಮೇಲೆ ದಾಳಿ ಮಾಡುತ್ತ ಬರುತ್ತಲಿದೆ. ಬಿ. ಎ., ಎಂ. ಎ. ಡಿಗ್ರಿಗಳನ್ನು ಪಡೆಯದಿರುವವರು ತಮ್ಮ ಹೆಸರಿನ ಮುಂದೆ ಯಾವುದಾದರೂ ಆಗಲಿ ಒಂದು ಪದವಿ ಇದ್ದರೆ ನಾಚಿಕೆ ಪಡುವಂತಾಗಿ ದಿನದಿನಕ್ಕೆ ಹೆಚ್ಚುಹೆಚ್ಚಾಗಿ ಹಿಂದಿಯ ಬೆನ್ನನ್ನು ಹತ್ತಿ ನಡೆದು 'ವಿಶಾರದ' 'ಸಾಹಿತ್ಯ ವಿಶಾರದ' ಮೊದಲಾದ ಪದವಿಗಳನ್ನು ಹೆಸರಿಗೆ ಅಂಟಿಸಿಕೊಂಡು ತೃಪ್ತಿಪಡುತ್ತಲಿದ್ದಾರೆ. ಈ ತೃಪ್ತಿ ಅವರ ಪದವಿ ಪಡೆದಷ್ಟಕ್ಕೇ ಉಳಿಯದೆ ಅವರ ಮಾತೃಭಾಷೆಯನ್ನು ಪೂರ್ಣವಾಗಿ ಮರೆಯಹಚ್ಚುತ್ತಿದೆ. ಇದಕ್ಕಾಗಿ ಸಕಾಲದಲ್ಲಿಯೆ ಅಲ್ಲಲ್ಲಿಯ ಪ್ರಾಂತೀಯ ಸಾಹಿತ್ಯ ಸಂರಕ್ಷಕ ಸಂಸ್ಥೆಗಳು ಜಾಗೃತವಾಗಿ ತಕ್ಕ ಸಂರಕ್ಷಕ ಸಾಧನೆಗಳನ್ನು ಸಿದ್ಧಗೊಳಿಸದಿದ್ದರೆ ಸುಶಿಕ್ಷಿತರಲ್ಲಿ ಪ್ರಾಂತೀಯ ಭಾಷೆಗೆ ಉಳಿಗಾಲವೆ ಇಲ್ಲ. ಆದುದರಿಂದ ಅಲ್ಲಲ್ಲಿಯ ಸಾಹಿತ್ಯ ಸಂಸ್ಥೆಗಳೂ ಹಿಂದೀ ಪ್ರಚಾರ ಸಂಸ್ಥೆಯಂತೆ ತಮ್ಮ ತಮ್ಮ ಭಾಷೆಯಲ್ಲಿ ಪರೀಕ್ಷೆಗಳನ್ನೇರ್ಪಡಿಸಿ ಪದವಿಗಳನ್ನೂ, ಪ್ರಶಂಸಾಪತ್ರ (ಸರ್ಟಿಫಿಕೆಟ್) ಗಳನ್ನೂ ಕೊಡುವುದು ಅತ್ಯವಶ್ಯವಾಗಿದೆ. ಈ ದೃಷ್ಟಿಯಿಂದಲೂ ನಮ್ಮ ಕರ್ಣಾಟಕ ಸಾಹಿತ್ಯ ಪರಿಷತ್ತು ವಿಚಾರ ಮಾಡಿರಬಹುದೆಂದು ನಮ್ಮ ಭಾವನೆ. ಅದೀಗ ಕೆಲವು ಕನ್ನಡ ಸಾಹಿತ್ಯ ಪರೀಕ್ಷೆಗಳನ್ನೇರ್ಪಡಿಸಿ ಅವುಗಳಿಗಾಗಿ ವ್ಯಾಸಂಗಕಾಲ, ಪಠ್ಯಪುಸ್ತಕ ಮೊದಲಾದುವುಗಳನ್ನು ನಿರ್ಣಯಿಸಿ, ಒಂದು ನಿರ್ದಿಷ್ಟ ಕಾರ್ಯಕ್ರಮವನ್ನು ಅನುಗೊಳಿಸಿದೆ. ಮೊದಲನೆಯ ಪರೀಕ್ಷೆಯ ವ್ಯಾಸಂಗ ಕಾಲವು ಆರು ತಿಂಗಳ ಅವಧಿಯದಿದ್ದು ಇದು ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡಿ, ಚೆನ್ನಾಗಿ ಓದಲಿಕ್ಕೂ ಬರೆಯಲಿಕ್ಕೂ ಬರುವಂತೆ ಏರ್ಪಡಿಸಿ, ಪರೀಕ್ಷೆ ತೆಗೆದುಕೊಂಡು ಪಾಸಾದವರಿಗೆ ಸರ್ಟಿಫಿಕೆಟನ್ನು ಕೊಡಲಿದೆ. ಎರಡನೆಯ ಪರೀಕ್ಷೆಯು ಮೊದಲನೆಯ ಪರೀಕ್ಷೆಯ ಪಾತದ ಮುನ್ನಡೆಯು. ಇದರ ಪಠ್ಯಪುಸ್ತಕ ಮೊದಲಾದುವನ್ನು ಬರುವ ವರ್ಷದಲ್ಲಿ ನಿರ್ಣಯಿಸಲಿದೆ. ಮೂರನೆಯ ಪರೀಕ್ಷೆಗೆ '**ಪ್ರೌಢಪರೀಕ್ಷೆ**' ಎಂದು ಹೆಸರು. ಇದರ ಗುರಿಯೆಂದರೆ ಕನ್ನಡ ಸಾಹಿತ್ಯದಲ್ಲಿ ತಕ್ಕಮಟ್ಟಿನ ಪಾಂಡಿತ್ಯವನ್ನು ಉಂಟುಮಾಡಿ ಕೊಡುವುದು, ಈ ಪರೀಕ್ಷೆಗಾಗಿ ೨ ವರ್ಷಗಳಕಾಲ ಅಧ್ಯಯನ ಮಾಡಬೇಕಾಗುವುದು. ಇದಕ್ಕಾಗಿ ತಕ್ಕ ಗದ್ಯ-ಪದ್ಯ-ನಾಟಕ ಗ್ರಂಥಗಳನ್ನು ಪಠ್ಯಪುಸ್ತಕಗಳನ್ನಾಗಿಯೂ ಆರಿಸಿರುವರು. ಈ ಪರೀಕ್ಷೆಯಲ್ಲಿ ಪಾಸಾಗಿ ಪ್ರಶಸ್ತಿಪತ್ರಿಕೆಯನ್ನು ಸಂಪಾದಿಸಿದವರು ಮುಂದೆ ತಾವಾಗಿಯೆ ಅಧ್ಯಯನ ಮಾಡಿ ಕನ್ನಡದಲ್ಲಿ ಹೆಚ್ಚಿನ ಜ್ಞಾನವನ್ನು ಸಂಪಾದನ ಮಾಡಿಕೊಳ್ಳಬಹುದು. ಪರಿಷತ್ತು ಇಂತಹರಿಗಾಗಿಯೂ ಒಂದೋ ಎರಡೋ ಪದವಿಯ ಪರೀಕ್ಷೆಗಳನ್ನೂ ಇರಿಸಿ, ಕನ್ನಡ ಪದವಿಗಳ ಕಡೆಗೇ ಜನರ ಮನಸ್ಸು ತಿರುಗುವಂತೆ ಮಾಡಬೇಕೆಂದು ನಮ್ಮದೊಂದು ಸೂಚನೆ. ಹಾಗೆ ಅವರ ಮನಸ್ಸನ್ನು ತಿರುಗಿಸದಿದ್ದರೆ ಕಲಿತ ಜನರೆಲ್ಲ ಕನ್ನಡದ ಕಡೆಗೆ ಬೆನ್ನು ತಿರುಗಿಸುವುದೇ ಖಂಡಿತ. ಅದರಲ್ಲಿಯೂ ಕರ್ಣಾಟಕದಲ್ಲಿಯ ಹೊಣೆಗಾರರೆನಿಸಿಕೊಳ್ಳುವ ಮುಂದಾಳುಗಳೇ ನಾಡಿನಲ್ಲಿ ತಿರುಗಾಡಿ ಪ್ರಚಾರವನ್ನು ಮಾಡಿ ಜನರಲ್ಲಿ ಹಿಂದಿಯ ಹುಚ್ಚನ್ನು ಹಬ್ಬಿಸುತ್ತಿದ್ದಾರೆ. ಅದಕ್ಕಾಗಿ ಕ. ಸಾ. ಪರಿಷತ್ತು ಯಾವ ದಾಕ್ಷಿಣ್ಯ-ದಯೆಗಳನ್ನೂ ತೋರಿಸದೆ, ಕನ್ನಡದ ಪ್ರಚಾರವು ಹೆಚ್ಚಾಗುವಂತೆ ಚಳವಳಿ ಮಾಡುವುದು ತುಂಬ ಅವಶ್ಯಕ. ಪರಿಷತ್ತಿನ ಈ ಪರೀಕ್ಷೆಗಳ ಉಪಯೋಗವನ್ನು ಕನ್ನಡಿಗರೆಲ್ಲ ಮಾಡಿಕೊಳ್ಳಬೇಕೆಂದೂ ತಮ್ಮ ಭಾಷೆ-ಸಂಸ್ಕೃತಿಗಳನ್ನವರು ಉಳುಹಿಕೊಳ್ಳಬೇಕೆಂದೂ ನಮ್ಮ ಕಳವಳದ ಬಿನ್ನಹ.

ವಿರಹಿಣಿ.

'ಆನಂದಕಂದ' ರ ಕವನಸಂಗ್ರಹ

ಉತ್ತಮ ಪ್ರತಿಗೆ ೧-೦-೦] [ಸಾದಾ ಪ್ರತಿಗೆ ೦-೧೦-೦

'ಭಾವ-ಭಾಷೆಗಳ ಸುಂದರ ಸಾಮರಸ್ಯವನ್ನು ನೋಡಬೇಕೆನ್ನುವವರು ವಿರಹಿಣಿಯಲ್ಲಿಯ ಕವನಗಳನ್ನು ಓದಬೇಕು!' ಎಂದು ಸುಪ್ರಸಿದ್ಧ ವಿಮರ್ಶಕರೊಬ್ಬರು ಅಭಿಪ್ರಾಯಪಟ್ಟಿದ್ದಾರೆ. ಓದಿದರೆ ಮನಸ್ಸು-ಹೃದಯಗಳನ್ನು ಹಿಗ್ಗಿಸುವ ಕವಿತೆಗಳು! ಹಾಡಿದರೆ ವೀಣೆಯ ನುಡಿಯಂತೆ ಇಂಚರಗೊಡುವ ಗೀತಗಳು!

ಒಮ್ಮೆ ತರಿಸಿ ಓದಿನೋಡಿರಿ!

ಬೇಕಾದವರು 'ಜಯಂತಿ'ಯ ಕಾರ್ಯಾಲಯಕ್ಕೆ ಬರೆಯಿರಿ!

ಡಾ. ತುಮ್ಮಿನಕಟ್ಟಿ ಮತ್ತು ಶ್ರೀ. ಭೂಮರಡ್ಡಿಯವರ

ಪಶ್ಚಿಮದೇಶದ ಯಾತ್ರೆ

★



ಡಾಕ್ಟರ್ ತುಮ್ಮಿನಕಟ್ಟಿಯವರು

ಗದುಗಿನ ಕರ್ಣಾಟಕ ಕೆಮಿಕಲ್ ವರ್ಕ್ಸಿನ (ಕಚರ್ವ್ಯ) ಸಂಚಾಲಕರಾದ ಡಾಕ್ಟರ್ ತುಮ್ಮಿನಕಟ್ಟಿಯವರೂ, ಅವರಿಗೆ ಆರ್ಥಿಕ ಸಹಾಯಕರಾಗಿ ಬೆಂಬಲಕ್ಕೆ ನಿಂತ ಶ್ರೀಮಾನ್ ಭೂಮರಡ್ಡಿಯವರೂ ಜಯಂತಿಯ ವಾಚಕರಿಗೆ ಸುಪರಿಚಿತರಾಗಿರುವರು. ಅವರಿಬ್ಬರೂ ಈಗ ಪಶ್ಚಿಮದೇಶಗಳ ಯಾತ್ರೆಗಾಗಿ ಹೊರಟು, ಇದೇ ಆಗಸ್ಟ ತಿಂಗಳ ಕೊನೆಯ ವಾರದಲ್ಲಿ ಸಮುದ್ರ ಪ್ರಯಾಣವನ್ನು ಪ್ರಾರಂಭಿಸಿದ್ದಾರೆ. ಅವರಿಬ್ಬರೂ ಈಗ ಹೊರಟುದರಲ್ಲಿ ವಿಶಿಷ್ಟವಾದುದೊಂದು ಉದ್ದೇಶವಿರುವುದು. ಪಶ್ಚಿಮದ ಹಲವು ರಾಷ್ಟ್ರಗಳಲ್ಲಿ ವನೌಷಧೀವಿಜ್ಞಾನದ ಸಂಶೋಧನ ಕೇಂದ್ರಗಳಿರುವುವು. ಅವುಗಳನ್ನೆಲ್ಲ ಕಣ್ಣಾರೆ ಕಂಡು ಇದುವರೆಗೆ ಸಂಶೋಧಿತವಾಗಿದ್ದ ಎಲ್ಲ ವಿಷಯಗಳನ್ನು ಪ್ರತ್ಯಕ್ಷ ಪರಿಚಯ ಮಾಡಿಕೊಳ್ಳುವುದಲ್ಲದೆ 'ವನಸ್ಪತಿ ಜನ್ಯ ಘೃತ (ವಿಜಿಟೇಬಲ್ ಘೀ)' ವಿಚಾರದಲ್ಲಿ ಕೂಲಂಕಷವಾದ ಸಂಗತಿಗಳನ್ನು ಸಂಗ್ರಹಿಸುವುದು ಅವರಿಬ್ಬರ ಪರದೇಶ ಪ್ರಯಾಣದ ಮುಖ್ಯೋದ್ದೇಶವಾಗಿರುವುದು.

ಕರ್ಣಾಟಕದಲ್ಲಿ ಸ್ನೇಹಜನ್ಯ ವನಸ್ಪತಿ ಧಾನ್ಯಗಳು ಬೇಕಾದಷ್ಟು ಬೆಳೆಯುವುವು. ಈ 'ಕಚ್ಚಾಮಾಲು' 'ಪಕ್ಕಾಮಾಲು' ಆಗಿ, ಕರ್ಣಾಟಕದ ರೈತರಿಗೂ ವರ್ತಕರಿಗೂ ಹೆಚ್ಚಿನ ಲಾಭ ಹೇಗೆ ದೊರೆಕೀತೆಂಬ ಉದಾರವಿಚಾರ ಮೊದಲಿನಿಂದಲೂ ಡಾ. ತುಮ್ಮಿನಕಟ್ಟಿಯವರಲ್ಲಿದೆ. ಈ ಮೊದಲೆ ಅವರು ತಮ್ಮ ಎಷ್ಟೋ ಲೇಖನಗಳಲ್ಲಿಯೂ ಭಾಷಣಗಳಲ್ಲಿಯೂ ತಮ್ಮ ವಿಚಾರವನ್ನು ಸ್ಪಷ್ಟಗೊಳಿಸಿದ್ದಾರೆ. ಕರ್ಣಾಟಕ ಕೆಮಿಕಲ್ ವರ್ಕ್ಸಿನ ಸ್ಥಾಪನೆಯು ಆ ವಿಚಾರದ ಫಲವೇ ಆಗಿದೆ. ಆದರೆ ನಮ್ಮ ಜನರಲ್ಲಿಯ ಪ್ರಾಂತಾಭಿಮಾನಶೂನ್ಯತೆಯ ಮೂಲಕವಾಗಿಯೂ ಕ್ಷುದ್ರವಾದ ಜಾತ್ಯಭಿಮಾನ ಮೂಲಕವಾಗಿಯೂ ಅವರ ಕಾರ್ಯ ಎಷ್ಟು ವ್ಯಾಪ್ತಿಯನ್ನು ಪಡೆಯಬೇಕೋ ಅಷ್ಟು ಪಡೆಯದಿರುವುದು ಕನ್ನಡಿಗರ ದುರ್ದೈವ. ಆದರೂ ಡಾ. ತುಮ್ಮಿನಕಟ್ಟಿಯವರು ನಿರಾಶರಾಗದೆ ಕನ್ನಡ ಜನತೆಯ ಲಾಭವನ್ನೆ ಗುರಿಯಾಗಿಟ್ಟುಕೊಂಡು, ದಿನದಿನಕ್ಕೆ ಹೆಚ್ಚಿನ ಕಾರ್ಯಕ್ಕೆ ಮನಸ್ಸು ಹಾಕುತ್ತಿರುವುದು ಅವರ ದೇಶಾಭಿಮಾನದ ದ್ಯೋತಕವಾಗಿದೆ.

> ಮೈಸೂರು ಸರಕಾರದ ಡಿ. ಪಿ. ಐ. ಅವರಿಂದ ಎಲ್ಲ ಮಿಡಲ್‌ಸ್ಕೂಲ್, ಹೈಸ್ಕೂಲ್ ನಾರ್ಮಲ್ ಸ್ಕೂಲುಗಳಿಗೂ ಜಯಂತಿಯನ್ನು ತರಿಸಿಕೊಳ್ಳಬೇಕೆಂದು ಅಪ್ಪಣೆ (T. B. G. I. of 38-39) ದೊರೆತಿವೆ. ಎಲ್ಲ ಪಾಠಶಾಲೆಗಳೂ ತರಿಸಿಕೊಳ್ಳಬೇಕಾಗಿ ಬಿನ್ನಹ.



ಶ್ರೀಮಾನ್ ಭೂಮರಡ್ಡಿಯವರು

ವಿದೇಶಯಾತ್ರೆಗೆ ಮೊದಲು ಡಾ. ತುಮ್ಮಿನಕಟ್ಟಿಯವರು ಜಯಂತಿಯ ಕಾರ್ಯಾಲಯಕ್ಕೆ— ಕೇವಲ ಆತ್ಮೀಯ ಭಾವದಿಂದ— ಸಂದರ್ಶನವನ್ನು ಕೊಟ್ಟರು. ಆಗ ಅವರು ನನುಗೊಂದು ಮಾತುಕೊಟ್ಟು ಹೋಗಿದ್ದಾರೆ. ಅದೇನೆಂದರೆ ತಮ್ಮ ವಿದೇಶಯಾತ್ರೆಯ ಅನುಭವವಿಶೇಷಗಳನ್ನೆಲ್ಲ ಲೇಖನಮಾಲೆಯಾಗಿ ಆಗಾಗ ಜಯಂತಿಗೆ ಬರೆದು ಕಳುಹುವೆನು— ಎಂದು. ಇದರಿಂದ ಜಯಂತಿಯ ವಾಚಕರಿಗೆ ಡಾಕ್ಟರರು ಒಳ್ಳೆಯ ಯೋಗವನ್ನೆ ಒದಗಿಸಿ ಕೊಡುತ್ತಿದ್ದಾರೆ ಎಂದು ಹೇಳಬಹುದು. ಅದಕ್ಕಾಗಿ ಅವರನ್ನು ಮನವಾರೆ ಅಭಿನಂದಿಸುತ್ತೇವೆ. ಡಾ. ತುಮ್ಮಿನಕಟ್ಟಿ ಮತ್ತು ಶ್ರೀ. ಭೂಮರಡ್ಡಿಯವರ ಈ ಯಾತ್ರೆಯು ಅವರಿಗೆ ಸುಖದಾಯಕವೂ ಜ್ಞಾನಪ್ರದವೂ ಎನಿಸಲಿ! ಕನ್ನಡ ನಾಡಿಗೆ ಪ್ರಯೋಜನಕಾರಿಯಾಗಿ ಪರಿಣಮಿಸಲಿ!

★ ನಮ್ಮ ಅಲ್ಲಲ್ಲಿಯ ಏಜಂಟರು ★

ಕ್ರಮಾಂಕ	ಊರು	ಹೆಸರ ವಿಳಾಸ
೧.	ಅಥಣಿ	ಶ್ರೀ. ಎಸ್. ಆರ್. ಹೆರಕಲ್
೨.	ಅರಸಿಕೆರೆ	,, ಬಿ. ಎಸ್. ವಿಶ್ವನಾಥ ಶೆಟ್ಟಿ
೩.	ಅಂಕೋಲಾ	,, ಕೇಶವ ವಿಠೋಬಾ ಪ್ರಭು ಸ್ಟೇಶನರಿ ಡಿಪೊ
೪.	ಉಡುಪಿ	,, ಮೊಡರ್ನ್ ಏಜನ್ಸಿ
೫.	ಕಲಘಟಗಿ	,, ಎ. ಕೆ. ಮುತ್ತಗಿ
೬.	ಕಾಸರಗೋಡು	,, ಭಕ್ತ ಬ್ರದರ್ಸ್
೭.	ಕುಂದಾಪುರ	,, ಸಿ. ರಾಘವೇಂದ್ರಭಟ್ಟ ಸಚ್ಚಿದಾನಂದ ಸ್ಟೋರ್ಸ್
೮.	ಕೋಲಾರ	,, ಎಸ್. ರಾಮರಾವ್
೯.	ಕೊಲ್ಹಾಪುರ	,, ಡಿ. ಎನ್. ಮೋಘೇ, ಬುಕ್‌ಸೇಲರ್
೧೦.	ಗದಗು	,, ಆರ್. ಕೆ. ಅಸುಂಡಿ
೧೧.	ಗುಲ್‌ಬುರ್ಗಾ	,, ಎಚ್. ಜಿ. ಗಣದಿನ್ನಿ ವಿಠ್ಠಲ ಮಂದಿರ ಸ್ಟೇಶನ್ ಬಾಜಾರ್
೧೨.	ಗುಳೇದಗುಡ್ಡ	,, ಆರ್. ಎಸ್. ಪರ್ವತೀಕರ್
೧೩.	ಗೋಕರ್ಣ	,, ನಾರಾಯಣಶೆಟ್ಟಿ
೧೪.	ಗೋಕಾಕ	,, ಪಿ. ಎಂ. ಶಿರಗಾಂವಕರ್
೧೫.	ಚಿಂತಾಮಣಿ	,, ಕೆ. ವಿಶ್ವನಾಥ ಗುಪ್ತ
೧೬.	ಚಿಕ್ಕೋಡಿ	,, ತಿಪ್ಪೇಮಠ
೧೭.	ಚಿತ್ರದುರ್ಗ	,, ಸಿ. ರಾಮರಾವ್, ಅಯ್ಯನ ಪೇಟೆ
೧೮.	ಜಮುಖಂಡಿ	,, ಆರ್. ಜಿ. ಕುಲಕರ್ಣಿ
೧೯.	ತೀರ್ಥಹಳ್ಳಿ	,, ಟಿ. ರಾಘವೇಂದ್ರ ಭಟ್ಟ ಮತ್ತು ಸನ್ಸ್
೨೦.	ದಾವಣಗೆರೆ	,, ರಾಮಣ್ಣ ಅರ್ಜಣಗಿ, ಶೇಷಾಚಲ ವಿದ್ಯಾರ್ಥಿನಿಲಯ
೨೧.	ನಿಪ್ಪಾಣಿ	,, ಆರ್. ಬಿ. ಕುಂದಗೋಳ ಮಾಸ್ತರ್
೨೨.	ಪುತ್ತೂರು	,, ವ್ಯವಸ್ಥಾಪಕ, ಹರಿಹರ ಪ್ರೆಸ್
೨೩.	ಪುಣೆ	,, ಎಲ್. ಕೆ. ಜೋಶಿ, ಬುಧವಾರ ಪೇಟೆ
೨೪.	ಬಳ್ಳಾರಿ	,, ಯಜಮಾನ್ ಮತ್ತು ಬ್ರದರ್ಸ್
೨೫.	ಬಾಗಿಲುಕೋಟೆ	ಶ್ರೀ. ಜಿ. ವ್ಹಿ. ಜೋರಾಪುರ
೨೬.	ಬಾಗೇವಾಡಿ	,, ವ್ಹಿ. ಎನ್. ಕುಲಕರ್ಣಿ
೨೭.	ಬೆಳಗಾಂವಿ	,, ಕೆ. ಬಿ. ತೋಂಟದಾರ್ಯ ಮತ್ತು ಬ್ರದರ್ಸ್
೨೮.	ಬೈಲಹೊಂಗಲ	,, ಬಿ. ಆರ್. ಪೇಟಕರ
೨೯.	ಮಂಗಳೂರು	,, ಎಂ. ದಾಸಪ್ಪನಾಯಕ
೩೦.	ಮಂಡ್ಯ	,, ಡಿ. ರಾಮಸ್ವಾಮಿ ಅಯ್ಯಂಗಾರ್ (S L. N. News)
೩೧.	ಮುಂಬೈ	,, ಟಿ. ವಾಯ್. ಜಠಾರ C/o. ಎಸ್. ಬಿ. ಜಠಾರ, ಹಾಯ್‌ಕೋರ್ಟ್ ವಕೀಲ, ಗಾಮದೇವಿ
೩೨.	ಮೂಲ್ಕಿ	,, ಬಿ. ಭೋಜರಾವ್
೩೩.	ಮೈಸೂರು	,, ಬಿ. ನರಸಿಂಗರಾವ್ ಸ್ಟೂಡೆಂಟ್ಸ್ ಹಾಲ್, ಲ್ಯಾಂನ್ಸ್ ಡೌನ್ ಬಿಲ್ಡಿಂಗ್
೩೪.	ಯಲ್ಲಾಪುರ	,, ವಾಮನ ಎಸ್. ರಂಗೈ ಶೇಣ್ವಿ
೩೫.	ರಬಕವಿ	,, ಬಿ. ಪಿ. ಅಲತಗಿ
೩೬.	ರಾಣೇಬಿನ್ನೂರು	,, ಎಂ. ಆರ್. ಕೆರೂರ್
೩೭.	ರಾಮದುರ್ಗ	,, ಆಯ್. ಎ. ಸೂಲಿಸ
೩೮.	ರೋಣ	,, ಸಿ. ರಾಮರಾವ್
೪೦.	ಶಿಗ್ಗಾಂವಿ	,, ಸಿ. ಡಿ. ಹಳಪೇಟೆ
೪೧.	ಶಿವಮೊಗ್ಗಾ	,, ನಾಗಪ್ಪಶೆಟ್ಟಿ
೪೨.	ಸವದತ್ತಿ	,, ಜಿ. ಎಲ್. ದೊಡ್ಡಮನಿ
೪೩.	ಸವಣೂರು	,, ಕೆ. ಬಿ. ಹಿರೇಮಠ
೪೪.	ಸಾಂಗಲಿ	,, ಎನ್. ಬಿ. ಬುರ್ಲಿ, C/o. ಡೆಕ್ಕನ್ ಫಾರ್ಮಸಿ
೪೫.	ಸಿರಸಿ	,, ಎನ್. ಕೆ. ಭಗತ್
೪೬.	ಸೊಲ್ಲಾಪುರ	,, ಲಕ್ಷ್ಮಿ ಬ್ರದರ್ಸ್, ಬಜಾವಾಡಿ ಸ್ಟೇಶನ್ ರೋಡ್
೪೭.	ಸಂಕೇಶ್ವರ	,, ಕೆ. ಎಂ. ಕಾಲೇ ಕಾಜಿ
೪೮.	ಹರಿಹರ	,, ಎನ್. ಅಚ್ಯುತರಾವ್
೪೯.	ಹಾವೇರಿ	,, ಜಿ. ಆರ್. ಮಹಾರಾಜಪೇಟ
೫೦.	ಹಾನಗಲ್ಲು	,, ಆಯ್. ಎಂ. ದಿಕ್ಷಿತ
೫೧.	ಹುಬ್ಬಳ್ಳಿ	ಶ್ರೀ ವ್ಹಿ. ಡಿ. ಗೋಖಲೆ, ಹಾಸ್ಪಿಟಲ್ ರೋಡ್
೫೨.	ಹೊನ್ನಾವರ	ಶ್ರೀ. ಪಿ. ಕೆ. ಭಟ್ಟ
೫೩.	ಹೊಸಪೇಟೆ	,, ಪಿ. ನಾಗಪ್ಪಶೆಟ್ಟಿ ಮತ್ತು ಬ್ರದರ್ಸ್

ಪಂಚಗಣಿ ಹಿಂದೂ ಹೈಸ್ಕೂಲ್

ಪಂಚಗಣಿ, ಸಾತಾರಾ ಜಿಲ್ಲೆ

ಹಿಂದೂ ಬಾಲಕರಿಗಾಗಿ ವಸತಿಗೃಹವುಳ್ಳ, ಮಾದರಿಯ ಮಾಧ್ಯಮಿಕ ಶಾಲೆಯಿದು. ಮಹಾಬಳೇಶ್ವರದ ಬಳಿಯಲ್ಲಿ ಸಮುದ್ರಪಾತಳಿಯಿಂದ ೪೩೦೦ ಅಡಿ ಎತ್ತರದ ಮೇಲೆ- ಆಹ್ಲಾದಕರವಾದ ಹವೆಯಲ್ಲಿಯೂ ಚಿತ್ತಾಕರ್ಷಕವಾದ ಪ್ರದೇಶದಲ್ಲಿಯೂ ಈ ಶಾಲೆಯು ಸ್ವತಂತ್ರ ಕಟ್ಟಡವಿದೆ. ಪ್ರಾಥಮಿಕ ಶಿಕ್ಷಣದಿಂದ ಮ್ಯಾಟ್ರಿಕ್ಯ ವರೆಗೆ ಇಲ್ಲಿ ಶಿಕ್ಷಣವು ದೊರೆಯುವುದು. ಹೊಸ ಟರ್ಮು ಮೇ ತಿಂಗಳ ೧೫ನೆಯ ತಾರೀಖಿನಿಂದ ಪ್ರಾರಂಭವಾಗುವುದು. ಕನ್ನಡ ಕಲಿಸುವ ಏರ್ಪಾಡೂ ಇದೆ. ಮಕ್ಕಳನ್ನು ಬೇಕಾದಾಗ ಕಳುಹಿದರೂ ಪ್ರವೇಶ ದೊರೆಯುವುದು. ವಿವರಗಳಿಗಾಗಿಯೂ ಪ್ರಾಸ್ಪೆಕ್ಟಸ್ಸಿಗಾಗಿಯೂ ಸಂಸ್ಥೆಯ ಸುಪರಿಂಟೆಂಡೆಂಟರಿಗೆ ಬರೆದುಕೊಳ್ಳಿರಿ.

ಹೆಣಿಗೆ-ಕಸೀದೆ ಕಲಿಯಿರಿ !

ಹೆಣ್ಣುಮಕ್ಕಳಲ್ಲಿ ಹೆಣಿಗೆ-ಕಸೀದೆಗಳ ಅಭಿರುಚಿ ಹೆಚ್ಚುವುದರಿಂದ, ಅವರಲ್ಲಿ ಅಚ್ಚುಕಟ್ಟುತನವು ಬೆಳೆಯುವುದು !
ಅಚ್ಚುಕಟ್ಟುತನದಿಂದ ಅವರ ಚೆಲುವು-ಚೆದುರು ಇಮ್ಮಡಿಗೊಳ್ಳುವುವು !!

ಹೆಣಿಗೆ-ಕಸೀದೆ-ಎಂಬ್ರಾಯಿಡರಿ ಕೆಲಸಗಳ ಎಲ್ಲ ಸಲಕರಣೆಗಳೂ, ಬೇರೆ ಸ್ಟೇಶನರಿ ಮತ್ತು ಪರಫ್ಯೂಮರಿ ವಸ್ತುಗಳೂ ಬೇಕಾದರೆ ಇಲ್ಲಿಗೇ ಬನ್ನಿರಿ !

ಸಿಟಿ ಸ್ಟೋರ್ಸ್, ಮಾರ್ಕೆಟ್ ರೋಡ್-ಧಾರವಾಡ.

ಎರಡು ಅಪೂರ್ವ ಯೋಜನೆಗಳು

ಡಾಯಮಂಡ್ ಪಾಲಿಸಿ

ವಿಮೆಯಿಳಿಸುವುದಾದರೆ ಇದರಂತಹ ಸುಂದರ ಯೋಜನೆಯಿಲ್ಲ. ಸ್ವಸಂರಕ್ಷಣೆ, ಪೆನ್ಶನ್ ಮತ್ತು ಸುರಕ್ಷಿತಠೇವುಗಳ ಲಾಭತ್ರಯವನ್ನು ಕೊಡುವುದು

★

ತರುಣ ಬಾಂಡ್

ಇದೊಂದು ಅದ್ಭುತ ಕಾಣಿಕೆ. ರೂ. ೧೩-೮-೦ ಗಳಲ್ಲಿ ನಿಮ್ಮ ಮತ್ತು ನಿಮ್ಮ ಕುಟುಂಬದ ರಕ್ಷಣೆಯಾಗುವುದಲ್ಲದೆ, ದೈವವಿದ್ದರೆ ೨೫೦೦ ರೂ. ಪಡೆಯುವಿರಿ.

ಈ ನಮ್ಮ ಬಾಂಡ್ ಯೋಜನೆಗೆ ಸರಕಾರಿ ಕಾಯದೆಪಂಡಿತರ ಮತ್ತು ವಿಮಾತಜ್ಞರ ಮಾನ್ಯತೆ ದೊರೆತಿದೆ. ಮುಂಬಯಿ ಪ್ರಾಂತದಲ್ಲಿ ಇಂತಹ ಯೋಜನೆ ಹೊರಡಿಸಿ, ವರ್ಷದಲ್ಲಿ ೨ ಸಲ ನಿಯಮಿತ **ಬೋನಸ್** ಹಂಚುವ ಕಂಪನಿಯು ನಮ್ಮದೇ ಒಂದು, ಮತ್ತು ಮೊಟ್ಟಮೊದಲನೆಯದು.

ಏಜನ್ಸಿಗಳಿಗಾಗಿ ಕೆಳಗಿನ ವಿಳಾಸಗಳಿಗೆ ಬರೆಯಿರಿ:

ದಿ ತರುಣ ಅಶ್ಯುರನ್ಸ್ ಕಂಪನಿ. ಲಿಮಿಟೆಡ್

ಹೆಡ್ ಆಫೀಸ್ : ಫೋರ್ಟ್ ಮುಂಬಯಿ

R. S. BAITMANGALKAR & Co.,
CHIEF ORGANISERS FOR KARNATAK
Gibb Town, Dharwar.

ನಮ್ಮ ಪ್ರೇಮಾ ಭಾಳ ಗುಲಾಮ ಹುಡುಗಿ !

★ ಪೇಟೆಯೊಳಗಿನ ಅಂಗಡಿಗಳನ್ನೆಲ್ಲ ಸುತ್ತಿದೆವು; ಎಲ್ಲೆಲ್ಲೂ ಆಕೆಯ ಮನಸ್ಸಿಗೆ ಬರುವಂಥ ಫ್ರಾಕಿನ ಅರಿವೆ ಸಿಗಲಿಲ್ಲ; ಕೊನೆಗೆ

ಶ್ರೀಲಕ್ಷ್ಮೀ ವಸ್ತ್ರಭಾಂಡಾರಕ್ಕೆ ಹೋದೆವು !

- ಅಲ್ಲಿಯ ಬಗೆಬಗೆಯ ಚಿತ್ರವಿಚಿತ್ರದ ಬಟ್ಟೆಗಳನ್ನು ನೋಡಿಯೆ ಪ್ರೇಮಾ, ಹಾಗೆ ಕುಣಿದಾಡ ತೊಡಗಿದಳು. ಎಷ್ಟು ಅವಳಿಗೆ ಆನಂದ !
- ಯಾವ ಬಟ್ಟೆ ತೋರಿಸಿದರೂ ‘ ಇದು ನನಗೆ ಬೇಕು ’ ಎನ್ನತೊಡಗಿದಳು.
- ತುಂಬ ಬೆಡಗಿನ ಬಟ್ಟೆ ! ಬಣ್ಣಬಣ್ಣದ ಮೆರುಗಿನ ಬಟ್ಟೆ ! ಯಾರಿಗೆ ಎಂತಹದು ಬೇಕೋ ಅಂತಹ ಬಟ್ಟೆ ಅಲ್ಲಿ ಸಿಕ್ಕುವುದು.
- ಅಂದು ಅಂಗಡಿಯಿಂದ ಪ್ರೇಮೆಯನ್ನು ಹೊರಕ್ಕೆ ಕರೆತರಬೇಕಾದರೆ ಸಾಕಾಗಿಹೋಯಿತು !

ಶ್ರೀಲಕ್ಷ್ಮೀ ವಸ್ತ್ರಭಾಂಡಾರ (ಮೋಟಾರ್ ಸ್ಟ್ಯಾಂಡಿನ ಹತ್ತಿರ) ಧಾರವಾಡ.

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾ ರ ವಾ ಡ.

- **ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು ಈ ಭರದಿಂದ ಬೆಳೆಯುತ್ತಿರುವ ಕನ್ನಡಕಂಪನಿಯ ಪಾಲಿಸಿಯನ್ನೇ ಪಡೆಯಬೇಕು !**
- ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವಷ್ಟಲ್ಲದೆ, ಹೊಸ ವಿಮಾಕಾಯದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.
- ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸುವುದರಿಂದ ಎಲ್ಲರ ನಂಬಿಗೆಗೂ ತಕ್ಕುದಾಗಿದೆ.
- ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡ ನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲಿ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷ ವಿವರಕ್ಕೆ ಬರೆಯಬೇಕು :—

ಎಸ್. ಗೋವರ್ಧನರಾವ್ ಮ್ಯಾನೇಜರ್

The United Karnatak Insurance Co. Ltd., DHARWAR.

Printer K. R. Bhise Karnatak Printing Works, Dharwar. Edited and published by M. G. Patil at the Jayanti Office, Dharwar.

ಜಯಂತಿ

೪ ಆಣೆ

ಅಕ್ಟೋಬರ ೧೯೪೯

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚಸೇರಿ ೩—೦—೦ …… ವ್ಹಿ. ಪಿ. ಯಿಂದ ೩-೫-೦ …… ಬಿಡಿಸಂಚಿಕೆಗೆ ೪ ಆಣೆ.

ಸಂಪಾದಕರು :

ಪಾಟೀಲ ಮಾಧವರಾಯರು ಬೆಟಗೇರಿ ಕೃಷ್ಣಶರ್ಮರು

೨ನೆಯ ವರ್ಷ	ಅಕ್ಟೋಬರ್ ೧೯೩೯	೬ನೆಯ ಸಂಚಿಕೆ

ಮುಖ್ಯ ವಿಷಯಗಳ ಪರಿವಿಡಿ

ಮುಪ್ಪು-ಮಗು (ವಿಚಾರ ತರಂಗ)	ಶ್ರೀ. ' ಸಾಮಾಜಿಕ '	[illegible]
ಮುಪ್ಪಿನ ಮಮತೆ (ಚಿತ್ರ)	ಶ್ರೀ. ಬಾಬಲಿಯುವರು	[illegible]
ಸಂಪಾದಕೀಯ	ಸಂಪಾದಕರು	[illegible]
ಮಂಗನ ಮಲ್ಲಿನಾಥತನ	' ಮಲ್ಲಿನಾಥ '	[illegible]
ಮಾನವನು ದಾನವನಾದನೆ ? (ಪರರಾಷ್ಟ್ರ ರಾಜಕಾರ್ಯವಿಮರ್ಶೆ)	' ಚಾಡಿಯ ಚಾಣಿಕ್ಯ '	[illegible]
ಯುದ್ಧಲೋಕದ ಸುದ್ದಿಗಳು	ಸಂಗ್ರಾಹಕರಿಂದ	[illegible]
ಕಿವಿಮಾತು	ಸಂಪಾದಕ ಮಂಡಲಿ	[illegible]
ನಿರಾಹಾರ (ನಾಗಪ್ಪನ ಕತೆ)	ಪ್ರೊ. ಎಸ್. ಎಂ. ಕುಲಕರ್ಣಿ, ಎಂ. ಎ.	[illegible]
ಸಮೀಕ್ಷಣ (ಖಂಡನಾತ್ಮಕ ವಿಮರ್ಶೆ)	ಶ್ರೀ. ಜೋಶಿ ರಾಮಾಚಾರ್ಯರು	[illegible]
ಸ್ನೇಹದ ಸಮಾಧಿ (ಸಣ್ಣ ಕತೆ)	ಶ್ರೀ. ಬಸವರಾಜ ಕಟ್ಟೀಮನಿ	[illegible]
ನನ್ನ ದಕ್ಷಿಣಹಿಂದುಸ್ಥಾನದ ಯಾತ್ರೆ (ಪ್ರವಾಸವೃತ್ತ) ..	ಶ್ರೀ. ಬೆಂಗೇರಿ ಪ್ರಲ್ಹಾದರಾಯರು	[illegible]
ಸ್ವಲ್ಪದರಲ್ಲಿ ಸ್ವಾರಸ್ಯ (ನಗೆಬರೆಹ)	ಶ್ರೀ. ' ಶ್ರೀರಂಗ '	[illegible]
ಸೋಲರಿಯದ ಜಪಾನಿಯರ ವ್ಯಾಪಾರ ಪಣ	ಡಾ. ಎನ್. ಎಸ್. ಗೋಡಬೋಲೆ ಎಂ. ಎ. ಬಿ. ಎಸ್‌ಸಿ. ಇತ್ಯಾದಿ	[illegible]
ವಿಜಯಸಿರಿ (ಕವನ)	ಶ್ರೀ. ' ವಿಜಯ '	[illegible]
ಪ್ರಣಯದ ಪರಿಸಮಾಪ್ತಿ (ವಿನೋದ ಚಿತ್ರ)	ಶ್ರೀ. ಕೃಷ್ಣಮೂರ್ತಿ ಪುರಾಣಿಕ ಬಿ. ಎ.	[illegible]
ಕನ್ನಡ ಮರಾಠೀ ವಾದ ಎಲ್ಲಿ, ಹೇಗೆ ಹುಟ್ಟಿತು ? (ಇತಿಹಾಸ) ..	ಶ್ರೀ. ಮುದುವೀಡು ಕೃಷ್ಣರಾಯರು	[illegible]
ಆಕಾಶದಾಳಿಗಾಗಿ ಎಚ್ಚರಿಕೆ (ಎ. ಆರ್. ಪಿ.)	ಪ್ರೊ. ಎಲ್. ಕೆ. ಗುಂಜೀಕರ್ ಎಂ. ಎಸ್‌ಸಿ.	[illegible]
ಇಂದಿನ ಸಂಗ್ರಾಮದ ರಂಗಭೂಮಿ (ರಣರಂಗ ಪರಿಚಯ) ..	ಪ್ರೊ. ಸಿ. ಡಿ. ದೇಶಪಾಂಡೆ ಎಂ. ಎ.	[illegible]
ಉಡಿಗೆ-ತೊಡಿಗೆಯ ಬೆಡಗು (ಅಖಂಡ ಕುಪ್ಪುಸ)	ಶ್ರೀ. ಹಳಪೇಟೆ ಚಿಂತಾಮಣಿರಾಯರು	[illegible]
ನಗೀಗೆ ನೇವಿದ್ಯ	ಶ್ರೀ. ' ಸಕಲೀ ನಾರಾಯಣಾಚಾರ್ಯ '	[illegible]
ನಾಲಕ್ಕು ನಿಟ್ಟಿನ ನೋಟ	ಶ್ರೀ. ' ನಿರೀಕ್ಷಕರು '	[illegible]

ಸಂಚಿಕೆ ೬

ಅಕ್ಟೋಬರ್



ವರ್ಷ ೨

೧೯೩೯

ಮುಪ್ಪು-ಮಗು

ಮುಪ್ಪಿಗೆ ಗೊತ್ತಿದೆ ತನ್ನ ಕಾಲ ಮುಗಿಯಿತೆಂದು. ಎಂತಲೆ ಹೊಸಕಾಲದಲ್ಲಿ ಬದುಕಿಬಾಳಬೇಕಾಗಿರುವ ಎಳೆಯಜೀವವನ್ನು 'ನೀನೆ ಈ ಕಾಲದ ದೊರೆ' ಎಂದು ಹೆಗಲಿಗೇರಿಸಿ ಮೆರೆಯಿಸುತ್ತಿದೆ.

ಮುಪ್ಪು ಮಗುವನ್ನು ಹೆಗಲ ಮೇಲೆ ಏರಿಸಿ ಕುಳ್ಳಿರಿಸಿಕೊಳ್ಳಲು ಸಿದ್ಧವಿದೆ. ಆದರೆ ತನ್ನಷ್ಟಕ್ಕೆ ತಾನೆ ಓಡಾಡುವುದಕ್ಕೆ ಬಿಡಲು ಸಿದ್ಧವಿಲ್ಲ. ತನ್ನಲ್ಲಿ ಇದ್ದಷ್ಟು ಶಕ್ತಿಯ ನೆರವಿನಿಂದಲೆ ಮಗುವನ್ನು ಮುಂದುವರಿಯಲು ಹಚ್ಚಬೇಕೆಂಬುದು ಮುಪ್ಪಿನ ಹುಚ್ಚು-ಮಮತೆಯ ಹೆಬ್ಬಯಕೆ.

ಮುಪ್ಪಿನದೊಂದು ಆಧಾರ ತನಗೆ ಸಿಕ್ಕುವಾಗ ತಾನೇಕೆ ಕೈಕಾಲುಗಳನ್ನಲ್ಲಾಡಿಸಬೇಕೆಂದೇನೋ, ಮಗು ಗಟ್ಟಿಯಾಗಿ ಮುಪ್ಪನ್ನು ಅಪ್ಪಿಕೊಂಡು ಕುಳಿತಿದೆ. ತನ್ನ ಕಣ್ಣು-ಕಿವಿ-ಕೈಕಾಲು-ಬಾಯಿ-ಬಗೆಗಳನ್ನೆಲ್ಲ ಮುಪ್ಪಿಗೆ ಒಪ್ಪಿಸಿಬಿಟ್ಟಿದೆ.

ಮಗು, ಏನಿದೇನಿದು ಹುಚ್ಚು! ಬರಲಿರುವ ಲೋಕ-ಕಾಲಗಳು ನಿನಗಾಗಿ ಇವೆ. ಅವು ನಿನ್ನ ಬುದ್ಧಿವೈಭವದಿಂದ ಬೆಳಗಬೇಕಾಗಿವೆ. ನಿನ್ನ ಕಾರ್ಯಕೌಶಲದಿಂದ ತೊಳಗಬೇಕಾಗಿವೆ. ನಿನ್ನ ನಡೆದಾಟದಿಂದ ಚೈತನ್ಯಗೊಳ್ಳಬೇಕಾಗಿವೆ.

ಇಳಿ! ಮುಪ್ಪಿನ ಹೆಗಲನ್ನು ಬಿಟ್ಟು ಇಳಿ; ಮುಪ್ಪು ಗಟ್ಟಿ-ಯಾಗಿ ಹಿಡಿದಿರುವ ಕೈ-ಕಾಲುಗಳನ್ನು ಧಡಪಡಿಸಿ ಬಿಡಿಸಿಕೊಳ್ಳು! ನಿನ್ನ ಕಾಲಿನಿಂದ ನೀನು ನಡೆ! ಬರಲಿರುವ ಕಾಲಕ್ಕೆ ದೊರೆಯಾಗುವ ಅರುಹು-ಬಲುಹುಗಳನ್ನು ನಿನ್ನ ಹವಣಿಕೆಯಿಂದಲೆ ಪಡೆ.

—ಸಾಮಾಜಿಕ

ಮುಪ್ಪಿನ-ಮಮತೆ

ಬಾ ಮರಿ, ಕಾಲು ನೊಂದೀತು; ಹೆಗಲಮೇಲೆ ಬಾ! ನಾನು ನಿನ್ನನ್ನು ಕರನೊಯ್ಯುತ್ತೇನೆ!

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚಸೇರಿ ೩—೦—೦ ...... ವ್ಹಿ. ಪಿ. ಯಿಂದ ೩—೫—೦ ...... ಬಿಡಿಸಂಚಿಕೆಗೆ ೪ ಆಣೆ

ಸಂಪಾದಕರು :

ಪಾಟೀಲ ಮಾಧವರಾಯರು ಚಿಟಗೇರಿ ಕೃಷ್ಣಶರ್ಮರು

೨ನೆಯ ವರ್ಷ	ಅಕ್ಟೋಬರ್ ೧೯೩೯	೬ನೆಯ ಸಂಚಿಕೆ

ಮುಖ್ಯ ವಿಷಯಗಳ ಪರಿವಿಡಿ

ಮುಪ್ಪು-ಮಗು (ವಿಚಾರ ತರಂಗ)	ಶ್ರೀ. 'ಸಾಮಾಜಿಕ'	[illegible]
ಮುಪ್ಪಿನ ಮಮತೆ (ಚಿತ್ರ)	ಶ್ರೀ. ಬಾಬಲಿಯವರು	[illegible]
ಸಂಪಾದಕೀಯ	ಸಂಪಾದಕರು	[illegible]
ಮಂಗನ ಮಲ್ಲಿನಾಥತನ	'ಮಲ್ಲಿನಾಥ'	[illegible]
ಮಾನವನು ದಾನವನಾದನೆ ? (ಪರರಾಷ್ಟ್ರ ರಾಜಕಾರ್ಯವಿಮರ್ಶೆ)	'ಚಾಡಿಯ ಚಾಣಕ್ಯ'	[illegible]
ಯುದ್ಧಲೋಕದ ಸುದ್ದಿಗಳು	ಸಂಗ್ರಾಹಕರಿಂದ	[illegible]
ಕಿವಿಮಾತು	ಸಂಪಾದಕ ಮಂಡಲಿ	[illegible]
ನಿರಾಹಾರ (ನಾಗಪ್ಪನ ಕತೆ)	ಪ್ರೊ. ಎಸ್. ಎಂ. ಕುಲಕರ್ಣಿ, ಎಂ. ಎ.	[illegible]
ಸಹಶಿಕ್ಷಣ (ಖಂಡನಾತ್ಮಕ ವಿಮರ್ಶೆ)	ಶ್ರೀ. ಜೋಶಿ ಶಾಮಾಚಾರ್ಯರು	[illegible]
ಸ್ನೇಹದ ಸಮಾಧಿ (ಸಣ್ಣ ಕತೆ)	ಶ್ರೀ. ಬಸವರಾಜ ಕಟ್ಟೀಮನಿ	[illegible]
ನನ್ನ ದಕ್ಷಿಣಹಿಂದುಸ್ಥಾನದ ಯಾತ್ರೆ (ಪ್ರವಾಸವೃತ್ತ) ..	ಶ್ರೀ. ಬೆಂಗೇರಿ ಪ್ರಲ್ಹಾದರಾಯರು	[illegible]
ಸ್ವಲ್ಪದರಲ್ಲಿ ಸ್ವಾರಸ್ಯ (ನಗೆಬರೆಹ)	ಶ್ರೀ. 'ಶ್ರೀರಂಗ'	[illegible]
ಸೋಲರಿಯದ ಜಪಾನಿಯರ ವ್ಯಾಪಾರ ಪಣ	ಡಾ. ಎನ್. ಎನ್. ಗೋಡಬೋಲೆ ಎಂ. ಎ. ಬಿ. ಎಸ್‌ಸಿ. ಇತ್ಯಾದಿ	[illegible]
ವಿಜಯಿಸಿರಿ (ಕವನ)	ಶ್ರೀ. 'ವಿಜಯ'	[illegible]
ಪ್ರಣಯದ ಪರಿಸಮಾಪ್ತಿ (ವಿನೋದ ಚಿತ್ರ)	ಶ್ರೀ. ಕೃಷ್ಣಮೂರ್ತಿ ಪುರಾಣಿಕ ಬಿ. ಎ.	[illegible]
ಕನ್ನಡ ಮರಾಠೀ ವಾದ ಎಲ್ಲಿ, ಹೇಗೆ ಹುಟ್ಟಿತು ? (ಇತಿಹಾಸ) ..	ಶ್ರೀ. ಮುದವೀಡು ಕೃಷ್ಣರಾಯರು	[illegible]
ಆಕಾಶದಾಳಿಗಾಗಿ ಎಚ್ಚರಿಕೆ (ಎ. ಆರ್. ಪಿ.)	ಪ್ರೊ. ಎಲ್. ಕೆ. ಗುಂಜೀಕರ್ ಎಂ. ಎಸ್‌ಸಿ.	[illegible]
ಇಂದಿನ ಸಂಗ್ರಾಮದ ರಂಗಭೂಮಿ (ರಣರಂಗ ಪರಿಚಯ) ..	ಪ್ರೊ. ಸಿ. ಡಿ. ದೇಶಪಾಂಡೆ ಎಂ. ಎ.	[illegible]
ಉಡಿಗೆ-ತೊಡಿಗೆಯ ಬೆಡಗು (ಅಖಂಡ ಕುಪ್ಪುಸ)	ಶ್ರೀ. ಹಳಪೇಟಿ ಚಿಂತಾಮಣಿರಾಯರು	೪೦
ನಗೀಗೆ ನೇವಿದ್ಯ	ಶ್ರೀ. 'ಸಕಲೀ ನಾರಾಯಣಾಚಾರ್ಯ'	೪೦
ನಾಲ್ಕು ನಿಟ್ಟಿನ ನೋಟ	ಶ್ರೀ. 'ನಿರೀಕ್ಷಕರು'	೪೦

ಸಂಚಿಕೆ ೬
ಅಕ್ಟೋಬರ್



ವರ್ಷ ೨
೧೯೩೯

ಮುಪ್ಪು-ಮಗು

ಮುಪ್ಪಿಗೆ ಗೊತ್ತಿದೆ ತನ್ನ ಕಾಲ ಮುಗಿಯಿತೆಂದು. ಎಂತಲೆ ಹೊಸಕಾಲದಲ್ಲಿ ಬದುಕಿಬಾಳಬೇಕಾಗಿರುವ ಎಳೆಯಜೀವವನ್ನು 'ನೀನೆ ಈ ಕಾಲದ ದೊರೆ' ಎಂದು ಹೆಗಲಿಗೇರಿಸಿ ನೆರೆಯಿಸುತ್ತಿದೆ.

ಮುಪ್ಪು ಮಗುವನ್ನು ಹೆಗಲ ಮೇಲೆ ಏರಿಸಿ ಕುಳ್ಳಿರಿಸಿ ಕೊಳ್ಳಲು ಸಿದ್ಧವಿದೆ. ಆದರೆ ತನ್ನಷ್ಟಕ್ಕೆ ತಾನೆ ಓಡಾಡುವುದಕ್ಕೆ ಬಿಡಲು ಸಿದ್ಧವಿಲ್ಲ. ತನ್ನಲ್ಲಿ ಇದ್ದಷ್ಟು ಶಕ್ತಿಯ ನೆರವಿನಿಂದಲೆ ಮಗುವನ್ನು ಮುಂದುವರಿಯಲು ಹಚ್ಚಬೇಕೆಂಬುದು ಮುಪ್ಪಿನ ಹುಚ್ಚುಮಮತೆಯ ಹೆಬ್ಬಯಕೆ.

ಮುಪ್ಪಿನದೊಂದು ಆಧಾರ ತನಗೆ ಸಿಕ್ಕುವಾಗ ತಾನೇಕೆ ಕೈಕಾಲುಗಳನ್ನಲ್ಲಾಡಿಸಬೇಕೆಂದೇನೋ, ಮಗು ಗಟ್ಟಿಯಾಗಿ ಮುಪ್ಪನ್ನು ಅಪ್ಪಿಕೊಂಡು ಕುಳಿತಿದೆ. ತನ್ನ ಕಣ್ಣು-ಕಿವಿ-ಕೈಕಾಲು-ಬಾಯಿ-ಬಗೆಗಳನ್ನೆಲ್ಲ ಮುಪ್ಪಿಗೆ ಒಪ್ಪಿಸಿಬಿಟ್ಟಿದೆ.

ಮಗು, ಏನಿದೇನಿದು ಹುಚ್ಚು! ಬರಲಿರುವ ಲೋಕ-ಕಾಲಗಳು ನಿನಗಾಗಿ ಇವೆ. ಅವು ನಿನ್ನ ಬುದ್ಧಿವೈಭವದಿಂದ ಬೆಳಗಬೇಕಾಗಿವೆ. ನಿನ್ನ ಕಾರ್ಯಕೌಶಲದಿಂದ ತೊಳಗಬೇಕಾಗಿವೆ. ನಿನ್ನ ನಡೆವಾಟದಿಂದ ಚೈತನ್ಯಗೊಳ್ಳಬೇಕಾಗಿವೆ.

ಇಳಿ, ಮುಪ್ಪಿನ ಹೆಗಲನ್ನು ಬಿಟ್ಟು ಇಳಿ; ಮುಪ್ಪು ಗಟ್ಟಿ-ಯಾಗಿ ಹಿಡಿದಿರುವ ಕೈ-ಕಾಲುಗಳನ್ನು ಧಡಪಡಿಸಿ ಬಿಡಿಸಿಕೊಳ್ಳು! ನಿನ್ನ ಕಾಲಿನಿಂದ ನೀನು ನಡೆ! ಬರಲಿರುವ ಕಾಲಕ್ಕೆ ದೊರೆಯಾಗುವ ಅರುಹು-ಬಲುಹುಗಳನ್ನು ನಿನ್ನ ಹವಣಿಕೆಯಿಂದಲೆ ಪಡೆ.

—ಸಾಮಾಜಿಕ

ಮುಪ್ಪಿನ-ಮಮತೆ

ಬಾ ಮರಿ, ಕಾಲು ನೊಂದೀತು; ಹೆಗಲಮೇಲೆ ಬಾ!
ನಾನು ನಿನ್ನನ್ನು ಕರದೊಯ್ಯುತ್ತೇನೆ!

ಕನ್ನಡ ಪತ್ರಿಕೆಗಳಿಗೆ ಕಳವಳದ ಕಾಲ

ಇಂದಿನ ವೈಜ್ಞಾನಿಕಯುಗವು ಅಂತರರಾಷ್ಟ್ರೀಯ ಸಂಬಂಧವನ್ನು ದಿನದಿನಕ್ಕೆ ಬಿಗಿಯಾಗಿ ಜೋಡಿಸುತ್ತಲಿದೆ. ಯುದ್ಧ ಯುರೋಪಖಂಡದ ಒಂದು ಪ್ರದೇಶದಲ್ಲಿ ನಡೆದಿದ್ದರೂ, ಅದರ ಸುಪರಿಣಾಮ-ದುಷ್ಪರಿಣಾಮಗಳನ್ನು ಹಿಂದುಸ್ತಾನದಂತಹ ಪೂರ್ವಖಂಡದಲ್ಲಿಯದೊಂದು ದೂರದ ರಾಷ್ಟ್ರವೂ ಅನುಭವಿಸಬೇಕಾಗಿದೆ. ಹಿಂದಿನಕಾಲದ ಮಹಾಯುದ್ಧಗಳು ಕೇವಲ ಪ್ರಾದೇಶಿಕಗಳಾಗಿ ಇರುತ್ತಿದ್ದುದರಿಂದ, ಯುದ್ಧ ನಡೆಯದಿದ್ದ ರಾಷ್ಟ್ರಗಳು ಯುದ್ಧದ ಯಾವ ಪರಿಣಾಮಕ್ಕೂ ಪಾತ್ರವಾಗಬೇಕಾದ ಕಾರಣವಿರಲಿಲ್ಲ. ಇಂದೋ ನಮ್ಮ ಜೀವನದ ಅವಶ್ಯಕತೆಗಳೆ ಬೇರೆ ಬಗೆಯವಾಗಿವೆ. ಆ ಆವಶ್ಯಕತೆಗಳ ಬಹುಭಾಗವು ಯುರೋಪಿನ ಬೇರೆ ಬೇರೆ ರಾಷ್ಟ್ರಗಳ ಮೂಲಕವೆ ಪೂರಯಿಕೆ ಪಡೆಯುತ್ತಲಿದೆ. ಪತ್ರಿಕೆಗಳಿಗೆ ಬೇಕಾಗುವ ಯಾವ ಪದಾರ್ಥಕ್ಕಾಗಿಯೂ ನಾವು ಪರದೇಶೀಯರ ಕೈಯನ್ನು ನೋಡಬೇಕಾಗುವುದು. ಕಾಗದ, ಮಸಿ, ಬಣ್ಣ, ಪಡಿಯಚ್ಚಿನ ಸಾಮಾನು ಇವೆಲ್ಲವೂ ನಮಗೆ ಪರದೇಶಗಳಿಂದಲೆ ಬರಬೇಕು. ನಮಗೆ ಈ ಸಾಮಾನುಗಳನ್ನು ಪೂರಯಿಸುವ ರಾಷ್ಟ್ರಗಳೆಲ್ಲ ಇಂದು ಯುದ್ಧದಲ್ಲಿ ತೊಡಗಿವೆ. ಇನ್ನು ಮೇಲೆ ಆ ಸಾಮಾನುಗಳ ಪೂರಯಿಕೆ ಹೆಚ್ಚಾಗಿ ಆಗಲಾರದೆಂಬ ಭರವಸೆಯಿಂದ ಅವುಗಳನ್ನು ತರಿಸಿ ಸಂಗ್ರಹದಲ್ಲಿಟ್ಟುಕೊಂಡ ವ್ಯಾಪಾರಸ್ಥರು—ಸಂದರ್ಭದ ಲಾಭ ತೆಗೆದುಕೊಳ್ಳಬೇಕೆಂಬ ವರ್ತಕನೀತಿಯಂತೆ— ಒಂದಕ್ಕೆ ಮೂರರಷ್ಟೋ ನಾಲ್ಕರಷ್ಟೋ ಬೆಲೆಯನ್ನು ಹೆಚ್ಚಿಸಿಬಿಟ್ಟಿದ್ದಾರೆ. ಈಗಿದ್ದ ಬೆಲೆಯಲ್ಲಿಯೆ ಮೊದಲಿದ್ದಂತೆ ಸಂಚಿಕೆಗಳನ್ನು ಕೊಡಲಾರದೆ ಅನೇಕ ಪರಪ್ರಾಂತೀಯ—ಪರದೇಶೀಯ—ಪತ್ರಿಕೆಗಳು ಬೆಲೆಯನ್ನು ಹೆಚ್ಚಿಸಿಕೊಂಡೊ, ಪುಟಗಳನ್ನು ಕಡಿಮೆ ಮಾಡಿಕೊಂಡೊ ಪ್ರಕಟವಾಗುತ್ತಿರುವುದನ್ನು ಅನೇಕರು ನೋಡಿರಬಹುದು. ಕೊಂಡು ಓದಲು ಮನಸ್ಸಿಲ್ಲದೆಯೊ ನಿಜವಾಗಿಯೊ— ಅನೇಕ ವಾಚಕರು, ಜಯಂತಿಗೆ ಈಗಿದ್ದ ಬೆಲೆಯೆ ತುಂಬ ಹೆಚ್ಚೆಂದು ಆಗಾಗ ಹೇಳುತ್ತಿರುವುದನ್ನು ನಾವು ಕೇಳಿದ್ದೇವೆ. (ಇದಕ್ಕಿಂತ ಕಡಿಮೆ ಬೆಲೆಯಿಟ್ಟರೂ ಅವರು ಕೊಂಡು ಓದಲಾರರೆಂಬುದನ್ನು ನಾವು ಬಲ್ಲೆವು.) ಆದುದರಿಂದ ಬೆಲೆಯನ್ನು ಹೆಚ್ಚು ಮಾಡುವ ಯೋಜನೆಗೆ ನಾವು ಹೋಗಲೆ ಇಲ್ಲ. ಕಾಗದ-ಮಸಿ-ಪಡಿಯಚ್ಚುಗಳ ಬೆಲೆಯ ಮಾನದಿಂದ ಈಗಿದ್ದ ಬೆಲೆಯಲ್ಲಿ ಈಗಿರುವಷ್ಟು ಪುಟಗಳ ಸಂಚಿಕೆ ಕೊಡುವುದೆಂದರೆ ಕೈಯಿಂದ ಕಳೆದುಕೊಂಡೇ ಕೊಡಬೇಕು. ಜಾಹೀರಾತುಗಳಿಂದ ನಷ್ಟವನ್ನು ತುಂಬಿಕೊಳ್ಳಬಹುದೆಂದರೆ ಕೊಡಲಿರುವೆವೆಂದು ಮಾತು ಕೊಟ್ಟ ವ್ಯಾಪಾರಿಗಳೂ ಕಂಪನಿಗಳವರೂ— ಯುದ್ಧದ ಕಾರಣದಿಂದ—ಇಲ್ಲವೆಂದು ತಲೆಜಾಡಿಸಿಬಿಟ್ಟರು. ಇಷ್ಟೆಲ್ಲ ತೊಡಕಿದ್ದರೂ ಕೇವಲ ೪-೬ ಪುಟಗಳನ್ನು ಮಾತ್ರ ಕಡಿಮೆಮಾಡಿ ಈ ಸಂಚಿಕೆಯನ್ನು ಪ್ರಕಟಿಸಿದ್ದೇವೆ. ಬಂದೊದಗಿದ ಈ ಯುದ್ಧದ ವಿಪತ್ತಿಯೆಂದರೆ ಜಯಂತಿಯೆಂಬ ಎಳೆಗೂಸಿಗೆ ಬಾಲಗ್ರಹ ತಗುಲಿದಂತಾಗಿದೆ. ವಾಚಕರ ಔದಾರ್ಯದ ಅಮೃತಧಾರೆ ಅಖಂಡವಾಗಿ ದೊರೆತಲ್ಲಿ, ಜಯಂತಿ ಈ ಬಾಲಗ್ರಹವನ್ನು ಸಹಜವಾಗಿ ದಾಟಿಸಿ, ಸಶಕ್ತವಾಗಿ ನಿಲ್ಲಬಹುದು. ಆದುದರಿಂದ ಜಯಂತಿಯ ವಾಚಕರಲ್ಲಿ ಅದರ ಸಂಚಾಲಕರದೊಂದು ಬಿನ್ನಹವಿದೆ: ಜಯಂತಿಯನ್ನು ಮಮತೆಯಿಂದ ಓದುವ ಪ್ರತಿಯೊಬ್ಬರೂ ತಮ್ಮದನ್ನಾಗಿ ಒಂದು ಸಂಚಿಕೆ ಕೊಂಡುಕೊಂಡು ಓದಿರಿ! ಓದಲಿಕ್ಕೆ ಬೇಡಲು ಬರುವವರಿಗೆ ಕೊಂಡು ಓದುವಂತೆ ಸೂಚಿಸಿರಿ!. ಹೀಗಾಗದಿದ್ದರೆ ಜಯಂತಿಗೊಂದಕ್ಕೇ ಅಲ್ಲ; ಕನ್ನಡದಲ್ಲಿಯ ಯಾವ ಪತ್ರಿಕೆಗೂ— ಈ ಗಂಡಾಂತರ ಪ್ರಸಂಗದಲ್ಲಿ—ಉಳಿಗಾಲವಿಲ್ಲವೆಂಬುದನ್ನು ಲಕ್ಷ್ಯದಲ್ಲಿಡಿರಿ!

ಈ ಸಂಚಿಕೆಯ ವೈಶಿಷ್ಟ್ಯ

ಯುದ್ಧಕ್ಕೆ ಸಂಬಂಧಿಸಿದ ಕೆಲವು ಸಂಗತಿಗಳನ್ನು ನಮ್ಮ ವಾಚಕರಿಗೆ ತಿಳುಹಬೇಕೆಂದು ನಿರ್ಧರಿಸಿದುದರಿಂದಲೂ, ೪-೬ ಪುಟಗಳನ್ನು ಕಡಿಮೆ ಮಾಡಿದುದರಿಂದಲೂ, ಈ ಸಂಚಿಕೆಯಲ್ಲಿ ‘ ಪುಸ್ತಕ ವಿಮರ್ಶೆ ’ ‘ ಸಾದರ ಸ್ವೀಕಾರ’ಗಳನ್ನು ಕೊಡಲಿಕ್ಕಾಗಲಿಲ್ಲ. ಅದರಂತೆಯೆ ಕಳೆದ ಸಂಚಿಕೆಯಲ್ಲಿ ತಿಳುಹಿದಂತೆ ವಿದ್ಯಾರ್ಥಿಗಳ ಪುಟಗಳನ್ನೂ ಕೊಡಲಿಕ್ಕೆ ಸಾಧ್ಯವಾಗಲಿಲ್ಲ. ಮುಂದಿನ ಸಂಚಿಕೆಗಳಲ್ಲಿ ಇವೆಲ್ಲ ಬಂದೆ ಬರುವುವು. ಈ ಸಲದ ಸಂಚಿಕೆಯಲ್ಲಿಯ ‘ ಸ್ವಲ್ಪದರಲ್ಲಿ ಸ್ವಾರಸ್ಯ ’ ಎಂಬ ವಿನೋದಲೇಖನದಲ್ಲಿಯ ‘ ಕುದುರೆ ಮೋತಿಯ ಕನಕಾಚಾರ್ಯರು’ ನಮ್ಮ ವಾಚಕರಿಗೆ ಯುದ್ಧದ ಸುದ್ದಿಗಳನ್ನು ವಿಮರ್ಶೆಮಾಡಿ ಹೇಳುತ್ತ, ಪ್ರತಿತಿಂಗಳೂ ತಮ್ಮ ದರ್ಶನ ಕೊಡಲಿರುವರು. ಪ್ರೊ. ಎಮ್. ಎನ್. ಕುಲಕರ್ಣಿಯವರು ನಮ್ಮ ಪರವಾಗಿ ಡಾ. ಎನ್. ಎನ್. ಗೋಡಬೋಲೆಯವರನ್ನು ಕೇಳಿ ಸಂಪಾದಿಸಿ ಕೊಟ್ಟಿದ್ದ ‘ ಸೋಲರಿಯದ ಜಪಾನಿಯರ ವ್ಯಾಪಾರ ಪಣ’ವನ್ನು ಎಲ್ಲರೂ ಮನಸ್ಸುಗೊಟ್ಟು ಓದಬೇಕು. ನಮ್ಮ ಪರಾವಲಂಬನವನ್ನೂ, ಹಣದಾಸೆಯಿಂದ ಜಪಾನಿಗಳು ನಮಗೆ ಮಾಡುವ ತಿರಸ್ಕಾರಪೂರ್ವಕ ಮೋಸಗಾರಿಕೆಯನ್ನೂ ಕಂಡುಕೊಳಬೇಕು. ದೇಶದ ಅಭಿಮಾನ ಸಂರಕ್ಷಣೆಗಾಗಿ ಜಾಗೃತರಾಗಬೇಕು. ‘ ಇಂದಿನ ಸಮರದ ರಂಗಭೂಮಿ ’ ಎಂಬ ಲೇಖನವೂ, ‘ ಆಕಾಶವಾಣಿಗಾಗಿ ಎಚ್ಚರಿಕೆ ’ ಎಂಬ ಲೇಖನವೂ, ಯುದ್ಧಲೋಕದ ಸುದ್ದಿಗಳೂ ಮಧ್ಯಮತರಗತಿಯ ವಾಚಕರಿಗೆ ಮನೋರಂಜಕವಾಗಿಯೂ ವಿಷಯ ಪರಿಚಯಾತ್ಮಕವಾಗಿಯೂ ಎನಿಸದೆ ಇರವು. ವಿಷಯಗಳ ಪಟ್ಟಿಯನ್ನು ನೋಡಿದವರಿಗೆ ಜಯಂತಿಯ ಸಂಪಾದನಕಾರ್ಯವು ಹೆಚ್ಚು ಪ್ರಯೋಜನಕಾರಿಯಾಗುವಂತೆ ಪ್ರಯತ್ನಪೂರ್ವಕವಾಗಿ ನಡೆಯುತ್ತಿದೆಯೆಂಬುದು ಯಾರಿಗೂ ಒಪ್ಪಿಗೆ ತೋರಬಹುದು. ಜನತೆಯ ಸಹಾಯ-ಸಹಕಾರದ ಹಸ್ತ ಹೆಚ್ಚು ಹೆಚ್ಚಾಗಿ ಮುಂದೆ ಬಂದರೆ ಜಯಂತಿಯ ಕಾರ್ಯ ಇನ್ನೂ ಹೆಚ್ಚು ಹೆಚ್ಚಾಗಿ ವಿವಿಧಮುಖದಿಂದ ನಡೆಯಬಹುದಾಗಿದೆ.

ಲೇಖಕ ಮಹನೀಯರಲ್ಲಿ

ದೀಪಾವಳಿಯ ಸಂಚಿಕೆಗಾಗಿ ಲೇಖನ ಕಳುಹಲಿಕ್ಕೆ ಹಲವು ಜನ ಲೇಖಕ ಮಹಾಶಯರಲ್ಲಿ ಬಿನ್ನವಿಸಿಕೊಂಡಾಗಿದೆ. ಕೆಲವು ಜನರಿಂದ ಲೇಖನ ಕಳುಹುವುದಾಗಿ ಕಾಗದ ಬಂದಿದ್ದರೂ, ಇದುವರೆಗೆ ಕಾರ್ಯಾಲಯಕ್ಕೆ ಲೇಖನ ಬಂದು ತಲ್ಪಿಲ್ಲ. ಅವರೆಲ್ಲ ಕಾಲಮೀರಿಹೋಯಿತೆಂದು ಅಸಡ್ಡೆಗೊಂಡು ಬಿಡದೆ, ಕೂಡಲೆ ತಂತಮ್ಮ ಲೇಖನಗಳನ್ನು ಕಳುಹುವ ಉಪಕಾರಮಾಡಬೇಕು.

ಚಿತ್ರಕಾರರಲ್ಲಿ

ದೀಪಾವಳಿಯ ಸನ್ನಿವೇಶ ಪ್ರಧಾನವಾದ ಗಂಭೀರಚಿತ್ರಗಳನ್ನೂ, ಚಿತ್ರ-ಕಥೆಗಳನ್ನೂ, ವ್ಯಂಗ್ಯಚಿತ್ರಗಳನ್ನೂ, ವಿನೋದಚಿತ್ರಗಳನ್ನೂ ಬರೆದು ಈ ತಿಂಗಳ ೧೫ ನೆಯ ತಾರೀಖಿನೊಳಗಾಗಿ ತಲ್ಪುವಂತೆ, ಚಿತ್ರಕಾರರು ನಮ್ಮ ಕಡೆಗೆ ಕಳುಹಬೇಕು. ಒಳ್ಳೆಯ ಚಿತ್ರಗಳೆಂದು ಸ್ವೀಕೃತವಾಗಿ ಪ್ರಕಟಿಸಲಾದ ಚಿತ್ರಗಳಿಗೆಲ್ಲ ತಕ್ಕಷ್ಟುಗೆ ಪ್ರತಿಫಲವನ್ನು ಸಲ್ಲಿಸಲಾಗುವುದು. ಕನ್ನಡ ನಾಡಿನ ಚಿತ್ರಕಾರರು ಈ ಸಂಧಿಯನ್ನು ಸುಮ್ಮನೆ ಕಳೆಯಲಾರರೆಂದು ನಮ್ಮ ಹಾರಯಿಕೆ.

—ಸಂಪಾದಕ

೧. ಮರ್ಕಟ ತರ್ಕ

'ಯುದ್ಧವಂತೂ ಸುರುವಾಯಿತು; ಇಂಗ್ಲಂಡವೂ ಅನಿವಾರ್ಯವಾಗಿ ಬಿಕ್ಕಟ್ಟಿನಲ್ಲಿ ಸಿಕ್ಕಿಕೊಂಡಿತು; ಇದೇ ಸಮಯ; ಈಗ ಸಾಧಿಸಿಕೊಂಡರೆ ಹಿಂದುಸ್ತಾನಕ್ಕೆ (ಒಲ್ಲೆಂದರೂ) ಸ್ವರಾಜ್ಯ ದೊರಕುವುದು' ಎಂದು ಕೆಲವು ಮುಖಂಡರೂ ನಿಕ್ಕಪರೆಲ್ಲರೂ ಮಾತನಾಡುತ್ತಿದ್ದಾರೆ.· ಆದರೆ ಮಹಾತ್ಮರಿಗೆ ಮಾತ್ರ ಇಂಗ್ಲಂಡನ್ನು ಈಗ ತೊಂದರೆಗಿಡಿಸಿ ಸ್ವರಾಜ್ಯ ದೊರಕಿಸುವ ಧೋರಣೆ ಸರಿಬಂದಿಲ್ಲವಂತೆ. ಇದೇನು-ಎಂದು ಎಲ್ಲರೂ ಆಶ್ಚರ್ಯದ ಬಿಸಿಲಿನಲ್ಲಿ ತೊಳಲುವಾಗ, ಮಂಗ ರಾಯನಿಗೆ ಮರ್ಕಟಬುದ್ಧಿಯ ಬೋಧಿವೃಕ್ಷದ ನೆರಳಿನಲ್ಲಿ ಸತ್ಯ ಹೊಳೆದಿದೆ. ಅದೆಂದರೆ, ಹೀಗೆ: ಈ ಯುದ್ಧವು ಪ್ರಾರಂಭವಾಗಲು ಕಾರಣವೇನು? ಹಿಟ್ಲರನ ಹಿಂಸಾವೃತ್ತಿ; ಈ ಯುದ್ಧದ ನಿಮಿತ್ತದಿಂದ ನಾವು ಸ್ವರಾಜ್ಯಗಳಿಸಿದರೆ (ಹಿಟ್ಲರನ) ಹಿಂಸಾವೃತ್ತಿಗಾಗಿಯೆ ನಮಗೆ ಸ್ವರಾಜ್ಯ ದೊರೆತಂತಾಗುವುದಲ್ಲವೆ? ಹಾಗಾದರೆ ಈ ಇಪ್ಪತ್ತು ವರ್ಷಗಳ ನಮ್ಮ ಅಹಿಂಸಾತಪಸ್ಸಿಗೆ ಸಾಧ್ಯವಾಗದ್ದು ಕೊನೆಗೆ ಹಿಂಸಾತತ್ತ್ವಕ್ಕೆ ಸಾಧಿಸಿದಂತಾ ಯಿತಲ್ಲವೆ? ಇದೆಂತಹ ಅನ್ಯಾಯ! ನಮಗೆ ಬೇಕಾದದ್ದು ಮೊದಲು ಅಹಿಂಸಾಬುದ್ಧಿ, ಆಮೇಲೆ ಸ್ವರಾಜ್ಯ. ಈಗಿನ ಸ್ಥಿತಿಯಲ್ಲಿ ಸ್ವರಾಜ್ಯ ದೊರಕಿಸಿದರೆ ಹಿಂಸೆಗಾಗಿ ವ್ಹೋಟ್ (Vote) ಕೊಟ್ಟಂತೆ, ಆದ್ದರಿಂದ, ಹೇ ಭಗವನ್

ಯದಿ ಮಾಮಪ್ರತೀಕಾರಮಶಸ್ತ್ರಂ ಶಸ್ತ್ರ
ಪಾಣಯಃ

ಧಾರ್ತರಾಷ್ಟ್ರಾ ರಣೇ ಹನ್ಯುಃ ತನ್ಮೇ
ಕ್ಷೇಮತರಂ ಭವೇತ್ ।

ಅಲ್ಲವೆ, ಹೀಗಿರುವುದಕ್ಕಿಂತ ಸಾಯುವುದೇ ಲೇಸಲ್ಲವೆ?

* * *

೨. ಮೂರ್ಚ್ಛೆಯೆ ಮೋಕ್ಷ

ಕನ್ನಡಿಗರೆ, ಎಚ್ಚರಾಗಿರಿ, ಯಾಕೆಂದರೆ ಸದ್ಯಕ್ಕೆ ನೀವೆಲ್ಲರೂ ಮೂರ್ಚ್ಛಿತಾ (ಬೀ) ಳಬೇಕಾಗಿದೆ. ಅದೇಕೆಂದು ಕೇಳಲುದ್ಯುಕ್ತರಾದರೆ ಲಾಲಿಸೋಣವಾಗಲಿ. 'ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಲೆಕ್ಕ-ಪತ್ರಗಳನ್ನಿಡುವುದರಲ್ಲಿ ಅಭಿನಂದನೀಯವಾದ, ಅನುಕರಣೀಯವಾದ, ಸ್ಪೃಹಣೀಯವಾದ ಚೊಕ್ಕಟತನವನ್ನು ತೋರಿಸಿದೆ' ಎಂದು ಅಖಿಲಭಾರತ ಕಾಂಗ್ರೆಸ್ ನಿಯುಕ್ತ ಆಡಿಟರರು ಅಭಿಪ್ರಾಯಪಟ್ಟಿದ್ದಾರೆ! ಇದನ್ನು ಕೇಳಿ ಶ್ರೀಹರಿವಾಯುಃ---ಅಲ್ಲಲ್ಲ--- ಹರ್ಷವಾಯುಪೂರಿತನಾಗಿ ಯಾವ ಕನ್ನಡಿಗನು ಮೈಮರೆದು ಮೂರ್ಚ್ಛೆ ಹೋಗಲಿಕ್ಕಿಲ್ಲ? ಇಷ್ಟು ಮೀರಿ ಯಾರಾದರೂ ಎಚ್ಚರಿದ್ದರೆ ಮುಂದಿನ ಮಾತನ್ನು ಕೇಳುವ ಸಾಹಸವಾಗಲಿ. 'ಲೆಕ್ಕದಲ್ಲಿ ಒಂದು ಸಣ್ಣ ಪುಟ್ಟ ಸಂಗತಿಯನ್ನು ಕೂಡ ಬಿಟ್ಟಿಲ್ಲ. ಉದಾಹರಣೆಗಾಗಿ, ಹಜಾಮತಿಗಾಗಿ ಕೊಟ್ಟುದರ ನಮೂದು ಕೂಡ ಇದೆ' ಎಂದು ಇನ್ನೊಬ್ಬ ಆಡಿಟರರು ಹೇಳುತ್ತಾರೆ. ಹಾಂ— ತಡೆಯಿರಿ. ಕಾಂಗ್ರೆಸ್ ಕಮಿಟಿಯು ಹಣಕ್ಕೂ ವ್ಯಕ್ತಿಯ ಹಜಾಮತಿಗೂ ಯಾವ ಸಂಬಂಧ ಎಂದು ಕೇಳಬೇಡಿರಿ; ಇಲ್ಲವೆ, ಬುದ್ಧಿಯ ದುರುಪಯೋಗ ಮಾಡಿ, 'ಹಜಾಮತ್' ಎಂಬುದು 'ಪ್ರಜಾಮತ' ಎಂಬ ಸಂಸ್ಕೃತ ಶಬ್ದದ ತದ್ಭವ ಎಂದೂ ಜಾಣತನದ ಪ್ರದರ್ಶನ ಮಾಡಬೇಡಿರಿ. ಅದಕ್ಕೇ ಹೇಳಲಿಲ್ಲವೆ ಮೂರ್ಚ್ಛೆ ಹೋಗಿರಿ ಎಂದು? ಮತ್ತು ಎಚ್ಚರದಿಂದಿದ್ದು ಅಸಂಬದ್ಧ ಪ್ರಶ್ನೆಗಳನ್ನು ಕೇಳಿದರೆ— ? ಸಾರ್ವಜನಿಕರ ಹಜಾಮತಿಗೆ ಸಂಪಾದಕರು ಹೊಣೆಗಾರರಲ್ಲ.

* * *

೩. ಅರ್ಥಾತ್—ಅಹುದಲ್ಲೊ?

ಯುದ್ಧದ ವಿಷಯವಾಗಿ ವರ್ಕಿಂಗ್ ಕಮಿಟಿಯು ಹೊರಡಿಸಿದ ಪ್ರಕಟನೆಗಾಗಿ ನಿಮ್ಮ ಅಭಿಪ್ರಾಯವೇನು—ಎಂದು ಮಂಗರಾಯನಿಗೆ ಕಾಗದಗಳು ಬಂದಿವೆ. ಕ್ಷಮೆ ಇರಲಿ. ಮಂಗ ರಾಯನಿಗೂ ರಾಜಕಾರಣಕ್ಕೂ ಬಾಲದ ಸಂಬಂಧ ಕೂಡ ಇಲ್ಲ. ಆದರೂ ನೂರಾರು ಕಾಗದಗಳು ಬಂದುದರಿಂದ ಅನಿವಾರ್ಯವಾಗಿ ಮಂಗರಾಯ ನಿಗೆ ಹೇಳಬೇಕಾಗುವುದು. ರಾಜಕಾರಣದ ಶಬ್ದಕೋಶ ಅವನಿಗಿಲ್ಲದ್ದರಿಂದ ಆ ಪ್ರಕಟನೆಯ ಮಾತುಗಳನ್ನು ಅವನು ಸಾಮಾನ್ಯ ಅನುಭವಕ್ಕೆ ಹೊಂದಿಸಿ ಸಾಮಾನ್ಯನ ಭಾಷೆಯಲ್ಲಿ ಹೇಳುವನು, ಕೇಳೋಣವಾಗಲಿ. 'ನೀನು (=ಇಂಗ್ಲಂಡ್) ನನ್ನ (=ಭಾರತದ) ಲಗ್ನದ ಗಂಡನಿದ್ದು ನೀ ನಂಜೋಡಿ ಬರೇ ಹೊಡೀಬಡೀ ಮಾಡ್ತೀದಿ. ಈಗ ನಿಂಜೋಡಿ ಇರಬೇಕೋ ಇರಬಾರದೊ ಅಂತಾ ನೋಟೀಸು ಕೊಡ್ತೀನಿ. ಹಾಂಗ ಕೇಳಿದರ ನೀ ಮತ್ತಗಿನ ಮನಸಿನವ ಅಂತ ನನಗೂ ಗೊತ್ತೈತಿ. ಯಾಕಂದ್ರ, ಎರಡನೇದವರು (=ಜರ್ಮನಿ) ಹೆಂಡತೀನ್ನ (=ಪೋಲಂಡ್) ಹೊಡೀವಾಗ ನೀ ಬಿಡಿಸಲಾಕ ಹೋಗೀದಿ. ಆದ್ರ ಒಮ್ಮೆ ಅನಿಸ್ತದ ಅದೇನ ನನಗ ಮಾಡೋದೈತೀ ಅಂತ. ಯಾಕಂದ್ರ, ನನ್ನ ಮನಸಿನಾಗ ನಿಂಜೋಡಿ ಪರಪಂಚ ಮಾಡಬೇಕು ಅಂತ ಐತಿ. ಅದಕ್ಕ ಇಷ್ಟಾದರೂ ನನ್ನ ತವರ್ಮನೀ ದಾಗೀಣೆ ನನಗ ವಾಪಸ್ ಕೊಡಿ ಫಲೋ ನಡೀತೀಯೋ ಏನು ಮತ್ತ ಹೊಡೀತಿಯೊ---ಇದನ್ನ ಲಗಟ ತಿಳಿಸು--- ಯಾಕಂದ್ರ ನನಗ ಲಗಟ ಬರಬೇ---' ಸಾಕು. ನಗುನಿರೇಕೆ? ಇದು ಸರಿಯಾದ ಭಾಷಾಂತರ ಅಲ್ಲವಾದರೆ ಮಂಗರಾಯನೂ ತಡೆಯುವನು.

* * *

೪. ಹೆಸರಿನಲ್ಲೇನಿದೆ?

ರಾಮದುರ್ಗದ ವಿಚಾರಣೆಯ ಸಂಬಂಧವಾಗಿ ವಾಚಕರೊಬ್ಬರು ಒಂದು ಮನೋರಂಜಕ ಸಂಗತಿಯನ್ನು ಮಂಗರಾಯನ ಲಕ್ಷ್ಯಕ್ಕೆ ತಂದಿದ್ದಾರೆ. ೧೯೦೮ ರಲ್ಲಿ ಲೋಕಮಾನ್ಯ ಟಿಳಕರ ವಿಚಾರಣೆಯನ್ನು ನಡೆಯಿಸಿದ ನ್ಯಾಯಾಧೀಶರ ಹೆಸರು **ದಾವರ** ಅಂತೆ; ೧೯೩೯ ರಲ್ಲಿ ರಾಮದುರ್ಗದ ವಿಚಾರಣೆ ನಡೆಯಿಸಿದವರೂ ನ್ಯಾ. **ದಾವರರೆ!** ಅಗ ಲೋಕಮಾನ್ಯರಿಗಾದ ಶಾಸನ ಈಗ ಲೋಕಪಕ್ಷಕ್ಕಾಗಿದೆಯಂತೆ! ಈ ಮಾತನ್ನು ಕೇಳಿ ಲೋಕಮಾನ್ಯಪರಂಪರೆಯ ಕರ್ನಾಟಕದ ಕೆಲ 'ಪುಢಾರಿ'ಗಳು ಕನಲಬಹುದು. ಆದರೂ ಅಂದು ಲೋಕಮಾನ್ಯರಿಗೆ ಜನರಿಂದ ದೊರೆತ ಮಾನ-ಸಹಾನುಭೂತಿಗಳು ಇಂದು ರಾಮದುರ್ಗದ ಪ್ರಜಾಪಕ್ಷಕ್ಕೂ ದೊರೆಯುವುವೆಂದು ಆಶಿಸ

ಬಹುದೆ? ವಿಚಾರಣೆಯ ನ್ಯಾಯಾಧೀಶರ ಹೆಸರುಗಳಲ್ಲಿ ಸಾಮ್ಯ, ವಿಚಾರಣೆಗೆ ಒಳಗಾಗಿದ್ದುವು ಗಳಲ್ಲೂ 'ಲೋಕ' ಎಂಬ ಪದಸಾಮ್ಯ; ಆದ್ದರಿಂದ ಕೊನೆಯ--

'ಅಥವಾ ಹೀಗೆ ಸರಿ-ಸಮ ಹಾಕುವುದು 'ಲಿಂಗಾಯತ ಕೋಪ್ಟಕ' ಎಂದು ಯಾರಾದರೂ ಮೂಗು ಏರಿಸುವರೊ?

* * *

ಕರ್ನಾಟಕದ ಮುನ್ನಡೆ

(೧) ಕೆ.ಪಿ.ಸಿ.ಸಿ. ಚುನಾವಣೆ ಸಮೀಪಿಸಿದ್ದರಿಂದ ಧಾರವಾಡದ ಕೆಲ ಕೆ.ಪಿ.ಸಿ.ಸಿ. ಕಾರ್ಯಕರ್ತರು ಏಕೀಕರಣದ ಮತ್ತು ಕನ್ನಡದ ಪ್ರಚಾರದಸಲುವಾಗಿ ನಿಜಾಂ ಹೈದ್ರಾಬಾದಿಗೆ ಹೋಗಿದ್ದಾರೆ.

(೨) ಯುದ್ಧದ 'ತಾಜಾ' ಸುದ್ದಿಗಳನ್ನು ಸಂಪೂರ್ಣವಾಗಿ ಪ್ರಕಟಿಸಲು 'ಸಂಕ್ಷಿಪ್ತ ಕರ್ನಾಟಕ' ಎಂಬ ಹೊಸ 'ದೀನಪತ್ರಿಕೆ' (ಕನ್ನಡದವಕ್ಷಿ—ದಿನಪತ್ರಿಕೆ) ಹೊರಟಿದೆ.

(೩) ಯುದ್ಧದಲ್ಲಿ ಸೇರಬೇಕೊ-ಸೇರಬಾರದೊ-ಎಂಬುದರ ವಿಷಯವಾಗಿ ಕೆ. ಪಿ. ಸಿ. ಸಿ. ಮುಖಂಡರು ಅಖಂಡ ಚರ್ಚೆಯನ್ನು ನಡಿಸಿದ್ದಾರೆ. ಶೀಘ್ರ ನಿರ್ಣಯಕ್ಕೆ ಬರುವ ನಿಶ್ಚಯ ಮಾಡಿದ್ದಾರೆ, ಯಾಕೆಂದರೆ ಕೆ.ಪಿ.ಸಿ.ಸಿ. ಯುದ್ಧವು ಇದೇ ತಿಂಗಳಲ್ಲಿ ಜರುಗಲಿವೆ

ಕನ್ನಡಿಗರಿಗೆ ಕಾಮಜೀವನ ಬೇಕಿಲ್ಲ

ಲೈಂಗಿಕ ವಿಷಯದ 'ಪುಸ್ತಕಗಳು ಭಾರತದ ಬೇರೆ ಬೇರೆ ಭಾಷೆಗಳಲ್ಲಿ ಬೇಕಾದಷ್ಟು-ಬೇಕಾದಂತಹ ರೀತಿಯಲ್ಲಿ ಹೊರಡುತ್ತಲಿವೆ. ಅವಾವನ್ನೂ ಮುಂಬಯಿ ಸರಕಾರ ನೋಡಿದಂತೆ ಕಾಣುವುದಿಲ್ಲ. ಕನ್ನಡದಲ್ಲಿ 'ಪ್ರೇಮಕಲೆ' ಯೊಂದನ್ನು ಒಬ್ಬರು ಬರೆದರು; ಇನ್ನೊಬ್ಬರು ಪ್ರಕಟಿಸಿದರು. ಮುಂಬಯಿ ಸರಕಾರಕ್ಕೆ ಕರ್ನಾಟಕದ ಪಾವಿತ್ರ್ಯದ ವಿಷಯದಲ್ಲಿ ಅಭಿಮಾನವೊ ಸಂದೇಹವೊ ಎಂದು ಮಂಗರಾಯ ತಲೆ ಕೆರೆದುಕೊಳ್ಳುತ್ತಿದ್ದಾನೆ. "ಆಚಾರ್ಯತ್ರಯರು ದ್ವೈತಾದ್ವೈತ ವಿಶಿಷ್ಟಾದ್ವೈತ ವೇದಾಂತವನ್ನು ಹೇಳಿದ ಕರ್ನಾಟಕದಲ್ಲಿ 'ಪ್ರೇಮಕಲೆ'ಯ ಉದಯವೇ? ಹರಿದಾಸರ ಶಿವಶರಣರ ವೈರಾಗ್ಯ ವಚನಗಳನ್ನು ಕೇಳಬೇಕಾದ ಕನ್ನಡಿಗರ ಕಿವಿಗೆ ಕಾಮಜೀವನದ ಕಥಾಶ್ರವಣವೇ?" ಎಂದು, ಕರ್ನಾಟಕವನ್ನು ಕರುಣೆಯಿಂದ ನೋಡುವ ಮುಂಬಯಿ ಸರಕಾರಕ್ಕೆ ಕಳವಳವೆನಿಸಿರುವುದೂ ಸಹಜವಿದೆ. ಆದರೆ ಮಿಕ್ಕ ಭಾಷೆಗಳವರು ಇದಕ್ಕಿಂತ ಹೆಚ್ಚಿನ ಕಾಮದ ಕತೆಗಳನ್ನು ಬರೆದು ಕನ್ನಡಿಗರಿಗೆ ಮಾರಿ ದುಡ್ಡು ಗಳಿಸುತ್ತಿದ್ದಾರಲ್ಲ.... ಮುಂಬಯಿ ಸರಕಾರ ಅದನ್ನೇಕೆ ನಿಲ್ಲಿಸಿಬಿಡಲಿಕ್ಕೆ ಮನಸ್ಸು ಮಾಡಿಲ್ಲ?--ಎಂದು ಯಾರಾದರೂ ಕೇಳಿದರೆ ಅದಕ್ಕೂ ಸಮಾಧಾನ ಹೇಳಲಿಕ್ಕೆ ಬರುವಂತಿದೆ. ಅದೇನೆಂದರೆ ವೈರಾಗ್ಯಪ್ರಧಾನವಾದ ಕರ್ನಾಟಕದಲ್ಲಿ, ಬೇಗನೆ ಹಾರಾಟವಾಗಿ ದುಡ್ಡು ಗಳಿಸಲು ಹಚ್ಚುವಂತಹ ವ್ಯಾವಹಾರಿಕ ಪುಸ್ತಕಗಳು ಹೊರಡಬೇಕೆಂದು ಸರಕಾರಕ್ಕೆ ಮನಸ್ಸಿಲ್ಲ. ಕನ್ನಡಿಗರು 'ಯೋಗವಾಸಿಷ್ಠ' ವನ್ನು ಓದಲಿ, ಇಲ್ಲದಿದ್ದರೆ 'ಜ್ಞಾನೇಶ್ವರಿ' 'ದಾಸಬೋಧ' 'ಉಪನಿಷದ್ರಹಸ್ಯ' ಗಳನ್ನೋದಲಿ ಎಂಬ ಸದಿಚ್ಛೆಯಿದೆ. ಆದಕ್ಕಾಗಿಯೆ 'ಏಕದಂ' 'ಪ್ರೇಮಕಲೆ'ಯನ್ನು ಜಪ್ತ ಮಾಡಿದೆ. ಭಲೆ, ಕನ್ನಡಿಗರ ನಿರಂತರ ಹಿತಚಿಂತಕ ಮುಂಬಯಿ ಸರಕಾರವೆ!

'ಸಂಗಾತ್ ಸಂಜಾಯತೇ ಕಾಮಃ
ಕಾಮಾತ್ ಕ್ರೋಧೋಭಿಜಾಯತೇ'

* * *

ಕನ್ನಡ-ಮರಾಠಿ-ತೆಲುಗುವಾದವಂತೆ!

ಧಾರವಾಡದ ಕೆಲವು ಜನ ಕನ್ನಡ ಮರುಳಸಿದ್ಧರು ಸೇರಿ, ಮೊನ್ನೆ ಮೊನ್ನೆ ಪ್ರಕಟಣೆಯೊಂದನ್ನು ಹೊರಡಿಸಿ ಹಂಚಿದ್ದಾರೆ. ಅದರಲ್ಲಿ ಅವರು ಹೊರಗಿನಿಂದ ಬರುವ ಪರಭಾಷೆಯ ಜನರಿಗೂ ಕರ್ನಾಟಕದಲ್ಲಿಯೆ ಇದ್ದ ಪರಭಾಷೆಯ ಜನರಿಗೂ ಏನೇನೊ ವಿನಂತಿಮಾಡಿಕೊಂಡಿದ್ದಾರೆ. 'ಕರ್ನಾಟಕಸ್ಥ ಎಲ್ಲ ಪರಭಾಷೆಯವರು ಉಳಿದ ಪ್ರಾಂತಗಳಂತೆ ತಮ್ಮ ಸಂಸ್ಕೃತಿಯನ್ನು ಕಾಯಿದುಕೊಂಡು ಕರ್ನಾಟಕದ ಸಾರ್ವಜನಿಕ ಜೀವನದೊಡನೆ ತಾದಾತ್ಮ್ಯರಾಗಬೇಕು' ಎಂದು ಆ ವಿನಂತಿಯಲ್ಲಿದೆ. ಆ ಮರುಳಸಿದ್ಧರಿಗೆ ಮಂಗರಾಯನದೊಂದು ಸವಾಲು: ಕರ್ನಾಟಕದ ಸಾರ್ವಜನಿಕ ಜೀವನದೊಂದಿಗೆ ಕರ್ನಾಟಕಸ್ಥರಾದ ಕನ್ನಡ ಭಾಷೆಯವರೆ ಎಲ್ಲರೂ ತಾದಾತ್ಮ್ಯರಾಗಿದ್ದಾರೆಯೆ?-ಎಂದು. ಈ ತಾದಾತ್ಮ್ಯರಾಗಿರದ ಕನ್ನಡಿಗರು ಕನ್ನಡದ 'ವಿಷಯದಲ್ಲಿ ಉದಾಸೀನ ಭಾವನೆಯಿಂದಿದ್ದರೂ ಎಷ್ಟೋ ಚೆನ್ನಾಗಿರುವುದು. ಹಾಗಿರದೆ ಅನ್ಯಭಾಷೆಯ ಜನರಿಗಿಂತ ಇವರೇ ಕನ್ನಡವನ್ನೂ ಕರ್ನಾಟಕವನ್ನೂ ಅಲ್ಲಗಳೆದು ಮಾತನಾಡತೊಡಗಿದರೆ ಅನ್ಯಭಾಷೆಯವರು ಕನ್ನಡವನ್ನು ಪುರಸ್ಕರಿಸಬೇಕೇಕೆ? ಕನ್ನಡಿಗರೆ ಕನ್ನಡವನ್ನು ತುಳಿದುಹಾಕಲಿಕ್ಕೆ ನಿಂತಿಲ್ಲವೇನೆಂಬುದನ್ನು ಬೇಕಾಗಿದ್ದರೆ ಮುಂಬಯಿ ಅಸೆಂಬ್ಲಿಯ ಸದಸ್ಯವರ್ಗದೊಂದಿಗೂ ಮಂತ್ರಿಮಂಡಲದೊಂದಿಗೂ ವಿಚಾರವಿನಿಮಯ ಮಾಡಿ ನೋಡಿ. ಇನ್ನು ಹೊರಡಲಿರುವ ಯಾವುದೇ ಸಂಸ್ಥೆಯನ್ನು ಧಾರವಾಡದಲ್ಲಿ ತೆಗದರೆ ಅವುಗಳಿಗೆ ಕಡುಗನ್ನಡಿಗರ ವೈಲಿಗೆಯಾಗುವುದೆಂಬ ಹೆದರಿಕೆ ಅವರಿಗಿದೆ. ಎಂತಲೆ ಎಲ್ಲ ಸಂಸ್ಥೆಗಳೂ ಬೇರೆಡೆ ಸ್ಥಾಪನೆಯಾಗುತ್ತಲಿವೆ. ಕರ್ನಾಟಕಕಾಲೇಜನ್ನು ಕೂಡ ಕಿತ್ತು ಬೇರೊಂದೆಡೆಯಲ್ಲಿ ನೆಡಬಹುದಾಗಿತ್ತು. ಆದರೆ ನಿರುಪಾಯವಾಗಿದೆಯೇನೊ!

ಗೊಂದಲಿಗ ಹಿಟ್ಲರನ ಪಂಜಿನಾಟ

ಈ ಪಂಜಿನಾಟದಿಂದ ಹಿಟ್ಲರ್ ಜಗತ್ತನ್ನೇ ಬೆರಗುಗೊಳಿಸಿದ್ದಾನೆ. ನಾನು-ನಾನೆಂಬ ಜ್ಞಾನಿ-ವಿಜ್ಞಾನಿಗಳು ಕೂಡ ಗಾಬರಿಗೊಂಡು ಹೋಗಿದ್ದಾರೆ. ಈ ಪಂಜಿನಾಟ ಗೊಂದಲಿಗನಿಗೆ ಮಾರಕವಾಗುವುದೊ, ಜಗತ್ತಿಗೆ ಮಾರಕವಾಗುವುದೋ?

ಮಾನವನು ದಾನವನಾದನೆ ?

ಅ ಥ ವಾ

ಪ್ರಗತಿ ಎಂದರೆಯೆ ಪ್ರಳಯಕಾಲವೆ ?

" ಚಾಡಿಯ ಚಾಣಿಕ್ಯ "

● ಯುದ್ಧ ಬರುವುದೆಂಬ ನಮ್ಮ ಹೋದ ಸಲದ ಲೇಖನದ ಮಸಿ ಆರುವಷ್ಟರಲ್ಲಿ, ಯುದ್ಧ ಬಂದಿತೆಂದೇ ಸಾವಿರಾರು ಜನರ ರಕ್ತದ ಧಾರೆಗಳಿಂದ ಹಿಟ್ಲರನು ಘಾಳವಾಗಿ ಬರೆದನು.

● ಇದು ಕ್ರಾಂತಿಯೆ ಸಂಕ್ರಾಂತಿಯೆ ಎಂದು ನಾವು ಕೇಳಿದ ಒಂದು ತಿಂಗಳೊಳಗೆ ' ಇದೆರಡೂ ಅಲ್ಲ, ಪ್ರಕೃತದ್ದು ಪ್ರಳಯಕಾಲ ' ಎಂಬ ಉತ್ತರ ತಲೆ ಎತ್ತಿದೆ.

● ಯುದ್ಧದಲ್ಲಿ ನಮ್ಮ ಭಾಗವೇನು-ಎಂಬುದಕ್ಕೆ ಕೂಲಂಕಷ ವಿಚಾರಮಾಡಿ ನಿರ್ಣಯಕ್ಕೆ ಬರಬೇಕಾಗುವುದು ಎಂಬ ನಮ್ಮ ಅಭಿಪ್ರಾಯವಿದ್ದಾಗ, ಕೂಲಂಕಷ ವಿಚಾರ ಮಾತ್ರ ಮಾಡಿ, ನಿರ್ಣಯಕ್ಕೆ ಮುಟ್ಟಿದಂತಾಗಿದೆ ನಮ್ಮ ವರ್ಕಿಂಗ್ ಕಮಿಟಿ.

● ಒಂದು ಕಡೆ ಮುಸೊಲಿನಿ ಎಂದೂ ಯುದ್ಧವನ್ನು ಸೇರನು (ಜೂನ್ ೧೯೩೯, ಚಾಡಿಯ ಚಾಣಿಕ್ಯ) ಎಂಬ ನಮ್ಮ ಭವಿಷ್ಯ ನಿಜವಾದ ಹೆಮ್ಮೆ ಇದ್ದರೆ, ಇನ್ನೊಂದೆಡೆ ' ಶಠಂ ಪ್ರತಿ ಶಾಠ್ಯಂ ' (ಸಪ್ಟೆಂಬರ್ ೧೯೩೯, ನಾಲ್ಕೂ ನಿಟ್ಟಿನ ನೋಟ) ಎಂದು ಹೇಳಿದ್ದಕ್ಕೆ ಸ್ಟಾಲಿನನು ಶಠತನವನ್ನು ತೋರಿಸಿದ್ದಾನೆ !

ಆದರೆ

● ಲಕ್ಷಾವಧಿ ಜನರು ತನು-ಧನ-ಮನಗಳಿಂದ ಮುಚ್ಚಿಮಾಯವಾಗುವಂತೆ ಮಣ್ಣುಪಾಲಾಗುವ ಯುದ್ಧವಿದು ಎಂದು ನಮ್ಮಂತೆ ಎಲ್ಲರೂ ತಿಳಿದಿರುವಾಗ, ಇಡಿಯ ಮಾನವಕುಲದ ನೀತಿ-ಸ್ವಭಾವಗಳನ್ನು ಕರಾಳಗೆಡಿಸಿ ವಿಶ್ವವಿನಾಶವನ್ನೆ ತರಬಹುದಾದ ಮತ್ತೊಂದು ಸ್ವರೂಪದ ಯುದ್ಧಕ್ಕೆ ಇಂಪು ಪ್ರಾರಂಭವಾಗಿದೆ.

● ಯುದ್ಧದಲ್ಲಿ ಸತ್ತವರನ್ನು ಎಣಿಸಬಹುದು, ಯುದ್ಧದಲ್ಲಿ ಉಳಿದವರನ್ನು ಬೆಳೆಯಸಬಹುದು. ಆದರೆ, ಇಂದು ಜಗತ್ತಿನ ಎಲ್ಲ ಭಾಗಗಳಲ್ಲಿ ಎಣಿಕೆ ಇಲ್ಲದಷ್ಟು ಹೃದಯಗಳ ಹೋಮಕುಂಡದಲ್ಲಿ ಬೂದಿಯಾಗುವಂತಿವೆ, ವಿಶ್ವಹೃದಯದ, ಮಾನವಸಮಾಜದ ಜೀಜವೆ ಸುಡುವಂತಾಗಿದೆ.।

● ಅಂತಹ ಘೋರವಾದ ಯುದ್ಧ, ಅಂತಹ ಕ್ರೂರವಾದ ಆಯುಧ ಯಾವುದು ಎಂದರೆ ಎರಡೂ ಪ್ರಶ್ನೆಗಳಿಗೆ ಒಂದೇ ಉತ್ತರ:

ಅದೆಂದರೆ ರಶಿಯಾದ ರಕ್ತಸತ್ರನ

ಪ್ರಗತಿಯಲ್ಲಿ ವಿಶ್ವಾಸವನ್ನಿಟ್ಟು ಅಖಂಡ ಆಶಾವಾದಕ್ಕೆ ಆಹುತಿಯಾದ ತರುಣರ ವಿಚಾರಮಾರ್ಗದಲ್ಲಿ ಉತ್ತರದಿಕ್ಕಿನ ರಶಿಯಾ ಧ್ರುವತಾರೆಯಂತಿದ್ದಿತು.

ಸಾವಿರಾರು ವರ್ಷಗಳಿಂದ ದಾಸ್ಯದಲ್ಲಿ ಕೊಳೆತರೂ, ದಾಸಾನುದಾಸವೃತ್ತಿಯೆ ಹುಟ್ಟುಸಡೆಯಾಗಿ ರಕ್ತದ ಕಣಗಳಾಗಿ ಹರಿದಾಡುತ್ತಿದ್ದರೂ ಮಾನವನು ಸ್ವತಂತ್ರನಾಗಲರ್ಹನು, ಸ್ವತಂತ್ರನಾಗಬಲ್ಲನು, ಆದ್ದರಿಂದ ಮಾನವನಿಗೆ ಸ್ವಾತಂತ್ರ್ಯದ ಅಧಿಕಾರವಿದೆ ಇಷ್ಟೇಯಲ್ಲದೆ ಸ್ವಾತಂತ್ರ್ಯದಿಂದಲೆ ಸುಖಶಾಂತಿಗಳು ಎಂಬ ತತ್ತ್ವವನ್ನು ಸಿದ್ಧಾಂತದಲ್ಲಿರಿಸಿದನು ಲೆನ್ನಿನನು — ಎಂದು ರಶಿಯಾದ ಉದಾಹರಣೆಯಿಂದ ಧೈರ್ಯವಿದ್ದಿತು.

ವೈಭವದ ಶಿಖರವೆಂದರೆ ಸ್ವಾರ್ಥಸಾಮ್ರಾಜ್ಯವಾದ, ದೇಶಾಭಿಮಾನದ ಕೈಲಾಸವೆಂದರೆ ಪರರಾಷ್ಟ್ರಗಳನ್ನು ಸ್ಮಶಾನಮಾಡುವ ಸಾಹಸ — ಎಂಬ ಹಳೆಯ ಹೆಮ್ಮೆಯ ತತ್ತ್ವಗಳು ಘಾತುಕ ಮತ್ತು ಅನಾವಶ್ಯಕ ಎಂದು ರಶಿಯಾದ ಕಡೆಗೆ ಬೊಟ್ಟುಮಾಡಿ ತೋರಿಸಲು ಆತ್ಮವಿಶ್ವಾಸವಿದ್ದಿತು.

ಸಂಪ್ರದಾಯದ ನೀತಿ, ಸ್ವಾರ್ಥಪ್ರೇರಿತ ಧರ್ಮ ಇವು ಮಾನವನ ಪ್ರಗತಿಗೆ ನಿಜವಾಗಿ ಬಾಧಕಗಳು ಎಂಬುದಕ್ಕೆ ಇಂದು ರಶಿಯಾದ ಸಮಾಜ ಜೀ ವ ನ ವು ಮೂರ್ತಿಮತ್ತಾದ ಸಾಕ್ಷಿ ಎನಿಸಿದ್ದಿತು.

ಆದರೆ ಇಂದು ಆ ಧ್ರುವತಾರೆ ಅಡಗಿ, ಆ ಧೈರ್ಯ ಸಡಿಲಿಸಿ, ಆ ಆತ್ಮವಿಶ್ವಾಸ ಮಾಯವಾಗಿ, ಆ ಸಾಕ್ಷಿ ಸ್ವಪ್ನಗತವಾಗಿ — ತರುಣರು, ಆಶಾವಾದಿಗಳು, ಬುದ್ಧಿಯೆ ಬಲವೆನ್ನುವವರು, ಸರಿ-

ಸಮಾನಸ್ವಾತಂತ್ರ್ಯವೆ ಪ್ರಗತಿಯೆನ್ನುವವರು — ಇವರೆಲ್ಲರೂ ದಿಕ್ಕೆಟ್ಟು, ದಾರಿತಪ್ಪಿ, ಹೆಜ್ಜೆ ಮುಗ್ಗರಿಸಿ, ಕತ್ತಲೆಯಲ್ಲಿ ತತ್ತರಿಸಬೇಕಾಗಿದೆ.

ಈ ಪರಿಸ್ಥಿತಿಗೂ ಒಂದೇ ಕಾರಣ:

ಅದೆಂದರೆ ರಶಿಯಾದ ರಕ್ಕಸತನ!

'ಯುದ್ಧವಾಗಲಿ, ಲಕ್ಷಾವಧಿ ಜನರು ಸಾಯಲಿ, ಲಕ್ಷಾವಧಿ ಮನೆ-ಮಾರುಗಳು ಸುಡಲಿ, ಸಾಮ್ರಾಜ್ಯವಾದದ ನೀತಿಗೇಡಿತನಕ್ಕೆ—ಸಾಮ್ರಾಜ್ಯವಾದದ ಸ್ವಾರ್ಥಪರಾಯಣತೆಗೆ ಆಯಾ ರಾಷ್ಟ್ರಗಳು ಆಹುತಿಯಾಗಲಿ, ಜಗತ್ತಿನಲ್ಲಿ ಇನ್ನೂ ಒಂದೆರಡು ಕಡೆ ಶಾಂತಿಗಾಗಿ ನಂಬುಗೆ ಇದೆ, ಮಾನವನಿಗಾಗಿ ಸಹಾನುಭೂತಿಯ ಸದ್ದೃಷ್ಟಿ ಇದೆ, ಹಿಂಸೆಗಾಗಿ ಹೇಸಿಕೆ ಇದೆ, ವ್ಯವಹಾರದಲ್ಲಿ ಬುದ್ಧಿಯ ಉಪಯೋಗಕ್ಕೆ ಬೆಲೆ ಇದೆ' ಎಂಬ ವಿಚಾರದಿಂದ ಮುಂದೆ ಸಾಗಿಸಲ್ಪಟ್ಟ ಆಶೆಯ ದೋಣಿಯು ಅವ್ಯವಸ್ಥೆಯಿಂದ-ಅನವಸ್ಥೆಯಿಂದ-ಅಲ್ಲೋಲ ಕಲ್ಲೋಲವಾದ ಹೃದಯಸಾಗರದಲ್ಲಿ ಹೊಯ್ದಾಡುತ್ತಿತ್ತು—

ಇಂದು ಅದೂ ಮುಳುಗಿತು.

ಅದನ್ನು ಮುಳುಗಿಸಿ ನುಂಗಿದ ತಿಮಿಂಗಿಲ ಎಂದರೆ

ರಶಿಯಾದ ರಕ್ಕಸತನವೇ!

ಮೊದಲು ಜರ್ಮನಿಯೊಡನೆ ಒಪ್ಪಂದಮಾಡಿಕೊಂಡ ರಶಿಯ ಕ್ಕಾಗಿ ಬಹುಜನರಿಗೆ ಆಶ್ಚರ್ಯವಾಯಿತು. ಯಾರಿಗೂ ಗೂಢ ತಿಳಿಯದಂತಾಯಿತು, ಕೆಲವರಿಗೆ ಆಶೆ ಇದ್ದಿತು. ಬೇರೆ ಬೇರೆ ಜನರಿಗೆ ಬೇರೆ ಬೇರೆ ಕಲ್ಪನೆಗಳು ತೋಚಿದುವು. ಯುದ್ಧವನ್ನು ತಪ್ಪಿಸುವುದಾಗದಿದ್ದಲ್ಲಿ ಅದನ್ನು ಹಬ್ಬಗೊಡಬಾರದೆಂಬ ಸದಿಚ್ಛೆಯಿಂದ ರಶಿಯಾ ಹೀಗೆ ವರ್ತಿಸಿರಬಹುದು ಎಂದು ಕೆಲವರು; ಕಳೆದ ಇಪ್ಪತ್ತು ವರ್ಷಗಳಿಂದ ನಡೆದ ನವರಾಷ್ಟ್ರ ನಿರ್ಮಾಣ ಕಾರ್ಯವನ್ನು ಹೇಗಾದರೂ ಉಳಿಸಿ ಬೆಳೆಯಿಸಲೇಬೇಕೆಂಬ ತಾತ್ತ್ವಿಕ ದೇಶಾಭಿಮಾನದಿಂದ ರಶಿಯಾ ಪ್ರೇರಿತವಾಗಿರಬಹುದೆಂದು ಕೆಲವರು; ಬಲವಿದ್ದರೆ ಸಾಕು, ಎಂತಹ ಶತ್ರುವಿನೊಡನೆಯೂ ಯುದ್ಧತಪ್ಪಿಸಿ ಒಪ್ಪಂದಮಾಡಿಕೊಳ್ಳುವುದು ಶಕ್ಯವಿದೆ ಎಂಬುದನ್ನು ಸ್ವಾರ್ಥಸಾಮ್ರಾಜ್ಯವಾದಿಗಳಿಗೆ ತೋರಿಸಿಕೊಡಲು ಹೀಗೆ ವರ್ತಿಸಿರಬಹುದೆಂದು ಇನ್ನೂ ಕೆಲವರು; ನೀತಿಯೆ ಇಲ್ಲದ್ದರಿಂದ ಬೇಕಾದಂತೆ ವರ್ತಿಸುವುದೆಂದು ಬೇರೆ ಕೆಲವರು; ಅಂತಸ್ಥಿತಿ ಭದ್ರವಾಗಿರಲಿಕ್ಕಿಲ್ಲ, ಅದಕ್ಕೆ ಈ ತೋರಿಕೆಯ ಸಂಭಾವಿತನ ಎಂದೂ ಕೆಲವರು—ಹೀಗೆ ಅನೇಕ ಸಮಾಧಾನಗಳು ತೋಚಿದರೂ ಗೂಢ ಬಿಟ್ಟಿರಲಿಲ್ಲ.

ಇಂದು ಬಿಟ್ಟಿದೆ ಆ ಗೂಢ; ಮೈನಡುಗಿಸುವಂತಹ ಗೂಢ! ಈಗಾದದ್ದೇನು?

'ನಮಗೆ ಆಕ್ರಮಣವೃತ್ತಿ ಇಲ್ಲ' ಎಂಬ ಮಾತಿನ ಸುಳ್ಳು,

'ಯುದ್ಧವು ನಿರ್ಣಯಸಾಧನವಲ್ಲ' ಎಂಬ ತತ್ತ್ವದ ತಕ್ಕು,

'ಪೋಲಾಂಡೇ ಇಲ್ಲದ್ದರಿಂದ ಹೀಗೆ ಮಾಡಬೇಕಾಯಿತು' ಎಂಬ ಬುದ್ಧಿಯ ಬದಮಾಷತನ,

'ನಮ್ಮವರ ಸಂರಕ್ಷಣೆ ಮಾಡಬೇಕಾಗಿದೆ' ಎಂಬ ಸ್ವಪರ-ವಂಚನ!

ಸದ್ಯಕ್ಕೆ ಪೋಲಾಂದಿನ ಸರಕಾರ ಇಲ್ಲೆಂದೇ ಕ್ಷಣಮಾತ್ರ ತಿಳಿಯೋಣ; ಆ ಮಾತಿನಿಂದ ಕೂಡ ರಶಿಯಾದ ವಿಶ್ವಾಸಘಾತುಕ ವೃತ್ತಿಯು ಕಂಡುಬರುವುದಿಲ್ಲವೆ? ಪೋಲಾಂದು ಈ ಸ್ಥಿತಿಗೆ ಬರಲು ಹಿಟ್ಲರನು ಕಾರಣ; ಹಿಟ್ಲರನಿಗೆ ಪ್ರೋತ್ಸಾಹ ದೊರೆಯಲು ರಶಿಯಾ (ಒಪ್ಪಂದ ಮಾಡಿಕೊಂಡದ್ದು) ಕಾರಣ. ಕನ್ನ ಕೊರೆಯಲು ಇನ್ನೊಬ್ಬನನ್ನು ತೊಡಗಿಸಿ, ಒಳಗಿನವರನ್ನು ವಧಿಸಲು ಇನ್ನೊಬ್ಬನನ್ನು ಹುರಿದುಂಬಿಸಿ, ಆ ಮೇಲೆ 'ಮನೆಯಲ್ಲಿ ಯಾರೂ ಇರಲಿಲ್ಲ, ಬಾಗಿಲೂ ತೆರೆದಿತ್ತು, ಅದಕಾಗಿ ಪೋಲೀಸನಂತೆ ನನಗೆ ಒಳಗೆ ಹೋಗಬೇಕಾಯಿತು' ಎನ್ನುವಂತಹ ಕಪಟಿ, ವಿಶ್ವಾಸಘಾತುಕ ವೃತ್ತಿಯಲ್ಲವೆ ಇದು?

ಇತಿಹಾಸವನ್ನು ನೋಡಿದರೆ ರಶಿಯಾ-ಜರ್ಮನಿಗಳು ಮೂರು ಸಲ ಪೋಲಾಂದನ್ನು ಮೊದಲು ಕೊಂದು, ಆ ಮೇಲೆ ಸತ್ತ ಎಮ್ಮೆ ನಮ್ಮದೆಂಬ ಹೋಲಿಕೆಯ ನ್ಯಾಯವನ್ನು ನಡೆಯಿಸಿವೆ. ೧೭೭೨ರಲ್ಲಿ, ೧೭೯೩ರಲ್ಲಿ, ೧೮೧೫ರಲ್ಲಿ— ಮೂರು ಸಲ ಪೋಲಾಂದಿನ ಹೆಣವನ್ನು ಹಂಚಿಕೊಂಡಿವೆ. (ಮೇ ೧೯೩೯ ಸಂಚಿಕೆಯ 'ಚಾಡಿಯ ಚಾಣಕ್ಯ'ನನ್ನು ಓದಿನೋಡಿರಿ.) ಆದರೆ ಅಂದು ರಶಿಯಾ-ಜರ್ಮನಿ ಎರಡೂ ನಿರಂಕುಶಪ್ರಭುತ್ವದ ಅರಸುತನದ ಆಧಿಪತ್ಯಕ್ಕೆ ಒಳಗಾಗಿದ್ದುವು; ಇಂದು ವಿವೇಕದ ಪ್ರಜಾತಂತ್ರ ಇದೆಯಂತೆ ಅಲ್ಲಿ! ಆದರೂ ಹೋಲಿಕೆತನವು ರಕ್ತಗತವಾಗಿದೆಯೆ?

ಇಂದು ಜರ್ಮನಿಗೆ ಪೋಲಾಂದಿನಲ್ಲಿ ಜಯ ದೊರೆತು, ಪೋಲಾಂದಿನ ಸರಕಾರವು ನಿಜವಾಗಿಯೆ ಇಲ್ಲದಂತಾದರೆ— ಇಂಗ್ಲಂಡ್ ಫ್ರಾನ್ಸುಗಳೂ ಯುದ್ಧವನ್ನು ತಡೆಯಬಹುದಲ್ಲ? ಪೋಲಾಂದಿನ ಸರಕಾರವೆ ಇಲ್ಲವಾದಮೇಲೆ ಅವರಿಗಾದರೂ ಕೊಟ್ಟ ವಚನದ ಬಾಧ್ಯತೆ ಉಳಿಯುವುದು ಹೇಗೆ?

ಆ ಪರಿಸ್ಥಿತಿ ಬಂದಿತೆಂದರೆ ಪ್ರಳಯಕಾಲ ಬಂದಂತೆ. ರಕ್ತದಿಂದ ಕೊಬ್ಬಿದವನೇ ರಾಜ್ಯವನ್ನು ನಡೆಯಿಸಬಲ್ಲನು ಎಂಬ ಸ್ಟ್ಯಾಲಿನ್-ಹಿಟ್ಲರರ ನೀತಿಯೆ ವ್ಯವಹಾರದ ನ್ಯಾಯವಾಗುವುದು.

ಹೀಗಾದರೆ— ಮತ್ತೂ ಇಂಗ್ಲಂಡ್-ಫ್ರಾನ್ಸುಗಳು ಹೀಗಾಗಗೊಟ್ಟರೆ- ಮಾನವಕುಲವು (ಮಹಾತ್ಮರು ಹೇಳಿದ law of the Jungle ಎಂಬ ಸ್ಥಿತಿಗಿಳಿದು) ಸೃಷ್ಟಿಕ್ರಮದಲ್ಲಿ ಅತ್ಯಂತ ಹೇಯವಾದ ವನ್ಯಪಶುವಿನ ವೃತ್ತಿಯದಾಗಬಹುದಲ್ಲವೆ?

ಜಯಂತಿಯ ದೀಪಾವಳಿ ಸಂಚಿಕೆ ಓದಲು ಮರೆಯಬೇಡಿರಿ!

ಯುದ್ಧಲೋಕದ ಸುದ್ದಿಗಳು

★

ಸಂಗ್ರಾಹಕರಿಂದ

ಆಧುನಿಕ ಯುದ್ಧದ ರಕ್ಷಣೆಯ ಸಾಧನೆಗಳು

ಇಂದಿನ ಯುದ್ಧಗಳಲ್ಲಿ ಸೈನಿಕರಷ್ಟೆ ಭಾಗವಹಿಸಬೇಕೆಂದಿಲ್ಲ. ವೈಮಾನಿಕ ದಾಳಿಯ ಮೂಲಕ ಮತ್ತು ವಿಷವಾಯು ಪ್ರಯೋಗದ ಮೂಲಕ, ಯಿಕ್ಕ ಪುರಜನರು ಕೂಡ ಯಾವಾಗಲೂ ಗಂಡಾಂತರದಲ್ಲಿದ್ದಂತೆ ಇರುತ್ತಾರೆ. ಆಕಾಶದ ಆಕ್ರಮಣವನ್ನು ಎದುರಿಸುವುದಕ್ಕೆ ತೋಪುಗಳು (anti Air craft Guns) ಇರುವುವು. ಆಕಾಶದ ದಾಳಿಗಳಿಂದ ಸಂರಕ್ಷಿಸಿಕೊಳ್ಳುವುದಕ್ಕೆ ಕಲ್ಲು, ಕಬ್ಬಿಣ, ಗಚ್ಚು ಹಾಕಿ ಕಟ್ಟಿದ ನೆಲಮನೆಗಳಿರುವುವು. ಅಲ್ಲದೆ ಆಕಾಶಬುಟ್ಟಿಗಳ ಕಟ್ಟುಗಳು, ಸುರಂಗಕೊರೆತಗಳು— ವಿಮಾನಕ್ಕೆ ತಾಗಿದರೆ ನಾಶಪಡಿಸುವ ಸ್ಫೋಟಕವು, ಮುಖವಾಡಗಳು, ಸೈನಿಕರು ಭ್ರಷ್ಟರಾಗದಂತೆ ಎಚ್ಚರಿಸುವ ಪಥಕಗಳು ಇವೆಲ್ಲ ಇರುವುವು. ಇಂದಿನ ಯುದ್ಧದಲ್ಲಿಯ ರಕ್ಷಣೆಯ ಸಾಧನೆಗಳಿವು.

*　　*　　*

ಯಂತ್ರೋಪಕರಣ !

ಕುದುರೆ, ಹೇಸರುಗತ್ತೆಗಳು ಸೈನ್ಯದ ಆಡಂಬರದಿಂದ ಮಾಯವಾಗಹತ್ತಿವೆ; ಅದರ ಬದಲು ಯಂತ್ರವಾಹನಗಳು ಬರಲಿವೆ; ಟ್ಯಾಂಕುಗಳು; ಕವಚದಿಂದೊಡಗೂಡಿದ ಮೋಟಾರ್ ಕಾರುಗಳು; ಯುದ್ಧವಿಮಾನಗಳು; ಮನುಷ್ಯರನ್ನೂ ಮದ್ದು-ಗುಂಡುಗಳನ್ನೂ ಸ್ಥಳಾಂತರಮಾಡಲಿಕ್ಕೆ ಮೋಟಾರುಗಳೂ, ಮೋಟರ್‌ಸಾಯಿಕಲ್ಲುಗಳೂ ಮುಖ್ಯವಾಗಿವೆ.

*　　*　　*

ಮ್ಯಾಗಿನೊ (ಫ್ರಾನ್ಸ್) ಮತ್ತು ಸೀಗ್‌ಫ್ರಿಡ್ (ಜರ್ಮನಿ) ಲಾಯಿನುಗಳು ಅಖಂಡವಾದ ಗೋಡೆಗಳಂತೆ ಇರದೆ, ಸೀಮೆಂಟು ಕಾಂಕ್ರೀಟನಿಂದ ಅಲ್ಲಲ್ಲಿ ಕಟ್ಟಿದ ನೆಲಮನೆಯ ಕೋಟೆಗಳಾಗಿವೆ. ಒಂದರಿಂದ ಮತ್ತೊಂದಕ್ಕೆ ಹೋಗಲಿಕ್ಕೆ ಭೂಮಿಯ ಒಳಗೆಯೆ ದಾರಿ ಇರುತ್ತದೆ. ಸಂರಕ್ಷಣೆಗಾಗಿ ನಿರ್ಮಿತವಾಗಿರುವ ಪ್ರತಿಯೊಂದು ಆಧುನಿಕ ಸಾಧನವನ್ನು ಅಲ್ಲಿ ಬಳಸಿಕೊಂಡಿದ್ದಾರೆ. ಕೆಲ ಕಡೆಯಲ್ಲಿ ನೆಲದ ಒಳಗೆ ಆರೇಳು ಅಂತಸ್ತು ಕಟ್ಟಿದ್ದಾರೆ. ಅವುಗಳಲ್ಲಿ ಸದಾ ಸೈನಿಕರನ್ನು ಭರತಿಮಾಡುತ್ತಿರುತ್ತಾರೆ. ಆ ಸೈನಿಕರಿಗೆ ಎಲ್ಲ ತರದ ಸುಖ-ಸೌಕರ್ಯಗಳು ಸಿಗುತ್ತವೆ. ತೋಪುಗಳನ್ನು ವಿದ್ಯುತ್‌ಶಕ್ತಿಯ ಸಹಾಯದಿಂದ ಒಳಸುತ್ತಾರೆ. ಅಲ್ಲಲ್ಲಿ ಮದ್ದು-ಗುಂಡುಗಳ ರಾಶಿಗಳಿರುವುವು. ತಾವಾಗಿವೆ ಚಲಿಸುವ ವಿದ್ಯುತ್ 'ಲಿಫ್ಟು'ಗಳೂ, ವೈರಿಗಳು ಬರುವುದನ್ನು ಸೂಚಿಸುವುದಕ್ಕೆ ತೀವ್ರವೇದಿ ಉಪಕರಣಗಳೂ ಇರುವುವು. ಆ ಇಡಿ ಲಾಯಿನಿನಲ್ಲಿ ವಿದ್ಯುತ್‌ಶಕ್ತಿಯನ್ನು ಬಳಸಲಾಗಿರುವುದು. ಹವೆಯನ್ನೂ ನಿರ್ಮಿಸಿರುವರು. ಪ್ರತಿಯೊಂದು ಸಾಧನವನ್ನೂ ಎರಡೆರಡಾಗಿ ಇರಿಸಿದ್ದಾರೆ; ಕಾರಣಾಂತರದಿಂದ ಯಾವುದೇ ಒಂದು ಭಾಗವು ವೈರಿಗಳ ವಶಕ್ಕೆ ಹೋಯಿತೆಂದರೆ, ಒಮ್ಮೆಲೆ ಅಲ್ಲಿ ನೀರು ಹರಿಬಿಡುವ ವ್ಯವಸ್ಥೆಯೂ ಇದೆ.

*　　*　　*

ಪೋಲಿಶ್ ಕಾರಿಡರ್ :

ಇದು ಪೋಲಂಡಿನವರಿಗೆ, ಸಮುದ್ರಕ್ಕೆ ಮಾರ್ಗವಾದ ೧೬೦೦೦ ಕಿಲೊಮೀಟರ್ ಕ್ಷೇತ್ರವುಳ್ಳ ಸಮುದ್ರ ದಂಡೆಯ ಪಟ್ಟಿಯೊಂದು. ಸುಮಾರು ೩೦ ಮೈಲುಗಳಷ್ಟು ಅಗಲವಾಗಿದೆ. ಅದರಲ್ಲಿ ಗ್ಡಿನಿಯಾ ಮತ್ತು ಡಾಂಜ್ಹಿಗ್ ಎಂಬ ಎರಡು ಪಟ್ಟಣಗಳಿವೆ. ಗ್ಡಿನಿಯಾವು ಪೋಲಂಡಿನವರದು, ಡಾಂಜ್ಹಿಗವು ಜರ್ಮನರದು. ಡಾಂಜ್ಹಿಗವನ್ನೊಳಗೊಂಡ ಆ ಪಟ್ಟಿಯ ಜನವಸತಿಯು ಸುಮಾರು ೧೮ ಲಕ್ಷ ಇರುತ್ತದೆ.

ಕೀಲ್ ಕಾಲುವೆ

ನಿಜವಾಗಿ ನೋಡಿದರೆ ಇದು ಹೇಸರದು. ಆದರೆ, ಬಾಲ್ಟಿಕ್ ಮತ್ತು ಉತ್ತರ ಸಮುದ್ರದ ದಂಡೆಯ ಪ್ರದೇಶಗಳನ್ನು ಕೂಡಿಸುವುದಕ್ಕೋಸ್ಕರ ೧೮೯೫ನೆಯ ಇಸ್ವಿಯಲ್ಲಿ ಜರ್ಮನರು ಇದನ್ನು ಗೆದ್ದುಕೊಂಡರು. ಇದು ೬೧ ಮೈಲು ಉದ್ದವಾಗಿಯೂ, ೧೫೦ ಫೂಟು ಅಗಲವಾಗಿಯೂ, ೩೭ ಫೂಟು ಆಳವಾಗಿಯೂ ಇದೆ. ಜರ್ಮನರ ಹಡಗುಗಳು ಪರಕೀಯರ ಬಂದರಗಳ ಸಹಾಯವಿಲ್ಲದೆ ಇದರ ಮೂಲಕ ಬಾಲ್ಟಿಕ್ ಸಮುದ್ರದಿಂದ ಉತ್ತರದ ಸಮುದ್ರಕ್ಕೆ ಹೋಗಬಹುದು. ಕೀಲ್ ಮತ್ತು ಬ್ರನ್ಸ್‌ಬಟ್‌ಕೂಗ್ ಎಂಬ ಎರಡು ಬಂದರಗಳು ಆ ಕಾಲುವೆಯ ಒಂದೊಂದು ತುದಿಯಲ್ಲಿವೆ. ಆ ಕಾಲುವೆಯು ಜರ್ಮನ್ ಹಡಗುಪಡೆಯನ್ನು ಬಾಲ್ಟಿಕದಿಂದ ಉತ್ತರ ಸಮುದ್ರಕ್ಕೆ ಸಾಗಿಸುವ ಪ್ರಧಾನಸ್ಥಾನವಾದುದರಿಂದ, ಕೋಟೆ-ಕೊತ್ತಳಗಳಿಂದ ಅದನ್ನು ಭದ್ರಪಡಿಸಿದ್ದಾರೆ.

*　　*　　*

ಸೈನ್ಯದ ವೆಚ್ಚದ ಅಂಕೆಗಳು ಪ್ರತಿವರುಷ:

ಗ್ರೇಟಬ್ರಿಟನ್:	೨೭೮,೦೦೦,೦೦೦ ಪೌಂಡುಗಳು.
ಜಪಾನ್ :	೪೫೪,೬೦೦,೦೦೦ ಎನ್ನುಗಳು
U. S. A.	೬೯೯,೪೦೦,೦೦೦ ಡಾಲರುಗಳು
ಇಟಲಿ :	೫,೫೩೪,೦೦೦,೦೦೦, ಲಾಯರುಗಳು

(೩೯೯ನೆಯ ಪುಟದ ಅಡಿಯಲ್ಲಿ ನೋಡಿರಿ!)



ಶಹರದೂರ ವರಾ (ಸಣ್ಣಕತೆ)

ಪ್ರೀತಿವಿವಾಹ-ಪ್ರೇಮವಿವಾಹಗಳ ಹುಚ್ಚು ನಮ್ಮಲ್ಲಿಯ ಕಸ್ಸಾ-ವರರಿಗಿಂತ ಹೊಸ ಲೇಖಕರಿಗೇ ಹೆಚ್ಚಾಗಿ ಹಿಡಿದಿರುವುದು. ಹೋಗಲಿ, ನಿಮ್ಮ ಕಲಿತ ಲೀಲೆಯ ಸ್ವೈರವೃತ್ತಿಯಂತೂ ತೀರ ಅಸ್ವಾಭಾವಿಕವಾಗಿರುವುದು.

ವಿ. ಸೂ : ನಮ್ಮಲ್ಲಿ ಬಂದು ಅಸ್ವೀಕೃತವಾದ ಲೇಖನಗಳ ಲೇಖಕರಿಗೆ ಸಂಪಾದಕಮಂಡಲಿ ಮಾಡಿದ ಸೂಚನೆಗಳಿವು. ಲೇಖಕರಲ್ಲದವರು ಇದನ್ನು ಬೇಕಾದರೆ ಓದಲಿ, ಬೇಡವಾದರೆ ಬಿಡಲಿ!

ಸುಬ್ಬರಾಯರ ಶಿಕ್ಷಣ (ಸಣ್ಣಕತೆ)

ವರ್ತಮಾನ ಪತ್ರಿಕ್ಕೆ ಕಳುಹದೆ ನಮ್ಮ ಕಡೆಗೆ ಕಳುಹಿ ಅಂಚೆಯ ವೆಚ್ಚವನ್ನು ವ್ಯರ್ಥ ಹಾಳು ಮಾಡಿಕೊಂಡಿರಿ. ಸಣ್ಣಕತೆಯೆಂದರೆ ನಡೆದ ಸಂಗತಿಯ ರಿಪೋರ್ಟಲ್ಲ!

ಹಿತಚಿಂತಕ (ಏಕಾಂಕದೃಶ್ಯ)

ಹುಂ.. ಹೀಗೆಯೆ ಬರೆಯುತ್ತ ಸಾಗಿರಿ.. ನೋಡೋಣ, ಎಂದಾದರೂ ಹೊರಟೀತು ಒಳ್ಳೆಯ ಕೃತಿ ನಿಮ್ಮಿಂದ!

ವಿಶ್ವಪ್ರೇಮಿ (ಸಣ್ಣಕತೆ)

ನಿಜವಾಗಿಯೂ ನೀವೆ ವಿಚಾರಮಾಡಿ ನೋಡಿ, ನಿಮ್ಮ ಕತೆಯಲ್ಲಿ ಹೊಸಮಾತೇನಾದರೂ ಇದೆಯೆಂದು ಎನಿಸುವುದೇ? ಸಂವಿಧಾನದಲ್ಲಿ ಹೊಸತನವಿಲ್ಲದಿದ್ದರೂ ಹೋಗಲಿ, ಹೇಳಿಕೆಯಲ್ಲಿಯಾದರೂ ಸೊಗಸು ಬೇಕಿಲ್ಲವೆ?

ಮದುವೆಯ ಮೋಜು (ಸಣ್ಣಕತೆ)

ಅಂಚೆಯ ಟಿಕೀಟು ಕಳುಹದಿದ್ದರೆ ಮರಳಿ ಕಳುಹಲಿಕ್ಕಾಗದೆಂಬ ಸಂಗತಿ ತಮಗೆ ಗೊತ್ತಿಲ್ಲನೆಂದು ತೋರುವುದು!

ಪೂರ್ಣಿಮಾಚಂದ್ರ (ಕವನ)

' ನಿರಂಕುಶಾಃ ಕವಯಃ ' ಎಂಬ ಮಾತು ನಿಮ್ಮ ಕವಿತೆಯನ್ನೋದುವಾಗ ಅಕ್ಷರಕ್ಷರಕ್ಕೂ ನೆನಪಾಗುವುದು. ಓದಿದವರಿಗೆ ಅರ್ಥವಾಗಬೇಕೆಂಬ ಅಂಕುಶವನ್ನೂ ತಾವು ಲಕ್ಷಿಸದೆ ಹೊರಟುದು ಅಭಿನಂದನೀಯ ಸಂಗತಿ.

ಕೊರಗು (ಕವನ)

' ಒಳ್ಳೆಯದಿದ್ದರೆ ಅಚ್ಚು ಮಾಡಿರಿ ಇಲ್ಲವಾದರೆ ಬಿಟ್ಟುಬಿಡಿರಿ ' ಎಂದು ಮಾಡಿದ ತಮ್ಮ ಆಜ್ಞೆಯಂತೆಯೆ ನಡೆದುಕೊಂಡಿದ್ದೇವೆ.



ನಿರಾಹಾರ

★

ಪ್ರೊ. ಎನ್. ಎಮ್. ಕುಲಕರ್ಣಿ, ಎಂ. ಎ., ಬನಾರಸ
ಹಿಂದೂ ಯುನಿವ್ಹರ್ಸಿಟಿ.

ಅವರಿಂದ

★

ಹಳೆಯ ಕತೆಯಾದರೇನಾಯಿತು, ಹೇಳುವವರ ಕಥನಕೌಶಲ ಹಳೆಯದರಲ್ಲಿಯೂ ಹೊಸತನವನ್ನು ತುಂಬುತ್ತದೆ. ಆಚಾರ್ಯರ ಏಕಾದಶಿಯ ಮಧ್ಯರಾತ್ರಿಯ ನಿರಾಹಾರದ ನಾಟಕವನ್ನು ಕಣ್ಣಾರೆಕಂಡ ನಾಗಪ್ಪನ ಬಾಯಿಂದಲೆ ಕೇಳಬೇಕು.

★

"ವಿಶ್ರಾಂತಿಗೃಹ" (ಇದು ನಾಗಪ್ಪನು ಪ್ರತಿದಿನವೂ ಹೋಗುವ ಚಹಾದಂಗಡಿಯ ಹೆಸರು)ದಲ್ಲಿ ಗಿರಾಕಿಗಳು ಚೆನ್ನಾಗಿ ಕಲೆತಿದ್ದರು. ನಾಗಪ್ಪನು ತನ್ನ ಚಹವನ್ನು ಮುಗಿಸಿ ತಾಂಬೂಲ ಸೇವನೆ ಮಾಡುತ್ತ ಡಿಕ್ಕಿಗೆ ಬಿಸ್ಕೀಟ್ ಚೂರುಗಳನ್ನು ಕೊಡುತ್ತಿದ್ದ. ಪಕ್ಕದಲ್ಲಿ ಕುಳಿತ ಗಿರಾಕಿಗಳು ತುಂಬ ಉತ್ಸಾಹದಿಂದ ಲಂಡನ ಟಾಯಿಮ್ಸ್ ಪತ್ರದಲ್ಲಿಯ ಯಾವುದೋ ಒಂದು ಮೋಜಿನ ಸಂಗತಿಯನ್ನು ಓದಿ ಹೊಟ್ಟೆ ಹುಣ್ಣಾಗುವಂತೆ ನಗುತ್ತಲಿದ್ದರು. ನಾಗಪ್ಪನಿಗೆ ವೃತ್ತಪತ್ರಗಳಲ್ಲಿ ಸಂಚಿಗೆ ಇರಲಿಲ್ಲ. ಆದರೂ 'ಆಧುನಿಕ ಕಾಲದಲ್ಲಿ ಬೇಕಾದ ಹಾಗೆ ಬೆಳೆಯುತ್ತಿದ್ದ ಮುದ್ರಾರಾಕ್ಷಸನ ಹಾವಳಿಯನ್ನು ತಡೆದುನಿಲ್ಲಿಸುವದು ಶಕ್ಯವೇ?' ಎಂದು ಸುಮ್ಮನಿರುತ್ತಿದ್ದ. ಗಿರಾಕಿಗಳು ತುಂಬ ಉತ್ಸಾಹದಲ್ಲಿದ್ದರು.

..ಕಿನೆಮೊಸರನ್ನು ಅವಲಕ್ಕಿಯೊಂದಿಗೆ ತಿನ್ನುತ್ತ ಗುಡಿಯಲ್ಲಿ ಕುಳಿತಿದ್ದೆ.
..ಗುಡಿಗೆ ಮೂವರು ಆಚಾರ್ಯರು ಬಂದರು.

"ಏನು ಸ್ವಾಮಿ ಸಂಗತಿ; ತುಂಬಾ ಮೋಜಿನದಾಗಿ ಕಾಣುತ್ತದೆ?" ನಾಗಪ್ಪ ಕೇಳಿದ.

"ಇದು ವಿಚಾರದ ಸಂಗತಿ ನಾಗಪ್ನೋರೆ, ಒಂದು ನವೀನ ಸತ್ಯಾಗ್ರಹ.." ಗಿರಾಕಿ ಪುನಃ ಪತ್ರನೋಡಹತ್ತಿದ.

"ಓದಿಬಿಡಿರಿ ಸ್ವಾಮಿ, ಯಾವ ಸಂಗತಿ?" ನಾಗಪ್ಪ ಕುತೂಹಲದಿಂದ ಕೇಳಿದ.

"ಒಬ್ಬ ಕಾಲೇಜ್ ವಿದ್ಯಾರ್ಥಿಯು ಮಾವನ ಮನೆಯ ಮುಂದೆ ಉಪವಾಸ ಸತ್ಯಾಗ್ರಹಕ್ಕೆ ಕುಳಿತುಬಿಟ್ಟಿದ್ದಾನೆ. ಎದುರಿಗೆ ತನ್ನ ಚಿಕ್ಕ ಹೆಂಡತಿಯ ಫೋಟೋ ಇಟ್ಟುಕೊಂಡು ಸಾಯುವವರೆಗೂ ಉಪವಾಸಕ್ಕೆ ನಿಂತಿದ್ದಾನೆ. ಕಾರಣವೆಂದರೆ ಅದೇನೋ ಅವನ ಹೆಂಡತಿ ಅವನ ಕೂಡ ಜಗಳಾಡಿ ಈಗ ತಂದೆಯಮನೆಗೆ ಬಂದಿದ್ದಾಳಂತೆ. ಅವರ ವಿವಾಹವು ರಜಿಸ್ಟರಾದ ವಿವಾಹ. ಕಲಿಯುವ ಕಾಲಕ್ಕೆ ಇಬ್ಬರೂ ಪ್ರೀತಿಸುತ್ತಿದ್ದರು. ಕಲಿತ ಮೇಲೆ ಹೆಂಡತಿಗೆ ಪೂರ್ಣ ಜ್ಞಾನ ಬಂದಿತಂತೆ! ಅಂತೇ ಅವಳು ತಂದೆಯಲ್ಲಿ ಬಂದದ್ದು; ಇವನು ಅಲ್ಲಿಗೆ ಬಂದು ಸತ್ಯಾಗ್ರಹ ಹೂಡಿದ್ದು ಎಂದು ಆ ಗಿರಾಕಿ ಓದಿದ.

"ಅದ್ಭುತ ವಿಷಯ, ಸ್ವಾಮಿ" ಎಂದ ನಾಗಪ್ಪ. "ಈಗಿನ ಜನರು ಈ ನಿರಾಹಾರ ಸತ್ಯಾಗ್ರಹಕ್ಕೆ ಒಲವಾಗಿ ಅಂಟಿಕೊಂಡಿದ್ದಾರೆ. 'ಮಹಾತ್ಮಾಗಾಂಧಿಯವರು ಉಪವಾಸಮಾಡಿದ ಮೇಲೆ ನಾವೇಕೆ ಮಾಡಬಾರದು?' ಎಂದು ಅವರು ಅನ್ನುವದು.

ಅಲ್ಲದೇ ಉಪವಾಸದ ಕಾರಣಗಳಂತೂ ವಿಚಿತ್ರವಾಗಿವೆ. ಬೇಕು ಬೇಕಾದುದಕ್ಕೆಲ್ಲ ಉಪವಾಸದ ಅಂಜಿಕೆ ತೋರಿಸುತ್ತಾರೆ. ಉತ್ತರ ಹಿಂದುಸ್ಥಾನದಲ್ಲಿಯಂತೂ ಈ ಉಪವಾಸದ ಗೊಂದಲ ಮೇರೆ ತಪ್ಪಿದೆ. . . ."

"ನಿಜ, ನಾಗಪ್ಪನೋರೆ, ಅದೇನೋ ಲಖನೌದಲ್ಲಿಯ ವಿದ್ಯಾರ್ಥಿಗಳು ಮೊನ್ನೆ ನಿರಾಹಾರ ಸತ್ಯಾಗ್ರಹ ಹೂಡಿದ್ದರಂತೆ. ಕಾರಣವೇನು ಕೇಳಿದ್ದೀರಾ? ಯಾವನೋ ವಿದ್ಯಾರ್ಥಿ ಪರೀಕ್ಷೆಯ ಕಾಲದಲ್ಲಿ "ಕಾಪಿ" ಮಾಡಿದನಂತೆ. ಸುಪರ್‌ವಾಯಿಜರು ತನ್ನ ಕರ್ತವ್ಯ ಮಾಡಿದ್ದಕ್ಕೆ ಎಲ್ಲ ವಿದ್ಯಾರ್ಥಿಗಳೂ ನಿರಾಹಾರ ಸತ್ಯಾಗ್ರಹಕ್ಕೆ ವ್ಹಾಯಿಸ್ ಚಾನ್ಸಲರ ಮನೆಯಮುಂದೆ ಸುರುವು ಮಾಡಿದರಂತೆ! ಇದಕ್ಕೂ ವಿಚಿತ್ರವಾದ ಉಪವಾಸಗಳು ನಡೆದಿವೆ. ಅದಕ್ಕೆ ಈ ಪ್ರೇಮಸತ್ಯಾಗ್ರಹವೇ ಸಾಕ್ಷೀ" ಅಂತಾ ಗಿರಾಕಿ ಒಪ್ಪಿತು.

"ಕಾಲಮಹಿಮೆ; ಸ್ವಾಮಿಾ, ಈಗಿನ ಕಾಲಮಹಿಮೆ ಅದು" ಅಂದು ನಾಗಪ್ಪ ಹೇಳಿದ. "ಅಲ್ಲದೇ ನಿರಾಹಾರಮಾಡುವ ನಿಯಮ ನಮ್ಮ ಧರ್ಮದಲ್ಲಿಯೂ ಇದೆಯಷ್ಟೇ? ವೈದಿಕ ಧರ್ಮದಂತೆ ನಡೆದರೆ ಅನೇಕ ಉಪವಾಸ ವ್ರತಗಳು ಬರುವವು. ಏಕಾದಶಿ, ಶಿವರಾತ್ರಿ, ಗೋಕುಲಾಷ್ಟಮಿ, ಶನಿಪ್ರದೋಷ ಇತ್ಯಾದಿ ದಿನಗಳಲ್ಲಿ ನಿರಾಹಾರಮಾಡುವುದು ನಮ್ಮ ಜನರ ಧರ್ಮವಾಗಿದೆಯಷ್ಟೇ. ಆದರೆ ಈ ವ್ರತಗಳ ನಿಜವಾದ ಕಾರಣವು ದೇಹಾರೋಗ್ಯದ ವಿಷಯವಾಗಿದೆ. ಸುಮ್ಮನೇ ಇದ್ದ ಮಾತು ಇದ್ದಂತೆ ಹೇಳಿದರೆ ಜನರು ಕೇಳುವುದಿಲ್ಲವೆಂದು ನಮ್ಮ ಪೂರ್ವಜರು ಪ್ರತಿಯೊಂದು ಕರ್ಮಕ್ಕೂ ಧರ್ಮದ ಬಣ್ಣ ಬಳಿದಿದ್ದಾರೆ. ಜಗತ್ತಿನಲ್ಲಿ ಸತ್ಯನೆಂದರೆ ಅತಿ ತೀಕ್ಷ್ಣವಾದ ಬೆಳಕಿದ್ದಂತೆ. ಅದನ್ನು ಇದ್ದಂತೆ ನೋಡಿದರೆ ಜನರಿಗೆ ಕಣ್ಣು ಕುಕ್ಕುವುದು. ಕಾರಣ ಆ ಬೆಳಕನ್ನು ಯಾವುದಾದರೊಂದು ಪರದೆಯ ಹಿಂದೆ ಹಿಡಿದು ತೋರಿಸಲಾಗುವುದು. ಮುಖ್ಯವಾಗಿ ಉಪವಾಸ-ನಿರಾಹಾರ ಮಾಡುವುದು ದೇಹಾರೋಗ್ಯಕ್ಕೆ. ನಮ್ಮ ಜೀರ್ಣಶಕ್ತಿಗೆ ಅದೊಂದು ಪುಟವಿದ್ದಂತೆ. ಆದರೆ ನಮ್ಮ ಜನರು ಏಕಾದಶೀ ದಿವಸ ಮಾಡುವ ನಿರಾಹಾರ ದಿನದ ಆಹಾರಕ್ಕಿಂತಲೂ ಹೆಚ್ಚು ಅಪಾಯಮಾಡುವಂತಹುದು. ಅನ್ನವೊಂದನ್ನು ಬಿಟ್ಟರೆ ಉಪವಾಸವಾಯಿತೆಂದು ಕಲ್ಪನೆ ನಮ್ಮ ಜನರದು. ಅದೂ ಅಲ್ಲದೇ ಈ ನಿರಾಹಾರ ವ್ರತವನ್ನು ಮುರಿದರೆ ಪಾಪಬರುತ್ತದೆಂದು ನಮ್ಮಲ್ಲಿ ಅನೇಕರು ತಮಗೆ ನಿರಾಹಾರಮಾಡುವ ಇಷ್ಟವಿಲ್ಲದಿದ್ದರೂ ಜನರ ಹೆದರಿಕೆಗೆ ಮಾಡುವ ನೋಗುಹಾಕಿ ತಮ್ಮ ನೈತಿಕ ಶಕ್ತಿಗೂ ಅಪಾಯಮಾಡಿಕೊಳ್ಳುತ್ತಾರೆ. ಒಂದೇ ಒಂದು ಸಂಗತಿ ಹೇಳುವೆನು ನಿಮಗೆ :

ನಾನು ಸರ್ವಿಸಿನಲ್ಲಿದ್ದಾಗ ಅನೇಕ ಹಳ್ಳಿಗಳಿಗೆ ಹೋಗುವ ಕೆಲಸ ಬೀಳುತ್ತಿತ್ತು. ಒಂದುಸಾರೆ ಹಳ್ಳಿಯಲ್ಲಿ ಪತ್ರಹಂಚಿ ಬಂದಮೇಲೆ ಹಳ್ಳಿಯ ಹನುಮಂತದೇವರ ಗುಡಿಯಲ್ಲಿ ಇಳಿದುಕೊಂಡಿದ್ದೆ. ನಮ್ಮೂರಿಗೆ ಬರಲಿಕ್ಕೆ ಆ ದಿನ ಮಳೆ ಹಿಡಿದುಬಿಟ್ಟಿತ್ತು. ಅಲ್ಲದೆ ಅಂದು ಏಕಾದಶಿ ಬೇರೆ ಇತ್ತು. ನಾನು ಉಪವಾಸ ಮಾಡಿದವನಲ್ಲ. ದಿನಾಲು ೮-೧೦ ಮೈಲು ತಿರುಗುವ ನನಗೆ ಚೆನ್ನಾಗಿಯೇ ಊಟ-ತಿನಸು ಬೇಕಾಗುತ್ತಿತ್ತು. ಆ ದಿನವೂ ಸಾಯಂಕಾಲ ಹಳ್ಳಿಯ ಗೌಡರು ಕಳುಹಿದ ಕೆನೆಮೊಸರನ್ನು ಅವಲಕ್ಕಿಯೊಂದಿಗೆ ತಿನ್ನುತ್ತ ಗುಡಿಯಲ್ಲಿ ಕುಳಿತಿದ್ದೆ. ರಾತ್ರಿ ೧೦ ಗಂಟೆಯ ಸುಮಾರಿಗೆ ಗುಡಿಗೆ ಮೂವರು ಆಚಾರ್ಯರು ಬಂದರು. ಅವರು ಮರುದಿವಸ ಬೆಳಗಾಗುವುದರೊಳಗೆ ಮುಂದಿನ ಹಳ್ಳಿಗೆ ಹೋಗಬೇಕಾಗಿದ್ದಿತಂತೆ. ನಾನು ಎದ್ದು ಆಚಾರ್ಯರಿಗೆ ಜಮಖಾನೆ ಗುಡಾರ– ಗೌಡರ ಮನೆಯಿಂದ– ತಂದುಕೊಟ್ಟೆ. ಅಲ್ಲದೆ ರಾತ್ರಿ ಫಲಾಹಾರದ ವಿಷಯವಾಗಿಯೂ ಕೇಳಿದೆ. "ಶಾಂತಂ ಪಾಪಂ! ಏಕಾದಶೀ ದಿವಸ ತಿನ್ನುವದೇ?" ಎಂದು ಅವರು, ನಾನು ಏನೋ ಒಂದು ದೊಡ್ಡ ಪಾಪಕರ್ಮವನ್ನೇ ಮಾಡಲು ಹೇಳಿದೆನೋ ಎನ್ನುವಂತೆ ಮಾತನಾಡಿ ಬಿಟ್ಟರು. "ಕ್ಷಮಿಸಬೇಕು ಮಹಾರಾಜ; ತಾವು ದಣಿದುಬಂದದ್ದರಿಂದ ಏನೋ ಫಲಾಹಾರ ಬೇಕಾದೀತೆಂದು ಕೇಳಿದೆ. ಇದೇ ಈ ಗೌಡರ ಮನೇಲಿ ಬೇಕಾದಷ್ಟು ಕೆನೆಮೊಸರು ಸಿಗುತ್ತದೆ. ಯಾವುದಕ್ಕೂ ಸಂಕೋಚಮಾಡಿಕೊಳ್ಳಬಾರದು." ಎಂದು ಹೇಳಿದೆ. ಆದರೆ ಆ ಮಹಾತ್ಮರು ಕೇಳಲಿಲ್ಲ. ನನ್ನ ಬ್ರಾಹ್ಮಣ್ಯದ ವಿಚಾರದಲ್ಲಿಯೆ ಅವರು ಶಂಕಿಸಹತ್ತಿದರು. "ಅದೂ ಬೇಡವಾದರೆ ನೀರನ್ನಾದರೂ ತಂದುಕೊಡಲೋ?" ಎಂದು ಕೇಳಿದೆ. "ಇಂದು ಏಕಾದಶೀ ಬ್ರಾಹ್ಮಣಾ, ನೀರೂ, ಆಹಾರಾ ಯಾವುದೂ ಮುಟ್ಟುವುದಿಲ್ಲ. ಸುಮ್ಮನೆ ಮಲಗಿಬಿಡು" ಎಂದು ಹೇಳಿದರು. ಸರಿ! 'ಅವರ ಧರ್ಮವೇನೋ, ಕರ್ಮವೇನೋ ಅವರಿಗೇ ಇರಲಿ' ಎಂದುಕೊಂಡು ನಾನು ಮಲಗಿಬಿಟ್ಟೆ.

* * *

ರಾತ್ರಿ ೧೨ ಗಂಟೆಯ ಸುಮಾರಿಗೆ ನನಗೆ ಎಚ್ಚರವಾಯಿತು. ಯಾರೋ ಸಾವಧಾನವಾಗಿ ತಮ್ಮತಮ್ಮೊಳಗೆ ಮಾತನಾಡುತ್ತಿದ್ದರು. ಗುಡಿಯ ಪೌಳಿಯಲ್ಲಿಂದ ಶಬ್ದ ಕೇಳಬರುತ್ತಿತ್ತು. ದೇವರ ಮುಂದಿನ ದೀಪ ತೀರ ಮಂದವಾಗಿ ಉರಿಯುತ್ತಿತ್ತು. ನನ್ನ ಬ್ಯಾಗಿನಲ್ಲಿ ೬-೭ ಮನಿಯಾರ್ಡರುಗಳಿದ್ದುದರಿಂದ ನನಗೆ ಹೆದರಿಕೆಯೆನಿಸಿತು. ಯಾರಾದರೂ ಮಸಲತ್ತುಮಾಡಿಯಾರೋ ಏನೋ ಎಂದು ಜಾಗ್ರತೆಯಿಂದ ಕಣ್ಣು ತೆರೆದು ಚೀಲವನ್ನು ಭದ್ರವಾಗಿರಿಸಿ ಹಾಗೆಯೇ ಮಾತುಬರುವ ದಿಕ್ಕಿನಕಡೆಗೆ ಕೇಳುತ್ತ ಕುಳಿತುಕೊಂಡೆ. ತುಂಬ ನಿಧಾನವಾಗಿ ಮಾತನಾಡುತ್ತಿದ್ದರು. "ಬೆಲ್ಲದ ಚೀಲ ಎಲ್ಲಿದೆ!" ಎಂದು ಒಂದು ವ್ಯಕ್ತಿ ಕೇಳುತ್ತಿತ್ತು. "ಹಸಿಬೆಯಲ್ಲಿಲ್ಲವೇ" ಎಂದು ಇನ್ನೊಂದು ವ್ಯಕ್ತಿ ಪ್ರತಿ ಪ್ರಶ್ನೆಮಾಡಿತು. "ನೀರು ತೆಗೆದುಕೊಂಡು ಬಾ' ಎಂದು ಒಂದು ವ್ಯಕ್ತಿ ಹೇಳಿತು. ಒಂದು ಚಿಕ್ಕ ಬಿಂದಿಗೆಯನ್ನು ತೆಗೆದುಕೊಂಡು ಗುಡಿಯಿಂದ ಹೊರಕ್ಕೆ ಒಂದು ವ್ಯಕ್ತಿ ಹೊರಟಿತು. ನಾನು 'ಯಾರು?' ಎಂದು ಕೇಳಬೇಕೆಂದಿದ್ದೆ. ಆದರೆ ವ್ಯಕ್ತಿಯು ಆಚಾರ್ಯರಲ್ಲಿಯದೊಂದು ಇದುದರಿಂದ ಸುಮ್ಮನೆ ಮಲಗಿದೆ. 'ನಾನು ನೀರನ್ನು ತಂದುಕೊಡಲಿಕ್ಕೆ ಕೇಳಿದಾಗ ಬೇಡವೆಂದ ಮಹಾತ್ಮರು ಈ ಅಪರಾತ್ರಿಯಲ್ಲಿ ತಾವೇ ಏತಕ್ಕೆ ಬಿಂದಿಗೆ ತೆಗೆದುಕೊಂಡು ಹೊರಟಿದ್ದಾರೆ?' ಎಂದು ಕೇಳಿಕೊಂಡೆ. 'ಸರಿ, ಅವರ ಧರ್ಮವೇನೋ,

ಪ್ರಕೃತಿಸ್ಸೃಹಿಲಿಗೆಯ ವಿಚಾರವಿರಬಹುದು, ಎಂದು ಕೊಂಡೆ. ಆದರೆ ನೀರು ಬೇಡವೆಂದಿದ್ದರಲ್ಲ ?.. ಉಪವಾಸದಿಂದ ನೀರಡಿಕೆ ಯಾಗಿರಬಹುದು.., ಎಂದುಕೊಂಡೆ. ' ಆದರೆ ಅದಕ್ಕೆ ಇಷ್ಟು ಸ್ವಾತ್ಯವೇಕೆ? ನೀರು ಕುಡಿಯುವುದು ಮಾನವನಿಗೆ ಸ್ವಾಭಾವಿಕ ಇಚ್ಛೆ. ಅದರಲ್ಲಿ ಏನೂ ಪಾಪವಿಲ್ಲವಷ್ಟೇ ? ಹೀಗಿದ್ದು ಆದೇಕೆ ಈ ಮಹಾತ್ಮರು ಗುಡಿಯ ಪೌಳಿಯಲ್ಲಿ ಹೊಕ್ಕು ಇಷ್ಟೊಂದು ಮುಚ್ಚುಮರೆಯಾಗಿ ಕೆಲಸನಡೆಯಿಸಿದ್ದಾರೆ ' ಎಂದು ಪುನಃ ಕೇಳಿಕೊಂಡೆ. ' ಓಹೋ, ಇದು ಏಕಾದಶಿಯ ನಿರಾಹಾರದ ಮಹಾತ್ಮೆ, ನನ್ನೆದುರಿಗೆ ನೀರುಕುಡಿದುಬಿಟ್ಟರೆ ನಾಳೆ ಮಠದ ಕೂಡ ಬಂದಾಗ ಆಚಾರ್ಯರ ಧರ್ಮವೇ ಮಾಯವಾದೀತು. ಎಂದು ಅವರ ಭೀತಿ ಇರಬಹುದು, ಎನಿಸಿತು. ವಾಸ್ತವವೇ ಕಂಡಿತು. ' ನಿಸರ್ಗನಿಯಮಗಳು ಧರ್ಮಮೂಢತೆಯಿಂದ ಮಾನವನಿಗೆ ಎಂತೆಂತಹ ನೈತಿಕ ಭೀತಿಗಳನ್ನು ತರುವವಲ್ಲ! ' ಎಂದುಕೊಂಡೆ. ಅಷ್ಟರಲ್ಲಿ ನೀರುತರಹೋದ ವ್ಯಕ್ತಿ ಪುನಃ ಗುಡಿಗೆ ಬಂದಿತು. ಸಾವಕಾಶವಾಗಿ ನನ್ನ ಕಡೆಗೆ ನೋಡುತ್ತ ಒಳಕ್ಕೆ ಹೊಕ್ಕಿತು. " ಅಷ್ಟೇಕೆ ತಡ ? ಹೊಂಡ ದೂರವಿದೆಯೋ?" ಎಂದು ಒಳಗಿನ ವ್ಯಕ್ತಿಯೊಂದು ಕೇಳಿತು. " ಹೊಂಡ ಇಲ್ಲೇ ಇದೆ; ಆದರೆ ನನಗೇಕೋ ಎಚ್ಚರತಪ್ಪಿದಂತಾಯಿತು. ಉಪವಾಸ ಮಾಡಿದ್ದು ನಾನು ಇಂದೇ " ಸರಿ, ಆ ವ್ಯಕ್ತಿ ಹೊಸದಾಗಿ ಧರ್ಮ ವ್ರತಗಳನ್ನು ಪ್ರಾರಂಭಮಾಡಿದ್ದಾಗಿ ಕಂಡುಬಂತು. ಎಷ್ಟು ಕದರಿಕೆ ಈ ಮಹಾತ್ಮರಿಗೆ ತಾವು ಮಾಡುವ ಈಗಿನ ಈ ಕಾರ್ಯ ಕ್ಕಾಗಿ ? ಹೊಟ್ಟೆಯು ಧರ್ಮವನ್ನೂ ಕೇಳುವುದಿಲ್ಲ, ಕರ್ಮವನ್ನೂ ಕೇಳುವುದಿಲ್ಲ. ನಿಸರ್ಗವು ಯಥಾಪ್ರಕಾರವಾಗಿ ತನ್ನ ಬೇಡಿಕೆ ಗಳನ್ನು ಪೂರಯಿಸಿಕೊಳ್ಳುತ್ತದೆ ಎಂದು ಯೋಚಿಸಿದೆ. ಐದಾರು ನಿಮಿಷಗಳವರೆಗೆ ಯಾವ ಸಪ್ಪಳವೂ ಮಾತೂ ಕೇಳಬರಲಿಲ್ಲ. ಆಚಾರ್ಯರು ನೀರು ಕುಡಿದು ಮಲಗಿರಬಹುದೆಂದು ಊಹಿಸಿದೆ. ಆದರೆ ಆ ಊಹೆ ತಪ್ಪಾಗಿದ್ದಿತು.

" ಹಾಳುಹೊಟ್ಟೆಯಿಂದ ನೀರುಕುಡಿಯಬೇಡೋ, ಸ್ವಲ್ಪ ನಿಂದಿರು. ಏನು ಜೀವ ಹೋಗ್ತಿದೇನು ನಿನಗೆ ? " ಎಂದು ಮೊದಲಿನ ವ್ಯಕ್ತಿ ನೀರು ತಂದ ವ್ಯಕ್ತಿಗೆ ಹೇಳುತ್ತಿತ್ತು. " ನೀರಡಿಕೆ ಬಹಳಾಗೇದ ನನಗ. ಇನ್ನೂ ಎಷ್ಟು ಹೊತ್ತದು ಕಲಿಸುವುದು ? " ಎಂದು ಕೇಳಿತು ನೀರು ತಂದ ವ್ಯಕ್ತಿ. ' ಇದೇನು ಕಲೆಸಹತ್ತಿದ್ದಾರೆ ಆಚಾರ್ಯರು ಅಪರಾತ್ರಿಯಲ್ಲಿ ? ' ಎಂದು ನನ್ನ ಕುತೂಹಲ ಹೆಚ್ಚಾಯಿತು. ಮೆಲ್ಲಗೆ ಹಾಸಿಗೆಯಿಂದೆದ್ದು ಗದ್ದಲಮಾಡದಂತೆ ಹೆಜ್ಜೆ ಇಕ್ಕುತ್ತ ಗುಡಿಯ ಪೌಳಿಯಲ್ಲಿ ಬಂದೆ. ಅಲ್ಲಿ ಒಂದು ಮೂಲೆಯಲ್ಲಿ ಅವಿತು ಕುಳಿತುಕೊಂಡೆ. ಆಚಾರ್ಯತ್ರಯರು ಒಟ್ಟಾಗಿ ಸೇರಿ ಏನೋ ಕಲಸುತ್ತಿದ್ದರು. " ಬೆಲ್ಲ ನೆಟ್ಟಗೆ ಪುಡಿ ಮಾಡಿಲ್ಲ, ಹಳಕು ಹಾಗೇ ಇವೆ, ನಿನ್ನ ಕೆಲಸವೇ ಹೀಗೆ, ಮೊದಲು ಸ್ವಲ್ಪ ಹವಣಿಸುವಿ " ಎಂದು ಮೊದಲಿನ ವ್ಯಕ್ತಿ ಹೇಳುತ್ತಿತ್ತು. ಈಗ ಹೊಳೆಯಿತು ನನಗೆ.. ಆಚಾರ್ಯರು ಹಸಿವೆ ಮುಚ್ಚಲಿಕ್ಕೆ ಹಸಿಬೆ ತೆಗೆದಿದ್ದಾರೆಂದು. ಮಗ್ಗುಲಲ್ಲಿ ದೊಡ್ಡದೊಂದು ಹಸಿಬೆ ಯಿಂದ ಏನೋ ಪದಾರ್ಥ ತೆಗೆಯುತ್ತಿತ್ತು ಆ ವ್ಯಕ್ತಿ. ಕತ್ತಲಲ್ಲಿ ಚೆನ್ನಾಗಿ ಕಾಣುತ್ತಿರಲಿಲ್ಲ. ಹಾಗೆಯೇ ದಿಟ್ಟಿಸಿ ನೋಡಿದೆ. ಹಿಟ್ಟಿನಂತೆ ಕಂಡಿತು. ವ್ಯಕ್ತಿ ಹೊತ್ತುಕೊಂಡ ಧೋತರದಲ್ಲಿ ಹಿಟ್ಟುಹಾಕಿ ಬೆಲ್ಲ ನೀರು ಕೂಡಿಸಹತ್ತಿತು. " ಉಂಡಿಗಳನ್ನು ಸಮವಾಗಿ ಮಾಡು. ನೀನೇ ದೊಡ್ಡದು ಮಾಡಿಕೊಳ್ಳಬೇಡ. ನನಗೆ ಗೊತ್ತದೆ ನಿನ್ನ ಆಟ " ಎಂದು ಎರಡನೆಯ ವ್ಯಕ್ತಿ ಹೇಳಿತು. " ನೀನೇ ಹಂಚು ಮಹಾರಾಯಾ, ನನ್ನ ಮೇಲೆ ಯಾಕೆ ಸಂಶಯ?" ಎಂದು ಮೊದಲನೆಯ ವ್ಯಕ್ತಿ ಎರಡನೆಯ ವ್ಯಕ್ತಿಯ ಕೈಯಲ್ಲಿ ಧೋತರ ಕೊಟ್ಟಿತು. ನೀರು ತಂದ ವ್ಯಕ್ತಿ ಪುನಃ ಎಚ್ಚರತಪ್ಪಿ ಬಿದ್ದಿತು. " ಏ, ಏ, ಏನಾಗಿದೆಯೋ ನಿನಗೆ ? ನಿಮ್ಮಂಥವರಿಂದ ಹೇಗೆ ಧರ್ಮ ಸಾಗಬೇಕೋ ? ಒಂದೊಂದು ಸಾರೆ ಹರಿವಾಸರ ಹನ್ನೆರಡರವರೆಗೆ ಹೋಗುತ್ತದೆ. ಆಗ ಏನು ಸತ್ತೇಬಿಡುವಿಯೋ ಏನು ? " ಎಂದು ಮೊದಲಿನ ವ್ಯಕ್ತಿ ಕೇಳಿತು. " ಇಂದಿನ ಉಪವಾಸದಿಂದ ಬದುಕಿದರಷ್ಟೇ ಮುಂದಿನ ವಿಚಾರ ? " ಎಂದು ಆ ವ್ಯಕ್ತೀ ವ್ಯಂಗ್ಯೋಕ್ತಿಯಲ್ಲಿ ಹೇಳಿತು ಸರಿ. ಈಗ ನನಗೆ ಪೂರ್ಣ ತಿಳಿಯಲಾರಂಭಿಸಿತು. ಏನೆಂದರೆ ಈ ಮಹಾತ್ಮರು ಉಪವಾಸಮಾಡುವುದು ಮಂದಿಗೆ ಆಚಾರ ತೋರಿಸಲಿಕ್ಕೆ ನಿಜ ಹೇಳಬೇಕೆಂದರೆ ಅವರ ಜೀರ್ಣಶಕ್ತಿ ಉಪವಾಸ ಬೇಡುವಂತಿ ದ್ದಿಲ್ಲ. ಆದರೆ ನೈತಿಕ ಭಯವೊಂದಿದೆಯಲ್ಲ. ಏಕಾದಶಿಯ ದಿವಸ ನಿರಾಹಾರ ಮಾಡದಿದ್ದರೆ ಬ್ರಾಹ್ಮಣರು ಹೇಗೆ ಆಗುವರು ? ತಮ್ಮಲ್ಲಿ ಆತ್ಮಸಂಯಮನ ಇಲ್ಲದಿದ್ದರೂ ಡಂಭಾಚಾರದ ಸಲುವಾಗಿ ಈ ವ್ಯಕ್ತಿತ್ರಯರು ಅಪರಾತ್ರಿಯಲ್ಲಿ ಕಳ್ಳರ ಹಾಗೆ ಗುಡಿಯ ಪೌಳಿ ಯಲ್ಲಿ ಬೆಲ್ಲಹಿಟ್ಟು ಕಲಸಹತ್ತಿದ್ದರು. ಅಬ್ಬಾ, ಆದೆಷ್ಟು ಜಾಗ್ರತೆ ಅವರದು ? ಆದೆಂಥ ಉಪಾಯ ಆ ಧೋತರದಲ್ಲಿ ಹಿಟ್ಟು ಕಲಿಸುವುದು ? ಅಂತೂ ಒಮ್ಮೆ ಕಲಸುವುದು ಮುಗಿಯಿತು. ಮೊದಲಿನ ವ್ಯಕ್ತಿ ಮೂರು ದೊಡ್ಡ ಉಂಡಿಗಳನ್ನು ಮಾಡಿದ. ಬಳಿಕ ಹಂಚುವ ಕೆಲಸ.

ಈ ಸಮಯಕ್ಕೆ ನನಗೆ ಒಂದು ವಿಚಾರ ಹೊಳೆಯಿತು. ನಾನೂ ಏಕೆ ಪಾಲುಕೂಡಬಾರದು ಎಂದು. ಆಚಾರ್ಯರಿಗೆ ತಕ್ಕ ನೈತಿಕ ಶಿಕ್ಷೆ ಮಾಡಬೇಕೆಂದು ನನಗೆ ಹೊಳೆಯಿತು. ಪ್ರವಾಸದಿಂದ ಹಸಿದು ಕಂಗಾಲಾಗಿ ಬಂದ ಆಚಾರ್ಯತ್ರಯರಿಗೆ ಗೌಡರ ಮನೆಯ ಕೆನೆಮೊಸರನ್ನುಣ್ಣಿಸಬೇಕೆಂದು ನಾನು ಅವರನ್ನು ಕೇಳಿದಾಗ " ಶಾಂತಂ ಪಾಪಂ" ಎಂದು ಉದ್ಗಾರ ತೆಗೆದರು. ಇಂತಹ ಈ ಮಹಾತ್ಮರಿಗೆ ತಮ್ಮ ಡಂಭಾಚಾರದ ಕರ್ಮಕ್ಕೆ ತಕ್ಕ ಪಶ್ಚಾತ್ತಾಪ ಮಾಡಿಸಿಯೇತೀರಬೇಕೆಂದು ನಿರ್ಧರಿಸಿದೆ. ಹಾಗೂ ಧರ್ಮವು ಊಟಮಾಡಿದರೂ ಉಳಿಯುವುದು ಶಕ್ಯವಿದೆಯೆಂಬುದನ್ನೂ ಕಲಿಸ ಬೇಕಾಗಿತ್ತು ಆ ಆಚಾರ್ಯರಿಗೆ. ಹಾಗೆಯೇ ಅನೇಕಬಗೆಯ ವಿಚಾರಮಾಡುತ್ತ ಮೂಲೆಯಲ್ಲಿ ಕುಳಿತು ಆಚಾರ್ಯರು ಕಲಸು ತ್ತಿದ್ದ ಬೆಲ್ಲಹಿಟ್ಟಿನ ಕಡೆಗೇ ನೋಡುತ್ತಿದ್ದೆ. ಮೂರು ಜನರಿಗೆ ಸಾಲುವಷ್ಟು ಹಿಟ್ಟನ್ನು ತುಂಬ ಸಂಭ್ರಮದಿಂದ ಅವರು ಕಲಸು ತ್ತಿದ್ದರು. " ತುಪ್ಪವೇ ಇಲ್ಲ ಹಿಟ್ಟಿಗೆ ! " ಎಂದು ಅವರು ನಡು ನಡುವೆ ಅಸಮಾಧಾನದಿಂದ ಉಸಿರುಬಿಡುತ್ತಿದ್ದರು. " ಪಾಲು ಸರಿಯಾಗಿ ಮಾಡಿರಿ " ಎಂದು ಒಂದು ವ್ಯಕ್ತಿ ಒಳ್ಳೇ ಸಂದೇಹ

ಯುಕ್ತ ವ್ಯಕ್ತಿ — ಕೇಳುವ ಆಚಾರ್ಯರಿಗೆ ಹೇಳಿತು. “ಆಚಾರ್ಯ್ರೇ, ನೀವು ಅವಸರ ಮಾಡಿಬಿಡು. ನನ್ನ ಮೇಲೆ ಯಾಕೆ ಸಿಟ್ಟು!” ಎಂದು ಕೇಳುವ ವ್ಯಕ್ತಿ ಹೇಳಿತು. ಸರಿ, ಆಚಾರ್ಯರು ಮೂರು ಮೂರು ಉಂಡಿಗಳನ್ನು ಸಿದ್ಧ ಮಾಡಿದರು. ಅನಂತರ ಎಲ್ಲರಿಗೆ ಹಂಚುವ ಕೆಲಸ. ಹಣತೆಯಲ್ಲಿಯ ಎಣ್ಣೆ ತೀರಿದುದರಿಂದ ದೀಪ ತಣ್ಣಗಾಗುವುದರಲ್ಲಿತ್ತು. ಆರಿಯೂ ಹೋಯಿತು. ಅವರೂ ಹಂಚುವ ಕೆಲಸ ತಡೆದುನಿಲ್ಲಲಿಲ್ಲ. ಇದೇ ಸಮಯವೆಂದು ಕತ್ತಲಲ್ಲಿ ಸಾವಕಾಶ ಸರಿಯುತ್ತ ಆಚಾರ್ಯತ್ರಯರಲ್ಲಿ ನಾನೊಬ್ಬ ಚತುರ್ಥನಾಗಿಬಿಟ್ಟೆ. ಹಂಚುವ ವೇಳೆಗೆ ಸರಿಯಾಗಿ ಕತ್ತಲಲ್ಲಿ ಕೈಚಾಚಿಬಿಟ್ಟೆ. ಒಂದು ದೊಡ್ಡದಾದ ಬೆಲ್ಲಾಹಿಟ್ಟಿನ ಉಂಡಿ ಕೈಯಲ್ಲಿ ಬಂದುಬಿಟ್ಟಿತು. ತೆಗೆದುಕೊಂಡವನೇ ಗದ್ದಲವಾಗದೇ ಮರಳಿ ಮೆಲ್ಲಗೆ ಹಿಂದಕ್ಕೆ ಸರಿದು ಮೂಲೆಯಲ್ಲಿ ಕುಳಿತುಬಿಟ್ಟೆ.

ಉಂಡಿ ಸಿಕ್ಕ ಎರಡು ವ್ಯಕ್ತಿಗಳು ನಿಧಾನವಾಗಿ ತಿನ್ನಲು ಪ್ರಾರಂಭಿಸಿದುವು. “ಇನ್ನೂ ಸ್ವಲ್ಪ ಬೆಲ್ಲಾ ಹಾಕಿದ್ದರ ನಡೀತಿತ್ತು” ಎಂದು ಒಂದು ವ್ಯಕ್ತಿ ಅಭಿಪ್ರಾಯಪಟ್ಟಿತು. “ಅದೆಂಥಾ ಬೆಲ್ಲಾ ತಿನ್ನೋವವಾ, ನೀನು? ತಂದ ಬೆಲ್ಲಾ ಎಲ್ಲಾ ಹಾಕಿಬಿಟ್ಟೇನಿ” ಎಂದು ಮರಳಿ ಉತ್ತರ ಬಂದಿತು. ಇನ್ನಿಷ್ಟು ಹಾಕಿದ್ರೇನು ತಿನ್ನದ್ಹಾಂಗ ಆಗತಿದ್ದಿಲ್ಲ” ಎಂದು ಪುನಃ ಅಭಿಪ್ರಾಯ. ಉಂಡಿ ಸಿಕ್ಕ ಈ ಎರಡು ವ್ಯಕ್ತಿಗಳೂ ತುಂಬ ಸಂಭ್ರಮದಿಂದ ತಿನ್ನಲು ಪ್ರಾರಂಭಮಾಡಿದ್ದುವು. ಉಂಡಿ ಸಿಕ್ಕದ ಮೂರನೆಯ ವ್ಯಕ್ತಿ “ನನ್ನ ಪಾಲು ಯಾಕೆ ಬರಲಿಲ್ಲ?” ಎಂದು ವಿಚಾರಿಸಿತು. ‘ಇನ್ನೂ ರುಚಿ ನೋಡುತ್ತಾರೆ ಕಾಣ್ತದೆ’ ಎಂದು ಸಮಾಧಾನಪಟ್ಟುಕೊಂಡಿತು. “ಎಲ್ಲಾ ಬೆಲ್ಲಾನೂ ಹಾಕೇಬಿಟ್ಟಿರೋ?” ಎಂದು ಬೆಲ್ಲದ ಗಿರಾಕಿ ಕೇಳಿತು. “ಅದೇನು ನೀನು ಗೊಡ್ಡ (ಕಟ್ಟಿರುವೆ) ದ ಜಾತೀಯನೇನೋ? ಇದಕ್ಕೂ ಹೆಚ್ಚಿಗೆ ಬೆಲ್ಲಾ ಹಾಕಿದರೆ ತಿಲ್ಲಿಕ್ಕೆ ಬರಧಾಂಗ ಆಗ್ತದ” ಎಂದು ಇನ್ನೊಂದು ವ್ಯಕ್ತಿ ತುಂಬ ಸಿಟ್ಟಿನಿಂದ ಉತ್ತರ ಕೊಟ್ಟಿತು. ಇವರ ಬೆಲ್ಲದ ಚರ್ಚೆಯಿಂದ ನನಗೆ ಇನ್ನೊಬ್ಬ ವ್ಯಕ್ತಿಯ ವಿಚಾರ ನೆನಪಾಯಿತು. ಅದನ್ನಷ್ಟು ಕೇಳಿಬಿಡಿರಿ” ಎಂದು ನಾಗಪ್ಪ ಹೇಳಿದ.

“ಆದರೆ ಆ ಮೂರನೆಯ ವ್ಯಕ್ತೀ ಸುಮ್ಮನೇ ಕುಳಿತುಬಿಟ್ಟನೇ? ತನ್ನ ಪಾಲು ಬೇಡಲಿಲ್ಲವೇ” ಎಂದು ಗಿರಾಕಿಗಳು ಕೇಳತೊಡಗಿದರು ತುಂಬ ಆತುರಭಾವದಿಂದ.

“ಆ ಮೂರನೆಯ ವ್ಯಕ್ತಿ ಇನ್ನೂ ಉಪವಾಸಕ್ಕೆ ಹೊಸಬನೆಂದು ಹೇಳಿದ್ದೇನಷ್ಟೇ? ‘ಇವರು ಇನ್ನೂ ಹಂಚುವ ಕೆಲಸ ಮುಗಿಸಿಲ್ಲ; ನನ್ನ ಬಾರಿಯೂ ಬಂದೀತು’ ಎಂದು ಚಾತಕನಂತೆ ನಿರೀಕ್ಷಿಸುತ್ತ ಕುಳಿತಿದ್ದ. ಆದರೂ ಈ ಬೆಲ್ಲದ ವಿಚಾರ ಬಂದಿದ್ದು ಅದನ್ನಷ್ಟು ಹೇಳಬೇಕೆನ್ನುತ್ತೇನೆ. ತಮಗೆ ವೇಳೆ ಇದ್ದರೆ..?”

“ಸರಿ, ಹೇಳಿಬಿಡ್ರಿ ನಾಗಪ್ನೋರೆ, ತಮ್ಮ ಯಾವ ಅನುಭವವೇ ಇರಲಿ, ಅದು ಕೇಳುವಹಾಗೆಯೇ ಇರುತ್ತವೆ. ಅಲ್ಲದೇ ನಮಗೆ ಈಗ ಬೇರೆ ಕೆಲಸವೂ ಇಲ್ಲ” ಎಂದು ಗಿರಾಕಿಗಳು ಅಭಿಪ್ರಾಯಪಟ್ಟರು.

“ಈ ಬೆಲ್ಲ ಸಾಕಷ್ಟಿಲ್ಲ ಎಂದು ಹೇಳಿದ ಆಚಾರ್ಯರಂತೆ ನಮ್ಮಲ್ಲಿ ಇನ್ನೊಬ್ಬ ಬ್ರಾಹ್ಮಣ ಇದ್ದ. ಅವನಿಗೆ ಸ್ವಲ್ಪ ಬೆಲ್ಲದ ಮೇಲೆ ಬಹಳ ಇಷ್ಟ. ಎಷ್ಟು ಬೆಲ್ಲಹಾಕಿದ್ದರೂ ಇನ್ನೂ ಸ್ವಲ್ಪ ಬೇಕಾಗಿತ್ತು ಎಂದು ಅನ್ನುತ್ತಿದ್ದ. ಇದನ್ನು ನೋಡಿ ಒಂದು ದಿನ ಮನೆಯವರು ಒಂದು ಬೆಲ್ಲದ ಮುದ್ದೆಯನ್ನು ಮಾಡಿ ಅದನ್ನು ಹಿಟ್ಟಿನಲ್ಲಿ ಉರುಳಾಡಿಸಿಕೊಟ್ಟು “ಈ ದಿನ ಹೇಗಿದೆ? ಬೆಲ್ಲ ಸಾಕಾಗಿದೆಯೋ?” ಎಂದು ಕೇಳಿದರು. “ಸ್ವಲ್ಪ ಚೆನ್ನಾಗಿದೆ, ಆದರೂ ಇನ್ನಿಷ್ಟು ಆಗಿದ್ದರೆ ಕೆಡುತ್ತಿದ್ದಿಲ್ಲ ರುಚಿ!” ಎಂದು ಆ ಬ್ರಾಹ್ಮಣ ಹೇಳಿದನಂತೆ. ಸರಿ, ಇನ್ನು ಇವರಿಗೆ ಬೆಲ್ಲದ ಮೇಲೇ ಇಡಬೇಕೆಂದು ಅವರ ಮನೆಯವರು ನಿರ್ಧರಿಸಿದರಂತೆ. ಇಂಥ ವ್ಯಕ್ತಿಯ ತಮ್ಮನೇ ಆಗಿರಬಹುದು ಈ ಆಚಾರ್ಯರಲ್ಲಿಯ ಆ ವ್ಯಕ್ತಿ. ಅಂತೂ ಏಕಾದಶಿಯ ಉಪವಾಸದಿಂದ ಬಲವಾಗಿ ಹೊಟ್ಟೆ ಹಸಿವೆಯಾಗಿದ್ದು ಬೆಲ್ಲ ಹೆಚ್ಚಾಗಲಿ ಕಡಿಮೆಯಾಗಲಿ ಯಾವುದೂ ನೋಡದಂತೆ ಉದರಾಗ್ನಿಗೆ ಬೆಲ್ಲದಾಹುತಿಯನ್ನು ಕೊಡಹತ್ತಿದರು. ಇಷ್ಟು ಹೊತ್ತಿಗೆ ಮೂರನೆಯ ವ್ಯಕ್ತಿ ಸ್ವಲ್ಪ ಸಂದೇಹಪಡಹತ್ತಿತು. ಕೇವಲ ರುಚಿ ನೋಡುವುದರಲ್ಲಿಯೇ ಕಲಸಿದ ಹಿಟ್ಟನ್ನೆಲ್ಲಾ ತಿಂದುಬಿಟ್ಟಾರು ಎಂದುಕೊಂಡು “ಉಂಡಿ ಕಟ್ಟುವುದು ಮುಗಿಯಿತೇ, ಆಚಾರ್ರೇ” ಎಂದು ಕೇಳಿತು. ಇವನ ಪ್ರಶ್ನೆಯ ಅರ್ಥವೇ ಉಳಿದಿಬ್ಬರಿಗೆ ಆಗಲಿಲ್ಲ. “ಏನಂದಿ?” ಎಂದು ಪ್ರಶ್ನೆ. ಬೆಲ್ಲಾ ಹಿಟ್ಟಿನ ಪಾಲುಮಾಡುವುದು ಆಯಿತೇ, ಎಂದು ಕೇಳಿದೆ, ಹಸಿವೆ ಬಹಳಾಗಿದೆ ಆಚಾರ್ರೇ, ಸ್ವಲ್ಪ ತೀವ್ರ ಕೊಟ್ಟುಬಿಡಿರಿ” ಎಂದು ಮೂರನೆಯ ವ್ಯಕ್ತಿ ತುಂಬ ದೈನ್ಯಸ್ವರದಿಂದ ಕೇಳಿತು. ಆ ವ್ಯಕ್ತಿಯ ಆ ಸ್ವರ ಕೇಳಿದಾಗ ನನಗೆ ತಡೆಯದಂತಾಯಿತು; ಕೂಡಲೇ ಅವನಿಗೆ ಉಂಡಿಯನ್ನು ಕೊಟ್ಟುಬಿಡಬೇಕೆಂದು ಮಾಡಿದೆ. ಆದರೆ ‘ಮುಂದಿನ ನಾಟಕದ ಪರಿಸಮಾಪ್ತಿಯನ್ನಷ್ಟು ನೋಡೇಬಿಡೋಣ’ ಎಂದು ಸುಮ್ಮಗಿದ್ದೆ. ಇದೇನು ಸುಖಾಂತ ನಾಟಕವಾಗುವುವೋ, ದುಃಖಾಂತ ನಾಟಕವಾಗುವುದೋ ಎಂದು ವಿಚಾರಿಸುತ್ತ ಕುಳಿತೆ, ಪುನಃ ವ್ಯಕ್ತಿ ತುಂಬಾ ಜೋರಿನಿಂದಲೇ ಕೇಳಿತು, “ಕೊಟ್ಟುಬಿಡಿರಿ ಆಚಾರ್ರೇ ಇದ್ದಹಾಗೆ ಕೊಟ್ಟುಬಿಡಿರಿ ನನ್ನ ಪಾಲು!” ಎಂದು.

ಆ ಆಚಾರ್ಯರಿಗೆ ದಿಗಿಲುಬಿತ್ತು. ಅದೇ ಆಗ ತಾನೇ ಮೂರು ಉಂಡಿಗಳನ್ನು ಮಾಡಿ ಎಲ್ಲರಿಗೂ ಕೊಟ್ಟು ತಿನ್ನುತ್ತ ಕುಳಿತಿದ್ದರು. ‘ಇವನು ಈಗೇಕೆ ತನ್ನ ಪಾಲಿನ ಉಂಡಿಯನ್ನು ಕೇಳುವುದು?’ ಎಂದು ಅವರು ಆಶ್ಚರ್ಯಪಡಹತ್ತಿದರು. “ಉಂಡಿ ಕಟ್ಟುವುದು ಆಯಿತೇ, ಎಂದು ಕೇಳುತ್ತೀಯಲ್ಲೋ? ಉಂಡೀ ತಿನ್ನೋದು ಕೂಡಾ ಮುಗೀತು?” ಎಂದು ಹೇಳಿದರು ಆಚಾರ್ಯರು. “ಹಾಸ್ಯ ಮಾಡುತ್ತಾನೆ ಏಳ್ರಿ, ಆಚಾರ್ರ; ಉಂಡೀ ತಿಂದು ತೇಗಲಿಕ್ಕೆ ಹತ್ಯಾನ” ಎಂದು ಎರಡನೆಯ ವ್ಯಕ್ತಿ ಹೇಳಿತು. “ಅದು ಹಸಿವೀ ತೇಗು ಆಚಾರ್ರ! ನನ್ನ ಪಾಲು ಸಿಕ್ಕಿಲ್ಲ. ತಾವಿನ್ನೂ ರುಚಿ ನೋಡ್ತೀರಿ ಅಂತ ಕೂತಿದ್ದೆ” ಅಂತ ಮೂರನೆಯ ವ್ಯಕ್ತಿ ಹೇಳಿತು. “ಇದೇ ಈಗ ಕೊಟ್ಟೆನಲ್ಲೋ ತೆಂಗಿನಕಾಯಿಯಂಥಾ ಉಂಡೀ?” ಎಂದು ಆಚಾರ್ರು ಹೇಳಿದರು. “ಇಲ್ಲ ಸ್ವಾಮಿ” ಎಂದು

ಮೂರನೆಯ ವ್ಯಕ್ತಿ ಹೇಳಿತು. "ಸುಳ್ಳು ಹೇಳ್ತೀಯೇನೋ, ಇದೇ ಈಗ ಮೂರು ಉಂಡೀ ಕಟ್ಟಿ ಎಲ್ಲರಿಗೂ ಕೊಟ್ಟಿದ್ದೇನೆ; ಹೌದೋ ಅಲ್ಲೋ?" ಎಂದು ಎರಡನೆಯ ವ್ಯಕ್ತಿಯನ್ನು ಕೇಳಿದರು. "ಅಹುದು ಆಚಾರ್ರೇ, ಇದೇ ಈಗ ತಿಂದಿದ್ದೇನೆ ನನ್ನ ಪಾಲು. ಗುಡಿಯಲ್ಲಿ ನಾಲ್ಕನೆಯವರು ಯಾರು ಬರಬೇಕು? ಆ ಪೋಸ್ಟ್‌ಮನ್ ಗುರುಗುರು ನಿದ್ರೆ ಹೊಡೀತಿದ್ದಾನೆ" ಎಂದು ಎರಡನೆಯ ವ್ಯಕ್ತಿ ಹೇಳಿತು. ನನಗೆ ತುಂಬಾ ನಗೆ ಬಂದಿತು. ಆದರೂ ಕಷ್ಟಪಟ್ಟು ಸಹಿಸಿ ನಗೆಯನ್ನು ನುಂಗಿದೆ. ಅನಂತರ ಆಚಾರ್ಯರಿಗೆ ಬೇರೆ ವಿಚಾರಗಳು ಬರಹತ್ತಿದುವು. ಗುಡಿಯಲ್ಲಿ ಭೂತಗಳ ಸಂಚಾರ ಇದೆಯೋ ಎಂದುಕೊಂಡರು. ಅಥವಾ ಇವನೇ ಇನ್ನೊಂದು ಉಂಡಿ ಬರಲಿ ಎಂದು ಈ ವೇಷಹಾಕಿದ್ದಾನೋ ಎಂಬುದಾಗಿ ವಿಚಾರಿಸಿದರು. ದೇವರ ಗುಡಿಯಲ್ಲಿ ಭೂತಸಂಚಾರವೇ? ಛೀ, ಇದು ನಿಜವಾಗಿಯೂ ಇವನ ಸುಳ್ಳುಹೇಳಿಕೆ, ಎಂದು ನಿರ್ಧರಿಸಿ ಕೊಂಡರು. "ಯಾರ ಮುಂದ ಹೇಳ್ತಿಯೋ ಈ ಕಥಿ? ತೆಂಗಿನ ಕಾಯಿಂಥಾ ಬೆಲ್ಲಾಹಿಟ್ಟಿನ ಉಂಡೀ ತಿಂದು ಮತ್ತೆ ನಮ್ಮಿದರಾಗ ಪಾಲು ಬೇಡ್ತಿಯಾ? ಇನ್ನಿಷ್ಟ ಬೇಕಾಗಿದ್ದರ ಉಂಡೀನಃ ಸಿಕ್ಕಿಲ್ಲ ಅಂತ ನೆಪಾ ತೆಗೆಯೂವೇನು?" ಎಂದು ಬಿಗುವಿನ ಭಾಷೆಯಲ್ಲಿ ಆಚಾರ್ಯರು ಕೇಳಿದರು. ಮೂರನೆಯ ವ್ಯಕ್ತಿಗೆ ಸ್ವಲ್ಪ ಕೋಪ ಬಂತು. ಅದೇನೋ ಹೇಳ್ತಾರಲ್ಲ ಹಸಿದ ಹಾರುವನನ್ನ ಉಂಡ ಮುಸಲನ್ನ ತಡಹಬಾರದೆಂತೆ, ಏಕಾದಶಿಯ ಉಪವಾಸ ಮಾಡಿದ್ದು ಅದೇ ಮೊದಲು ಈ ಮೂರನೆಯ ವ್ಯಕ್ತಿಗೆ. ಅಷ್ಟಲ್ಲದೆ ಕೆರೆಗೆ ನೀರು ತರಲಿಕ್ಕೆ ಅವನನ್ನೇ ಕಳುಹಿದ್ದರು. ಬೆಲ್ಲಾಹಿಟ್ಟಿನ ಆಶೆಯಿಂದ ಅವನು ಆ ಕೆಲಸ ಅಂತಹ ಕಗ್ಗತ್ತಲಿನಲ್ಲಿಯೂ ಮಾಡಿದ್ದ. ಆದರ ಮೇಲೆ 'ಈಗ ಕಲಸಿದ ಹಿಟ್ಟನ್ನೆಲ್ಲ ತಾನೇ ತಿಂದುಬಿಟ್ಟು ಪುನಃ ನಾನೇ ಸುಳ್ಳುಹೇಳುತ್ತೇನೆಂದು ಹೇಳುತ್ತಾರಲ್ಲ ಆಚಾರ್ರು' ಎಂದು ವಿಪರೀತ ಸಿಟ್ಟಿಗೆ ಬಂದನವನು. "ಯಾಕ್ರೀ ಆಚಾರ್ರ ಹ್ಯಾಂಗ ಕಾಣ್ತದ? ಎಂದ.

"ಈ ಕತ್ತಲದಾಗ ಏನೂ ಕಾಣೋದಿಲ್ಲೋ" ಎಂದರು ಆಚಾರ್ಯರು.

"ಈಗೇನು ನುಮ್ಮನೇ ನನ್ನ ಪಾಲು ಕೊಡ್ತಿರೋ, ಇಲ್ಲನೇ..?"

"ಮತ್ತೆಂಥಾ ಪಾಲೋ ನಿಂದು; ಅಲ್ಲದೆ ನಮ್ಮ ಪಾಲನ್ನೂ ತಿಂದುಬಿಟ್ಟಿದ್ದೇವೆ ಈಗ!"

"ಒಳ್ಳೇ ಕೆಲಸ ನಿಮ್ಮದು; ನನ್ನ ಕಡಿಂದಾ ನೀರು ತರಿಸಿ, ಬೆಲ್ಲಾ ಪುಡೀಮಾಡ್ಸಿ ನನಗೆ ಏನೂ ಕೊಡದೇ, ಪಾಲನ್ನಕ್ಕೆ ಸುಳ್ಳು ಬೇರೆ ಹೇಳ್ತೀನಿ ಅಂತ ಅಂತೀರಿ. ಇದು ನೀತಿಯೇನ್ರೀ?"

"ಸ್ವಲ್ಪ ಸಮಾಧಾನ ತಗೋ! ಏ, ಬಾಯಿ ಬಿಡಬ್ಯಾಡಾ ಹಾಂಗ! ನಾವೇನು ನಿನ್ನುಂಡೀ ಎತ್ತಿಹಾಕಿದವರ್ಹಾಂಗ ಮಾತಾಡ್ತೀಯಲ್ಲ!"

"ಇದ್ದಮಾತು ಇದ್ದಂತೆ ಹೇಳಬೇಕಾದ್ರ ತಾವು ಮಾಡಿದ್ದು ಅಷ್ಟೇನ್ರೀ, ಆಚಾರ್ರು! ನನ್ನ ಉಂಡೀ ನೀವಃ ಎತ್ತಿಬಾಯಾಗ ಹಾಕೀರಿ...."

ಅವನಿಗೆ ಮುಂದೆ ಮಾತನಾಡಲಿಕ್ಕಾಗಲಿಲ್ಲ. 'ಫಟ್' ಎಂದು ಸಪ್ಪಳ ಕೇಳಿತು. ಸರಿ, ಆಚಾರ್ಯರು ತೀರ ಸಿಟ್ಟಿಗೆದ್ದು ತಮ್ಮ ಮೇಲೆ ಸುಳ್ಳು ಆರೋಪ ಹೊರಸಿದ್ದಾನೆಂದು ಮೂರನೆಯ ವ್ಯಕ್ತಿಯ ಕೆನ್ನೆಯ ಮೇಲೆ ಹೊಡೆದುಬಿಟ್ಟರು. ವ್ಯಕ್ತಿ ಮೊದಲೇ ಉಪವಾಸದಿಂದ ನಿತ್ರಾಣನಾಗಿದ್ದು ಆಚಾರ್ಯರ ಹೊಡೆತಕ್ಕೆ ಜೋಲಿ ತಪ್ಪಿ ಬಿದ್ದುಬಿಟ್ಟಿತು. ಬಿದ್ದವನೇ ಮತ್ತೆ ಎದ್ದು ಆಚಾರ್ಯರ ಮೇಲೆ ಬಂದ. ಇಬ್ಬರೂ ಗುದ್ದಾಡುತ್ತ ನಾನು ಕುಳಿತ ಮೂಲೆಯ ಬಳಿ ಬರತೊಡಗಿದರು. ಇನ್ನು ಸುಮ್ಮನಿದ್ದರೆ ಈ ನಾಟಕವು ದುಃಖಾಂತವಾಗುವುದೇ ನಿಜವೆಂದುಕೊಂಡು, "ಸಾವಧಾನ ಮಹಾತ್ಮರೇ, ತಮ್ಮ ಉಂಡಿ ಇಲ್ಲಿ ಬಂದಿದೆ" ಎಂದು ಹೇಳಿದೆ.

ಇಬ್ಬರೂ ಜಗಳಬಿಟ್ಟು ಕಕ್ಕಾವಿಕ್ಕಿಯಾಗಿ ಒಬ್ಬರನ್ನೊಬ್ಬರು ನೋಡಹತ್ತಿದರು. ಅಷ್ಟರಲ್ಲಿ ಎರಡನೆಯ ವ್ಯಕ್ತಿ "ಈ ಗುಡಿಯಲ್ಲಿ ಭೂತಸಂಚಾರವಿದ್ದದ್ದು ಸತ್ಯ ಆಚಾರ್ರೇ" ಎಂದು ಹೆದರಿದ ದನಿಯಲ್ಲಿ ಹೇಳಿದ. "ಅಥವಾ, ನೈವೇದ್ಯಮಾಡದೆ ಹಾಗೇ ತಿಂದುಬಿಟ್ಟೆವಲ್ಲ ಎಂದು ಮಾರುತಿಯು ಕೋಪಿಸಿರಬಹುದು" ಎಂದು ಆಚಾರ್ಯರು ಅಭಿಪ್ರಾಯಪಟ್ಟರು. "ಕ್ಷಮಿಸಬೇಕು. ಮಾರುತಿರಾಯಾ, ಏಕಾದಶಿಯೆಂದು ನಿನಗೆ ನೈವೇದ್ಯಮಾಡಲಿಲ್ಲ. ಭಕ್ತರ ತಪ್ಪನ್ನು ಕ್ಷಮಿಸಬೇಕು" ಎಂದು ಆಚಾರ್ಯರು ನನ್ನ ಕಡೆಗೆ ತಿರುಗಿ ಕೈಜೋಡಿಸಿ ದಂಡವತ್ ಪ್ರಣಾಮಮಾಡಿಬಿಟ್ಟರು!

"ನಾನು ಆಂಜನೇಯನಲ್ಲ, ಆಚಾರ್ಯರೇ, ನಾನು ಬಡ ಪೋಸ್ಟ್‌ಮನ್. ತಮ್ಮ ಉಪವಾಸದ ನಾಟಕವನ್ನು ನೋಡ ಬೇಕೆಂದು ಕುಳಿತಿದ್ದೆ. ನಾನು ಕೇಳಿದಾಗಲೇ ಹೇಳಿಬಿಟ್ಟಿದ್ದರೆ, ಬರೀ ಹಿಟ್ಟೇ ಏಕೆ ಗೌಡರ ಮನೆಯಿಂದ ಕೆನೆಮೊಸರು ತಂದುಕೊಡು ತ್ತಿದ್ದೆ. ಹೊಟ್ಟೆಗೆ ಬೇಕಾದ ಆಹಾರಕ್ಕೆ ಇಷ್ಟು ಗೌಪ್ಯವಾಗಿ ಏಕೆ ನಿಮ್ಮ ವ್ಯವಹಾರ? ದಾಸರು ಹೇಳಿದ ಪದ ಕೇಳಿಲ್ಲವೋ "ಎಲ್ಲಾರು ಮಾಡುವದು ಹೊಟ್ಟೆಗಾಗಿ" ಎಂತ. ಅಲ್ಲದೇ ನಿರಾಹಾರ ಮಾಡುವುದೇ ಬೇಕಾಗಿದ್ದರೆ ನಿಮಗೆ ಈ ರೀತಿ ಮಾಡು ವುದರಿಂದ ನಿರಾಹಾರದ ಫಲ ಸಿಕ್ಕುವುದಿಲ್ಲ, ಇದೋ ತೆಗೆದು ಕೊಳ್ಳಿರಿ ನಿಮ್ಮ ಉಂಡಿ. ಆ ಬಡ ವ್ಯಕ್ತಿಗೆ ಕೊಟ್ಟುಬಿಡಿರಿ. ನನಗೆ ನಿಮ್ಮ ಹಿಟ್ಟಿನ ಉಂಡಿ ಬೇಕಾಗಿದ್ದಿಲ್ಲ. ತಮ್ಮ ನಿರಾಹಾರದ ಪರ್ಯವಸಾನ ನೋಡಬೇಕಾಗಿತ್ತು. ಇನ್ನೂ ಸ್ವಲ್ಪ ತಡಮಾಡಿ ದ್ದರೆ ಸುಮ್ಮನೇ ಮೈ-ಕೈ ನೋವು ಮಾಡಿಕೊಳ್ಳುತ್ತಿದ್ದಿರಿ. ಕಾರಣ ಇಷ್ಟಕ್ಕೇ ತಮ್ಮ ರಂಗದಮೇಲೆ ಪರದೆಬಿಟ್ಟಿರುವೆನು" ಎಂದು ಮೂರನೆಯ ವ್ಯಕ್ತಿಗೆ ಉಂಡಿಯನ್ನು ಕೊಟ್ಟೆ. "ಬುಭುಕ್ಷಿತಃ ಕಿಂ ನ ಕರೋತಿ", ಎನ್ನುವಂತೆ ಆ ವ್ಯಕ್ತಿ ಉಂಡಿ ಸಿಕ್ಕ ಕೂಡಲೇ ಗಬಗಬನೆ ತಿನ್ನಲು ತೊಡಗಿದ. ಆದರೆ ಆಚಾರ್ಯ ರಿಗೆ ಮತ್ತೊಂದು ಭಯ! ಈ ಹಾಳು ಪೋಸ್ಟ್‌ಮನ್ ನಾಳೆ ನಮ್ಮ ಮಠದ ವಿಷಯಕ್ಕೆ ಈ ದಿನದ ಕತೆ ಹೇಳಿ ಎಲ್ಲಿ ಗಿಲ್ಲಾಮಾಡು ತ್ತಾನೋ" ಎಂದು.

(೩೬೫ನೆಯ ಪುಟ ನೋಡಿರಿ)

ಸಹಶಿಕ್ಷಣ



(ಶ್ರೀ. ಟಿ. ರೂಬಿನ್‌ರ ಬರೆಹದ—ಖಂಡನಾತ್ಮಕ ವಿಮರ್ಶೆ)

★

ಸ್ತ್ರೀಶಿಕ್ಷಣ, ಸಹಶಿಕ್ಷಣಗಳನ್ನು ಕುರಿತು ಮಾತನಾಡುವವರು ಕೇವಲ ಒಂದೆ ಶಿಕ್ಷಣಶಾಸ್ತ್ರದ ದೃಷ್ಟಿಯಿಂದ ಮಾತನಾಡಿದರೆ ಆಗದು. ಅದೆಲ್ಲ ಚೆನ್ನಾಗಿ ತಿಳಿಯಬೇಕಾದರೆ ಇಂದ್ರಿಯ ವಿಜ್ಞಾನಶಾಸ್ತ್ರ, ಕಾಮಶಾಸ್ತ್ರ, ಮನೋವಿಶ್ಲೇಕ್ಷಣಶಾಸ್ತ್ರ, ಸಮಾಜಶಾಸ್ತ್ರ, ಸುಪ್ರಜಾನಿರ್ಮಾಣಶಾಸ್ತ್ರ, ಆನುವಂಶಶಾಸ್ತ್ರ ಇವೆಲ್ಲವುಗಳ ಅಭ್ಯಾಸ ಅನುಭವ ಖಂಡಿತವಾಗಿ ಬೇಕು.

★

ಪೂರ್ವಾರ್ಧ

ಶ್ರೀ. ಜೋಶಿ ಶಾಮಾಚಾರ್ಯ

ಅವರಿಂದ

'ಜಯಂತಿ'ಯ ಆಗಸ್ಟ್ ಸಂಚಿಕೆಯಲ್ಲಿ, 'ಆಕ್ಷೇಪ'ಕ್ಕೆ ಉತ್ತರರೂಪವಾಗಿ ಬಂದ, 'ಸಹಶಿಕ್ಷಣ' ಎಂಬ ಲೇಖವೆ ಈ ಬರೆಹಕ್ಕೆ ಪ್ರೇರಕವಾಗಿದೆ. ಸುಮಾರಾಗಿ ಇದೀಗಿನ ಎಲ್ಲ ಬರೆಹಗಳು, 'ನಮ್ಮ ಸಾಮಾಜಿಕ ಪ್ರಗತಿ' ಯಾರವೊ 'ಜಾಗ್ರತಿ', 'ಇಂದಿನ ಹೊಸ ಜೀವನದ ಶಕ್ತಿ' ಎಲ್ಲಿಯೊ 'ಅಂಕುರಿಸಿದ ದಿವ್ಯ ಭವಿಷ್ಯದ ಆಶೆ', ಎಂದು ಮೊದಲಾಗಿಯೆ ಪ್ರಾರಂಭವಾಗಬೇಕಾಗಿದ್ದು, ಈ ಶಬ್ದಗಳೆಲ್ಲ ಪ್ರಾರಂಭದ 'ಶ್ರೀ'ಕಾರ ವಿದ್ದಂತೆ ಇರುತ್ತವೆ. ಇವಿರದೆ ಬರೆಹಕ್ಕೆ ಮಂಗಳವಿಲ್ಲ. ಶ್ರೀಮಾನ್ ರೂಬಿನ್‌ರು ಬರೆದ 'ಸಹಶಿಕ್ಷಣ ಎಂಬ ಬರೆಹದ ಮೊದಲಿಗೂ ಈ 'ಶ್ರೀ' ಕಾರವು ಇದ್ದೆ ಇದೆ. ಈ ಮೊದಲು ನಾನು, ಜಯಂತಿಯಲ್ಲಿಯ 'ಅಪೌರುಷೇಯಾಃ ವೇದಾಃ' ಎಂಬ ಬರೆಹಕ್ಕೆ ಉತ್ತರಕೊಡುವಾಗ, ಈ ವಿಷಯಗಳ ಬಗೆಗೆ ಸ್ವಲ್ಪಮಟ್ಟಿಗೆ ಚರ್ಚಿಸಿ ಇರುವುದರಿಂದ, ಮತ್ತೆ ಮತ್ತೆ ಅದನ್ನೇ ಕೊಚ್ಚುತ್ತ ಕುಳಿತುಕೊಳ್ಳುವುದನ್ನು ಮಾಡಲಾರೆ. ಎಂತಲೆ ಹೇಳಬೇಕಾದ ಮಾತನ್ನೆ ಹೇಳಿಬಿಡುವೆ.

ಶ್ರೀ. ರೂಬಿನ್‌ರು ನಿಜವಾಗಿಯೂ ಮಹತ್ವದ್ದೂ, ಅವಸರದ್ದೂ, (ಪ್ರಾಸಂಗಿಕ) ಆದ 'ಸಹಶಿಕ್ಷಣ'ದಂತಹ ವಿಷಯವನ್ನು, ಬಹಳೆ ಅವಸರದಿಂದ ನಿರ್ಣಯಿಸಿರುವರೆಂದು ತೋರುತ್ತದೆ. ಸ್ತ್ರೀ ಶಿಕ್ಷಣವಾಗಲಿ, ಸಹಶಿಕ್ಷಣವಾಗಲಿ, ನಿಜವಾಗಿಯೂ ಬಹಳ ಮಹತ್ವದ್ದು; ತುಂಬ ತೊಡಕಿನದು. ಆಳವಾದ ನರ-ನಾರಿ ತತ್ವದ ವಾಸ್ತವ ಸ್ವರೂಪವನ್ನರಿತು ನಿರ್ಣಯಿಸಬೇಕಾದುದು. ಅದು ತಿಳಿದು ಬರಬೇಕಾದರೆ, 'ಇಂದ್ರಿಯ ವಿಜ್ಞಾನ ಶಾಸ್ತ್ರ,' 'ಕಾಮಶಾಸ್ತ್ರ,' 'ಮನೋವಿಶ್ಲೇಷಣ ಶಾಸ್ತ್ರ,' 'ಸಮಾಜಶಾಸ್ತ್ರ,' 'ಸುಪ್ರಜಾನಿರ್ಮಾಣಶಾಸ್ತ್ರ''ಆನುವಂಶ ಶಾಸ್ತ್ರ' ಮುಂತಾದ ಅನೇಕ ಶಾಸ್ತ್ರಗಳ ಸಹಾಯ ಬೇಕು. ಹೆಂಗುಸರಾಗಲಿ ಗಂಡಸರಾಗಲಿ, ಯಾವಬಗೆಯಿಂದ ವಿಷಯಗಳನ್ನು ತಿಳುಹಿಸಿದರೆ, ಅವರು ಒಳಿತಾಗಿ ಗ್ರಹಿಸಿಕೊಳ್ಳಬಹುದೆಂಬುದಿಷ್ಟನ್ನು ಮಾತ್ರ ಕಂಡು ಹೇಳುವ, ಕೇವಲ ಅಧ್ಯಾಪನ ಶಾಸ್ತ್ರಜ್ಞನ ಕೆಲಸವಿದಲ್ಲ. ಇಂಥವನು ಪಡುತ್ತಿರುವ- ಯಾವುದೊಂದು ಅಭಿಪ್ರಾಯಕ್ಕೆ ಮಹತ್ವವೂ ಇಲ್ಲ.

ಲೇಖಕರು ಸಹಶಿಕ್ಷಣದ ಮೇಲೆ ಬರುತ್ತಿರುವ ಆಕ್ಷೇಪಣೆಗಳನ್ನು ಖಂಡಿಸಲು ತೋರಿಸಿದ ಕಾರಣಗಳು, ಆಧಾರಕ್ಕಾಗಿ ಎತ್ತಿಕೊಂಡ ತಜ್ಞರ ಅಭಿಪ್ರಾಯಗಳು, ಇವನ್ನೆಲ್ಲ ಒಂದೊಂದಾಗಿ ನೋಡಬೇಕು ನಾವೀಗ. ಅವರ ಉತ್ತರಕ್ಕಾಗಿ ಮೊದಲಿಗೆ ತಕ್ಕೊಂಡ ಆಕ್ಷೇಪಣೆಯೆಂದರೆ "ಸಹಶಿಕ್ಷಣದ ಪದ್ಧತಿ ಪರಕೀಯವಿದ್ದು, ನಮ್ಮ ಪರಂಪರೆಯನ್ನು ಹಾಳುಮಾಡುತ್ತದೆ. ಎಂಬುದು ಪರಕೀಯವಿದ್ದರೇನು ? ಅದರ ಉಪಯುಕ್ತತೆಯೂ ಹಿತಕಾರಿತ್ವವೂ ನಿರಾತಂಕವಾಗಿ ಸಿದ್ಧಿಸುತ್ತಿದ್ದರೆ, ನಮ್ಮ ಪರಂಪರೆಗೆ ವಿರುದ್ಧವಾಗುತ್ತಿದ್ದರೂ

ತಕ್ಕೊಳ್ಳಬೇಕೆಂಬ ಮಾತು ಎಲ್ಲರೂ ಒಪ್ಪಬೇಕಾಗುದೆ. ಆದರೆ ತಮ್ಮ ಪರಂಪರೆಯನ್ನು ಬಿಸುಟುವುದಕ್ಕೆ ಮೊದಲು, ಆ ಉಪಯುಕ್ತತೆಯನ್ನೂ, ಹಿತಕಾರಿತ್ವವನ್ನೂ, ಅತ್ಯಂತ ಸಂಶಯದ ದೃಷ್ಟಿಯಿಂದ ನೋಡಬೇಕು. ಕಠೋರತನದಿಂದ ಪರೀಕ್ಷಿಸಿಕೊಳ್ಳಬೇಕು. ಪರದೇಶದ ಬಿರುಗಾಳಿಯಿಂದ ಬಂದ ಈ ಸಹಶಿಕ್ಷಣವು, ಗ್ರಹಿಸಲು ಅರ್ಹವಾಗಿದೆಯೆ ಅಥವಾ ಕೇವಲ ಕಣ್ಣಿಗೆ ಮಣ್ಣನ್ನೆರಚುತ್ತಿದೆಯೆ— ಎಂಬುವನ್ನು ಚೆನ್ನಾಗಿ ನೋಡಬೇಕು, ಏಕೆಂದರೆ, ಇದ್ದುದನ್ನು ಕಳೆದುಕೊಂಡು, ಬಂದುದರಲ್ಲಿ ಲಾಭವಿರದೆ, ಹಾನಿಗೆ ಮಾತ್ರ ಗುರಿಯಾದಂತಾಗಲಿಕ್ಕಿಲ್ಲವಷ್ಟೆ !

ಬರೆಹಗಾರರು ಇದರ ಮುಂದೆ ಎರಡನೆಯದೆಂದು, ಸ್ತ್ರೀ-ಪುರುಷರ ಕಾರ್ಯವಿವಿಧತೆಯ ಆಕ್ಷೇಪಣೆಯನ್ನು ಉತ್ತರಕ್ಕಾಗಿ ಇಟ್ಟುಕೊಂಡಿದ್ದಾರೆ. "ಸ್ತ್ರೀ-ಪುರುಷರ ಕಾರ್ಯಭಿನ್ನತೆಯನ್ನನುಸರಿಸುವ ಮುಂದಿನ ಅವರ ಜೀವನ ಕ್ರಮದಲ್ಲಿ, ಉಪಯುಕ್ತವಾದ ಜ್ಞಾನವಾವುದೆಂಬುವನ್ನು ನೋಡದೆಯೆ ಒಂದೇಬಗೆಯ ಶಿಕ್ಷಣಕೊಡುವುದೆಂದರೆ ತಪ್ಪು.' ಎಂಬ ಆಕ್ಷೇಪಣೆಯ ಮೇಲೆ, "ಮನುಷ್ಯ ಸ್ವಭಾವದ ಪರಿಚಯದ ಅಭಾವ; ಶಿಕ್ಷಣ ಸ್ವರೂಪದ ಅಜ್ಞಾನ" ಎಂಬೆರಡು ಆರೋಪಗಳನ್ನು ಹೊರಿಸಿದ್ದಾರೆ. ಬಳಿಕ "ಮಾನವ ಹೃದಯದ ಅಂತರ ರಚನೆಯ ಗುಣಾಂಶಗಳು, ಸ್ತ್ರೀ-ಪುರುಷರಿಬ್ಬರಿಗೂ ಸಾಮಾನ್ಯವಾಗಿರುವುವೆಂದೂ, ನಮ್ಮ ಆರ್ಥಿಕ ಹಾಗೂ ಬೌದ್ಧಿಕ ಆಶೆ-ಆಕಾಂಕ್ಷೆಗಳು, ಬಹುತರವಾಗಿ ಒಂದೇಬಗೆಯವಿರುವುವೆಂದೂ, ವಿಜ್ಞಾನ- ವ್ಯವಹಾರಗಳೆರಡೂ ಕೂಡಿಯೆ ನಮಗೆ ಕಲಿಸುವವು. ಎಂದು ಸಿದ್ಧಾಂತವಾಕ್ಯವನ್ನಿಟ್ಟು, ಇದಕ್ಕೆ ಪ್ರಮಾಣವೆಂದು, 'ಪ್ರಜಾಸತ್ತಾತ್ಮಕ ರಾಜ್ಯ' ಎಂಬ ಪುಸ್ತಕದಲ್ಲಿ ಪ್ಲೇಟೋನು ಹೇಳಿದ "ಹೆಣ್ಣುಮಕ್ಕಳು, ಗಂಡಸರಿಗೆ ಸಮಾನ ಸ್ವಭಾವ- ಗುಣವುಳ್ಳವರು" ಎಂಬ ಮಾತನ್ನು ಉದಾಹರಿಸಿದ್ದಾರೆ. ಆದಕಾಗಿ, ವಿಜ್ಞಾನಕ್ಕೆ ಸಾಕ್ಷಿಯಾಗಿ ಬಂದ ಪ್ಲೇಟೋನ ವಾಸ್ತವ ಸ್ಥಾನವು, ವಿಜ್ಞಾನದ ಕ್ಷೇತ್ರದಲ್ಲಿ ಎಷ್ಟಿದೆಯೆಂಬುದನ್ನು ನೋಡಹೋದರೆ, ಪ್ಲೇಟೋನು ಹುಟ್ಟಿದ್ದು ಕ್ರಿ. ಪೂ. ೪೨೭ ಅಥವಾ ೪೨೮ ವರುಷಗಳ ಸುಮಾರಿಗೆ; ಎಂದರೆ ೨ ಸಾವಿರ ವರುಷಗಳಾಚೆ. ಇಂದಿನ ವಿಜ್ಞಾನದ ಗಂಧವೂ ಅವನಿಗೆ ಇದ್ದಿರಲಿಲ್ಲ. ಅಂದು ಅವನು ಹೇಳಿದುದನ್ನು ಇಂದು ಪ್ರಮಾಣವೆಂದು ತಕ್ಕೊಳ್ಳುವುದಾದರೆ, ಇಂದಿನ ವಿಜ್ಞಾನದ ಒರೆಗಲ್ಲಿಗೂ ಅವನ ಸಿದ್ಧಾಂತಗಳು ಇಳಿಯಬೇಕು. ಅವನು ಅನೇಕ ವಿಷಯಗಳ ಬಗೆಗೆ ಬರೆದುದೇನೊ ನಿಜ. ಆದರೆ, ಅವನು ಅವುಗಳ ಬಗೆಗೆ ಮಾಡಿದ ಸಿದ್ಧಾಂತಗಳ ಬಹುಭಾಗಕ್ಕೆ ಇಂದಿನ ವಿಜ್ಞಾನದ ದೃಷ್ಟಿಯಿಂದ ಯಾವ ಬೆಲೆಯೂ ಇಲ್ಲ. ಮೇಲಾಗಿ, ಪ್ಲೇಟೋನು ವಿಜ್ಞಾನಿಯಲ್ಲ; ಅವನೊಬ್ಬ ತತ್ತ್ವಜ್ಞಾನಿ ಎಂದು ಸಾಮಾನ್ಯವಾಗಿ ಹೇಳಬಹುದು. ಅವನನ್ನು ಕೆಲವು ವಿಶೇಷಣಗಳಿಂದ ಹೇಳಬೇಕಾದರೆ ಒಂದು ಪಂಥದ (ಸಾಕ್ರೇಟಿಸನ ಪಂಥ ಪ್ರಚಾರಕ; ನೀತಿ ತತ್ತ್ವಗಳ ಉಪದೇಶಕ; ಅತೀಂದ್ರಿಯ ಜ್ಞಾನ ವಿಷಯದಲ್ಲಿಯ ಒಬ್ಬ ಕಲ್ಪನಾವಾದಿ ; ಸಮಾಜಶಾಸ್ತ್ರದಲ್ಲಿ ಪರಿಶ್ರಮಪಟ್ಟವ ಎಂದು ಹೇಳಬಹುದು. ಇಂದಿನ ವಿಜ್ಞಾನಶಾಸ್ತ್ರದ ಅಭ್ಯಾಸಿಗಳು ಕೂಡ, ವಿಜ್ಞಾನೇತಿಹಾಸದಲ್ಲಿ 'ಪ್ಲೇಟೊ' ಇವನಿಗೆ ಯಾವ ಸ್ಥಾನವೂ ಇಲ್ಲವೆಂದು ಸ್ಪಷ್ಟವಾಗಿ ಹೇಳುತ್ತಿದ್ದಾರೆ, ಇರಲಿ. ಪ್ಲೇಟೋನ ಅಭಿಪ್ರಾಯವನ್ನು ಬದಿಗಿಟ್ಟು 'ಮಾನವ ಹೃದಯದ ಆಂತರ ರಚನೆಯ ಗುಣಾಂಶಗಳು' ಸ್ತ್ರೀ – ಪುರುಷರಲ್ಲಿ ಸಮಾನವಾಗಿಯೆ ? .. ಎಂಬುದನ್ನಿನ್ನು ನೋಡೋಣ.

ಸ್ತ್ರೀ—ಪುರುಷರ ದೇಹಗಳ ಮಟ್ಟಿಗಂತು ಬಾಹ್ಯ ಮತ್ತು ಆಂತರ ರಚನೆಯಲ್ಲಿ ಅದೆಷ್ಟೋ ಭಿನ್ನತೆಯಿದೆಯೆಂಬುದನ್ನು ಲೇಖಕರೂ ಒಪ್ಪುತ್ತಿರಬೇಕು. ಆ ವಿಭಿನ್ನತೆಗೆ ಪ್ರಜೋತ್ಪಾದನದ ಕಾರ್ಯದಲ್ಲಿಯ ದೈಹಿಕ ಕಾರ್ಯಭೇದವೇ ಕಾರಣವೆಂಬುದನ್ನೂ ಅವರು ಅರಿತಿರಲು ಸಾಕು. ಆದಕ್ಕಾಗಿ ದೈಹಿಕಭೇದವನ್ನು ಬಿಟ್ಟು, ಮನೋಘಟನೆಯ ಕಡೆಗೆ ನೋಡೋಣ.



ಹೆಂಗುಸರಕಾರ್ಯ ಶಿಶುಸಂಗೋಪನ-ಗೃಹವ್ಯವಸ್ಥೆಗಳಷ್ಟೇ ಇರುವಾಗ ಗಂಡುಸರ ಜೊತೆಯ ಶಿಕ್ಷಣ ಅವರಿಗೇತಕ್ಕೆ ಬೇಕು ?

ಇಲ್ಲಿ ಮನಸ್ಸಿನ ಭಿನ್ನತೆ-ಅಭಿನ್ನತೆಗಳನ್ನು ನೋಡುವುದಾದರೆ ಮನಸ್ಸು ಎಂಬುದಿದು ಅವ್ಯಕ್ತವಿರುವುದರಿಂದ ಅದರ ಬಗೆಗಳನ್ನು ಮನೋಧರ್ಮದ ಮೇಲಿಂದ ಗುರುತಿಸಬೇಕಾಗುವುದು; ಈ ಧರ್ಮಕ್ಕೂ, ಮನೋಭಾವನೆಗಳಿಗೂ, ನಿಕಟಸಂಬಂಧವಿದ್ದು, ಕಾಮ-ಕ್ರೋಧಾದಿ ವಿಕಾರಗಳೆಲ್ಲ ಭಾವನೆಗಳಿಂದಲೆ ಹೊರಡುವುವು. ಎಂದರೆ, ಒಂದು ಬಗೆಯಿಂದ ವಿಕಾರಗಳೆಲ್ಲ ಭಾವನೆಗಳ ವ್ಯಕ್ತಸ್ವರೂಪವಿದ್ದಂತಿವೆಯೆನ್ನಬಹುದು. ಹೀಗಾದರೆ, ವಿಕಾರಗಳ ಮೂಲಕ ಭಾವನೆಗಳು, ಭಾವನೆಗಳ ಮೂಲಕ ಮನೋಧರ್ಮ, ಆ ಧರ್ಮದ ಮೂಲಕ ಮನೋಘಟನೆ, ಹೀಗೆ ಕ್ರಮದಿಂದ ನಿರ್ಣಯಿಸಿಕೊಳ್ಳಬೇಕಾಗುವುದು. ಈ ದೃಷ್ಟಿಯಿಂದ ನೋಡಿದರೆ ಆ ಸ್ತ್ರೀ-ಪುರುಷರ ಮನಸ್ಸುಗಳು ಪರಸ್ಪರ ವಿರುದ್ಧ ಧರ್ಮಗಳಿಂದ ಆಳವಟ್ಟಿವೆಯೆಂದೂ, ಆ ಧರ್ಮಗಳು ಕೆಲವು ಮೃದುತತ್ತ್ವಕ್ಕೂ ಮತ್ತೆ ಕೆಲವು ಕಠಿನತತ್ತ್ವಕ್ಕೂ ಸಂಬಂಧಿಸಿ ಇವೆಯೆಂದೂ ಕಂಡುಬರುವುದು. ಒಂದಕ್ಕೊಂದು ವಿರುದ್ಧ ಉದಾಹರಣೆಯನ್ನೆ ತೆಕ್ಕೊಂಡು ನೋಡುವುದಾದಲ್ಲಿ, ಪ್ರೇಮ-ಪರಾಕ್ರಮ, ದಯಾಳುತ್ವ-ನಿಷ್ಠುರತೆ, ಭೀತಿ-ಧೈರ್ಯ, ಚಂಚಲತೆ-ಶಾಂತಿ, ಉತ್ಸಾಹ-ಆಲಸ್ಯ, ಲೋಭ-ಔದಾರ್ಯ ಇವುಗಳನ್ನು ಎತ್ತಿ ತೋರಿಸಬಹುದು. ಈ ಬಗೆಯಿಂದ ಅವರೀರ್ವರ ಮನೋರಚನೆಯನ್ನು ಪರೀಕ್ಷಿಸಿದರೆ, ಸ್ತ್ರೀಯರ ಮನಸ್ಸು ಸ್ವಾಭಾವಿಕವಾಗಿಯೆ ಕೋಮಲವಿರುವುದೆಂದು ಕಂಡುಬರುವುದು ಎಂತಲೆ ದಯಾಳುತ್ವವು ಗಂಡುಸರಿಗಿಂತ ಹೆಂಗುಸರಲ್ಲಿ ಹೆಚ್ಚಾಗಿದೆ. ಎಂದರೆ ಪುರುಷನಿಗಿಂತ ಸ್ತ್ರೀ ಜಾತಿಯು ಯಾವಾಗಲೂ ಕಡಿಮೆ ನಿಷ್ಠುರವಾದುದಾಗಿದೆ. ಆ ನಿಷ್ಠುರತೆಯ ನ್ಯೂನತೆಯ ಮೂಲಕವೆ ಅವಳಲ್ಲಿ ಮಾಯೆ-ಮಮತೆ ಹೆಚ್ಚು. ಇದರ ಅನುಭವವು ಅಪತ್ಯ ಸಂಗೋಪನ, ರುಗ್ಣ ಶುಶ್ರೂಷೆ, ಇವುಗಳಲ್ಲಿ ಸ್ಪಷ್ಟವಾಗಿ ಕಂಡುಬರುವುದು.

ದಯಾರ್ದ್ರತ್ವ ಮತ್ತು ಮಮತೆಗಳಿಗೆ ಮನಸ್ಸು ಮೃದುವಾಗಿರಬೇಕಾದುದರಿಂದ, ಹೆಂಗುಸಿನದು ಹಾಗೆ ಇರುವುದರಿಂದ, ಅಲ್ಲಿ ಭೀತಿಯೂ ಪುರುಷನಿಗಿಂತ ಹೆಚ್ಚಾಗಿರುವುದು ಸ್ವಾಭಾವಿಕವಾಗಿದೆ. ಭೀತಿ ಮತ್ತು ಧೈರ್ಯ ಇವು, ಮಿದುತನ, ಬಿರುಸುತನ ಇವಕ್ಕೆ ಸಂಬಂಧಪಟ್ಟುವು, ಮತ್ತು ಇವುಗಳಲ್ಲಿಯ ಬಿರುಸುತನದಿಂದುಂಟಾಗುವ ಕ್ರೋಧ-ಕ್ರೌರ್ಯ ಇವುಗಳ ಕಾರ್ಯವಾದ ಬಡಿದಾಟ-ಹಿಂಸೆಗಳಲ್ಲಿ ಹೆಂಗುಸು ಯಾವಾಗಲೂ ಗಂಡುಸಿನಿಗಿಂತ ಹಿಂದುಳಿದವಳು ಎಂತಲೆ ಕ್ರೋಧಕಾರ್ಯವಾದ ಬಡಿದಾಟ-ಗುದ್ದಾಟಗಳಲ್ಲಿ ಹೆಣ್ಣು ಹೆಣ್ಣನ್ನಾಗಲಿ, ಗಂಡನ್ನಾಗಲಿ, ಕೆಡಹಿ ಗುದ್ದಿದುದನ್ನು ನಾವು ಕ್ವಚಿತ್ತಾಗಿ ನೋಡುತ್ತೇವೆ. ಚಾಂಚಲ್ಯ ಮತ್ತು ಶಾಂತಿ ಇವುಗಳಲ್ಲಿ ಚಾಂಚಲ್ಯವು ಹೆಂಗುಸಿನಲ್ಲಿಯೆ ಹೆಚ್ಚಾಗಿ ಕಂಡುಬರುತ್ತಿದ್ದು, ಶಾಂತಿಯ ಮನೋಧರ್ಮವು ಪುರುಷ ಜಾತಿಗೇ ಹೆಚ್ಚು ಲಭಿಸಿದೆ ಎನ್ನಬೇಕಾಗುವುದು. ಆಲಸ್ಯ-ಉತ್ಸಾಹಗಳಲ್ಲಿ ಪುರುಷನೆ ಹೆಚ್ಚು ಆಲಸಿಗನಾಗಿದ್ದಾನೆ. ಅದಕ್ಕೆ ಶಾಂತಿ (ಸ್ಥೈರ್ಯ) ಧರ್ಮವೆ ಕಾರಣವಾಗಿದೆ. ಚಂಚಲತೆಯ ಧರ್ಮವು ಉತ್ಸಾಹವಿರುವುದರಿಂದ, ಪುರುಷನಿಗಿಂತ ಶಕ್ತಿ ಕಡಿಮೆಯಿದ್ದರೂ ಒಂದೇ ಹಿಡಿತದಿಂದ ಕೆಲಸ ಮಾಡುವ ಪ್ರವೃತ್ತಿ ಹೆಣ್ಣಿನಲ್ಲಿ ಹೆಚ್ಚಿದೆ. ಈ 'ಕಾರಖಾನೆ'ಗಳ ಯುಗದಲ್ಲಿ ಇದು ಸ್ಪಷ್ಟವಾಗಿ ಕಂಡುಬಂದಿದ್ದು, ಕೆಲವು ಜನ ಪಾಶ್ಚಾತ್ಯ ನಿರೀಕ್ಷಕರು ಇದನ್ನು ಬರೆದೂ ಇಟ್ಟಿದ್ದಾರೆ. ಲೋಭ-ಔದಾರ್ಯಗಳಲ್ಲಿ ಹೆಣ್ಣೇ ಹೆಚ್ಚು ಲೋಭಿಯಾಗಿದೆ. ಎಂತಲೆ ಆಶಾವಿರೋಧಿಯಾದ ತ್ಯಾಗವೃತ್ತಿ, ಅವಳಲ್ಲಿ ಗಂಡುಸಿನಷ್ಟು ಕಂಡುಬರುವುದಿಲ್ಲ. ಭಾವನಾಪ್ರಧಾನ ಮನೋಧರ್ಮದಲ್ಲಿಯೂ ಈ ವ್ಯತ್ಯಾಸವನ್ನು ನೋಡಬಹುದು. ಭಾವನಾಪ್ರಧಾನತೆ ಇದು ಮೃದುತತ್ತ್ವಕ್ಕೆ ಸಂಬಂಧಿಸುವುದರಿಂದ, ಭಾವನಾಮಯ ಶ್ರದ್ಧೆಯಲ್ಲಿ, ಸ್ತ್ರೀಜಾತಿಯೆ ಮುಂದುವರಿದಿದೆ. ಭಾವನೆಗಳು ಪುರುಷನಲ್ಲಿ ಇಲ್ಲವೆ ಇಲ್ಲ ಎಂದಲ್ಲ; ಇವೆಯಾದರೂ ಅವುಗಳ ಸ್ವರೂಪವು ಸ್ತ್ರೀಭಾವನೆಯಿಂದ ಭಿನ್ನವಾಗಿವೆ. ಅದಕ್ಕೆ ವಿರೋಧಿಯಾಗಿವೆ. ಯಾವುದೊಂದು ಸಂಕಟ ಪ್ರಸಂಗದಲ್ಲಿ ಸ್ತ್ರೀಭಾವನೆಗಳು ಶ್ರದ್ಧೆಯ ಕಡೆಗೆ ಒಲಿದು, ಏನನ್ನೊ ಹಾರೈಸುತ್ತ, ದೇವರಿಗೆ ಬೇಡಿಕೊಳ್ಳುತ್ತ, ನಿಷ್ಕ್ರಿಯವಾಗಿ ಕುಳಿತರೆ, ಪುರುಷನ ಭಾವನಾಪ್ರಧಾನತೆ ಬಿರುಸುತನಕ್ಕೆ ಸಂಬಂಧಿಸಿರುವುದರಿಂದ, ಒಮ್ಮೆಲೆ ಭಯಂಕರ ಸಾಹಸಕ್ಕೆ ನೆಗೆದು, ಪೌರುಷದ ರೂಪವನ್ನು ತಾಳುತ್ತದೆ. ಧ್ಯೇಯಸಾಧನೆಗೆ ಧೈರ್ಯದ ಆವಶ್ಯಕತೆ ಇದ್ದು, ಧೈರ್ಯ ಮನೋಧರ್ಮವಿದು ಕಾಠಿನ್ಯಕ್ಕೆ ಸಂಬಂಧಿಸಿರುವುದರಿಂದ, ಧೈರ್ಯಮೂಲಕ ಸಾಹಸವೃತ್ತಿ ಪುರುಷನಲ್ಲಿ ಹೆಚ್ಚಾಗಿರುವುದು ಸ್ವಾಭಾವಿಕವಾಗಿದೆ. ಅತ್ಯಂತ ಸಾಹಸದ ಕೃತ್ಯಗಳು ಪುರುಷರಿಂದಾದಷ್ಟು ಸ್ತ್ರೀಯರಿಂದಾಗಿಲ್ಲವೆಂಬುದಕ್ಕೆ ಪ್ರತ್ಯಂತರವು ಜಗತ್ತಿನ ಇತಿಹಾಸದಲ್ಲಿ ಬೇಕಾದಷ್ಟು ಇದೆ. ಎಷ್ಟೋ ಸಾಮಾಜಿಕ, ರಾಜಕೀಯ, ಧಾರ್ಮಿಕ, ಕ್ರಾಂತಿಗಳೆಲ್ಲವುಗಳಲ್ಲಿ, ಪುರುಷಜಾತಿಯ ಕರ್ತೃತ್ವವೇ ಕಂಡುಬಂದಿದೆ. ಪ್ರೇಮ ಮತ್ತು ಪರಾಕ್ರಮ ಇವುಗಳ ಕ್ಷೇತ್ರದಲ್ಲಿಯೂ ಪುರುಷನ ಒಲವು ಪರಾಕ್ರಮದ ಕಡೆಗೆ ಇದ್ದು, ಅವನ ಪ್ರೇಮದಲ್ಲಿ ಅಷ್ಟೊಂದು ಮಾರ್ದವವು ಕಂಡುಬರುವುದಿಲ್ಲ. ಪ್ರೇಮವಿದೊಂದು ಮೃದುವೃತ್ತಿ. ಪುರುಷನ ಕಠಿನ ಸ್ವಭಾವವು ಅದಕ್ಕೆ ವಿರೋಧಿಯಾದುದರಿಂದ, ನಿಷ್ಠಾಯುಕ್ತವಾದ ಪ್ರೇಮಕ್ಕೆ ಅವನಲ್ಲಿ ಪ್ರಾಧಾನ್ಯದಿಂದ ಇಂಬು ದೊರೆಯುವುದಿಲ್ಲ. ಎಂತಲೆ ಬಹುಪತ್ನಿತ್ವದ ಕಡೆಗೆ ಪುರುಷಜಾತಿಯ ಒಲವು-ಎಳೆತಗಳು ಕಂಡುಬರುತ್ತವೆ. ಸ್ತ್ರೀಮನೋವೃತ್ತಿಯು ಮೃದುವಾಗಿರುವುದರಿಂದ, ಪ್ರೇಮದಂತಹ ಮೃದುಭಾವನೆಯು ಅಲ್ಲಿ ಒಳಿತಾಗಿ ಪೋಷಣ ಹೊಂದಿ ಅದು ನಿಷ್ಠೆಯ ಸ್ವರೂಪವನ್ನು ತಾಳುತ್ತದೆ. ಅದಕ್ಕಾಗಿಯೆ ಪ್ರೇಮಕ್ಕಾಗಿ ಜೀವದ ಹಂಗು ದೊರೆದು ಆತ್ಮಾಹುತಿಯನ್ನು ಕೊಡುವುದಕ್ಕೆ ಹೆಂಗುಸರೆ ಹೆಚ್ಚಾಗಿ ಸಿದ್ಧರಾದುದನ್ನು ಜಗತ್ತಿನ ಇತಿಹಾಸದಲ್ಲಿ ನಾವು ನೋಡುತ್ತೇವೆ. 'ಸತಿ' ಮತ್ತು 'ವೈಧವ್ಯ' ಇವುಗಳ ರೂಢಿಗೆ ಹೆಣ್ಣುಜಾತಿಯ ಸಮ್ಮತಿ ದೊರೆತುದಕ್ಕೂ ಮೇಲಿನ ಕಾರಣವೇ

ಪುಷ್ಟವಾಗಿದೆ. ಇನ್ನು "ಇದಕ್ಕೆ ಲಗ್ನದ ಬಿಗಿ ಕಟ್ಟು ಕಾರಣವಾಗಿದೆ" ಎಂದು ಯಾರಾದರೂ ಹೇಳಬಹುದು. ಆದರೆ, ಅಮೇರಿಕೆಯಲ್ಲಿ ಒಂದು ಕಾಲಕ್ಕೆ ಅಸ್ತಿತ್ವದಲ್ಲಿದ್ದ ಮತ್ತು ಲಗ್ನದ ಯಾವ ಬಂಧನವನ್ನೂ ಲೆಕ್ಕಿಸದ, 'ಓನೈಡಾ' ಎಂಬ ಜಾತಿಯಲ್ಲಿ ಕೆಲವು ಸ್ತ್ರೀಯರ ವೈಷಯಿಕ ಆಚರಣೆ, ಒಬ್ಬ ಪುರುಷನ ಕಡೆಗೇ ಇರುವ ಅವರ ಎಳೆತ, ಮತ್ತು ಆ ದೃಷ್ಟಿಯಲ್ಲಿಯ ಅವರ ನಡತೆ ಇವುಗಳನ್ನೆಲ್ಲ ನೋಡಿದರೆ, ಮೇಲಿನ ಆಕ್ಷೇಪಣೆಯನ್ನು ಒಪ್ಪಲು ಬರುವಂತಿಲ್ಲ. ಹೀಗೆ ಸ್ತ್ರೀ-ಪುರುಷರ ಮನೋಘಟನೆಯಲ್ಲಿಯೆ ಭೇದವು ಸ್ಪಷ್ಟವಾಗಿ ಕಂಡುಬರುತ್ತಿರುವಾಗ ಅವು ಒಂದೆ ಬಗೆಯವೆಂದು ಒಮ್ಮೆಲೆ ಹೇಳಿಬಿಡುವುದು ಸಾಹಸವಲ್ಲವೆ?

ಶರೀರ — ಮನಸ್ಸುಗಳಂತೆ ಬುದ್ಧಿಶಕ್ತಿಯಲ್ಲಿಯೂ ಅವರೀರ್ವರಲ್ಲಿ ಭೇದವಿದೆಯೆ? —ಎಂಬುದನ್ನು ನೋಡಬೇಕೀಗ. ಜಿಜ್ಞಾಸೆ, ಮತ್ತು ಅದರ ಕಾರ್ಯ ಇವು ಯಾವಾಗಲೂ ಬುದ್ಧಿಗೆ ಸಂಬಂಧಿಸಿದುವು. ಈ ಬುದ್ಧಿ ಉಜ್ವಲವಿದ್ದರೆ — ಹದನಾದುದಿದ್ದರೆ — ಮೇಲಿನ ಕಾರ್ಯಕ್ಕೆ ಫಲ. ಅದರಂತೆಯೆ ಕಲ್ಪನಾಚಾತುರ್ಯ, ವಿಚಾರಶಕ್ತಿ, ಆಕಲನಶಕ್ತಿ ಇವೆಲ್ಲ ಬುದ್ಧಿಗೇ ಸಂಬಂಧಿಸಿ, ಶಿಕ್ಷಣದಲ್ಲಿ ಕಾರ್ಯಕಾರಿಯಾಗುವವು. ಈ ಸಂಬಂಧದ ಮೂಲಕ ಪ್ರಾಪ್ತವಾಗುವ ಜ್ಞಾನದ ಸಂಬಂಧವು, ಮಾನವನ ಬೇರೆ ಬೇರೆ ಕಾರ್ಯಗಳೊಡನೆ ಇರುವುದು. ಈ ಜ್ಞಾನದಮೂಲಕವೆ ಮನುಷ್ಯನು ಹೊಸ ಹೊಸ ಸಂಶೋಧನೆಗಳನ್ನು ಮಾಡಿ, ತನ್ನ ಕಾರ್ಯಗಳಿಗೆ ಸೌಕರ್ಯವನ್ನುಂಟುಮಾಡಿಕೊಳ್ಳುವನು. ಆ ಕಾರ್ಯಗಳಲ್ಲಿ ಬೇಸರಿಲ್ಲದೆ ಮಾಡಬೇಕಾದುವು ಎಂದರೆ ಉತ್ಸಾಹದಮೂಲಕ ಆಗುವಂತಹವು ಕೆಲವು; ಎಂದರೆ ಮನೆಯಲ್ಲಿಯವು, ಧೈರ್ಯ-ಸಾಹಸಗಳ ಸಹಾಯದಿಂದ ನೆರವೇರಬೇಕಾದುವು? ಅರ್ಥಾತ್ ಹೊರಗಿನವು ಹಲವು; ಹೀಗೆ ವಿಭಾಗ ಮಾಡಿಟ್ಟು ನೋಡಿದರೆ, ಬೇಸರವಿಲ್ಲದೆ ಒಂದೇ ಹಿಡಿತದಿಂದ, ಮಾಯೆ-ಮಮತೆಯಿಂದ, ನಡೆಯಬೇಕಾದ ಮನೆಗೆಲಸಗಳಲ್ಲಿ ಹೆಣ್ಣಿನ ಬುದ್ಧಿ ಚುರುಕಾದುದೆಂದೂ, ಧೈರ್ಯ-ಸಾಹಸಗಳ ಸಹಾಯದೊಂದಿಗೆ ಕಠೋರತನದಿಂದಾಗಬೇಕಾಗಿದ್ದ ಹೊರಗಿನ ಕೆಲಸಗಳಲ್ಲಿ ಗಂಡಸಿನ ಬುದ್ಧಿ ಹದನಾಗಿದೆಯೆಂದೂ ಹೇಳಬೇಕಾಗುವುದು. ಜಗತ್ತಿನ ಬುದ್ಧಿಪ್ರಧಾನ ವ್ಯವಹಾರಗಳಲ್ಲಿ ಸ್ತ್ರೀಶಿಕ್ಷಣ ಮತ್ತು ಸಮತೆ ಇವು ನೆಲೆಗೊಂಡ ರಾಷ್ಟ್ರಗಳಲ್ಲಿಯೂ ಬುದ್ಧಿಕಾರ್ಯದ ಮನ್ನಣೆಯು ಇದುವರೆಗಂತು, ಗಂಡಸಿಗೆ ಹೆಚ್ಚಾಗಿ ದೊರೆಯುತ್ತ ಬಂದಿದೆ. ಜಗತ್ತಿನಲ್ಲಿಯ ಬೇರೆ ಬೇರೆ ಸಂಶೋಧನೆಗಳು, ಶಾಸನ, ರಾಜಕಾರಣ ಮುಂತಾದ ಸಮಾಜಶಾಸ್ತ್ರದ ತತ್ತ್ವಜ್ಞಾನ, ಪಾರಲೌಕಿಕ ವಿಚಾರಗಳ ಚಿಕಿತ್ಸೆ ಇವುಗಳಲ್ಲಿ ಪುರುಷಜಾತಿಯ ಬುದ್ಧಿಮತ್ತೆಯೆ ಅಗ್ರೇಸರವಾಗಿ ಹೊಳೆದಿದೆ. ಹೀಗೇಕೆ? ಸ್ತ್ರೀಜಾತಿಯ ಬುದ್ಧಿಕಾರ್ಯದ ವಿಷಯಕ್ಕೆ ಬರೆಯುತ್ತ 'ಹ್ಯಾವಲಾಕ್ ಎಲ್ಲಿಸ್' ಎಂಬ ಸುಪ್ರಸಿದ್ಧ ವಿಜ್ಞಾನಿಯು ಹೀಗೆ ಹೇಳುವನು: "ಹೆಂಗುಸರು ವಿದ್ಯಾರ್ಥಿದಶೆಯಲ್ಲಿಯೂ ಬುದ್ಧಿಪ್ರಧಾನ ಜಿಜ್ಞಾಸೆಯನ್ನು ಪುರುಷರಿಗಿಂತ ಕಡಿಮೆಯಾಗಿ ತೋರಿಸುವರು. ಅಲ್ಲದೆ ಯಾವುದೊಂದು ಪ್ರಮೇಯವನ್ನು ಬಿಡಿಸುವಾಗ ಅವರ ಉತ್ಸುಕತೆ, ಚುರುಕುತನ, ಇವೂ ಪುರುಷರಿಗಿಂತ ಕಡಿಮೆಯಾಗಿಯೆ ಕಂಡು ಬರುತ್ತಿದ್ದು, ಶಾಸ್ತ್ರೀಯ ಪ್ರಮೇಯಗಳ ವಿಷಯದಲ್ಲಿಯಂತು ಪುರುಷರಷ್ಟು ಪ್ರೀತಿಯೂ ಅವರಿಗಿಲ್ಲ." [Man & Woman' Edi V P. 263 By Havelock Ellis. The Walter Scott P. Co. Ltd. New York] ಬುದ್ಧಿವಿಷಯಕ ಕ್ಷೇತ್ರದಲ್ಲಿ ಸ್ತ್ರೀ-ಪುರುಷರಲ್ಲಿ ಕಂಡು ಬರುತ್ತಿರುವ ಭೇದವು ಪಾಶ್ಚಾತ್ತ್ಯ ಶಿಕ್ಷಣಸಂಸ್ಥೆಗಳ ಗಮನಕ್ಕೂ ಈಗ ಬರುತ್ತಿದ್ದು, ೧೯೩೦ರಲ್ಲಿ ಇಂಗ್ಲೆಂಡಿನ ಶಿಕ್ಷಣಮಂಡಲದಿಂದ, ಪ್ರಚಲಿತ ಮಾಧ್ಯಮಿಕ ಶಿಕ್ಷಣದಲ್ಲಿಯ ವಿಷಯ ನಿರೀಕ್ಷಣೆಗಾಗಿ ನಿಯಮಿಸಿದ ಕಮಿಟಿಯಿಂದ ಪ್ರಸಿದ್ಧವಾದ ರಿಪೋರ್ಟಿನ ಕಡೆಗೆ ನೋಡಿದರೆ, ಈ ಭೇ[illegible]ವಾಗಿ ಕಂಡುಬರುವಂತಿದೆ. ಆ ರಿಪೋರ್ಟ್ ಇತಿಹಾಸ ವಿಷಯದಲ್ಲಿ [illegible] ತಿಳುಹುತ್ತದೆ. '[illegible] ಇತಿಹಾಸದಲ್ಲಿಯ [illegible]ಷ್ಟು ನೆನಪಿನಲ್ಲಿಟ್ಟು [illegible], ಆ ವಿಷಯದಲ್ಲಿ [illegible] ವಿಚಾರಮಾಡುವುದಿಲ್ಲ. [illegible]ಾಯನಕಲೆಯಲ್ಲಿ ಕೂಡ ಗಂಡುಮಕ್ಕಳಂತೆ ಹೆಣ್ಣುಮಕ್ಕಳ ಬುದ್ಧಿ ಕಲ್ಪಕತೆಯ ಕಡೆಗೆ ಓಡುವುದಿಲ್ಲ. ಇದರ ಮೇಲಿಂದ ನೋಡಿದರೆ, ಚಿಕ್ಕವಯಸ್ಸಿನಿಂದಲೂ ಸ್ತ್ರೀಯರ ಬುದ್ಧಿ ಪುರುಷರ ಬುದ್ಧಿಯಷ್ಟು ಗಹನವಿಷಯಗಳಲ್ಲಿ ನಡೆಯುವದಿಲ್ಲ ಎಂದು ಕಂಡು ಬರುತ್ತದೆ. [Times of India Bombay dated 13-2-1923] **ನರ-ನಾರೀತತ್ತ್ವಗಳ** ಬಗೆಗೆ ಚರ್ಚಿಸುವಾಗ ಅವರಲ್ಲಿರುವ ಭೇದವನ್ನು '**ಜಕೆ ಲೋಏಬ್**' ಎಂಬ ಪಾಶ್ಚಾತ್ತ್ಯ ಶಾಸ್ತ್ರಜ್ಞನು ಸ್ಪಷ್ಟಶಬ್ದದಲ್ಲಿ ಈ ಬಗೆಯಾಗಿ ಹೇಳುತ್ತಿರುವನು: "ಶಾರೀರ ವಿಜ್ಞಾನದ ದೃಷ್ಟಿಯಿಂದ ಸ್ತ್ರೀ ಮತ್ತು ಪುರುಷ ಎಂಬಿವೆರಡು ಜಾತಿಗಳೆ ಭಿನ್ನವಾಗಿವೆ." (Quoted in Applied Eugenics P. 379.) (ಸ್ತ್ರೀ-ಪುರುಷರಲ್ಲಿಯ ಭಿನ್ನತ್ವ, ಮತ್ತು ಅವೆರಡರ ಕೂಡಿಕೆಯಿಂದಾಗುವ ಮಾನವಕೋಟಿ, ಇವುಗಳನ್ನು ಶಾಸ್ತ್ರೀಯ ದೃಷ್ಟಿಯಿಂದ ವಿಚಾರಿಸಿ, 'ವಾಲ್ಟರ ಹಿಪ್' ಎಂಬ ಶಾಸ್ತ್ರಜ್ಞನು ಪಟ್ಟಿರುವ ಅಭಿಪ್ರಾಯವನ್ನು 'ಡಾ. ಎಸ್. ಎಚ್. ಹರ್ಬರ್ಟ್,' ಎಂಬವನು ತನ್ನ ಪುಸ್ತಕದಲ್ಲಿ ಈ ಬಗೆಯಾಗಿ ಉದಾಹರಿಸುತ್ತಾನೆ: "ಮಾನವಕೋಟಿಯಲ್ಲಿ ಸ್ತ್ರೀ-ಪುರುಷರು ಪರಸ್ಪರ ಪೂರಕರಾಗಿ ಇದ್ದರೂ ಇವರೀರ್ವರು ಒಂದೇಜಾತಿಯವರೆಂದು ಹೇಳಲಿಕ್ಕೆ ಆಗದು. (Quoted in the Introduction to the Psychology and Physiology of Sex P. 102 by S. H. Herbert.)" ಹೀಗೆ ದೇಹ, ಮನಸ್ಸು, ಬುದ್ಧಿ ಇವೆಲ್ಲವುಗಳ ವಿಭಿನ್ನತೆಯನ್ನು ನೋಡಿ, ಅನೇಕ ಬಗೆಯಾಗಿ ಪರೀಕ್ಷಿಸಿ, ವಿಜ್ಞಾನಶಾಸ್ತ್ರವು

ಇವೆರಡು ಜಾತಿಗಳೇ ಭಿನ್ನವಾದುವೆಂದು ನಿರ್ಣಯಿಸಿ ತೋರಿಸುವಾಗ, "ಮಾನವ-ಹೃದಯದ ಅಂತರರಚನೆಯ ಗುಣಾಂಶಗಳು ಸಾಮಾನ್ಯವಾಗಿವೆ ಎಂಬುದನ್ನು ವಿಜ್ಞಾನ ವ್ಯವಹಾರಗಳೆರಡೂ ಕಲಿಸುವುವು" ಎಂದು ಕಣ್ಣುಮುಚ್ಚಿ ಹೇಳಿಬಿಡುವುದು ತುಂಬಾ ಧೈರ್ಯದ ಮಾತು. ಮೇಲಾಗಿ ವಿಜ್ಞಾನದ ಸಾಕ್ಷ್ಯವನ್ನು ಕೊಡಲಿಕ್ಕೆ ಬರೆಹಗಾರರಿಗೆ ೨ ಸಾವಿರ ವರುಷಗಳ ಹಿಂದೆ ಹೋಗಿ ಯಾವನನ್ನೊ ವಿಜ್ಞಾನಿಯೆಂದು ಕರೆದು ತರಬೇಕಾಗಿದೆ. ಇನ್ನು ಇವೆರಡೂ ತತ್ತ್ವಗಳು ಭಿನ್ನಜಾತಿಯವೆ ಎಂದು ನಿರ್ಣಯವಾಗುತ್ತಿರುವಾಗ, ಆ ಭಿನ್ನತೆಯನ್ನನುಸರಿಸುವ ಕಾರ್ಯಭೇದವು, ಮತ್ತು ಆ ಕಾರ್ಯವಿಭಿನ್ನತೆಗೆ ಉಪಕಾರಿಯಾಗುವ— ಅನುಪಕಾರಿಯಾಗದ — ಶಿಕ್ಷಣವಾವುದು ಎಂತಹ ಶಿಕ್ಷಣವು ಅವರವರ ದೇಹ, ಮನಸ್ಸು, ಬುದ್ಧಿಗಳಿಗೆ ಒಗ್ಗುವಂತಹದು!! ಎಂಬ ಪ್ರಶ್ನೆ — ಬರೆಹಗಾರರು ಉತ್ತರಕ್ಕಾಗಿ ಎತ್ತಿಕೊಂಡ ಆಕ್ಷೇಪಣೆ — ಮತ್ತೆ ಹಾಗೆಯೇ ಉಳಿಯುವುದು. ಸದ್ಯಕ್ಕೆ ಸಹಶಿಕ್ಷಣದ ಮಾತು ಒತ್ತಟ್ಟಿಗಿರಲಿ, ಈಗ ನಾವು ಸ್ತ್ರೀಯರಿಗೆ ಕೊಡುತ್ತಿರುವ ಉಚ್ಚ ಶಿಕ್ಷಣವು,— ಶಾಸ್ತ್ರೀಯ ಶಿಕ್ಷಣವು,— ಸ್ತ್ರೀದೇಹ—ಬುದ್ಧಿಗಳಿಗೆ ಒಗ್ಗುತ್ತಿದೆಯೆ!! ಎಂಬುದನ್ನೆ ಮೊದಲು ನೋಡೋಣ.

ನಾವು ಯಾವುದೊಂದು ವಿಷಯದ ಶಾಸ್ತ್ರವತ್ತಾದ ಜ್ಞಾನವನ್ನು ಮಾಡಿಕೊಳ್ಳಬೇಕಾದರೆ, ಅದು ರಾಜಕೀಯವಿರಲಿ ಸಾಮಾಜಿಕವಿರಲಿ ಧಾರ್ಮಿಕವೆ ಇರಲಿ ಅದನ್ನು ಮೂರು ನಿಟ್ಟುಗಳಿಂದ ನಿರುಕಿಸಬೇಕಾಗುವುದು. ಒಂದು ಅನುಮಾನದೃಷ್ಟಿಯಿಂದ, ಇನ್ನೊಂದು ಪ್ರಯೋಗದೃಷ್ಟಿಯಿಂದ, ಮತ್ತೊಂದು ಪರಿಣಾಮ-ದೃಷ್ಟಿ ಅರ್ಥಾತ್ ಫಲದೃಷ್ಟಿಯಿಂದ. ಇದರಲ್ಲಿ ಪ್ರಯೋಗದೃಷ್ಟಿಯಿದು ಮಧ್ಯವರ್ತಿಯಾಗಿದ್ದು ಅನುಮಾನ ಮತ್ತು ಪರಿಣಾಮಗಳು ಅದಕ್ಕೆ ಸಹಾಯಕವಾಗಿವೆ—ಸಹಕಾರಿಯಾಗಿವೆ. ಈ ಮೂರರ ಪರಸ್ಪರ ಸಹಾಯ-ಸಹಕಾರದಿಂದುಂಟಾದ ದೃಷ್ಟಿಯೆ ಶಾಸ್ತ್ರದೃಷ್ಟಿ. ಹೀಗಿದ್ದರೂ ಇವುಗಳಲ್ಲಿ ಯಾವುದೊಂದು ವಿಶಿಷ್ಟ ಕ್ರಮವಿಲ್ಲ. ಒಮ್ಮೆ ಪರಿಣಾಮವೆ ಅನುಮಾನಕ್ಕೆ ಪ್ರಚೋದಕವಾಗಿ ಪ್ರಯೋಗವನ್ನು ಹುಟ್ಟಿಸಬಹುದು. ಇನ್ನೊಮ್ಮೆ ಪ್ರಯೋಗವೆ ಅನುಮಾನಕ್ಕೆ ಸೂಚಕವಾಗಿ ಪರಿಣಾಮವನ್ನು ತೋರಿಸಬಹುದು. ಮತ್ತೊಮ್ಮೆ ಅನುಮಾನವೆ ಪ್ರಯೋಗ-ಪರಿಣಾಮಗಳೆರಡನ್ನೂ ದಿಟ್ಟಿಸಬಹುದು. ಅದೇನಿದ್ದರೂ ಶಾಸ್ತ್ರೀಯ ದೃಷ್ಟಿಗೆ ಈ ಮೂರರ ಪೂರಯಿಕೆ ಬೇಕು. ಈ ದೃಷ್ಟಿಯಿಂದ ಈಗ ನಾವು ಸ್ತ್ರೀಯರಿಗೆ ಕೊಡುತ್ತಿರುವ, ಇಲ್ಲವೆ ಕೊಡಬಯಸುತ್ತಿರುವ, ಶಿಕ್ಷಣದ ಹಿತಾಹಿತ ಪರಿಣಾಮಗಳೇನಾಗಬಹುದೆಂಬದನ್ನು ನೋಡಬೇಕಾದರೆ ಪಾಶ್ಚಾತ್ತ್ಯ ರಾಷ್ಟ್ರಗಳ ಕಡೆಗೆ ಹೊರಳಬೇಕಾಗುವುದು. ಏಕೆಂದರೆ, ಈಗ ನಾವು ಗ್ರಹಿಸಬೇಕೆಂಬ ಶಿಕ್ಷಣ ಸಂಪ್ರದಾಯವು ಅಲ್ಲಿ ಬಹುದಿನಗಳಿಂದ ನಡೆದಿದ್ದು, ಅದರ ಯಾವುದೊಂದು ಪರಿಣಾಮವೂ ಅವರ ಸಾಮಾಜಿಕ ಜೀವನಕ್ರಮದ ಮೇಲೆ ಇಷ್ಟರಲ್ಲಿ ಆಗಿರಲೂ ಬಹುದು. ಮೇಲಾಗಿ ವಿಜ್ಞಾನವೂ ಅಲ್ಲಿಯೆ ಈಗ ಮಿತಿಮೀರಿ ಬೆಳೆದಿರುವುದರಿಂದ, ಪ್ರಯೋಗಮೂಲಕವಾದ ಸಂಶೋಧನೆಗಳೂ ಅಲ್ಲಿ ಬಹುಮುಖವಾಗಿ ಆಗಿವೆ. ಅದನ್ನೆಲ್ಲ ನೋಡುವುದಕ್ಕೆ ಮೊದಲು ನಾವು ಸಾಮಾನ್ಯಜ್ಞಾನದ ಮೂಲಕವೆ ಕೆಲವು ವಿಷಯಗಳ ಬಗೆಗೆ ಯೋಚಿಸಬೇಕಾಗಿದೆ. ಆ ಮೇರೆಗೆ ಸ್ತ್ರೀ-ದೇಹದ ಬಾಹ್ಯಾಂತರ ರಚನೆಯಲ್ಲಿ ಅಪತ್ಯೋತ್ಪಾದನದ ಗುರಿಯೆ ಮುಖ್ಯವಾಗಿ ಅಪೇಕ್ಷಿತವಾಗಿದೆ ಎಂಬುದು ಕಂಡುಬರುವುದು. ಎಂದರೆ ತಾಯ್ತನದ ಹೊಣೆಗಾರಿಕೆಯ ಹಗ್ಗದಿಂದ ನಿಸರ್ಗವು ಸ್ತ್ರೀದೇಹವನ್ನು ಬಿಗಿಯಾಗಿ ಕಟ್ಟಿಬಿಟ್ಟಿದ್ದು, ಎಂತಹ ಮಾನವೀಯ ಬುದ್ಧಿ-ಶಕ್ತಿಗಳಿಂದಲೂ ಬಿಡಿಸಲಾಗದಷ್ಟು ಅದು ದೃಢವಾಗಿದೆ. ಈ ಬಿಗಿಕಟ್ಟಿನ ಅಜೇಯ ಸಂಬಂಧವನ್ನು ನೆನಪಿನಲ್ಲಿಟ್ಟು ಬಳಿಕ, ಸ್ತ್ರೀಶಿಕ್ಷಣದ ಪ್ರಶ್ನೆಗಾಗಲಿ, ಸಹಶಿಕ್ಷಣದ ಪ್ರಶ್ನೆಗಾಗಲಿ ಕೈಹಾಕಬೇಕು. ಏಕೆಂದರೆ ಈ ತಾಯ್ತನವು ವಂಶಕ್ಕೆ ಸಂಬಂಧಿಸಿರುವುದರಿಂದ ಮತ್ತು ಯಾವುದೊಂದು ಜನಾಂಗದ ವಂಶದ ಮೇಲಾಗುವ ಇಷ್ಟಾನಿಷ್ಟ ಪರಿಣಾಮಗಳು ರಾಷ್ಟ್ರಕ್ಕೂ ಹೊಂದಿಕೊಳ್ಳುವುದರಿಂದ, ಈ ತಾಯ್ತನದ ಪ್ರಶ್ನೆ ತುಂಬ ಮಹತ್ತ್ವದಿದ್ದು, ಮೊದಲಿನದೂ ಆಗಿದೆ. ಇನ್ನು ಈ ತಾಯ್ತನಕ್ಕೆ ಸಂಬಂಧಿಸಿದ ಸ್ತ್ರೀದೇಹದ ಅಂತರಿಂದ್ರಿಯಗಳಲ್ಲಿ ಗರ್ಭಾಶಯವೆ ಮುಖ್ಯವೂ, ಮೊದಲಿನದೂ ಆಗಿದೆ ಎಂಬುದನ್ನೇನು ಬೇರೆ ಹೇಳಬೇಕಾಗಿಲ್ಲ. ಇದು ಗರ್ಭಧಾರಣೆಗೆ ಯೋಗ್ಯವಾದ ಬೆಳವಣಿಗೆಯನ್ನೂ ಶಕ್ತಿಯನ್ನೂ ಪಡೆಯುತ್ತಿರುವ ಕಾಲವೆಂದರೆ, ಸುಮಾರಾಗಿ ಹತ್ತು-ಹನ್ನೊಂದರಿಂದ ಹದಿನೈದು-ಹದಿನಾರು ವರುಷದ ವಯಸ್ಸಿನವರೆಗೆ ಎಂದು ಇಂದ್ರಿಯವಿಜ್ಞಾನವು ಹೇಳುವುದು. ಈಗ ನಾವು ಕೊಡಬೇಕೆನ್ನುವ ಶಿಕ್ಷಣದ ಸಂಬಂಧವೂ ಇದೇ ಕಾಲಕ್ಕೆ ಬರುತ್ತಿರುವುದರಿಂದ, ಈ ಶಿಕ್ಷಣದ ಏನೊಂದು ದುಷ್ಪರಿಣಾಮವೂ ಗರ್ಭಾಶಯದ ಬೆಳವಣಿಗೆಯ ಮೇಲಾಗಲಿಕ್ಕಿಲ್ಲವೇ ?— ಎಂಬುದನ್ನೂ ಮೊದಲು ನೋಡಿಕೊಳ್ಳಬೇಕು. ಏಕೆಂದರೆ ಗರ್ಭಾಶಯಕ್ಕೂ ಮಿದುಳಿಗೂ ಅತ್ಯಂತ ನಿಕಟಸಂಬಂಧವಿದೆಯೆಂಬುದನ್ನು ಬಹುಜನರು ಅರಿತಿರಲು ಬಹುದು. ಯಾವುದೊಂದು ಅವಯವವು ಪೂರ್ತಿಯಾಗಿ ಬೆಳೆದು ಸಮರ್ಥವಾಗಬೇಕಾದರೆ, ಅದಕ್ಕೆ ರಕ್ತದ ಪೂರಯಿಕೆ ಚೆನ್ನಾಗಿ ಆಗಬೇಕಾಗುವುದೆಂಬುದನ್ನೂ ಬೇರೆ ಹೇಳಬೇಕಾಗಿಲ್ಲ. ಇನ್ನು ಯಾವುದೊಂದು ಗಹನವಾದ ಶಾಸ್ತ್ರೀಯ ವಿಷಯದ ಅಭ್ಯಾಸದ ಕಾಲಕ್ಕಾಗಲಿ, ಬಿಗಿಯಾದ ಪ್ರಮೇಯವನ್ನು ಬಿಡಿಸುವ ಯೋಜನೆಯ ಕಾಲಕ್ಕಾಗಲಿ, ಮಿದುಳಿನಲ್ಲಿ ಒಂದು ಬಗೆಯ ಪ್ರಕ್ಷುಬ್ಧತೆಯುಂಟಾಗಿ ಅದರಿಂದ ಅಲ್ಲಿ ಉಷ್ಣತೆಯೂ ಹೆಚ್ಚುವದು. ಆ ಕಾಲಕ್ಕೆ ಅಲ್ಲಿ ಹೆಚ್ಚು ಪ್ರಮಾಣದಿಂದ ವೆಚ್ಚವಾಗುತ್ತಿದ್ದ ನೆತ್ತರವನ್ನು ಪೂರಯಿಸಲು, ದೇಹದ ಉಳಿದ ಎಲ್ಲ ಭಾಗಗಳಿಂದ ನೆತ್ತರವು ಮಿದುಳಿನ ಕಡೆಗೆ ಹೋಗಬೇಕಾಗುವುದು. ಮೇಲೆ ಹೇಳಿದಂತೆ ಗರ್ಭಾಶಯದ ಬೆಳವಣಿಗೆ ಭರದಿಂದ ನಡೆಯುವ ಕಾಲಕ್ಕೇ ಅವರ ಮಿದುಳಿನ ಮೇಲೂ — ಗಹನವಿಷಯಗಳ ಅಭ್ಯಾಸದ ಅತಿಯಾದ ಹೊರೆಯನ್ನು — ಈ ಶಿಕ್ಷಣವು ಹೊರಿಸುತ್ತಿರುವುದರಿಂದ

ಗರ್ಭಾಶಯದ ಬೆಳವಣಿಗೆಗೆ ಅವಶ್ಯವಿದ್ದ ರಕ್ತದ ಬಹುಭಾಗವು ಮಿದುಳಿನತ್ತ ಹೋಗಿ ...ಷ್ಟವಾದರೆ, ತಾಯ್ತನದ ಗರ್ಭಾಲಯದ ಕಟ್ಟಡವೆ ಕುಸಿದುಹೋಗಲಿಕ್ಕಿಲ್ಲವೆ? ಇದರೊಡನೆಯೆ ಇನ್ನೊಂದು ಯೋಚಿಸಬೇಕಾದ ವಿಷಯವಿದೆ. ಗರ್ಭವಿಕಾಸದೊಂದಿಗೆ ಸ್ತ್ರೀದೇಹದ ಸೌಂದರ್ಯವೂ ...ದು ನಿಗಡಿತವಾಗಿದೆ ಎಂಬುದನ್ನೂ ನಾವು ನೋಡಬೇಕು. ಎಂತಲೆ ನಮ್ಮಲ್ಲಿಯ ಒಬ್ಬ ಸುಭಾಷಿತಕಾರನು “ಪ್ರಾಪ್ತೇತು ಷೋಡಶೇ ವರ್ಷೇ ಗರ್ಧಭೀ ಅಪ್ಸರಾ ಭವೇತ್” ಎಂದರೆ ಹದಿನಾರು ವರುಷದ ಪ್ರಾಯಕ್ಕೆ ಹೆಣ್ಣುಕತ್ತೆಯೂ ಅಪ್ಸರೆಯಾಗುವುದು ಎಂದು ಸಗೆಮಾತಿನಲ್ಲಿ ಹೇಳಿದ್ದಾನೆ. ಹಾಗಾದರೆ ಗರ್ಭಾಶಯದ ಬೆಳವಣಿಗೆಗೆ ಯಾವುದೊಂದು ಕಾರಣ ಮೂಲಕ ಧಕ್ಕೆ ತಗುಲಿದೊಡನೆ ಅದರ ಪರಿಣಾಮವು ಸೌಂದರ್ಯವಿಕಾಸದ ಮೇಲೂ ಆಗುತ್ತಿರಬೇಕಲ್ಲ; ಹಾಗಾಗಿದ್ದಗೆ ಕಾರ್ಯದ ಮೇಲಿಂದ ಕಾರಣವನ್ನು ಊಹಿಸುವ ನಿಯಮದಂತೆ ಆ ಚೆಲುವಿಕೆಯ ...ಹೀನತೆಯನ್ನು ಇನ್ನಾವ ಕಾರಣಾಂತರಗಳೂ ದೊರೆಯದಲ್ಲಿ, ಗರ್ಭಾಶಯದ ವಿಕೃತಿ ಮೂಲಕವೆಂದು ಊಹಿಸಲು ಅಡ್ಡಿ ಏನು? ಈ ಬಗೆಯಿಂದ ಇಂದು ನೋಡಹೋದರೆ ಸುಶಿಕ್ಷಿತರಾದ ಮಹಿಳೆಯರ ಚಿತ್ರವು ಹೇಗೆ ಕಾಣಹತ್ತಿದೆ? ಆರೋಗ್ಯದೊಡನೆ ಇದ್ದ ಸೌಂದರ್ಯಸಂಬಂಧವನ್ನು ಗಮನಿಸಿದರೆ, ಶಿಕ್ಷಣ ಪಡೆದ-ಇಲ್ಲವೆ ಪಡೆಯುತ್ತಿದ್ದ ತರುಣಿಯರಲ್ಲಿ ಮೋಹಕ ...ಕಟ್ಟಿನಿಂದರಳಿದ ಚೆಲುವು ಎಷ್ಟೆ ಕಂಡು ಬಾರದಾಗಿದೆ. ಉಚ್ಚ ಶಿಕ್ಷಣಕ್ರಮದ ಸಂಸ್ಕಾರದಿಂದ ಸಿಂಗರಿಸಿಕೊಂಡ ಪಟ್ಟಣಗಳನ್ನು ಬಿಟ್ಟು ಇಂದಿನ ಚಿತ್ರಕಲಾಭಿಜ್ಞರಿಗೆ, ನಿಜವಾದ ಸ್ತ್ರೀಸೌಂದರ್ಯವನ್ನು ಶೋಧಿಸುವುದಕ್ಕಾಗಿ, ಶಿಕ್ಷಣದ ಸಂಪರ್ಕವೇಯಿಲ್ಲದ ಹಳ್ಳಿಗಳ ಕಡೆಗೆ ಹೊರಳಬೇಕಾಗುವ ಕಾರಣವಾವುದು? ಇವೆಲ್ಲವನ್ನೂ ನೋಡುವ ಆವಶ್ಯಕತೆಯಿದೆಯಲ್ಲವೇ ನಮಗೆ?

ಇನ್ನು ಸ್ತ್ರೀಶಿಕ್ಷಣವು ಬಹುದಿನಗಳಿಂದ ರೀತಿಯಲ್ಲಿ ನಡೆದು ಬಂದ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಅದರ ಪರಿಣಾಮವೇನಾಗಿದೆಯೆಂಬುದನ್ನೂ, ಈ ಬಗೆಗೆ ಅಲ್ಲಿಯ ಸಂಶೋಧಕರು ಶಾಸ್ತ್ರಜ್ಞರು ಇವರೀರ್ವರ ಅಭಿಪ್ರಾಯಗಳೇನಿವೆಯೆಂಬುದನ್ನೂ, ಈಗ ನೋಡೋಣ! ಮಿಸ್ ಮರ್ಫಿ ಎಂಬೊಬ್ಬ ವಿದುಷಿಯು ಹೀಗೆ ತೋರಿಸಿಕೊಡುತ್ತಿದ್ದಾಳೆ. ೧೮೪೫ ಇಸ್ವಿಯಿಂದ ೧೯೦೦ ಇಸ್ವಿಯವರೆಗೆ ‘ವಾಸಿಂಗ್ಟನ್’ ‘ವೆಲ್ಸಲೆ’ ‘ಬ್ರಾಯನ್ ಮಾವರ’ ‘ಸ್ಮಿಥ್’ ಮುಂತಾದ ವಿಶ್ವವಿದ್ಯಾಲಯಗಳಿಂದ ಪದವಿಗಳನ್ನು ಪಡೆದು ಹೊರಬಿದ್ದ ಸ್ತ್ರೀಯರು ವಿವಾಹ ಮತ್ತು ಪ್ರಜೋತ್ಪಾದನೆ ಇವುಗಳ ವಿಷಯದಲ್ಲಿ ಹೆಚ್ಚಾಗಿ ಅಸಮ್ಮತಿಯನ್ನೆ ತೋರಿಸಿದರು. (Mankind at cross-roads by Edward East)” “ಸರ್ವಸಾಧಾರಣವಾಗಿ ನೋಡಿದರೆ, ಪದವಿಯನ್ನು ಪಡೆದ ಸ್ತ್ರೀಯರಿಗಿಂತ ಪದವೀಧರರಾದ ಪುರುಷರಲ್ಲಿ ವಿವಾಹದ ಪ್ರಮಾಣವು ಹೆಚ್ಚು ಕಂಡುಬಂದಿದೆ. ಆದರಲ್ಲಿಯೂ ಈ ಕುಟುಂಬಗಳಲ್ಲಿಯ ವಿವಾಹಗಳ ಸಂಖ್ಯೆ ವಿವಾಹದ ವಯಸ್ಸು, ಮತ್ತು ಜನನ ಸಂಖ್ಯೆ, ಇವುಗಳಲ್ಲಿ ಕಂಡು ಬರುವ ಪ್ರಮಾಣವನ್ನು ನೋಡಿದರೆ ಸಮಾಜದಲ್ಲಿ ಈ ವರ್ಗದ ವಿನಾಶವು ಖಂಡಿತವಾಗಿದೆಯೆಂದು ಕಂಡುಬರುವುದು. (A study of birth-rate of Harward and Yale Graduates by Phillips) ” ಇನ್ನು ಈ ವಿಷಯದಲ್ಲಿ ನಿಶ್ಚಿತ ಅಂಕೆಗಳನ್ನೆ ಕೊಟ್ಟು ತೋರಿಸುವುದಾದರೆ ಇದು ಹೀಗೆ “ಪದವೀಧರರಾದ ಹೆಂಗಸರಲ್ಲಿ ನೂರಕ್ಕೆ ನಲವತ್ತು ಜನರ ಮದುವೆಯಾಗಿದ್ದು, ಅವರಿಗೆ ಸಾಧಾರಣವಾಗಿ ೧ ಮಕ್ಕಳಾದುವು (Education of women by Goodsell; Article by Paul Popenoe.—journal of Heridity 1917 ; co-education & Eugcnics by Banker) ” ಇದರ ಮೇಲಿಂದ ನೋಡಲಾಗಿ ಅವರ ಘಾತುಕ ಮನಸ್ಥಿತಿಯೂ ಗರ್ಭಾಶಯದ ವಿಕೃತಿಯೂ ಕಂಡುಬರುವುದಿಲ್ಲವೆ? ಪ್ರೋ. ಹೋಮ್ಸ ಎಂಬ ವಿದ್ವಾಂಸನು ಹೀಗೆ ಅಭಿಪ್ರಾಯ ಪಡುತ್ತಿದ್ದಾನೆ: “ಕಾಲೇಜುಗಳಲ್ಲಿ ಶಿಕ್ಷಣಪಡೆಯುತ್ತಿದ್ದ ಸ್ತ್ರೀಯರಲ್ಲಿ ನೂರರಲ್ಲಿ ಐವತ್ತು ಜನ ಅವಿವಾಹಿತರಾಗಿಯೆ ಉಳಿಯುತ್ತಾರೆ. ಅತ್ಯಂತ ಬುದ್ಧಿಮತಿಯರೂ, ಕರ್ತೃತ್ವಶಾಲಿನಿಯರೂ ಆದ ಸ್ತ್ರೀಯರ ಮೇಲೆಯೆ ಅವಿವಾಹಿತರಾಗಿ ಉಳಿಯುವ ಪ್ರಸಂಗ ಬರಹತ್ತಿದೆಯೆಂದು ಸಮಾಜಶಾಸ್ತ್ರದ ಅಭ್ಯಾಸದಲ್ಲಿ ಕಂಡುಬಂದಿದೆ. ನಿಜವಾಗಿ ನೋಡಿದರೆ ಇಂದು ಸಾಮಾಜಿಕ ಕಾರ್ಯಮಾಡಬೇಕೆಂಬ ಹಂಬಲದಿಂದ ಅವಿವಾಹಿತರಾಗಿ ಉಳಿಯುವ ಹೆಂಗುಸರ ಸಂತಾನವೆ ಸಮಾಜದಲ್ಲಿ ಹೆಚ್ಚಾಗಿ ಉಳಿಯಬೇಕಾಗಿದ್ದಿತು. ‘ಸ್ತ್ರೀ ಸ್ವಾತಂತ್ರ್ಯ’ ಎಂಬ ತತ್ತ್ವದಿಂದ ಆದಾವ ಲಾಭವಿದೆಯೊ ಕಾಣೆವು; ಆದರೆ ಈಗ ಅದರಿಂದ ವಾಂಶಿಕ ಹಾನಿಯೆ ಆಗತೊಡಗಿದೆಯೆಂದು ನಮ್ಮ ಅಭಿಪ್ರಾಯವಿದೆ. ಸಮಾಜ ಪ್ರಗತಿಯ ಹೆಸರಿನಿಂದ ನಡೆದ ಈ ವಾಂಶಿಕ ಅಧೋಗತಿಯ ಕೊನೆಯ ಪರಿಣಾಮವು ಮಾತ್ರ ವಂಶನಾಶವೆ ಆಗಿದೆ. (The trend of race by S. J. Holmes P. 242) ” ಇದು ವಂಶದ ದೃಷ್ಟಿಯಿಂದ ಆಗುತ್ತಿರುವ ಹಾನಿಯ ಮಾತಾಯಿತು. ಇನ್ನು ಸ್ತ್ರೀ–ದೇಹದಲ್ಲಿಯ ನಿಸರ್ಗಧರ್ಮವನ್ನೂ, ಮತ್ತು ಇದೀಗ ಶಿಕ್ಷಣಕ್ಕಾಗಿ ಹೆಣ್ಣು–ಮಕ್ಕಳ ಬುದ್ಧಿಯಮೇಲೆ ಬೀಳುತ್ತಿರುವ ಭಾರವನ್ನೂ ನೋಡಿದರೆ, ಶಿಕ್ಷಣಕ್ಕಾಗಿ ಬಲವಂತದಿಂದ ಹೆಣ್ಣುಮಕ್ಕಳಿಗೆ ಕೊಡುತ್ತಿರುವ ಕೌಮಾರ್ಯದೀಕ್ಷೆ ಅವರ ಹಿತಕ್ಕಾಗದೆ ಹಾನಿಗೇ ಕಾರಣವಾಗುತ್ತಿರಬೇಕು. ಇಂತಹ ಸ್ಥಿತಿಯಲ್ಲಿ ಬೌದ್ಧಿಕ ಶಿಕ್ಷಣದ ಪರಿಣಾಮವು ಅತ್ಯಂತ ಸಂಕ್ಲಿಷ್ಟ ಮತ್ತು ನಿಸರ್ಗತಃ ಮೃದುವಾದ ಸ್ತ್ರೀದೇಹದ ಆರೋಗ್ಯದ ಮೇಲೂ ಆಗಿ ಅದರ ಹಾನಿಯನ್ನೆ ಮಾಡುತ್ತಿದ್ದರೆ ಆಶ್ಚರ್ಯವಲ್ಲ. ಈ ವಿಷಯದಲ್ಲಿ ಮಿಸೆಸ್ ಅರ್ಚಿಬಾಲ್ಡ್ ಕಾಲಾಕೋಹನ್ ಎಂಬ ಪಾಶ್ಚಾತ್ಯ ವಿದುಷಿಯೊಬ್ಬಳು ಬಹು ಸಿಟ್ಟಿನ ಶಬ್ದದಲ್ಲಿ ಹೀಗೆ ಅಭಿಪ್ರಾಯಪಟ್ಟಿದ್ದಾಳೆ; “ನರಬಲಿಯನ್ನು ತಕೊಳ್ಳುವ ‘ಮೋಲೆಕ್’ ದೇವತೆಯಂತೆ, ಶಿಕ್ಷಣ ಕ್ರಮದಲ್ಲಿಯ ಪರೀಕ್ಷಾರೂಪಿ

ಯೌವನ ದೇವತೆಗೆ ಸ್ತ್ರೀದೇಹದ ಆರೋಗ್ಯದ ಬಲಿದಾನವಾಗುತ್ತಿದೆ. ಇಂದಿನ ಸ್ತ್ರೀ-ಶಿಕ್ಷಣದ ದಾರಿಯುಮೇಲೆ, ನಿಸ್ಸತ್ವ, ವಿಕಲಾಂಗ ಮತ್ತು ಮೃತಪಟ್ಟ ಸ್ತ್ರೀದೇಹಗಳೆ ಅತ್ತಿತ್ತ ಹರಡಿಕೊಂಡಿವೆ. Qouted by Pro. A. R. Wadia in Ethics of Feminisms P. 59 Gorge Allen Unwin & Ltd. London 1923)" ಇದೇ ಅಲ್ಲವೆ ಲೇಖಕರು ಆಧಾರಕ್ಕಾಗಿ ತಕ್ಕೊಂಡ ಶಿಕಾಗೋದ ಡಾ. ಜಾರ್ಜ ಎ. ಡಾರ್ಸಿ ಅವರ 'ಆರೋಗ್ಯಕರವಾದ ಶಿಕ್ಷಣ'? ಇದೀಗಿನ ಸುಶಿಕ್ಷಿತರೆಂದೆನಿಸಿಕೊಳ್ಳುವ ಎಂದರೆ ೧೮–೩೦ ವರುಷಗಳನ್ನು ಸ್ಕೂಲು-ಕಾಲೇಜಿನಲ್ಲಿ ಕಳೆದ ತರುಣಿಯರಲ್ಲಿ ಅನೇಕಬಗೆಯ ಮಾನಸಿಕ ಮತ್ತು ಶಾರೀರಿಕ ಬೇನೆಗಳು ಕಂಡುಬರುತ್ತಿದ್ದು, ಆರೋಗ್ಯ ಮತ್ತು ಶಿಕ್ಷಣ ಇವುಗಳ ಸಂಬಂಧದ ದೃಷ್ಟಿಯಿಂದ ನೋಡಹೋದರೆ ಇಂತಹ ವ್ಯಾಧಿಗಳ ಅಸ್ತಿತ್ವ, ಮತ್ತು ಅವುಗಳ ಬೆಳೆವಣಿಗೆ ಕಂಡುಬರುತ್ತಿದ್ದುದಕ್ಕೆ ಕಾರಣವೇನು?– ಎಂಬ ಪ್ರಶ್ನೆ ಬಂದು ನಿಲ್ಲದೆ ಇರದು. ವಂಶವೃದ್ಧಿಗೆ ಸಂಬಂಧಿಸಿದ ಶಾರೀರಿಕ ವ್ಯಾಧಿಗಳ ವ್ಯಾಪ್ತಿಯ ಬಗ್ಗೆ ಬರೆಯುತ್ತಿರುವಾಗ ಅಮೇರಿಕೆಯ ಸುಪ್ರಸಿದ್ಧ ಸ್ತ್ರೀರೋಗ ಚಿಕಿತ್ಸಕರಾದ '**ಡಾ. ಗೈಲಾರ್ಡ ಥಾಮಸ್**' ಎಂಬವರು ಹೀಗೆ ಬರೆಯುತ್ತಾರೆ; "ನಮ್ಮ ಅಮೇರಿಕೆಯ ಸ್ತ್ರೀವರ್ಗದಲ್ಲಿಯಂತೂ ಶಾರೀರ ಶಾಸ್ತ್ರದ ದೃಷ್ಟಿಯಿಂದ ನೋಡಿದರೆ, ಮಡದಿ ಮತ್ತು ಮಾತೆಯರ ಪದವನ್ನು ಪಡೆಯಲು ಸುಮಾರಾಗಿ ನೂರರಲ್ಲಿ ನಾಲ್ಕೇ ಜನರು ಯೋಗ್ಯರಾಗಿದ್ದಾರೆ. (Quoted in Feminism and sex-Extinction P. 135)" ಇದರಂತೆಯೆ, ವಂಶವೃದ್ಧಿಯ ಕಾರ್ಯದೊಡನೆ ಸಂಬಂಧವಿರುವ ಸ್ತ್ರೀಯರ ಇಂದ್ರಿಯಗಳ ಬಗೆಗೆ ವಿಚಾರ ಮಾಡುತ್ತಿರುವಾಗ, '**ಡಾ. ಅರಾಬೇಲಾ ಕೆನೇಲಿ**' ಎಂಬವ[illegible] ಹೀಗೆ:- "ಈ ಪರಿಸ್ಥಿತಿಯಲ್ಲಿ ಹೊಸ ವಿಚಾರದ ಹುಚ್ಚಿನಿಂದ ತಲೆತಿ[illegible] ಹೆಂಗಸರ ಸ್ತನ ಪ್ರದೇಶದ ವಿಕಾಸವು ಕಟ್ಟಾಗುತ್ತಿದ್ದು, ವಂಶವೃದ್ಧಿಗೆ ಪೋಷಕವಿದ್ದ ತಾಯ್ತನದ ನೆಲೆಯೆ ಅಲ್ಲಿಲ್ಲವಾಗಿದೆ. ಮೊಲೆಯುಣ್ಣಿಸಿ ಮಕ್ಕಳನ್ನು ಕಾಪಾಡುತ್ತಿರುವಾಗ, ಅದೇ ಕ್ರಿಯೆಯೊಡನೆ ತಮ್ಮ ಅಗಮ್ಯ ಚಿಚ್ಛಕ್ತಿಯನ್ನು ನೀಡುವುದೂ ಅವರಿಗೆ ಸಾಧ್ಯವಿಲ್ಲ. ಅವರ ಕಟಿಪ್ರದೇಶದ ಬೆಳೆವಣಿಗೆಯೆ ಕಟ್ಟಾಗಿದ್ದು, ಸಶಕ್ತ ಸಂತಾನದ ಸ್ವಾಭಾವಿಕ ಗರ್ಭವಾಸದ ದೃಷ್ಟಿಯಿಂದ ಅದು ನಿರುಪಯೋಗಿಯಾಗಿದೆ. (Quoted in Feminism and sex–Extinction P. 134)" ಶಿಕ್ಷಣ ಮತ್ತು ಮಾನಸಿಕ ಶ್ರಮ ಇವುಗಳ ವಿಚಾರದಲ್ಲಿ 'ಹರ್ಬರ್ಟ ಸ್ಪೇನ್ಸರ್' ಎಂಬ ಪ್ರಸಿದ್ಧ ವಿಜ್ಞಾನಿಯು, "ಸ್ತ್ರೀಯರಲ್ಲಿಯ ಬಂಜೆತನದ ಹೆಚ್ಚು-ಕಡಿಮೆ ಪ್ರಮಾಣವು, ಅವರ ಮೇಲೆ ಅವಾಸ್ತವವಾಗಿಯೂ ಅತಿಯಾಗಿಯೂ ಬೀಳುತ್ತಿರುವ ಮಾನಸಿಕ ಶ್ರಮಕ್ಕೆ ಸಂಬಂಧಿಸಿದುದಾಗಿದೆ" ಎಂದು ಪಡುತ್ತಿರುವ ಅಭಿಪ್ರಾಯವನ್ನು ವಿಖ್ಯಾತ ಮಾನಸಶಾಸ್ತ್ರಜ್ಞನಾದ ಡಾ. **ಜಿ. ಸ್ಟೆನ್ಲೆ ಹಾಲ್** ಎಂಬವನು ಎತ್ತಿ ತೋರಿಸಿ, ಅದೇ ವಿಷಯಕ್ಕೆ "ವಿಶ್ವವಿದ್ಯಾನಿಲಯದಲ್ಲಿ ಉಚ್ಚ ಶಿಕ್ಷಣವನ್ನು ಪಡೆದ ಪದವೀಧರರಾದ ಇದೀಗಿನ ಹುಡುಗಿಯರಲ್ಲಿ ಇದರ ಪ್ರತ್ಯಂತರವು ಚೆನ್ನಾಗಿ ಕಂಡುಬರುತ್ತಿದೆ" ಎಂದು ತನ್ನ ಅಭಿಪ್ರಾಯವನ್ನು ಕೊಟ್ಟಿದ್ದಾನೆ. (Adolescence Vol. 11 P. 602 by G. Stanley Hall PH. D. LL. D. D. Appletion & Co. Newyork 1924) ಅದೇ ಪುಸ್ತಕದಲ್ಲಿಯೆ ಆ ಶಾಸ್ತ್ರಜ್ಞನು ಆಧುನಿಕ ಶಿಕ್ಷಣದಿಂದ ಹೆಣ್ಣುಮಕ್ಕಳ ಮನೋವೃತ್ತಿಯ ಮೇಲಾಗುವ ಅನಿಷ್ಟದ ಬೀಜಾರೋಪಣೆಗಳನ್ನು— ಬೇರೆ ಬೇರೆ ಎಂಟು ಕಡೆಗೆ – ಸ್ವತಂತ್ರ ಸಂಶೋಧನೆಯಲ್ಲಿ ಕಲೆಹಾಕಿದ ಸಂಗತಿಗಳಿಂದ ಬಹು ಚೆನ್ನಾಗಿ ತೋರಿಸಿದ್ದಾನೆ. ಅದನ್ನು ಉತ್ತರಾರ್ಧದಲ್ಲಿ ಇದ್ದಕ್ಕಿದ್ದಂತೆಯೆ ಕೊಡಲಿದ್ದೇನೆ. ಅದೇ ಪುಸ್ತಕದಲ್ಲಿ '**ಸ್ಟನಲೇ ಹಾಲ**'ನು "ಶಾಸ್ತ್ರ ಮತ್ತು ವಿದ್ಯೆ ಇವುಗಳ ಅನುಗ್ರಹವಾಗುವುದಕ್ಕೆ ಒಂದುಬಗೆಯ ನಿಸರ್ಗಸಿದ್ಧದಾನದ ಅವಶ್ಯಕತೆ ಇದ್ದು ಅದನ್ನು ನಿಸರ್ಗವು ಸ್ತ್ರೀಜಾತಿಗೆ ಕೊಟ್ಟೇ ಇಲ್ಲ." ಎಂದು ಯಾವುದೂ ಮುಚ್ಚುಮರೆಯಿಲ್ಲದೆ ಸ್ಪಷ್ಟವಾಗಿ ಹೇಳಿಬಿಟ್ಟಿದ್ದಾನೆ. ಇದಾಯಿತು ಪರದೇಶದ ಮಾತು. ನಮ್ಮ ಹಿಂದುಸ್ಥಾನದ ಉದಾಹರಣೆಯನ್ನೆ ನೋಡಬೇಕಾದರೆ, ಪ್ರೊ. ವಾಡಿಯಾ ಇವರು ತಮ್ಮ ಒಂದು ಪುಸ್ತಕದಲ್ಲಿ ಹೀಗೆ ಬರೆದಿದ್ದಾರೆ. "ಹಿಂದುಸ್ಥಾನದಲ್ಲಿ, ಅದರಲ್ಲಿಯೂ ಹೆಚ್ಚಾಗಿ ಮುಂಬಯಿಯಲ್ಲಿ, ಕಳೆದ ಇಪ್ಪತ್ತು ವರುಷಗಳಿಂದ ಗಂಡಸರಿಗೇ ಕೊಡಲು ಯೋಗ್ಯವಾದ ಶಿಕ್ಷಣವು, ಸ್ತ್ರೀಶಿಕ್ಷಣವೂ, ಆಗಿ ಅದು ಸ್ಕೂಲುಗಳಿಗೆ ಹೋಗುವ ಹುಡುಗಿಯರ ಆರೋಗ್ಯವನ್ನೆಲ್ಲ ಹಾಳುಮಾಡುತ್ತಿದ್ದು, ಪದವೀಧರರಾದ ಪಾರಶೀ ತರುಣಿಯರಲ್ಲಿ ಬಹು ಜನರು ಹೆರಿಗೆಯ ಕಾಲಕ್ಕೇ ಮೃತಪಡುತ್ತಿರುವರು. ಪಾಶ್ಚಾತ್ಯರಲ್ಲಿಯೂ ಇದೇ ಪರಿಸ್ಥಿತಿ ಇದೆಯೆಂದು ಅಲ್ಲಿಯ ಎಷ್ಟೋ ಡಾಕ್ಟರರು ಹೇಳುತ್ತಾರೆ. ಪ್ರಸೂತಿ ಪ್ರಸಂಗವು ಈಗಿನಷ್ಟು ಎಂದೂ ಭೀತಿಪ್ರದವಾಗಿರಲಿಲ್ಲ. ಕಳೆದ ಐವತ್ತು ವರುಷಗಳಿಂದ ಮಾತ್ರ ಹೀಗಾಗುತ್ತಿದೆ. (Ethics of Feminism P. 60)' ಇನ್ನೂ ಇಂತಹವಿನ್ನೆಷ್ಟೋ ಆಧಾರಗಳನ್ನು ತೋರಿಸಬಹುದಾಗಿದ್ದರೂ ಇಂತಹ ಚಿಕ್ಕ ಲೇಖನಗಳಲ್ಲಿ ಅದಕ್ಕೆಲ್ಲ ಆಸ್ಪದವಿಲ್ಲ. ಒಟ್ಟಿನಲ್ಲಿ ಇದೆಲ್ಲವನ್ನು ನೋಡಿದರೆ ಉಚ್ಚ ಶಿಕ್ಷಣಕ್ಕೆ ಸ್ತ್ರೀ ದೇಹ-ಬುದ್ಧಿಗಳೆ ಅಸಮರ್ಥವಿದ್ದು, ಅಂತಹ ಶಿಕ್ಷಣವೇ ಸ್ತ್ರೀದೇಹ ಮತ್ತು ಅದರ ನಿಸರ್ಗಸಿದ್ಧ ಕಾರ್ಯ ಇವುಗಳಿಗೆ ಅತ್ಯಂತ ಹಾನಿಕರವಾಗಿದೆಯೆಂಬ ಮಾತು ಇಷ್ಟೊಂದು ಸ್ಪಷ್ಟವಾಗುತ್ತಿರಲು, ಸಹಶಿಕ್ಷಣದ ಮಾತಿಗೆ ಅವಸರವೆಲ್ಲಿದೆ! ಒಮ್ಮೆ ಯಾವನೊಬ್ಬನು, ಅನುಕರಣ ಕುತೂಹಲದಿಂದಲೋ, ಹೊಸತು ಬೇಕೆಂಬ ಹಂಬಲದಿಂದಲೋ ಇಲ್ಲವೆ ತನ್ನಲ್ಲಿಯೆ ತನಗೆ ತಿಳಿಯದಂತೆ ಆಳವಾಗಿ ಹುದುಗಿಕೊಂಡ ಯಾವುದೊಂದು ಆಶೆ-ಭಾವನೆಗಳೆಲ್ಲ ಬೇರೆ ರೂಪವನ್ನೆ ತಾಳಿದ–ಉದ್ರೇಕದಿಂದಲೊ, ಯಾವುದೊಂದು ವಿಷಯವನ್ನು ಶಾಸ್ತ್ರೀಯ ಯೋಜನೆ ಇಲ್ಲದೆಯೆ ಭಾವಿಸಿ ನಂಬಿ ನಡೆದುಬಿಡುವನು. ಅದನ್ನ ನೋಡಿ ಇನ್ನೊಬ್ಬನು ಹಾಗೆಯೆ ಅವನ

ಬೆನ್ನಟ್ಟಿಬಿಡುವನು. ಹೀಗಾಗಿ ಆ ಭಾವನಾ ಪ್ರವಾಹದಲ್ಲಿ ಒಬ್ಬರ ಹಿಂದೊಬ್ಬರು ಯಾವ ಯೋಚನೆಯೂ ಇಲ್ಲದೆ ಜಿಗಿಯುತ್ತ ಸೆಳವಿಗೆ ಸಿಕ್ಕಿ ಹಿಂದೆ ನೋಡದೆಯೆ ತೇಲುತ್ತ ಹೊರಡುವರು. ಈ ರೀತಿಯನ್ನು ನಮ್ಮ ಹಿಂದುಸ್ಥಾನದ ರಾಜಕೀಯ ಕ್ಷೇತ್ರದಲ್ಲಿ, ಸಾಮಾಜಿಕ ಕ್ಷೇತ್ರದಲ್ಲಿ, ಧಾರ್ಮಿಕ ಕ್ಷೇತ್ರದಲ್ಲಿ ಎಲ್ಲೆಲ್ಲಿಯೂ ನೋಡತೊಡಗಿದ್ದೇವೆ. ಇದರಲ್ಲಿ ಸೋಜಿಗವಿಷ್ಟೆ. ತಾವು ಮುಳುಗಲು ಹೊರಡುವುದು; ಮತ್ತೆ ದಡದಲ್ಲಿ ಸುರಕ್ಷಿತವಾಗಿ ನಿಂತವರಿಗೆ ಅಟ್ಟಹಾಸದಿಂದ ಹಾರಲು ಹೇಳುವುದು; ಅವರು ಜಿಗಿಯದಿದ್ದರೆ ಮೂರ್ಖರೆಂದು ಕನಿಕರಪಡುವುದು. ಇರಲಿ, ಬರೆಹಗಾರರು ಇಟ್ಟ ಸ್ತ್ರೀ-ಪುರುಷರ ಗುಣಾಂಶ ಸಮತಿಯ ಸಿದ್ಧಾಂತವನ್ನಂತು ಈ ಮೊದಲು ಚರ್ಚಿಸಿ ಆಗಿದೆ. ಇನ್ನವರ. ತಮ್ಮ ಬರೆಹದಲ್ಲಿ ಸಹ ಶಿಕ್ಷಣ ವಿಷಯವನ್ನೆ ಮುಖ್ಯವಾಗಿ ಮುಂದಿಟ್ಟು ಚರ್ಚಿಸಿರುವರೆಂದ ಮೇಲೆ, ಅದನ್ನು ವಿಮರ್ಶಿಸುವುದೂ ಅಷ್ಟೇ ಅಪರಿಹಾರ್ಯವಿದ್ದುದರಿಂದ, ಅದರ ಹಿತಾಹಿತವನ್ನೂ ಇದೇ ಬರೆಹದ ಉತ್ತರಾರ್ಧದಲ್ಲಿ ನೋಡುವಾ.

(೩೫೭ನೆಯ ಪುಟದಿಂದ ಮುಂದುವರಿದುದು)

“ಮಹಾರಾಯಾ, ನಮ್ಮ ಈ ನಿರಾಹಾರದ ವೃತ್ತಾಂತ ಅಷ್ಟು ...ಸಿದ್ಧಪಡಿಸಬೇಡಾ. ನಮ್ಮ ಮನಿತನಕ್ಕs ಕಷ್ಟ ಬಂದೀತು. ...ಷ್ಟಾಳದಿನ ಈಗ, ಏನೋ ಧರ್ಮಮೂಢ ಭಕ್ತರು ಹೋದಲ್ಲೆ ...ಂದಲ್ಲೆ ಅಷ್ಟು ಭಿಕ್ಷಾ ಮಾಡ್ತಾರ. ಮತ್ತ ಈ ಏಕಾದಶೀ ...ಷಯ ತಿಳಿದರ ನಾವು ದಿನಾನೂ ಏಕಾದಶೀನs ಮಾಡಬೇಕಾ...ತು !” ಎಂದು ಆಚಾರ್ಯರು ಕಡೆಗೆ ಹೇಳಿದರು.

“ಏನೂ ಕಾಳಜೀ ಮಾಡಬೇಡರಿ ಮಹಾತ್ಮರೇ. ಈ ವಿಷಯವನ್ನು ಗೌಪ್ಯವಾಗಿ ಇಡುತ್ತೇನೆ” ಎಂದು ಅವರನ್ನು ಸಮಾಧಾನ ಮಾಡಿದೆ. ಆಪ್ಪಾದಮೇಲೆ ಅವರು ತಮ್ಮ ಮುಂದಿನ ಪಯಣವನ್ನು ಕತ್ತಲಿರುತ್ತಲೇ ಮಾಡಿಬಿಟ್ಟರು.

“ಬಹಳ ಮೋಜಿನ ನಾಟಕಾ ನಾಗಪ್ನೋರೇ ಇದು! ನಮ್ಮ ಥೇಟರಿನಲ್ಲಿ ಮಾಡಿದ್ದರೆ ದುಡ್ಡು ಚೆನ್ನಾಗಿ ಆಗುತ್ತಿತ್ತು” ಎಂದು ಒಂದು ಗಿರಾಕಿ ಅಭಿಪ್ರಾಯಪಟ್ಟಿತು. ಅಷ್ಟೊತ್ತಿಗೆ ಎಲ್ಲರೂ ತಮ್ಮ ತಮ್ಮ ಕಾರ್ಯಗಳಿಗೆ ಹೊರಟರು. ನಾಗಪ್ಪನೂ ಡಿಕ್ಕಿಯೂ ಮನೆಗೆ ತಿರುಗಿದರು.

ರೋಗಪರೀಕ್ಷೆಯ ಕೈಪಿಡಿ !
ರೋಗಚಿಕಿತ್ಸೆಯ ಕೈಗನ್ನಡಿ !

ಜೀವನ-ರಸಾಯನ-ಚಿಕಿತ್ಸಾ-ಶಾಸ್ತ್ರ

ಎಂದರೆ

ಹನ್ನೆರಡು-ಕ್ಷಾರ-ಚಿಕಿತ್ಸಾಪದ್ಧತಿ !

ಲೇಖಕರು :
ಡಾ. ಗೋ. ಸ. ಪಳಸುಲೆ L.M.&.S. ಪುಣೆ

ಕನ್ನಡಿಸಿದವರು :
ಶ್ರೀ. ನಾ. ತಿ. ದಾತಾರ ಬಿ. ಎ. ಬೆಳಗಾಂವಿ

೬೫೦ ಪುಟಗಳ ಹೊಳಪಿನ ಹಾಳೆಯ ಕ್ಯಾಲಿಕೊ ಬೈಂಡಿನ ಸುಂದರ ಹೊತ್ತಿಗೆ !
ಬೆಲೆ : ಮೂರೇ ರೂಪಾಯಿಗಳು.

ಪುಸ್ತಕ ದೊರೆಯುವ ಸ್ಥಳ :
೧. ಮನೋಹರ ಗ್ರಂಥ ಭಾಂಡಾರ, ಧಾರವಾಡ
೨. ಸ್ಟೂಡಂಟ್ಸ್ ಓನ್ ಬುಕ್‌ಡಿಪ್ಪೊ, ಧಾರವಾಡ

Head office:– Shri Krishna Homoeo Pharmacy
Budhwar Peth, Poona.

ರಾಮದುರ್ಗ ದುರಂತ ವಿಚಾರಣೆಯಲ್ಲಿ ಪಕ್ಷ-ಪ್ರತಿಪಕ್ಷಗಳಿವೆ

ಆದರೆ

ಶ್ರೀರಂಗರ ಸಾಹಿತ್ಯದ ವಿಷಯದಲ್ಲಿ ಮಾತ್ರ ಎಲ್ಲರದೂ ಒಂದೇ ಅಭಿಪ್ರಾಯ.

★

‘ಸಾಮಾಜಿಕ ನಾಟಕಕ್ಕೆ ಸಹಜವಾದ ಶೈಲಿ ಶ್ರೀರಂಗರದು. ಜತೆಯಲ್ಲಿ ಅವರ ಪರಿಹಾಸ್ಯದ ರೀತಿಯೊಂದಿದೆ. ಇವೆರಡರ ಸೇರುವಿಕೆಯಿಂದ ಇವರ ಕತ್ತರಿ ಕತ್ತರಿಸುವ ಚುರುಕು ಹೆಚ್ಚು.’ —ಸಾಹಿತ್ಯಪರಿಷತ್ ಪತ್ರಿಕೆ

‘ಇವರಿಗೆ (ಶ್ರೀರಂಗರಿಗೆ) ನಾಟಕವು ಒಂದು ವಿನೋದವಲ್ಲ; ಧ್ಯೇಯದರ್ಶನ ಅಥವಾ ಕಲಾಚಿತ್ರವಲ್ಲ; ಇದು ಸಮಾಜಜೀವನದ ಕೈಗನ್ನಡಿ; ಅದರ ಸಂಸ್ಕರಣಕ್ಕೆ ಸಾಧನ.’ —ಪ್ರಬುದ್ಧ ಕರ್ನಾಟಕ

‘ಒಂದು ಶಬ್ದದಲ್ಲಿ ಬೇಕಾದಷ್ಟು ಮಹಾಭಾರತಗಳನ್ನು ಹೊರಡಿಸಬಲ್ಲರು (ಶ್ರೀರಂಗರು).’
—ಜಯ ಕರ್ನಾಟಕ

ವಿ. ಸೂ:— ಇವರ ಬೇಕಾದ ಗ್ರಂಥಕ್ಕಾಗಿ ‘ಜಯಂತಿ’ ಕಾರ್ಯಾಲಯಕ್ಕೆ ಬರೆಯಿರಿ.

ಸಣ್ಣ ಕತೆ

ಸ್ನೇಹದ ಸಮಾಧಿ

★

ಭಾವನಾತ್ಮಕ ಜೀವಿ ಬೇವನ್ನು ಬೆಲ್ಲವನ್ನಾಗಿ ಭಾವಿಸಲಿಕ್ಕೂ ತಡೆಯಿಲ್ಲ; ಬೆಲ್ಲವನ್ನು ಬೇವೆಂದು ಚೆಲ್ಲಿಬಿಡಲೂ ತಡೆಯಿಲ್ಲ. ಹೀಗಿಲ್ಲದಿದ್ದರೆ ಇಲ್ಲಿಯ ಕಥಾನಾಯಕ ಸರೋಜೆಯ ಸಲುವಾಗಿ ಅಳುತ್ತ ಕುಳಿತುಕೊಳ್ಳುವ ಸಂದರ್ಭವೆಲ್ಲಿ ಒದಗುತ್ತಿದ್ದಿತು?

★

ಶ್ರೀ. ಬಸವರಾಜ ಕಟ್ಟೀಮನಿ

ಅವರಿಂದ

" ಮೂರು ದಿನಗಳು ಜಾರಿದವು ಬರಿ
ದಾರಿ ಕಾಯುತಲಿರುವೆನು
ಹಾರಯಿಕೆಯೆಂತಹದು ನನ್ನವ
ಬಾರನೇಕೆನುತಿರುವೆನು "

ಹಾಡು ಕೊನೆಗಾಣುತ್ತಿದ್ದ ಹಾಗೆಯೆ ತಟ್ಟನೆ ಹಿಂದಿನಿಂದ ಹೋಗಿ ಸರೋಜೆಯ ಕಣ್ಣುಗಳನ್ನು ಎರಡು ಕೈಗಳಿಂದಲೂ ಬಿಗಿಯಾಗಿ ಮುಚ್ಚಿದೆ.

" ಅಯ್ಯೋ ದಮ್ಮಯ್ಯ, ಬಿಟ್ಟುಬಿಡೀಂದ್ರೆ! ಕಣ್ಣು ಕುರುಡಾಗಿ ಹೋದೀತು! ಇದೆಂತಹ ಸರಸ?" ಸರೋಜಾ ಹುಸಿಮುನಿಸಿನಿಂದ ಹೇಳಿದಳು.

ಕಣ್ಣುಬಿಟ್ಟ ಕೈಗಳಿಂದ ಆಕೆಯ ಗದ್ದವನ್ನು ಹಿಡಿದೆತ್ತಿ ನಸುನಗುತ್ತ ಮಾತನಾಡಿದೆ.

" ಕುರುಡಿಯಾದರೇನೂ ಪರವಾ ಇಲ್ಲ ಬಿಡು! ಇನ್ನೇನು ವರಸಂಶೋಧನೆಯ ಕಷ್ಟ ಇಲ್ಲ ತಾನೇ? ಹೇಗೂ ನಾನು ಕಟ್ಟಿಕೊಂಡು ಬಿಟ್ಟಿದ್ದೇನಲ್ಲ ಕತ್ತಿನಲ್ಲಿ ಈ ಕಲ್ಲನ್ನು!"

ಸೊಗಸಾಗಿ ಕೊರಳು ಕೊಂಕಿಸಿ ಬಿಂಕದ ದನಿಯಲ್ಲಿ ಹೇಳಿದಳು ಸರೋಜಾ.

" ಸರಿ. ಸರಿ. ಸ್ವಾರಸ್ಯವಾದ ಉಪಮಾನ! ನಿಮಗೇನೇ ಸಿಕ್ಕಬೇಕಾದ್ದು ಈ ಸಲದ ಬಹುಮಾನ?"

ಆಕೆಯ ಕೆಂಪು ಕೆನ್ನೆಯ ಮೇಲೆ ಮೃದುವಾದ ಏಟುಕೊಟ್ಟು ಕಿರುನಗೆಯೊಂದಿಗೆ ಕೇಳಿದೆ.

" ಎಂತಹ ಬಹುಮಾನವೇ ಬಿನ್ನಾಣಗಿತ್ತಿ?"

ಸ್ವರ್ಗೀಯ ಸ್ಮಿತಲಹರಿಯನ್ನು ಗುರುಳುಗುರುಳಾಗಿ ಹೊರದೂಡುತ್ತ ಸರೋಜಾ ಹೇಳಿದಳು.

" ನೋಬೆಲ್ ಬಹುಮಾನ!"

" ಓಹೊ! ಹೀಗೇನು?"

" ಅಲ್ಲದೇನು? ನನ್ನನ್ನು 'ಕಲ್ಲು' ಎಂದು ಕರೆಯುವ ನಿಮ್ಮಂತಹ ಅದ್ಭುತ ಕವಿಗಳಿಗಲ್ಲದೆ ಇನ್ನಾರಿಗೆ ತಾನೇ ಆ ಬಹುಮಾನ ಯೋಗ್ಯವಾದೀತು? ಖಂಡಿತ ನಾಳೆಯೇ ಸ್ವೀಡನ್ನಿನ ಅರಸರಿಗೊಂದು ತಂತೀ ಬಿಡುತ್ತೇನೆ— 'ಸ್ತ್ರೀಯರನ್ನು 'ಕಲ್ಲು' ಅಂತ ಬಣ್ಣಿಸುವ ಮಹಾಕವಿಗಳೊಬ್ಬರು ಕರ್ನಾಟಕದಲ್ಲಿದ್ದಾರೆ' ಅಂತ ಸೂಚನೆ ಕೊಡತೇನೆ."

" ಬಿಡೇ ಎಷ್ಟು ಮಾತು ಆದು! ಹುಚ್ಚು ಹುಡುಗಿಯಿರುವೆ ಆಯಿತು! ತಮಾಷೆಗೆ ಹೇಳಿದೆ ಅಷ್ಟೆ ನಿನ್ನಂತಹ ಕೋಮಲೆಯನ್ನು 'ಕಲ್ಲು' ಅಂತ ಕರೆಯುವವನಿಗಿಂತ ಅರಸಿಕರು ಬೇರುಂಟೆ?— ಸರೋಜಾ, ಬೆಳಗಿನ ಜಾವದಲ್ಲಿ ಬಾಲರವಿಯ ಸ್ವರ್ಣಕಿರಣಗಳಲ್ಲಿ ಅರಳಿ ನಳನಳಿಸುವ ರೋಜಾ ಹೂವಿನಂತಿರುವ ನಿನ್ನನ್ನು ಪಡೆದ ನಾನೆಂತಹ ಧನ್ಯ! ಆಹಾ! ನನ್ನ ನಲ್ಲೇ!"

ಮುಂದೆ ಮಾತು ಹೊರಡಲು ನನ್ನ ಮುಖ ತೆರವಾಗಿದ್ದರೆ ತಾನೆ ಸಾಧ್ಯ? ಸರೋಜೆಯು ತಳಿದುರ್ಗಟಿ. . ಬೇಡ, ಅದನ್ನು ಹೇಳವುದಿಲ್ಲ

ಒಂದೇ ಕ್ಷಣ!

ಒಂದು ಸ್ವರ್ಗೀಯ ಚುಂಬನ!

—ಮರುಕ್ಷಣದಲ್ಲಿಯೆ ಎಲ್ಲವೂ ಮಾಯೆ!—ಎಲ್ಲಿಯ ಸರೋಜಾ! ಏನು ಕತೆ! ಎಲ್ಲವೂ ಕನಸು! ಕನಸು!

ಹೊದ್ದುಕೊಂಡಿದ್ದ ರೇಷ್ಮೆಯ ಶಲ್ಲೆಯನ್ನು ಹೊರಬಿಸುಟಿ ರಭಸದಿಂದ ಎದ್ದು ಕುಳಿತೆ.

ಕಣ್ಣುಜ್ಜಿಕೊಂಡು ಒಂದ ಬಾರಿ ಎಂಟು ದಿಕ್ಕುಗಳನ್ನು ನಿಟ್ಟಿಸಿ ನೋಡಿದೆ.

ಎದುರಿಗಿನ ಗೋಡೆಯ ಮೇಲೆ ನೇತಾಡುತ್ತಿದ್ದ ಸರೋಜಳ ಭಾವಚಿತ್ರ ಕುಲುಕುಲು ನಗುತ್ತ ಕೈಮಾಡಿ ಕರೆಯುವಂತಿದ್ದಿತು. ಭ್ರಮಿಷ್ಟನಂತೆ ತಟ್ಟನೆದ್ದುಹೋಗಿ ಆ ಭಾವಚಿತ್ರದ ಕಟ್ಟನ್ನು ಕೈಯಲ್ಲಿ ತೆಗೆದುಕೊಂಡು ಹತ್ತಿರದ ವಿರಾಮಕುರ್ಚಿಯಲ್ಲಿ ಧೊಪ್ಪನೆ ದೇಹವನ್ನೊರಗಿಸಿದೆ.

* * *

ನಾನೇನು ಮಾಡುತ್ತಿರುವೆನೆಂಬುದರ ಅರಿವು ನನಗಿರಲಿಲ್ಲ. ಹುಚ್ಚನ ಹಾಗೆ ಆ ಭಾವಚಿತ್ರವನ್ನು ನೂರಾರು ಬಾರಿ ಚುಂಬಿಸಿಯೇ

ಚುಂಬಿಸಿದೆ. ಈ ಲೋಕದ ಪ್ರಜ್ಞೆಯೆ ನನಗಿರಲಿಲ್ಲ ಯಾವುದೋ ಒಂದು ಸ್ವಪ್ನಸೃಷ್ಟಿಯಲ್ಲಿ ನಾನು ಸಂಚರಿಸುತ್ತಿದ್ದ ಹಾಗೆ ಭಾಸವಾಗತೊಡಗಿತು.

ಕಂಗಳನ್ನು ಮುಚ್ಚಿಕೊಂಡು ವಿರಾಮಕುರ್ಚಿಯಲ್ಲಿ ದೇಹವನ್ನೊರಗಿಸಿದ್ದ ಹಾಗೆ ನನ್ನ ಜೀವನದಲ್ಲಿ ಕಳೆದುಹೋದ ಸಂದರ್ಭಗಳೆಲ್ಲ ಕನಸಿನ ದೃಶ್ಯಗಳಂತೆ ಒಂದೊಂದಾಗಿ ತಲೆದೋರತೊಡಗಿದುವು. ಸರೋಜೆಯ ಭಾವಪಟದ ಕಟ್ಟನ್ನು ಹಾಗೆಯೆ ಎದೆಯ ಮೇಲಿರಿಸಿಕೊಂಡು ಚಿತ್ರಪಟವನ್ನು ನೋಡುವ ಪ್ರೇಕ್ಷಕನಂತೆ ಆ ದೃಶ್ಯಗಳನ್ನೀಕ್ಷಿಸತೊಡಗಿದೆ :—

* * *

ನಾನು ಸರೋಜಾ ಕಾಲೇಜಿನಲ್ಲಿ ಓದುತ್ತಿದ್ದಾಗಿನ ಆ ಸ್ವರ್ಗೀಯ ಕ್ಷಣಗಳು ! ಆ ಸೀನಿಯರ್ ಬಿ. ಎ. ವರ್ಗದಲ್ಲಿ ನಾನು ಓದುತ್ತಿದ್ದಾಗ ಆಗ ತಾನೆ ಆಕೆ ಪ್ರಿವ್ಹಿಯಸ್ಸಿನಲ್ಲಿ ಪದಾರ್ಪಣ ಮಾಡಿದ್ದಳು.



ಆ ಭಾವಚಿತ್ರದ ಕಟ್ಟನ್ನು ತೆಗೆದುಕೊಂಡು ಹತ್ತಿರದ ವಿರಾಮಕುರ್ಚಿಯೊಂದರ ಮೇಲೆ ಧೊಪ್ಪನೆ ದೇಹವನ್ನೊರಗಿಸಿದೆ.

ನನಗೂ ಆಕೆಗೂ ಪರಿಚಯವಾದ ಆ ಸುಂದರವಾದ ಸಂದರ್ಭ! ಅದೆಂತಹ ಸ್ವಾರಸ್ಯ! ಒಂದು ದಿನ ನಾನು ಕಾಲೇಜಿನ ಮಹಡಿಯ ಮೆಟ್ಟಲು ಗಳನ್ನೇರುತ್ತ ನಡೆದಿದ್ದೆ. ಆಕೆ ಅವಸರವಸರವಾಗಿ ಕೆಳಕ್ಕಿಳಿದು ಬಂದಳು. ತುಂಬಾ ರಭಸದಿಂದ ಬರುತ್ತಿದ್ದಾಗ ಆಕಸ್ಮಾತ್ತಾಗಿ ನನ್ನ ಕೈಯಲ್ಲಿದ್ದ ಪುಸ್ತಕಗಳಿಗೆ ಆಕೆಯ ಕೈ ತಾಕಿತು. ಪುಸ್ತಕಗಳು ಕೆಳಕ್ಕೆ ಬಿದ್ದುಬಿಟ್ಟವು. ತಕ್ಷಣ ಆಕೆ ಕೆಳಕ್ಕೆ ಬಾಗಿ ಪುಸ್ತಕಗಳನ್ನೆತ್ತಿ ನನ್ನ ಕೈಯಲ್ಲಿ ಕೊಟ್ಟು ಚೆಂದುಟಿಗಳಲ್ಲಿ ನಗೆ ಕಾಣಿಸಿ ಹೇಳಿದಳು.

" Sorry, excuse me please "

ಆಕೆಯ ಆ ಕ್ಷಣದ ಕಡೆಗಣ್ಣನೋಟ! ಅದೆಂತಹ ಮಾಟಗಾರಿಕೆ. ಅದೆಂತಹ ಇಂದ್ರಜಾಲ ಅದರಲ್ಲಿ ಅವಿತುಕೊಂಡಿದ್ದಿತು !

'ಪರವಾ ಇಲ್ಲ ' ಎಂದು ಹೇಳಿ ನಾನಾಕೆಯ ಕಡೆಗೆ ನಗೆತುಂಬಿದ ದೃಷ್ಟಿಯನ್ನು ಬೀರಿದೆ.

ಆ ಸಂದರ್ಭದಲ್ಲಿ ಹುಟ್ಟಿದ ನಮ್ಮ ಸ್ನೇಹದ ಚಂದ್ರ ದಿನೇದಿನೇ ಬೆಳೆದು ಪೂರ್ಣ ಚಂದಿರನಾದ. ಫಲಸ್ವರೂಪವಾಗಿ ಕೊನೆಯಲ್ಲಿ ವಿವಾಹವೂ ಒದಗಿಬಂದಿತು.

* * *

ಮದುವೆಯಾದ ಹೊಸದರಲ್ಲಿಯೆ ನನಗೆ ಬೆಂಗಳೂರಲ್ಲಿ ಕೆಲಸವಾಯಿತು. ಮಾವನವರು ಆ ವಿಚಾರವನ್ನು ತಿಳಿದು ನಾಲ್ಕಾರು ದಿನ ಸ್ವರ್ಗಸೌಖ್ಯದಲ್ಲೆಲ್ಲ ಸುತ್ತಿಬಂದರು ! ' ಬೆಂಗಳೂರಿನ ಹವೆ, ನೀರು ತುಂಬ ಚೆನ್ನ; ಪರವಾ ಇಲ್ಲ ಬಿಡಿ. ಭಾಗ್ಯವಂತರಪ್ಪ ನೀವು ! ಎಂದು ನೆರೆಹೊರೆಯ ಜನಗಳು ಉದ್ಗಾರ ತೆಗೆದರು.

ಆದರೆ ಆ ಸಮಾಚಾರ ತಿಳಿದ ದಿನ ಯಾರಿಗೆ ಅತ್ಯಧಿಕವಾದ ಆನಂದವಾಗಬೇಕೆಂದು ನನ್ನೆದೆ ಬಯಸುತ್ತಿದ್ದಿತೊ ಆ ವ್ಯಕ್ತಿಗೆ ಮಾತ್ರ ಏನೂ ಆನಂದವಾದಹಾಗೆ ಕಂಡುಬರಲಿಲ್ಲ. ಎರಡು ನೂರು ರೂಪಾಯಿಯ ಸಂಬಳದ ಮೇಲೆ ' ಲೆಕ್ಚರರ್ ' ಕೆಲಸ ದೊರೆತಿದೆಯೆಂಬುದನ್ನು ತಿಳಿದು ಯಾವ ' ಹೆಂಡತಿ ' ಗೆ ತಾನೆ ಆನಂದವಾಗದಿರುವುದು ? ಇಂದಿನ ಕಾಲಮಾನದಲ್ಲಂತೂ ಬಿ. ಎ., ಎಮ್. ಎ., ಪದವಿಗಳೆಂದರೆ ನಾಯಿಕೊಡೆಗಳಂತಾಗಿವೆ. ಮೂವತ್ತು–ನಲವತ್ತು ರೂಪಾಯಿಯ ಕೆಲಸ ಸಿಕ್ಕಬೇಕಾದರೆ ' ದಮ್ಮಯ್ಯ ' ಎನ್ನಿಸುತ್ತೆ ಸರೋಜಾ ಈ ಸಮಾಚಾರ ಕಿವಿಗೆ ಬಿದ್ದೊಡನೆ ಸಂತೋಷದಿಂದ ಆ ಕಾಶ ಪಾತಾಳಗಳನ್ನೊಂದು ಮಾಡಬಹುದುಎಂದು ಭಾವಿಸಿದ್ದೆ ನಾನು. ಆದರೆ ಆಕೆ ಕೇಳಿದಳು: 'ಸರಿ' ಎಂದು ಮಾತ್ರ ಎಂದಳು. ಇನ್ನೇನನೂ ಮಾತನಾಡಲಿಲ್ಲ. ಹರ್ಷ ಸೂಚಿಸಲಿಲ್ಲ. ಆಘಸಂದನೆಯ ಕಟಾಕ್ಷ ತೋರಲಿಲ್ಲ. ಎಷ್ಟೊಂದು ನಿರಾಶೆಯಾಯಿತು ನನಗೆ ! ಸರೋಜೆಯ ಆ ವಿಚಿತ್ರ ಔದಾಸೀನ್ಯದ ಕಾರಣ ನನಗೆ ತಿಳಿಯಲಿಲ್ಲ.

ಬೆಂಗಳೂರಿಗೆ ಬಂದು ಹೊಸ ಸಂಸಾರಹೂಡಿ ನಾಲ್ಕಾರು ತಿಂಗಳುಗಳ ಕಾಲ ಕಳೆದುಹೋದರೂ ಆ ಸಮಸ್ಯೆ ಪರಿಹಾರವಾಗಲಿಲ್ಲ. ಸರೋಜಾ ಸದಾಕಾಲದಲ್ಲೂ ಹಸನ್ಮುಖಿದಿಂದಿರುತ್ತಿದ್ದರೂ ಆಗಾಗ ಆಕೆಯ ಮೊಗವನ್ನು ಔದಾಸೀನ್ಯದ ಕಾರ್ಮೋಡಗಳು ಮುತ್ತಿಕೊಳ್ಳುತ್ತಿದ್ದುವು.

* * *

ಒಂದು ದಿನ ಸಾಯಂಕಾಲ ನಾನು, ಸರೋಜಾ ಲಾಲಬಾಗಿನ ಕಡೆಗೆ ಸುತ್ತಿಕೊಂಡು ಬರಲು ಹೋಗಿದ್ದೆವು.

ಮೆತ್ತಗಿನ ಹುಲ್ಲಿನ ಮೇಲೆ ಮೆಲ್ಲಮೆಲ್ಲಗೆ ಅಡಿಗಳನ್ನಿಡುತ್ತ ಆ ಮಾತು ಈ ಮಾತು ಆಡುತ್ತ ಲತಾಮಂಟಪಗಳಲ್ಲಿ ತಿರುಗುತ್ತಿ

ದ್ದೆವು. ಇದ್ದುದಿದ್ದ ಹಾಗೆ ಅಲ್ಲಿಯೆ ಎಲ್ಲಿಯೊ ಸನಿಯದಿಂದ ಇನಿದಾದ ಧ್ವನಿಯಲ್ಲಿ ಗೀತದ ಚರಣವೊಂದು ಕೇಳಬಂದಿತು.

"ನೂರು ದಿನಗಳು ಜಾರಿದುವು ಬರಿ
ದಾರಿ ಕಾಯುತಲಿರುವೆನು
ಹಾರಯಿಕೆಯೆಂತಹದು ನನ್ನವ
ಬಾರನೇಕೆನುತಿರುವೆನು"

ಆ ಸ್ವರ ಕಿವಿಗೆ ಬಿದ್ದೊಡನೆ ಸರೋಜಾ ಬೆದರಿದ ಹರಿಣಿಯಂತೆ ಅತ್ತ ಇತ್ತ ಚಂಚಲವಾಗಿ ಹೊರಳಿ ನೋಡಿದಳೇಕೆಂಬುದು ನನಗಾಗ ತಿಳಿಯಲಿಲ್ಲ.

"ನೋಡಿದೆಯಾ ಸರೋಜ, 'ವಿರಹಿಣಿ' ಯಲ್ಲಿಯ ಗೀತ ಕಾಣಿಸುತ್ತೆ ಇದು. ಆದರೆ ಇದೆಂತಹ ಸೋಜಿಗ ಇದು! 'ಮೂರು' ದಿನಗಳಿಗೆ ಪ್ರತಿಯಾಗಿ 'ನೂರು' ಬಂದುಬಿಟ್ಟಿದೆಯಲ್ಲವೆ?"

ಇಷ್ಟರಲ್ಲಿಯೆ ಲತಾಮಂಟಪದ ಮರೆಯಿಂದ ತರುಣನೊಬ್ಬ ಈಚೆಗೆ ಬಂದು ನಮ್ಮನ್ನು ಕಂಡು ಆಶ್ಚರ್ಯಚಕಿತನಾಗಿ ಹೇಳಿದ.

"ಓಹೊ! ಸರೋಜಕ್ಕಾ, ನೀನು?–ಇಲ್ಲಿ?..ಇವರು?.."

ಕೌತುಕ, ಕುತೂಹಲ, ವಿಸ್ಮಯ ಆಶ್ಚರ್ಯಗಳು ತುಂಬಿದ ಆತನ ಆ ವಿಚಿತ್ರ ದೃಷ್ಟಿಯನ್ನೆದುರಿಸಬೇಕಾದರೆ ಸಾಕುಸಾಕಾಯಿತು ನನಗೆ.

ಕೊನೆಗೆ ನಾನಾರೆಂಬುದು ಆತನಿಗೆ ತಿಳಿದುಬಂದಿರಬೇಕು. ಕಿರುನಗೆ ಬೀರುತ್ತ ಹೇಳಿದ.

"ಸರಿ ಸರಿ, ಈಗ ತಿಳಿಯಿತು. ಕಾಂಗ್ರ್ಯಾಚುಲೇಶನ್ಸ್, ಸರೋಜ, ನಿನ್ನ ವಿವಾಹ ನಡೆಯಿತೆಂದು ಕೇಳಿದ್ದೆ. ಆದರೆ ಇದುವರೆಗೆ ನಿನ್ನ ಕೈಹಿಡಿದ ಈ ಪುಣ್ಯಾತ್ಮರನ್ನು ಕಾಣಲಾಗಲಿಲ್ಲ. ಈಗ ಕಂಡೆ. ಸಂತೋಷ!..ಎಲ್ಲಾ ಕ್ಷೇಮ ತಾನೆ?"

"ಎಲ್ಲ ಚೆನ್ನಾಗಿದೆ ಶಾಮು, ಇವರಿಗೆ ಇಲ್ಲೇ ಲೆಕ್ಚರರ್ ಕೆಲಸ ಸಿಕ್ಕಿದೆ. ನೀನೇನನ್ನು ಮಾಡುತ್ತಿದ್ದೀಯಾ ಇಲ್ಲಿ?"

"ನಾನೇ!" ಶಾಮು ವಿಚಿತ್ರವಾದ ನಗೆಯೊಂದಿಗೆ ಹೇಳಿದ. "ಸರೋಜಕ್ಕಾ, ನನ್ನ ಸ್ವಭಾವ ನಿನಗೆ ಗೊತ್ತು ತಾನೆ? ಮ್ಯಾಟ್ರಿಕ್‍ನಲ್ಲಿ ಲಾಗ ಹಾಕಿದ ಬಳಿಕ ಮೂವತ್ತು ಊರುಗಳನ್ನು ಮಂಗನಂತೆ ಸುತ್ತಿ ಈಗ ಇಲ್ಲಿಗೆ ಬಂದಿದ್ದೇನೆ. ಗೊತ್ತಿಲ್ಲ, ಗುರಿಯಿಲ್ಲ. ಸುಮ್ಮಗೆ ಪೋಲಿ ಅಲೆಯುತ್ತಿದ್ದರೆ ಹೊಟ್ಟೆ ಹೊಡೆದುಕೊಳ್ಳುತ್ತೆ ಅಂತ ಒಂದು ಕೆಲಸಮಾಡುತಿದ್ದೇನೆ ಅಷ್ಟೆ."

"ಎಂತಹ ಕೆಲಸ?"

"ಮಿಲ್ಲಿನಲ್ಲಿ ಕೂಲಿ!"

"ಮಿಲ್ಲಿನಲ್ಲಿ?" ಸರೋಜಾ ಆಶ್ಚರ್ಯಭರಿತ ಧ್ವನಿಯಲ್ಲಿ ಕೇಳಿದಳು.

"ಹೌದು. ಮಿಲ್ಲಿನಲ್ಲಿ. ಯಾಕೆ, ಸರೋಜಕ್ಕಾ, ಆಶ್ಚರ್ಯವಾಯಿತೇನು ನಿನಗೆ?– ಯಾಕೆ ಆಶ್ಚರ್ಯವಾಗಕೂಡದು ಎನ್ನು. ರಾಜಕುಮಾರಿಯಹಾಗೆ ಬೆಳೆದವಳು ನೀನು. ಸುವಿಖ್ಯಾತ ವಕೀಲ ಶಂಕರರಾಯರ ಏಕಮಾತ್ರ ಪುತ್ರಿ. ಮತ್ತು ಪ್ರೊಫೆಸರ್ ಸಾಹೇಬರ...."

ಆತನನ್ನು ಮಧ್ಯದಲ್ಲಿಯೆ ತಡೆದು ಮಾತನಾಡಿದಳು ಸರೋಜಾ.

"ಈ ಶಾಮುವಿನ ಮಾತುಗಳೆಂದರೆ ಹೀಗೆಯೆ ನೋಡಿ. ಹಿಂದಿಲ್ಲ ಮುಂದಿಲ್ಲ. ಗೊತ್ತಿಲ್ಲ ಗುರಿಯಿಲ್ಲ. ಏನೇನನೊ ಗುಣಗುಟ್ಟುವುದರಲ್ಲಿ ತುಂಬ ಗಟ್ಟಿ ಈತನ ನಾಲಗೆ. ಈಗಲೇ ಹೀಗೆ ಅಂತ ತಿಳಿಯಬೇಡಿ. ಚಿಕ್ಕತನದಿಂದಲೂ ಹೀಗೆಯೆ ಈತನ ಸ್ವಭಾವ. ಓಹ್ಹೊ! ಮರೆತೇ ಬಿಟ್ಟಿದ್ದೆ. ಈತನು ನನಗೆ ಸಂಬಂಧದಲ್ಲಿ ಅಣ್ಣನಾಗಬೇಕು. ದೂರದ ಸಂಬಂಧ. ಆದರೇನು? ಚಿಕ್ಕತನದಿಂದಲೂ ನಾವು ಇಬ್ಬರೂ ಕೂಡಿಯೆ ಬೆಳೆದಿದ್ದೇವೆ. ಅಂದಿನಿಂದ ಈತನ ರಗಳೆಯನ್ನು ಕೇಳೀಕೇಳಿ ರೂಢಿಯಾಗಿದೆ ನನಗೆ!"

ಇಷ್ಟು ಹೇಳಿ ಸರೋಜಾ ಕಿಲಕಿಲನೆ ನಕ್ಕಳು. ಶಾಮುವೂ ಆಕೆಯ ನಗೆಯೊಂದಿಗೆ ತನ್ನ ಹುಚ್ಚುನಗೆಯನ್ನು ಬೆರಸಿದ. ದೊಡ್ಡವರು ನಗುವುದನ್ನು ಕಂಡು ಏನನ್ನು ಅರಿಯದ ಪುಟ್ಟ ಮಗುವೂ ಮೆಲ್ಲಗೆ ಮೃದುಮಧುರ ನಗೆ ಬೀರುವುದಿಲ್ಲವೆ? ಹಾಗೆಯೆ ನಾನೂ ನಕ್ಕುಬಿಟ್ಟೆ ನನಗೆ ತಿಳಿಯದಹಾಗೆಯೆ!

* * *

ಅಂದಿನಿಂದ ಶಾಮು ನಮ್ಮ ಮನೆಗೆ ನಿತ್ಯವೂ ಬಂದು ಹೋಗಲಾರಂಭಿಸಿದ. ಅತಿ ಸರಲವಾದ– ಆದರೆ ವೈಚಿತ್ರ್ಯಭರಿತ ಮಾತಿನ ಮೇಲೆ ನಮ್ಮಿಬ್ಬರಿಗೂ ಒಂದು ಮೋಜಿನ ಸಾಧನೆಯಾಗಿದ್ದಿತು. 'ನಮ್ಮಲ್ಲೇ ಇದ್ದುಬಿಡು ಶಾಮು, ನೀನೇನು ಪರಕೀಯನೇ!' ಎಂದು ನಾವು ಎಷ್ಟೇ ಒತ್ತಾಯಪಡಿಸಿದರೂ ಶಾಮು ಒಪ್ಪುತ್ತಿರಲಿಲ್ಲ. 'ಮಿಲ್ಲಿನ ಕೂಲಿಕಾರರೊಟ್ಟಿಗೆ ಇದ್ದಾಗಲೇ ನನಗೆ ಸಂತೋಷ. ಇಲ್ಲಿ ಮಲಗಿದರೆ ರಾತ್ರಿ ನಿದ್ರೆಯಿಲ್ಲದೆ ಗೋಳಾಡಬೇಕಾದೀತು. ಆ ಶಾಪ ನಿಮ್ಮ ಪಾಲಿಗೆ ಬಂದೀತು. ಬೇಡ ಆ ವಿಚಾರ' ಎಂದು ಹೇಳಿ ಶಾಮು ನಮ್ಮ ಮುಖ ಕಟ್ಟಿಬಿಡುತ್ತಿದ್ದ.

ಆಗಾಗ ನಾವಿಬ್ಬರೂ ತಮಾಷೆಗಾಗಿ ಅಂದು ಲಾಲ್‌ಬಾಗಿನಲ್ಲಿ ಆತನು ಹಾಡುತ್ತಿದ್ದ, ನೂರು ದಿನಗಳ ವಿಚಾರ ತೆಗೆದು ಆತನನ್ನು ಗೇಲಿಮಾಡುತ್ತಿದ್ದೆವು. ಆದರೆ ಇನ್ನುಳಿದ ಕಾಲದಲ್ಲಿ– ಅರಳಿ ನಳನಳಿಸುವ ಪಾರಿಜಾತದ ಹೂವಿನಹಾಗೆ ಪ್ರಫುಲ್ಲಿತವಾಗಿರುತ್ತಿದ್ದ ಶಾಮುವಿನ ಮೊಗ ಆ ವಿಚಾರ ಹೊರಡುತ್ತಲೆ ಕತ್ತಲೆಯಲ್ಲಿಯ ಕಮಲಪತ್ರದಹಾಗೆ ಬಾಡಿ ಬಿಳುಪೇರಿಹೋಗುತ್ತಿದ್ದಿತು.

ಖಂಡಿತ ಈತನಿಗೆ ಯಾವಳೋ ಅಪ್ಸರೆ ಹುಚ್ಚುಹಿಡಿಸಿರಬೇಕು. ಆಕೆ ಸಿಕ್ಕಲಾರದೆ ಈ ಮೂರ್ತಿ ಗೋಳಾಡುತ್ತಿರಬೇಕು— ಎಂದು ನಾವು ಮಾತನಾಡಿಕೊಳ್ಳುತ್ತಿದ್ದೆವು. ನಿಭ್ರವಾದ ಆಗಸದಲ್ಲಿ ಒಮ್ಮಿಂದೊಮ್ಮೆಲೆ ಮೋಡಗಳ ಬಳಗ ನಭನೇರಿ ಗಗನದೇವಿಯ ಮೊಗ ಮಲಿನವಾಗುವಹಾಗೆ ಪಕ್ಕನೆ ಉದಾಸವಾಗುವ ಶಾಮುವಿನ ಮೊಗ ನಮ್ಮ ಈ ಸಂದೇಹಕ್ಕೆ ಇನ್ನೂ ಪುಷ್ಟಿಕೊಡುತ್ತಿದ್ದಿತು.

* * *

ಮದುವೆಯಾದ ಬಳಿಕ ಮೊದಲಬಾರಿ ಮುಂದಿನ ಸಲ್ಲೆ ತವರೂರಿಗೆ ಹೋದಾಗ 'ಗಂಡ'ನಾದವನು ಪಡುವ ತೊಂದರೆ, ಆ

ಮಾನಸಿಕ ವ್ಯಥೆ, ಆ ವಿರಹವೇದನೆ ಅನುಭವಿಸಿದವರಿಗೇ ಗೊತ್ತು. 'ಬಲ್ಲೆನಪ್ಪಾ ಆ ವಿರಹ!' ಎಂದು ಹೇಳಿಕೊಳ್ಳುತ್ತಿದ್ದರೂ ಆ ಸಂದರ್ಭ ಕೊನೆಗೂ ಬಂದೇಬಿಟ್ಟಿತು. ಧಾರವಾಡದಲ್ಲಿ ಪ್ಲೇಗಿನ ಬಾಧ್ಯ ಪಸರಿಸಿಕೊಂಡು ಶಂಕರರಾಯರನ್ನೂ ಹಾಸಿಗೆ ಹಿಡಿಸಿದುದರಿಂದ ಸರೋಜಾ ಹೋಗಿಬಿಡಲೇ ಬೇಕಾಗಿ ಬಂದಿತು. ಪ್ಲೇಗು ಪಸರಿಸಿಕೊಂಡ ಊರಿಗೆ ಸರೋಜೆಯನ್ನು ಕಳುಹಿಸಬೇಕಾದರೆ ನನಗೆ ಪ್ರಾಣವೇ ಹೋಗುತ್ತಿದ್ದಹಾಗಾಯಿತು. ಆದರೆ ಬೇರೆ ಉಪಾಯವೇ ಇರಲಿಲ್ಲ

ಸರೋಜಾ ಹೋದಬಳಿಕ ನನ್ನ ಶರೀರ ಪ್ರಾಣವಿಲ್ಲದ ಶರೀರದಂತಾಗಿಬಿಟ್ಟಿತು. '**ವಿರಹಿಣಿ**'ಯಲ್ಲಿಯ ಕವನಗಳನ್ನೋದಿ ತಮಾಷೆಮಾಡುತ್ತಿದ್ದ ನನಗೆ ಈಗ '**ವಿರಹ**'ದ ನಿಜವಾದ ಅರ್ಥ ತಿಳಿಯಲಾರಂಭಿಸಿತು. ಸರೋಜೆಯ ಭಾವಚಿತ್ರವನ್ನೂ, ಆಕೆಯ ಒಡವೆ-ತೊಡವುಗಳನ್ನು ಗಂಟೆಗಂಟೆಗಳ ಕಾಲ ನೋಡುತ್ತ ಕೊಟಡಿಯಲ್ಲಿ ಕೂತಿರುತ್ತಿದ್ದೆ. ರಾತ್ರಿ ಸರೋಜಳ ಸ್ಮರಣೆಯಾಗಿ ನಿದ್ರೆಬಾರದಂತಾಗಲು, ಎದ್ದು ಆಕೆಯ ಭಾವಚಿತ್ರವನ್ನು ಹುಚ್ಚನ ಹಾಗೆ ಸಾವಿರಾರು ಬಾರಿ ಚುಂಬಿಸುತ್ತಿದ್ದೆ.

ಆ ಸಂದರ್ಭದಲ್ಲಿ ಶಾಮುವಿನ '**ಮಿರ್ಚಿಮಸಾಲೆ**' ತುಂಬಿದ ಮಾತುಗಳ ಆಧಾರ ನನಗಿಲ್ಲದಿದ್ದಲ್ಲಿ ನಾನು ಹಾಸಿಗೆಹಿಡಿಯುತ್ತಿದ್ದೆನೋ ಏನೊ! ನಿತ್ಯ ಸಾಯಂಕಾಲ ಆರು ಗಂಟೆಗೆ ಸರಿಯಾಗಿ ಶಾಮು ಮನೆಗೆ ಬರುತ್ತಿದ್ದ; ಇಬ್ಬರೂ ಮನಸೋಕ್ತವಾಗಿ ಆ ವಿಚಾರ ಈ ವಿಚಾರ ಹರಟೆಕೊಚ್ಚುತ್ತಿದ್ದೆವು.

* * *

ಆ ದಿನವೂ ಹಾಗೆಯೆ ಆಯಿತು.

ಮಾತಿಗೆ ಮಾತು ನಡೆದಿದ್ದಾಗ ಶಾಮುವಿನ ಆ '**ನೂರು ದಿನಗಳ**' ಮಾತು ಪಕ್ಕನೆ ಮಧ್ಯೆ ಮೊಗದೋರಿತು.

ಇಷ್ಟು ದಿನಗಳ ಕಾಲ ಹೃದಯದಲ್ಲೇ ಹತ್ತಿಕ್ಕಿಕೊಂಡಿದ್ದ ನನ್ನ ಉತ್ಸುಕತೆ ಇಂದು ಉಕ್ಕೇರಿ ಬಂದಿತು. ಸರೋಜಳು ಇಲ್ಲದುದರಿಂದ ಶಾಮು ಸಂಕೋಚಪಟ್ಟುಕೊಳ್ಳಲಾರನೆಂದು ಬಗೆದು ನಾನು ಮೆಲ್ಲಗೆ ಮಾತುತೆಗೆದೆ.

"ಹೇಳು ಶಾಮು, ಇಂದು ಅದರ ಬಗ್ಗೆ ಸ್ಪಷ್ಟೀಕರಣ ಮಾಡಲೇ ಬೇಕು ನೀನು. '**ನೂರು**' ದಿನ ಹೇಗೆ ಬಂದಿತು ನಿನ್ನ ಬಾಯಲ್ಲಿ '**ಮೂರು**' ದಿನಕ್ಕೆ ಪ್ರತಿಯಾಗಿ?-ಅದರಲ್ಲಿ ಏನಾದರೂ ಒಳ ಉದ್ದೇಶ ಇರಲೇಬೇಕಷ್ಟೆ?"

ಶಾಮು ಆ ವಿಷಯವನ್ನು ನಗೆಯ ಜೊತೆಗೆ ಹಾರಿಸಿಬಿಡಲು ಹೆಣಗಾಡಿದ. ಆದರೆ ನಾನಲ್ಲಿ ಹಾಗೆಯೆ ಬಿಟ್ಟುಬಿಡುತ್ತೇನೆ?

"ನನಗೆಲ್ಲಾ ಗೊತ್ತು.. ನಿನ್ನ ಚಾತುರಿ ಶಾಮೂ, '**ನೂರು ದಿನಗಳಿಂದ**' ಯಾರ ದಾರಿಕಾಯುತ್ತಿರುವೆ? ಹೇಳು, ನೀನಿಂದು ಹೇಳಲೇ ಬೇಕು!"

"ಇಲ್ಲ.. ಏನೂ ಇಲ್ಲ...."

"ಎಲ್ಲಾ ಬಲ್ಲೆ ಎಂದು ಹೇಳಲಿಲ್ಲವೆ? ಮತ್ತೆ ಮತ್ತೆ ಇಂತಹ ಹಾರಿಕೆಯ ಮಾತು ಬೇಕಿಲ್ಲ ನನಗೆ. ಪ್ರಾರಂಭವಾಗಲಿ ಆ ನಿನ್ನ ಪ್ರಣಯದ ಕತೆ."

"ನನ್ನ ಕತೆಯಿಂದ ಯಾರಿಗೂ ಸುಖವಿಲ್ಲ; ನನಗೂ ದುಃಖ. ಕೇಳುವವರಿಗೂ ದುಃಖ.. ಅದಕ್ಕಾಗಿ...."

"ಪರವಾ ಇಲ್ಲ ಹೇಳು. ನಾಟಕದಲ್ಲಿ ಅಭಿನಯಿಸುವ ನಟನೂ ಅಳಬೇಕಾಗುತ್ತೆ. ಆತನ ಕಂಬನಿಗಳನ್ನು ಕಂಡು ಪ್ರೇಕ್ಷಕರೂ ಕಣ್ಣೀರುಹೊರಡಿಸುತ್ತಾರೆ. ಆದರೇನು! ನಾಟಕ ಟ್ರ್ಯಾಜಿಡಿ ಆಗಿದ್ದರೂ ಅದರಿಂದ ಪ್ರೇಕ್ಷಕರಿಗೆ ಸಾತ್ವಿಕ ಆನಂದವುಂಟಾಗುತ್ತೆ ತಾನೆ? ಹಾಗೇನ ಕತೆಯ ವಿಚಾರ; ಹೇಳು, ನೀನೀಗ ಹೇಳಲೇ ಬೇಕು.."

"ಆದರೆ...."

"ಮತ್ತೆ ಮತ್ತೆ ಈ ದ್ರಾವಿಡೀಪ್ರಾಣಾಯಮವೇಕೆ? ಹೇಳು, ಸಾಗಲಿ ಪುರಾಣ! ಪುರಾಣಸಮಾಪ್ತಿಯಲ್ಲಿ ಪ್ರಸಾದವೂ ಇದೆಯೆಂಬುದನ್ನು ಮರೆಯಬೇಡ!"

"ಪರವಾ ಇಲ್ಲ- ಕೇಳು; ನಿನ್ನ ಇಷ್ಟ. ನನಗೇನೊ ಅದನ್ನು ಹೇಳಲು ಮನಸ್ಸೇ ಇಲ್ಲ. ಆದರೂ ಇಲ್ಲದ ಮನಸ್ಸನ್ನು ನಿನಗಾಗಿ ತಂದುಕೊಂಡು ಹೇಳುತ್ತೇನೆ!" ಎಂದು ಹೇಳಿ ಶಾಮು ವಿರಾಮಕುರ್ಚಿಯ ಮೇಲೊರಗಿಕೊಂಡು ಮಾತು ಮುಂದುವರಿಸಿದ.

"ಒಂದು ಕತೆ ಹೇಳಿದ ಹಾಗೆ ಹೇಳ್ತೇನೆ. ಇದೂ ಒಂದು ಕತೆಯೋ ಎಂದು ತಿಳಿದುಕೊಳ್ಳು ಬೇಕಾದರೆ! ಹೀಗೆ ಒಂದೂರಲ್ಲಿ ಒಬ್ಬ ಹುಡುಗ ಇದ್ದ. ನಗಬೇಡವೋ ನಗಬೇಡ; ನಿಧಾನಿಸು! ಅಲ್ಲಿಯೇ ಒಬ್ಬ ಹುಡುಗಿ ಇದ್ದಳು. ಆ ಹುಡುಗಿ ಬಹಳ-ಬಹಳ-ಬಹಳ ಚೆಲುವೆಯಾಗಿದ್ದಳು! ರಾಜಕುಮಾರಿ ಆಕೆಯನ್ನು ಕಂಡು ನಾಚಿ ಮೊಗ ಕೆಳಕ್ಕೆ ತಗ್ಗಿಸಬೇಕು! ಹಾಗಿದ್ದಿತು ಆ ಹುಡುಗಿಯ ಸೌಂದರ್ಯ!

"ಇಬ್ಬರೂ ಚಿಕ್ಕತನದಿಂದ ಒಬ್ಬರನ್ನೊಬ್ಬರು ಬಲ್ಲರು. ಇಬ್ಬರಲ್ಲೂ ವಿಪರೀತ ಸ್ನೇಹ ಒಳೆದುಬಂದಿತು. ಆದರೆ— ಆ ಸ್ನೇಹಕ್ಕೆ ಬಹುಕಾಲ ಬಾಳಲಾಗಲಿಲ್ಲ. ಆ ಹುಡುಗಿ ಅದನ್ನು ಕಡಿದುಹಾಕಿದಳು. ಅಲ್ಲಲ್ಲ-ಸಮಾಜ ಅದನ್ನು ನುಚ್ಚುನುರಿಯಾಗಿ ಮುರಿದುಬಿಟ್ಟಿತು. ಹುಡುಗ ಆಕೆಯನ್ನು ಪ್ರೀತಿಸುತ್ತಿದ್ದ. ಅದೆಂತಹ ಪ್ರೀತಿ ಅದು! ಆತನಿಗೇ ಗೊತ್ತಿಲ್ಲ! ಆದರೆ ಇಷ್ಟು ಮಾತ್ರ ನಿಜ: ಆ ಹುಡುಗಿಗಾಗಿ ತನ್ನ ಸರ್ವಸ್ವವನ್ನು— ತನ್ನ ಪ್ರಾಣವನ್ನು ಕೂಡ—ಬಿಟ್ಟುಕೊಡಲು ಆತನು ಸಿದ್ಧನಿದ್ದ; ಆದರೆ....

"ಹುಡುಗಿಯ ವಿಚಿತ್ರವರ್ತನೆಯಿಂದ ಆ ಸ್ನೇಹಕ್ಕೆ ಆಗಲೇ ಸಮಾಧಿಯಾಯಿತು. ಆಕೆ ಸ್ಕೂಲಿಗೆ ಹೋಗತೊಡಗಿದಳು. ದೊಡ್ಡವರ ಮಗಳು ಆಕೆ! ಆತನೋ ಕಡುದರಿದ್ರ! ತಂದೆಯ ಮೋಟಾರಿನಲ್ಲಿ ಆಕೆ ಶಾಲೆಗೆ ಹೋಗಿಬರುತ್ತಿದ್ದಳು. ಆಕೆಯ ದರ್ಜೆ ಬೇರಾಯಿತು- ಆತನ ದರ್ಜೆ ಬೇರಾಯಿತು. ಅಂದಿನಿಂದ

ಆತನ ಅರ್ಧಪ್ರಾಣ, ಅರ್ಧಬುದ್ಧಿ ಕಡಿದುಹೋದಹಾಗಾಯಿತು. ಸ್ನೇಹಲತೆ ಬೆಳೆದು ಪ್ರಣಯದ ಫಲಬಿಡುತ್ತಿದ್ದಾಗಲೇ ಅದಕ್ಕೆ ಕೊಡಲಿಯೇಟು ಬಿದ್ದುಬಿಟ್ಟಿತು. ಸ್ನೇಹ ಹುಡಿಗೂಡಿ ಹೋಯಿತು. ಸ್ನೇಹದ ಸಮಾಧಿಯಾಯಿತು!''

ಇಷ್ಟು ಹೇಳಿ ಶಾಮು ಒಮ್ಮೆಲೆ ತಡೆದುನಿಂತ; ಆತನ ಕಂಠ ನಡುಗುತ್ತಿದ್ದಹಾಗೆ ಭಾಸವಾಯಿತು ನನಗೆ. ಶಾಮು ಎದ್ದ; ಎದ್ದು ವೇಗದಿಂದ ಹೊರಕ್ಕೆ ಹೋಗತೊಡಗಿದ.

ತಕ್ಷಣ ಕುರ್ಚಿಯಿಂದೆದ್ದು ಸ್ನೇಹಭರದಿಂದ ಆತನ ಕೈಹಿಡಿದು ಸಂತಯಿಸುವ ಸ್ವರದಲ್ಲಿ ಹೇಳಿದೆ :

"ಆದುದು ಆಗಿಹೋಯಿತು ಶಾಮು ; ಆದರೆ ನೀನು ಈ ತೆರನಾಗಿ ಹುಚ್ಚನ ಹಾಗೆ ವರ್ತಿಸುವುದಕ್ಕೇನು ಕಾರಣ? ಆ ಹುಡುಗಿ ಇಲ್ಲವಾದರೆ ಇನ್ನೊಬ್ಬಳು ಸಿಕ್ಕಬಹುದು, ಪ್ರೇಮ! ಅನುರಾಗ! ಅದೊಂದು ಭ್ರಮೆ ಮಾತ್ರ! ಕತೆ-ಕಾದಂಬರಿ-ಕವನಗಳಲ್ಲಿ ಮಾತ್ರ 'ಪ್ರೇಮ'ಕ್ಕೆ ಸ್ಥಾನವೇ ವಿನಾ ವ್ಯವಹಾರದಲ್ಲಿಲ್ಲ. ನೀನಾದರೂ ಏನು–ಇನ್ನೂ ಹೊಸ ಹರಯದ ತರುಣ! ಮನಸ್ಸು ಮಾಡಿದಲ್ಲಿ ಚೆನ್ನಾದ ಕೆಲಸ ಸಿಕ್ಕಬಹುದು ನಿನಗೆ. ಆ ಗಿರಣಿಯ ಕೂಲಿ ಹುಚ್ಚು ಬಿಟ್ಟುಬಿಟ್ಟರೆ, ನಿನಗೆ ನಾನೇ ಎಲ್ಲಾದರೂ ಕೆಲಸ ಹಚ್ಚಿಕೊಡುತ್ತೇನೆ. ಚೆಲುವೆಯಾದ ಹುಡುಗಿಯೊಬ್ಬಳನ್ನು ವಿವಾಹವಾಗಿ ಸೊಗಸಾಗಿ ದಿನಗಳೆಯಬಾರದೇ?''

ಕಿಟಕಿಯ ಹತ್ತಿರ ಹೋಗಿ ಶೂನ್ಯದೃಷ್ಟಿಗಳಿಂದ ಸಂಧ್ಯಾಕಾಲದ ಉದಾಸ ಆಕಾಶವನ್ನು ನಿಟ್ಟಿಸುತ್ತ ಹೇಳಿದ ಶಾಮು:

"ವಿವಾಹ? ಇನ್ನೆಲ್ಲಿಯ ವಿವಾಹ ನನಗೆ? ನಿನಗೆ ನನ್ನ '**ಪ್ರಣಯ**'ವೊಂದು ಹುಚ್ಚು ಎನ್ನಿಸಬಹುದು; ನನ್ನ '**ವಿರಹ**'ವೊಂದು ಹುಚ್ಚು ಎನ್ನಿಸಬಹುದು. ನಾನು ಮಿಲ್ಲಿನಲ್ಲಿ ಕೂಲಿಯಾಳಾಗಿ ದುಡಿಯುವುದೊಂದು ಮಹಾಹುಚ್ಚು ಎನ್ನಿಸಬಹುದು ನಿನಗೆ..! ಆದರೆ.. ಆದರೆ....''

ಸರ್ರನೆ ನನ್ನೆಡೆಗೆ ಬಂದು ತುಂಬಿಬಂದ ಕಂಠದಿಂದ ಹೇಳಿದ ಶಾಮು :

"ಆದರೆ.. ಅನುಭವಿಸಿದವನಿಗೇ ತಿಳಿಯುತ್ತೆ ಈ ಹುಚ್ಚಿನ ವಿಚಾರ. ನನ್ನ ಪ್ರಣಯದ ವಿಚಾರ ಹಾಗಿರಲಿ, ಮಿಲ್ಲಿನಲ್ಲಿ ನನ್ನಂತಹ ಎಷ್ಟು ಜನ ಮಾನವಪ್ರಾಣಿಗಳು ಹೊಟ್ಟೆಗಾಗಿ ಕತ್ತೆಗಳಂತೆ ಹಗಲಿರುಳೂ ರಕ್ತಸುರಿಸುತ್ತಿಲ್ಲ?– ಆ ಹೊಟ್ಟೆಯ ಹೋರಾಟ, ಆ ದಾರಿದ್ರ್ಯ, ಆ ದೈನ್ಯ, ಆ ಕಳವಳ ನನ್ನೆದೆಯನ್ನು ನುಚ್ಚುನುರಿಯಾಗಿ ಮಾಡಿವೆ. ಇದಕ್ಕೆಲ್ಲ ಮೂಲಕಾರಣ ನಮ್ಮ ದಾಸ್ಯ! ಆ ಭೀಕರ ದಾಸ್ಯ!"

ಮೇಜಿನ ಮೇಲೆ ರಭಸದಿಂದ ಮುಷ್ಟಿಯನ್ನಪ್ಪಳಿಸಿ ಆವೇಶದಿಂದ ಹೇಳತೊಡಗಿದ ಶಾಮು :

"ನಮ್ಮ ನಾಡಿನ ಹೊನ್ನರಾಶಿಯೆಲ್ಲವನ್ನೂ ಬಳಿದು ಬಳಿದು ಮೂಟೆಮೂಟೆಗಳಲ್ಲಿ ಸಾಗಿಸಿಕೊಂಡು ಹೋಗುತ್ತಿದ್ದಾರೆ ಆ ಮೋಸಗಾರರು! 'ಸ್ವರ್ಣಭೂಮಿ'ಯ ಕೋಟ್ಯನುಕೋಟಿ ಜನಗಳಿಗೆ ತಿನ್ನಲಿಕ್ಕೆ ತುತ್ತು ಕೂಳಿಲ್ಲ, ಅವರ ಮಕ್ಕಳು ಮರಿಗಳ ಆರ್ತಧ್ವನಿ!– ಇವರೆಲ್ಲ ಇಂತಹ ನರಕಯಾತನೆಯನ್ನನುಭವಿಸುತ್ತಿರುವಾಗ ನಾನೇಕೆ ಚೆನ್ನಾದ ನೌಕರಿಹಿಡಿದು ಸುಖವಾಗಿ ಕಾಲ ಕಳೆಯಬೇಕು? ಧಿಃಕಾರವಿರಲಿ ಆ ಕ್ಷುದ್ರವಿಚಾರಕ್ಕೆ!—'

ಕ್ಷಣಕಾಲ ತಡೆದು ಪುನಃ ಆವೇಶದಿಂದ ಹೇಳಲಾರಂಭಿಸಿದ ಶಾಮು :

"ಸ್ವಾತಂತ್ರ್ಯ! ಸ್ವಾತಂತ್ರ್ಯ! ಇದೇ ಈ ಎಲ್ಲ ನರಕಯಾತನೆಗೂ ಮದ್ದು! ಆ ಮದ್ದಿಗಾಗಿ ನಾವು ಹೋರಾಡುತ್ತಿದ್ದೇವೆ. '**ನೂರಾರು ದಿನ**'ಗಳಿಂದ ಅದರ ದಾರಿಕಾಯುತ್ತಿದ್ದೇವೆ. ನನ್ನಂತೆ ನೂರಾರು ಜನ– ಕೋಟ್ಯನುಕೋಟಿ ಜನ ನವಯುವಕರು ಅದಕ್ಕಾಗಿ ಹಂಬಲಿಸುತ್ತಿದ್ದಾರೆ; ಹೋರಾಡುತ್ತಿದ್ದಾರೆ. ನಿನಗೀಗ ಅರ್ಥವಾಯಿತೇ! '**ನೂರು ದಿನ**'ಗಳ ರಹಸ್ಯ?– ನಿನಗೀಗ ಅರ್ಥವಾಯಿತೇ ನನ್ನ ಹುಚ್ಚು?''

ನೀಳವಾದ ಉಸಿರಿನೊಂದಿಗೆ ಮಾತು ಮುಗಿಸಿ ಶಾಮು, ಜೇಬಿನಲ್ಲಿಯ ಕರವಸ್ತ್ರವನ್ನು ತೆಗೆದು ಮೊಗವನ್ನೊರಸಿಕೊಂಡ.

"ಸರಿ. ನಾನೀಗ ಹೋಗುತ್ತೇನೆ. ಮಿಲ್ಲಿನಲ್ಲಿ ಈಗ ತಾನೆ ಮುಷ್ಕರಕ್ಕೆ ಪ್ರಾರಂಭವಾಗಲಿದೆ. ಮಾಲಕರು ಕೂಲಿಕಾರರ ಸಂಬಳದಲ್ಲಿ ಕಡಿತಮಾಡಲಿದ್ದಾರೆ. ಅದಕ್ಕಾಗಿ ಎಲ್ಲೆಲ್ಲೂ ಹಾಹಾಕಾರವೆದ್ದಿದೆ. ಇಂದು ಪ್ರಚಂಡಸಭೆ ಸೇರುತ್ತದೆ. ನಾನು ಹೋಗಬೇಕು."

"ಕಾಫೀ ತೆಗೆದುಕೊಂಡು ಹೋಗು ಶಾಮು! ತಡೆ, ತಡೆ" ಎಂದು ನಾನು ಕೂಗುತ್ತಿದ್ದಾಗಲೇ 'ಒಲ್ಲೆ. ಒಲ್ಲೆ! ನಾಳೆ ಮತ್ತೆ ಬರ್ತೇನೆ!' ಎಂದು ಹೇಳುತ್ತ ಬಿಟ್ಟಬಾಣದ ಹಾಗೆ ಹೊರಕ್ಕೆ ಧಾವಿಸಿದ ಶಾಮು.

ಆತನ ಆ ಅದ್ಭುತ ವೃತ್ತಾಂತವನ್ನು ಮತ್ತೆಮತ್ತೆ ಸ್ಮರಿಸುತ್ತ ಕುರ್ಚಿಯಿಂದೇಳತೊಡಗಿದೆ. ಕೂಡಲೆ ಕೆಳಕ್ಕೆ ಬಿದ್ದಿದ್ದ ಭಾವಚಿತ್ರವೊಂದು ನನ್ನ ದೃಷ್ಟಿಯನ್ನು ಸೆಳೆಯಿತು.

'ಶಾಮು ಕರವಸ್ತ್ರ ತೆಗೆಯುವ ರಭಸದಲ್ಲಿ ಅದು ಕೆಳಕ್ಕೆ ಬಿದ್ದುಬಿಟ್ಟಿತೋ ಏನೋ' ಎಂದುಕೊಂಡು ಅದನ್ನು ಕೈಗೆತ್ತಿಕೊಂಡು ನೋಡಿದೆ.

ಕ್ಷಣಾರ್ಧದಲ್ಲಿ ನನ್ನ ಕಣ್ಣೆದುರಿನಲ್ಲಿ ಘೋರಾಂಧಕಾರ ಕವಿದುಕೊಂಡ ಹಾಗಾಯಿತು. ಆ ಭಾವಚಿತ್ರದ ಕೆಳಗೆ ದುಂಡಾದ ಅಕ್ಷರಗಳಲ್ಲಿ ಬರೆಯಲ್ಪಟ್ಟಿದ್ದ ಅದೊಂದು ಸಾಲು.

ಮರುದಿನವೇ ಸರೋಜಳಿಗೆ ಬಿಸಿಬಿಸಿಯಾದ ಕಾಗದ ಬರೆದೆ.

"ಸರೋಜಾ,

ನಿನ್ನನ್ನು ಈಗ ಏನೆಂದು ಕರೆಯಬೇಕೆಂಬುದೇ ತಿಳಿಯದಾಗಿದೆ ನನಗೆ. ಇದುವರೆಗೆ ಕಾಗದ ಬರೆದಾಗೆಲ್ಲ 'ಒಲವಿನ ನಲ್ಲೆ!' 'ಹೃದಯದ ಹೂವೇ' ಎಂದು ಮುಂತಾಗಿ ಒಳ್ಳೆ ಕವಿತ್ವಪೂರ್ಣವಾಗಿ ಬರೆಯುತ್ತಿದ್ದೆ. ಆದರೆ ಇಂದು ಆ ನನ್ನ ಪ್ರತಿಭೆಯೇ ಎಲ್ಲೋ ಮಾಯವಾಗಿದೆ.

'ಇದಕ್ಕೆ ಕಾರಣವೇನಮ್ಮಾ ?' ಎಂದು ತುಂಬ ಆಶ್ಚರ್ಯದಿಂದ ಪ್ರಶ್ನೆ ಮಾಡಬಹುದು ನೀನು. ನೀನೇ.., ನೀನೇ ಕಾರಣಳು ಇದಕ್ಕೆ! ನೀನು ಪಾಪಿ! ಮಹಾಪರಾಧಿನಿ! ನಿನ್ನನ್ನೇ ನಂಬಿಕೊಂಡಿದ್ದ ಒಂದು ನಿರಪರಾಧಿ ಹೃದಯವನ್ನು ಚಿನ್ನಾಟವಾಡುತ್ತ ಕೊಲೆಗೊಯ್ದೆ ನೀನು! ನೀನಿಂತಹ ಕೊಲೆಗಡುಕಳೆಂಬುದು ನನಗಾಗ ಗೊತ್ತಾಗಿದ್ದರೆ ?—

ನಿನ್ನೆ ಸಾಯಂಕಾಲ ಎಲ್ಲ ಗೊತ್ತಾಗಿದೆ. ಶಾಮುವಿನ ಪ್ರಣಯದ ಕತೆಯೆಲ್ಲವನ್ನೂ ಕೇಳಿ ತಿಳಿದುಕೊಂಡೆ. ಆ ಕತೆಯ ನಾಯಕಿ ನೀನೇ ಎಂಬುದು ಮಾತ್ರ ಗೊತ್ತಾಗಿರಲಿಲ್ಲ. ಆತನ ಪತ್ತಿರವಿದ್ದ ಫೋಟೋ ಅಕಸ್ಮಾತ್ತಾಗಿ ಸಿಕ್ಕಿದುದರಿಂದ ಅದೂ ಗೊತ್ತಾಯಿತು. ಅದರ ಬುಡದಲ್ಲಿ ಶಾಮು ಬರೆದಿರುವ ಆ ಸಾಲು :

"ಸ್ನೇಹದ ಸಮಾಧಿಗೆ ಹುಡಿಗೂಡಿಸಿದ ಸರೋಜಾ"

ಹಾಯ್ ಹಾಯ್ !

ನನ್ನ ಹೃದಯವನ್ನು ನೂರಾರು ಹಾವುಚೇಳುಗಳು ಒಂದೇ ಸಮನೆ ಕಚ್ಚುತ್ತಿದ್ದ ಹಾಗಾಗುತ್ತಲಿದೆ. ನನ್ನ ಸರೋಜಾ ಇಂತಹ ಘೋರಕೃತ್ಯ ಮಾಡಿರಬಹುದೆಂದು ನನಗಾಗ ಎಲ್ಲಿ ತಿಳಿದಿದ್ದಿತು ?-

ಸರೋಜಾ ! ನಿನ್ನ ಸುಟ್ಟಮೊಗವನ್ನು ಇನ್ನೊಮ್ಮೆ ನೋಡಕೂಡದು ಎಂದು ನಿರ್ಧಾರಮಾಡಿದ್ದೇನೆ ನಾನು. ಅಯ್ಯೋ ! ಇದೆಂತಹ ವಿಚಿತ್ರಸಮಸ್ಯೆ ! ನೀನೇ – ನೀನೇ – ಹುಟ್ಟಿಸಿದೆ ಈ ಸಮಸ್ಯೆಯನ್ನು ! —

* * *

ನಾನು ಆ ಕಾಗದ ಬರೆಯಬಾರದಾಗಿದ್ದಿತು. ಆದರೇನು ! ಗುಂಡು ಸಿಡಿದು ಹೋಗಿಬಿಟ್ಟಿದ್ದಿತು. ಇನ್ನೇನನ್ನು ಮಾಡಿದರೂ ಅದನ್ನು ತಿರುಗಿ ತೆಗೆದುಕೊಳ್ಳಲು ಸಾಧ್ಯವಿರಲಿಲ್ಲ.

ಅದೇ ದಿನ ಇನ್ನೊಂದು ಸಮಾಚಾರ ಕಿವಿಗೆ ಬಿದ್ದಿತು : ಶಾಮು ಕೆಲಸಮಾಡುತ್ತಿದ್ದ ಗಿರಣಿಯಲ್ಲಿ ಭಾರಿ ಮುಷ್ಕರ ನಡೆದು ಪೋಲೀಸಿನವರು ಲಾಠೀಚಾರ್ಜು ನಡೆಯಿಸಿದರೆಂದೂ, ಮುಷ್ಕರಗಾರರ ಮುಂದಾಳು ಶಾಮುವನ್ನು ಬಂಧಿಸಿ ಜೈಲಿಗೆ ಸಾಗಿಸಿದರೆಂದೂ ತಿಳಿಯುತ್ತಲೆ ನನ್ನ ಕಳವಳದ ಕುದಿತ ಇನ್ನೂ ಹೆಚ್ಚಾಯಿತು.

ಶಾಮು ಅಲ್ಲಿ – ಜೈಲಿನಲ್ಲಿ !

ಸರೋಜಾ ?—ಎಲ್ಲಿ– ? ಎಲ್ಲಿ ?

* * *

ಒಮ್ಮೆಲೆ ಚಿತ್ರಪಟ ಬಿದ್ದುಹೋಗಿ ಥಿಯೆಟರಿನಲ್ಲಿ ವಿದ್ಯುದ್ದೀಪಗಳು ಝಗಝಗಿಸುವ ಹಾಗೆ ನನ್ನ ವಿಚಾರಮಾಲಿಕೆ ನಿಂತುಹೋಗಿ ಕಣ್ಣುತೆರೆದುವು. ಎದ್ದು ಕುಳಿತೆ; ಕಣ್ಣುಜ್ಜಿಕೊಂಡು ಸುತ್ತಲೂ ನೋಡಿದೆ.

ನನಗೆ ತಿಳಿಯದ ಹಾಗೆ ಸರೋಜೆಯ ಆ ಭಾವಚಿತ್ರದ ಕಟ್ಟು ಕೆಳಕ್ಕೆ ಬಿದ್ದು ಕನ್ನಡಿಯೆಲ್ಲ ಒಡೆದು ಚೂರುಚೂರಾಗಿದ್ದಿತು.

ಹುಚ್ಚನಂತೆ ಆ ಚೂರುಗಳನ್ನುಳ್ಳ ಭಾವಚಿತ್ರವನ್ನು ಎತ್ತಿ ಎದೆಗೊತ್ತಿಕೊಂಡೆ. ನನ್ನ ಪ್ರಜ್ಞೆಯೇ ನನಗಿರಲಿಲ್ಲ.

"ಹೋದಳು - ಹೋದಳು–ಸರೋಜಾ ಹೋದಳು!.."

ಪ್ಲೇಗಿನಿಂದ ತಂದೆಯನ್ನುಳಿಸಿಕೊಳ್ಳಲು ಹೋದವಳು ತಾನೇ ಪ್ಲೇಗಿನ ಬಾಯಿಗೆ ಬಲಿಯಾದಳು..

ಅದರಲ್ಲಿ ನನ್ನ ಆ ಪತ್ರವೂ ಆಕೆಗೆ ಬಲವಾದ ಆಘಾತವನ್ನುಂಟುಮಾಡಿರಬೇಕು ! ಪತ್ರ ! ಪ್ಲೇಗು ! ಸರೋಜಳ ಸಮಾಧಿಗೆ ಇವೆರಡೂ ಹುಡಿಗೂಡಿಸಿದುವು.

"ವಿರಹ ! ಅದೊಂದು ಹುಚ್ಚು ! ಪ್ರೇಮ ! ಅದೊಂದು ಭ್ರಮೆ ! ಕತೆ, ಕಾದಂಬರಿ, ಕವನಗಳಲ್ಲಿ ಮಾತ್ರ ಪ್ರೇಮಕ್ಕೆ ಸ್ಥಾನ" ಎಂದು ಶಾಮುವಿಗೆ ತಮಾಷೆ ಮಾಡಿದೆ. 'ಆಕೆಯಿಲ್ಲವಾದರೆ ಇಲ್ಲ, ಬೇರೊಬ್ಬ ಚೆಲುವೆಯನ್ನು ವಿವಾಹವಾಗಿ ಸೊಗಸಾಗಿ ಕಾಲಕಳೆಯಬಹುದು' ಎಂದು ಹೇಳಿದೆ ಶಾಮುವಿಗೆ. 'ಅನುಭವಿಸಿದವರಿಗೇ ಅರ್ಥವಾಗುತ್ತೆ ಈ ಹುಚ್ಚು' ಎಂದು ಆಗ ಶಾಮು ಹೇಳಿದ ಮಾತಿನಲ್ಲಿ ಈಗ ಕಾಣಿಸುತ್ತಿದೆ ನನಗೆ ಸತ್ಯ.

ತಾಯಿ-ತಂದೆಗಳು ಪುನಃ ಕಿಟಿಕಿಟಿ ನಡೆಯಿಸಿದ್ದಾರೆ. ಎಷ್ಟೋ ಕಡೆಗಳಿಂದ ವಧುಗಳೂ ನನಗಾಗಿ ಕಾಯ್ದು ಕುಳಿತಿವೆ. ಪುನರ್ವಿವಾಹವಾಗುವುದೇ ?— ಛೀ ! ಈ ಜನ್ಮದಲ್ಲಂತೂ ಸಾಧ್ಯವಿಲ್ಲ ಅದು ! ಸರೋಜಾ ಹೋದಳು. ಆಕೆಯೊಂದಿಗೆ ನನ್ನ ಸ್ನೇಹದ ಸಮಾಧಿಯಾಯಿತು....

ಪುನಃ ಸರೋಜೆಯ ಭಾವಚಿತ್ರವನ್ನು ಗಟ್ಟಿಯಾಗಿ ಎದೆಗೊತ್ತಿಕೊಂಡೆ.

ಇದ್ದುದಿದ್ದ ಹಾಗೆ ಆ ಭಾವಚಿತ್ರ ಬಾಯ್ದೆರೆದು ಮೆಲುಮೆಲನೆ ಗುಣುಗುಣಿಸಿದ ಹಾಗೆ ಭಾಸವಾಯಿತು :

"ನೂರು ದಿನಗಳು ಜಾರಿದುವು ಬರಿ-
ದಾರಿ ಕಾಯುತಲಿರುವೆನು;
ಹಾರಯಿಕೆಯೆಂತಹದು ನನ್ನವ
ಬಾರನೇಕೆನುತಿರುವೆನು!"

ಉದ್ಯೋಗಮಂದಿರ ಧಾರವಾಡ

ಇವರಲ್ಲಿಯ 'ದಂತಪ್ರಭಾ' 'ಅಭ್ಯಂಗಚೂರ್ಣ'ಗಳು ನಿಮ್ಮ ದೇಹವನ್ನು ನಿರ್ಮಲವಾಗಿರಿಸುವುವು.
ಒಗೆಬಗೆಯ ಹಿಟ್ಟುಗಳು, ಶುದ್ಧವಾದ ಮಸಾಲೆ, ಮೆಂತೆಯಹಿಟ್ಟು, ಸಾರಿನಪುಡಿ ಇವೆಲ್ಲ
ನಿಮಗೆ ಪರಿಶುದ್ಧವಾದ ಆಹಾರಸಾಮುಗ್ರಿಯನ್ನು ಒದಗಿಸಿಕೊಡುವವು.

ನನ್ನ ದಕ್ಷಿಣಹಿಂದುಸ್ತಾನದ ಯಾತ್ರೆ

ತಿರುಪತಿಯಿಂದ ನಮ್ಮ ಹಳ್ಳಿಗೆ–

★

ತಿರುಪತಿಯ ತಿಮ್ಮಪ್ಪನನ್ನು ಶೈವರು ವೈಷ್ಣವರು ಇಬ್ಬರೂ ಪೂಜಿಸುವುದರ ಕಾರಣ ಯಾರಿಗೆ ಗೊತ್ತಿದೆ? ಹುಟ್ಟಿದಂದಿನಿಂದ ಪವಿತ್ರಕ್ಷೇತ್ರದಲ್ಲಿ ಬದುಕಿ ಬಾಳುತ್ತಿದ್ದರೂ ಅಲ್ಲಿಯ ಕೂಲಿಜನರ ಕಳ್ಳತನ ಸುಳ್ಳುತನಗಳು ಇದ್ದಂತೆಯೆ ಇರುವುವಲ್ಲ; ಇದಕ್ಕೆ ಏನೇನ್ನುವಿರಿ? ಪ್ರವಾಸ ಮಾಡಲಿಚ್ಛಿಸುವವರು ಮಾಡಿಬಂದವರ ಅನುಭವಗಳನ್ನು ತಿಳಿದುಕೊಳಬೇಕಾದುದು ತುಂಬ ಅಗತ್ಯ!

★



ನಮ್ಮ ನಾಡಿನಲ್ಲಿ ವಿಷ್ಣುವಿನ ಯಾವ ಗುಡಿಯಲ್ಲಿ ನೋಡಿದರೂ ಅವನ ಅರ್ಧಾಂಗಿಯ ಚಿಕ್ಕಗುಡಿಯು ಇದ್ದೇ ಇರುವುದು. ಆದರೆ ಅವಳಿಂದ ದೂರನಾದ ವಿಷ್ಣುವಿನ ಗುಡಿಯೆಂದರೆ ಬಹುತರ ಇದೊಂದೇ. ವಿಠೋಬನು ಒಬ್ಬೊಂಟಿಗನಾಗಿನಿಂತಿದ್ದರೂ ರುಕುಮಾಯಿಯ ಗುಡಿಯು ಹತ್ತಿರವೇ ಇದೆ. ತಿರುಪತಿಯ ದೇವರನ್ನು ವೆಂಕಪ್ಪ, **ಶ್ರೀನಿವಾಸ, ಬಾಲಾಜಿ, ಗೋವಿಂದ** ಎಂಬ ವಿವಿಧ ಹೆಸರಿನಿಂದ ಕರೆಯುತ್ತಾರೆ. ಹರಿದ್ವಾರದಿಂದ ರಾಮೇಶ್ವರದ ವರೆಗಿನ ಎಲ್ಲ ಒಳಜಾತಿಯ ಹಿಂದುಗಳನ್ನೂ ಇಲ್ಲಿ ಯಾವಾಗಲೂ ಕಾಣಬಹುದು.

ಗುಡಿಯ ಹತ್ತಿರವಿರುವ '**ಸ್ವಾಮಿಪುಷ್ಕರಿಣಿ**' ಎಂಬ ಸರೋವರವು ತುಂಬ ಪವಿತ್ರವೆಂದು ಪರಿಗಣಿಸಲ್ಪಟ್ಟಿದೆ. ಸೂರ್ಯನು ಧನುರಾಶಿಯಲ್ಲಿರುವಾಗ, ಶುಕ್ಲಪಕ್ಷದ ದ್ವಾದಶಿಯ (ಮುಕ್ಕೋಟಿ) ಅರುಣೋದಯ ಕಾಲದಲ್ಲಿ, ಸಮಸ್ತದೇವತೆಗಳೂ ಈ ತೀರ್ಥದಲ್ಲಿ ಬಂದು ಸ್ನಾನಮಾಡುತ್ತಾರೆಂಬ ನಂಬಿಕೆಯಿರುವುದರಿಂದ, ಆ ದ್ವಾದಶಿಯ ದಿವಸ ಅಸಂಖ್ಯ ಯಾತ್ರಿಕರು ಇಲ್ಲಿ ಬಂದು ಸ್ನಾನಮಾಡುವರು. ಆ ಮೇಲೆ ದೇವದರ್ಶನಕ್ಕೆ ಕೂಡುವ ಗದ್ದಲದ ಕಲ್ಪನೆಯು ಇದರ ಮೇಲಿಂದಲೆ ಆಗಬಹುದು.

ಶ್ರೀನಿವಾಸನ ಗರ್ಭಗುಡಿಯ ಬಾಗಿಲು, ಸಮೆಗಳು, ತೂಗುಮಂಚ ಮೊದಲಾದುವುಗಳೆಲ್ಲ ಬೆಳ್ಳಿಯವು. ದೇವರ ಮೂರ್ತಿ ತುಂಬ ಎತ್ತರವೂ ಸುಂದರವೂ ಇರುತ್ತದೆ. ಹಣೆಗೆ ಬೆಲೆಬಾಳುವ ಕಸ್ತೂರಿಯ ನಾಮವನ್ನು ವಾರಕ್ಕೊಮ್ಮೆ ಹಚ್ಚುತ್ತಾರೆ. ಮೈಮೇಲೆ ತುಂಬಾ ಬೆಲೆಬಾಳುವ ಆಭರಣಗಳನ್ನಿರಿಸುತ್ತಾರೆ. ಮೂರ್ತಿಗೆ ನಾಲ್ಕು ಕೈಗಳಿದ್ದು ಹಿಂದಿನ ಎರಡು ಕೈಗಳಲ್ಲಿ ಶಂಖ– ಚಕ್ರಗಳಿರುತ್ತವೆ. ಮುಂದಿನ ಬಲಗೈಯು "ಇದೇ ಭೂವೈಕುಂಠ" ಎಂದು ತೋರಿಸುತ್ತದೆ. ಮುಂದಿನ ಎರಡೂ ಕೈಗಳ ಮೇಲೆ ಸರ್ಪಭೂಷಣ ಅಥವಾ "**ಭುಜಂಗವಲಯ**" ಚಿಹ್ನವು– ಶೈವ ಚಿಹ್ನವು– ಇರುವುದೆಂದು ಹೇಳುತ್ತಾರೆ. ಆದುದರಿಂದ ವೈಷ್ಣವರೂ ಶೈವರೂ ಕೂಡಿಯೇ ಅತ್ಯಂತ ಶ್ರದ್ಧೆ ಹಾಗೂ ಭಕ್ತಿಯಿಂದ ಈ ದೇವರಿಗೆ ನಡೆದುಕೊಳ್ಳುತ್ತಾರೆ. ಹರಿ-ಹರರ ಚಿಹ್ನಗಳು ಏಕೀಕೃತವಾಗಿ ಒಂದೇ ಮೂರ್ತಿಯ ಮೇಲೆ ಒಪ್ಪುವುದು ಬಹುತರ ಇದೊಂದೇ ಸ್ಥಳದಲ್ಲಿ. ಇಲ್ಲಿ **ಶ್ರೀವೈಷ್ಣವರ** ಎಂದರೆ ರಾಮಾನುಜೀಯ ಪಂಥದವರ ಪ್ರಾಬಲ್ಯ ಇದೆ.

ಈ ಮೊದಲು ದೇವಸ್ಥಾನದ ವ್ಯವಸ್ಥೆಯು ಒಬ್ಬ ಮಹಂತನ ಕಡೆಗೆ ಇರುತ್ತಿದ್ದಿತು. ಆದರೆ ಒಳಗಡೆ ಸರಕಾರದವರು ಎಲ್ಲ ವ್ಯವಸ್ಥೆಯನ್ನೂ ತಮ್ಮ ಕಡೆಗೆ ತೆಗೆದುಕೊಂಡು, ಮಹಂತನಿಗೆ ವರ್ಷಾಶನವನ್ನು ಕೊಟ್ಟಿರುವುದಾಗಿ ತಿಳಿಯುತ್ತದೆ. ದೇವಸ್ಥಾನದಲ್ಲಿಯ ಮತ್ತು ಲೆಕ್ಕಪತ್ರದ ವ್ಯವಸ್ಥೆಯನ್ನು ಸರಕಾರದವರೇ ನೋಡುತ್ತಾರೆ.

* * *

ದ್ವಾದಶಿಯ ದಿವಸ ನಾವು ಮೈಸೂರು-ಛತ್ರದಲ್ಲಿ ಊಟ ತೀರಿಸಿಕೊಂಡು ಮಧ್ಯಾಹ್ನದ ೩ ಗಂಟೆಗೆ "**ಪಾಪನಾಶಿನಿ**" ಹಾಗೂ "**ಆಕಾಶಗಂಗೆ**" ಯ ಧಬಧಬೆಗಳನ್ನು ನೋಡಲು ಹೊರಟೆವು. ಹುಬ್ಬಳ್ಳಿ



ಸ್ವಾಮಿಪುಷ್ಕರಿಣಿಯ ನೋಟ

ಜಿುಂದ ಬಂದಿದ್ದ ರಾಮಾನುಜಾಚಾರ್ಯರೆಂಬ ಪರಿಚಿತರೊಬ್ಬರು ನಮಗೆ ಮಾರ್ಗದರ್ಶಿಗಳಾದರು. ಮೊದಲು **ಪಾಪನಾಶಿನಿಗೆ** ಹೋಗಿ, ತಿರುಗಿ ಬರುವಾಗ **ಆಕಾಶಗಂಗೆ**ಯನ್ನು ನೋಡಿದೆವು. ಪಾಪನಾಶಿನಿಯು ಸಣ್ಣ ಧಬಧಬೆ ಇದ್ದು, ಕೆಳಗೆ ನಿಂತು ಸ್ನಾನ ಮಾಡಲು ಅನುಕೂಲವಾಗುವಂತೆ ಕಪ್ಪಿಣದ ಸರಪಳಿಗಳನ್ನು ತೂಗುಹಾಕಿರುತ್ತಾರೆ. ಆಕಾಶಗಂಗೆಯಲ್ಲಿ ಬಹಳ ಸ್ವಲ್ಪ ಪ್ರಮಾಣದಿಂದ ನೀರು ಬೀಳುತ್ತದೆ. ಎರಡೂ ಧಬಧಬೆಗಳು ನಿಬಿಡವಾದ ಕಾನನಗಳ ಮಧ್ಯದಲ್ಲಿರುವುದರಿಂದ, ಮಧ್ಯಾಹ್ನದೊಳಗಾಗಿಯೆ ಇವುಗಳನ್ನು ನೋಡುವುದು ನೆಟ್ಟಗೆ. ನಾವು ಹೋದಾಗ ದಾರಿಯಲ್ಲಿ ಯಾರೂ ಇರಲಿಲ್ಲ. ಪಾಪನಾಶಿನಿಯ ಹತ್ತಿರ ಮಾತ್ರ ಒಂದು ಗುಡಿಸಿಲಿದ್ದು ಅಲ್ಲಿ ಕಾಫಿ-ತಿಂಡಿ ದೊರೆಯುತ್ತದೆ. ಇದು ಸುಮಾರು ನಾಲ್ಕು ಮೈಲು ಅಂತರದ ಮೇಲಿದೆ, ತಿರುಗಿ ಬರುವಷ್ಟರಲ್ಲಿ ಕತ್ತಲೆಯಾಯಿತು. ಆಕಾಶಗಂಗೆಯ ಹತ್ತಿರವೂ ಗುಡಿಸಿಲಿದ್ದು ಅಲ್ಲಿ ಬೈರಾಗಿಗಳಿರುತ್ತಾರೆ.

ಮರುದಿನ ಮುಂಜಾನೆ ನಾವು "ಪಾಂಡುತೀರ್ಥ"ದಲ್ಲಿ ಸ್ನಾನಮಾಡಿದೆವು. "ಗೋಗರ್ಭ"ವೂ ಇಲ್ಲಿಯೇ ಇರುತ್ತದೆ. ಇವು ಗುಡಿಯಿಂದ ಅರ್ಧ ಮೈಲಿನೊಳಗಿರುತ್ತವೆ. ಬೆಟ್ಟದ ಮೇಲೆ ಒಂದು ಗೋಶಾಲೆಯಿರುತ್ತದೆ.

ಬೆಟ್ಟವನ್ನೇರಲು ಎರಡನೆಯ ಕಡೆಯಿಂದ ಎಂದರೆ ಚಂದ್ರಗಿರಿ(ತಿರುಪತಿ ವೆಸ್ಟ್)ಯ ಕಡೆಯಿಂದಲೂ ಪಾವಟಿಗೆಗಳುಂಟು. ಚಂದ್ರಗಿರಿಯಿಂದ ಸುಮಾರು ನಾಲ್ಕು ಮೈಲುಗಳವರೆಗೆ ಉತ್ತಮವಾದ ಮಾರ್ಗವಿರುತ್ತದೆ. ಅನಂತರ ಸುಮಾರು ೩ ಮೈಲುಗಳವರೆಗೆ ಬಿಡುವಿಲ್ಲದೆ ಒಂದೇ ಸಮನೆ ಪಾವಟಿಗೆಗಳನ್ನೇರಬೇಕಾಗುತ್ತದೆ. ಚಂದ್ರಗಿರಿಯಿಂದ ಬೆಟ್ಟದ ತುದಿಯವರೆಗೆ ವಿದ್ಯುದ್ದೀಪಗಳುಂಟು. ಆದರೆ ಈ ಕಡಿದಾದ ಏರನ್ನು ಹತ್ತುವುದಕ್ಕೆ ಬಹಳ ಜನರು ಒಪ್ಪುವುದಿಲ್ಲ.

ಚಂದ್ರಗಿರಿಯಲ್ಲಿ ವಿಜಯನಗರದ ರಾಯರ ಅರಮನೆಯುಂಟು. ಅದನ್ನು ಈಗ "ಟ್ರ್ಯಾವ್ಹಲರ್ಸ್‌ಬಂಗ್ಲೆ" ಯನ್ನಾಗಿ ಉಪಯೋಗಿಸುವರು. ಮದ್ರಾಸ್ ಪಟ್ಟಣದ ಸ್ಥಳವನ್ನು **ಫ್ರಾನ್ಸಿಸ್ ಡೇ** ಎಂಬವನಿಗೆ ಕೊಟ್ಟ ಕಾಗದವು ಇದೇ ಕಟ್ಟಡದಲ್ಲಾಯಿತಂತೆ. ಈ ಪಟ್ಟಣದ ಭಾಷೆಯಾಗ ತುಂಬಾ ತೆಲುಗು. ಒಂದು ಊಟದ ಮನೆಯನ್ನು ಒರ್ವ ಮಾಧ್ವನು ನಡೆಯಿಸಿರುವವನು; ಅವನು ಕನ್ನಡಿಗನು.

ಶ್ರೀನಿವಾಸನ ಸನ್ನಿಧಾನದಲ್ಲಿರುವ ಉತ್ತರಾದಿಮಠದಲ್ಲಿ ನಾವು ಸಣ್ಣಮಕ್ಕಳ ಉಪನಯನ ಹಾಗು ಚಂಡಿಕೆಗಳನ್ನು ಅಲ್ಪವೆಚ್ಚದಲ್ಲಿ ಮಾಡಿಕೊಂಡು ಹೊರಟೆವು. ಈ ಸಲ ಕೂಲಿಯವರು ನಮ್ಮ ಕಡೆಯಿಂದ ಇಂತಿಷ್ಟು ಹಣ ತೆಗೆದುಕೊಂಡೇ ಬಿಡಬೇಕೆಂದು ಗೊತ್ತುಮಾಡಿಕೊಂಡು ಗುಂಪುಗೂಡಿಬಿಟ್ಟಿದ್ದರು. ನಾವು ಆ ದಿನ ಹೊರಡತಕ್ಕವರೆಂಬ ಸಂಗತಿಯನ್ನು ಅವರಲ್ಲಿಯ ಒಬ್ಬಿಬ್ಬರಿಗೆ ಮೊದಲು ತಿಳಿಸಿದುದೇ ತಪ್ಪಾಯಿತು. ಯಾವ ಕೂಲಿಯವನ ಕಡೆಗೆ ಹೋದರೂ ಒಂದೇಮಾತು. ಅಂತೂ ನಾವು ಆ ದಿನ ಹೊರಡುವುದನ್ನೇ ರಹಿತಮಾಡಿ ಮರುದಿನ ಬೆಳಗು ಹರಿಯುವುದರೊಳಗೆ ಹೊಸದಾಗಿ ಬಂದ ಕೂಲಿಯವರನ್ನು ಗೊತ್ತುಮಾಡಿಕೊಂಡು ಹೊರಡಬೇಕಾಗುತ್ತಿದ್ದಿತು. ಹುಡುಗರು ಹಾಗು ಸಾಮಾನುಗಳಿದ್ದುದರಿಂದ ನಾವು ಈ ಸ್ಥಳದಲ್ಲಿ ಕೂಲಿಯವರ ಮಾತಿನಂತೆ ನಡೆಯಲೇಬೇಕಾಗುತ್ತದೆ. ಈ ಕೂಲಿಯವರ ಕಡೆಗೆ ನಾವು ಸಾಮಾನು ಒಪ್ಪಿಸಿ ಮುಂದೆ ಹೊರಟೆವು. ಆದರೆ ರಾಮಾನುಜಾಚಾರ್ಯರಿಂದಲೇ ಕೂಲಿದರದ ಬಗ್ಗೆ ತಿಕ್ಕಾಟವಾಯಿತೆಂದು, ಕೂಲಿಯವರು ಬೇಕೆಂತಲೇ ಹಿಂದೆ ಉಳಿದು ಆಚಾರ್ಯರ ಗಂಟು ಬಿಚ್ಚಿ ಸುಮಾರು ಎರಡು ರೂಪಾಯಿಗಳನ್ನೂ ಒಂದು ಧೋತರವನ್ನೂ ಜಪ್ತಮಾಡಿದ್ದರು. ಈ ವಿಷಯವು ಆಚಾರ್ಯರಿಗೆ ತಡವಾಗಿ ಗೊತ್ತಾಯಿತು. ಭೂವೈಕುಂಠವಾದರೇನು? ಕಳ್ಳರು ಎಲ್ಲಿಯೂ ಕಳ್ಳರೇ ಸರಿ!

ಮಧ್ಯಾಹ್ನದ ಸಮಯಕ್ಕೆ ನಾವು **ಗೋವಿಂದರಾಜನ ಪಟ್ಟಣಕ್ಕೆ** ಬಂದೆವು. ದಾರಿಯಲ್ಲಿಯೇ ಹೊಸದಾಗಿ ಕಟ್ಟಿದ ಶ್ರೀರಾಘವೇಂದ್ರಸ್ವಾಮಿಗಳ ಮಠದಲ್ಲಿ ಊಟತೀರಿಸಿಕೊಂಡು ಗೋವಿಂದರಾಜನ ವಿಸ್ತೀರ್ಣವಾದ, ಭವ್ಯವಾದ ಗುಡಿಯನ್ನು ನೋಡಿದೆವು. ಗೋವಿಂದರಾಜನ ಮೂರ್ತಿ, ತಲೆಗೆ ಅರೆಪಾವು ಇಟ್ಟುಕೊಂಡು ಮಲಗಿದ ಭಂಗಿಯಲ್ಲಿರುತ್ತದೆ. ಶ್ರೀನಿವಾಸನಿಗಾಗಿ ಸಾಲದ ಹಣವನ್ನು ಅಳೆದಳೆದು ಬೇಸತ್ತು ಗೋವಿಂದರಾಜನು ಮಾಪನ್ನು ತಲೆಗಿಟ್ಟುಕೊಂಡು ವಿಶ್ರಮಿಸುತ್ತಿರುವನೆಂದು ಹೇಳುತ್ತಾರೆ.

ಗೋವಿಂದರಾಜನ ಪಟ್ಟಣ (ತಿರುಪತಿ ಈಸ್ಟ್)ದ ಹತ್ತಿರವೇ **ಕಪಿಲತೀರ್ಥ**ವೆಂಬ ಹೊಂಡವಿರುತ್ತದೆ. ಇಲ್ಲಿ ಭಾವಿಕರು ವಪನ ಮಾಡಿಸಿಕೊಂಡು ಶ್ರಾದ್ಧಾದಿಗಳನ್ನು ಮಾಡುತ್ತಾರೆ. ನಾವು ಈ ಕಾರ್ಯಕ್ಕಾಗಿ ರಾಮೇಶ್ವರ-ಧನುಷ್ಕೋಡಿಗಳನ್ನು ಮಾತ್ರ ಮೀಸಲಾಗಿರಿಸಿದುದರಿಂದ ಉಳಿದ ಯಾವ ಕ್ಷೇತ್ರದಲ್ಲಿಯೂ ಶ್ರಾದ್ಧ-ಪಿಂಡಪ್ರದಾನಗಳ

ತಿರುಪತಿಯಲ್ಲಿಯ 'ಪಾಪನಾಶಿನೀ' ತೀರ್ಥ

ಗೋಪವೆಗೆ ಹೋಗಲಿಲ್ಲ. ಅದಕ್ಕಾಗಿ ಅವಕಾಶವೂ ಇರಲಿಲ್ಲ.

ತಿರುಚಾನೂರು ಅಥವಾ ಪದ್ಮಸರೋವರ:—ತಿರುಪತಿ ನಿಲ್ದಾಣದಿಂದ ಸುಮಾರು ಒಂದು ಹರದಾರಿಯ ಮೇಲೆ ಪದ್ಮಾವತಿಯ ಗುಡಿ, ಪದ್ಮಸರೋವರ, ತೋಟ, ಸರೋವರದಮೇಲೆ ಉತ್ತರಾದಿಮಠ, ಹಾಗೂ ಈ ಮಠದ ಸಭೆಯ ಕಟ್ಟಡ ಇವೆಲ್ಲ ಇರುತ್ತವೆ. ಗುಡಿಯು ಅಷ್ಟೇನು ದೊಡ್ಡದಲ್ಲ. ಆದರೂ ಇದನ್ನು ಬಲು ಹಸನಾಗಿ ಇರಿಸಿರುವರು. ಇಲ್ಲಿಯೂ ಸಾಯಂಕಾಲದ ಪೂಜೆಯನ್ನು ತೀರಿಸಿಕೊಂಡು ಹೊರಟೆವು. ಗುಡಿ ಹಾಗೂ ಸರೋವರದ ಸುತ್ತಲೂ ಊರು ಹಬ್ಬಿದೆ.

ಗೋವಿಂದರಾಜನ ಪಟ್ಟಣದಲ್ಲಿ ವ್ಯಾಪಾರವು ವಿಶೇಷವಾಗುತ್ತದೆ. ತಿರುಪತಿಗೆ ಬಂದ ಯಾತ್ರಿಕರೆಲ್ಲ ಕುಂಕುಮ, ದೇವರ ಫೋಟೋ, ಗಿರಿಯ ತಂಬಿಗೆ, ಚಂದನದ ಸಾಮಾನುಗಳು, ಗಂಗಾವನ, ಮೊದಲಾದುವುಗಳನ್ನು ಕೊಳ್ಳುವುದರಲ್ಲಿ ಇಲ್ಲಿ ಒಪ್ಪೊತ್ತು ಕಳೆಯುತ್ತಾರೆ. ಇಲ್ಲಿರುವ ಮಹಂತರ ವಾಸಸ್ಥಾನವು ದೊಡ್ಡ ಅರಮನೆಯಷ್ಟು ವಿಶಾಲವೂ, ಭವ್ಯವೂ ಇರುತ್ತದೆ.

ನಾವು ರಾತ್ರಿಯ ರೈಲಿನಿಂದ ರಾಮಾಚಾರ್ಯರು ಸಹಿತ ಹೊರಟು, **ರೇಣಿಗುಂಟೆ**ಯಲ್ಲಿ ಬಂಡಿಯನ್ನು ಒದಲುಮಾಡಿ, ಮರು ದಿನ ಮುಂಜಾನೆ **ಗುಂತಕಲ್ಲಿ**ಗೆ ಬಂದೆವು. **ರೇಣಿಗುಂಟೆ**ಯಿಂದ **ಗುಂತಕಲ್ಲ** ವರೆಗೆ ದೊಡ್ಡ ಬಂಡಿಗಳು (Broad gauge).



‘ ಗೋಗರ್ಭ’ದ ದೃಶ್ಯ

ಗುಂತಕಲ್ಲಲ್ಲಿ ಪುನಃ ಬಂಡಿಯನ್ನು ಬದಲು ಮಾಡಿ ಸಣ್ಣಬಂಡಿಯಲ್ಲಿ (Meter gauge) ಕುಳಿತು ಮಧ್ಯಾಹ್ನ ೩ ಗಂಟೆಗೆ ಗದುಗಿಗೆ ಬಂದೆವು. ನಾವು ನೇರವಾಗಿ ಹುಬ್ಬಳ್ಳಿಗೆ ಹೊರಡತಕ್ಕವರಿದ್ದೆವು; ಆದರೆ ಗದುಗಿನಲ್ಲಿ ರೇಲ್ವೆ ಖಾತೆಯಲ್ಲಿರುವ ನನ್ನ ಮಿತ್ರರೊಬ್ಬರು ಮುಂದೆ ಹೋಗಗೊಡಲಿಲ್ಲ. ಉಪನಯನದ ಶುಭಕಾರ್ಯಮಾಡಿದವರು ಊರಿಗೆ ಉಪವಾಸಹೋಗತಕ್ಕದ್ದಲ್ಲವೆಂದು ಹೇಳಿದರು. ಹತ್ತಿರವೇ ಇದ್ದ ಅವರ ಮನೆಯಲ್ಲಿ ಸ್ನಾನ – ಭೋಜನಗಳನ್ನು ತೀರಿಸಿಕೊಂಡು ಸಾಯಂಕಾಲದ ರೈಲಿನಲ್ಲಿ ಗದುಗಿನಿಂದ ಹೊರಟೆವು. ನನ್ನ ಬಂಧು ಕೃಷ್ಣರಾಯರು ಅದೇ-ಬಂಡಿಯಲ್ಲಿ ಸೊಲ್ಲಾಪುರದಿಂದ ಬಂದಿದ್ದರು. ನಾವು ಅವರು ಕೂಡಿ ರಾತ್ರಿ ೭ತ್ತಿ ಗಂಟೆಗೆ ೨೦ ದಿವಸಗಳ ನಂತರ ಹುಬ್ಬಳ್ಳಿಗೆ ಮರಳಿ ಬಂದು ತಲ್ಪಿದೆವು.

ಉಪಸಂಹಾರ

ಅಂತೂ ನಮ್ಮ ಪ್ರವಾಸವು ಸುಖರೂಪವಾಗಿ ಕೊನೆಗಂಡಿತು. ಮದ್ರಾಸ್ ಇಲಾಖೆಯಲ್ಲಿ ‘ **ಜಾಗ್ರತೆ! ಕಳ್ಳರಿರುವರು !** ’ (Beware of theives) ಎಂಬಕ್ಷರದ ಹಲಗೆಗಳನ್ನು ತೂಗು ಹಾಕಿರುತ್ತಾರೆ. **ತಂಜಾವರ್** ಹಾಗೂ **ತ್ರಿಚಿನಾಪಳ್ಳಿ**ಯ ಠಕ್ಕರು ಪ್ರಸಿದ್ಧರು. ಮಲೆಯಾಳದ ಮಾಂತ್ರಿಕರೂ ಮಾಟಗಾರರೂ ನಿಷ್ಣಾತರು. ಅಲ್ಲಲ್ಲಿಯ ಕಲುಷಿತ ನೀರು, ದೂಷಿತ ಹವೆ, ಥರ್ಡ್‌ಕ್ಲಾಸ್ ಟಿಕೀಟಿನ ಗದ್ದಲದ ಮೂಲಕ ಉಂಟಾದ ನಿದ್ರಾಭಾವ ಇವೇ ಮೊದಲಾದ ಕಾರಣಗಳಿಂದ ಇಪ್ಪತ್ತು ದಿವಸಗಳ ವರೆಗೆ ಬಿಟ್ಟೂಬಿಡದೆ ೩ನೆಯ ವರ್ಗದಲ್ಲಿ ಪ್ರವಾಸವನ್ನು ಸುಖರೂಪವಾಗಿ ಜರುಗಿಸುವುದೇನು ಹಗುರಾದ ಕೆಲಸವಲ್ಲ. ಅದರಲ್ಲಿಯೂ ಸಂಗಡ ಚಿಕ್ಕ ಮಕ್ಕಳು ! ಆದರೂ ಯಾವ ತೊಂದರೆಗಳೂ ನಮ್ಮನ್ನು ಬಾಧಿಸಲಿಲ್ಲವೆಂಬುದು ನಮ್ಮ ಸುದೈವವು. ಎಲ್ಲಮ್ಮನ ಗುಡ್ಡದಿಂದ ತಿರುಗಿ ಬರುವ ಯಾತ್ರಿಕರನ್ನು ಮನೆಯ ವರೆಗೆ ಸುರಕ್ಷಿತವಾಗಿ ಮುಟ್ಟಿಸಲು ಪರಶುರಾಮನು ಬರುವನೆಂದು



ಹಳ್ಳಿಯ ಜನರು ನಂಬುವುದುಂಟು. ಎಂದ ಮೇಲೆ ಶ್ರೀರಂಗನಿಂದ ಮೊದಲು ಮಾಡಿಕೊಂಡು ಶ್ರೀನಿವಾಸನ ವರೆಗಿನ ಸಮಸ್ತ ದೇವತೆಗಳ ತಂಡವೇ ನಮ್ಮನ್ನು ಕಳುಹಲು ನಮ್ಮ ಹಳ್ಳಿ ಬೆಂಗೇರಿಯ ವರೆಗೆ ಬಂದಿರಬಹುದಲ್ಲವೇ ? ಹಿಡಿದ ಕೆಲಸವು ವಿಘ್ನವಿಲ್ಲದೆ, ಸುಖರೂಪವಾಗಿ ಕೈಗೂಡಿದರೆ ಆಗುವ ಆನಂದವು ಈಗ ನಮಗಾಯಿತು. ಆದರೆ ಈ ಪ್ರವಾಸದಿಂದ ನನ್ನ ಮನಸ್ಸು ತಣಿಯಲಿಲ್ಲ, ದಣಿಯಲಿಲ್ಲ. ಒಂದೊಂದು ಊರಲ್ಲಿ ಒಂದೊಂದೇ ದಿನವಿದ್ದು ಪ್ರೇಕ್ಷಣೀಯವಾದುದೆಲ್ಲವನ್ನೂ ನೋಡುವುದು ಶಕ್ಯವಿಲ್ಲ. ಎಲ್ಲ ದೃಶ್ಯಗಳೂ ಸಿನೇಮಾದಲ್ಲಿಯ ಚಿತ್ರಗಳಂತೆ ಭರಭರನೆ ಕಣ್ಮುಂದೆ ಹಾಯ್ದು ಹೋದುವು. ಪ್ರತಿಯೊಂದು ಊರಲ್ಲಿ ಸಾಕಷ್ಟು ವೇಳೆಯನ್ನಿಟ್ಟುಕೊಂಡು ಇನ್ನೊಮ್ಮೆ ಈ ಯಾವತ್ತು ಸ್ಥಳಗಳನ್ನು ಯಥಾವಕಾಶವಾಗಿ ನೋಡಬೇಕೆಂಬ ಹಂಬಲವು ಮಾತ್ರ ಈ ನನ್ನ ಸವೇಗ ಪ್ರಯಾಣದಿಂದ ಉಂಟಾಯಿತು. ದಕ್ಷಿಣ ಹಿಂದುಸ್ತಾನವೆಂದರೆ ಅಂತಹ ಸುಂದರ ನಾಡು! ದ್ರಾವಿಡ ಶಿಲ್ಪಕಲೆಯ ನೆಲೆವೀಡು! ಪ್ರಶಾಂತವಾದ ವಿಸ್ತಾರವಾದ ಭವ್ಯವಾದ ಕಟ್ಟಡಗಳ ಬೀಡು ! ಸೃಷ್ಟಿಸೌಂದರ್ಯದ ತವರೂರು ! ಇವುಗಳ ಜೊತೆಗೆ ಅಲ್ಲಿ ಪ್ರತಿಸ್ಥಳದಲ್ಲಿ ದೊರೆಯುವ “ಛತ್ರ” ಗಳ

ಅನುಕೂಲತೆ ! ಪರಕೀಯರ ಆಘಾತದಿಂದ ಅಚ್ಚಳಿಯದಂತೆ ಸಂರಕ್ಷಿಸಲ್ಪಟ್ಟಿರುವ ಆ ಸುಮನೋಹರ ದೇವಾಲಯಗಳನ್ನೂ ಆ ಸೃಷ್ಟಿಸೌಂದರ್ಯವನ್ನೂ ಸಾಕಷ್ಟು ಅವಕಾಶವನ್ನಿಟ್ಟುಕೊಂಡು ನೋಡುವ ಸುಸಂಧಿಯನ್ನು ಬೇಗನೆ ಒದಗಿಸಲೆಂದು ಪ್ರವಾಸಾಭಿಮಾನಿ ದೈವತವನ್ನು ನಿರಂತರ ಪ್ರಾರ್ಥಿಸುತ್ತೇನೆ.

ನಮ್ಮ ಅನುಭವದ ಮೇರೆಗೆ ಇಂತಹ ಪ್ರವಾಸದಲ್ಲಿ ಪಾಲಿಸತಕ್ಕ ನಿಯಮಗಳು :—

೧. ಶಕ್ಯವಿದ್ದಷ್ಟು ಕಡಿಮೆ ಸಾಮಾನು ಜೊತೆಗೆ ಒಯ್ಯತಕ್ಕದ್ದು.

೨. ಜೊತೆಯಲ್ಲಿ ಒಂದು ಗಟ್ಟಿಮುಟ್ಟಾದ ಕೀಲಿ, ಪಾಕೆಟ್ ಬ್ಯಾಟರಿ, ತಿರುಗಣಿಯ ತಂಬಿಗೆ, ಮಡಚುವ ಸ್ಟವ್, ಸಣ್ಣ ಕಂದೀಲು ಅಥವಾ ಬೆಡ್‌ಲ್ಯಾಂಪ್, ಹಾಗೂ ಮೇಣ-ಬತ್ತಿಗಳನ್ನು ಒಯ್ಯತಕ್ಕದ್ದು.

೩. ಕ್ವಿನೀನ್, ಕ್ಯಾಫಿ ಆಸ್ಪಿರಿನ್ ಮೊದಲಾದ ತಾತ್ಪೂರ್ತಿಕ ಔಷಧಗಳು ಜೊತೆಯಲ್ಲಿ ಇರಬೇಕು.

೪. ಎಲ್ಲಿ ಹೋದರೂ ಜಟಕಾದವರೂ ಕೂಲಿಯವರೂ ಸುಮಾರು ನಾಲ್ಕು ಪಟ್ಟು ದರವನ್ನು ಏರಿಸಿ ಹೇಳುವುದನ್ನು ನೆನಪಿನಲ್ಲಿಟ್ಟುಕೊಳ್ಳತಕ್ಕದ್ದು.

೫. ರಾತ್ರಿಯ ಊಟವನ್ನು ವರ್ಜ ಮಾಡಬೇಕು.

೬. ಕಂಡಕಂಡಲ್ಲಿ ನೀರು ಕುಡಿಯತಕ್ಕದ್ದಲ್ಲ. ಚಹ ಅಥವಾ ಕಾಫಿಯನ್ನು ತೆಗೆದುಕೊಳ್ಳುವುದು ಒಳಿತು.

೭. ಜೊತೆಯ ಪ್ರಯಾಣಿಕರ ಸಂಗಡ ವಾದಗ್ರಸ್ತ ವಿಷಯಗಳ ಚರ್ಚೆ ಮಾಡತಕ್ಕದ್ದಲ್ಲ. ವ್ಯರ್ಥ ಕಂಠ-ಶೋಷ ಹಾಗೂ ಮನಸ್ತಾಪ ವಾಗುವುದು.

೮. ಪ್ರವಾಸಕ್ಕೆ ಹೊರಡುವ ಪೂರ್ವದಲ್ಲಿಯೇ ನೋಡತಕ್ಕ ಸ್ಥಳಗಳ ಪಟ್ಟಿ, ಪ್ರತಿಯೊಂದು ಸ್ಥಳದಲ್ಲಿ ನೋಡತಕ್ಕ ಕಟ್ಟಡ ಮುಂತಾದುವುಗಳ ಪರಿಚಯ, ಪ್ರತಿಯೊಂದು ಊರಲ್ಲಿ ಕಳೆಯತಕ್ಕ ಪರಮಾವಧಿಯ ಕಾಲ, ಇಳಿದುಕೊಳ್ಳುವ ಸ್ಥಳದ ವ್ಯವಸ್ಥೆ ಇವುಗಳ ಬಗ್ಗೆ ಪೂರ್ಣ ವಿಚಾರಮಾಡಿ ಸ್ಪಷ್ಟವಾದ ರೂಪರೇಷೆಗಳನ್ನು ಗೊತ್ತುಪಡಿಸತಕ್ಕದ್ದು.

೯. ನೋಡತಕ್ಕ ಸ್ಥಳಗಳ ವರ್ಣನೆಯುಳ್ಳ ಪುಸ್ತಕಗಳನ್ನು ಸಂಗ್ರಹಿಸತಕ್ಕದ್ದು.

೧೦. ಅಲ್ಲಲ್ಲಿ ಶಕ್ಯವಿದ್ದಷ್ಟು ವಿಶ್ರಾಂತಿಯನ್ನು ತೆಗೆದುಕೊಳ್ಳಬೇಕು. ಜಾಗರಣೆಯಿಂದ ಪ್ರಕೃತಿಯು ಕೆಡುವ ಸಂಭವವಿದೆ.

ಬೇಕಾದವರಿಗೆ ಕೊಡುವ ಬೆಲ್ಲ

ನಿದ್ದೆ ಮಾಡುತ್ತಿರುವಾಗ ಹೆಂಗುಸರಿಗಿಂತ ಗಂಡುಸರು ನೂರಕ್ಕೆ ಎಪ್ಪತ್ತರಷ್ಟು ಹೆಚ್ಚು ಅಸಮಾಧಾನಿಗಳೂ ಚಂಚಲರೂ ಆಗಿರುತ್ತಾರೆ.

*   *   *

ಸೂರ್ಯನು ಪ್ರತಿದಿನವೂ ೩೬೦ ಮಹಾಪದ್ಮದಷ್ಟು ತೂಕ ಹಗುರಾಗುತ್ತಾನೆ. ಆತನ ನಷ್ಟವಾಗುವ ಆ ಉಷ್ಣತೆಯನ್ನು ತುಂಬಿಕೊಡಬೇಕಾದರೆ ನಾವು ಒಂದು ದೊಡ್ಡ ಕಾರಖಾನೆಯಲ್ಲಿ ೩ ದಶಲಕ್ಷ ದಶಲಕ್ಷ ದಶಲಕ್ಷ ಟನ್ ಕಲ್ಲಿದ್ದಲಿಯನ್ನು ಸುಡಬೇಕಾಗುವುದು.

*   *   *

ಜಗತ್ತಿನಲ್ಲಿ ಅನೇಕ ಆಕಾರದ ಕಿವಿಗಳಿವೆ. ಕಿವಿಗಳ ಈ ಆಕಾರಗಳು ಸಂತತಿಯಿಂದ ಸಂತತಿಗೆ ತಂದೆಯಿಂದಲೇ ಬಂದಿರುತ್ತವೆ.

*   *   *

ಈಗ ಜರ್ಮನಿಯಲ್ಲಿ ೫೫,೨೫೯ ಜನ ಡಾಕ್ಟರರಿದ್ದಾರೆ. ಅವರಲ್ಲಿ ಡಾಕ್ಟರಿತಿಯರ ಸಂಖ್ಯೆ ೪,೩೩೯. ಕಳೆದ ಎರಡು ವರುಷಗಳಲ್ಲಿ ಡಾಕ್ಟರರ ಸಂಖ್ಯೆ ೧೦೦ ಕ್ಕೆ ೬ ರಷ್ಟು ಕೂಡ ಹೆಚ್ಚಾಗಿಲ್ಲ; ಆದರೆ ಡಾಕ್ಟರಿತಿಯರ ಸಂಖ್ಯೆ ೧೦೦ ಕ್ಕೆ ೧೯ಕ್ಕಿಂತ ಹೆಚ್ಚಾಗಿ ಬೆಳೆದಿದೆ.

*   *   *

ಹೆಂಗುಸುರು ನೀಲಿಬಟ್ಟೆಗಳನ್ನುಟ್ಟರೆ ಗಂಡುಸರಿಗೆ ತುಂಬಾ ಮೆಚ್ಚಿಕೆಯಂತೆ !

*   *   *

United States of America ದ ಜಾರ್ಜಟೌನ್ ಎಂಬ ವಿಶ್ವವಿದ್ಯಾನಿಲಯವು ೫೦೦೦ ತೆರದ ಮೆದುಳುಗಳನ್ನು ಕಲೆಹಾಕುವ ಯೋಜನೆಯಲ್ಲಿದೆ. ಹಾಗೆ ಕಲೆಹಾಕಿದ ಮೇಲೆ ಆ ಬಗೆಯ ವಿಶ್ವವಿದ್ಯಾನಿಲಯಗಳಲ್ಲಿಯ ಅಗ್ರಸ್ಥಾನ ಅದೇ ವಿಶ್ವವಿದ್ಯಾನಿಲಯಕ್ಕೆ ದೊರೆಯುವುದರಲ್ಲಿ ಸಂದೇಹವಿಲ್ಲ.

*   *   *

ಸ್ವಲ್ಪದರಲ್ಲಿ ಸ್ವಾರಸ್ಯ ಅರ್ಥಾತ್

ಯುದ್ಧದ ಸ್ವಂತ ಸುದ್ದಿಗಾರ

ಶ್ರೀರಂಗ

★

'ಹೆಂಡತಿ ಹಿಟ್ಲರ್ ಒಂದೇ ಜಾತಿಯವರು; ಸಲಿಗೆಕೊಟ್ಟರಾಯಿತು, ತಲೆಯನ್ನೇರಿ ನಿಂತರೇ' ಎಂಬುದಾಗಿ ಕಂಡ ಕುದುರೀಮೋತೀ ಕನಕಾಚಾರ್ಯರ ಸತ್ಯತತ್ತ್ವ ಚೆಂಬರ್ಲೀನರಿಗೆ ಗೊತ್ತಾಗಿದ್ದರೆ ಎಷ್ಟು ಚೆನ್ನಾಗಿತ್ತು?

★

ಮಹನೀಯರೆ, ಮಹಾಯುದ್ಧಕ್ಕೆ ಮತ್ತೆ ಪ್ರಾರಂಭವಾಗಿದೆ. ಹೇಳುವ ಕಾರಣವಿಷ್ಟೆ, ಕಾಗದ-ಮಸಿ-ಪೆನ್ ಮೊದಲಾದ ಎಲ್ಲ ಸಲಕರಣೆಗಳ ಬೆಲೆ ಏರಿದೆ; ಅದಕ್ಕನುಗುಣವಾಗಿ ಬರೆಯುವ ಲೇಖದ ಬೆಲೆಯೂ ಏರಬೇಕೆಂದು ತಾವು ಅಪೇಕ್ಷಿಸಿದ್ದರೆ ಅದು ಸಹಜವೆ, ಆದರೆ ಒಂದು ಮಾತನ್ನು ನಾನು ಹೇಳುವೆ- ಅಥವಾ, ನನ್ನ ಮಾತೇಕೆ?- ನಮಗೂ ನಿಮಗೂ ಹಿರಿಯರೆನಿಸುವ, ವೇದ-ಶಾಸ್ತ್ರ-ಸದಾಚಾರಸಂಪನ್ನರಾದ **ಕುದುರೆಯ ಮೋತಿಯ ಕನಕಾಚಾರ್ಯರ** ಒಂದು ಮಾತನ್ನು ಹೇಳುವೆ. ಯುದ್ಧ ಸುರುವಾಗುವುದೆಂದು ಯೋಗದೃಷ್ಟಿಯಿಂದ ಕಂಡು, ಸರಕುಗಳ ಬೆಲೆ ಏರುವುದೆಂದು ಸ್ವಪ್ನಸಾಕ್ಷಾತ್ಕಾರದಿಂದ ಅರಿತು, ಅವರು ಯುದ್ಧದ ಮುನ್ನಾದಿನವೆ ಸಾಮಾನುಗಳನ್ನು ಸಂಗ್ರಹಿಸಿಡಬೇಕೆಂದು ಕಿರಾಣಿ ಅಂಗಡಿಗೆ ಬಂದಿದ್ದರು. ಮಾತಿಗೆ ಮಾತು ಬೆಳೆದು ನಸ್ಯದ ನಗೆಮೊಗದಿಂದ ಹೀಗೆ ಹೇಳಿದರು: "ಇದು ನೋಡಿರಿ, ದಿನಾಲು ಮೂರುಮೂರು ನಾಲ್ನಾಲ್ಕು ಗಂಟೆ ಆಹ್ನಿಕ ಮಾಡುವ ನಾನು ಈ ಹೊತ್ತು ಐದು ನಿಮಿಷಗಳಲ್ಲಿಯೆ ಕುದುರೆಗೆ ಹುಲ್ಲುಹಾಕುವವನಂತೆ ಬೆನ್ನು ಬಡಿದು ಎದ್ದೆ. ಯಾಕೆ? ಯುದ್ಧದ ಕಾಲದಲ್ಲಿ ಹೀಗೆಯೆ ಮಾಡತಕ್ಕದ್ದು ಎಂದು ನನ್ನ ಅಭಿಪ್ರಾಯ!" ನಮಗೆಲ್ಲರಿಗೂ ಆಶ್ಚರ್ಯವಾಯಿತು. ಯುದ್ಧಕ್ಕೂ ಆಹ್ನಿಕಕ್ಕೂ ಸಂಬಂಧವೇನು? ಹಾಗೆ ನೋಡಿದರೆ ಯುದ್ಧದ ನಿಮಿತ್ತದಿಂದ-ಉದಾಹರಣೆಗಾಗಿ, ವಿಷವಾಯು (poison gas) ಪ್ರಯೋಗವಾಯಿತೆಂದು ತಿಳಿಯಿರಿ- ಒಮ್ಮೊಮ್ಮೆ ದಿವಸಾನು ದಿವಸ ಮೂಗು ಹಿಡಿಯುವ ಪ್ರಸಂಗ ಬರಬಹುದಾಗಿದೆ. ಹೀಗಿರಲು ಇಷ್ಟರಲ್ಲಿ ಆಚಾರ್ಯರೆ ಮುಂದುವರಿಸಿದರು:- "ಯುದ್ಧ ಎಂದರೆ ಯುರೋಪದ ಮಹಾಯುದ್ಧವಲ್ಲ, ಮನೆಯಲ್ಲಿ ಆಕೆಯ—" ಸಾಕು. ನಮಗೆಲ್ಲರಿಗೂ ತಿಳಿಯಿತು, ಆಚಾರ್ಯರು ಐದುನಿಮಿಷದಲ್ಲಿ ಮುಂದೆ ಹರವಿದ ನೂರಾರು ದೇವರುಗಳಿಂದಲೂ ರಕ್ಷಿತರಾಗದೆ ಮನೆಯಿಂದ ಯಾಕೆ ಕಾಲ್ಕಿತ್ತರೆಂಬುದು.

ವಾಚಕರೆ, ನಗಬೇಡಿರಿ. ನಾನು ಈ ಸಂದರ್ಭದಲ್ಲಿ ಆಚಾರ್ಯರ ಉದಾಹರಣೆಯನ್ನು ಯಾಕೆ ಕೊಡುತ್ತಿರುವೆನೆಂಬುದರ ರಹಸ್ಯ ಹೊಳೆದಿದೆಯೆ ನಿಮಗೆ? ಯಾವ ಮಾತೇ ಆಗಲಿ, ಸ್ವಲ್ಪದರಲ್ಲಿ ಅದರ ಸ್ವಾರಸ್ಯವನ್ನು ತಿಳುಹಿಸಿಕೊಡುವ ಕೌಶಲ್ಯ ಅವರಲ್ಲಿದೆ. ನಾವು-ಲೇಖಕರು- ಅವರಿಂದ ಈ ಗುಣವನ್ನು ಕಲಿತುಕೊಳ್ಳಬೇಕಾಗಿದೆ. ಈಗ ನೋಡಿರಿ, ಈಗ ನಡೆದಿರುವ ಯುದ್ಧದ ವಿಷಯ ನಮಗೆ ಯಾರಿಗೂ ತಿಳಿದಿರಲಿಲ್ಲ. ಸಂದರ್ಭಾನುಸಾರವಾಗಿ ಆಚಾರ್ಯರನ್ನು ಕೇಳಿದೆವು. ಅವರು ಒಂದರೆ ನಿಮಿಷ ಧ್ಯಾನಮಗ್ನರಾದವರಂತೆ ಸುಮ್ಮನಿದ್ದು ಆ ಮೇಲೆ ಒಮ್ಮೆಲೆ ತಮ್ಮ ಸುತ್ತುಮುತ್ತಲಿನ ಸಂಸಾರಬಂಧನವನ್ನೆ ಮರೆತವರಂತೆ ನಮ್ಮ ಪ್ರಶ್ನೆಯನ್ನೆ ಅಲಕ್ಷ್ಯಮಾಡಿ- 'ನನ್ನ ಮಾತನ್ನೆ ನೋಡಿರಿ' ಎಂದರು. ಇದೇನು! ಎಷ್ಟು ನೋಡಿದರೂ ಕನಕಾಚಾರ್ಯರ ಸಂಸಾರಕ್ಕೂ ಹಿಟ್ಲರನ ಸಾಹಸಕ್ಕೂ ಯಾವ ಸಂಬಂಧವಿದೆ ಎಂಬುದು ನಮಗೆ ತಿಳಿಯದಂತಾಯಿತು. ನಕ್ಕರು ಆಚಾರ್ಯರು, ಮೊದಲು ಶ್ರೋತೃಗಳನ್ನು ಬೆರಗುಗೊಳಿಸಿ ಅವರ ಕೌತೂಹಲವನ್ನು ಹೆಚ್ಚಿಸುವ ತಮ್ಮ ಕಲೆಗಾಗಿ ಹೆಮ್ಮೆಯಿಂದ ನಕ್ಕರು, ಮತ್ತು ಹೇಳತೊಡಗಿದರು:- "ನನ್ನ ಮಾತನ್ನೆ ನೋಡಿರಿ, ಅಂದೆ. ಅಡಿಗೆಯ ಮನೆ ನನ್ನದು, ಅದರೊಳಗ ನೀವು ಕೈಹಾಕಬೇಡಿರಿ, ಕಾರಭಾರಮಾಡಬೇಡಿರಿ- ಅಂತಾಳೆ ನಮ್ಮ ಮನೆಯಾಕೆ. ಆಕೆಯ ಮಾತೇನೊ ಯಥಾರ್ಥ ಅಂತ ನಿಮಗ ಅನ್ನಿಸಬಹುದು, ನನಗೂ ಅನಿಸಿತ್ತು. ಆದರೆ ಮುಂದೆ ಕೇಳಿರಿ. ಅಡಿಗೆಯ ಮನೆ ಅಂದರ ಅದಕ್ಕ ಸಂಬಂಧಿಸಿದ್ದು ಎಲ್ಲಾ ನನ್ನದು ಅಂತಾಳೆ. 'ಅದಕ್ಕೆ ಸಂಬಂಧಿಸಿದ್ದು ಎಲ್ಲಾ' ಅಂದ್ರೇನು? ಸಾಮಾನು ಸರಂಜಾಮು, ಭಾಂಡಿ-ಕೋಂಡಿ- ಮತ್ತ ಇಷ್ಟೇ ಅಲ್ಲ- ಅದನ್ನ ತರೋದು-ಹೊರೋದು-ಅರ್ಥಾತ್ ಅದಕ್ಕೆ ಬೇಕಾಗೊ ರೊಕ್ಕ-ರುಪಾಯಿ-ಒಟ್ಟು ಒಂದು ಮಾತಿನೊಳಗೆ ನಾನು ಗಳಿಸೋದೆಲ್ಲ ಆಕೆಯ ಕೈಯೊಳಗೇ ಬೇಕು! ಅದಕ್ಕೇ ಹೇಳಿದೆ, ನನ್ನ ಮಾತನ್ನೆ ನೋಡಿರಿ

ಹಂತ. ಅಡಿಗೆಯ ಮನೆ ನನ್ನದು ಅನ್ನೋ ಆಕೆಯ ಮಾತಿಗೆ ನಾನು ಒಪ್ಪಿಕೊಂಡರೆ ಪ್ರಸಂಗ ಎಲ್ಲಿಯವರೆಗೆ ಬರೋದು ! ನನ್ನ ಮನೆಯೊಳಗೇ ನಾನು ಕೂಲಿ ಇದ್ದಾಂಗೆ, ಬಾಡಿಗೆ ಕೊಟ್ಟಾಂಗ ಅಥವಾ ಗುಲಾಮನಾಧಾಂಗೆ! " ಆಚಾರ್ಯರು ಮತ್ತೆ ಗಂಭೀರ-ಮೌನಮುದ್ರೆಯನ್ನು ತಾಳಿ ನನ್ನದ ಕುಂಭಕ, ಸಮಾಧಾನದ ರೇಚಕಗಳಿಂದ ಪ್ರಾಣಾಯಾಮಪರರಾದರು. ಕೆಲಹೊತ್ತಿನ ಮೇಲೆ

" ಯುದ್ಧವೆಂದರೆ ಯುರೋಪದ ಮಹಾಯುದ್ಧವಲ್ಲ..
ಮನೆಯಲ್ಲಿ ಆಕೆ.... "

ನಾವೆಲ್ಲರೂ ಇನ್ನೂ ಸುಮ್ಮನಿದ್ದುದನ್ನು ನೋಡಿ " ಹೆಂಡತಿ ಏನು, ಹಿಟ್ಲರ್ ಏನು–ಸಡಿಲು ಬಿಟ್ಟರೆ ಎಲ್ಲಾ ರಂಡೇವು ಒಂದೇ!" ಎಂದರು.

ವಾಚಕರು ನಗಕೂಡದೆಂದು ಮತ್ತೊಮ್ಮೆ ಕೈಮುಗಿದು ಬೇಡುವೆ. ಆಚಾರ್ಯರ ಮಾತಿನ ಶೈಲಿ ನಮಗೆ ಕೆಲವರಿಗ ಪರಿಚಿತವಿದ್ದಂತೆ ವಾಚಕರನೇಕರಿಗೆ ಇರಲಿಕ್ಕಿಲ್ಲ. ಇಂದಿಗೆ ಎರಡು ಮೂರು ವರ್ಷಗಳಾದುವು, ಮಾತಿನ ಭರದಲ್ಲಿ ಇದನ್ನು ಆಚಾರ್ಯರು ಮೇಲಿಂದಮೇಲೆ ಹೇಳುತ್ತಿರುವರು. 'ನೀನು ನನ್ನ ಪಂಚಪ್ರಾಣ' ಎನ್ನುವ ಅನುರಾಗದಿಂದ ಅವರು ಐದನೆಯ ಹೆಂಡತಿಯನ್ನು ಮಾಡಿಕೊಂಡವರೆಂಬುದು ನಮಗೆ ಗೊತ್ತು, ಆದರೆ ಆ ಪುಣ್ಯಾತ್ಮಳಿಗೆ ಗೊತ್ತಿಲ್ಲದಂತೆ ಕಾಣುವುದು. ಅದಕ್ಕಾಗಿಯೆ ಪಂಡಿತರಾದ ಆಚಾರ್ಯರು ಎಲ್ಲವನ್ನೂ ಉದಾರ-ಮನಸ್ಸಿನಿಂದ ನುಂಗಿ 'ಐದನೆಯ ಮದುವೆಯಾಯಿತು ಎಂದರೆ ಪಂಚತ್ವಂ ಗತಃ ಎಂದು ಭಾಷಾಂತರಿಸಬೇಕು' ಎಂದು ಹಾಸ್ಯ ಎಂಬ ಸಂಸ್ಕೃತಪಾಠಕ್ಕಾಗಿ ಬಂದ ವಿದ್ಯಾರ್ಥಿಗಳೆದುರು ನಗುತ್ತಲೆ ಇರುವರು. ಹಿಟ್ಲರನ ಪ್ರಾಬಲ್ಯ ಹೆಚ್ಚಾದಂದಿನಿಂದ ಮಾತ್ರ 'ಹೆಂಡತಿ ಒಂದೇ ಹಿಟ್ಲರ್ ಒಂದೇ' ಎಂಬ ವಾಕ್ಯದಿಂದ ಸಮಾಧಾನವನ್ನು ತಂದುಕೊಳ್ಳುತ್ತಿರುವರು.

ಈಗ ಮಾತ್ರ ಆಚಾರ್ಯರಿಗೆ ಕಾರ್ಮೋಡದ ಕಗ್ಗತ್ತಲೆಯಲ್ಲಿ ಮಿಂಚೊಂದು ನುಳಿದಂತಾಗಿದೆ. ಯುದ್ಧ ಪ್ರಾರಂಭವಾದಂದಿನಿಂದ ಅವರ ಮುಖಮುದ್ರೆ ಕ್ರಮೇಣ ಹೆಚ್ಚೆಚ್ಚು ಪ್ರಸನ್ನವಾಗ ತೊಡಗಿದೆ. 'ಹಿಟ್ಲರವಾದ ಮಣ್ಣುಗೂಡಿದ್ದನ್ನು ನನ್ನ ಕಣ್ಣು ನೋಡಲಿ' ಎಂದು ಮುದುಕ ಚೇಂಬರಲೇನನು ಗದ್ದರಿಸಿದಾಗ 'ಭಪ್ಪರೆ, ಗಂಡಸು!' ಎಂದು ತೊಡೆ ಚಪ್ಪರಿಸಿದರು ಆಚಾರ್ಯರು. "ಯುರೋಪವೆಲ್ಲ ತನ್ನದೇ ಆಗಬೇಕೆಂದು ಹವಣಿಸುತ್ತಾನೆ ಹಿಟ್ಲರ್. ಇಂತಹ ಹುಚ್ಚನನ್ನು ಎಲ್ಲಿಯಾದರೂ ನೋಡಿರುವಿರಾ?" ಎಂದು ಯಾರಾದರೂ ಕೇಳಿದರೆ ಆಚಾರ್ಯರು ತಟ್ಟನೆ ಹಿರಿತನದಿಂದ "ಹುಚ್ಚು ಯಾಕೆ! ದಡ್ಡ ರಂಡೇಮಕ್ಕಳು ಇರೋದೇ ಹಾಗೆ. ಬೇಕಾದರೆ ಒಂದು ದಿವಸ ಬಂದು ನೋಡಿರಿ ನಮ್ಮಲ್ಲಿ" ಎಂದು ಅವನನ್ನು ನಿರುತ್ತರನನ್ನಾಗಿ ಮಾಡುವರು. ಅವರ ಮುಖಮುದ್ರೆ ಪ್ರಸನ್ನವಾಗತೊಡಗಿದೆ ಎಂದು ಹೇಳಿದೆನಲ್ಲವೆ? "ಇಂತಹಾದ್ದರ (=ಹೆಂಡತಿ) ಜೋಡಿ ಸಂಸಾರ ಅಂದ್ರೆ ಒಂದು ಮಹಾಯುದ್ಧ" ಎಂಬ ಅವರ ಅಭಿಪ್ರಾಯಕ್ಕೆ ಇಂದು ಉದಾಹರಣೆ ದೊರಕಿದಂತಾಗಿದೆ. 'ಮೊದಲಿನಿಂದಲೇ ಮೈ-ಕೈ ಮೆತ್ತಗೆ ಮಾಡಿದ್ದರೆ ಈ ಸ್ಥಿತಿ ಎಲ್ಲಿ ಬರುತ್ತಿತ್ತು?'— ಎಂದು

'ಅಡಿಗೆಯ ಮನೆ ನನ್ನದು. ಅದರೊಳಗ ನೀವು ಕೈಹಾಕಬೇಡಿರಿ..
ಕಾರಭಾರ ಮಾಡಬೇಡಿರಿ'

ಅವರ ಪ್ರಶ್ನೆ. 'ನಾನು ಮನೆಯೊಳಗ ಮಾಡಿದ ತಪ್ಪನ್ನು ನಿಮ್ಮ ಚೇಂಬರಲೇನಾ ಆ ಹಿಟ್ಲರನ ಜೋಡೀ ಮಾಡಿದ'–ಎಂದು ಅವರ ಉತ್ತರ. ಅದೂ ಹೋಗಲಿ—ಅವರ ಪ್ರಸನ್ನತೆಗೆ ಮುಖ್ಯ ಕಾರಣ ಬೇರೆಯೆ ಇದೆ. 'ಇನ್ನೇನು ಯುದ್ಧ ಸುರು ಆಯ್ತು, ತಿಂಗಳೆರಡು ತಿಂಗಳೊಳಗೆ ಬಂಗಾರದ ಧಾರಣೆ ಇಳಿಯುವುದು, ಅಂತೂ ನಮ್ಮ ಜೀವಮಾನದೊಳಗೆಯೆ ನಮ್ಮ ಧರ್ಮಪತ್ನಿಯ

ದೊಂದು ಹುಚ್ಚು ಹೌಸು ಪ್ರೋರೈಸೋದು ಸಾಧ್ಯ ಆಯ್ತು'— ಎಂಬುದಕ್ಕಾಗಿ ಆಚಾರ್ಯರ ಪ್ರಸನ್ನತೆ.

ನಾನು ಹೇಳುವ ಮಾತುಗಳಿಂದ ನಮ್ಮ ಕನಕಾಚಾರ್ಯರ ವಿಷಯವಾಗಿ ತಮ್ಮ ಕಲ್ಪನೆಯೆ ಬೇರೆಯಾಗಬಹುದು. 'ಇವರೇನೊ ಸ್ವಾರ್ಥಸಾಧಕರು, ಕಠೋರಹೃದಯರು—ಅತ್ತ ಯುರೋಪದೊಳಗೆ ಕೋಟಿಗಟ್ಟಲೆ ನಿರಪರಾಧಿ ಜೀವಿಗಳು ಹುಳುಗಳಂತೆ ಉದುರಿ ಸಾಯುವಾಗ ಇತ್ತ ಇವರಿಗೆ ಆ ಯುದ್ಧ ಅನುಕೂಲ ಪ್ರಸಂಗವಾಗಿ ಬಿಟ್ಟಿದೆಯಲ್ಲ'—ಎಂದು ಮುಂತಾಗಿ ತಾವು ಅಸಹ್ಯ ಪಡಬಾರದು. 'ಯುದ್ಧ ನಡೆದಿದೆ, ಪ್ರಾಣಹಾನಿ ಅಡ್ಡಮಳೆಯಂತೆ ಸುರೀತಿವೆ, ಅದೆಲ್ಲ ನಿಜ. ಅದಕ್ಕೆ ನಾವೇನು ಮಾಡಬೇಕು ಹೇಳು' ಎಂದು ಅವರು ಯಾವಾಗಲೂ ಕೇಳುತ್ತಾರೆ. 'ಅವರವರ ಕರ್ಮಫಲ ಅವರು ಉಣ್ತಾರೆ. ನಾನಂತೂ ಹೇಳಿ ಕೇಳಿ ಬಡ ವೈದಿಕ ಬ್ರಾಹ್ಮಣ. ಅರಣದೊಳಗ ಹಾವು ಕಡಿದರೂ ಮನೆಗೆ ಬರೋತನಕ ಜೀವ ಹೋಗಲಿಕ್ಕಿಲ್ಲ; ಹಾಸಿಗೆಯೊಳಗೇ ಸಾಯುವ ಚಟ ಅಚ್ಚಿದೆ ನಮಗೆ–ಬ್ರಾಹ್ಮಣರಿಗೆ. ಹಾಂಗ ಕೇಳಿದರೆ, ನಿಮ್ಮ ಗಾಂಧಿಯ ಅಹಿಂಸಾ ನಡೆದಂದಿನಿಂದ ಹಾಸಿಗೆಯೊಳಗೇ ಸಾಯೋದು ಇಡಿಯ ದೇಶದ ಹಣೆಯೊಳಗೇ ಬರೆಧಾಂಗ ಕಾಣಿಸ್ತದೆ. ಆದರೂ-' ಇಲ್ಲಿಗೆ ನಸ್ಯಮಯವಾಗಿ ಅವರ ದೃಷ್ಟಿಯೊಡನೆ ಆಕಾಶದೊಳಗೆ ತೇಲುವುದು ಅವರ ವಿಚಾರಪ್ರವಾಹ.

'ಯುದ್ಧ ಸುರುವಾದುದಕ್ಕೆ ಸ್ವರಾಜ್ಯ ಸಿಕ್ಕುವುದು ಖಂಡಿತ' ಎಂಬ ನನ್ನ ಹರ್ಷದ ಉದ್ಗಾರಕ್ಕೆ ಆಚಾರ್ಯರ ಸಹಾನುಭೂತಿ ಇಲ್ಲ. 'ಸ್ವರಾಜ್ಯ-ಗಿರಾಜ್ಯ ಇದೆಲ್ಲ ಐಹಿಕವಿಚಾರ' ಎಂದು ಅವರ ಅಭಿಪ್ರಾಯ; ಇದಲ್ಲದೆ ಅವರೇ ಹೇಳುವ ಅವರ ಮನೆಯ ಪರಿಸ್ಥಿತಿ ಲಕ್ಷ್ಯದಲ್ಲಿಟ್ಟರೆ, ಸ್ವರಾಜ್ಯ ಸಿಕ್ಕರೇನು ಯಾವ ರಾಜ್ಯ ಸಿಕ್ಕರೇನು—ಆಚಾರ್ಯರಿಗೆ ಅದರಲ್ಲಿ ಆಸಕ್ತಿ, ಅದಕಾಗಿ ಆತುರ ಹುಟ್ಟದೆ ಇದ್ದದ್ದು ಸಹಜವೆ ಇದೆ. ಅವರು ಮತ್ತೊ ಒಂದು ಮಾತನ್ನು ಹೇಳುತ್ತಿದ್ದರು. "ಹೋದ ಸಾರೆ ಇಲೆಕ್ಶನಿನ ಕಾಲಕ್ಕೆ ನೀವು ಯಾರಿಗೆ ಹೋಟು (vote) ಕೊಡ್ತೀರಿ ಅಂತ ಆಕೆ ನನ್ನ ಕೇಳಿದಳು! ನನಗೂ ಹೋಟು ಅದೆ ಅಂತ ಅನ್ನೋ ಆಕೆಯ ಬಂಧದೊಳಗ ಇಡಿಯ ಇಲೆಕ್ಶನ್ ದಿವಸ ನಮಗ ಏಕಾದಶಿಯಾಯಿತು. ಅಲ್ಲ. ಕೈಲಾಗದ ಹೆಣ್ಮಂಡೇವಕ್ಕ ಹೋಟು ಇದ್ದ ಇಲೆಕ್ಶನಿನೊಳಗ ನಾನು ಹೋಟು ಹಾಕಲಿಯಾ! ಹೆಂಗಸರಿಗೆ ಹೋಟು ಕೊಟ್ಟದ್ದು, ನಿಮ್ಮ ಹಿಟ್ಲರಗ ಹುರುಪು ಕೊಟ್ಟದ್ದು ಎರಡೂ ಒಂದೇ. ಈಗ ನೋಡಿದಿರೆಲ್ಲೋ, ಎಲ್ಲರಿಗೂ ಏಕಾದಶಿಯ ಹೊತ್ತು ಬಂದಿದೆ."

ಇಂದಿಗೆ ಹದಿನೈದು ದಿವಸಗಳಾದವು. ಕನಕಾಚಾರ್ಯರ ಕಟ್ಟೆಯೆ ನಮ್ಮ ರೇಡಿಯೊ ಸ್ಟೇಶನ್. ಯುದ್ಧದ ಸವಿಸ್ತಾರ ಸುದ್ದಿ ನಮಗೆ ಸಾಕ್ಷಾತ್ ಕನಕಾಚಾರ್ಯರ ಸರಸಸಮ್ಮುಖದಿಂದ ದೊರೆಯುವುದು. ಜರುಗಿದ ಸುದ್ದಿ ಏಕೆ, ಜರುಗಲಿರುವ ಭವಿಷ್ಯದ ಚಿತ್ರ ಕೂಡ ಆಚಾರ್ಯರ ಯೋಗಶಕ್ತಿಯಿಂದ ನಮಗೆ ಲಭಿಸುವುದು. 'ಆಚಾರ್ಯರೆ, ನಸ್ಯದ ಲಕ್ಷಣಗಳನ್ನು ನೋಡಿದರೆ ಹಿಟ್ಲರನ ಹುಚ್ಚಾಟಕ್ಕೆಯೆ ಪ್ರಾಬಲ್ಯ ದೊರೆಯುವಂತಿದೆ' ಎಂದು ನಾವು ಕೇಳಿದರೆ ಟೊರ್ಪೆಡೊ ಮುಳುಗುವಂತೆ ನಸ್ಯವನ್ನೇರಿಸಿ ನಮ್ಮನ್ನು ಗಂಭೀರ ಮೌನಮುದ್ರೆಯಿಂದ ದಿಟ್ಟಿಸುವರು. 'ನಸ್ಯದ ಅಬ್ಬರ ಹೀಗೇ' ಎಂದು ಸುಮ್ಮನಾಗುವರು. 'ನೋಡಿದಿರಲ್ಲೊ ನಮ್ಮ ಮನೆಯಲ್ಲಿ! ಬೆಳಗಿನಿಂದ ಸಂಜೆಯವರೆಗೆ ಮಾತಿನ ಸುರಿಮಳೆ—! ಆಯಿತು. ಸಂಜೆಗೆ ಬರಿಗೈಯಿಂದ ನಾನು ಬಂದೆ. 'ಎಲ್ಲಿದೆ? ಅಡಿಗೆಗೆ ಕಾಯಿಪಲ್ಲೆ ಎಲ್ಲಿದೆ? ನಾಳೆಗಾಗಿ ಅಕ್ಕಿ ಎಲ್ಲಿದೆ?' ನಾನು ಯಾವುದನ್ನೂ ತರುವುದಿಲ್ಲ. ಅದೇ ನನ್ನ ಶಸ್ತ್ರ. ಯಾವಾಗ ಊಟಕ್ಕೆ ನೀನ್ನೆ ಎಂದು ಕಂಡುಬರುವುದೊ ಆಗ ನಿಂತಿತು ನೋಡಿರಿ ಮಾತುಗುಂಡಿನ ಮಹಾಯುದ್ಧ. ಅದೇ ಹೇಳಿದೆನಲ್ಲ, ಹೆಂಗುಸು ಒಂದೇ ಹಿಟ್ಲರ್ ಒಂದೇ!'

ನಮಗಂತೂ ಆಚಾರ್ಯರ ಮಾತಿಗಾಗಿ ಅನೇಕ ಸಲ ಹೊಟ್ಟೆ ಹಿಡಿಸದಷ್ಟು ನಗೆಬರುವುದು. ಇಡಿಯ ವಿಶ್ವದ ವ್ಯವಹಾರವನ್ನೆ ತಮ್ಮ ಸಂಸಾರಕ್ಕೆ ಹೋಲಿಸುವ ಅವರ ನಿಸ್ಸ್ವಾರ್ಥದೃಷ್ಟಿ ಆ ಹೋಲಿಕೆಯನ್ನು ಬಣ್ಣಿಸುವ ಅವರ ಮನೆಮಾತಿನ ಶೈಲಿ—ಇದಕಾಗಿ ಯಾರಿಗೆ ನಗೆ ಬರಲಿಕ್ಕಿಲ್ಲ? ಹಾಗೆ ಕೇಳಿದರೆ ಅದನ್ನೇ ನೀರಸವಾಗಿ ಬಣ್ಣಿಸುವ ಈ ಲೇಖದಿಂದ ನಿಮಗೆ ಕೂಡ ಒಂದೆರಡು ಕಡೆ ನಗೆ ಬರಬಹುದು. ಹಾಗಿದ್ದರೆ ನಮ್ಮ ಒಂದು ಅನುಭವವನ್ನು ನಿಮಗೆ ಹೇಳಿಡುವೆ. ಒಮ್ಮೆ ಆಚಾರ್ಯರು ಹೇಳಿದರು-'ಏನೇ ಆಗಲಿ, ಶ್ರಾವಣೀ ಆದ ಮೇಲೆ ಯುದ್ಧ ಪ್ರಾರಂಭ ಆಯಿತು ಅನ್ನೋದು ನನ್ನ ಸುದೈವ' ಅಂದರು. ನಾವು ಮುಂದೇನೊ ಬರುವುದೆಂದು ಸುಮ್ಮನಿದ್ದೆವು. ಬಂದಿತು ಮುಂದಿನ ಮಾತು:— 'ಇಲ್ಲಾ ಅಂದರೆ ಎಲ್ಲಾದರ ಜೋಡಿ ಜನಿವಾರದ ಧಾರಣೀನೂ ಏರತಿತ್ತು— ನನ್ನಾಂಗ ಐದೈದು ಹೆಂಡಂದಿರಿಗಾಗಿ ಐದೈದು ಜೋಡು ಜನಿವಾರ ಧರಿಸುವವರ ಸೊಂಟದ ನುರುಳಿಗೆ ಏಟು ಬೀಳತಿತ್ತು' ಎಂದರು. ನಮಗೆಲ್ಲರಿಗೂ ಅನಿವಾರ ನಗೆ. ಯುದ್ಧಕ್ಕೂ ಜನಿವಾರಕ್ಕೂ ಯಾವ ಗಂಟನ್ನು ಹಾಕಿದರು ಆಚಾರ್ಯರು ಎಂದು ಕುತೂಹಲ ಬೇರೆ. 'ಇಷ್ಟು ತಿಳಿಯೋದಿಲ್ಲವೆ ನಿಮಗೆ?' ಎಂದು ಅಬ್ಬರಿಸಿದರು; 'ಬ್ರಾಹ್ಮಣನಿಗೆ ಯುದ್ಧಭೂಮಿಗೆ ಹೋಗಬೇಕಾಗಿಲ್ಲ. ಆದಕಾಗಿ ಯುದ್ಧ ತಪ್ಪಿಸಬೇಕು ಅನ್ನೋ ಲಕ್ಷಾವಧಿ ಜನ. ತಾವು ಬ್ರಾಹ್ಮಣರು ಅಂತ ತೋರಿಸಲಿಕ್ಕೆ ಜನಿವಾರ ಹಾಕಬೇಕು ಅಂಬುವವರು. ಹೀಗೆ ಜನಿವಾರ ಬೇಕಾಗೋದು ಬಹಳ ಜನರಿಗೆ. ಮಾರುವವರ ಸುಗ್ಗಿಯ ಕಾಲ ಇಂತಹದು, ಏರದೆ ಬಿಟ್ಟೀತೇ ಧಾರಣೆ?' ಎಂದರು. ನಮಗೆ ನಗೆ ತಡೆಯದಂತಾಯಿತು. ಆಚಾರ್ಯರು ಗಂಭೀರಮುದ್ರೆಯಿಂದಲೆ ಮಾತನ್ನು ಮುಂದುವರಿಸಿದರು:— 'ಎಲ್ಲಾದರ ಧಾರಣೆ ಏರಿದೆ, ಆದಕಾಗಿ ಮಿತವ್ಯಯದಿಂದ ನಡೆದುಕೊಳ್ಳಬೇಕಾಗುವುದು. ಆದ್ದರಿಂದ ಈಗಿನ ಯುದ್ಧದ ಕಾಲದಲ್ಲಿ ನೀವು ಮಿತವ್ಯಯದಿಂದಲೇ ನಗಬೇಕು.'

ಇದಲ್ಲವೇ ಸ್ವಲ್ಪದರೊಳಗೆ ಸ್ವಾರಸ್ಯ?

ಸೋಲರಿಯದ ಜಪಾನಿಯರ ವ್ಯಾಪಾರಪಣ*

ಡಾಕ್ಟರ್ ಗೋಡಬೋಲೇ ನರಸಿಂಹರಾಯರು

★

ಡಾಕ್ಟರ್ ಎನ್. ಎಸ್. ಗೋಡಬೋಲೆ,
ಎಂ. ಎ., ಬಿ. ಎಸ್‌ಸಿ, ಪಿ. ಎಚ್. ಡಿ, (ಬರ್ಲಿನ್)
ಕಾಶೀ ವಿಶ್ವವಿದ್ಯಾನಿಲಯದ ಉದ್ಯಮ ರಸಾಯನ
ವಿಭಾಗದ ಮುಖ್ಯಾಧ್ಯಾಪಕರು

ಅನುವಾದಕ—ಪ್ರೊ. ಎನ್. ಎಂ. ಕುಲಕರ್ಣಿ, ಎಂ. ಎ.
ಬನಾರಸ ಹಿಂದು ಯುನಿವರ್ಸಿಟಿ

ಜಪಾನಿಯರ ಅಗ್ಗದ ವ್ಯಾಪಾರದ ಗುಟ್ಟು ಯಾವುದರಲ್ಲಿದೆ? ಹಿಂದುಸ್ತಾನಕ್ಕೆ ಬರುವ ಜಪಾನಿ ಮಾಲುಗಳು ಎಂತಹವು? ತಿಪ್ಪೆಗೆ ಚೆಲ್ಲಬಹುದಾದ ಮಾಲು ಒಪ್ಪುಗೊಂಡು ಹಿಂದುಸ್ತಾನದ ಪೇಟೆಯಲ್ಲಿ ಹೇಗೆ ಬಂದು ತುಂಬುತ್ತದೆ? ತೊಟ್ಟುಬಿಟ್ಟ ಬಟ್ಟೆಗಳನ್ನು ಬೆಲೆಕೊಟ್ಟು ಕೊಳ್ಳುವೆನೆಂಬ ಮಾತು ನಮ್ಮಲ್ಲಿ ಎಷ್ಟು ಜನರಿಗೆ ಗೊತ್ತಿದೆ? ಹೆಚ್ಚಿನ ಮಾತೇತಕ್ಕೆ, ಇದನ್ನು ಓದಿಬಿಡಿ!

★

ಕಳೆದ ಇಪ್ಪತ್ತು ವರ್ಷಗಳಲ್ಲಿ ಜಪಾನ್ ದೇಶವು ಜಗತ್ತಿನ ಎಲ್ಲ ಜನಾಂಗಗಳ ಕೂಡ ಪಣಕಟ್ಟಿ ಆಯಾ ದೇಶಗಳ ವ್ಯಾಪಾರಸೂತ್ರಗಳನ್ನು ಜಗ್ಗಿ ಜಗ್ಗಿ ಜೀರ್ಣಮಾಡಿದೆ. ಆಫ್ರಿಕಾ, ಉತ್ತರ ಮತ್ತು ದಕ್ಷಿಣ ಅಮೇರಿಕಾ, ಇಂಗ್ಲಂಡ್, ಯುರೋಪ್, ಇಂಡಿಯಾ ಮತ್ತು ಚಾಯನಾ ದೇಶಗಳಲ್ಲಿ ಜಪಾನಿಯರು ಮಾರುವ ಪದಾರ್ಥಗಳು ಅಸಂಭವನೀಯವೆನಿಸುವಷ್ಟು ಅಲ್ಪ ಬೆಲೆಯನ್ನು ಹೊಂದಿರುತ್ತವೆ. ಈ ಪದಾರ್ಥಗಳ ಬೆಲೆಯ ಆಳತೆಯಿಲ್ಲದ ಅವನತಿಯನ್ನು ಅವಲೋಕಿಸುವ ಪರರಾಷ್ಟ್ರದ ವ್ಯಾಪಾರಿಗಳೂ, ಉದ್ಯಮಿಗಳೂ, ಅರ್ಥಶಾಸ್ತ್ರಜ್ಞರೂ, ಉದ್ಯಮಜೀವಿಗಳೂ ಅಂಧರಾಗಿ, ಈ ಉದ್ಯೋಗರಾಕ್ಷಸನ ಮುಂದೆ ಹೊಟ್ಟೆಹೊಸೆಯಹತ್ತಿದ್ದಾರೆ. ಪ್ರಸ್ತುತ ಲೇಖನವು ಜಪಾನಿನ **ವ್ಯಾಪಾರ ಪಣವನ್ನು** ಸರ್ವತೋಮುಖವಾಗಿ ಅವಲೋಕಿಸಿ, ಅದರ ಇಂಗಿತವನ್ನು ಕಂಡುಹಿಡಿಯಲು ಮಾಡಿದ ಪ್ರಯತ್ನವಾಗಿದೆ.

ಜಪಾನಿಯರ ಅತ್ಯದ್ಭುತವಾದ ಈ ಸೋಲರಿಯದ ವ್ಯಾಪಾರಪಣವು ಹೇಗೆ ಯಶಸ್ವಿಯಾಯಿತೆಂಬುದನ್ನು ತಿಳಿದುಕೊಳ್ಳಬೇಕಾದರೆ, ಕಳೆದ ಎಪ್ಪತ್ತು ವರ್ಷಗಳಲ್ಲಿ ಜಪಾನಿನ ಆರ್ಥಿಕೋನ್ನತಿಯು ಹೇಗೆ ಬೆಳೆದಿದೆಯೆಂಬುದನ್ನು ತಿಳಿದುಕೊಳ್ಳುವುದು ಅವಶ್ಯವಿದೆ. ಮುಂದಿನ ಪಟ್ಟಿಯಿಂದ ಆ ಉನ್ನತಿಯನ್ನು ಕಂಡುಕೊಳ್ಳಬಹುದು:

* 'ಜಯಂತಿ'ಯ ವಾಚಕವೃಂದಕ್ಕೆ ಡಾ. ಗೋಡಬೋಲೆಯವರ ಪರಿಚಯವನ್ನು ಮಾಡಿಕೊಟ್ಟಾಗ ಅವರ 'ಜಪಾನ್' ಲೆಕ್ಚರಿನ ವಿಷಯಕ್ಕೆ ಸೂಚಿಸಿದ್ದೆ ಮಾತ್ರ. ಪ್ರಾಯಶಃ ಭಾರತದಲ್ಲಿ ಡಾ. ಗೋಡಬೋಲೆಯವರಂತಹ ಜಪಾನನ್ನು ಬಲ್ಲವರು ಇರಲಿಕ್ಕಿಲ್ಲವೆಂದು ಊಹೆ. ಕರ್ನಾಟಕದಲ್ಲಿ ಸದ್ಯ ಕಣ್ದೆರೆಯುತ್ತಿರುವ ಉದ್ಯಮ ಚಟುವಟಿಕೆಯ ತರುಣ-ತರುಣೀತರರಿಗೆ ಈ ಲೇಖನದಿಂದ ಒಂದು ವಿಶಿಷ್ಟ ಮಾದರಿಯ ಕರ್ತೃತ್ವೋತ್ತೇಜಕ ಚಿತ್ರವು ಕಂಡುಬರುವುದೆಂದು ನಂಬಿ ನಾನೂ 'ಸೋಲರಿಯದವರೇ' ಅವರ ಬೆನ್ನು ಹತ್ತಿ, ಪ್ರಸ್ತುತ ಲೇಖನವನ್ನು ಸಂಗ್ರಹಿಸಿ ಕನ್ನಡಿಗರ ಮುಂದೆ ಇರಿಸಿದ್ದೇನೆ. ಈ ಲೇಖನವನ್ನು ಇವರೇ ಕಳೆದ ಮೇ ತಿಂಗಳಲ್ಲಿ ಬರೆದು ಆಂಗ್ಲಪತ್ರಿಕೆಯೊಂದರಲ್ಲಿ ಪ್ರಸಿದ್ಧಿಸಿದ್ದು, ಪರಭಾಷೆಗಳನೇಕದರಲ್ಲಿ ಇದು ಅನುವಾದಿತವಾಗಿದೆ. ಆದರ ಕನ್ನಡಾನುವಾದಕ್ಕೆ ಸಮ್ಮತಿಸಿದ ಡಾಕ್ಟರರಿಗೆ ನಾನು ತುಂಬಾ ಋಣಿಯಾಗಿದ್ದೇನೆ. —ಅನುವಾದಕ

೧

ವರ್ಷ	ಪರರಾಷ್ಟ್ರಗಳ ಕೂಡ ವ್ಯಾಪಾರ (ಯೆನ್‌ನಾಣ್ಯದಲ್ಲಿ)	ಜನಸಂಖ್ಯೆ	ಪ್ರತಿಯೊಬ್ಬನ ಪಾಲು (ಯೆನ್)	ಶರಾ
೧೮೬೮	೨೫,೦೦೦,೦೦೦	೩೪,೧೧೧,೬೦೦	೦.೭೦	
೧೮೭೦	೪೬,೦೦೦,೦೦೦	೩೬,೦೦೦,೦೦೦	೧.೩೦	
೧೮೮೪	೫೨,೦೦೦,೦೦೦	೩೭,೫೦೦,೦೦೦	೧.೪೩	
೧೮೯೪	೨೩೦,೦೦೦,೦೦೦	೪೧,೦೦೦,೦೦೦	೫.೬೦	
೧೮೯೬	ವ್ಯಾಪಾರ ವ್ಯವಹಾ	ರದಲ್ಲಿ ಬಂಗಾರವು	ಉಪಯೋಗಿ	ಸಲ್ಪಡಹತ್ತಿತು
೧೮೯೯	೪೩೩,೦೦೦,೦೦೦	೪೩,೫೦೦,೦೦೦	೧೦.೦೦	*
೧೯೦೪	೬೯೦,೦೦೦,೦೦೦	೪೬,೨೦೦,೦೦೦	೧೫.೦೦	†
೧೯೧೨	೧,೧೪೫,೦೦೦,೦೦೦	೫೨,೭೫೦,೦೦೦	೨೨.೦೦	
೧೯೧೫	೧,೨೪೦,೦೦೦,೦೦೦	೫೨,೮೦೦,೦೦೦	೨೩.೫೦	
೧೯೧೮	೧,೬೦೦,೦೦೦,೦೦೦	೫೪,೫೦೦,೦೦೦	೩೦.೦೦	§
೧೯೨೩	೩,೦೫೦,೦೦೦,೦೦೦	೫೭,೧೦೦,೦೦೦	೫೩.೬೦	‡
೧೯೩೧	೨,೩೮೦,೦೦೦,೦೦೦	೬೫,೩೦೦,೦೦೦	೩೬.೮೦	+
೧೯೩೩	೩,೯೨೩,೦೦೦,೦೦೦	೬೭,೨೦೦,೦೦೦	೫೮.೫೦	
೧೯೩೭	೭,೩೦೦,೦೦೦,೦೦೦	೭೦,೦೦೦,೦೦೦	೧೦೪.೦೦	

* ಹಡಗುಪಡೆ ಕಟ್ಟುವುದಕ್ಕೆ ಸರಕಾರದ ಉತ್ತೇಜನ.

† ರಶಿಯಾದ ಕೂಡ ಯುದ್ಧ.

§ ಮಹಾಯುದ್ಧ

‡ ಜಪಾನಿನ ಅತಿ ಕ್ರೂರ ಭೂಕಂಪ

\+ ಬಂಗಾರ

ಮೇಲ್ಕಂಡ ಪಟ್ಟಿಯಿಂದ ನಿಚ್ಚಳವಾಗಿ ಕಂಡುಬರುವ ಸತ್ಯವೊಂದೇ ಒಂದು : ಜಪಾನಿನ ವ್ಯಾಪಾರೋನ್ನತಿಯು ಕಳೆದ ಎಪ್ಪತ್ತು ವರ್ಷಗಳಲ್ಲಿ ನಿರಂಕುಶವಾಗಿ ಬೆಳೆದುಬಿಟ್ಟಿದೆ. ಇಂತಹ ಉನ್ನತಿಶಿಖರಕ್ಕೆ ಬಂದು ತಲ್ಪಿದ ಜಪಾನಿಯರ ವಿಷಯವಾಗಿ ಜಗತ್ತೆಲ್ಲ ಆದರಾಶ್ಚರ್ಯವನ್ನು ತೋರುವುದೇನೋ ನಿಜ ; ಆದರೆ ಈ ಆದರವು ಕ್ಷಣಿಕವಾದುದೆಂದು ಎನಿಸದಿರದು. ಇದೇ ಕಣ್ಣಿರೆಯುತ್ತಿರುವ ಭಾರತದಂತಹ ಕೆಲವು ಜನಾಂಗಗಳು ತಮ್ಮ ಔದ್ಯೋಗಿಕಸಮಸ್ಯೆಗೆ ಈ ಜಪಾನಿನ ಉನ್ನತಿಯು ನಿಶ್ಚಯವಾಗಿಯೂ ತಡೆಗಟ್ಟುಹಾಕುವ ಕಾಲಸೂತ್ರವೆಂದು ಭಯಪಡುವುದು ವಾಸ್ತವವೇ ಇರುತ್ತದೆ. ಜಪಾನಿನ ಉದ್ಯೋಗಪ್ರಗತಿಯು ಶಕ್ತಿ-ಯುಕ್ತಿಗಳು ಉದ್ಯಮಕೇಂದ್ರಗಳೆಂದೆನಿಸಿರುವ ದೇಶಗಳನ್ನು ಕೂಡ ನಡುಗಿಸಿಬಿಟ್ಟಿವೆ ; ಎಂದಮೇಲೆ ಇದೇ ಉದ್ಯಮೋನ್ನತಿಯ ಮೊದಲುಮೆಟ್ಟಲಲ್ಲಿರುವ ಭಾರತದಂತಹ ಭೂಮಿಗಳ ಪಾಡೇನು ? ಈ ಪ್ರಶ್ನೆಯು (ಉದಾಹರಣೆಗಾಗಿ) ಭಾರತೋದ್ಯಮಿಗಳ ಉತ್ಸಾಹವನ್ನು ಕುಗ್ಗಿಸಹತ್ತಿದೆ. ಈ ಪ್ರಕಾರದ ಜಪಾನರ ಶಕ್ತಿ-ಯುಕ್ತಿಗಳ ಮುಂದೆ ನಾವು ಯಾವ ಗಿಡದ ತೊಪ್ಪಲವೆಂದು ಅನೇಕರು ನಿರಾಶೆಯಲ್ಲಿ ಮುಳುಗಿದ್ದಾರೆ. ಜಪಾನಿನ ವ್ಯಾಪಾರ-ಪಣವು ನ್ಯಾಯರೀತಿಯುಳ್ಳದ್ದಾದರೆ ನಿಶ್ಚಯುಕ್ಕೂ ಈ ನಿರಾಶೆಯು ಸಮರ್ಥನೆ ಮಾಡಬಹುದು. ಆದರೆ ಸುದೈವದಿಂದ ಜಪಾನಿಯರ ಈ ಪಣಪಂಥವು ಕಲ್ಲು-ಮುಳ್ಳುಗಳಿಂದ ತುಂಬಿದ್ದಾಗಿದೆ. ಅಂತೆಯೇ ನಮ್ಮ ಜನರ ವರ್ತಮಾನನಿರಾಶೆಯು ಕ್ಷಣಿಕವಾದದ್ದೇ ವಿನಾ ಶಾಶ್ವತವಲ್ಲ. ಈಗ ಈ ವ್ಯಾಪಾರಪಣದ ಇತ್ಯರ್ಥವನ್ನು ವಿಮರ್ಶಿಸೋಣ:

ವಿಶಾಲದೃಷ್ಟಿಯಿಂದ ನೋಡಿದರೆ ಜಪಾನು ಪರದೇಶಕ್ಕೆ ಕಳುಹುವ ಪದಾರ್ಥಗಳು ಎರಡುವಿಧವಾದುವು :

೧. ರೇಶಿಮೆ, ಕಾಜು, ಸೀಮೆಂಟು, ಕೃತ್ರಿಮರೇಶಿಮೆ, ಮೀನಿನ ಎಣ್ಣೆ, ಮಣ್ಣಿನಪಾತ್ರೆಗಳು ಮುಂತಾದ ಜಪಾನಿನಲ್ಲಿಯೇ ದೊರೆಯುವ ಕಚ್ಚಾಮಾಲನ್ನು ಉಪಯೋಗಿಸಿ ಪಕ್ಕಾಮಾಲನ್ನು ಮಾಡುವ ಸಂಗ್ರಹಗಳ ಉದ್ಯಮಗಳು.

೨. ಪರದೇಶಗಳಿಂದ ಬರುವ ಅರಳಿ, ಉಣ್ಣೆ, ಕಬ್ಬಿಣ, ಉಕ್ಕು ಮುಂತಾದುವುಗಳಿಂದ ಬೇರೆಬೇರೆ ಒಡವೆಗಳನ್ನು ತಯಾರಿಸುವ ಉದ್ಯಮಗಳು.

ತನ್ನಲ್ಲಿಯೇ ದೊರೆಯುವ (ಭಾಗ ೧ ರಲ್ಲಿ ನಮೂದಿಸಿದ) ವಸ್ತುಗಳಿಂದ ಸಾಗುತ್ತಿರುವ ಜಪಾನಿನ ಎಲ್ಲ ಉದ್ಯೋಗಗಳು ದೇಶಕ್ಕೆ ತುಂಬಾ ಲಾಭಕೊಡುವಂತಹವು. ಈ ಲಾಭಕ್ಕೆ ಕಾರಣಗಳಾದ ಜಪಾನಿಯರ ಕೆಲವು ಗುಣಗಳೂ, ಸರಕಾರಸಹಾಯವೂ, ಹೊಗಳತಕ್ಕುವಿವೆ. ಜಪಾನ್‌ಕೂಲಿಕಾರರು ಅಕ್ಷರಶತ್ರುಗಳಲ್ಲ, ಸಾಕಷ್ಟು ಶಿಕ್ಷಣಹೊಂದಿದವರು ; ಕಷ್ಟಸಹಿಷ್ಣುಗಳು ; ಅಲ್ಪ ಕೂಲಿಯಲ್ಲಿ ಸಂತುಷ್ಟರಾಗಿರುವರು. ಇದು ಕೇವಲ ಪದಾರ್ಥ ಹುಟ್ಟಿಸುವುದರ ವಿಷಯವಾಯಿತು. ಹುಟ್ಟಿಸಿದ ಪದಾರ್ಥಗಳನ್ನು ಹಂಚಲಿಕ್ಕೆ ಜಪಾನಿನಲ್ಲಿ ಅದ್ಭುತವಾದ ರೈಲ್ವೆಮಾರ್ಗಗಳೂ ಟ್ರಾಮುಗಳೂ, ಕಾಲುವೆಗಳೂ ಹರಡಲ್ಪಟ್ಟಿವೆ. ಅಲ್ಲದೆ ಜಗತ್ತಿನಲ್ಲಿಯೇ ಸೌಕರ್ಯತಮವೆನಿಸುವ ವಿದ್ಯುಚ್ಛಕ್ತಿಯು ಪ್ರತಿಯೊಂದು ಹಳ್ಳಿಯಲ್ಲಿಯೂ ದೊರಕುತ್ತಿದ್ದು, ಜಪಾನಿನ Cottage Industries ತುಂಬ ಪ್ರಬಲವಾಗಿ ಬೆಳೆಯಲು ಸಹಕಾರಿಯಾಗಿದೆ. ಪರದೇಶದ ಮಾಲಿಗೆ ಮೂಲವಾಗಿರುವ ಜಪಾನಿನ ವ್ಯಾಪಾರತೆರಿಗೆಯು ಪ್ರಮಾಣ ಮೀರಿ ದೊಡ್ಡದಿದ್ದು ಕೇವಲ ಸ್ವದೇಶೀಪದಾರ್ಥಗಳಷ್ಟೇ ಜಪಾನಿನಲ್ಲಿ ಉಪಯೋಗಿಸಲ್ಪಡುತ್ತವೆ. ಪದಾರ್ಥಗಳ ಬೆಲೆ-ದರಗಳೆಲ್ಲ ಸರಕಾರದಿಂದ ನಿಯಮಿತವಾಗಿರುತ್ತವೆ. ಈ ಬೆಲೆ-ದರಗಳನ್ನು ರಕ್ಷಿಸಲಿಕ್ಕೆ ಅಲ್ಲಲ್ಲಿ ತಕ್ಕ ಸಂಘಗಳು ಸ್ಥಾಪಿಸಲ್ಪಟ್ಟಿವೆ ಪರದೇಶಗಳಿಗೆ ಕಳಿಸಿದ ಮಾಲುಗಳು ಎಷ್ಟೇ ಕಡಿಮೆ ಬೆಲೆಗೆ ಮಾರಿದರೂ ಅದರಿಂದಾದ ಹಾನಿಯನ್ನು ಮನೆಯಲ್ಲಿ ಮಾರುವ ಮಾಲುಗಳಿಂದ ತುಂಬಿಕೊಳ್ಳಲು ಶಕ್ಯವಿದೆ. ಜಪಾನಿನಲ್ಲಿ ಮಾರುವ ಎಲ್ಲ ಪದಾರ್ಥಗಳಿಗೂ ಒಂದೇ ಒಂದು ಹೆಸರು : ಅವೆಲ್ಲಾ ಜಪಾನಿನಲ್ಲಿಯೇ ತಯಾರಾದುವಿರಬೇಕು. ಈ ಎಲ್ಲ ವಸ್ತುಗಳೂ ಸಂಘಗಳಿಂದ ಕಲ್ಪಿಸಿದ ಬೆಲೆಯಲ್ಲಿಯೇ ಮಾರಲ್ಪಡಬೇಕು. ಹಿಂದುಸ್ಥಾನದಲ್ಲಿ (ಉದಾಹರಣಾರ್ಥ) ಎಲ್ಲ ತರದ ಮಾಲುಗಳೂ ಮಾರಲ್ಪಡುತ್ತವೆ. ಇದು ಇಲ್ಲಿಯ ವ್ಯಾಪಾರಸ್ವಾತಂತ್ರ್ಯದ ಪರಿಣಾಮ. ಇದರಿಂದಾಗಿಯೆ ಕಡಿಮೆ ಬೆಲೆಯುಳ್ಳುವು, ಹೆಚ್ಚಿನ ಬೆಲೆಯುಳ್ಳುವು ಎಂದು ಇಲ್ಲಿ ಎರಡು ತರದ ಪದಾರ್ಥಗಳುಂಟು. ಬೆಲೆ-ದರಗಳಲ್ಲಿ ಐಕ್ಯತೆಯೂ, ಸಾಮ್ಯತೆಯೂ ಇಲ್ಲಿ ಬರಲು ಶಕ್ಯವೇ ಇಲ್ಲ. ಇಷ್ಟು ಮೀರಿ ಅನೇಕ ಪದಾರ್ಥಗಳು ಹೆಚ್ಚಾಗಿ ತಯಾರಿಸಲ್ಪಡುತ್ತವೆ. ಈ ಹೆಚ್ಚಿನ ಮಾಲುಗಳನ್ನು ಬೇಕಾದಷ್ಟು ಅಗ್ಗದ

ಟೆಯಲ್ಲಿಯೂ ಮಾರುವುದುಂಟು. ಜಪಾನಿನ ವ್ಯಾಪಾರಪಣವು ಯಶಸ್ವಿಯಾಗಲಿಕ್ಕೆ ಈ ಎಲ್ಲ ಕಾರಣಗಳೂ ಕೂಡಿಕೊಂಡಿವೆ. ಕೆಲವು ಜಪಾನಿನ ಪದಾರ್ಥಗಳು ಅವುಗಳ ಮೂಲಬೆಲೆಗಿಂತ ಕಡಿಮೆಯ ದರಕ್ಕೆ ಮಾರಲ್ಪಡುತ್ತವೆ ! ಈ ರೀತಿಯ ವ್ಯಾಪಾರ ಪಣದಲ್ಲಿಯ ಅವರ ಯಶಸ್ಸಿನ ವಿವಿಧ ಯುಕ್ತಿಗಳನ್ನು ಕೆಳಗೆ ಒಂದೊಂದಾಗಿ ವರ್ಣಿಸಲಾಗಿದೆ.

ಜಪಾನಿನ ವ್ಯಾಪಾರಪಣದ ಯಶಕ್ಕೆ ಮುಖ್ಯ ಕಾರಣವೆಂದರೆ ಆ ರಾಷ್ಟ್ರವು ನಿರ್ಮಿಸಿದ ತನ್ನ ನಾಣ್ಯದ ಬೆಲೆಯ ಅಗ್ಗಳತೆಯೆ ಎಂದು ನಿರ್ವಿವಾದವಾಗಿ ಹೇಳಬಹುದು. ಇಂಗ್ಲೆಂಡಿನಲ್ಲಿ ಬಂಗಾರದ ಪೌಂಡಿನ ಬೆಲೆಯು ಅಸ್ತವ್ಯಸ್ತವಾದಾಗ ಎಲ್ಲ ರಾಷ್ಟ್ರಗಳಿಗೂ ಒಂದು ಆರ್ಥಿಕ ಸಮಸ್ಯೆಯೇ ಬಂದಿದ್ದಿತು. ಏಕೆಂದರೆ ಪರದೇಶದಿಂದ ಇಂಗ್ಲೆಂಡಿಗೆ ಬರುವ ಎಲ್ಲ ಮಾಲುಗಳೂ ಹೆಚ್ಚು ಬೆಲೆ ಬಾಳುವುವಾದುವು. ಇದರಿಂದ ಜಪಾನಿನ ನಾಣ್ಯದ ಕೊಳ್ಳುವ ಬೆಲೆಯು ಮಾತ್ರ ಹೆಚ್ಚಾದದ್ದಲ್ಲದೆ ತಾನು ಅಂದಿನವರೆಗೆ ಕಡಿಮೆಯ ದರದಲ್ಲಿ ಮಾರಿದಂತೆ ಇನ್ನು ಮೇಲೆ ಮಾರಲು ಶಕ್ಯವಿರಲಿಲ್ಲ. ಈ ಸ್ಥಿತಿಯ ಪರಿಣಾಮವಾಗಿ ೧೯೩೧–೩೨ ರ ಜಪಾನಿನ ವ್ಯಾಪಾರದಲ್ಲಿ ವಿಪರೀತವಾಗಿ ಹಾನಿಯನ್ನು ತಂದುಬಿಟ್ಟಿತು. ಈ ಹಾನಿಯನ್ನು ತುಂಬಿಕೊಳ್ಳಲಿಕ್ಕೆ ಒಂದೇ ಒಂದು ಮಾರ್ಗವಿತ್ತು; ಅದೇನೆಂದರೆ ಜಪಾನಾ ರಾಷ್ಟ್ರನಾಣ್ಯವಾದ ' ಯೆನ್ ' ನಾಣ್ಯದ ಬೆಲೆಯನ್ನು ಕುಗ್ಗಿಸುವುದು. ಅಂದಿನಿಂದ ಇಂದಿನ ವರೆಗೆ ಜಪಾನು ಕೂಡ ಮಾರ್ಮಿಕರೀತಿಯಲ್ಲಿ ಈ ಕೃತ್ರಿಮವಾವನತಿಯನ್ನು ಸ್ಥಿರಪಡಿಸುತ್ತಬಂದಿದೆ. ಇಪ್ಪತ್ತು ವರ್ಷಗಳ ಹಿಂದೆ ಜಪಾನಿನ ' ಯೆನ್ ' ಇಂಗ್ಲಿಷ ನಾಣ್ಯದ ಎರಡು ಶಿಲಿಂಗುಗಳಿಗೆ ಸಮಾನವಾಗಿತ್ತು. ಸದ್ಯ ಅದು ಅದೇ ನಾಣ್ಯದ ೧ ಶಿಲಿಂಗ್ ೨ ಪೇನ್ಸುಗಳಿಗೆ ಸರಿಯಾಗಿದೆ! ಅರ್ಧದಷ್ಟು ಕಡಿಮೆಯಾಗಿಬಿಟ್ಟಿದೆ! ಇದರಿಂದುಂಟಾದ ಪರಿಣಾಮವನ್ನು ಕಲ್ಪಿಸುವುದು ಕಷ್ಟವಲ್ಲ. ಎಂತಹ ವಿಪತ್ತಿನಲ್ಲಿ ಕೂಡ (ಉದಾಹರಣೆ : ಚೈನಾ ಯುದ್ಧದಲ್ಲಿ) ಈ ' ಯೆನ್ ' ಬೆಲೆಯು ಇಷ್ಟೇ ಇಡಲ್ಪಟ್ಟಿರುವುದು, ಜಪಾನಿಯರ ಅಸಮ ಚಾತುರ್ಯವನ್ನು ಸಾರುತ್ತದೆ. ಅಲ್ಲದೆ ೧೯೩೮ ರಿಂದ ಬಂಗಾರವನ್ನು ಹೊರಗೆ ಕಳಿಸುವುದೂ ನಿರ್ಬಂಧಪಡಿಸಲ್ಪಟ್ಟಿದೆ; ಯಾವ ಕಾಲಕ್ಕೂ ೧೦೦ ಯೆನ್ನಿಗಿಂತ ಹೆಚ್ಚಿನ ಹಣವನ್ನು ಸರಕಾರದ ಸಮ್ಮತಿಯಿಲ್ಲದೆ ಪರದೇಶಕ್ಕೆ ಯಾರೂ ಕಳಿಸುವಂತಿಲ್ಲ.

ಈ ನಾಣ್ಯದ ಅಗ್ಗಳತೆಯ ಪರಿಣಾಮಗಳನ್ನು ಹೀಗೆ ಉದಾಹರಿಸಬಹುದು: ಇಂಗ್ಲೆಂಡಿನ ಬಂಗಾರ ಪೌಂಡಿನ ಬೆಲೆಯು ಅಸ್ತವ್ಯಸ್ತವಾಗುವುದಕ್ಕಿಂತ ಪೂರ್ವದಲ್ಲಿ ಹತ್ತು ' ಯೆನ್ ' ಬೆಲೆಯ ಒಂದು ಜಪಾನಿಯ ಪದಾರ್ಥಕ್ಕೆ ಒಂದು ಪೌಂಡು ಬೆಲೆಯು ಬರುತ್ತಿತ್ತು. ಅದೇ ಪದಾರ್ಥಕ್ಕೆ ಬಂಗಾರದ ಬೆಲೆ ಬದಲಾದಾಗ ೧ ಪೌಂಡು ೫ ಶಿಲಿಂಗು ಕೊಡಬೇಕಾಯಿತು. ಇಷ್ಟಾದರೂ ' ಯೆನ್ ' ಬೆಲೆಯು ಅಷ್ಟೇ ಇತ್ತು. ಇಂಥ ವ್ಯಸ್ತತೆಯ ಮೂಲಕ ಜಪಾನವು ಹೊರಗೆ ಕಳಿಸುವ ಮಾಲುಗಳು ಮೊದಲಿನಂತೆ ಮಾರದಾದುವು. ಪೌಂಡು ಬೆಲೆಯ ಪದಾರ್ಥಕ್ಕೆ ೨೫ ಶಿಲಿಂಗು ಯಾರು ಕೊಡುವರು? ಶಕ್ಯವಿಲ್ಲ. ಇನ್ನು ' ಯೆನ್ ' ನಾಣ್ಯವು ಅಗ್ಗಳತೆಗಿಳಿದಾಗ ಏನಾಯಿತು ನೋಡುವಾ. ಸದ್ಯ ೧೦ ಯೆನ್. ಬೆಲೆಯ ಪದಾರ್ಥವನ್ನು ಇಂಗ್ಲೆಂಡಿನಲ್ಲಿ ೧೧ ಶಿಲಿಂಗ್ ೮ ಪೆನ್ಸುಗಳಿಗೆ ಕೊಳ್ಳಬಹುದು ! ಸರಿ, ೨೦ ಶಿಲಿಂಗು ಬಾಳುವ ಪದಾರ್ಥಕ್ಕೆ ಈಗ ೧೧ ಶಿಲಿಂಗ್ ೮ ಪೆನ್ಸು ಮಾತ್ರ. ಇಷ್ಟಾದರೂ ಈ ೧೧ ಶಿಲಿಂಗ್ ೮ ಪೆನ್ನಿನ ಬೆಲೆ ಜಪಾನ್ ನಾಣ್ಯದಲ್ಲಿ ಮೊದಲಿದ್ದಂತೆ ಹತ್ತೇ ' ಯೆನ್ ' ! ಈ ಇಂದ್ರಜಾಲ–ಮಹೇಂದ್ರಜಾಲದಲ್ಲಿ ಸಿಕ್ಕ ಪರ-ರಾಷ್ಟ್ರ ವ್ಯಾಪಾರವು ಕ್ಷೀಣವಾಗಿ ತೀರ ಹೀನಾವಸ್ಥೆಗೆ ಬಂದುಬಿಟ್ಟಿವೆ. ಅಂತೆಯೇ ಸದ್ಯ ಇಂಗ್ಲೆಂಡಿನಲ್ಲಿ ಅಗ್ಗ-ಮುಗ್ಗವಾದ ಜಪಾನೀ ಮಾಲುಗಳಿಗೆ ಸುಗ್ಗಿಯಾಗಿ ಬಿಟ್ಟಿದೆ. ಆದರೂ ಇದೇ ಅಗ್ಗ ಮಾಲಿನ ಬೆಲೆಯು ಜಪಾನಿನಲ್ಲಿ ಇದ್ದಷ್ಟೇ ಉಳಿದಿವೆ !

ಈ ನಾಣ್ಯಜಾಲದಿಂದ ಭಾರತಕ್ಕೂ ಬಿಡುಗಡೆಯಿಲ್ಲ. ೧೯೧೭–೧೮ ರಲ್ಲಿ ' ಯೆನ್ ' ನಾಣ್ಯದ ಬೆಲೆಯು ೧ ರೂ. ೧೨ ಆಣೆಯಿತ್ತು. ಮೇಲಿನ ಉದಾಹರಣೆಯಂತೆ ೧೦ ಯೆನ್ನಿನ ಜಪಾನೀ ಮಾಲೊಂದಕ್ಕೆ ನಮ್ಮಲ್ಲಿ ೧೭ ರೂಪಾಯಿ ೪ ಆಣೆ ಇರುತ್ತಿತ್ತು. ಈಗಿನ ಬೆಲೆಯೆಷ್ಟು? ಅವನತಿಯ ಪೂರ್ವದಲ್ಲಿ ೧೭ ರೂ. ೪ ಆಣೆ ಬಾಳುವ ಪದಾರ್ಥಕ್ಕೆ ಸದ್ಯ ೭ ರೂ. ೧೩ ಆಣೆ ಮಾತ್ರ; ಅರ್ಧಕ್ಕಿಂತ ಕಡಿಮೆ ಬೆಲೆ! ಇದೂ ಅಲ್ಲದೆ ರೂಪಾಯಿಯು ಸ್ಥಾಯಿಯಾಬೆಲೆಯುಳ್ಳದ್ದೋ? ಎಂದಿಗೂ ಇಲ್ಲ. ಅದು ಪೌಂಡಿನ ಕೂಡ ನಿರ್ಣೀತದ ಜೋಕಾಲಿಯಲ್ಲಿ ತೂಗಾಡುವುದು. ಇದರಿಂದಾಗುವ ಭಾರತೋದ್ಯಮಗಳ ಅವನತಿಯು ಅವರ್ಣನೀಯವಾಗಿದೆ. ನಾಲ್ಕಾಣೆ ಬೆಲೆಯುಳ್ಳ ಒಂದು ಜಪಾನೀ ಸಾಬೂನು ಈಗ ಎರಡಾಣೆಗೆ ಸಿಕ್ಕುವುದುಂಟು. ಇದರ ಜೊತೆಗೆ ಭಾರತದ ಸಾಬೂನಿನ ಉದ್ಯಮ ಹೇಗೆ ಪಣಕಟ್ಟುವುದು? ಇದಕ್ಕೆ ಪ್ರತಿಧ್ವನಿಯೇ ಉತ್ತರ.

ನಿರುದ್ಯೋಗದ ನಿದ್ರೆಯಿಂದ ಇದೇ ಎಚ್ಚತ್ತ ಭಾರತೀಯ ಉದ್ಯಮಿಯು ಇನ್ನೂ ಬೆಳಗಾಗಿಲ್ಲವೆಂದು ಪುನಃ ಗಟ್ಟಿಯಾಗಿ ಹೊದ್ದುಕೊಂಡು ಮಲಗುವ ಪ್ರಸಂಗ! ಜಪಾನಿನ ವ್ಯಾಪಾರ-ಪಣವು, ಭಾರತೋದ್ಯಮ ಸೂರ್ಯನು ಮುಚ್ಚುವಂತೆ ' ಕೃಷ್ಣ ಚಕ್ರ ' ವನ್ನು ಹಿಡಿದು, ಹೊರಗೆ ಬೆಳಗಾಗಿದ್ದರೂ ನಮ್ಮನ್ನು ಕತ್ತಲಲ್ಲಿಟ್ಟುಬಿಟ್ಟಿದೆ. ಈ ಕತ್ತಲಲ್ಲಿ ದಾರಿಕಾಣದೆ ಭಾರತೋದ್ಯ-ಮಿಯು ತಡವರಿಸಿ ಎಡಹಿಬೀಳುತ್ತ ಕಣ್ಣಿದ್ದು ಕುರುಡನಾಗಿ ಸ್ಪರ್ಧೆಯ ಸ್ವಾತಂತ್ರ್ಯ ಬಿಟ್ಟುಕೊಟ್ಟಿದ್ದಾನೆ. ಕೈಯಿದ್ದರೂ ಕೆಲಸವಿಲ್ಲ; ಕೆಲಸವಿದ್ದರೂ ಮಾರಾಟವಿಲ್ಲ. ಈ ರೀತಿಯಲ್ಲಿ ಜಪಾನು, ತನ್ನಲ್ಲಿ ಸಿಗುವ ನೈಸರ್ಗಿಕ ದ್ರವ್ಯಗಳಿಂದ ತಯಾರಿಸಿದ ಅಗ್ಗ ಮುಗ್ಗಿನ ಪದಾರ್ಥಗಳಿಂದ ಎಲ್ಲ ಪರರಾಷ್ಟ್ರ ವ್ಯಾಪಾರವನ್ನು ಬಗ್ಗುಬಡಿದುಬಿಟ್ಟಿದೆ. ಆ ರಾಷ್ಟ್ರಗಳಲ್ಲಿ ನಿರುದ್ಯೋಗ ರಾಕ್ಷಸನ ಹಾವಳಿಯು ನಿರ್ಬಂಧವಿಲ್ಲದೆ ಸಾಗಿ, ಜಪಾನಿನಲ್ಲಿ ಮಾತ್ರ ಎಲ್ಲ ಉದ್ಯಮಿಗಳೂ, ಕೂಲಿಕಾರರೂ ನಂದನವನದಲ್ಲಿದ್ದಂತೆ ಜೀವಿಸುವರು. ಈ ಜೀವನಕ್ಕೆ ಕಾಮಧೇನುವೆಂದರೆ ಆ ನಾಣ್ಯದ ಅಗ್ಗಳತೆಯ ಇಂದ್ರಜಾಲವು.



ಡೋಂಗರೆ ಇವರ ಬಾಲಾಮೃತವು

ಸೊರಗಿ ಕಡ್ಡಿಯಂತಾಗಿ ನಿರ್ಬಲರಾದ

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಈ ನಾಣ್ಯದ ಅಗ್ಗಳತೆಯ ವಿಷಯವಾಗಿ ಅರ್ಥಪಂಡಿತರು ಹೇಳುವ ಮಾತೇ ಬೇರೆಯಾಗಿದೆ. ಅವರ ಹೇಳಿಕೆಯೆಂದರೆ 'ಜಪಾನು ತಾನು ರಚಿಸಿದ ನಾಣ್ಯಕ್ರಯಾವನತಿಯ ಜಾಲದಲ್ಲಿ ತಾನೇ ಸಿಕ್ಕಿ ಬೀಳುವುದು ಕಟ್ಟಿಟ್ಟದ್ದು' ಎಂದು. ಈ ಅಭಿಪ್ರಾಯವು ಕೆಲವು ದೇಶಗಳಿಗೆ ಮಾತ್ರ ಸಮಂಜಸವಾದದ್ದು. ಅಂತಹ ದೇಶಗಳೆಂದರೆ ತಮ್ಮ ಆಹಾರಸಂಚಯಗಳನ್ನು ಹೊರದೇಶದಿಂದ ಪೂರಯಿಸಿಕೊಳ್ಳುವಂತಹವು ಮಾತ್ರ. ಉದಾಹರಣಾರ್ಥ ಜರ್ಮನಿ. ಇಂತಹ ದೇಶಗಳು ಆಯಾ ರಾಷ್ಟ್ರನಾಣ್ಯಕ್ಕೆ ತಕ್ಕಂತೆ ಬೆಲೆ ಕೊಡಬೇಕಾಗುವುದು. ಅಂತೆಯೇ ಮಹಾಯುದ್ಧದ ನಂತರ ಜರ್ಮನಿಯಲ್ಲಿ ನಾಣ್ಯದ ಅಗ್ಗಳತೆಯ ಹಾವಳಿಯಾದದ್ದು.* ಏಕೆಂದರೆ ಜರ್ಮನಿಯು ತನ್ನ ಆಹಾರಸಾಮಗ್ರಿಗಳನ್ನು ಹೊರಗಿನಿಂದ ಹೊಂದಬೇಕಾಗಿತ್ತು. ಆದರೆ ಈ ಭೀತಿಯು ಜಪಾನಿಗಿಲ್ಲ. ಜಪಾನಿನಲ್ಲಿ ಅಕ್ಕಿ, ಮೀನ, ಕಾಯಿಪಲ್ಲೆ, ಕಲ್ಲಿದ್ದಲಿ ಮುಂತಾದ ಬಾಳುವೆಗೆ ಬೇಕಾದ ಸಮಸ್ತ ಮುಖ್ಯ ಸಾಮಗ್ರಿಗಳೂ ಹೇರಳವಾಗಿ ದೊರೆಯುತ್ತವೆ. ಅಂತೆಯೇ ಜಪಾನಿನಲ್ಲಿ ಯಾವ ಜೀವನಾವಶ್ಯಕ ಪದಾರ್ಥಗಳ ಬೆಲೆಯೂ ಸ್ವಲ್ಪಾದರೂ ಹೆಚ್ಚಾಗಿಲ್ಲ. ಕೆಲಸಗಾರರ ಕೂಲಿಯು ಕೂಡ ಹೇಳಿಕೊಳ್ಳುವಷ್ಟು ಹೆಚ್ಚಾಗಿಲ್ಲ. ಇದರ ಕಾರಣವೊಂದು ಬೇರೆಯೆ. ಅದೇನೆಂದರೆ, ಜಪಾನಿನ ಜೀವನವು ಯಾವರೀತಿಯಿಂದಲೂ ಹೆಚ್ಚು ಬೆಲೆಯುಳ್ಳದ್ದಾಗಿಲ್ಲ; ಅಲ್ಲದೆ (ಇದು ದೊಡ್ಡ ಕಾರಣ) ಜಪಾನಿನ ಜನಸಂಖ್ಯೆಯು ವರ್ಷವರ್ಷಕ್ಕೂ ಬೆಳೆಯುತ್ತಿದ್ದು ಹಳ್ಳಿಯಿಂದ ಹೆಚ್ಚಾಗಿ ಬಂದ ಕೂಲಿಕಾರರು ಅಗ್ಗವಾಗಿಯೇ ಸಿಕ್ಕುತ್ತಾರೆ. ಇಷ್ಟು ಚಾತುರ್ಯದಿಂದ ಅರ್ಥಿಕಸ್ಥಿತಿಯನ್ನು ಕಾಯ್ದಿಟ್ಟ ಜಪಾನು ಕೂಡ ನಿರುದ್ಯೋಗ ಸಮಸ್ಯೆಗೆ ಹೊರತಾದದ್ದಲ್ಲ. ಅದೊಂದು ಚಿಂತಾಜನಕ ಸಮಸ್ಯೆಯೇ ಆಗಿದೆ; ಪ್ರತಿದಿನವೂ ಆರ್ಥಿಕಬಂಡಾಯದ ಭೀತಿಯು ಅಲ್ಲಿ ಇದ್ದೇ ಇರುತ್ತದೆ; ಅತಿಶಯೋಕ್ತಿ ಪ್ರಿಯರಾದ ಕೆಲವು ಜನರು ಜಪಾನು ೧೯೩೭ ರಲ್ಲಿ ಚೈನಾದ ಕೂಡ ಯುದ್ಧ ಹೂಡಿದುದು ತನ್ನ ಹೆಚ್ಚುತ್ತಿರುವ ನಿರುದ್ಯೋಗಿ ಜನಸಂಖ್ಯೆಗೆ ಏನಾದರೊಂದು 'ದೇಶಭಕ್ತಿ'ಯ ಉದ್ಯೋಗಹಚ್ಚಲಿಕ್ಕೆಂದೇ ಎಂದು ಹೇಳುತ್ತಾರೆ! ಇದ್ದರೂ ಇರಬಹುದು. ಅತಿಶಯೋಕ್ತಿಯು ಸತ್ಯಬೀಜದಿಂದ ಬೆಳೆದ ಮಹಾವೃಕ್ಷವಷ್ಟೇ ?

ಇನ್ನೊಂದು ವಿಷಯ: ಜಪಾನಿನ ನಾಣ್ಯದ ಅಗ್ಗಬೆಲೆಯ ಬಲದಿಂದ ಬರುವ ಲಾಭವಲ್ಲದೆ ಜಪಾನಿಯರು ತಮ್ಮ ಉದ್ಯಮಗಳೊಂದರಲ್ಲಿ ಒಂದು ವಿಶಿಷ್ಟವಾದ ಏರ್ಪಾಡಿನಿಂದ ಇತರ ಉದ್ಯಮದಿಂದಾಗುವ ಹಾನಿಯನ್ನು ತುಂಬಿಕೊಳ್ಳುತ್ತಾರೆ. ಈ ಉದ್ಯಮವೆಂದರೆ ಕಿಟ್ಟಿ-ಕಪ್ಪು-ಬಸಿ ಮುಂತಾದ 'ಚಿನೀ'ಮಣ್ಣಿನ ಮಾಲುಗಳದು. ಕಿಯೋಟೋ ಮತ್ತು ನಗೋಯಾ ಎಂಬ ಎರಡು ಸ್ಥಳಗಳು, ಜಪಾನಿನ ಈ 'ಚಿನೀ' ಮಾಲು ಹುಟ್ಟಿಸುವ ಕೇಂದ್ರಗಳು. ಇಲ್ಲಿ ನಡೆಯುವ ಒಂದು ವಿಚಿತ್ರ ಏರ್ಪಾಡು ಮಾದರಿಯದಾಗಿದೆ. ಜಪಾನಿನಲ್ಲಿ ಮಾಡಿದ ಎಲ್ಲ 'ಚಿನೀ'ಮಣ್ಣಿನ ಮಾಲುಗಳು ಈ ಕೇಂದ್ರಗಳಲ್ಲಿ ಕೊನೆಯ ಒಪ್ಪನ್ನೂ ಕಲಾಸೌಂದರ್ಯವನ್ನೂ ಹೊಂದುತ್ತವೆ. ಎಲ್ಲ ಮುಗಿದ ಮೇಲೆ ಈ ಮಾಲುಗಳು ಮೂರುವಿಧವಾಗಿ ಹೆಸರನ್ನು ಪಡೆಯುತ್ತವೆ. ೧. ಅಮೇರಿಕೆಗೆ ಕಳುಹುವ ಮಾಲು; ೨. ಯುರೋಪಕ್ಕೆ ಕಳುಹುವ ಮಾಲು; ೩. ಹಿಂದುಸ್ಥಾನಕ್ಕೆ ಕಳುಹುವ ಮಾಲು. ಜಪಾನಿನಲ್ಲಿಯೇ ಇರಬೇಕಾದ ಈ ತರದ ಮಾಲು ಹೊರಕ್ಕೆ ಹೋಗುವುದಿಲ್ಲ. ಏಕೆಂದರೆ ಜಪಾನಿಯರು ಬೇಡುವ ಕೆಲವೊಂದು ರೂಪದ ಮತ್ತು ಕಲಾರೀತಿಯ ಮಾಲುಗಳು ಹೊರಗಣ ದೇಶದವರಿಗೆ ರುಚಿಸುವುದಿಲ್ಲ. ಇನ್ನು ಈ ಮೂರು ವಿಧದ ಹೆಸರನ್ನು ಪಡೆದ ಮಾಲುಗಳಲ್ಲಿ ಮೊದಲನೆಯದು (ಅಮೇರಿಕೆಗೆ ಕಳುಹುವುದು) ಎಲ್ಲಕ್ಕಿಂತಲೂ ಹೆಚ್ಚು ಬೆಲೆ ತರುವುದು (ಅಮೇರಿಕೆಯು ಜಪಾನಕ್ಕಿಂತಲೂ ಆರ್ಥಿಕೋನ್ನತಿ ಹೊಂದಿದುದು). ಅದರ ತರುವಾಯ ಯುರೋಪಕ್ಕೆ ಕಳುಹುವ ಮಾಲು; ಇದು ಮೊದಲಿನ ತರದ ಮಾಲಿಗಿಂತಲೂ ಕಡಿಮೆ ಬೆಲೆ ತರುವುದು. ಕೊನೆಯ (ಮೂರನೆಯ ತರಗತಿ)ದು ಎಂದರೆ ಹಿಂದುಸ್ಥಾನಕ್ಕೆ ಕಳುಹುವುದು. ಮೊದಲಿನೆರಡರಿಂದ ಬಂದ ಈ ಮಾಲುಗಳ ಬೆಲೆಯು ಜಪಾನಿನಲ್ಲಾಗುವ ಎಲ್ಲ ಈ ತರದ ಮಾಲಿನ ಲಾಭವನ್ನು ತುಂಬಿಕೊಟ್ಟುಬಿಡುತ್ತದೆ. ಹರಕು-ಮುರುಕಾದ—ಮಿಕ್ಕಕಡೆಗೆ ಮಾರಲಾರದ—ಕಪ್ಪು-ಕಿಟ್ಲಿಗಳನ್ನು ಹಿಂದುಸ್ಥಾನಕ್ಕೆ 'ಅಗ್ಗ'ದ ಮಾಲೆಂದು ಅವರು ಕಳುಹಿಬಿಡುತ್ತಾರೆ. 'ಭಾರತದ

* ಈ ಹಾವಳಿಯ ವರ್ಣನೆಯನ್ನು 'ನಾಳಿನ ಜೀವನ' ಎಂಬ ಸ್ವತಂತ್ರ ಲೇಖನದಲ್ಲಿ ಚಿತ್ರಿಸಿದ್ದೇನೆ. —ಅನುವಾದಕ

ಮಾರ್ಕೆಟಿನಲ್ಲಿ ಅಗ್ಗ ದರವೊಂದೇ ಲೆಖ್ಖ' ಎಂದು ಜಪಾನೀಯರ ಅಭಿಪ್ರಾಯ; ಅದು ನಿಜವೂ ಇದೆ. ಈ ನಮೂನೆಯ 'ಅಗ್ಗ'ದ ಮಾಲು ಅತ್ಯಗ್ಗವಾಗಿ ಇಲ್ಲಿ ಮಾರುತ್ತದೆ. ಮಾಲುತಂದ ಹಡಗಿನ ಕೂಲಿಬಂದರೆ ಸಾಕು ಜಪಾನಿಯರಿಗೆ. ಉಳಿದದ್ದೆಲ್ಲ ಅಮೇರಿಕಾ ಮತ್ತು ಯುರೋಪ್ ವ್ಯಾಪಾರದಿಂದ ತುಂಬಿ ಬಂದಿರುತ್ತದೆ. ಇನ್ನು ಜಪಾನಿಯರಿಗೇ ಬೇಕಾಗುವ ಕಲಾರೀತಿಯ 'ಚಿನೀ' ಪಾತ್ರೆಗಳು ಒಂದೆರಡು ವಿಶಿಷ್ಟಸ್ಥಳಗಳಲ್ಲಿ ತಯಾರಾಗುತ್ತವೆ. ಇಲ್ಲಿ ಕೇವಲ ಮೇಲ್ತರದ ಪಾತ್ರೆಗಳಷ್ಟೇ ಮಾಡಲ್ಪಟ್ಟು ವಿಕ್ಕಾದುವುಗಳೆಲ್ಲ ಒಡೆದುಹಾಕಲ್ಪಡುತ್ತವೆ. ಹಿಂದುಸ್ಥಾನದಲ್ಲಿ ಮಾರುವ ಜಪಾನಿನ 'ಅಗ್ಗ' ಸಾಲುಗಳಿಂದ ಜಪಾನಿನ ಮಾಲೆಲ್ಲ ಮುಗ್ಗಾದದ್ದು ಎಂದಾಗಿರುವ ನಮ್ಮ ಗ್ರಹಿಕೆಯು ಕೇವಲ ತಪ್ಪಿನದು.

ಏಕೆಂದರೆ ಜಪಾನಿಯರು ಹೇಳುವಂತೆ ಹಿಂದುಸ್ಥಾನದವರಿಗೆ ಕಲೆಯಲ್ಲಿ—ಸೌಂದರ್ಯದಲ್ಲಿ—ರುಚಿಯಿಲ್ಲ. ಅಂತೆಯೇ ಕೇವಲ ಅಗ್ಗ-ಮುಗ್ಗಿನ ಸಾಲನ್ನು ಇಲ್ಲಿಗೆ ಅವರು ಕಳುಹುವರು! ಇದರ ಉದಾಹರಣೆಯನ್ನು ನಾನು ಇನ್ನೂ ವಿಚಿತ್ರವಾಗಿ ಒಂದು ಕಾರ್ಖಾನೆಯಲ್ಲಿ ಕಂಡೆನು. ಅದು **ಒಸಾಕಾ** ಪಟ್ಟಣದ 'ಕಾಲುಚೀಲ' ಮಾಡುವ ಕಾರ್ಖಾನೆಗಳಲ್ಲಿ ಕಂಡುಬಂದುದು. ಇಲ್ಲಿ ಅಮೇರಿಕೆಯಿಂದ ತರಿಸಿದ ಉಪಯೋಗಿಸಿ ಬಿಟ್ಟ (second hand) ಅನೇಕ ಕಾಲುಚೀಲಗಳ ಗುಡ್ಡದಂತಹ ರಾಶಿಗಳನ್ನೇ ಕಂಡೆ. ದೊಡ್ಡ ಕಾರ್ಖಾನೆಗಳಲ್ಲಿ ಇದಾವ '**ಮೋಡಕಾಬಾಜಾರ?**' ಎಂದು ಕೇಳಿದೆ. ಆಗ ತಿಳಿಯಿತು ಇತ್ಯರ್ಥ: ಈ ರಾಶಿಗಳೆಲ್ಲ ನವರೂಪ ತಾಳಿ ಕೇವಲ ಹಿಂದುಸ್ಥಾನಕ್ಕೆಮಾತ್ರವೆಂದು ಕಳಿಸುವ ಗುಡ್ಡಗಳು (Especially manufactured for the Indian Market)!' ಈ ಘಟೋತ್ಕಚನ ಮಾಯಾಮಾಜಾರದಲ್ಲಿ ಹಳೆಯ ಕಾಲುಚೀಲಗಳು ಹೊಸರೂಪವನ್ನು ಹೊಂದುವುದು ಈ ರೀತಿಯಲ್ಲಿ:— ಎಲ್ಲ ಹಳೆಯ ಕಾಲುಚೀಲಗಳನ್ನೂ ಮೊದಲು ತೊಳೆದು 'ಸ್ವಚ್ಛ' ಮಾಡುತ್ತಾರೆ; ಅನಂತರ ಅವುಗಳ ಸಾಲನ್ನೆಲ್ಲ ಬಿಚ್ಚಿ 'ಹೊಸ'ದಾಗಿ ಯಂತ್ರದಲ್ಲಿ ಸುತ್ತಿ ಹೆಣಿಗೆಯ ಯಂತ್ರದಲ್ಲಿ ಹಾಕಿಟ್ಟು 'ರೇಶಿಮೆ' ಕಾಲುಚೀಲಗಳನ್ನು ತಯಾರುಮಾಡುತ್ತಾರೆ. ಇವೇ ನಾವು 'ರೇಶಿಮೆ'ಯವೆಂದು ಧರಿಸುವ ಪಾದಚೀಲಗಳು! ಈ ರೂಪಾಂತರವು ಕೇವಲ ಕಾಲುಚೀಲಗಳಿಗಷ್ಟೇ ಅಲ್ಲ. ಹಳೆಯ ಮೋಟಾರುಗಳ ಮಡ್‌ಗಾರ್ಡುಗಳೂ ಈ ಮಾಯಾಬಾಜಾರದಲ್ಲಿ ಬಂದು ಹೊಸರೂಪವನ್ನು ತಾಳಿ ಹುಡುಗರಾಡುವ ಗೊಂಬೆ ಇನ್ನಿತರ ಆಟದ ಸಾಮಾನುಗಳಾಗಿ ನಮ್ಮಲ್ಲಿಗೆ (again specially Manufactured for India!) ಬಂದುಬಿಡುತ್ತವೆ. ಇಂತಹ ವಸ್ತುಗಳು ವಿಪುಲವಾಗಿ ತಯಾರಾಗುತ್ತವೆ. ಹಳೆಯ '**ಸೆಲೂಲಾಯಿಡ್**' ನಿಂದ ತಯಾರಿಸಿಡ ಆಟದ ವಸ್ತುಗಳು ಕೂಡ ಹಿಂದುಸ್ಥಾನಕ್ಕೇ ಬರುವುವು. ಸ್ವಲ್ಪದರಲ್ಲಿ ಹೇಳಬೇಕೆಂದರೆ, ಹಿಂದುಸ್ಥಾನಕ್ಕೆಂದು (ಈಚೆಗೆ ಚಾಯನಾಕ್ಕೂ ಕಳುಹಿಸುತ್ತಿದ್ದಾರೆ) ಪ್ರತ್ಯೇಕವಾಗಿ ತಯಾರಿಸಿ ಕಳುಹುವ ಮಾಲುಗಳೆಲ್ಲ ಈ ಮಾಯಾಬಾಜಾರದಲ್ಲಿ ನವರೂಪ ತಾಳಿ ಬಂದುಬಿಡುತ್ತವೆ. ಅಂತೆಯೇ ಈ ತರದ ವಸ್ತುಗಳ ಮಾರುವ ಬೆಲೆಯು ಮೂಲಬೆಲೆಯು ಕಾಲುಪಾಲಿನಷ್ಟು ಮಾತ್ರ! ಇಂತಹ ವ್ಯಾಪಾರಪಣಕ್ಕೆ ಪ್ರತಿಯಾಗಬಹುದೇ ಭಾರತೋದ್ಯಮವು? ಪುನಃ ಪ್ರತಿಧ್ವನಿಯೇ ಉತ್ತರ.

ಇನ್ನು ಜಪಾನಿನಲ್ಲಿ ತನಗೆ ಬೇಕಾಗುವುದಕ್ಕಿಂತ ಹೆಚ್ಚಾಗಿ ಹುಟ್ಟುವ ಮಾಲುಗಳು ಕೆಲವು ಇರುತ್ತವೆ. ಈ ಹೆಚ್ಚಾಗುವ ಮಾಲುಗಳೆಂದರೆ ಸೀಮೆಂಟ್, ಗಟ್ಟಿ ಕಾಚು, ವಿದ್ಯುದ್ದೀಪದ ಗ್ಲಾಸುಗಳು, ಕೃತ್ರಿಮ ರೇಶಿಮೆ, ಮಿಾನಿನ ಎಣ್ಣೆ ಮೊದಲಾದುವುಗಳು. ಇವುಗಳಿಗೆ ಬೇಕಾಗುವ ಯಾವ ಕಚ್ಚಾ ಮಾಲೂ ಪರದೇಶದಿಂದ ಬರುವುದಿಲ್ಲ. ಆದರೂ ತನ್ನಲ್ಲಿಯೇ ಹುಟ್ಟುವ ಈ ಪದಾರ್ಥಗಳು ತನಗೆ ಹೆಚ್ಚಾಗಿ, ಉಳಿದು, ಜಪಾನು ಆ ಹೆಚ್ಚಿನ ಸಂಗ್ರಹವನ್ನು ಹೇಗಾದರೂ, ಎಲ್ಲಿಯಾದರೂ ಮಾರಿಬಿಡಬೇಕಾಗುವುದು. ಈಗ ಉದಾಹರಣೆಗಾಗಿ ಸೀಮೆಂಟಿನ ವಿಚಾರ ತೆಗೆದುಕೊಳ್ಳೋಣ. ೧೯೩೩ರಲ್ಲಿ ಜಪಾನಿನ ಸೀಮೆಂಟ್ ಫ್ಯಾಕ್ಟರಿಗಳಲ್ಲಿ ೪,೮೦೦,೦೦೦ ಟನ್ನು ಸೀಮೆಂಟು ತಯಾರಾಯಿತು; ಇದರಲ್ಲಿ ಜಪಾನು ೪,೫೦೦,೦೦೦ ಟನ್ನಿನಷ್ಟನ್ನು ತಾನೇ ಉಪಯೋಗಿಸಿತು; ಇನ್ನುಳಿದ ೩೦೦,೦೦೦ ಟನ್ನುಗಳಷ್ಟನ್ನು ಮಾತ್ರ ಚೈನಾ, ಹಿಂದುಸ್ಥಾನ್, ಫಿಲಿಪಾಯಿನ್ ಮುಂತಾದ ದೇಶಗಳಿಗೆ ಕಳುಹಿತು. ಇದರಲ್ಲಿ ಹಿಂದುಸ್ಥಾನಕ್ಕೆ ಬಂದ ಸೀಮೆಂಟು ೩೯,೦೦೦ ಟನ್ನು ಮಾತ್ರ. (ಈಚೆಗೆ ೧೯೩೬–೩೭ರಲ್ಲಿ ೬,೦೦೦ ಟನ್ನು ಮಾತ್ರ ಬಂದಿದೆ) ಎಂದರೆ ಜಪಾನು ತಯಾರಿಸುವ ಸಿಮೆಂಟಿನ ನೂರರಲ್ಲಿ ಒಂದು ಪಾಲು ಮಾತ್ರ ಹಿಂದುಸ್ಥಾನಕ್ಕೆ ಬರುವುದು. ಇನ್ನು ಈ ಸೀಮೆಂಟಿನ ಧಾರಣೆ ವ್ಯಾಪಾರ ಹೇಗಾಗುತ್ತದೆಂಬುದನ್ನು ವಿಚಾರಿಸೋಣ:

ಶ್ರೀ. ಲಲ್ಲೂಭಾಯಿ ಸಾಮಳದಾಸರು "ಜಪಾನಿನಲ್ಲಿಯ ನನ್ನ ಅನುಭವ" ಎಂಬ ಪುಸ್ತಕದ ೬೬-೬೯ ಪುಟಗಳಲ್ಲಿ ಬರೆದದ್ದು ನಿಜವಿದ್ದರೆ, 'ಜಪಾನು ಅತ್ಯಗ್ಗವಾಗಿ ಸೀಮೆಂಟು ತಯಾರಿಸುವುದರಿಂದ ಹಿಂದುಸ್ಥಾನದ ಸೀಮೆಂಟು ಅದನ್ನು ಪೇಟೆಯಲ್ಲಿ ನಿಗಟ್ಟಲಾರದು' ಎಂದು ಕಂಡುಬರುತ್ತದೆ. ಆದರೆ ಈ ಸಂಗತಿಯು ನಿಜವಲ್ಲ. ಏಕೆಂದರೆ ಕಳೆದ ಅನೇಕ ವರ್ಷಗಳಿಂದ ಜಪಾನಿನಲ್ಲಿ ಸೀಮೆಂಟು ಟನ್ನಿಗೆ ೨೧ ಯೆನ್ನಿನಂತೆ (೧೬ ರೂಪಾಯಿ) ಸ್ಥಾಯಿ ಧಾರಣೆಯಲ್ಲಿ ಮಾರುತ್ತ ಬಂದಿದೆ. ಇದೇ ಸೀಮೆಂಟು ಮುಂಬಯಿ ಮತ್ತು ಕಲಕತ್ತೆಯ ಪೇಟೆಗಳಲ್ಲಿ ಟನ್ನೊಂದಕ್ಕೆ ೩೪ ರೂಪಾಯಿಯಂತೆ ಮಾರಲ್ಪಡುತ್ತದೆ! ಈ ಮಾರಾಟದ ಬೆಲೆಯಲ್ಲಿ ಹಿಂದುಸ್ಥಾನ್ ಸರಕಾರವು ಟನ್ನೊಂದಕ್ಕೆ ಹೇರುವ ೧೮ ರೂ.

ಪೇಟೆಂಟ್ ಮತ್ತು ಟ್ರೇಡಮಾರ್ಕ ರೆಜಿಸ್ಟ್ರೇಶನ್ನಿನ ಬಗ್ಗೆ

ಸಿ. ಜಿ. ಅನುಂದ್ ಆ್ಯಂಡ್ ಕಂಪನಿ

೧೪ ಹೇರಸ್ಟ್ರೀಟ್, ಕಲಕತ್ತಾ

ಇವರಿಗೆ ಬರೆಯಿರಿ.

ವೆಚ್ಚ ಕಡಿಮೆ! ಹೆಚ್ಚಿನ ಸಂರಕ್ಷಣೆ!

೪ ಆಣೆ ತೆರಿಗೆಯನ್ನು ಕಳೆಯಬೇಕು; ಬಳಿಕ ಟನ್ನೊಂದರ ಬೆಲೆಯಲ್ಲಿ ೧೫ ರೂಪಾಯಿ ಮಾತ್ರ ಉಳಿಯಿತು. ಇದರಲ್ಲಿ ಕೂಡ ಕೋಬೆಯಿಂದ ಕಲಕತ್ತೆಗೆ ತಂದ ಹಡಗಿನ ವೆಚ್ಚ ಟನ್ನೊಂದಕ್ಕೆ ೬ ರೂ. ೬ ಆ. ಕಳೆಯಬೇಕು. ಅಂತೂ ಜಪಾನಿಗೆ ಉಳಿಯುವ ಟನ್ನೊಂದ್ಧರ ಬೆಲೆಯೆಂದರೆ ೮ ರೂ. ೧೦ ಆಣೆಯಷ್ಟೆ! ಇದರಲ್ಲಿ ಮಧ್ಯವರ್ತಿ ಏಜಂಟರ ಭಾಗವೂ ಕಳೆದು ಹೋಗುತ್ತದೆ. ಅಂತ್ಯದಲ್ಲಿ ಜಪಾನಿಗೆ ಟನ್ನೊಂದಕ್ಕೆ ಸಿಕ್ಕುವ ಬೆಲೆ ಆರು ರೂಪಾಯಿ ಮಾತ್ರ! ಇದರರ್ಥ ಇಷ್ಟೇ; ಜಪಾನಿನಲ್ಲಿ ೧೬ ರೂಪಾಯಿಗೆ ಮಾರುವ ಟನ್ನೊಂದಕ್ಕೆ ಹಿಂದುಸ್ಥಾನದಲ್ಲಿ ಆರು ರೂಪಾಯಿ ಬೆಲೆ ಮಾತ್ರ! ಇದೆಂತಹ 'ಅತ್ಯಗ್ಗ'ದ ಸೀಮೆಂಟೆಂದು ವಾಚಕರು ತಾವೇ ಊಹಿಸಿಕೊಳ್ಳಬಹುದು. ಈ ತರದ ಹಾನಿಯಿಂದ ಮಾರುತ್ತಿದ್ದರೂ ಪರದೇಶದ ಸರಕಾರಗಳು ಜಪಾನಿಯ ಸೀಮೆಂಟು ಅತ್ಯಗ್ಗವಾಗಿ ತುಂಬಹತ್ತಿದೆಯೆಂದು ಅದರ ಮೇಲೆ ತಾಳಲಾರದಷ್ಟು ತೆರಿಗೆ ಹಾಕಿಬಿಟ್ಟಿದ್ದಾರೆ. ಈ ತೆರಿಗೆಯ ಹಾನಿ ತುಂಬಲಿಕ್ಕೆ ಜಪಾನು ಸದ್ಯ ಪರದೇಶಕ್ಕೆ ಕಳುಹುವ ಸೀಮೆಂಟನ್ನು ತೀರ ಕಡಿಮೆಮಾಡಿದೆ.

ಇನ್ನು ತನ್ನ ಉದ್ಯಮಗಳಿಗೆ ಬೇಕಾಗುವ ಮೂಲದ್ರವ್ಯಗಳನ್ನು ಪರದೇಶಗಳಿಂದ ತರಿಸಿಕೊಳ್ಳುವ ಜಪಾನಿಯರ ರೀತಿಗಳನ್ನು ವಿಮರ್ಶಿಸೋಣ: ಇಂತಹ ಮೂಲದ್ರವ್ಯಗಳಲ್ಲಿ ರಬ್ಬರು, ಅರಳಿ, ಹತ್ತಿ, ಉಣ್ಣೆ ಮೊದಲಾದುವುಗಳು ಮುಖ್ಯವಾಗಿವೆ. ಈ ದ್ರವ್ಯಗಳಿಂದ ತಯಾರಾದ ಮಾಲುಗಳನ್ನು ಜಪಾನು, ತನ್ನ ಪೇಟೆಯಲ್ಲಿ ಒಂದು ವಿಶಿಷ್ಟ ಬೆಲೆಗೆ ಮಾರುತ್ತದೆ. ಆ ಬೆಲೆಯಿಂದ ಸಿಕ್ಕುವ ಲಾಭದಲ್ಲಿ ಅದೇ ಮಾಲುಗಳು ಪರದೇಶದಲ್ಲಿ ಕಡಿಮೆಯ ಕಿಮ್ಮತ್ತಿಗೆ ಮಾರಾಟವಾಗುವುದರಿಂದ ಉಂಟಾಗುವ ಹಾನಿಯು ತುಂಬಿ ಬರಲು ಅನುಕೂಲವಾಗುವುದು. ಅಲ್ಲದೆ ಪರದೇಶದಿಂದ ಬರುವ ಮಾಲಿಗೆಲ್ಲ ವಿಪರೀತವಾಗಿ ತೆರಿಗೆಯಿದೆ. ಅಂತೆಯೇ ಜಪಾನಿನಲ್ಲಿ ಆ ಮಾಲುಗಳು ಬರಲು ಶಕ್ಯವಿಲ್ಲ. ಇದೂ ಅಲ್ಲದೆ ಜಪಾನಿಯರ ಬೇಕು-ಬಯಕೆಯ ಮಾಲುಗಳು ಪರದೇಶದಿಂದ ಬರಲಿಕ್ಕೆ ಮಾರ್ಗವಿಲ್ಲ. ಅವರ ಜೀವನವೃತ್ತಿ, ಬಟ್ಟೆಬರೆಯ ಪದ್ಧತಿ ಇವೆಲ್ಲ ಕೇವಲ ವಿಶಿಷ್ಟರೀತಿಯವಾಗಿವೆ. ಎಲ್ಲ ದೇಶಗಳ ರೀತಿಯಿಂದಲೂ ಭಿನ್ನತರದುವಾಗಿವೆ. ಉದಾಹರಣೆಗಾಗಿ ಜಪಾನಿಯರು ಧರಿಸುವ ಕಿಮೋನೋ, ಓಬಿ, ಟಾಬಿ ಎಂಬ ಕೆಲವೊಂದು ರೂಪಾಕೃತಿಯ ವಸ್ತ್ರಗಳನ್ನು ನೋಡಬಹುದು. ಜಪಾನಿನ ಮಹಿಳೆಯರು ಧರಿಸುವ ಕಿಮೋನೋ ಎಂಬ ವಸ್ತ್ರವು ತುಂಬಾ ಬೆಲೆಯುಳ್ಳದ್ದೂ ಕಲಾಪೂರ್ಣವಾದದ್ದೂ ಇದ್ದು, ಅದರ ಬೆಲೆಯು ಒಮ್ಮೊಮ್ಮೆ ನಮ್ಮ ನುಹಿಳೆಯರು ಧರಿಸುವ ಒಡವೆಗಳಿಗಿಂತಲೂ ಹೆಚ್ಚಿನದಾಗಿರುತ್ತದೆ! ಇಂತಹ ವಸ್ತ್ರಗಳನ್ನು ಜಪಾನಿಯರ ಹೊರತಾಗಿ ಇನ್ನಾರಿಗೂ ಮಾಡಲಿಕ್ಕೆ ಶಕ್ಯವೇ ಇಲ್ಲ. ಅಲ್ಲದೆ ಪಾಶ್ಚಾತ್ಯ ಪದ್ಧತಿಯಂತೆ ವಸ್ತ್ರಧರಿಸಬೇಕಾದರೆ ಜಪಾನಿಯರಿಗೆ ಹೆಚ್ಚು ಬೆಲೆ ಕೊಡಬೇಕಾಗುವುದು. ಉದಾಹರಣೆಗಾಗಿ ನೆಕ್‌ಟಾಯಿ ಮತ್ತು ಸೂಟುಗಳನ್ನು ತೆಗೆದುಕೊಳ್ಳೋಣ. ಜಪಾನಿನಲ್ಲಿ ಒಂದು ನೆಕ್‌ಟಾಯಿಗೆ ಏನಿಲ್ಲವೆಂದರೂ ಏಳಾಣೆ ಬೆಲೆ ಕೊಡಬೇಕಾಗುವುದು. ಅದೇ ಟಾಯಿ ನಮ್ಮಲ್ಲಿ ಮೂರಾಣೆಗೆ ಕೊಳ್ಳಬಹುದು. ಈ ಮೂರಾಣೆಯಲ್ಲಿ ೧೦೦ಕ್ಕೆ ೩೦ ರಂತೆ ತೆರಿಗೆ ಮೊದಲಾಗಿ ಎಲ್ಲ ಕೂಡಿರುವುದು. ಜಪಾನಿಯರಿಗೆ ತಮ್ಮ ದೇಶದ ರೇಶಿಮೆಯ ಸೂಟೊಂದನ್ನು ಕೊಳ್ಳಲಿಕ್ಕೆ ಸುಮಾರು ೪೫ ರೂಪಾಯಿ ಬೀಳುವದು; ಅದೇ ಸೂಟನ್ನು ನಾವಿಲ್ಲಿ ೧೫ ರೂಪಾಯಿಗಳಲ್ಲಿ ದೊರಕಿಸಬಹುದು! 'ಬನಾರಸ ರೇಶಿಮೆ' ಎನ್ನುವುದು ಕೇವಲ ಹೆಸರಿಗೆ ಮಾತ್ರ; ನಿಜವಾಗಿಯೂ ಈ ತರದ ರೇಶಿಮೆಯೆಂದರೆ ಜಪಾನಿನ ರೇಶಿಮೆಯೆಯೇ ಆಗಿರುವುದು. ಉಣ್ಣೆಯ ವಸ್ತ್ರಗಳಿಗೂ ಇದೇ ರೀತಿಯಾಗಿ ಜಪಾನಿಯರು ಮೂರು ಮಡಿಯಷ್ಟು ಹೆಚ್ಚು ಬೆಲೆ ಕೊಡಬೇಕಾಗುವುದು. ಇನ್ನೊಂದು ಸಂಗತಿಯೆಂದರೆ ಜಪಾನಿನಲ್ಲಿರುವ ಪರದೇಶ ವ್ಯಾಪಾರಿಗಳು ಜಪಾನಿನ ಮಾಲುಗಳನ್ನು ಕೊಂಡು ತಮ್ಮ ಮನಬಂದಂತೆ ಮಾರಲಿಕ್ಕೆ ಶಕ್ಯವಿಲ್ಲ; ಅವರು ಹಾಗೆ ಮಾಡುವುದಾದರೆ ಜಪಾನಿನ ವ್ಯಾಪಾರ ಸಂಘಗಳ ಮುಖಾಂತರವೇ ಮಾಡಬಹುದು. ಜಪಾನ ಸರಕಾರವು ಉಣ್ಣೆ, ನೂಲು ವಸ್ತ್ರಗಳ ಮೇಲೆ ೧೦೦ಕ್ಕೆ ೧೦ರಂತೆ ಸುಂಕ ತೆಗೆದುಕೊಳ್ಳುವುದು. ಆದರೆ ಈ ಮಾಲುಗಳಿಗೆ, ಹೊರಗಣ ದೇಶಗಳಲ್ಲಿ ಬರುವ ಬೆಲೆಗಿಂತ ಮೂರು ಪಟ್ಟು ಹೆಚ್ಚು ಬೆಲೆ ಬೀಳಲು ಈ ಸುಂಕವೆ ಕಾರಣವಾಗಲಾರದು.

ಜಪಾನವು ಸರ್ವಕಾಲದಲ್ಲಿಯೂ ಪರದೇಶದ ಪೇಟೆಗಳಿಗಿಂತ ಕೊಳ್ಳು-ಮಾರುವುದರಲ್ಲಿ ಮೇಲಾಗಿದೆಯೆಂದು ಹೇಳುವವರಿಗೆ ಜಪಾನಿಯರು ಕೊಡುವ ಉತ್ತರವು ಹೀಗಿರುತ್ತದೆ! ಜಪಾನಿನ ನೂಲು ನೇಯುವ ಗಿರಣಿಗಳು ಪರದೇಶದ ಪೇಟೆಯ ಭಾವಗಳನ್ನು ಸೂಕ್ಷ್ಮರೀತಿಯಿಂದ ಅವಲೋಕಿಸುತ್ತ ತಮಗೆ ಒಟ್ಟಿನಲ್ಲಿ ಹಾನಿಯಾಗದಂತೆ ಮಾಲು ಕೊಳ್ಳುತ್ತವೆ. ಉದಾಹರಣೆಯೆಂದರೆ, ಒಂದು ಮಣ ಹತ್ತಿಗೆ ೩ ರೂಪಾಯಿ ಪೇಟೆಯ ಧಾರಣೆ ಎಂದಿಟ್ಟುಕೊಂಡರೆ ಜಪಾನಿನ ಗಿರಣಿಗಳು ಹತ್ತಿಯನ್ನು ೧॥ ರೂ. ೨ ರೂ. ೨॥ ರೂ. ಇತ್ಯಾದಿ ಧಾರಣೆ ಇದ್ದಾಗ ತಮಗೆ ಬೇಕಾಗುವಷ್ಟು ಹತ್ತಿಯನ್ನು ಕೊಂಡುಬಿಡುತ್ತವೆ. ಈ ರೀತಿಯಲ್ಲಿ ಧಾರಣೆಯು ೪ ಇಲ್ಲವೆ ೫ ರೂ. ಆದರೂ ಕೊನೆಗೆ ಸರಾಸರಿ ಪ್ರಮಾಣದಲ್ಲಿ ಅವರಿಗೆ ಹಾನಿಯಿಲ್ಲ. ಮಾರುವುದರಲ್ಲಿಯೂ ಇದೇ ಉಪಾಯ. ಅಂತೆಯೇ ಜಪಾನಿನ ಗಿರಣಿಗಳಿಗೆ ಎಂದೂ ಹಾನಿಯಿಲ್ಲ. ಅವರು ಹೇಳುವಂತೆ ಈ ಗಿರಣಿಗಳ ಲಾಭವು ಅವುಗಳ ಆರ್ಥಿಕ ಸ್ವಾತಂತ್ರ್ಯವನ್ನು ಅವಲಂಬಿಸಿದೆ. ಏಕೆಂದರೆ ಜಪಾನಿನ ಗಿರಣಿಗಳು ಯಾವ ಬ್ಯಾಂಕಿನ ಅಥವಾ ಏಜೆಂಟರ ಮುಖಾಂತರ ತಮ್ಮ ವ್ಯಾಪಾರ-ವ್ಯವಹಾರ ಮಾಡುತ್ತಿರುವುದಿಲ್ಲ.

ವಿಜಯಸಿರಿ

"ವಿಜಯ"

★

೧

" ಕೆನ್ನೀರ ಹೊಳೆ ಹರಿಸಿ ಕಣ್ಣೀರ ಮಳೆ ತರಿಸಿ
ಹೇ ಚೆನ್ನೆ ನೀನೆತ್ತ ಹೊರಟೆ ?
ರುಂಡಗಳ ಚೆಂಡಾಡಿ ಶಾಂತತೆಯನೀಡಾಡಿ
ಹೇ ಕನ್ನೆ ನೀನೆತ್ತ ನಡೆದೆ ? "

೨

" ಪರದಾಸ್ಯ ಪರಿಹರಿಸಿ ಪರನಿಂದೆ ಬದಿಗಿರಿಸಿ
ಸುಖ-ಶಾಂತಿ ನೆಲೆಗೊಳಿಸೆ ಹೊರಟೆ;
ಕುದಿಕುದಿದು ಕಾದಿತ್ತು, ಜನಮನವು ನೊಂದಿತ್ತು,
ಅದಕಿಂದು ಸಂತವಿಸೆ ನಡೆದೆ ! "

೩

" ಗುಂಡುಗಳ ಗುಡುಗಾಟ ಬೊಕ್ಕಸದ ಸೂರಾಟ
ದಂಡುಗಳ ಚೆಲ್ಲಾಟವೇಕೆ ?
ಕೆಂಡವನೆ ಮಳೆಗರೆದು ನಗರಗಳ ಪಾಳ್ಗೈದು
ಕಂಡಂತೆ ಕುಣಿವುದೇಕೆ ? "

೪

" ಬಡತನದಿ ಕಂಗೆಟ್ಟು ಬಾಳದೆಯೆ ಎದೆಗೆಟ್ಟು
ಸಿಡುಸುಯ್ವ ಜನತೆಯನು ತಣಿಪೆ ;
ಕಳೆದುಳಿದ ನಾಗರಿಕತನವನ್ನು ಕಡೆತನಕ
ಉಳುಹುವೆನು ಬೆಳಸುವೆನು ಜವದೆ "

೫

ಬಡತನವ ತೊಡೆಯುವೊಡೆ ಬೊಕ್ಕಸವ ತೂರುವರೆ
ಆ ಬೇಗೆ ಹೋಗುವುದು ಹೇಗೆ ?
ಶಾಂತಿಯನು ತರಲೆಂದು ಜಗಳಾಟವೇನಿಂದು,
ಈ ರೀತಿ ಮುಗಿಯುವುದು ಎಂದು ? "

೬

" ಆಡಲಿಕೆ ಕೆಡಿಸುವುದು ಕೆಡಿಸಲಿಕೆ ಆಡುವುದು
ಸಾಯಲಿಕೆ ಹುಟ್ಟುವುದು ಕೇಳು !
ನಗಲೆಂದು ಅಳುತಿಹುದು ಅಳಲೆಂದು ನಗುತಿಹುದು
ಹೀಗಿಹುದ ನೀ ಜಗಕೆ ಹೇಳು ! "

೭

ಕೆಡಿಸದೆಯೆ ಆಡೇವು ಅಳದಂತೆ ನಕ್ಕೇವು
ಹುಟ್ಟಿ ಕಡೆತನಕ ಬಾಳೇವು;
ಬೇಡಿನ್ನು ಆರೀತಿ ಹೂಡಿನ್ನು ಈ ರೀತಿ
ಈ ಮಾತ ನೀ ಕೇಳು ಗೆಳತಿ "

೮

" ಹುಚ್ಚುಕವಿ, ಮಾತುಸವಿ; ಕೇಳಿಲ್ಲಿ ತೆರೆದು ಕಿವಿ,
ಒಡೆಯುವೆನು ಗುಟ್ಟನೊಂದ !
ಈ ಜಗದಿ ಒಳಿತೊಂದು ಕೆಡುಕೊಂದು ಎಂದೆಂದು
ಹೊಂದದಲೆ ಹೋರುವುವು ಕಂದ "

ಪ್ರಣಯ ಪರಿಸಮಾಪ್ತಿ

(ಒಂದು ವಿನೋದಚಿತ್ರ)

★

ತರುಣರ ಕನಸಿನ ಲೋಕದ ಪ್ರೀತಿಯ ಆದರ್ಶಭಾವನೆ ಅಳಿಯುವುದು ಯಾವಾಗ? ಗೊತ್ತಿಲ್ಲದವರು ರಾಮುವಿನ ನಿಟ್ಟುಸಿರಿನ ಹಿಂದಿನ ಮನದ ಹರಿದಾಟವನ್ನು ಅರ್ಥ ಮಾಡಿಕೊಳ್ಳಲಿ! ಪ್ರೇಮದ ನಿಜವಾದ ರಹಸ್ಯವನ್ನು ಅರಿತುಕೊಳ್ಳಲಿ!

★

ಶ್ರೀ. ಕೃಷ್ಣಮೂರ್ತಿ ಪುರಾಣಿಕ, ಬಿ. ಎ. (ಆನರ್ಸ್)

ಅವರಿಂದ

ರಾಮೂನಿಗೆ ಹೆಂಡತಿಯ ಹುಚ್ಚು ಇಷ್ಟರಮಟ್ಟಿಗೆ ತಲೆಗೇರುವುದೆಂದು ಮುಕುಂದರಾಯರಿಗೆ ಎನಿಸಿರಲಿಲ್ಲ. ಮನೆಯಲ್ಲಿ ತಮ್ಮನ್ನು ಕಡೆಗಣಿಸಿ, ಸ್ವಚ್ಛಂದ-ವೃತ್ತಿಯ ಆಚರಣೆಯನ್ನು-ಮನಃಪೂರ್ವಕವಾಗಿ ಆಚರಿಸುವ ಮಗನ ಆಚರಣೆಯನ್ನು ನೋಡಿ ಅವರು ಕಿಡಿಕಿಡಿಯಾದರು. ಈ ಮೊದಲು ಮಾಡಿದ ಮಗನ ಕೃತಿಗಳೆಲ್ಲ ತಮ್ಮ ಅವಹೇಳನದ ಹೆಗ್ಗುರುತುಗಳೆಂದು ಕಂಡುಕೊಂಡರು. ಹೀಗೆಯೇ ಸಡಿಲು ಬಿಟ್ಟರೆ ತಮ್ಮ ದುರ್ದಶೆಯು ಭಯಂಕರವಾಗಿ ಪರಿಣಮಿಸುವುದೆಂದು ಸಿದ್ಧಾಂತ ಮಾಡಿದರು. ಹೆಂಡತಿಯ ಸಲುವಾಗಿ ಕಾಲೇಜಿಗೆ ಶರಣುಹೊಡೆದ ರಾಮೂನನ್ನು ಉನ್ಮತ್ತನೆಂದು ಭಾವಿಸಿದರು. ಪಾಪ! ಕಾಲೇಜಿಗೆ ಹೋಗಬೇಡವೆಂದು ನಿದಾರ್ಕ್ಷಿಣ್ಯದಿಂದ ಹೇಳಿದುದನ್ನು ಮುಕುಂದರಾಯರು ಮರೆತಿರಬೇಕು- ಮೇಲಾಗಿ ಈ ಹೊತ್ತು ರಮಾಬಾಯಿಯವರು ಬೇರೆ ಮಗನ ಪತ್ನಿಪ್ರೇಮವನ್ನು ಬಾಯಿತುಂಬಾ ಬಣ್ಣಿಸಿದ್ದರು. ಮುಕುಂದರಾಯರಿಗೆ 'ಇದ್ದ ಒಬ್ಬ ಮಗನು ಹೆಂಡತಿಯನ್ನು ಪ್ರೀತಿಸತೊಡಗಿದನಲ್ಲಾ' ಎಂಬ ಕಳವಳದ ಜೊತೆಗೆ, ತಮ್ಮನ್ನು ಕಡೆಗಣಿಸಹತ್ತಿರುವನಲ್ಲಾ ಎಂಬ ಭಾವನೆಯು ಬೆರೆತು, ರೊಚ್ಚಿಗಾಸ್ಪದವಾಗಿ ಬಿಟ್ಟಿತು. ಮಗನು ಹೆಂಡತಿಯನ್ನು ಪ್ರೀತಿಸುವುದನ್ನು ಖಂಡಿಸುವ ಮುಕುಂದರಾಯರು ತಮ್ಮ ಹೆಂಡತಿಯನ್ನು ದ್ವೇಷಿಸುತ್ತಿದ್ದರೆಂದು ಯಾರೂ ತಿಳಿಯಕೂಡದು. ಈ ಹೊತ್ತು ರಮಾಬಾಯಿಯವರ ಮಾತುಗಳನ್ನು ಕೇಳಿಕೊಂಡು, ನಂಬಿ, ಪ್ರತೀಕಾರಕ್ಕಾಗಿ ಮಗನ ದಾರಿಕಾಯಹತ್ತಿದರು. ಇಂತಹ ಹೊತ್ತಿನಲ್ಲಿಯೇ ರಾಮೂ ವಿಚಾರದುಂಬಿದ ತಲೆಯನ್ನು ಅಲ್ಲಾಡಿಸುತ್ತ ಮನೆಯಲ್ಲಿ ಕಾಲಿಟ್ಟನು. ಮುಕುಂದರಾಯರು ಗುಡುಗಿದರು: "ಇದೆಲ್ಲಾ ಬಗೀಹರಿಯೂದಿಲ್ಲ ನೋಡು ರಾಮೂ! ನಾವು ಹೇಳಿದಂತೆ ಕೇಳಿಕೊಳ್ಳುತ್ತ ಮನೆಯಲ್ಲಿ ಇರುವದಾದರೆ ಇರು.. ಇಲ್ಲದಿದ್ದರೆ.. ಜಗತ್ತಿನಲ್ಲಿ ನೀನೊಬ್ಬನೆ ಮದುವೆಯಾದಂತೆ ತೋರುತ್ತದೆ. ಮೂರ್ಖನ್ನ ತಂದು.." ಎಂದುಬಿಟ್ಟರು. ರಾಮೂ ತಂದೆಯ ಎಲ್ಲ ಮಾತುಗಳನ್ನು ಅಲಕ್ಷ್ಯಿಸಿದರೂ "ಇಲ್ಲದಿದ್ದರೆ" ಮಾತ್ರ ಅವನ ಕಿವಿಯಲ್ಲಿ ಸುತ್ತಹತ್ತಿತು. ತಾನೂ ಮಾತಾಡಬೇಕೆಂದು ತುಟಿ ಅಲುಗಾಡಿಸಿದ; ಕಣ್ಣರಳಿಸಿದ. ಆದರೆ ಕ್ರಾಂತಿಪುರುಷನಿಗೆ 'ಇಲ್ಲದಿದ್ದರೆ' ಎಂಬ ಮಾತಿಗೆ ಉತ್ತರ ಕೊಡುವುದು ಅಸಾಧ್ಯವಾಯಿತು. ಅಷ್ಟರಲ್ಲಿ ರಮಾಬಾಯಿಯವರು ಕಣ್ಣೀರು ತುಂಬಿಕೊಂಡು "ನಿನ್ನನ್ನು ಬಿಟ್ಟು ನಮಗ್ಯಾರಪ್ಪಾ? ನೀನೇ ಹೀಗೆ ಮಾಡಿದರೆ ನಾವು ಬದುಕಬೇಕು ಹೇಗೆ?" ಎಂದು ವಾತ್ಸಲ್ಯಭರಿತ ದನಿಯಲ್ಲಿ ನುಡಿದರು. ರಾಮೂನಿಗೆ

"ಇದೆಲ್ಲಾ ಬಗೀಹರಿಯೂದಿಲ್ಲ ನೋಡು ರಾಮೂ! ನಾವು ಹೇಳಿದಂತೆ ಕೇಳಿಕೊಳ್ಳುತ್ತ ಮನೆಯಲ್ಲಿ ಇರುವುದಾದರೆ ಇರು......!"

ತಾಯಿಯ ಮಾತುಗಳು ಇಲ್ಲದ ಸಂಕಟಗಳನ್ನು ಹುಟ್ಟಿಸಿದುವು. ಯಾರಿಗೂ ಉತ್ತರ ಕೊಡದೆ ನೇರವಾಗಿ ತನ್ನ ಕೋಣೆಯನ್ನು ಪ್ರವೇಶಿಸಿದ. ಮೌನವೇ ಮನೆಯ ವಾತಾವರಣವಾಯಿತು.

೨.

ರಾಮೂನ ವಿಚಾರಕ್ಕೆ ಮತ್ತೆ ಅನ್ನನಾಯಿತು. ತಾನು ಮಾಡುತ್ತಿರುವ ಅಂತಹ ಮಹಾಪರಾಧವಾವುದೆಂಬುದನ್ನು ಅವನು ಗ್ರಹಿಸದೆ ಹೋದ. "ಹೆಂಡತಿಯನ್ನು ಪ್ರೀತಿಸುವುದು ತಪ್ಪೆ? ಅವಳೊಡನೆ ಜೀವನದ ಆಳವಾದ ಸಮಸ್ಯೆಗಳನು ಚರ್ಚಿಸುವುದು ಅಪರಾಧವೆ? ಮನಬಿಚ್ಚಿ ಮಾತನಾಡಿ ದಾಂಪತ್ಯಜೀವನದ ಸುಖವನ್ನು ಅನುಭವಿಸುವುದು ಉದ್ಧಟತನವೆ? ನಾನದೆಷ್ಟೋ ಪುಸ್ತಕಗಳನ್ನು ಓದಿರುವೆ. ಎಲ್ಲ ಕಡೆಗೂ ನೂತನದಂಪತಿಗಳು ಬಹಿರಂಗವಾಗಿ ಮಾತನಾಡುವುದು ಕಂಡುಬರುತ್ತದೆ. ಮಾತನಾಡದೆ ಜೀವನವನ್ನು ಹೇಗೆ ಸಾಗಿಸುವುದು? ಮದುವೆಯು ಮೌನದ ಬೀಜಾರೋಪಣವೆ? ಅಯ್ಯೋ! ಹಿರಿಯರ ಹಿರಿಯತನದ ಕಿರಿತನವೆ! ನನ್ನವಳೊಡನೆ ನಾನು ಮಾತನಾಡಿದರೆ ಹಿರಿಯರ ಹಿರಿಯತನವನ್ನೇನು ಕಸಿದುಕೊಂಡಹಾಗಾಯಿತು? ಅಯ್ಯೋ! ನನ್ನ ಪ್ರಣಯ-ಯೋಜನೆಯ ಅಧಃಪಾತವೆ!..ತಪ್ಪು..; ಹಿರಿಯರದಿದು ತಪ್ಪುಕಲ್ಪನೆ!..ನಾನಿದನ್ನು ಖಂಡಿತವಾಗಿ ಅಲ್ಲಗಳೆಯಬೇಕು! ನನ್ನಲ್ಲಿ ಇರುವ ಗಂಡುಶಕ್ತಿಯನ್ನು ಕೇಂದ್ರೀಕರಿಸಿ ಹೋರಾಡದ ಹೊರತು ಗತ್ಯಂತರವಿಲ್ಲ. ಹೇಗಾದರೂ ತಂದೆಯವರು .. ' ಇಲ್ಲದಿದ್ದರೆ '.. ಎಂದು ಬೆದರಿಕೆಹಾಕಿರುವರು. ನಿಜವಾಗಿಯೂ ಇದು ನನ್ನ ಯೋಚನೆಯೇ ಆಗಿತ್ತು. ಸರಿ ಹೀಗೇ ಮಾಡಬೇಕು.. ಆದರೆ ನನಗೆ ತಾಯಿ ಬೇಕು..ತಂದೆ ಬೇಕು, ಹೆಂಡತಿಯೂ ಬೇಕು.. ತಾಯಿಗಾಗಿ ಮನೆ ಬಿಡಬೇಕು. ತಂದೆಯ ಸುಖಕ್ಕಾಗಿ ರಾಮಚಂದ್ರನಾಗಬೇಕು. ಹೆಂಡತಿಯ ಸುಖಕ್ಕಾಗಿ .. ಎಲ್ಲಿಗೆ?.. ಎಲ್ಲಿಗೆ?.. ಹೋಗುವುದಾದರೂ ಎಲ್ಲಿಗೆ..?" ರಾಮೂ 'ಎಲ್ಲಿಗೆ' ಎನ್ನುವ ಭಾವವನ್ನು ಮೊಗದ ಮೇಲೆ ಚಿತ್ರಿಸಿ ಕೈಗಳಿಂದ ನಟಿಸುತ್ತಿರುವಾಗ ಅವನ ಹೆಂಡತಿಯು "ಏನು ನಡೆದಿದೆ ಗಂಡನ ವಿಚಾರ?" ಎಂದು ಕೈಹಿಡಿದು ಕುಳ್ಳಿರಿಸಿದಳು. ಅವಳ ಸ್ಪರ್ಶದಿಂದ ಇವನ ಸಮಾಧಿ ಇಳಿದರೂ ಆ ವೇಗವು ಕಡಿಮೆಯಾಗದೆ ಅವಳನ್ನು ಕೇಳಿದ; ಕೇಳಲಿಲ್ಲ; ಅವಳಿಗೆ ಹೇಳಿದ. "ನೀನು ನಾನುಹೇಳಿದಂತೆ ಕೇಳಲೇಬೇಕು. ನೀನು ನನ್ನ ಕೈಹಿಡಿದ ನಲ್ಲೆ. ನನ್ನ ಕೈಹಿಡಿದು ಅಡ್ಡಾಡಲು ಬರಬೇಕು. ಯಾರಿಗೂ ಹೆದರಕೂಡದು. ಸಮಾಜವನ್ನು ಲೆಕ್ಕಿಸಿದರೆ ನನ್ನ ಆಣೆಯಾಗಿದೆ. ನೀನು ನನ್ನ ಪತ್ನಿ; ಸಮಾಜದ ಸೊತ್ತಲ್ಲ! ಅತ್ತೆ-ಮಾವಂದಿರ ಸೂತ್ರದ ಗೊಂಬೆಯಲ್ಲ. ನನ್ನ ಕಾಮದ ಗೊಂಬೆಯಲ್ಲ. ನೀನು ನನ್ನ ಆದರ್ಶಪತ್ನಿ! ಆದರ್ಶ ಪ್ರಣಯಿನಿ! ನಿನಗೆ ನಾನು.. ನನಗೆ ನೀನು.."

"ಏತಕ್ಕೆ ಇಷ್ಟೆಲ್ಲಾ ರಗಳೆ? ' ಗಂಡನ ಮಾತುಗಳನ್ನು ಕೇಳಲಾರದೆ ಅಷ್ಟು ಮಾತಾಡಿದಳು ರಾಮೂನ ಪ್ರಣಯಿನಿ.

ರಾಮೂ ಇನ್ನೂ ಮಾತನಾಡುವ ಭಾವದಲ್ಲಿಯೇ ಇದ್ದುದರಿಂದ ಮತ್ತೆ ಭಾವಪರವಶನಾಗಿ "ಇದು ರಗಳೆಯಲ್ಲ. ಪ್ರಣಯ! ಆದರ್ಶಪ್ರಣಯ! ನೀನೂ ಪ್ರಣಯವನ್ನು ತೋರಿಸಲೇಬೇಕು. ಪ್ರಸಂಗ ಬಂದರೆ ಮನೆಯನ್ನು ಕಾಲಿನಿಂದ ನೂಕಿಯಾದರೂ ಪ್ರಣಯವನ್ನು ತೋರಿಸಬೇಕು.."

ರಾಮೂ ತೇಕಹತ್ತಿದ. ಪ್ರಣಯ-ಪ್ರಸಂಗವು ಗಂಡಾಂತರದಲ್ಲಿ ಕೊನೆಗಾಣಬಹುದೆಂಬ ಭೀತಿಯಿಂದ ಅವಳು, ನಿಜವಾಗಿ ತನಗೆ ಪ್ರಣಯ ಶಬ್ದದ ಶಬ್ದಾರ್ಥವು ಗೊತ್ತಿರದಿದ್ದರೂ 'ಯಾರು ಬೇಡವೆನ್ನುತ್ತಾರೆ' ಎಂದು ಮಾತುಮುಗಿಸಿದಳು. ಅವಳು ಪ್ರಣಯವೆಂದರೆ ಅದೊಂದೇನೋ ನೋಡತಕ್ಕ ವಸ್ತುವಿರಬಹುದೆಂದು ಬಗೆದಿದ್ದರೂ ಬಗೆದಿರಬಹುದು. ಅವಳಾ ಮಾತಿನಿಂದ ರಾಮೂನಿಗೆ ಸ್ವಲ್ಪ ಆಶಾಂಕುರವು ಹುಟ್ಟಿ, ಕ್ರಾಂತಿಪುರುಷನಾಗಲು ಸುಸಜ್ಜಿತನಾದನವನು.

೩.

ಈ ಮಾತಿಗೆ ಮೂರು ತಿಂಗಳುಗಳು ಕಳೆದುಹೋದುವು. ದುರ್ದೈವದ ಸಂಗತಿಯೆಂದರೆ ರಾಮೂನ ಆದರ್ಶಪ್ರಣಯದ ಒರೆಗಲ್ಲಿಗೆ ಅವನ ಹೆಂಡತಿಯು ಚೊಕ್ಕ ಚಿನ್ನವಾಗದಿದ್ದುದೆಂದು ಅಸಮಾಧಾನದಿಂದ ಹೇಳುವುದು. ರಾಮೂನ ಮಾತಿನಲ್ಲಿಯೇ ಹೇಳಬೇಕೆಂದರೆ ಅವಳಿಗೆ ಪ್ರಣಯವೇ ಗೊತ್ತಿಲ್ಲವೆಂದು. ಹೀಗೆ ಹೇಳುವಾಗ ನಾವು ಮಾತ್ರ ಅವಳು ಪ್ರಣಯವನ್ನೇ ಅರಿಯದವಳೆಂದು ಎಂದಿಗೂ ಅನ್ನಲಾರೆವು. ಹೀಗೆನ್ನುವುದು ಸಾಹಸದ ಮಾತಾಗಬಹುದು. ಹರಯದ ಹೆಂಡತಿಯಾದವಳಿಗೆ ಪ್ರಣಯಪಾಠವನ್ನು ಹಾಕಿಕೊಡಬೇಕಾಗುವುದೆಂದು ಯಾರೂ ಹೇಳರು. ಅವಳು ಹರಯದ ಹೆಂಡತಿ, ತುಂಬಾ ಪ್ರಣಯಿನಿ. ಪ್ರಣಯಶಬ್ದದ ಶಬ್ದಾರ್ಥ ಗೊತ್ತಿಲ್ಲದಿದ್ದರೂ ನಿಜವಾದ ಪ್ರಣಯಿನಿ. ಆದರೆ ಅವಳ ಪ್ರಣಯವು ರಾಮೂನ ಆದರ್ಶ-ಪ್ರಣಯಕ್ಕೆ ಸರಿಯಾಗಲಿಲ್ಲವೆಂಬುದು ನಿಜ. ಯಾಕೆಂದರೆ ಇಬ್ಬರೂ ತುಂಬಾ ಪ್ರಣಯಿಗಳಾಗಿದ್ದರೂ ರೀತಿ ಬೇರೆಯಾಗಿ ಬಿಟ್ಟಿತು. ರಾಮೂನ ಪ್ರಣಯವು ಪುಸ್ತಕದಿಂದ ಬಂದುದು. ಇವಳ ಪ್ರಣಯವು ಸ್ವಾಭಾವಿಕವಾದುದು. ಒಂದು ಆದರ್ಶ, ಒಂದು ಸ್ವಾಭಾವಿಕ. ಕ್ರಾಂತಿಪುರುಷ ರಾಮೂನಿಗೆ ಹೆಂಡತಿಯೊಡನೆ ತಿರುಗಾಡುವುದು ಪ್ರಣಯದ ಒಂದು ಭಾಗವಾದರೆ, ಗಂಡನಾದರೂ ಗಂಡಸಿನೊಡನೆ ಅಡ್ಡಾಡುವುದು ಹೆಂಡತಿಯಾದವಳಿಗೆ ಅವಿವೇಕವೆಂಬುದು ಇವಳ ತಿಳಿವಳಿಕೆ. ಮುಂದೆ ಮುಂದೆ ಬಿದ್ದು ಮಾತನಾಡುವುದು ರಾಮೂನಿಗೆ ಪ್ರಣಯವಾದರೆ, ಹಿಂದೆ ಹಿಂದೆ ಕದ್ದುಮಾತನಾಡುವುದು ಇವಳಿಗೆ ಪ್ರಣಯ. ಇದಿರುಬದಿರು ಕುಳಿತು ಮನಸ್ವಿಯಾಗಿ ಹರಟುವುದು ರಾಮೂನಿಗೆ ಪ್ರಣಯದ ಪರಮಾವಧಿಯಾದರೆ, ಮರೆಗೆ ನಿಂತು ಮೆಲ್ಲಗೆ ಮಾತನಾಡುವುದರಲ್ಲಿ ಇವಳು ಅತೀವ ಆನಂದವನ್ನು ಅನುಭವಿಸುತ್ತಿದ್ದಳು. ಹೀಗಾಗಿ ರಾಮೂನ ಆದರ್ಶಪ್ರಣಯವು ಇವಳ ಸ್ವಾಭಾವಿಕ ಪ್ರಣಯವನ್ನು ಒಪ್ಪದಾಯಿತು; ಮೋಹಿಸದಾಯಿತು. ಸಾವಕಾಶವಾಗಿ ರಾಮೂನ ಆದರ್ಶಪ್ರಣಯದ ಗರ್ಭದಲ್ಲಿ ಅನಾದರದ

ವಿಷಬೀಜವು ಅಂಕುರಿಸಹತ್ತಿತು. ಇದನ್ನು ಹೆಂಡತಿಯಾದವಳು ಕಂಡು ಹಿಡಿದರೂ ಬಾಯಿಬಿಚ್ಚುವುದು ಹೇಗೆ? ಈ ಅವಧಿಯಲ್ಲಿ ರಾಮೂನಿಗೆ ಇನ್ನೊಂದು ಆಘಾತವಾಯಿತು. ರಮಾಬಾಯಿಯವರು ಜಡ್ಡಿನಿಂದ ಹಾಸಿಗೆ ಹಿಡಿದು ಬಿಟ್ಟರು. ರಾಮೂನಿಗೆ ಹೆಂಡತಿಯೊಡನೆ ಪ್ರಣಯವನ್ನು ಸಾಧಿಸುವುದೇ ದೂರ ಉಳಿದು, ತಾಯಿಯ ಶುಶ್ರೂಷೆ ಚೆನ್ನಾಗಿ ಸಾಗದಾಯಿತು; ಅಷ್ಟು ಅವನ ಮನಸ್ಸು ಅಸ್ಥಿರವಾಗಿ ಬಿಟ್ಟಿತು. ಯಾವುದಕ್ಕೂ ಮನಸ್ಸಿಲ್ಲ. ಮನೆಯಲ್ಲಿ ತಾಯಿಯೇ ಕಾಯಿಲೆಯಿಂದ ನರಳುತ್ತಿರುವಾಗ ಹೆಂಡತಿಯೊಡನೆ ಚಕ್ಕಂದವನ್ನಾಡುವುದಾದರೂ ಹೇಗೆ? ಒಂದುವೇಳೆ ಇವನು ಹಾಗೆ ಇಚ್ಛಿಸಿದರೂ ಹೆಂಡತಿಯಾದವಳು ಮಾತನಾಡಬೇಕಷ್ಟೆ! ಇವನ ಸರಸದ ಮಾತಿಗೆ ಒಂದೇ ಒಂದು ಉತ್ತರ. ಅದೂ ನೀರಸವಾಗಿ ವಿರಸವನ್ನು ಹುಟ್ಟಿಸುವಂತಹದು. ಕ್ರಾಂತಿಪುರುಷನಾದ ರಾಮೂ ತನ್ನ ಪ್ರಣಯದ ಆದರ್ಶಸಾಧನೆಯಲ್ಲಿ ತನ್ನ ಎಲ್ಲ ಕಷ್ಟಗಳನ್ನು ಬದಿಗಿಟ್ಟು ಹೆಂಡತಿಗೆ ಪ್ರಣಯದ ಕಲ್ಪನೆ ಮಾಡಿಕೊಡಲು ಆಗಾಗ ಪ್ರಯತ್ನಿಸುತ್ತಿದ್ದ. ಪ್ರಣಯದ ಸನ್ನಿವೇಶಗಳುಳ್ಳ ಚಲಚ್ಚಿತ್ರಗಳನ್ನು ತೋರಿಸಿದ. ಕೆಂಪು ಮಸಿಯಿಂದ ಗುರುತುಹಾಕಿದ ಪ್ರಣಯ ಸನ್ನಿವೇಶಗಳನ್ನು ಓದಿ ಅರ್ಥಮಾಡಿ ಹೇಳಿದ. ಆದರೆ ಅವನ ಹೆಂಡತಿಗೆ ಇದರಿಂದ ಯಾವ ಪರಿಣಾಮವೂ ಆದಂತೆ ತೋರಲಿಲ್ಲ. ಪ್ರಣಯಚಿತ್ರಗಳನ್ನು ತೋರಿಸಿದಾಗ, 'ಇದನ್ನೇನು ನೋಡುವುದು ಅಸಹ್ಯ' ಎಂದಾಗಲಿ, ಚಿತ್ರ ಮನಸ್ಸಿಗೆ ಬಂದಾಗ 'ಛಂದ ಅದ ಚಿತ್ರ' ಎಂದಾಗಲಿ ಉತ್ತರ ಕೊಡುವುದು ಇವಳ ಪರಿಪಾಠ. ಪುಸ್ತಕಗಳನ್ನು ಓದಿ ಹೇಳಿದರೆ 'ನನಗೇನು ತಿಳಿಯುತ್ತದೆ ಮಣ್ಣು' ಎನ್ನುವ ಉತ್ತರದಿಂದ ರಾಮೂನಿಗೆ ತಣ್ಣೀರ ಸ್ನಾನವಾಗುತ್ತಿತ್ತು. ರಾಮೂನಿಗೆ ತನ್ನ ಪ್ರಣಯದ—ಆದರ್ಶಪ್ರಣಯದ ಸಾಧನೆಯು ಎಂತಹ ದುಸ್ತರವೆಂಬುದು ಆಗಾಗ ಎನ್ನಿಸಿ ಅವನಿಗೆ ಜಗತ್ತೇ ಬೇಸರವಾಗುತ್ತಿತ್ತು. ಆಯುಷ್ಯವೇ ಅವನಿಗೆ ಭಾರವಾದಂತೆ ಭಾಸವಾಗುತ್ತಿತ್ತು. ಮನೆಯಲ್ಲಿ ತಾಯಿಗೆ ಬೇನೆ, ಮನದಲ್ಲಿ ಪ್ರಣಯದ ವೇದನೆ. ರಾಮೂ ಬಹಳ ಗಾಸಿಯಾದ. ಪರಿಸ್ಥಿತಿಯ ಪರಿಭ್ರಮಣವು ತನ್ನ ಕ್ರಾಂತಿಕಾರಕ ವಿಚಾರಗಳನ್ನು ಕೊನೆಗಾಣಿಸಲು ಪ್ರಯತ್ನಿಸಿ, ಆದರ್ಶಪ್ರಣಯವನ್ನು ನುಚ್ಚುನೂರಾಗಿ ಮಾಡಹತ್ತಿರುವುದನ್ನು ಕಂಡು ಇವನು ಹುಚ್ಚನಾಗುತ್ತಿದ್ದ. ತನ್ನ ಯೋಜನೆಯು ನಿಷ್ಫಲವಾಗಿಡುತ್ತಿರುವುದನ್ನು ಕಣ್ಣಾರೆ ಕಾಣುವಾಗ ಇವನ ಅಭಿಮಾನದ ಕಳಸವು ಕುಕ್ಕುರಿಸಿ ಕೆಳಗೆ ಬೀಳುವಂತಾಗುತ್ತಿತ್ತು. ಒಮ್ಮೊಮ್ಮೆ ಎಲ್ಲಿಯಾದರೂ ದೂರ-ಬಹುದೂರ ಹೋಗಬೇಕೆಂದು ವಿಚಾರಿಸುವ. ಆದರೆ ಹೇಗೆ ಹೋಗುವುದು? ತಾಯಿ ಹಾಸಿಗೆ ಹಿಡಿದಿದ್ದಾಳೆ. ಒಂದು ವೇಳೆ ಹಾಗೆ ಮಾಡುವ ಕಟುಕನಾದರೂ ಎಲ್ಲಿಗೆ ಹೋಗುವುದು? ಹೆಂಡತಿಯಾದರೂ ಒಪ್ಪುವಳೆ? ರಾಮೂನ ಅಂತರಂಗವು ಬೇಗುದಿಯ ತಿದಿಯಾಯಿತು. ಹೆಂಡತಿಯ ಸಾನ್ನಿಧ್ಯವು ಬೇಡವಾದರೂ ಸಹವಾಸವು ಮಾತ್ರ ತಪ್ಪಲಿಲ್ಲವೆಂಬುದು ಕ್ರಾಂತಿಪುರುಷ ರಾಮೂನಿಗೆ ಒಪ್ಪುವಂತಹ ಮಾತು. ಒಮ್ಮೊಮ್ಮೆ ತನ್ನ ನಡತೆಯ ಬಗ್ಗೆ ಅವನಿಗೆ ನಾಚಿಗೆಯಾಗುವುದುಂಟು. ಪಶ್ಚಾತ್ತಾಪವೂ ಆಗುತ್ತಿತ್ತು. ಆದರೆ.. ಆದರೆ.. ಆದರೆ.. "ಹೆಂಡತಿಯೆಂದರೆ ಕಾಮದ ಗೊಂಬೆಯಲ್ಲ, ಗಂಡುಸಿನ ಕೇವಲ ಭೋಗ್ಯವಸ್ತುವಲ್ಲ. ಅವಳು ಜೀವದ ಗೆಳತಿ. ಜೀವನವು ಮುಖ್ಯ, ಕಾಮತೃಪ್ತಿಯು ಹೇಡಿಯ ಕೆಲಸ" ಎಂದು ಗೆಳೆಯರಿಗೆ ಗಂಭೀರವಾಗಿ ಉಪನ್ಯಾಸ ಕೊಡುತ್ತಿದ್ದ ಮಹಾಕ್ರಾಂತಿ ಪುರುಷ ರಾಮೂ....? ಎಷ್ಟಾದರೂ ಕ್ರಾಂತಿಪುರುಷರ ಕೃತಿಗೂ, ಮಾತಿಗೂ ಸಂಬಂಧವಿರಕೂಡದಷ್ಟೆ?

ಎಳುತಿಂಗಳಾದರೂ ರಮಾಬಾಯಿಯವರ ಬೇನೆ ವಾಸಿಯಾಗಲೊಲ್ಲದು; ರಾಮೂನ ಕಳವಳ ನಿಲ್ಲಲೊಲ್ಲದು. ತಾಯಿಯ ಜೀವನದ ಬಗ್ಗೆ ಅವನಿಗೆ ಎಷ್ಟು ಕಳವಳವಾಗುತ್ತಿತ್ತೋ ಅಷ್ಟೇ ಕಳವಳವು ಅವನಿಗೆ ತನ್ನ ಆದರ್ಶಪ್ರಣಯದ 'ಹಣೆಯುಬರೆಹ' ಕ್ಕಾಗಿ ಆಗುತ್ತಿತ್ತು. ಅವನಿಗೆ ತನ್ನ ಪ್ರಣಯಪರೀಕ್ಷೆಯ ಪರಿಣಾಮವು ಹೀಗೆ ವಿಪನ್ನಾವಸ್ಥೆಯನ್ನು ಹೊಂದುವುದೆಂದು ಎನಿಸಿರಲಿಲ್ಲ. ಮನೆಯಲ್ಲಿಯ ವಾತಾವರಣವು ಹಸಗೆಟ್ಟುಹೋಯಿತು. ಮನದಲ್ಲಿಯ ವಾತಾವರಣವು ಬಿರುಗಾಳಿಯಾಯಿತು. ಒಂದು ಕಡೆ ಇವನಿಗೆ ಆದರ್ಶಪ್ರಣಯದ ಯೋಚನೆಯು ಅಣಕಿಸಿದರೆ ಇನ್ನೊಂದು ಕಡೆ ಪರಿಸ್ಥಿತಿಯ ಪರಿಭ್ರಮಣವು ತಾಂಡವವಾಡುತ್ತಿತ್ತು. ದಿನ ಹೋದಹಾಗೆ ಕ್ರಾಂತಿಪುರುಷನ ತಲೆಯ ತಾಳವು ತಪ್ಪಹತ್ತಿತು. ಯಾವಾಗಲೂ ವಿಚಾರ. ವಿಚಾರವೇ ಕೂಳು; ವಿಚಾರವೇ ವಿಶ್ರಾಂತಿ. ವಿಚಾರವು ಕ್ರಾಂತಿಪುರುಷರ ಮಹಾಲಕ್ಷಣ ತಾನೆ!

ಗಂಡನ ಕೊರಗುವಿಕೆಯ ಕಾರಣವನ್ನು ಹೆಂಡತಿಯಾದವಳು ಗ್ರಹಿಸದೆ ಹೋದಳು. ಒಮ್ಮೆ ಗಟ್ಟಿಮನಸ್ಸು ಮಾಡಿ ಅವಳು ರಾಮೂನನ್ನು ಕೇಳುವ ಸಾಹಸಮಾಡಿದಾಗ 'ನೀನೇ ಅದಕ್ಕೆ ಕಾರಣ' ಎಂದು ನುಡಿದು ಸುಮ್ಮನಾದ. ಇಂತಹ ಸಂದಿಗ್ಧ ಮಾತುಗಳನ್ನು ಕೇಳಿ ಗೊತ್ತಿರದ ಅವಳು ತಲ್ಲಣಗೊಂಡಳಲ್ಲದೆ ತಾನೂ ಕೊರಗಹತ್ತಿದಳು.

ಇತ್ತಿತ್ತಲಾಗಿ ರಾಮೂನ ರೀತಿಯೇ ಬೇರೆಯಾಗಿಬಿಟ್ಟಿತು. ಹೆಂಡತಿಯನ್ನು ಕಂಡರೆ ಅದೇನೋ ಅಪರಾಧಮಾಡಿದ ಮಹಾಪರಾಧಿಯಂತೆ ನಡುಗಿಬಿಡುವ. ರಾತ್ರಿಯಲ್ಲಿ ನಿದ್ದೆಬಾರವೆ ಏನನಾದರೂ ಒಟಗುಡುವ. ಅಕಸ್ಮಾತ್ತಾಗಿ ನಿದ್ದೆಹತ್ತಿದರೆ ಅದರಲ್ಲಿ ಕನವರಿಕೆ. ಒಂದುದಿನ ಹೀಗೆಯೇ ಕನವರಿಸುತ್ತ.... "ಅಯ್ಯೋ! ಹೇಳುವುದು ಹತ್ತುಮಾತು..ಕೃತಿ.... ಧಿಕ್ಕಾರ..ಧಿಕ್ಕಾರ!" ಎನ್ನುತ್ತ ದಿಗ್ಗನೇ ಎದ್ದುಕುಳಿತು ಹೆಂಡತಿಯನ್ನು ದುರುದುರನೆ ನೋಡತೊಡಗಿದ. ಅವಳಿಗೆ ಏನೂ ತೋಚದೆ ಮನಸಿನಲ್ಲಿ ಇಲ್ಲದ ಭೀಕರ ಭಾವನೆಗಳ ಕಲ್ಪನೆಯಾಗಿ ನಡುಕಹುಟ್ಟಿತು. ರಾಮೂ ಅವಳ ಕೈಗಳನ್ನು ಗಟ್ಟಿಯಾಗಿ ಹಿಡಿದು ಕೇಳಿದ:"ಹೇಳು ನಿಜವಾಗಿ ಹೇಳು. ಅವ್ವ ಹೇಳಿದ್ದು ನಿಜವೇ?" ರಾಮೂನ

(೧೬೨ನೆಯ ಪುಟ ನೋಡಿರಿ)

ಕನ್ನಡ ಮರಾಠೀ ವಾದವು ಎಲ್ಲಿ, ಯಾರಿಂದ, ಹೇಗೆ ಹುಟ್ಟಿತು ?

★

ಶ್ರೀಮಾನ್ ಮುದವೀಡು ಕೃಷ್ಣರಾಯರು

ಅವರಿಂದ

★

ಕನ್ನಡಶಾಲೆಗಳಲ್ಲಿ ಒಂಟಿಯ ಮರಿಗಳಂತೆ ಮರಾಟಿಯನ್ನು ನುಗ್ಗಿಸಲೆಳಸಿದ್ದ ಈ ಕ್ರಾಂತಿಕಾರಕ ಒಳಸಂಚನ್ನು ಆಗಿನ ಕಾಲದ ಕನ್ನಡ ಪ್ರಮುಖರು ಎದುರಿಸದೆ ಬಿಟ್ಟಿದ್ದರೆ, ಇಂದು ತುಂಗಭದ್ರೆಯ ವರೆಗೆ ದಕ್ಷಿಣಮಹಾರಾಷ್ಟ್ರವೆಂದು ಸಾಧಿಸುತ್ತಿರುವ ಮಹಾರಾಷ್ಟ್ರೀಯರ ಸವಿಗನಸು, ಸತ್ಯಸೃಷ್ಟಿಯಾಗಿ ಪರಿಣಮಿಸುತ್ತಿತ್ತು. ಕರ್ನಾಟಕ ವಿದ್ಯಾವರ್ಧಕ ಸಂಘ ಈ ಸಂದರ್ಭದಲ್ಲಿ ತುಂಬ ಕೆಲಸಮಾಡಿತು.

★

ಅಖಂಡಕರ್ನಾಟಕದ ಒಳನೋಟವನ್ನು ಪಡೆದು ಕನ್ನಡನಾಡ ಹಾಡನ್ನು ಹಾಡಿದ ಸ್ವ. ಶಾಂತಕವಿಗಳು

"ಕಾನಡೀ ಆಪಾ" ಎಂದರೆ "ಕನ್ನಡ ಮಂದಿ" ಎಂಬುದೊಂದು ತಿರಸ್ಕಾರದ್ಯೋತಕವಾದ ಸಮಸ್ತಪದವು ಮಹಾರಾಷ್ಟ್ರದಲ್ಲಿ ಬಹುದಿನಗಳಿಂದ ಪ್ರಚಾರದಲ್ಲಿರುವುದು. ಇದರ ಅರ್ಥವನ್ನು ಬಹುಶಃ ಮಹಾರಾಷ್ಟ್ರೀಯರೆಲ್ಲರೂ "ಕನ್ನಡಿಗರೆಂದರೆ ಒರಟು ಜನ; ಅವರಿಗೆ ನಯ-ನುಣುಪುಗಳ ಅರಿವಿಲ್ಲ; ನಾಗರಿಕತೆಯ ಸುಳಿವು ಅವರ ಜನಾಂಗಕ್ಕೇ ಗೊತ್ತಿಲ್ಲ" ಎಂದೇ ಮಾಡಿಕೊಂಡಿರುತ್ತಾರೆಂಬಂತೆ ತೋರುತ್ತದೆ. ಇಂತಹ ಜನಾಂಗದ ಭಾಷೆ "ಭಾಷೆ"ಯೆಂಬುದಾಗಿ ಕರೆಯಲೂ ತಕ್ಕುದಲ್ಲವೆಂದು ಅವರ ತಿಳಿವಳಿಕೆಯಿದ್ದಂತೆ ಕಾಣುವುದು. "ನಿಮ್ಮ ಕನ್ನಡಕ್ಕೆ ವ್ಯಾಕರಣವುಂಟೊ?" ಎಂದು ಕೂಡ ಒಳ್ಳೊಳ್ಳೇ ಮಹಾರಾಷ್ಟ್ರೀಯ ದೊಡ್ಡ ಮನುಷ್ಯರು ಕೂಡ ಕೆಲಕೆಲವು ಸಾರೆ ಕೇಳಿದ್ದುಂಟು. ದಿವಂಗತ ಶ್ರೀಪಾದ ಕೃಷ್ಣ ಕೋಲ್ಹಟಕರೆಂಬ ಮಹಾರಾಷ್ಟ್ರದ ಸುಪ್ರಸಿದ್ಧ ನಾಟಕಕಾರರೊಬ್ಬರು, ಮುಂಬಯಿಯ ಆ ಕಾಲದ ಪ್ರಸಿದ್ಧ ಮರಾಠೀ ಮಾಸಪತ್ರಿಕೆಯಾಗಿದ್ದ "ಮಾಸಿಕ ಮನೋರಂಜನ"ದಲ್ಲಿ ತಮ್ಮ ಪ್ರವಾಸ ವರ್ಣನೆಯನ್ನು ಬರೆಯುವಾಗ "ಒಡಕು ಮಡಕೆಯಲ್ಲಿ ಹರಳುಗಳನ್ನು ಹಾಕಿ ಬಾಯಿಕಟ್ಟಿ ಬಾರಿಸಿದರೆ ಆಗುವ 'ಕುಡುಬುಡು' ಸಪ್ಪಳವನ್ನು ಕೇಳಿದರೆ ಕನ್ನಡ ನುಡಿಯ ಯಥಾರ್ಥ ಕಲ್ಪನೆಯಾಗುವುದು" ಎಂಬುದಾಗಿ ತಮ್ಮ ಅನುಭವವನ್ನು ಬರೆದಿದ್ದಾರೆ. ಪುಣೆ ಮುಂಬಯಿಯತ್ತ ಕಡೆಗೆ ವಿದ್ಯಾರ್ಜನೆಗಾಗಲಿ, ವ್ಯವಸಾಯ ನಿಮಿತ್ತವಾಗಿ ಆಗಲಿ ಹೋಗಿಬರುತ್ತಿದ್ದ ಕನ್ನಡಜನರಿಗೆ ಅಲ್ಲಲ್ಲಿಯ ಮಹಾರಾಷ್ಟ್ರೀಯರಿಂದ ಯಾವಬಗೆಯ ಸಂಭಾವನೆ ದೊರೆಯುತ್ತಿದ್ದಿತೆಂಬುದು ಬಹುಶಃ ಎಲ್ಲರಿಗೂ ಅನುಭವಕ್ಕೆ ಬಂದ ಮಾತಾಗಿದೆ. ೧೮೯೫ ರಲ್ಲಿ ಪುಣೆಯಲ್ಲಿ ಸೇರಿದ ಕಾಂಗ್ರೆಸ್ಸಿನ ಕಾಲಕ್ಕೆ ಸ್ವಯಂಸೇವಕರಾಗಿ ಕೆಲಸಮಾಡಲೆಂದು ಅಲ್ಲಿಗೆ ಹೋಗಿದ್ದ ನಮ್ಮದೊಂದು ಗುಂಪಿಗೆ, ಅಲ್ಲಿಯ ಸಾರ್ವಜನಿಕ ಕಾರ್ಯಕರ್ತರೊಳಗಿನ ಒಬ್ಬಿಬ್ಬರಿಂದ "ಕನ್ನಡಿಗರು" ಎಂದು ಅದ ತೇಜೋಭಂಗವನ್ನು, ಲೋಕಮಾನ್ಯ (ಆಗಿನ್ನೂ ಟಿಳಕರು ಲೋಕಮಾನ್ಯರು

ಆಗಿದ್ದಿಲ್ಲ)ರವರಿಗೆ ದೂರು ಒಯ್ದು ತಿಳಿಸಿ ಅವರಿಂದಲೇ ತಾತ್ಕಾಲಿಕವಾಗಿ ಅದರ ಪರಿಮಾರ್ಜನೆ ಮಾಡಿಸಿಕೊಳ್ಳುವ ಪ್ರಸಂಗವು ಬಂದಿತು. ಹೀಗೆ ಕನ್ನಡಿಗರ ವಿಷಯವಾಗಿ ಅತ್ತ ಮಹಾರಾಷ್ಟ್ರದಲ್ಲಿ ಹಬ್ಬಿಕೊಂಡಿದ್ದ ಅನುದಾರಭಾವನೆಯ ಪಡಿನೆಳಲು, ಆ ಕಡೆಯಿಂದ ಇಲ್ಲಿಗೆ ಅಧಿಕಾರಸ್ಥಾನಗಳಿಗೆ ಬರುತ್ತಿದ್ದ ಸುಶಿಕ್ಷಿತರಲ್ಲಿಯೂ ಚೆನ್ನಾಗಿಯೇ ಒಡಮೂಡಿದ್ದುದು ಕಂಡುಬರುತ್ತಿದ್ದರೆ ಆಶ್ಚರ್ಯದ ಮಾತಲ್ಲ. ಮೇಲಾಗಿ ಮಹಾರಾಷ್ಟ್ರೀಯರಿಗೆ ತಮ್ಮ ಗತಸಾಮ್ರಾಜ್ಯದ ಪ್ರತಿಷ್ಠೆಯೂ ವರ್ಚಸ್ವವೂ ಮರೆತುಹೋಗುವ ಮೊದಲೇ ಇಂಗ್ಲಿಷ್ ಉಚ್ಚಶಿಕ್ಷಣದ ಅನುಕೂಲತೆಯು ವಿಪುಲವಾಗಿ ದೊರೆತುದರಿಂದ ಅವರಲ್ಲಿ ಸ್ವಾಭಿಮಾನ, ಸ್ವಭಾಷಾಭಿಮಾನ ಮೊದಲಾದ ಗುಣಗಳ ಉತ್ಕರ್ಷವಾಗುವುದಕ್ಕೂ ಅವಸರ ದೊರೆಯಿತು. ಮಹಾರಾಷ್ಟ್ರದ ಅತ್ಯಂತ ಶ್ರೇಷ್ಠ ಮೇಧಾವಿಗಳಾದ **ಚಿಪಳೂಣಕರ, ಅಗರಕರ, ಭಾಂಡಾರಕರ, ಕೇಳಕರ, ಟಿಳಕ, ರಾನಡೆ, ವೈದ್ಯ** ಮೊದಲಾದ ಮಹಾನ್ ಮಹಾನ್ ವ್ಯಕ್ತಿಗಳು ಮಹಾರಾಷ್ಟ್ರದ ಹಾಗು ಮರಾಠೀ ಭಾಷೆಯ ವರ್ಚಸ್ವವನ್ನು ಬೆಳಗಿಸಲು ತಮ್ಮ ಅತುಲಶಕ್ತಿಯನ್ನೆಲ್ಲ ವಿನಿಯೋಗಿಸಿದುದುಂಟು. ಇಂತಿಂತಹರ ಪ್ರಭಾವಶಾಲಿಯಾದ ಲೇಖನ-ಭಾಷಣ ಕೃತಿಗಳಿಂದ ಆಧುನಿಕ ಮಹಾರಾಷ್ಟ್ರದಲ್ಲಿ ಒಂದು ಬಗೆಯ ಆತ್ಮೀಯತೆಯ ತೇಜಸ್ಸು ಒಡಮೂಡಿ, ತಮ್ಮದೆಲ್ಲವೂ ಶ್ರೇಷ್ಠವೆಂಬ ಭಾವನೆಯು ಬೆಳೆದದ್ದು ಸ್ಪೃಹಣೀಯವೆಂದು ಹೇಳಬಹುದಾದರೂ, ಅದರ ಜೊತೆಯಲ್ಲಿಯೇ ತಮ್ಮವರಲ್ಲದವರು ಅನಾಗರಿಕರೆಂಬ ಅನುದಾರಭಾವನೆಯು ಹರಡುವುದಕ್ಕೆ ಕಾರಣವಾದದ್ದು ಅಷ್ಟೇ ಗರ್ಹಣೀಯವೆಂದೂ ಹೇಳದೆ ಗತ್ಯಂತರವಿಲ್ಲ. ಈ ವಿಚಾರಸರಣಿಯ ಮೂಲಕವಾಗಿಯೇ ಎಷ್ಟೋ ಜನ ಹುಟ್ಟು-ಕನ್ನಡಿಗರು ತಾವು ಮಹಾರಾಷ್ಟ್ರೀಯರೆಂದು ಹೇಳಿಕೊಳ್ಳುವುದರಲ್ಲಿಯೇ ಗೌರವವುಂಟೆಂಬ ಭ್ರಾಮಕಕಲ್ಪನೆಯಿಂದ, ತಮ್ಮ ಮನೆಮಾತನ್ನು ಕೂಡ ಬದಲಿಸಿ, ತಮ್ಮ ಇಡಿಯ ಕುಟುಂಬವನ್ನೇ ಮಹಾರಾಷ್ಟ್ರೀಯವನ್ನಾಗಿ ಪರಿವರ್ತಿಸಿದ ದೃಷ್ಟಾಂತಗಳು ಇಂದಿಗೂ ದೊರೆಯುತ್ತವೆ. ತಾವು ಶ್ರೇಷ್ಠರೆಂಬ ಭಾವನೆಯು (Superiority Complex) ಹುಟ್ಟಿ ಬೆಳೆದ ಮಹಾರಾಷ್ಟ್ರೀಯ ಅಧಿಕಾರಿಗಳು ಇತ್ತ ಕನ್ನಡಭಾಗಕ್ಕೆ ಬಂದರೆಂದರೆ, ತಮ್ಮ ಹಾಗು ತಮ್ಮ ಭಾಷೆಯ ವರ್ಚಸ್ವವನ್ನೂ ಪ್ರತಿಷ್ಠೆಯನ್ನೂ ಇತ್ತಕಡೆಗೆಲ್ಲ ಹಬ್ಬಿಸುವುದಕ್ಕೆ ಪ್ರಯತ್ನಮಾಡದಿರುತ್ತಿದ್ದಿಲ್ಲ. ಧಾರವಾಡಕ್ಕೆ ಗಿನೆಯ ವರ್ಗದ ಸಬ್‌ಜಜ್ಜರಾಗಿ ಬಂದಿದ್ದ **ರಾ. ಬ. ಮರಾಠೆಯವರು** ಕೋರ್ಟಿನ ಪ್ರಾಕಾರದಲ್ಲಿಯೂ ಈ ಬಗೆಯ ಪ್ರಯತ್ನ ಮಾಡಿದುದು ಅನುಭವಕ್ಕೆ ಬಂದಿದೆ. ವಕೀಲರು ಸ್ವಪಕ್ಷಮಂಡನದ ವಿಷಯಗಳನ್ನೆಲ್ಲ ಮರಾಠಿಯಲ್ಲಿ ತಿಳಿಸುವುದು ತಮಗೂ ಅವರಿಗೂ ಪಕ್ಷಕಾರರಿಗೂ ಅನುಕೂಲವೆಂಬುದಾಗಿ ಅವರು ಆಡಿತೋರಿಸಿ, ಇಲ್ಲಿಗೆ ವ್ಯವಸಾಯಕ್ಕೆ ಬಂದು ನೆಲಸಿದ ಮಹಾರಾಷ್ಟ್ರದ ವಕೀಲರ ವರ್ಚಸ್ವವನ್ನು ಬೆಳೆಯಿಸಲು ಕಾರಣರಾದರು. ಇದರಿಂದ ಅಚ್ಚಗನ್ನಡ ವಕೀಲರಿಗೂ— ತಮ್ಮ ವ್ಯವಸಾಯವನ್ನು ಉಳಿಸಿಕೊಳ್ಳುವುದಕ್ಕೆಂದು ಮರಾಠಿಯನ್ನು ಅನಿವಾರ್ಯವಾಗಿ ಉಪಯೋಗಿಸುವ ಪ್ರಸಂಗ ಬಂದಿತು. ಆಗಿನ "**ಮಿತ್ರಸಮಾಜ**"ದಲ್ಲಿ ಬಹುಶಃ ಅಧಿಕಾರಿಗಳ ವರ್ಚಸ್ವವೇ ಹೆಚ್ಚಾಗಿರುತ್ತಿದ್ದ ಮೂಲಕ, ಅಚ್ಚಗನ್ನಡ ಸಂಸ್ಥೆಯಾಗಿದ್ದ ಅದರಲ್ಲಿಯೂ ಮರಾಠಿಯು ಹೆಚ್ಚಳವಾಗಲಾರಂಭಿಸಿತು. "**ಮಿತ್ರಸಮಾಜ**"ದ ಮುಖಪತ್ರವಾಗಿ ಕನ್ನಡದಲ್ಲಿ ಹೊರಡುತ್ತಿದ್ದ "**ಲೋಕಶಿಕ್ಷಕ**"ಎಂಬ ಮಾಸಪತ್ರಿಕೆಯು ನಿಂತೇಹೋಯಿತು. ಆಗಿನ ಕಾಲದ ಧಾರವಾಡದ ಸುಶಿಕ್ಷಿತರೆನಿಸುವವರ ಮೇಲೆಯೂ ಮರಾಠಿಯ ಪ್ರಭಾವವು ಹೀಗೆ ಮೆಲ್ಲಮೆಲ್ಲಗೆ ಬೆಳೆಯುತ್ತ ನಡೆದುದರಿಂದ, ಧಾರವಾಡದ ಸಾರ್ವಜನಿಕ ಜನಜೀವನದಲ್ಲಿ ಕ್ರಾಂತಿಯಾಗುವ ಲಕ್ಷಣಗಳು ಕಂಡುಬರತೊಡಗಿದ್ದುವು. ಇದೇ ಸಂದರ್ಭದಲ್ಲಿ [illegible] ಸಂಭವಿಸಿದ ಹಿಂದೆಹೇಳಿದ ಘಟನೆಯು, ಧಾರವಾಡದ ಕನ್ನಡ ಜನತೆಯಲ್ಲಿ ತನ್ನ ಭಾಷೆಯ ಶ್ರೇಯಸ್ಸನ್ನು ಕಾಯ್ದುಹಿಡಿಯುವ ಎಚ್ಚರಿಕೆಯು ಹುಟ್ಟಲು ಕಾರಣವಾಯಿತೆಂದೇ ಹೇಳಬಹುದು.

ಇದೇ ಕಾಲಕ್ಕೆ ದಕ್ಷಿಣಭಾಗದ ಎಜ್ಯುಕೇಶನಲ್ ಇನ್ಸ್‌ಪೆಕ್ಟರರಾಗಿ ಬಂದಿದ್ದ **ದಿವಂಗತ ಸಹಸ್ರಬುದ್ಧೇಯವರು** ತಮ್ಮ ಅಧಿಕಾರಕ್ಷೇತ್ರವಾಗಿದ್ದ ಶಿಕ್ಷಣವಿಭಾಗದಲ್ಲಿ ಆದಷ್ಟುಮಟ್ಟಿಗೆ ಮಹಾರಾಷ್ಟ್ರೀಯರನ್ನೂ, ತನ್ಮೂಲಕ ಮರಾಠೀಭಾಷೆಯನ್ನೂ, ಮಹರಾಷ್ಟ್ರ ಸಂಸ್ಕೃತಿಯನ್ನೂ ನೆಲೆಗೊಳಿಸಲು ಅಖಂಡವಾಗಿ ಪರಿಶ್ರಮಪಟ್ಟರೆಂಬದು ಸುಪ್ರಸಿದ್ಧವಾಗಿದೆ. ಕನ್ನಡ ಟ್ರೇನಿಂಗ್ ಕಾಲೇಜಿನ ಅಚ್ಚಗನ್ನಡ ಪ್ರಿನ್ಸಿಪಾಲರ ಪರಂಪರೆಯು ಇವರ ಕಾಲದಲ್ಲಿಯೆ ಮುಗ್ಗಿತು. ಕನ್ನಡ ಟ್ರೇನಿಂಗ್ ಕಾಲೇಜಿನಲ್ಲಿ ಗಾಯನಕಲೆಯನ್ನು ಕಲಿಸಿ ಕರ್ನಾಟಕದೊಳಗಿನ ಶಿಕ್ಷಕರನ್ನು ಸಂಗೀತಜ್ಞ ರಸಿಕರನ್ನಾಗಿ ಮಾಡುವ ಉದಾತ್ತಧ್ಯೇಯದಿಂದ **ಕೈ. ವಾ. ಭಾಸ್ಕರಬುವಾನವರಂತಹ** ಕನ್ನಡವನ್ನೇನೂ ಅರಿಯದ, ಶುದ್ಧ ಹಿಂದುಸ್ಥಾನೀ ಗಾಯನ ಪ್ರವೀಣ ಮಹಾರಾಷ್ಟ್ರೀಯರನ್ನು ಅಲ್ಲಿ ಗಾಯನಶಿಕ್ಷಕರನ್ನಾಗಿ ನೇಮಿಸಿ, ಇತ್ತಕಡೆಗೆಲ್ಲ ಚೆನ್ನಾಗಿ ವ್ಯಾಪಿಸಿಕೊಂಡಿದ್ದ ಪುರಾತನಕಾಲದ ಶ್ರೇಷ್ಠಪರಂಪರೆಯ ಕರ್ನಾಟಕ-ಗಾಯನ ಪದ್ಧತಿಗೆ ಒಂದುಬಗೆಯಿಂದ ಉಚ್ಚಾಟನೆ ಕೊಟ್ಟು, ತಮಗೆ ಅತ್ಯಂತ ಇಷ್ಟವೂ ಪ್ರಿಯವೂ ಮಾನ್ಯವೂ ಆದ ಹಿಂದುಸ್ಥಾನೀ ಗಾಯನಪದ್ಧತಿಯನ್ನು ಸದ್ದಿಲ್ಲದೆ ಇಲ್ಲಿ ಹಬ್ಬಿಸುವುದಕ್ಕೆ ಅನುವುಮಾಡಿಕೊಟ್ಟು, ಕನ್ನಡ ಟ್ರೇನಿಂಗ್ ಕಾಲೇಜಿನಲ್ಲಿ ಮರಾಠೀಮಾತುಗಾರಿಕೆಯೂ ಬೆಳೆಯುವಂತೆ ಮಾಡಿದ ಶ್ರೇಯಸ್ಸು ಶ್ರೀಮಾನ್ ಸಹಸ್ರಬುದ್ಧೆಯವರಿಗೇ ಸಲ್ಲತಕ್ಕದ್ದು. ತಾವು ಶಾಲೆಗಳ ನಿರೀಕ್ಷಣೆಗೆಂದು ಹೋದಾಗ ಅಥವಾ ಹಳ್ಳಿ-ಹಳ್ಳಿಯ ಮಾಸ್ತರುಗಳು ತಮ್ಮ ಅನುವು ಆಪತ್ತುಗಳ ದೂರನ್ನು ತೋಡಿಕೊಳ್ಳಲು ತಮ್ಮನ್ನು ಕಾಣಲುಬಂದಾಗ ಅವರು "ಮರಾಠಿಯಲ್ಲಿ ಹೇಳು" ಎಂದೂ, ಬರುವುದಿಲ್ಲವೆಂದರೆ "ಕಲಿತು ಬರಬೇಕು" ಎಂದೂ ಮೆತ್ತಗಿನ ಸೂಚನೆಗಳನ್ನು ಕೊಡುತ್ತಿದ್ದ ಸಂಗತಿಯು ಜನಜನಿತವಾಗಿದೆ. ಹೀಗೆ ಮರಾಠಿಯ ಹಾಗು ಅದರ ಅನುಸಂಧಾನದಿಂದ ಮಹಾರಾಷ್ಟ್ರಸಂಸ್ಕೃತಿಯ ಪ್ರಸಾರ-ಪ್ರಚಾರಕ್ಕಾಗಿ ಸಣ್ಣಾಗಿ ಒಳಗೊಳಗೆ ನಡೆಯಿಸಿದ ಕಾರ್ಯಕ್ಕೆ ಎಲ್ಲಿಯೂ ಪ್ರತ್ಯಕ್ಷ ವಿರೋಧವಾಗದಿದ್ದುದನ್ನು ಕಂಡು ಧೈರ್ಯಗೊಂಡೋ

ಎಂಬಂತೆ ಇತ್ತಕಡೆಯ ಕನ್ನಡಶಾಲೆಗಳಲ್ಲೆಲ್ಲ ಮರಾಠಿಯನ್ನು ಆವಶ್ಯಕವಾಗಿ ಕಲಿಸುವಂತೆ ಏರ್ಪಾಟುಮಾಡುವ ಸುದೀರ್ಘ-ಪ್ರಯತ್ನಕ್ಕೆ ಕೈಹಾಕಲಾಯಿತು. ಟ್ರೇನಿಂಗ್ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ **ದಿವಂಗತ ರಾವಜೀ ಬಾಳಾಜೀ ಕರಂದೀಕರರೇ** ಮೊದಲಾದ ಶಿಕ್ಷಣಖಾತೆಯೊಳಗಿನ ಇತ್ತಕಡೆಯ ಮರಾಠೀ ಅಧಿಕಾರಿಗಳು ಈ ಕಾರ್ಯಕ್ಕೆ ನೆರವಾಗಲು ಸಿದ್ಧರಾದರು. ಸ್ವಕಾರ್ಯಸಾಧನದ ವಿಚಾರದಿಂದಲೂ, ವರಿಷ್ಠಾಧಿಕಾರಿಗಳ ಮನಸದೊಲವಿನ ವಿರುದ್ಧವಾಗಿ ಬಾಯಿತೆರೆಯುವ ಎದೆಗಾರಿಕೆಯಿಲ್ಲದುದರಿಂದಲೂ, ಶಿಕ್ಷಣಖಾತೆಯೊಳಗಿನ ಕನ್ನಡಿಗರು ಕೂಡ ಇವರ ಮಾತಿಗೆ **“ ಜೀಯ ಹಸಾದ ! ”** ಎಂಬ ಭಾವನೆಯಿಂದ ನಡೆಯಲನುವಾದರು. ಹೀಗೆ ತಮಗೆ ಅವಿರೋಧವಾದ ಪರಿಸ್ಥಿತಿಯು ಇತ್ತಕಡೆಯ ಶಿಕ್ಷಣಕ್ಷೇತ್ರದಲ್ಲಿರುವುದೆಂಬ ಭರವಸೆಯಿಂದ ತಮ್ಮ ಸಂಕಲ್ಪಸಿದ್ಧಿಗಾಗಿ ಪ್ರಯತ್ನಗಳನ್ನು ಮುಂದುವರಿಸಲಾಯಿತು. ನಾಲ್ವತ್ತು ವರ್ಷಗಳ ವರೆಗೆ ಅಚ್ಚಕನ್ನಡವಾಗಿದ್ದ ಪ್ರಾಥಮಿಕ ಶಾಲೆಗಳ ಪಾಠಕ್ರಮಗಳಲ್ಲಿ ಅಗತ್ಯವಾದ ಬದಲಾವಣೆ ಮಾಡಿ, ಹೊಸ ಕ್ರಮಿಕ ಪುಸ್ತಕಗಳನ್ನು ರಚಿಸಲೆಂದು ಒಂದು ಸಮಿತಿಯನ್ನು ಸರಕಾರದ ಅಧಿಕಾರದಿಂದ ನೇಮಿಸಲಾಯಿತು. ಈ ಸಮಿತಿಯ ಕನ್ನಡವಿಭಾಗಕ್ಕೆ **ಶ್ರೀ. ರಾವಜೀ ಬಾಳಾಜೀ ಕರಂದೀಕರರೇ** ಚೇರಮನ್ನರಾಗಿ ನಿಯಮಿಸಲ್ಪಟ್ಟರು. ಈ ಸಮಿತಿಯವರು ಸೂಚಿಸಿದ ಹೊಸ ತರಗತಿಗಳ ಪಾಠಕ್ರಮದಲ್ಲಿ, ಕನ್ನಡ ಎರಡನೆಯ ಅಥವಾ ಮೂರನೆಯ ವರ್ಗದಿಂದ ಮರಾಠಿಯನ್ನು ಆವಶ್ಯಕ ವಿಷಯವನ್ನಾಗಿ ಕಲಿಸುವ ವ್ಯವಸ್ಥೆಮಾಡಬೇಕೆಂದು ನಿರ್ದಿಷ್ಟವಾಗಿತ್ತು. ಈ ಸೂಚನೆಯು ಹೊರಬಿದ್ದ ಕೂಡಲೆ ಎಲ್ಲ ಕಡೆಗೆ ಚೆನ್ನಾಗಿಯೇ ವಿರೋಧಪ್ರದರ್ಶಕ ಚಟುವಟಿಕೆಗಳಿಗೆ ಆರಂಭವಾಯಿತು. ಈ ವಿರೋಧವನ್ನು ಮೆತ್ತಗೆ ಮಾಡಲು ಒಂದು ಕಾರಣವನ್ನೂ ಮುಂದೆ ಮಾಡಲಾಯಿತು : ಇಂಗ್ಲಿಷ್ ಶಾಲೆಯ ಪದ್ಧತಿಯಲ್ಲಿ ಸಂಸ್ಕೃತವನ್ನು ತೆಗೆದುಕೊಂಡು ಅದನ್ನೇ ತಮ್ಮ ಮುಂದಿನ ವರ್ಗಗಳಲ್ಲಿ ಎರಡನೆಯ ಭಾಷೆಯನ್ನಾಗಿ ಅಧ್ಯಯನ ಮಾಡುವವರಿಗೆ, ಈ ಭಾಗದಲ್ಲಿ ಸಂಸ್ಕೃತದ ಮೂಲಲಿಪಿಯೆಂದು ಎನಿಸಲಾಗಿದ್ದ **“ ಬಾಲಬೋಧ ”** ಬರೆಹವು ಅಗತ್ಯವಾಗಿ ಬರಬೇಕಾಗುತ್ತದೆ; ಶುದ್ಧವಾಗಿ ಸುಬೋಧವಾಗಿ ಸಂಸ್ಕೃತವನ್ನು ಬರೆಯಲು ಬಾರದ ಮೂಲಕ ಎಷ್ಟೋ ಜನ ವಿದ್ಯಾರ್ಥಿಗಳು ಯುನಿವರ್ಸಿಟೀ ಪರೀಕ್ಷೆಗಳಲ್ಲಿ ಯಶಸ್ಸು ದೊರಕಿಸಲಸಮರ್ಥರಾಗುತ್ತಾರೆ; ವಿದ್ಯಾರ್ಥಿಗಳ ಈ ಅಡಚಣೆಯನ್ನು ದೂರಮಾಡಿ ಅವರು ಸಂಸ್ಕೃತ ಶಬ್ದಸಮುಚ್ಚಯವನ್ನು ಚೆನ್ನಾಗಿ ಬರೆಯಲು ಕುಶಲರಾಗಬೇಕೆಂಬ ದಯಾಭರಿತ ಸದ್ಬುದ್ಧಿಯಿಂದಲೇ, ಪ್ರಾಥಮಿಕ ಶಿಕ್ಷಣಕ್ರಮದಲ್ಲಿ ಬಾಲಬೋಧ ಲಿಪಿಯು ಆವಶ್ಯಕವಾಗಿರುವ ಮರಾಠಿಯನ್ನು ಕಲಿಸುವ ಉಪಕ್ರಮ ಮಾಡಲಾಗುವುದೆಂಬುದೇ ಕಾರಣವು. ಕನ್ನಡಶಾಲೆಗಳಲ್ಲಿ ಒಂಟೆಯ ಮರಿಯಂತೆ ಮರಾಠಿಯನ್ನು ನುಗ್ಗಿಸಲೆಳಸಿದ್ದ ಈ ಕ್ರಾಂತಿಕಾರಕ ಒಳಸಂಚನ್ನು ಆಗಿನ ಕಾಲದ ಕನ್ನಡ ಪ್ರಮುಖರು ಎದುರಿಸದೆ ಬಿಟ್ಟು “ ಬಂದದ್ದೆಲ್ಲ ಬರಲಿ ” ಎಂಬ ನಿಷ್ಕ್ರಿಯ ವೇದಾಂತಪಂಥವನ್ನು ಹಿಡಿದಿದ್ದರೆ ಇಂದಿಗೆ ತುಂಗಭದ್ರೆಯ ವರೆಗೆ ದಕ್ಷಿಣ ಮಹಾರಾಷ್ಟ್ರವೆಂದು ಸಾಧಿಸುತ್ತಿರುವ ಮಹಾರಾಷ್ಟ್ರೀಯರ ಸವಿಗನಸು ಸತ್ಯವಾಗಿ, ಇತ್ತಕಡೆಯ ಕರ್ನಾಟಕತ್ವದ ಕಲ್ಪನೆಯ ಬೀಜಗಳೇ ಹುರಿದು ಹೋಗಬಹುದಾಗಿತ್ತು. ಇಂದು **ಬೆಳಗಾಂವಿಯು** ಕನ್ನಡತನವನ್ನು, ಅಲ್ಲಿ ನೆಲೆನಿಂತ ಮರಾಟಿಗರ ಹಾವಳಿಗೂ ಅವರಿಗೆ ಒಳಗೊಳಗೆ ಆಧಾರವಾಗಿ ನಿಂತುಕೊಂಡು “ ಅಚ್ಚಕೆಚ್ಚಿನ ಕನ್ನಡತನ ” ದ ಬಡಿವಾರವನ್ನು ಕೊಚ್ಚಿಕೊಳ್ಳುತ್ತಿರುವ ಕನ್ನಡಿಗರ ಹೊಯಿಮಾಲಿತನಕ್ಕೂ ಎದೆಗಾರಿಕೆಯಿಂದ ಎದುರಾಗಿ ನಿಂತು ಉಳಿಸಿಕೊಳ್ಳುವುದಕ್ಕೆ ನಡೆದಿರುವ ಸಾಹಸದ ನೂರಾರುಪಟ್ಟು ಸಾಹಸವು **ಧಾರವಾಡ ವಿಜಾಪುರಗಳ** ಸಂದರ್ಭದಲ್ಲಿಯೂ ಆವಶ್ಯಕವೆನಿಸುವ ಪ್ರಸಂಗವು ತಪ್ಪಲಾರದಾಗುತ್ತಿತ್ತು. ಸುದೈವದಿಂದ **ಕರ್ನಾಟಕ ವಿದ್ಯಾವರ್ಧಕ ಸಂಘವು**, ಹನ್ನೆರಡು ವರ್ಷಗಳಿಗಿಂತ ಹೆಚ್ಚು ಕಾಲ ಧಾರವಾಡದಲ್ಲಿ ಕನ್ನಡವನ್ನು ಬೆಳೆಯಿಸಿ ಅದರ ವರ್ಚಸ್ವವನ್ನು ಕಾಯುವುದಕ್ಕೆ ಪರಿಶ್ರಮಪಡುತ್ತಿದ್ದಿತು. ಮಹಾರಾಷ್ಟ್ರೀಯ ಆಕ್ರಮಣಶೀಲ ಮನೋವೃತ್ತಿಯ ಪರಿಚಯವು ಇತ್ತಕಡೆಯ ಕನ್ನಡಿಗರಿಗೆ ಚೆನ್ನಾಗಿಯೇ ಆಗಿತ್ತು. ಆದುದರಿಂದ ಇತ್ತಕಡೆಯ ಕನ್ನಡ ಶಾಲೆಗಳಲ್ಲಿ ಮರಾಠಿಯನ್ನು ಆವಶ್ಯಕವಾಗಿ ಸೇರಿಸಬೇಕೆಂಬ ಯೋಜನೆಗೆ **ಕರ್ನಾಟಕ ವಿದ್ಯಾವರ್ಧಕ ಸಂಘವು** ಮುಂದಾಗಿ ವಿರೋಧವನ್ನು ಹೂಡಿತು. ಇಲ್ಲಿಯ ಸುಶಿಕ್ಷಿತ ಕನ್ನಡ ಜನಸಮೂಹವು ಸಂಘಕ್ಕೆ ಬೆಂಬಲವನ್ನು ಕೊಟ್ಟಿತು. ಶಿಕ್ಷಣ-ಖಾತೆಯ ವರಿಷ್ಠಾಧಿಕಾರಿಗಳ ಕಡೆಗೆ ಕನ್ನಡಿಗರ ದೂರುಗಳೆಲ್ಲ ಏಕಮುಖವಾಗಿ ಬರೆಹದ ಮೂಲಕ ಕಳಿಸಲಾದುವು. ಹೀಗೆ ಇತ್ತಕಡೆಯ ಕನ್ನಡಿಗರು **ಕರ್ನಾಟಕ ವಿದ್ಯಾವರ್ಧಕ ಸಂಘ**ವನ್ನು ಮುಂದೆಮಾಡಿಕೊಂಡು, ಮರಾಠೀ ಅಧಿಕಾರಿಗಳ ಈ ಒಳಸಂಚನ್ನು ನಿಷ್ಠುರವಾಗಿ ಪ್ರತಿಭಟಿಸಿ ನಿಂತುದರ ಮೂಲಕವಾಗಿಯೇ, ಅವರು ಒಡ್ಡಿದ ಮೋಹಜಾಲವು ನಿರರ್ಥಕವಾಗಿ ಇತ್ತಕಡೆಯ ಕನ್ನಡ ಶಾಲೆಗಳೆಲ್ಲ ಅಚ್ಚಗನ್ನಡವಾಗಿಯೇ ಉಳಿಯಲು ಅವಸರವುಂಟಾಯಿತು; ಈ ಭಾಗದಲ್ಲೆಲ್ಲ ಹರಡಬೇಕೆಂದಿದ್ದ ಮರಾಠಿಯ ಸದ್ದು ಅಡಗಿತು.

ಕಂಪನೀ ಸರಕಾರದ ಆಡಳಿತದಲ್ಲಿ ೧೮೩೦ ರ ಸುಮಾರಿಗೆ ಸಾರ್ವಜನಿಕ ಶಿಕ್ಷಣಕ್ಕೆ ಪ್ರಾರಂಭವಾದಾಗ, ಈ ಪ್ರದೇಶಕ್ಕೆಲ್ಲ ಆಗಿನ ಆಡಳಿತಗಾರರಿಂದ ಕೊಡಲಾಗಿದ್ದ “ ದಕ್ಷಿಣ ಮಹಾರಾಷ್ಟ್ರ ” ಎಂಬ ಹಂಡಬಂಡ ಹೆಸರಿನ ಅನುಸಂಧಾನದಿಂದ, ಇಲ್ಲಿ ಸ್ಥಾಪಿತವಾಗಿದ್ದುವೆಲ್ಲ ಮರಾಠೀ ಶಾಲೆಗಳೇ. ೧೮೬೦ ರ ಸುಮಾರಿಗೆ, ಇಲ್ಲಿಯ ಜನಜೀವನದ ಭಾಷೆಯು ಕನ್ನಡವೇ ಎಂದು ಮನಗಂಡ ಆಗಿನ ಎಜ್ಯುಕೇಶನಲ್ ಇನ್ಸಪೆಕ್ಟರ್ ಮಿ. ರಸೆಲ್ ಎಂಬವರು ಮುಂಬಯಿ ಸರಕಾರದೊಡನೆ ಒಂದುಬಗೆಯ ಹೋರಾಟವನ್ನೇ ಹೂಡಿ, ಇಲ್ಲಿ ಎಲ್ಲ ಕಡೆಗೆ ಕನ್ನಡ ಶಾಲೆಗಳನ್ನೇ ನೆಲೆಗೊಳಿಸಿದರು. ಹೀಗೆ ನಾಲ್ವತ್ತು ವರ್ಷಗಳಿಗಿಂತ ಹೆಚ್ಚು ಕಾಲ ನಡೆದುಬಂದಿದ್ದ ಕನ್ನಡ ಶಾಲೆಗಳು, ಅವುಗಳಿಗೆ ಪೋಷಕವಾಗಿದ್ದ ಕನ್ನಡ ಟ್ರೇನಿಂಗ್ ಕಾಲೇಜು ಇವುಗಳ ಮೂಲಕ ಕನ್ನಡಕ್ಕೆ ಒಂದು ಬಗೆಯ ಸ್ಥಿರತೆಯು ಇಲ್ಲಿ ಬರಲು ಅನುಕೂಲಕಾಲ ಒದಗಿತ್ತು.

ದಿವಂಗತ ವೆಂಕಟ ರಂಗೋ ಕಟ್ಟಿಯವರು ಪ್ರಿನ್ಸಿಪಾಲರಾಗಿರುವ ವರೆಗೆ ಟ್ರೇನಿಂಗ್ ಕಾಲೇಜಿನಿಂದ ಹೊರಬಿದ್ದ ಕನ್ನಡ ಶಾಲೆಗಳ ಶಿಕ್ಷಕರು ಕನ್ನಡದ ಅಧ್ಯಾಪನದಲ್ಲಿ ನುರಿತವರೂ ಕನ್ನಡದ ಅಭಿಮಾನದ ಪುರಸ್ಕರ್ತರೂ ಆಗಿರುತ್ತಿದ್ದರೆಂಬುದಕ್ಕೆ **ಸ್ವರ್ಗಸ್ಥ ಶ್ರೀಶಾಂತಕವಿ**ಗಳ ದೃಷ್ಟಾಂತವನ್ನೇ ಕೊಡಬಹುದು. ಮುಂದೆ ಟ್ರೇನಿಂಗ್ ಕಾಲೇಜಿನ ವಾತಾವರಣವೂ ಕೆಡಹತ್ತಿತು. ಅಲ್ಲಿಯ ಕನ್ನಡ ಶಿಕ್ಷಣದ ತರಗತಿಯು ಕೆಳಗಿಳಿಯಹತ್ತಿತು. ಹುಟ್ಟುಗನ್ನಡಿಗರಲ್ಲದ, ಕನ್ನಡವನ್ನೆಂದೂ ಕಣ್ಣೆತ್ತಿ ನೋಡದ, ಹಾಗೂ ಹೀಗೂ ಕನ್ನಡ ಮಾತನಾಡಬಲ್ಲ ಮರಾಠೀ ಪದವೀಧರರು ಕಾಲೇಜಿನ ಶಿಕ್ಷಕವರ್ಗದಲ್ಲಿ ಸಮಾವಿಷ್ಟರಾದರು. ಹೀಗೆ ಇತ್ತ ಕಡೆಗೆಲ್ಲ ಮತ್ತೆ ಕನ್ನಡಕ್ಕೆ ಅವನತಕಾಲವು ಆರಂಭವಾದ ಲಕ್ಷಣಗಳು ತಲೆಯೆತ್ತುತ್ತಿರುವಾಗಲೇ ಎಜ್ಯುಕೇಶನಲ್ ಇನ್ಸ್‌ಪೆಕ್ಟರ್ ಸಹಸ್ರಬುದ್ಧೇಯವರಿಂದ, ಇತ್ತ ಕಡೆಯ ಶಾಲೆಗಳಲ್ಲೆಲ್ಲ ಮತ್ತೆ ಮರಾಠಿಯನ್ನು ಕಲಿಸುವ ಏರ್ಪಾಡಾಗಿ ಕನ್ನಡಕ್ಕೆ ಮುಂದೆ ಕೊಡಬಹುದಾದ ಸಮಾಧಿಯು ತಗ್ಗು ತೋಡುವ ಸನ್ನಾಹವೇ ಮಾಡಲ್ಪಟ್ಟಿತೆಂದು ಹೇಳಬಹುದು. ಆದರೆ ಎಚ್ಚತ್ತ ಕನ್ನಡಿಗರ ಸುದೈವದಿಂದ ಆ ಕುಯೋಗವು ತಪ್ಪಿತು. ಕನ್ನಡವು ಇನ್ನೂ ನಾಲ್ವತ್ತು ಕಾಲ ಇಲ್ಲಿ ಕಾಲೂರಿ ನಿಲ್ಲುವುದಕ್ಕೆ ಅವಕಾಶವಾಯಿತು. ಕನ್ನಡಿಗರು ಈ ಎಲ್ಲ ಸಂದರ್ಭಗಳಲ್ಲಿ ತಮ್ಮ ಭಾಷೆಯ ವರ್ಚಸ್ಸವನ್ನೂ ಹೆಚ್ಚಳವನ್ನೂ ಮಹತ್ತ್ವವನ್ನೂ ಉಳಿಸಿಕೊಳ್ಳುವುದಕ್ಕೆ ಪ್ರಯತ್ನಪಟ್ಟರೇ ಹೊರತು, ಮರಾಠಿಗೆ ಇಲ್ಲಿಂದ ಎಪ್ಪಲಗಾಟ ಕೊಡಬೇಕೆಂಬ ಪ್ರಯತ್ನವನ್ನು ಯಾರೂ ಎಂದೂ ಮಾಡಲಿಲ್ಲ. ಮರಾಠಿಯನ್ನು ಕನ್ನಡ ಶಾಲೆಗಳಲ್ಲಿ ಸೇರಿಸುವ ಉಪಕ್ರಮಕ್ಕೆ ವಿದ್ಯಾವರ್ಧಕಸಂಘವು ಮಾಡಿದ ವಿರೋಧದಲ್ಲಿ, **ದಿವಂಗತ ಘಾಟಕ ಗುರುನಾಥರಾಯ**ರಂತಹ ಕೊಂಕಣಸ್ಥ ಸದ್ಗೃಹಸ್ಥರೂ ಪಾಲುಗಾರರಾಗಿದ್ದರೆಂಬುದೊಂದೇ ಸಂಗತಿಯಿಂದ, ಈ ಸಂದರ್ಭದೊಳಗಿನ ಕನ್ನಡಿಗರ ಹೋರಾಟವು ನ್ಯಾಯ್ಯವಾದದ್ದಿತ್ತೆಂಬುದು ಸ್ಪಷ್ಟವಾಗುವಂತಿದೆ. ಕನ್ನಡವನ್ನು ಕಾಯುವುದಕ್ಕೆ ಇಷ್ಟೊಂದು ಹೆಣಗಬೇಕಾದ ಕನ್ನಡಿಗರು, ಸಾರ್ವಜನಿಕ ಜನಜೀವನದಲ್ಲಿ ಮರಾಠಿಗೆ ಎಂದೂ ಅಪಮಾನಮಾಡಲಿಲ್ಲ; ತಿರಸ್ಕಾರ ತೋರಿಸಲಿಲ್ಲ; ವಿರೋಧದ ಮಾತಂತೂ ದೂರವೇ ಉಳಿಯಿತು. ಧಾರವಾಡದ ಸಾರ್ವಜನಿಕ ಸಭೆಗಳಲ್ಲಿ ಆಗತಕ್ಕ ಮರಾಠೀ ಭಾಷಣಗಳನ್ನು ಕನ್ನಡಿಗರು– ತಮಗೆ ಅವು ತಿಳಿಯಲಿ ತಿಳಿಯದಿರಲಿ– ಸುಮ್ಮನೆ ಕುಳಿತು ಕೇಳುತ್ತಿದ್ದರು. ಪುಣೆಯ ಪ್ರಮುಖ ಸಾರ್ವಜನಿಕ ಕಾರ್ಯಕರ್ತರು ಇತ್ತಕಡೆಗೆ ಬಂದಾಗಲೆಲ್ಲ ಅವರ ಉಪನ್ಯಾಸಗಳು ಮರಾಠಿಯಲ್ಲಿಯೇ ಆಗುತ್ತಿದ್ದುವು. ೧೯೦೩ರಲ್ಲಿ ಮುಂಬಯಿ ಪ್ರಾಂತಿಕ ಪರಿಷತ್ತು ಈ ಊರಲ್ಲಿ ಕೂಡಿದಾಗ, ಲೋಕಮಾನ್ಯ ಟಿಳಕರು ಅವರ ಶಿಷ್ಯರು ಅನುಚರರು ಇತ್ತಕಡೆಗೆ ಬಂದಾಗಲೆಲ್ಲ ಅವರವರ ಭಾಷಣಗಳು ಮರಾಠಿಯಲ್ಲಿಯೇ ಆಗುತ್ತಿದ್ದುವು. ೧೯೦೭ರಲ್ಲಿ ಈ ಊರಲ್ಲಿ **ಕರ್ನಾಟಕದ** ಔದ್ಯೋಗಿಕ ಪರಿಷತ್ತು ಕೂಡಿದಾಗಲೂ ಎಷ್ಟೋ ಮರಾಠೀ ಭಾಷಣಗಳಾದುವು. ಆದರೆ ಯಾವ ಪ್ರಸಂಗದಲ್ಲಿಯೂ ಮರಾಠಿಗೆ ವಿರೋಧವೆಂಬುದು ಎಲ್ಲಿಯೂ ಕಂಡುಬರುತ್ತಿರಲಿಲ್ಲ. ಕನ್ನಡವನ್ನು ಹತ್ತಿಕ್ಕಿ ಮುಚ್ಚಿ ಮೂಲೆಗುಂಪುಮಾಡಿದರೂ ಮಾಡಬಹುದೆಂಬಷ್ಟರ ಮಟ್ಟಿಗೆ ಇಲ್ಲಿಯ ಮರಾಠೀ ಅಧಿಕಾರಿಗಳು ನಡಿಸಿದ ಪ್ರಯತ್ನಗಳಿಗೆ ವಿರೋಧ ಮಾಡಿದ ಕನ್ನಡಿಗರು, ಮನುಷ್ಯಸ್ವಭಾವಕ್ಕನುಗುಣವಾದ ಒಂದು ಬಗೆಯ ಮುಯ್ಯಿದ ಭಾವನೆಯಿಂದ ಪ್ರೇರಿತರಾಗಿ ಆಗಿನಿಂದಲೆ ಮರಾಠಿಗೆ ವಿರೋಧಮಾಡಿದ್ದರೂ ಒಂದು ಪಕ್ಷ ನ್ಯಾಯ್ಯವೂ ಕ್ಷಮ್ಯವೂ ಆಗಬಹುದಾಗಿತ್ತೇನೋ ಎಂದು ಎನಿಸಿದರೆ ತಪ್ಪಾಗಲಾರದು. ಆದರೆ ಕನ್ನಡಿಗರ ನಿಸರ್ಗಪ್ರವೃತ್ತಿಯೇ ಔದಾರ್ಯಪೂರ್ಣವಾದುದರಿಂದ, “ ತಮ್ಮದನ್ನು ಹೆರವರು ಕಸಿದುಕೊಳ್ಳಯತ್ನಿಸಿದಾಗ ಅದನ್ನಷ್ಟು ಉಳಿಸಿಕೊಂಡರೆ ಸಾಕು; ಪರರಿಗೆ ತೊಂದರೆಕೊಟ್ಟು ಅವರ ಮನಸ್ಸನ್ನು ನೋಯಿಸುವುದು ಬೇಡ ' ಎಂಬ ಸ್ವಸಂರಕ್ಷಣೆಯ (defensive) ತತ್ತ್ವವನ್ನೇ ಅವರು ಅವಲಂಬಿಸಿದರಲ್ಲದೆ ಏರಾಟಿಕೆಯ (offensive) ಮಾರ್ಗವನ್ನು ಅಂತಹ ಪ್ರಸಂಗವೇ ಬರುವವರೆಗೆ ಸರ್ವಥಾ ಅವಲಂಬಿಸಲಿಲ್ಲವೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಕನ್ನಡ ಮರಾಠೀವಾದದ “ **ಗುಪ್ತಾನುಸಂಧಾನ** ” ಅಥವಾ “ **ಪ್ರಸರಣ ಪ್ರಯತ್ನ** ” ಎಂಬ ಎರಡನೆಯ ಘಟ್ಟವು ಇಲ್ಲಿಗೆ ಪರಿಸಮಾಪ್ತವಾಯಿತು. ಮುಂದಿನ ಘಟ್ಟಗಳನ್ನು ಮತ್ತೆ ಮುಂದೆ ನೋಡೋಣ!



(೩೮೦ ನೆಯ ಪುಟದಿಂದ ಮುಂದುವರಿದುದು)

ಕಾತರವು ನೋಡುವಂತಹದಿತ್ತು. ರಾಮೂನ ಈ ವಿಲಕ್ಷಣ ಪ್ರಶ್ನೆಯಿಂದ ಹೆಂಡತಿಗೆ ತುಸು ನಾಚಿಕೆಯಾಯಿತು. ನಾಚಿಕೆ ಬೆರೆತ ನಗುಗಳನ್ನು ತೇಲಿಸುತ್ತ ' ಹೌದು ಮೂರು ತಿಂಗಳಾಯಿತು ' ಎಂದಳು. ರಾಮೂ ಬಿಟ್ಟ ನಿಟ್ಟುಸಿರು ಕೋಣೆಯ ಗೋಡೆಯನ್ನು ಅಪ್ಪಳಿಸಿ ಬಿರುಗಾಳಿಯಲ್ಲಿ ಕೂಡಲು ಹೊರಟಿತು. ನಿರಾಶೆಯ ಕೆಕ್ಕರದೃಷ್ಟಿಯಿಂದ ಹೆಂಡತಿಯನ್ನು ನೋಡುವ ರಾಮೂನನ್ನು ನೋಡುವುದು ಯಾರಿಗೆ ಸಾಧ್ಯ ? ಪ್ರಣಯದ ಪರಿಸಮಾಪ್ತಿಯಾಯಿತೆಂದುಕೊಂಡನವ !

ಆಕಾಶದ ದಾಳಿಗಾಗಿ ಎಚ್ಚರಿಕೆ [A. R. P.]

Air Raid Precaution

ಪ್ರೊ. ಎಲ್. ಕೆ. ಗುಂಜೀಕರ್ ಎಂ. ಎಸ್‌ಸಿ.

ಇಂದಿನ ಯುದ್ಧದಲ್ಲಿ ಪ್ರಯೋಗಿಸಲಾಗುತ್ತಿರುವ ವಿಷವಾಯುಗಳಿಗಾಗಿ, ನಾವು ದೂರದಲ್ಲಿದ್ದರೂ ಮುಂಜಾಗ್ರತೆಯಿಂದ ಇರಬೇಕಾಗಿದೆ; ಆದುದರಿಂದಲೆ ನಮಗೆ ವಿಷವಾಯುಗಳ ಗುಣ-ಸ್ವರೂಪ ಪರಿಚಯವು ಅತ್ಯಂತ ಆವಶ್ಯಕವಾಗಿದೆ. ಅದರಂತೆಯೆ ಆ ವಿಷಗಳಿಂದ ಸುರಕ್ಷಿತರಾಗಿ ಇರುವುದಕ್ಕೆ ಮಾಡಬೇಕಾದ ಉಪಾಯಗಳ ಪರಿಚಯವೂ ತುಂಬ ಅವಶ್ಯವಾಗಿದೆ.

★

ಯುದ್ಧದ ಸುದ್ದಿಗಳನ್ನು ಇಲ್ಲಿ ಕುಳಿತು ಓದುವವರಿಗೆ ಅವು ಮನೋರಂಜಕವೂ ಎನಿಸಬಹುದು, ಹೆದರಿಕೆಯವೂ ಎನಿಸಬಹುದು. ಇಂದಿನ ಯುದ್ಧವು ಇಂತಹ ಸ್ಥಳದಲ್ಲಿಯೆ ಆಗಬೇಕೆಂದು ನಿರ್ಬಂಧವಿಲ್ಲ. ಕೇವಲ ಸೈನಿಕರಷ್ಟೇ ಯುದ್ಧದಲ್ಲಿ ಭಾಗ ವಹಿಸಬೇಕೆಂಬ ನಿಯಮವಿಲ್ಲ. ಯುದ್ಧದಲ್ಲಿ ಸೇರಿದ ನಾಡಿನ ಪ್ರತಿಯೊಬ್ಬ ಮನುಷ್ಯನೂ ಯುದ್ಧದ ಅಂಗವಾಗಿರುತ್ತಾನೆ. ಪ್ರತಿಯೊಬ್ಬ ಮನುಷ್ಯನೂ ಇಷ್ಟಲ್ಲಿಯೇ ಇದ್ದು ಒಂದಿಲ್ಲೊಂದು ಬಗೆಯಿಂದ ತನ್ನ ಕಾರ್ಯ-ಕರ್ತವ್ಯಗಳನ್ನೂ ಮಾಡಲೇಬೇಕಾಗುವುದು. ಆಧುನಿಕ ಯುದ್ಧಕ್ರಮವು ದೇಶದ ಎಲ್ಲರನ್ನೂ ಆವರಿಸಿಕೊಂಡಿರುವುದು.

ಇಂದು ಯುದ್ಧವು ಅನೇಕ ರೀತಿಯಲ್ಲಿ ನಡೆಯುವುದು. ಅವುಗಳಲ್ಲಿ ನೆಲದಮೇಲಿನ ಯುದ್ಧವೊಂದುಬಗೆ. ಇದರಲ್ಲಿ ಕೇವಲ ಸೈನಿಕರು ಎಲ್ಲಿ ತಳವೂರಿಕೊಂಡಿರುವರೋ ಅಲ್ಲಿ ಅವರು, ಶತ್ರುಪಕ್ಷದವರ ಸಂಗಡ ಯುದ್ಧಮಾಡುತ್ತಾರೆ; ಮತ್ತು ಶತ್ರುಗಳನ್ನು ಮುಂದುವರಿಯದಂತೆ ವ್ಯೂಹಗಳನ್ನು ಒಡ್ಡುತ್ತಿರುತ್ತಾರೆ. ಆದರೆ ಇಂದಿನ ವಿಜ್ಞಾನದ ಬೆಳವಣಿಗೆಯ ಮೂಲಕ ವಿಮಾನಗಳು ಹುಟ್ಟಿ ಹಾರಾಡತೊಡಗಿದುದು ಎಲ್ಲರಿಗೂ ಗೊತ್ತಿದ್ದ ವಿಷಯವಾಗಿದೆ. ವಿಮಾನಗಳ ಸಹಾಯದಿಂದ, ಈಗ ಎಲ್ಲಿ ಬೇಕಾದಲ್ಲಿ ಹೋಗಲಿಕ್ಕೆ ಆಗುವುದು. ನೆಲದ ಯುದ್ಧವನ್ನು ಕೋಟೆ-ಕೊತ್ತಲಗಳ ಮೂಲಕ ತಡೆಯಬಹುದು. ಆದರೆ ವೈಮಾನಿಕ ದಾಳಿಗಳು ಮಾತ್ರ ಇಂತಹ ಒಡ್ಡುಗಳಿಗೆ ಸೊಪ್ಪು ಹಾಕಲಾರವು; ಮತ್ತು ಈ ವೈಮಾನಿಕ ದಾಳಿಯಿಂದ—ಯುದ್ಧದ ಸ್ಥಾನವು ನಿರ್ದಿಷ್ಟವಾಗದೆ ಇರುವುದರಿಂದ—ಇಡಿಯ ದೇಶವೇ ಆ ದಾಳಿಗಾಗಿ ಎಚ್ಚರಿರಬೇಕಾಗುತ್ತದೆ. ಆದಕ್ಕೇ ಈಗ ಖಂಡಿತ ಹೇಳಬೇಕಾಗಿದೆ ಎಲ್ಲರಿಗೂ ಎಚ್ಚರಿಕೆಯನ್ನು. ಇಂದು ರಾತ್ರಿ ನೆಮ್ಮದಿಯಾಗಿ ಮಲಗಿದವರು, ಬಾಂಬಿನ ಸಪ್ಪಳಕ್ಕೆ ಯಾವಾಗ ಏಳುವ ಸಂಭವ ಬಂದೀತೆಂಬುದು ತಿಳಿಯದು. ಆದುದರಿಂದಲೆ ಎಚ್ಚರಿಕೆ — ನಿದ್ರೆಯಲ್ಲಿಯೂ ಎಚ್ಚರಿಕೆ! ಮಬ್ಬಿನಲ್ಲಿ ಕಾಲಕಳೆಯುವುದಕ್ಕಿಂತ ಎಚ್ಚರಾಗಿರಿ! ಮುಂದೆಬರುವ ಗಂಡಾಂತರಗಳನ್ನು ಲಕ್ಷಿಸಿರಿ! ಯಾವುದೇ ವಿಷಯದ ಮುನ್ನೆಚ್ಚರಿಕೆಯು ಮುಂಬರುವ ಸಂಕಟಗಳಿಗೆ ಮದ್ದು ಇದ್ದಂತೆ!

ಆಕಾಶದ ದಾಳಿಗಳನ್ನು ಎರಡು ರೀತಿಯಲ್ಲಿ ಎದುರಿಸಬಹುದು. ಒಂದು ನಮ್ಮ ಯುದ್ಧಮಾಡುವ ವಿಮಾನಗಳ ಸಹಾಯದಿಂದ ವೈರಿಗಳ ಆಕ್ರಮಣವನ್ನು ತಡೆಯುವುದು. ಒಮ್ಮೊಮ್ಮೆ ಶತ್ರುಗಳ ವಿಮಾನಗಳು ಏರಿಬಂದರೆ ತೋಫು (ಆ್ಯಂಟೀ ಏರ ಕ್ರ್ಯಾಫ್ಟ್ ಗನ್ಸ್) ಗಳಿಂದ ಅವುಗಳನ್ನು ಹೊಡೆದೋಡಿಸಬಹುದು. ಇಲ್ಲವೆ ಆಕಾಶದಲ್ಲಿ ಆಕಾಶಬುಟ್ಟಿಯ (Balloon) ಕಟ್ಟನ್ನು ಮಾಡಿದರೆ, ಅವುಗಳಿಗೆ ವಿಮಾನಗಳು ತಾಗಿ ಸ್ಫೋಟವಾಗಿ, ಶತ್ರುಗಳ ಕಾರ್ಯಕ್ಕೆ ತಡೆಯಾಗುವುದು. ಇದು ಯಾವುದೂ ಸಾಧ್ಯವಾಗದಿದ್ದರೆ ನೆಲದ ಮೇಲಿಂದಲೇ ಸಾಂಘಿಕವಾಗಿ — ಒಂದೂಕುಗಳಿಂದ — ವಿಮಾನಗಳು ಅನತಿ ದೂರದಲ್ಲಿದ್ದರೆ—ಗುಂಡುಹಾರಿಸಬಹುದು. ಈ ಬಗೆಯಾಗಿ ನಮ್ಮ ಸೈನಿಕರ ಮುಖಾಂತರ ಶತ್ರುಗಳ ಮುಂಬರುವಿಕೆಯನ್ನು ಸಹಜವಾಗಿ ತಡೆಯಬಹುದು. ಆದರೆ ವೈಮಾನಿಕ ದಾಳಿಯು ಇಂತಹ ನಿರ್ದಿಷ್ಟವಾದ ಪ್ರದೇಶದ ಮೇಲೆಯೇ ಆದೀತೆಂದು ಹೇಳಲಾಗುವುದಿಲ್ಲ. ಅದು ಕಾರಣ ಸೈನಿಕರನ್ನು — ಶಸ್ತ್ರಾಸ್ತ್ರ ಸುಸಜ್ಜಿತ ಸೈನಿಕರನ್ನು — ಎಲ್ಲಕಡೆಯಲ್ಲಿಯೂ ಇಡುವುದು, ಯಾವುದೊಂದು ದೇಶಕ್ಕೆ ಅಸಾಧ್ಯವಾದ ವಿಷಯ. ಆದರೆ ಆ ದಾಳಿಯ ಭೀಕರ ಪರಿಣಾಮವು ಮಾತ್ರ ಇಡಿಯ ದೇಶವನ್ನೇ ಆವರಿಸುವುದರಿಂದ, ದೇಶದಲ್ಲೆಲ್ಲ—ಸೈನಿಕರಿರಲಿ ಇಲ್ಲದಿರಲಿ — ಪೌರಜನರು ಎಚ್ಚರಿಕೆಯಿಂದಲೂ ಜಾಣತನದ ಜಾಗರೂಕತೆಯಿಂದಲೂ ನಡೆದುಕೊಳ್ಳಬೇಕಾಗುವುದು. ಆದಕ್ಕಾಗಿಯೇ ಎಚ್ಚರಿಕೆ! ಮುನ್ನೆಚ್ಚರಿಕೆ!

* * *

ಆಕಾಶದಾಳಿಯಾಗುವುದು ಎರಡು ತೆರದಿಂದ: ಒಂದು ಬಾಂಬಿನ ಪ್ರಹಾರದಿಂದ; ಇನ್ನೊಂದು ವಿಷವಾಯುವಿನ ಉಪಯೋಗ

ದಿಂದ. ಬಾಂಬುಗಳಲ್ಲಿ ಎಲ್ಲವೂ ಒಂದೇ ತೆರನಾದುವು ಇರುವುದಿಲ್ಲ. ಕೆಲವು ಸ್ಫೋಟಕವಾದುವೂ ಇನ್ನು ಕೆಲವು ಕೇವಲ ಬೆಂಕಿಹಚ್ಚುವುವೂ ಇರುವುವು. ಬೆಂಕಿಹಚ್ಚುವ ಬಾಂಬುಗಳಿಗೆ 'ಇನ್ ಸೆಂಡಿಯರಿ ಬಾಂಬ್' ಎನ್ನುವರು. ಇದರಿಂದ ಎಲ್ಲ ಕಡೆಗೆ ಬೆಂಕಿ ಹತ್ತಿ ಹಾಹಾಕಾರವಾಗುವುದು. ಈ ಬಾಂಬುಗಳಿಂದ ಕಾಪಾಡಿಕೊಳ್ಳಬೇಕಾದರೆ ಬೆಂಕಿಯನ್ನು ಆರಿಸುವ ಎಲ್ಲ ಉಪಕ್ರಮಗಳನ್ನೂ ಕೈಕೊಳ್ಳಬೇಕಾಗುವುದು. ಹತ್ತಿದ ಬೆಂಕಿಯನ್ನು ಆರಿಸಿದರೆ ಇದರ ಬಾಧೆ ಕಡಿಮೆಯಾಯಿತೆಂದೆನ್ನಬೇಕು.

ಇನ್ನೊಂದುಬಗೆಯುದಾದ ಆಸ್ಫೋಟಕ ಬಾಂಬು ತುಂಬ ಅಪಾಯಕಾರಿಯಾದುದು. ಅದು ಸುಮಾರು ಒಂದು ಟನ್ನು ಭಾರವುಳ್ಳದ್ದಿರುವುದು. ಅದು ಬಿದ್ದರೆ ಅದರ ಪರಿಣಾಮವು ಎರಡು ನೂರು ಫೂಟು ವ್ಯಾಸವುಳ್ಳ ವರ್ತುಲದಷ್ಟು ಪ್ರದೇಶವನ್ನು ಆಕ್ರಮಿಸುವುದು. ಸ್ಫೋಟವಾದ ಮೇಲೆ ಅದರ ತುಣುಕುಗಳು ಸುತ್ತಲೂ ಸಿಡಿಯುವುವು. ಅದರಿಂದ ಸಂರಕ್ಷಿಸಿಕೊಳ್ಳಬೇಕಾಗಿದ್ದರೆ ಅದರ ಸಲುವಾಗಿಯೇ ಮಾಡಿದಂಥ ಎಂದರೆ ಕಲ್ಲು, ಗಚ್ಚು ಸೀಮೆಂಟುಗಳಿಂದ ಕಟ್ಟಿಸಿದ ಮನೆ (ಬಾಂಬ್ ಪ್ರೂಫ್ ಸೆಲ್ಟರ್ಸ್) ಗಳಲ್ಲಿ ಸೇರಿಕೊಳ್ಳಬೇಕು. ಅಥವಾ ನೆಲಮನೆಗಳಲ್ಲಿ ಅಡಗಬೇಕು. ಬಾಂಬು ಬೀಳುವಕಾಲಕ್ಕೆ ಒಂದು ವಿಸ್ತಾರವಾದ ಬಯಲುಪ್ರದೇಶದಲ್ಲಿದ್ದು, ಯಾವ ಸಂರಕ್ಷಣೆಯ ಸಾಧನಗಳೂ ಸಮೀಪದಲ್ಲಿರದಿದ್ದರೆ, ಅಲ್ಲಿಯೇ ಇರುವ ಸಣ್ಣ ಪುಟ್ಟ ತಗ್ಗುಗಳಲ್ಲಿ ಹುದುಗಿಕೊಳ್ಳಬೇಕು. ಇವಾವುವೂ ತೋರದೆ ಇದ್ದರೆ ಸಮಾಂತರವಾಗಿ ನೆಲದ ಮೇಲೆ ಮಲಗಿಕೊಳ್ಳಬೇಕು. ಯಾಕೆಂದರೆ ಅವು—ಆ ಬಾಂಬಿನ ತುಣುಕುಗಳು— ವರ್ತುಲದ ಸ್ಪರ್ಶರೇಖೆಗನುಸಾರವಾಗಿ ಸಿಡಿಯುವುವು. ಕಾರಣ ನೆಲದ ಮೇಲೆ ಉದ್ದಕ್ಕೆ ಮಲಗಿದವರಿಗೆ ಅಪಾಯವಾಗುವುದಿಲ್ಲ. ಬೀದಿಯಲ್ಲಿ ಹಾಯ್ದುಹೋಗುವಾಗ ಬಾಂಬಿನ ಸ್ಫೋಟವಾದರೆ ಪಕ್ಕದಲ್ಲಿ ಇರುವ ಕಾಲುವೆಗಳಲ್ಲಿ ಒರಗಬೇಕು. ಅದರಲ್ಲಿಯೂ ಆ ಕಾಲುವೆಯು ದುಂಡಾಗಿರುವ ಭಾಗದಲ್ಲಿ ಒರಗುವುದು ಹೆಚ್ಚು ಒಳ್ಳೆಯದು. ಮುಖ್ಯವಾಗಿ ಬಾಂಬು ಸ್ಫೋಟವಾಗುವ ವೇಳೆಯಲ್ಲಿ ಯಾರೂ ಯಾವ ಕಾರಣದಿಂದಲೂ ಮನೆಯ ಹೊರಗೆ ಇರಕೂಡದು. ಮನೆಗಳು ಮಣ್ಣಿನ ಮಾಳಿಗೆಯವು ಇದ್ದರೆ ಹೆಚ್ಚು ಸುರಕ್ಷಿತ. ಯಾಕೆಂದರೆ ಬಾಂಬು ಸ್ಫೋಟವಾಗುವುದು ಕಠಿನವಸ್ತುವಿಗೆ ತಾಗಿದಾಗ. ಮೆತ್ತಗಿನ ವಸ್ತುವಿಗೆ ತಾಗಿದರೆ ಆ ಬಾಂಬಿನಲ್ಲಿ ಅಷ್ಟು ರಭಸವಿರುವುದಿಲ್ಲ. ಆದುದರಿಂದ ಯಾವಾಗಲೂ ಯಾವುದೊಂದು ಸುರಕ್ಷಿತ ಸ್ಥಳದಲ್ಲಿ ಇರುವುದು ಒಳಿತು. ಮುಂದಿನದನ್ನು ಅರಿತುಕೊಂಡು, ಅಧಿಕಾರಿಗಳು ಆಕಾಶದಾಳಿಯಾಗಬಹುದೆಂದು ಮುಂಚಿತವಾಗಿಯೆ ಭಯಸೂಚಕ ಸಂಕೇತಗಳನ್ನು ಮಾಡಬಹುದು. ಆ ಕಾಲಕ್ಕೆ ಎಲ್ಲರೂ ಸ್ವಪರಹಿತದ ಸಲುವಾಗಿ ಮೇಲೆ ಹೇಳಿದ ಕಟ್ಟಳೆಗಳನ್ನು ಪಾಲಿಸಬೇಕು.

* * *

ಎರಡನೆಯ ಬಗೆಯದಾದ ಹಿಂಸಾತ್ಮಕ ದಾಳಿಯೆಂದರೆ ವಿಷವಾಯುವಿನ ಪ್ರಯೋಗ. ಆ ವಿಷವಾಯುವನ್ನು ಒಂದು ಬಾಂಬಿನಲ್ಲಿ ಅಡಗಿಸಿ ಒಗೆಯಬಹುದು. ಬಾಂಬು ಸ್ಫೋಟವಾದೊಡನೆ ಆ ವಿಷವಾಯುವು ಸುತ್ತಲೂ ಹರಡುವುದು. ಅಥವಾ ವಿಮಾನದ ಕೆಳಗೆ ಒಂದು ವಿಷವಾಯು ಸಂಗ್ರಹದ ಪೆಟ್ಟಿಗೆಯನ್ನು ಕಟ್ಟಿಕೊಂಡು ಹೊರಟು ಹಾರಾಡಿ, ಅದು ವಿಷವಾಯುವನ್ನು ಹರಡಬಹುದು. ಮನುಷ್ಯನಿಗೆ ಈ ವಿಷವಾಯುವಿನಿಂದ ಅನೇಕ ತರದ ಅಪಾಯಗಳು ಒದಗುವುವು. ಪ್ರಾಣವಾಯುವನ್ನು ಸೇವಿಸಿದರೆ ಮಾತ್ರ ಮನುಷ್ಯನು ಬದುಕುವನು; ಎಂದಮೇಲೆ ವಿಷವಾಯುವಿನಿಂದ ಬದುಕುವುದು ಸಾಧ್ಯವೇ? ವಿಷವಾಯುಗಳು ಮನುಷ್ಯನಿಗೆ ತಾಗಿದರೆ ಒಮ್ಮೊಮ್ಮೆ ಮೈಮೇಲೆ ಗುಳ್ಳೆಗಳೇಳುವುವು. ಇನ್ನೂ ಮೈ ಬರಿಯೆ ತಿಂದಿಬಿಡುವುದು. ಕೆಲವು ವಿಷವಾಯುಗಳು ಮೂಗಿನಿಂದಲೂ ದೇಹದೊಳಕ್ಕೆ ಹೋಗಬಹುದು. ಅವುಗಳ ವಿಕೃತ ಪರಿಣಾಮದಿಂದ ಆ ಆ ವಿಷವಾಯುಗಳು ಇಂತಹವೇ ಎಂದು ತಿಳಿಯಲಿಕ್ಕಾಗುವುದು. ಸಾಮಾನ್ಯವಾಗಿ 'ಕ್ಲೋರಿನ್' ವಾಯುವನ್ನೂ 'ಫಾಸಜಿನ್' ವಾಯುವನ್ನೂ 'ಸಾಸಿವೆ ಎಣ್ಣೆಯ ವಾಯು'ವನ್ನೂ ಎಲ್ಲ ಕಡೆಗೆ ಉಪಯೋಗಿಸುತ್ತಾರೆ. ಇವಲ್ಲದೆ 'ಲೆವಿಸೈಟ್' ಎಂಬುದನ್ನೂ 'ಹಾಯಿಡ್ರೋ ಸಾಯನಿಕ್ ಆ್ಯಸಿಡ್' ವಾಯುವನ್ನೂ ಉಪಯೋಗಿಸಬಹುದು. ಇವುಗಳಲ್ಲದೆ ಬೇರೆ ಬೇರೆ ದೇಶಗಳವರು ಗುಪ್ತರೀತಿಯಿಂದ ತಮ್ಮದೆ ಒಂದಾದ ವಿಶಿಷ್ಟ ಪ್ರಮಾಣದಿಂದ ವಿಷವಾಯುಗಳನ್ನು ಉಪಯೋಗಿಸುತ್ತಾರೆ. ಯಾವುದೊಂದು ವಾಯುವನ್ನು ಇಂತಹದೇ ಎಂದು ತಿಳಿಯುವುದು ಅದು ಮನುಷ್ಯನ ಮೇಲೆ ಮಾಡುವ ಪರಿಣಾಮದ ಮೂಲಕ. ಕ್ಲೋರಿನ್ ವಾಯುವು ಹಸಿರುಬಣ್ಣದುದಿದ್ದು, ಅದು ಪುಪ್ಪುಸಕ್ಕೆ ಅಪಾಯವನ್ನುಂಟುಮಾಡುವುದು. ಫಾಸ್ ಜೀನವಾಯುವು ಬಣ್ಣರಹಿತವಾದುದೂ, ಅತೀವ ಅಪಾಯಕಾರಿಯಾದುದೂ ಆಗಿರುತ್ತದೆ. ಸಾಸಿವೆಯ ವಾಯುವು ಎಣ್ಣೆಯ ರೂಪದಲ್ಲಿದ್ದು, ಅರಿವೆಗಳನ್ನೂ ಬೂಟುಗಳನ್ನೂ ಸೇರಿ, ಮನುಷ್ಯನಿಗೆ ತಗುಲಿ, ಅಪಾಯ ಮಾಡುವುದು. ಆದರಿಂದ ಮೈಮೇಲೆ ಗುಳ್ಳೆಗಳೇಳುವುವು.

ಈ ವಿಷವಾಯುಗಳಿಂದ ಮನುಷ್ಯನು ತನ್ನನ್ನು ತಾನೇ ಸಂರಕ್ಷಿಸಿಕೊಳ್ಳಬೇಕಾಗುವುದು. ವಾಯುವು ಹರಡಿದ ಕೂಡಲೆ ಒಂದು ತರದ ಕೆಟ್ಟ ನಾತವು ಬರುವುದು. ಅದೇ ವಾಯುಸೂಚಕ. ಕ್ಲೋರಿನ್, ಫಾಸ್‌ಜೀನ್ ಮುಂತಾದುವು ದೊಡ್ಡ ಗಾಳಿ ಬಿಟ್ಟರೆ ಹಾರಿಹೋಗುವುವು. ಆದರೆ ಸಾಸಿವೆಯ ವಾಯುವು ಮಾತ್ರ ಅಲ್ಲಿಯೇ ನಿಂತು ಹೆಚ್ಚು ಅಪಾಯ ಮಾಡುವುದು. ಇವುಗಳಿಂದ ಸಂರಕ್ಷಿಸಿಕೊಳ್ಳುವುದಕ್ಕೆ ಅನೇಕ ಉಪಾಯಗಳುಂಟು. ಪ್ರಾಮುಖ್ಯವಾದುದೆಂದರೆ ಸಂರಕ್ಷಕ ಮುಖವಾಡವು. ಆ ಮುಖವಾಡಗಳನ್ನು ನೀವು ನೋಡಿರಬಹುದು. ಅದು ಒಂದು ಚೀಲ; ಅದರಲ್ಲಿ ಯಾವುದೇ ತರದ ವಾಯುವು ಪ್ರವೇಶ ಮಾಡಲಾರದು. ಕಣ್ಣುಕಾಣುವುದಕ್ಕೆ ಎರಡು ಕಾಜುಗಳನ್ನು ಉಪಯೋಗಿಸಿರುವರು. ಅಲ್ಲದೆ ವಿಷವಾಯುವನ್ನು ತಡೆದು

ಪ್ರಾಣವಾಯುವನ್ನಷ್ಟೇ ದಾಟಿಸಿ ಬಿಡುವ ಯಾಂತ್ರಿಕ ಸಾಧನವೂ ಒಂದು ಇರುವುದು. ಅದಕ್ಕೆ 'ಕ್ಯಾನಿಸ್ಟರ್' (Cannister) ಎಂದು ಹೇಳುವರು. ಇವುಗಳನ್ನು ಜಾಗರೂಕ ಸರಕಾರವು ಜನರಿಗೆ ಒದಗಿಸಿ ಕೊಡುತ್ತದೆ.

ವಿಷವಾಯುವನ್ನು ಬಿಡುವುದೆಂದರೆ ಸಾಮಾನ್ಯ ವಿಷಯವಲ್ಲ. ಅದು ವಿಪರೀತ ಖರ್ಚಿನ ವಿಷಯ; ಅದನ್ನು ಪ್ರಯೋಗ ಮಾಡುವ ಕಾಲಕ್ಕೆ ವಾತಾವರಣ ಪರಿಸ್ಥಿತಿಯನ್ನು ಎಂದರೆ ಮಳೆ, ಗಾಳಿ, ಹವಾಮಾನಗಳನ್ನು ನೋಡಲೇ ಬೇಕಾಗುವುದು. ಯಾಕೆಂದರೆ ಬಿರುಗಾಳಿಯೂ ಮಳೆಯೂ ಎಷ್ಟೋ ವಾಯುಗಳನ್ನು ಹೀರಿಕೊಳ್ಳುತ್ತವೆ. ಹಾಗಾದಾಗ ವಿಷವಾಯುವು ಉಪಯುಕ್ತವಾಗಿ ಪರಿಣಮಿಸುವುದಿಲ್ಲ.

ಮುಖವಾಡಗಳ ವ್ಯವಸ್ಥೆ ಎಲ್ಲಕಡೆಗೂ ಆಗದೆ ಇದ್ದರೆ, ತಾತ್ಪೂರ್ತಿಕ ಸಂರಕ್ಷಣೋಪಾಯವನ್ನು ಈ ರೀತಿಯಾಗಿ ಮಾಡಿಕೊಳ್ಳಬಹುದು: ಒಂದು ಕೋಣೆಯಲ್ಲಿ ಹೊಕ್ಕು ಎಲ್ಲ ಕಿಟಕಿ, ಬಾಗಿಲುಗಳನ್ನು ಮುಚ್ಚಿ, ಬಿರುಕು-ಸಂದಿಗಳಲ್ಲಿ ಅರಿವೆಯ ತುಣುಕುಗಳನ್ನು ತುರುಕಿ, ಬಾಗಿಲುಗಳಿಗೂ ಕಿಟಕಿಗಳಿಗೂ ಒಂದು ಒದ್ದೆಯ ಅಥವಾ ಎಣ್ಣೆಯ ಅರಿವೆಯನ್ನು ಇಳಿಬಿಟ್ಟು, ಮಧ್ಯೆ ಕುಳಿತುಕೊಂಡರೆ ಎರಡು ಮೂರು ಗಂಟೆಯ ಕಾಲದವರೆಗೆ ಸುರಕ್ಷಿತವಾಗಿ ಇರಬಹುದು. ನೀರೂ, ಎಣ್ಣೆಯೂ ವಾಯುಗಳನ್ನು ಹೀರಿಕೊಂಡು ಮನುಷ್ಯನಿಗೆ ಅಪಾಯವನ್ನು ಕಡಿಮೆಮಾಡುವುವು.

ಒಂದುವೇಳೆ ಯಾವುದೇ ಸೌಕರ್ಯವು ಸಕಾಲಕ್ಕೆ ಒದಗದೆ ಇದ್ದರೆ—ವಿಷವಾಯುವು ಬಾಧಿಸಿದ ವ್ಯಕ್ತಿಯನ್ನು ದವಾಖಾನೆಗೆ ಕರೆತಂದು, ನೀರಿನಿಂದ ಸ್ವಚ್ಛವಾಗಿ ತೊಳೆದು ಮುಲಾಮು ಮುಂತಾದುವುಗಳಿಂದ ಆರೈಕೆಮಾಡಬೇಕು. ಇಂತಹ ಕೆಲಸಮಾಡಲಿಕ್ಕೆ ಸ್ವಯಂಸೇವಕರೂ, ಬೆಂಕಿಯನ್ನು ಆರಿಸುವ ಯಂತ್ರಸಾಧನದವರೂ ಬೇಕು. ಇವರೆಲ್ಲರೂ ಎಣ್ಣೆಯಿಂದ ಬಳೆದಂತಹ ಅಂಗಿಗಳನ್ನು ಹಾಕಿಕೊಂಡವರು ಆಗಿರಬೇಕು.

ಮುಖ್ಯವಾಗಿ ಜನತೆಯು ಶಾಂತತೆಯಿಂದಲೂ ಶಿಸ್ತಿನಿಂದಲೂ ನಡೆದುಕೊಳ್ಳಬೇಕು. ಇಡಿಯ ಊರವರೆಲ್ಲರೂ ಒಂದೇ ಮನೆತನದವರೆಂದು ಭಾವಿಸಿ, ಸಾರ್ವಜನಿಕವಾಗಿ ಒದಂತಹ ಗಂಡಾಂತರವನ್ನು ದೂರ ಮಾಡಲು ಎಲ್ಲರೂ ಹೆಣಗಬೇಕು. ಸ್ವಯಂ-ಸೇವಕರ. ಶುಶ್ರೂಷಾಪಥಕದವರ ಹೊಣೆಯನ್ನು ಸಾಮಾಜಿಕರು ತಾವೂ ಹೊತ್ತು, ತಮ್ಮ ಕೈಯಿಂದಾದಷ್ಟು ಸಹಾಯ ಮಾಡಬೇಕು. ಗಾಬರಿಯಾಗಿ ಒದರಾಡಿ, ಚೀರಾಡಿ, ಹರಿಹಾಯ್ದು ಬೀದಿಯಲ್ಲಿ ಒಂದು ರಂಪಾಟಮಾಡುವುದರಿಂದ ಹೆಚ್ಚು ಅಪಾಯವಾಗುವುದು. ಆದಕ್ಕಾಗಿ ಪೌರಜನರಲ್ಲಿಯೂ ಸೈನಿಕರಂತೆ ಶೌರ್ಯ, ಧೈರ್ಯ, ಸ್ಥೈರ್ಯ, ಶಾಂತತೆ, ತಾಳ್ಮೆ ಮುಂತಾದ ಗುಣಗಳು ಅವಶ್ಯ. ಅದೇಕೆ? ಅವೇ ಪ್ರತಿಯೊಬ್ಬ ಹೊಣೆಗಾರ ನಾಗರಿಕನ ವಿಶಿಷ್ಟ ಗುಣಧರ್ಮಗಳೆಂದು ಎಣಿಸಬಹುದು. ಎಲ್ಲರೂ ತಮ್ಮ ತಮ್ಮ ಕಾರ್ಯವನ್ನು ಅತ್ಯುತ್ಕಟತೆಯಿಂದ ಮಾಡಿದರೆ ಇಡೀ ಸಮಾಜದ ಸಂರಕ್ಷಣೆಯಾಗುವುದರಲ್ಲಿ ಸಂದೇಹವೇನೂ ಇಲ್ಲ.

ಆದಕ್ಕಾಗಿ ಎಚ್ಚರಿಕೆ! ಮುಂಜಾಗ್ರತೆ!! ಜಾಗರೂಕತೆ!!!

ಆರೋಗ್ಯಮಂದಿರ

ಆಯುರ್ವೇದ ವಿಷಯಕ ಸಚಿತ್ರಮಾಸಪತ್ರಿಕೆ

ಪನವೇಲದ ಧೂತಪಾಪೇಶ್ವರ ಕಂಪನಿಯ ಕನ್ನಡ ಮುಖಪತ್ರಿಕೆಯಾಗಿ ಇದು ಹೊರಡುತ್ತಲಿದೆ. ತಜ್ಞರಾದ ಲೇಖಕರಿಂದ ಬರೆಯಲಾದ ಆಯುರ್ವೇದ ವಿಷಯಕ ಲೇಖನಗಳೂ, ಆರೋಗ್ಯವಿಷಯಕ ಲೇಖನಗಳೂ, ಬೇರೆ ಬೇರೆ ವೈದ್ಯರ ಅನುಭವಪೂರ್ಣವಾದ ನಿದಾನ-ಚಿಕಿತ್ಸಾ ವಿಚಾರಗಳೂ ಬರುವುವು. ಪ್ರತಿಯೊಬ್ಬ ಕುಟುಂಬಿಯೂ ಇದನ್ನು ಓದುತ್ತಲಿದ್ದರೆ ಮನೆಯಲ್ಲಿ ಸ್ವಾಸ್ಥ್ಯವು ನೆಲೆಯಾಗಿ ನಿಲ್ಲದೆ ಇರದು.

ವಾರ್ಷಿಕ ಚಂದಾ ೧—೮—೦

ಬಿಡಿ ಸಂಚಿಕೆಗೆ ೦—೨—೦

ಆರೋಗ್ಯಮಂದಿರ ಕಾರ್ಯಾಲಯ,

ಯುನೈಟೆಡ್ ಎಜೆನ್ಸೀಜ್, ಹುಬ್ಬಳ್ಳಿ.

ನಮ್ಮ ಬದುಕು

(ಕಥಾಸಂಗ್ರಹ)

೧೧೨ ಪುಟದ ಸುಂದರ ಪುಸ್ತಕಕ್ಕೆ

೬ ಆಣೆ ಮಾತ್ರ ಬೆಲೆ!

'ಆನಂದಕಂದರ' ಹೊಸ ಕಥಾಸಂಗ್ರಹವಿದು. ಇದರಲ್ಲಿಯ ಆರು ಕತೆಗಳೂ ನಮ್ಮ ಬದುಕಿನಲ್ಲಿಯ ಒಂದೊಂದು ಸಮಸ್ಯಾತ್ಮಕ ಸಂನಿವೇಶಗಳನ್ನು ಚಿತ್ರಿಸಿ ತೋರಿಸುವುವು.

ಎಲ್ಲರೂ ಓದಬೇಕಾದ ಕಥೆಗಳು!

ಬೇಕಾದವರು 'ಜಯಂತಿ ಕಾರ್ಯಾಲಯ ಧಾರವಾಡ' ಈ ವಿಳಾಸಕ್ಕೆ ಬರೆಯಿರಿ!

ಇಂದಿನ ಸಂಗ್ರಾಮದ ರಂಗಭೂಮಿ

ಪ್ರೊ. ಸಿ. ಡಿ. ದೇಶಪಾಂಡೆ, ಎಂ. ಎ.

★

ಪೋಲಂಡಿನ ಸಂಗ್ರಾಮದ ನಾಟಕ ಮುಗಿದಂತಾಯಿತು. ಎಂತಲೆ ಇನ್ನು ಜರ್ಮನ-ಫ್ರಾನ್ಸಗಳ ಗಡಿಯೆ ಮುಖ್ಯ ಯುದ್ಧರಂಗವಾಗಲಿದೆ. ಸೀಗ್‌ಫ್ರೀಡ್ ಮತ್ತು ಮ್ಯಾಗಿನೊ ವ್ಯೂಹರಚನೆಗಳ ಮೂಲಕ ಈ ಸಲದ ಯುದ್ಧವು ಹೆಚ್ಚಿನ ಕಾಲಾವಧಿಯನ್ನೂ ತೆಗೆದುಕೊಳ್ಳಬಹುದಾಗಿದೆ. ಸ್ವಸಾಮರ್ಥ್ಯದ ಭ್ರಮೆಯಿಂದ ಜರ್ಮನಿಯು ಹೊಸ ಪ್ರಯೋಗಕ್ಕೆ ದುಡುಕಿದರೆ ಮಾತ್ರ ಅದಕ್ಕೆ ಖಂಡಿತ ಅಹಿತವಿದೆ.

★



ಗಸೆಯ ಟಿಪ್ಪಣಿ

ಆಯಕಟ್ಟಿನ ಸ್ಥಳಗಳು

೧. ಮೊಜೆಲ್ ಕೊಳ್ಳವು.

೨. ಸ್ಟ್ರಾಸ್‌ಬರ್ಗ್ ಸಂದು.

೩. ಬೆಲಫೋರ್ಟ್ ಸಂದು.

೪. ಲೀಲ್ ಮತ್ತು ಮೊನ್ ಸುತ್ತಲಿನ ಫ್ರಾಂಕೊ ಬೆಲ್ಜಿಯನ್ ಬಯಲು.

೫. ಮಜ್ ನದಿಯ ಕೊಳ್ಳ.

೬. ಹಂಗೇರಿಯಾ ಗಡಿನಾಡಿನ ಹತ್ತಿರದ ಡ್ಯಾನ್ಯೂಬ್ ನದಿಯ ಕೊಳ್ಳ.

೭. ಪೋಲಂಡಿನಲ್ಲಿ ಕ್ಯಾಟೊವಿಸಿನ ಕಣಿವೆ.

೮. ಕೀಲ್ ಕಾಲುವೆ.

೯. ವಿಲಿಯಮ್ಸ್ ಹ್ಯಾವೆನ್.

೧೦. ಹೆಲಿಗೋಲ್ಯಾಂಡ್.

೧೧. ಮಾಲ್ಮೊ ಜಲಸಂಧಿ.

೧೨. ಇಂಗ್ಲಿಷ್ ಚ್ಯಾನೆಲ್.

ಔದ್ಯೋಗಿಕ ಸ್ಥಳಗಳು

I ರುಹರ್ (ಜರ್ಮನಿ)
IA ಲೀಪ್‌ಜೀಗ್ (ಜರ್ಮನಿ)
II ಬ್ರುಸೆಲ್ಸ್ (ಬೆಲ್ಜಿಯಮ್)
III ಅಲ್ಸಾಸ್ ಲೊರೇನಿನಲ್ಲಿಯ ಕಬ್ಬಿಣ ಕಲ್ಲಿದ್ದಲಿಯ ಪ್ರದೇಶ (ಫ್ರಾನ್ಸ್)
IV ಪಿಲ್ಸೆನಿನಲ್ಲಿಯ ಸ್ಕೋಡಾ ಕಾರಖಾನೆಯು (ಚೆಕೊಸ್ಲೊವಾಕಿಯಾ)
V ಸೈಲೇಶಿಯದ ಕಬ್ಬಿಣ-ಕಲ್ಲಿದ್ದಲಿಯ ಪ್ರದೇಶ (ಈಗ ಜರ್ಮನಿ)
VI ಪೋಲಂಡಿನ ಎಣ್ಣೆಯ ಕ್ಷೇತ್ರಗಳು
VII ರುಮಾನಿಯದ ಎಣ್ಣೆಯ ಕ್ಷೇತ್ರಗಳು
VIII ಇಟಲಿಯ ಔದ್ಯೋಗಿಕ ಪ್ರದೇಶ

೩ನೆಯ ಟಿಪ್ಪಣಿ

ಪಶ್ಚಿಮ ರಣಭೂಮಿಯಲ್ಲಿ ಫ್ರಾಂಕೊ ಬೆಲ್ಜಿಯನ್ ಬೈಲು, ಮಜ್ ಮತ್ತು ಬೊಚೆಲ ಕೊಳ್ಳಗಳು, ಸ್ಟ್ರಾಸಬರ್ಗ್ ಸಂದು ಇವು ಮುಖ್ಯವಾದ ಕೇಂದ್ರಗಳು.

೪ನೆಯ ಟಿಪ್ಪಣಿ

ಆಕಾಶಮಾರ್ಗದ ಅಂತರ

ಲಂಡನ್‌ದಿಂದ ಜರ್ಮನ್ ಗಡಿನಾಡು :	೨೬೫ ಮೈಲು.
ಲಂಡನ್‌ದಿಂದ ಕೀಲ ಕಾಲುವೆ :	೪೨೦ ಮೈಲು.
ಪಾರಿಸ್‌ದಿಂದ : ಜರ್ಮನ್‌ಗಡಿನಾಡು :	೨೦೦ ಮೈಲು.
ಬರ್ಲಿನದಿಂದ : ಫ್ರಾನ್ಸದ ಗಡಿನಾಡು :	೪೦೦ ಮೈಲು.
ವಿಯೆನ್ನಾದಿಂದ; ಬುಡಾಪೆಸ್ಟ್ :	೧೦೦ ಮೈಲು.
ಇಂಗ್ಲಿಷ್ ಚ್ಯಾನಲಿನ ಅಗಲಳತೆ :	೨೧ ಮೈಲು.
ನಾರ್ವೆ ಜಲಸಂಧಿಯ ಅಗಲಳತೆ :	೮ ಮೈಲು.
ಉತ್ತರಸಮುದ್ರದ ಅಗಲಳತೆ :	೫೦೦ ಮೈಲು.

ಜಗತ್ತಿನಲ್ಲಿಯ ಎಲ್ಲ ಕ್ಷೇತ್ರಗಳು—ಭೌಗೋಲಿಕ, ಜನಾಂಗಿಕ, ಭಾಷಾತ್ಮಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳು– ಒಂದಕ್ಕೊಂದು ಹೊಂದಿಗೂಡುವಂತಹವಿದ್ದರೆ, ಯುದ್ಧಗಳು ಉಂಟಾಗುವ ಸಂಭವವೇ ಇರುತ್ತಿರಲಿಲ್ಲವೇನೋ ! ಆದರೆ ಪರಿಸ್ಥಿತಿಯು ಹಾಗಿಲ್ಲ. ರಾಜಕೀಯ ದೃಷ್ಟಿಯಿಂದ ಪ್ರತಿಯೊಂದು ದೇಶದವರೂ ತಮಗೆ ಒಂದೊಂದು ಕೃತ್ರಿಮ ಮೇರೆಗಳನ್ನು ಹಾಕಿಕೊಂಡಿರುವುದರಿಂದ, ಮಾನವೇತಿಹಾಸದಲ್ಲಿ ಬಗೆಬಗೆಯ ಆಂದೋಲನಗಳಾಗುತ್ತಲಿವೆ. ಕಳೆದ ಮಹಾಯುದ್ಧದನಂತರ, ಜರ್ಮನಿಯಾದರೂ ಉಳಿದ ದೇಶಗಳಂತೆ ತನ್ನದೊಂದು ಮೇರೆಯನ್ನು ಮಾಡಿಕೊಂಡಿದೆ. ಯಾವುದೊಂದು ದೇಶವು ತನ್ನ ಎಲ್ಲ ಮೇರೆಗಳನ್ನು ಬಿಟ್ಟರೆ ಆ ದೇಶವು ಕಲ್ಪನೆಯು ಕಣ್ಣಿಗೆ ನಿಲುಕಲಾರದು. ದೇಶವೆಂದರೆ ಅದರಲ್ಲಿರುವ ಪ್ರದೇಶವೂ ಅದರ ಮೇರೆಗಳೂ ಬರುವುವು. ಮೇರೆಗಳು ಒಂದು ನಿರ್ದೇಶಿಸಿದ ಮೇಲೆ ಅವುಗಳನ್ನು ಸಂರಕ್ಷಣೆಮಾಡುವುದು ಅವಶ್ಯವಾಗುವುದು. ಆದಕ್ಕೆಂದೆ, ೧೯೧೪-೧೮ ರ ಮಹಾಯುದ್ಧದಂತೆ, ಸದ್ಯದ ಯುದ್ಧದಲ್ಲಿಯೂ ಪೂರ್ವಪಶ್ಚಿಮ ರಣಭೂಮಿಗಳು ತುಂಬ ಮಹತ್ತ್ವವನ್ನು ಪಡೆದು ನಿಂತಿವೆ.

ಜರ್ಮನಿಯ ಪೂರ್ವರಣದ ಮುಂಭಾಗವು, ಚೆಕೊಸ್ಲೊವಾಕಿಯಾವನ್ನು ಕೂಡಿಕೊಂಡು ಸುಮಾರು ೧೨೦೦ ಮೈಲು ಉದ್ದವಿದೆ; ಅದರಲ್ಲಿಯ ಕೆಲವು ಭಾಗವು ಗುಡ್ಡಗಾಡಾಗಿ ಇದ್ದರೂ, ಹೆಚ್ಚಿನ ಭಾಗವು ಕೃತ್ರಿಮ ಕೋಟೆ-ಕೊತ್ತಳಗಳಿಂದ ಕೂಡಿದುದಾಗಿದೆ. ಸಪ್ಟಂಬರ್ ಮೊದಲನೆಯ ತಾರೀಖಿಗೆ ಮೊದಲಿನ ಪೋಲಂಡ್ ಮತ್ತು ಜರ್ಮನಿಯ ನಡುವಿನ ಗಡಿನಾಡಿನ ಪ್ರದೇಶದಲ್ಲಿ, ಪೋಲರ ಮತ್ತು ಜರ್ಮನರ ಸಮ್ಮಿಶ್ರ ಜನತೆಯು ಇತ್ತು. ಪೋಲಂಡಿನಲ್ಲಿ—ಮುಖ್ಯವಾಗಿ, ಸೈಲೇಶಿಯಾ ಪ್ರಾಂತದಲ್ಲಿ—ಜರ್ಮನ್ ಜನರೂ, ಜರ್ಮನಿಯ ವಿಷಯದಲ್ಲಿ ಸಹಾನುಭೂತಿಯುಳ್ಳ ಜನರೂ ವಾಸಿಸುತ್ತಿದ್ದುದರಿಂದಲೇ ಜರ್ಮನರ ಆಕ್ರಮಣವು ಅನಾಯಾಸವಾಗಿ ಆದುದು. ಈಗಾಗಲೇ ಅದು ಸಂಪೂರ್ಣವಾಗಿ ಕೈಬಿಟ್ಟ ಸಂಗತಿಯು ತಿಳಿದುಬಂದಿದೆ. ಈ ಪ್ರಾಂತವು ಪೋಲಿಶ್ ಕಿರುದಾರಿ (Corridor) ಯ ದಕ್ಷಿಣಕ್ಕೆ ಇದೆ. ಇದು ಫಲವತ್ತಾದ, ಬೆಲೆಬಾಳುವ ಔದ್ಯೋಗಿಕ ಕೇಂದ್ರವಾಗಿದೆ. ಮೊದಲು ಮೊದಲು ವೈಮಾನಿಕ ದಾಳಿಗಳಿಂದ ಸಂಗರವು ಪ್ರಾರಂಭವಾಗಿ, ಅದರ ಹಿಂದೆ ಕವಚಧಾರಿಗಳಾದ ಗಾಡಿಗಳೂ ಟ್ಯಾಂಕುಗಳೂ ಭರದಿಂದ ಆಕ್ರಮಣಮಾಡಿದುವಲ್ಲದೆ, ಕಾಲಾಳುಗಳು ತೋಫು ಮುಂತಾದ ಯುದ್ಧಾಸ್ತ್ರಗಳ ಸಹಾಯದಿಂದ ಮೇಲೇರಿ ಹೋಗಲಿಲ್ಲ. ಆದುದರಿಂದಲೆ ಅಷ್ಟು ವೇಗದಿಂದ ಪರಪ್ರಾಂತವನ್ನು ವಶಮಾಡಿಕೊಳ್ಳಲು ಜರ್ಮನರಿಗೆ ಅನುಕೂಲವಾಯಿತು.

ಜರ್ಮನರ ಕವಚಯುಕ್ತ ಮೋಟಾರುಬಂಡಿ-ಟ್ಯಾಂಕುಗಳ ದಾಳಿಗೆ ಅನುಕೂಲವಾಗುವಂತೆ ಪೋಲಂಡಿನ ಆ ಭಾಗದ ನೆಲವು ಗಟ್ಟಿಯಾಗಿದ್ದುದರಿಂದ, ಯಾವುದೇ ತರದ ಆತಂಕವಾಗಲಿಲ್ಲ. ಇದೂ ಅಲ್ಲದೆ, ಪೂರ್ವದಲ್ಲಿ ರಶಿಯನರು ದಾಳಿಯನ್ನು ಪ್ರಾರಂಭಿಸಿದುದರಿಂದ ಪೋಲರ ವ್ಯೂಹರಚನೆಯಲ್ಲಿ ಇಬ್ಬಗೆಯಾಗಲೇ ಬೇಕಾಯಿತು. ಆದಕ್ಕಾಗಿಯೆ ಅವರು ಕೊಂಚ ನಿರ್ಬಲರಾಗಬೇಕಾಯಿತು. ಈ ನಿರ್ಬಲತೆಯು ಜರ್ಮನಿಗೆ ಪುಟಕೊಟ್ಟಂತಾಯಿತು. ಪ್ರದೇಶವನ್ನು ಗೆದ್ದುಕೊಳ್ಳುವುದಕ್ಕಿಂತ ಅದನ್ನು ತಮ್ಮ ಅಂಕಿತದಲ್ಲಿ ಇಟ್ಟುಕೊಳ್ಳುವುದು ಕಠಿನವಾಗಿದೆ. ಪೊಸೆನ್, ಲೊಡ್ಜ್ ಮತ್ತು ಕೇಕೊವಿಸ್‌ಗಳ ಬಳಿಯಲ್ಲಿ ಭೀಕರ ಕದನಗಳಾದುದರಿಂದ, ಆ ಆ ಭಾಗಗಳಲ್ಲಿ ಜರ್ಮನರು ಎಷ್ಟರ ಮಟ್ಟಿಗೆ ತಮ್ಮ ವರ್ಚಸ್ಸನ್ನು ಕಾಯ್ದುಕೊಳ್ಳುವರೆಂಬುದು ಸ್ವಲ್ಪ ಸಂಶಯವೆ ! ನಿರ್ಬಲವಾದ ಪೋಲಂಡ್ ದೇಶವು ಇಬ್ಬರು ಸರ್ವಾಧಿಕಾರಿಗಳಿಗೆ,—ಹಿಟ್ಲರ್—ಸ್ಟ್ಯಾಲಿನ್— ಕೆಲಕಾಲ ತಲೆವಾಗಬಹುದು; ಆದರೆ ನೆರೆನಾಡಿನಲ್ಲಿಯೆ ಪರಾಧೀನತೆಯಲ್ಲಿ ಕೊಳೆಯುತ್ತಿರುವ— ಜರ್ಮನರ

ಬಗ್ಗೆ ಸಂಪೂರ್ಣ ತಿರಸ್ಕಾರ ವ್ಯಕ್ತಪಡಿಸುವ— ಸಮದುಃಖಿಗಳಾದ—ಜೆಕ್ಕರೂ ಸ್ಲೋವಾಕರೂ ಇವರೊಡನೆ ಸೇರಿದರೆ ಮತ್ತೆ ಬಂಡಾಯವು ಭುಗಿಲೆನ್ನಬಹುದು. ಇದರ ಜೊತೆಯಲ್ಲಿಯೆ ದ್ವಿಮುಖಿಯಾದ ರಶಿಯದ ವೃತ್ತಿಯನ್ನು ಪರಿಶೀಲಿಸಿ ನೋಡಿದರೆ, ಇಂದು ಹೊಂದಿಕೊಂಡ ರಶಿಯಾ-ಜರ್ಮನಿಗಳ ಜೊತೆ ಮುಂದೆ ಕೂಡ ಹೀಗೆಯೆ ಉಳಿಯಬಹುದೇ-ಎಂದು ಎನಿಸದಿರದು. ಇಂದು ರಶಿಯಾವು ತೋರಿಸುತ್ತಿರುವ ಚಾಣಾಕ್ಷತನದ ಸಂಧಿಸಾಧಕತ್ವವು ನಮ್ಮನ್ನು ಸಂಶಯದಲ್ಲಿ ಕೆಡಹದಿರದು. ಜರ್ಮನಿಯ ಮುಖ್ಯ ದಳಪತಿಯಾದ ವಾನ್ ಬ್ರಾಸ್ಚಿಷ್‌ನು, ಪೋಲಂಡದ ದಂಡಯಾತ್ರೆಯು ಮುಗಿಯಬಂದಿತೆಂದೂ, ರಶಿಯಾ ಜರ್ಮನಿಗಳ ನಡುವೆ ಪೋಲಂಡು ಪಾಲುಗೊಳ್ಳುವ ದಿನವೂ ಸಮಿಾಪಕ್ಕೆ ಬರಹತ್ತಿದೆಯೆಂದೂ ಸಾರುತ್ತಿರುವುದನ್ನು ಈಗಾಗಲೆ ನಾವು ಕೇಳಿದ್ದೇವೆ. ಆ ಬೃಹತ್ 'ರೀಷ (Riech)'ನಲ್ಲಿ ಸೇರಿಸಿಕೊಂಡ ಈ ಜನರು ಮನನೊಂದವರೂ, ವಿತುಷ್ಟರೂ, ಪ್ರತ್ಯಕ್ಷಬದ್ಧರೂ ಎಂಬುದನ್ನು ಮಾತ್ರ ಮರೆಯಲಾಗದು. ಇನ್ನು ಮುಂದೆಯಾದರೂ, ಪೊಸೆನ್, ವಾರ್ಸಾಗಳ ನಡುವಿನ ಪ್ರದೇಶದಲ್ಲಿಯೂ ಕ್ರಾಕೊ, ಲುವೊ ಪ್ರದೇಶಗಳಲ್ಲಿಯೂ ಪ್ರತ್ಯಕ್ಷ ಯುದ್ಧವು ಆಗದೆ ಇದ್ದರೂ, ಕಿರುಕುಳಗಳೂ ಹುಯಿಲು-ಬಂಡಾಯಗಳೂ ಆಗುವುದು ಖಂಡಿತ.

ಪಶ್ಚಿಮ ಪ್ರದೇಶದಲ್ಲಿಯ ಪರಿಸ್ಥಿತಿಯು ಬೇರೆಯಾಗಿದೆ. ಬಹಳ ದಿನಗಳಿಂದಲೂ ಫ್ರಾನ್ಸ್-ಜರ್ಮನಿಗಳ ನಡುವೆ ಐತಿಹಾಸಿಕ ದ್ವೇಷ ಸಂಬಂಧವಿದೆ. ಈ ಎರಡೂ ದೇಶಗಳ ನಡುವಿನ ಗಡಿಯು ದಕ್ಷಿಣದಲ್ಲಿ ವಾಸ್ಜ ಪರ್ವತಗಳ ಸಾಲುಗಳಿಂದಲೂ, ಉತ್ತರದಲ್ಲಿ ಆರ್ಡೆನೆಸ್ ಪರ್ವತಗಳ ಸಾಲುಗಳಿಂದಲೂ ಏರ್ಪಟ್ಟಿದೆ, ಆದರೆ ರ್‍ಹಾಯಿನ್ ನದಿಯೆ ಆವೆರಡು ದೇಶಗಳಿಗೆ ಮುಖ್ಯವಾದ ಮೇರೆಯಾಗಿರುವುದರಿಂದ, ಇಬ್ಬರಿಗೂ ತಮ್ಮ ತಮ್ಮ ಪ್ರದೇಶಗಳನ್ನು ಸಂರಕ್ಷಿಸಿಕೊಳ್ಳುವುದು ಕಠಿನವಾಗಿದೆ. ಫ್ರೆಂಚ್ ಜರ್ಮನ್ ಗಡಿನಾಡು ೪೫೦ ಮೈಲುಗಳಿಗಿಂತ ಹೆಚ್ಚಾಗಿರದೆ ಇದ್ದರೂ, ಆಯಕಟ್ಟಿನ ಸ್ಥಳಗಳಲ್ಲಿ ನಿರ್ಬಲತೆ ಕಂಡುಬಂದುದರಿಂದ, ಸ್ವಾಭಾವಿಕವಾಗಿ ಇರದೆ ಇದ್ದುದನ್ನು ಕೃತ್ರಿಮಕಟ್ಟುಗಳಿಂದ ಪೂರಯಿಸಬೇಕೆಂಬ ಹಂಬಲದಿಂದಲೇ ಮ್ಯಾಗಿನೊ ಮತ್ತು ಸೀಗ್‌ಫ್ರೀಡ್ ಸಾಲು (Line) ಗಳನ್ನು ಕಟ್ಟಿದ್ದಾರೆ. ಫ್ರೆಂಚರ ಭಾಗದಲ್ಲಿ ಇನ್ನೂ ಶೈಥಿಲ್ಯವಿದೆ; ಬೆಲ್ಜಿಯಮಿನ ಕಡೆಗೆ ಇದ್ದ ಫ್ರೆಂಚ್ ಗಡಿನಾಡನ್ನು, ಹಾಲಂಡ್ ಮತ್ತು ಬೆಲ್ಜಿಯಮಿನ ಕರಾವಳಿಯ ಬಯಲಿನಿಂದ ಸಹಜವಾಗಿ ಆಕ್ರಮಣಮಾಡಬಹುದು. ಇದೇ ಮಾದರಿಯ ಹಂಚಿಕೆಯಿಂದಲೆ ೧೯೧೪ರಲ್ಲಿ ಪಾರಿಸ್ ಪಟ್ಟಣದ ಸಾಮಿಾಪ್ಯವನ್ನು ಸಾಧಿಸಿ ಜರ್ಮನರು ಗುಂಡುಹಾರಿಸಿದರು. ಪಶ್ಚಿಮ ರಣಭೂಮಿಯು ೪ ವರ್ಷಗಳ ವರೆಗೆ, ಅವ್ಯಾಹತವಾಗಿ ನಡೆದ ಯುದ್ಧಕ್ಕೆ ರಂಗಭೂಮಿಯಾಗಿತ್ತು. ಶಾಂತವಾಗಿ ನಿದ್ರೆ ಹೋದ ಗಡಿನಾಡಿನಲ್ಲಿಯ ಪಟ್ಟಣಗಳು–ವ್ಹರ್ಡೂನ್, ಮಾರ್ನ್ ಇಪ್ರೆಸ್,– ಬೆಳಕು ಹರಿಯುವುದರೊಳಗೆ ಯುದ್ಧಭೂಮಿಯಾಗಿದ್ದುವು. ಈ ಯುದ್ಧದಲ್ಲಿಯಾದರೂ ಆ ಸ್ಥಳಗಳಿಗೆ ಹೆಚ್ಚು ಮಹತ್ವ ಬಂದರೂ ಬರಬಹುದು. ಈ ಸಲದ ಯುದ್ಧದ ಕಾರ್ಯಪದ್ಧತಿಯೂ ಮ್ಯಾಗಿನೊ ಸೀಗ್‌ಫ್ರಿಡ್ ಸಾಲುಗಳ ಮೂಲಕ ಹೆಚ್ಚಾಗಬಹುದು. ಒಂದು ವೇಳೆ ಜರ್ಮನರು, ಸ್ವಸಾಮರ್ಥ್ಯದ ಭ್ರಮೆಯಿಂದ ಹೊಸ ಪ್ರಯೋಗಕ್ಕಾಗಿ ದುಡುಕಿದರೆ ಮಾತ್ರ ಹಾಂ ಹಾಂ ಎನ್ನುವುದರೊಳಗೆ ಮೂಲೆಗುಂಪಾಗಬಹುದು. ಯುದ್ಧಾಸ್ತ್ರಗಳೂ, ಟ್ಯಾಂಕುಗಳೂ, ಕಾಲಾಳುಗಳೂ, ವಿಮಾನಗಳೂ ಯುದ್ಧದ ಗತಿಯನ್ನು ನಿರ್ದೇಶಿಸುವುವು. ಇಂದು ಅವುಗಳ ಬಲವೇ ಬಲವು!

ಯುದ್ಧದಲ್ಲಿ ಭಾಗವಹಿಸಿದ ರಾಷ್ಟ್ರಗಳ ವೈಮಾನಿಕ ದಳಗಳು ಯುದ್ಧಭೂಮಿಯನ್ನು ವಿಸ್ತಾರಗೊಳಿಸಿವೆ. ಬರ್ಲಿನವು ಫ್ರಾನ್ಸಿನ ಸರಹದ್ದಿನಿಂದ ೪೦೦ ಮೈಲುಗಳಷ್ಟು ಕೂಡ ದೂರವಿಲ್ಲ, ಇಂಗ್ಲಂಡಿನ ದಂಡೆಯಿಂದ ೬೦೦ ಮೈಲುಗಳಷ್ಟೂ ಅಂತರವಿಲ್ಲ. ಶತ್ರುಗಳನ್ನು ಭ್ರಷ್ಟಗೊಳಿಸುವುದಕ್ಕಾಗಿ, ಆಗಾಗ ವೈಮಾನಿಕ ದಾಳಿಗಳಾಗುವುವು. ಆಯಕಟ್ಟಿನ ಸ್ಥಳವಾದ ಕೀಲ್ ಕಾಲುವೆಯು ಶತ್ರುಗಳ ಗುರಿಗೆ ಈಡಾಗುತ್ತಲಿದೆ; ಔದ್ಯೋಗಿಕ ಪಟ್ಟಣಗಳೂ ಪೌರಜನತೆಯೂ ಸದಾ ಸಂಕಟದಲ್ಲಿದ್ದಂತೆಯೆ; ಇನ್ನುಮುಂದೆ ಫ್ರಾನ್ಸ್, ಇಂಗ್ಲಂಡ್ ಜರ್ಮನಿ, ಬೆಲ್ಜಿಯಮ್ ದೇಶಗಳ ವ್ಯಾಪಾರೋದ್ಯೋಗಗಳ ಕೇಂದ್ರಗಳು ರಣರಂಗ ಸ್ಥಳಗಳಾಗಬಹುದು.

ಜರ್ಮನ್ ಉತ್ತರಸಮುದ್ರವು ಸಮರದೃಷ್ಟಿಯಿಂದ ಒಂದು ಆಯಕಟ್ಟಿನ ಸ್ಥಾನವಾಗಿದೆ,—ಅದು ಸುಮಾರು ೩೦೦ ಮೈಲುಗಳುಳ್ಳ ಭದ್ರವಾಗಿ ಕಟ್ಟಿದ ಹಡಗುಪಡೆಯ ತಾಣವು. ಕೀಲ್ ಕಾಲುವೆಯು ಬಾಲ್ಟಿಕ್ ಮತ್ತು ಉತ್ತರಸಮುದ್ರವನ್ನು ಕೂಡಿಸುವುದರಿಂದಲೂ, ಸಂಕಟಸಮಯದಲ್ಲಿ ಬಾಲ್ಟಿಕದಿಂದ ಉತ್ತರ ಸಮುದ್ರಕ್ಕೆ ಹಡಗುಪಡೆಯನ್ನು ಸ್ಥಳಾಂತರಮಾಡಲು ಅನುಕೂಲವಾಗಿರುವುದರಿಂದಲೂ ಜರ್ಮನಿಯು ಸಬಲವಾಗಿ ಕಾಣುವುದು. ಮಿತ್ರಪಕ್ಷದವರಷ್ಟು ಜರ್ಮನಿಯ ಹಡಗುಪಡೆಯು ಬಲಾಢ್ಯವಿಲ್ಲದೆ ಇದ್ದರೂ, ೧೯೧೪-೧೮ರಲ್ಲಿ ಹ್ಯಾಲಿಗೊಲ್ಯಾಂಡ್, ಜ್ಯೂಟ್‌ಲ್ಯಾಂಡ್ ಪ್ರದೇಶಗಳಂತೆ, ಇಂದು ಬಾಲ್ಟಿಕ್ ಸಮುದ್ರವು ಸಮರರಂಗವಾಗಿದೆ. ಕೀಲ್ ಕಾಲುವೆ, ವಿಲಿಯಮ್ಸ್ ಹ್ಯಾವೆನ್ ಇವು ಮುಖ್ಯ. ಮಿತ್ರಪಕ್ಷವು ಸ್ವಾಭಾವಿಕವಾಗಿಯೆ ಈ ಎರಡು ಸ್ಥಾನಗಳನ್ನು ಅಡ್ಡಗಟ್ಟಿ, ಜರ್ಮನಿಯ ಹಡಗುಪಡೆಯನ್ನು ಬಾಲ್ಟಿಕದಲ್ಲಿಯೆ ಬಂಧಿಸಿದಂತೆ ಮಾಡುವುದು. ಜರ್ಮನಿಯು ಕಳ್ಳ ಕಾಳಗವನ್ನು ಹೂಡಿ, ಬ್ರಿಟಿಶ್ ವ್ಯಾಪಾರೀ ಹಡಗುಗಳನ್ನು ಮುಳುಗಿಸುವ ಉಪಕ್ರಮವನ್ನು ಕೈಕೊಳ್ಳುವುದು.

ಶಸ್ತ್ರಾಸ್ತ್ರಗಳಿಗಿಂತ ಆರ್ಥಿಕ ಅಡಚಣಿಗಳೇ ಹೆಚ್ಚು ಪರಿಣಾಮಕಾರಿಯೆಂದು ಕಳೆದ ಮಹಾಯುದ್ಧದಲ್ಲಿ ತಿಳಿದು ಬಂದಿದೆ. ೧೯೧೮ರಲ್ಲಿ ಜರ್ಮನಿಯು ಸೋತುದಕ್ಕೆ ಶಸ್ತ್ರಾಸ್ತ್ರಗಳ ಅಭಾವಕ್ಕಿಂತ, ಜರ್ಮನಿಯಲ್ಲಿಯ ಆರ್ಥಿಕ ದುಃಸ್ಥಿತಿಯೂ, ಹಡಗುಗಳ ನಡೆದಾಟಕ್ಕೊದಗಿದ ಅಡೆತಡೆಯೂ ಮುಖ್ಯ ಕಾರಣಗಳಾದುವು. ಇಂದಿನ ಯುದ್ಧದಲ್ಲಿ ಜರ್ಮನಿಯು ಆರ್ಥಿಕ ದೃಷ್ಟಿಯಿಂದ ನಿರ್ವೀರ್ಯವಾಗಿದೆ; ತನಗೆ ಬೇಕಾಗಬಹುದಾದ ಕಚ್ಚಾ ಮಾಲನ್ನು

ಸ್ಥಿರಯಿಸಿಕೊಳ್ಳಲು ಜರ್ಮನಿಯಲ್ಲಿ ತ್ರಾಣ ವಿಲ್ಲ. ಜರ್ಮನ್ ಷ್ಯಾ ಒಪ್ಪಂದದ ಮೂಲಕ, ಎಷ್ಟೇ ಬಲಶಾಲಿಯಾಗಿದ್ದರೂ ಷ್ಯವು ಎರಡೂ ದೇಶಗಳಿಗೆ ಕಚ್ಚಾ ಮಾಲನ್ನು ಪೂರಯಿಸುವಷ್ಟು ಮರ್ಥವಿಲ್ಲ. ಹಂಗೆರಿ, ರುಮಾನಿಯಾಗಳಾದರೂ ನಾಜೀ ವಾದವನ್ನು ಆದರಿಸುವುದಿಲ್ಲ. ಈ ಎಲ್ಲ ಕಾರಣಗಳ ಸಲುವಾಗಿಯೆ ತ್ರಪಕ್ಷದವರು ರಾಜತಂತ್ರವ್ಯೂಹವನ್ನು ರಚಿಸಿ, ಪೂರ್ವದಲ್ಲಿ ಜಪಾನು ಶಾಂತವಾಗಿರುವಂತೆಯೂ, ಇಟಲಿಯು ಮೈತ್ರೀಭಾವ ವನ್ನು ತೋರಿಸುವಂತೆಯೂ, ಯುನಾಯಿಟೆಡ್ ಸ್ಟೇಟಿನವರ ಸಹಾನುಭೂತಿಯಿಂದ ಆರ್ಥಿಕ ಕಟ್ಟನ್ನು ಬಿಗಿಯಿಸುವಂತೆಯೂ, ಫ್ರಾನ್ಸ್, ಬ್ರಿಟನ್ ಮತ್ತು ಬ್ರಿಟಿಷ್ ಸಾಮ್ರಾಜ್ಯದ ಸೈನ್ಯ-ಹಡಗುಪಡೆಗಳ ಸಹಾಯದಿಂದ ಯುದ್ಧಗತಿಯನ್ನು ನಿರ್ದೇಶಿಸು ವವರಿದ್ದಾರೆ.

ಲ್ಲಿಯಾದರೂ ಕೇಳಿದ್ದಿರಾ !

ಸಾಸಿವೆಯಿಂದ ತೆಗೆದ ವಾಯುವು, ಎಲ್ಲ ವಿಷವಾಯುಗಳಿಗಿಂತ ಬಲಶಾಲಿಯಾದುದಂತೆ ! ಅರಿವೆಗಳಲ್ಲಿಯೂ ಬೂಟುಗಳಲ್ಲಿಯೂ ಸೇರಿ ದಾಟಿ ಅದು ಚರ್ಮಕ್ಕೆ ತಗಲುವುದಂತೆ !

* * *

ಒಂದು ಸಿಡಿವಿಮಾನ (Torpedo) ನ್ನು ಸಿದ್ಧಪಡಿಸಲಿಕ್ಕೆ ೦೦೦ ರೂಪಾಯಿಗಳು ಬೇಕಾಗುವುವಂತೆ.

* * *

ಬಾಂಬು ಒಗೆಯುವ ಅತೀವ ಹೊಸ ಮಾದರಿಯ ವಿಮಾನವು ತಾಸಿಗೆ ೪೦೦ ಮೈಲು ವೇಗವುಳ್ಳದೂ ೩೦,೦೦೦ ಫೂಟು ಎತ್ತರ ಲ್ಲಿ ತೇಲುವಂತಹದೂ ಆಗಿದೆಯೆಂದು ತಿಳಿದುಬಂದಿದೆ.

* * *

ವಿಲಕ್ಷಣವಾಗಿ ಹಿಂಸಿಸಲ್ಪಟ್ಟಂತಹ ಯಹೂದಿ ಜನತೆಯ ಸಂಖ್ಯೆ, ಇಡಿ ಜಗತ್ತಿನಲ್ಲಿ ೧೬೬,೧೧,೦೦೦ ಇದೆಯಂತೆ.

* * *

೧೯೩೭ ನೆಯ ಇಸ್ವಿಯಲ್ಲಿ ಅಮೇರಿಕೆಯ (U. S. A.) ಲ್ಲಿ ೮ ನೀಗ್ರೋ ಜನರನ್ನು ನ್ಯಾಯವಿಚಾರಣೆಯಿಲ್ಲದೆ ಗಲ್ಲಿಗೇರಿಸಿದರಂತೆ.

* * *

ಹೊಸದಾಗಿ ಸಿದ್ಧಮಾಡಿದ ಮಶಿನಾಗನ್ನೊಂದು ವಿಮಾನದ ಪ್ರೊಪೆಲ್ಲರ ಸಹಾಯದಿಂದ ಗುಂಡುಹೊಡೆಯುವುದಂತೆ.

* * *

ಒಂದು ಯಾಂತ್ರಿಕ ತೋಫು (Mashine Gun) ಒಂದು ಮಿನಿಟಿಗೆ ೭೮೦೦ ಗುಂಡು ಹಾರಿಸುವುದಂತೆ !

* * *

ವಿದ್ಯುತ್‌ಶಕ್ತಿಯ ಸಹಾಯದಿಂದ ವಾಯುಕಾರ್ಯ ಪ್ರತಿ ಬಂಧಕ ತೋಫುಗಳು (Anti-air-craft Guns) ವಿಮಾನ ಗಳನ್ನೂ ಹೊಡೆಯುತ್ತವೆಂದು ತಿಳಿದುಬಂದಿದೆ.

* * *

'ಟ್ಯಾಂಕು' ಗಳೆಂದರೆ, ವೈರಿಗಳ ಮೇಲೇರಿ ಹೋಗುವ ಮೋಟಾರು ವಾಹನಗಳು ; ಅವುಗಳಲ್ಲಿ ಯಾಂತ್ರಿಕ ತೋಫುಗಳು ಇರುತ್ತವೆ. ಈ ವಾಹನವು ತಾಸಿಗೆ ೪೦ ಮೈಲು ವೇಗದಿಂದ ಹೋಗಬಲ್ಲುದೂ ಸುತ್ತಲಿನ ಉಕ್ಕಿನ ಕವಚದಿಂದ ತನ್ನ ರಕ್ಷಣೆ ಮಾಡಿಕೊಳ್ಳಬಲ್ಲುದೂ ಆಗಿರುತ್ತದೆ.

* * *

ಇಟಲಿಯ ವಿಮಾಕಂಪನಿಯೊಂದು ತನ್ನ ಪಾಲಿಸಿದಾರರಿಗೆ, ಮುಖವಾಡಗಳನ್ನೂ ಕೊಡಹತ್ತಿದೆಯಂತೆ.

* * *

'ಹೈಡ್ರೋಸಿಯಾನಿಕ' ಆ್ಯಸಿಡ್ ವಾಯುವು, ತಾಗಿದವನನ್ನು ೨ ನಿಮಿಷದಲ್ಲಿ ಕೊಲ್ಲುವುದಂತೆ.

* * *

ವಿಷವಾಯುವನ್ನು ಯುದ್ಧದ ಸಾಧನವೆಂದು ಉಪಯೋಗಿಸ ಬಾರದೆಂದು ಜಿನೀವಾ ವಿಷವಾಯು ಸಮಿತಿಯವರು ನಿರ್ಧರಿ ಸಿದ್ದರೂ, ಅಬಿಸೀನಿಯದ ಯುದ್ಧದಲ್ಲಿ ಇಟಲಿಯವರು ಉಪಯೋಗಿಸಿದರು.

* * *

ವಿಷವಾಯುವು ಎಲ್ಲಕ್ಕಿಂತ ಮೊದಲೆಂದರೆ ೧೯೧೫ರಲ್ಲಿ ಜರ್ಮನರಿಂದ ಉಪಯೋಗಮಾಡಲ್ಪಟ್ಟಿತು.

* * *

'ಲೆವಿಸಾಯಿಟ್' ಎಂಬುದು ತುಂಬ ತೀಕ್ಷ್ಣ ವಿಷವಾಯು ವಂತೆ. ಅಸಹಾಯರಾದ ಪೌರ ಜನರು ಹೆಚ್ಚಾಗಿ ಈ ವಿಷವಾಯು ವಿನ ಯುದ್ಧಕ್ಕೆ ತುತ್ತಾಗುತ್ತಾರೆ.

* * *

ಜಗತ್ತಿನಲ್ಲಿ ಹುಟ್ಟುವ ಒಟ್ಟು ಚಿಮಣಿಎಣ್ಣೆಯಲ್ಲಿ ೧೦೦ ಕ್ಕೆ ೬೪ ರಷ್ಟು ಅಮೇರಿಕೆಯೊಂದರಲ್ಲಿಯೆ ಹುಟ್ಟುತ್ತದೆ.

* * *

ವಿಮಾನವು ಮೇಲಕ್ಕೆ ಏರಿದ ಮಟ್ಟೆಂದರೆ ಇದುವರೆಗೆ ೫೩೯೩೭ ಫೂಟು ಎತ್ತರವಾಗಿದೆ.

* * *

ಫ್ರಾನ್ಸಿನ ಮ್ಯಾಗಿನೊ ಲಾಯಿನ್ ಕಟ್ಟುವುದಕ್ಕೆ ೯,೪೪೮೩೦೦೦೦೦೦ ಪೌಂಡುಗಳು ವೆಚ್ಚವಾಗಿವೆಯಂತೆ. ದೇಶದ ಜನರಲ್ಲಿ ಸಂಸ್ಕೃತಿ ಹರಡಲು ಈ ಹಣ ವೆಚ್ಚವಾಗಿದ್ದರೆ !

* * *

ಅಖಂಡ ಕುಪ್ಪುಸದ ಉಪಯೋಗ

ಅಖಂಡ ಕುಪ್ಪುಸ

★

ಶ್ರೀ. ಹಳಸೇಟಿ ಚಿಂತಾಮಣಿರಾಯರು

ಕುಪ್ಪುಸಗಳಲ್ಲಿ ಅನೇಕ ಪ್ರಕಾರಗಳು ಇವೆ. ಅವುಗಳಲ್ಲಿ ೯ ತುಂಡಿನ ಕುಪ್ಪುಸ, ೩ ತುಂಡಿನ ಕುಪ್ಪುಸ, ಅಖಂಡ ಕುಪ್ಪುಸ, ಕೊಂಕುಳ ಕುಪ್ಪುಸ (ಮರಾಠಿಯಲ್ಲಿ ಕಟೋರಿ ಚೋಳಿ), ಗಂಧರ್ವ ಕುಪ್ಪುಸ, ಗುಂಡಿಯ ಕುಪ್ಪುಸ ಮೊದಲಾದುವುಗಳು ಪ್ರಾಮುಖ್ಯವಾದುವುಗಳು. ಈಗ ವಿಶೇಷವಾಗಿ ರೂಢಿಯಲ್ಲಿರುವ ಅಖಂಡ ಕುಪ್ಪುಸದ ವಿಷಯ ಇಲ್ಲಿ ಕೊಡಲಾಗಿದೆ. ಇದನ್ನು ಸಾಮಾನ್ಯವಾಗಿ ಬಿಳಿಯ ಅರಿವೆಯಲ್ಲಾಗಲಿ, ಚೀಟಿನಲ್ಲಾಗಲಿ, ಖಣಗಳಲ್ಲಾಗಲಿ ತಯಾರಿಸಿ ತೊಡುವರು.

ಅಳತೆ:— ೩೪" ಎದೆ, ೧೪" ಉದ್ದ, ೧೨½" ಭುಜಸಹಿತ ತೋಳು, ೧೩" ಕೊರಳು. ಇದಕ್ಕೆ ಕೊರಳಿನ ಅಳತೆಯನ್ನು ಹೆಚ್ಚು ಸಡಿಲು ತೆಗೆದುಕೊಳ್ಳಬೇಕು. ಒಂದೇ ಗುಂಡಿ; ಬುಡಕ್ಕೆ ಕಟ್ಟಿಕೊಳ್ಳುವಂತಿರಬೇಕು.

ಚಿತ್ರಿಸುವುದು:—

ಅ, ಬ, ಕ ಕಾಟಕೋನ.

ಅ, ಬ = ೧೨½" ಭುಜಸಹಿತ ತೋಳು.

ಅ, ಕ = ೧೫" ಎಂದರೆ ಉದ್ದ + ೧"

ಅ, ಡ = ೧"

ಅ, ಇ = ೩" ಎಂದರೆ ಕುತ್ತಿಗೆಯ ½

ಅ, ಫ = ೪" ಕುತ್ತಿಗೆಯ ½ + ೧"

ಡ, ಇ, ಫ ಕೊರಳನ್ನು ಚಿತ್ರದಂತೆ ಕೂಡಿಸು

ಅ, ತ = ೬½" ತೋಳಿನ ಸಡಿಲು.

ತ ಬಿಂದುವನ್ನು ಮುಂದಕ್ಕೆ ಎಳೆ.

ತ, ರ = ೧೦" ಎದೆಯ ¼+೧½"

ಬ, ಗ ಕೂಡಿಸು.

ರ ವನ್ನು ಕೆಳಕ್ಕೆ **ಜ** ಕ್ಕೆ ಕೂಡಿಸು.

ಜ, ಗ ಬಗಲಿನ ಭಾಗವನ್ನು ಚಿತ್ರದಂತೆ ಕೂಡಿಸು.

ತ, ಮ = ೬" ಎಂದರೆ **ತ, ರ** ಇದರ ½+೧"

ರ, ಳ = ೩"

ಳ, ನ ½

ನ, ಮ, ಳ ಡಾಚನ್ನು ಮಾಡು.

ಕ, ಟ = ೧"



ಜ, ಚ = ೧"

ಟ, ಚ ಕೂಡಿಸು. ಇದು ಹಿಂಬಾಗಕ್ಕೆ ಬರುವುದರಿಂದ ಟಿಕ್ಕುಗಳಿಂದ ತೋರಿಸಿದೆ.

ಕತ್ತರಿಸುವುದು:—ಮುಂಭಾಗದಲ್ಲಿ **ಫ, ಇ.** ಕೊರಳಿನ ಬಾಗನ್ನು ಕತ್ತರಿಸು.

ನ, ಮ ಳ. ಡಾಚನ್ನು ಕತ್ತರಿಸು. ಇಲ್ಲವೆ ಒಳಬದಿಗೆ ಡಾಚು ಹಿಡಿ.

ಹಿಂಭಾಗದಲ್ಲಿ:— **ಡ, ಇ,** ಕೊರಳಿನ ಬಾಗನ್ನು ಕತ್ತರಿಸು.

ಟ, ಚ. ವನ್ನು (ಮುಂಭಾಗದ ಕ, ಜ.ದ ಕಿಂತ ೧" ಕಡಿಮೆ) ಕತ್ತರಿಸು.

ಇನ್ನುಳಿದ ಬ, ಗ, ಹಾಗು ಗ, ಜ ಬಗಲಿನ ಬಾಗನ್ನು ನಾಲ್ಕೂ ಪದರಗಳನ್ನು ಕತ್ತರಿಸು.

ಇದಕ್ಕೆ ಬೇಕಾಗುವ ಅರಿವೆ: ೨೯" ಉದ್ದ ೨೫" ಅಗಲ ಉಳ್ಳ ಅರಿವೆಯ ಒಂದು ತುಂಡು ಬೇಕಾಗುವುದು.

ಎಂದರೆ:— ೨೭" ಅಗಲ ಉಳ್ಳ ಅರಿವೆ ೧೩ ಗೆರೆ ಬೇಕಾಗುವದು.

ಟೀಪು:— ಇದಕ್ಕೂ ಹೆಚ್ಚು ಸುಲಭವಾಗುವಂತೆ ಬರೆಯಲು ಸಾಧ್ಯವಿಲ್ಲವೇ ಎಂದು ಅನೇಕ ವಾಚಕರು ನನಗೆ ಕೇಳುತ್ತಿರುವುದರಿಂದ ಒಂದೆರಡು ಸುಲಭ ಸೂಚನೆಗಳನ್ನು ಅವರಿಗೆ ಮಾಡ ಬಯಸುತ್ತೇನೆ.

೧. ಪರರಾಷ್ಟ್ರದ ಹೊಲಿಗೆಯ ವಿಷಯಕ ಮಾಸಪತ್ರಿಕೆಗಳು ಮಾಡುತ್ತಿರುವಂತೆ ಆಯಾ ಉಡುಪಿನ ಕತ್ತರಿಸಿದ ಕಾಗದದ ನಮೂನೆಗಳನ್ನು ಇಚ್ಛಿಸಿದವರಿಗೆ ಜಯಂತಿಯ ಸಂಚಿಕೆಯೊಡನೆ ಕಳಿಸುವೆನು. ಅದಕ್ಕಾಗಿ ೨ ಆಣೆಯ ಅಂಚೆಚೀಟಿಯನ್ನು ಕಳುಹಿಸಿದ ಜಯಂತಿಯ ಚಂದಾದಾರರಿಗೆ ಅಂತಹ ನಮೂನೆಗಳನ್ನು ಕಳುಹಲಾಗುವದು.

೨. ಅಷ್ಟರ ಮಟ್ಟಿಗೆ ತಮಗ ಬಂದ ಶಂಕೆಗಳನ್ನು ಪತ್ರದಿಂದ ನಮಗೆ ತಿಳುಹಿದ ಸ್ಥಳ ದೊರೆತಂತೆ ಜಯಂತಿಯಲ್ಲಿಯೇ ಅವಕ್ಕೆ ಉತ್ತರಕೊಡಲಾಗುವುದು.

ನಿಮಗೆ ದೀಪಾವಳಿಯ ಸಂಪೂರ್ಣ ಸೊಗಸು-ಸೌಂದರ್ಯಗಳನ್ನು
ಅನುಭವಿಸಬೇಕೆನಿಸುವುದಿಲ್ಲವೆ ?

ಹಾಗಾದರೆ ಅದಕ್ಕಾಗಿ ಏನು ಮಾಡಬೇಕೆಂಬ ವಿಚಾರವಿದೆ ನಿಮ್ಮದು ?

ಇನ್ನೇನೂ ಬೇಕಾಗಿಲ್ಲ !

ಜಯಂತಿಯ ದೀಪಾವಳಿ ಸಂಚಿಕೆ

ತರಿಸಿಕೊಂಡು ಬಿಡಿರಿ ಸಾಕು ! ಇನ್ನೇನೂ ಬೇಡ !

★

ಹುಡುಗರ ತಿಂಡಿ-ತಿನಿಸುಗಳ ಆಶೆ ಬಿಡಿಸುವುದು ! ಹೆಂಗುಸರ ಒಡವೆ-ತೊಡವುಗಳ
ತಾಪ ಕಡಿಮೆಮಾಡುವುದು ! ನಿಮ್ಮ ಸಂಸಾರತಾಪಗಳೆಲ್ಲವೂ ಓಡಿಹೋಗುವುವು !

★ ★

ಏಕೆಂದರೆ ಜಯಂತಿ ನಿಮ್ಮೆಲ್ಲರನ್ನೂ ಆನಂದದ ಕಡಲಿನಲ್ಲಿ ತೇಲಿಸಿ
ಹೊಸ ವಿಚಾರಗಳ ಆಗಸದಲ್ಲಿ ಹಾರಾಡಿಸಿ ಬಿಡುವುದು !

★ ★ ★

ಕನ್ನಡನಾಡಿನ ಹಿರಿಯ ಲೇಖಕರ ಬರೆಹದ ಸವಿಯೂಟದೆಡೆ ಎನಿಸುವುದಿದು !
ಸಾಂಪ್ರದಾಯಿಕ ಬುದ್ಧಿಯ ಕಗ್ಗತ್ತಲೆಗೆ ನಾಲುದೀಪದಂತೆ ಬೆಳಕನ್ನು ಕೊಡುವುದಿದು !
ಪ್ರತಿ ಸಂಚಿಕೆಗಿಂತ ಹೆಚ್ಚು ಪುಟಗಳು ! ಹೆಚ್ಚು ಚಿತ್ರಗಳು ! !

★ ★

ಏಜಂಟರೂ ವಾಚಕರೂ ಮೊದಲೆ ತಮ್ಮ ಬೇಡಿಕೆ ಕಳಿಸಬೇಕು !

★

ನವ್ಹಂಬರ್ ಸಂಚಿಕೆಯೇ ದೀಪಾವಳಿಯ ಸಂಚಿಕೆ !

ಜಾಹೀರಾತು ಕೊಡುವವರೂ ಬೇಗನೆ ಪತ್ರವ್ಯವಹಾರ ಮಾಡಬೇಕು !

ಜಯಂತಿ ಕಾರ್ಯಾಲಯ, ಧಾರವಾಡ

ನಗೀಗೆ ನೇವಿದ್ಯ

ವೆಚ್ಚಾದ ಜಾಣತನ

ಕಾರ್ಯಾಲಯದಲ್ಲಿ ಕೆಲಸ ಬೇಡುವುದಕ್ಕೆಂದು ವಾರಿಯಣ್ಣ ಬಂದಿದ್ದ; ಅವನನ್ನು ಕುರಿತು ಕಾರ್ಯಾಲಯದ ಮುಖ್ಯಸ್ಥರು ಕೇಳಿದರು:

"ಏನಪ್ಪಾ! ನಮ್ಮ ಆಫೀಸಿನೊಳಗಿನ ಕೆಲಸಾ ನೋಡಿಕೊಳ್ಳುವಷ್ಟು ಜಾಣತನಾ ಅದ ಏನು ನಿನ್ನಲ್ಲಿ?"

"ಇರದೇ ನಾ ಯಾತಕ್ಕ ಬರಲಿ ರಾವ್‌ಸಾಹೇಬ್! ನಾ ಮೊದಲು ಆಜೀಕಡೇ ರಾವ್‌ಸಾಹೇಬರ ಆಫೀಸಿನೊಳಗ ಕೆಲಸಾ ಮಾಡತಿದ್ದೆ. ದಿನದಿನಕ್ಕ ನಿನ್ನ ಜಾಣತನ ಹೆಚ್ಚಾಗಲಿಕ್ಕೆ ಹತ್ತೇದಂತ ಹೇಳೀ ಅವರು ನನ್ನನ್ನ ತಗದುಬಿಟ್ಟರು!

* * *

ಕೆಮ್ಮಿನ ರೋಗಿ

ಡಾಕ್ಟರ್:— ಈಗೇನು ನಿಮಗ ಕೆಮ್ಮಿನ ತೊಂದರೆ ಇದ್ದಂತೆ ಇಲ್ಲ, ಅಲ್ಲವೇ?

ರೋಗಿ:— ತೊಂದರೇ? ಅಂ.. ನೋಡ್ರಿ ರಾತ್ರಿಯೆಲ್ಲಾ ಕೆಮ್ಮಿ ಕೆಮ್ಮಿ ಈಗ ಕೆಮ್ಮೂ ಅಭ್ಯಾಸನ್ನ ಆದ್ಹಾಂಗ ಆಗೇದ ನನಗ!

* * *

ಇಬ್ಬರು ಸತ್ಯವಂತರು

ಬಂಡೇರಾಯರು ಹೊಸತಾಗಿ ಬದರೀ ಯಾತ್ರೆ ಮಾಡಿಬಂದಿದ್ದರು. ಅವರು ತಮಗಿಂತ ಮೊದಲೇ ಯಾತ್ರೆ ತೀರಿಸಿ ಬಂದಿದ್ದ ಗುಂಡೇರಾಯರಿಗೆ ಪ್ರವಾಸದ ಅನುಭವ ಹೇಳುತ್ತಿದ್ದರು. ಆಗ

ಬಂಡೇರಾಯ:— ಏನ್ರೀ, ಆದು ಬದರಿಯೊಳಗಿನ ಛಳಿ! ನಮ್ಮ ದೀಪದ ಉರಿಕೂಡಾ ಹೆಪ್ಪುಗಟ್ಟಿ ಹೋಗಿತ್ತು. ನಮಗ ದೀಪಾ ಶಾಂತಮಾಡಲಿಕ್ಕೇ ಬರತಿದ್ದಿಲ್ಲ ಏನ್ರಿಪಾ!"

ಗುಂಡೇರಾಯ:— ಇದು ಯಾವ ದೊಡ್ಡ ಮಾತಂತ ಹೇಳತೀರಿ ನೀವು? ನಾವು ಹೋದಾಗಿನ ಛಳೀ ಕಥೀ ಏನು ಹೇಳಲಿ! ಅಲ್ಲೆ ನಾವು ಮಾತಾಡಿದಾಗೆಲ್ಲಾ ಬಾಯಿಂದ ಬರ್ಫದ ತುಂಡುಗಳೇ ಹೊರಗ ಬೀಳತಿದ್ವು! ಆ ಮಾತಿನ ಅರ್ಥ ನಮಗ ಆಗಬೇಕಾದರ ಆ ಬರ್ಫದ ತುಂಡುಗಳನ್ನ ಹಂಚಿನೊಳಗ ಹಾಕಿ ಹುರಿಯೂ ಪ್ರಸಂಗ ಬರತಿತ್ತು!

* * *

ರಾಯರ ಪ್ರಾಮಾಣಿಕತನ

ಗಣೇಶನ ಪೂಜೆಗಾಗಿ ರಾಯರಿಗೆ ಹೂ ಬೇಕಾದುವು. ಯಾರದೋ ಒಂದು ತೋಟದೊಳಗೆ ನುಗ್ಗಿ ಹೂ ಕೊಯ್ಯತೊಡಗಿದರು. ಅಲ್ಲಿಯ ತೋಟಿಗ ಕೂಗಿ ಹೇಳಿದ:

"ಏನ್ರೀ, ಯಾರ ತೋಟಾ ಅಂತ ಹೂ ಕೊಯ್ಯತೀರೀ! ಅಲ್ಲೆ ಬಾಗಿಲ ಮ್ಯಾಲ ಹಚ್ಚಿದ ಹಲಗಿ ಕಾಣಲಿಲ್ಲೇನು ನಿಮಗ? ಅದರ ಮ್ಯಾಲ ಬರದ್ದದ ನೋಡ್ರಿ 'ಇದು ಖಾಸಗೀ' ಅಂತ!

ರಾಯರು ಹೂ ಕೊಯ್ಯುತ್ತಲೇ ಉತ್ತರ ಕೊಟ್ಟರು:

"ನೋಡಪಾ 'ಖಾಸಗೀ' ಅಂತಿರುವ ಅಕ್ಷರದ ಕಡೆ ಸುದ್ಧಾ ನಾವು ಕಣ್ಣುಹಾಕವರಲ್ಲ; ತಿಳೀತೇನು?

* * *

ಹೀಗೆಯೆ ಆಗಿತ್ತು

ಪತ್ರಿಕೆಯೊಂದರಲ್ಲಿ ಹೀಗೆ ಸುದ್ದಿ ಪ್ರಕಟವಾಗಿತ್ತು:

"ಪಾಪ! ಕಿವುಡ ರಾಮಾಚಾರ್ಯರೆಂಬೊಬ್ಬ ಸದ್ಗೃಹಸ್ಥರು ಮೋಟಾರುಗಾಡಿಯ ಗಾಲಿಯಲ್ಲಿ ಸಿಕ್ಕು ಅಪಮೃತ್ಯುವಿಗೆ ಈಡಾದರು. ಕಳೆದ ವರ್ಷ ಸಹ ಅವರಿಗೆ ಹೀಗೆಯೇ ಆಗಿತ್ತು"

ಈ ಸುದ್ದಿಯನ್ನೋದಿದ ನಮ್ಮ ಪುಟ್ಟ ತಲೆಯನ್ನು ಕೆರೆದುಕೊಳ್ಳತೊಡಗಿದ.

* * *

ಹಾನಿತುಂಬಿಕೊಳ್ಳುವ ಹಂಚಿಕೆ

ನ್ಯಾಯಾಧೀಶ:— ನೀನು ನಿರಪರಾಧಿಯೆಂದು ನನಗೆ ಸಂಪೂರ್ಣವಾಗಿ ಎನಿಸುತ್ತದೆ. ಆದುದರಿಂದ ನಿನ್ನನ್ನು ಬಿಟ್ಟು ಬಿಡಲಾಗಿದೆ; ಹೋಗು!

ಅಪರಾಧಿ:— ಏನು ರಾವ್‌ಸಾಬ್, ನನ್ನ ಕಡೆ ಯಾವುದೂ ತಪ್ಪಿಲ್ಲದೇ ಎರಡು ತಿಂಗಳ ತನಕಾ ಸುಮ್ಮನೇ ಜೇಲಿನಾಗ ಕೂಡಿ ಹಾಕಿದಿರಿ! ಇದರ ಹಾನೀ ತುಂಬಿಕೊಳ್ಳಲಿಕ್ಕಂತ ನಾ ಒಂದು ಸಣ್ಣ ಗುನ್ಹೇ ಮಾಡಿದರ ನಡೀತದ ಹೌದಲ್ಲೋ?

* * *

ಜಿಜ್ಞಾಸೆಗೆ ಸಮಾಧಾನ

"ಅಲ್ಲಾ, ಹೆಂಗುಸರಿಗೆ ಗಂಡಸರಿಗಿಂತ ಬೇಗನೇ ಹ್ಯಾಂಗ ಬರತದರೀ ಈಸಲಿಕ್ಕೆ?"

"ಹೆಂಗಸರಿಗೆ ಕಲಿಸೂ ಹಾಂಗ ಉಲ್ಲಾಸದಿಂದಲೂ ಉತ್ಸಾಹದಿಂದಲೂ ಆತ್ಮೀಯತೆಯಿಂದಲೂ ಗಂಡಸರಿಗೆ ಯಾರು ಕಲಿಸತಾರ ಈಸಲಿಕ್ಕೆ?"

* * *

ಯಾವ ದೊಡ್ಡ ಮಾತು?

ಹೊಸತಾಗಿಯೆ ಶಾಲೆಗೆ ಬಂದ ಹುಡುಗಿ ಒಂದೇಸಮನೆ ಅಳುತ್ತಿರುವುದನ್ನು ಕಂಡು ಶಿಕ್ಷಕರು ಕೇಳಿದರು:

"ಯಾಕವ್ವಾ, ಇಷ್ಟ್ಯಾಕೆಂದು ಅಳಲಿಕ್ಕೆ ಹತ್ತೀದಿ.. ಏನಾಗೇದ?"

"ನನಗ ಹದಿನೈದು ವರ್ಷ ಆಗೂತನಕಾ ಈ ಸಾಲೀಯೊಳಗ ಇರಬೇಕಂತ ನನ್ನ ತಂದಿ ಅಂತಿದ್ದರು!"

"ಅಯ್ಯೋ ಪಾಪ! ಅಂಜಬ್ಯಾಡ ತಂಗೀ! ನನಗ ಐವತ್ತೈದು ವರ್ಷ ಆಗೂತನಕಾ ಈ ಸಾಲೀಯೊಳಗs ಇರಬೇಕಾಗೇದ! ನಿನ್ನ ಹದಿನೈದು ವರ್ಷದ್ದು ಯಾವ ದೊಡ್ಡ ಮಾತೂ ಅಂತ ಅಳತೀ ನೀನು?

* * *

ಯಾವುದೇನು ?

ನ್ಯಾಯಾಧೀಶ:—(ಅಪರಾಧಿನಿಯನ್ನು ಕುರಿತು) ಏನವ್ವಾ,.. ಆಯ್ತು ನೀನು ಈ ಮೊದಲು ಒಪಿಗೊಂಡೇ ಬಿಟ್ಟೇದೀ; ಹೇಳು, ನೀನು ನಿನ್ನ ಗಂಡನ್ನ ಒನಿಕೆಯಿಂದ ಹೊಡೆಯಲಿಕ್ಕೆ ಕಾರಣವೇನು ?

ಅಪರಾಧಿನಿ:–ಕಾರಣಾ ಏನು ಹೇಳೂದು ರಾಯರs; ಪ್ರತಿದಿನಾ ಹೊಡೀತಿದ್ದ ಕಸಬರಿಗಿ ಕೈಗೆ ಸಿಗಲಿಲ್ಲ. ಅಲ್ಲೇ ಸಮಿಪs ದೊಳಗs ಒನಿಕಿ ಇದ್ದದ್ದು ಕಣ್ಣಿಗೆ ಬಿತ್ತು. ಯಾವದೇನೂ ಅಂತ ಅದನ್ನs ತೊಗೊಂಡು ಹೊಡೆದೆ.

* * *

ಯಜಮಾನ-ಅತಿಥಿ

ಯಜಮಾನ:–(ಅತಿಥಿಯನ್ನು ಕುರಿತು) ಓ, ಬರ್ರಿ, ಬರ್ರಿ! ಏನ್ರಪಾ ನೀವು! ಇದಕ್ಕೂ ಒಂದೇಒಂದು ಮಿನೀಟು ಮೊದಲಿಗೇನs ಬಂದಿದ್ದರ ಎಷ್ಟು ಒಳ್ಳೇದಾಗತಿತ್ತು! ಈಗ ಅವಳು (ಹೆಂಡತಿ) ಸುದ್ಧಾ ಕಾಫೀ ಕುಡಿದು ಮುಗಿಸಿರಬಹುದು!

ಅತಿಥಿ:—ಮುಗಿಸಿರಬಹುದಿಷ್ಟೇ ಯಾಕ; ಕುಡಿಯೂ ಗಡಬಡಿಯೊಳಗ ಕಪ್ಪನ್ನು ಕೂಡಾ ಒಡೆಕೊಂಡಿರಬಹುದು !

* * *

ಟಾಯರ್‌ಫಾಯ್ಡಿನಿಂದಲೇ ?

ರೋಗಿ:— ಡಾಕ್ಟರ್ ಸಾಹೇಬ್, ನೋಡ್ರಿ, ಚೆನ್ನಾಗಿ ನೋಡ್ರಿ! ಇದು ಟಾಯ್‌-ಫಾಯ್‌ಡೇ ಹೌದೇನು? ಒಮ್ಮೊಮ್ಮೆ ಹೀಂಗೂ ಆಗತಿರತ್ತದ, ಏನಂದರ ಒಂದು ರೋಗಾ ಅಂತಿಳಿದು ಡಾಕ್ಟರು ಔಷಧ ಕೊಡತಿರತಾರ; ಇನ್ನೊಂದು ರೋಗದಿಂದ ರೋಗಿ ಸಾಯುತಿರತಾನ!

ಡಾಕ್ಟರ್:— ನೀವು ಏನೂ ಯೋಚನೀ ಮಾಡಬ್ಯಾಡಿರಿ. ನಾ ಟಾಯರ್‌ಫಾಯಿಡು ಅಂತ ಹೇಳಿ ಯಾವಾಗ ಔಷಧ ಕೊಡತೀರತೇನೋ ಆಗೆಲ್ಲಾ ರೋಗಿಗಳು ಸತ್ತದ್ದು ಟಾಯರ್‌ಫಾಯ್ಡಿನಿಂದಲೇ! ನೀವು ಸ್ವಲ್ಪೂ ಅಂಜೂಕಾರಣಿಲ್ಲ!

* * *

ಕೂಗಿ ಕರೀತೀನಿ !

ಆಳು:—ರಾಯರs, ಮುಂಜಾನೆ ನಿಮ್ಮನ್ನ ಎಷ್ಟೊತ್ತಿಗೆ ಎಚ್ಚರಿಸಬೇಕಂಬೂದನ್ನು ಹೇಳತೀರೇನ್ರಿ?

ಯಜಮಾನ:— ಇರಲಿ, ನೀನು ಈಗ ಮಲಗಿಕೋ! ಎಚ್ಚರಿಸಬೇಕಾಗೂ ಸಮಯಕ್ಕ ನಾನೇ ನಿನ್ನ ಕೂಗಿ ಕರೀತೀನಿ, ತಿಳೀತs!

* * *

ದೊಡ್ಡ ಮನಸ್ಸು

ಒಬ್ಬವ:— ನಿನ್ನೆಯ ದಿನ ಈ ಸ್ಥಳದಲ್ಲಿ ನಾನು ನೂರು ರೂಪಾಯಿಗಳುಳ್ಳ ಒಂದು ಚೀಲವನ್ನು ಕಳೆದುಕೊಂಡಿದ್ದೇನೆ. ಸಿಕ್ಕವರು ಅದನ್ನು ನನಗೆ ಕೊಟ್ಟರೆ ಅವರಿಗೆ ೧೦ ರೂಪಾಯಿಗಳ ವರೆಗೂ ಇನಾಮು ಕೊಡಲು ನಾನು ಸಿದ್ಧನಿದ್ದೇನೆ.

ಅಲ್ಲಿಯೇ ಇದ್ದ ಇನ್ನೊಬ್ಬ :— ಇಷ್ಟೇಯೆ? ನನಗೆ ಕೊಟ್ಟರೆ ಇಪ್ಪತ್ತು ರೂಪಾಯಿ ಇನಾಮು ಕೊಡಲಿಕ್ಕೆ ನಾನು ಸಿದ್ಧನಿದ್ದೇನೆ.

* * *

ಸಹಾಯ ಮಾಡಲಿಲ್ಲ

ಶಿಕ್ಷಕ:—ಏ ಗುಂಡ್ಯಾ! ಯಾರ ಸಹಾಯದಿಂದ ಈ ನಕಾಶ ತೆಗೆದಿದ್ದೀಯೋ ನೀನು?

ಗುಂಡ:—ಸಹಾಯs? ನಾನು ಯಾರ ಸಹಾಯದಿಂದಲೂ ತೆಗೆದಿಲ್ಲ ಸರ್!

ಶಿಕ್ಷಕ:— ನಿಜಾ ಹೇಳು; ನಿಮ್ಮ ಅಣ್ಣ ಸಹಾಯ ಮಾಡಿಲ್ಲವೇ?

ಗುಂಡ:— ಅಂಥಾ ಸಹಾಯ ಮಾಡಲಿಲ್ಲ ಸರ್, ತಾನs ನಕಾಶಾ ತೆಗೆದುಕೊಟ್ಟಾನ ಸರ್!

* * *

ತಿಳಿಯೂ ಹಾಂಗs ಇರಲಿಲ್ಲ!

ನ್ಯಾಯಾಧೀಶ:—(ಸಾಕ್ಷೀದಾರನನ್ನು ಕುರಿತು) ಏನ್ರೀ, ನೀವು ಅಲ್ಲೇ ಇದ್ದೆ ಅಂತ ಹೇಳ್ತೀರಿ; ಆರೋಪೀ ಫಿರ್ಯಾದೀನ್ನ ಹೊಡೀತಿರುವಾಗ ನೀವು ಬಿಡಿಸಲಿಕ್ಕೆ ಯಾಕ್ರಪಾ ಹೋಗಲಿಲ್ಲ?

ಸಾಕ್ಷೀದಾರ:— ನಿಜಾನs ಹೇಳಬೇಕಾದರ ಆಗಿನ ಮ್ಯಾಳ್ಯಾದೊಳಗ ಆರೋಪೀ ಯಾರು ಆದಾರು, ಫಿರ್ಯಾದೀ ಯಾರು ಆದಾರು ಅಂಬೂದು ತಿಳಿಯೂ ಹಾಂಗs ಇರಲಿಲ್ಲ ರಾವ್ ಸಾಹೇಬ್!

* * *

ಇನ್ನೂರು ತಿಂಗಳು!

ಉಪಾಧ್ಯಾಯ:—(ಗಣಿತ ಹೇಳುತ್ತ) ಏಲೋ ಗುಂಡಾ! ನಿಮ್ಮ ತಂದಿ ತಿಂಗಳಿಗೆ ೨೦ ರೂಪಾಯಿ ಕೊಟ್ಟು ಒಬ್ಬ ಆಳನ್ನು ಮನಿಯೊಳಗ ಇಟುಕೊಂಡಾ ಅಂತ ತಿಳಿ. ಆ ಆಳು ಇನ್ನೂರು ರೂಪಾಯಿ ಸಂಬಳ ಪಡೆದುಕೊಳ್ಳಬೇಕಾದರೆ ಎಷ್ಟು ದಿನಾ ನಿಮ್ಮ ಮನಿಯೊಳಗ ದುಡೀಬೇಕಾಗತ್ತದ?

ಗುಂಡ:— ಇನ್ನೂರು ತಿಂಗಳು ಸರ್.

ಉಪಾಧ್ಯಾಯ:— ಥೂ ಮೂರ್ಖಾ, ನಿನಗೆ ಲೆಕ್ಕವೇ ಬರೂದಿಲ್ಲ!

ಗುಂಡ:—ನನಗೆ ಲೆಕ್ಕ ಬರೂದಿಲ್ಲಾಂತ ಅಲ್ಲ ಸರ್! ತಮಗೆ ನಮ್ಮ ತಂದೆಯ ಸ್ವಭಾವದ ಪರಿಚಯನೇ ಇಲ್ಲ!

* * *

ದುರ್ಮುಖನ ದೂರದೃಷ್ಟಿ

ಫೋಟೋಗ್ರಾಫರ್:— ಹೀಂಗ್ಯಾಕರೀ ಅಳಬುರಕನ್ಹಾಂಗ ಮಾರೀ ಮಾಡಿದ್ದೀರಿ! ಸ್ವಲ್ಪ ನಗಿ ಮಾರೀ ಮಾಡಿ ಕೂತುಗೊಳ್ರಿ!

ಗಿರಾಕಿ:— ನೋಡ್ರಿ, ನಮ್ಮ ಸುಖಾ ದುಃಖಾ ನಿಮಗ ಹ್ಯಾಂಗ ಗೊತ್ತಾಗಬೇಕು ಹೇಳ್ರಿ! ಈಗ ತಗಿಸತಿರೋ ಫೋಟೋ ನನ್ನ ಹೆಂಡತೀ ಕಡೆ ಕಳಿಸಿಕೊಡಬೇಕಾಗೇದ; ಈಗ ನಗಿಮಾರೀ ಮಾಡಿಕೊಂಡು ಕೂತರ ನಾ ಆರಾಮಾಗಿ ಇದ್ದೀನಿ ಅಂತ ಆಕೀಗೆ ಅನಸತದ. ಹಾಂಗ ಅನಿಸಿದರ ಆಕಿ ತೌರಮನಿಂದs ಬೇಗನೆ ಎಂದೂ ಬರಲಾರಳು !

* * *



ರಾಮದುರ್ಗದ ರಾಮಾಯಣ

ನ್ಯಾ. ದಾವರರು ತಮ್ಮ ಅಧ್ಯಕ್ಷತೆಯಲ್ಲಿ ನಡೆದ ವಿಚಾರಣೆಯ ವರದಿಯನ್ನು ಒಪ್ಪಿಸಿದ್ದಾರೆ. ಆದರೆ ಇಲ್ಲಿಗೆಯೆ ರಾಮದುರ್ಗದ ರಾಮಾಯಣ ಸಮಾಪ್ತಿಯಾಯಿತೊ– ಎಂಬುದೊಂದು ಪ್ರಶ್ನೆ. ಅಸಕ್ಕೂ ಮುಂಚೆ ಈ ಪ್ರಕರಣಕ್ಕೆ ನಾವು ರಾಮಾಯಣದ ಹೋಲಿಕೆಯನ್ನು ಯಾಕೆ ಕೊಡಬಯಸುವೆವೆಂಬುದಕ್ಕೆ ಎರಡು ನಿದರ್ಶನಗಳನ್ನು ಕಾಣಿಸುವೆವು:— (೧) ಈ ಇಡಿಯ ಪ್ರಕರಣದಲ್ಲಿ ಎಲ್ಲಿಯೊ ಕಪಿಸೈನ್ಯದ ಹಾವಳಿ ಹೆಚ್ಚಾದಂತೆ ತೋರುವುದು (ಕಪಿಗಳು ಯಾರು ಎಂಬುದರ ನಿರ್ಣಯ ಮಾತ್ರ ಇನ್ನೂ ಆಗಿಲ್ಲ). (೨) ನ್ಯಾ. ದಾವರರ ವರದಿಯು, ರಾಮನು ಸೀತೆಯನ್ನು ಬಿಟ್ಟಂತೆ ಪ್ರಜಾಪಕ್ಷವನ್ನು ಅಡವಿಗೆ ಓಡಿಸಿದೆ. ಅಂತೂ ದೇವಪಕ್ಷ ಒಂದು, ರಾಕ್ಷಸರ ಪಕ್ಷ ಒಂದು ಎಂಬ ಚಿತ್ರವು ನಮ್ಮ ಮುಂದೆ ಇಡಲ್ಪಟ್ಟಿದೆ. ವಿಚಾರಣೆಯು ನಡೆಯುವಾಗ, ಅಲ್ಲಿ ಬೇರೆ ಬೇರೆ ಪಕ್ಷಗಳ ವತಿಯಿಂದ ಬಂದ ಸಾಕ್ಷೀದಾರರನ್ನು ಕಂಡಾಗ—ಪ್ರಜಾ ಸಂಘದವರು ತಮ್ಮ ಪಕ್ಷಮಂಡನೆ ನಡೆಯಿಸಿದ ರೀತಿಯನ್ನು ನಿರೀಕ್ಷಿಸಿದಾಗ—ಕೊನೆಯ ನಿರ್ಣಯವು ಪ್ರಜೆಗಳ ವಿರುದ್ಧವಾಗುವುದು ಖಂಡಿತ ಎಂದು ಯಾವ ಬುದ್ಧಿವಂತನಿಗೂ ಹೊಳೆಯದಿರಲಿಲ್ಲ. ಇಷ್ಟೇಕೆ– ದುರಂತನಡೆದ ಕೆಲವು ತಾಸುಗಳ ಅವಧಿಯಲ್ಲಿಯೆ ಯಾವುದನ್ನೂ ಅರಿತುಕೊಳ್ಳದೆ ಮುಖಂಡರು ಮೂಕಪ್ರಜೆಗಳನ್ನು ಖಂಡಿಸಿ ಪ್ರಕಟನೆ ಹೊರಡಿಸಿದಾಗಲೆ ಇದು ಕೊನೆಯವರೆಗೂ ದುರಂತ (tragedy) ವೆ ಆಗುವುದೆಂದು ನಾವು ಇಲ್ಲಿ ಹೇಳಿದ್ದೆವು. ವಿಚಾರಣೆಯಲ್ಲಿ ಒಪ್ಪಿಸಿದ ಸಂಗತಿಗಳಿಂದ ನ್ಯಾ. ದಾವರರಿಗೆ ಈಗಿನ ಕಿಂತ ಬೇರೆ ಅಭಿಪ್ರಾಯವನ್ನು ಕೊಡುವುದು ಶಕ್ಯವಿದ್ದಿಲ್ಲ. ಈಗಿನ ವರದಿಯಲ್ಲಿ ಅನೇಕ ಕಡೆ ನ್ಯಾಯಮೂರ್ತಿಗಳು, ನೀತಿ ಪಾಠಕ (Moralist) ರಂತೆ ಶಬ್ದದ ತೂಕಬಿಟ್ಟು ಪ್ರಜಾಪಕ್ಷವನ್ನು ಖಂಡಿಸಿದ್ದಾರೇನೊ ನಿಜ; ಆದರೆ ಒಟ್ಟಿನ ಮೇಲೆ ಕಾಣಿಸಿದ ಸಾಕ್ಷಿ– ಪುರಾವೆಗಳಿಂದ ಬೇರೊಂದು ನಿರ್ಣಯವು ಶಕ್ಯವಿರಲಿಲ್ಲ ಎಂದು ಮತ್ತೊಮ್ಮೆ ಹೇಳುವೆವು.

ತಪ್ಪಿದ ತರ್ಕ

ಇಷ್ಟು ಹೇಳಿದ ಮಾತ್ರಕ್ಕೆ ವರದಿಯನ್ನು ನಾವು ಅಭಿನಂದಿಸುವೆವೆಂದು ಅರ್ಥವಲ್ಲ. ಹಾಗೆ ನೋಡಿದರೆ, ಸ್ಥೂಲದೃಷ್ಟಿಯಿಂದ ಈ ವರದಿಯು ಪೂರ್ತಿಯಾಗಿ ಅಸಮಾಧಾನಕಾರಕವಾಗಿದೆ ಎಂದೇ ನಮ್ಮ ಅಭಿಪ್ರಾಯ. ಇದು ಕೇವಲ ಭಾವನಾಪ್ರಧಾನವಾದ ಅಭಿಪ್ರಾಯವಲ್ಲ ಎಂದು ತೋರಿಸಲು ಒಂದೆರಡು ಸಂಗತಿಗಳ ಸೂಕ್ಷ್ಮ ವಿವೇಚನೆಯನ್ನು ಕಾಣಿಸುವೆವು. '೧೯೩೮ ಮೇ ತಿಂಗಳಲ್ಲಿ, ಈ ಚಳವಳಿಗಾರರ ತಂಡವು ತಲೆಹಾಕುವವರೆಗೂ ರಾಮದುರ್ಗ ಸಂಸ್ಥಾನವು ಸಂತುಷ್ಟ ಹಾಗೂ ಸಂತೃಪ್ತವಾಗಿತ್ತು' ಎಂದು ನ್ಯಾ. ದಾವರರು ಅಭಿಪ್ರಾಯಪಡುತ್ತಾರೆ. ಚಳವಳಿಗಾರರು 'ತರುಣ ಮತ್ತು ಅನನುಭವಿಕ' ಎಂದೂ ನ್ಯಾಯಮೂರ್ತಿಗಳು ಅಭಿಪ್ರಾಯಪಟ್ಟಿದ್ದಾರೆ. ಇವೆರಡೂ ಅಭಿಪ್ರಾಯಗಳನ್ನು ಹೊಂದಿಸಿ ನೋಡಿದರೆ ಎಂತಹ ಅಸಮಂಜಸ ಚಿತ್ರ ಕಣ್ಣಿಗೆ ಕಟ್ಟುವುದು! ಸಕಲಸಮೃದ್ಧಿಸಂಪತ್ತುಗಳಿಂದ ಸಂತುಷ್ಟರಾದ ಒಂದು ದೇಶದ ಪ್ರಜೆಗಳನ್ನು, 'ತರುಣ ಮತ್ತು ಅನನುಭವಿಕ' ರಾದ ಹೊರಗಿನ ಚಳವಳಿಗಾರರು ಹನ್ನೆರಡು ತಿಂಗಳುಗಳಲ್ಲಿ ರಾಜದ್ರೋಹದ ಮತ್ತು ಅತ್ಯಾಚಾರದ ಕೃತ್ಯಗಳಿಗಾಗಿ ಒಲಿಸಿಕೊಂಡರು! ಅದೆಂತಹ ಮೋಹಿನೀಜಾಲ ಈ 'ಅನನುಭವಿಕ' ರಿಗಿದ್ದಿರಬಹುದು! ಅದೆಂತಹ ಅಲಕ್ಷ್ಯದ ಆಳಿಕೆ ರಾಮದುರ್ಗದಲ್ಲಿ ಇದ್ದಿರಬಹುದು! ಅಲ್ಲವೆ ಮತ್ತೆ? ಇಡಿಯ ಒಂದು ವರ್ಷದ ವರೆಗೆ ಜನರಲ್ಲಿ ಅತ್ಯಾಚಾರ ಬುದ್ಧಿಯ ಮತ್ತು ರಾಜದ್ರೋಹವಿಚಾರದ ಪ್ರಚಾರವನ್ನು ನಡೆಯಿಸಿದ ಕಿಡಿಗೇಡಿಗಳನ್ನು, ಅಂಗ್ಲೆಯಗಲ ಕ್ಷೇತ್ರದ ಈ ಅಧಿಕಾರಿಗಳು ತಡೆಯಲಿಲ್ಲವೆಂಬುದು ಅಲಕ್ಷ್ಯವೊ? ಅನರ್ಹತಾ ಸೂಚಕವೊ? ಪ್ರೋತ್ಸಾಹ ಪೂರ್ವಕವೊ! ವರ್ಷದ ವರೆಗೆ ನಡೆದುದನ್ನು ಮರೆತು ವರ್ಷದ ಕೊನೆಗೊಮ್ಮೆ ಗುಂಡು ಹಾರಿಸುವುದು 'ನ್ಯಾಯಸಮ್ಮತ'ವೆನಿಸಬಹುದು; ಹೊಣೆಗಾರಿಕೆಯ ದೃಷ್ಟಿಯಿಂದ ನೀತಿ ಸಮ್ಮತವೆನಿಸಬಹುದೊ– ಎಂದು ಪ್ರಶ್ನೆ.

ಹಿಂಸಾಪ್ರವೃತ್ತಿ ಯಾರದು?

ದೊಂಬಿಯ ಕಾಲದಲ್ಲಿ ನಡೆದ ಕೊಲೆ-ಸುಲಿಗೆ-ಹಿಂಸಾ– ಕೃತ್ಯಗಳನ್ನು ನಾವೂ ಹೃತ್ಪೂರ್ವಕವಾಗಿ ಹಟಪೂರ್ವಕವಾಗಿ ಖಂಡಿಸುತ್ತೇವೆ. ಎಷ್ಟೊಂದು ಕೆಣಕಿ (provoke)ದರೂ ಅತ್ಯಾಚಾರವು ಅಕ್ಷಮ್ಯವೆಂದು ನಮ್ಮ ಮುಂದಾಳುಗಳಿಗಿಂತ ಹೆಚ್ಚು ಘಂಟಾಘೋಷವಾಗಿ, ಕಂಠಶೋಷವಾಗಿ ನಾವೂ ಹೇಳಬಯಸುತ್ತೇವೆ. ಆದರೆ ಒಂದು ಮಾತನ್ನು ನಮ್ಮ 'ಗಾಂಧಿಮಯ' ಮುಂದಾಳುಗಳು ಲಕ್ಷ್ಯದಲ್ಲಿಡಬೇಕಾಗಿತ್ತು. ಮಹಾತ್ಮರ ತತ್ತ್ವಕ್ಕನುಸರಿಸಿ ಕೇವಲ ಹೊರಗೆ ರಕ್ತಸುರಿಸುವ ಕೊಲೆ-

ಸುಲಿಗೆಗಳೆ ಹಿಂಸೆಯಲ್ಲ, ಹಿಂಸೆಯು ಒಳಗಿರುವುದು, ಹೃದಯದ ಒಂದು ಸ್ವಭಾವದಂತಿರುವುದು. ಅಲಕ್ಷ್ಯ, ಅನ್ಯಾಯ, ಹೊಣೆಗಾರಿಕೆಯನ್ನು ಹಾರಿಸಿಕೊಳ್ಳುವುದು- ಇಂತಹ ಅನೇಕ ಪ್ರವೃತ್ತಿಗಳೂ ಹಿಂಸಾಬುದ್ಧಿಯ ದ್ಯೋತಕವೆ ಆಗಿವೆ. ಈಗ ನಡೆದ ಸಂದರ್ಭದಲ್ಲಿ ಇಂತಹ ಹಿಂಸಾಬುದ್ಧಿಯ ಉಗಮವೆಲ್ಲಿದ್ದಿತು, ಮೂಲ ಹೊಣೆಗಾರಿಕೆ ಎಲ್ಲಿದ್ದಿತು - ಎಂದು ಯಾರಾದರೂ ವಿಚಾರಿಸಿರುವರೆ? ಅಜ್ಞಾನಿಗಳ, ಕಿಡಿಗೇಡಿಗಳ ಅತ್ಯಾಚಾರಕ್ಕಾಗಿ ಅನಾಥರಾದ ಸಾವಿರಾರು ಪ್ರಜೆಗಳ ಸ್ವಾತಂತ್ರ್ಯಬಳವಳವನ್ನು ಕೊಂದೊಗೆಯುವುದು ನ್ಯಾಯಸಮ್ಮತವೆ? ಅತ್ಯಾಚಾರಕ್ಕೆ ಕಾರಣರಾದ ಕಿಡಿಗೇಡಿಗಳು, ಲೂಟಿಯನ್ನು ಮಾಡಿದ ಲಫಂಗರು ಸ್ವಭಾವತಃ ಕಿಡಿಗೇಡಿ (Criminal) ಗಳಿದ್ದರೊ, ಪರಪ್ರೋತ್ಸಾಹದಿಂದ ಮುಂದುಬಾದಿದ್ದರೊ? ಹಿಂದುಸ್ಥಾನದಲ್ಲಿ ಕಾಂಗ್ರೆಸಿನವರು ಬ್ರಿಟಿಷರ ವಿರುದ್ಧ ಬಾಡುಹೂಡಲು ಸಿದ್ಧರಿರುವರೆಂಬುದನ್ನು ಕಂಡೇ ಹಿಟ್ಲರನು ಈಗಿನ ಯುದ್ಧಕ್ಕೆ ಪ್ರೋತ್ಸಾಹಿತನಾಗಿದ್ದಾನೆಂದು ತರ್ಕಹೂಡಿ, ಯುರೋಪದಲ್ಲಿಯ ಅತ್ಯಾಚಾರಕ್ಕೆ ಕಾಂಗ್ರೆಸಿನ ಮುಂದಾಳುಗಳು ಹೊಣೆಗಾರರು ಎಂದಂತೆ ಮದುಗ್ರದ ದುರಂತಕ್ಕೆ ಪ್ರಜಾಸಂಘ ಹೊಣೆಗಾರವಿವೆಯ? ಗೆ ಹೇಳಿದರೆ ನಗುವವರು ಅಲ್ಲಿಯ ಎರಡೂ ಮಾತುಗಳಿಗಾಗಿ ಬೇಕಾಗುವುದಲ್ಲವೆ?

ಾತ ಬಡಿದುಕೊಳ್ಳುವುದು ಖಂಡಿತ

'ಅಯಶಸ್ವಿಯಾದ ಬಂಡು ಅಪರಾಧ, ಯಶಸ್ವಿಯಾದ ಬಂಡು ್ರಾಂತಿ' ಎಂಬ ಇತಿಹಾಸಪಾಠದ ಮಾತಿನಿಂದ ಯಾರೂ ಾಧಾನಹೊಂದುವಂತಿಲ್ಲ. ಯಾಕೆಂದರೆ, ರಾಮದುರ್ಗದಲ್ಲಿ ಾದದ್ದು ಪ್ರತ್ಯೇಕವಾದೊಂದು ಐತಿಹಾಸಿಕ ಘಟನೆಯಲ್ಲ; ಿಯ ಹಿಂದುಸ್ಥಾನದಲ್ಲಿ ಹರಿಯುತ್ತಿದ್ದ ಸ್ವಾತಂತ್ರ್ಯಪ್ರವಾಹದ ಾದು ಒತ್ತು. ಅದರ ಏರಿಳಿತಗಳಿಂದ ಮೂಲಪ್ರವಾಹದ ಏರಿಳಿತ ನ್ನು ಅರಿತುಕೊಳ್ಳಬಹುದು; ಮೂಲ ಪ್ರವಾಹದ ಏರಿಳಿತಗಳು ಕ್ಕೆ ತಡೆ-ತುಂಬುಗಳನ್ನು ಕೊಡುವುವು ಆದಕಾಗಿಯೆ ಮದುರ್ಗದ ಪರಿಸ್ಥಿತಿಯಿಂದ ನಮ್ಮ ಪ್ರಾಂತದ ಕಾಂಗ್ರೆಸ್ ುವಟಿಕೆಗಳ ಮೇಲೆ ಪರಿಣಾಮವಾಗುವುದು ಖಂಡಿತ ಎಂದು ಭಿಪ್ರಾಯಪಡಬಹುದಾಗಿದೆ. ಆ ಪ್ರಕರಣ ಇಂದು ಸತ್ತಂತಾ ೂ ಅದರ ಭೂತ ನಮ್ಮ ಕೆ. ಪಿ. ಸಿ. ಸಿ. ಗೆ ಬಡೆಯುವುದೂ ಂಡಿತ ಎಂದೇ ಹೇಳಬಹುದು. ಇಷ್ಟರಿಂದ ಭೂತ ಬಡಿಯಲಿ ಬುದು ನಮ್ಮ ಇಚ್ಛೆ ಎಂದು ಯಾರೂ ತಿಳಿಯಬಾರದು. ರ್ನಾಟಕದ ಸದ್ಯದ ರಾಜಕೀಯ ಜೀವನವನ್ನು ನೋಡಿದರೆ ಮ್ಯುನಿಸಿಪಾಲಿಟಿಗಳ ವರದಿಯಲ್ಲಿ ಕೆಲವೊಂದು ಜಾತಿಗಳು ಾಬಲ್ಯದವೆಂದು ನಿರ್ದಿಷ್ಟವಾದುದನ್ನು ನೆನೆದುಕೊಂಡರೆ, ನಮ್ಮ ಿಕೆಯ ಯಥಾರ್ಥತೆ ಕಂಡುಬರುವುದು. ಇನ್ನು ಮುಂದಾ ೂ ನಮ್ಮ ಮುಂದಾಳುಗಳು ಬರಿಯ ಮೇಲಿನಿಂದ ನಿರ್ಣಯ ಿಡುವ ದೊಡ್ಡಸ್ತಿಕೆಯನ್ನು ಬಿಟ್ಟು, ಕೆಳಗಿಳಿದು ಪ್ರಜೆಗಳ ಾಹಿತಗಳೊಡನೆ ಬೆರೆತು, ತಮ್ಮನ್ನು ಪೂರ್ತಿಯಾಗಿ ಮರೆತು, ಇಡಿಯ ಪ್ರಾಂತದ ದೃಷ್ಟಿಯನ್ನು ಕುರಿತು ವ್ಯವಹರಿಸತೊಡಗಿದರೆ ತೀವ್ರದಲ್ಲಿಯೆ ಈ ಭೂತದ ಉಚ್ಚಾಟನೆಯಾಗಬಹುದು. 'ತರುಣ'ರು 'ಅನನುಭವಿಕ'ರಾಗಿದ್ದರೆ ಅನುಭವಿಕರು ಮುದಿಗೊಡ್ಡಾಗಿದ್ದಾರೆ! ಈ ಚಕ್ರವ್ಯೂಹದಲ್ಲಿ ಸಿಕ್ಕ ನಮ್ಮ ಪ್ರಾಂತದ ರಾಜಕೀಯ ಜೀವನದ ಬಿಡುಗಡೆಯಾಗುವುದು ಹೇಗೆ?

ವರ್ಕಿಂಗ್ ಕಮಿಟಿಯ ನೆರಳು-ಬೇಟೆ

ಯುರೋಪದಲ್ಲಿ ನಡೆದ ಯುದ್ಧದಲ್ಲಿ ಇಂಗ್ಲಂಡವು ಭಾಗ ವಹಿಸಿದ್ದಕ್ಕಾಗಿ ಹಿಂದುಸ್ಥಾನದ ಹೊಣೆಗಾರಿಕೆ ಏನು, ಆ ಯುದ್ಧಕ್ಕಾಗಿ ತಳೆಯತಕ್ಕ ಧೋರಣೆ ಯಾವುದು-ಎಂಬ ಮಹತ್ವದ ಪ್ರಶ್ನೆಯನ್ನು ನಿರ್ಣಯಿಸುವುದಕ್ಕೆ ಕಳೆದ ತಿಂಗಳ ಮಧ್ಯದಲ್ಲಿ ವರ್ಕಿಂಗ್‌ಕಮಿಟಿಯ ಅಧಿವೇಶನವು ವರ್ಧಾದಲ್ಲಿ ನೇರಿತು. ೪-೫ ದಿವಸಗಳ ತೀವ್ರ ಮತ್ತು ಅಖಂಡ ಚರ್ಚೆಗಳ ಫಲವಾಗಿ ವರ್ಕಿಂಗ್ ಕಮಿಟಿಯು ಸುದೀರ್ಘವಾದ ಪ್ರಕಟನೆಯೊಂದನ್ನು ಹೊರಡಿಸಿದೆ. ಅದರಲ್ಲಿಯ-ಮುಖ್ಯಮಾತುಗಳು ಹೀಗಿವೆ:—

(೧) 'ಜನರ ಇಚ್ಛಾನಿಚ್ಛೆಗಳನ್ನು ತಿಳಿದುಕೊಳ್ಳಲೆಣಿಸದೆ ಕೇಂದ್ರ ಸರಕಾರವು ಈಗಾಗಲೆ ಅನೇಕ ಉಪಾಯಯೋಜನೆಗಳನ್ನು ಕೈಕೊಂಡಿದೆ.

(೨) 'ಈ ಯುದ್ಧವು ಪ್ರಜಾಸ್ವಾತಂತ್ರ್ಯದ ಸಂಸ್ಥಾಪನೆ-ಸಂರಕ್ಷಣೆಗಳಿಗಾಗಿ ಕೈಕೊಳ್ಳಲ್ಪಟ್ಟುದು ಎಂದು ಸಾರಿದರೂ ತನಗೆಯೆ ಆ ಪ್ರಜಾಸ್ವಾತಂತ್ರ್ಯವಿಲ್ಲದಿರಲು, ಇದ್ದ ತೋರಿಕೆಯ ತುಸುವನ್ನು ಈಗಾಗಲೆ ಕಸಿದುಕೊಂಡಿರಲು, ಹಿಂದುಸ್ಥಾನವು ಈ ಯುದ್ಧಕ್ಕಾಗಿ ಆತ್ಮೀಯತಾಭಾವವನ್ನು ವಹಿಸಲಾರದು.'

(೩) 'ಈಗಿನ ಸಾಮ್ರಾಜ್ಯಶಾಹಿತ್ವವನ್ನೆ ಉಳಿಸಿ-ಬೆಳಸಿಕೊಳ್ಳುವ ಧ್ಯೇಯವಿದ್ದರೆ, ನಮಗೆ ಈ ಯುದ್ಧದ ಸಂಬಂಧವೆ ಬೇಡ; ಜಗತ್ತಿನ ಪ್ರಜಾಸ್ವಾತಂತ್ರ್ಯಕ್ಕಾಗಿ ಈ ಯುದ್ಧವಿದ್ದರೆ ನಮಗೆ ಅದರಲ್ಲಿ ಅತ್ಯಂತ ಆಸಕ್ತಿ ಇದೆ.

(೪) 'ಸದ್ಯದ ಪ್ರಸಂಗದಲ್ಲಿ ಮಹತ್ತ್ವದ ತಾತ್ವಿಕ ಪ್ರಶ್ನೆಗಳು ಅಡಕವಾಗಿರುವುದರಿಂದ, ಆ ಪ್ರಶ್ನೆಗಳು ಬಿಡಿಯಾಗಿ ತಿಳಿಯದ ಹೊರತು ವರ್ಕಿಂಗ್ ಕಮಿಟಿಯು ತನ್ನ ಅಭಿಪ್ರಾಯವನ್ನು ಕೊಡಬಯಸುವುದಿಲ್ಲ; ಇದಲ್ಲದೆ ಸದ್ಯದ ಪ್ರಸಂಗವು ಅತ್ಯಂತ ಅವಸರದ್ದಾಗಿದ್ದುದರಿಂದ, ಕೊಡುವ ಅಭಿಪ್ರಾಯವನ್ನು ತಡವಿಲ್ಲದೆ ಕೊಡಬೇಕಾಗಿದೆ.

ಇದ್ದರಿಂದ—

(೫) ಬ್ರಿಟಿಶ್ ಸರಕಾರವು ವಿಲಂಬವಿಲ್ಲದೆ ಯುದ್ಧದಲ್ಲಿ ತನ್ನ ಧೋರಣೆ ಯಾವ ಸ್ವರೂಪದ್ದು ಎಂಬುದನ್ನು ತೀವ್ರವಾಗಿ, ತಿಳಿಯಾಗಿ ಸ್ಪಷ್ಟಪಡಿಸಬೇಕು.'

(೬) 'ಏನೇ ಆದರೂ, ಪ್ರಜಾಸ್ವಾತಂತ್ರ್ಯದ ತತ್ತ್ವಕ್ಕೆಯೆ ಕೊನೆಗೆ ಜಯ ದೊರೆತು, ಜಗತ್ತಿನಲ್ಲಿ ನ್ಯಾಯ-ಶಾಂತಿಗಳು ನೆಲೆಗೊಳ್ಳುವುವೆಂದು ವರ್ಕಿಂಗ್ ಕಮಿಟಿಗೆ ನಂಬುಗೆ ಇದೆ.'

ಅರ್ಥವಾಗದ ಐಕಮತ್ಯ !

ಮೇಲಿನ ಮಾತುಗಳನ್ನೆಲ್ಲ ಒಟ್ಟುಗೂಡಿಸಿ ನೋಡಿದರೆ ಒಂದು ಉತ್ಕರ್ಷ ಮಾತ್ರ ತಟ್ಟನೆ ಹೊರಸುವುದು. ಸದ್ಯದ ಮಹತ್ವದ ಪ್ರಶ್ನೆಗಾಗಿ ಖಂಡಿತವಾದ, ನಿರ್ಣಯಾತ್ಮಕ ಧೋರಣೆಯನ್ನು ತಳೆಯಲು ವರ್ಕಿಂಗ್ ಕಮಿಟಿಗೆ (ವೈಯಕ್ತಿಕ ಸದಸ್ಯರಿಗಲ್ಲ) ಧೈರ್ಯ ಇಲ್ಲವೆ ಆತ್ಮವಿಶ್ವಾಸ ಇಲ್ಲವೆ ಯೋಗ್ಯತೆ ಸಾಕಷ್ಟಿರಲಿಕ್ಕಿಲ್ಲ. ಹಾಗೆ ನೋಡಿದರೆ ವರ್ಕಿಂಗ್ ಕಮಿಟಿಯ ಸದಸ್ಯರಾಗಿದ್ದ ಸರದಾರ ಪಟೇಲರು 'ತಾನು ಬಂಧನದಲ್ಲಿದ್ದಾಗ ಮಂದಿಯ ಬಿಡುಗಡೆಗಾಗಿ ಯತ್ನಿಸುವ ಪ್ರಶ್ನೆಯೆ ಹೊರಡುವುದಿಲ್ಲ' ಎಂದು ಸ್ಪಷ್ಟವಾಗಿ, ವೈಯಕ್ತಿಕವಾಗಿ ಅಭಿಪ್ರಾಯಪಟ್ಟಿದ್ದಾರೆ; 'ಹಿಟ್ಲರ-ಮುಸೋಲಿನಿಯರ ಘಾತುಕ ತತ್ವಗಳನ್ನು ಹೊಡೆದುಹಾಕುವುದು ವಿಶ್ವೋದ್ಧಾರಕ್ಕಾಗಿ ಮೊದಲ ಕರ್ತವ್ಯ; ಇಂತಹ ಪ್ರಸಂಗದಲ್ಲಿ ನಮ್ಮ ಸಮಸ್ಯೆಗಳು ಸಣ್ಣಪುಟ್ಟವೆನಿಸುವುವು' ಎಂಬ ಅಭಿಪ್ರಾಯವನ್ನು ಪಂಡಿತ ಜವಾಹರರು ಚೀನಾದಿಂದ ವರ್ಧಾದ ವರೆಗಿನ ದ್ವಾರಾಗಿ ಬರೆದಿರುವರು. 'ಅಹಿಂಸೆಯ ತತ್ವದಿಂದ ನೋಡಲಾಗಿ ಮನಸ್ಸಿನ ಸಣ್ಣತನದ ದ್ಯೋತಕವೆನಿಸುವ ಕೊಡು-ಕೊಂಬುವ ಧೋರಣೆಯನ್ನು ಪೂರ್ತಿಯಾಗಿ ಮರೆತು, ಇಂಗ್ಲಂಡದೊಡನೆ ನಾವು ಸಹಕರಿಸಬೇಕು' ಎಂದು ಮಹಾತ್ಮರೂ ವೈಯಕ್ತಿಕವಾಗಿ ಅಭಿಪ್ರಾಯಪಟ್ಟಿದ್ದಾರೆ. 'ಇಂಗ್ಲಂಡವು ಈಗ ಬಿಕ್ಕಟ್ಟಿನ ಸ್ಥಿತಿಯಲ್ಲಿದೆ, ಈ ಸಮಯದಲ್ಲಿಯೆ ಅದಕ್ಕೆ ಬುದ್ಧಿಗಲಿಸ ತಕ್ಕುದು' ಎಂದು ಬಾಬು ಸುಭಾಷರು ಗರ್ಜಿಸಿದ್ದಾರೆ. ಇವರೆಲ್ಲರೂ ವರ್ಕಿಂಗ್ ಕಮಿಟಿಯ ಚರ್ಚೆಯಲ್ಲಿ ಮಹತ್ವದ ಭಾಗವನ್ನು ವಹಿಸಿದ್ದಾರೆ. ಒಂದಕ್ಕೊಂದು ಹೊಂದದ ಈ ನಾಲ್ಕೂ ಅಭಿಪ್ರಾಯಗಳನ್ನು ಅರ್ಥವಾಗದಂತೆ ಒಂದೇ ವಾಕ್ಯದಲ್ಲಿ ಹೆಣೆಯಲು ಯತ್ನಿಸಿದಂತಿಲ್ಲವೆ ವರ್ಕಿಂಗ್ ಕಮಿಟಿಯ ಪ್ರಕಟನೆ?

ಸಮಸ್ಯೆಯ ಸೂಕ್ಷ್ಮ ವಿವೇಚನೆ

ಇದು ಅರ್ಥವಾಗದ ಪ್ರಕಟನೆ ಎಂಬ ಅಭಿಪ್ರಾಯವನ್ನು ಸ್ಪಷ್ಟಗೊಳಿಸಲು, ಉದಾಹರಣೆಗಾಗಿ ಪ್ರಕಟನೆಯ ಒಂದೆರಡು ಮಾತುಗಳನ್ನು ವಿವೇಚಿಸೋಣ. ಯುದ್ಧಕ್ಕಾಗಿ ಇಂಗ್ಲಂಡದ ತಾತ್ವಿಕ ಧೋರಣೆ ಯಾವುದು ಎಂದು ವರ್ಕಿಂಗ್ ಕಮಿಟಿಯ ಪ್ರಶ್ನೆ. (೧) ಬಲವೇ ಒಲವು (Might is right) ಎಂಬ ನೀತಿ ಜಗತ್ತಿನ ಸುಖ-ಶಾಂತಿಗಳಿಗೆ ಘಾತುಕ, (೨) ಪೋಲಾಂದಿಗೆ ಸ್ವಾತಂತ್ರ್ಯದ ಸಂಪೂರ್ಣ ಅಧಿಕಾರವಿದೆ, (೩) ಕೊಟ್ಟ ವಚನವನ್ನು ಪಾಲಿಸುವುದು ನಮ್ಮ ಕರ್ತವ್ಯ—ಎಂಬ ಮೂರು ಮಾತುಗಳಿಗಾಗಿ ಅನಿವಾರ್ಯವಾಗಿ ಈ ಯುದ್ಧದಲ್ಲಿ ಧುಮುಕಿದೆವು' ಎಂದು ಮಿ. ಚೇಂಬರಲೇನರು (ಕೊಡುವುದೆ ಆದರೆ ಹೀಗೆ) ಉತ್ತರವನ್ನು ಕೊಡಬಹುದಲ್ಲವೆ? 'ಮಹಾಯುದ್ಧದಿಂದ ಇಂದಿನವರೆಗೆ ಇಂಗ್ಲಂಡವು ಅನೇಕ ಸಲ ಕೊಟ್ಟ ವಚನವನ್ನು ಮುರಿದಿದೆ' ಎಂದು ವರ್ಕಿಂಗ್ ಕಮಿಟಿಯು ಪ್ರಕಟನೆಯಲ್ಲಿ ಹೇಳಿದ್ದಕ್ಕೆ 'ಇಂದಿನ ಸಂದರ್ಭದಿಂದ ಇನ್ನುಮುಂದೆ ಇಂಗ್ಲಂಡವು ಕೊಟ್ಟ ವಚನವನ್ನು ಪಾಲಿಸುವುದೆಂದು ತಿಳಿಯಬಾರದೇಕೆ? 'ಎಂದೂ ಚೇಂಬರ

ಪ್ರದರ್ಶನದಲ್ಲಿ ಬಹುಮಾನ

ಕಳೆದ ೧೯-೯-೩೯ನೆಯ ದಿನ ಧಾರವಾಡದಲ್ಲಿ, ಸಾಕಿದ ಕೋಳಿಗಳ ಪ್ರದರ್ಶನ ನಡೆದು ಮೇಲಿನ * ಚಿತ್ರದಲ್ಲಿ ತೋರಿಸಿದ ಕೋಳಿಯ ಮಾಲಕರಾದ ಶ್ರೀಮಾನ್ ಎನ್. ಜಿ. ರೇಗೆಯವರು ಮೊದಲನೆಯ ಬಹುಮಾನವನ್ನು ಪಡೆದಿದ್ದಾರೆ. ಈ ಕೋಳಿಗಳು ಇಡುವ ತತ್ತಿಯ ಒಂದರ ತೂಕ ೭॥ ತೊಲೆಗಳಷ್ಟಾಗುವುದಂತೆ.

ಲೇನರು ಮರುಸವಾಲನ್ನು ಕೇಳಬಹುದಲ್ಲವೆ? ಪೋಲಾಂದಿನಂತೆ ಭಾರತಕ್ಕೂ ಸ್ವಾತಂತ್ರ್ಯದ ಅಧಿಕಾರವಿಲ್ಲವೆ-ಎಂಬ ಮಾತಿಗೆ 'ಇಲ್ಲವೆನ್ನುವವರು ಯಾರು? ನಾವು ಅದನ್ನು ಇಂದಿಗೂ ಅಲ್ಲಗಳೆದಿಲ್ಲ. ಬೇಕಾದರೆ ೧೯೧೭ ರ ನಮ್ಮ ಚಕ್ರವರ್ತಿ ಘೋಷಣೆ (Royal Proclamation) ಯನ್ನು ನೋಡಬಹುದು' ಎಂದು ಉತ್ತರವನ್ನು ಕೊಡಬಹುದಲ್ಲವೆ? 'ಬಲವೇ ಒಲವು' ಎಂಬ ನ್ಯಾಯಕ್ಕನುಸರಿಸಿಯೆ ನೀವು ಭಾರತವನ್ನೂ ರಕ್ಷಿತಕ್ಷೇತ್ರ (Mandated Territories) ಗಳನ್ನೂ ಬಿಗಿದು ಹಿಡಿದಿದ್ದೀರಿ— ಎಂದರೆ 'ಶಕ್ತಿಯಿಂದ ಅನಾಥರನ್ನು ಸಂಹರಿಸಲೂಬಹುದು, ಸಂರಕ್ಷಿಸಲೂಬಹುದು, ನಮ್ಮದು ಸಂರಕ್ಷಣಾಕಾರ್ಯ' ಎಂದು ತತ್ವವನ್ನು ಪ್ರತಿಪಾದಿಸಬಹುದಲ್ಲವೆ? ಇದಲ್ಲದೆ, ಈ ಯುದ್ಧವೆ ಮೊದಲಿನಿಂದಲೂ ಇಂಗ್ಲಂಡಕ್ಕೆ ಬೇಡಾಗಿತ್ತು; ಇದನ್ನು ತಪ್ಪಿಸಲು ಇಂಗ್ಲಂಡದ ಮುಖ್ಯಮಂತ್ರಿಗಳು ಅಪಹಾಸ್ಯವನ್ನು ಕೂ ಲೆಕ್ಕಿಸದೆ ಯತ್ನಿಸಿದರು; ಈಗಲಾದರೂ ಜರ್ಮನಿಯೆ ಅಥವಾ ಹಿಟ್ಲರನೆ ತನ್ನ ಹೈಸೊಕ್ಕಿನಿಂದ ಈ ಯುದ್ಧದ ಪ್ರಸಂಗವನ್ನು ಅನಿವಾರ್ಯವೆನಿಸುವಂತೆ ತಂದೊಡ್ಡಿದ್ದಾನೆ. ಆದ್ದರಿಂದ ಹಿಟ್ಲರನನ್ನು ಹೊಡೆದೋಡಿಸಿದರೆ ಸಾಕು, ನಮ್ಮ ಪಾಲಿನ ಯುದ್ಧ ಮುಗಿಯಿತು- ಎಂದು ಇಂಗ್ಲಿಶ ಸರಕಾರವು ತರ್ಕವನ್ನು ಹೂಡಬಹುದು

ಮುಳುಗುವವನ ಮೋಕ್ಷಧರ್ಮ

ಇಂಗ್ಲಂಡದ ಪತಿಯಿಂದ ವಕೀಲಿಯನ್ನು ವಹಿಸಿ ನಾವು ಹೀಗೆ ಮೊಂಡವಾದವನ್ನು ಹೂಡಿಲ್ಲ. ಹೇಳುವ ಕಾರಣವಿಷ್ಟೆ: ಬಾಬು

* ಈ ಛಾಯಾಚಿತ್ರವನ್ನು ಒದಗಿಸಿಕೊಟ್ಟವರು ಶ್ರೀಮಾನ ಎಸ್. ಜಿ. ನೊರಬ ಅವರು,

ಸುಭಾಷರೆನುವಂತೆ 'ಇಂಗ್ಲೆಂಡವು ಈಗ ಬಿಕ್ಕಟ್ಟಿನ ಸ್ಥಿತಿಯಲ್ಲಿದೆ. ಕೇಳಿದ ಪ್ರಶ್ನೆಗೆ ತೋಚಿದ ಸಮಾಧಾನವನ್ನು ತೋರಿಸಬಹುದು, ಬೇಡಿದ ವಸ್ತುವನ್ನು ಬಾಯ್ಬಿಡದೆ ಕೊಡಬಹುದು.' ಆದರೆ ವರ್ಕಿಂಗ್ ಕಮಿಟಿಯ ಪ್ರಕಟನೆಯಲ್ಲಿ ಹೇಳಿದಂತೆ ಮಹಾಯುದ್ಧದಲ್ಲಿ ಕೊಟ್ಟ ವಚನಗಳನ್ನು ಮುಂದೆ ಒಂದೊಂದಾಗಿ ಇಂಗ್ಲೆಂಡವು ಮುರಿದಿದ್ದರೆ, ಈಗಿನ ಇನ್ನೊಂದು ಯುದ್ಧಪ್ರಸಂಗದಲ್ಲಿ ಇನ್ನೊಮ್ಮೆ ವಚನವನ್ನು ಕೊಡಿರೆಂದು ಅದೇ ಇಂಗ್ಲೆಂಡಕ್ಕೆ ಕೇಳುವುದರ ಜಾಣತನವೇನು? ಯುದ್ಧ ಪ್ರಾರಂಭವಾಗುವ ಕೆಲವು ತಿಂಗಳ ಮುಂಚೆಯೆ ಅನುಕೂಲವಾಗುವಂತೆ ೧೯೩೫ರ ಗವ್ಹರ್ನಮೆಂಟ್ ಆಫ್ ಇಂಡಿಯಾ ಆಕ್ಟಿನಲ್ಲಿ ಯಾರನ್ನೂ ಕೇಳದೆ ಪಾರ್ಲಮೆಂಟು ತಿದ್ದುಪಡೆ ಮಾಡಿಕೊಂಡಿರುವಾಗ, ಯುದ್ಧ ಪ್ರಾರಂಭವಾದಾಕ್ಷಣ ಭಾರತವು ಯುದ್ಧದಲ್ಲಿ ಸೇರಿಕೊಂಡಿತೆಂದು ಸಾರಿ ಅದಕ್ಕೆ ತಕ್ಕ ಉಪಾಯಯೋಜನೆಗಳನ್ನು ವ್ಹಾಯಸರಾಯರು ತಮ್ಮ ಅಧಿಕಾರಗಳಿಂದಲೆ ಕೈಕೊಂಡಿರುವಾಗ, ಇಂಗ್ಲೆಂಡದ ಧೋರಣೆ ಇನ್ನೂ ಸ್ಪಷ್ಟವಾಗಿಲ್ಲ ಎನ್ನುವುದು ಆಶಾವಾದದ ಪರಮಾವಧಿಯೊ, ಅಜ್ಞಾನದಿಂದಾವರಿಸಿದ ಅಂಧತ್ವವೊ? ಕೇವಲ ನಾಝೀವಾದದ ನಾಶಕ್ಕಾಗಿ ಕೈಕೊಂಡ ಯುದ್ಧದಲ್ಲಿ ಸಾಮ್ರಾಜ್ಯವಾದವೂ ಮಣ್ಣುಗೂಡಬೇಕು ಎಂಬ ಕರಾರನ್ನು ಸೇರಿಸಬಯಸುವುದು ಪ್ರಸಂಗೋಪಾತ್ತವೊ, ಸ್ವಂತದ ಸಮಾಧಾನಮಾತ್ರವೊ? ವರ್ಕಿಂಗ್ ಕಮಿಟಿಯ ಅಭಿಪ್ರಾಯದಂತೆ ನಾಝೀವಾದವು ಸಾಮ್ರಾಜ್ಯವಾದದ ಅತಿರೇಕ (intensification) ವಾಗಿದ್ದಾರೆ, ಇಂದು ಯಾವುದೆ ಕಾರಣಕ್ಕಾಗಿ ನಾಝೀವಾದಕ್ಕೆ ಪ್ರೋತ್ಸಾಹ ದೊರೆಯುವಂತೆ ವರ್ತಿಸುವುದು ಮುತ್ಸದ್ದಿತನವೊ, ಹುಚ್ಚೆದ್ದ ಹಟವೊ?

ಕೊನೆಯ ಮಾತು

ಈ ಪ್ರಸಂಗದಲ್ಲಿ ಮಹಾತ್ಮರ ಧೋರಣೆಯೆ ಯೋಗ್ಯವಾದ, ಅಭಿನಂದನೀಯವಾದ ಧೋರಣೆ ಎನಬಹುದಾಗಿದೆ ಹೇಗೆಂದರೆ ಅದನ್ನು ಒಪ್ಪಬೇಕು ಎಂದು ಅಭಿಪ್ರಾಯವಲ್ಲ. ತಮ್ಮ ವಿಚಾರ ಸ್ವಲ್ಪ ಅನುಮಾನವಿಲ್ಲದೆ, ಆತ್ಮವಿಶ್ವಾಸದಿಂದ ನಿರ್ದಿಷ್ಟವಾಗಿ ಹೇಳಿದ್ದಕ್ಕಾಗಿ ಅಭಿನಂದನೀಯ.; ಎರಡನೆಯವರ ಬಿಕ್ಕಟ್ಟಿನ ಲಾಭ ಪಡೆದುಕೊಳ್ಳುವುದು ನೀತಿಯಲ್ಲ, ರೀತಿಯೂ ಅಲ್ಲ ಎಂದುದಕ್ಕೆ ಯೋಗ್ಯ. ಇಂದು ಇಂಗ್ಲೆಂಡದ ದುಃಸ್ಥಿತಿಯ ದುರುಪಯೋಗ ಪಡೆದು ನಾವು ಗಳಿಸಬಹುದಾದ ಸ್ವಾತಂತ್ರ್ಯಕ್ಕೆ ಬೆಲೆ ಇಲ್ಲ, ಸ್ಥಿರತೆಯೂ ಇಲ್ಲ. ಈಗ ಬೇಡಿದ್ದನ್ನು ಕೊಡಲೇ ಬೇಕಾದ ಕುಸನಿಸ ಬಲದಿಂದ ಮುಂದೆ ಕಸಿದುಕೊಳ್ಳಲೂ ಯತ್ನಿಸಬಹುದಲ್ಲವೆ! ಇದಲ್ಲದೆ, ಹೀಗೆ ನಾವು ಗಳಿಸುವ ಸ್ವಾತಂತ್ರ್ಯಕ್ಕೆ ನಮ್ಮ ಶಕ್ತಿ-ಸಾಹಸ-ಯುಕ್ತಿ-ಯೋಗ್ಯತೆಗಳ ಸಂಬಂಧವೆ ಇಲ್ಲದ್ದರಿಂದ, ಜೂಜಿ(lottery)ನಲ್ಲಿ ಹಣಗಳಿಸಿದವನಂತಾಗುವುದು ನಮ್ಮ ಪ್ರಪಂಚ. ಅಂತೂ ಯಾವ ದೃಷ್ಟಿಯಿಂದ ನೋಡಿದರೂ ವರ್ಕಿಂಗ್ ಕಮಿಟಿಯ ಪ್ರಕಟನೆಯು ಪ್ರಸಂಗಕ್ಕೆ ಅಯುಕ್ತ, ಅಸಮಾಧಾನಕಾರಕ ಅನಿಸುವಂತಿದೆ ಎಂದು ನಮ್ಮ ಅಭಿಪ್ರಾಯ. ನೀತಿಗಾಗಿ ಅಷ್ಟೊಂದು ಕಳವಳ, ಸ್ವಾತಂತ್ರ್ಯಕ್ಕಾಗಿ ಅಷ್ಟೊಂದು ಹಟ— ಇವುಗಳೊಡನೆ ಮುತ್ಸದ್ದಿತನವನ್ನು ಬೆರಸಿದ್ದರೆ ವರ್ಕಿಂಗ್ ಕಮಿಟಿಗೆ ಧೈರ್ಯವಾದ, ನಿರ್ದಿಷ್ಟವಾದ, ಅಸ್ಖಲಿತವಾದ ನಿರ್ಣಯವನ್ನು ಕೊಡುವುದು ಶಕ್ಯವಿದ್ದಿತು. 'ಇಂಗ್ಲೆಂಡವು ಸಾಮ್ರಾಜ್ಯವಾದದ ಅಭಿಮಾನಿ. ಇಂಗ್ಲೆಂಡವಾದರೂ ಕೊಟ್ಟ ವಚನಗಳನ್ನು ಅನೇಕ ಸಲ ಮುರಿದಿದೆ, ನಿಜವಾದ ಸ್ವಾತಂತ್ರ್ಯಪ್ರೀತಿ ಇಂಗ್ಲೆಂಡಿಗಿಲ್ಲ— ಇದೆಲ್ಲವೂ ನಮಗೆ ಪೂರ್ತಿಯಾಗಿ ಮನವರಿಕೆಯಾಗಿದೆ; ಇಂಗ್ಲೆಂಡದ ಯುದ್ಧದಲ್ಲಿ ಕೈನೀಡುವುದೆಂದರೆ ಸ್ವಾರ್ಥಿಸಾಮ್ರಾಜ್ಯವಾದಕ್ಕೆ ಸಹಾಯಮಾಡಿದಂತೆ— ಎಂಬುದನ್ನೂ ಬಲ್ಲೆವು; ನಾಝೀವಾದದಂತೆ ಸಾಮ್ರಾಜ್ಯವಾದವೂ ನಾಶವಾದಹೊರತು ವಿಶ್ವದಲ್ಲಿ ಪ್ರಜಾಸ್ವಾತಂತ್ರ್ಯ ನೆಲೆಗೊಳ್ಳಲಾರದು ಎಂದು ಖಂಡಿತವಾದ ಅಭಿಪ್ರಾಯವಿದೆ; ಆದರೆ ಸದ್ಯಕ್ಕೆ ನಾಝೀವಾದವು ಸಾಮ್ರಾಜ್ಯವಾದದ ಅತಿರೇಕವೆಂದು ನಮಗೆನಿಸಿದ್ದು, ಮೊದಲು ಅದರ ನಾಶಕ್ಕಾಗಿ, ನಿರ್ವಾಯವಾಗಿ ಇಂಗ್ಲೆಂಡದ (ತೋರಿಕೆಗೆ ಮಾತ್ರ) ಸಹಕಾರಿಯಾಗಿ ಕೈ ಎತ್ತಬೇಕಾಗಿದೆ. ಆದರೆ ನಮ್ಮ ಸಹಾನುಭೂತಿ ಯಾವಪಕ್ಷಕ್ಕಾಗಿ ಇದೆ ಎಂಬುದನ್ನು ಸ್ಪಷ್ಟವಾಗಿ ಹೇಳಬಯಸಿದ್ದೇವೆ. ಇಂದು ಜರ್ಮನ್ ಜನರೂ ನಮ್ಮಂತೆಯೆ ಅನಿಯಂತ್ರಿತ ಅಧಿಕಾರಮದಾಂಧರ ದಾಸರಾಗಿದ್ದಾರೆ ಎಂಬುದನ್ನು ನೆನೆದುಕೊಂಡೇ ಅವಶ್ಯವಿದ್ದ ಭಾಗವನ್ನು ವಹಿಸಲು— **ಹಿಟ್ಲರನ** ಎದುರಾಗಿ— ಯುದ್ಧದಲ್ಲಿ ಸೇರಬೇಕೆಂದು ನಿರ್ಣಯಿಸಿದ್ದೇವೆ.' ಹೀಗೆ ಅಭಿಪ್ರಾಯವನ್ನು ಕೊಟ್ಟಿದ್ದರೆ— ಅಥವಾ ಈ ನೇರಿಗೆ ಯಾವುದಾದರೊಂದು ನಿಶ್ಚಿತ ಧೋರಣೆಯನ್ನು ಕೈಕೊಂಡಿದ್ದರೆ— ವಿದ್ಯಾರ್ಥಿಗಳು ಬರೆಯುವ ವಿಚಾರಗೊಂದಲದ ಪ್ರಬಂಧದಂತಹ ಪ್ರಕಟನೆಯನ್ನು ವರ್ಕಿಂಗ್ ಕಮಿಟಿಯು ತಪ್ಪಿಸಿಕೊಳ್ಳಬಹುದಾಗಿತ್ತು.

ಈ ಸಂದರ್ಭದಲ್ಲಿ ವರ್ಕಿಂಗ್ ಕಮಿಟಿಯ ಪ್ರಕಟನೆಯಲ್ಲಿಯ ಒಂದು ಆನುಷಂಗಿಕ ಅಭಿಪ್ರಾಯದ ಉದಾಹರಣೆಯನ್ನು ಕೊಟ್ಟು ನಾವು 'ವಿಚಾರಗೊಂದಲ' ಎಂದುದರ ಸಮರ್ಥನೆಯನ್ನೂ ಸ್ಪಷ್ಟೀಕರಣವನ್ನೂ ಮಾಡಬಹುದು. 'ನಮ್ಮ ಜಗಳವು ಜರ್ಮನ್ ಅಥವಾ ಜಪಾನ್ ಜನತೆಯ ಕೂಡ ಇಲ್ಲ. ಆದರೆ ಸ್ವಾತಂತ್ರ್ಯಕ್ಕೆ ಸೊನ್ನೆಹಾಕಿ, ಹಿಂಸೆ-ಅತಿಕ್ರಮಣ ವೃತ್ತಿಗಳಿಂದಲೆ ಮೆರೆಯುವ ರಾಜ್ಯಪದ್ಧತಿಗಳಿಗಾಗಿ ನಮ್ಮ ಕಲಹವಿದೆ' ಎಂದಿದೆ ಪ್ರಕಟನೆಯಲ್ಲಿ. ಒಂದು ಕಡೆ ಪ್ರಜಾಸ್ವಾತಂತ್ರ್ಯದ ತತ್ತ್ವವನ್ನು ಸಾರಿ, ಇನ್ನೊಂದೆಡೆ ಒಂದು ದೇಶದ ರಾಜ್ಯಪದ್ಧತಿಗಾಗಿ ಕಲಹವೃತ್ತಿ ಧರಿಸುವುದು ಸಯುಕ್ತಿಕವಾದೀತೆ? ಹಿಟ್ಲರನು ಹಿಂಸೆ, ಅತಿಕ್ರಮಣ ವೃತ್ತಿಗಳ ನರಪಶು ಎಂದ ಮಾತ್ರಕ್ಕೆ ಅವನಿಂದ ರೂಢವಾದ ಏಕಪ್ರಭುತ್ವ ರಾಜ್ಯಪದ್ಧತಿಯೆ ದುಷ್ಟವೆಂದು ಹೇಳಬಹುದೆ? ಇದಲ್ಲದೆ ನಮಗೆ ದುಷ್ಟ ಎನಿಸುವ ಪದ್ಧತಿ ಎಲ್ಲರಿಗೂ ದುಷ್ಟ ಎನಿಸಲೇಬೇಕೆಂದು ಹಟಹಿಡಿಯಬಹುದೆ? ಆಯಾ ದೇಶದ ಜನರು ತಂತಮ್ಮ ಸ್ಥಿತಿ-ಗತಿಗಳಿಗನುಸರಿಸಿ ತಮ್ಮ ರಾಜ್ಯಪದ್ಧತಿಯನ್ನು ಕಲ್ಪಿಸಿಕೊಳ್ಳಬಹುದಲ್ಲವೆ? ಇದೂ ಅಲ್ಲದೆ ಪ್ರಜಾಸ್ವಾತಂತ್ರ್ಯವೆಂದರೆ ಇಂತಹದೆ ರಾಜ್ಯಪದ್ಧತಿ ಎಂದು ಮಾದರಿ ಇದೆಯೆ?

ಪ್ರಜಾಪ್ರಭುತ್ವ ಪದ್ಧತಿಯು ಇಂಗ್ಲಂಡವು ಸಾಮ್ರಾಜ್ಯವಾದದ ರಾಷ್ಟ್ರವಾಗಿದೆ; ಸಾಮ್ರಾಜ್ಯವಾದವನ್ನು ಧಿಕ್ಕರಿಸುವ ರಶಿಯಾ ದಲ್ಲಿ ಮುಂದಾಳುತನದ (Oligarchical) ರಾಜ್ಯತಂತ್ರವಿದೆ. ಹೀಗಿರುವಾಗ ಒಂದು ದೇಶದ ರಾಜ್ಯಪದ್ಧತಿಯನ್ನು ಕಲಹಕಾರಣ ವಾಗುವಷ್ಟು ಮಹತ್ತ್ವದ್ದೆಂದು ತಿಳಿದುಕೊಳ್ಳುವದು ಸ್ವಾತಂತ್ರ್ಯ ತತ್ತ್ವಕ್ಕಾಗಲಿ ಸಮಂಜಸಬುದ್ಧಿಗಾಗಲಿ ಸರಿ ಎನಿಸದು — ಎಂದು ನಮ್ಮ ಅಭಿಪ್ರಾಯ.

ಒಂದು ಸಮರ್ಥನೆ

ಆನುಷಂಗಿಕ ಅಭಿಪ್ರಾಯಗಳೇನೆ ಇರಲಿ, ವರ್ಕಿಂಗ್ ಕಮಿಟಿಯ ಮುಖ್ಯ ನಿರ್ಣಯದ ವಿಷಯವಾಗಿ ಒಂದು ಮಾತನ್ನು ಕೊನೆಯ ದಾಗಿ ಹೇಳಬೇಕೆನಿಸುತ್ತದೆ. ಕೇವಲ ನಿರ್ಣಯನ್ನು ವಿರೋಧಿಸು ವುದಾಗಲಿ, ಅದರೊಳಗಿನ ಛಿದ್ರಗಳನ್ನು ಹುಡುಕುವುದಾಗಲಿ, ನಮ್ಮ ಹಂಬಲವಲ್ಲ. ಸಮಯದ ಮಹತ್ತ್ವವನ್ನರಿತು ನಿರ್ಣಯಾ ತ್ಮಕವಾಗಿ ಹೇಳಬೇಕಾಗಿತ್ತು—ಎಂದೇ ನಮ್ಮ ಮನಿಷೆ. ಆದರೂ ವರ್ಕಿಂಗ್ ಕಮಿಟಿಯ ಪರವಾಗಿ, ಅವರ ಹೇಳಿಕೆಯ ಸಮರ್ಥನೆ ಯಾಗಿ ಒಂದೇ ಒಂದು ವಿಚಾರವಿದೆ. ಸದ್ಯದ ಯುದ್ಧವು ನಾವು ಮೇಲೆ ಸುಡಿಸಿದಂತೆ ಕೇವಲ ಪೋಲಾಂದಿನ ಪ್ರಶ್ನೆಯ ಪರವಾಗಿಯೊ ಇಲ್ಲವೆ ಇತ್ತಿತ್ತಲಾಗಿ ಮಿ. ಚೇಂಬರಲೇನರು ಉದ್ಘೋಷಿಸುತ್ತಿರುವಂತೆ ಹಿಟ್ಲರವಾದದ ಸಮೂಲ ಉಚ್ಚಾಟನೆ ಗಾಗಿಯೊ? ಈ ಮಾತನ್ನು ಇಂಗ್ಲಂಡವು ಸ್ಪಷ್ಟಪಡಿಸುವದಗತ್ಯ ವಾಗಿದೆ. ಕೇವಲ ಪೋಲಾಂದಿನ ಪರವಾಗಿ ಇದ್ದರೆ ಭಾರತದ ಸಹಾಯ-ಸಹಾನುಭೂತಿಗಳಿಗಾಗಿ ಅವಸರವೂ ಇಲ್ಲ, ಮಹತ್ತ್ವವೂ ಇಲ್ಲ. ಆದರೆ ತತ್ತ್ವಪ್ರತಿಪಾದನೆಗಾಗಿ ಇದ್ದರೆ, ಸಮಗ್ರ ಪ್ರಜಾಸ್ವಾತಂತ್ರ್ಯತತ್ತ್ವಕ್ಕಾಗಿಯೆ ಆದರ-ಆಕಾಂಕ್ಷೆ-ಶ್ರದ್ಧೆ ಗಳಿದ್ದುದರಿಂದ, ಮತ್ತು ಆ ಸ್ವರೂಪದ ಯುದ್ಧವು ಪೋಲಾಂದಿನ ತಾತ್ಕಾಲಿಕ ಸ್ಥಿತಿ-ವಿನಾಶಗಳ ಮೇಲಲ್ಲದೆ ಖಂಡಿತವಾಗಿ ಹಿಟ್ಲರನ ವಿನಾಶದ ಮೇಲೆಯೆ ಅವಲಂಬಿಸಿದುದರಿಂದ ಬಹುದಿವಸಗಳ ವರೆಗೆ ಯುದ್ಧವು ಮುಂದೆ ಜಗ್ಗಬಹುದು. ಆ ಸಂದರ್ಭದಲ್ಲಿ ಭಾರತದ ಸಹಾಯದ ಅವಶ್ಯಕತೆಯೂ ಮಹತ್ತ್ವವೂ ಹೆಚ್ಚುವುದು. ಇದೊಂದು ದೃಷ್ಟಿಯಿಂದ—ಎಂದರೆ ಇಂಗ್ಲಂಡವನ್ನು ನಿಶ್ಚಿತ ತತ್ತ್ವಪ್ರತಿಪಾದನೆಗೆ ಬಿಗಿದುಹಿಡಿಯುವ ದೃಷ್ಟಿಯಿಂದ—ವರ್ಕಿಂಗ್ ಕಮಿಟಿಯ ಧೋರಣೆಗೆ ಅಂಶಮಾತ್ರ ಅರ್ಥವಾಗುವುದೆಂದು ಹೇಳಬಹುದಾಗಿದೆ. ರಶಿಯಾದ ಅತಿವಿಲಕ್ಷಣವಾದ, ಅಧಿಕಪ್ರಸಂಗ ದ್ದಾದ, ಅತ್ಯಂತ ಹೇಯವಾದ ಆಚರಣೆಯಿಂದ ಇಂಗ್ಲಂಡಕ್ಕಾ ದರೂ ಇಂತಹ ಸ್ಪಷ್ಟೀಕರಣವನ್ನು ಕೊಡಲೇಬೇಕಾಗುವುದು.*

---

* ಈ ಮಾತನ್ನು ತಾ. ೧೯-೯-೩೯ ಕ್ಕೆ ಬರೆದಿದೆ.

ಮುಂಬೈ ಸರಕಾರದ ಉದಾರಾಶ್ರಯದಲ್ಲಿ
ಪ್ರಕಟವಾದ
ಮೊದಲನೆಯ ಪುಸ್ತಕ
★
ಕನ್ನಡದ ನೆಲೆ
ಬರೆದವರು : ಶ್ರೀ. ಶಂ. ಬಾ. ಜೋಶಿ

ಕರ್ನಾಟಕವನ್ನು ಕಟ್ಟಲು ಮೂಲಕಾರಣವಾದ ಜನಾಂಗವು ಆವುದು? ಅದರ ಬೆಳವಣಿಗೆಯು ಹೇಗೆ ಆಯ್ತು? ಕನ್ನಡಿಗರ ಗುಣಪ್ರಭಾವಗಳು ಆವುವು? ಇವರ ಮೊದಲಿನ ಸ್ಥಿತಿ-ಗತಿಗಳೇನು; ಎಂಬಿವೇ ಮೊದ ಲಾದ ಸಂಗತಿಗಳ ವಿವರಣೆಯು ಇದರಲ್ಲಿದೆ. ಕರ್ನಾ ಟಕದ ಏಳ್ಗೆಗಾಗಿ ಹಂಬಲಿಸುವ ದೇಶಭಕ್ತರಾಗಲಿ, ಸಾಹಿತ್ಯಿಕರಾಗಲಿ ಇದನ್ನು ಓದದೆ ನಡೆಯದು.

ಬೆಲೆ : ಸಾದಾಪ್ರತಿ, ೧-೮-೦
ಕ್ಯಾಲಿಕೊ ಪ್ರತಿ, ೨-೦-೦

ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ
ಅಥವಾ
ಮನೋಹರ ಗ್ರಂಥಭಾಂಡಾರ, ಧಾರವಾಡ

ಕರ್ನಾಟಕ ಜನಜೀವನ
(ಸಂಶೋಧನಾತ್ಮಕ ಗ್ರಂಥ)
ಬರೆದವರು : ಬೆಟಗೇರಿ ಕೃಷ್ಣಶರ್ಮ

ಮುಂಬಯಿ ಸರಕಾರದ ಸಂಸ್ಕೃತಿ ಸಂಶೋಧನ ಸಮಿತಿಯ ಪ್ರೋತ್ಸಾಹದಿಂದ ಪ್ರಕಟವಾಗಿದೆ.

ನೊನ್ನೆ ನೊನ್ನೆಯೆ ಅಚ್ಚಾಗಿ
ಹೊರಕ್ಕೆ ಬಂದಿದೆ.

ಪ್ರೊ. ಜಾಗಿರದಾರರು ವಿಚಾರಪ್ರಚೋದಕ ಮುನ್ನುಡಿಯನ್ನು ಬರೆದಿದ್ದಾರೆ.

ಸುಂದರ ಪ್ರತಿಗೆ ೧-೮-೦ ಕ್ಯಾಲಿಕೊ ಪ್ರತಿಗೆ ೨-೦-೦

ಬೇಕಾದವರು 'ಜಯಂತಿ'
ಕಾರ್ಯಾಲಯಕ್ಕೆ ಬರೆಯಿರಿ!

ಮನೋಹರ ಗ್ರಂಥಭಾಂಡಾರದಲ್ಲಿಯೂ ಸಿಕ್ಕುವುದು.

ಪಂಚಗಣಿ ಹಿಂದೂ ಹೈಸ್ಕೂಲ್

ಪಂಚಗಣಿ, ಸಾತಾರಾ ಜಿಲ್ಲೆ

ಹಿಂದೂ ಬಾಲಕರಿಗಾಗಿ ವಸತಿಗೃಹವುಳ್ಳ, ಮಾದರಿಯ ಮಾಧ್ಯಮಿಕ ಶಾಲೆಯಿದು. ಮಹಾಬಳೇಶ್ವರದ ಬಳಿಯಲ್ಲಿ-ಸಮುದ್ರಪಾತಳಿಯಿಂದ ೪೩೦೦ ಅಡಿ ಎತ್ತರದ ಮೇಲೆ- ಆಲ್ಹಾದಕರವಾದ ಹವೆಯಲ್ಲಿಯೂ ಚಿತ್ತಾಕರ್ಷಕವಾದ ಪ್ರದೇಶದಲ್ಲಿಯೂ ಈ ಶಾಲೆಯ ಸ್ವತಂತ್ರ ಕಟ್ಟಡವಿದೆ. ಪ್ರಾಥಮಿಕ ಶಿಕ್ಷಣದಿಂದ ಮ್ಯಾಟ್ರಿಕಿನ ವರೆಗೆ ಇಲ್ಲಿ ಶಿಕ್ಷಣವು ದೊರೆಯುವುದು. ಹೊಸ ಟರ್ಮು ಮೇ ತಿಂಗಳ ೧ನೆಯ ತಾರೀಖಿನಿಂದ ಪ್ರಾರಂಭವಾಗುವುದು. ಕನ್ನಡ ಕಲಿಸುವ ಏರ್ಪಾಡೂ ಇದೆ. ಮಕ್ಕಳನ್ನು ಬೇಕಾದಾಗ ಕಳುಹಿದರೂ ಪ್ರವೇಶ ದೊರೆಯುವುದು. ವಿವರಗಳಿಗಾಗಿಯೂ ಪ್ರಾಸ್‌ಪೆಕ್ಟಸ್ಸಿಗಾಗಿಯೂ ಸಂಸ್ಥೆಯ ಸುಪರಿಂಟೆಂಡೆಂಟರಿಗೆ ಬರೆದುಕೊಳ್ಳಿರಿ.

ಹೆಣಿಗೆ-ಕಸೀದೆ ಕಲಿಯಿರಿ !

ಹೆಣ್ಣುಮಕ್ಕಳಲ್ಲಿ ಹೆಣಿಗೆ-ಕಸೀದೆಗಳ ಅಭಿರುಚಿ ಹೆಚ್ಚುವುದರಿಂದ, ಅವರಲ್ಲಿ ಅಚ್ಚುಕಟ್ಟುತನವು ಬೆಳೆಯುವುದು !
ಅಚ್ಚುಕಟ್ಟುತನದಿಂದ ಅವರ ಚೆಲುವು-ಚೆದುರು ಇಮ್ಮಡಿಗೊಳ್ಳುವುವು !!

ಹೆಣಿಗೆ-ಕಸೀದೆ-ಎಂಬ್ರೊಯಿಡರಿ ಕೆಲಸಗಳ ಎಲ್ಲ ಸಲಕರಣೆಗಳೂ, ಬೇರೆ ಸ್ಟೇಶನರಿ ಮತ್ತು
ಪರಫ್ಯೂಮರಿ ವಸ್ತುಗಳೂ ಬೇಕಾದರೆ ಇಲ್ಲಿಗೇ ಬನ್ನಿರಿ !

ಸಿಟಿ ಸ್ಟೋರ್ಸ್, ಮಾರ್ಕೆಟ್ ರೋಡ್-ಧಾರವಾಡ.

ಎರಡು ಅಪೂರ್ವ ಯೋಜನೆಗಳು

ಡಾಯಮಂಡ್ ಪಾಲಿಸಿ

ವಿಮೆಯಿಳಿಸುವುದಾದರೆ ಇದರಂತಹ ಸುಂದರ ಯೋಜನೆಯಿಲ್ಲ. ಸ್ವಸಂರಕ್ಷಣೆ, ಪೆನ್ಶನ್ ಮತ್ತು ಸುರಕ್ಷಿತಠೇವುಗಳ ಲಾಭತ್ರಯವನ್ನು ಕೊಡುವುದು.

★

ತರುಣ ಬಾಂಡ್

ಇದೊಂದು ಅದ್ಭುತ ಕಾಣಿಕೆ. ರೂ. ೧೩-೮-೦ ಗಳಲ್ಲಿ ನಿಮ್ಮ ಮತ್ತು ನಿಮ್ಮ ಕುಟುಂಬದ ರಕ್ಷಣೆಯಾಗುವುದಲ್ಲದೆ, ದೈವವಿದ್ದರೆ ೩೫೦೦ ರೂ. ಪಡೆಯುವಿರಿ.

ಈ ನಮ್ಮ ಬಾಂಡ ಯೋಜನೆಗೆ ಸರಕಾರಿ ಕಾಯದೆಪಂಡಿತರ ಮತ್ತು ವಿಮಾತಜ್ಞರ ಮಾನ್ಯತೆ ದೊರೆತಿದೆ. ಮುಂಬಯಿ ಪ್ರಾಂತದಲ್ಲಿ ಇಂತಹ ಯೋಜನೆ ಹೊರಡಿಸಿ, ವರ್ಷದಲ್ಲಿ ೨ ಸಲ ನಿಯಮಿತ ಬೋನಸ್ ಹಂಚುವ ಕಂಪನಿಯು ನಮ್ಮದೇ ಒಂದು, ಮತ್ತು ಮೊಟ್ಟಮೊದಲನೆಯದು.

ಏಜನ್ಸಿಗಳಿಗಾಗಿ ಕೆಳಗಿನ ವಿಳಾಸಗಳಿಗೆ ಬರೆಯಿರಿ :

ದಿ ತರುಣ ಅಶುರನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ : ಫೋರ್ಟ ಮುಂಬಯಿ

R. S. BAITMANGALKAR & Co.,

CHIEF ORGANISERS FOR KARNATAK

Gibb Town, Dharwar.

JAYANTI October 1939 R. No. B. 4116

ನಮ್ಮ ಪ್ರೇಮಾ ಭಾಳ ಗುಲಾಮು ಮುದುಗಿ !

★ ಪೇಟೆಯೊಳಗಿನ ಅಂಗಡಿಗಳನ್ನೆಲ್ಲ ಸುತ್ತಿದೆವು; ಎಲ್ಲೆಲ್ಲೂ ಆಕೆಯ ಮನಸ್ಸಿಗೆ ಬರುವಂಥ ಫ್ರಾಕಿನ ಅರಿವೆ ಸಿಗಲಿಲ್ಲ; ಕೊನೆಗೆ

ಶ್ರೀಲಕ್ಷ್ಮೀ ವಸ್ತ್ರಭಾಂಡಾರಕ್ಕೆ ಹೋದೆವು !

- ಅಲ್ಲಿಯ ಬಗೆಬಗೆಯ ಚಿತ್ರವಿಚಿತ್ರದ ಬಟ್ಟೆಗಳನ್ನು ನೋಡಿಯೆ ಪ್ರೇಮಾ, ಹಾಗೆ ಕುಣಿದಾಡ ತೊಡಗಿದಳು. ಎಷ್ಟು ಅವಳಿಗೆ ಆನಂದ !
- ಯಾವ ಬಟ್ಟೆ ತೋರಿಸಿದರೂ ‘ ಇದು ನನಗೆ ಬೇಕು ’ ಎನ್ನ ತೊಡಗಿದಳು.
- ತುಂಬ ಬೆಡಗಿನ ಬಟ್ಟೆ ! ಬಣ್ಣಬಣ್ಣದ ಮೆರುಗಿನ ಬಟ್ಟೆ ! ಯಾರಿಗೆ ಎಂತಹದು ಬೇಕೋ ಅಂತಹ ಬಟ್ಟೆ ಅಲ್ಲಿ ಸಿಕ್ಕುವುದು.
- ಅಂದು ಅಂಗಡಿಯಿಂದ ಪ್ರೇಮಿಯನ್ನು ಹೊರಕ್ಕೆ ಕರೆತರಬೇಕಾದರೆ ಸಾಕಾಗಿಹೋಯಿತು !

ಶ್ರೀಲಕ್ಷ್ಮೀ ವಸ್ತ್ರಭಾಂಡಾರ (ಮೋಟಾರ್ ಸ್ಟ್ಯಾಂಡಿನ ಹತ್ತರ) ಧಾರವಾಡ.

ದಿ ಯುನಾಯಿಟೆಡ್ ಕರ್ನಾಟಕ ಇನ್ಸೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾರವಾಡ.

- ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು ಈ ಭರದಿಂದ ಬೆಳೆಯುತ್ತಿರುವ ಕನ್ನಡಕಂಪನಿಯ ಪಾಲಿಸಿಯನ್ನೇ ಪಡೆಯಬೇಕು !
  - ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ನಿಯಮಾನುಸಾರದ ನಿರ್ಬಂಧಗಳಿಗೆ ತಕ್ಕಂತೆ ನಡೆದು ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.
  - ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸುವುದರಿಂದ ಎಲ್ಲರ ನಂಬಿಗೆಗೂ ತಕ್ಕುದಾಗಿದೆ.
  - ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡ ನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನು ಪಾಲುಗಳನ್ನು ಕೊಂಡುಕೊಳ್ಳಲೆ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷ ವಿವರಕ್ಕೆ ಬರೆಯಬೇಕು :—

ಎಮ್. ಗೋವರ್ಧನರಾವ್ ಮ್ಯಾನೇಜರ್

The United Karnatak Insurance Co. Ltd., DHARWAR.

Printer K. R. Bhise Karnatak Printing Works, Dharwar. Edited and published by M. G. Patil at the Jayanti Office, Dharwar.

-ದೀಪಾವಳಿ-

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚಸೇರಿ ೩—೦—೦ ...... ವ್ಹಿ. ಪಿ. ಯಿಂದ ೩-೫-೦ ...... ಬಿಡಿಸಂಚಿಕೆಗೆ ೪ ಆಣೆ.

ಸಂಪಾದಕರು :

ಪಾಟೀಲ ಮಾಧವರಾಯರು   ಬೆಟಗೇರಿ ಕೃಷ್ಣಶರ್ಮರು

೨ನೆಯ ವರ್ಷ	ನವ್ಹಂಬರ್ ೧೯೩೯	೭ನೆಯ ಸಂಚಿಕೆ

ಮುಖ್ಯ ವಿಷಯಗಳ ಪರಿವಿಡಿ

ತಿಳಿದು ಮಾಡಿದರೆ ದೀಪಾವಳಿ! (ವ್ಯಂಗ್ಯಚಿತ್ರ)	ಶ್ರೀ. ಶಂ. ನಾ. ಬಳಂದೀಕರ	[illegible]
ಸಂಪಾದಕೀಯ	ಸಂಪಾದಕರು	[illegible]
ಮಂಗನ ಮಲ್ಲಿನಾಥತನ	" ಮಲ್ಲಿನಾಥ "	[illegible]
ಜರ್ಮನಿಯ 'ಗೆಸ್ಟಪೋ' ದಳ (ಪರಿಚಯ)	ಶ್ರೀ. ಜಾರ್ಜಮನೆಯ 'ನೆರಂಗ'ರು	[illegible]
ಆಳಿಯ ನಾಟಕ (ಸಮಾಜಚಿತ್ರ)	ಶ್ರೀ. ಬಿ. ಕೆ. ರಾಮಚಂದ್ರರಾವ್ ಎಲ್. ಎಲ್. ಬಿ.	[illegible]
ವಚನಕಾರರಲ್ಲಿ ಭಕ್ತಿ (ಸಾಹಿತ್ಯ ವಿಮರ್ಶೆ)	ಪ್ರೊ. ಕೆ. ಜಿ. ಕುಂದಣಗಾರ ಎಂ. ಎ.	[illegible]
ಪ್ರೇಮದ ನಾಟಕ (ಸಣ್ಣಕಥೆ)	ಶ್ರೀ. 'ದಯಾನಾಥ'	[illegible]
ಬಾ, ಕೈಯ ತಾ ! (ಕವನ)	ಶ್ರೀ. 'ಅಂಬಿಕಾತನಯದತ್ತ'	[illegible]
ರಣಕಾಳಿ (ಕವನ)	ಶ್ರೀ. ಟಿ. ಎನ್. ಶ್ರೀನಿವಾಸಮೂರ್ತಿ	[illegible]
ಮರೆವಿನ ಮೋಜು (ಹರಟೆ)	ಪ್ರೊ. ಎನ್. ಎಂ. ಕುಲಕರ್ಣಿ ಎಂ. ಎ.	[illegible]
ಭಾಷೆಗಳ ತೊಡಕು (ವಿಚಾರಪ್ರಚೋದಕ ಪ್ರಬಂಧ)	ಪ್ರೊ. ಬಿ. ಎಂ. ವಿಮಾಮಾಂಸಿ ಬಿ. ಎ., ಬಿ. ಟಿ.	[illegible]
ತವರ-ಮನೆ (ಏಕಾಂಕ ನಾಟಕ)	ಶ್ರೀ. ಎಚ್. ಎಸ್. ಪಾಟೀಲ ಎಂ. ಎ.	[illegible]
ಧರ್ಮದ ಎದುರು ಹಿಡಿದ ದೀಪ (ಸಮಾಜವಿಮರ್ಶೆ)	ಶ್ರೀ. ದ. ರಾ. ಬೇಂದ್ರೆ ಎಂ. ಎ.	[illegible]
ಪ್ರೀತಿಯ ಬಳ್ಳಿ (ಸಣ್ಣಕಥೆ)	ಶ್ರೀ. 'ಭಾರತೀಸುತ' ಮೈಸೂರು	[illegible]
ಹದಿನಾಲ್ಕು ದೀಪಗಳು (ಕವಿತೆ)	ಶ್ರೀ. ದೇಸಾಯಿ ದತ್ತಮೂರ್ತಿ	[illegible]
ಕನ್ನಡ ಮರಾಠೀ ವಾದವು ಎಲ್ಲಿ..ಹುಟ್ಟಿತು ? (ಇತಿಹಾಸ)	ಶ್ರೀ. ಮುದವೀಡು ಕೃಷ್ಣರಾಯರು	[illegible]
ಪಾರದ ಭವಿಷ್ಯ (ಸಣ್ಣಕತೆ)	ಶ್ರೀ. ವ್ಹಿ. ಎಂ. ಇನಾಮದಾರ್ ಬಿ. ಎ.	[illegible]
ಶ್ರೀಮದಾನಂದತೀರ್ಥರ ಶಿಕ್ಷಣವಿಮಾಮಾಂಸೆ	ಶ್ರೀ. ಗು. ಭೀ. ಜೋಶಿ ಎಂ. ಎ. ಬಿ. ಟಿ.	[illegible]
ಹಾವಳಿ (ವಿನೋದ ಪ್ರಬಂಧ)	ಶ್ರೀ. ಶ್ರೀ. ದ. ಕುರ್ತಕೋಟಿ ಬಿ. ಎ.	[illegible]
ನಮ್ಮ ಸಮಾಜದ ರೋಗನಿದಾನ (ಸಮಾಜವಿಮರ್ಶೆ)	'ತತ್ತ್ವಜಿಜ್ಞಾಸಿ'	[illegible]
ನೆನಪಿದೆಯೆ ? (ಕವನ)	ಶ್ರೀ. ಎಂ. ಎ. ಸೀತಾರಾಮಯ್ಯ ಎಂ ಎ.	[illegible]
ಗಾಣಿಗನ ಹಾಡು (ಕವನ)	ಶ್ರೀ. 'ಶ್ರೀಧರ' ಪುಣೆ	[illegible]
ಮರುಕ (ಕವನ)	ಶ್ರೀ. ಗುಡಗುಡಿ ಶ್ರೀನಿವಾಸ	[illegible]
ಸುರಾಸುರ ಯುದ್ಧ (ಏಕಾಂಕ ಪ್ರಹಸನ)	ಶ್ರೀ. 'ಶ್ರೀರಂಗ'	[illegible]
ಧರ್ಮರಕ್ಷಕರು (ಚರ್ಚಾತ್ಮಕ ಪ್ರಬಂಧ)	ಶ್ರೀ. ರಂಗನಾಥ ನೆಗಳೂರ ಬಿ. ಎ.	[illegible]
ಎರಡು ಲೋಟ ಹಾಲು (ಸಣ್ಣ ಕಥೆ)	ಶ್ರೀ. ಕೆ. ರಾಜಾರಾವ್ ಬಿ. ಎ.	[illegible]

(ಕವ್ಹರ್ ೩ನೆಯ ಪುಟಕ್ಕೆ ಮುಂದುವರಿದಿದೆ)

ಸಂಚಿಕೆ ೭
ನವ್ಹೆಂಬರ್



ವರ್ಷ ೨
೧೯೩೯

ತಿಳಿದು ಮಾಡಿದರೆ ದೀಪಾವಳಿ, ತಿಳಿಯದೆ ಮಾಡಿದರೆ ದಿವಾಳಿ!



ಹಬ್ಬ ಹಬ್ಬವೆಂದು ಮನೆಯವರೆಲ್ಲ ತಮ್ಮ ಯೋಗ್ಯತೆಯನ್ನರಿಯದೆ ಬಗೆಬಗೆಯಾಗಿ ಮೌಜುಮಾಡುವರು. ತನ್ನ ಬಂಡವಾಳದ ಬೆಲೆಗೊತ್ತಿದ್ದ ಮನೆಯೊಡೆಯು, ಹಬ್ಬದಲ್ಲಿಯೂ ಕರುಳಿಗೆ ಚೇಳುಗಳಿಂದ ಕುಟುಕಿಸಿಕೊಳ್ಳುತ್ತ ಕಳವಳಿಸುತ್ತಿರುವ.



ದೀಪಾವಳಿ ಸಂಚಿಕೆ

ಎಂತಹ ಕಾಲವಿದು ! ಪಶ್ಚಿಮಖಂಡದ ನೀರಲ್ಲಿರುವವರಿಗೆ ಮರಣಭೀತಿ; ನೆಲದಮೇಲಿರುವವರಿಗೆ ಮರಣಭೀತಿ; ಮುಗಿಲಲ್ಲಿ ಹಾರುತಿರುವವರಿಗೆ ಮರಣಭೀತಿ. ನಮ್ಮಲ್ಲಿ ದೀವಳಿಗೆಯ ಹಬ್ಬದಲ್ಲಿ ಮಕ್ಕಳು ಲೀಲೆಗಾಗಿ ಪಟಾಕಿಗಳನ್ನು ಹಾರಿಸುವಷ್ಟು ಸಹಜವಾಗಿ, ಪ್ರತಿನಿಮಿಷವೂ ಅಲ್ಲಿಯ ವೀರಭಟ(!)ರು ಬಾಂಬು-ಗುಂಡುಗಳನ್ನು ಹಾರಿಸುತ್ತಿದ್ದಾರೆ. ಹುಡುಗರ ಪಟಾಕಿಯಾಟವು ನಮ್ಮ 'ಅಪ್ಪನ ಜೇಬಿನ ದುಡ್ಡುಗಳಷ್ಟನ್ನೆ'—ಸಾವಿರ ಸಾವಿರಗಟ್ಟಲೆಯಾಗಿ ಪರದೇಶಕ್ಕೆ ಕಳುಹುತ್ತಿದ್ದರೆ, ಪಶ್ಚಿಮದ ವೀರರ ಬಾಂಬುಗಳಾಟವು ಸಹಸ್ರ ಸಹಸ್ರ ಮಾನವಪ್ರಾಣಿಗಳ ಉಸಿರುಗಳನ್ನೇ ಪರಲೋಕಕ್ಕೆ ಅಟ್ಟಿಬಿಡುತ್ತಲಿವೆ. ಈಗ ತಂದೆ-ತಾಯಿಗಳಿದ್ದ ಮಗು ಮರುಕ್ಷಣದಲ್ಲಿ ಪರದೇಶಿ ! ಈಗ ನೀರಕುವರನಿರುವನೆಂದು ಹೆಮ್ಮೆಪಡುವ ಮುತ್ತೈದೆಯರ ತಾಯ್ತುಂದೆಗಳು, ಇನ್ನೊಂದು ಕ್ಷಣದಲ್ಲಿ ಗತಿಗೇಡಿಗಳು. ಬಾಂಬು-ಗುಂಡುಗಳ ರೌದ್ರಾರವವು ಜನತೆಯ ಕರುಣಾಕ್ರಂದನದೊಂದಿಗೆ ಕೂಡಿ ದಿಕ್ಕುದಿಕ್ಕುಗಳನ್ನೂ ಭೇದಿಸುತ್ತಲಿವೆ. ಆದರೂ ನನಗೆ ದೀವಳಿಗೆಯ ಹಬ್ಬಬೇಕು; ಅರಿತುಮಾಡುವ ದೀವಳಿಗೆಯ ಹಬ್ಬ ಯಾವಾಗಲೂ ಬೇಕು !

* * *

ಪರದೇಶದ ಹಾಡು ಹಾಗೆ ಆಯಿತು; ನಮ್ಮ ಭಾರತದಲ್ಲಿ ನಡೆದ ಪ್ರಲಯದ ರೀತಿಯೆಂತಹದು ? ವೈಯಕ್ತಿಕ ದ್ವೇಷಗಳು, ಜಾತಿ-ಜಾತಿಗಳಲ್ಲಿಯ ತಾಮಸ ಸ್ಪರ್ಧೆಗಳು, ಮತ-ಮತಗಳಲ್ಲಿಯ ಮತ್ಸರದ ಹೋರಾಟಗಳು ಇವೆಲ್ಲ ಸೇರಿ, ಮೊದಲೆ ಭಾರತೀಯರ ಕರುಳನ್ನು ಕೊತ್ತಳದುಳಿಯುತ್ತಿದ್ದುವು. ಇದರಿಂದ ಕಣ್ಣುಮರು ಕವಿದ ಕಗ್ಗತ್ತಲೆಯಲ್ಲಿ, ಭಾರತ ರಾಷ್ಟ್ರೀಯ ಪಕ್ಷದ ಅಧಿಕಾರ ಸ್ವೀಕಾರ ಒಂದು ಆಶೆಯ ಕಿರುದೀಪವನ್ನು ಜನರ ಕಣ್ಣೆದುರಿಗಿರಿಸಿ ಅದರ ಕಡೆಗೆ ನೋಡಲು ಹಚ್ಚಿದ್ದಿತು. ಮಹಾಯುದ್ಧದ ಸುಟ್ಟುರೆಗಾಳಿ ಆ ಕಿರು-ದೀಪವನ್ನು ಹೊಯ್ದಾಡಿಸಿ ಕಳೆಯುವುದರಲ್ಲಿದೆ. ಬರಲಿರುವ ಕಗ್ಗತ್ತಲೆಗಾಗಿ ಜನತೆ ಬೆಚ್ಚಿ ಬೆದರಿ ಕಳವಳಗೊಂಡು ನಿಂತಿದೆ. ಇಂತಹದರಲ್ಲಿಯೂ ನಮಗೆ ದೀವಳಿಗೆಯ ಹಬ್ಬ ಬೇಕೇಬೇಕು; ಅರಿತುಮಾಡುವ ದೀವಳಿಗೆಯ ಹಬ್ಬ ಯಾವಾಗಲೂ ಬೇಕು.

* * *

ಬೇಕಾದಂತಹ ವೈಯಕ್ತಿಕ ಆಪತ್ತಿ ಬಂದೊದಗಲಿ, ರಾಷ್ಟ್ರೀಯ ಆಪತ್ತಿ ಬಂದೊದಗಲಿ, ನಮ್ಮಲ್ಲಿಯ ಹಬ್ಬ-ಹರಿದಿನಗಳು ಪ್ರತಿಸಲದಂತೆ ಜರುಗಿಯೆ ಜರುಗುವುವು. ಏತಕ್ಕೆಂದರೆ ಆ ನಂದಾ ಕಾಂಕ್ಷಿಯಾದ ಮಾನವನ ಮನಸ್ಸು, ಉತ್ಸವಜೀವನಕ್ಕಾಗಿ ಯಾವಾಗಲೂ ಹಂಬಲಿಸುತ್ತಿರುವುದು. ಉತ್ಸವಗಳ ಜರಿಯ ತೆರೆಯ ಮರೆಯಲ್ಲಿ ಬಾಳಿನ ಮಿಡುಕು-ತೊಡಕುಗಳನ್ನು ಮುಚ್ಚಿಡಲು ಹವಣಿಸುವುದು ಮನಸ್ಸಿನದೊಂದು ರೀತಿ. ನಮ್ಮ ಸಮಾಜದ ಧಾರ್ಮಿಕಜೀವನದಲ್ಲಿ ಎಂತೆಂತಹ ತಾತ್ತ್ವಿಕ-ಆಚಾರವಿಷಯಕ ಕೊರತೆಗಳಿಗೆ ಸಮ್ಮತಿಪೂರ್ವಕ ಅವಕಾಶವಿರುವುದಾದರೂ, ಹಬ್ಬ-ಹರಿದಿನಗಳ ಆಚರಣೆಯ ಕೊರತೆಗೆ ಎಂದೂ ಅವಕಾಶವಿರದು. ಇದಕ್ಕೆ ಮುಖ್ಯಕಾರಣ ನಮ್ಮವರ ಸಂಪ್ರದಾಯ ಪ್ರೀತಿಯಲ್ಲ; ಆ ದಿನಗಳಲ್ಲಿ ದೇಹಕ್ಕೂ ಮನಸ್ಸಿಗೂ ಸವಿ ಸವಿಯ ರಸಗವಳ ಸಿಕ್ಕುವುವೆಂದು. ಆದರೆ ಸದ್ಯದ ನಮ್ಮ ಹಬ್ಬ-ಹರಿದಿನಗಳಲ್ಲಿ ದೇಹಕ್ಕೆ ರಸ-ಗವಳ ಸಿಕ್ಕಬೇಕಾದರೆ ಬಹುಜನರಿಗೆ ಸಾಲದ ರೋಗವನ್ನು ಅಂಟಿಸಿಕೊಳ್ಳದಿದ್ದರೆ ಬೇರೆ ಗತಿಯಿಲ್ಲದಾಗಿದೆ. ಸಮಾಜದಲ್ಲಿಯ ಪರಸ್ಪರ ದ್ವೇಷ, ಅಸ-ಹಿಷ್ಣುತೆಗಳ ಮೂಲಕ ಮನಸ್ಸಿಗೂ ರಸಗವಳ ಸಿಕ್ಕದಂತಾಗಿದೆ. ಆದುದರಿಂದ ನಮಗೆ— ಉತ್ಸವಪ್ರಿಯರಾದ ನಮಗೆ— ದೀವಳಿಗೆಯ ಹಬ್ಬ ಬೇಕಾಗಿದೆಯಾದರೂ ಅರಿತುಕೊಂಡು ಮಾಡುವ ದೀವಳಿಗೆ ಇಲ್ಲವಾಗಿದೆ. ಕೇವಲ ಪರಂಪರೆಯ ರೀತಿಯಲ್ಲಿ ದೀವಳಿಗೆಯನ್ನು ಜರುಗಿಸಿದರೆ ಏನಾದೀತು? ಮನದ ಕತ್ತಲೆಯನ್ನು ಹೋಗಲಾಡಿಸದೆ ಮನೆತುಂಬ—ಊರತುಂಬ.. ದೀಪದ ಮಾಲೆಗಳನ್ನು ಬೆಳಗಿಸಿದರೆ 'ಬರಿಯ ಕಣ್ಣ ಹಾಳು ! ಪೌರುಷಕ್ಕೆ ಎಡೆಯಿಲ್ಲದ ಬಾಳಿನಲ್ಲಿ ಸವಿಯೂಟ ಹೊಡೆದು ಬೀಳುವುದೆಂದರೆ ಬರಿ ಕೂಳು ಹಾಳು ! ಹೀಗಾಗದಂತೆ ದೀವಳಿಗೆಯ ಹಬ್ಬಮಾಡುವ ಕನ್ನಡಿಗರನ್ನು ಜಯಂತಿ ಕೋರುತ್ತಲಿದೆ. ಆ ಕೋರಿಕೆಗೆ ಒಪ್ಪುವಂತಹವೇ ಆದ ಹಲವು ಲೇಖನಗಳನ್ನೂ ಕತೆ-ಏಕಾಂಕನಾಟಕ-ಪ್ರಬಂಧಗಳನ್ನೂ ಈ ಸಂಚಿಕೆಯಲ್ಲಿ ಸಂಗ್ರಹಿಸಿ ಪ್ರಕಟಿಸಲಾಗಿದೆ.

ಮೇಲುಹೊದಿಕೆ

ಈ ಸಲದ ಸಂಚಿಕೆಗೆ ಮೇಲುಹೊದಿಕೆಗೆ ಬೇಕಾಗುವ ಮಿಂಚುಕಾಗದ (ಆರ್ಟ ಪೇಪರ್) ಗಳು ಎಷ್ಟು ದಾರಿಯನ್ನು ನೋಡಿದರೂ ಸಕಾಲಕ್ಕೆ ಒದಗಲಿಲ್ಲ. ಒಳ್ಳೆಯ ಕಾಗದವಿರದುದರಿಂದ ಕೈಗೆ ಸಿಕ್ಕ ಕಾಗದವನ್ನೆ ಉಪಯೋಗಿಸಬೇಕಾಯಿತು. ಈ ಕಾಗದದ ಮೇಲೆ—ದೀಪಾವಳಿ ಸಂಚಿಕೆಗಾಗಿಯೆ ಮಾಡಿಸಿದ—ಮೂರು ಬಣ್ಣದ ಪಡಿಯಚ್ಚು ಸರಿಯಾಗಿ ಅಚ್ಚಾಗಲಾರದೆಂದು ಕಂಡುಬಂದುದರಿಂದ, ದೀಪಾವಳಿಯ ಬೇರೆಬೇರೆಯ ಕಾರ್ಯಕ್ರಮವನ್ನು ನೆನಪಿಗೆ ತಂದುಕೊಡುವಂತಹ ಚಿತ್ರದ 'ಲೈನ್‌ಬ್ಲಾಕ' ಮಾಡಿಸಿ ಮುದ್ರಿಸಬೇಕಾಯಿತು. ಯುದ್ಧದ ಅನಿವಾರ್ಯ ಸಂದರ್ಭವು ವಿಶೇಷಸಂಚಿಕೆಯ ಬಹಿರಂಗದ ಆಕರ್ಷಕತೆಗೆ ತಡೆಯೊಡ್ಡಿತೆಂಬುದನ್ನು ವಿಷಾದದಿಂದಲೆ ಇಲ್ಲಿ ತಿಳುಹಬೇಕಾಗಿದೆ.

ಕೃತಜ್ಞತೆಗಳು

ನಮ್ಮ ಬಿನ್ನಹಕ್ಕೆ ಮನ್ನಣೆ ಕೊಟ್ಟು ಹಲವು ಜನ ಕನ್ನಡ ಸಾಹಿತ್ಯಕ ಮಹನೀಯರು, ತಮ್ಮ ಬೆಲೆಯುಳ್ಳ ಬರಹಗಳನ್ನು ಒದಗಿಸಿ ಕೊಟ್ಟು, ಈ ಸಂಚಿಕೆಯ ಅಂತರಂಗದ ಸೌಂದರ್ಯವನ್ನು ಹೆಚ್ಚಿಸಲು ಸಹಾಯ ಮಾಡಿದರು. ಅದಕ್ಕಾಗಿ ಅವರಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳು. ದೀಪಾವಳಿ ಸಂಚಿಕೆಗಾಗಿಯೆ ವಿಶೇಷ ಪರಿಶ್ರಮ ವಹಿಸಿ ಚಿತ್ರಗಳನ್ನು ಒದಗಿಸಿಕೊಟ್ಟ ಶ್ರೀಯುತರುಗಳಾದ ಆಳಂದೀಕರ್, ಅಗ್ನಿಹೋತ್ರಿ, ಉಪಾಧ್ಯೆ, ಮೊರಬ ಇವರಿಗೂ ನಮ್ಮ ಕೃತಜ್ಞತೆಯ ವಂದನೆಗಳು. 'ಶ್ರೀನಿವಾಸ ಮತ್ತು ಕಂಪನಿ'ಯ ಒಡೆಯರಾದ ಶ್ರೀಮಾನ್ ಪೋತದಾರ ಶ್ರೀನಿವಾಸರಾಯರ ನೆರವಂತೂ ಜಯಂತಿಗೆ ತುಂಬ ಸಿಕ್ಕುತ್ತಲಿದೆ. ನಮ್ಮಿಂದ ತಡೆಯಾದರೂ ಸಮಯಕ್ಕೆ ಸರಿಯಾಗಿ ನಮಗೆ ಪಡಿಯಚ್ಚುಗಳನ್ನು ಅಣಿಗೊಳಿಸಿಕೊಡುತ್ತಿದ್ದುದು ನಿಜವಾಗಿಯೂ ಅಭಿನಂದನೀಯ ಸಂಗತಿಯಾಗಿದೆ. ಚಿತ್ರಕಾರರಿಗೆಲ್ಲ ಯುಕ್ತಸಲಹೆಗಳನ್ನು ಕೊಟ್ಟು, ಇದ್ದುದರಲ್ಲಿಯೆ ಅನುಪಮ ಒಳ್ಳೊಳ್ಳೆಯ ಚಿತ್ರಗಳು ಬರುವಂತೆ ಪ್ರಯತ್ನಿಸಿದ ಶ್ರೀಮಾನ್ ಜವಳಿ ವಿಟ್ಠಲರಾಯರಿಗೂ ನಮ್ಮ ಕೃತಜ್ಞತೆಯ ವಂದನೆ ಸಲ್ಲಬೇಕಾಗಿದೆ.

ಜೀವನಕ್ಕೆ ಸ್ವಾಗತ

ಮೊನ್ನೆಯ ದಸರೆಯ ಸುಮುಹೂರ್ತದ ಮೇಲೆ ಧಾರವಾಡದಲ್ಲಿ 'ಜೀವನ' ಎಂಬ ಹೆಸರಿನ ಹೊಸ ಮಾಸಪತ್ರಿಕೆಯೊಂದು ಹೊರಟು 'ಜಯಂತಿ'ಯ ಬೆಟ್ಟಿಗೆ ಬಂದಿದೆ. ಕನ್ನಡನಾಡಿಗೆ ಚೆನ್ನಾಗಿ ಪರಿಚಿತರಾದ ಶ್ರೀಮಾನ್ ದ. ರಾ. ಬೇಂದ್ರೆ, ಎಂ. ಎ. ಅವರೂ, ಪ್ರೊ. ವಿ. ಕೆ. ಗೋಕಾಕ, ಎಂ. ಎ. (ಬಾಂಬೆ), ಬಿ. ಎ. (ಆಕ್ಸನ್) ಅವರೂ ಸಂಪಾದಕರಾಗಿರುವರು. ಮುಂದಿನ ಸಂಚಿಕೆ 'ಗೀತಾಂಕ'ವಾಗಿ ಹೊರಡಲಿರುವುದು. 'ಜೀವನ' ಕನ್ನಡ ನಾಡಿನ ನವಜೀವನಕ್ಕೆ ಕಾರಣವಾಗಲೆಂಬ ಹಾರೈಕೆಯೊಂದಿಗೆ ಸ್ನೇಹಭಾವದಿಂದ ಅದನ್ನು ಸ್ವಾಗತಿಸುತ್ತಿದ್ದೇವೆ.

—ಸಂಪಾದಕರು

ರುಂಡ-ಮೋಜಿನ-ಪರಿಷತ್ತು

ಇತ್ತೀಚಿಗೆ ಮಂಗರಾಯನ ಯೋಗ್ಯತೆಗಾಗಿ ಕೆಲವು ವಾಚಕರಿಗೆ ಸಂಶಯ ಬರುತ್ತಿರುವುದಂತೆ. 'ಸಾಹಿತಿ ಎಂದರೆ ಸವಿಗನಸುಗಳನ್ನು ಕಾಣುವವ, ಮಂಗರಾಯನಿಗೆ ಮಾತ್ರ ಇಂದಿನ ವರೆಗೆ ಒಂದು ಕನಸೂ ಬಿದ್ದಂತಿಲ್ಲ, ಆದಕಾಗಿ ಮಂಗರಾಯನು ಸಾಹಿತಿಯೆ?' ಎಂಬ ಸಂಶಯವಂತೆ. ಸಂಶಯ ನೇನೂ ತೀರ ನಿರಾಧಾರವೆನಿಸುವಂತಿಲ್ಲ. ತಿಂದ ಕೋಸಲನ್ನು ತೇಗಿ ವಕ್ಕಿಸುವ ಮಂಗರಾಯನಿಗೆ ಕನಸು ಕಡಿಮೆ; ಇದಲ್ಲದೆ ತೋರಿದ ಕನಸುಗಳನ್ನು ಬರೆಯುವ ಅಧೈರ್ಯ ಮಂಗರಾಯನಿಗೆ. ಅಷ್ಟಾಗಿಯೂ ಯಾರಿಗಾದರೂ ಸಂಶಯವಿದ್ದರೆ ಇದೋ-ಇಲ್ಲಿದೆ ಮಂಗರಾಯನದೊಂದು ಕನಸು. ಆ ಕನಸಿನಲ್ಲಿ ರುಂಡಮೋಜಿನ ಪರಿಷತು ನೆರೆದಿದೆ, ಅರ್ಥಾತ್—ಮಧ್ಯದಲ್ಲಿ ಸತ್ತ ಹೋರಿಯೊಂದು, ಅದರ ಸುತ್ತಲೂ ರುಂಡ ಚಾಚಿ ಕಿಸ್ಸಿನ ತವಕವನ್ನು ತೋರುವ ಪ್ರಾಣಿಗಳು! ಒಂದು ಕಡೆ ಕಾಗೆ, ಇನ್ನೊಂದು ಕಡೆ ನರಿ, ಮತ್ತೊಂದು ಕಡೆ ರಣಹದ್ದು! ತಿನ್ನುವ ಆಕಾಂಕ್ಷೆಯ ಅತಿರೇಕವಾಗಿ ಈ ಪ್ರಾಣಿಗಳ ರುಂಡವೇ ಎದ್ದು ಕಾಣುತ್ತಿದೆ! ಅದೆಂತಹ ಭೀಕರ ದೃಶ್ಯ! ಎಲ್ಲಿಂದೊ ಒಂದು ಮೂಲೆಯಲ್ಲಿ ಹುಲಿ ನಿಂತು ನೋಡುತ್ತಲಿದೆ. ಹೊಡೆಯುವ ಶಕ್ತಿ ಹುಲಿಗೆ, ತಿನ್ನುವ ಆಕಾಂಕ್ಷೆ ಮಿಕ್ಕವರಿಗೆ: ಮಂಗರಾಯನ ಮೈ ನಡುಗಿತು. ಎಚ್ಚತ್ತು ನೋಡಿದರೆ—ವೃತ್ತಪತ್ರ ಮುಖದ ಮೇಲೆ ಮುಸುಕಿದೆ! ಕಣ್ತೆರೆದು ನೋಡಿದರೆ—ಪ್ರೈಮ್ ರಾಯರು ಕಾಂಗ್ರೆಸ್-ಮುಸ್ಲಿಂ ಲೀಗ್-ಹಿಂದುಮಹಾಸಭಾ ಮೊದಲಾದ ಸಂಸ್ಥೆಗಳ ಪ್ರತಿನಿಧಿಗಳೊಡನೆ ಚರ್ಚೆ ನಡೆಸಿದ ಸುದ್ದಿ! ಹಾಗಾಗಲಿ ಕನಸು! ವಾಚಕರೆ, ಯಾಕೆ ಕನಸಿನ ಮಾತಿನಿಂದ ಮಂಗರಾಯನನ್ನು ಕೆಣಕಿದಿರಿ?

*   *   *

ಕನ್ನಡಿಗರಿಗೆ ಕರೆ

ಹೋದ ತಿಂಗಳು ಲಾರ್ಡ್ ಲಿನ್‌ಲಿಥ್‌ಗೊ ರಿಗಳು ಎಲ್ಲ ಪಕ್ಷಗಳೊಡನೆ ಚರ್ಚೆ ಬೆಳಸಿದ್ದ ಕನ್ನಡಿಗನೊಬ್ಬನನ್ನೂ ಕರೆಯಲಿಲ್ಲವೆಂಬ ದೂರು ಮಂಗರಾಯನ ಮುಸುಡಿಯ ವರೆಗೆ ಬಂದಿದೆ. ವಾಚಕರೆ, ಕ್ಷಮೆ ಇರಲಿ. ಕನ್ನಡಿಗರನ್ನೂ ದಿಲ್ಲಿಗೆ ಆಮಂತ್ರಿಸೋಣವಾಗಿತ್ತು. ಆದರೂ ಆದದ್ದಾಗಿ ಹೋಯಿತು—ಎಂದು ಮಂಗರಾಯನು—ಈ ಎಲ್ಲ ಸಂದರ್ಶನಗಳ ಸರ್ವಾಧಿಕಾರಿ ಪತ್ರಿಕಾಪ್ರತಿನಿಧಿಯು—ಆ ಸುದ್ದಿಯನ್ನು ತಡೆದಿದ್ದನು. ಆದರೆ ಈಗ ತಪ್ಪು ತಿಳುವಳಿಕೆಯು ಹೆಚ್ಚಾಗುತ್ತ ನಡೆದದ್ದರಿಂದ ಅನಿವಾರ್ಯವಾಗಿ 'ತೆರೆಯ ಹಿಂದಿನ' ಸಂಗತಿಯನ್ನೆಲ್ಲ ಮಂಗಮಹಾಶಯನು ಮೊದಲನೆಯ ಸಲ ಪ್ರಕಟಿಸುತ್ತಿದ್ದಾನೆ. ಈ ಪ್ರಕಟನೆಗೆ ವ್ಹಾಯಿಸ್‌ರಾಯ ಮೊದಲಾದ ಎಲ್ಲ ಸಹಭಾಗಿಗಳ ಅನುಮತಿಯೂ ದೊರೆತಿದೆ. ಆದರೂ ಸವಿಸ್ತಾರ 'ಪಕೀಕತ್ತ'ನ್ನು ಕೊಡುವುದು ಸಾರ್ವಜನಿಕ ದೃಷ್ಟಿಯಿಂದ ಹಿತಕರವಲ್ಲದ್ದರಿಂದ, ನಡೆದ ಸಂದರ್ಶನಗಳ ತಾತ್ಪರ್ಯವನ್ನು ಸಂಭಾಷಣಾರೂಪದಲ್ಲಿ ಕೊಡಲಾಗಿದೆ. ಆಮಂತ್ರಿತರಾದ ಕನ್ನಡಿಗರಲ್ಲಿ ಮೊದಲನೆಯ ಸನ್ಮಾನ, ಏಕೀಕರಣ ಪರಿಷತ್ತಿನ ಅಧ್ಯಕ್ಷರಾದ ಶ್ರೀಮಾನ್ ಕೆ. ಆರ್. ಕಾರಂತರಿಗೆ ದೊರೆತಿದೆ. ಸಾರಾಂಶದ ಸಂಭಾಷಣೆ:—

ಲಾರ್ಡ್ ಲಿನ್‌ಲಿಥ್‌ಗೊ:— ಹಿಂದುಸ್ತಾನದ ರಾಜ್ಯಪದ್ಧತಿ ಹೇಗಿದ್ದರೆ ನೀವು—ಕನ್ನಡಿಗರು—ಯುದ್ಧದಲ್ಲಿ ನಮಗೆ ಸಹಾಯಮಾಡಬಹುದು?

ಶ್ರೀ. ಕಾರಂತ:— (ಸಿಟ್ಟಿನಿಂದ) ಹಾಳಾಯಿತು ಹಿಂದುಸ್ತಾನ! ಎಲ್ಲಿಯ ಪದ್ಧತಿ ಏನೇ ಇರಲಿ, ಕರ್ನಾಟಕದ ಏಕೀಕರಣ ಮಾತ್ರ ಬೇಡ! ಎಂದರೆಯೆ ನಿಮಗೆ ನಾವು ಸಹಾಯ ಮಾಡಬಹುದು.

ಲಾ. ಲಿ.:— (ಚಕಿತರಾಗಿ) ಇದೇನು? ಏಕೀಕರಣ ಬೇಕೆಂದು ನಿಮ್ಮ ಹೆಸರಿನಿಂದ ನೂರಾರು ಕಾಗದ-ತಂತಿ-ಗೊತ್ತುವಳಿ—

ಶ್ರೀ. ಕಾರಂತ:— ಯುದ್ಧಕ್ಕಿಂತ ಮುಂಚೆ ಕಾಗದ ಸೋವಿಯಾಗಿದ್ದಿತು. ಅದೇನೆ ಇರಲಿ. ಹುಬ್ಬಳ್ಳಿಯಲ್ಲಿ 'ಸಭಾಬಂದಿ' ಹುಕುಮನ್ನಾದರೂ ಮಾಡುವ ವರೆಗೆ ಏಕೀಕರಣ ಬೇಡ!

ಲಾ. ಲಿ.:— ಅಂತೂ ಯುದ್ಧದ ವಿಷಯವಾಗಿ—

ಶ್ರೀ. ಕಾರಂತ:— ಯುರೋಪದ ಯುದ್ಧದ ಪರಿವೆ ನನಗಿಲ್ಲ. ಸದ್ಯಕ್ಕೆ ಮಂಗಳೂರಿಗೂ ಮಿಕ್ಕ ಕರ್ನಾಟಕಕ್ಕೂ ಯುದ್ಧ ನಡೆಯಬೇಕಾಗಿದೆ—ಅದಕಾಗಿ ಕ್ಷಮೆ ಇರಲಿ!

(ತೆರೆ ನಾಚಿಕೆಯಿಂದ ಬೀಳಲಿ)

*   *   *

('ತರುಣ ಕರ್ನಾಟಕ'ದ ಸಂಪಾದಕರು ಈಗ ಸಂದರ್ಶನಕ್ಕೆ ಆಮಂತ್ರಿಸಲ್ಪಟ್ಟಿದ್ದಾರೆ.)

ವ್ಹಾಯಿಸ್‌ರಾಯ:— ಗುಡ್ ಮಾರ್ನಿಂಗ್, ಮಿಸ್ಟರ್—

ತ.ಕ. ಸಂಪಾದಕರು:— (ಹೇಸಿದಂತೆ) ಗುಡ್ ಮಾರ್ನಿಂಗ್! ರಾಮದುರ್ಗದುರಂತದ ಸೂತಕಕಾಲವಿದು—ಅದಕಾಗಿ ಪರಸ್ಪರ ನಮಸ್ಕಾರ ಬೇಡ!

ವ್ಹಾಯಿಸ್:— ಯುದ್ಧದ ವಿಷಯದಲ್ಲಿ—

ತ. ಕ. ಸಂ.:— ಯುದ್ಧ? ಯಾವ ಯುದ್ಧ?

ವ್ಹಾಯಿಸ್:— ಯುರೋಪಿನಲ್ಲಿ ಹಿಟ್ಲರನ ವಿರುದ್ಧ—

ತ. ಕ. ಸಂ.:— (ಒಮ್ಮೆಲೆ ಎದ್ದು) ಅಯ್ಯೊ! ಮಹಾರಾಯರೆ! ಈ ಯುದ್ಧ! ಮೊದಲೇ ಗೊತ್ತಿದ್ದರೆ ನಾನಿಲ್ಲಿ ಬರುತ್ತಿದ್ದೆ? ನನಗನಿಸಿತ್ತು ಬೆಳಗಾಂವಿಯ ಹಿಟ್ಲರನ ಜೋಡಿ—ಹುಂ—ದುರಂತಕ್ಕೆ ಜಯವಾಗಲಿ!

(ತೆರೆಯನ್ನು ಎಳೆದುಕೊಂಡೇ ಹೋಗಬೇಕು.)

(ಮುಂದೆ ವೈಷ್ಣವ-ಸ್ಮಾರ್ತ-ಕುರುಬ-ಬಣಜಿಗ-ಪಂಚಮಸಾಲಿ-ಅಕ್ಕಸಾಲಿ-ಬಿಕ್ಕಸಾಲಿ-ಮುಂತಾದ ಎಲ್ಲ ಸಂಗಡವರೂ ಬಂದಿದ್ದರು. ಆದರೆ ವೇಳೆ ಕೊಡುವುದರಲ್ಲಿ ತುಸು ಪ್ರಮಾದವಾಗಿ, ಅವೇ ವೇಳೆಗೆ ಎರಡೆರಡು ಸಂಗಡದವರು ದೊರೆಗಳ ಬಾಗಿಲಿಗೆ ಬಂದರು. ಇನ್ನೂ ವರೆಗೂ ಅವರೆಲ್ಲರೂ ಆಸ್ಪತ್ರೆಯಲ್ಲಿಯೆ ಇದ್ದುದರಿಂದ, ಸಂದರ್ಶನಗಳನ್ನು ಮುಂದುವರಿಸಲಾಗಿದೆ).

*   *   *

ಮಿಕ್ಕವರ ಮಾತೆ

(ಮಹಾತ್ಮಾ ಗಾಂಧಿಯವರ ಪ್ರವೇಶ)

ಲಾ. ಲಿ.:— ಗುಡ್ ಮಾರ್ನಿಂಗ್, ಮಿ. ಗಾಂಧಿ.

ಮಹಾತ್ಮಾ:— (ನಗೆಯಿಂದ) ಸತ್ಯಮೇವ ಜಯತೇ.

ಲಾ.ಲಿ :- ಯುದ್ಧದ ವಿಷಯವಾಗಿ ನಿಮ್ಮ—

ಮಹಾತ್ಮಾ :- (ಗಂಭೀರವಾಗಿ) ಅಹಿಂಸಾ ಏವ ಜಯತೇ !

ಲಾ.ಲಿ. :- (ಎದ್ದು) ನಿಮ್ಮ ಸಹಾನುಭೂತಿಗಾಗಿ ನಾನು ಅತ್ಯಂತ ಋಣಿಯಾಗಿದ್ದೇನೆ. (ಕೈ ಕ, ಮುಂದೆ ಚಾಚುವರು).

ಮಹಾತ್ಮಾ:-ಅಸ್ಪೃಶ್ಯತಾ ನಿವಾರಣಾ ಜಯತೇ ! (ಎಂದು ಚಾಚಿದ ಕೈಯನ್ನು ಮುಟ್ಟಿ ಕುಲುಕುವರು).

(ತೆರೆಗೆ ಏನೂ ತಿಳಿಯದಂತಾಗುವುದು).

* * *

(ಪಂಡಿತ ಜವಾಹರರ ಗಜಗತಿಯ ಪ್ರವೇಶ)

ಲಾ.ಲಿ. :- (ಎದ್ದು) How do you do ?

ಪಂ.ಜ. :- (ಉದ್ವೇಗದಿಂದ) What a question to ask when the international situation is so grave and critical !

ಲಾ. ಲಿ. :- May I expect your sympathy in this crusade against Hitler ?

ಪಂ.ಜ. :- Certainly not. I shall be the first to crush Fascism. That is why we are meeting at Wardha.

(ತೆರೆಯು ಮೂರ್ಛೆ ತಾಳಿ ಬೀಳುವುದು).

* * *

(ಸರದಾರ್ ವಲ್ಲಭಭಾಯಿಯವರ ಪ್ರವೇಶ, ಪರಾಕು !)

ಸ.ವ. :- ದೊರೆಗಳೆ, ನಾನು ಮುತ್ಸದ್ದಿಯಲ್ಲ, ನಾನೊಬ್ಬ ಹುಂಬ ಒಕ್ಕಲಿಗ. ನನ್ನೊಡನೆ ನಿಮ್ಮ ಕೆಲಸವೇನು ? ಎಂಟು ಪ್ರಾಂತಗಳಲ್ಲಿ ರಂಟೆ ಹೊಡೆದೆ; ಹಸನು ಮಾಡಿದೆ. ಆದರೆ ಮಳೆಯೇ ಇಲ್ಲ. ನಿಮ್ಮ ಹೊಲಾ ಮಾಡೋದೇ ಸಾಕು, ನನಗೆ. ಈ ಕಡೆ ಯುದ್ಧ ನಡೆಯಲಿ, ಈ ಕಡೆ ಮಳೆ ಆಗಲಿ. ಆಗ ಮಾತಾಡಿಸೀರಂತೆ ನನ್ನ. (ಎಂದು ಮಿಾಸೆ ತೆಗೆಸಿದ್ದನ್ನು ಮರೆತು ಹುರಿಹಾಕಲು ಹೋಗುವಾಗ)

(ತೆರೆಯು ಮೊಳ್ಳೆಂದು ಬೀಳುವುದು).

* * *

(ಆನರೇಬಲ್ ಚಕ್ರವರ್ತಿ ರಾಜಗೋಪಾಲಾಚಾರಿಯವರು)

ಲಾ.ಲಿ. :- Good Morning. May we shake hands ?

ರಾಜ:- Once upon a time there was a lion and there was a fox. Said the lion to the fox—

(ವ್ಹಾಯಿಸ್‌ರಾಯರ ಕಣ್ಣಿಗೆ ಪರದೆ ಕಟ್ಟುವುದು.)

* * *

(ಜನಾಬ ಜಿನ್ನಾಸಾಹೇಬ ಝಿಂದಾಬಾದ್)

ಲಾ.ಲಿ. :- Shall we meet at dinner ?

ಜ.ಜಿ. :- With thanks and pleasure, your lordship; but on fourteen conditions :

1. The mutton should not belong to the same animal that provided this morning Mr. Gandhi with milk.
2. 33% of the dinner cooked must be reserved for me.
3. Hitler should be compelled to throw bombs proportionately on the minority communities as well.

(ಇಷ್ಟರಲ್ಲಿ ತೆರೆಯು ಮುದುಡಿಕೊಳ್ಳುವುದು.)

* * *

(೪೧೬ ನೆಯ ಪುಟಕ್ಕೆ ಮುಂದುವರಿವುದು.)

ರುಂಡ ಮೇಜಿನ ಪರಿಷತ್ತು



ವ್ಹಾಯಿಸ್‌ರಾಯರು ಭಾರತದ ಮುಂದಾಳುಗಳನೇಕರನ್ನು ಕರೆಯಿಸಿದರು; ಆದರೆ ನಮ್ಮವರ ರುಂಡಗಳೇನೊ ಒಂದೆಡೆಯಲ್ಲಿ ಕೂಡಿದುವು. ಆದರೆ ಎವೆಗಳು ಎಲ್ಲೆಲ್ಲಿಯೋ ಓಡಾಡತೊಡಗಿದುದರಿಂದ ಬ್ರಿಟಿಷ್ ಸರಕಾರಕ್ಕೆ ಬಲುಹು ಬಂದಿತು ! ಲಾರ್ಡ್ ಲಿನ್‌ಲಿಥ್‌ಗೋ ಅವರ ಮೇಣದಂತಹ ಮಾತು ಕಗ್ಗಲ್ಲಾಯಿತು.

ಜರ್ಮನಿಯ ಜೀವಾಳ, ಎಂದರೆ ಗೆಸ್ಟಪೊ ದಳ!

ಇಂದಿನ ರಾಜ್ಯತಂತ್ರದ ಅಡಿಗಲ್ಲು! ಹಿಟ್ಲರನ ಸುದರ್ಶನ!!

ಜಾರ್ಮನಿಯ 'ನೆರಂಗ್' ಅವರು ಬರೆದುದು.

★

ಗೆಸ್ಟಪೋ ದಳದವರು ಜರ್ಮನಿಗಾಗಿ—ನಾಝೀತತ್ತ್ವದ ಪ್ರಚಾರಕ್ಕಾಗಿ—ಎಂತೆಂತಹ ಕಾರ್ಯಗಳನ್ನೋ ಮಾಡುತ್ತಾರೆ. ಹಿಂದುಸ್ತಾನದ ಜನರಿಗೆ ಗೊತ್ತಾಗುತ್ತಿದ್ದ ಅವರ ಸ್ವಭಾವಚಿತ್ರ ಅವರನ್ನು ಮಾನವತೆಯಿಂದ ದೂರ ಸರಿಸಲು ಹಚ್ಚುತ್ತದೆ. ಏಕೆಂಬುದಕ್ಕೆ ಈ ಲೇಖನವನ್ನು ಓದಿ ನೋಡಿರಿ. ಇದೆಲ್ಲ ನಿಜವಿದ್ದರೆ ನಾಝೀರಾಜ್ಯದಲ್ಲಿ ಮಾನವನ ವೈಯಕ್ತಿಕ ಮಾನಮರ್ಯಾದೆಗೆ ಉಳಿಗಾಲವಿಲ್ಲವೆಂದೇ ಹೇಳಬೇಕಾಗುವುದಲ್ಲವೇ?

★

ಈಗೊದಗಿದ ಭೀಕರಪ್ರಸಂಗದ ಮೂಲಕ ಜರ್ಮನಿಯ ವಿಷಯದಲ್ಲಿ ಅನೇಕ ತರ್ಕ-ವಿತರ್ಕಗಳು ನಡೆಯುತ್ತಿವೆ. ಜರ್ಮನಿಯು ಈ ರೀತಿ ಬಲಾಢ್ಯವಾಗಲಿಕ್ಕೆ ಕಾರಣವೇನಿರಬಹುದೆಂಬುದನ್ನೂ, ಮುಂದೆಯೂ ಇದೇ ರೀತಿಯಾಗಿ ಅವ್ಯಾಹತವಾಗಿ ಅದರ ಆಕ್ರಮಣಶೀಲ ಪ್ರವೃತ್ತಿಯು ನಡೆಯಬಹುದೋ ಎಂಬುದನ್ನೂ ತಿಳಿಯಲು ಎಲ್ಲರಿಗೂ ಆತುರ. ಜರ್ಮನಿಯು ಈ ಇಪ್ಪತ್ತೈದು ವರ್ಷಗಳಲ್ಲಿ ಮಾಡಿದ ಪ್ರಯತ್ನವನ್ನು ನೆನೆದರೆ ಅಲ್ಲಿಯ ಅಸಾಧಾರಣ ಸಂಘಟನಾಶಕ್ತಿಯ ಬಗೆಗೆ ಆದರವುಂಟಾಗುವುದು; ಆದರೆ ಈಗಿದ್ದ ಪರಿಸ್ಥಿತಿಯು ಎಷ್ಟು ದಿನದ ವರೆಗೆ ಸಾಗಬಹುದೆಂಬ ವಿಚಾರ ಬಂದರೆ ಮಾತ್ರ ಎದೆಯು ಡಡದಡಿಸಬಹುದು.

ಇಂದು ಜರ್ಮನಿಯಲ್ಲಿ ಏನು ನಡೆದಿದೆ, ಅಲ್ಲಿ ಜನಗಳ ಮನಃಪ್ರವೃತ್ತಿ ಹೇಗಿದೆ?— ಎಂಬುದನ್ನು ತಿಳಿಯುವುದು ಆವಶ್ಯಕ. ಯಾವುದೊಂದು ಕಟ್ಟಡವನ್ನು ಕಟ್ಟಬೇಕಾದರೆ ಅದಕ್ಕೊಂದು ಅಡಿಗಲ್ಲು, ರಚನೆ ಮುಂತಾದುವು ಬೇಕು. ಇಂತಹ ರಚನೆಯಾಗಿ ಜರ್ಮನ್ ಜನಾಂಗವನ್ನು ಕಟ್ಟಲಿಕ್ಕೆ ಒದಗಿಬಂದುದು 'ಗೆಸ್ಟಪೊ' ದಳವು. 'ಗೆಸ್ಟಪೊ' ಎಂದರೇನೆಂಬುದನ್ನು ಬಹುಜನರು ತಿಳಿದಿರಲಾರರು. ಇವರು ಜರ್ಮನಿಯ ಗುಟ್ಟಿನ ಸುದ್ದಿಗಾರರು — ಗುಪ್ತ ಪೋಲೀಸರು. 'ಗೆಸ್ಟಪೊ ಶಬ್ದವು 'ಗೆಹಿಮೀಸ್ ಸ್ಟಾಟ್ಸ್ ಪೋಲಿಝೀ' ಶಬ್ದದೊಳಗಿನ ಮೊದಲಕ್ಷರ ಕೂಡಿಸಿ ಆದದ್ದು. ಎಂದರೆ ಇವರು 'ಜರ್ಮನ್ ಸರಕಾರದ ಗುಪ್ತ ಪೋಲೀಸರು' ಎಂಬರ್ಥ. 'ಗೆಸ್ಟಪೊ' ಎಂಬ ಹೆಸರು ನಮಗೆ ಅಂತಹ ಯಾವ ಅನುಮಾನ, ಅಂಜಿಕೆ ತರಲಿಕ್ಕಿಲ್ಲ; ಆದರೆ ಆ ಹೆಸರನ್ನು ಸುರಿದಾಕ್ಷಣ ಯುರೋಪ್‌ಖಂಡದಲ್ಲಿ ಪ್ರತಿಯೊಬ್ಬನಿಗೂ ನಡುಗುಹುಟ್ಟುತ್ತದೆ.

ಇಂದು ಹಿಟ್ಲರನು ಅಧಿಕಾರದ ಶಿಖರವನ್ನೇರಿದುದು ಅವನ ವ್ಯಕ್ತಿವಿಶೇಷಮಾತ್ರಕ್ಕಾಗಿ ಅಲ್ಲ. ಆದರೆ ಈ 'ಗೆಸ್ಟಪೊ' ದಳದವರು ಮಾಡಿದ, ಮಾಡುತ್ತಿರುವ ಕಾರ್ಯವು ಅವನ ಅಧಿಕಾರದಲ್ಲಿ ಪರಿಣಮಿಸಿದೆ. ಇವರಿಗಿದ್ದಷ್ಟು ಶಕ್ತಿ, ಅಧಿಕಾರ, ಜಗತ್ತಿನ ಇನ್ನಾವ ಪೋಲೀಸದಳಕ್ಕೂ ಇಲ್ಲವೆಂದು ಅನೇಕರ ತಿಳಿವಳಿಕೆ.

ಇತಿಹಾಸದಲ್ಲಿ ಸ್ಪೇನಿನ ಪೋಲೀಸ (Spanish Inquisitors) ವಿಷಯದಲ್ಲಿ ನಾವು ಭೀಕರಚಿತ್ರವನ್ನು ಕಾಣುತ್ತೇವೆ. ಅದು ಅಂದಿನ ಅನಾಗರಿಕ ಜೀವನದ ಕುರುಹು ಇರಬಹುದು. ಇಂದು ಸುಧಾರಿಸಿದ ಜಗತ್ತಿನಲ್ಲಿ 'ಗೆಸ್ಟಪೋ' ಜನರ ಹೆಸರು ಜನರಲ್ಲಿ ಭಯಂಕರ ಚಿತ್ರವನ್ನೂ, ಅಸಹ್ಯವೇದನೆಯನ್ನೂ, ಗಾಬರಿಯನ್ನೂ ಉಂಟುಮಾಡುವುದು. ಇವರಷ್ಟೇ ಬಲಶಾಲಿಗಳಾದ ಗುಪ್ತಚಾರರು ಜಗತ್ತಿನ ಬೇರೆಬೇರೆ ಭಾಗದಲ್ಲಿ ಇರದೇ ಇದ್ದರೂ, ರಶಿಯದ 'ಅಗ್‌ಪು'ಗಳೂ ಇಟಲಿಯ 'ಓವ್ಹರ್' ಜನರೂ ಅಸುರೀಕೃತ್ಯದಲ್ಲಿಯೂ ನೀಚತನದಲ್ಲಿಯೂ ಜರ್ಮನ್ 'ಗೆಸ್ಟಪೋ' ಜನರಿಗೆ ಸರಿನಿಲ್ಲುತ್ತಾರೆ. ಏನೇ ಎಂದರೂ 'ಗೆಸ್ಟಪೋ'ದಳದವರೇ ಹೆಚ್ಚು ಬಲಾಢ್ಯರು. ಪ್ರಜಾಸತ್ತೆಯ ಆಡಳಿತದಲ್ಲಿದ್ದ ಜನರು ಇವರ ಅಧಿಕಾರವೆಷ್ಟಿರುವುದೆಂಬುದನ್ನು ತಿಳಿಯಲಾರರು. ಇವರ ಹೆಸರು ಉಳಿದ ದೇಶಗಳಲ್ಲಿಯಂತೆ ಗುಪ್ತಚಾರರು ಎಂಬುದನ್ನು ಮಾತ್ರ ಸೂಚಿಸುತ್ತಿದ್ದರೂ, ಬ್ರಿಟಿಶ ಸ್ಕಾಟಲಂಡ್‌ಯಾರ್ಡ್‌ನವರ, ಫ್ರೆಂಚ ಮತ್ತು ಅಮೇರಿಕೆಯ ಗುಪ್ತಚಾರರ ಅಧಿಕಾರ-ಕಾರ್ಯವ್ಯಾಪ್ತಿಗಿಂತಲೂ 'ಗೆಸ್ಟಪೋ'ದವರದು ತುಂಬ ಹೆಚ್ಚಿದೆ. ಉಳಿದವರು ಕೇವಲ ಅಪರಾಧಗಳನ್ನೂ ಅತ್ಯಾಚಾರಗಳನ್ನೂ ಗುರುತಿಸಿ ಬಯಲಿಗೆಳೆಯುತ್ತಿದ್ದರೆ, 'ಗೆಸ್ಟಪೋ'ದಳದವರು ಅದಕ್ಕೂ ಮುಂದೆ

ಹೋಗಿ ತಮ್ಮ ಮತಕ್ಕೆ ವಿರುದ್ಧವಾಗಿದ್ದ ಜನರನ್ನು ಗುರುತಿಸಿ ಬಯಲಿಗೆಳೆದು, ಅವರ ಕೊಲೆಮಾಡಿ ಮತ್ತೊಮ್ಮೆ ತಲೆಯೆತ್ತದಂತೆ ಮಾಡುವರು. ಇದೇ ಇವರ ಕಾರ್ಯದ ಉದ್ದೇಶ. ಇವರಿಲ್ಲದೆ ಹೋಗಿದ್ದರೆ ಜರ್ಮನಿಯ ಯಾವ ಅಭಿಯೋಗವೂ ಸಾಧ್ಯವಾಗುತ್ತಿದ್ದಿಲ್ಲ.

'**ಗೆಸ್ಟಪೋ**'ದಳದವರು ಮನಸ್ಸುಮಾಡಿದರೆ ಬೇಕಾದ ವ್ಯಕ್ತಿಯನ್ನೂ ಕುಕ್ಕುವರು. Pastor Neimoller ಅಂತಹ ಅಸಾಧಾರಣವ್ಯಕ್ತಿಯನ್ನು ತಮ್ಮ ದವಡೆಯಲ್ಲಿ ಹಾಕಿ ನುಚ್ಚು ಮಾಡಿದರು. **ಪಾಸ್ಟರನ** ಹೆಸರು ಜರ್ಮನಿಯ ಎಲ್ಲ ಭಾಗಗಳಲ್ಲಿಯೂ ಆದರಕ್ಕೆ ಪಾತ್ರವಾಗಿತ್ತು. ಪಾಸ್ಟರನು ಮಹಾಯುದ್ಧದಲ್ಲಿ ಜೀವದ ಹಂಗುದೊರೆದು ಕಾದಿದ ಕಡುಗಲಿಯೊಬ್ಬ. ಜಗದ್ವಿಖ್ಯಾತ ಸೇನಾಪತಿಯಾದ **ವ್ಹಾನ್ ಹಿಂಡೆನ್‌ಬರ್ಗರ** ಪ್ರೇಮಾದರಕ್ಕೆ ಪಾತ್ರನಾದಂಥವನು. ಇಂತಹವನು ಮಾಡಿದ ತಪ್ಪೆಂದರೆ ಕೇವಲ ಭಿನ್ನಾಭಿಪ್ರಾಯದ ಅಪರಾಧ. ನಾಝೀ ರಾಜಕಾರಣದ ಬಗೆಗೆ ಅವನ ಸಮ್ಮತಿ ಇರಲಿಲ್ಲ; ಇದೇ ಅವನ ಅಪರಾಧ. ಪಾಸ್ಟರನು ಸೈನ್ಯಖಾತೆಯಿಂದ ನಿವೃತ್ತನಾದಮೇಲೆ ಶಾಂತರೀತಿಯಿಂದ ತನ್ನಷ್ಟಕ್ಕೆ ತಾನು ಇರಬೇಕೆಂದರೂ 'ಗೆಸ್ಟಪೋ'ದಳದವರು ಇರಗೊಡಲಿಲ್ಲ; ಜರ್ಮನಿಯ ಪುನರುಜ್ಜೀವನದ ಚಿತ್ರವನ್ನು ನೋಡಿ ಅವನೆಷ್ಟು ಸುಖಪಟ್ಟಿದ್ದನೊ! ಆದರೂ ಮತಭಿನ್ನತೆಯ ಅಪರಾಧದ ಮೇಲೆ ಅವನನ್ನು ಹಿಡಿತಂದು, ತಪ್ಪುಗಾರನೆಂದು ನ್ಯಾಯಾಧೀಶರ ಬಾಯಿಯಿಂದ ಹೇಳಿಸಿದ ಶ್ರೇಯಸ್ಸು '**ಗೆಸ್ಟಪೋ**'ದಳದವರಿಗೆ ಸಲ್ಲುವುದು. ನಾಝಿಗಳು ಅವನ ಜೀವಕ್ಕೆ ಅಪಾಯಮಾಡುವ ಸಾಹಸಕ್ಕೆ ಕೈಹಾಕಿಲ್ಲ; ಆದರೆ ಆ ನಿರುಪದ್ರವಿ, ನಿರಪರಾಧಿ, ಶಾಂತಮನಸ್ಸಿನ ಪಾಸ್ಟರನನ್ನು ಇಂದು ಸೆರೆಮನೆಯಲ್ಲಿ ಕೊಳೆಹಾಕಿದ್ದಾರೆ.

ಇಷ್ಟಕ್ಕೇ ಕತೆ ಮುಗಿಯಲಿಲ್ಲ; ಅವನ ಅನಂತರ ಇವರ ಬಲೆಗೆ ಸಿಕ್ಕವನು **ಜನರಲ್ ವ್ಹಾನ್ ಫ್ರಿಶ್**‌ನು. ಇವನು ಮಹಾಯುದ್ಧದಲ್ಲಿ **ವ್ಹಾನ್ ಹಿಂಡನ್‌ಬರ್ಗನ** ಬದಿಯಲ್ಲಿ ನಿಂತು ಯುದ್ಧ ಮಾಡಿದವನು. ಅಂಥವನನ್ನು "**ಗೆಸ್ಟಪೋ**" ದಳದ ಮುಖ್ಯಸ್ಥನಾದ **ಹರ್ ಹಿಂಬ್ಲರನೇ** ಬಂಧಿಸಿದನು. ಬಂಧನದ ಕಾರಣವನ್ನಿನ್ನೂ ಹೊರಗೆಡಹಿಲ್ಲ. ಫ್ರಿಶ್‌ನಿಗೆ ನಾಝೀರೀತಿಯು ಸಮ್ಮತವಿಲ್ಲವೆಂಬುದೊಂದೇ ಕಾರಣವಿರಬಹುದೆಂದು ಸುದ್ದಿಯಿದೆ. "**ಗೆಸ್ಟಪೋ**" ಜನರು ಅವನ ಸುತ್ತಲೂ ಕಾವಲು ಇಟ್ಟು, ಒಮ್ಮೆಲೇ ಅವನನ್ನು ಬಂಧಿಸಿ ಸೆರೆಮನೆಗೆ ಸೇರಿಸಿದರು. ಅವನನ್ನು ಕೆಲವು ದಿನಗಳಾದ ಮೇಲೆ ಸೆರೆಮನೆಯಿಂದ ಬಿಟ್ಟುಬಿಟ್ಟಿದ್ದರೂ ಅವನಿಗೆ ಆ ಮೊದಲಿನ ಸ್ಥಾನ-ಮಾನ ಸಿಕ್ಕಲಿಲ್ಲ. ಮತ್ತು ಪೋಲಂಡದ ರಣರಂಗದಲ್ಲಿ ಅವನು ಮಡಿದನೆಂಬ ಸುದ್ದಿಯನ್ನೂ ಕೇಳಿದ್ದೇವೆ. ಎಂತಹ ಸೇನಾಪತಿಗೆ ಏನು ದುಃಸ್ಥಿತಿ ಬಂದಿತಲ್ಲ! ೧೯೧೪ ನೆಯ ಯುದ್ಧದ ರಣಾಂಗಣದ ಭಾರದ ಬಹುಭಾಗವು ಇವನ ಮೇಲೆ ಇದ್ದಿತಾದರೂ, ಈಗೀಗ ಇವನನ್ನು ಒಬ್ಬ ಸಾಮಾನ್ಯ ಸೈನಿಕನಿಗಿಂತ ಕೀಳಾಗಿ ಕಾಣಲಾಗುತ್ತಿದ್ದಿತು. ಇದಕ್ಕೆ ಕಾರಣವೆಂದರೆ ಗೆಸ್ಟಪೋದಳದವರು ಅವನನ್ನು ಬಂಧಿಸಿ ಅವಮಾನ ಮಾಡಿದ್ದುದು. ಎಂತೆಂತಹ ಮಹಾಜನರು ಇವರಿಗೆ ಬಲಿಯಾಗಿದ್ದಾರೇನೊ!

ಗೆಸ್ಟಪೋದಳದವರ ಮುಖ್ಯ ಕಾರ್ಯವೆಂದರೆ ಯುರೋಪ ಖಂಡದ ಬೇರೆಬೇರೆಯ ಭಾಗಗಳಲ್ಲಿ ಸಂಚರಿಸಿ, ಜರ್ಮನಿಯ ರಾಜಕೀಯ ತತ್ತ್ವಗಳನ್ನು ಅವರಲ್ಲಿ ಬಿಂಬಿಸಿ, ಆ ಭಾಗಕ್ಕೆ ಹಿಟ್ಲರನು ಕೈಹಾಕಲಿಕ್ಕೆ ಅನುಕೂಲವಾಗುವಂತೆ ಮಾಡುವುದು. ಇದೇ ಅವರ ಕಾರ್ಯ. ಜರ್ಮನಿಯ ಅಧಿಕಾರವನ್ನು ಬೆಳೆಯಿಸಲು ಇವರು ಪೂರ್ವಕ್ಷೇತ್ರವನ್ನು ತಯಾರಿಸುವರು; ಆಮೇಲೆ ಹಿಟ್ಲರನು ಬಂದು ಆ ಪ್ರದೇಶವು ತಮ್ಮದೆಂದು ಸಾರಿ, ಅಲ್ಲವೆನ್ನುವವರನ್ನೂ ಒಲ್ಲೆನ್ನುವವರನ್ನೂ ಹೊರದೂಡಿ ನಾಝೀರಾಜ್ಯದ ಬೀಜಬಿತ್ತುವನು. ಆಸ್ಟ್ರಿಯಾದಲ್ಲಿಯೂ ಝೆಕೋಸ್ಲೋವಾಕಿಯಾದಲ್ಲಿಯೂ ಗೆಸ್ಟಪೋದಳದವರು ಮಾಡಿದ ಅತ್ಯಾಚಾರಗಳು ಜನರ ಎದೆ ಬಿರಿಯುವಂತಹವಾಗಿವೆ. ಇಂದು **ಝೆಕೋಸ್ಲೋವಾಕಿಯಾವು ರೀಷದ** ಅಧಿಸತ್ಯದ ಸೋಗಿನಲ್ಲಿದ್ದರೂ ಅದನ್ನಾಳುವವರು ಕಾರ್ಯತಃ ಗೆಸ್ಟಪೋದಳದವರೇ! ಆಸ್ಟ್ರಿಯಾದ ಚಾನ್ಸಲರನಾದ **ಡಾ. ಡಾಲ್ಫಸ್** ಇವನ ಕೊಲೆಯಲ್ಲಿ, ಗೆಸ್ಟಪೋದಳದವರು ಕೈಹಾಕದಷ್ಟು ನಿರಪರಾಧಿಗಳಾಗಿ ಇಲ್ಲವೆಂದು ಇಂದಿಗೂ ಅಲ್ಲಿಯ ಜನರು ನಂಬುತ್ತಾರೆ. **ಡಾಲ್ಫಸ್**‌ನು ಜೀವಿಸಿದ್ದರೆ ಆಸ್ಟ್ರಿಯಾದ ಅಭಿಯೋಗವು ಸಾಧ್ಯವಾಗುತ್ತಿತ್ತೊ? ಇಲ್ಲ, ಎಂದಿಗೂ ಇಲ್ಲ! ಅದಕ್ಕೆಂದೇ ಇವರು **ಡಾಲ್ಫಸ್**‌ನನ್ನು ಮೊದಲೇ ತೀರಿಸಿರಬೇಕು.

ಗೆಸ್ಟಪೋದಳದವರ ಹೆದರಿಕೆ ರೀಷಕ್ಕೆ ಹೊಂದಿಸಿಕೊಂಡಂತಹ ಬೇರೆಯ ರಾಷ್ಟ್ರಗಳಲ್ಲಿಯಷ್ಟೇ ಅಲ್ಲ, ಸ್ವತಃ ಜರ್ಮನಿಯಲ್ಲಿ ಕೂಡ ಜನತೆಯನ್ನು ನಡುಗಿಸುತ್ತಿದೆ. ಗೆಸ್ಟಪೋದಳದವರು ಯಾವ ಕಾಲಕ್ಕೆ ಎಲ್ಲಿ ಮತ್ತು ಹೇಗೆ ಸುದ್ದಿಯನ್ನು ತೆಗೆದುಕೊಳ್ಳುವರೆಂಬುದು ತಿಳಿಯುವುದಿಲ್ಲ. ಅದಕ್ಕಾಗಿ ಮನೆಯ ಹಿರಿಯರು ತಮ್ಮ ಮಕ್ಕಳೆದುರಿಗೆ ಏನಾದರೊಂದು ರಾಜಕೀಯ ಅಭಿಪ್ರಾಯವನ್ನು ಮಾತಾಡುವಂತಿಲ್ಲ. ಅಪ್ಪಿತಪ್ಪಿ ಎಂದಾದರೂ ಮಗುವು ಬಹಿರಂಗವಾಗಿ ಆ ಅಭಿಪ್ರಾಯವನ್ನು ಉಸುರಿದರೆ ಮರುದಿನವೇ ಬಂದಿತು—ಗೆಸ್ಟಪೋದಳದವರ ಚಕ್ರ ಅವರ ಮನೆಗೆ. ಆಮೇಲೆ ಸೆರೆಮನೆ ಸೇರಬೇಕೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಗೆಸ್ಟಪೋದಳದವರ ಅಧಿಕಾರ ಮಿತಿಮೀರಿದೆ. ಅವರನ್ನು ಯಾರೂ ತಡೆಯುವಂತಿಲ್ಲ. ಅವರು ದೇಶದಲ್ಲಿಯ ಯಾವನೊಬ್ಬನನ್ನೂ ಬೇಕಾದ ವೇಳೆಗೆ ತಡೆಯಬಹುದು, ಬಂಧಿಸಬಹುದು, ಸೆರೆಮನೆ ಸೇರಿಸಬಹುದು. ಕೇವಲ ಸ್ವಂತದುವಾಗಿಯೆ ಆಗುತ್ತಿರುವ ದೂರನುಡಿ (Telephone) ಮಾತನ್ನು ಮಧ್ಯದಲ್ಲಿಯೇ ಇವರು ತಡೆಹಿಡಿಯಬಹುದು. ಖಾಸಗೀ ಪತ್ರವ್ಯವಹಾರವನ್ನೂ ನೋಡಬಹುದು. ಜರ್ಮನಿಯಲ್ಲಿ ಇಂತಹದೊಂದು ಖಾಸಗಿಯಾಗಿಯೇ ಉಳಿಯಬಹುದೆಂಬುದನ್ನು ಇಂದು ನಿಶ್ಚಿತವಾಗಿ ಹೇಳಲು ಬರುವಂತಿಲ್ಲ.

ಈ ಎಲ್ಲ ಗುಪ್ತ ವ್ಯವಹಾರವು ನಡೆಯುವುದು ಗೆಸ್ಟಪೋದಳದವರಿಂದ. ಇವರು ಜರ್ಮನಿಯಲ್ಲಿಯೂ ಯುರೋಪಿನ ಬೇರೆಬೇರೆ

...ಶಗಳಲ್ಲಿಯೂ ಹಂಚಿ ಹುದುಗಿಕೊಂಡಿದ್ದಾರೆ. ಇವರು ...ಗಿಂದೊಳಗೇ—ಕಣ್ಣಿಗೆ ಕಾಣದಂತೆ—ಜರ್ಮನಿಯ ರಾಜಕೀಯ ...ತ್ರ್ಯಗಳನ್ನು ಹರಡಿ, ಆ ದೇಶದ ಬಲವನ್ನು ತಮ್ಮ ಕಡೆಗೆ ...ಪಗಿಸಿಕೊಳ್ಳುತ್ತಾರೆ. ಯಾವುದಾದರೊಂದು ಹೊಸ ದೇಶ ...ನ್ನು ಹೊಕ್ಕರೆ ಅಲ್ಲಿಯ ಪಕ್ಷ-ಸಂಗಡಗಳ ಬಿಗುಹನ್ನು ನೋಡಿ, ...ಗೆ ಹೆಚ್ಚು ಅಪಾಯಕಾರಕವಾಗುವಂತಹ ಸಂಗಡವನ್ನು ...ರಿಸಿ ನೂರೆಮಾಡುವರು. ಇವರ ಸಾಧನೆಗಳು ಭಯಂಕರವೂ ...ರುಣೆಯುಳ್ಳವೂ ಆದುದರಿಂದ, ಜನರು 'ಗೆಸ್ಟಪೋ' ಎಂಬ ...ಸರನ್ನು ಕೂಡ ಎತ್ತುವುದಕ್ಕೆ ಹೆದರುತ್ತಾರೆ. ಗೆಸ್ಟಪೋದಳದವರು ...ನಿದ್ದೇ ಸತ್ಯ, ಮಾಡಿದ್ದೇ ಮತ, ಆಡಿದ್ದೇ ಅಧಿಕಾರ. ಗೆಸ್ಟಪೋ ...ವರು ಕೋರ್ಟು-ಕಚೇರಿಗಳಲ್ಲಿ ಹೇಳುವುದೇ ಸತ್ಯಸಾಕ್ಷಿ. ...ಸ್ಟರ್ ನಿಮೋಲರನನ್ನು ಅಪರಾಧಿಯೆಂದು ನಿರ್ಣಯಿಸಿದುದು ...ಪೋದವರ ಸಾಕ್ಷಿಯು. ಜನರಲ್ ಫ್ರಿಶ್‌ನು ದೇಶಕ್ಕೆ ಅಹಿತ ...ಡುವವನೆಂದು ಮುದ್ರೆ ಒತ್ತಿದವರು ಗೆಸ್ಟಪೋದವರೇ. ...ನ್ನೆ ಮೊನ್ನೆ ಕೇಳಿಬಂದ ಡಾ. ಗೋಬೆಲ್ಸ್ ಅವರ ಅವಮಾನಕ್ಕೆ ...ರಣರೂ ಗೆಸ್ಟಪೋ ದಳದವರೇ ಎಂದು ತಿಳಿದರೆ ಆಶ್ಚರ್ಯವಾಗ ...ಹುದು. ಗೆಸ್ಟಪೋದವರ ಈ ಅಪರಿಮಿತ ಅಧಿಕಾರಕ್ಕಾಗಿ,ಬೀದಿಯ ...ಕಾರಿಯಷ್ಟೇ ಸೈನ್ಯದ ಅಧಿಕಾರಿಯೂ ಗದಗದ ನಡುಗುತ್ತಾನೆ.

ಇಂತಹ ಭಯಾನಕವಾದ ಸಂಸ್ಥೆಯ ಆಡಳಿತವನ್ನು ನಡೆಯಿಸಿ ...ಂಡು ಹೋಗುವವರು ಎಂಥವರಿರಬಹುದೆಂಬ ವಿಚಾರ ಬಾರದೆ ...ೋಗದು. ಇದರ ಮುಖ್ಯಾಧಿಕಾರಿಯು ಉಗ್ರಮುಖದ— ...ಣತನದ ಕಳೆಯುಳ್ಳವನಾದ ಹೀನ್ರಿಕ್ ಹಿಮ್ಲರನೇ ಎಂಬುದು ...ರ್ಮನಿಯಲ್ಲಿಯೂ ಯುರೋಪಿನಲ್ಲಿಯೂ ಪ್ರಸಿದ್ಧವಾಗಿದೆ. ...ಟ್ಲರನನ್ನು ಬಿಟ್ಟರೆ ಇವನಿಗಿದ್ದಷ್ಟು ಅಧಿಕಾರ ಬೇರೊಬ್ಬನಿಗಿಲ್ಲ. ...ಶಿಯನ್ ಪೋಲಿಸಿನವರ ಮುಖ್ಯಾಧಿಕಾರಿಯ ಸ್ಥಳಕ್ಕೆ ಹಿಮ್ಲರ ...ೋರಿಂಗರಲ್ಲಿ ತಿಕ್ಕಾಟವಾಗಿ, ಕೊನೆಗೆ ಹಿಮ್ಲರನೇ ಜಯಶಾಲಿ ...ದ. ಹಿಮ್ಲರನು ತನ್ನ ಕುಶಾಗ್ರಬುದ್ಧಿಯಿಂದ ತನ್ನ ಕೆಲಸ ...ನ್ನು ಚೆನ್ನಾಗಿ ಮಾಡುವುದಲ್ಲದೆ, ಬೇರೊಬ್ಬರ ಕೆಲಸದಲ್ಲಿಯೂ ...ನ್ನ ಹದ್ದಿನ ಕಣ್ಣುಗಳನ್ನು ಹಾಕಿ, ಅಲ್ಲಿಯ ಕುಂದು-ಕೊರತೆ ...ಳನ್ನು ಎತ್ತುವನು. ಅದಕ್ಕೇ ಇವನು ಹಿಟ್ಲರನ ಪ್ರೀತಿಗೆ ...ತ್ರನಾಗಿದ್ದಾನೆ. ಇವನೆಂದರೆ ಹಿಟ್ಲರನಿಗೆ ತುಂಬ ಆದರ. ...ಊವತ್ತು ಸಾವಿರ ಗೆಸ್ಟಪೋದಳದವರನ್ನು ನಿಯಂತ್ರಣ ಮಾಡುವ ...ಸಾಧಾರಣ ಶಕ್ತಿಯು ಹಿಮ್ಲರನಲ್ಲಿದೆ. ಜರ್ಮನಿಯನ್ನಾಳುವ ...ವರೇ ಗೆಸ್ಟಪೋದಳದವರೆಂದಮೇಲೆ, ಹಿಮ್ಲರನ ಶಕ್ತಿಯ ಬಗೆಗೂ ...ಟ್ಲರನ ಶಕ್ತಿಯ ಬಗೆಗೂ ಜನರಿಗೆ ಕಲ್ಪನೆಯುಂಟಾಗಬಹುದು.

ಜರ್ಮನಿಯ ಸೈನ್ಯವು ಪೋಲಂಡವನ್ನಾಕ್ರಮಿಸಿಕೊಂಡಾಗಲೂ ...ೋಲಂಡವನ್ನು ಜಯಿಸಿದೆವೆಂದು ಹಿಟ್ಲರನು ಉಸುರಿದ ...ಮೇಲೆಯೂ ಹಿಮ್ಲರನ ಕಾರ್ಯವು ಪ್ರಾರಂಭವಾಯಿತು. ಇನ್ನು ...ವನು ಗೆಸ್ಟಪೋದಳದ ಸಾಹಾಯ್ಯದಿಂದ ಪೋಲಂಡದ ಜನರ ...ತಾಂತರವನ್ನು ಮಾಡಲು ಪ್ರಯತ್ನಿಸುವ; ಅಂದರೆ ನಾಝೀ ...ಜ್ಯದ ವಿರುದ್ಧ ಯಾರೂ ತಲೆಯೆತ್ತದಂತೆ ನೋಡಿಕೊಳ್ಳುವ. ಈ ಕಾರ್ಯವನ್ನು ಸಾಧಿಸುವಲ್ಲಿ ಸಾಧನವು ಇಂತಹದೇ ಇರಬೇಕೆಂಬ ನಿರ್ಬಂಧವಿಲ್ಲ; ಮುದುಕರು-ಮಕ್ಕಳೆಂಬ ಭೇದವಿಲ್ಲ. ಈ ರೀತಿಯಿಂದ ಕಾರ್ಯಸಾಧಿಸುವುದು ಆತನ ಕರ್ತವ್ಯವಾಗಿದೆ.

ಸುಧಾರಿಸಿದ ಇಂದಿನ ಜಗತ್ತು ಈ ರೀತಿಯ ಅತ್ಯಾಚಾರವನ್ನು ತಡೆದುಕೊಳ್ಳುತ್ತಿದೆಯಲ್ಲ! ಮಾಡುವುದೇನು! 'ಗೆಸ್ಟಪೋ' ಎಂದರೆ 'ಭಯಂಕರ' ಶಬ್ದಕ್ಕೆ ಮತ್ತೊಂದು ಶಬ್ದವೆಂದು ಹೇಳಬಹುದು. ಜರ್ಮನಿಯ ಬಹುಭಾಗದ ಜನತೆಯು ಈ ರೀತಿಯವರ ವೃತ್ತಿಯನ್ನು ಸಹಿಸುವದಿಲ್ಲ ಆದರೂ ಇವರ ಬಗೆಗೆ ಏನಾದರೊಂದು ಮಾತನ್ನೆತ್ತುವ ಸಾಹಸವನ್ನು ಯಾರೂ ಮಾಡುವುದಿಲ್ಲ. ಗೆಸ್ಟಪೋದಳದವರ ವಿವಿಧಾನುಭವಗಳೇ ನಾಝೀತತ್ತ್ವಜ್ಞಾನದ ಮೂಲತತ್ತ್ವಗಳು. ಅದನ್ನು ಸಾಧಿಸುವ ಬಗೆ ಮುಂಗೈ ಜೋರಿನಿಂದ. ಒತ್ತಾಯದಿಂದ ಮಾಡಿದ ಕೆಲಸವು ಬಹುಕಾಲ ಬಾಳುವುದೆಂತು! ಈ ಒತ್ತಾಯದ ಬಿಗುಹನ್ನು ಸಹಿಸಿ ಸಹಿಸಿ, ಸಹಿಸಲಾರದೆ ಭುಗಿಲೆಂದು ಬಿರಿಯುವ ಕಾಲಬಂದೀತು; ಬರುವುದು.

ಇಂದು ಜರ್ಮನಿಯು ಆ ತರದ ಅಸಮಾಧಾನದ ನೆಲೆವೀಡಾಗ ಹತ್ತಿದೆ. ಜನಸಾಮಾನ್ಯರು ಹೊಟ್ಟೆಯಪಾಡಿಗಾಗಿ ತಮ್ಮ ಮನಸ್ಸಿನ ವಿರುದ್ಧ ಕಾರ್ಯವನ್ನು ಅಸಹ್ಯವಾಗಿದ್ದರೂ ಮಾಡುತ್ತಿದ್ದಾರೆ.. ಕೇವಲ ಹೊಟ್ಟೆಗಾಗಿ. ಈ ಹೊಟ್ಟೆಯ ಸಮಸ್ಯೆಯು ಇಂದಿಗಿಂತಲೂ ಮುಂದೆ ಬಿಕ್ಕಟ್ಟಾಗುವ ಯೋಗ ಅಲ್ಲಿ ಬರಲಿದೆ. ಜರ್ಮನಿಯ ಧನಸಂಚಯವೆಲ್ಲವೂ ಹೆಚ್ಚಾಗಿ ಸಂಗ್ರಾಮದ ಶಸ್ತ್ರಾಸ್ತ್ರಗಳಿಗೆ ಉಪಯೋಗಿಸಲ್ಪಟ್ಟರೆ — ಭಿನ್ನಾಭಿಪ್ರಾಯದವರನ್ನು ಹತ್ತಿಕ್ಕಲು ಉಪಯೋಗಿಸಲ್ಪಟ್ಟರೆ — ಹೊಟ್ಟೆಯ ಸಮಸ್ಯೆ ಬಗೆಹರಿದಂತಾಗುವುದೇ? ರೊಟ್ಟಿಗಾಗಿ ರಟ್ಟೆಮುರಿವರೂ ಹೊಟ್ಟೆ ತುಂಬದ ದಿನವೇ ಜರ್ಮನಿಯಲ್ಲಿ ಕ್ರಾಂತಿಯ ದಿನ. ಹೊಟ್ಟೆಯ ಕಿಚ್ಚು ಕಾಡುಗಿಚ್ಚು. ಅದರ ವೇದನೆ ಅಸಹನೀಯ. ಯಾವುದೊಂದು ಸರಕಾರವು ಬಹುದಿನ ಬಾಳಬೇಕಿದ್ದರೆ ಅಲ್ಲಿಯ ಜನತೆಯ ಹೊಟ್ಟೆಬಟ್ಟೆಯ ಬಗೆಗೆ ಮೊದಲು ವಿಚಾರಮಾಡಬೇಕು. ಈ ಯುದ್ಧಮಾಡುವ ಪ್ರವೃತ್ತಿಯು ಆ ದೃಷ್ಟಿಯಿಂದ ದೂರಹೋಗಿ, ಸಿಕ್ಕಷ್ಟು ದ್ರವ್ಯವನ್ನು ಶಸ್ತ್ರಾಸ್ತ್ರಗಳನ್ನು ಅಣಿಗೊಳಿಸುವುದಕ್ಕೆ ಉಪಯೋಗಿಸುವುದು. ಮೊದಲೇ ಒತ್ತಾಯದಿಂದ ನಡಿಸುವ ಸರಕಾರ, ಹೊಟ್ಟೆಗೂ ಕೊಡದೆ ಇದ್ದರೆ ಅದಕ್ಕಾಗುವ ಗತಿ ಒಂದೇ ಒಂದು!

ಶ್ರೀನಿವಾಸ ಮತ್ತು ಕಂಪನಿ

ಮಾಳಮಡ್ಡಿ-ಧಾರವಾಡ

ಪಡಿಯಚ್ಚು (ಬ್ಲಾಕು) ಗಳಿಗೆ ಬೇಕಾಗುವ ಡಿಝೈನುಗಳನ್ನೂ ನಾವು ಅಣಿಗೊಳಿಸುವೆವು. ಪಡಿಯಚ್ಚುಗಳ ವಿಷಯವನ್ನಂತೂ ಕನ್ನಡ ನಾಡೆಲ್ಲ ಬಲ್ಲದು.

ಅಂದವಾದ ಕೆಲಸ! ಸಮಯಕ್ಕೆ ಸರಿಯಾದ ಕೆಲಸ!!

(೪೧೨ ನೆಯ ಪುಟದಿಂದ ಮುಂದುವರಿದುದು.)

(ಬ್ಯಾ. ಸಾವರಕರರು ರಣಘೋಷದಿಂದ ಬರುವರು.)

ಲಾ.ಲಿ. :– ಕೂತುಕೊಳ್ಳಬೇಕು,

ಬ್ಯಾ.ಸಾ :– ಅದೆಂದಿಗೂ ಶಕ್ಯವಿಲ್ಲ. ಆ ಕುರ್ಚಿಯಲ್ಲಿ ಜಿನ್ನಾ ಕೂತಿದ್ದನಲ್ಲವೆ? ಆವನನ್ನು ಹಿಂದುಸ್ಥಾನದ ಹೊರಗೆ ಓಡಿಸದ ಹೊರತು–– (ಒಮ್ಮೆಲೆ ಹಲ್ಲು ತಿನ್ನುತ್ತ) ಹಿಂದೊಮ್ಮೆ ನನಗೆ ಬಂದಿತ್ತು ಆ ಪ್ರಸಂಗ !

(ತೆರೆಯು ಕಣ್ಣೀರಿನಿಂದ ತೊಯ್ದು ತೊಪ್ಪಟೆಯಾಗುವುದು.)

* * *

(ಬಾಬು ಸುಭಾಷ್‌ಬೋಸರಿಗೆ ಜಯ)

ಸುಭಾಸ :– ಮಿಸ್ಟರ್ ವ್ಹಾ ಯ ಸ ರಾ ಯ ರೆ, ಬಂಗಾಲದ ಡೆಟೆನ್ಯೂ ಕೈದಿಗಳನ್ನು ಮುಕ್ತ ಮಾಡಿದ ಹೊರತು ನಾನು ನಿಮ್ಮೊಡನೆ ಮಾತನಾಡಬಯಸುವುದಿಲ್ಲ; ಇಷ್ಟೇ ಹೇಳಲು ಬಂದಿರುವೆ. ಹೆಚ್ಚಿನ ಮಾಹಿತಿಗಾಗಿ ಕಾಂಗ್ರೆಸ್ ಹಸ್ತಪತ್ರಿಕೆಯನ್ನು ನೋಡಿರಿ. ನಮಗೆ ಸ್ವಾತಂತ್ರ್ಯ ಕೊಡುವಿರೊ ಇಲ್ಲವೊ? ಆರು ತಿಂಗಳೊಳಗೆ ಉತ್ತರ ಕೊಡಲಿಲ್ಲ ಎಂದರೆ ಈ ನೋಟೀಸಿನ ಖರ್ಚು ನಿಮ್ಮ ತಲೆಯಮೇಲೆ ಅಂತಾ ತಿಳಿಯಬೇಕು!

(ತೆರೆ ಆನಂದಪರವಶವಾಗಿ ಉಬ್ಬುವುದು)

* * *

[ಮರೆಯಿಂದ ಮಂಗರಾಯನು ಮೆಲ್ಲಗೆ ಹಲ್ಲು ಕಿರಿಯುತ್ತ ಬರುವನು.]

ಲಾ.ಲಿ :– (ಚಕಿತನಾಗಿ) ಯಾರು ನೀವು ?

ಮಂಗ :– ಮಿಸ್ಟರ ಮಂಕೀ, ಲಾಡ ಸಾಹೇಬರೆ.

ಲಾ.ಲಿ :– ಯಾವ ಪಕ್ಷದ ವತಿಯಿಂದ ನಿಮ್ಮನ್ನು ಕಳಿಸಿದೆ ?

ಮಂಗ :– ಪಕ್ಷ ಇಲ್ಲದವರ ಪಕ್ಷದ ವತಿಯಿಂದ!

ಲಾ.ಲಿ :– ಯುದ್ಧದ ಸಲುವಾಗಿ ನಿಮ್ಮ ಅಭಿಪ್ರಾಯವೇನು ?

ಮಂಗ :–ಮೇಲಿಂದ ಮೇಲೆ ಯುದ್ಧ ಆಗತಾನೇ ಇರಬೇಕು, ದೊರೆಗಳೆ!

ಲಾ.ಲಿ :– ನೀವು ಸಹಾಯಮಾಡುವಿರಲ್ಲವೆ ?

ಮಂಗ :– ‘ ಇಲ್ಲ ’ ಅಂದರೆ ನೀವು ಜೇಲಿಗೆ ಕಳುಹಿಸ್ತೀರಿ, ಅಹುದು ಅಂದರೆ ಜನರು ಜೇಲಿಗೆ ಕಳುಹಿಸಬಹುದು!

ಲಾ.ಲಿ :– ಅಂದರೆ––ನೀವು ಮಾಡೋದಾದರೂ ಏನು ?

ಮಂಗ :– ಒಂದು Formula ಮಾಡುತೀನಿ, ಸಾಹೇಬರೆ! ನೀವು ಯುದ್ಧ ಆಡಿರಿ; ನಿಮ್ಮ ಸಲುವಾಗಿ ಅಲ್ಲಿಯ ತನಕ ಬರತೀನಿ. ನಮ್ಮವರ ಸಲುವಾಗಿ ದೂರದಿಂದಲೇ ನೋಡತಾ ನಿಲ್ಲತೀನಿ. ಒಲ್ಲೆ ಅಂದ ಹಾಗೆ ಆಗಲಿಲ್ಲ, ಭಾಗ ವಹಿಸಿದ ಹಾಗೂ ಆಗಲಿಲ್ಲ, ಹಹ !

ಲಾ.ಲಿ :– ಯಾವ ಕರಾರಿನ ಮೇಲೆ ?

ಮಂಗ :– ಸುಮ್ಮ ಕೂಡಲಿಕ್ಕೆ ಕರಾರ ಏನ್ಮಾಡ್ತೀರಿ ಬಿಡಿರಿ, ಸಾಹೇಬರೆ!

ಲಾ.ಲಿ :– ಮಿಸ್ಟರ್ ಮಂಕಿಯವರೆ, ನಿಮಗೆ ಧನ್ಯವಾದಗಳು; ನಿಮ್ಮ ಪಕ್ಷಕ್ಕೆ ಸ್ವರಾಜ್ಯವನ್ನು ಕೊಡುವೆ!

ಮಂಗ :– ಹಾಂಹಾಂ ಅದೇ ನೋಡಿರಿ. ನೀವು ನನ್ನ ಕಡೆ ನೋಡಬೇಡಿರಿ. ನಾ ನಿಮ್ಮ ಕಡೆ ನೋಡೋದಿಲ್ಲ.

(ತೆರೆಯು ಸುರುಳಿಯಾಗಿ ಸಾಷ್ಟಾಂಗವೆರಗುವುದು.)

ನೀವು ಯಾವಾಗ ಅನ್ನುವಿರಿ?

ಅದು ತಿರುಗಿ ಬರುವದಿಲ್ಲವೆಂದು ಖಾತ್ರಿ ಆದಾಗ ಅಲ್ಲವೆ?
ಆದರೆ ನಿಮಗೆ ಎಂದಾದರೂ ಹೀಗೆ ಖಾತ್ರಿ ಅನಿಸಿರುವದೋ ಹೇಗೆ?

ದಮ್ಮಿನ ಬಾಧೆಯು ಬಹು ತ್ರಾಸದಾಯಕ ಇದ್ದುದರಿಂದ ಅದನ್ನು ನಿವಾರಿಸಿಕೊಳ್ಳುವ ಸಹಜ ಮಾರ್ಗವನ್ನು ಬಿಟ್ಟು ದಮ್ಮು ಹತ್ತಿದವನು ಆರಾಮದ ಆಶೆಯಿಂದ ಹಿಕ್ಕ ಹಿಕ್ಕ ಉಪಾಯಗಳಿಗೆ ಮೊರೆ ಹೋಗುತ್ತಾನೆ. ಐದು ಹತ್ತು ಮಿನಿಟುಗಳಲ್ಲಿ ದಮ್ಮನ್ನು ನೆಟ್ಟಗೆ ಮಾಡುವ ಪ್ರತಿಜ್ಞೆಯ ಪೇಟೆಯಲ್ಲಿಯ ಪೇಟಂಟ ಔಷಧಗಳು ಅವನನ್ನು ಸಹಜವಾಗಿ ಮೋಹಗೊಳಿಸುವವು. ಔಷಧ ಪುಡಿ, ಎಫಿಡ್ರಿನ್‌ದ ಗುಳಿಗೆಗಳಂಥ ಕ್ಷಣಿಕ ಗುಣಕಾರಿ ಮತ್ತು ತಾತ್ಪೂರ್ತಿಕ ಉಪಾಯದ ನಾದದಿಂದ ನೀವು ಅದರ ಗುಲಾಮರಾಗಿ ಕಾಯಂ ದಮ್ಮಿನವರಾಗಿ ಉಳಿದದ್ದು ಬಹಳ ಕಡ ನಾಡಿ ಲಕ್ಷಕ್ಕೆ ಬರುತ್ತದೆ.

ದಮ್ಮು ಹತ್ತಿದವನ ಪ್ರಕೃತಿಯು ಒಳಗಿಂದೊಳಗೆ ಕೆಟ್ಟಿರುತ್ತದೆ. ದಮ್ಮು ಕೇವಲ ಬಾಹ್ಯ ಲಕ್ಷಣ. ಅದ್ದರಿಂದ ಹಾಹಾ ಅನ್ನುವುದರಲ್ಲಿ ಗುಣವಾದಿ ಕೊಳ್ಳುವ ಅತಿ ಹಿಡಿಯುವದು ಹುಚ್ಚುತನವೇ ಸರಿ. ಉಪಶಾಂತಿಸುವದನ್ನು ನಿಯಮಿತ ಮತ್ತು ದಸ್ತ್ಯಸ್ತ್ಯ ಮಾಡುವ ಔಷಧಗಳೇ ದಮ್ಮನ್ನು ಗುಣಪಡಿಸ ಬಲ್ಲವು. ಆದರೆ ಈ ಔಷಧಿಗಳು ಗುಣಕಾರಿಯಾಗಬೇಕಾದರೆ ಅವುಗಳೊಂದಿಗೆ ನಿಯಮಿತ ಶೌಚ ಶುದ್ಧಿಯಾಗಿ ಪಚನಶಕ್ತಿಯ ಸುಧಾರಿಸುವ ಮತ್ತು ಶಕ್ತಿಯನ್ನು ಹೆಚ್ಚಿಸುವ ಯೋಜನೆಯು ಆಗಲಿಕ್ಕೆ ಬೇಕು.

ಪುರೋಹಿತ ಶ್ವಾಸಹಾರಿ (ಕೆಂಪೌಂಡ) ದಲ್ಲಿ ಈ ತರದ ತಪ್ಪಾಗದಂಥ ಮತ್ತೂ ಸಮತೋಲ ಮಿಶ್ರಣವು ಸಾಧ್ಯವಾಗಿದ್ದರಿಂದ, ದಮ್ಮಿನ ಮೂಲಕಾರಣವನ್ನು ಹುಡುಕಿ ಅದರ ಮೇಲೆ ತನ್ನ ಪ್ರಭಾವವನ್ನು ಬೀರಿ, ದಮ್ಮನ್ನು ಮೆಲ್ಲ ಮೆಲ್ಲನೆ ಆದರೆ ಖಂಡಿತವಾಗಿ ನೆಟ್ಟಗೆ ಮಾಡುವ ಶಾಸ್ತ್ರೀಯ ಔಷಧದಲ್ಲಿ ಅದು ಅನೇಕ ವರ್ಷಗಳಿಂದ ಅಗ್ರೇಸರತ್ವ ಪಡೆದಿದೆ. ದಮ್ಮು, ಕೆಮ್ಮು, ಬೆಳಗು ಮುಂಜಾನೆ ಉಸಿರುಗಟ್ಟುವದು, ಗಂಟಲು ಉರಿಯುವಂಥ ಕೆಮ್ಮು ಮತ್ತು ಪುಪ್ಪುಸದ ಯಾವತ್ತು ವಿಕಾರಗಳಿಗೆ ಅದರಿಂದ ಗುಣವಾಗುವದು.

ರೂ. ೨, ರೂ. ೩-೮-೦, ರೂ. ೬ ಈ ಕಿಮ್ಮತ್ತುಗಳಲ್ಲಿ ಸಣ್ಣ ದೊಡ್ಡ ಬಾಟಲಿಗಳು ಸರ್ವತ್ರ ದೊರೆಯುತ್ತವೆ.

ತಯಾರಿಸುವವರು:

ಡಾ. ಪುರೋಹಿತ ಫಾರ್ಮಸಿ, ಕೊಲ್ಹಾಪುರ
ಅಥವಾ ಮುಂಬಯಿಯ ಯಾವದೇ ಔಷಧ
ಅಂಗಡಿಕಾರರ ಕಡೆಯಿಂದ

ಪುರೋಹಿತ ಶ್ವಾಸಹಾರಿ

ಅಳಿಯ ನಾಟಕ

" ರಾಮು "

★

ನಾಂದೀಶ್ಲೋಕ :— ಬೆಕ್ಕು ಕಣ್ಮುಚ್ಚಿ ಹಾಲು ಕುಡಿದೊಡೆ ।
ಜನವಾರು ಕಾಣರೆ ? ॥

ಎಚ್ಚರಿಕೆ :— ಇದು ನಾಟಕವೇ ಅಲ್ಲ.

ಬಿನ್ನಹ :— ನಾಟಕವೆಂದೇ ಕಲ್ಪನೆ ಮಾಡಿಕೊಂಡು
ಓದಬೇಕಾಗಿ ವಿನಂತಿ.

★

ಪಾತ್ರಗಳು........ಹಾಗೂ........ವಿವರಗಳು.

೧. ಅತ್ತೆ—ರಂಗಮ್ಮನವರು. ವಯಸ್ಸು ಮೂವತ್ತುಮೂರು. ಇವರೇ ಅತ್ತೆಯ ಪಾತ್ರವನ್ನು ವಹಿಸುವರು. ನೆಂಗು ದೀಪಾವಳಿಗೆ ತನ್ನ ಅತ್ತೆಯಮನೆಗೆ ಹೋಗಲು ನಿರ್ಧರಿಸಿದ ಕೂಡಲೆ, ರಂಗಮ್ಮನವರು ಈ ನಾಟಕದ ಕಾರ್ಯದರ್ಶಿಗಳು, ವ್ಯವಸ್ಥಾಪಕರು, ಮಾಲೀಕರು ಹಾಗೂ ಪಾತ್ರಧಾರಿಗಳು ಮೊದಲಾಗಿ ಎಲ್ಲಾ ಆಗುವರು. ಇವರೇ ನಾಟಕದ ತೈಯಾರಕರು. ಬಹಳ ಚೆನ್ನಾಗಿ ಅಭಿನಯಿಸುವರು.

೨. ಅತ್ತೆಯ ಗಂಡ— ಮಾವ! ಶೇಷಪ್ಪ. ವಯಸ್ಸು ನಲವತ್ತೆರಡು. ಇವರು ತಮ್ಮ ಅಳಿಯತನವನ್ನು ಸಂಪೂರ್ಣವಾಗಿ ಮರೆತಿರುವರು. ಈ ನಾಟಕದ ಹಣಕ್ಕೆ ಇವರೇ ಪೂರ್ಣ ಜವಾಬ್ದಾರರು. ಏಂದರೆ ಇವರ ಆರ್ಥಿಕಸ್ಥಿತಿಗೆ ತಕ್ಕಂತೆ, ಅಷ್ಟು ಮಾತ್ರಕ್ಕೆ, ನಾಟಕದ ಏರ್ಪಾಡುಗಳನ್ನು ಮಾಡಬೇಕೆಂದರೆ ರಂಗಮ್ಮನವರು ಒಪ್ಪುವುದಿಲ್ಲ. ನಾಟಕಕ್ಕೆ ತಕ್ಕಷ್ಟು ನಿಧಿಯನ್ನು ಇವರು ಹೇಗಾದರೂ,—ಯಾಚನೆ, ಸಾಲ, ಕಳವು, ಇವುಗಳಿಂದಲಾದರೂ— ಒದಗಿಸಿಕೊಡುತ್ತಿರಬೇಕೆಂದು ಇವರ ಮತ. ಪ್ರತಿಭಟಿಸುತ್ತಲೇ ಶೇಷಪ್ಪನವರು ರಂಗಮ್ಮನ ಈ ತತ್ತ್ವಕ್ಕೆ ಆಹುತಿಯಾಗುವರು. ಈ ಪಾತ್ರದ ಅಭಿನಯದ ವಿಷಯದಲ್ಲೂ ಇವರು ವಿಶೇಷ ಆಸಕ್ತಿಯನ್ನು ತೋರುವಂತೆ ಕಂಡುಬರುವುದಿಲ್ಲ. ಸಾಮರ್ಥ್ಯವಿಲ್ಲವೆಂದಲ್ಲ. ಆಗಾಗ ಪರದೆಯ ಹಿಂದಿನ ವರ್ತನೆಗಳನ್ನೇ ಇವರು ಪರದೆಯ ಮುಂದೆಯೂ —ತಾವು ಅಭಿನಯಗಾರರೆಂಬುದನ್ನು ಮರೆತು—ತೋರಿಸುವುದನ್ನು ಗಮನಿಸಬಹುದು. ಆಗ ಮ್ಯಾನೇಜರ್ ರಂಗಮ್ಮನವರು ಕಣ್ಣುಸನ್ನೆಯಿಂದ ಇವರನ್ನು ಎಚ್ಚರಿಸುವುದನ್ನೂ ನೋಡಬಹುದು.

೩. ಅಳಿಯ— ನೆಂಗು: ವಯಸ್ಸು ಇಪ್ಪತ್ತೆರಡು. ಪರದೆಯ ಹಿಂದೆ 'ನೆಂಗು' ಎಂದೂ, ಪರದೆಯ ಮುಂದೆ, ನರಸಿಂಗರಾವ್. ಬಿ.ಎ., (ಫೈಲ್ಡ್) ಎಂದೂ ಆಗುವುದು. ತಮ್ಮ ಪಾತ್ರವನ್ನು ಎಚ್ಚರಿಕೆಯಿಂದ — ಬಹಳ ಮುತುವರ್ಜಿಯಿಂದ, — ಅಭಿನಯಿಸುವರು. ಹೆಚ್ಚಿಗೆ ವಿವರಗಳನ್ನು ರಂಗಸ್ಥಳದ ಮೇಲೆ ನೋಡಿರಿ !

೪. ಹೆಂಡತಿ — ಮಾಲಿನಿ ವಯಸ್ಸು ಹದಿನೈದು. ಬಹು ಮುಖ್ಯಪಾತ್ರ. ರಂಗಮ್ಮನವರು ಈ ಪಾತ್ರವನ್ನು ಬಹಳ ಮನಸ್ಸುಗೊಟ್ಟು ತಯಾರುಮಾಡಿರುವರು. ಆದರೆ ಒಂದು ಮಾತು : ಅವರು ಈ ಪಾತ್ರವನ್ನು ತಯಾರುಮಾಡುವ ಅವಶ್ಯಕವೇ ಇರಲಿಲ್ಲ. ಮಾಲಿನಿಯು ದಕ್ಷತೆಯಿಂದ, ನಡೆ-ನುಡಿಗಳಿಂದ, ವರ್ತನೆಯಿಂದ, ನಯ-ನಾಚಿಕೆಗಳಿಂದ — ಯಾರ ತಿದ್ದುವಿಕೆಗೂ ಒಳಗಾಗದಿದ್ದರೂ — ತನ್ನ ಪಾತ್ರವನ್ನು ಅದ್ಭುತವಾಗಿಯೇ ಪ್ರದರ್ಶಿಸುವವಳು. ನಾಟಕದ ಜೀವ ಇವಳು. ಅಲ್ಲದೆ ಹುಟ್ಟು ಅಭಿನಯಗಾರ್ತಿ.

೫. ಅತ್ತೆಮಾವಂದಿರ ಮಕ್ಕಳು
(ಕ) ಪುಟ್ಟು, ವಯಸ್ಸು ಹತ್ತು
(ಖ) ಸರಸು, ವಯಸ್ಸು ಏಳು

ಇವರಿಬ್ಬರಿಗೆ ರಂಗಮ್ಮನವರು, ಶಾಲೆಯ ತುಂಟಹುಡುಗರನ್ನು ಉಪಾಧ್ಯಾಯರು ಶಿಕ್ಷಿಸುವಂತೆ ಚತುರೋಪಾಯಗಳಿಂದಲೂ ಶಿಕ್ಷಣ ಕೊಟ್ಟರೂ, ಇವರುಗಳಿಗೆ, ಪರೀಕ್ಷೆಗೆ ಕುಳಿತಿರುವ ಹುಡುಗರಿಗೆ ಲೆಖ್ಖದಲ್ಲಿ ಎರಡು ಸಂಖ್ಯೆಗಳು ಬಂದಾಗ ಕಳೆಯುವುದೋ ಕೂಡುವುದೋ— ಎಂಬ ಸಂದಿಗ್ಧ ಬರುವಂತೆ, ಪರದೆಯ ಹಿಂದಿನ ಆಚರಣೆಗೂ ಪರದೆಯ ಮುಂದಿನ ಆಚರಣೆಗೂ ಸಂದಿಗ್ಧಬಂದು, ಇವರುಗಳು ಆಗಾಗ ನಾಟಕದಲ್ಲಿ ಆಭಾಸವನ್ನು ಮಾಡುವರು. ಅತ್ತೆಯವರು ಚತುರ ಅಭಿನಯಕಾರರಾದ್ದರಿಂದ ಅಂತಹ ಸಮಯದಲ್ಲಿ ಒಳ್ಳೆಯ ನುಡಿಗಳಿಂದ, ಸೌಮ್ಯವಾಗಿ, ತಮ್ಮನ್ನು ತಾವು ಮರೆಯದೆ, ಆದರ್ಶಮಾತೆಯಂತೆ ಪ್ರೇಮವಾಹಿನಿಯನ್ನು ಸ್ವಲ್ಪ ಹರಿಸಿ, ಹುಡುಗರನ್ನು ಇತರರಿಗೆ [ತಿಳಿದೂ ?] ತಿಳಿಯದೆ ತಿದ್ದುವರು.— ಅನಂತರ ಪರದೆಯು ಇಳಿಬಿದ್ದಮೇಲೆ ಆ ಹುಡುಗರನ್ನು ಚಚ್ಚುವರು.

ಸ್ಥಳ— ದೀಪಾವಳಿಯ ಹಬ್ಬಕ್ಕೆ ಹೋಗಿರುವ ಅಳಿಯಂದಿರ ಅತ್ತೆ-ಮಾವಂದಿರ ಮನೆ.

[ಸೂಚನೆ— ಬಾಡಿಗೆ ಮನೆ, ಬಡದಿ ಮನೆ, ಛತ್ರ ಇವುಗಳನ್ನು ಸ್ವಂತಮನೆಂದೇ ಪರಿಗಣಿಸತಕ್ಕದ್ದು.]

ಕಾಲ—ದೀಪಾವಳಿ

* * *

ಮುನ್ನುಡಿ

ಶೇಷಪ್ಪನವರು ನಮ್ಮೂರಿನ ತಾಲ್ಲೂಕು ಕಛೇರಿಯ ಶಿರಸ್ತೇದಾರರು. ಮೊದಲ ಮಗಳ ಲಗ್ನವನ್ನು ವಿಜೃಂಭಣೆಯಿಂದ ಮಾಡಿ, ನಮ್ಮೂರಿನ ಎಲ್ಲಾ ಬ್ಯಾಂಕು, ಸೊಸೈಟಿಗಳಲ್ಲಿ ಸಾಲಮಾಡಿ ನೋಡಿದ್ದರು. ತಮ್ಮ ಹೆಂಡತಿಯ ಮಾತುಗಳನ್ನೆಲ್ಲವನ್ನೂ ಕೇಳದೆ, ತಮ್ಮ ಕಾರ್ಯಭಾರವನ್ನೆ ನಡೆಯಿಸಿದ್ದರೆ ಸಾಲವೇ ಆಗುತ್ತಿರಲಿಲ್ಲ ವೆಂಬುದು ಇವರಿಗೆ ಆಮೇಲೆ ಎಣಿಕೆ. ಮದುವೆಗಾಗಿ ಮಾಡಿದ್ದ ಸಾಲದ ಜೋಡಿತದ ಭಾಯವು ಮಾಗುವುದಕ್ಕೆ

ಮುಂಚೆಯೇ ದೀಪಾವಳಿಯ ಬಗೆಯ ಸುಳಿವು ಬರತೊಡಗಿತು. ಶೇಷಪ್ಪನವರಿಗೆ ಹತಾಶೆ ಹೆಚ್ಚಾದಷ್ಟೂ ರಂಗಮ್ಮನವರಿಗೆ ಅಳಿಯಂದಿರನ್ನು ಹಬ್ಬಕ್ಕೆ ಕರೆಯಿಸಿಕೊಳ್ಳಬೇಕೆಂಬ ಉತ್ಸಾಹವು ಹೆಚ್ಚಾಯಿತು. ವರಮಹಾಲಕ್ಷ್ಮಿವ್ರತ, ಅನಂತಚತುರ್ದಶಿ, ಮೊದಲಾದ ಹಬ್ಬಗಳು ಬಂದಾಗ, "ಈಗ ಮಾಡುವುದರ ಬದಲು ದಸರಾ ಹಬ್ಬಗಳಲ್ಲಿ ಮಾಡೋಣ" ಎಂದು ಯುಕ್ತಿ ಹೂಡುತ್ತಿದ್ದ ಶೇಷಪ್ಪನವರು, "ಈ ದೀಪಾವಳಿಯ ಹಬ್ಬವನ್ನೂ ನಾವು ಈ ಸಲ ದಸರೆಯಲ್ಲೇ ಮಾಡಿಬಿಡೋಣ" ಎಂದು ತಮ್ಮ ಧರ್ಮಪತ್ನಿಯವರ ಮುಂದೆ ಸೂಚಿಸಿದರಂತೆ. ರಂಗಮ್ಮನವರು ಶೇಷಪ್ಪನವರಿಗೆ ಹೇಳಿದ ಉತ್ತರವನ್ನು ನಾವು ನಮ್ಮ ಮೂಲಪ್ರತಿಯಲ್ಲಿ ಬರೆದಿದ್ದೆವು. ಅಕಸ್ಮಾತ್ ಅದನ್ನು ನೋಡಿದ ಶೇಷಪ್ಪನವರು ನಮ್ಮಲ್ಲಿಗೆ ಬಂದು, ಅದನ್ನು ಮುದ್ರಿಸಬೇಡಿರೆಂದು ಬೇಡಿಕೊಂಡಿದ್ದರ ಮೇಲೆ ನಾವು ಅವರ ಮಾನ-ಮರ್ಯಾದೆಯ ಮೇಲೆ ದೃಷ್ಟಿ ಇಟ್ಟು ಅದನ್ನು ತೆಗೆದುಹಾಕಿದ್ದೇವೆ. ಅದೇನೆಂದು ತಿಳಿದುಕೊಳ್ಳುವ ಆಸಕ್ತಿಯುಳ್ಳ ಓದುಗರು ಇದ್ದಲ್ಲಿ, ಅಂಥವರು ಶೇಷಪ್ಪನವರ ಸ್ಥಿತಿಗೆ ಬಂದಾಗ, ಶೇಷಪ್ಪನವರ ಸೂಚನೆಯನ್ನು ತಮ್ಮ ಧರ್ಮಪತ್ನಿಯವರೊಡನೆ ಹೇಳಿದರೆ ತಾನೇ ತಿಳಿಯುವುದು. ಅಂತು ಶೇಷಪ್ಪನವರು ಪ್ರಾಣ ಬಿಟ್ಟಾದರೂ ದೀಪಾವಳಿ ನೆರವೇರಿಸಿ ದಿವಾಳಿಯಾಗಲು ತೊಡಗಿದ್ದರು. ಹೀಗಿತ್ತು ಅವರ ಸಮಾಚಾರ. ಇಲ್ಲಿಂದ ನಾಟಕವು ಮುಂದುವರಿಯುವುದು.

" ಮತ್ತೆ ಮನೇಲಿ ಏನು ಇದೇ.... ಅಂತ ತಿಳಿದು ಕೊಂಡಿದ್ದೀರಿ ?
ನಿನ್ನೆಯ ರಾತ್ರೀನೇ.... "

* * *

ನಾಟಕಾರಂಭ

[ಪರದೆಯ ಹಿಂದೆ]

ಶೇಷಪ್ಪನವರು ಮನೆಯಲ್ಲಿ ಕುಳಿತಿದ್ದಾರೆ. ಅದು ಅವರ ಸ್ವಂತದ ಮನೆ. ಆದಕಾರಣ ಅದು ಮಣ್ಣಿನದೆಂದೂ, ಹಳೆಯದೆಂದೂ, ನೋರಕವೆಂದೂ ಸಿಟ್ಟು ಮಾಡಿಕೊಂಡಿರಲಿಲ್ಲ. ಗೋಡೆಗಳು ಸುಣ್ಣದ ಸ್ನೇಹವನ್ನನುಭವಿಸಿ ಹತ್ತಾರು ವರ್ಷಗಳಂತೂ ಕಳೆದೇ ಇರಬೇಕು. ಮಗಳ ಮದುವೆಯನ್ನು ದಾಸೇಶ್ವರನ ಛತ್ರದಲ್ಲಿ ನೆರವೇರಿಸಿದ್ದರಿಂದ, ಸ್ವಂತದ ಮನೆಯಲ್ಲಿ ದೇವರ ಮನೆ ಏನಾ ಮತ್ತೆಲ್ಲೂ ಸುಣ್ಣ ಬಳಿಯಿಸಿರಲಿಲ್ಲ—ಮದುವೆ ಸಿದ್ಧತೆಗಳಲ್ಲಿ ರಂಗಮ್ಮನವರಿಗೆ ಸೋಲದೆ, ತಾವು ಹಿಡಿದ ಹಟವನ್ನು ಜಯಿಸಿದ್ದು ಇದೊಂದರಲ್ಲಿಯೇ. ಒಂದು ಕೈ ಮುರಿದಿದ್ದ—ವಾರ್ನಿಷಿನ ಹೆಸರನ್ನೇ ಅರಿಯದ—ಕುರ್ಚಿಯೂ, ಮಧ್ಯದ ಕಾಲು ಮುರಿದಿದ್ದ ಬೆಂಚೂ ಮನೆಯ ವಿಶಿಷ್ಟ ಸುಖಾಸನಗಳಾಗಿದ್ದುವು. ಎದುರುಗೋಡೆಯ ಮೇಲೆ ಹಳೆಯ ಲಕ್ಷ್ಮೀನಾರಾಯಣ ಚಿತ್ರಪಟವೊಂದು ಮನೆಯನ್ನು ಕಟ್ಟಿಸಿದ ಹೊಸದರಲ್ಲಿ ನೇತು ಹಾಕಲ್ಪಟ್ಟಿದ್ದು, ಪುನಃ ಮನೆ ಬೀಳುವ ವರೆಗೇನೂ ತೆಗೆಯಲ್ಪಡುವ ಸಂಭವವಿಲ್ಲದೆ ಇತ್ತು. ಪಡಸಾಲೆ ಮಧ್ಯದಲ್ಲಿ ಮುದುಡಿಬಿದ್ದ ಹರಕು ಚಾಪೆಯೊಂದು, ಇನ್ನು ಮುಂದೆ ತನ್ನನ್ನು ಸೇವೆಯಿಂದ ನಿವೃತ್ತಮಾಡಬೇಕೆಂದು ದೇಹವನ್ನೆಲ್ಲಾ ಬಾಯಿಗಳನ್ನಾಗಿ ಮಾಡಿ ಬೇಡುತ್ತಿತ್ತು. ಶೇಷಪ್ಪನು ಕರಿಯಂಚಿನ ಮಾಸಿದ ಪಪ್ಪ ಪಂಚೆಯನ್ನು ಉಟ್ಟಿರುವನು. ಕೊಳಕಾದ ಷರಟನ್ನು ತೊಟ್ಟಿರುವನು. ಗುಂಡಿಯಿಲ್ಲದ್ದರಿಂದ ಅದು ಬಾಯ್ಬಿಟ್ಟು ಕೇಶಮಯ ಎದೆಯನ್ನು ತೋರಿಸುತ್ತಿರುವುದು. ಕೈಯ ತೋಳಿನ ತುದಿಯಲ್ಲಿ ದಾರವು ಕಟ್ಟಲ್ಪಟ್ಟಿದೆ. ಪಕ್ಕದ ಗೋಡೆಯಲ್ಲಿಯ ಬಾಗಿದ ಮೊಳೆಯೊಂದಕ್ಕೆ, ಬೆವರಿನಿಂದ ಜಿಡ್ಡು ಕಟ್ಟಿದ ಕತ್ತುಪಟ್ಟಿಯ ಅಂಗಿಯೂ, ಕೊಳಕು ದುಪಟಾಲೂ ತಗುಲಿಬಿದ್ದಿವೆ. ಶೇಷಪ್ಪ ಕುರ್ಚಿಯ ಮೇಲೆ ಕುಳಿತಿದ್ದಾನೆ.

ಎದುರಿಗೆ ನೆಲದ ಮೇಲೆ ರಂಗಮ್ಮನು ತೊಡೆಯ ಮೇಲೆ ಕಾಗದವನ್ನು ಇಟ್ಟುಕೊಂಡು, ಹಬ್ಬಕ್ಕೆ ಬೇಕಾಗಿರುವ ದಿನಸಿಗಳು, ಸಾಮಗ್ರಿಗಳು, ಹೊಲಿಸಬೇಕಾದ ಬಟ್ಟೆಗಳು, ಮೊದಲಾದುವುಗಳ ಪಟ್ಟಿ ಬರೆಯುತ್ತಿದ್ದಾಳೆ. ಅವಳ ಒಂದೊಂದು ಕೈಯಲ್ಲಿಯೂ ಎರಡೆರಡು ದಪ್ಪನೆಯ ಸೀಳುಗಾಜಿನ ಬಳೆಗಳಿವೆ. ಬರೆಯಲು ಕೈ ಅಲುಗಿದಂತೆಲ್ಲಾ ಅವು ಜಣಜಣ ಶಬ್ದಮಾಡುತ್ತವೆ. ಅವರು ಚಕ್ಕುಬಟ್ಟೆಯ ಕುಪ್ಪಸವನ್ನು ತೊಟ್ಟು, ಸಾದಾ ಸೀರೆಯನ್ನುಟ್ಟಿದ್ದಾರೆ. ಸೀರೆ ನಾಲ್ಕಾರು ಕಡೆಗೆ ಹರಿದಿದೆ: ಕೆಲವು ಕಡೆ ಗಂಟುಗಳು ಹರುಕವನ್ನು ಸೇತುವೆಗಟ್ಟಿವೆ. ಕೆಲವು ಕಡೆಗೆ ಬಿಳಿಯ ದಾರದ ಹೊಲಿಗೆ ಕಾಣುತ್ತಿದೆ. ಗಟ್ಟಿಯಾಗಿ ಸಾಮಾನುಗಳ ಹೆಸರನ್ನು ಹೇಳುತ್ತಾ ಪಟ್ಟಿ ಬರೆಯುತ್ತಿದ್ದಾಳೆ. ಅದನ್ನು ಕೇಳಿ ಶೇಷಪ್ಪನು "ಏನೇ, ನಾವು ಪುನಃ ಹೊಸಸಂಸಾರ ಹೂಡುವ ಹಾಗಿದೆಯಲ್ಲೇ, ನಿನ್ನ ಪಟ್ಟಿ ನೋಡಿದ್ರೆ!" ಎನ್ನುತ್ತಾನೆ. :

"ಮತ್ತೆ ಮನೇಲಿ ಏನು ಇದೇ.. ಅಂತ ತಿಳಿದುಕೊಂಡಿದ್ದೀರಿ! ನಿನ್ನೆಯ ರಾತ್ರೀನೇ ಒಂದು ಅಕ್ಕಿಕಾಳೂ ಇರಲಿಲ್ಲ!"

"ನಮ್ಮ ಅವಸ್ಥೆ ಹೀಗಿರುವಾಗ ದೀಪಾವಳೀ ಹಬ್ಬ ಏಕೆ ಮಾಡಬೇಕು ?"

"ಮಾಡದೆ ಇದ್ದರೆ ಮರ್ಯಾದೆ ಬರುತ್ತೆಯೆ ?"

"ನನ್ನ ಕೇಳಿದ್ರೆ ಇದು ದೀಪಾವಳೀ ಹಬ್ಬ ಅಲ್ಲ, ದಿವಾಳಿ ಹಬ್ಬ!"

"ಸಾಕು ಬಿಡ್ರಿ ಸದ್ಯ ಇವತ್ತೇ ಬಟ್ಟೆಗಳನ್ನು ಹೊಲಿಯಲಿಕ್ಕೆ ಹಾಕಿ. ಇಲ್ಲದೇ ಇದ್ದರೆ ದರ್ಜಿಯವನು ಹೊತ್ತಿಗೆ ಸರಿಯಾಗಿ ಬಟ್ಟೆ ತರುವುದಿಲ್ಲ !"

"ಪುಟ್ಟುಗೆ ಈಗ ಸದ್ಯಕ್ಕೆ ಒಂದು ನಿಕ್ಕರ್ ಸಾಲ್ದೆ? ಅಳಿಯಂದಿರು ಬಂದರೆ ಮೂರೇ ದಿವಸ ಇರೋದು; ಅಷ್ಟು ದಿವಸವೂ ಹೊಸ ನಿಕ್ಕರೇ ಹಾಕಿಕೊಂಡಿರಲಿ !"

"ಸರಿ, ಗೊತ್ತಾಗೊಲ್ವೇ ಅವರಿಗೆ, ದಿನಾಲು ಬಿಚ್ಚಿ ಒಗೆಯುವುದಿಲ್ಲಾ — ಎಂತ!"

"ಯಾರು ಒಗೀತಾರೆ?"

"ಕಛೇರಿಯಿಂದ ಒಬ್ಬ ಜವಾನನನ್ನು ಕರೆಯಿಸಿ ಮೂರು ನಾಲ್ಕು ದಿವಸ ಮನೇಲೇ ಇರಿಸಿಕೊಂಡಿರಬೇಕು. ಇಲ್ದೇಹೋದ್ರೆ ಹೇಗೆ ಆಗುತ್ತೆ?"

"ಆದ್ರೆ, ಪುಟ್ಟುಗೆ ಒಂದು ಹೊಸ ನಿಕ್ಕರು ಹೊಲಿಸಿದರೆ ಈಗಿರೋದು ಸೇರಿ ಎರಡಾಗುತ್ತಲ್ಲ !"

"ಈಗ ಇರುವ ನಿಕ್ಕರನ್ನು ಎಲ್ಲಿಯಾದರೂ ಪ್ರದರ್ಶನಕ್ಕೆ ಕಳುಹಿಸಬಹುದು ಅಂದ್ರೆ, ನಾನು ಹಾಕಿರುವ Patch-work ನಿಕ್ಕರ್ ಅಂತ! ಪುಟ್ಟುಗೆ ಎರಡು ನಿಕ್ಕರ್ ಎರಡು ಷರಟು ಹಾಕಿಸ್ತೇನೆ. ಸರಸೂಗೆ ಎರಡು ಕಣದ ಲಂಗ, ನಾಲ್ಕು ಸಾದಾ ಫ್ರಾಕ್, ಎರಡು ಮಲ್ಲುಬನೀನು, ಎರಡು ಶಿಲ್ಕು ಬನೀನು!"

ಶೇಷಪ್ಪನವರು ಸೋತರು, ಸುಮ್ಮಗಾದರು. ಅಷ್ಟು ಹೊತ್ತಿಗೆ ಸರಸು, ಪುಟ್ಟು ಇಬ್ಬರೂ ಹಿತ್ತಲುಕಡೆಯಿಂದ ಬರುವರು. ಇಬ್ಬರ ತಲೆಗೂದಲೂ ಕೆದರಿದೆ. ಬಿಸಿಲಲ್ಲಿ ಆಡುತ್ತಿದ್ದುದರಿಂದ ಮುಖವು ಬೆವತಿದೆ. ಪುಟ್ಟು ಹಾಕಿಕೊಂಡಿರುವ ನಿಕ್ಕರು, ರಂಗಮ್ಮನವರು ಹೇಳಿದಂತೆ, Patch-work ಆಗಿದೆ. ಸರಸು ಲಂಗ ಸೀಳುಸೀಳಾಗಿ, ನೀಳವಾಗಿ, ಹರಿದಿದೆ.

ಶೇಷಪ್ಪನು, ನಿಟ್ಟುಸಿರು ಬಿಟ್ಟು ಬೇಜಾರಿನಿಂದ "ಪುಟ್ಟು ನಿಕ್ಕರು Patch-work ಆದ್ರೆ, ಸರಸು ನಿಕ್ಕರು Strip-work" ಎಂದು ಗುಣುಗುಟ್ಟುವನು.

ರಂಗಮ್ಮನವರು "ಅದಕ್ಕೇ, ಬಟ್ಟೆಗಳನ್ನು ಮುಂಚೆ ಹೊಲಿಸಿ ಎನ್ನುವುದು" ಎನ್ನುವರು.

"ಹೌದು; ಆದ್ರೆ, ಮಾರ್ವಾಡಿ ಐವತ್ತೇ ರೂಪಾಯಿ ಸಾಲ ಕೊಡ್ತೇನೆ. .ಅಂತ ಹೇಳಿರುವುದು. ಅದರಲ್ಲೂ ಆರು ತಿಂಗಳ ಬಡ್ಡಿ ಮತ್ತು ಮೊದಲ ಮೂರು ಕಂತಿನ ಹಣ ವಜಾ ಮಾಡಿಕೊಂಡು ಬಾಕೀದನ್ನು ಕೊಡುತ್ತಾನೆ. ಸುಮಾರು ಮೂವತ್ತು ರೂಪಾಯಿ ಮಾತ್ರ ಕೈಗೆ ಸಿಗುವುದು!"

"ಹಾಗಾದ್ರೆ ನೂರು ರೂಪಾಯನ್ನೇ ಸಾಲ ಕೇಳಿ; ಐವತ್ತಾದರೂ ಕೈಗೆ ಸಿಗುತ್ತೆ!"

ಶೇಷಪ್ಪನು ಉತ್ತರ ಕೊಡದೆ ಹಿಂಜರಿಯುವನು. ಸರಸು ಈಮಧ್ಯೆ, ರಂಗಮ್ಮನವರ ತೊಡೆಯೇರಲು ಪ್ರಯತ್ನಿಸುತ್ತಿರುವಳು. ಮಾತಿನಲ್ಲಿ ಮಗ್ನರಾಗಿದ್ದ ರಂಗಮ್ಮನವರು ಆ ಕಡೆಗೆ ನಿಗಾ ಕೊಟ್ಟಿರಲಿಲ್ಲ. ಸಂವಾದವು ನಿಲ್ಲಲು ಸರಸುವನ್ನು ನೋಡಿ "ಹೋಗೇ ಆಚೆ" ಎಂದು ದೂಡುವರು. ಸರಸು ಅಳುತ್ತಾ ಚಾಪೆಯ ಮೇಲೆ ಉರುಳಾಡುವಳು.

ಪುಟ್ಟು, ಪೆಲ್ಲಿಗೆ ತಾಯಿಯ ಬಳಿ, ಮಂಡಿಯೂರಿ ಕುಳಿತು "ಪಟಾಕಿ, ಬರೀಯಮ್ಮಾ! ಮತಾಪು, ನಕ್ಷತ್ರಕಡ್ಡಿ ಎಲ್ಲಾ ಬಂದಿವೆ ರಂಗಶೆಟ್ಟರ ಅಂಗಡಿಗೆ!" ಎನ್ನುವನು.

ಶೇಷಪ್ಪನವರು "ಪುಟ್ಟು, ಒಂದೇ ನಿಕ್ಕರ್ ಬರುತ್ತೆ ನೋಡು ಪಟಾಕಿ ಕೇಳಿದ್ರೆ. ಪಟಾಕಿ ಬೇಡ ಅಂದ್ರೆ ಎರಡು ನಿಕ್ಕರ್!" ಎನ್ನುವರು.

ಪುಟ್ಟು, "ನನಗೆ ನಿಕ್ಕರ್ ಬೇಡಾ — ಪಟಾಕೀ ಬೇಕು!" ಎಂದು ಘುನುಗುಟ್ಟುವನು.

ಸರಸು, "ನಂಗೇ — ನಂಗೇ ಪ – ಟಾ – ಕೀ —" ಎಂದು ಅಳುವಳು.

ರಂಗಮ್ಮನವರು ಇಬ್ಬರನ್ನೂ ನೋಡಿ, ಗದರಿಸಿಕೊಂಡು "ಯಾಕೇ ಹೀಗೆ ಮಾಡ್ತೀರಿ, ಏಟು ಬೇಕೇನು? ಮಾಲಿನಿಯ ಗಂಡ ಬಂದಾಗ ಹೀಗೆಲ್ಲಾ ಮಾಡಿದ್ರೆ ಕೂತರೆ, ಚಚ್ಚಿಹಾಕಿಬಿಡುತ್ತೇನೆ. ಅವರು ಬಂದಾಗ ನೀವು ಹೀಗೆ ಕೂದಲು ಕೆದರಿಕೊಂಡಿದ್ದರೆ ಏಟುಬೀಳುತ್ತೆ. ಅವರು ಇಲ್ಲಿರುವವರೆಗೂ ಗಂಭೀರವಾಗಿರಬೇಕು. ಜಗಳ ಕಾಯಕೂಡದು. ತಿಂಡಿ ಎಷ್ಟು ಕೊಡುತ್ತೋ ಅಷ್ಟೇ ತೆಗೆದುಕೊಂಡು ಹೋಗಬೇಕು. 'ಇನ್ನೂ ಸ್ವಲ್ಪ' ಅಂತ ಗುಣುಗುಟ್ಟಿದರೆ ಚಚ್ಚಿಬಿಡುತ್ತೇನೆ. ಅವರು ತಿಂಡಿ ಕೊಟ್ಟರೆ ಬೇಡ ಎನ್ನಬೇಕು" ಎಂದು ಮಕ್ಕಳಿಗೆ ಎಚ್ಚರಿಕೆ ಕೊಡುವಳು :

* * *

[ಮತ್ತೂ ಪರದೆಯ ಹಿಂದೆಯೇ]

ಸ್ಥಳ— ಹರಿಹರ; ಅಳಿಯನ ತಂದೆಯ ಮನೆ:

ನಂಗು ಪಟ್ಟಿಯನ್ನು ಬರೆದೂ ಬರೆದೂ ಕಡೆಗೂ ಬಡ್ಜೆಟ್ ಸರಿ ಮಾಡಲಾರದೇ ಹೋದನು. ದೀಪಾವಳಿಯ ಹಬ್ಬಕ್ಕೆ ಹೋಗಿ ಬರಲು ಅವರಪ್ಪ ಅವನಿಗೆ ಕೊಟ್ಟದ್ದು ೧೩ ರೂಪಾಯಿ ೪ ಆಣೆ ಮಾತ್ರ. ಅದು ಸಿಕ್ಕಿದ್ದೂ ಭಗೀರಥಪ್ರಯತ್ನದಿಂದ. ಹರಿಹರದ ಸ್ಟೇಷನ್ ಮೇಸ್ಟ್ರರ ಶಿಫಾರ್ಸಿನ ಮೇಲೆ, ಮಾರ್ವಾಡಿಯು ನಂಗು ಮತ್ತು ಅವನ ತಂದೆ ಇವರಿಬ್ಬರೂ ಬರೆದುಕೊಟ್ಟ ಪ್ರಾಂಸರಿ ಪತ್ರದ ಅಸಲು ೨೫ ರಲ್ಲಿ, ಬಡ್ಡಿ ಮೊದಲ ಎರಡು ಕಂತುಗಳನ್ನು ಕಳೆದುಹಾಕಿ, ಎಕ್ಕ ೧೩–೪–೦ ಗಳನ್ನು ನಂಗು ತಂದೆಯ ಕೈಯಲ್ಲಿ ಕೊಟ್ಟಿದ್ದನು. ಮನೆಯಲ್ಲಿ ಮೂರುಕಾಸೂ ಇಲ್ಲದ ಪ್ರಯುಕ್ತ

ಮತ್ತು ತಮ್ಮ ಸಂಬಳ ಬರುವುದು ಇನ್ನೂ ಹದಿನೈದು ದಿನಗಳಿದ್ದುದರಿಂದ, ನಂಗು ತಂದೆಯು ೩ ರೂಪಾಯನ್ನು ಮನೆಖರ್ಚಿಗೆಂದು ತೆಗೆದುಕೊಂಡು, ಮಿಕ್ಕ ೧೩-೮-೦ ಗಳನ್ನು ನಂಗು ಕೈಯಲ್ಲಿ ಕೊಟ್ಟಿದ್ದರು.

ನಂಗು ಕೊನೆಯಲ್ಲಿ ಹಾಕಿದ ಪಟ್ಟಿ ಹೀಗಿತ್ತು: —

ಬೆಂಗಳೂರಿಗೆ ಟಿಕೇಟು	೩-೧೪-೬
[ತನ್ನ ಊರಿನಲ್ಲಿ ಮನೆಯಿಂದ ಸ್ಟೇಷನ್ನಿನವರೆಗೂ ತನ್ನ ಸಾಮಾನನ್ನು ತಾನೇ ಹೊತ್ತುಕೊಂಡು ನಡೆದುಹೋಗುವುದರಿಂದ ಟಾಂಗಾ, ಕೂಲಿ, ಇವುಗಳ ಖರ್ಚು ಇರಲಿಲ್ಲ.]	
ಒಂದು ಸ್ನೋ ಬಾಟಲಿಗೆ (ಹೆಂಡತಿಗೆ ಕೊಡಬೇಕೆಂದು ಬಯಸಿದ್ದ ಉಡುಗೊರೆ)	೦-೮-೦
(ತಾನು ಮಾವನ ಮನೆಯಲ್ಲಿ ಸ್ನಾನಕ್ಕೆ ಉಪಯೋಗಿಸಿಕೊಳ್ಳಲು) …… ಸೋಪಿಗೆ	೦-೪-೦
(ಬೆಂಗಳೂರು ಸ್ಟೇಷನ್ನಿನಲ್ಲಿ ತನ್ನನ್ನು ಸ್ವಾಗತಿಸಲು ಬೀಗರ ಕಡೆಯವರ್ಯಾರೂ ಬಂದಿದ್ದರೆ, ಆಗ) ತನ್ನ ಸಾಮಾನು ಹೊರಿಸಲು ಕೂಲಿಗೆ	೦-೨-೦
ಮನೆಯ ವರೆಗೆ ಟಾಂಗಾ	೦-೬-೦
(ತಂದೆಯವರು ಆರತಿ ತಟ್ಟೆಗೆ ಹಾಕಬೇಕೆಂದು ಕೊಟ್ಟಿದ್ದರಿಂದ) ಆರತಿ ತಟ್ಟೆಗೆ	೪-೦-೦
ಹಿಂತಿರುಗುವ ಪ್ರಯಾಣದ ಖರ್ಚು (ಕೂಲಿ, ಟಾಂಗಾ, ಟಿಕೇಟು ಸೇರಿ)	೪-೬-೬
ಒಟ್ಟು	೧೩-೯-೦
(ತಂದೆಯವರಿಂದ) ಜಮಾ	೧೩-೮-೦
ಸಾಲದೆ ಬಂದುದು	೦-೧-೦

ಮಾವನಾಡಿ ಕೊಟ್ಟ ಹಣವನ್ನು ಪೂರ್ಣವಾಗಿ ತನಗೇ ತನ್ನ ತಂದೆಯವರು ಏಕೆ ಕೊಡಬಾರದಿತ್ತು?.. ಎಂದು ನಂಗು ಗೊಣಗುಟ್ಟಿದನು, ಪೇಚಾಡಿದನು. "ರೈಲಿನ ಬಳಿ, ಹೋಗುವಾಗಲೂ, ಬರುವಾಗಲೂ, ಬೀಗರ ಕಡೆಯವರು ಬಾರದಿದ್ದರೆ ೦-೩-೦ ಉಳಿಯುತ್ತೆ. ಬಂದರೆ ೦-೧-೦ ಸಾಲದೆ ಬರುತ್ತೆ. ಅಲ್ಲದೆ ಬೆಂಗಳೂರಿನಲ್ಲಿ ಇರಬೇಕಾದದ್ದು ಮೂರು ದಿವಸ. ಕೈಯಲ್ಲಿ ದುಡ್ಡಿಲ್ಲದಿದ್ದರೆ ಆಗುತ್ತದೆಯೆ? ಆ ಹುಡುಗ ಪುಟ್ಟು ಬಲು ತುಂಟ. ಏನಾದರೊಂದನ್ನು ಕೇಳುತ್ತಲೇ ಇರುತ್ತಾನೆ. ಮದುವೆಯಲ್ಲಿ ಕೇಳಿದಾಗ 'ಮುಂದೆ ಮತ್ತೊಮ್ಮೆ ಬಂದಾಗ ಖಂಡಿತ ಕೊಡಿಸುವೆನು' ಎಂದು ಹೇಳಿದ್ದೆನು. ಈಗ ಖಂಡಿತ ಅವನು ಗಂಟು ಬೀಳುತ್ತಾನೆ. ಅಲ್ಲದೆ ಆ ಹುಡುಗಿ 'ಜಡೆಗೆ ಟೇಪು ತಂದು ಕೊಡಿ' ಅಂತ ಪೀಡಿಸುತ್ತಲೇ ಇರುತ್ತೆ. ಹೆಂಡತಿಯನ್ನು ಸಿನಿಮಾಕ್ಕೆ ಕರೆದುಕೊಂಡು ಹೋಗಬೇಕೆಂದು ಆಸೆ." ಛೇ! ಅವನೂ ಅವನ ತಂದೆಯೂ ಇಬ್ಬರೂ ಸೇರಿಯೂ ಬುದ್ಧಿ ಓಡಿಸಿರಲಿಲ್ಲ. ಮಾವನಾಡಿ ಬಳಿ ಐವತ್ತುರೂಪಾಯಿ ಸಾಲವನ್ನೇ ತರಬೇಕಾಗಿತ್ತು.

ಇನ್ನೇನನ್ನೂ ಮಾಡಲಾಗದ್ದರಿಂದ ನಂಗು ಪ್ರಯಾಣಕ್ಕೆ ಸಿದ್ಧನಾಗಲು ಪ್ರಾರಂಭಮಾಡಿದನು. ಬಟ್ಟೆಗಳನ್ನೆಲ್ಲಾ ತನಿಖೆ ಮಾಡಿದನು. ಅವನಲ್ಲಿದ್ದದ್ದು, ಮದುವೆಯಲ್ಲಿ ಕೊಟ್ಟ ಒಂದು ಸರ್ಜ್ ಸೂಟು, ಜರತಾರಿ ಪಂಚೆ ಒಂದು ಜತೆ, ಅದರಲ್ಲಿ ಒಂದು ಹರಿದು ಹೋಗಿತ್ತು. ಒಂದು ಸಾದಾ ಸೂಟು– ಅದನ್ನು ಹೊಲಿಸಿ ಮೂರುವರ್ಷಗಳಾದುದರಿಂದ ಅದು ಈಗ ಸರಿಹೋಗುತ್ತಿರಲಿಲ್ಲ ವಾದರೂ ಅದನ್ನು ಬಿಡುವಂತಿರಲಿಲ್ಲ. ಎರಡು ಷರಟುಗಳು, ಒಂದು ಬನಿಯನ್ನು, ಒಂದು ಡ್ರಾಯರ್, ಒಂದು ಟವಲು ಇಷ್ಟೆ. ಬನಿಯನ್ನನ್ನು ಈಗ ನಾಲ್ಕುದಿವಸಗಳಿಂದ ಒಗೆಯದಿದ್ದುದರಿಂದ ಕೊಳಕಾಗಿತ್ತು. ಟವಲು ಕಾವೀಬಣ್ಣಕ್ಕೆ ತಿರುಗಿತ್ತು. ಬೇರೆ ಬಟ್ಟೆಗಳನ್ನು ತೆಗೆಯುವುದಕ್ಕೆ ದುಡ್ಡಿರಲಿಲ್ಲ. ದೀಪಾವಳಿಗೆ ಹೋಗುವ ಉತ್ಸಾಹವು ಈ ಬಟ್ಟೆಗಳನ್ನೂ, ದುಡ್ಡಿಲ್ಲದಿರುವ ಸ್ಥಿತಿಯನ್ನೂ ಕಂಡು ಹಿಂಗಿತು. ಅನಂತರ ಪುನಃ ಸ್ಫೂರ್ತಿಗೊಂಡಿತು. ಮುಂದೆ ಹಾಸಿಗೆ ಕಟ್ಟಲು ಹೊರಟಾಗ, ಅದರ ದುರ್ದಶೆಯನ್ನು ನೋಡಿ ಅವನ ಆಶೆಯೆಲ್ಲವೂ ಕೆಳಮಟ್ಟಕ್ಕೀಯಿತು. ಮದುವೆಗೆ ಮುಂಚೆ ನಾಲ್ಕೈದು ವರ್ಷಗಳ ಹಿಂದೆ ಸಿಂಪಿ ನಂಗೂಗೆ ಹೊಸಲೇಪು ಹೊಲಿಸಬೇಕೆಂಬ ಠರಾವಾಗಿ ಅದಕ್ಕೆ ಇನ್ನೂ ಹಣ ಒದಗಿಸಲಿಕ್ಕಾಗಿರಲಿಲ್ಲ. ಮದುವೆಯ ಕಾಲದಲ್ಲಿ, ಅದಕ್ಕೆ, ಇದಕ್ಕೆ ಹಣ ಹರಿದುಹಂಚುವುದರಲ್ಲಿ ಈ ಹಾಸಿಗೆಗೆ ಯಾವ ಸಹಾಯವೂ ದೊರೆತಿರಲಿಲ್ಲ. ಮದುವೆಯಾದ ಮೇಲೆ ಆ ಪ್ರಶ್ನೆಯೇ ಬರುವಹಾಗಿರಲಿಲ್ಲ– ಏಕೆಂದರೆ ಪ್ರಸ್ತದಲ್ಲಿ ಮಾವನವರು ಹೊಸ ಹಾಸಿಗೆ ಕೊಡುತ್ತಾರಲ್ಲಾ. ಕಡೆಗೆ ಪುಟ್ಟ ಪ್ರಾಸಿಗೆಯನ್ನು ತೆಗೆದುಕೊಳ್ಳದೆಯೇ ಹೋಗಬೇಕೆಂದು ನಿರ್ಧರಿಸಿದನು.

ಅಂತು ನಂಗು ತನ್ನ ಪಾತ್ರಾಭಿನಯಕ್ಕೆ ಅಣಿಯಾದನು. **ನಂಗು** ಎಂಬ ಹೆಸರು ಅರಳಿ **ನರಸಿಂಗರಾವ್** ಆಗಲಾರಂಭಿಸಿತು. ಸುಮಾರು ಒಂದುವಾರದ ಮೇಲ್ಪಟ್ಟು ನಿರಾತಂಕವಾಗಿ ಬೆಳೆದು ನಿಂತಿದ್ದ ಅವನ ಕೆನ್ನೆ ಗದ್ದಗಳ ಮೇಲಿನ ಕೂದಲ ಪಸಲು ಕಟಾವಾಯ್ತು. ನರಸಿಂಗರಾಯನು ರಂಗಸ್ಥಳಕ್ಕೆ ಹೊರಟನು.

* * *

[ಪರದೆಯ ಮುಂದೆ]

ದೃಶ್ಯ ೧

ದೀಪಾವಳಿಯ ಹಬ್ಬಕ್ಕೆ ಮೂರುನಾಲ್ಕು ದಿನಗಳ ಹಿಂದೆ ಶೇಷಪ್ಪನವರ ಮನೆಗೆ ಬಂದವರು, ಈ ದಿವಸ ಅವರ ಮನೆಗೆ ಬಂದರೆ ಅವರಿಗೆ ಮಂಕುಹಿಡಿಯುವುದು. 'ಮಾಯಾಬಜಾರ್' ನೆನಪುಬರುವುದು. ಹಳೆಮನೆ ಹೋಗಿ ಹೊಸದಾಗಿದೆ. ಸುಣ್ಣ ಬಳಿಸಿದೆ; ಶುಭ್ರವಾಗಿದೆ. ಕಿಟಕಿಗಳಿಗೆ ಪರದೆಗಳೂ, ಬಾಗಿಲಿಗೆ ಪರದೆ-ತೋರಣಗಳೂ ಇಳಿಬಿದ್ದಿವೆ. ಪಡಸಾಲೆಯಲ್ಲಿ ದೊಡ್ಡ ಜಮಖಾನೆ ಹಾಸಿದೆ. ಎದುರುಗೋಡೆಗೆ ಒಂದು ಸೋಫಾ ಇದೆ. ಪಕ್ಕದ ಗೋಡೆಗಳಿಗೆ ಸಾಲಾಗಿ ಎರಡು ಬೆತ್ತದ ಕುರ್ಚಿಗಳಿವೆ. ಮಧ್ಯೆ ಸ್ಟೂಲಿನ ಮೇಲೆ ಕಸೂತಿಹಾಕಿದ ಬಟ್ಟೆಯನ್ನು ಹರವಿ ಅದರ ಮೇಲೆ ಹೂಗಳನ್ನು ತುಂಬಿಟ್ಟಿದ್ದ ಗಾಜಿನ ಪಾತ್ರೆಯಿದೆ. ಗೋಡೆಗಳಿಗೆ, ಮಖಮಲ್ ಬಟ್ಟೆಯಲ್ಲಿ ವಿಚಿತ್ರವಾಗಿ ಸೆಮ್ಮ

ನಾನಾತರದ ಬೊಂಬೆಗಳ ಪಟಗಳು ನಾಲ್ಕು ಕಡೆಗಳಿಗೂ ಅಂದವಾಗಿ ಒರಗಿನಿಂತಿವೆ.

ಸರಸು ಜಮಖಾನೆಯ ಮೇಲೆ ಮಲಗಿ, ತನ್ನ ತಂದೆಯು ತಂದು ಕೊಟ್ಟಿದ್ದ ಹೊಸ ಬೊಂಬೆಗೆ ಸೀರೆ ಉಡಿಸುತ್ತಿದ್ದಾಳೆ. ಅವಳು ಜರತಾರಿ ಕಣದ ಲಂಗವನ್ನು ಹಾಕಿಕೊಂಡು ಶಿಲ್ಕು ಬನಿಯನ್ನು ತೊಟ್ಟಿದ್ದಾಳೆ. ಜಡೆಯ ತುದಿಯಲ್ಲಿ ಟೇಪು ಸುತ್ತಿಕೊಂಡಿದೆ.

ಸ್ನಾನವಮಾಡಿ ಸಿದ್ಧರಾದ ನರಸಿಂಗರಾಯರನ್ನು ಶೇಷಪ್ಪನವರು ಕರೆತಂದು, ಸೋಫಾದಮೇಲೆ ಕುಳಿತುಕೊಳ್ಳಬೇಕೆಂದು ಬಿನ್ನವಿಸುತ್ತಾರೆ. ಅನಂತರ ತಾವು ಒಂದು ಕುರ್ಚಿಯಲ್ಲಿ ಕೂಡ್ರುತ್ತಾರೆ. ನರಸಿಂಗರಾಯರು ಸುತ್ತಲೂ ನೋಡಿ "ಓಹೋ! ಎಲೆಕ್ಟ್ರಿಕ್ ದೀಪವೇ ಇಲ್ಲಾ" ಎನ್ನುತ್ತಾರೆ.

ಶೇಷಪ್ಪನವರು, "ಎಲ್ಲಿ ಹಾಕಿಸುವ್ರುದಕ್ಕಾಗುತ್ತೆ ಹೇಳಿ. ಕಾಲ ಬಹಳ ಕಷ್ಟ—" ಎಂದು ಮುಂದುವರಿಯುತ್ತಿದ್ದವರು, ಅವರ ಎದುರಿಗೇ ಸರಿಯಾಗಿ ಒಳಗಡೆ ಇದ್ದ ರಂಗಮ್ಮನವರ ದೃಷ್ಟಿಬಾಣಕ್ಕೆ ಸಿಕ್ಕು, ಅನಂತರ ಚೇತರಿಸಿಕೊಂಡು— "ಹಾಕಿಸಬಹುದೂ ಅನ್ನಿ! ಅದರೆ ಇನ್ನು ನಾಲ್ಕೈದು ವರ್ಷಕ್ಕೆ ನನಗೆ ರಿಟೈರ್ ಆಗುತ್ತಲ್ಲಾ. ಆಗ ಒಂದು ಬಂಗ್ಲೆ ಕಟ್ಟಿಸಿಬಿಡುತ್ತೇನೆ-ಮಲ್ಲೇಶ್ವರದಲ್ಲಿ. ಅದಕ್ಕೆ ದೀಪವನ್ನು ಹಾಕಿಸುತ್ತೇನೆ. ಈ ಮನೆಗೆ ಈಗ ಹಾಕಿಸಿದರೆ ಬಡ್ಡಿನೇ ಗಿಟ್ಟೊಲ್ಲ. ಅಸಲು ಹಾಳಾಗುತ್ತೆ" ಎನ್ನುವರು.

ಮಾಲಿನಿಯು.. ಅವರ ಅಂಗಿಯ ಬಳಿ ಸರಿದು ಅವರ ಜೇಬಿನೊಳಗೆ ಮೆಲ್ಲಗೆ ಏನನ್ನೋ ಹಾಕಿದಳು.

ರಂಗಮ್ಮನವರು, ಅಷ್ಟುಹೊತ್ತಿಗೆ ಪಡಸಾಲೆ ಬಾಗಿಲ ಬಳಿ ಬಂದು "ಸರಸೂ, ಇದನ್ನು ತೆಗೆದುಕೊಂಡು ಹೋಗಿ ಕೊಡಮ್ಮಾ" ಎಂದು ತಮ್ಮ ಕೈಯಲ್ಲಿದ್ದ ತಿಂಡಿ ತಟ್ಟೆಗಳನ್ನು ಪ್ರದರ್ಶಿಸುವರು. ಸರಸು ರಂಗಮ್ಮನವರ ಕಡೆಗೆ ತಿರುಗಿ ನೋಡದೆಯೆ "ಉಪ್ಪಿಟ್ಟು ತಾನೆ. ನಾನ್ಯಾಕೆ ಒಯ್ದು ಕೊಡಲಿ? ನನಗೆ ಜಾಸ್ತಿ ಕೊಡಲೇ ಇಲ್ಲ ನೀನು!" ಎನ್ನುವಳು.

ರಂಗಮ್ಮನವರು ನಸುನಗುತ್ತಾ, ಪ್ರೇಮವಾಹಿನಿಯನ್ನು ಹರಿಸಿ, "ಅಯ್ಯೋ! ಹುಡುಗಿ, ಎಷ್ಟು ಬೇಕಾದ್ರು ತಿನ್ನಮ್ಮಾ. ನಿನಗೆ ಬ್ಯಾಡಾ ಅಂತ ಯಾರು ಅಂತಾರೆ!" ಎಂದು ಹೇಳುವರು.

ಕಡೆಗೆ, ಸರಸು ಎದ್ದುಬಾರದ ಕಾರಣ, ಶೇಷಪ್ಪನವರೇ ಎದ್ದು ಎರಡು ತಟ್ಟೆಗಳನ್ನು ತೆಗೆದುಕೊಂಡು, ಒಂದನ್ನು ನರಸಿಂಗರಾಯರಿಗೆ ಕೊಡುವರು. ನರಸಿಂಗರಾಯರು ಅದನ್ನು ಸ್ವೀಕರಿಸಿ, "ಬಾಮ್ಮಾ ಸರಸೂ, ಒಂದು ಮಾತು ಹೇಳುತ್ತೇನೆ" ಎಂದು ಕರೆಯುವರು.

ಸರಸು ಭಾವನ ಬಳಿಗೆ ಓಡಿ, ಅವರು ಕೊಟ್ಟ ಉಪ್ಪಿಟ್ಟನ್ನು ಸ್ವೀಕರಿಸುವಳು. ನರಸಿಂಗರಾಯರು "ಸಾಕೇನಮ್ಮಾ ಇನ್ನು ಸ್ವಲ್ಪ ಕೊಡಲೆ?" ಎಂದು ಕೇಳಿದ್ದಕ್ಕೆ ಸರಸು, "ಸಾಕು, ಅಮ್ಮ ಹೇಳಿದ್ದಾಳೆ, ಎಷ್ಟು ತಿಂಡಿ ಕೊಟ್ರೆ ಅಷ್ಟೇ ಇಸಕೊ. ಜಾಸ್ತಿ ಕೇಳಬೇಡಾ, ಅಂತ" ಎನ್ನುವಳು.

ರಂಗಮ್ಮನವರು, ಪುನಃ ನಸುನಗುತ್ತಾ "ಎಷ್ಟು ತುಂಟ ಹುಡುಗಿ ಆಗಿಬಿಟ್ಟೆಯೇ ನೀನು, ಸರಸು?" ಎಂದು ಅವಳನ್ನು ಅಪ್ಪಿಕೊಳ್ಳಲು ಬರುವವರಂತೆ ಬಂದು, ಅವಳನ್ನು ಎತ್ತಿಕೊಂಡು ಒಳಗೆ ಹೋಗುವರು.

ಸ್ವಲ್ಪಹೊತ್ತಿನಲ್ಲಿಯೇ ಪುಟ್ಟುವು ಹೊರಗಿಂದಬಂದು ತನ್ನ ತಂದೆಯೂ, ಭಾವನೂ ತಿಂಡಿ ತಿನ್ನುತ್ತಿರುವುದನ್ನು ನೋಡಿ, "ತಿಂಡಿ! ತಿಂಡಿ!! ತಿಂಡಿ!!! ರಂಗಮ್ಮಾ ತಿಂಡೀ!" ಎಂದು ಅರಚುತ್ತ ಒಂದೇ ಉಸಿರಿನಲ್ಲಿ ಬೀದಿಬಾಗಿಲಿನಿಂದ ಅಡುಗೆಯಮನೆಗೆ ಅಂಬಿನಿಂದ ಬಿಟ್ಟ ಬಾಣದಂತೆ ರಭಸದಿಂದ ನುಗ್ಗುವನು.

ಶೇಷಪ್ಪನವರು ತಿಂಡಿ ತಿನ್ನುತ್ತಾ ಅಳಿಯಂದಿರನ್ನು "ರಾತ್ರೆ ನಿದ್ರೆ ಆಯ್ತೋ ಇಲ್ವೋ; ಅಥವಾ ಬಹಳ ಗಲಾಟೆ ನೂಕು ನುಗ್ಗಲು ಇತ್ತೋ;" ಎಂದು ಕೇಳುವರು.

"ಗಲಾಟೆಯೆ? ಗಲಾಟೆ ಮೂರನೆಯ ತರಗತಿಯಲ್ಲಿರುತ್ತೆ. ಇಂಟರಿನಲ್ಲಿ ಏನೂ ಗಲಾಟೆ ಇರುವುದಿಲ್ಲ. ನಾನು ನಿನ್ನೆರಾತ್ರೆ ಇಂಟರಿನಲ್ಲಿ ಬಂದೆ" ಎಂದು ನರಸಿಂಗರಾಯರು ಮಂದಸ್ಮಿತರಾಗುವರು.

ಶೇಷಪ್ಪನವರು "ಇಂಟರಿನಲ್ಲೆ! ಇಂಟರ್ ಬಹಳ ದುಬಾರಿ ಅಲ್ವೆ? ನಾನಾಗಿದ್ರೆ—" ಎಂದು ಹೇಳುತ್ತಿದ್ದವರು ಅಡಿಗೆಮನೆ ಬಾಗಿಲಿನ ಎದುರಿಗೆ ತಮ್ಮನ್ನೆ ಬಿರುಬಿರನೆ ನೋಡುತ್ತಿದ್ದ ರಂಗಮ್ಮನವರಿಂದ ಎಚ್ಚರಿಸಲ್ಪಟ್ಟು— "ನಾನಾಗಿದ್ದರೆ, - ನಾನಾಗಿದ್ದರೆ ತಾನೇ ಏನು; ಅಷ್ಟೆ, ಇಂಟರಿನಲ್ಲೇ ಪ್ರಯಾಣಬೆಳಸುತ್ತಿದ್ದೆ.

ಟಿಕೀಟು ಎಷ್ಟೋ?" ಎಂದರು. ನರಸಿಂಗರಾಯರು—ನಿಧಾನವಾಗಿ ಮನಸ್ಸಿನಲ್ಲಿಯೇ ಏನನ್ನೋ ಗುಣಿಸಿಕೊಂಡು—"ಇಂಟರ್ ಟಿಕೇಟೇ? ಮೂರನೆ ತರಗತಿಯ ಎರಡರಷ್ಟು—ಏಳುರುಪಾಯಿ—ಹದಿಮೂರಾಣೆ" ಎನ್ನುವರು.

* * *

(ಪರದೆಯು ಬೀಳುವುದು)

[ಪರದೆಯ ಹಿಂದೆ : ಅಡಿಗೆಯ ಮನೆ ಲ್ಲಿ]

ರಂಗಮ್ಮನವರು ನರಸುವನ್ನು ದರದರ ಎಳೆದುಕೊಂಡು ಬಂದು, ಗಲ್ಲವನ್ನು ಚಿವುಟಿ, "ಸದ್ದುಮಾಡ ಬೇಡ, ಗಟ್ಟಿಯಾಗಿ ಅತ್ತರೆ ಇನ್ನೂ ಏಟುಬಿದ್ದೀತು. ಬಾ ಅಂದ್ರೆ ಅಲ್ಲೇ ಕುಳಿತು ಕೊಂಡು ಹಟಮಾಡಿ, ಅವರೆದುರಿಗೆ ಸಿಕ್ಕಾಪಟ್ಟೆ ಮಾತಾಡ್ತಿಯಾ!" ಎಂದು ಗದರಿಸುವರು.

ಅಷ್ಟುಹೊತ್ತಿಗೆ ಪುಟ್ಟು "ತಿಂಡಿ! ತಿಂಡಿ!! ನಂಗೆ ತಿಂಡಿ!' ಎಂದು ಅರಚುತ್ತಾ ಬರುವನು.

ರಂಗಮ್ಮನವರು, "ಬಾಯಿಮುಚ್ಕೋ. ಅವರು ಏನು ಅಂದುಕೊಂಡಾರು. ತಿಂಡಿ ಎಂದೂ ಕಂಡಿರಲಿಲ್ಲವೇ!" ಎನ್ನುವರು.

ಪುಟ್ಟು, ಸ್ತಬ್ಧನಾಗಿ 'ಎಂದು ಮಾಡಿತ್ತೋ' ಎಂದು ಮೆಲ್ಲನೆ ಗೊಣಗುಟ್ಟುವನು.

* * *

[ಪರದೆಯ ಮುಂದೆ]

ದೃಶ್ಯ ೨

ವಿ ಷ್ಕಂ ಭ ಕ

ಶೇಷಪ್ಪನವರು ನರಸೂಗೆ ಕೊಟ್ಟಿದ್ದರ ಪೈಕಿ, ಎರಡು ಪಟಾಕಿ-ಸರಗಳೂ, ಒಂದು ಮತಾಪಿನ ಪೆಟ್ಟಿಗೆಯೂ, ಎರಡು ನಕ್ಷತ್ರ-ಕಡ್ಡಿಗಳೂ ಮಾಯವಾಗಿದ್ದುವು. ನರಸೂಗೆ ಪುಟ್ಟುವಿನ ಮೇಲೆ ಪೂರ ಗುಮಾನಿ. ಪುಟ್ಟುವು ಇಲ್ಲವೆನ್ನುತ್ತಿದ್ದರೂ ತಪ್ಪು ಮಾಡಿದ್ದು ನಿಜ. ಕದ್ದ ಮಾಲನ್ನು ಇಡಲು ಅವನು ಬಹಳ ಬುದ್ಧಿವಂತಿಕೆ ಯಿಂದ, ಮಧ್ಯಾಹ್ನ ಭಾವ ಮಲಗಿದ್ದಾಗ ಅವರ ಸರ್ಜು ಜೇಬಿ ಯಲ್ಲಿ ಅದನ್ನು ತುರುಕಿದ್ದನು. ಭಾವನು ಎಚ್ಚರಾಗುವುದರೊಳಗೆ ಅದನ್ನು ಪುನಃ ಬೇರೆ ಕಡೆಗೆ ಸಾಗಿಸುವ ಹಂಚಿಕೆಯಲ್ಲಿದ್ದನು. ಆದರೆ ಭಾವನವರು ಎಚ್ಚತ್ತು ಕೊಠಡಿಯನ್ನು ಬಿಟ್ಟು ಹೊರಗೇ ಬರಲಿಲ್ಲವಾದ್ದರಿಂದ ಹತಾಶನಾಗಿ ಸುಮ್ಮನಿದ್ದನು.

* * *

[ಪರದೆಯ ಮುಂದೆ]

ದೃಶ್ಯ ೩

ಮಧ್ಯಾಹ್ನ ನಿದ್ರೆಯಾದನಂತರ ನರಸಿಂಗರಾಯರು ಎಚ್ಚತ್ತು, ಕ್ರಾಪನ್ನು ಬಾಚಿಕೊಂಡು ಸಿದ್ಧರಾದರು. ಏಕಾಂತದಲ್ಲಿ ಮಾಲಿನಿಯ ಭೇಟಿಯೂ ಅವರಿಗೆ ಆಗಿರಲಿಲ್ಲ. ಅವರು ಅಲ್ಲಿಗೆ ಬಂದಾಗಿನಿಂದ ಮಾಲಿನಿಯೂ ತಮ್ಮನ್ನು ಕಾಣಲು ಬರಬಹುದು ಎಂದು ನಿರೀಕ್ಷಿಸುತ್ತಿದ್ದಂತೆ, ಈ ಮಧ್ಯಾಹ್ನವೂ ಅವಳನ್ನು ಸ್ವಾಗತಿಸಲು ಸಿದ್ಧರಾದರು.

ಬಾಗಿಲನ್ನು ತೆರೆದು ಪುಟ್ಟು ತಿಂಡಿತಟ್ಟೆಯನ್ನು ತೆಗೆದುಕೊಂಡು ಬಂದು ಭಾವನವರಿಗೆ ಅರ್ಪಿಸಿ "ನೀವು ಇವತ್ತು ಎಷ್ಟು ಹೊತ್ತಿಗೆ ಹೊರಗೆ ಹೋಗುತ್ತೀರಿ ಭಾವ?" ಎಂದು ಭಾವನವರ ಸರ್ಜಿನ ಕೋಟಿನ ಕಡೆಗೆ ಶಂಕೆಯ ದೃಷ್ಟಿಯನ್ನು ಬೀರುತ್ತಾ ಕೇಳಿದನು. ಭಾವನವರ ಕಾರ್ಯಕ್ರಮವನ್ನರಿತು ತಾನು ಕೆಲಸ ಮಾಡಬೇಕೆಂದು ಅವನ ಆಶಯ.

ಭಾವನವರು "ಪುಟ್ಟು, ನೀನು ಮಾಲಿನೀನ ಇಲ್ಲಿಗೆ ಕರೆದು ಕೊಂಡು ಬಂದರೆ, ನಿಂಗೆ ಎರಡಾಣೆ ಕೊಡುತ್ತೇನೆ ನೋಡು, ಯಾರಿಗೂ ಹೇಳಬೇಡ ; ನಾನು ಕರೆಯುತ್ತೇನೆ ಅಂತ ಮಾಲಿನಿ ಯನ್ನು ಕರೆದುಕೊಂಡು ಬಾ" ಎಂದರು.

ಪುಟ್ಟುವು ಕಾರ್ಯನಿರ್ವಾಹಕ್ಕೆ ಹೊರಟನು. ನರಸಿಂಗ ರಾಯರು "ಯಾರಿಗೂ ಹೇಳಬೇಡ" ಎಂದು ಹೇಳಿದ ಸೂಚನೆ ಯನ್ನು ಪುಟ್ಟುವು ಎರಡು ಆಣೆ ಕೊಡುವ ವಿಷಯಕ್ಕೆಂದು ಊಹಿಸಿ, ಮಾಲಿನಿಯನ್ನು ಕರೆದುಕೊಂಡುಬರುವ ವಿಷಯವನ್ನು ಗೋಪ್ಯವಾಗಿಡಲಿಲ್ಲ. ರಂಗಮ್ಮನವರಲ್ಲಿಗೇ ಮೊದಲು ಒಂದು ವದಂತಿ ಹೇಳಿದನು. ರಂಗಮ್ಮನವರು ಮಾಲಿನಿಗೆ ಬೇರೆ ಹೊಸ ಸೀರೆಯನ್ನುಟ್ಟುಕೊಳ್ಳುವಂತೆ ಹೇಳಿ, ಆಕೆ ಹೊಸ ಸೀರೆಯನ್ನುಟ್ಟು ಕೊಳ್ಳಲು ಹೂ ಮುಡಿಸಿದರು. ಪುಟ್ಟುವು ಮಾಲಿನಿಯನ್ನು "ಬಾ, ಬಾ," ಎಂದು— ತಡೆದು ತಡೆದು, ನಿಂತು ನಿಂತು, ಮುಂದುವರಿಯುತ್ತಿದ್ದ— ಮಾಲಿನಿಯನ್ನು ಭಾವನವರ ಕೊಠಡಿಯ ಬಳಿ ಕರೆದುಕೊಂಡು ಹೋದನು. ಆ ಕೊಠಡಿಯ ಬಾಗಿಲ ಬಳಿ ಬಂದು, ಮಾಲಿನಿಯು ಒಂದು ಪಕ್ಕಕ್ಕೆ ನಿಂತು ಬಿಟ್ಟಳು.

ಪುಟ್ಟುವು 'ಹೊರಗಡೆ ನಿಂತಿದ್ದಾಳೆ ನೋಡ್ರಿ. ಒಳಗೆ ಬಾ ಎಂದರೆ ಬರೋದಿಲ್ಲ" ಎಂದು ಕುಚೇಷ್ಟೆಮಾಡುತ್ತಾ, ಮಾಲಿನಿಯ ಕೈಹಿಡಿದು ಎಳೆಯುತ್ತಿದ್ದನು. ಕೆಂಪೇರಿದ ಮುಖದಲ್ಲಿ ನಾಚಿಕೆಯ ನಗುವನ್ನು ಉಕ್ಕಿಸುತ್ತಾ ಮಾಲಿನಿಯು, ಕೈಯನ್ನು ಸೆಳೆದು ಕೊಳ್ಳುವವಳಂತೆ ನಟಿಸುತ್ತಾ ದೇಹವನ್ನು ಕೊಠಡಿಯೊಳಗೆ ಸ್ವಲ್ಪ ಸ್ವಲ್ಪ ಬಾಗಿಸಿ, ತಮ್ಮನು ತನ್ನನ್ನು ಇನ್ನೂ ಹೆಚ್ಚು ವೇಗದಿಂದ ಒಳಕ್ಕೆ ಎಳೆಯಬಾರದೇ.. ಎಂದು ಮನಸ್ಸಿನಲ್ಲೇ ಎಂದುಕೊಳ್ಳು ತ್ತಿದ್ದಳು. ನರಸಿಂಗರಾಯರು, ಧೀರರಂತೆ ಗಾಂಭೀರ್ಯದಿಂದ ಮುಂದುವರಿದು ಬಂದು, ಪ್ರಸನ್ನವದನದವರಾಗಿ, "ಬಾ, ಬಾ ನನ್ನಲ್ಲಿಗೆ ಬರೋದಕ್ಕೆ ನಾಚಿಕೆಯೇ?" ಎಂದು ಸರಸವಾಗಿ ಹೇಳಿ ಮಾಲಿನಿಯ ಕೈಹಿಡಿದುಕೊಂಡು, ಅವಳನ್ನು ಒಳಗೆ ಕರೆದೊಯ್ದರು ಅನಂತರ ತಮ್ಮ ಷರಟಿನ ಜೇಬಿನಲ್ಲಿದ್ದ ಎರಡಾಣೆಯನ್ನು ಪುಟ್ಟುವಿಗೆ ಕೊಟ್ಟು "ಎರಡು ಕಾಸ್ಸ್ ತರುತ್ತೀಯಾ?" ಎಂದು ಹೇಳಿ, ನಸುನಕ್ಕರು. ಸಂಕೇತವನ್ನರಿತು ಪುಟ್ಟುವು ಎರಡಾಣೆ ಯನ್ನು ತೆಗೆದುಕೊಂಡು ಆಟಕ್ಕೆ ಓಡಿದನು.

* * *

ಕಳೆದುಹೋದ ಪತಾಕಿಯು ಸರಗಳನ್ನು ಹುಡುಕುತ್ತಿದ್ದ ಸರಸು ತನಗೆ ಯಾರೂ ಸಹಾಯಕರಾಗಲಿಲ್ಲವಾದ್ದರಿಂದ, ತನ್ನ ಭಾವನ ಮುಂದೆ ಹೇಳಲು ಭಾವನ ಕೊಠಡಿಗೆ ಹೊರಟಳು; ಬಾಗಿಲು ಮುಚ್ಚಿತ್ತು. ಭಾವನವರು ಮಲಗಿರುವರೋ ಏನೋ ನೋಡೋಣವೆಂದು ಸರಸು ಬಾಗಿಲನ್ನು ಕಡ್ಡಿ ಅಗಲದಷ್ಟು ನಿಶ್ಶಬ್ದವಾಗಿ ಓರೆಮಾಡಿ ಇಣಿಕಿನೋಡಿದಳು: ಭಾವನವರು ಮಲಗಿರಲಿಲ್ಲ, ಎದ್ದಿದ್ದರು. ಮಾಲಿನಿಗೆ ತಿಂಡಿತಿನ್ನಿಸುತ್ತಿದ್ದರು. ಸರಸು ಹಾಗೆಯೇ ನಿಶ್ಶಬ್ದಳಾಗಿ ಇಣಿಕಿನೋಡುತ್ತಾ ನಿಂತು ಬಿಟ್ಟಳು.

ಮಾಲಿನಿಯ ಲಜ್ಜೆಯು ಕ್ರಮೇಣ ಸ್ವಲ್ಪಸ್ವಲ್ಪ ಕಡಿಮೆಯಾಗಿ, ಅವಳು ಹೆಚ್ಚು ಹೆಚ್ಚು ಮಾತನಾಡುವಂತಾದಳು. ನರಸಿಂಗ ರಾಯರು ಟ್ರಂಕಿನೊಳಗಿಂದ ಸ್ನೋ ಬಾಟಲನ್ನು ತೆಗೆದು "ಇದನ್ನು ನಿನಗೋಸ್ಕರ ತಂದೆ!" ಎಂದು ಉಡುಗೊರೆ ಕೊಟ್ಟರು.

"ಇನ್ನೇನು ತಂದಿದ್ದೀರಿ" ಎಂದಳು ಮಾಲಿನಿ.

"ಇನ್ನೇನು ತಂದಿಲ್ಲ. ಇನ್ನೇನಾದರೂ ಬೇಕಿತ್ತೇನು?"

ಮಾಲಿನಿಯು ಉತ್ತರಕೊಡಲಿಲ್ಲ.

"ಹೇಳು! ಏನು ಬೇಕು ಹೇಳು! ನನ್ನ ಕೇಳಲಿಕ್ಕೆ ಭಯವೆ?"

'ಐದು ರುಪಾಯಿ ಬೇಕು!"

ನರಸಿಂಗರಾಯರಿಗೆ ಸಿಡಿಲುಬಡಿದ ಹಾಗೆ ಆಗದಿದ್ದರೂ ಅವರಿಗೆ ಆಶ್ಚರ್ಯವೇ ಆಯಿತು.

"ಊರಿಗೆ ಹೋಗ್ತಾ ಕೊಡುತ್ತೇನೆ!"

"ನಾನು ಇಲ್ಲಿಗೆ ಪುನಃ ಬರೋದಕ್ಕೆ ಆಗುವುದಿಲ್ಲ!"

"ಈಗ ಇಲ್ಲವಲ್ಲಾ!"

"ಮತ್ತೆ ಆ ಮೇಲೆ ಹೇಗೆ ಬರುತ್ತೆ?"

"ಸುಮ್ಮನೆ ಹೇಳ್ದೆ; ಕೊಟ್ಬುಬಿಟ್ಟರೆ ಪುನಃ ಬರೋದಿಲ್ಲಾ ಅಂತ"

"ಕೊಟ್ಟರೆ ಬರ್‍ತೇನೆ!"

"ಖಂಡಿತವಾಗಿ?"

'ಖಂಡಿತ!"

"ಐದು ರೂಪಾಯಿ ಏಕೆ ಬೇಕು?"

"ಶಿಲ್ಕು ಜಾಕೀಟು ಎರಡು ಹೊಲಿಸಿಕೊಳ್ಳಬೇಕು!"

"ನಾನು ಊರಿನಿಂದ ಎರಡು ಹೊಲಿಸಿ ಕಳುಹಿಸುತ್ತೇನೆ!"

"ಹರಿಹರದಿಂದಾ?!"

"ನನಗೆ ಮುಂಚೆ ಗೊತ್ತಾಗಲಿಲ್ಲ; ಗೊತ್ತಿದ್ರೆ ಐದಲ್ಲ ಹತ್ತು ಕೊಡುತ್ತಿದ್ದೆ. ದುಡ್ಡು ಜಾಸ್ತಿ ತರಲಿಲ್ಲ!"

"ಹಾಗಾದರೆ ಈಗ ಕೊಡೋದಿಲ್ಲವೆ?"

"ತಂದಿದ್ದೆ; ನಿನ್ನೆ ಸಾಯಂಕಾಲ ನಮ್ಮೂರವರೊಬ್ಬರು ಸಿಕ್ಕಿದರು. ಅವರಿಗೆ ದುಡ್ಡು ಸಾಲದೇ ಬಂದಿತ್ತಂತೆ. ನನ್ನ ಕೇಳಿದರು; ನಾನು ಹತ್ತುರೂಪಾಯಿ ಕೊಟ್ಟೆ. ಈಗ ರೈಲು ಖರ್ಚಿಗೆ ಮಾತ್ರ ನಾಲ್ಕುವರೆ ರೂಪಾಯಿ ಇದೆ. ಇವತ್ತು ಸಾಯಂಕಾಲ ಆರತಿ ತಟ್ಟೆಗೆ ಹಾಕಲು ಬೇರೆ ನಾಲ್ಕು ರುಪಾಯಿಗಳು ಮಾತ್ರ ಇದೆ"

"ರೈಲುಖರ್ಚಿಗೆ, ಟಿಕೀಟಿಗೆ, ದುಡ್ಡು ಕೊಡುತ್ತಾರೆ!"

"ಯಾರು? ಮಾವನವರೆ?"

"ಹೂಂ!"

"ನಿನಗೆ ಹೇಗೆ ಗೊತ್ತು?"

"ಮೊನ್ನೆ ಅವರೇ ಹೇಳಿದರು,.. ನಮ್ಮ ತಾಯಿಗಾ ಮುಂದೆ: ರೈಲುಖರ್ಚಿಗೆ ಹತ್ತುರುಪಾಯಿ ಕೊಡುತ್ತೇನೆ ಅಂತ!"

"ಖಂಡಿತವಾಗಿ?"

"ಹೂಂ!"

"ಹಾಗಾದ್ರೆ ನಾಲ್ಕು ರೂಪಾಯಿ ಈಗಲೇ ನಿನಗೆ ಕೊಡುತ್ತೇನೆ"

ಕೂಡಲೆ ನರಸಿಂಗರಾಯರು ಟ್ರಂಕನ್ನು ತೆಗೆಯಲು ಉದ್ಯುಕ್ತರಾಗುವರು.

[ಪರದೆ ಬೀಳುವುದು.]

[ಪರದೆಯ ಹಿಂದೆ]

ಇನ್ನೂ ಸ್ವಲ್ಪ ಹೊತ್ತು ಕಳೆದನಂತರ ಸರಸು ಅಡಿಗೆಮನೆಗೆ ರಂಗಮ್ಮನವರಲ್ಲಿಗೆ ಬಂದು "ಅಮ್ಮಾ! ಅಮ್ಮಾ! ಭಾವ ಮಾಲಿನಿಗೆ ಏನೋ ಡಬ್ಬಿ ಕೊಟ್ಟರು" ಎಂದಳು.

"ಎಂಥಾ ಡಬ್ಬೀನೆ?"

"ಎಂಥಾದ್ದೋ; ಆಮೇಲೆ—"

"ಏನಾಮೇಲೆ?"

"—ಆಮೇಲೆ ರೂಪಾಯಿ ಕೊಟ್ರು"

"ಎಷ್ಟು?"

"ಯಾರಿಗೆ ಗೊತ್ತು! ಆ ಮೇಲೆ—"

"ಆ ಮೇಲೆ?"

"ಆ ಮೇಲೆ— ನಾಲ್ಕು ಕೊಟ್ಟರು"

"ಏನೇ"

'ಮತ್ತಮ್ಮಾ—ಆ ಮೇಲೆ—'

"ಆ ಮೇಲೆ?—"

"ಮಾಲಿನಿ ಕೊಟ್ಳು!"

"ಏನು?"

"ಒಂದು ಕೊಟ್ಳು"

"ಏನ್ನೇ!"

"ಅದೇ ಅಮ್ಮಾ—ಮುತ್ತು!"

ಟಿಕೇಟು ಎಷ್ಟೋ? '' ಎಂದರು. ನರಸಿಂಗರಾಯರು—ನಿಧಾನವಾಗಿ ಮನಸ್ಸಿನಲ್ಲಿಯೇ ಏನನ್ನೋ ಗುಣಿಸಿಕೊಂಡು— '' ಇಂಟರ್ ಟಿಕೇಟೇ? ಮೂರನೆ ತರಗತಿಯ ಎರಡರಷ್ಟು—ಏಳುರುಪಾಯಿ-ಹದಿಮೂರಾಣೆ '' ಎನ್ನುವರು.

* * *

(ಪರದೆಯು ಬೀಳುವುದು)

[ಪರದೆಯ ಹಿಂದೆ: ಅಡಿಗೆಯ ಮನೆ]

ರಂಗಮ್ಮನವರು ಪುಟ್ಟುವನ್ನು ದರದರ ಎಳೆದುಕೊಂಡು ಬಂದು, ಗಲ್ಲವನ್ನು ಚಿವುಟಿ, "ಸದ್ದುಮಾಡಬೇಡ, ಗಟ್ಟಿಯಾಗಿ ಅತ್ತರೆ ಇನ್ನೂ ಏಟುಬಿದ್ದೀತು. ಬಾ ಅಂದ್ರೆ ಅಲ್ಲೇ ಕುಳಿತು ಕೊಂಡು ಹಟಮಾಡಿ, ಅವರೆದುರಿಗೆ ಸಿಕ್ಕಾಪಟ್ಟೆ ಮಾತಾಡ್ತೀಯಾ!" ಎಂದು ಗದರಿಸುವರು.

ಅಷ್ಟುಹೊತ್ತಿಗೆ ಪುಟ್ಟು "ತಿಂಡಿ! ತಿಂಡಿ!! ನಂಗೆ ತಿಂಡಿ!' ಎಂದು ಅರಚುತ್ತಾ ಬರುವನು.

ರಂಗಮ್ಮನವರು, '' ಬಾಯಿಮುಚ್ಚೋ. ಅವರು ಏನು ಅಂದುಕೊಂಡಾರು. ತಿಂಡಿ ಎಂದೂ ಕಂಡಿರಲಿಲ್ಲವೇ !'' ಎನ್ನುವರು.

ಪುಟ್ಟು, ಸ್ತಬ್ಧನಾಗಿ ''ಎಂದು ಮಾಡಿಕ್ತೋ'' ಎಂದು ಮೆಲ್ಲನೆ ಗೊಣಗುಟ್ಟುವನು.

* * *

[ಪರದೆಯ ಮುಂದೆ]

ದೃಶ್ಯ ೨

ವಿ ಷ್ಕಂ ಭ ಕ

ಶೇಷಪ್ಪನವರು ನರಸೂಗೆ ಕೊಟ್ಟಿದ್ದರ ಪೈಕಿ, ಎರಡು ಪಟಾಕಿ-ಸರಗಳೂ, ಒಂದು ಮತಾಪಿನ ಪೆಟ್ಟಿಗೆಯೂ, ಎರಡು ನಕ್ಷತ್ರ-ಕಡ್ಡಿಗಳೂ ಮಾಯವಾಗಿದ್ದುವು. ನರಸೂಗೆ ಪುಟ್ಟುವಿನ ಮೇಲೆ ಪೂರ ಗುಮಾನಿ. ಪುಟ್ಟುವು ಇಲ್ಲವೆನ್ನುತ್ತಿದ್ದರೂ ತಪ್ಪುಮಾಡಿದ್ದು ನಿಜ. ಕದ್ದ ಮಾಲನ್ನು ಇಡಲು ಅವನು ಬಹಳ ಬುದ್ಧಿವಂತಿಕೆ ಯಿಂದ, ಮಧ್ಯಾಹ್ನ ಭಾವ ಮಲಗಿದ್ದಾಗ ಅವರ ಸರ್ಜು ಅಂಗಿ ಯಲ್ಲಿ ಅದನ್ನು ತುರುಕಿದ್ದನು. ಭಾವನು ಎಚ್ಚರಾಗುವುದರೊಳಗೆ ಅದನ್ನು ಪುನಃ ಬೇರೆ ಕಡೆಗೆ ಸಾಗಿಸುವ ಹಂಚಿಕೆಯಲ್ಲಿದ್ದನು. ಆದರೆ ಭಾವನವರು ಎಚ್ಚತ್ತು ಕೊಠಡಿಯನ್ನು ಬಿಟ್ಟು ಹೊರಗೇ ಬರಲಿಲ್ಲವಾದ್ದರಿಂದ ಹತಾಶನಾಗಿ ಸುಮ್ಮನಿದ್ದನು.

* * *

[ಪರದೆಯ ಮುಂದೆ]

ದೃಶ್ಯ ೩

ಮಧ್ಯಾಹ್ನ ನಿದ್ರೆಯಾದನಂತರ ನರಸಿಂಗರಾಯರು ಎಚ್ಚತ್ತು, ಕಾಫಿಯನ್ನು ಬಾಚಿಕೊಂಡು ಸಿದ್ಧರಾದರು. ಏಕಾಂತದಲ್ಲಿ ಮಾಲಿನಿಯ ಭೇಟಿಯು ಅವರಿಗೆ ಆಗಿರಲಿಲ್ಲ. ಅವರು ಅಲ್ಲಿಗೆ ಬಂದಾಗಿನಿಂದ ಮಾಲಿನಿಯು ತಮ್ಮನ್ನು ಕಾಣಲು ಒಳಬಹುದು ಎಂದು ನಿರೀಕ್ಷಿಸುತ್ತಿದ್ದಂತೆ, ಈ ಮಧ್ಯಾಹ್ನವೂ ಅವಳನ್ನು ಸ್ವಾಗತಿಸಲು ಸಿದ್ಧರಾದರು.

ಬಾಗಿಲನ್ನು ತೆರೆದು ಪುಟ್ಟು ತಿಂಡಿತಟ್ಟೆಯನ್ನು ತೆಗೆದುಕೊಂಡು ಬಂದು ಭಾವನವರಿಗೆ ಅರ್ಪಿಸಿ '' ನೀವು ಇವತ್ತು ಎಷ್ಟು ಹೊತ್ತಿಗೆ ಹೊರಗೆ ಹೋಗುತ್ತೀರಿ ಭಾವ ?'' ಎಂದು ಭಾವನವರ ಸರ್ಜಿನ ಕೋಟಿನ ಕಡೆಗೆ ಶಂಕೆಯ ದೃಷ್ಟಿಯನ್ನು ಬೀರುತ್ತಾ ಕೇಳಿದನು. ಭಾವನವರ ಕಾರ್ಯಕ್ರಮವನ್ನರಿತು ತಾನು ಕೆಲಸ ಮಾಡಬೇಕೆಂದು ಅವನ ಆಶಯ.

ಭಾವನವರು '' ಪುಟ್ಟು, ನೀನು ಮಾಲಿನೀನ ಇಲ್ಲಿಗೆ ಕರೆದು ಕೊಂಡು ಬಂದರೆ, ನಿಂಗೆ ಎರಡಾಣೆ ಕೊಡುತ್ತೇನೆ ನೋಡು. ಯಾರಿಗೂ ಹೇಳಬೇಡ ; ನಾನು ಕರೆಯುತ್ತೇನೆ ಅಂತ ಮಾಲಿನಿ ಯನ್ನು ಕರೆದುಕೊಂಡು ಬಾ'' ಎಂದರು.

ಪುಟ್ಟುವು ಕಾರ್ಯನಿರ್ವಾಹಕ್ಕೆ ಹೊರಟನು. ನರಸಿಂಗ ರಾಯರು '' ಯಾರಿಗೂ ಹೇಳಬೇಡ'' ಎಂದು ಹೇಳಿದ ಸೂಚನೆ ಯನ್ನು ಪುಟ್ಟುವು ಎರಡು ಆಣೆ ಕೊಡುವ ವಿಷಯಕ್ಕೆಂದು ಊಹಿಸಿ, ಮಾಲಿನಿಯನ್ನು ಕರೆದುಕೊಂಡುಬರುವ ವಿಷಯವನ್ನು ಗೋಪ್ಯವಾಗಿಡಲಿಲ್ಲ. ರಂಗಮ್ಮನವರಲ್ಲಿಗೇ ಮೊದಲು ಒಂದು ವದಂತಿ ಹೇಳಿದನು. ರಂಗಮ್ಮನವರು ಮಾಲಿನಿಗೆ ಬೇರೆ ಹೊಸ ಸೀರೆಯನ್ನುಟ್ಟುಕೊಳ್ಳುವಂತೆ ಹೇಳಿ, ಆಕೆ ಹೊಸ ಸೀರೆಯನ್ನುಟ್ಟು ಕೊಳ್ಳಲು ಹೂ ಮುಡಿಸಿದರು. ಪುಟ್ಟುವು ಮಾಲಿನಿಯನ್ನು '' ಬಾ, ಬಾ, '' ಎಂದು— ತಡೆದು ತಡೆದು, ನಿಂತು ನಿಂತು, ಮುಂದುವರೆಯುತ್ತಿದ್ದ-- ಮಾಲಿನಿಯನ್ನು ಭಾವನವರ ಕೊಠಡಿಯ ಬಳಿ ಕರೆದುಕೊಂಡು ಹೋದನು. ಆ ಕೊಠಡಿಯ ಬಾಗಿಲ ಬಳಿ ಬಂದು, ಮಾಲಿನಿಯು ಒಂದು ಪಕ್ಕಕ್ಕೆ ನಿಂತು ಬಿಟ್ಟಳು.

ಪುಟ್ಟುವು ' ಹೊರಗಡೆ ನಿಂತಿದ್ದಾಳೆ ನೋಡ್ರಿ. ಒಳಗೆ ಬಾ ಎಂದರೆ ಬರೋದಿಲ್ಲ'' ಎಂದು ಕುಚೇಷ್ಟೆಮಾಡುತ್ತಾ, ಮಾಲಿನಿಯ ಕೈಹಿಡಿದು ಎಳೆಯುತ್ತಿದ್ದನು. ಕೆಂಪೇರಿದ ಮುಖದಲ್ಲಿ ನಾಚಿಕೆಯ ನಗುವನ್ನು ಉಕ್ಕಿಸುತ್ತಾ, ಮಾಲಿನಿಯು, ಕೈಯನ್ನು ಸೆಳೆದು ಕೊಳ್ಳುವವಳಂತೆ ನಟಿಸುತ್ತಾ ದೇಹವನ್ನು ಕೊಠಡಿಯೊಳಗೆ ಸ್ವಲ್ಪ ಸ್ವಲ್ಪ ಬಾಗಿಸಿ, ತಮ್ಮನು ತನ್ನನ್ನು ಇನ್ನೂ ಹೆಚ್ಚು ವೇಗದಿಂದಾ ಒಳಕ್ಕೆ ಎಳೆಯಬಾರದೇ.. ಎಂದು ಮನದಲ್ಲೇ ಎಂದುಕೊಳ್ಳು ತ್ತಿದ್ದಳು. ನರಸಿಂಗರಾಯರು, ಧೀರರಂತೆ ಗಾಂಭೀರ್ಯದಿಂದ ಮುಂದುವರಿದು ಬಂದು, ಪ್ರಸನ್ನವದನದವರಾಗಿ, '' ಬಾ, ಬಾ, ನನ್ನಲ್ಲಿಗೆ ಬರೋದಕ್ಕೆ ನಾಚಿಕೆಯೇ ?'' ಎಂದು ಸರಸವಾಗಿ ಹೇಳಿ, ಮಾಲಿನಿಯ ಕೈಹಿಡಿದುಕೊಂಡು, ಅವಳನ್ನು ಒಳಗೆ ಕರೆದೊಯ್ದರು. ಅನಂತರ ತಮ್ಮ ಷರಟಿನ ಜೇಬಿನಲ್ಲಿದ್ದ ಎರಡಾಣೆಯನ್ನು ಪುಟ್ಟುವಿಗೆ ಕೊಟ್ಟು '' ಎರಡು ಕಾರ್ಡು ತರುತ್ತೀಯಾ ? '' ಎಂದು ಹೇಳಿ, ನಸುನಕ್ಕರು. ಸಂಕೇತವನ್ನರಿತು ಪುಟ್ಟುವು ಎರಡಾಣೆ ಯನ್ನು ತೆಗೆದುಕೊಂಡು ಆಟಕ್ಕೆ ಓಡಿದನು.

* * *

ಕಳೆದುಹೋದ ಪತಾಕಿಯ ಸರಗಳನ್ನು ಹುಡುಕುತ್ತಿದ್ದ ಸರಸು ಳಿಗೆ ಯಾರೂ ಸಹಾಯಕರಾಗಲಿಲ್ಲವಾದ್ದರಿಂದ, ತನ್ನ ಭಾವನ ಮುಂದೆ ಹೇಳಲು ಭಾವನ ಕೊಠಡಿಗೆ ಹೊರಟಳು; ಬಾಗಿಲು ಮುಚ್ಚಿತ್ತು. ಭಾವನವರು ಮಲಗಿರುವರೋ ಏನೋ ನೋಡೋಣವೆಂದು ಸರಸು ಬಾಗಿಲನ್ನು ಕಡ್ಡಿ ಅಗಲದಷ್ಟು ನಿಶ್ಶಬ್ದವಾಗಿ ಓರೆಮಾಡಿ ಇಣಿಕಿನೋಡಿದಳು: ಭಾವನವರು ಮಲಗಿರಲಿಲ್ಲ, ಎದ್ದಿದ್ದರು. ಮಾಲಿನಿಗೆ ತಿಂಡಿತಿನ್ನಿಸುತ್ತಿದ್ದರು. ಸರಸು ಹಾಗೆಯೇ ನಿಶ್ಶಬ್ದವಾಗಿ ಇಣಿಕಿನೋಡುತ್ತಾ ನಿಂತು ಬಿಟ್ಟಳು.

ಮಾಲಿನಿಯ ಲಜ್ಜೆಯು ಕ್ರಮೇಣ ಸ್ವಲ್ಪಸ್ವಲ್ಪ ಕಡಿಮೆಯಾಗಿ, ಅವಳು ಹೆಚ್ಚು ಹೆಚ್ಚು ಮಾತನಾಡುವಂತಾದಳು. ನರಸಿಂಗರಾಯರು ಟ್ರಂಕಿನೊಳಗಿಂದ ಸ್ನೋ ಬಾಟಲನ್ನು ತೆಗೆದು "ಇದನ್ನು ನಿನಗೋಸ್ಕರ ತಂದೆ!" ಎಂದು ಉಡುಗೊರೆ ಕೊಟ್ಟರು.

"ಇನ್ನೇನು ತಂದಿದ್ದೀರಿ" ಎಂದಳು ಮಾಲಿನಿ.

"ಇನ್ನೇನು ತಂದಿಲ್ಲ. ಇನ್ನೇನಾದರೂ ಬೇಕಿತ್ತೇನು?"

ಮಾಲಿನಿಯು ಉತ್ತರಕೊಡಲಿಲ್ಲ.

"ಹೇಳು! ಏನು ಬೇಕು ಹೇಳು! ನನ್ನ ಕೇಳಲಿಕ್ಕೆ ಭಯವೆ?"

'ಐದು ರುಪಾಯಿ ಬೇಕು!"

ನರಸಿಂಗರಾಯರಿಗೆ ಸಿಡಿಲುಬಡಿದ ಹಾಗೆ ಆಗದಿದ್ದರೂ ಅವರಿಗೆ ಆಶ್ಚರ್ಯವೇ ಆಯಿತು.

"ಊರಿಗೆ ಹೋಗ್ತಾ ಕೊಡುತ್ತೇನೆ!"

"ನಾನು ಇಲ್ಲಿಗೆ ಪುನಃ ಬರೋದಕ್ಕೆ ಆಗುವುದಿಲ್ಲ!"

"ಈಗ ಇಲ್ಲವಲ್ಲಾ!"

"ಮತ್ತೆ ಆ ಮೇಲೆ ಹೇಗೆ ಬರುತ್ತೆ?"

"ಸುಮ್ಮನೆ ಹೇಳ್ತೆ; ಕೊಟ್ಟುಬಿಟ್ಟರೆ ಪುನಃ ಬರೋದಿಲ್ಲಾ ಅಂತ"

"ಕೊಟ್ಟರೆ ಬರ್‍ತೇನೆ!"

"ಖಂಡಿತವಾಗಿ?"

'ಖಂಡಿತ!"

"ಐದು ರೂಪಾಯಿ ಏಕೆ ಬೇಕು?"

"ಶಿಲ್ಕು ಜಾಕೀಟು ಎರಡು ಹೊಲಿಸಿಕೊಳ್ಳಬೇಕು!"

"ನಾನು ಊರಿನಿಂದ ಎರಡು ಹೊಲಿಸಿ ಕಳುಹಿಸುತ್ತೇನೆ!"

"ಹರಿಹರದಿಂದಾ?!"

"ನನಗೆ ಮುಂಚೆ ಗೊತ್ತಾಗಲಿಲ್ಲ; ಗೊತ್ತಿದ್ರೆ ಐದಲ್ಲ ಹತ್ತು ಕೊಡುತ್ತಿದ್ದೆ. ದುಡ್ಡು ಜಾಸ್ತಿ ತರಲಿಲ್ಲ!"

"ಹಾಗಾದರೆ ಈಗ ಕೊಡೋದಿಲ್ಲವೆ?"

"ತಂದಿದ್ದೆ; ನಿನ್ನೆ ಸಾಯಂಕಾಲ ನಮ್ಮೂರವರೊಬ್ಬರು ಸಿಕ್ಕಿದರು. ಅವರಿಗೆ ದುಡ್ಡು ಸಾಲದೇ ಬಂದಿತ್ತಂತೆ. ನನ್ನ ಕೇಳಿದರು; ನಾನು ಹತ್ತುರೂಪಾಯಿ ಕೊಟ್ಟೆ. ಈಗ ರೈಲು ಖರ್ಚಿಗೆ ಮಾತ್ರ ನಾಲ್ಕುವರೆ ರೂಪಾಯಿ ಇದೆ. ಇವತ್ತು ಸಾಯಂಕಾಲ ಆರತಿ ತಟ್ಟೆಗೆ ಹಾಕಲು ಬೇರೆ ನಾಲ್ಕು ರುಪಾಯಿಗಳು ಮಾತ್ರ ಇದೆ"

"ರೈಲುಖರ್ಚಿಗೆ, ಟಿಕೀಟಿಗೆ, ದುಡ್ಡು ಕೊಡುತ್ತಾರೆ!"

"ಯಾರು? ಮಾವನವರೆ?"

"ಹೂಂ!"

"ನಿನಗೆ ಹೇಗೆ ಗೊತ್ತು?"

"ಮೊನ್ನೆ ಅವರೇ ಹೇಳಿದರು... ನಮ್ಮ ತಾಯಿಯ ಮುಂದೆ: ರೈಲುಖರ್ಚಿಗೆ ಹತ್ತುರುಪಾಯಿ ಕೊಡುತ್ತೇನೆ ಅಂತ!"

"ಖಂಡಿತವಾಗಿ?"

"ಹೂಂ!"

"ಹಾಗಾದ್ರೆ ನಾಲ್ಕು ರೂಪಾಯಿ ಈಗಲೇ ನಿನಗೆ ಕೊಡುತ್ತೇನೆ"

ಕೂಡಲೆ ನರಸಿಂಗರಾಯರು ಟ್ರಂಕನ್ನು ತೆಗೆಯಲು ಉದ್ಯುಕ್ತರಾಗುವರು.

[ಪರದೆ ಬೀಳುವುದು.]

[ಪರದೆಯ ಹಿಂದೆ]

ಇನ್ನೂ ಸ್ವಲ್ಪ ಹೊತ್ತು ಕಳೆದನಂತರ ಸರಸು ಅಡಿಗೆಮನೆಗೆ ರಂಗಮ್ಮನವರಲ್ಲಿಗೆ ಬಂದು "ಅಮ್ಮಾ! ಅಮ್ಮಾ! ಭಾವ ಮಾಲಿನಿಗೆ ಏನೋ ಡಬ್ಬಿ ಕೊಟ್ಟರು" ಎಂದಳು.

"ಎಂಥಾ ಡಬ್ಬೀನೆ?"

"ಎಂಥಾದ್ದೋ; ಆಮೇಲೆ—"

"ಏನಾಮೇಲೆ?"

"—ಆಮೇಲೆ ರೂಪಾಯಿ ಕೊಟ್ರು"

"ಎಷ್ಟು?"

"ಯಾರಿಗೆ ಗೊತ್ತು! ಆ ಮೇಲೆ—"

"ಆ ಮೇಲೆ?"

"ಆ ಮೇಲೆ— ನಾಲ್ಕು ಕೊಟ್ಟರು"

"ಏನೇ"

'ಮುತ್ತಮ್ಮಾ—ಆ ಮೇಲೆ—'

"ಆ ಮೇಲೆ?—"

"ಮಾಲಿನಿ ಕೊಟ್ಟು!"

"ಏನು?"

"ಒಂದು ಕೊಟ್ಟು"

"ಏನ್ನೇ?"

"ಅದೇ ಅಮ್ಮಾ—ಮುತ್ತು!"

' ಥೂ ಕತ್ತೆ— ನಿಂಗೆ ಹೇಗೆ ಗೊತ್ತೆ?"

"ಬಾಗಿಲಸಂದೀಲಿ ಇಣಿಕಿ ನೋಡುತ್ತಿದ್ದೆ!"

"ಕತ್ತೆ! ಯಾರು ಹೇಳಿದ್ದು ನಿನಗೆ; ಹಾಗೆಲ್ಲಾ ಇಣಿಕಿ ನೋಡಬಾರ್ದು. ಹಂಗೆಲ್ಲಾ ಹೇಳಬಾರ್ದು!''

"ಮತ್ತೇ — ಯಾಕವ್ಮಾ — ಹೇಳೂವರೆಗೂ ಕೇಳ್ತಾ— ಇದ್ದದ್ದು?"

* * *

[ಪರದೆಯ ಮುಂದೆ]

ದೃಶ್ಯ ೪

ಆ ದಿನ ಸಂಜೆ ಶೇಷಪ್ಪನವರ ಮನೆಯಲ್ಲಿ ಗಡಿಬಿಡಿ— ಅಲ್ಲ ಅಲ್ಲ; ವಿಜೃಂಭಣೆ, ಉತ್ಸಾಹ. ದಂಪತಿಗಳಿಗೆ ಆರತಿ. ಹೆಂಗುಸರೆಲ್ಲಾ ಕಿಕ್ಕಿರಿದಿದ್ದಾರೆ. ರಂಗಮ್ಮನವರು ಬಹಳ ಕೆಲಸದಲ್ಲಿದ್ದಾರೆ. ಎಲ್ಲರಿಗೂ ಉಪಚಾರಹೇಳುವುದು, ಸ್ವಾಗತವೀಯುವುದು, ಅರಿಸಿನ-ಕುಂಕುಮ ಕೊಡುವುದು, ಇವೆಲ್ಲವೂ ಅವರದೇ ಕೆಲಸವಾಗಿದೆ. ಹೆಂಗುಸರು ಮಾತಾಡುತ್ತಿದ್ದಾರೆ. ಎದುರು ಬೀದಿಯ ಸಿಂಗಮ್ಮನವರು "ವರಸಾಮ್ಯ ಎಷ್ಟು ಚೆನ್ನಾಗಿದೆ ನೋಡಿ" ಎಂದರು. ಇನ್ನೊಬ್ಬರು "ಅವರಿಗೇನು ಕಡಿಮೆಯಮ್ಮಾ, ವರಸಾಮ್ಯವೊಂದೇ ಅಲ್ಲ. ಬೀಗರ ಸಾಮ್ಯವೂ ಚೆನ್ನಾಗಿದೆ" ಎಂದರು. ಮೂರನೆಯವರು "ಹಾಗಂದ್ರೆ?" ಎಂದು ಕೇಳಿದರು. ಎರಡನೆಯವರು "ಇಬ್ಬರಿಗೂ ಬೇಕಾದಹಾಗಿದೆ; ಇನ್ನೇನಾಗಬೇಕು. ಅಲ್ವೇ ರಂಗಮ್ಮನವರೆ!' ಎಂದರು. ರಂಗಮ್ಮನವರು "ಹೌದಮ್ಮಾ, ನಿಮ್ಮ ಜಯಕೆ" ಎನ್ನುವರು. ಅರಿಸಿನ ಕುಂಕುಮವನ್ನು ತೆಗೆದುಕೊಂಡು ಹೆಂಗುಸರು ಅವರವರ ಮನೆಗೆ ತೆರಳುವರು.

[ತೆರೆ ಬೀಳುವುದು.]

* * *

[ಪರದೆಯ ಹಿಂದೆ]

ಅರಸಿನ-ಕುಂಕುಮಕ್ಕೆ ಬಂದ ಹೆಂಗುಸರು ತಮ್ಮ ತಮ್ಮ ಮನೆಗಳಿಗೆ ಹಿಂದಿರುಗುತ್ತಿರುವರು. ಸಿಂಗಮ್ಮನವರು "ಅದೇನು ವರಸಾಮ್ಯ! ಒಬ್ಬರಿಗೊಬ್ಬರನ್ನು ಮಾಡಿದ್ದ ಅಂತ ಕಾಣುತ್ತೆ ಬ್ರಹ್ಮ! ವರ ಇದ್ದಾನೆ ಕೋತೀ ಹಾಗೆ; ಕನ್ಯಾ ಇದ್ದಾಳೆ ಗೂಬೆಯಹಾಗೆ" ಎನ್ನುವರು. ಇನ್ನೊಬ್ಬರು "ವರಸಾಮ್ಯವೊಂದೇ ಅಲ್ಲ, ಬೀಗರ ಸಾಮ್ಯವೂ ಚೆನ್ನಾಗಿದೆ" ಎನ್ನುವರು. ಮೂರನೆಯವರು "ಹಾಗಂದ್ರೆ?'' ಎಂದರು. ಎರಡನೆಯವರು "ಇಬ್ಬರಿಗೂ ಬೇಕಾದಹಾಗಿದೆ — ಸಾಲ ಯಾರಿಗೂ ಕಡಿಮೆ ಇಲ್ಲ — ಇನ್ನೇನಾಗಬೇಕು. ಅಲ್ವೇ ಸಿಂಗಮ್ಮನವರೇ!'' ಎನ್ನುವರು.

* * *

[ಪರದೆಯ ಹಿಂದೆ]

ಅದೇ ರಾತ್ರಿ; ಮಹಡಿಯ ಮೇಲೆ ಕೊಠಡಿಯಲ್ಲಿ ಸಂಗು ಮಲಗಿರುವನು. ಕೆಳಗೆ ಪಡಸಾಲೆಯಲ್ಲಿ ಮಿಕ್ಕವರೆಲ್ಲರೂ ಮಲಗಿರುವರು. ಮಾಲಿನಿ, ನಿದ್ರೆಬಂದವಳಂತೆ ನಟಿಸಿ ಮಲಗಿರುವಳು. ರಂಗಮ್ಮನವರೂ, ಶೇಷಪ್ಪನವರೂ ಮಾತನಾಡುತ್ತಿರುವರು.

ರಂಗಮ್ಮನವರು, "ಮಾಲಿನಿಯ ಗಂಡನಿಗೆ ರೈಲುಖರ್ಚಿಗೆ ಹತ್ತು ರೂಪಾಯಿ ಕೊಟ್ರೇನೂ?'' ಎಂದು ಕೇಳುವರು.

ಶೇಷಪ್ಪನವರು "ಇಲ್ಲಾ'' ಎಂದು ಹೇಳುವರು.

"ನಾಳೆ ಬೆಳಿಗ್ಗೆ ಊರಿಗೆ ಹೋಗ್ತಾ ಕೊಡತೀರೇನು? ಆರು ಗಂಟೆಗೆ ಹೊರಟುಹೋಗುತ್ತಾರೆ!''

"ಕೊಡೋದೇ ಇಲ್ಲ!"

"ಅಯ್ಯೋ! ಹಾಗಂದ್ರೆ"

"ಹಾಗಂದ್ರೇ, ಈಗಾಗಲೇ ಮಾರ್ವಾಡಿಯ ಹತ್ತಿರ ತಂದ ಹಣವೆಲ್ಲಾ ಖರ್ಚಾಗಿ, ಅಂಗಡಿಗಳಲ್ಲಿ ಸಾಮಾನು, ದಿನಸಿಗಳು, ಬಟ್ಟೆಗಳು ತಂದ ಸಾಲವೆಲ್ಲಾ ಹಾಗೆ ನಿಂತಿದೆ. ಈ ಸೋಫಾ, ಖುರ್ಚಿಗಳು, ಪರದೆಗಳು, ಪಟಗಳು ಇವುಗಳ ಬಾಡಿಗೆ ಸಹ ಇನ್ನೂ ಕೊಟ್ಟಿಲ್ಲ. ನನ್ನ ಜೇಬಿನೊಳಗೆ ಮೂರುವರೆ ಆಣೆ ಇದೆ. ಕತ್ತಿಗೆ ಉರುಲುಹಾಕಿಕೊಂಡರೂ ಎಲ್ಲಿಯೂ ಮೂರುಕಾಸು ಸಿಗುವುದಿಲ್ಲ!"

"ರೈಲುಖರ್ಚಿಗೆ ಈಗಲ್ದೆ ಇನ್ಯಾವಾಗ ಕೊಡೋದು? ಇದೇ ಮೊದಲನೆ ಸಲ ಬಂದಿರೋದು. ಈಗ ಕೊಡೋದೇ ಮರ್ಯಾದೆ! ಮುಂದಿನ ಸಲ ಕೊಡೋಕಾಗುತ್ತೆಯೆ?''

"ಇಲ್ನೋಡು, ಇನ್ನೇನಾದರೂ ಜಾಸ್ತಿ ಮಾಡಲಿಕ್ಕೆ ಹೋದರೆ ಅವರ ಎದುರಿಗೇ ನಮ್ಮ ಮರ್ಯಾದೆ ಹೋಗುತ್ತೆ. ನೀನು ಸುಮ್ಮನಿರು.''

ರಂಗಮ್ಮನವರು ಸುಮ್ಮಗಾದರು; ಯತ್ನವಿರಲಿಲ್ಲ. ಎಲ್ಲರೂ ಮಲಗಿರು; ಮಾಲಿನಿಗೆ ನಿದ್ರೆಬರಲಿಲ್ಲ.

* * *

ರಾತ್ರಿಯ ಸುಮಾರು ಎರಡುಗಂಟೆ ಸಮಯ. ಮಾಲಿನಿಯ ಹೊರತು ಎಲ್ಲರೂ ಮೈಮರೆತು ನಿದ್ರಿಸುತ್ತಿದ್ದಾರೆ. ಮೂಲೆಯಲ್ಲಿ ಸಣ್ಣದಾಗಿ ಉರಿಯುತ್ತಿದ್ದ ದೀಪವು ಮಬ್ಬುಬೆಳಕನ್ನು ಹರಡುತ್ತಿದೆ. ಮಾಲಿನಿಯು ಮೆಲ್ಲಗೆ ಎದ್ದು ಎಲ್ಲರನ್ನೂ ಗಮನಿಸಿ, ಆ ದೀಪವನ್ನು ತೆಗೆದುಕೊಂಡು ಉಗ್ರಾಣದ ಮನೆಯಲ್ಲಿದ್ದ ತನ್ನ ಟ್ರಂಕಿನ ಬಳಿ ಹೋದಳು. ಸ್ವಲ್ಪ ಹೊತ್ತಾದನಂತರ ಪುನಃ ದೀಪದೊಡನೆ ಹೊರಗೆ ಪಡಸಾಲೆಗೆ ಬಂದು, ಎಲ್ಲರನ್ನೂ ಗಮನಿಸಿ ಮೆಲ್ಲಗೆ ಗಂಡನ ಕೊಠಡಿಗೆ ಹೋದಳು — ಮಹಡಿಯ ಮೇಲೆ. ನರಸಿಂಗರಾಯರು ನಿದ್ರಾವಶರಾಗಿದ್ದರು. ಮಾಲಿನಿಯು ನಿಶ್ಶಬ್ದದಿಂದ ನೆರಳಿನಂತೆ ಅವರ ಅಂಗಿಯ ಬಳಿ ಸರಿದುಬಂದು, ಅವರ ಜೇಬಿನೊಳಗೆ ಮೆಲ್ಲಗೆ ಏನನ್ನೋ ಹಾಕಿದಳು. ' ಜಣ್ ' ಎಂದು ಸ್ವಲ್ಪ ಸದ್ದಾಯಿತು. ಆದರೂ ನರಸಿಂಗರಾಯರಿಗೆ ಎಚ್ಚರವಾಗಲಿಲ್ಲ. ಮಾಲಿನಿಯು ಬಾಗಿಲ ಬಳಿ ಬಂದುನಿಂತು, ತನ್ನ

ಗಂಡನ ಮುಖವನ್ನು ಒಂದೆರಡು ನಿಮಿಷಗಳಕಾಲ ನಿರೀಕ್ಷಿಸಿ ಅನಂತರ ಕೆಳಗಿಳಿದು ಹೋದಳು.

*   *   *

[ಪರದೆಯ ಮುಂದೆ]

ದೃಶ್ಯ ೫

ನರಸಿಂಗರಾಯರು ಊರಿಗೆ ಹಿಂದಿರುಗಿ ಹೋಗುವ ಸಂಭ್ರಮ. ರಂಗಮ್ಮನವರು ಬೀಗರಿಗೆ ಕಳುಹುವುದಕ್ಕೆ ಎರಡು ತಿಂಡಿಯ ಬುಟ್ಟಿಗಳನ್ನೂ, ಒಂದು ತರಕಾರಿ ಬುಟ್ಟಿಯನ್ನೂ ಇಟ್ಟಿದ್ದಾರೆ.

ನರಸಿಂಗರಾಯರ ಮನಸ್ಸೆಲ್ಲವೂ ಮಾವನವರ ಮೇಲಿದೆ. ರೈಲಿಗೆ ಖರ್ಚನ್ನು ಯಾವ ಮುಹೂರ್ತದಲ್ಲಿ ಕೊಡುವರೋ ಎಂದು ತವಕಪಡುತ್ತಿದ್ದಾರೆ. ರೈಲು ಹೊರಡುವುದಕ್ಕೆ ಇನ್ನು ಅರ್ಧಗಂಟೆ ಮಾತ್ರ ಉಳಿದಿದೆ.

ಜಟಕಾಗಾಡಿ ಬಂದು ನಿಂತಿತು. ಸಾಮಾನುಗಳನ್ನು ಗಾಡಿಯಲ್ಲಿಟ್ಟದ್ದಾಯಿತು. ನರಸಿಂಗರಾಯರಿಗೆ ಯೋಚನೆಯೊಂದು ಹೊಳೆಯಿತು. ಬಹುಶಃ ಅವರ ಮಾವನವರು ಈ ಗಲಾಟೆಯ ಮಧ್ಯದಲ್ಲಿ ಟಿಕೀಟಿಗೆ ಹಣಕೊಡುವುದನ್ನು ಮರೆತು ಬಿಟ್ಟಿರಬೇಕು! ಅವರಿಗೆ ಅದನ್ನು ಜ್ಞಾಪಿಸುವ ಉದ್ದೇಶದಿಂದ ಅಳಿಯ ನರಸಿಂಗರಾಯರು, “ ಇಲ್ಲಿಂದ ಹರಿಹರಕ್ಕೆ ಟಿಕೀಟು ಎಷ್ಟು ? ”ಎಂದು ಕೇಳಿದರು. ”

ಶೇಷಪ್ಪನವರು “ ಯಾವತರಗತಿಯದು? ಇಂಟರಿನದೋ ಎರಡನೆಯ ತರಗತಿಯದೋ ? ” ಎಂದು ಕೇಳಿದರು.

“ ಇಂಟರೇ! ”

“ ನೀವೇ ಆ ದಿನ ಹೇಳಿದಿರಲ್ಲಾ. ಎಂಟೂ ಚಿಲ್ಲರೆ ಆಗುತ್ತೇ ಅಂತ ”

ನರಸಿಂಗರಾಯರು ಪೆಚ್ಚು ಬಿದ್ದರೂ ತೋರ್ಪಡಿಸಲಿಲ್ಲ. “ ಬೆಳಗಿನ ರೈಲಿಗೂ ರಾತ್ರಿರೈಲಿಗೂ ದರದಲ್ಲಿ ವ್ಯತ್ಯಾಸ ಇರುತ್ತೆ; ಅದ್ದರಿಂದ ಕೇಳಿದೆ ” ಎಂದರು.

ನರಸಿಂಗರಾಯರಿಗೆ ಎಣಿಸಿದಂತೆ, ತಾವು ಈಗ ಮುಂದೇನು ಮಾಡಬೇಕೆಂಬುದು ಹೊಳೆದಿತ್ತು. ಟಾಂಗಾದವನಿಗೆ ದುಡ್ಡು ಕೊಟ್ಟರೆ ಮೂರು ಆಣೆ ಉಳಿಯುತ್ತೆ. (ಅವರು ನೋಟು ತಂದಿರಲೇ ಇಲ್ಲ) ಕೂಲಿಯವನಿಗೆ ಎರಡಾಣೆ ಕೊಟ್ರೆ ಒಂದಾಣೆ ಉಳಿಯುತ್ತೆ. ಯಶವಂತಪುರಕ್ಕೆ ಹೋಗಿ ಇಳಿದು ಬಿಟ್ಟು, ಅದೇ ರೈಲುಗಾರ್ಡಿನ ಮೂಲಕ ತನ್ನ ತಂದೆಯವರಿಗೆ ಹಣಕ್ಕೆ ಬರೆದು, ಕಾಗದವನ್ನು ಹರಿಹರ ಸ್ಟೇಶನ್ ಮಾಸ್ಟರಿಗೆ ಕೊಡುವಂತೆ ಗಾರ್ಡಿಗೆ ಹೇಳಲು ನಿರ್ಧರಿಸಿಕೊಂಡಿದ್ದರು. ತಂದೆಯವರಿಂದ ಹಣಬರುವ ವರೆಗೂ ಯಶವಂತಪುರದ ಸ್ಟೇಶನ್ನಿನಲ್ಲೇ ಬೀಡಾರ. ಊಟಕ್ಕೆ — ಊಟ ಏಕೆ! ಎರಡು ಬುಟ್ಟಿ ತಿಂಡಿ ಇದೆಯಲ್ಲ!

ಆದ್ದರಿಂದ ಎಲ್ಲರನ್ನೂ ಹಸನ್ಮುಖರಾಗಿಯೇ ಬೀಳ್ಕೊಂಡು ಹೊರಟರು.

[ತೆರೆ ಬೀಳುವುದು.]

*   *   *

ಎಂಬಲ್ಲಿಗೆ

ಅಳಿಯನಾಟಕ ಸಂಪೂರ್ಣ

ನಾಟಕಕ್ಕೆ ಅನುಬಂಧ

೧. ಕಷ್ಟಪದಗಳಿಗೆ ಅರ್ಥ:—

ತೆರೆ ; ಪರದೆ = ನಾಟಕದ ಕಂಪನಿಗಳಲ್ಲಿ ಪ್ರೇಕ್ಷಕರಿಗೂ ನಟರಿಗೂ ಮಧ್ಯೆ ಬಿದ್ದೇಳುವ ಬಟ್ಟೆಯಲ್ಲ. ನಮ್ಮ ಒಳಸ್ಥಿತಿ-ಗತಿಗಳ ಮೇಲೆ ನಾವು ಹರಡುವ ಅಭಿನಯದ ಪರದೆ.

ತಪ್ಪು—ಒಪ್ಪು

ಈ ನಾಟಕದ ಹೆಸರನ್ನು ಅಳಿಯನಾಟಕ ಎಂದು ಕೈತಪ್ಪಿನಿಂದ ಬರೆದಿರುವುದಕ್ಕೆ ವಿಷಾದಿಸುತ್ತೇವೆ. ಈ ನಾಟಕದ ಹೆಸರು “ ಅತ್ತೆಯ ಜಯಂತಿ — ಮಾವನ ದಿವಾಳಿ ” ಎಂದಿರಬೇಕಿತ್ತು.

ರೋಗಪರೀಕ್ಷೆಯ ಕೈಪಿಡಿ !
ರೋಗಚಿಕಿತ್ಸೆಯ ಕೈಗನ್ನಡಿ !

ಜೀವನ-ರಸಾಯನ-ಚಿಕಿತ್ಸಾ-ಶಾಸ್ತ್ರ

ಎಂದರೆ

ಹನ್ನೆರಡು-ಕ್ಷಾರ-ಚಿಕಿತ್ಸಾಪದ್ಧತಿ !

ಲೇಖಕರು :
ಡಾ. ಗೋ. ಸ. ಪಳಸುಲೆ L.M.&.S. ಪುಣೆ
ಕನ್ನಡಿಸಿದವರು :
ಶ್ರೀ. ನಾ. ತಿ. ದಾತಾರ ಬಿ. ಎ. ಬೆಳಗಾಂವಿ

೭೫೦ ಪುಟಗಳ ಹೊಳಪಿನ ಹಾಳೆಯ ಕ್ಯಾಲಿಕೊ ಬೈಂಡಿನ ಸುಂದರ ಹೊತ್ತಿಗೆ!

ಬೆಲೆ : ಮೂರೇ ರೂಪಾಯಿಗಳು.

ಪುಸ್ತಕ ದೊರೆಯುವ ಸ್ಥಳ:
೧. ಮನೋಹರ ಗ್ರಂಥ ಭಾಂಡಾರ, ಧಾರವಾಡ
೨. ಸ್ಟೂಡಂಟ್ಸ್ ಓನ್ ಬುಕ್‌ಡಿಪೋ, ಧಾರವಾಡ

Head office:—Shri Krishna Homoeo Pharmacy
Budhwar Peth, Poona.

ವಚನಕಾರರಲ್ಲಿ ಭಕ್ತಿ

★

ಭಕ್ತಿಗೆ ಎಡೆಯಿಲ್ಲದ ಮತ-ಪಂಥಗಳೆ ಜಗತ್ತಿನಲ್ಲಿಲ್ಲ. ಅದರಲ್ಲಿಯೂ ಭಕ್ತಿವಧುವು ಬೆಳೆದು ಬಾಳಿನುದು ನಮ್ಮ ಕನ್ನಡ ನಾಡಿನಲ್ಲಿ. ರಾಮಾನುಜ, ಮಧ್ವ, ಬಸವ ಇವರೆಲ್ಲ ಭಕ್ತಿಭಂಡಾರಿಗಳು. ಆದುದರಿಂದಲೆ ಇಲ್ಲಿಯ ಶಿವಶರಣರ ಹರಿದಾಸರ ವಚನ-ಕೀರ್ತನಗಳಲ್ಲಿ ಭಕ್ತಿರಸವು ಪ್ರವಾಹ ಪ್ರವಾಹವಾಗಿರುವುದನ್ನು ಅಭ್ಯಾಸದಿಂದ ಮನಗಾಣಬಹುದಾಗಿದೆ.

★

ಭಾರತಖಂಡದಲ್ಲಿ ಅನೇಕ ಧರ್ಮಗಳಿವೆ. ಅವುಗಳಿಗೆಲ್ಲಕ್ಕೂ ಭಕ್ತಿಯು ಮೂಲಾಧಾರವಾಗಿದೆ. ಭಕ್ತಿಯೆಂದಕೂಡಲೆ ಸೇವ್ಯ-ಸೇವಕ ಭಾವದಿಂದ ದ್ವೈತವು ವ್ಯಕ್ತವಾಗುತ್ತದೆ. ಪರಮೇಶ್ವರನು ಸೇವ್ಯನು; ಭಕ್ತನು ಸೇವಕನು. 'ಹಾಗಾದರೆ ಜೈನರು ನಿರೀಶ್ವರವಾದಿಗಳು ಸೇವ್ಯನಾದ ಪರಮೇಶ್ವರನೇ ಅವರಿಗೆ ಮಾನ್ಯನಿಲ್ಲದಿರಲು ಅವರಲ್ಲಿ ದ್ವೈತಭಾವವೆಲ್ಲಿ? ದ್ವೈತಭಾವವಿಲ್ಲದಿದ್ದರೆ ಭಕ್ತಿಯೆಲ್ಲಿ?' ಎಂಬ ಆಕ್ಷೇಪಣೆಗಳು ಬರಬಹುದು. ಅವುಗಳಿಗೆ ಉತ್ತರವಿಷ್ಟೇ: ಜೈನರು ಪರಮೇಶ್ವರನ ಅಸ್ತಿತ್ವವನ್ನು ಒಪ್ಪಿಕೊಳ್ಳದಿದ್ದರೂ ತೀರ್ಥಂಕರರನ್ನು ಒಪ್ಪಿಕೊಳ್ಳುತ್ತಾರೆ. ಅವರು ಸಮವಸರಣ ಕಾಲದಲ್ಲಿ ಮಾಡಿದ ಧರ್ಮೋಪದೇಶವು ಆಪ್ತವಚನವೆಂದು ಆದರದಿಂದ, ವಿಶ್ವಾಸದಿಂದ, ಪ್ರೀತಿಯಿಂದ ಅದನ್ನು ಸ್ವೀಕರಿಸಿ ಅದರಂತೆ ಆಚರಿಸುತ್ತಾರೆ; ಅದೇ ಭಕ್ತಿ. ಉಳಿದ ದೇವರುಗಳನ್ನು ಅವರು ಮಿಥ್ಯೆಯೆಂದು ಭಾವಿಸುತ್ತಾರೆ; ಅದು ಅವರ ವೀರವೃತ್ತಿ. ಅದರಂತೆ ಜೈನಾಗಮವನ್ನು ಉಳಿದು ಬೇರೆ ಮತತತ್ವಗಳನ್ನು ಅನುಸರಿಸುವವರನ್ನು ಅವರು ಮಿಥ್ಯಾದೃಷ್ಟಿಗಳೆಂದೂ ಎಣಿಸುತ್ತಾರೆ. ಅವರಂತೆಯೆ ವೈಷ್ಣವರು ವಿಷ್ಣು ಸರ್ವೋತ್ತಮನೆಂದು ಹೇಳಿ, ವಿಷ್ಣುವಿನಲ್ಲಿ ಭಕ್ತಿಯನ್ನು ಇರಿಸಿ ಆತನನ್ನೇ ಸೇವಿಸುತ್ತಿರುವುದರಿಂದ, ಅವರೂ ವೀರವೃತ್ತಿಯವರೇ. ತಮ್ಮ ವೀರವೃತ್ತಿಯಿಂದ ಅವರು ಶಿವನ ಹೆಸರನ್ನು ಕೂಡ ಎತ್ತುವುದಿಲ್ಲ. * ಶೈವರೆಂದು ಹೇಳುವುದರ ಬದಲು ಅಡ್ಡ ಗಂಧದವರು ಎಂದು ಹೇಳುತ್ತಾರೆ. ಮನೆ ಸಾರಿಸುವಾಗ ಅಡ್ಡವಾಗಿ ಸಾರಿಸದೆ ಉದ್ದವಾಗಿ ಸಾರಿಸುತ್ತಾರೆಂದೂ ಕೇಳುತ್ತೇವೆ. ಇದು ಅತಿಶಯೋಕ್ತಿಯಾಗಿರಬಹುದು.* ದಾಸಕೂಟದವರು ಶಿವನನ್ನು ವಿಷ್ಣುಭಕ್ತನನ್ನಾಗಿ ಮಾಡಿದುದುಂಟು. ಶೈವರು ಶಿವನೇ ಸರ್ವೋತ್ತಮನೆಂದು ಹೇಳುತ್ತಾರೆ. ಬೇರೆ ದೇವರನ್ನು ಅವರು ಭಜಿಸುವುದಿಲ್ಲ. ಕ್ರೈಸ್ತಮತವಾದಿಗಳಲ್ಲಿಯೂ ಇದೇ ರೀತಿ. "He is a zealous God" ಎಂದು ಬಾಯಬಲ್ಲಿನಲ್ಲಿ ಹೇಳಿದೆ. ಇದಕ್ಕೆಲ್ಲ ಕಾರಣವೆಂದರೆ ತಾವು ಸೇವಿಸುತ್ತಿರುವ ಪರಮಾತ್ಮನ ವಿಷಯವಾಗಿ ಇರುವ ಅವರ ಅತುಲವಾದ ಪ್ರೇಮ.

ನಾರದ ಭಕ್ತಿಸೂತ್ರದಲ್ಲಿ ಭಕ್ತಿಯ ವ್ಯಾಖ್ಯೆಯನ್ನು ಹೀಗೆ ಹೇಳಲಾಗಿದೆ:

सा त्वस्मिन् परमप्रेमरूपा ॥ २ ॥
अमृतस्वरूपा च ॥ ३ ॥

ಭಕ್ತಿಯು ಶ್ರೇಷ್ಠವಾದ ಪ್ರೇಮವಾಗಿದೆ. ಅದು ಅಮೃತಮಯವಾಗಿದೆ. ಪ್ರೇಮವೆಂದಕೂಡಲೆ ಹಿಂಜರಿಯಲಾಗದು. ಈ ಕಾಲದಲ್ಲಿ ಪ್ರೇಮಕ್ಕಿರುವ ಅರ್ಥವು ಪೂರ್ವಕಾಲದಲ್ಲಿರಲಿಲ್ಲ. ಸಂಸ್ಕೃತ ಸಾಹಿತ್ಯದಲ್ಲಿ ಕೂಡ 'ಪ್ರೇಮ' ಶಬ್ದಕ್ಕೆ ತೀರ ಭಿನ್ನಾರ್ಥವಿದೆ. ಈಗ ಅದರ ಅರ್ಥವು ಸ್ತ್ರೀವಿಷಯಕವಾದ ಮೋಹವೆಂದಿದೆ. 'ಪರಮಾತ್ಮ ಪ್ರೇಮವು ಶುದ್ಧವೂ ಗಾಢವೂ ಆಗಿರುವುದರಿಂದ ಅದು ಅಮೃತಮಯವಾಗಿದೆ, ಆದರಿಂದ ಪರಮಾನಂದವು ದೊರೆಯುತ್ತದೆ' ಎಂದು ನಾರದಸೂತ್ರದ ಅಭಿಪ್ರಾಯ. "ಭಕ್ತಿ ಎಂಬ ನಿಧಾನವ ಸಾಧಿಸುವರೆ ಶಿವಪ್ರೇಮವೆಂಬ ಅಂಜನವ ನೆಚ್ಚಿಕೊಂಬುದು," "ಭಕ್ತಿಪ್ರಿಯ ನಮ್ಮ ಕೂಡಲಸಂಗಮದೇವ" ಎಂದು ಬಸವಣ್ಣನವರು ಹೇಳುತ್ತಾರೆ. ಇಂತಹ ಪರಮಾತ್ಮನ ವಿಷಯಕವಾದ ಭಕ್ತಿಯು ಗುಣಮಹಾತ್ಮ್ಯಾಸಕ್ತಿ, ರೂಪಾಸಕ್ತಿ, ಪೂಜಾಸಕ್ತಿ, ಸ್ಮರಣಾಸಕ್ತಿ, ದಾಸ್ಯಾಸಕ್ತಿ, ಸಖ್ಯಾಸಕ್ತಿ, ಕಾಂತಾಸಕ್ತಿ, ವಾತ್ಸಲ್ಯಾಸಕ್ತಿ, ಆತ್ಮನಿವೇದನಾಸಕ್ತಿ, ತನ್ಮಯಾಸಕ್ತಿ, ಪರಮವಿರಹಾಸಕ್ತಿ ಎಂದು ಹನ್ನೊಂದುವಿಧವಾಗಿದೆ.

गुणमहात्म्यासक्ति-रूपासक्ति-पूजासक्ति-स्मरणासक्ति-दास्यासक्ति-सख्यासक्ति-कान्तासक्ति-वात्सल्यासक्ति-आत्मनिवेदनासक्ति-तन्मयासक्ति-परमविरहासक्ति रूपैकधाप्येकादशधा भवति ॥ ८२ ॥

ಭಕ್ತಿಯ ಇವೆಲ್ಲ ಗುಣಗಳು ಮನೋಭಾವಗಳನ್ನವಲಂಬಿಸಿರುತ್ತವೆ. ಇವುಗಳನ್ನು ಆಧಾರವಾಗಿಟ್ಟುಕೊಂಡು ಹೇಳಿದ ಭಕ್ತರ ಮಾತುಗಳು ಭಾವಗೀತೆಗಳಾಗುತ್ತವೆ. ಆದುದರಿಂದ ದಾಸರ ಕೀರ್ತನೆಗಳು ಓದುಗರ ಮನಸ್ಸನ್ನು ಆಕರ್ಷಿಸುತ್ತವೆ. ಅಂತೆಯೇ ವಚನಕಾರರ ವಚನಗಳು ಭಾವಗೀತೆಗಳಾಗಿವೆ. ಅಲ್ಲಿ ನಾವು ರೂಪಾಸಕ್ತಿ, ಸಖ್ಯಾಸಕ್ತಿ ಎಂಬ ಭಕ್ತಿಯ ಭಾಗಗಳನ್ನು ಕಾಣುವುದಿಲ್ಲ. ಪರಶಿವನು ನಿರಾಕಾರನು ನಿರ್ಗುಣನು ಎಂದು ಅವರು ಭಾವಿಸುತ್ತಿದ್ದು-

ಪ್ರೊ. ಕೆ. ಜಿ. ಕುಂದಣಗಾರ, ಎಂ. ಎ.

ಅವರಿಂದ

* ಇದು ಅತಿಶಯೋಕ್ತಿಯುಷ್ಟೇ ಅಲ್ಲ; ದ್ವೇಷದ ಅತಿರೇಕ —ಸಂ. ಜಯಂತಿ

ವ್ವದರಿಂದ ಇವುಗಳ ಅಭಾವವು ಅಲ್ಲಿ ಇದ್ದಿರಬೇಕು.

'ವಿಷ್ಣುಪರಮಾತ್ಮನು ದಯಾಪರನು, ಶರಣಜನವರದನು' ಎಂದು ಕೀರ್ತನಕಾರರು ಹಾಡಿದಂತೆ ವಚನಕಾರರೂ 'ಪರಶಿವನು ದಯಾಸಾಗರನು, ಭಕ್ತದೇಹಿಕದೇವ, ಮಹಾದಾನಿ, ಅನಾದ್ಯನಂತ' ಎಂದು ಮುಂತಾಗಿ ಹೇಳುವರು. ಮುಂದಿನ ವಚನಗಳನ್ನು ನೋಡಿ:

"ಸಕಲ-ನಿಃಕಲವ ಕೂಡಿಕೊಂಡಿಪ್ಪೆಯಾಗಿ ಸಕಲ ನೀನೇ ನಿಃಕಲ ನೀನೇ ಕಂಡಯ್ಯಾ. ವಿಶ್ವತೋ ಚಕ್ಷು ನೀನೇ ದೇವಾ, ವಿಶ್ವತೋ ಮುಖ ನೀನೇ ದೇವಾ, ವಿಶ್ವತೋ ಬಾಹು ನೀನೇ ದೇವಾ, ಕೂಡಲಸಂಗಮದೇವಾ!

ಕಾಯ ಕಂಕಾಳದಿಂದ ಮುನ್ನ, ತ್ರಿಪುರ ಸಂಹಾರದಿಂದ ಮುನ್ನ, ಹರಿ ವಿರಿಂಚಿಗಳಿಂದ ಮುನ್ನ, ಉಮೆಯ ಕಲ್ಯಾಣದಿಂದ ಮುನ್ನ, ಮುನ್ನ, ಮುನ್ನ, ಮುನ್ನ. ಅಂದಿಂಗೆಳೆಯ ನೀನು ಹಳೆಯ ನಾನು. ಮಹಾದಾನಿ ಕೂಡಲಸಂಗಮದೇವಾ!

ನೀನೊಲಿದರೆ ಕೊರಡು ಕೊನರುವುದಯ್ಯಾ! ನೀನೊಲಿದರೆ ಬರಡು ಹಯನಹುದಯ್ಯಾ! ನೀನೊಲಿದರೆ ವಿಷವೆಲ್ಲ ಅಮೃತವಹುದಯ್ಯಾ! ನೀನೊಲಿದರೆ ಸಕಲ ಪಡಿಪದಾರ್ಥ ಇದಿರಲ್ಲಿಪ್ಪುವು ಕೂಡಲಸಂಗಮದೇವಾ!

ಭಕ್ತನ ಮುಖದರ್ಪಣದಲ್ಲಿ ಲಿಂಗವ ಕಾಣಬಹುದು. ಭಕ್ತದೇಹಿಕದೇವ ಅನಿಮಿಷನಾಗಿ ಕೂಡಲಸಂಗಮದೇವ ಭಕ್ತನ ನುಡಿಯ ನಡುವೆ ರಾಶಿಯಾಗಿಪ್ಪನು."

"ಕೂಡಲ ಸಂಗಯ್ಯನ ನೆನೆದರೆ ಪಾಪ ಉರಿಗೊಡ್ಡಿದರಗಿನಂತೆ ಕರಗುವುದಯ್ಯಾ"

"ಕೋಡಂಗಿಯಾಟವನಾಡಿದ ಭಕ್ತಂಗೆ ಬೇಡಿದ್ದನೀವ ನಮ್ಮ ಕೂಡಲಸಂಗಮದೇವ."

"ಒಂದು ಸೊಲ್ಲಿಂಗೆ ಮುಕ್ತಿಸಿದ್ಧಿ ಕೂಡಲಸಂಗಮದೇವ ಭಕ್ತಿಲಂಪಟನಾಗಿ"

"ನಾದಪ್ರಿಯನು ಅಲ್ಲ, ವೇದಪ್ರಿಯನು ಅಲ್ಲ. ಭಕ್ತಪ್ರಿಯ ನಮ್ಮ ಕೂಡಲಸಂಗಮದೇವ!"

ಭಕ್ತನಾದವನು ತನ್ನ ಇಷ್ಟದೇವತೆಯನ್ನು ಅನನ್ಯಭಾವದಿಂದ ಪೂಜಿಸಿ ಅದರಲ್ಲಿಯೇ ತನ್ಮಯನಾಗುತ್ತಾನೆ. ಪೂಜೆಗೆ ಬೇಕಾದ ಉಪಕರಣಗಳನ್ನೆಲ್ಲ ಶ್ರದ್ಧೆಯಿಂದ ಸಂಚಯಗೊಳಿಸುತ್ತಾನೆ. ಸ್ನಾನಮಾಡಿ, ಮಡಿವಸ್ತ್ರವನ್ನುಟ್ಟು ಪೂಜೆಮಾಡುತ್ತಾನೆ. ನೈವೇದ್ಯ ಆರತಿ ಮಂತ್ರಪುಷ್ಪ ಮುಂತಾದುವುಗಳನ್ನೂ ಅರ್ಪಿಸುತ್ತಾನೆ. ವಾದಿರಾಜರು ಹಯವದನನಿಗೆ ಹೂರಣವನ್ನರ್ಪಿಸುತ್ತಿದ್ದರಂತೆ ಪ್ರತ್ಯಕ್ಷವಾಗಿ. ಅದರಂತೆ ಕೋಳೂರ ಕೊಡಗೂಸು ಪರಮೇಶ್ವರನಿಗೆ ಹಾಲುಣಿಸುತ್ತಿದ್ದಳಂತೆ. ಕಣ್ಣಪ್ಪನ ಕಥೆಯನ್ನು ಹೇಳುವ ಕಾರಣವಿಲ್ಲ. ಇವೆಲ್ಲ ಕಟ್ಟುಕಥೆಗಳೆಂದು ಈಗಿನ ಕಾಲದಲ್ಲಿ ಬಿಟ್ಟರೂ, ಭಕ್ತಿಯಿಂದ ಪೂಜೆಮಾಡುತ್ತಿರುವುದನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಅದು ಪರಮಾರ್ಥವನ್ನು ಸಾಧಿಸಿಕೊಡುತ್ತದೆಯೆಂದು ವಚನಕಾರರ ನಂಬುಗೆ. ಬಸವಣ್ಣನವರ ವಚನವು ಈ ಸಂದರ್ಭದಲ್ಲಿ ಹೀಗೆ ಹೇಳುತ್ತದೆ:

"ಹೊತ್ತಾರೆ ಎದ್ದು ಅಗ್ಘವಣಿ ಪತ್ರೆಯ ತಂದು, ಹೊತ್ತು ಹೋಗದ ಮುನ್ನ ಪೂಜಿಸು ಲಿಂಗವ. ಹೊತ್ತು ಹೋದ ಬಳಿಕ ನಿನ್ನನಾರು ಬಲ್ಲರು? ಹೊತ್ತು ಹೋಗದ ಮುನ್ನ, ಮೃತ್ಯು ಒಯ್ಯದ ಮುನ್ನ, ತೊತ್ತುಗೆಲಸವ ಮಾಡು ಕೂಡಲಸಂಗಮದೇವನ!"

"ಅಷ್ಟವಿಧಾರ್ಚನೆ, ಷೋಡಶೋಪಚಾರವ ಮಾಡುವುದು, ಮಾಡಿದ ಪೂಜೆಯ ನೋಡುವುದಯ್ಯಾ, ಶಿವತತ್ತ್ವಗೀತವ ಪಾಡುವುದು, ಶಿವನ ಮುಂದೆ ನಲಿದಾಡುವುದಯ್ಯಾ. ಭಕ್ತಿಸಂಭಾಷಣೆಯ ಮಾಡುವುದು ನಮ್ಮ ಸಂಗಯ್ಯನ ಕೂಡುವುದು." ಇದು ಪೂಜಾಸಕ್ತಿ.

ಪರಮಾತ್ಮನ ಸ್ಮರಣೆಯು ಭಕ್ತಿಯ ಒಂದು ರೂಪ. ನಾಮದ ಮಹಿಮೆಯು ಅಗಾಧವಾಗಿದೆಯೆಂದು ಎಲ್ಲ ಭಕ್ತರು

ಕರ್ನಾಟಕದಲ್ಲಿಯ ಸಂಘ-ಸಂಸ್ಥೆಗಳು

ಹುಬ್ಬಳ್ಳಿಯ ಅಭ್ಯಾಸಕೂಟದ ಸದಸ್ಯರು

ಜನಸಾಮಾನ್ಯರನ್ನು ಸುಸಂಸ್ಕೃತರನ್ನಾಗಿಸಿ, ಅವರಲ್ಲಿ ಕನ್ನಡನಾಡು-ನುಡಿಗಳ ಭಾವನೆಯನ್ನು ಮೂಡಿಸಲು ಪ್ರಯತ್ನಿಸುವ ಈ ಸಂಸ್ಥೆಯ ಕಾರ್ಯ ತುಂಬ ಪ್ರಶಂಸನೀಯವಾದುದು.

ಒಪ್ಪಿಕೊಂಡಿದ್ದಾರೆ. ದಾಸರಂತೂ ಹರಿನಾಮವು ತಮಗೆ ಸರ್ವಸ್ವವೆಂದೇ ಹೇಳುತ್ತಾರೆ. "ರಾಮನಾಮಪಾಯಸ, ಕೃಷ್ಣನಾಮಸಕ್ಕರೆ, ವಿಟ್ಠಲನಾಮ ತುಪ್ಪ" ಎಂದು ಪುರಂದರದಾಸರು ಹರಿನಾಮವನ್ನು ವ್ಯವಹಾರಕ್ಕೆ ಒಡ್ಡಿದ್ದಾರೆ. ಅದರಂತೆಯೇ ನಾಮಮಹಿಮೆಯನ್ನು ಬಸವಣ್ಣನವರು ಹೀಗೆ ಹೇಳುತ್ತಾರೆ:

"ಪಂಚಮಹಾಪಾತಕವಂಜುವುದು ಕೂಡಲ ಸಂಗನ ನಾಮಕ್ಕಯ್ಯ!"

"ನಿಮ್ಮ ನಾಮವೆನಗೆ ಮಂತ್ರ, ಶಿವನ ನಾಮವೆನಗೆ ತಂತ್ರ. ಕೂಡಲಸಂಗಮದೇವಯ್ಯ ನಿಮ್ಮ ನಾಮ ಕಾಮಧೇನುವೆನಗೆ." ಇದು ಸ್ಮರಣಾಸಕ್ತಿ.

ದಾಸ್ಯಾಸಕ್ತಿಯಲ್ಲಿ ಹರಿಭಕ್ತರು ಪರಮಾತ್ಮನ ದಾಸರೆಂಬ ಭಾವನೆಯಲ್ಲಿರುತ್ತಾರೆ. ಅದನ್ನು ಸೂಚಿಸಲು ಪುರಂದರದಾಸರು "ದಾಸನ್ನ ಮಾಡಿಕೊಳೆನ್ನ! ಸ್ವಾಮಿ|| ಸಾಸಿರನಾಮದ ವೆಂಕಟರಮಣ" ಎಂದು ಹಾಡಿದ್ದಾರೆ. ಅವರಂತೆಯೆ ಬಸವಣ್ಣನವರೂ ತಾವು 'ತೊತ್ತಿನತೊತ್ತು' ಎಂದು ಈ ವಚನದಲ್ಲಿ ಹೇಳಿದ್ದಾರೆ:

"ಅಯ್ಯ, ನಿಮ್ಮ ವಂಶಾವಳಿಯಲೊಬ್ಬ ತೊತ್ತಿನಮಗ ಹುಟ್ಟಿದ. ಆತನ ತೊತ್ತಿನಮಗ ನಾನಯ್ಯ! ಬಳಿದೊತ್ತು, ಬಳಗದೊತ್ತು, ವಂಶದೊತ್ತು, ನಾನಯ್ಯ! ಕೂಡಲಸಂಗಮದೇವಾ, ನಿಮ್ಮ ಒಡೆತನಕ್ಕೆ ಕೇಡಿಲ್ಲವಾಗಿ ಎನ್ನ ತೊತ್ತುತನಕ್ಕೆ ಕೇಡಿಲ್ಲವಯ್ಯ!"

ದಾಸರಲ್ಲಿ ವಾತ್ಸಲ್ಯಾಸಕ್ತಿಯು ಬಹಳವಾಗಿ ಕಂಡುಬರುತ್ತದೆ. ತಾಯಿ-ತಂದೆಗಳು ಮಕ್ಕಳನ್ನು ವಾತ್ಸಲ್ಯದಿಂದ ಕಾಣುತ್ತಾರೆ. ಅಂತಹ ಭಾವವು ಪುರಂದರದಾಸರ ಕೀರ್ತನೆಗಳಲ್ಲಿ ಕಂಡುಬರುತ್ತದೆ. ಮಾದರಿಗಾಗಿ ಒಂದು ಪದ್ಯವನ್ನು ಎತ್ತಿಕೊಳ್ಳಬಹುದು:

"ಎಂದಪ್ಪಿಕೊಂಬೆ | ರಂಗಯ್ಯನ | ಎಂದಪ್ಪಿಕೊಂಬೆ || ಎಂದಪ್ಪಿಕೊಂಬೆ ನಾ | ನೆಂದು ಮುದ್ದಾಡುವೆ | ಎಂದಿಗೆ ಸವಿಮಾತು ಕೇಳಿ ನಾ ದಣಿವೆ ||

ಅರಳೆಲೆ ಮಾಗಾಯಿ | ಕೊರಳ ಕೌಸ್ತುಭಹಾರ | ತರಳರ ಒಡಗೂಡಿ ಬೆಣ್ಣೆಯ ಮೆಲುವನ || ೧ ||

ಪರಮಾತ್ಮನು ನಿರಾಕಾರಿಯೆಂದು ನಂಬಿ ಲಿಂಗಪೂಜೆಮಾಡುವ ವೀರಶೈವರಿಗೆ ವಾತ್ಸಲ್ಯಾಸಕ್ತಿಯಿಲ್ಲದಿದ್ದರೂ ಮಹಾದೇವಿಯಕ್ಕನು ಅದನ್ನು ತನ್ನ ಒಂದು ವಚನದಲ್ಲಿ ಹೇಳಿದ್ದಾಳೆ:

"ಹುಟ್ಟಿದೆ ಶ್ರೀಗುರುವಿನ ಹಸ್ತದಲ್ಲಿ. ಬೆಳೆದೆನು ಅಸಂಖ್ಯಾತರ ಕರುಣದೊಳಗೆ. ಭಾವನೆಂಬ ಹಾಲು, ಸುಜ್ಞಾನವೆಂಬ ತುಪ್ಪ, ಪರಮಾರ್ಥವೆಂಬ ಸಕ್ಕರೆಯ ನಿಕ್ಕಿದರು ನೋಡಾ! ಇಂತಪ್ಪ ತ್ರಿವಿಧಾಮೃತವ ದಣಿಯಲೆರೆದು ಸಲಹಿದಿರೆನ್ನ ವಿವಾಹವ ಮಾಡಿದರಿ. ನಯವಪ್ಪ ಗಂಡಗೆ ಕೊಟ್ಟಿರಿ. ಕೊಟ್ಟ ಮನೆಗೆ ಕಳುಹಲೆಂದು ಅಸಂಖ್ಯಾತರೆಲ್ಲರು ನೆರೆದು ಬಂದಿರಿ. ಬಸವಣ್ಣ ಮೆಚ್ಚಲು ಒಗತನವ ಮಾಡುವೆ ಚೆನ್ನಮಲ್ಲಿಕಾರ್ಜುನನ ಕೈವಿಡಿದು. ನಿಮ್ಮ ಮಂಡೆಗೆ ಹೂವ್ವ ತಾಹೆನಲ್ಲದೆ ಹುಲ್ಲ ತಾರೆನು. ಅವಧರಿಸಿ ನಿಮ್ಮಡಿಗಳೆಲ್ಲರು!! ಮರಳಿ ಬಿಜಯಂಗೈವುದು. ಶರಣಾರ್ಥಿ!"

ಹರಿದಾಸರು ಆತ್ಮನಿವೇದನೆ ಮಾಡುತ್ತಿದ್ದಂತೆ ವಚನಕಾರರೂ ಆತ್ಮನಿವೇದನೆ ಮಾಡಿದ್ದಾರೆ. "ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ" ಎಂದು ಪುರಂದರ ದಾಸರು ಹಾಡಿದ್ದರೆ

"ಒಂದಲ್ಲ, ಎರಡಲ್ಲ, ಮೂರಲ್ಲ, ನಾಲ್ಕಲ್ಲ, ಎಂಬತ್ತುನಾಲ್ಕುಲಕ್ಷ ಯೋನಿಯೊಳಗೆ ಬಂದೆ ಬಂದೆ. ಬಾರದ ಭವಂಗಳನುಂಡೆನುಂಡೆ. ಶುಭಾಶುಭಂಗಳ ಹಿಂದಣ ಜನ್ಮಂಗಳೇನಾದಡೂ ಆಗಲಿ! ಮುಂದೆ ನೀ ಕರುಣಿಸಾ ಚೆನ್ನಮಲ್ಲಿಕಾರ್ಜುನಾ!" ಎಂದು ಮಹಾದೇವಿಯಕ್ಕನು ಹೇಳಿದ್ದಾಳೆ.

"ನಾನೊಂದ ನೆನೆದರೆ ತಾನೊಂದ ನೆನೆವುದು. ನಾನಿತ್ತಲೆಳೆದರೆ ತಾನತ್ತಲೆಳೆವುದು. ತಾ ಬೇರೆ ಎನ್ನ ಸಳಲಿಸಿ ಕಾಡಿತ್ತು. ತಾ ಬೇರೆ ಎನ್ನ ಬಳಲಿಸಿ ಕಾಡಿತ್ತು. ಕೂಡಲಸಂಗನ ಕೂಡಿಹೆನೆಂದರೆ ತಾನೆನ್ನ ಮುಂದುಗೆಡಿಸಿತ್ತು ಮಾಯೆ!" ಎಂದು ಬಸವಣ್ಣನವರು ನುಡಿದಿದ್ದಾರೆ.

ಭಕ್ತ್ಯಾತಿಶಯದಿಂದ ಪರಮಾತ್ಮನಲ್ಲಿ ತಲ್ಲೀನರಾಗಿ ಪಡೆದ ಆನಂದದ ಅನುಭವವನ್ನು ಹೇಳಲು ಬರುವಂತಿಲ್ಲದಿದ್ದರೂ ಅದರ ರುಚಿಯನ್ನು ದಾಸರೂ ವಚನಕಾರರೂ ತೋರಿಸಿದ್ದಾರೆ. ಇದಲ್ಲವೇ ತನ್ಮಯಾಸಕ್ತಿ? ಈ ಮುಂದಿನ ಬಸವಣ್ಣನವರ ವಚನವನ್ನು ನೋಡಿ:

"ತೆರಹಿಲ್ಲದ ನಡೆ, ತೆರಹಿಲ್ಲದ ನುಡಿ, ತೆರಹಿಲ್ಲದ ಸಂಭಾಷಣೆಯು ಸುಖವು, ತೆರಹಿಲ್ಲದ ನಂಬುಗೆ, ಸ್ವಾನುಭಾವ ಸುಖ, ತೆರಹಿಲ್ಲದ ಮಹಿಮೆ, ತೆರಹಿಲ್ಲದ ವಿಚಾರ ಕೂಡಲಸಂಗಮದೇವಾ, ನಿಮ್ಮ ಶರಣಂಗೆ." ಮಹಾದೇವಿಯಕ್ಕನು ಹೀಗೆಂದಿರುವಳು:

"ಅಯ್ಯ, ದೂರದಲ್ಲಿರ್ದಹೆಯೆಂದು ಬಾಯಾರಿ ಬಳಲುತಿರ್ದೆನಯ್ಯ ನಾನು. ಅಯ್ಯ, ಸಾರಿ ಬಂದು ನೀನೆನ್ನ ಕರಸ್ಥಲದಲ್ಲಿ ಮೂರ್ತಿಗೊಂಡರೆ, ಇನ್ನಾರತಿಯೆಲ್ಲವೂ ಲಿಂಗ. ಅಲಿ ನಿಮ್ಮಲ್ಲಿ ನಟ್ಟುವ ನೋಡಯ್ಯ! ಚೆನ್ನಮಲ್ಲಿಕಾರ್ಜುನಯ್ಯ, ನಿಮ್ಮನೆನ್ನ ಕರಸ್ಥಲದಲ್ಲಿ ನೋಡಿ ನೋಡಿ ಕಂಗಳೇ ಪ್ರಾಣವಾಗಿರ್ದೆನಯ್ಯ."

ಭಕ್ತನು ಸತಿಯೆಂದೂ ಪರಮಾತ್ಮನು ಪತಿಯೆಂದೂ ವಚನಕಾರರು ಭಾವಿಸುತ್ತಾರೆ. ಉಪನಿಷತ್ತುಗಳಲ್ಲಿ ಇದಕ್ಕೆ ಆಧಾರವಿದೆಯಂತೆ. ನಾರದಭಕ್ತಿಸೂತ್ರದಲ್ಲಿಯೂ ಇದಕ್ಕೆ ಆಧಾರವು ದೊರೆಯುತ್ತಿದೆ;

'यथा व्रजगोपिकानाम् ॥ २१ ॥

ಹೀಗಿರುವಾಗ ಶಿವಶರಣರು ಪರಮಾತ್ಮನ ಅನುಭವ ತಪ್ಪಿದಾಗ ವಿರಹವನ್ನು ಅನುಭವಿಸುತ್ತಾರೆ. ಅದಕ್ಕೆ ಬೇರೆ ಉಪಮೆಯು ದೊರೆಯದಿರುವಾಗ ಸತಿಯ ವಿರಹದ ಉಪಮೆಯನ್ನು ವಚನಕಾರರು ಇಟ್ಟುಕೊಂಡಿದ್ದಾರೆ. ಇದು ವಿರಹಾಸಕ್ತಿ. ಈ ಸಂದರ್ಭದ ಮಹಾದೇವಿಯಕ್ಕನ ವಚನಗಳು ಬಹಳ ಮನೋಹರವಾಗಿವೆ. ಒಂದೆರಡನ್ನು ಉದಹರಿಸಬಹುದು:

"ಒಮ್ಮೆ ಕಾಮನ ಕಾಲ ಹಿಡಿವೆ. ಮತ್ತೊಮ್ಮೆ ಚಂದ್ರಮಂಗೆ ಸೆರಗೊಡ್ಡಿ ಬೇಡುವೆ. ಸುಡಲೀ ವಿರಹವ. ನಾನಾರಿಗೆ ಧೃತಿಗೆಡುವೆ? ಚೆನ್ನಮಲ್ಲಿಕಾರ್ಜುನದೇವ ನೆನ್ನನೊಲ್ಲದ ಕಾರಣ ಎಲ್ಲರಿಗೆ ಹಂಗಿತಯಾದೆನವ್ವಾ!"

(೪೪೨ ನೆಯ ಪುಟ ನೋಡಿರಿ)

ಪ್ರೇಮದ ನಾಟಕ

ಶ್ರೀ. ದಯಾನಾಥ್ ಅವರಿಂದ

★

ಪ್ರೇಮದ ಪರೀಕ್ಷೆ ಸುಶೀಲೆಯು ಕಣ್ಣೆದುರಲ್ಲಿಯೆ ನಡೆಯಿತು. ಪಾಪ, ಸುರೇಂದ್ರನ ಸುಳ್ಳುಪ್ರೇಮ ಶ್ರೀಕಾಂತನ ನಿಜವಾದ ಪ್ರೇಮದ ಬಿರುಗಾಳಿಯಲ್ಲಿ ತರಗೆಲೆಯಂತೆ ಹಾರಿಹೋಯಿತು!

★

ಶ್ರೀಕಾಂತನು ತನ್ನ ಪ್ರಪಂಚವು ಹಾಳಾಗಿಹೋಯಿತೆಂಬ ಭಾವನೆಯಿಂದ ಹೊಸಲಿನ ಹತ್ತಿರ ನಿಂತನು. ಅವನಿಗೆ ಯಾವುದನ್ನೂ ಗುಟ್ಟಾಗಿ ತಿಳಿದುಕೊಳ್ಳಲು ಇಷ್ಟವಿರಲಿಲ್ಲವಾದರೂ ಕುತೂಹಲದಿಂದ ಅಲ್ಲೇ ನಿಂತುಕೊಂಡು, ಸದ್ದಿಲ್ಲದೆ, ಒಳಗೆ ಏನೇನು ನಡೆಯುತ್ತಿದೆಯೆಂಬುದನ್ನು ಕೇಳಲನುವಾದನು. ಬಾಗಿಲಿನ ಪರದೆಯು (door curtain) ಅವನನ್ನು ಮರೆಮಾಡಿದ್ದಿತು.

"ನಿನ್ನನ್ನು ಈಪೊತ್ತು ರಾತ್ರಿ ಇಲ್ಲಿಗೆ ಬರಮಾಡಿದುದು ಸರಿಯೆ?" ಎಂದು ಶ್ರೀಕಾಂತನ ಹೆಂಡತಿ ಕೇಳುತ್ತಿದ್ದಳು. ಇದಕ್ಕೆ ಕೊಟ್ಟ ಉತ್ತರವು ಸುರೇಂದ್ರನಿಂದ ಬಂದಂತೆ ಶ್ರೀಕಾಂತನಿಗೆನಿಸಿತು. ಅಹುದು ಆತನದೆ; ಧ್ವನಿಯಲ್ಲೇನೂ ವ್ಯತ್ಯಾಸವಿರಲಿಲ್ಲ. "ನೀನು ಮಾಡಿದ್ದು ಸರಿಯೆ. ಒಬ್ಬಳು ಹೆಂಗುಸು ಇನ್ನೊಬ್ಬನನ್ನು ಪ್ರೀತಿಸಿದಾಗ ತಪ್ಪೂಕೂಡ ಸರಿಯಾಗುತ್ತದೆ."

ಮರೆಯಲ್ಲಿ ನಿಂತ ಶ್ರೀಕಾಂತನಿಗೆ ಸಿಟ್ಟು ಮೂಗಿನ ವರೆಗೂ ಏರಿತು. ಹಣೆಯಲ್ಲಿ ಬೆವರು ಕಾಣಿಸಿಕೊಂಡಿತು. ಅವನು ಆಗಲೆ ಒಳಗೆ ನುಗ್ಗುವುದರಲ್ಲಿದ್ದನು. ಆದರೆ ಯಾವುದೊ ಒಂದು ಅಂತಶ್ಶಕ್ತಿಯು ಅವನನ್ನು ತಡೆಯಿತು. "ಸುಶೀಲೆ (ತನ್ನ ಹೆಂಡತಿ), ತಾನು ಮಾಡಿದ ಉಪಕಾರಕ್ಕೆ ಪ್ರತಿಯಾಗಿ ಅತ್ಯಂತ ನೀಚಕಾರ್ಯವನ್ನು ಕೈಕೊಂಡಿರುವ ಸುರೇಂದ್ರನನ್ನು ಪ್ರೀತಿಸುತ್ತಾಳೆಯೆ?" ಇದನ್ನು ಶ್ರೀಕಾಂತನು ಈಗ ತಿಳಿಯಬೇಕಾಗಿದ್ದಿತು.

"ನನಗೆ ಯಾವುದನ್ನೂ ನಿರ್ಧರಿಸಲು ಪುರುಸತ್ತು ಕೊಡಬೇಕು, ಸುರೇಂದ್ರ!" ಅವಳ ಧ್ವನಿಯು ಚಿಕ್ಕ ಮಗುವು ಕತ್ತಲೆಯಲ್ಲಿ ದಾರಿಕೇಳುವ ಹಾಗಿತ್ತು. "ನಿನ್ನನ್ನು ಕಂಡರೆ ನನಗೆ ಇಷ್ಟ. ನೀನು ನನ್ನ ಜೀವನದಲ್ಲಿ ಒಂದು ಹೊಸ ಹುರುಪನ್ನೇ ಹುಟ್ಟಿಸಿದ್ದಿ, ನಿಜ. ಅದಕ್ಕೋಸ್ಕರ ನಿನಗೆ ನನ್ನ ವಂದನೆ. ಆದರೆ ಪ್ರೀತಿಸುವುದರಲ್ಲಿ.." ಇಷ್ಟಕ್ಕೇ ಸುಶೀಲೆಯ ಸ್ವರವು ಮೆತ್ತಗಾಯಿತು. ಈ ಮಾತುಗಳು ಹೊರಗಿನ ವ್ಯಕ್ತಿಗೆ ಸಂತೋಷದಾಯಕವಾಗಿದ್ದರೂ, ಪ್ರೀತಿಸುತ್ತಿದ್ದ ಸುರೇಂದ್ರನಿಗೆ ಅಷ್ಟು ಹಿತಕರವಾಗಲಿಲ್ಲ.

"ಅದು ನನಗೆ ಸರಿಬೀಳಲಿಲ್ಲ ಮತ್ತು ಸರಿಬೀಳಲಾರದು. ನೀನು ಸ್ನೇಹಿತನೆಂದು ನನ್ನನ್ನು ಗಣಿಸುತ್ತಿದ್ದೀಯೆ ನಾನು ನಿನ್ನನ್ನು ಪ್ರೀತಿಸುತ್ತಿರುವಾಗ ನಿಮ್ಮ ಸ್ನೇಹವನ್ನು ಕಟ್ಟಿಕೊಂಡೇನು ಮಾಡಲಿ? ಯಾವುದನ್ನೂ ಈಪೊತ್ತು ನಿರ್ಧಾರಗೊಳಿಸಬೇಕೆಂದು ಈಗ ನಾನು ಬಂದದ್ದು. ಸುಶೀ, ನಾನು ನಿನ್ನನ್ನು ಪ್ರೀತಿಸುತ್ತೇನೆ. ನೀನು ನನ್ನ ಜೊತೆಯಲ್ಲಿ ಬಾಮೇ ಬರಬೇಕು."

ಹೀಗೆ ಹೇಳುತ್ತಿದ್ದ ಪ್ರೀತಿಸುವವನ ದೈನ್ಯದ ಮುಖವನ್ನು ಶ್ರೀಕಾಂತನು ಪರದೆಯೊಳಗಿಂದಲೇ ನೋಡಿದನು. ಇನ್ನೊಬ್ಬರ ಗುಣಗಳನ್ನು ಅಲ್ಪಕಾಲದಲ್ಲಿಯೇ ತಿಳಿದುಕೊಳ್ಳುವವನಾದ ಶ್ರೀಕಾಂತನಿಗೆ ಬೂದಿಯುಲ್ಲಿ ಮುಚ್ಚಿದ ಬೆಂಕಿಯಂತೆ ಆ ದೈನ್ಯವದನದ ಸುರೇಂದ್ರನ ಮನಸ್ಸಿನಲ್ಲಿ ಹುದುಗಿದ್ದ ಹೀನಗುಣವನ್ನು ಇದುವರೆಗೆ ತಿಳಿದುಕೊಳ್ಳಲಿಕ್ಕೆ ಆಗದೆ ಇದ್ದದ್ದಕ್ಕಾಗಿ ಆಶ್ಚರ್ಯವಾಯಿತು. ಅವನ ಪತ್ನಿಯು ಇನ್ನೂ ಕತ್ತಲೆಯಲ್ಲಿ ದಾರಿಹುಡುಕುತ್ತಿದ್ದಳು. ಅವಳಿಗೆ ಈಗ ಸಹಾಯವನ್ನು ಮಾಡಬೇಕಿತ್ತಲ್ಲವೇ



"ನೀನು ಸಾಯುವುದೇ ಆದರೆ ನಾನು ನಿನ್ನ ಜೊತೆಯಲ್ಲಿಯೇ ಸಾಯುವೆನು" ಎಂದು ಹೇಳುತ್ತಾ ಅವನ ಅಡಿಯ ಹತ್ತಿರ ಬಿದ್ದಳು, ಬರಿಯ ಪಿಸ್ತೂಲಿನ 'ಟಿಕ್' ಶಬ್ದ ಕೇಳಿಸಿತು.

ಶ್ರೀಕಾಂತ. ಆದರೆ ಮೊದಲು ತನ್ನ ಸಂದೇಹಪರಿಹಾರವಮಾಡಿಕೊಳ್ಳಬೇಕಾಗಿದ್ದಿತಲ್ಲವೇ ಆತನಿಗೆ !

"ನನಗೆ ಸ್ವಲ್ಪ ಆಲೋಚನೆಮಾಡಲಿಕ್ಕೆ ಅವಕಾಶ ಕೊಡಬೇಕು, ಸುರೇಂದ್ರ!" ಎಂದಳು ಸುಶೀಲೆ. ಈ ಅವಕಾಶದಲ್ಲಿಯೆ ತನ್ನ ಕಾರ್ಯಸಾಧನೆ ಮಾಡಿಕೊಳ್ಳಬೇಕೆಂದುಕೊಂಡು ಸುರೇಂದ್ರನೆಂದನು. "ಇನ್ನು ಕಾಲವಿಳಂಬಮಾಡಲವಕಾಶವಿಲ್ಲ. ಸುಶೀ, ಆಗಲೇ ಜನರು ಮಾತನಾಡಿಕೊಳ್ಳುತ್ತಿದ್ದಾರೆ!"

"ಜನರು ಏನನ್ನು ಮಾತನಾಡಿಕೊಳ್ಳುತ್ತಿದ್ದಾರೆ?"

ಸುರೇಂದ್ರನು ಭುಜವನ್ನು ಕುಣಿಸಿದನು. "ನೀನು ಅದೆಲ್ಲಾ ಮನಸ್ಸಿಗೆ ತಂದುಕೊಳ್ಳಬಾರದು ಪ್ರಿಯೆ. ನಾನು ಅದನ್ನೆಲ್ಲಾ ಸರಿಮಾಡುತ್ತೇನೆ. ಆದರೆ ನಿನ್ನ ತಾಯಿಯು ಹಣದ ಆಶೆಯಿಂದ ನಿನ್ನನ್ನು ಬಲವಂತದಿಂದ ಶ್ರೀಕಾಂತನಿಗೆ ಮದುವೆಮಾಡಿಸಿದರೆಂದು ಎಲ್ಲರಿಗೂ ಗೊತ್ತಿದೆ. ಮತ್ತು ನನ್ನನ್ನು ಪ್ರೀತಿಸುವಷ್ಟು ನೀನು ನಿನ್ನ ಗಂಡನನ್ನು ಕೂಡ ಪ್ರೀತಿಸುವುದಿಲ್ಲವೆಂದೂ ಎಲ್ಲರಿಗೂ ಗೊತ್ತಿದೆ. ಈಗ ಇರುವ ಒಂದೇ ಹಾದಿಯೆಂದರೆ ನಾವಿಬ್ಬರೂ ಹೇಳದೆ ಕೇಳದೆ ಹೊರಟುಹೋಗಬೇಕು. ಈಗಿನ ಸಂದರ್ಭವು ಇಬ್ಬರಿಗೂ ಅನಾನುಕೂಲದ್ದಾಗಿದೆ. ಸುಶೀ, ನೀನು ಬಂದೇ ಬರಬೇಕು ! ನನಗೆ ಶ್ರೀಕಾಂತನಿಗೆ ಇರುವಷ್ಟು ಐಶ್ವರ್ಯವಿಲ್ಲ ! ಆದರೆ......"

ಆ ಲಕ್ಷಾಧಿಕಾರಿ ಶ್ರೀಕಾಂತ ಎಷ್ಟೊಂದು ಕುತೂಹಲಿಯಾಗಿ ತನ್ನ ಪತ್ನಿಯ ಉತ್ತರವನ್ನು ನಿರೀಕ್ಷಿಸುತ್ತಿದ್ದನು ! ಒಂದು ನಿಮಿಷ ಎಲ್ಲೆಲ್ಲೂ ನೀರವ; ಆ ಮೇಲೆ ಉತ್ತರವು ಬಂದೇ ಬಂದಿತು :

"ದುಡ್ಡು ! ಮಹಾ, ಆ ದುಡ್ಡು ನನ್ನನ್ನು ಬದುಕಿಸಿದಂತೆ ! ಆ ದುಡ್ಡು ಎಂಬುದು, ತಾನೇ ಒಂದು ಮನೆಯ ಅಲಂಕಾರಪ್ರಾಯವೇನೋ ಎಂಬುದನ್ನು ನನ್ನ ಮನಸ್ಸಿನೆದುರು ತಂದು ನನ್ನ ಹೃದಯವನ್ನು ಬಾಧಿಸುತ್ತಿದೆ. ನಾನು ಈ ಮನೆಯನ್ನು ಬಿಡುವುದಕ್ಕೆ ಸ್ವಲ್ಪವೂ ವ್ಯಸನಪಡುವುದಿಲ್ಲ. ಪ್ರೇಮವೆಂಬ ವಸ್ತುವಿಲ್ಲದೆ ಅರಮನೆಯಲ್ಲಿದ್ದರೂ ಪ್ರಯೋಜನವೇನು ? ಆದರೆ, ಅದಲ್ಲಾ ಸುರೇಂದ್ರ; ನಾನು ಆಗಲೇ ಒಬ್ಬನ ಅಧೀನಳಾಗಿರುವುದರಿಂದ ನಿನ್ನೊಡನೆ ಹೊರಟುಬರಲಿಕ್ಕೆ ನಾನು ಒಡಂಬಡುವುದಿಲ್ಲ."

ಇಬ್ಬರೂ ಅವರ ಸಂಭಾಷಣೆಯಲ್ಲಿ ಆಸಕ್ತರಾಗಿದ್ದುದರಿಂದ, ಅವರಿಗೆ ಪರದೆಯ ಆಚೆ ಕೆಮ್ಮಿದ ಶಬ್ದವನ್ನು ಗ್ರಹಿಸಲಿಕ್ಕಾಗಲಿಲ್ಲ. ತನಗೆ ಸರಿಯಾದ ಸಮಯ ಇನ್ನೂ ಸಿಕ್ಕಿಲ್ಲವೆಂದುಕೊಂಡು ಶ್ರೀಕಾಂತನು ಅಂತಶ್ಚಕ್ಷುವಿನಿಂದಲೇ ಎಲ್ಲವನ್ನೂ ಈಕ್ಷಿಸುತ್ತಿದ್ದನು. ಸುರೇಂದ್ರನು ತನ್ನ ಭಾಷಣವನ್ನಾರಂಭಿಸಿದ್ದನು. "ಹಾಗಾದರೆ ನೀನು ಇಲ್ಲಿಯೆ ಇರಬೇಕೆನ್ನುತ್ತೀಯೆ ! ಯಾಕೆ ಹೆದರುತ್ತೀಯಾ ? ಭಯಪಡಲು ಕಾರಣವಿಲ್ಲಾ, ಸುಶೀ !" ಸರ್ರನೆ ಸುರೇಂದ್ರನು ಪ್ರೇಮದ ಆವೇಗಕ್ಕೆ ಸಿಲುಕಿದವನಾಗಿ, ಕ್ರೋಧಾವೇಶದಿಂದ "ನಾನು ನಿನಗೆ ಪ್ರಾಣ, ಪ್ರೇಮ ಇನ್ನೂ ಪ್ರಪಂಚದಲ್ಲಿ ಯಾವುದನ್ನು ಕೊಡುತಕ್ಕದ್ದಿದೆಯೊ ಅದೆಲ್ಲವನ್ನೂ ಕೊಡಲು ಸಿದ್ಧನಾಗಿದ್ದೇನೆ. ಸುಶೀ, ನಾನು ಪ್ರಾಣವನ್ನು ತ್ಯಜಿಸಲೂ ಕೂಡ ಹಿಂಜರಿಯುವುದಿಲ್ಲ !"

ಈ ಮಾತಿನ ಕೊನೆಯೊಡನೆಯೆ ಶ್ರೀಕಾಂತನು ಒಳಗೆ ಪ್ರವೇಶಿಸಿದ, ಒಳಕ್ಕೆ ಹೋಗುತ್ತಾ ಮೆಲ್ಲಗಿನ ಧ್ವನಿಯಲ್ಲಿ "ಒಂದು ವೇಳೆ ನಿನಗೆ ಅಂತಹ ಅವಕಾಶ ಕೊಟ್ಟಲ್ಲಿ !" ಎಂದ.

ಸುಶೀಲೆಯು ಚೀರಿದಳು. ಸುರೇಂದ್ರನು ಮನಸದಲ್ಲಿಯೆ ಶಪಿಸುತ್ತಾ ಶ್ರೀಕಾಂತನನ್ನು ಬರಮಾಡಿಕೊಂಡ; ಭಯವೆಂಬ ಪಿಶಾಚಿಯು ತನ್ನ ಕೈಯನ್ನು ಸುರೇಂದ್ರನ ಭುಜದ ಮೇಲೆ ಇರಿಸಿದ್ದಿತು. ಆದರೂ ಸರ್ರನೆ ಎದ್ದು ಶ್ರೀಕಾಂತನನ್ನು ಎದುರುಗೊಂಡು "ನಿನ್ನ ತಮಾಷೆಯು ನನಗೆ ಆಹ್ಲಾದಕರವಾಗಿಲ್ಲ!" ಎನ್ನುತ್ತಾ ಕಠಿಣವಾದ ನಗೆಯನ್ನು ಬೀರಿದ.

"ಅದೆಲ್ಲವನ್ನೂ ಈಗ ಗಮನಿಸುವುದು ಬೇಡ. ನಿನ್ನ ಪ್ರೇಮವನ್ನು ನನ್ನ ಪತ್ನಿಯೆದುರು ಬಿಚ್ಚಿ ತೋರಿಸಿದುದೆಲ್ಲವನ್ನೂ ನಾನು ಅರ್ಧಘಂಟೆಯ ಹಿಂದಿನಿಂದಲೂ ಕೇಳಿದ್ದೇನೆ." ಶ್ರೀಕಾಂತನು ಸ್ವಾಭಾವಿಕ ಭಾವದಿಂದಲೇ ಹೇಳಿದನು.

"ಆಂ ! ನಿಜವೇ ?"

"ಅದಿರಲಿ, ನಿನಗೆ ಈಗ ಹೊರಗೆ ಹೋಗಬೇಕಾಗಿದೆಯೇನು ಮತ್ತೆ ?"

"ಹೊರಗೇ ?" ಅದು ತನ್ನ ಮನಸ್ಸಿನಲ್ಲಿ ಹೊಳೆಯದೆ ಇರುವವನ ಹಾಗೆ ತೋರಿಸುವುದಕ್ಕೆ ಸುರೇಂದ್ರ ಯತ್ನಿಸಿದ.

"ಹಾಗಾದರೆ, ಇಲ್ಲಿಯೆ ಕೂತುಕೊಳ್ಳಬಹುದೆಂದು ನನಗೆ ತೋರುತ್ತದೆ!"

ಸುರೇಂದ್ರನು ಆಶ್ಚರ್ಯದ ಭಾವವನ್ನು ತನ್ನ ಮುಖದ ಮೇಲೆ ಬೀರಿ, ಒಂದು ಆಸನದಲ್ಲಿ ಕೂತುಕೊಂಡನಂತರ, ಲಕ್ಷಾಧಿಕಾರಿಯಾದ ಶ್ರೀಕಾಂತನು ಬಾಗಿಲಿಗೆ ಬೀಗವನ್ನು ಹಾಕಿ ಜೇಬಿನಲ್ಲಿ ಬೀಗದ ಕೈಯ್ಯನ್ನು ಹಾಕಿಕೊಂಡನು.

"ಯಾಕೆ ಬಾಗಿಲಿಗೆ ಬೀಗವನ್ನು ಹಾಕಿದೆ? ಮನಸ್ಸು ಸ್ಥಿಮಿತದಲ್ಲಿಲ್ಲವೇನು ?" ಎಂದು ಸುರೇಂದ್ರನು ಕೂಗಿ ಕೇಳಿದ.

ಹೆಂಗುಸಿನ ಶಬ್ದವು ಮಧ್ಯೆ ಪ್ರವೇಶಿಸಿತು. ಶ್ರೀಕಾಂತನು ಪತ್ನಿಯ ಕಡೆಗೆ ಉದ್ದೇಶಪೂರ್ವಕವಾಗಿ ತಿರುಗಿ "ಸಂದರ್ಭವು ವಿಶದವಾಗಿಯೆ ಇದೆ, ಪ್ರಿಯೆ !" ಎನ್ನುತ್ತಾ ಸುರೇಂದ್ರನ ಕಡೆಗೆ ತಿರುಗಿದನು "ನಾನು ಏಕೆ ಬಾಗಿಲಿಗೆ ಬೀಗಹಾಕಿದೆನೆಂದರೆ, ನೀನು ಏನನ್ನು ಮಾಡಬೇಕೆಂದಿರುವೆಯೊ ಅದನ್ನೇ ನಾನು ಮಾಡಲೆಣಿಸಿದ್ದೇನೆ .. ಸುರೇಂದ್ರ ! ಎಂದರೆ ಈ ವಿಷಯವನ್ನು ಈ ರಾತ್ರಿಯೇ ಚರ್ಚಿಸಬೇಕು. ನಾವಿಬ್ಬರೂ ಒಬ್ಬಳೇ ಹೆಂಗುಸನ್ನು ಪ್ರೀತಿ–"

"ಶ್ರೀಕಾಂತ !" ಎಂದಳು ಸುಶೀಲೆ.

"ಎಂದರೆ ನಮ್ಮಲ್ಲೊಬ್ಬರು ಬಿಟ್ಟುಕೊಡಬೇಕು; ಎಂದರೆ ನಮ್ಮಲ್ಲೊಬ್ಬರು—ನೋತವನು—ಸಾಯಬೇಕು. ಸುಶೀಲೆಯನ್ನು ಬಿಟ್ಟರೆ ನನಗೆ ಜೀವನವೇ ಸಾಗದು. ನೀನು ಅವಳಿಗೆ ಹೇಳುತ್ತಿದ್ದುದನ್ನು ಕೇಳಿದ ಮೇಲೆ ನೀನು ಕೂಡ ಅದೇ ಅಭಿಪ್ರಾಯವುಳ್ಳವನಾಗಿದ್ದೀಯೆ ಎಂಬುದು ವಿಶದವಾಗಿದೆ. ನಾನು ಹೇಳಿದುದು ಸರಿಯೆ ?"

ಸುರೇಂದ್ರನು ಉಗುಳನ್ನು ನುಂಗುತ್ತಾ ಎಂದನು. "ಆಂ.. ಹೌದು, ನಿಜ, ಸುಶೀಲೆಯನ್ನು ಬಿಟ್ಟು ನಾನು ಒಂದು ನಿಮಿಷ ಇರಲಾರೆ; ಅವಳನ್ನು ಪ್ರೀತಿಸುತ್ತೇನೆ. ಅದಕ್ಕೋಸ್ಕರ ನಾನು ನನ್ನನ್ನೇ ವಂಚಿಸಿಕೊಳ್ಳಲೇ ?"

"ಹಾಗೆಯೇ ಮಾಡು" ಎಂದುತ್ತರ ಕೊಟ್ಟ ಶ್ರೀಕಾಂತನು ಮಾತನ್ನು ಮುಂದುವರಿಸಿದ: "ಅಂತೂ ಇದು ಇಷ್ಟಕ್ಕೆ ಬಂತು: ನಾವಿಬ್ಬರೂ ಅವಳನ್ನು ಹೊಂದುವುದಕ್ಕೆ ಅಸಾಧ್ಯವಾದುದರಿಂದ ಯಾರಾದರೂ ಒಬ್ಬರು ಸಾಯಬೇಕು; ಅದು ಸ್ವಾಭಾವಿಕವಾದುದಲ್ಲವೇ ?"

ಸುರೇಂದ್ರನು ಗಾಬರಿಗೊಂಡನು. ಅವನ ಮುಖಚರ್ಯೆಯು ಇಳಿದು ಬಿಳುಪಾಗಿದ್ದಿತು.

"ನೀನು ಹುಚ್ಚನಾಗಿರಬೇಕು!" ಎಂದ ಒಣಗಿದ ಕಂಠದಿಂದ.

"ಇಲ್ಲ! ನಾನು ಸಾಕಷ್ಟು ಜ್ಞಾನವುಳ್ಳವನಾಗಿಯೇ ಇದ್ದೇನೆ. ಈಗ.. ಇಲ್ಲಿ ನೋಡು; ಆ ಬದಿಯ ಬೀರುವಿನಲ್ಲಿ"—ಶ್ರೀಕಾಂತನು ತನ್ನ ಬಲಗಡೆಯ ರೂಮಿನ ಮೂಲೆಯಲ್ಲಿದ್ದ ಬೀರುವಿನ ಕಡೆಗೆ ಕೈ ತೋರಿಸುತ್ತಾ ಹೇಳಿದ: "ಎರಡು ಪಿಸ್ತೂಲುಗಳಿವೆ. ಒಂದರಲ್ಲಿ ಗುಂಡು ಇದೆ, ಇನ್ನೊಂದು ಖಾಲಿಯಾಗಿದೆಯೆಂದು ನನಗೆ ತಿಳಿದಮಟ್ಟಿಗೆ ಜ್ಞಾಪಕವಿದೆ. ಅತಿಥಿಯಾದ ನಿನ್ನನ್ನು ಸತ್ಕರಿಸಬೇಕಾದದ್ದು ನನ್ನ ಧರ್ಮವಾದುದರಿಂದ, ಮೊದಲು ಇಷ್ಟ ಬಂದ ಪಿಸ್ತೂಲನ್ನು ಆರಿಸಿಕೊಳ್ಳುವ ಅವಕಾಶ ನಿನಗೆ ಕೊಡುತ್ತೇನೆ!"

"ಮೊದಲು ನಾನೇ ಆರಿಸಲೇ ?"

"ಹೌದು, ನಿನ್ನ ಶತ್ರುವಿನಿಂದ ಬಿಡುಗಡೆ ಹೊಂದಲಿಕ್ಕೆ. ಇದು ರಕ್ತಹತ್ಯವೆಂದು ಹೇಳಿಕೊಳ್ಳುವುದಕ್ಕಿಲ್ಲವಾದರೂ, ಬೇಕಾದರೆ 'ನಾನೇ ನನ್ನ ಜೀವನವನ್ನು ಕೊನೆಗಾಣಿಸಲು ಯತ್ನಿಸಿದೆ' ಎಂದು ಬರೆದಿಟ್ಟು ಬಿಡುತ್ತೇನೆ."

"ನನಗೆ ಈ ದೃಶ್ಯವನ್ನು ನೋಡುವುದಕ್ಕಾಗುವುದಿಲ್ಲ" ಎಂದು ಕೂಗಿಕೊಂಡಳು ಸುಶೀಲೆ.

"ಪ್ರಿಯೆ, ನಿನಗೆ ಸುಖ-ಸಂತೋಷಗಳನ್ನೊದಗಿಸಿಕೊಡುವುದಕ್ಕೆಂದೇ ಇವೆಲ್ಲ ಪ್ರಯತ್ನಗಳನ್ನು ಮಾಡುತ್ತಿರುವುದು; ಗೊತ್ತಾಗುತ್ತಿಲ್ಲವೆ ? ಆದರೆ.."—ಸುರೇಂದ್ರನ ಕಡೆಗೆ ತಿರುಗಿ—"ನೀನು ಖಾಲಿ ಪಿಸ್ತೂಲನ್ನು ಆರಿಸುವುದಾದರೆ—"

"ಆಗ ಏನು ?" ಸುರೇಂದ್ರನು ಗಾಬರಿಯಿಂದಲೇ ಕೇಳಿದನು.

"ಆಗ ನಾನು ನಿನ್ನನ್ನು ಕೊಲ್ಲುತ್ತೇನೆ" ಶ್ರೀಕಾಂತನು ಮೆಲ್ಲಗೆ ಹೇಳಿದ: "ನೀನು ಆಗಲ ಎರಡು ಸಲ ಪ್ರೀತಿಸುವವಳಿಗೋಸ್ಕರ ನಾನು ಸಾಯುವೆನೆಂದು ಹೇಳಿದ್ದೀಯಲ್ಲಾ, ಜ್ಞಾಪಿಸಿಕೊ. ಆ ಮೇಲೆ ನಾನು, ನನ್ನ ಪ್ರಾಣರಕ್ಷಣೆಗೋಸ್ಕರ ನಿನ್ನ ಕೊಲೆಮಾಡಿದೆನೆಂದು ಹೇಳುವೆ!"

"ಶ್ರೀಕಾಂತಾ, ಹುಚ್ಚನಂತೆ ಮಾತನಾಡಬೇಡ; ನಾವಿರುವುದು ಇಪ್ಪತ್ತನೆಯ ಶತಮಾನದಲ್ಲಿ."

"ಗುಹೆಗಳಲ್ಲಿ ವಾಸಿಸುತ್ತಿದ್ದು ಹೊಡೆದಾಡುತಿದ್ದವರ ಸ್ಥಿತಿಯೇ ಈಗಲೂ ನಮಗೆ ಒದಗಿದೆ.. ಇಬ್ಬರು ಗಂಡಸರು ಒಬ್ಬಳನ್ನೇ ಪ್ರೀತಿಸುತ್ತಿರುವುದು! ನನ್ನ ಹೆಂಡತಿಯು.." ಅವಳ ಕಡೆ ನೋಡುತ್ತಾ—"ಅದಕ್ಕೆ ಒಪ್ಪದೆ ಇರಬಹುದು; ನಾನು ಅವಳನ್ನು ಪ್ರೀತಿಸುತ್ತಿದ್ದೇನೆ!"

ಸುಶೀಲೆಯು ತನ್ನ ಕೈಗಳಿಂದ ಮುಖವನ್ನು ಮುಚ್ಚಿಕೊಂಡಳು, "ನನಗೆ ಗೊತ್ತೇ ಇರಲಿಲ್ಲ!" ಎಂದಳು.

"ನಿನ್ನ ಪತ್ನಿಯು ತನ್ನ ಅಭಿಪ್ರಾಯವನ್ನು ವಿಶದಪಡಿಸಿರುವದಿಲ್ಲ!" ಎಂದು ನುಡಿದ ಸುರೇಂದ್ರ ಮೆತ್ತಗೆ.

"ಸುಶೀಲೆಯ ಅಭಿಪ್ರಾಯ ಬೇಕಿಲ್ಲ; ನಾವೇ ಯಾವುದಾದರೊಂದು ನಿರ್ಧಾರಕ್ಕೆ ಬರಬೇಕು. ಈಗ ನೀನು ಹೇಗೂ ತಪ್ಪಿಸಿಕೊಳ್ಳುವ ಹಾಗಿಲ್ಲ. ಸುರೇಂದ್ರ! ಆ ಬಾಗಿಲಿಗೆ ಬೀಗಹಾಕಿದೆ. ಕಿಟಕಿಯೊಳಗಿಂದ ಹೋಗಲು ಅವಕಾಶವಿಲ್ಲ. ಅದೆಲ್ಲವನ್ನೂ ಮೀರಿ ನನ್ನ ಇಷ್ಟವನ್ನು ಪೂರ್ತಿಗೊಳಿಸದಿದ್ದರೆ, ನನ್ನ ಭುಜಬಲದಿಂದಲೇ ನಿನ್ನನ್ನು ಕೊನೆಗಾಣಿಸುತ್ತೇನೆ."

ಶ್ರೀಕಾಂತನು ತಾನೇ ಬೀರುವಿನ ಹತ್ತಿರಕ್ಕೆ ಹೋಗಿ ಎರಡು ಪಿಸ್ತೂಲುಗಳನ್ನು ಹೊರಕ್ಕೆ ತೆಗೆದ. ಒಂದೊಂದು ಕೈಯಲ್ಲಿ ಒಂದೊಂದು ಪಿಸ್ತೂಲನ್ನಿಟ್ಟುಕೊಂಡು ಕೈ ನಡುಗುತ್ತಲಿದ್ದ ಸುರೇಂದ್ರನನ್ನು ಸಮೀಪಿಸಿದ. "ಜಾಗ್ರತೆ ಆರಿಸಿಕೊ ಸುರೇಂದ್ರ!"

ಸರ್ರನೆ ಒಂದು ತುಪಾಕಿಯನ್ನು, ತನ್ನನ್ನೇ ಮರೆತ ಸುರೇಂದ್ರನು ತನ್ನ ಬಲಗೈಯಿಂದ ತೆಗೆದುಕೊಂಡು, ನಡುಗುತ್ತಲೇ ಶ್ರೀಕಾಂತನ ಮುಖಕ್ಕೆ ಗುರಿಯಿಟ್ಟ; ಶ್ರೀಕಾಂತನು ನಕ್ಕ. ಸುಶೀಲೆ ಮುಂದೆ ನುಗ್ಗಿ ಬಂದಳು. ಲಕ್ಷಾಧಿಕಾರಿಯು "ಹೋಗು ಹಿಂದೆ!" ಎಂದು ಆಜ್ಞೆ ಮಾಡಿದನು.

"ನಾನು ಹೋಗುವುದಿಲ್ಲ; ನಿನ್ನನ್ನೇ ನಾನು ಪ್ರೀತಿಸುತ್ತಿರುವುದು. ಶ್ರೀಕಾಂತ! ಅದು ಈಗ ಚೆನ್ನಾಗಿ ನನ್ನ ತಿಳಿವಳಿಕೆಗೆ ಬಂದಿದೆ. ನೀನು ಸಾಯುವುದೇ ಆದರೆ ನಾನು ನಿನ್ನ ಜೊತೆಯಲ್ಲಿಯೇ ಸಾಯುವೆನು!" ಎಂದು ಹೇಳುತ್ತಾ ಅವನ ಅಡಿಯ ಹತ್ತಿರ ಬಿದ್ದಳು.

ಬರಿಯ ಪಿಸ್ತೂಲಿನ 'ಟಿಕ್' ಶಬ್ದವು ಕೇಳಿಸಿತು. ಸುರೇಂದ್ರನು ಶ್ರೀಕಾಂತನ ಕಾಲಿನ ಕಡೆ ಬಿದ್ದನು. "ಪಿಸ್ತೂಲಿನಿಂದ ಗುಂಡು ಹಾರಿಸಬೇಡ ಶ್ರೀಕಾಂತ! ನನಗೆ ಈಗ ಹೊರಟು ಹೋಗುವುದಕ್ಕೆ ಅವಕಾಶ ಕೊಟ್ಟರೆ, ಸುಶೀಲೆಯನ್ನು ಇನ್ನೆಂದೂ ತಿರುಗಿ ನೋಡುವುದಿಲ್ಲವೆಂದು ವಾಗ್ದಾನ ಮಾಡುತ್ತೇನೆ!" ಮಾತಿನೊಡನೆಯೆ

ಡೋಂಗರೆ ಇವರ ಬಾಲಾಮೃತವು

ಸೊರಗಿ ಕಡ್ಡಿಯಂತಾಗಿ ನಿರ್ಬಲರಾದ

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಅವನ ಕೈಗಳು ಲಕ್ಷ್ಮಾಧಿಕಾರಿಯ ಕಾಲುಗಳನ್ನು ಹುಡುಕುತ್ತ ಲಿದ್ದುವು.

ಶ್ರೀಕಾಂತನ ಉತ್ತರ ಕೂಡ ಬಹಳ ಆಶ್ಚರ್ಯಕರವಾಗಿತ್ತು. ತನ್ನ ಪಿಸ್ತೂಲನ್ನು ಟೇಬಲ್ಲಿನ ಮೇಲೆ ಬೀಸಾಡಿ, ಗಟ್ಟಿಯಾಗಿ ನಕ್ಕನು. "ಈಗ ನಿನ್ನನ್ನು ಪ್ರೀತಿಸಿದವನ ನಿಜವಾದ ಪ್ರೇಮ ವನ್ನು ನೋಡಿದೆಯಲ್ಲವೇ, ಸುಶೀ?" ಎಂದ ಶ್ರೀಕಾಂತ.

"ಅವನನ್ನು ಯಾವ ರೀತಿಯಲ್ಲಿ ಪರಿಗಣಿಸುತ್ತೀಯೆ?" ಬಹುಶಃ —ಅವಳ ಕೈಗೆ ಬೀಗದ ಕೈಯನ್ನು ಕೊಡುತ್ತಾ— "ಅವನಿಗೆ ಹೊರಕ್ಕೆ ಹೋಗುವ ದಾರಿಯನ್ನು ತೋರಿಸುವೆ ತಾನೆ?"

ಆ ಹೆಂಗುಸು ಅವನ ಕಿವಿಯಲ್ಲಿ ಪಿಸುಗುಟ್ಟುತ್ತಾ "ಇಲ್ಲ, ಅವನನ್ನು ಕಂಡರೆ ನನಗೆ ಆಗುವುದಿಲ್ಲ" ಎಂದಳು.

ಹಾಗಾದರೆ ಆ ಕೆಲಸವನ್ನು ನಾನೇ ಮಾಡುತ್ತೇನೆ ಪ್ರಿಯೆ!" ಬಾಗಿಲ ಕಡೆಗೆ ಹೋಗಿ–"ಗುಡ್‌ನೈಟ್, ಸುರೇಂದ್ರ, ಗುಡ್ ಬೈ" ಎಂದ.

* * *

"ನಾನು ಏನೂ ತಪ್ಪು ಮಾಡಲಿಲ್ಲ; ಶ್ರೀಕಾಂತ, ಅವನು ನನ್ನ ಮೈಗೆ ಒಂದೇ ಒಂದು ಸಲ ಕೈ ಸಹ ತಗುಲಿಸಿಲ್ಲ" ಎಂದು ಪ್ರಾರ್ಥಿಸಿಕೊಳ್ಳುವ ಧ್ವನಿಯಲ್ಲಿ ಹೇಳುತ್ತಿದ್ದಳು ಸುಶೀಲೆ.

"ಪಾಪ, ಫಲಕಾರಿಯಾಗದ ಕೆಲಸಕ್ಕೆ ವ್ಯರ್ಥ ಕಷ್ಟಪಟ್ಟ!"

"ಆದರೆ ನಾನು ಒಬ್ಬೊಂಟಿಗಳಾಗಿ ಇದ್ದೆ. ಆದ್ದರಿಂದ ನನ ಗೇನೂ ತೋಚಲಿಲ್ಲ. ಅದೂ ಅಲ್ಲದೆ ನನ್ನನ್ನು ಕೊಂದುಕೊಂಡಿ ದ್ದೀಯೆ ಎಂಬ ಭಾವನೆಯು ನನ್ನಲ್ಲಿ ಮೂಡಿತ್ತು. ನನ್ನ ಮೇಲಿರುವ ನಿನ್ನ ಪ್ರೇಮವು ಸತ್ಯವಾದುದು!" ಹೀಗೆ ಹೇಳುತ್ತಲೇ ಇಬ್ಬರ ತುಟಿಗಳೂ ಒಂದಕ್ಕೊಂದು ಸಮೀಪಿಸಿದುವು.

* * *

ಅದೇ ರಾತ್ರಿ ಇನ್ನು ಸ್ವಲ್ಪ ಹೊತ್ತಾದ ಮೇಲೆ ಸುಶೀಲೆಯು "ಇನ್ನೊಂದು ಪಿಸ್ತೂಲಿನಲ್ಲಿ ಗುಂಡುಗಳಿದ್ದುವೇ?" ಎಂದು ಶ್ರೀಕಾಂತನನ್ನು ಕೇಳಿದಳು.

"ನನಗೆ ಈ ಪ್ರೇಮದ ನಾಟಕವನ್ನೇ ಆಡಲಿಕ್ಕೆ ಬಾರದು!" ಎಂದುತ್ತರ ಕೊಟ್ಟು ಶ್ರೀಕಾಂತನು, ತನ್ನ ಪಾಲಿಗೆ ಬಂದಿದ್ದ ಪಿಸ್ತೂಲಿನಿಂದ ಗುಂಡು ಹಾರಿಸಲುದ್ಯುಕ್ತನಾದನು. ಕೆಲವು ನಿಮಿಷಗಳಲ್ಲಿಯೇ ಅದರ ಉತ್ತರವು ಬಂತು. ಏನು ಗೊತ್ತೆ! ಬರಿಯ ಖಾಲೀ ಪಿಸ್ತೂಲಿನ 'ಟಿಕ್' ಎನ್ನುವ ಶಬ್ದ!

(೪೩೮ನೆಯ ಪುಟದಿಂದ ಮುಂದುವರಿದುದು)

"ಅಳಿಸಂಕುಳವೇ, ಮಾಮರವೇ, ಬೆಳು ದಿಂಗಳೇ, ಕೋಗಿಲೆಯೇ ನಿಮ್ಮನಿಮ್ಮನೆಲ್ಲ ರನು ಒಂದು ಬೇಡುವೆನು: ಎನ್ನೊಡೆಯ ಚೆನ್ನಮಲ್ಲಿಕಾರ್ಜುನ ದೇವರ ಕಂಡರೆ ಕರೆದು ತೋರಿರೆ!"

ಈ ಏಕಾದಶವಿಧಾಸಕ್ತಿಗಳಿಗೆ ಯುಕ್ತ ವಾದ ಅನೇಕ ಉದಾಹರಣೆಗಳನ್ನು ಕೊಡ ಬಹುದಾದರೂ ಅವೆಲ್ಲ ಭಕ್ತಿಯು ಎಲ್ಲ ಧರ್ಮಗಳಲ್ಲಿ ಒಂದೇ ರೂಪವಾಗಿದೆಯೆಂದು ಹೇಳುತ್ತವೆ. ಆಸಕ್ತಿಗಳಿಗೆ ಅಂಗಭೂತ ವಾಗಿ ನೀತಿಗಳೂ ಬರುತ್ತವೆ. ಅವಾದರೂ ಎಲ್ಲೆಡೆಯಲ್ಲಿ ಸಾಮಾನ್ಯವಾಗಿವೆ. ಆದರೆ ಒಬ್ಬರು ಹರಿಯನ್ನು ಪೂಜಿಸುವಾಗ ಮತ್ತೊಬ್ಬರು ಹರನನ್ನು ಪೂಜಿಸಿದರೆ ಇವರು ಶ್ರೇಷ್ಠರು ಅವರು ಕನಿಷ್ಠರು ಎಂದು ಹೇಳಲಾಗದು. ಅವರು ಆ ಆ ರೀತಿಯಾಗಿ ಪೂಜೆಮಾಡುವುದಕ್ಕೆ ಒಂದು ಕಾರಣವಿದೆ. "ಭಾವಿಸಿದ್ದೇ ಬ್ರಹ್ಮ" ಎಂಬ ಲೋಕೋಕ್ತಿಯಿದೆ. ಆ ಮೇರೆಗೆ ಒಬ್ಬರು ಹರಿಯನ್ನೂ, ಮತ್ತೊಬ್ಬರು ಹರ ನನ್ನೂ ಭಜಿಸುತ್ತಾರೆ. ಯಾವ ದೇವರಾದ ರೇನು? ಇಬ್ಬರ ಭಕ್ತಿಯ ಮಾರ್ಗವು ಒಂದೇ. ಆದುದರಿಂದ ಶಿವೋಪಾಸಕರೂ ವಿಷ್ಣೂಪಾಸಕರೂ ನಿರ್ವಿಕಾರಬುದ್ಧಿ ಯಿಂದ ಹರಿದಾಸರ ಕೀರ್ತನೆಗಳನ್ನೂ ಶಿವಶರಣರ ವಚನಗಳನ್ನೂ ಓದಲನುವಾದರೆ ಕರ್ನಾಟಕಕ್ಕೆ ಎಷ್ಟೋ ಲಾಭವಿದೆ. ಅವರ ವರಲ್ಲಿರುವ ವೈಮನಸ್ಯವು ತನ್ನಿಂದ ತಾನೇ ಅಳಿದುಹೋಗುವುದು.

ಬಾ, ಕೈಯ ತಾ !

ಶ್ರೀ. 'ಅಂಬಿಕಾತನಯದತ್ತ'

೧

ಮನಸಿನಲ್ಲಿ ಹೊಳೆದವನೆ
ಕನಸಿನಲ್ಲಿ ಬೆಳೆದವನೆ
ಜೀವನವನೆ ತೊಳೆದವನೆ
ಎಲ್ಲಿರುವೆ ಬಾ !

ಚೆಲುವಿನಲ್ಲಿ ಮಾಗಿರುವೆ,
ಒಲವಿನಲ್ಲಿ ಬಾಗಿರುವೆ,
ಜಗದ ರೂಪವಾಗಿರುವೆ
ಕೈಗೆ ಕೈಯ ತಾ !

೨

ಹಳ್ಳ ಹೊಳೆಗೆ ಸೂಗಿದಾಗ
ಹೂ ಹೂವಿಗೆ ತಾಗಿದಾಗ
ಹಕ್ಕಿಕೆರಳಿ ಕೂಗಿದಾಗ
ಮೂಡಿದವನೆ ಬಾ !

ಗಂಡು-ಹೆಣ್ಣು ಕೂಡಿದಾಗ
ತಾಯಿ ಕೂಸ ನೋಡಿದಾಗ
ಜೀವ ಸೆಲೆಯು ತೋಡಿದಾಗ
ಬಹನೇ ಕೈ ತಾ!

೩

ಕಿರಣ ಹಸಿರ ಮುದ್ದಿಡುತಿರೆ
ಬಿಂಬ ಬಸಿರ ಬಗೆದು ಬರೆ
ತುಂಬಿ ತನ್ನ ಗುಂಗಿನೊಳಿರೆ
ಕುಣಿದವನೇ ಬಾ !

ಕಣ್ಣು ಕಣ್ಣು ಸೆಳೆಯುತಿರೆ
ಮಳೆಗೆ ಮಣ್ಣೆ ಮೊಳೆಯುತಿರೆ
ಮೋಡ ಬಿಲ್ಲ ತಳೆಯುತಿರೆ
ಚಾಚಿದ ಕೈ ತಾ !

ರಣಕಾಳಿ !

ಶ್ರೀ. ಟಿ. ಎಸ್. ಶ್ರೀನಿವಾಸಮೂರ್ತಿ

೧

ಭೀಮರುಚಿ, ಭೀಷ್ಮಶುಚಿ
ಪ್ರಲಯಛಂದ ಚಟುಲಗತಿ!
ಧೈ ತಕಧೈ, ಧೈ ತಕಧೈ–
ಕುಣಿ ಕುಣಿ ಓ ಸಮರರತಿ !

ರುಗ್ಣವಕ್ತ್ರೆ ರುಧಿರ ವಸ್ತ್ರೆ !
ಅಗ್ನಿಸ್ಫುರಿತ ನಿಟಿಲನೇತ್ರೆ !
ಅಡಿಯುನೆತ್ತಿ, ಅಡಿಯ ಮೆಟ್ಟಿ
ತಾಂಡವಗೆಯ್ ಭೀಮಗಾತ್ರೆ !

ಮಸಣಸ್ಥಿತೆ, ರಕ್ತತೃಷಿತೆ,
ರುಂಡಮಾಲ ಭೂಷಿತೆ!
ಶಂಕರಪ್ರಿಯೆ ದೇವಿ ಅಭಯೆ,
ಭೀಷ್ಮತರ ವಿದೂಷಿತೆ!

೨

ಡಮಡಮ ರಣಭೇರಿ ಬಡಿಯೆ
ಇಸುವ ಸರಳ ಛಂದ ಮಿಡಿಯೆ
ಕುಣಿಯೆ ರುದ್ರ ರೂಪಿಣಿ!
ಕೆದರುಮುಡಿಯ ಅಸಿಯ ಕೈಯ
ಶ್ಯಾಮಲ ಸ್ವರೂಪಿಣಿ!

ಹಗೆಯು ಹಗೆಯ ನೊಣೆಯುವನಕ
ಕರುಬು ಕರುಬನಳಿಯುವನಕ
ಸಮರಗಾನ ಗೈಯುತ
ಸಮರದ ಕಣ ತುಂಬಿರೆ ಹೆಣ
ಕುಣಿಯೆ ಕೊಬ್ಬಿಯುಬ್ಬುತ !

೩

ಹಗೆಯು ಹಗೆಯ ಹಗೆಗೊಳ್ಳುತ
ದಂಷ್ಟ್ರವನ್ನು ಮಸೆಯಲು
ತನಗೆ ತಾನೆ ತನ್ನದೊಂದು
ಚಿತೆಯ—ಸೂಡ—ರಚಿಸಲು

ಉದ್ಬೋಧಿಸಿ ಮುನ್ನುಗ್ಗಿಸಿ
ಕುಣಿಯೆ ಐಂದ್ರಜಾಲಿಣಿ!
ಹಳತನೆಲ್ಲ ಹಾಳುಮಾಡು
ಸೃಷ್ಟಿ-ಪ್ರಳಯ ಕಾರಿಣಿ!

ಬಾಂಬು, ಗುಂಡು, ಶಂಡುದಂಡು
ಹಿಂಡು ಹಿಂಡು ಅಳಿಯಲಿ !
ಪವನಯಾನ ಸಲಿಲಯಾನ
ತಂಡ ತಂಡ ಕೆಡೆಯಲಿ !

ಮನುಜಜ್ಞಾನ ಸುವಿಜ್ಞಾನ
ಸಮರಕ್ರತುವ ರಚಿಸಲಿ !
ಎಣಿಕೆಯಿರದೆ ಕೆಡೆದ ಹೆಣದ
ಬಣಬೆ ಬಲಿಯ ಸಲಿಸಲಿ!

'ಅಹಂಕಾರದೀ ವಿಕಾರ
ಹಾಳು ಬಾಳು ನೊಣೆಯಲು
ಹರಸು ತಾಯೆ, ಸಮರ ಜೀಯೆ,
ಪ್ರೇಮಶಕ್ತಿ ಮೊಳೆಯಲು !

ಮರೆವಿನ ಮೋಜು

(ಮನೋವಿಶ್ಲೇಷಣಾತ್ಮಕ ಹರಟೆ)

★

ಪ್ರೊ. ಎನ್. ಎಂ. ಕುಲಕರ್ಣಿ, ಎಂ. ಎ.,

"ಮರೆಯುವಹಾಗಿದ್ದರೆ ಮನೆಯಲ್ಲಿ ಹೇಳಿದ ಸಾಮಾನುಗಳ ಯಾದಿಯನ್ನೇಕೆ ಮಾಡಿಕೊಂಡು ಹೋಗಬಾರದು ?" ಎಂದು ನಾನು ನಮ್ಮ ಕಲ್ಲನನ್ನು ಕೇಳಿದೆ.

"ಅವ್ವ ಹೇಳಿದ್ದೆಲ್ಲ ಬರೆದೇ ಬಿಟ್ಟಿದ್ದೆ; ಆದರೆ ಅಂಗಡಿಗೆ ಹೋದಾಗ ಚೀಟಿಯನ್ನೇ ಮರೆತಿದ್ದೆ !" ಎಂದು ಹೇಳಿದನವ.

ಇದಕ್ಕೆ ಸರಿಯಾದ ಉಪಾಯ ಹುಡುಕಲು ತಲೆತುರಿಸಿದೆ. ಯಾವ ಉತ್ತರವೂ ಬರಲಿಲ್ಲ. ಅದನ್ನೇ ವಿಚಾರಿಸುತ್ತ ಕುರ್ಚಿಯ ಮೇಲೆ ಕುಳಿತೆ. ಮಗ್ಗುಲಿಗಿದ್ದ ಪುಸ್ತಕಗಳಲ್ಲಿ ಒಂದನ್ನು ತೆಗೆದುಕೊಂಡು ಓದಲಿದ್ದೆ. ಅದು ಡಾಕ್ಟರ್ ಕಾರ್ಲ್‌ಜ್ಯೂಂಗರವರ ಪುಸ್ತಕವಾಗಿತ್ತು. 'ಮಾನಸಶಾಸ್ತ್ರಜ್ಞರಾದರೂ ಈ ಮರೆವಿನ ವಿಷಯವಾಗಿ ಏನು ಹೇಳುವರು" ಎಂದು ಕುತೂಹಲದಿಂದ ಓದಿದೆ. ಅದೇನೋ ದೊಡ್ಡ ದೊಡ್ಡ ಶಬ್ದಗಳಲ್ಲಿ ಅವರು "Conscious (ಜಾಗೃತ)" "Unconscious (ಸುಪ್ತ)" ಮತ್ತು "Sub-conscious (ಅರ್ಧಜಾಗೃತ)" ಎಂದು ದೊಡ್ಡದೊಂದು ಪುರಾಣವನ್ನೇ ಬರೆದಿದ್ದರು. ನನಗೆ ಅದಾವುದೂ ಅರ್ಥವಾಗಲಿಲ್ಲ. ನಮ್ಮ ಕಲ್ಲನ ಮರೆವನ್ನೇ ಚೆನ್ನಾಗಿ ಪರೀಕ್ಷಿಸಿದರೆ ಏನಾದರೂ ತಕ್ಕ ಉಪಾಯ ಸಿಕ್ಕೇ ಸಿಗುವುದು ಎಂದು ನಿರ್ಧರಿಸಿದೆ.

ಏನು ಮರೆತರೂ ನಮ್ಮ ಕಲ್ಲ ಶಾಲೆಗೆ ಹೊರಟಾಗ ಫಲಾಹಾರದ ಡಬ್ಬಿಯನ್ನು ಮಾತ್ರ ಮರೆಯುತ್ತಿರಲಿಲ್ಲ. ಇದೊಂದು ಆಶಾಕಿರಣ ಹೊಳೆಯಿತು. 'ನಮ್ಮ ಮನಸ್ಸು ಕೆಲವು ಸಂಗತಿಗಳನ್ನು ಮಾತ್ರ ನೆನಪಿಟ್ಟು ಉಳಿದುವನ್ನೆಲ್ಲ ಮರೆಯುತ್ತದೆ' ಎಂದು ಒಂದು ವಿಚಾರ ಬಂತು. ಕೆಲವರು ಅನೇಕ ಸಂಗತಿಗಳನ್ನು 'ಮುದ್ದಾಂ' ಮರೆಯುತ್ತಾರೆ. ಇಂಥವರಲ್ಲಿ ನಮ್ಮ ರಾಜಕಾರಣ ಧುರೀಣರು. ಅವರಿಗೆ ಅದೇಕೋ "Short memory (ಮರೆವುಗೇಡಿತನ)" ಅಂತಾರಲ್ಲ ಅದು ಹೆಚ್ಚಾಗಿರುತ್ತದೆ. ಅಂತೆಯೇ ಹಿಟ್ಲರ್, ಮುಸೋಲಿನಿ ಮೊದಲಾದವರು ಹಿಂದಾದ ಒಪ್ಪಂದ-ನಿರ್ಣಯಗಳನ್ನು ಬೇಗನೆ ಮರೆಯುತ್ತಾರೆ. ಇದು ಮರೆವಿನ ನಟನೆ. ಕವಿಗಳು ಮಾತ್ರ ಹಾಗಲ್ಲ; ಅವರು ಹಿಂದಾದ ಸಂದರ್ಭಗಳನ್ನೂ, ಅನುಭವಗಳನ್ನೂ ಬಯಾಸದಿಂದ ನೆನಪಿಗೆ ತರುತ್ತಾರೆ. 'ಮರೆವೇ ನಮ್ಮ ದುಃಖಕ್ಕೆ ಕಾರಣ' ಎಂದು ಅವರು ಹೇಳುವರು. ವರ್ಡ್ಸ್‌ವರ್ಥ್ ಎಂಬ ಇಂಗ್ಲಕವಿಯು "ಕವಿತೆಯು ಮರೆತ ಅನುಭವದ ನೆನಪು" ಎಂದು ಹೇಳುತ್ತಾನೆ. 'ನಾವು ಈ ಜನ್ಮದಲ್ಲಿ ಜನಿಸಿದಾಗ ನಮಗೆ ಗತಜನ್ಮದ ನೆನಪು ಪೂರ್ಣವಾಗಿರುವುದು. ನಾವು ಬೆಳೆದ ಹಾಗೆ ನಮ್ಮ ಕರ್ಮಸೃಷ್ಟಿಯ ನೆಳಲು ಆ ಗತಜನ್ಮದ ಕಿರಣವನ್ನು ಮುಚ್ಚುತ್ತದೆ; ಈ ಜಗತ್ತಿನ ಗದ್ದಲದಲ್ಲಿ ಪೂರ್ವ ಅನುಭವದ ಕೂಗು ಕೇಳದಂತಾಗುತ್ತದೆ. ಆ ಕಿರಣ, ಆ ಕೂಗು ಪುನಃ ನೆನಪಾದರೆ ಕವಿಯ ಸೃಷ್ಟಿ ಸುಂದರವಾಗುವುದು, ಸದಾನಂದ ಸಾಮ್ರಾಜ್ಯವಾಗುವುದು.' ಎಂದವನ ಅಭಿಪ್ರಾಯ. ಇನ್ನು ವೇದಾಂತಿಗಳನ್ನೂ, ಸಂನ್ಯಾಸಿಗಳನ್ನೂ ಕೇಳಿದರೆ ಅವರು ಈ ವಿಷಯದಲ್ಲಿ ಭಿನ್ನಾಭಿಪ್ರಾಯ ಪಡುವರು. ಅವರು ಹೇಳುವಂತೆ ನಾವು ಮರೆವಿನಿಂದಲೇ ಮುಕ್ತಿಹೊಂದುವುದು. "ಜಾಗೃತ-ಜೀವನದ ಜಾತ್ರೆಯನ್ನು ಬಿಟ್ಟು ಬನ್ನಿರಿ; ಸಂಸಾರದ ಸನ್ನಿವೇಶಗಳನ್ನು ಮರೆಯಿರಿ; ಲೋ, ಎಂಥ ಮೂಢರು ಮಾನವರು!

★

ಮರೆವೆಂಬುದು ಮಾನವವ್ಯಕ್ತಿತ್ವದ್ದೊಂದು ಮಹತ್ತ್ವದ ವಿಷಯವಾಗಿದೆ. ಕವಿಯಾಗುವುದು ಮರೆವಿನ ನೆರವಿನಿಂದ; ಕಲಾವಿದನಾಗುವುದು ಮರೆವಿನ ನೆರವಿನಿಂದ; ಕತೆಗಾರನಾಗುವುದು ಮರೆತುದನ್ನು ಅರಿಯುವುದರಿಂದ. ಹೆಚ್ಚಿಗೇನು ಮೋಕ್ಷವನ್ನು ಅಪೇಕ್ಷಿಸುವ ಸಂನ್ಯಾಸಿಯೂ ಮರೆವಿನ ಅಡಿಗಳಲ್ಲಿ ಬಿದ್ದುಕೊಂಡಿರಬೇಕಾಗುವುದು. ಆದರೆ ಮರೆವು ಕಲ್ಲನಿಗಿರುವಂತೆ ಇದ್ದರೆ..........................!

★

'ನೆನಪುಂಟೇ ಲಲಿತಾಂಗಿ . . . .' ಎಂದು ಹಾಡುತ್ತ, ಪ್ರಸ್ತುತ ಸೃಷ್ಟಿಯನ್ನು ಮರೆಯದೇ ಪುನಃ ಆ ಅನುಭವವನ್ನು ಆ ಸನ್ನಿವೇಶವನ್ನು ನೆನಪುಮಾಡಲು ಯತ್ನಿಸುವರು. ಇಹಯಾತ್ರೆಯ ಗೊಂದಲವನ್ನು ಮರೆಯದ ವಿನಾ ಮುಕ್ತಿ ದೊರೆಯದು" ಎಂದು ಯತಿಗಳು ಸಾರುವರು. ಆದರೆ ನಾವು ಜಗತ್ತಿನಲ್ಲಿರುವ ವರೆಗೆ ಮರೆವನ್ನು ಮರೆಯದ ವಿನಾ ಮುಕ್ತಿ ಇಲ್ಲ. ಸಂಸಾರದಲ್ಲಿರುವವರಿಗೆ ನೆನಪಿನ ಶಕ್ತಿ ಇಲ್ಲದೆ ಹೋದರೆ ಎಂಥ ಕಷ್ಟ-ನಷ್ಟಗಳಾಗುವುವು ಎಂಬುದು ಎಲ್ಲರಿಗೂ ಗೊತ್ತಿದ್ದ ಮಾತು.

ಸಾವುಕಾರನು ಸಾಲಗಾರನ ಪ್ರಾಮಿಸರಿ ನೋಟಿನ ವಾಯಿದೆ ಮರೆತರೆ ದಿವಾಳಿಗೆ ಬರುವನು; ವಿದ್ಯಾರ್ಥಿಗಳು ಓದಿದ ಸಾರ ಮರೆತರೆ ಅವರಿಗೆ ಪರೀಕ್ಷೆಯಲ್ಲಿ ಅಪಯಶ, ವೈದ್ಯನು ರೋಗಿಯ ವೇಳೆಗೆ ಭೆಟ್ಟಿಯಾಗದಿದ್ದರೆ ಬಹುಶಃ ರೋಗಿಯ ಜೀವಕ್ಕೇ ಘಾತ; ವಕೀಲರು ಮುದ್ದತು ಮರೆತರೆ. . . . ಅಂತೂ ಇಹದಲ್ಲಿರುವ ತನಕ

ನಾವು ಮರೆವನ್ನು ದೂರದಲ್ಲಿಯೇ ಇರಿಸಿಬಿಡಬೇಕಾಗುತ್ತದೆ. ಏನೋ ವಿಚಾರಿಸುತ್ತ ಹೋದೆ, ಕಲ್ಲನ ಮರೆವಿನ ವಿಷಯಬಿಟ್ಟು ದೊಡ್ಡ ವೇದಾಂತಕ್ಕೇ ಹೋಗುತ್ತಿದೆನಲ್ಲ! ಅಸ್ತು, ಪ್ರಕೃತ ಮನುಸರಾಮಃ!

ನಮ್ಮ ಕಲ್ಲನಿಗೆ ಮರೆವಿನಲ್ಲಿ ಸ್ವಲ್ಪ ಹೆಚ್ಚು ಪ್ರೀತಿ ಎಂದು ಕಾಣುತ್ತದೆ. ಅವನಿಗೆ ಪ್ರತಿನಿತ್ಯ ಬೆಳಗಿನಲ್ಲಿ ಎದ್ದಕೂಡಲೆ ಪ್ರತಿಯೊಂದು ಕೆಲಸವನ್ನೂ ನೆನಪಿಗೆ ತಂದುಕೊಡಬೇಕು. ದಿನಾಲು ಹೇಳಿ ಹೇಳಿ ನನಗೆ ಬೇಜಾರವೆನಿಸಿತು. ಅನಂತರ ವಿಚಾರಿಸಿದೆ 'ಏಕೆ ಮರೆಯುತ್ತಾನೆ' ಎಂದು. ಕೆಲವು ವಿಷಯದಲ್ಲಿ ಮಾತ್ರ ಮರೆವು ಇರಲಿಲ್ಲ ಅವನಿಗೆ. ಉದಾಹರಣೆ ಮೇಲೆ ಹೇಳಿದ ಫಲಾಹಾರದ ಡಬ್ಬಿ. ಕೋಟು-ಟೊಪ್ಪಿಗೆಯನ್ನಾದರೂ ಮರೆಯಬಲ್ಲ, ಆದರೆ ಡಬ್ಬಿಯು ಮಾತ್ರ ನೆನಪಿನಲ್ಲಿರುತ್ತದೆ. ನನಗೆ ಚಿಂತೆ: 'ನಾಳೆ ಲಗ್ನವಾದ ಮೇಲೆ ಹೆಂಡತಿಯನ್ನು ಮರೆತರೆ ಹೇಗೆ?'— ಎಂದು! ಈಗ ಸ್ವಲ್ಪ ದಿನಕ್ಕೆ ಮುಂಚೆ ನಮ್ಮ ಮಿತ್ರರೊಬ್ಬರಿಗೆ ನಮ್ಮಲ್ಲಿಗೆ ಊಟಕ್ಕೆ ಬರಲು ಆಮಂತ್ರಣ ಕೊಟ್ಟಿದ್ದೆವು. ಅಂದು ಮಹಾನವಮಿಯ ಹಬ್ಬ. ಊಟವಾದ ನಂತರ ನಾವು ಫೋನೋ ಕೇಳುತ್ತ ಕುಳಿತಿದ್ದೆವು. ನನ್ನ ಈ ಮಿತ್ರರಲ್ಲಿ ಕಲ್ಲನ ವಿಶ್ವಾಸ ಬಹಳ. ಅದೇನು ತಿಳಿಯಿತೋ ಅವನಿಗೆ "ನಾಳೆಯೂ ನಮ್ಮಲ್ಲಿ ಊಟಕ್ಕೆ ಬರಬೇಕು" ಎಂದು ಅವರಿಗೆ ಹೇಳಿದನಂತೆ. ನಾನೇ ಹೇಳಿರಬಹುದೆಂದೇನೋ ಮಿತ್ರರೂ ಒಪ್ಪಿದರು. ಈ ಮೊದಲೂ ಅವರಿಗೆ ಆಮಂತ್ರಣ ಕೊಡುತ್ತಿದ್ದವನು ಕಲ್ಲನೆ! ಅದರಂತೆಯೆ ಇಂದಿನದೂ ಎಂದು ಅವರು ತಿಳಿದುಕೊಂಡರು. ಆದರೆ ಕಲ್ಲ ಅಂದು ಆಮಂತ್ರಣ ಕೊಟ್ಟಿದ್ದನ್ನು ನಮಗೆ ಹೇಳಲು ಮರೆತ! ಮರುದಿನ ಯಥಾಪ್ರಕಾರ ನಾವು ಊಟಮಾಡಿ ವರ್ತಮಾನಪತ್ರ ಓದುತ್ತ ಕುಳಿತಿದ್ದೆವು. ಆಗ ನಮ್ಮ ಮಿತ್ರರು ಬಂದರು. ೧೨ ಗಂಟೆಯಾಗಿತ್ತು. ನಮ್ಮ ಮಿತ್ರರಿಗೆ ಕೆಲಸದ ಗಡಿಬಿಡಿ ಬಹಳ ಇರುವುದರಿಂದ, ಸಹಸಾ ಹೇಳಿಕಳಿಸಿದ ವಿನಾ ಅವರು ನಮ್ಮಲ್ಲಿ ಬರುತ್ತಿರಲಿಲ್ಲ. 'ಈಗೇಕೆ ಬಂದದ್ದು?' ಎಂದು ವಿಚಾರಿಸಿದೆ. ಅಷ್ಟರಲ್ಲಿ ಅವರೇ "ಊಟವಾಗಿದೆಯೋ?" ಎಂದು ಕೇಳಿದರು! ಆಗ ಕಲ್ಲನಿಗೆ ನೆನಪಾಯಿತು: "ನಿನ್ನೆ ಇವರಿಗೆ ಊಟಕ್ಕೆ ಹೇಳಿದ್ದೆ" ಎಂದ. ಸರಿ ತಪ್ಪುಗಂಟಿನ ಮೇಲೆ ಟೀಕಿಸುತ್ತ ಉಳಿದ ವೇಳೆಯಲ್ಲಿ ಅವರ ಊಟವೇನೋ ಆಯಿತು. ಆದರೆ ಕಲ್ಲನ ಮರೆವಿನ ಚಿಂತೆ ಮಾತ್ರ ಈಗ ನಿಜವಾಗಿಯೂ ನನಗೆ ಹೆಚ್ಚಾಯಿತು. ಇವನು ಹೆಂಡತಿಯನ್ನು ಮರೆಯುವ ಅಪಾಯವಿದೆ ಎಂದು ನಿಶ್ಚಯಿಸಿದೆ.

* * *

ಆದರೆ ನಮ್ಮ ಇನ್ನೊಬ್ಬ ಮಿತ್ರರು ಒಮ್ಮೆ ನನ್ನನ್ನು ತುಂಬಾ ಬಿಕ್ಕಟ್ಟಿಗೆ ತಂದಿದ್ದರು; ಅದೂ ಅವರ ಮರೆವಿನ ಪ್ರಭಾವವೇ. ಮರೆವು ಚಿಕ್ಕವರಲ್ಲಿಯೇ ಅಲ್ಲ, ಹಿರಿಯರಲ್ಲಿಯೂ ತುಂಬಾ ಇದೆಯೆಂದು ಕಂಡುಬಂತು. ನನ್ನ ಈ ಮಿತ್ರರು ನಾನು ಮನೆಯಲ್ಲಿ ತೋಟಮಾಡಿದುದನ್ನು ಕೇಳಿದ್ದರು. ನನಗೆ ಹೂವು, ಕಾಯಿ-ಪಲ್ಲೆಗಳನ್ನು ಬೆಳೆಯಿಸುವುದೆಂದರೆ ಒಂದು ಹೌಸು. ಕಾಲೇಜಿನ ಕೆಲಸದಿಂದ ಬಿಟ್ಟ ಕೂಡಲೆ ಕೈಯಲ್ಲಿ ಕುರ್ಚಿಗೆ ಹಿಡಿದು, ತೋಟದಲ್ಲಿ ಕೆಲಸ ಮಾಡುವುದು ನನ್ನ ರೀತಿ. ಈ ಮಿತ್ರರೂ ತಮ್ಮ ಬಂಗ್ಲೆಯಲ್ಲಿ ಸ್ವಲ್ಪ ಅದು-ಇದು ಬೆಳೆದಿದ್ದಾರೆ; ಒಮ್ಮೆ ನಮ್ಮ ಕಾಲೇಜಿನಲ್ಲಿ ಒಂದು ಟೀಪಾರ್ಟಿ ಆಗಿತ್ತು. ಆಗ ನಾನೂ ಇವರೂ ಇನ್ನೂ ಅನೇಕರೂ ಒಂದೇ ಮೇಜಿನ ಸುತ್ತ ಕುಳಿತಿದ್ದೆವು. ಫಲಾಹಾರದ ಪದಾರ್ಥಗಳಲ್ಲಿ ವಟಾಣಿಯ ಉಸುಳಿ ಇತ್ತು. ಅದನ್ನು ತಿನ್ನುತ್ತ ನಮ್ಮ ಮಿತ್ರರು "ನೀವು ಮೊನ್ನೆ ಕಳಿಸಿದ ವಟಾಣಿ ಬಹಳೇ ಚೆನ್ನಾಗಿದ್ದುವು; ಎಲ್ಲಿಯ ಬೀಜ ತರಿಸಿದ್ದಿರಿ?" ಎಂದು ನನ್ನನ್ನು ಕೇಳಿದರು. ನಾನು ಹೌಹಾರಿದೆ. ಕಾರಣವೆಂದರೆ 'ವಟಾಣಿಯನ್ನು ನಾನು ಬೆಳೆದಿರಲಿಲ್ಲ; ಇವರಿಗೆ ಎಲ್ಲಿಂದ ಕಳಿಸಿದ್ದೆ' ಎಂದು. ಆದರೂ ಮಿತ್ರರನ್ನು ನಿರಾಶೆಗೊಳಿಸಬಾರದೆಂದು ಏನೋ ಹೇಳಿದೆ. ಅವರು ಅಷ್ಟಕ್ಕೇ ಬಿಡಲಿಲ್ಲ. "ನಿಮ್ಮ ಸೋಯಾಬೀನ್ಸೂ (Soya beans) ಚೆನ್ನಾಗಿದ್ದುವು; ನಾಳೆ ಇನ್ನಿಷ್ಟು ಕಳಿಸಿರಿ" ಎಂದು ಹೇಳಿದರು. ನಾನು 'ಸೋಯಾಬೀನ್ಸ್' ಎಂದು ಎಲ್ಲಿಯೊ ಹೆಸರು ಮಾತ್ರ ಕೇಳಿದ್ದೆ. ಅವು ಹೇಗಿರುತ್ತ

ಅಷ್ಟರಲ್ಲಿ ಅವರೇ 'ಊಟವಾಗಿದೆಯೆ ?' ಎಂದು ಕೇಳಿದರು.

ವೆಂಬುದುಕೂಡ ಗುರುತಿರಲಿಲ್ಲ. "ಇದಕ್ಕೇನು ಮಾಡುವುದು?" ಎಂದು ವಿಚಾರಿಸಿದೆ. ಅಲ್ಲದೆ ನಮ್ಮ ಮಿತ್ರರು ತಾವೇ ಸ್ವತಃ ಮರುದಿವಸ ನಮ್ಮ "ತೋಟ" ನೋಡಲು ಬರುತ್ತೇವೆಂದು ಬೇರೆ ಹೆದರಿಸಿದರು. 'ಒಳ್ಳೇ ಕಷ್ಟ ಬಂದಿತು....' ಅಂದೆ. ಬೇರೆ ಮಾತಿನ ಕಡೆಗೆ ಲಕ್ಷ್ಯಕೊಡಬೇಕೆಂದರೆ ನಮ್ಮ ಮಿತ್ರರು ಮೇಲಿಂದ ಮೇಲೆ ನನ್ನ "ವಟಾಣಿ" ಮತ್ತು "ಸೋಯಾ ಬೀನ್ಸ್" ಇವುಗಳನ್ನೇ ಹೊಗಳಹತ್ತಿದರು. ಪಕ್ಕದಲ್ಲಿ ನನ್ನ "ತೋಟ" ನೋಡಿದ ಇನ್ನೊಬ್ಬ ಗೆಳೆಯರಿದ್ದರು. ನನ್ನ ಸುದೈವದಿಂದ ನನ್ನ "ವಟಾಣಿ" ಮಿತ್ರರು ಕನ್ನಡಿಗರಲ್ಲ. ಅವರು ಬಂಗಾಲೀ ಜನ. ಈಗ ನಮ್ಮ ಕನ್ನಡ ಗೆಳೆಯರಿಗೆ ಹೇಳಿದೆ: "ಕೇಳಿದಿರಾ ನಮ್ಮ ಸೋಯಾ ಬೀನ್ಸ್ ವಿಚಾರವನ್ನ?" ಎಂದೆ. ಅವರೂ "ಹೌದ್ರೀ, ಬಂಗಾಲೀ ಬಾಬೂ ಸ್ವಲ್ಪ ಮರೆವಿನ ವ್ಯಕ್ತಿ ಕಾಣುತ್ತೆ, ಆದಾರೋ ಇನ್ನೊಬ್ಬರು ಕಳಿಸಿರಬಹುದು ಇವನಿಗೆ. ಅವರನ್ನ ಮರೆತು ನಿಮಗೆ ಗಂಟುಬಿದ್ದಿದ್ದಾನೆ" ಎಂದರು. ಅಂತೂ-ಇಂತೂ ಪಾರ್ಟಿ ಮುಗಿಯುತ್ತಲೇ ಮನೆಗೆ ಬಂದೆ. 'ಅವನು ನನ್ನ ತೋಟವನ್ನು ನೋಡಲಿಕ್ಕೆ ಬಂದರೆ ಹೇಗೆ?' ಎಂಬ ವಿಚಾರದಲ್ಲಿದ್ದೆ. ಆದರೆ ಯಾವ ಮರೆವು ನನ್ನನ್ನು ಬಿಕ್ಕಟ್ಟಿನಲ್ಲಿ ತಂದಿತ್ತೋ, ಅದೇ ಮರೆವೇ ಆ ಬಿಕ್ಕಟ್ಟಿನಿಂದ ದೂರಮಾಡಿತು. ಬಂಗಾಲೀ ಬಾಬೂ ನನ್ನ ಸೋಯಾ ಬೀನ್ಸ್ ನೋಡಲಿಕ್ಕೆ ಬರುವುದನ್ನೂ ಮರೆತರು!

ಹೀಗಿದೆ ಮರೆವಿನ ಮೋಜು. ಮರೆವಿಗೂ ಕನಸಿಗೂ ಅದಾವುದೋ ಒಂದು ನಿಕಟಸಂಬಂಧವಿದೆಯೆಂದು ಮಾನಸಶಾಸ್ತ್ರಜ್ಞರು ಹೇಳುತ್ತಾರೆ. 'ಕನಸುಗಳು ನಾವು ದಿನದಲ್ಲಿ ಮರೆತ ವಿಷಯಗಳನ್ನು ರಾತ್ರಿ (ಇಲ್ಲವೆ ಹಗಲು ಮಲಗಿದಾಗ) ಚಿತ್ರಿಸುತ್ತವೆ' ಎಂದು ಕೆಲವರ ಅಭಿಪ್ರಾಯ. ಇದು ನಿಜವಿದ್ದರೆ ಮರೆವು ಒಂದು ವಿಶಿಷ್ಟ ಸ್ಥಾನವನ್ನು ಹೊಂದುತ್ತದೆ. ಎಂದರೆ ನಮ್ಮ ಮನಸ್ಸು ಕೆಲವು ವೇಳೆಯಲ್ಲಿ ಮಾತ್ರ ಮರೆವಿನ ಅಧೀನದಲ್ಲಿ ಬರುವುದು. ನಾವು ಜಾಗೃತರಿದ್ದಾಗ ಈ ಮರೆವು ಮನಸ್ಸಿನ ತಳದಲ್ಲಿದ್ದುಕೊಂಡಿರುವುದು. ಜಾಗೃತವ್ಯವಹಾರದಲ್ಲಿ ನಾವು ಮಾಡುವ ಕೃತಿಗಳು ಈ ಮರೆವಿನಿಂದ ದೂರವಾಗಿರುತ್ತವೆ. ಅಲ್ಲದೆ ನಾವು ಜಾಗೃತರಿದ್ದಾಗ ಕೇವಲ ಕೆಲವು 'ಸಾಮಾಜಿಕ' ಆಚಾರ-ವಿಚಾರಗಳನ್ನು ಮಾತ್ರ ಮಾಡುತ್ತೇವೆ. ಇದು ನಮ್ಮ ನಾಗರಿಕತೆಯು, ಇಲ್ಲವೆ ಸಂಸ್ಕೃತಿಯ ಪರಿಣಾಮ. ಜಾಗೃತಾವಸ್ಥೆಯ ಕಾರ್ಯ-ವಿಚಾರಗಳು ಕೆಲವೊಂದು ನಿಯಮಗಳಿಗೆ ಅಧೀನವಾಗಿರುವುವು. ಮನಸ್ಸಿಗೆ ಬಂದಂತೆ ಮಾಡುವುದು ನಾಗರಿಕತೆಯ ಲಕ್ಷಣವಲ್ಲ ಸಾಮಾಜಿಕ ರೀತಿಯೂ ಅಲ್ಲ. ಮಾನವನು ಸಾಮಾಜಿಕ ಪ್ರಾಣಿಯಾಗಿದ್ದು ಅವನು ಅನೇಕ ವಿಚಾರ-ಆಚಾರಗಳನ್ನು ಕೆಲವೊಂದು ರೀತಿಯಲ್ಲಿ ಮಾತ್ರ ಮಾಡುತ್ತಾನೆ. ಎಂದರೆ ನಮ್ಮ ಜಾಗೃತ ಆಚಾರ-ವಿಚಾರಗಳು ಯಾವುದೋ ಒಂದು ಶಕ್ತಿಯಿಂದ ನಿಯಮಿಸಲ್ಪಡುತ್ತವೆ. ಆ ಶಕ್ತಿಯು ಮನಸ್ಸಿನಲ್ಲಿ ಬಂದ ಎಲ್ಲ ವಿಚಾರಗಳನ್ನೂ ಹೊರಗೆಡಹುವುದಿಲ್ಲ. ಕೇವಲ ನಾಗರಿಕತೆಯ, ಸಾಮಾಜಿಕತೆಯ ವಿಚಾರಗಳನ್ನು ಮಾತ್ರ ವ್ಯಕ್ತಮಾಡಲು ಅಪ್ಪಣೆಕೊಡುತ್ತದೆ. ಮಿಕ್ಕ ವಿಚಾರಗಳನ್ನೆಲ್ಲ ಒತ್ತಿಕ್ಕುತ್ತದೆ. ಇವೇ ಒತ್ತಿಕ್ಕಿಟ್ಟ ವಿಚಾರಗಳೇ ಕನಸಾಗಿ ಬರುತ್ತವೆ. ಆದರೆ ಈ ರೀತಿ ಪೋಲೀಸನಂತಹ ಬಹಿಷ್ಕಾರ ಹಾಕುವ ಶಕ್ತಿ ಮರೆವಿನದೇ. ಮರೆವೆಂದರೆ ಅದೊಂದು ಮಹಾಸಾಗರವೆಂದು ಕಲ್ಪಿಸೋಣ. ಮಾನವನ ಮನಸ್ಸು ಈ ಸಾಗರವನ್ನು ಪೂರ್ತಿಯಾಗಿ ಹೋಲುತ್ತದೆ. ಆದರೆ ಮರೆವಿನ ಶಕ್ತಿಯಿಂದ ಈ ಸಾಗರದಲ್ಲಿ ಬಂದ ತೆರೆಗಳು ನಿಯಮಿತವಾಗಿ ವ್ಯಕ್ತಮಾಡಲ್ಪಡುತ್ತವೆ. ಈ ನಿಯಮಿತತನವೇ ನಮ್ಮೆಲ್ಲರನ್ನು '**ನಾಗರಿಕ**'ರನ್ನಾಗಿಯೂ, '**ಮಾನವ**'ರನ್ನಾಗಿಯೂ ಮಾಡುತ್ತದೆ. ಈ ಸಾಗರದ ಎಲ್ಲ ತೆರೆಗಳೂ ನಮ್ಮ ಮಾತು-ಕೃತಿಗಳಲ್ಲಿ ವ್ಯಕ್ತವಾಗಹತ್ತಿದರೆ ನಾವು ಅಷ್ಟುಮಟ್ಟಿಗೆ '**ಅಮಾನುಷ**'ರಾಗುವೆವು! ಎಂದರೆ ಹುಚ್ಚರೋ, ಹೆಚ್ಚಿನವರೋ ಆಗುವೆವು. ಮನಸ್ಸಿನ ಈ ಅನಿಯಮಿತ ರೀತಿಯೇ ಈ 'ಹುಚ್ಚು' ಯಾ 'ಹೆಚ್ಚು'ತನವನ್ನು ತರುತ್ತದೆ. ಲೌಕಿಕದೃಷ್ಟಿಯಿಂದ ನೋಡಿದಲ್ಲಿ 'ಹುಚ್ಚು'ತನವು ಬಯಸತಕ್ಕದ್ದಲ್ಲ. ಅಲೌಕಿಕರಾಗುವುದು ಒಳ್ಳೆಯದಲ್ಲ. ಆದರೆ ಲೌಕಿಕ ಬಾಹ್ಯವಾದ ಆಚಾರ ವಿಚಾರವೆಲ್ಲ ನಿಷೇಧವೆಂದು ಹೇಳುವುದು ತಪ್ಪು. ಏಕೆಂದರೆ ಲೌಕಿಕನಡತೆಯು ಮಾನವಜೀವನದ ಆದರ್ಶವಾಗಲರಿಯದು. ಮರೆವಿನ ಸಾಗರವು ಕೆಲವೊಂದು ವಿಚಾರತರಂಗಗಳನ್ನು ಒಳಗೊಂಡಿರುತ್ತದೆ. ಈ ತರಂಗಗಳೇ ಅನೇಕ ಉದಾಹರಣೆಗಳಲ್ಲಿ ಕಲಾರೂಪವಾಗಿ ವ್ಯಕ್ತವಾಗುತ್ತವೆ. ಕಲೆಯು ಕನಸಿನ ರಾಜ್ಯಕ್ಕೆ ಸೇರಿದ್ದಷ್ಟೇ? ಕನಸಾದರೋ ಮರೆವಿನ ನೆನಪು. ಎಂದ ಮೇಲೆ ಕಲಾಸಾಮ್ರಾಜ್ಯವು ಅಲೌಕಿಕವಾಗಿದ್ದರೂ ಆದರ್ಶವಾಗಿರುವುದು. ಇಂತಹ ಮರೆವಿನ ಸಾಗರದಲ್ಲಿಯ ತರಂಗಗಳೇ ಮಾನವನ ಕೆಲವೊಂದು ಉನ್ನತ ವಿಚಾರಗಳನ್ನು ತುಂಬಿಕೊಂಡಿರುತ್ತವೆ. ನಾಗರಿಕತೆ, ಲೌಕಿಕದೃಷ್ಟಿ, ಸಾಮಾಜಿಕ ಸಭ್ಯತೆ, ಇವೆಲ್ಲ ಜಾಗೃತ ಮನಸ್ಸಿನ ಪರಿಣಾಮಗಳು. ಆದರೂ ಅಜಾಗೃತ ಸ್ಥಿತಿಯಲ್ಲಿ-ಎಂದರೆ ಮರೆವಿನಲ್ಲಿ-ಅನೇಕ ವ್ಯಕ್ತವಾಗದ ವಿಚಾರಗಳೂ, ಚಿತ್ರಗಳೂ ತುಂಬಿಕೊಂಡಿರುತ್ತವೆ. ಇವುಗಳನ್ನು ಕೇವಲ 'ಅಲೌಕಿಕ' ಎಂದು ಅಲ್ಲಗಳೆಯುವುದು ಸರಿಯಲ್ಲ. ನಮ್ಮ ಸಂಪೂರ್ಣ ವ್ಯಕ್ತಿತ್ವವು ವ್ಯಕ್ತವಾಗಬೇಕಾದರೆ ಈ ಮರೆವಿನ ಸಾಗರದ ತರಂಗಗಳ ಸಹಾಯದಿಂದಲೇ ಶಕ್ಯವಿದೆ. ಅಂತೆಯೇ ಮರೆವು ಮಾನವ ವ್ಯಕ್ತಿತ್ವದ ಮಹತ್ತ್ವದ ವಸ್ತುವಾಗಿದೆ.

ಮರೆವಿನ ಮೋಜನ್ನು ಹರಟುವುದನ್ನು ಬಿಟ್ಟು ಅದೇನೋ ದೊಡ್ಡ-ದೊಡ್ಡ ಮಾತನಾಡಿಬಿಟ್ಟೆ! ಆದರೆ ನಿಜವಾಗಿ ನೋಡಿದಲ್ಲಿ ಮರೆವಿನ ಎಲ್ಲ ಕಾರ್ಯವೂ ಮೋಜಿನದೇ ಸರಿ. ಕವಿಗಳು ಕವನಗಳನ್ನು ರಚಿಸುವುದು ಮರೆವಿನ ಮಾನಸತರಂಗಗಳ ಬಲದಿಂದ; ಯತಿಗಳು ಮುಕ್ತಿಮಾರ್ಗವನ್ನು ಕಾಣುವುದು ಮರೆವಿನ ಸಾಗರದಲ್ಲಿ ಮುಳುಗುವುದರಿಂದ; ಸಾಮಾನ್ಯ ಜನರು 'ಅಲೌಕಿಕ'ರಾಗುವದು ಮರೆವಿನ ಮೋಜಿನಿಂದ. ಅಂತೂ ಮರೆವು ಮಾನವ ಜೀವನದಲ್ಲಿ ಒಂದು ವಿಶಿಷ್ಟಸ್ಥಾನವನ್ನು ಹೊಂದಿದೆ. ಯಾರಿಗಾದರೂ ಈ ಹರಟೆಯಲ್ಲಿ ಸಂಬಂಧವಿರದ ಅಭಿಪ್ರಾಯ ಕಂಡುಬಂದರೆ ಅದನ್ನು ಮರೆವಿನಿಂದಲೇ ದೂರಮಾಡಬಹುದು. ಇದೂ ಒಂದು ಮರೆವಿನ ಮೋಜೇ! ಹೀಗೆ ಇದೆ ಮರೆವಿನ ಮೋಜು!

ಬೆಳಕನ್ನು ಮರೆಮಾಡುವ ಹುಳುಗಳು

ಅ ಥ ವಾ

ಭಾಷೆಗಳ ತೊಡಕು



★

ಪ್ರೊ. ಬಿ. ಎಂ. ಮೀಮಾಂಸಿ ಬಿ. ಎ., ಬಿ. ಟಿ.

ಮಾತೃಭಾಷೆ ನಮಗೆ ಹರಿಹಿಂಗದ ಬೆಳಕನ್ನು ಕೊಡುವ ನಂದಾದೀಪ. ಅದರ ಬೆಳಕಿನಿಂದಲೆ ಜೀವನದ ಕಗ್ಗಾಡುಗಳ ಕಗ್ಗತ್ತಲೆಯಲ್ಲಿ ದಾರಿ ಹುಡುಕಿಕೊಳ್ಳಬೇಕಾಗಿದೆ ನಾವು. ಆದರೆ ಆ ನಂದಾದೀಪವನ್ನು ಮರೆಮಾಡಲು ಇಂಗ್ಲಿಷಿನ ಬಣ್ಣಬಣ್ಣದ ಪಾತರಗಿತ್ತಿ ಮುಂದುವರಿದು ನಿಂತಿದೆ. ತಿಳಿಯದೆ ನಡೆಯಿಸಿರುವ ಪ್ರಚಾರಕರ ಹಿಂದೀಪ್ರಚಾರದ ಜಿಟ್ಟೆ ಜಿಗಿದಾಡುತ್ತ ಕನ್ನಡಿಗರನ್ನು ಕಂಗೆಡಿಸುತ್ತಲಿದೆ.

★

ಪೀಠಿಕೆ

ಭಾಷೆ ಮಾನವನ ಮೂಲಭೂತಶಕ್ತಿ. ಹಿರಿಯರು ಕೊಡಿಟ್ಟ ಸಂಸ್ಕೃತಿ–ಸಂಪತ್ತು ಇಂದು ನಮ್ಮದಾಗಿರುವುದು ಹೆಚ್ಚಾಗಿ ಭಾಷೆಯ ಮೂಲಕವಾಗಿಯೇ. ಜಗತ್ತಿನೊಡನೆ ನಡೆದ ನಮ್ಮ ವಾಣಿಜ್ಯ-ವ್ಯವಹಾರಗಳು, ಗೆಳೆಯರೊಡನೆ ಇಟ್ಟುಕೊಂಡ ನಮ್ಮ ಬಳಕೆ-ಸಲುವಳಿಕೆಗಳು, ವಾದ-ವಿವಾದಗಳು– ಇವೆಲ್ಲ ಭಾಷೆಯಿಲ್ಲದೆ ಸಾಧ್ಯವಿಲ್ಲ. ನುಡಿಯ ಸಹಾಯವಿಲ್ಲದೆ ಆಲೋಚನೆ ನಡೆಯಬಹುದೆಂಬುದು ಬರಿಯ ಭ್ರಮೆ. ಬಹುಮಟ್ಟಿಗೆ ನಮ್ಮ ಆಲೋಚನೆ ಯೆಲ್ಲ ನುಡಿಯೊಡನೆಯೆ ಹಾಸು- ಹೊಕ್ಕಾಗಿ ಹೊಂದಿಕೊಂಡಿರುತ್ತದೆ. ನುಡಿಯೆಂಬುದು ಆಲೋಚನೆಯ ಹೊರಗಣ ಹೊದಿಕೆ ಮಾತ್ರವೇ ಅಲ್ಲ, ಆಲೋಚನೆಯೇ ನುಡಿಯೆಂದೂ ಕೆಲವರ ಮತವಿದೆ. ಅದೇನೆ ಇರಲಿ, ನುಡಿ ಆಲೋಚನೆಯನ್ನು ವಿಶದೀಕರಿಸಿ, ಅದಕ್ಕೊಂದು ನಿಶ್ಚಿತ ಹಾಗೂ ಕ್ರಮಬದ್ಧ ಸ್ವರೂಪವನ್ನು ಕೊಡುವುದಲ್ಲದೆ ಅದು ಬರೆಹಕ್ಕಿಳಿಯಿತೆಂದರೆ ಆಲೋಚನೆಯನ್ನು ಶಾಶ್ವತಗೊಳಿಸುತ್ತದೆ. ಇದಲ್ಲದೆ ಭಾಷೆ ಶಿಕ್ಷಣದ ಬಹು ದೊಡ್ಡ ಸಾಧನವು. ಭಾಷೆಯ ಸಹಾಯವಿಲ್ಲದೆ ಶಿಕ್ಷಣ ಸಂಸ್ಥೆಗಳಲ್ಲಿ ನಾವು ಏನನ್ನು ಸಾಧಿಸಬಹುದು? ಎಂ. ಗ್ರೀನಿಂಗ್ ಲ್ಯಾಂಬೋರ್ನರು ಈ ಬಗ್ಗೆ ಹೀಗೆ ಹೇಳುತ್ತಾರೆ: ".. ಮಾನವನ ಆತ್ಮ-ವಿಕಾಸಕ್ಕೂ ಸ್ವವಿಚಾರ ಪ್ರಕಟನೆಗೂ ಭಾಷೆಯೇ ಸಾಧನ; ಮಾನವನ ಆತ್ಮವಿಕಾಸವನ್ನೇ ಗುರಿಯಾಗಿಟ್ಟುಕೊಂಡ ಶಿಕ್ಷಣಕ್ಕೂ ಮಾನವನ ಅತ್ಯುಚ್ಚ ಕ್ರಿಯಾಶಕ್ತಿಯೊಂದಾದ ಭಾಷೆಗೂ ಬಹು ನಿಕಟ ಸಂಬಂಧವಿದೆ." * ಇದು ನಿಜ.

* Expression in speech and writing—Greening Lamburn (Oxford) pp. 7-8

ಮಾತೃಭಾಷೆ

"ಮಗುವಿನ ಪೋಷಣೆಗೂ ಬೆಳವಣಿಗೆಗೂ ತಾಯ ಮೊಲೆಹಾಲೇ ಹೆಚ್ಚು ಹಿತಕರ. ಹಾಗೆಯೆ ಮಾನವನ ಆತ್ಮವಿಕಾಸವೂ ಸ್ವವಿಚಾರವನ್ನು ಹೊರಹೊಮ್ಮಿಸುವ ಶಕ್ತಿಯೂ ಪರಿಪೂರ್ಣವಾಗಿ ಸಿದ್ಧಿಗೊಳ್ಳಲು ತಾಯ್ನುಡಿಯ ಹಾಲೇಬೇಕು. ಯಾಕೆಂದರೆ ತಾಯ್ನುಡಿ ಮನೆಮಾತು; ನಮ್ಮ ಜೀವನದ ನಿಕಟ ಅನುಭವಗಳು ವ್ಯಕ್ತವಾಗುವುದು ತಾಯ್ನುಡಿಯಲ್ಲಿಯೆ, ತಾಯ್ನುಡಿಯನ್ನು ಪರಿಣಾಮಕರವಾಗಿ ಬಳಸುವುದರಿಂದಲೆ ನಮ್ಮ ಮನೋಭಾವನೆಗಳು ಸರಿಪಟ್ಟು ಸುಮಾರ್ಗಕ್ಕೆ ತಿರುಗುತ್ತವೆ; ನಮ್ಮ ಬುದ್ಧಿಯೂ ಬೆಳೆಯುತ್ತದೆ. "ಅಸಂಸ್ಕೃತವಾದ ಸಹಜಪ್ರವೃತ್ತಿಗಳು ಸುಸಂಸ್ಕೃತನಲ್ಲಿ ಬೇರ್ಪಟ್ಟು ಮಾರ್ಪಡುತ್ತವೆ. ಇದು ತಾಯ್ನುಡಿಯ ಸಹಾಯ ನಿಯಮನಗಳಿಂದಲೇ" *

* Language in Education—Dr. West p. 14

ಮೇಲೆ ಹೇಳಿದ ಮಾತು ಇಂದು ನಮ್ಮೆಲ್ಲರ ಮನವರಿಕೆಗೆ ಸುಲಭವೆನಿಸುತ್ತದೆ; ಆದರೆ ಸರಿಯಾದ ಶಿಕ್ಷಣ, ನಿಜವಾದ ಸಂಸ್ಕೃತಿ ಆಂಗ್ಲಭಾಷೆಯ ಮುಖಾಂತರವೇ ಸಾಧ್ಯವೆಂದು ಮೆಕಾಲೆ ಹಾಗೂ ಅವನ ಅನುಯಾಯಿಗಳು ನಂಬಿದ್ದರು. ಆ ಕಾಲಕ್ಕೆ ನಮ್ಮ ದೇಶಭಾಷೆಗಳಲ್ಲಿಯ ಕೃತಿರತ್ನಗಳಿನ್ನೂ ಬೆಳಕಿಗೆ ಬಂದಿದ್ದಿಲ್ಲವಾದ್ದರಿಂದ, ನಮ್ಮ ಈ ಭಾಷೆಗಳು ಸಾಕಷ್ಟು ಬೆಳವಣಿಗೆ ಹೊಂದಿಲ್ಲವೆಂದೂ, ಈ ಭಾಷೆಗಳ ಮೂಲಕ ಪಾಶ್ಚಾತ್ಯ ಸಾಹಿತ್ಯ-ವಿಜ್ಞಾನ ವಿಷಯಗಳನ್ನು ಕಲಿಸುವುದು ಶಕ್ಯವಿಲ್ಲವೆಂದೂ ಅವರ ಮತವಿತ್ತು. ಆದರೆ ಈ ನೂರು ವರುಷ ನಡೆದ ಆಂಗ್ಲಶಿಕ್ಷಣದಿಂದ ಮೆಕಾಲೆಯವರ ಆಶೆ-ಆಕಾಂಕ್ಷೆಗಳಾವುವೂ ಸಾಧಿಸಿಲ್ಲ. ನಮ್ಮ ಮಾತೃಭಾಷೆಯ ಮೂಲಕ ಶಿಕ್ಷಣವನ್ನು ಕೊಡುವುದು ಶಕ್ಯವಿಲ್ಲವೆಂಬ ನಂಬಿಕೆಗೆ "ಕೇವಲ ವ್ಯಾವಹಾರಿಕ ಅನುಕೂಲತೆಯೇ ಮೂಲ ಕಾರಣವಾಗಿತ್ತಲ್ಲದೆ, ನಿಜವಾದ ಮನೋವಿಜ್ಞಾನದ ತಳಹದಿ ಅದಕ್ಕಿರಲಿಲ್ಲ"

ಆಂಗ್ಲ ಮಾಧ್ಯಮ

ಆಂಗ್ಲಶಿಕ್ಷಣವು ಕೆಲಮಟ್ಟಿಗೆ ನಮಗೆ ಹಿತಕಾರಿಯಾಗಿದೆಯೆಂಬುದನ್ನು ಒಪ್ಪಿಕೊಳ್ಳಬಹುದಾದರೂ ಅದರಿಂದುಂಟಾದ ದುಷ್ಪರಿಣಾಮಗಳು ಮಾತ್ರ ಎಲ್ಲೆ ವಿಾರಿವೆಯೆಂದೇ ಹೇಳಬೇಕು: ಆಂಗ್ಲಶಿಕ್ಷಣದಿಂದ ನಾವು ನಮ್ಮ ಸಂಸ್ಕೃತಿಯನ್ನೇ ಕಳೆದುಕೊಂಡಿದ್ದೇವೆ; ಪಾಶ್ಚಾತ್ಯರ ರೀತಿ-ನಡೆವಳಿ, ಉಡುಪು ತೊಡವು, ವಿಚಾರ-ವಿಕಾರಗಳನ್ನು ಕುರುಡರಂತೆ ಅನುಕರಿಸ ತೊಡಗಿದ್ದೇವೆ; ನಮ್ಮ ವ್ಯಕ್ತಿತ್ವವನ್ನೇ ನಾಶಮಾಡಿಕೊಂಡು ನಮ್ಮ ನಾಡಿನಲ್ಲಿಯೇ ನಾವು ಪರಕೀಯರಂತೆ ಕಾಣಲಾರಂಭಿಸಿದ್ದೇವೆ. ಇತ್ತ ನಮ್ಮದೆಂಬುದರೊಡನೆ ನಮ್ಮ ಸಂಪರ್ಕವಿಲ್ಲ; ಅತ್ತ ಪಾಶ್ಚಾತ್ಯರಲ್ಲಿಯ ಉತ್ತಮೋತ್ತಮ ಅಂಶಗಳನ್ನೂ ನಾವು ಅರಗಿಸಿಕೊಂಡಿಲ್ಲ. ನಮ್ಮ ತಾಯ್ನುಡಿಗೇ ನಮ್ಮ ನಾಲಗೆ ತಡವರಿಸುತ್ತಿದೆ; ಇಂಗ್ಲಿಷಿನ ಮಾತಂತೂ ದೂರವೇ ಉಳಿಯಿತು. ಹೀಗಾಗಿ ನಮ್ಮ ದೇಶದ ಸರಿಯರ್ಧವು ಅರೆಮೂಕರ ನೀಮೆಯಾಗಿದೆ, ಅಲ್ಪಮತಿಗಳ ನಾಡಾಗಿದೆ. ಯಾಕೆಂದರೆ ನುಡಿಯರಿಯದ ನಾಲಗೆ ಬುದ್ಧಿಯರಿಯದ ತಲೆಯನ್ನೇ ಸೂಚಿಸುತ್ತದೆ. *

ಯಾವ ಭಾಷೆಯ ಮೇಲೂ ನಮ್ಮ ಪ್ರಭುತ್ವವಿಲ್ಲ; ಅದರಲ್ಲೂ ನಮ್ಮ ಮಾತೃಭಾಷೆಯ ತಳಹದಿಯೇ ನಮಗಿಲ್ಲದಿರುವುದರಿಂದ, ನಮ್ಮೊಳಗಿನ ಸಹಜಪ್ರವೃತ್ತಿಗಳನ್ನು ಸರಿಪಡಿಸಿ ಭಾಷೆಯ ರೂಪಕ್ಕಿಳಿಸುವುದಕ್ಕಾಗಲಿ ಶುಚಿಗೊಳಿಸುವುದಕ್ಕಾಗಲಿ ತಕ್ಕ ಸಾಧನವೇ ಇಲ್ಲವಾಗಿದೆ. ಅಂತೆಯೇ ನಮ್ಮ ಮನೋಭಾವನೆಗಳು ಕುದಿಯುವುದರಲ್ಲಿಯೆ ಹಳಸುತ್ತವೆ. ನಮ್ಮ ದುಃಖ-ದುಮ್ಮಾನಗಳು, ಹರುಷ-ಹುಮ್ಮಸುಗಳು ಹರಿವ ಹೊನಲ ಮೇಲಿನ ಅಡ್ಡಗಾಳಿಯ ಪೊಡೆತಗಳಂತೆ ಸಾಯುದ್ದುಹೋಗುತ್ತವೆ. ಯಾಕೆಂದರೆ ಅವುಗಳನ್ನು ಚೆನ್ನಾಗಿ ಶೋಧಿಸಿ ಜೊಳ್ಳನ್ನು ಕಳೆದು ಒಳ್ಳಿಯದನ್ನುಳಿಸಿಕೊಳ್ಳುವ ಶಕ್ತಿಯೇ ನಮ್ಮಲ್ಲಿಲ್ಲ. ಇನ್ನು ಎರಡನೆಯದೆಂದರೆ, ನಮ್ಮೊಳಗೆ "ಕೆಲವು ದುಷ್ಟಪ್ರವೃತ್ತಿಗಳ ತಾಂಡವವೇ ನಡೆದಿದೆ. ಈ ತಾಂಡವವನ್ನು ನಿಲ್ಲಿಸಿ ಈ ಅನರ್ಥಕರ ಪ್ರವೃತ್ತಿಗಳನ್ನು ತೊಡೆದು ಹಾಕುವ ಕಾರ್ಯವು ಭಾಷೆಯದು. ಇದು ಸಾಧಿಸದುದರಿಂದ ನಮ್ಮಲ್ಲಿ ಉತ್ಸಾಹಕ್ಕೆ ಬದಲು ಹುಚ್ಚುಗೊಂದಲವು ಕಾಣಿಸಿಕೊಂಡಿದೆ: ರಾಷ್ಟ್ರಾಭಿಮಾನವು ಬೇಕಾದಲ್ಲಿ ಅದಕ್ಕೆ ವಿರುದ್ಧವಾಗಿ ಚಳವಳಿಗಳು ನಡೆದಿವೆ. ಸ್ನೇಹ, ಜನಹಿತಗಳನ್ನು ಬೆಳೆಯಿಸುವ ಸಂಘಗಳಿಲ್ಲದೆ ಜಾತಿದ್ವೇಷವನ್ನು ಸಾಧಿಸುವ ಪಂಗಡಗಳಿದ್ದಿವೆ. ಮೂರನೆಯದಾಗಿ, ನಮ್ಮಲ್ಲಿ ಕಲೆಯು ನೆಲೆ ಬತ್ತಿಹೋಗಲಿದೆ. ಕಲೋಪಾಸನೆ ಮಾಡುವ ಅರ್ಹತೆಯುಳ್ಳವರು ಬಲು ವಿರಳ." ‡

ಕೆಲವರು ಮೇಲೆ ಹೇಳಿದುದನ್ನು ವಿರೋಧಿಸಬಹುದು. ಡಾ. ರವೀಂದ್ರನಾಥ ಟಾಗೋರರ, ಮಹಾತ್ಮಾ ಗಾಂಧಿ, ಸರ್. ಸಿ. ವ್ಹಿ. ರಾಮನ್, ಸರ್. ಜೆ. ಸಿ. ಬೋಸ, ಸರ್. ರಾಧಾಕೃಷ್ಣನ್ ಮುಂತಾದವರು ಆಂಗ್ಲಭಾಷೆಯಲ್ಲಿಯೇ ಶಿಕ್ಷಣ ಹೊಂದಿ ಅಂತರರಾಷ್ಟ್ರೀಯ ಮಾನ್ಯತೆಯನ್ನು ಪಡೆದಿಲ್ಲವೆ?' ಎಂದೂ ಕೇಳಬಹುದು. ಆದರೆ ಕೋಟ್ಯಂತರ ಭಾರತೀಯರಲ್ಲಿ ಇವರು ಬೆರಳಿನಿಂದ ಎಣಿಸುವಷ್ಟು ಜನ ಮಾತ್ರ. ಅಲ್ಲದೆ ಇವರು ದೊಡ್ಡವರೆನಿಸಿಕೊಂಡುದಕ್ಕೆ ಆಂಗ್ಲಶಿಕ್ಷಣವೇನೂ ಕಾರಣವಲ್ಲ; ಇಷ್ಟೇ ಅಲ್ಲ, ಈ ಆಂಗ್ಲಶಿಕ್ಷಣದ ಬಲೆಗೆ ಸಿಕ್ಕರೂ ಈ ರೀತಿಯಲ್ಲಿ ಇವರು ಇಂತಹ ಉನ್ನತಪದವನ್ನು ಮುಟ್ಟಿದ್ದಾರೆಂಬುದು ಗಮನಾರ್ಹವಾಗಿದೆ. ಆಂಗ್ಲಶಿಕ್ಷಣವನ್ನು ಪಡೆಯದಿದ್ದರೆ ಇವರು ಇನ್ನೂ ದೊಡ್ಡವರಾಗಬಹುದಿತ್ತು. ಈ ಸಂದರ್ಭದಲ್ಲಿ ಡಾ. ಟೇಲರರು ರ್‍ಯಾಂಗ್ಲರ್ ಪರಾಂಜಪೆಯವರನ್ನು ಕುರಿತು ಹೇಳಿದ ಈ ಮಾತು ಮನನೀಯವಿವೆ:— "ರ್‍ಯಾಂಗ್ಲರ್ ಪರೀಕ್ಷೆಯಲ್ಲಿ ಪ್ರಥಮ ತರಗತಿಯಲ್ಲಿ ತೇರ್ಗಡೆ ಹೊಂದಿದವರಲ್ಲಿ ಶ್ರೀ. ಪರಾಂಜಪೆಯವರು (ಪ್ರಥಮಸ್ಥಾನವು ಒಬ್ಬರಿಗಿಂತ ಹೆಚ್ಚು ಜನರಿಗೆ ದೊರೆತದ್ದರಿಂದ) ಸರಿಸಮಾನ ಯೋಗ್ಯತೆಯುಳ್ಳವರೆಂದು ನಿರ್ಣಯವಾಗಿರುವುದೇನೋ ನಿಜ. ಆದರೆ ಆಂಗ್ಲನೊಡನೆ ಭಾರತೀಯನನ್ನು ಒರೆಹಚ್ಚಿ ನೋಡಲಾಗಿ ಭಾರತೀಯನ ಯೋಗ್ಯತೆ ಹೆಚ್ಚಿನದೆಂಬುದನ್ನು ಅಲ್ಲಗಳೆಯಲಿಕ್ಕಾಗದು. ಪರೀಕ್ಷೆ ಮಾತೃಭಾಷೆಯಲ್ಲಿ ನಡೆದದ್ದಾಗಿದ್ದರೆ ಶ್ರೀ. ಪರಾಂಜಪೆಯವರು ಪ್ರಥಮಸ್ಥಾನವನ್ನೇ ಪಡೆಯುತ್ತಿದ್ದರು; ಇಷ್ಟೇ ಅಲ್ಲ, ಉಳಿದವರೆಲ್ಲರೂ ಹಿಂದೆ ಬೀಳುತ್ತಿದ್ದರು. ಈ ಪರೀಕ್ಷೆಗೆ ಕುಳಿತುಕೊಳ್ಳುವ ಸಾಹಸಮಾಡುವ ಮೊದಲು ಶ್ರೀ. ಪರಾಂಜಪೆಯವರು ತೀರ ಭಿನ್ನವಾದ ಒಂದು ಪರಭಾಷೆಯನ್ನು ಕಲಿಯಬೇಕಾಯಿತು. ಆದರೆ ಅದನ್ನು ಅಷ್ಟಕ್ಕಷ್ಟೆ ಕಲಿಯಲಿಲ್ಲ; ಇಂಥ ಪರೀಕ್ಷೆಯಲ್ಲಿ ಅತ್ಯವಶ್ಯವಾಗಿ ಬೇಕಾಗುವ ಆ ಸ್ವಚ್ಛಂದಸರಣಿಯೂ ಆ ವೇಗವೂ ಅವರಿಗೆ ಸಾಧಿಸಿದುವು. ಇಷ್ಟೊಂದು ತಡೆಗಳಿದ್ದರೂ ಇಂತಹ ಕಠಿಣ ಸ್ಪರ್ಧೆಯಲ್ಲಿ ಹೀಗೆ ಮುಂದೆ ಬಂದುದು ಒಂದು ಮಹತ್ವಾಪಸಿದ್ಧಿಯೆಂದೇ ಹೇಳಬೇಕು. ಅವರಿಗೆ ಜಗ

---

* Burt — Mental and Scholastic Test p. 183.

‡ Dr. West–Language in Education pp. 15-16.

ಸೀನಿಯರ್ ರ‍್ಯಾಂಗ್ಲರ್ ಪದವಿ ದೊರೆತದ್ದು ಈ ಸಿದ್ಧಿಯ ಫಲವಾಗಿ. *

ಆಂಗ್ಲಭಾಷೆಯ ಪ್ರಾಬಲ್ಯ

ಮಾತೃಭಾಷೆಗೆ ನಾವು ತೋರಿದ ಅಲಕ್ಷ್ಯವು ಅಷ್ಟಿಷ್ಟಲ್ಲ. ಅದೆಷ್ಟೆಂಬುದನ್ನು ನಾವು ತಿಳಿಯಬೇಕಾದರೆ ಆಂಗ್ಲಭಾಷೆ ಮಾತೃಭಾಷೆಯ ಮೇಲೆ ಮಾಡಿದ ಹಾವಳಿಗಳನ್ನು ಗಮನಿಸಬೇಕಾಗುತ್ತದೆ. ಆಂಗ್ಲಭಾಷಾಪ್ರಾಬಲ್ಯವು ನಮ್ಮ ದೇಶದಲ್ಲಿ ಬೆಳೆದ ರೀತಿ ಬಹು ಆಶ್ಚರ್ಯಕರವಾಗಿದೆ. ಶಾಲೆ-ಕಾಲೇಜುಗಳಲ್ಲಿ ಆಂಗ್ಲಭಾಷೆಯೇ ಮುಖ್ಯಭಾಷೆ. ಸಂಸ್ಕೃತದಂತಹ ಪ್ರಾಚೀನ ಭಾಷೆಗಳ ಸ್ಥಾನವು ಎರಡನೆಯದು. ಮಾತೃಭಾಷೆಯ ಸ್ಥಾನವು ಅದಕ್ಕೂ ಕೆಳಗಿನದು. ಮುಂಬಯಿ ಪ್ರಾಂತದ ಶಾಲೆ-ಕಾಲೇಜುಗಳಲ್ಲಿ ಆಂಗ್ಲಭಾಷಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದ ಬೇಕಾದರೆ ನೂರಕ್ಕೆ ನಾಲ್ವತ್ತು ಗುಣಗಳನ್ನು ಪಡೆಯಲೇಬೇಕೆಂಬ ನಿರ್ಬಂಧವಿದೆ. ಪ್ರಾಚೀನ ಭಾಷೆ, ಮಾತೃಭಾಷೆಗಳೆರಡಕ್ಕೂ ಕೂಡಿ ಗುಣಪಟ್ಟಿನಲ್ಲಿ ನೂರಕ್ಕೆ ಮೂವತ್ತೈದು ದೊರಕಿದರೆ ಸಾಕಂತೆ. ಅದಿರಲಿ, ಮಾಧ್ಯಮಿಕ ಶಾಲೆಗಳಲ್ಲಿ ಆಂಗ್ಲಭಾಷೆಯ ಮೂಲಕವೇ ಕೆಲವು ವಿಷಯಗಳನ್ನು ಕಲಿಸುವ ಪರಿಪಾಠವಿದೆ. ಕಾಲೇಜುಗಳಲ್ಲಿಯೂ ಎಲ್ಲ ಶಿಕ್ಷಣವೂ ನಡೆಯುವುದು ಆಂಗ್ಲಭಾಷೆಯಲ್ಲಿಯೇ. ಸರಕಾರೀ ಕಚೇರಿಗಳಲ್ಲಿ, ಉದ್ಯಮ ಮಂದಿರಗಳಲ್ಲಿ, ರೇಲ್ವೆ-ಅಂಚೆಕಟ್ಟೆಗಳಲ್ಲಿ ಬಳಕೆಯಲ್ಲಿರುವುದು ಆಂಗ್ಲ ಭಾಷೆ; ಮಹತ್ತ್ವದ ಪತ್ರಿಕೋದ್ಯಮದ ಭಾಷೆಯೂ ಇದೇ. ಆಂಗ್ಲಭಾಷೆ ಸುಶಿಕ್ಷಿತರ ರಾಷ್ಟ್ರ-ಭಾಷೆಯಷ್ಟೇ ಅಲ್ಲ, ಹೊರಗಣ ಜಗತ್ತಿನೊಡನೆ ಉಂಟಾದ ನಮ್ಮ ಸಂಬಂಧಕ್ಕೆ ಈ ಭಾಷೆಯೇ ಕಾರಣ. ಹೀಗೆ ಆಂಗ್ಲ-ಭಾಷೆ ನಮ್ಮ ದೇಶದಲ್ಲಿ ಪಡೆದುಕೊಂಡ ಸ್ಥಾನವು ತೀರ ಅನ್ಯಾಯದ್ದು. ಎಲ್ಲ ಸ್ಥಿತಿ-ಗತಿ ಸರಿಯಾಗಿದ್ದ ಪರರಾಷ್ಟ್ರಗಳಲ್ಲಿ ಆಯಾ ದೇಶ-ಭಾಷೆಗಳಿಗೇ ಎಲ್ಲೆಲ್ಲೂ ಪ್ರಾಮುಖ್ಯತೆಯಿದೆ. ಇದನ್ನು ಗಮನಿಸಿದಲ್ಲಿ ನಮ್ಮ ಮಾತೃಭಾಷೆಯ ಮೇಲೆ ಆಂಗ್ಲಭಾಷೆ ಎಷ್ಟು ಅನ್ಯಾಯವಾಗಿ ಅತಿಕ್ರಮಿಸಿದೆಯೆಂಬುದರ ಕಲ್ಪನೆಯಾಗುತ್ತದೆ. ಈ ಸಂದರ್ಭದಲ್ಲಿ ಇನ್ನೊಂದು ವಿಷಾದಕರ ಸಂಗತಿಯನ್ನು ನಾವು ಲಕ್ಷ್ಯಿಸಬೇಕು. ಅದೇನೆಂದರೆ, ನಮ್ಮ ಪ್ರಾಚೀನ ಭಾಷಾ-ಸಾಹಿತ್ಯಗಳಲ್ಲಿ ಅಭಿಮಾನವುಳ್ಳ ಕೆಲವರು ಅವುಗಳ ಹಕ್ಕು-ಬಾಧ್ಯತೆಗಳನ್ನು ಮಂಡಿಸುತ್ತ ಒಂದು ತಪ್ಪು ವಿಚಾರವನ್ನು ಹಬ್ಬಿಸಿದರು. ಮಾತೃಭಾಷೆಯ ಹುರುಳು-ತಿರುಳುಗಳು ನಮಗೆ ಚೆನ್ನಾಗಿ ಮನವರಿಕೆಯಾಗಬೇಕಾದರೆ ಪ್ರಾಚೀನ ಭಾಷೆ (ಸಂಸ್ಕೃತ ಮೊದಲಾದುವು)ಗಳ ಜ್ಞಾನವು ಅತ್ಯವಶ್ಯವೆಂದೂ ಅಂತೆಯೇ ಪ್ರಾಚೀನ-ಭಾಷೆಗಳಿಗೆ ಪ್ರಥಮಸ್ಥಾನವಿರಬೇಕೆಂದೂ ಅವರು ವಾದಿಸುತ್ತ ಬಂದರು. ಹೀಗೆ ಅವರು ಅಜಾಗರೂಕರಾಗಿ, ಮಾತೃಭಾಷೆಯನ್ನು ಹತ್ತಿಕ್ಕುವಲ್ಲಿ ಆಂಗ್ಲ ಭಾಷಾಭಿಮಾನಿಗಳಿಗೆ ಸಹಾಯಕರಾಗಿ ನಿಂತರು. ಈ ಹೊತ್ತಿಗೆ ಇತಿಹಾಸ, ಸಾಹಿತ್ಯಗಳ ಸಂಶೋಧಕರು ನಮ್ಮ ನಾಡು, ನಮ್ಮ ಸಂಸ್ಕೃತಿ, ನಮ್ಮ ಸಾಹಿತ್ಯಗಳ ಕಡೆಗೆ ನಮ್ಮ ಗಮನವನ್ನು ಎಳೆಯ ಹತ್ತಿದುದು ನಮ್ಮ ಸುದೈವವೇ ಆಗಿದೆ. ಈ ಸ್ವಾಭಿಮಾನವು ನಮ್ಮ ರಾಷ್ಟ್ರೀಯ ಆಂದೋಲನದ ಜಾಗೃತ ವಾತಾವರಣದಲ್ಲಿ ಮತ್ತಷ್ಟು ಕಳೆಗೊಂಡಿದೆ. ಇದರ ಫಲವಾಗಿ ಈಗ ಮಾಧ್ಯಮಿಕ ಶಾಲೆಗಳಲ್ಲೂ ವಿಶ್ವವಿದ್ಯಾನಿಲಯಗಳಲ್ಲೂ ಮಾತೃಭಾಷೆಗೆ ಅಲ್ಪ ಸ್ವಲ್ಪ ಸ್ಥಾನ-ಮಾನಗಳು ದೊರೆಯಹತ್ತಿವೆ.

ಭಾರತೀಯರ ಶಿಕ್ಷಣ-ಸಮಸ್ಯೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದವರೆಲ್ಲ ಶಾಲೆ-ಕಾಲೇಜುಗಳ ಶಿಕ್ಷಣವು ಆಯಾ ಪ್ರಾದೇಶಿಕಭಾಷೆಗಳಲ್ಲಿಯೆ ಕೊಡಲ್ಪಡಬೇಕೆಂಬ ಬಗ್ಗೆ ಒಮ್ಮತವನ್ನು ಪ್ರದರ್ಶಿಸಿದ್ದಾರೆ. ಪ್ರಾದೇಶಿಕಭಾಷೆಗಳ ಮಹತ್ತ್ವದ ಅರಿವು ಶಿಕ್ಷಣ-ಸಂಸ್ಥೆಗಳಲ್ಲಿ ಉಂಟಾಗಬೇಕಾದರೆ

* Cambridge Gazette.

ಕರ್ಣಾಟಕದಲ್ಲಿಯ ಸಂಘ-ಸಂಸ್ಥೆಗಳು



ಗೋಕಾಕದ ಕರ್ನಾಟಕ ಸಂಘದ ಸದಸ್ಯರು.

ಈ ಸಲದ ವಾರ್ಷಿಕೋತ್ಸವಕ್ಕೆ ಅತಿಥಿಗಳಾಗಿ ಬಂದಿದ್ದ ಪ್ರೊ. ವಿ. ಕೆ. ಗೋಕಾಕ ಎಂ. ಎ. (ಬಾಂಬೆ) ಬಿ. ಎ. (ಆಕ್ಸನ್) ಅವರು ಮಧ್ಯದಲ್ಲಿರುವ ಕುರ್ಚಿಯಮೇಲೆ ಕುಳಿತಿದ್ದಾರೆ.

ಆದುದರಿಂದ ಪ್ರಾದೇಶಿಕ ಭಾಷೆಗಳೇ ಪ್ರಾಮುಖ್ಯವಾಗಿ ಬಳಕೆಯಲ್ಲಿರಬೇಕು. ಯಾಕೆಂದರೆ ಜನಸಾಮಾನ್ಯರು ಜೀವನದಲ್ಲಿ ವಿಶೇಷ ಪ್ರಯೋಜನಕಾರಿಯಾದುದರ ಕಡೆಗಷ್ಟೆ ಲಕ್ಷ್ಯಕೊಡುತ್ತಾರೆ. ಆಂಗ್ಲ ಭಾಷೆ ಸದ್ಯದ ಪರಿಸ್ಥಿತಿಯಲ್ಲಿ ಲಾಭದಾಯಕವೂ ಬಹು ಪ್ರಯೋಜನಕಾರಿಯೂ ಇರುವುದರಿಂದಲೆ ಅದರ ಶಿಕ್ಷಣವು ಇಷ್ಟು ದಿನ ನಡೆಯಿತು, ಇನ್ನೂ ನಡೆಯುತ್ತಿದೆ. ಆದರೆ ದೇಶ-ಭಾಷೆಯಲ್ಲಿಯೇ ದೇಶದ ವ್ಯವಹಾರವೆಲ್ಲ ಸಾಗಿದರೆ ಜನತೆಗೆ ಅದರ ಮಹತ್ತ್ವವು ತಿಳಿದು ಶಾಲೆ-ಕಾಲೇಜು ಗಳಲ್ಲಿ ಅದರ ಕಡೆಗೆ ತಾವಾಗಿಯೇ ಮನಸ್ಸು ಹಾಕಲು ಪ್ರಾರಂಭಿಸುತ್ತಾರೆ. ಹೀಗೆಲ್ಲ ಹೇಳುವುದೆಂದರೆ ಆಂಗ್ಲಭಾಷೆ ಸಂಪೂರ್ಣವಾಗಿ ಇಲ್ಲದಂತಾಗಬೇಕೆಂದಲ್ಲ. ಪ್ರಾದೇಶಿಕ ವಿಶ್ವ-ವಿದ್ಯಾನಿಲಯಗಳು ಹುಟ್ಟಿ, ಅವು ಪ್ರಖ್ಯಾತ ವಿಶ್ವ-ವಿದ್ಯಾನಿಲಯಗಳಿಂದ ಮಾನ್ಯತೆ ಪಡೆಯುವವರೆಗೆ, ಆಂಗ್ಲಭಾಷೆಯಲ್ಲಿಯೇ ಕಾಲೇಜಿನ ಶಿಕ್ಷಣವು ಸಾಗಬೇಕಾಗುತ್ತದೆ. ಹಿಂದುಸ್ತಾನೀ ಭಾಷೆ ರಾಷ್ಟ್ರಭಾಷೆಯಾಗುವವರೆಗೆ ಆಂಗ್ಲ ಭಾಷೆಯೇ ಆ ಸ್ಥಾನದಲ್ಲಿ ಉಳಿಯುವುದು. ಇನ್ನೂ ಕೆಲವು ಕಾಲ ಆಂಗ್ಲಪತ್ರಿಕೋದ್ಯಮವೂ ಈಗಿನ ತನ್ನ ಮಹತ್ತ್ವದ ಸ್ಥಾನವನ್ನು ಕಳೆದುಕೊಳ್ಳಲಾರದು. ಮುಖ್ಯವಾಗಿ ಹೇಳುವುದು ಇಷ್ಟೇ: ಭಾರತೀಯ ಶಿಕ್ಷಣದಲ್ಲಿ ಪ್ರಮುಖ ಪಟ್ಟವನ್ನಾಕ್ರಮಿಸಿ ಭಾರತೀಯರ ಬುದ್ಧಿಯನ್ನೇ ಹಾಳು ಮಾಡಿದ ಆಂಗ್ಲಭಾಷೆಯನ್ನು ಸ್ಥಳಾಂತರಗೊಳಿಸಬೇಕು. ಆದರೆ ಒಂದು ಮಾತನ್ನು ಮಾತ್ರ ನಾವು ನೆನಪಿಡಬೇಕು: ಆಂಗ್ಲಭಾಷೆ ಒಂದು ಮಹತ್ತ್ವದ ಹಾಗೂ ಅತ್ಯವಶ್ಯವಾದ ಪರಭಾಷೆಯೆಂಬರ್ಥದಲ್ಲಿ ಅದಕ್ಕೆ ಮಾತೃಭಾಷೆಯ ಕೆಳಗಿನ ದರ್ಜೆಯಲ್ಲಿ "ಒಂದು ಗೌರವಾರ್ಹ ಸ್ಥಾನವು ಇನ್ನೂ ಬಹುಕಾಲ ಉಳಿಯುವುದೆಂಬುದು ನಿಸ್ಸಂದೇಹ. ಯಾಕೆಂದರೆ ಇನ್ನು ಮುಂದೂ ಭಾರತೀಯರು ಪಾಶ್ಚಾತ್ಯ ಸಂಬಂಧವನ್ನು ಸಂಪೂರ್ಣವಾಗಿ ಕಡಿದುಕೊಳ್ಳಲಾರರು. ಆಂಗ್ಲಸಾಹಿತ್ಯ-ವಿಜ್ಞಾನಗಳ ಆಳವಾದ ಪರಿಚಯ, ಆಂಗ್ಲರ ಆಟ-ನೋಟಗಳ ಮೇಲಿನ ಪ್ರೀತಿ, ವಿದ್ಯಾವಂತರ ಧರ್ಮವೆನಿಸಿಕೊಂಡ ರಾಜಕಾರಣದ ಬಗ್ಗೆ ಪರಮನಿಷ್ಠೆ ಮುಂತಾದುವು ಇಂದು ಭಾರತೀಯರಿಗುಂಟಾದುದು ಪಾಶ್ಚಾತ್ಯ ಸಂಪರ್ಕದಿಂದಲೇ. ಇವೆಲ್ಲ ಅಪಾರಲಾಭಗಳನ್ನು ಭಾರತೀಯರು ಇನ್ನು ಮುಂದೆಯೂ ಅಪೇಕ್ಷಿಸದಿರಲಾರರು." *

ಹಿಂದುಸ್ತಾನಿ

ಆಂಗ್ಲಭಾಷೆಯ ಆಕ್ರಮಣವನ್ನು ಯಶಸ್ವೀ ರೀತಿಯಲ್ಲಿ ದೇಶಭಾಷೆಯು ಪ್ರತಿಭಟಿಸುತ್ತಿರುವ ಈ ಸಂದರ್ಭದಲ್ಲಿ, ಹಿಂದುಸ್ತಾನೀ ಭಾಷೆ ಮತ್ತೊಂದು ಪ್ರತಿಸ್ಪರ್ಧಿಯಂತೆ ಕೆಲವರಿಗೆ ಕಾಣತೊಡಗಿದೆ. ಮಾತೃಭಾಷೆಯ ಮುನ್ನಡೆಗೆ ಹಿಂದುಸ್ತಾನೀ ಭಾಷೆ ಒಂದು ಕಾಲ್ತೊಡಕೆಂದೇ ಅವರ ಅಭಿಪ್ರಾಯ. ಆದರೆ **ಹಿಂದುಸ್ತಾನೀ ಭಾಷೆಯ ಸ್ಥಾನ-ಮಾನವನರಿತು, ಸಮಯವರಿತು ಅದನ್ನು ಕಲಿಸಹತ್ತಿದರೆ ಈ ಭಾಷೆಯಿಂದ ಹಾನಿಯಾದೀತೆಂದು ನಾವು ಭಯಪಡಬೇಕಿಲ್ಲ.** ಪ್ರಾದೇಶಿಕಭಾಷೆ ಮಾಡಲಾರದ ಕಾರ್ಯವು ಹಿಂದುಸ್ತಾನಿಯಿಂದ ಆಗಬೇಕಾಗಿದೆ. ಅದು ರಾಷ್ಟ್ರಭಾಷೆಯಾಗಿ ಹಿಂದುಸ್ತಾನದ ಪ್ರಾಂತಪ್ರಾಂತಗಳನ್ನು ಒಂದುಗೂಡಿಸಬೇಕಾಗಿದೆ.' ಹಿಂದುಸ್ತಾನೀ ಭಾಷೆ ಮಾತೃಭಾಷೆಗೆ ಪೂರಕವಾಗುವುದಲ್ಲದೆ ಮಾರಕವಾಗಲಾರದು." ‡

ವಿದ್ಯಾರ್ಥಿಗಳಲ್ಲಿ ಮಾತೃಭಾಷಾಜ್ಞಾನದ ಒಂದು ಭದ್ರವಾದ ತಳಹದಿ ಸಿದ್ಧವಾದ ಮೇಲೆ ಮಾತ್ರ ಹಿಂದುಸ್ತಾನಿಯನ್ನು ಕಲಿಸಲು ಪ್ರಾರಂಭಿಸಬೇಕು. ಮತ್ತು ಪಂಡಿತ ಜವಾಹರಲಾಲ ನೇಹರು ಅವರು ಸೂಚಿಸಿದಂತೆ ಕೇವಲ ವ್ಯವಹಾರಕ್ಕೆ ಅನುಕೂಲವಾಗುವಂಥ ಮೂಲ (Basic) ಹಿಂದುಸ್ತಾನಿಯನ್ನೇ ಕಲಿಸಬೇಕು. ಹಿಂದುಸ್ತಾನೀ ಭಾಷೆಯಲ್ಲಿ ಉರ್ದು ಹಿಂದೀ ಭಾಷೆಗಳೆರಡಕ್ಕೂ ಸಾಮಾನ್ಯವಾದ ಶಬ್ದಗಳನ್ನು ಸೇರಿಸಬೇಕು. ಇಂತಹ ಶಬ್ದಗಳು ಸಾಕಷ್ಟಿವೆ. ಕೆಳಗಿನ ಪಟ್ಟಿಯನ್ನು ನೋಡಬಹುದು:

ಸಾಮಾನ್ಯ ಶಬ್ದಗಳು		ಹಿಂದೀ	ಉರ್ದು
ಮೊದಲಿನ ನೂರು ಶಬ್ದಗಳಲ್ಲಿ		೧೦೦ಕ್ಕೆ ೫೬ರಂತೆ	೧೦೦ಕ್ಕೆ ೫೬.೫ರಂತೆ
,, ಸಾವಿರ	,,	,, ೪೧.೫ ,,	,, ೪೩ ,,
ಎರಡನೆಯ ,,	,,	,, ೭.೪ ,,	,, ೭. ,,
ನಾಲ್ಕನೆಯ ,,	,,	,, ೧.೫ ,,	,, ೧.೫ ,,
ಐದರಿಂದ ಹನ್ನೆರಡನೆಯ ಸಾವಿರ		,, ೫.೨ ,,	,, ೫.೨ ,,

ಇನ್ನು ವಿಷಯಭಿನ್ನತೆ, ಪ್ರಾಂತಭಿನ್ನತೆಗಳಿಗನುಸಾರವಾಗಿ ಕೆಲವು ಹೆಚ್ಚಿನ ಶಬ್ದಗಳನ್ನು ಮೊದಲಿನ ಸಾವಿರ ಶಬ್ದಗಳಲ್ಲಿ ಸಾಮಾನ್ಯವಿದ್ದ ಶಬ್ದಸಂಗ್ರಹಕ್ಕೆ ಸೇರಿಸಬಹುದು. ಹೀಗೆ ಪ್ರಯತ್ನಿಸಿದಲ್ಲಿ ಬಹುಜನಕ್ಕೆ ತಿಳಿಯುವಂತಹ ಮತ್ತು ವ್ಯವಹಾರಕ್ಕೆ ಅತ್ಯವಶ್ಯವಾದಂತಹ ೧೦೦೦-೧೨೦೦ ಶಬ್ದಗಳುಳ್ಳ ಮೂಲ ಹಿಂದುಸ್ತಾನೀ ಭಾಷೆಯನ್ನು (Basic Hindustanee) ಸಿದ್ಧಪಡಿಸಲು ಶಕ್ಯವಿದೆ.

ಹಿಂದುಸ್ತಾನೀ ಭಾಷೆಯನ್ನು ಸಿದ್ಧಪಡಿಸುವ ಈ ಕೆಲಸವು ಬಹು ಮಹತ್ತ್ವದ್ದು. ನಮಗೊಂದು ಸಜೀವ ರಾಷ್ಟ್ರಭಾಷೆ ಬೇಕಿದ್ದರೆ ಈ ಕಾರ್ಯವನ್ನು ನಾವು ಕೊನೆಗಾಣಿಸಬೇಕು. ಹಿಂದುಸ್ತಾನೀ ಭಾಷೆ ಇನ್ನೂ ಶುದ್ಧಸ್ವರೂಪವನ್ನು ಹೊಂದಬೇಕಾಗಿದೆಯೆಂದು ಮಹಾತ್ಮಾಗಾಂಧಿಯವರು ಹೇಳುವುದು ನಿಜವಾದ ಮಾತು. ಅದು ಕಾರಣ **ಹಿಂದುಸ್ತಾನಿಯ ಶಿಕ್ಷಣವನ್ನು ಸಾವಕಾಶವಾಗಿಯೂ ಸಾವಧಾನವಾಗಿಯೂ ಕೊಡುತ್ತ, ಹಿಂದುಸ್ತಾನೀ ಪ್ರಚಾರಕಾರ್ಯವು** ಸುಲಭವಾಗುವಂತೆ **ತಳಹದಿಯನ್ನು** ಸಿದ್ಧಪಡಿಸ

* H.V. Hampton—Year Book of Education (Evans) 1938 p. 651

‡ Mahatma Gandhi— Harijan 29th October, 1938

ಬೇಕು. ಇದಕ್ಕೆ ಮೊದಲು ವ್ಯವಹಾರಕ್ಕೆ ತಕ್ಕ ಅತ್ಯವಶ್ಯವೆನಿಸುವ ಹಿಂದುಸ್ತಾನೀ ಭಾಷೆ ಎಂತಹದೆಂಬುದನ್ನು ತಿಳಿದುಕೊಂಡು, ಅದಕ್ಕನುಸರಿಸಿ ಹಿಂದುಸ್ತಾನೀ ಕ್ರಮಿಕ ಪುಸ್ತಕಗಳನ್ನು ರಚಿಸಬೇಕು; ಈ ಭಾಷೆಯ ಶಿಕ್ಷಣಪದ್ಧತಿಗಳನ್ನೂ ಗೊತ್ತುಪಡಿಸಬೇಕು; ಅಲ್ಲದೆ ಹಿಂದುಸ್ತಾನೀ ಪ್ರಚಾರ-ಕಾರ್ಯಕ್ಕೆ ನಿಜವಾಗಿಯೂ ಅಡ್ಡಿಯಾಗಿರುವ ತೊಡರನ್ನು ತೊಡೆದುಹಾಕಬೇಕು.

ಹಿಂದೀ ಪ್ರಚಾರದ ಆವಶ್ಯಕತೆಯುಂಟೆಂಬುದನ್ನೂ ಸರಕಾರದವರು ಒತ್ತಾಯದ ಹಿಂದೀಶಿಕ್ಷಣದ ಯೋಜನೆಯನ್ನು ಕೈಕೊಳ್ಳಬೇಕಾಗಿದೆಯೆಂಬುದನ್ನೂ ನೋಡಿದರೆ, ಹಿಂದೀಭಾಷೆಯ ಪ್ರಗತಿಗೆ ಒಂದೇನೋ ತೊಡರುಂಟೆಂಬುದು ಕಾಣುತ್ತದೆ. ಅದೇನಿರಬಹುದು? ಮಾತೃಭಾಷೆ ಅಡ್ಡಿಯಾಗಿರಬಹುದೆ? ಛೇ, ಇದು ಅಸಂಭಾವ್ಯ. ಉರ್ದು-ಹಿಂದೀ ವಾದವೇನಾದರೂ ತಡೆಯಾಗಿರಬಹುದೆ? ಕೆಲಮಟ್ಟಿಗೆ ಈ ವಾದವು ಅಡ್ಡಿಯಾಗಿದೆಯೆಂದರೂ ಈ ವಾದವು ಬಿಡಿಸಲಾರದ ಸಮಸ್ಯೆಯಲ್ಲ. ಉರ್ದು ಭಾಷೆಯನ್ನು ಬಲ್ಲ ಮುಹಮ್ಮದೀಯರು ಹಿಂದುಸ್ತಾನಿಯನ್ನು ಸುಲಭವಾಗಿ ಕಲಿಯಬಹುದಾಗಿದೆ; ಮತ್ತು ಇಂತಹ ಮುಹಮ್ಮದೀಯರ ಸಂಖ್ಯೆ ದೊಡ್ಡದಿದೆ. ಹಿಂದೀಪ್ರಚಾರಕ್ಕೆ ನಿಜವಾಗಿಯೂ ಅಡ್ಡಿಯಾಗಿರುವುದೆಂದರೆ ಆಂಗ್ಲಭಾಷೆ. ಇಂದು ಜೀವನದಲ್ಲಿ ಆಂಗ್ಲ-ಭಾಷೆಗೆ ಬಹು ಮಹತ್ತ್ವವಿದೆ. ಅಂತೆಯೆ ಜನರು ಅದನ್ನು ಕಲಿತು ಹಿಂದುಸ್ತಾನಿಯ ಮುಖಾಂತರ ಮಾಡಬೇಕಾದ ಕಾರ್ಯಗಳನ್ನೆಲ್ಲ ಆಂಗ್ಲಭಾಷೆಯ ಮೂಲಕ ಮಾಡಿಕೊಳ್ಳಹತ್ತಿದ್ದಾರೆ. ಹಿಂದುಸ್ತಾನಿಯ ಆವಶ್ಯಕತೆಯೇ ಇಂದು ಜನರಿಗೆ ಎನಿಸದಾಗಿದೆ. ಈ ಅನಿಷ್ಟವು ತಪ್ಪಬೇಕಾದರೆ ಆಂಗ್ಲಭಾಷೆಯನ್ನು ಈಗಿನ ಅದರ ಮಹತ್ತ್ವದ ಸ್ಥಾನದಿಂದ ತಳ್ಳುವುದೇ ಪರಮೋಪಾಯ. ಇದನ್ನು ಹೇಗೆ ಸಾಧಿಸಬಹುದು? ಆಂಗ್ಲಭಾಷೆಗಿದ್ದ ಸ್ಥಾನ-ಮಾನವನ್ನೆಲ್ಲ **ಹಿಂದುಸ್ತಾನಿಗೆ ಕೊಡುವುದು ತಪ್ಪಾಗುವುದು. ಯಾಕೆಂದರೆ ಹೀಗೆ ಮಾಡಿದಲ್ಲಿ ಮಾತೃಭಾಷೆಯನ್ನು ಮತ್ತೆ ಬದಿಗೆ ಸರಿಸಿ ಮತ್ತೊಂದು ಪರಭಾಷೆಗೆ ಸಲ್ಲದ ಪ್ರಾಮುಖ್ಯತೆಯನ್ನು ಕೊಟ್ಟಂತೆಯೇ ಆಗುವುದು. ಹೀಗಾದಲ್ಲಿ ಆಂಗ್ಲಭಾಷೆಯಿಂದುಂಟಾದ ಕೇಡುಗಳು ಹಿಂದು-ಸ್ತಾನಿಯಿಂದಲೂ ಉಂಟಾಗುವುದು ಸಹಜವಿದೆ. ನಮ್ಮ ಬಾಲಕರಿಗೆ ಮತ್ತೆ ಪರಭಾಷೆಯನ್ನೇ ಕಲಿಸಿ, ಆ ಭಾಷೆಯಲ್ಲಿಯೇ ವಿಚಾರಮಾಡುವ ಕೃತ್ರಿಮ ಹಾಗೂ ಹುಚ್ಚು ಪ್ರಯತ್ನಗಳಿಗೆ ಅವರನ್ನು ಮತ್ತೆ ಗುರಿಮಾಡಿದಂತಾಗುತ್ತದೆ.** ಇಂತಹ ಶಿಕ್ಷಣಪದ್ಧತಿಯಿಂದ ಕಲಿತದ್ದರ ಅರ್ಥವೇ ಆಗದು. ಇದರಿಂದ ವಿದ್ಯೆಯೆಂಬುದು ಮುಗಿಲಮಲ್ಲಿಗೆಯೇ ಆಗಿ, ನಮ್ಮ ದೇಶದಲ್ಲಿ ಆರಮೂಕರ ಹಾಗೂ ಬುದ್ಧಿಹೀನರ ಜಂಗುಳಿಗಳೇ ಬೆಳೆಯುವುವು. ಇಂತಹ ಜಂಗುಳಿಗಳಿಂದ ಮಹತ್ತಾದ ಯಾವ ಬುದ್ಧಿಕಾರ್ಯವಾದೀತು? ಎಂದ ಮೇಲೆ **ಆಂಗ್ಲಭಾಷೆಯ ಸ್ಥಳವನ್ನು ಹಿಂದುಸ್ತಾನಿಗೆ ಕೊಡದೆ, ಅಲ್ಲಿ ಮಾತೃಭಾಷೆಗೆ ಪಟ್ಟಗಟ್ಟುವುದೇ ನಿಜವಾದ ಯುಕ್ತಿ. ಶಿಕ್ಷಣಸಂಸ್ಥೆಗಳಲ್ಲೂ ದಿನದ ಜೀವನದಲ್ಲೂ ಮಾತೃಭಾಷೆಯೇ ಅತಿ ಮಹತ್ತ್ವದ್ದಾಗುವಂತೆ ಬಲವಾಗಿ ಪ್ರಯತ್ನಿಸುವುದು ಅತ್ಯಗತ್ಯವಾಗಿದೆ.** ಇದರಿಂದ ಆಂಗ್ಲಭಾಷೆಯ ಮಹತ್ತ್ವವು ಕಡಿಮೆಯಾಗುವುದಲ್ಲದೆ, ಹಿಂದುಸ್ತಾನೀ ಭಾಷೆ ತಾನಾಗಿಯೆ ರಾಷ್ಟ್ರಭಾಷೆಯಾಗುವುದು. ಮಾತೃಭಾಷಾ ಕಾರ್ಯವು ಒಂದು ರೀತಿಯಲ್ಲಿ ಹಿಂದುಸ್ತಾನೀ ಪ್ರಚಾರ-ಕಾರ್ಯವೆಂದೇ ಹೇಳಬಹುದಾಗಿದೆ. ಈ ರೀತಿಯ ಹಿಂದೀ ಪ್ರಚಾರವು ಹೆಚ್ಚು ಒಳ್ಳೆಯದು. ಇದಕ್ಕೆ ಹಿಂದೀ ವಿರೋಧಕರಿಂದ ಯಾವ ಟೀಕೆಯೂ ಬಾರದು. ಅಲ್ಲದೆ ನಮ್ಮ ಮಾತೃಭಾಷಾ ಪ್ರೇಮದ ಬಗೆಗೂ ಯಾರೂ ಸಂದೇಹಗೊಳ್ಳರು.

ಹಿಂದುಸ್ತಾನದಲ್ಲಿ ಆಂಗ್ಲಭಾಷೆಯ ಆಗು-ಹೋಗುಗಳನ್ನು ವಿವರಿಸಿ, ಆ ಭಾಷೆಯ ಪ್ರಾಬಲ್ಯದಿಂದ ಮಾತೃಭಾಷೆಯ ಕಡೆಗೆ ಹೇಗೆ ನಮ್ಮ ಅಲಕ್ಷ್ಯವುಂಟಾಯಿತೆಂಬುದನ್ನು ಈ ಚಿಕ್ಕ ಪ್ರಬಂಧದಲ್ಲಿ ನಿರೂಪಿಸಿದ್ದಾಗಿದೆ. ಮಾತೃಭಾಷೆಯನ್ನು ಕಡೆಗಣಿಸಿದ್ದರಿಂದ ರಾಷ್ಟ್ರದ ವ್ಯಕ್ತಿತ್ವವೇ ಇಲ್ಲದಾಗಿ, ನಮ್ಮ ರಾಷ್ಟ್ರದ ಜೀವನದಲ್ಲಿ ಹೇಗೆ ಅನೇಕ ಅನಿಷ್ಟಪರಿಣಾಮಗಳುಂಟಾದುವೆಂಬುದನ್ನೂ ನೋಡಿದೆವು. ಮಾತೃ-ಭಾಷೆಯ ಉದ್ಧಾರಕ್ಕಾಗಿ ನಡೆದ ಆಂದೋಲನದ ದಿಗ್ದರ್ಶನವನ್ನು ಮಾಡಿದ್ದಾಗಿದೆ. ಹಾಗೆಯೆ ಹಿಂದುಸ್ತಾನಿಯ ಹಕ್ಕು-ಬಾಧ್ಯತೆಗಳನ್ನೂ, ಸ್ಥಾನ-ಮಾನಗಳನ್ನೂ ವಿಮರ್ಶಿಸಿ, ಆಂಗ್ಲಭಾಷೆ ಹಾಗೂ ಮಾತೃಭಾಷೆಗಳೊಡನೆ ಅದರ ಸಂಬಂಧವೆಂತಹದಿರಬೇಕೆಂಬುದನ್ನೂ ವಿಚಾರಿಸಿದ್ದಾಯಿತು. ಕೊನೆಗೆ ಮಾತೃಭಾಷೆಯ ಉದ್ಧಾರಕ್ಕಾಗಿ ನಮ್ಮೆಲ್ಲ ಶಕ್ತಿ-ಸಾಮರ್ಥ್ಯಗಳನ್ನು ಪಯೋಗಿಸುವುದರಿಂದಲೇ ನಮ್ಮ ಆಕಾಂಕ್ಷೆಗಳೆಲ್ಲ ಕೈಗೂಡುವುವೆಂದೂ ತಿಳಿಸಿದೆ. ಮಾತೃಭಾಷೆಯ ಪ್ರಗತಿಯಿಂದ ಆಂಗ್ಲಭಾಷೆಯ ಘೋರ ಪರಿಣಾಮಗಳೂ ಇಲ್ಲದಂತಾಗುವುವಲ್ಲದೆ, ಹಿಂದುಸ್ತಾನಿಯ ಬೆಳವಣಿಗೆಗೆ ತಕ್ಕ ವಾತಾವರಣವೂ ನಿರ್ಮಾಣವಾದಂತಾಗುವುದು. ಕವಿ ರವೀಂದ್ರರ ಉದ್ಗಾರದಿಂದಲೇ ಈ ಪ್ರಬಂಧವನ್ನು ಮುಗಿಸುವ:—“ನಾನು ಬೇಡುವುದಿಷ್ಟೆ: ಇಂದೊಬ್ಬ ಭಗೀರಥನು ಮುಂದೆ ಬಂದು, ವಿದ್ಯಾಪ್ರವಾಹವನ್ನು ವಂಗಭಾಷೆ (ಮಾತೃ ಭಾಷೆ)ಯ ಮುಖಾಂತರ ಹರಿಸಿ ವಿಶ್ವಸಂಸ್ಕೃತಿಯ ಮಹಾಸಾಗರಕ್ಕೆ ಕೂಡಿಸಲಿ; ಅಜ್ಞಾನದ ಘೋರಾಂಧಕಾರದಲ್ಲಿ ಸತ್ತುಬಿದ್ದ ಅಂತಃಸ್ಸತ್ತ್ವಗಳು ವಿದ್ಯಾಸಂಜೀವಿನಿಯ ವಿದ್ಯುತ್-ಸ್ಪರ್ಶವಾಗಿ ಮರಳಿ ಚೇತನಗೊಳ್ಳಲಿ; ಲಜ್ಜಾಸ್ಪದ ಅಲಕ್ಷ್ಯಕ್ಕೆ ಪಕ್ಕಾದ ನಮ್ಮ ಮಾತೃಭಾಷೆಯ ಬಿಡುಗಡೆಯಾಗಿ ಅದರ ಸ್ಥಾನವು ಅದಕ್ಕೆ ಮತ್ತೆ ಸಲ್ಲಲಿ!”

—New Era—June 1936 p. 154.

-3222

“ತವರ-ಮನೆ” *

(ಏಕಾಂಕ ನಾಟಕ)

★

ಪಾತ್ರ-ಪರಿಚಯ

(ಪ್ರವೇಶದ ಅನುಕ್ರಮದಲ್ಲಿ)

ಚಕೋರ :— ಊಟಮಾಡಿ ಹೊಟ್ಟೆತುಂಬಿಕೊಳ್ಳುವವ	ವಯಸ್ಸು	೩೦
ಚೆಲುವಿ :— ಅವನ ಗೃಹಲಕ್ಷ್ಮಿ	,,	೨೩
ಚಿಕ್ಕ :— ಪರೀಕ್ಷೆಗಳಿಗೆ ಕೂಡುತ್ತ ಪ್ರೇಮದಲ್ಲಿ ಬೀಳುವವ	,,	೧೭
ಚೆಂಕಣ್ಣ :— ಮೊದಲಿಗನ ಮಾವ, ಮಿಕ್ಕ ಮುವ್ವರ ತಂದೆ	,,	೪೫
ಚಿನ್ನಾ :— ದೊಡ್ಡವರಿದ್ದವರ ಮಗಳು, ದೊಡ್ಡವರಾಗುವವರ ಹೆಂಡತಿ	,,	೨೧

★

(ವೇಳೆ: ರಾತ್ರಿ ೭–೩೦ ಗಂಟೆ. ಕಾಲ: ಆಧುನಿಕ. ಅವಧಿ: ೩೫ ಮಿನೀಟುಗಳು.)

ಪರದೆಯು ಮೇಲೇಳುತ್ತಲೆ— ಅಲ್ಲಲ್ಲ— ನಮ್ಮ ನೋಟವು ಒಳಗೆ ಬೀಳುತ್ತಲೆ— ಏಕೆಂದರೆ ಈಗ ನಾವು ನೋಡುವುದು ಒಂದು ನಾಟಕವಲ್ಲ— ಅದೊಂದು ಮನೆಯ ಚಿತ್ರ, ಒಂದು ಜೀವನದ ನಿಜಸ್ವರೂಪ;— ಎದುರಿಗಿದ್ದ ನಡುಮನೆಯಲ್ಲಿ ಒಂದು ಸುಂದರವಾದ ದೊಡ್ಡ ಮೇಜು ಕಾಣುತ್ತದೆ. ಅದರ ಮೇಲೆ— ಅದು ಹೊಸದೂ ಬೆಲೆಯುಳ್ಳದ್ದೂ ಇದ್ದರೂ— ಒಂದು ಅಚ್ಚಿನ ಸರಿವೆಯ ಹೊದಿಕೆಯನ್ನು ಹಾಕಿದೆ. ಅದರ ಬಲಬದಿಯಲ್ಲಿ ಒಂದು ಆರಾಮ ಕುರ್ಚಿಯಮೇಲೆ— ನಿದ್ದೆಹತ್ತಿದೆಯೇನೊ ಎನ್ನುವಂತೆ, ಕೈಯಲ್ಲಿಯ ಪುಸ್ತಕವನ್ನು ತುಸು ಸಹ ಅಲುಗಾಡಿಸದೆ— ಚಕೋರನು ಮಲಗಿದ್ದಾನೆ. ಇದರ ಮೇಲಿಂದ ಅವನು ಓದುತ್ತಿರಲಿಲ್ಲ ಎಂಬುದು ಓದುಗರಿಗೆ ವ್ಯಕ್ತವಾದರೂ, ನೋಟಕರಿಗೆ ಅದು ಗೊತ್ತಾಗುವುದಿಲ್ಲ. ಸ್ವಲ್ಪ ವೇಳೆ ಹೀಗೆಯೆ ಸುಮ್ಮಗೆ ಕುಳಿತು, ಆನಂತರ ಒಮ್ಮೆಲೆ ಏನೋ ನೆನಪಾದಂತಾಗಲು, ಚಟ್ಟನೆ ಸೆಟೆದು ಕುಳಿತುಕೊಳ್ಳುವ. ಆ ಮೇಜಿನ ಮೇಲೆ ವಿರಾಜಮಾನವಾಗಿರುವ,—ಅರ್ಧ ತೆರೆದ—ಅನೇಕ ಪುಸ್ತಕಗಳು, ಬಿಡಿಹಾಳೆ ಬರೆಹಗಳು, ಬೂದಿಯಿಂದ ತುಂಬಿದ ಒಂದೆರಡು ಸಿಗರೇಟಿನ ಡಬ್ಬಿಗಳು. ಈ ವಸ್ತುಗಳ ತಿಪ್ಪೆಯೊಳಗಿಂದ ಕಡ್ಡಿಯ ಪೆಟ್ಟಿಗೆಯೊಂದನ್ನು ಸಂಶೋಧಿಸಿ ತೆಗೆದು, ವಾಡಿಕೆಯಂತೆ ಅದನ್ನು ತೆರೆದು, ಒಂದು ಕಡ್ಡಿಯನ್ನು ಕೆರೆದು, ತನ್ನ ಮೊಂಡತೋಳಿನ ಬನಿಯಂಗಿಯ ಕಿಸೆಯೊಳಗೆ ಎಡಗೈಯನ್ನು ಹಾಕಿದ; ಆದರೆ ಅಲ್ಲೇನಿದೆ? ಅದೇನು ಅಕ್ಷಯಪಾತ್ರೆಯೆ ಅಥವಾ ಬೀಡಿಯ ಕಾರಖಾನೆಯೆ? ಅಲ್ಲಿ ಬೀಡಿ ಇಲ್ಲದುದನ್ನು ಕಂಡು, ತ್ರಸ್ತನಾಗಿ, ಬಲಗೈಯಲ್ಲಿ ಹಿಡಿದ ಉರಿಯುವ ಕಡ್ಡಿಯನ್ನು ಲೆಕ್ಕಿಸದೆ, ಕುಳಿತಲ್ಲಿಂದಲೆ, ಆ ಮೇಜಿನ ಮೇಲೆ ಎಡಗೈಯನ್ನು ಆಡಿಸತೊಡಗಿದ. ಅನಂತಕಾಲದ ವರೆಗೆ ಉರಿಯುವೆ ಎಂದು ಆ ಕಡ್ಡಿಯೇನು ವಚನವನ್ನು ಕೊಟ್ಟಿದ್ದಿಲ್ಲವಾದುದರಿಂದ, ಅವನ ಬೆರಳಿಗೆ ಅದರ ಝಳವು ತಾಕಿತು. ಅದರ ಕೊನೆಯು ಸಮೀಪಿಸಿತು. ಮೊದಲೆ ಚುಟ್ಟ ಸಿಕ್ಕದ ನಿರಾಶೆ— ಅದರಲ್ಲಿ ಆ ಕಡ್ಡಿಯ ಉರುವಣಿಗೆ ಬೇರೆ! ಅವನು ಪೀಡಿತನಾಗಿ ಒಮ್ಮೆಲೆ —]

ಚಕೋರ:—ಚೆಲುವೀ.. ಚೆಲುವೀ.. ಏ ಚೆಲುವೀ (ಎಂದ ತನ್ನ ಅರ್ಧಾಂಗಿಯನ್ನು ಕೂಗುತ್ತ, ಆ ಮೇಜಿನ ಬಳಿಯಿಂದ ಎದ್ದು ಎಡಗಡೆಗೆ ಕಾಣುವ ಬಾಗಿಲಿಗೆ ಬಂದು, ಮತ್ತೊಮ್ಮೆ ‘ಚೆಲುವೀ’ ಎಂದು ಗಟ್ಟಿಯಾಗಿ ಕೂಗಿದ. ಈಗ ನಮ್ಮ ನೋಟಕರಿಗೆ ಅವನ ಪೈಜಾಮಾ, ಮತ್ತು ಮೊಂಡ ತೋಳಿನಂಗಿಯ ಉಡುಪು ಕಾಣುವುದು ಅಷ್ಟರಲ್ಲಿ ಕಿವಿಯವರೆಗೆ ಬಾಯಿ, ಮೊಣಕಾಲವರೆಗೆ ಸೀರೆ, ಹಾಗು ‘ಹರದಾರಿ-ದನಿ’ ಇದ್ದ ಚೆಲುವಿಯು ಬರುವಳು.)

ಚೆಲುವಿ:— ಯಾಕ! ಏನಾತು ಮತ್ತ?

ಚಕೋರ:— (ಮೇಜಿನಮೇಲೆ ಪುಸ್ತಕವನ್ನಪ್ಪಳಿಸಿ) ಹೀಂಗಾದರ ನನ್ನ ಅಭ್ಯಾಸ ಹ್ಯಾಂಗ ಆಗಬೇಕು?

ಚೆಲುವಿ:— ಹ್ಯಾಂಗಾದರ? ಕನಸು ಗಿನಸು ಬಿದ್ದಿತ್ತೇನು

ಚಕೋರ:— ಪೂರ್ಣ ಕೇಳತೀಯೋ.. ಏನು.. ನನ್ನ ಹತ್ರ ಒಂದೂ ಬೀಡಿ ಕೂಡಾ ಇಲ್ಲ.. ಹೀಂಗಾದರ ಅಂತ ಕೇಳತೀನಿ

ಶ್ರೀ. ಎಚ್. ಎಸ್. ಪಾಟೀಲ, ಎಂ. ಎ.

ಅವರಿಂದ

* ಮೊದಲನೆಯ ಸಲ ಇದರೊಳಗಿನ ಸ್ತ್ರೀಪಾತ್ರಗಳನ್ನು ಹೆಣ್ಣುಮಕ್ಕಳೇ ವಹಿಸಿ, ಆಡಿತೋರಿಸುವ ಸಂಘಕ್ಕೆ ಈ ಪ್ರಹಸನದ ಎಲ್ಲ ಹಕ್ಕುಗಳನ್ನು ಲೇಖಕನಿಂದ ಕಾಯ್ದಿರಿಸಲಾಗಿದೆ.

ಚೆಲುವಿ:— ಹುಂ. ಹೀಂಗs ಏನಾದ ರೊಂದು ನೆವ. . ಅದೇನೋ ಹೇಳತಾರಲ್ಲ !!

ಚಕೋರ:— ಅದೇನೋ ಹೇಳೋದು ಇರಲಿ ಅಲ್ಲೇ! ಮೊದಲ ಇಲ್ಲಿ ನಾ ಹೇಳೋದು ಕೇಳು ! ಒಳಗ ಹೋಗಿ ಚೆಂಕಣ್ಣನ ಕಿಸೇದಾಗಿನ್ನೂ ನಾಲ್ಕಾರು ಸಿಗರೇಟು ತಂದುಕೊಡು !

ಚೆಲುವಿ:— ನಾ ತಂದು ಕೊಡೂದಿಲ್ಲ!!

ಚಕೋರ:—ಹಾಂಗಾದರ ನನ್ನ ಓದು ಮುಗೀತು ನೋಡು! ನಾ ಮೊದಲs ಹೇಳಿ ಬಿಟ್ಟೇನಿ ; ಸುಮ್ಮನೆ ಬ್ಯಾರೇ ಮನೀ ಮಾಡೋಣಾ. . ಅಂದರ, ನನ್ನ ಕರತಂದು ಕೂಡಿಸಿಕೊಂಡಿಲ್ಲೆ—ಅಪ್ಪನ ಮನ್ಯಾಗ !

ಚೆಲುವಿ:— ಏನಾರs ಮಾಡಿ ನನ್ನ ಮ್ಯಾಲೆ ಹಾಕಬ್ಯಾಡರಿ. ಹೋದ ವರ್ಷ ಬ್ಯಾರೇ ಮನೀಮಾಡಿ ಏನು ಸುರಕೊಂಡೆ ಗೊತ್ತಿಲ್ಲೇನು ನನಗ ! ಬೀಡಿಗೆ ಮೊದಲ್ಮಾಡಿ ಎಲ್ಲಾ ರೊಕ್ಕಾ ಚೆಂಕಣ್ಣನ ಕಡೆಯಿಂದ ತಂದರೂ ನುದ್ದಾ ನಿಮಗ- ನಿಮ್ಮ ಪರೀಕ್ಷಾ ಪಾಸಾಗೂದು ಆಗಲಿಲ್ಲ. ಹಿಂದಾಗಡೆ. . ಬಾಣಂತಿತನದ ನೆವಾಮಾಡಿ ಮತ್ತ ಇಲ್ಲೇ ಬರಬೇಕಾತು.

ಚಕೋರ:— ಅದೇನೇ ಇರಲಿ, ನನಗ ಈ ಸಲ ಪರೀಕ್ಷೆ ಪಾಸ್ ಆಗಲೇ ಬೇಕಾಗೇದ. ಅದರೊಳಗ ನಿನ್ನ ಬಾಣಂತಿತನ, ಅಕ್ಕನ ಬಾಣಂತಿತನ ಅಂದಕೋತs, ನನಗ ಒಳಗಿನ ಕೋಣೇನೂ ಬಿಡಿಸಿ, ಈ Godown ನಿನಾಗ ತಂದುಹಾಕಿದಿರಿ. ಅದಕ್ಕ ಈಗ ಕೇಳಿಬಿಡು: ನನಗ ಬೇಕಾದ ಎಲ್ಲಾ ಪದಾರ್ಥಾ ಇಲ್ಲಿಯೆ ದೊರಕಿಸಿ ಕೊಡತಾರೋ . . ಏನು ತಿಂಗಳಿಗೆ ಐವತ್ತು ರೂಪಾಯಿ ಕೊಟ್ರು. .

ಚೆಲುವಿ:— ಹೂಂ ! ಇದೇನು ವರದಕ್ಷಿಣೀ ಬಾಕೀನೋ, ಏನು ಹಿಂದಿನ ಜನ್ಮದ ಋಣಾನೋ ?

ಚಕೋರ:— (ಠಿಗಳಿಕಿಂದ ನೆತ್ತಿಯಮೇಲೆ ಕೈಯಾಡಿಸುತ್ತ) ಇಲ್ಲಿ ಹೇಳತೀನಿ ಕೇಳಿಲ್ಲೆ. ಇವತ್ತ ನಾನು ಅದರ ಸಲುವಾಗಿ ಬಹಳ ವಿಚಾರ ಮಾಡೀನಿ; ಇನ್ನೊಂದೆರಡು ದಿನದಾಗ ಬ್ಯಾರೇ ಮನೀಮಾಡೂದು ಅಂತ ಗೊತ್ತುಮಾಡೀನಿ. . ಇದೊಂದು ಸ್ವಲ್ಪ ದಿನಾ ಅಪ್ಪ ರೊಕ್ಕಾಕೊಡೂಹಾಂಗ ಮಾಡು; ನನ್ನ ಪರೀಕ್ಷಾ ಒಂದು ಪಾಸ್ ಆತೂ. . ಅಂದರ, ಆ ಮ್ಯಾಲೆ ಇವರ ಸಂಗತಿ ಬ್ಯಾಡ; ತಿಳೀತಿಲ್ಲೊ ?

ಚೆಲುವಿ:— (ಹರುಷದಿಂದ ಉಬ್ಬಿದ್ದರೂ) ನನಗೇನು ಭಾಳ ಬೇಕಾಗೇದೇನು ಇಲ್ಲಿರೋದು ? ಮದಿವ್ಯಾಗಿ ಇಷ್ಟದಿನಾ ಆದರೂ, ಮಕ್ಕಳು-ಮರಿ ಕಟ್ಟಿಕೊಂಡು ಮತ್ತ ಇಲ್ಲೇ ಸಾಯೋದಾಗೇದ!! ಒಮ್ಮೆರೆ ನಂದೂ ಅಂತ ಅಂದುಕೊಂಡು, ನಿರಂಬ್ಯಾಗಿ ಇರೋದು ಅದsನೋ ಇಲ್ಲೋ— ನನ್ನ ದೈವದಾಗ !



“ ಏ ಸುಮ್ಮನಾಗಿರಿ ಮೂರ್ಖರನ್ನ ತಂದು ! ಈ ಟೇಬಲ್ಲು ಯಾರಿಗೂ ಕೊಡೂದಿಲ್ಲ. . ಇದು ನನಗ ಬೇಕು ! . . . . ”

ಚಕೋರ:— (ಚಾಳಿಗೆಯನ್ನು ಬಿಚ್ಚುತ್ತ) ಇರಲಿ ಬಿಡs ತವರಮನಿಯವರಿಗೆ ಇಷ್ಟು ಬಹಳೇನು ? ನಾವೇನಿಲ್ಲೇ ಕಡೆ-ತನಕಾ ಇರೋದು ಅಷ್ಟರಾಗs ಅದ !

ಚೆಲುವಿ:— ಹುಂ, ಇಷ್ಟಾತು ಸಾಕಾಗಿಲ್ಲೇನೋ ! ತವರ ಮನಿಯವರಂದ್ರ ಆಳಿಯಂದಿರ ಎಲ್ಲಾ ನೋಕ್ಷ-ಮೋಕ್ಷದ ಗುತ್ತಿಗೀ ಹಿಡಿದವರೂ ಅಂತ ತಿಳಿದೀರೇನು ? ನಾವೇನು ಗಂಡು ಹುಡುಗರs ತವರಮನಿಯಿಂದs ಎಲ್ಲಾ ಬೇಡಲಿಕ್ಕೆ !

ಚಕೋರ:— (ಮನದೊಲವನ್ನು ತಿಳಿಸಲು) ಹೌದs! ನಾ ಹೇಳೋದs ತಿಳೀವಲ್ದು ನಿನಗ! ಈಗ ನೋಡು, ಚಿನ್ನಾನ ಗಂಡಗ-ಕೂತಲ್ಲೇ ಎಲ್ಲಾ ಹ್ಯಾಂಗ ಸಿಗತsದ ?. . ನಿನ್ನ ತಂಗಿ ಚಿನ್ನಾ ಬೇಡಿದ್ದಕ್ಕ ಚೆಂಕಣ್ಣ ಇಲ್ಲಾ ಅಂಬೋದಿಲ್ಲ. . ಇತ್ಲಾಗ ನೀನೂ ಇದ್ದೀದಿ!

ಚೆಲುವಿ:— (ಪ್ರ ತಿ ಭ ಟ ಸಿ) ಹೌದು, ನನಗ ಇಷ್ಟು ಕೊಟ್ಟಾರ. . ಇದs ಹೆಚ್ಚಾಗೇದ ! ಯಾವಾಗ ಒಮ್ಮೆ ಇಲ್ಲೀ ಪಲ್ರ್ಯ ಹರಕೊಂಡು ಬ್ಯಾರೇ ಇದ್ದೀನೋ ಅಂತ ಆಗೇದ !!

ಚಕೋರ:— (ಎಳೆಸಿಕ್ಕಿತೆಂದು ಹಚ್ಚಡಕ್ಕೆ ಕೈಹಾಕಿ) ಅದಕ್ಕೇ ಹೇಳೋದು ನಾನು. . ಇವತ್ತ ಚೆಂಕಣ್ಣ ಮನೀಗೆ ಬಂದಕೂಡಲೆ ಹೇಳಿಬಿಡು. . ಹೀಂಗ; ನಾಳಿನ ಆದಿತ್ಯವಾರ ನಾವು ಬ್ಯಾರೇ ಮನೀ ಮಾಡತೀವಿ. .

ಚೆಲುವಿ:— ಅದಕ್ಕ ರೂಪಾಯಿ ಕೊಡಿರಿ. . ಹೌದಲ್ಲೊ ?

ಚಕೋರ:— (ಎಳೆಕತ್ತರಿಸಲು) ಅಲ್ಲs, ನಾನು ಮೊನ್ನೆ ಅಬಚಿಗೆ ಪತ್ರಾ ಬರಿದೀನಿ. . ಒಂಬೈವತ್ತು ರೂಪಾಯಿ ಸಾಲಾ ಅಂತ ಕಳಿಸಲಿಕ್ಕೆ–

ಚೆಲುವಿ:— ತೀರಿ ಹೋತು. ನಿಮ್ಮ ಅಬಚಿ ಕಳಿಸೋದು.. ನೀವು ಕಾಣೋದು ಅಂದರ ಯಾವ ರಾಯನ ಕಾಲದ ಮಾತೋ!

ಚಕೋರ:— ಇದೊಂದ್ಸಾರಿ ನೋಡೋಣ.. ಅಲ್ಲೀತನಕಾ ನೀನು ನಮ್ಮ ಎಲ್ಲಾ ಸಾಮಾನಸರಿ ಕಟ್ಟಿಡಲ್ಲಾ!

ಚೆಲುವಿ:— ಏನದು ಸಾಮಾನು? ಮತ್ತೊ ಅತ್ಯಾಗ ಕೇಳ ಬೇಕು: ನಾಕು ಯಾವಾದರೂ ಹರಕಾ ಮುರಕಾ ಭಾಂಡೀ ಕೊಡೂ ಅಂತ!

ಚಕೋರ:— (ಹಿಂದಿನ ವೈಭವವನ್ನು ನೆನೆಸಿ ಪುಟಿಯುವ ಕನ್ನಡಿಗರಂತೆ) ಅಲ್ಲಽ ಹೋದವರ್ಷ ನಮಗಽ ಅಂತ ಕೊಟ್ಟ ಸಾಮಾನು ನಮ್ಮೂವಽ.. ಮತ್ತೆ ಈ ಸಲ ಏನು ಕೊಡತಾರ ಕೇಳೋದು..!

ಚೆಲುವಿ:— ಈ ಸಾರೆ ಕೊಡೂದಽ..ಚೆಂಡಿಗೆ ಕೈ!

ಚಕೋರ:— (ಆ ದಿನದ ಗುರಿಯು ನೆನಪಾಗಿ) ಮತ್ತು ಇನ್ನೊಂದು ಮಾತು: ಈ ಸಾರೆ ನಾನು ಪರೀಕ್ಷಾ ಪಾಸಾದೆನೆಂದರ ನನ್ನ ದವಾಖಾನೆಗೆ ಒಂದು ದೊಡ್ಡ ಟೇಬಲ್ಲು ಬೇಕಾಗತದ.. ಅದಕ್ಕ ನಿಮ್ಮಪ್ಪಗ ಹೇಳು, ನಾವು ಈ ಟೇಬಲ್ಲು ಒಯ್ಯತೀವೀ ಅಂತ!

ಚೆಲುವಿ:— ಅಂಥಾದೆಲ್ಲಾ ಮಾಡೋದೇ ಇಲ್ಲ ನಾನು. ಮೊನ್ನೇ ಇನ್ನೂ ಪ್ರೀತೀಲೆ ಆರಿಸಿ, ತಂದಿಟ್ಟುಕೊಂಡಾನ ಅಪ್ಪ ಆ ಮೇಜು! ಅದನ್ನ ಕೊಡೂ ಅಂತ ಆತನ್ನ ಕೇಳಲಿಕ್ಕೆ ನನಗ ಮನಸ್ಸೇ ಆಗೂದಿಲ್ಲ!

ಚಕೋರ:— (ಈರ್ಷೆಗೆ ಕೆಡುಹಲು) ಇಲ್ಲೇ ನೋಡು ನೀ ತಪ್ಪೋದು! ನಿನಗ ಬೇಡಲಿಕ್ಕೆ ಮನಸ್ಸು ಆಗೂದಿಲ್ಲ; ನಾಳೆ ಚಿನ್ನಾ ಅಪ್ಪನ್ನ ಕಾಡಿ ಒಯ್ದಳಂದರ.. ಕೊಡತೀ ಬಾಯಿ-ತಕ್ಕೊಂಡು.

ಚೆಲುವಿ:— ಕೊಡವಲ್ಲೆ ನಾನು.. ಮುಂದ ದೇವರು ಕಣ್ಣು ತಗದನಂತರ ನಾವೇ ಒಂದು ತಗೊಳ್ಳೋಣಂತ.. ಆದರ ಇದನ್ನ ಒಯ್ಯೋದು ಬ್ಯಾಡ!

ಚಕೋರ:— ಆದಿರಲಿ, ಈಗ ಸಿಗರೇಟಂತೂ ತಂದುಕೊಡು! ಅಂದರ ಈ ದೇವರೂ ಕಣ್ಣಮುಚ್ಚೂದರೆ ತಪ್ಪತದ!

ಚೆಲುವಿ:— ಸಾಕು; ಒಂಚೂರು ಹೊರಗ ತಿರುಗಾಡಿ ಬರ್ರಿ ಹೋಗರೆಲ್ಲಾ.. ಮೂರೂಸಂಜ್ಯಾತು. ಬರೂದ್ರಾಗಽ ಊಟದ ಹೊತ್ತಽ ಆಗತದ!

(ಅಷ್ಟರಲ್ಲಿ ಬಿಳಿಯಾದ ತಿಳಿಯಾದ ದೋತರ, ರೇಶಿಮೆಯ, ಅಂಗಿ- ಕೋಟುಗಳನ್ನು ಧರಿಸಿ, ಕೈಯಲ್ಲಿ ‘ ಪ್ರೇಮಶರ ’ ಎಂಬ ಹೆಸರಿನ ತೊಗಲಿನ ಬಾರುಕೋಲನ್ನು ಹಿಡಿದುಕೊಂಡು ‘ ಮಾರನಂತೆ ಕಾಣುವೆ ’ ಎಂಬ ಆವಿರ್ಭಾವವುಳ್ಳ ಚಿಕ್ಕನು ಒಳಗೆ ಬರುವನು.)

ಚಿಕ್ಕ:— (ಬೇಸತ್ತ ನಗೆಯಿಂದ) ಇಲ್ಲೇನು ನಡದದ? Romance ಏನು ಮತ್ತ! ಮೊದಲಽ ನನಗ ತಲೀ ಹಿಡಿದು ಹೋಗೇದ ಅಂಥಾದು..! ಇಲ್ಲಿ ನೋಡಿರಿ ಚಕೋರಮಾಮಾ, (ಎನ್ನಲು ಚೆಲುವಿ-ಚಕೋರರಿಬ್ಬರೂ ಅವನನ್ನು ದಿಟ್ಟಿಸಿ ನೋಡುವರು.) ಇವತ್ತ, ನನ್ನ Beauty ಭೆಟ್ಟಿ ಆಗಲಿಲ್ಲಾಂತ ಊರಹೊರಗ ತಿರುಗಾಡಲಿಕ್ಕೆ ಹೋದರ..ಎಲ್ಲೆ ನೋಡಿದಲ್ಲೆ ನನಗ ಜೋಡು-ಜೋಡು ‘ ವಸ್ತೂ ’ನಽ ಕಾಣಬೇಕಽ? ರೇಲ್ವೆ ಹಳೀ ಜೋಡು, ಕೈಕಂಬ ಜೋಡು, ಹಳೀಗುಂಟ ಕದ್ದುಮೇಯೂ ದನಾ ಜೋಡು. ಜೋಡಾಗಿ ಮೇಯುತ್ತಿದ್ದವು. ಇವನ್ನೆಲ್ಲಾ ನೋಡಿ ಕಂಗೆಟ್ಟು, ಕಡೀಕ ಅಲ್ಲೆ ಹಣಮಪ್ಪನ ಗುಡೀಗೆ ಹೋದರ-ಅದರ ಗರ್ಭ ಗುಡೀಯೊಳಗ ಪಾರಿವಾಳದ ಒಂದು ಜತೀ ಕಿವಿಮಾತು ಆಡೂದು ಕಾಣಬೇಕಽ? ಹೀಗಾಗಿ ನನಗ ಈ ಜಗತ್ತಿನಾಗ ಒಬ್ಬಂಟಿಗಾಗಿ ತಿರುಗಾಡೂದೇ ಕಠಿಣ ಆಗಿಬಿಟ್ಟಽದ; ಅದಕ್ಕಽ ಕೇಳಿದೆ, ಮತ್ತ ಇಲ್ಲಿ ನೀವೂ.

ಚೆಲುವಿ— (ಅವನ ಮಾತು ಸಾಕಾಗಿ) ಇಲ್ಲ ನಮ್ಮಪ್ಪ; ನನಗ ಒಳಗ ಕೆಲಸ ಒಟ್ಟೇದ. (ಎಂದು ಅಡಿಗೆ ಬಾಗಿಲಿನಿಂದ ಹೋಗುವಳು.)

ಚಕೋರ:— (ನಿರುದ್ಯೋಗಿಯ ಕಳವಳದಿಂದ) ಚಿಕ್ಕಾ, ನಿನ್ನ ಕಡೆಗೆ ಒಂದು ಕೆಲಸ ಅದಽನಪಾ.

ಚಿಕ್ಕ:— (ಅವನನ್ನು ಲಕ್ಷಿಸದೆ) ನಿಮ್ಮ ಕಡೆಗೆ ನನ್ನದೂ ಒಂದು ಕೆಲಸ ಅದ!

ಚಕೋರ:— (ತನ್ನ ಕೆಲಸವಾಗುವುದೆಂದು ನಂಬಿ) ಏನದು!

ಚಿಕ್ಕ:— (ಸುಸಂಧಿಯಲ್ಲಿ) ಇಲ್ಲಿ ನೋಡಿರಿ. ನನ್ನ Beauty ಗೇನೋ..ಯಾರು ಗೊತ್ತಾತಿಲ್ಲೊ ನನ್ನ Beauty (ಎಂದು ಕಣ್ಣು ಸನ್ನೆಯಿಂದ ತಿಳಿಸಿ); ನನ್ನ Beauty ಗೇನೊ. Phisiology ಮತ್ತ Hygiene subject difficult ಹೋಗಲಿಕ್ಕೆ ಹತ್ತೀದಂತ! ಅಂದರ ಅವರ Brother ಹೇಳಿದ. ಅದಕ್ಕ ನಾನೇ Tution ಹೇಳತಿದ್ದೆ ಬೇಕಾದ್ಹಾಂಗ.. ಆದರ ನನಗ ಆ Subject ನಾಗ ನನಗ Interest ಇಲ್ಲಾ; ಮತ್ತ ನೀವೂ ಹ್ಯಾಂಗಾದರೂ Medical Student ಇದ್ದೀರಿ! (ಎಂದು ಲಟಿಕೆ ಹೊಡೆದು) ನೀವೇನಾರಽ Tution ಹೇಳತೀರೇನೋ ಅಂತ! ಯಾಕಂದರ ನೋಡಿರಿ .. ನಿಮ್ಮಲ್ಲೆ ಅಂದ್ರ ನನಗ..ಹೂಂ! ಯಾ ಕೋ ‘ ಪ್ರೇಮಶರ! (ಎಂದು ಬಾರುಕೋಲನ್ನು ಮಾತಾಡಿಸುವನು.)

ಚಕೋರ:— ಮತ್ತ ನಿನಗ ಗೊತ್ತಿಲ್ಲೇನು ಚಿಕ್ಕಾ..ನಾವು ನಾಳಿನ ಆದಿತ್ಯವಾರದಿಂದ ಬ್ಯಾರೇ ಮನೀಮಾಡೂವವರಿದ್ದೇವಿ.

ಚಿಕ್ಕ:— ಹೀಗೇನು? (ವಾಕ್ಪಟದಲ್ಲಿ ದೇವನು ಪ್ರಸನ್ನನಾದಾಗಿನ ಭಕ್ತನಂತೆ) ಹಾಂಗಾರ ನನ್ನ ದೈವ ತೆರೀತೂ ಅಂದಂತಾತು! ಯಾಕಂದ್ರ ನೀವು ಮನೀಮಾಡಿದರೂ ಸಹಿತ, ಯಾವಾಗಲೂ ಮನ್ಯಾಗಿರದೆ ಇಲ್ಲೇ ಇರತೀರಿ ಇಬ್ಬರೂ; ಆಗ ನಮ್ಮದೇ ಅಲ್ಲವೇ ಆ ಸಾಮ್ರಾಜ್ಯ? ಆ ಸಾಮ್ರಾಜ್ಯದ ಸಮ್ರಾಟ ನಾನು! ಸಾಮ್ರಾಜ್ಞಿ ಯಾರು ಗೊತ್ತದಽ ಇಲ್ಲೊ..ನನ್ನ Beauty!

ಚಕೋರ:— ಪರಂತೂ ಈ ಸಾರೆ ನಾನು ಮನೀ ಮಾಡೂದು ಅಭ್ಯಾಸಕ್ಕಽ ಅಂತ!

ಚಿಕ್ಕ:— (ಅವನನ್ನು ಲಕ್ಷ್ಯಿಸದೆ) ಇರ್ಲಿರೀ; Tution ಅರೇ ಹೇಳೀರೋ ಇಲ್ಲೋ? ಕಡೀಕ ನಿಮಗ ಆಗದಿದ್ರೂ— ಹೇಳತೇನಿ ಅಂತ ಹಾಂಗs ಹೇಳರಿ. ಅಂದರ ಆ ವ್ಯಾಖ್ಯಾದಾಗ ನಾವು.. ಯಾಕೋ ಪ್ರೇಮಶರ! (ಎಂದು ಬಾಯಿ ಚಪ್ಪರಿಸುವನು.)

ಚಕೋರ:—(ತನ್ನ ಬೇಡಿಕೆಯ ನೆನಪಾಗಿ)ನೋಡು, Tution ಹೇಳಲಿಕ್ಕೆ ಏನೂ ಅಡ್ಡಿ ಇಲ್ಲಾ; ಆದರ ಅದಕ್ಕೆ ಒಂದೆರಡು ಸಾಮಾನು ಬೇಕಾಗತಾವ ನೋಡಪಾ ಚಿಕ್ಕಾ!

ಚೆಂಕಣ್ಣ:— ಏನು ಫೀ ಹೌದಲ್ಲೊ.. ಅದು ಸಿಗೂದಿಲ್ಲ! ಅಲ್ಲರೀ ನಿಮಗ Tution ಹೇಳಂಬೂದು ಆಕೀಗೆ ಜ್ಞಾನ ಸಿಗ ಬೇಕೂ ಅಂತ ಅಲ್ಲ; ಆದರ ನನಗ ಆಕಿಯ ಸಹವಾಸ ಸಿಗಬೇಕೂ ಅಂತ.

ಚಕೋರ:— ಅದಲ್ಲೊ; ನನಗ Tableಊ Chairಊ ಬೇಕಾಗ್ತಾವ; ಆದಕ್ಕೆ ಚೆಂಕಣ್ಣನ್ನ ಕೇಳಿ—ಈ ಟೇಬಲ್ಲು ಹೊರಿಸು ನಮ್ಮ ಮನಿಗೆ! ಅಂದರ ನಾನು—

ಚಿಕ್ಕ:—ಛೀ, ಛೀ, ಅದಾಗೂದಿಲ್ಲ ನೋಡಿರಿ! ಇನ್ನೂ ಬೇಕಾದರ ನನ್ನ Beautyಗೆ ಹೇಳಿ, ಅವರಪ್ಪನ ಮನ್ಯಾಗಿನ..ಆದರ ನೋಡಿ, ಆ ಚಿನ್ನಾ ಒಂದು ನನ್ನ ಕೆಲಸಾ ಮಾಡವಲ್ದು; ಆಕೀಗೆ ಹೇಳಿದೆ: ನೀನು ಒಮ್ಮೆ ನನ್ನ Beauty ಮನೀಗೆ ಹೋಗಿ, ಹೀಂಗ ನಿನ್ನ Classmateನ ಅಕ್ಕ ನಾನೂ ಅಂತ ಹೇಳಿ, ಗುರುತುಮಾಡಿ ಕೊಂಡು ಬಾ ಅಂದರ ನನಗ ನೋಯಿಸಾ ಆಗತದ ಅಂತ ಹೇಳಿದರ ..Useless ನೋಡಿರಿ ಚಿನ್ನಾ. ಯಾಕೋ ಪ್ರೇಮಶರ!

ಚಕೋರ:— (ಕೊನೆಯ ಬಾಣವೆಂದು) ನೋಡಪಾ, ಬೇಕಾದರ ನಾನು, ಚೆಲುವೀ ಒಂದಿನಾ ಅವರ ಮನೀಗೆ ಹೋಗಿ, ಕೆಲಸಾ ಮಾಡತೇವಿ..ಮತ್ತ ನೀನು..

ಚಿಕ್ಕ:— (ಪುಟಿದಾಡುತ್ತ) ಆಂ! ಮಾಡತೀರಾ? ಆಕೆಗೆ ಹೇಳಿರಿ, ...ನ್ನ ಸಲುವಾಗಿ ಇಲ್ಲೆ ನಾನು ಹಲುಬುತ್ತಿರುವೆ..ಅಂತ! ಯಾರು ...ದರ 'ಪ್ರೇಮಶರ' ಅಂತ ಹೇಳಿರಿ. ಮತ್ತು ಆಕೆಗೆ ಹೇಳಿರಿ: ...ಕೆಗೆ ಪ್ರಿಯ ಅನಿಸಿದರ, ಕೊನೆಯವರೆಗೆ ನಾನು ಆಕೆಯನ್ನು ...ಗಲದಂತೆ ಆಕೆಯ ತವರಮನೆಯೊಳಗೇ ಇರಲಿಕ್ಕೆ ಸಿದ್ಧ.. ...ದರ ನಿಮ್ಮ ಹಾಂಗ.. (ಎನ್ನುವಷ್ಟರಲ್ಲಿ ಬಲಗಡೆಯ ಬಾಗಿಲಿ...ದ ತಡವರಿಸುತ್ತ, ಕೈಯಲ್ಲಿ ಒಂದು ಪುಸ್ತಕವನ್ನು ಹಿಡಿದುಕೊಂಡು, ...ತರದ ತುದಿಯು ಕಾಲಲ್ಲಿ ಸಿಕ್ಕಿದುದನ್ನು ತೆಗೆದುಕೊಳ್ಳಬೇಕಾಗಿ...ರೂ ಮರೆತು, ಅದರ ಬದಲಾಗಿ ಕಣ್ಣಿನ ಮೇಲಿರುವ ಕನ್ನಡಕವನ್ನು ...ಣೆಗೆ ಏರಿಸಿಕೊಂಡು, ಏರುಪಣಿಯ ಚೆಂಕಣ್ಣ ಪ್ರವೇಶಿಸುವನು. ...ಕೈಯಲ್ಲಿ ಒಂದು ಹಸನಾದ ಶರ್ಟು, ಅದರ ಮೇಲೊಂದು ...ಟು ಇವೆ.)

ಚೆಂಕಣ್ಣ:— (ಗಡಿಬಿಡಿಯಲ್ಲಿ) ಚೆಲುವೀ, ಚೆಲುವೀ, ಎಲ್ಲಿ ...ದಳು ಚೆಲುವಿ?..ಅಲ್ಲಲ್ಲ! (ಅವರಿಬ್ಬರನ್ನು ನೋಡಿ) ಅಲ್ಲಲ್ಲ! ...ಲ್ಲೆ ನೀವೇ ಇದ್ದೀರೇನು? ಹೂಂ ಇನ್ನ ನಾನು ಚೆಲುವೀನ್ನ ...ಗಿ, ನೀವೆಲ್ಲಿದ್ದೀರೀ ಅಂತ ಕೇಳುವವನಿದ್ದೆ. ಹುಂ, ನೀವೇ ...ಲ್ಲಿದ್ದೀರಲ್ಲಾ..ನೆಟ್ಟಗಾತು! ಇಲ್ಲಿ ನೋಡಿರಿ (ಎನ್ನುತ್ತ ಮೇಜಿನ ಮೇಲೆ ಆ ಪುಸ್ತಕವನ್ನಿಟ್ಟು, ಅದನ್ನು ತೋರಿಸಬೇಕೆಂದು ಅವರ ಬಳಿಗೆ ಹೋಗುವನು. ಆದರೆ ಅದರ ಮೇಲಿನ ನೈಸರ್ಗಿಕವಾದ ಸೌಂದರ್ಯವನ್ನು ನೋಡಿ, ಮೂಗು ಏರಿಸಿ ಕನ್ನಡಕವನ್ನು ಕೆಳಕೆಳಗಿಳಿಸಿ, ಮತ್ತೆ ಚಕೋರನ ಹತ್ತಿರದಲ್ಲಿ ಮುಂದೆಬರುವನು. ಅಷ್ಟರಲ್ಲಿ ಚಿಕ್ಕನು ಎಡಗಡೆಯಿಂದ ಮೆಲ್ಲಗೆ ಒಳಗೆ ಜಾರುವನು.) ..ಹಂ. ಇಲ್ಲಿ ನೋಡಿರಿಲ್ಲೆ. ಈ X'ray photograph ಇದೊಂದು Recent difficult caseಊ; ಇಂಥ ಕೇಸಿಸ್ಸು ಈಗ ಭಾಳ ಆಗಲಿಕ್ಕೆ ಹತ್ಯಾವ. ಆದಕ್ಕೆ ಈಗ x'rayದ ಉಪಯೋಗ ಮತ್ತು ಶಾಸ್ತ್ರ ಅಥವಾ ಕಲೆ ಅನ್ನರಿ..ಬಹಳ ಬೆಳದsದ. ಅದಕ್ಕ ನಿಮ್ಮ ಪರೀಕ್ಷಾಕ್ಕ ಈ ಸಲ ಬಿದ್ದರೂ ಬೀಳಬಹುದೂ ಅಂತ.. ಕಡೀಕ General knowledge ಅಂತ ಇದ್ದರೂ ಸಹಿತ ಮುಂದೆ Practiceಕ್ಕೇನು ಕೆಟ್ಟ ಅಲ್ಲಾ .. ಆಂ .. ಹೌದಲ್ಲೊ?.. ನೋಡಿದಿರಾ.. ಇದನ್ನ!.. ನಿಮಗ..x'ray ಗೊತ್ತದನೋ ಇಲ್ಲೊ?

ಚಕೋರ:—(ಅವನು ಹೇಳುತ್ತಿರುವುದು ಬೇಡವಾಗಿ) ಹಂ. x'ray ನs? ಓಹೋ..ಕೇಳಿ ಗೊತ್ತದ; ಆದರ ಅದನ್ನೇನು ನೋಡಿಲ್ಲ!

ಚೆಂಕಣ್ಣ:—(ಅದನ್ನು ತಿಳಿಸುವ ಗೊಂದಲದಲ್ಲಿ ಸಿಕ್ಕು) ಅಂ. x'ray ಅಂದರ.. ಅ.. ಅದೊಂದು.. ಹುಂ.. ಒಳಗಿದ್ದದ್ದನ್ನ ಚಿತ್ರಧಾಂಗ ತೆಗಿದು ತೋರಿಸೋ ಯಂತ್ರ!

ಚಕೋರ:—(ಗಾಬರಿಯನ್ನು ನಟಿಸಿ) ಅಂದರ ಮನಸ್ಸಿನೊಳ ಗಿದ್ದದ್ದನ್ನೂ ತೋರಿಸತsದೇನು?

ಚೆಂಕಣ್ಣ:—(ಹಾಗೆಯೆ) ಛೆ. ಛೆ, ಮನಸ್ಸಿಗೇನು ಸಂಬಂಧಿ ಸಿಲ್ಲ ಇದು! ಆದರ.. ಆದರೂ ನೋಡಿರಿ.. ಹಾಂಗ ಮನಸ್ಸಿನಾ ಗಿಂದನ್ನೂ ತೋರಿಸತಿದ್ದರ.. ನೆಟ್ಟಗಾಗತಿತ್ತು.. ಅಂದರ ಈಗಿದ್ದ ರೋಗಗಳ ಪೈಕೀ ಅರ್ಧಕ್ಕರ್ಧ ರೋಗಬೇಗ ಬಗೀಹರಿಯು ತ್ತಿದ್ದವು! ಅಂ..ಏನಂತೀರಿ? (ಎನ್ನುತ್ತ ಪುಟ ತಿರುವುವನು.)

ಚಕೋರ:—(ಪ್ರಸಂಗವು ನೈಮೇಲೆ ಬಂದಿತೆಂದು) ಹೂಂ, ಹಃ, ಇದೇನಿದು? (ಎಂದು ಮಾತನ್ನು ಹೊರಳಿಸಲು ಯಾವುದೋ ಒಂದು ಚಿತ್ರವೆಂದು ಕೇಳುವನು.)

ಚೆಂಕಣ್ಣ:—(ಹುರುಪಿನಿಂದ) ಹಂ, ಇದs ಇದೇ ನೋಡಿರಿ, ನಾ ಆಗಲೆ ಹೇಳಿದ್ದು! ನಿಮಗ ಚೆನ್ನಾಗಿ ಅದರ ಪತ್ತೇ ಹತ್ತಲಿಲ್ಲಾ ಅಂಥಾಗಾತು..ಹೀಂಗ ಮಾಡಿರಿ..ಅಂ. ಹಂ.. ನೀವು ನಾಳೆ ಆ ಇವರ ದವಾಖಾನೆಗೆ ಅಂದರ consulting roomಗೆ ಬರ್ರಿ. ಆ ಇಂಪಾ..ಯಾರವಾ, ಹಂ. Dr. Puranik ಅವನಲ್ಲಿಗೆ ಬರ್ರಿ. ಅಂದರ ನಿಮಗ ನಾನು x'ray ಯಂತ್ರ, ಅದರ workingಊ ಎಲ್ಲಾ ಹೇಳಿ ತಿಳಿಸತೀನಿ. ನೋಡೀರಿಲ್ಲೊ ನೀವು ಆ ಜಾಗಾ? ಅಂ?

ಚಕೋರ:—(ಅವನನ್ನು ತಪ್ಪಿಸುವ ಯತ್ನದಲ್ಲಿ) ಓಹೋ, ನೋಡೀನಲ್ಲಾ. ಆ Municipality ಹತ್ತರಿಂದು ಹೌದಲ್ಲೋ. (ಎಂದು ಗುಳಿಗೆ ಉರುಳಿಸುವನು)

ಚೆಂಕಣ್ಣ—(ಗಂಭೀರವಾಗಿ) ಏನೆ, ಅದಲ್ಲಾ..ಆ Premier Bankನ ಅಟ್ಟದ ಮೇಲೆ ಆದs ಅಲ್ಲಾ!

ಚಕೋರ:—(ಬೇಕೆಂತಲೆ ಸಿಡಿಸಲು) ಅಂದರ ಆ Cinema Theatreನ ಬಲಗಡೆ—

ಚೆಂಕಣ್ಣ :—(ಮತ್ತಿಷ್ಟು ಪ್ರಯತ್ನಪೂರ್ವಕವಾಗಿ) ಏನೆ! (ಎಂದು ಪುಸ್ತಕವನ್ನು ಅಡ್ಡಹಿಡಿದು) ಇದು City Post Office ಅs! ಆದರಿಂದ ನೆಟ್ಟಗ ಹೋದರ (ಎಂದು ಎಡಗೈಯಿಂದ ತೋರಿಸುತ್ತ) Book Depot ಆದನs! ಅಲ್ಲಿಂದ ಹೀಂಗs (ಎಂದು ಬಲಗೈಯಲ್ಲಿದ್ದ ಪುಸ್ತಕದಿಂದ ತೋರಿಸುತ್ತ) ಹೋದರ, ಬಲಗಡೆ ಹೋದರ ಅಲ್ಲೇ Bank ಆದs ಅಲ್ಲಾ!

ಚಕೋರ:— ಓಹೋ, ಅಂದರ ಇತ್ಲಾಗಿಂದ ಹೋಗೂದು. (ಎಂದು ಕೈಯನ್ನು ಮುಖಿಚಿ ಹಿಡಿದು) ಇದು Cinema Theatreನ ಹಾದಿ.. ಆದರ ಮೂಲೆಗಿದ್ದ Century Hotel ನಿಂದ ಎದುರಿಗೆ ಹೋಗಬೇಕು..(ಎಂದು ಹಾವಭಾವದಿಂದ ತೋರಿಸುವನು.)

ಚೆಂಕಣ್ಣ:—(ದಣಿದು ಸಾಕಾಗಿ) ಹಂ ಆದs! ಅಲ್ಲೇ ಬರ್ರಿ ನಾಳೆ ಸಂಜೇ ಮುಂದ! (ಎನ್ನುತ್ತ ಎದುರುನೋಡುವಷ್ಟರಲ್ಲಿ ರೂಪದ ಬೆಲೆಯನ್ನೇರಿಸುವ ವೇಷ, ವ್ಯಕ್ತಿಯ ಬೆಲೆಯನ್ನಿಳಿಸುವ ಮಾತುಗಳುಳ್ಳ ಚಿನ್ನಾನು ಬರುವಳು).. ಎಲೆಲೆ, ಇದೇನು ಅಲಭ್ಯ ಲಾಭ!

ಚಿನ್ನಾ:—(ತನ್ನ ದರ್ಪದಲ್ಲಿಯೆ) ಯಾಕ? ಬರಬಾರದಾಗಿತ್ತೇನು?

ಚೆಂಕಣ್ಣ:— ಅಲ್ಲ ಚಿನ್ನಾ, ಭಾಳ ದಿನಾ ಆಗಿತ್ತು ಬರದs! ಇಂಥಾ ಅಡ್ಯೊತ್ತಿನಾಗ ಬಂದೀ ಅಂತ (ಇಷ್ಟು ನುಡಿಯುವಷ್ಟರಲ್ಲಿ ತಂದೆ ಮಕ್ಕಳಲ್ಲಿ ತಾನೇಕೆ—ಎಂದು ಚಕೋರನು ಅಲ್ಲಿಂದ ನುಸುಳುವನು.)

ಚಿನ್ನಾ:—(ಮೀನು ಬಲೆಯೊಳಗೆ ಬಿದ್ದ ಆನಂದದಲ್ಲಿ) ಹೌದು! ಮತ್ತೇನು ಮಾಡಬೇಕು; ಅಡ್ಡಾತಿಡ್ಡಾ ಪ್ರಸಂಗ ಬಂದರ ಅಡ್ಯೊತ್ತಿನಾಗ ಸಹಿತ ಬರಬೇಕಲ್ಲಾ!

ಚೆಂಕಣ್ಣ:—(ಗಾಬರಿಯಿಂದ) ಯಾಕ..? ಮತ್ತೇನಾತು.. ಯಜಮಾನರ ಕೆಲಸ ಸುಸೂತ್ರ ನಡದದೋ?....

ಚಿನ್ನಾ:— ಅದs ಕೆಲಸದ್ದs ಈ ಮಾತು! ನೀವೆಲ್ಲಾ ನಿಮ್ಮ ಸ್ನೇಹಿತರಿಗೆ ಹೇಳಿ ಅದೊಂದು ಮಾಸ್ತರಿಕೀ ಕೊಡಸಿದಿರಿ...ಮನೀ ಮಾಡಿಕೊಟ್ಟಿರಿ.. ಆದರ (ಅವನಿಗೆ ಉಪಕಾರಮಾಡುವ ದನಿಯಲ್ಲಿ) ಆದರ ಪ್ರತಿಯೊಂದು ಸಂಕಟಾ ನಿಮಗೇನು ಹೇಳಿಕೋತs ಕೂಡೋದು ಅಂತ ಇಷ್ಟ ದಿನಾ ಸುಮ್ಮನs ಸಹಿಸಿದಿವಿ!

ಚೆಂಕಣ್ಣ:—(ಏನೂ ತಿಳಿಯದ ಸಂಕಟದಲ್ಲಿ) ಆದರ ಈಗ ಮತ್ತೇನಾತು?—

ಚಿನ್ನಾ:—(ಅದೇ ಗಾಂಭೀರ್ಯದಲ್ಲಿ) ಮೊದಮೊದಲ ಸಾಲೀ office ನಾಗs ಒಂದೆರಡು ಅರ್ಜಿ, Leaving Certificate ಉ ಇಂಥಾವು, ಅಂಥಾವು ಇವರಿಗೆ ಬಿಡುವು ಇದ್ದಾಗ Type ಮಾಡಲಿಕ್ಕೆ ಹೇಳತಿದ್ದರಂತ;..ಇವರೂ ಆಗ ಸುಮ್ಮನs ಕೂತರೇ ಏನು ಮಾಡೂದು ಅಂತ—ಮತ್ತು ಹ್ಯಾಂಗಾದರೂ Type ಒಂಚೂರು ಬರತದ ಅಂತ ಅದನ್ನ ಮಾಡತಿದ್ದರಂತ; .. ಆದರ ಮೊನ್ನೆ Head Master ರೇನೋ 'ಏನೆ, ನಿಮಗ Typing ಚೆಲೋ ಬರತದರಿ, ನೀವು ಮನೀಗೆ ಈ Type Writer ಒಯ್ಯಿರಿ' ಅಂತ ಹೇಳಿಧಾಂಗ ಮಾಡಿ, ಈಗ ದಿನಾ ಗುಡ್ಡ ಕೆಲಸಾ ಕೊಡತಾನ ಮನ್ಯಾಗ ಮಾಡಿಕೊಂಡು ಬರಲಿಕ್ಕೆ! ಸ್ವಲ್ಪ ಒಂಚೂರು ಮಾತಾಡಿಕೋತs ಕೂತೀತೂ ಅಂದ್ರ.. ಆದರ ಕಿಟಿಕಿಟಿ..!

ಚೆಂಕಣ್ಣ:—(ಸಹಜವಾಗಿ) ಅದೇನು ದೊಡ್ಡ ಮಾತು.. Carrom ಆಡೂದರ ಬದ್ಲೀ ಆಗೊಂಚೂರು, ಈಗೊಂಚೂರು ಮಾಡಿದರಾತು ಕೆಲಸಾ!

ಚಿನ್ನಾ:—(ಹೆಡೆ ತುಳಿಸಿಕೊಂಡ ಹಾವಿನಂತೆ) ಮಾಡೇ ಮಾಡತsದ ಬಿಡಿರಿ..ಬಿಟ್ಟರ ಗತೀನೇ ಇಲ್ಲ! ಆದರ ಆ Type ಏನು ಊಟಧಾಂಗ ಮಣೀಮ್ಯಾಲೆ ಮಾಡಲಿಕ್ಕೆ ಬರತsದs? ಅದಕ್ಕೆ Table ಬೇಕು, ಕುರ್ಚಿ ಬೇಕು ಎಲ್ಲಾ ಬೇಕು ಸಡಗರಾ..! ಕೊಡೂ ಪಗಾರರೆ....

ಚೆಂಕಣ್ಣ:—(ಕರುಣೆಯಿಂದ ತುಸು ನಕ್ಕು) ಹುಂ. ಹುಂ. Education ಮಾಡಿಸಿದೆ .. ನಾಕುಮಂದಿಗೆ ಹೇಳಿಕೊಂಡು ಒಂದು ಕೆಲಸಾ ಕೊಡಿಸಿಸಿದೆ; ಇನ್ನು ಇಷ್ಟೇ ಪಗಾರ ಕೊಡಿರಿ ಅಂತ ಹ್ಯಾಂಗ ಹೇಳ್ಲೆವ್ವಾ!

ಚಿನ್ನಾ:—(ಏರಿಸುವ ದನಿಯಲ್ಲಿ) ಅದು ಸಾಧ್ಯ ಇಲ್ಲಾಂತs ಈಗ ನಿಮ್ಮನ್ನ ಈ ಟೇಬಲ್ಲು ಬೇಡಲಿಕ್ಕೆ ಬಂದದ್ದು .. ಇಂಥಾ ಅಡ್ಯೊತ್ತಿನಾಗ! (ಎನ್ನುವಷ್ಟರಲ್ಲಿ ಕೈಯಲ್ಲಿ ಒಂದು ಸೀರೆಯ ತುಣುಕುಅರಿವೆಯನ್ನು ಹಿಡಿದುಕೊಂಡು, ತಾನು ಹೋದ ಬಾಗಿಲಿನಿಂದ ಚೆಲುವಿಯು ಬರುವಳು.)

ಚೆಲುವಿ:—(ಕಣ್ಣುಗಳನ್ನು ಅಗಲುಮಾಡಿ ನೋಡಿ) ಚೆಂಕಣ್ಣಾ ಅಡಿಗಿ ಆಗೇದ ಊಟಕ್ಕೇಳಿರಿ .. ಬಾಯಿಯವರು ಯಾವಾಗ ಬಂದರು?

ಚೆಂಕಣ್ಣ:—(ಕೆಳಗೆ ಹಾಕಿದ ಮೋರೆಯನ್ನು ಒಮ್ಮೆಲೆ ಮೇಲೆತ್ತಿ) ಈಗ ಬಂದಾಳ;..ಚೆಲುವೀ..ಚಿನ್ನಾ ಈ ಟೇಬಲ್ಲು ಬೇಡಲಿಕ್ಕೆ ಬಂದಾಳ, ಕೊಡೋಣೇನವ್ವಾ? (ಎಂದು ವಿಚಾರಮಗ್ನನಾಗುವನು.

ಚೆಲುವಿ:— ಆ ಟೇಬಲ್ಲು ನಮಗ ಬೇಕು..ನಾಳಿನ ಆದಿತ್ಯವಾರ ನಾವು ಬ್ಯಾರೇ ಮನೀ ಮಾಡುವವರಿದ್ದೀವಿ.. ಅವರ ದವಾಖಾನೆಗೆ ಬೇಕು ಅದು. (ಎನ್ನಲು ಸಿಡಿಲುಬಡಿದಂತಾಗಿ ಚೆಂಕಣ್ಣ ಆಕೆಯ ಕಡೆಗೆ ನೋಡುವರು. ಕೈಯಲ್ಲಿಯ ಪುಸ್ತಕವು ದೊಪ್ಪೆಂದು ಕೆಳಗೆ ಬೀಳುವುದು.)

ಚಿನ್ನಾ:—(ಮಾನಹೋದಂತಾಗಲು) ಮೊದಲ ನಿಮ್ಮ ಯಜಮಾನರು ಒಮ್ಮೆ ಪರೀಕ್ಷಾ ಅಂತೂ ದಾಟಲೆಲ್ಲಾ!

ಚೆಲುವಿ:— (ಗಟ್ಟಿಯಾಗಿ) ಆ ಪರಿಕ್ಷಾದ ಅಭ್ಯಾಸಕ್ಕೇ ಈ ಮೇಜು ಬೇಕು ಮೊದಲ ಅವರಿಗೆ.

ಚಿನ್ನಾ:—ನಿಮ್ಮ ಮೊದಲಿನ ಸಾಮಾನೇನು ಕಡಿಮಿದ್ದುವು?.. ಅವನ್ನಷ್ಟು ಒಯ್ಯಿರಲ್ಲಾ .. ಇದಃ ಯಾಕ ಬೇಕು ?

ಚೆಲುವಿ:— ನಿನಗೇನು ಕಡಿಮಿ ಮಾಡೇದ .. ಅಷ್ಟು ಭೇದಿಸಿ ಹೇಳಲಿಕ್ಕೆ?

ಚಿನ್ನಾ:– ಕಡಿಮಿಾ ಅಂತ ಯಾರಂತಾರ?. . ಆದರ ಇದನ್ನೊಂದು ಬೇಡಿದರ ಕೊಡಬಾರದೇನು ನನಗ ತವರಮನಿಯವರು ?

ಚೆಲುವಿ:— ನನಗೂ ತವರಮನಿಯವರೇ ಅಲ್ಲಃ!.. ನನಗ್ಯಾಕ ಕೊಡಬಾರದು ?

ಚಿನ್ನಾ:— ಇಷ್ಟುದಿನಾ ತವರಮನ್ಯಾಗೇ ಇದ್ದರೂ ಇನ್ನೂ ಬೇಡೂದೇ ಮುಗಿದಿಲ್ಲಃ ನಿನ್ನದು ?

ಚೆಲುವಿ: — ಹೌದು, ನಿನ್ಹಾಂಗ ನೆವಕ್ಕ ಬ್ಯಾರೇ ಮನೀಮಾಡಿ ದಿನಕ್ಕೊಂದು ಸಾಮಾನು ಎಲ್ಲೆ ದಾಟಿಸಲೆವ್ವಾ?

ಚಿನ್ನಾ:— ಆ ಹಾ ಹಾ, ಹೇಳೂ ಹಾಂಗಿಲ್ಲ! ನಾಲ್ಕುದಿನಾ ಬ್ಯಾರೇ ಇದ್ಹಾಂಗ ಮಾಡಿ, ಚಿಕ್ಕನ ಕಡಿಂದ ಚೆಂಕಣ್ಣಾನ ತಿಜೋರಿ ಯೊಳಗಿಂದ ರೊಕ್ಕಾನೆಗವಿಸಿ, ಬ್ಯಾಂಕಿನ್ಯಾಗ ನಿಮ್ಮ ಹೆಸರ್ಲೆ ಇಟ್ಟುಕೊಂಬೂ ಕಲಾಮಾತ್ರ ಮತ್ತೊಬ್ಬರಿಗೆ ಬರೂದಿಲ್ಲ!

ಚೆಲುವಿ:— (ಕೈಯೊಳಗಿನ ಅರಿವೆಯನ್ನು ನೋಡಿ) ಹೌದು, ಹಬ್ಬಕ್ಕಂತ ತವರಮನೀಗೆ ಬಂಧಾಂಗಮಾಡಿ, ಅತ್ತ್ಯಾನ ಕಡಿಂದ ಅಪ್ಪನ ಸೀರಿಯ ಗಂಟು, ತನ್ನ ಮನೀಗೆ ಸಾಗಿಸೂದು ಮಾತ್ರ ಸಾಧಸ್ತಃದ.

ಚಿನ್ನಾ:— (ಅದೇ ಜೋರಿನಿಂದ) ಅದಕ್ಕಃ ಕದ್ದೂ ಮುಚ್ಚೀ ಚೆಂಕಣ್ಣಾನ ಪುಸ್ತಕಾ-ಪಾಕೀಟು ಒಯ್ಯಬಾರದೂ ಅಂತ .. ಹೇಳಿ ಕೇಳಿ ಈ ಟೇಬಲ್ಲು ಒಯ್ಯ್ಯಾನು!

ಚೆಲುವಿ:— ನೋಡೋಣ ಹ್ಯಾಂಗ .. (ಎನ್ನುವಷ್ಟರಲ್ಲಿ, ಇಲ್ಲಿಯವರೆಗೆ ಕಣ್ಣು ಮುಚ್ಚಿಕೊಂಡು ಅವರ ಮಾತುಗಳನ್ನು ಕೇಳುತ್ತ ಲಿದ್ದ ಚೆಂಕಣ್ಣ ಸಂತಾಪಗೊಂಡು ಒಮ್ಮೆಲೆ–)

ಚೆಂಕಣ್ಣ — ಏ ಸುಮ್ಮನಾಗಿರಿ; ಮೂರ್ಖರನ್ನು ತಂದು! .. ಈ ಟೇಬಲ್ಲು ಯಾರಿಗೂ ಕೊಡೂದಿಲ್ಲ, ಇದು ನನಗ ಬೇಕು! ಇದು ನನ್ನ ತವರಮನೆಯಿಂದ ತಂದ ರೊಕ್ಕದಿಂದ, ನಾನು ಸಾಲೀ ಕಲಿತು, ರೊಕ್ಕ ಗಳಿಸಿ, ಕೊಂಡ ಟೇಬಲ್ಲು! ಇದು ನನಗೇ ಬೇಕು! (ತಲೆ ಕೆಳಗೆ ಹಾಕಿ) ನಾನೇ ಮೂರ್ಖ! (ಎಂದು ವಿಚಾರ ಮಾಡುತ್ತ) ಎಲ್ಲಿದ್ದಾರ ಆ ಚಿಕ್ಕ, ಚಕೋರರಾಯರು ಅವರು?.. ಅವರನ್ನು ಕರೀ ಇಲ್ಲೆ!.. ಏ ಚಿಕ್ಯಾ.. ಚಿಕ್ಯಾ ಚಿಕ್ಯಾ (ಎನ್ನುವಷ್ಟರಲ್ಲಿ ಚಿನ್ನನ ಬದಿಯಿಂದ ಚಿಕ್ಕನು ಬಂದು, ಆ ಪ್ರಕಾರವು ಹೊಸದು ಎಂಬ ಆಶ್ಚರ್ಯವನ್ನು ತೋರಿಸುತ್ತ ಅಲ್ಲಿ ನಿಲ್ಲುವನು.. ಅತ್ತ ಏನನೋ ಹುಡುಕಲು ಬಂದ ಚಕೋರನು, ಅವರೆಲ್ಲರನ್ನು ನೋಡಿ ಹೆಂಡತಿಯ ಬಳಿಯಲ್ಲಿ ನಿಲ್ಲುವನು) ಏ ಚಿಕ್ಯಾ (ಕೆಳಗೆ ನೋಡುತ್ತ) ಇಲ್ಲೀ ತನಕಾ, ತಾಯಿ ಸತ್ತಮಕ್ಕಳೂ ಅಂತ ಅಬ್ಬಾಟ ದಿಂದ ನಿಮ್ಮನ್ನ ಬೆಳಸಿದೆ, ಕಲಿಸಿದೆ, ಮದಿವೀಮಾಡಿಕೊಟ್ಟೆ, ಮನೀಮಾಡಿಕೊಟ್ಟೆ, ಇನ್ನು ನಿಮಗ ಒಂದು ಸಿಬರಕಡ್ಡೀ ಸಹಿತ ಕೊಡೂದಿಲ್ಲ!..ಏ ಚಿಕ್ಯಾ, ನೀ 'ಇನ್ನದೊಡ್ಡವನಾದಿ..ಈಗಿಂದೀಗ ಈ ಮನಿಯಿಂದ ಹೊರಗಹೋಗಿ ನಿನ್ನ ಪಾಡು ನೀ ನೋಡಿಕೊ!.. ಇತಾ ಚೆಲುವೀ,.. ನೀನೂ ಈಗ ಸಧ್ಯೆ ನಿನ್ನ ಮಕ್ಕಳೂ ಮರೀ ಕಟ್ಟಿಕೊಂಡು, ಉಟ್ಟ ಬಟ್ಟೆಯ ಮೇಲೆ ಹೊರಬೀಳು!.. ಚಿನ್ನಮ್ಮಾ ತಾವೂ ಹಾಂಗಃ ನಡೀರಿ ಹೊರಗ!.. ಒಬ್ಬರೂ ಉಳೀಬ್ಯಾಡಿರಿ ಇನ್ನ.. ಈ ಮನ್ಯಾಗ!.. ಇಲ್ಲೀ ತನಕಾ ನಾನಾದರೂ ಏನು ಮಾಡೂದೂ ಅಂತ ಅನಾಸ್ಥೆಯಿಂದ, ಇವರಿಗೆ ಬೇಡಿದ್ದನ್ನು ಕೊಟ್ಟರ, ಈಗ ಜಿಗಳಿ ಹತ್ತಿಧಾಂಗ ಹತ್ತಿ, ನನ್ನ ಅಸ್ತಿತ್ವನಃ ಉಳೀಧಾಂಗ ಮಾಡಬೇಕಂತಾರ .. ತವರಮನಿ– ತವರಮನೀ ಅನಕೋತ,ಭಂಗಾರದಂಥಾ ನನ್ನ ಮನೀ ತವರದ ಮನೀ..ತಗಡಿನ ಮನೀ ಮಾಡಿಟ್ಟಾರ! ಹುಂ, ನಡೀರಿ!.. ಇನ್ನೂ ಯಾಕ ನಿಂತೀರಿ .. ಇನ್ನ ಈ ಮನ್ಯಾಗಿನ ಪ್ರತಿಯೊಂದು ವಸ್ತು ನನಗ ಬೇಕು..! ಅದೆಲ್ಲಾ ನನ್ನ ಸಾಮಾನದ!..ಅದು ನನ್ನ ಈ ಚೆನ್ನಕೇಶವನ ಸುಖದ ಜೀವನಕ್ಕೆ ಬೇಕು!..ನಡೀರಿ— (ಎಂದು ಆ ಮೇಜಿನ ಮೇಲಿನ ಎಲ್ಲ ಸಾಮಾನುಗಳನ್ನೂ ಸವರಿ ಕೆಡಹಿ, ಅದರ ಮೇಲೆ ಚೌಕಾಸನವನ್ನು ಹಾಕಿ ಕುಳಿತುಕೊಳ್ಳುವನು. ಅದನ್ನೆಲ್ಲ ಗಾಬರಿ ಯಿಂದ ಕೇಳುತ್ತ ನೋಡುತ್ತಲಿದ್ದ ಚಿಕ್ಕ, ಚಿನ್ನಾ, ಚೆಲುವಿ, ಚಕೋರ ಇವರ ತಲೆಯಮೇಲೆ ಸಿಡಿಲು ಬಿದ್ದಿತೇನೋ ಎನ್ನುವಂತೆ—)

— ತೆರೆ ಬೀಳುವುದು.

ಆರೋಗ್ಯಮಂದಿರ

ಆಯುರ್ವೇದ ವಿಷಯಕ ಸಚಿತ್ರ ಮಾಸಪತ್ರಿಕೆ

ಪನವೇ[illegible]ಕಪಾಪೇಶ್ವರ ಕಂಪನಿಯ ಕನ್ನಡ ಮುಖ ಪತ್ರಿಕೆಯಾಗಿ ಇದು ಹೊರಡುತ್ತಲಿದೆ. ತಜ್ಞರಾದ ಲೇಖಕರಿಂದ ಬರೆಯಲಾದ ಆಯುರ್ವೇದ ವಿಷಯಕ ಲೇಖನಗಳೂ, ಆರೋಗ್ಯವಿಷಯಕ ಲೇಖನಗಳೂ, ಬೇರೆ ಬೇರೆ ವೈದ್ಯರ ಅನುಭವಪೂರ್ಣವಾದ ನಿದಾನ-ಚಿಕಿತ್ಸಾ ವಿಚಾರಗಳೂ ಬರುತ್ತವೆ. ಪ್ರತಿಯೊಬ್ಬ ಕುಟುಂಬಿಯೂ ಇದನ್ನು ಓದುತ್ತಲಿದ್ದರೆ ಮನೆಯಲ್ಲಿ ಸ್ವಾಸ್ಥ್ಯವು ನೆಲೆಯಾಗಿ ನಿಲ್ಲದೆ ಇರದು.

ವಾರ್ಷಿಕ ಚಂದಾ ೧—೮—೦

ಬಿಡಿ ಸಂಚಿಕೆಗೆ ೦—೨—೦

ಆರೋಗ್ಯಮಂದಿರ ಕಾರ್ಯಾಲಯ,

ಯುನೈಟೆಡ್ ಎಜೆನ್ಸೀಜ್, ಹುಬ್ಬಳ್ಳಿ.

‘ಧರ್ಮ’ದ ಎದುರು ಹಿಡಿದ ದೀಪ!

ಶ್ರೀ. ದ. ರಾ. ಬೇಂದ್ರೆ ಎಂ. ಎ. ಅವರಿಂದ

ಶ್ರೀ. ದ. ರಾ. ಬೇಂದ್ರೆ

★

ಈ ಇಪ್ಪತ್ತನೆಯ ಶತಮಾನದ ಧರ್ಮಸಾಮ್ರಾಜ್ಯದಲ್ಲಿ ಜಾತಿಯ ರೋಗವಿಲ್ಲದ ಚುನಾವಣೆಗಳಿಲ್ಲ; ಮತದ ಒಳಗಂಟಿಲ್ಲದ ರಾಜಕೀಯ ಪಕ್ಷಗಳಿಲ್ಲ; ಕುಲದ ಕಲಂಕ ಮೆತ್ತಿಕೊಂಡಿರದ ರಾಷ್ಟ್ರೀಯ ಧೋರಣೆಗಳಿಲ್ಲ. ಮನುಷ್ಯನ ಮರ್ಕಟ ಬುದ್ಧಿಯ ಕಿಡಿಗೇಡಿತನಗಳೆಲ್ಲ ಇಂದು ಒಂದೊಂದೂ ಧರ್ಮದ ಮಹಾಸಿದ್ಧಾಂತಗಳಾಗಿವೆ!

‘अथातो धर्मजिज्ञासा’

‘ಧರ್ಮ’ ಎಂದೊಡನೆ ಕೆಲವರಿಗೆ ಭಯದಿಂದ ಮೈಗೆ ಮುಳ್ಳುಬರುವವು. ಧರ್ಮದ ಹೆಸರಿನಿಂದ ಭೂದೇವಿಗೆ ರಕ್ತದ ಅಭಿಷೇಕವಾಗಿದೆ. ಧಾರ್ಮಿಕರಿಗೆ ಕ್ರೂರತನದಲ್ಲಿಯೂ ನಿರ್ದಯತೆಯಲ್ಲಿಯೂ ಇರುವಷ್ಟು ಧೈರ್ಯ-ನಿಷ್ಠೆಗಳು ಕಳ್ಳಕಾಕರಿಗೂ ಇರುವುದಿಲ್ಲ. ಧರ್ಮವು ಯುದ್ಧದ ತಾಯಿ; ಜಗಳದ ಬೀಜ. ದೇವಾಸುರ ಸಂಗ್ರಾಮಗಳಾಗಲಿ, ಇರೋಪದ ಕ್ರೂಸೇಡ್ ಯುದ್ಧಗಳಾಗಲಿ, ಹಿಂದೂ-ಮುಸಲ್ಮಾನ್ ಜಗಳಗಳಾಗಲಿ ಧರ್ಮದ ಬಾಲಹಿಡಿದು ಬಡಿದಾಡುವವು. ಆದರೆ ಧರ್ಮವು ಕೇವಲ ಭಯಕ್ಕೆ ಕಾರಣವಾಗಿದ್ದರೆ ಅದು ಇದುವರೆಗೂ ಬದುಕಿರುತ್ತಿರಲಿಲ್ಲ. ಆ ಭಯದ ಜೊತೆಗೆ ಭಕ್ತಿಯಿದೆ; ಅಂತೆಯೆ ‘ಧರ್ಮ’ವೆಂದರೆ ಕೆಲವರಿಗೆ ಹರ್ಷರೋಮಾಂಚಗಳೇಳುವವು; ಆನಂದಬಾಷ್ಪಗಳುದುರುವವು; ಅದರಿಂದ ತಲೆಬಾಗುವುದು. ಎಷ್ಟು ಧರ್ಮಸಂಸ್ಥಾಪಕರು, ಎಷ್ಟು ಸಾಧು-ಸತ್ಪುರುಷರು, ಏನು ತ್ಯಾಗ, ಎಂಥ ಅಂತಃಕರಣ? ಧರ್ಮದ ಇತಿಹಾಸವು ಅದ್ಭುತ ರಮ್ಯಕಥೆಗಳ ಆಗರವಾಗಿದೆ. ಇಂದಿನ ಜಗತ್ತಿನಲ್ಲಿ ಉಳಿದಿರುವ ಸದ್ಬುದ್ಧಿಗೆ ಧರ್ಮದ ತಾಯ್ಬೇರಿನ ಪೋಷಣೆಯಿದೆ. ಆದರೆ ಅದೇ ಧರ್ಮದ ಇನ್ನೊಂದು ರೂಪವು ನಗೆಗೆ ಈಡಾಗಿದೆ. ಧರ್ಮದ ಸೋಗಿನಲ್ಲಿ ಎಷ್ಟು ಜಂಭ! ಎಂಥ ಮೋಸ! ಏನು ಹುಚ್ಚುಚ್ಚು!—ಹೀಗೆ ಧರ್ಮದ ತ್ರಿಮೂರ್ತಿಸ್ವರೂಪವು ಅತಿ ವಿಚಿತ್ರವಾಗಿದೆ. ರುದ್ರಭೀತಿ! ಶಾಂತಪ್ರೀತಿ! ಬೀಭತ್ಸಹಾಸ್ಯ! ಇದೆಲ್ಲವೂ ಧರ್ಮವನ್ನೇ ಕುರಿತು. ಇಂತಹ ಈ ಧರ್ಮವೆಂದರಾದರೂ ಏನು?— ಎಂದು ಕೇಳುವ ಅಗತ್ಯವೇ ನಮಗೆ ತೋರುವುದಿಲ್ಲ. ಎಲ್ಲರಿಗೂ ಧರ್ಮ ತಿಳಿದಿದೆ. ಧರ್ಮಬಿಟ್ಟು ಏನಿದೆ! ಧರ್ಮವೆಂದರೇನು ಎಂದು ಚರ್ಚೆಮಾಡುವವನೆ ಅಧಾರ್ಮಿಕ ನಿರಪೇಕೆಂದು ತಿಳಿಯುವಷ್ಟು ಸೂಕ್ಷ್ಮವಾಗಿದೆ ಕೆಲವರ ಧಾರ್ಮಿಕ ಬುದ್ಧಿ.

ಆದರೆ ಇಂದು ‘ಧರ್ಮವೆಂದರೇನು!’ ಎಂದು ಕೇಳದೆ ಗತಿಯಿಲ್ಲ. ಧರ್ಮವು ಎಲ್ಲಕಡೆಗೂ ಅಡ್ಡಗಾಲು ಹಾಕುತ್ತಿದೆ. ಜಾತಿ, ಮತ, ಕುಲ (Caste, Creed, Colour) ಗಳ ಸಂಕುಚಿತಬುದ್ಧಿಯನ್ನು ಮೀರಿರುವದೆಂದು ಬಿರುದುತೊಟ್ಟಿರುವ ಈ ಇಪ್ಪತ್ತನೆಯ ಶತಮಾನದ ಧರ್ಮಸಾಮ್ರಾಜ್ಯದಲ್ಲಿ ಜಾತಿಯ ರೋಗವಿಲ್ಲದ ಚುನಾವಣೆಗಳಿಲ್ಲ; ಮತದ ಒಳಗಂಟಿಲ್ಲದ ರಾಜಕೀಯ ಪಕ್ಷಗಳಿಲ್ಲ; ಕುಲದ ಕಲಂಕ ಮೆತ್ತಿಕೊಂಡಿರದ ರಾಷ್ಟ್ರೀಯ ಧೋರಣೆಗಳಿಲ್ಲ. ಜನಿವಾರ ಶಿವದಾರಗಳನ್ನು ಹಾಕಿರಲಿ— ತೊರೆದಿರಲಿ, ಚಂಡಿಕೆ-ಗಡ್ಡಗಳನ್ನು ಬೆಳಸಿರಲಿ— ಬೋಳಿಸಿರಲಿ; ಗುಡಿ-ಚರ್ಚುಗಳನ್ನು ಕಂಡಿರಲಿ-ಬಿಟ್ಟಿರಲಿ, ನಮ್ಮ ನಮ್ಮ ಜಾತಿಧರ್ಮವು ನಮ್ಮ ಕೊರಳಿಗೆ ಜೋತುಬಿದ್ದುಕೊಂಡೋ, ತಲೆಯನ್ನೇರಿಯೋ, ಮೋರೆಯನ್ನು ಮುಸುಕಿಯೋ, ಎದೆಯಲ್ಲಡಗಿಯೋ ನಮ್ಮೊಡನೆ ಬರುವುದು. ನಮ್ಮ ನೆರಳೂ ನಮ್ಮನ್ನು ಬಿಟ್ಟು ಕೆಲಹೊತ್ತಿರಬಹುದು; ಜಾತಿಬಿಡುವುದಿಲ್ಲ. ನಾವು ಜಾತಿಯನ್ನು ಬಿಡಬಹುದು; ಜಾತಿ ನಮ್ಮನ್ನು ಬಿಡುವುದಿಲ್ಲ. ಪರಮತಸಹಿಷ್ಣುತೆಯು ನಮ್ಮಲ್ಲಿ ಬೆಳೆದಿದೆ ಎಂದು ಕೆಲವರಿಗೆ ಭ್ರಮೆಯಿದೆ. ಅಲ್ಲಿ, ಮತವೆಂದರೆ ಸತ್ತ ಮತವೆಂದರ್ಥ. ಆಚರಣೆಗೆ ಬರುವ ಮತಗಳ ವಿಷಯದಲ್ಲಿ ಜನರು ಅಸಹಿಷ್ಣುಗಳಾಗಿದ್ದಾರೆ. ಇದಲ್ಲದೆ ಜೀವಂತಮತವು ಇಂದು ವೇಷ ಬದಲಾಯಿಸಿದೆ. ಖಾದೀಮತ-ಗಿರಣೀಮತ, ಕಾಂಗ್ರೆಸ್ ಮತ-ಸೋಶಾಲಿಸ್ಟಮತ, ಅಹಿಂಸಾಮತ-ಕ್ರಾಂತಿಮತ, ಗಾಂಧೀಮತ—ಟಿಳಕಮತ, ಪ್ರಾಂತೀಯಮತ-ರಾಷ್ಟ್ರೀಯಮತ, ದೇಶಮತ-ವಿಶ್ವಮತ ಇವುಗಳಲ್ಲಿ ಕಂಡುಬರುವ ಹೊಟ್ಟೆಯುರುಕತನವು ಇಂದಿನ ವ್ಯವಹಾರದಲ್ಲಿ ಹೊಸದಲ್ಲ. ಎಣ್ಣೆಯಿಲ್ಲದೆ ಉರಿಯುವುದೆಂದರೇನು?—ಎಂಬುದಕ್ಕೆ ಮತಗಳ ಕೊಳ್ಳಿದೆವ್ವಗಳು ತಕ್ಕ ಉದಾಹರಣೆಗಳಾಗಿವೆ.

ಕುಲಗಳ ಬಣ್ಣದ ಭೂತವಂತೂ ಸರ್ಕಸ್ಸಿನ ಹಣ್ಣು, ಗುಂಡು ಕಟ್ಟಿಗೆಯನ್ನು ಕಾಲ್ಕೆಳಗೆ ಉರುಳಿಸಿ ಹೊರಳಿಸುವಂತೆ ಇಡಿಯ ಭೂಮಿಯನ್ನೇ ಉರುಳಾಡಿಸುತ್ತಿದೆ. ಆರ್ಯ-ದ್ರಾವಿಡಭೂತವು ಬ್ರಾಹ್ಮಣ ಬ್ರಾಹ್ಮಣೇತರ ಹೆಸರಿನಿಂದ ತನ್ನ ಕಾಟವನ್ನು ಕೊಡುತ್ತಿದೆ. ಅಮೇರಿಕದ ಬಿಳಿಯ ಜನರು ಅಲ್ಲಿಯ ಮೂಲನಿವಾಸಿಗಳಾದ ಕೆಂಪು ಇಂಡಿಯನರನ್ನೂ, ತಾವೇ ಗುಲಾಮರನ್ನಾಗಿ ತಂದ ಕಪ್ಪು ನಿಗ್ರೋ ಜನರನ್ನೂ ಯಾವ ಅಮಾನುಷ ಕ್ರೌರ್ಯದಿಂದ ನಡೆಯಿಸಿಕೊಂಡಿರುವರು, ನಡೆಯಿಸಿಕೊಳ್ಳುತ್ತಿರುವರು—ಎಂಬುದು ಇತಿಹಾಸದ ವಿಷಯವಾಗಿದೆ. ಹಿಂದುಸ್ತಾನದ ಜನರು ಜಗತ್ತಿನ ಅಸ್ಪೃಶ್ಯರು; ಯಹುದೀ ಜನರು ಯುರೋಪಿನ ಹುಚ್ಚು ನಾಯಿ ; ಅರಿಸಿಣ ಬಣ್ಣದ ಚೀನಿ-ಜಪಾನಿಗಳು ಪಾಶ್ಚಿಮಾತ್ಯರಿಗೆ ಪಿಡುಗು, 'ಅಯ್ಯೋ! ಬಿಳಿಯ ಬಣ್ಣಕ್ಕೆ ಸಾವು ಬಂತು' ಎಂದು ಒಂದು ಕೂಗು. 'ಕಪ್ಪು ಬಣ್ಣವನ್ನೆ ಕೊಂದುಹಾಕಿಬಿಡಿರಿ' ಎಂದೂ ಒಂದು ಬೊಬ್ಬೆ. ಇಷ್ಟು ಸಾಲದೆ ಈ ವರ್ಣದ್ವೇಷಕ್ಕೆ ರಕ್ತವಿಜ್ಞಾನಿಗಳ ಆಧಾರ ಬೇರೆ. ಮನುಷ್ಯಜಾತಿಯಲ್ಲಿ ಒಂದರಲ್ಲಿ ಒಂದು ಬೆರೆಯಲಾರದ, ಬೆರೆಯಬಾರದ ನಾಲ್ಕು ರಕ್ತಗಳಿವೆಯಂತೆ. ಸನಾತನಿಗಳಿಗೆ ಭೇದಕ್ಕೆ ಆಧಾರ, ಪುಂಡ ಬಿಳಿಯ ಜನರಿಗೆ ಬಡಿದಾಟಕ್ಕೆ ನೆಪ! ವರ್ಣಭ್ರಾಂತಿ ಇಲ್ಲಿಯೆ ನಿಂತಿಲ್ಲ; ನಿಗ್ರೋಜನರು ಮನುಷ್ಯಕುಲಕ್ಕೇ ಸೇರಿದವರಲ್ಲ; ಕಪ್ಪು-ಕಂದೀಬಣ್ಣದವರು ಆಳಿಸಿಕೊಳ್ಳಲಿಕ್ಕೇ ಹುಟ್ಟಿದ್ದಾರೆ; ಬಿಳಿಯ ಬಣ್ಣದವರೇ ಅರಸರಾಗಬಲ್ಲರು; ತಾಮ್ರಮುಖಿಗಳು ರಾಕ್ಷಸಕುಲದವರು; ಇತ್ಯಾದಿ ಇತ್ಯಾದಿಯಾಗಿ ಮಹಾ ಮಹಾ ಸಿದ್ಧಾಂತಗಳನ್ನು ಮನುಷ್ಯನ ಮರ್ಕಟಬುದ್ಧಿಯು ಧರ್ಮವೆಂದು ಸಾರಿದೆ. ಅದಕ್ಕೆ ಸರಿಯಾಗಿ ಮರ್ಕಟ-ಚೇಷ್ಟೆಗಳೂ ನಡೆದಿವೆ. ಈ ಮಂಗನಿಗೆ ಧರ್ಮದಾವೇಶವು ಮದ್ಯದ ಮದವಿದ್ದಂತೆ!

ಹೀಗಿರುವಾಗ ಧರ್ಮದ ಕಲ್ಪನೆಯಲ್ಲಿ ಏನೋ ತಪ್ಪಾಗಿದೆ ಎಂದರೆ ತಪ್ಪೇ? 'ಹೌದು, ತಪ್ಪಾಗಿದೆ' ಎಂದು ಬಹಳ ಜನರು ಒಪ್ಪಿಕೊಳ್ಳುತ್ತಾರೆ. ಆದರೆ ಪ್ರತಿಯೊಬ್ಬರೂ ಇನ್ನೊಬ್ಬರ ಧರ್ಮವು ಅಧರ್ಮವೆಂದು ಸಾರುವರು. ತಮ್ಮ ಧರ್ಮದಲ್ಲಿಯೂ ತಾವು ಮಾಡಿದ್ದು ಧರ್ಮ, ಬೇರೊಬ್ಬರು ಮಾಡಿದ್ದು ಅಧರ್ಮವೆಂದು ತಿಳಿಯುವರು. ಕಲಿಯುಗದ ಕಲ್ಪನೆಯಿಂದಂತೂ ಅಧರ್ಮಕ್ಕೇ ಧರ್ಮಪಟ್ಟ ಬಂದಿದೆ.

ಧರ್ಮದ ಮುಂದೆ ಹಿಡಿದ ದೀಪದ ಬೆಳಕಿನಲ್ಲಿ, ನಾನು ಕಂಡುಕೊಂಡ ಒಂದು ಸ್ವರೂಪವಿಭಾಗದ ಶಬ್ದಚಿತ್ರವಿದು!

ವ್ಹ್ಯಾಲ್ಯುಯೇಶನಿನ ವರ್ಷ — ೧೯೪೯ — ವ್ಹ್ಯಾಲ್ಯುಯೇಶನಿನ ವರ್ಷ

ನಮ್ಮ ಎಲ್ಲ ಪಾಲುದಾರರಿಗೂ ಹಿತಚಿಂತಕರಿಗೂ ದೀಪಾವಳಿಯು ಆನಂದವನ್ನೊದಗಿಸಲಿ!
ಅಲ್ಲದೆ ಹೊಸವರ್ಷ ಆರೋಗ್ಯ ಹಾಗೂ ಹೆಚ್ಚಳಗಳಲ್ಲಿ ಸಾಗಲಿ!

ದಿ ಇಂಡಿಯನ್ ಪ್ರೋಗ್ರೆಸಿವ್ಹ್

ಇನ್ಶುಅರ್‌ನ್ಸ್ ಕಂಪನಿ ಲಿಮಿಟೆಡ್ ಪುಣೆ ೨.

ವಜನದಾರ ಡೈರೆಕ್ಟರರು — ಮಿತವಾದ ವಿಮೆಯ ಪ್ರಮಾಣ — ಕಡಿಮೆವೆಚ್ಚ — ಆಪಳಿತ-ಕ್ಲೇಮುಗಳನ್ನು ಕೂಡಲೆ ಪೂರಯಿಸುವುದು — ಇವೆಲ್ಲವುಗಳ ಮೂಲಕ, ಅಲ್ಪಾವಧಿಯಲ್ಲಿಯೇ ಲೋಕಪ್ರಿಯವಾದ ಈ ಕಂಪನಿಯಲ್ಲಿ ವಿಮೆಯನ್ನು ಮಾಡಿರಿ! ಈ ಕಂಪನಿಯು ೧೯೩೯ನೆಯ ಹೊಸ ವಿಮಾ ಕಾಯಿದೆಯಂತೆ ರಜಿಸ್ಟರಾಗಿದ್ದು, ಈ ವರೆಗಿನ ಎಲ್ಲ ಸಿಕ್ಯುರಿಟಿ ಡಿಪಾಝಿಟುಗಳನ್ನೂ ತುಂಬಲಾಗಿದೆ.

ಅಲ್ಲಲ್ಲಿ ಸಾಕಷ್ಟು ಸಂಬಳದ ಮೇಲೂ ಸವಲತ್ತುಗಳ ಮೇಲೂ ಆರ್ಗನೈಝರುಗಳನ್ನು ನಿಯಮಿಸಬೇಕಾಗಿದೆ.

೧. ಶ್ರೀ. ಬಿ. ಜಿ. ಕುಲಕರ್ಣಿ
ಬಿ. ಎ., ಎಲ್‌ಎಲ್., ಬಿ.
ದೇಶಪಾಂಡೆಗಲ್ಲಿ, ಬೆಳಗಾಂವಿ

೨. ಎಂ. ಎ. ಜೊಥಾಡೀ
C/o ಶ್ರೀ. ಗೋಳೀಕೇರಿ
ಮಿಶನ್ ಕಂಪೌಂಡ್, ಧಾರವಾಡ

ಅ. ನಾ. ಗಾಡಗೀಳ್
ವಾ. ನಾ. ಕಲಂತ್ರೇ
} ಸೆಕ್ರೆಟರಿಗಳು

೬-೭೭೭೭

ಪ್ರೀತಿಯ ಬಳ್ಳಿ

(ಒಂದು ಸಣ್ಣ ಕತೆ)

ಕಮಲೆ ಮನದಲ್ಲಿ ಹಗಲಿರುಳು ಕುದಿಯುತ್ತ ತಂದೆಯ ಮನೆಯಲ್ಲಿ ಬಾಳಿನ ಹೋಳಿಯನ್ನು ಮಾಡುತ್ತ ಇರಬೇಕಾಗಿತ್ತೋ, ಅನಂತನ ಜೊತೆಗೆ ಹೊರಟುಹೋಗಿ ಬಾಳಿನ ಕಗ್ಗತ್ತಲೆಯನ್ನು ದೀವಳಿಗೆಯ ಹಬ್ಬವನ್ನಾಗಿಸಿದುದು ಸರಿಯಾಯಿತೋ? ಹೋಳಿಗೆ ತ್ಯಾಗವೆಂಬ ದೊಡ್ಡ ಹೆಸರಿದೆ, ದೀವಳಿಗೆಗೆ ಭೋಗವೆಂಬ ಸಾಮಾನ್ಯ ತರದ ಹೆಸರಿದೆ- ಸಂಪ್ರದಾಯ ಪ್ರಪಂಚದಲ್ಲಿ !

★

"ಒಂದು ವಿಶೇಷ ನಡೆದಿದೆ ನಿಂಗೆ ಗೊತ್ತಿಲ್ವೇನೋ ? " ಸತೀಶ ನನ್ನ ಹಾಸಿಗೆಯ ಮೇಲೆ ಕುಳಿತುಕೊಂಡು ಕೇಳಿದ.

" ಏನಪ್ಪಾ ಅದು ? " ದಿಂಬಿನಿಂದ ತಲೆಯೆತ್ತಲು ಪ್ರಯತ್ನಿಸುತ್ತಾ ಪ್ರಶ್ನಿಸಿದೆ ನಾನು.

" ಏಳಬೇಡ!" ಎನುತ್ತಾ ಗೋಡೆಯ ಮೇಲೆ ತೂಗು ಹಾಕಿರುವ ಟೆಂಪರೇಚರ್ ಚಾರ್ಟನ್ನು ತೆಗೆದ ಸತೀಶ.

" ಏನಪ್ಪಾ ವಿಶೇಷ ? " ನಾನು ಮತ್ತೆ ಕೇಳಿದೆ.

" ಹೆಡ್ ವಾರ್ಡರರ ಹೂದೋಟದಲ್ಲಿ ಆಕಳು ಪ್ರವೇಶಿಸಿದುದರಿಂದ ಕಾನ್ವಿಕ್ಟ್ (Cinvict) ಅನಂತನಿಗೆ ಪೂರಾ ಏಟು. " ಸತೀಶ ತನ್ನ ಮಾತುಗಳನ್ನು ಮುಂದುವರಿಸಿದ: " ಹೆಡ್ ವಾರ್ಡರರ ಈ ಕೆಲಸವನ್ನು ಪ್ರತಿಷೇಧಿಸಲು ಕ್ರಿಮಿನಲ್ ಕೈದಿಗಳು ಸ್ಟ್ರೈಕ್ (Strike) ಮಾಡಿದ್ದಾರೆ.!"

" ಏಕೆ? ಏನಾಯಿತು ? "

" ನೋಡು, ನಮ್ಮ ಸಂಗಡ ಪ್ರೆಸ್ಸಿನಲ್ಲಿ ಕೆಲಸಮಾಡುತ್ತಿದ್ದ ಅನಂತನ ನೆನಪು ನಿನಗಿರಬಹುದು. ಅವನ ಬಿಡುಗಡೆಗೆ ಇನ್ನು ಮೂರು ನಾಲ್ಕು ತಿಂಗಳುಗಳಿರಬಹುದಿಷ್ಟೇ! ಒಂದು ತಿಂಗಳ ಹಿಂದೆ ಹೆಡ್ ವಾರ್ಡರರ ಮನೆಯ ಕೆಲಸಕ್ಕೆ ಹಾಕಿದರು ಅವನನ್ನು. ಈ ವರೆಗೆ ಅವ ಅಲ್ಲಿ ಕೆಲಸ ಮಾಡುತ್ತಿದ್ದ. ನಿನ್ನೆಯ ದಿನ ಈ ಅನಾಹುತವು ಜರುಗಿತು. ಬೇಲಿಯನ್ನು ಮುರಿದು ಒಂದು ಆಕಳು ತೋಟದೊಳಗೆ ಪ್ರವೇಶಿಸಿತಂತೆ; ಆ ತಪ್ಪಿಗೆ ಅವನಿಗೆ ಪೂರಾ ಏಟು; ಅವನ ಒಂದು ಕೈಮುರಿದು ಹೋಗಿದೆಯಂತೆ. ಹೆಡ್ ವಾರ್ಡರರು ಇಷ್ಟು ಭಯಂಕರವಾಗಿ ಅವನನ್ನು ಹೊಡೆದುದರಿಂದ, ಕ್ರಿಮಿನಲ್ ಕೈದಿಗಳೆಲ್ಲಾ ಹಂಗರ್ ಸ್ಟ್ರೈಕ್ (Hunger strike) ಮಾಡಿದ್ದಾರೆ. ಈ ಅಕ್ರಮಕೆಲಸದ ಬಗ್ಗೆ ಜೇಲ್ ಅಧಿಕಾರಿಗಳು ಮೌನವನ್ನು ಅವಲಂಬಿಸುವುದಾದರೆ, ಕ್ರಿಮಿನಲ್ ಕೈದಿಗಳಿಗೆ ಸಹಾನುಭೂತಿಯನ್ನು ತೋರಿಸುವುದಕ್ಕಾಗಿ, ನಾವು Politicals ಕೂಡ ನಾಳೆಯಿಂದ Strike ಮಾಡಬೇಕೆಂದಿರುವೆವು! "

ನನ್ನ ಮೈಮೇಲೆ ಬಂದು ಕುಳಿತ ನೊಣಗಳನ್ನು ಬೀಸಣಿಗೆಯಿಂದ ಓಡಿಸುತ್ತಾ ಹೇಳಿದೆ: " ಅವರೆ ನೋಡು ಸತೀಶ, ನನ್ನ ಅನುಭವಗಳಿಂದ ಹೆಡ್‌ವಾರ್ಡರರು ತುಂಬಾ ವಿವೇಕಿಗಳೆಂದು ನಾನು ತಿಳಿದಿರುವೆ. ಯಾವ ಕೆಲಸದಲ್ಲಿಯೂ ದುಡುಕುವವರಲ್ಲ ಅವರು. ಚೆನ್ನಾಗಿ ಯೋಚಿಸಿದ ಮೇಲೆಯೇ ಯಾವುದೊಂದು ಕೆಲಸದಲ್ಲಿ ಕೈಹಾಕುವುದು ಅವರ ಸ್ವಭಾವ. ಇಂತಹ ಒಬ್ಬ ಮನುಷ್ಯ, ತೋಟದೊಳಗೆ ಒಂದು ಆಕಳು ಪ್ರವೇಶಿಸಿದುದಕ್ಕೆ ಅನಂತನನ್ನು ಇಷ್ಟು ಕ್ರೂರವಾಗಿ ಹಿಂಸಿಸಿದರೆಂಬುದು ನನಗೆ ಸಂಭವನೀಯವಾಗಿ ತೋರುವುದಿಲ್ಲ!"

" ನೀನು ನಂಬಿದರೆ ನಂಬು, ಇಲ್ಲದಿದ್ದರೆ ಬಿಡು; ನಾನು ಹೇಳುತ್ತಿರುವುದು ಮಾತ್ರ ನಿಜ! ಅನ್ನಪೂರ್ಣಯ್ಯನವರು ಹೋಗಿ ಹೆಡ್ ವಾರ್ಡರರನ್ನು ಕಂಡರು; ಅನ್ನಪೂರ್ಣಯ್ಯನವರು ಅವರ ಸಂಗಡ ಅನಂತನ ಸಂಗತಿಯನ್ನು ಕುರಿತು ಒಂದೆರಡು ಮಾತುಗಳನ್ನಾಡಿದರಂತೆ. ಹೆಡ್‌ವಾರ್ಡರರು ಹೂದೋಟದಲ್ಲಿ ಆಕಳು ಪ್ರವೇಶಿಸಿದ ತಪ್ಪಿಗೆ ಅನಂತನನ್ನು ಹೊಡೆದುದು ಅಹುದೆಂದು ಒಪ್ಪಿಕೊಂಡುದಲ್ಲದೆ, ಆ ಸಂದರ್ಭದಲ್ಲಿ ತಮ್ಮ ಚಿತ್ತವು ಹತೋಟಿಯನ್ನು ಮೀರಿದ ಬಗ್ಗೆ ಪರಿತಾಪವನ್ನೂ ಸೂಚಿಸಿದರಂತೆ. '

" ಇರಬಹುದು, ಆದರೆ ನನ್ನ ಬುದ್ಧಿಯು, ಇದು ಆ ಸಂಭವಕ್ಕೆ ಸರಿಯಾದ ಕಾರಣವೆಂಬುದನ್ನು ಒಪ್ಪುವಂತಿಲ್ಲ. ನಿಜ ಸಂಗತಿಯನ್ನು ಮರೆಮಾಚುವುದಕ್ಕಾಗಿ, ಹೆಡ್‌ವಾರ್ಡರರು ನೀವು ನುಡಿದ ಕಾರಣವನ್ನು ಕೊಟ್ಟಿರಬೇಕು! "

" ಮಧ್ಯಾಹ್ನದ ಹೊತ್ತಿನಲ್ಲಿ ಸೂರ್ಯನು ನಡುನೆತ್ತಿಯಮೇಲೆ ಪ್ರಕಾಶಿಸುವನೆಂದು ಹೇಳಿದರೂ ಅದನ್ನು ನೀನು ನಂಬಲಾರೆ! ಆದರೆ ಒಂದು ಮಾತು ಮಾತ್ರ ನಿಜ; ಈ ಸಮಸ್ಯೆಯು ಈ ಸಂಜೆಯೊಳಗೆ ಬಗೆ ಹರಿಯದಿದ್ದರೆ, ನಾಳೆ ನಾವೂ Strike ಮಾಡುವೆವು. ಕ್ರಿಮಿನಲ್ಸ್ ಪರವಾಗಿ ಸಂಧಾನ ನಡೆಯಿಸಲು ಅನ್ನಪೂರ್ಣಯ್ಯನವರು ಸುಪರಿಂಟೆಂಡೆಂಟರನ್ನು ಕಾಣಹೋಗಿದ್ದಾರೆ. ಅವರ ಪ್ರಯತ್ನವು ವಿಫಲವಾದರೆ ನಾಳೆ ನಾವೂ ಸ್ಟ್ರೈಕ್ (Strike) ಮಾಡುವೆವು."

ಶ್ರೀ. "ಭಾರತೀಸುತ" ನೈನಾಡು

ನಾನೇನೂ ಅವನಿಗೆ ಜವಾಬು ಹೇಳಲಿಲ್ಲ. ತನ್ನ ಬ್ಲಾಕ್ಕಿನ (Block) ಸಮಾಚಾರಗಳನ್ನು ಕುರಿತು ಹರಟೆ ಹೊಡೆಯುತ್ತಾ ಒಂದು ತಾಸಿನವರೆಗೆ ಸತೀಶ ನನ್ನ ಹಾಸಿಗೆಯ ಮೇಲೆ ಕುಳಿತಿದ್ದ. ಆ ಮೇಲೆ ಅವನು ಬ್ಲಾಕ್ಕಿಗೆ ಹೊರಟುಹೋದ.

ಕ್ರಿಮಿನಲ್ ಕೈದಿಗಳ ಮೇಲೆ ತಮಗಿರುವ ಸಹಾನುಭೂತಿಯನ್ನು ತೋರಿಸಲು ರಾಜಕೀಯ ಕೈದಿಗಳು ಮರುದಿನ Strike ಮಾಡಿದರು. ಕೊನೆಗೆ ಸುಪರಿಂಡೆಂಟರು ಈ ಬಿಕ್ಕಟ್ಟನ್ನು ಪರಿಹರಿಸಲು ತಮ್ಮ ಅಂತಸ್ತಿನಿಂದ ಕೆಳಗೆ ಇಳಿದು ಬಂದರು. ಅವರು ಜೇಲು ನಿಯಮಗಳಿಗೆ ಅನುಸಾರವಾಗಿಯಲ್ಲದೆ, ಸ್ವೇಚ್ಛಾಪೂರ್ಣವಾದ ಹಿಂಸೆಯ ಕೆಲಸಗಳು ಇನ್ನು ಮೇಲೆ ತುರಂಗದಲ್ಲಿ ನಡೆಯಲಾರವೆಂಬ ಭರವಸೆಯನ್ನಿತ್ತರಂತೆ. ಹೆಡ್‌ವಾರ್ಡರರು ತಮ್ಮ ಅಪವರ್ತನೆಯ ಬಗ್ಗೆ ಪಶ್ಚಾತ್ತಾಪವನ್ನು ಸೂಚಿಸಿದರಂತೆ. ಹೀಗೆ ಆ ಬಿಕ್ಕಟ್ಟು ಪರಿಹಾರವಾಯಿತು.

ಆಸ್ಪತ್ರೆಯಲ್ಲಿ ಟೈಫೈಡ್ ರೋಗಿಯಾಗಿ ಮಲಗಿದ್ದ ನನಗೆ ಈ ಸಂಗತಿಗಳು ಕ್ರಮೇಣ ತಿಳಿದುವು. ಹೆಡ್‌ವಾರ್ಡರರು ಅನಂತನನ್ನು ಇಷ್ಟು ಕಠಿನವಾಗಿ ಪೀಡಿಸಲು ಕಾರಣವು, ಒಂದು ಆಕಳು ಬೇಲಿಯನ್ನು ಮುರಿದು ಅವರ ಹೂದೋಟವನ್ನು ಲೂಟಿಮಾಡಿದುದಾಗಿರಲಾರದೆಂದೂ, ಹೆಡ್‌ವಾರ್ಡರರು ಮುಚ್ಚುಮರೆಮಾಡಿದ ಬೇರೊಂದು ಕಾರಣವು ಇರಬೇಕೆಂದೂ ನಾನು ಊಹಿಸಿದೆ.

* * *

ಹತ್ತು ದಿನಗಳು ಕಳೆದುವು. ನನ್ನ ಕಾಹಿಲೆಯೂ ಗುಣವಾಯಿತು. ಆದರೆ ಜೇಲ್ ಆಸ್ಪತ್ರೆಯಿಂದ ನನ್ನನ್ನು ಡಿಸ್‌ಚಾರ್ಜ್ ಮಾಡಿರಲಿಲ್ಲ. ಆಗ ನನ್ನ ವಾರ್ಡಿಗೆ ಒಬ್ಬ ಹೊಸ ರೋಗಿ ಬಂದ. ಅವನು ಬೇರೆ ಯಾರೂ ಅಲ್ಲ; ಹೆಡ್‌ವಾರ್ಡರರ ಲಾಠಿಗೆ ಬಲಿಯಾಗಿ ತನ್ನ ಕೈ ಮುರಿದುಕೊಂಡಿದ್ದ ಅನಂತನಾಗಿದ್ದ. ಅವನ ಕೈ ಇನ್ನೂ ವಾಸಿಯಾಗಿರಲಿಲ್ಲ.

ಅನಂತನಿಗೆ ೩೦–೩೪ ವರುಷದ ಪ್ರಾಯವಿರಬಹುದು. ಒಳ್ಳೆಯ ಮೈಕಟ್ಟು; ಅಲ್ಪಸ್ವಲ್ಪ ಓದುಬರೆಹ ಗೊತ್ತಿದೆ ಅವನಿಗೆ. ಯಾವುದೋ ಒಂದು ದೊಂಬಿಯ ಖಟ್ಲೆಯಲಿ ಸಿಕ್ಕು ಮೂರು ವರ್ಷಗಳ ತುರಂಗವಾಸದ ದಂಡನೆಗೆ ಅವ ಒಳಗಾಗಿದ್ದ. ಬಿಡುಗಡೆಯಾಗಲು ಇನ್ನು ಮೂರುನಾಲ್ಕು ತಿಂಗಳುಗಳು ಮಾತ್ರ ಉಳಿದಿದ್ದುವು.

ಹೆಡ್‌ವಾರ್ಡರರು ಅವನನ್ನು ಪ್ರಹರಿಸಲು ಕಾರಣವೇನೆಂಬುದನ್ನು, ಅವನ ಮುಖದಿಂದಲೇ ತಿಳಿಯಬೇಕೆಂದು ನಾನು ಬಯಸಿದೆ. ಆದುದರಿಂದಲೇ ಅವನ ಗೆಳೆತನವನ್ನು ಸಂಪಾದಿಸಲು ಹವಣಿಸತೊಡಗಿದೆ. ಕಾರಾಗೃಹದಲ್ಲಿರುವ ನರಪ್ರಾಣಿಗೆ ಮರುಕವನ್ನು ತೋರಿಸತಕ್ಕವರು ವಿರಳ; ಅಧಿಕಾರಿಗಳೆಂದರೆ ಒಬ್ಬ ಸಾಮಾನ್ಯ ಕ್ರಿಮಿನಲ್ ಕೈದಿಗೆ ಅಂಜಿಕೆಯಾಗುವುದು. ಅವನು ಅವರೊಡನೆ ಸರಿಯಾಗಿ ಮಾತನಾಡಲಾರ. ಅವನ ಸಹಜೀವಿಗಳಾದ ಇತರ ಕೈದಿಗಳು ನೊಂದ ಹೃದಯಿಗಳೇ ಆಗಿರುವುದರಿಂದ, ಅವರಿಂದಲೂ ಅವನಿಗೆ ಸ್ನೇಹದ ಸಿಹಿನೀರು ದೊರೆಯಲಾರದು. ಸ್ನೇಹಮಮತೆಗಳಿಲ್ಲದಿರುವುದರಿಂದ ಅವನ ಬದುಕು ಬಂಜರುಬಿದ್ದ ನೆಲದಂತಿರುತ್ತದೆ. ಇದರ ಪರಿಣಾಮವಾಗಿ ಕಾರಾಗೃಹವೆಂದರೆ ತಾನು ಮಾಡಿದ ತಪ್ಪುಗಳಿಗೆ ಪ್ರತಿಯಾಗಿ ಸಮಾಜವು ತನ್ನ ಸೇಡನ್ನು ತೀರಿಸಲು ನಿರ್ಮಿಸಿದ ಒಂದು ಸ್ಥಳವಾಗಿದೆಯೆಂಬ ಭಾವನೆಯೂ ಅವನಲ್ಲಿ ಹುಟ್ಟುತ್ತದೆ. ಅವನು ನಿರಾಶಾವಾದಿಯಾಗುತ್ತಾನೆ. ಇದರಿಂದ ತನ್ನ ದಂಡನೆಯು ಮುಗಿದಮೇಲೆ ಜೇಲಿನಿಂದ ಹೊರಬಂದು ಸನ್ಮಾರ್ಗವನ್ನು ಅವಲಂಬಿಸುವುದರ ಬದಲು, ಅವನು



ಈ ವೇಳೆಯಲ್ಲಿ ಅನಿರೀಕ್ಷಿತವಾಗಿ ಹೆಡ್‌ವಾರ್ಡರರ ಸವಾರಿಯು ಅಲ್ಲಿಗೆ ಬಂದಿತು......

ಹಿಂದಿನ ನ್ಯಾಯವಿರುದ್ಧ ಕೆಲಸಗಳನ್ನೇ ಮಾಡುವುದು ಹೆಚ್ಚು. ಇವೆಲ್ಲ ಕಾರಾಗೃಹದ ಮನಶ್ಶಾಸ್ತ್ರಕ್ಕೆ ಸಂಬಂಧಿಸಿದ ಸಂಗತಿಗಳಾಗಿವೆ. ಇವುಗಳನ್ನು ಇಲ್ಲಿ ಪ್ರತಿಪಾದಿಸಬೇಕಾದುದಿಲ್ಲ. ಸಾಧಾರಣ ಕ್ರಿಮಿನಲ್ ಕೈದಿಗಳ ಜೀವನದಂತೆ ಅನಂತನ ಬದುಕಾದರೂ ಸ್ನೇಹ-ಮಮತೆಗಳ ಅಭಾವದ ಮೂಲಕ ಬರಡಾಗಿದ್ದಿತು.

ಅವನ ಎದೆಯ ಮೇಲೆ ಸ್ನೇಹದ ಹನಿಗಳನ್ನು ಸಿಂಚಿಸತೊಡಗಿದೆ ನಾನು. ಅವನ ಕುಟುಂಬವಿಷಯಗಳನ್ನು ಕೇಳಿ ತಿಳಿದುಕೊಂಡೆ; ಅವನ ಕೈ ಮುರಿದುಹೋದ ಬಗ್ಗೆ ಮರುಕವನ್ನು ಸೂಚಿಸಿದೆ. ನನ್ನ ವರ್ತನೆಗಳು ಅವನಲ್ಲಿ ಮಾರ್ಪಾಡನ್ನುಂಟುಮಾಡಿದುವು. ನನ್ನಲ್ಲಿ ನಂಬಿಕೆ ಹುಟ್ಟಿತು ಅವನಿಗೆ. ನನ್ನ ಸ್ನೇಹದ ಮಾತುಗಳು ಅವನ ಎದೆಯನ್ನು ಹಗುರುಗೊಳಿಸಿದುವು; ಗೆಳೆತನವು ಬೆಳೆಯಿತು. ಸ್ನೇಹವು ಹೆಚ್ಚಿ, ಒಬ್ಬನು ತನ್ನ ನಂಬಿಕೆಗೆ ಒಳಗಾದ ಗೆಳೆಯನಾಗಿಹೋದರೆ ಕೈದಿಯು ಈ ಗೆಳೆಯನೊಡನೆ ತನ್ನ ಎದೆಯಲ್ಲಿ

ಅಡಗಿರುವ ನಿಗೂಢರಹಸ್ಯಗಳನ್ನು ಕೂಡ ಬಿಚ್ಚಿ ಹೇಳಲು ಸಂಕೋಚಪಡುವುದಿಲ್ಲ. ಹೊರಗಿನ ಲೋಕದಲ್ಲಿ ಇನ್ನೊಬ್ಬರೊಡನೆ ಹೇಳಲು ಧೈರ್ಯಪಡದ ಅನೇಕ ಗುಟ್ಟುಗಳನ್ನು ಅವನು ಜೇಲಿನಲ್ಲಿ ತನ್ನ ಗೆಳೆಯನಿಗೆ ಬಿಚ್ಚಿ ಹೇಳುತ್ತಾನೆ. ಹಾಗೆ ಉಸಿರುವುದರಿಂದ ಮುಗಿಲು ಕವಿದ ಅವನ ಚಿತ್ತದಲ್ಲಿ ನಸು ಬೆಳಕು ಗೋಚರಿಸುವುದಲ್ಲದೆ, ಅವನ ಎದೆಯಲ್ಲಿ ಸ್ವಲ್ಪ ಹರುಷವೂ ಸುಳಿಯುತ್ತದೆ. ಇದರಂತೆಯೇ ಅನಂತನಿಗೂ ನನಗೂ ಗೆಳೆತನ ಬೆಳೆಯಲು, ತನ್ನ ಜೀವನಕ್ಕೆ ಸಂಬಂಧಿಸಿದ ಅನೇಕ ರಹಸ್ಯವಾರ್ತೆಗಳನ್ನು ಸುರಿದನವ. ಆ ರಹಸ್ಯಸಂಗತಿಗಳಲ್ಲಿ ಹಲವು, ಸದಾಚಾರ-ಬೋಧದ ದೃಷ್ಟಿಯಲ್ಲಿ ನೋಡುವುದಾದರೆ ನಿಂದ್ಯವೆನಿಸಿಕೊಳ್ಳ ತಕ್ಕುವುಗಳು. ನಾನು ತಾಳ್ಮೆಯಿಂದ ಅವನು ಹೇಳುತ್ತಿರುವುದನ್ನೆಲ್ಲಾ ಕೇಳುತ್ತಿದ್ದೆ.

ನಮ್ಮಿಬ್ಬರ ನಡುವೆ ಸಲುಗೆ ಹೆಚ್ಚಿತು. ಒಂದುದಿನ ಮಧ್ಯಾಹ್ನ ಊಟದ ಸಮಯದಲ್ಲಿ ಹೀಗೆ ಪ್ರಶ್ನಿಸಿದೆ ಅವನನ್ನು : "ಅಲ್ಲಾ ಅನಂತೂ, ಹೆಡ್‌ವಾರ್ಡರರು ನಿನ್ನನ್ನು ಬಡಿದದ್ದೇಕೆ?"

"ತೋಟದೊಳಗೆ ಆಕಳು ನುಗ್ಗಿದುದಕ್ಕೆ" ಎಂದ ಅವ; ಒಂದು ಕಿರುನಗೆಯು ಅವನ ತುಟಿಗಳ ಮೇಲೆ ಮೂಡಿತು.

"ಅಲ್ಲ, ಬೇರೆ ಯಾವುದೋ ಒಂದು ಕಾರಣವಿರಬೇಕೆಂದು ಅನಿಸುತ್ತದೆ ನನಗೆ. ಹೆಡ್‌ವಾರ್ಡರರು ಸೌಮ್ಯಸ್ವಭಾವದವರು; ಅವರು ಒಂದು ಆಕಳು ಹಿತ್ತಲೊಳಗೆ ನುಗ್ಗಿದುದಕ್ಕೆ ಇಷ್ಟು ಕ್ರೂರವಾಗಿ ವರ್ತಿಸಿದರೆಂದೆನುವಾಗ ನನಗೆ ಆಶ್ಚರ್ಯವಾಗುತ್ತದೆ!"

ಅನಂತು ತನ್ನ ಮೋರೆಯನ್ನು ತಗ್ಗಿಸಿದ; ಅಶ್ರುಕಣಗಳು ಅವನ ಕಣ್ಣುಗಳಲ್ಲಿ ತುಂಬುವುದನ್ನು ನೋಡಿದೆ; ಅವನ ಮೊಗವು ಬಾಡಿತು : ಕಂಠದಿಂದ ನುಡಿ ಹೊರಗೆ ಬರಲಿಲ್ಲ.

"ಅನಂತು, ಅಂಜಬೇಡ; ನಿನ್ನ ಒಬ್ಬ ಬಂಧುವೆಂದು ಭಾವಿಸು ನನ್ನನ್ನು! ನಿನ್ನ ಗುಟ್ಟನ್ನು ಬೆಳಕಿಗೆ ತರುವಂತಿಲ್ಲ ನಾನು!" ಹೀಗೆ ಅವನಿಗೆ ನಾನು ಭರವಸೆಯನ್ನಿತ್ತೆ.

"ಇಲ್ಲ, ನಿಮ್ಮಲ್ಲಿ ಅಪನಂಬಿಕೆ ನನಗಿಲ್ಲ; ಎಲ್ಲ ನನ್ನ ದುರದೃಷ್ಟ." ಅನಂತನ ಬೇಸರದ ಸ್ವರವು ಹೊರಟಿತು.

"ಅದು ನಿನಗೆ ಬೇಸರವನ್ನುಂಟುಮಾಡುವುದಾದರೆ ಹೇಳಬೇಕಾದುದೇ ಇಲ್ಲ!" ಎಂದು ಹೇಳಿದೆ ನಾನು.

"ನಾನೇಕೆ ಅದನ್ನು ಹೇಳದಿರಬೇಕು? ಎಲ್ಲ ನನ್ನ ದುರದೃಷ್ಟ; ಇಲ್ಲದಿದ್ದರೆ ಅದು ಹಾಗಾಗುತ್ತಿರಲಿಲ್ಲ." ಹೀಗೆ ಪ್ರಾರಂಭಿಸಿದ ಅನಂತ : "ನೋಡಿ, ಒಂದು ತಿಂಗಳ ಹಿಂದೆ ಹೆಡ್‌ವಾರ್ಡರರ ಮನೇಲಿ ನನ್ನ ಕೆಲಸಕ್ಕೆ ಹಾಕಿದರು. ಅಲ್ಲಿ ವಿಶೇಷ ಕೆಲಸವಿರಲಿಲ್ಲ. ಹೂಗಿಡುಗಳಿಗೆ ನೀರೆರೆಯುವುದು, ಮನೆಯ ಅಂಗಳ ಗುಡಿಸುವುದು, ಸೌದೆ ಸೀಳುವುದು, ಮತ್ತು ಬಾವಿಯಿಂದ ನೀರೆತ್ತುವುದು ಇವೆಲ್ಲಾ ನಾನು ಮಾಡಬೇಕಾದ ಕೆಲಸಗಳಾಗಿದ್ದುವು. ಮಧ್ಯಾಹ್ನ ಹೊತ್ತಿಗೆ ನನ್ನನ್ನು ಜ್ಯಾಕಿಗೆ ಕರೆದುಕೊಂಡು ಬರುವರು. ಪುನಃ ಒಂದು ಗಂಟೆಗೆ ಹೋದರೆ ಐದು ಗಂಟೆಗೆ ಹಿಂದಿರುಗಿ ಬರುವುದು."

"ಹೆಡ್‌ವಾರ್ಡರರಿಗೆ ನಾಲ್ಕಾರು ಮಕ್ಕಳಿದ್ದಾರೆ; ಅವರಲ್ಲಿ ಒಬ್ಬಳು ದೊಡ್ಡವಳು; ಇತರರೆಲ್ಲರೂ ಚಿಕ್ಕ ಪುಟ್ಟ ಮಕ್ಕಳಾದುದರಿಂದ ಊರ ಸಾಲೆಗೆ ಹೋಗುತ್ತಿದ್ದಾರೆ." ಅನಂತ ತನ್ನ ವೃತ್ತಾಂತವನ್ನು ಮುಂದುವರಿಸಿದ; ನಾನು ರೋಗಿಯಾಗಿದ್ದುದರಿಂದ ದಿನವೂ ೩ ಪೈಂಟು ಹಾಲನ್ನು ಕೊಡುತ್ತಿದ್ದರು. ಆ ವೇಳೆಯಲ್ಲಿ ಒಬ್ಬ ಆಳು (ಈತ ನಹಾ ಒಬ್ಬ ಕೈದಿಯೇ) ನನಗಾಗಿ ಹಾಲನ್ನು ತಂದು ಕೊಟ್ಟ. ನಾನು ಹಾಲಿನಲ್ಲಿ ಒಂದು ಪಾಲನ್ನು ಅನಂತನಿಗೆ ಕೊಟ್ಟೆ.

"ನಂಗೆ ಹಾಲು ಬ್ಯಾಡ್ರೀ!" ಎಂದು ಅನಂತು ತಲೆಯನ್ನು ಅಲ್ಲಾಡಿಸಿದ.

"ಪರವಾ ಇಲ್ಲ; ನಿನಗೂ ಸ್ವಲ್ಪ ಇರಲಿ" ಎಂದೆ ನಾನು.

"ಹೆಡ್‌ವಾರ್ಡರರ ಹಿರೇಮಗಳಿಗೆ ೧೮–೨೦ ವರುಷ ಪ್ರಾಯವಿರಬಹುದು. ಹಗಲೆಲ್ಲಾ ಆಕೆ ಮನೆಯಲ್ಲಿಯೇ ಇರುವಳು. ನಾನು ಹೂಗಿಡಗಳಿಗೆ ನೀರೆರೆಯುವಾಗ ಅವಳು ಆಗಾಗ ಅಲ್ಲಿ ಬರುತ್ತಿದ್ದಳು; ಗಿಡಗಳಿಂದ ಹೂಗಳನ್ನು ಕೀಳುತ್ತಿದ್ದಳು; ಇನ್ನೇನನಾದರೂ ಮಾಡುತ್ತಿದ್ದಳು. ಅವಳೊಡನೆ ಮಾತಾಡಲು ಪೂರಾ ಅಂಜಿಕೆ! ದೊಡ್ಡವರ ಮಕ್ಕಳು; ಏನಾದರೂ ಪ್ರಮಾದವಾದರೆ? ಆದರೆ ನೋಡಿ, ಕಮಲೆಯೇ ನನ್ನ ಸಂಗಡ ಮಾತಾಡಲು ಪ್ರಾರಂಭಿಸಿದಳು. ಅವಳ ಹೆಸರು ಕಮಲೆ- ಅಂತ ಆ ಮೇಲೆ ನನಗೆ ತಿಳಿಯಿತು. ನನ್ನ ಹೆಸರು, ಊರು, ತಾಯಿ-ತಂದೆಗಳು, ಹೀಗೆ ಎಲ್ಲಾ ವೃತ್ತಾಂತಗಳನ್ನು ಕಮಲೆ ಕೇಳಿ ತಿಳಿದುಕೊಂಡಳು. ನಾನು ಜೇಲಿಗೆ ಬಂದುದು ಹೇಗೆಂದು ಪ್ರಶ್ನಿಸಿದಳು; ಬಿಡುಗಡೆಗೆ ಇನ್ನೆಷ್ಟುದಿನಗಳಿವೆಯೆಂದು ಕೇಳಿದಳು. ಬಾಯಿತುಂಬ ಮಾತಾಡುವ ಸ್ವಭಾವ ಅವಳದು. ನನಗೆ ಪೂರಾ ಭಯ; ಅಂಜಿಅಂಜುತ್ತಾ ಜವಾಬು ಹೇಳುತ್ತಿದ್ದೆ. ಅವಳು ಸಿಟ್ಟುಮಾಡಲಿಲ್ಲ; ಮುನಿಯಲಿಲ್ಲ; ನನ್ನ ಕತೆಯನ್ನು ಕೇಳಿ ಮರುಕಗೊಂಡಳು; ಚೆಲುವು ಮಾತುಗಳನ್ನಾಡಿದಳು."

"ದಿನ ಕಳೆದಂತೆ ಸಲುಗೆ ಹೆಚ್ಚಿತು. ಹೂಗಿಡಗಳ ಪಾತಿಗಳಲ್ಲಿ ಬೆಳೆದಿದ್ದ ಕಳೆಕಡ್ಡಿಗಳನ್ನು ಕೀಳುವಾಗ ಅವಳು ಅಲ್ಲಿಗೆ ಬರುತ್ತಿದ್ದಳು. ನನ್ನೊಡನೆ ಮಾತಾಡುತ್ತಿದ್ದಳು; ನಗುತ್ತಿದ್ದಳು ನಾನು ಒಬ್ಬ ಕೈದಿ; ಅವಳು ನನ್ನ ಸಂಗಡ ಇಷ್ಟು ಸಲುಗೆಯಿಂದ ವರ್ತಿಸಲು ಕಾರಣವೇನೆಂದು ಆಲೋಚಿಸಹತ್ತಿದೆ. ಹೆಡ್‌ವಾರ್ಡರರು ಬ್ರಾಹ್ಮಣರೆಂಬುದನ್ನು ನೀವು ತಿಳಿದಿರಬಹುದು"

"ಅಹುದು, ಅದನ್ನು ನಾನು ಬಲ್ಲೆ!" ಟಂಬ್ಲರಿನಿಂದ ಒಂದು ಗುಟುಕು ಹಾಲು ಕುಡಿಯುತ್ತಾ ಹೇಳಿದೆ.

"ನೋಡಿ" ಅನಂತ ತನ್ನ ನುಡಿಗಳನ್ನು ಮುಂದುವರಿಸಿದ.

"ಹೆಡ್‌ವಾರ್ಡರರು ತಮ್ಮ ಮಗಳನ್ನು ಚಿಕ್ಕಂದಿನಲ್ಲಿಯೇ ಯಾವನೋ ಒಬ್ಬನಿಗೆ ಮದುವೆಮಾಡಿ ಕೊಟ್ಟರಂತೆ. ಅವ ಗಂಡ ಹೆಚ್ಚುಕಾಲ ಜೀವಿಸದೆ ಕೈಲಾಸಯಾತ್ರೆ ಮಾಡಿದನಂತೆ ಪುನರ್ವಿವಾಹವು ನಿಷಿದ್ಧವಾದುದರಿಂದ ಕಮಲೆ ವಿಧವೆಯಾಗಿಯೇ

ಜೀವಿಸಬೇಕಾಗಿ ಬಂದಿತು. ಈ ಸಂಗತಿಗಳನ್ನೆಲ್ಲಾ ಕಮಲೆಯೇ ಹೇಳಿದಳು ನನಗೆ. ದಿನಗಳು ಕಳೆದಂತೆ ಅವಳು ನನ್ನ ಸನಿಯಕ್ಕೆ ಬರತೊಡಗಿದಳು. ನನಗೆ ದಿಗಿಲಾಗತೊಡಗಿತು. ಆದರೆ ನನ್ನ ಅಂಜಿಕೆಯನ್ನು ಕಂಡು ಕಮಲೆ ನನ್ನನ್ನು ಹಾಸ್ಯಮಾಡತೊಡಗಿದಳು. ದಿನವೂ ಬೆಳಿಗ್ಗೆ, ಸಾಯಂಕಾಲ, ಕಮಲೆ ನನಗೆ ಕಾಫಿ-ತಿಂಡಿಗಳನ್ನು ತಂದುಕೊಡಲಾರಂಭಿಸಿದಳು. "

" ಹೀಗೆ ಕೆಲವು ದಿನಗಳು ಕಳೆದುವು. ಒಂದುದಿನ ಸಂಜೆಗೆ ನಾನು ಹೂಗಿಡಗಳಿಗೆ ನೀರೆರೆಯುತ್ತಿದ್ದೆ. ಕಮಲೆ ಬಂದು ಪಾತಿಯಲ್ಲಿ ಬೆಳೆದ ಕಳೆ-ಕಡ್ಡಿಗಳನ್ನು ಕೀಳತೊಡಗಿದಳು. ನೀರೆರೆವ ಕೆಲಸವನ್ನು ಮುಗಿಸಿದೆ; ತೋಟದ ಒಂದು ಮೂಲೆಯಲ್ಲಿ ತರಕಾರಿ ಬೀಜಗಳನ್ನು ಬಿತ್ತಲು ಹೊಸ ಪಾತಿಯನ್ನು ಮಾಡತೊಡಗಿದೆ. ಕಮಲೆ ಅಲ್ಲಿಗೂ ಬಂದಳು. ಪಾತಿಯಲ್ಲಿ ತುಂಬಿರುವ ಮಣ್ಣುಹೆಂಟೆಗಳನ್ನು ಹುಡಿಮಾಡುವ ಕೆಲಸದಲ್ಲಿ ಕಮಲೆ ನನಗೆ ಸಹಾಯಮಾಡತೊಡಗಿದಳು. ನಾನು ಮಾತಾಡದಿರುವುದನ್ನು ಕಂಡು ಅವಳೇ ಸಂಭಾಷಣೆಯನ್ನು ಆರಂಭಿಸಿದಳು.

' ಅಲ್ಲ, ಅನಂತು ನಿನಗೆ ಬುದ್ಧಿಯಿಲ್ಲವೇ ಸ್ವಲ್ಪವಾದರೂ ? ' ಈ ನುಡಿಗಳು ಅವಳ ತುಟಿಗಳಿಂದ ಉದುರಿದುವು.

' ಏಕೆ ಹಾಗೆ ಹೇಳುವಿರಿ ? ' ಎಂದೆ ನಾನು.

' ನಿನಗೆ ಬುದ್ಧಿ ರವಷ್ಟಾದರೂ ಇದ್ದಿದ್ದರೆ ನನ್ನನ್ನು ಈ ಪಾಡಲೇ ನೀನು ತಿಳಿದುಕೊಳ್ಳುತಿದ್ದೆ ; ನನಗೆ ನಿನ್ನಿಂದ ಬೇಕಾದುದೇನೆಂದು ಊಹಿಸಿ ಅರಿತುಕೊಳ್ಳುತಿದ್ದೆ. ನನ್ನ ಸಂಕಟಗಳು ! — ನೀರಿಲ್ಲದೇ ಒಣಗುತ್ತಿರುವ ಒಂದು ಬಳ್ಳಿಯಾಗಿದ್ದೇನೆ ನಾನು.' ಅವಳು ಮಾತಾಡಹತ್ತಿದಳು. ನಾನು ತುಟಿಗಳನ್ನು ಬಿಚ್ಚಲಿಲ್ಲ.

' ನೀರಡಿಕೆ ; ದಾಹ ! ' ಎಂದಳು ಕಮಲೆ.

' ನಿಮ್ಮ ಮಾತು ನನಗೆ ಅರ್ಥವಾಗುವುದಿಲ್ಲ ' ಎಂದು ನಾನು ಹೇಳಬೇಕಾಯಿತು. ಏಕೆಂದರೆ ಅವಳ ಮಾತುಗಳ ರಹಸ್ಯವು ನನಗೆ ತಿಳಿಯಲಿಲ್ಲ.

' ನಾನು ಅನುಭವಿಸುತ್ತಿರುವ ಸಂಕಟಗಳನ್ನು ಯಾರಿಗೆ ಹೇಳಲಿ ? ತಣ್ಣೀರನ್ನು ನೀಡಿ ನನ್ನ ನೀರಡಿಕೆಯನ್ನು ಶಾಂತಗೊಳಿಸುವ ಕೆಲಸ ನಿನ್ನದು ! ' ಅವಳ ಕಣ್ಣುಗಳಿಂದ ಎರಡುಹನಿ ನೀರು ಉದುರಿದುವು.

' ನಾನೇನು ಮಾಡಲು ಸಾಧ್ಯವಿದೆ ? ' ನಾನು ಪ್ರಶ್ನಿಸಿದೆ.

' ಸಾಧ್ಯವಿದೆಯೆಂದೇ ನಿನ್ನ ಬಳಿಗೆ ಬಂದಿದ್ದೇನೆ. '

' ಅಂದರೆ ? '

' ನಾನು ಹೆಂಗುಸು..ಗಂಡುಸಿನ ಬಳಿ ಹೆಂಗುಸು ಏನನ್ನು ಅಪೇಕ್ಷಿಸಬಹುದು ? '

ಈ ಮಾತುಗಳು ಕಮಲೆಯ ತುಟಿಗಳಿಂದ ಹೊರಬರಲು ನಾನು ತಲೆಯೆತ್ತಿ ನೋಡಿದೆ. ಆಕೆಯ ಕಣ್ಣುಗಳಿಂದ ನೀರು ಹರಿಯುತ್ತಿದ್ದಿತು. ನನ್ನಲ್ಲಿ ದಿಗಿಲು ಮತ್ತು ವಿಸ್ಮಯ ಇವುಗಳು ಒಂದೇ ಸಮಯದಲ್ಲಿ ಹುಟ್ಟಿದುವು. ಮಾತಾಡದೆ ಒಂದು ಕಲ್ಲಿನ ಕಂಬದಂತೆ ನಿಂತುಬಿಟ್ಟೆ ನಾನು. ಏನು ನುಡಿಯಬೇಕೆಂಬುದು ನನಗೆ ತಿಳಿಯಲಿಲ್ಲ.

' ನೋಡು, ಅನಂತು ' ಕಮಲೆ ಹೇಳುತ್ತಿದ್ದಳು. ' ಇಷ್ಟು ವರುಷಗಳಿಂದ ಈ ನೋವನ್ನು—ಈ ನೀರಡಿಕೆಯನ್ನು—ಸಹಿಸಿದೆ; ಈ ತಾಪದಲ್ಲಿ ಬೆಂದೆ. ನನ್ನ ಎದೆಯಲ್ಲಿ ಉರಿಯುತ್ತಿರುವ ಕಿಚ್ಚನ್ನು ಶಾಂತಗೊಳಿಸಬೇಕೆಂದು ನಿನ್ನನ್ನು ಬೇಡುತ್ತಿದ್ದೇನೆ. ನಿನ್ನನ್ನು ಕಂಡಂದಿನಿಂದ ನನ್ನ ಎದೆಯ ನೋವು ಹೆಚ್ಚಿದೆ; ಹೆಚ್ಚಿಗೆ ಹೇಳಲಾರೆ ! "

' ಆದರೆ ಪಾಪ—' ನಡುಗುತ್ತಿರುವ ನನ್ನ ಸ್ವರವು ಹೊರಟಿತು.

' ಪಾಪ-ಪುಣ್ಯಗಳು ನರಕಕ್ಕೆ ಉರುಳಲಿ ! ಈ ಯಾತನೆಯನ್ನು ಸಹಿಸುವುದಕ್ಕಾಗುವುದಿಲ್ಲ ! ನೀನು ಗಂಡುಸು; ನನ್ನ ನೋವನ್ನು ನಿನಗೆ ತಿಳಿಯುವುದಕ್ಕಾಗುವುದಿಲ್ಲವೇ ? '

ಅನಂತರ ಅವಳು ಮಾತಾಡಲಿಲ್ಲ ; ನೆಲದ ಮೇಲೆ ಬಿದ್ದಳು. ನಾನು ಅಂಜುತ್ತಾ ಆಕೆಯ ಕೈಹಿಡಿದು ಎಬ್ಬಿಸಿದೆ. ಏಳುವಾಗ ಆಕೆ ತನ್ನ ತೋಳುಗಳಿಂದ ನನ್ನನ್ನು ಸುತ್ತಿಕೊಂಡಳು. ಆ ಬಂಧನದಿಂದ ಬಿಡಿಸಿಕೊಳ್ಳಲಾಗಲಿಲ್ಲ; ಹೇಗೋ ಅನಿಸಿತು ನನಗೆ. ಒಲ್ಲೆನೆಂದು ಹೇಳಲು ಆಗಲಿಲ್ಲ. ಅವಳ ನೀರಡಿಕೆಯನ್ನು ಹಿಂಗಿಸಲು ಹೊರಟೆ ನಾನು. ನನಗೆ ತಿಳಿಯದಂತೆ ಎರಡು ಮುಖಗಳೂ ಒಂದುಗೂಡಿದುವು

" ಅನಂತರವೇನಾಯಿತು ? " ಬಾಯೊಳಗೆ ತುಂಬಿದ್ದ ಕೂಳನ್ನು ನುಂಗುತ್ತಾ ನಾನು ಪ್ರಶ್ನಿಸಿದೆ. ಅನಂತ ತನ್ನ ತುಟಿಗಳ ಮೇಲಿರುವ ಟಂಬ್ಲರನ್ನು ದೂರಕ್ಕೆ ಹಿಡಿದು ಮೃದುಸ್ವರದಲ್ಲಿ ಹೇಳಿದ : "ನೋಡಿ, ನಾನು ಗೈದುದು ಪಾಪವೋ ಪುಣ್ಯವೋ, ಎಂದು ಹೇಳಲಿಕ್ಕೆ ಬರುವಂತಿಲ್ಲ. ಆಕೆಯ ಎದೆಯಲ್ಲಿ ಉರಿಯುತ್ತಿದ್ದ ಕಿಚ್ಚನ್ನು ನಂದಿಸಲು ನನಗೆ ಶಕ್ಯವಾಯಿತು. ನೋಡಿ, ನಮ್ಮ ಅಜಾಗರೂಕತೆಯಿಂದ ನಮ್ಮ ಈ ಸ್ನೇಹವು ಹೆಡ್‌ವಾರ್ಡರರಿಗೆ ಹೇಗೋ ತಿಳಿದುಹೋಯಿತು. ಅದೊಂದು ದಿವಸ, ಹತ್ತುಗಂಟೆಯಾಗಿರಬಹುದು; ಹೆಡ್‌ವಾರ್ಡರರ ಮನೆಯ ಹಿತ್ತಲಿನಲ್ಲಿ ನಾನು ಪಾತಿಮಾಡಿ ಕಾಯಿಗಳ ಬೀಜಗಳನ್ನು ನೆಡುತ್ತಲಿದ್ದೆ. ಮನೆಯಲ್ಲಿ ಅಡಿಗೆಯವನಲ್ಲದೆ ಬೇರೆಯಾರೂ ಇರಲಿಲ್ಲ. ಅವನು ಅಡಿಗೆ ಕೋಣೆಯಲ್ಲಿ ಕೆಲಸ ಮಾಡುತ್ತಿರುವ ಸಪ್ಪಳವು ಕೇಳಿಸುತಿದ್ದುದರಿಂದ ನಮಗೆ ಯಾವ ಅಂಜಿಕೆಯೂ ಇರಲಿಲ್ಲ. ನಾನು ಕಾಯಿಪಲ್ಲೆಗಳ ಬೀಜಗಳನ್ನು ನೆಡುತ್ತಿದ್ದೆ; ಆಕೆ ನನ್ನ ಬೆನ್ನ ಮೇಲೆ ಕೈಹಾಕಿ ಪಕ್ಕದಲ್ಲಿಯೇ ಕುಳಿತಿದ್ದಳು ; ಯಾವುದೋ ಒಂದು ಸಂಗತಿಯನ್ನು ಕುರಿತು ಮಾತಾಡುತಿದ್ದಳು.

" ಈ ವೇಳೆಯಲ್ಲಿ ಅನಿರೀಕ್ಷಿತವಾಗಿ ಹೆಡ್ ವಾರ್ಡರರ ಸವಾರಿಯು ಅಲ್ಲಿಗೆ ಬಂದಿತು. ಆಕೆಯ ಕೈ ನನ್ನ ಬೆನ್ನಮೇಲಾಡುತ್ತಿರುವುದನ್ನು ಅವರು ನೋಡಿದರು. ಈ ನೋಟವನ್ನು ಕಾಣುತ್ತಲೆ ಅವರ ನೆತ್ತರು ನೆತ್ತಿಗೇರಲಿಕ್ಕೆ ಸಾಕು; ಆದರೆ ಅವರು ತೀರ ಸನಿಯಕ್ಕೆ ಬಂದು ತಲುಪುವವರೆಗೆ ಅವರನ್ನು ನಾವು ನೋಡಿರಲಿಲ್ಲ.

ತನ್ನ ತಂದೆಯನ್ನು ಕಾಣಲು ಆಕೆಗೆ ದಿಗಿಲಾಯಿತು; ಅವಳು ಅಲ್ಲಿ ನಿಲ್ಲಲಿಲ್ಲ; ಮನೆಯೊಳಗೆ ಓಡಿ ಹೋದಳು.

"ಹೆಡ್ ವಾರ್ಡರರು ತಮ್ಮ ತೀವ್ರ ದೃಷ್ಟಿಯನ್ನು ನನ್ನ ಕಡೆಗೆ ಹೊರಳಿಸಿದರು. ಅವರ ಕೈಯಲ್ಲಿದ್ದ ಲಾಠಿಯು ನನ್ನ ಬೆನ್ನ ಮೇಲೆ ನರ್ತಿಸತೊಡಗಿತು. ತಲೆ, ಕೈ, ಕಾಲು, ಬೆನ್ನು ಹೀಗೆ ಎಲ್ಲಾ ಅಂಗಗಳ ಮೇಲೆಯೂ ಬಡಿತಗಳು ಬಿದ್ದುವು. ನಾನು ನಿಲ್ಲಲಾರದೆ ನೆಲದ ಮೇಲೆ ಬಿದ್ದೆ. ಪ್ರಜ್ಞೆ ತಪ್ಪಿತು. ನನಗೆ ಪುನಃ ಎಚ್ಚರಿಕೆಯಾದಾಗ ಆಸ್ಪತ್ರೆಯಲ್ಲಿ ಮಲಗಿದ್ದೆ."

ಹೀಗೆ ಅನಂತ ತನ್ನ ವೃತ್ತಾಂತವನ್ನು ಹೇಳಿ ಮುಗಿಸಿದ. ಜೇಲಿನಲ್ಲಿ ನಡೆದ ಈ ಪ್ರಣಯಕಲಾಪವನ್ನು ತಿಳಿದು ನನ್ನ ಮನಸ್ಸು ವಿಸ್ಮಯಕ್ಕೊಳಗಾಗಿದ್ದಿತು.

* * *

ಎರಡು ಮೂರು ತಿಂಗಳ ಅನಂತರ ಅನಂತನಿಗೆ ಬಿಡುಗಡೆಯಾಯಿತು. ಜೇಲಿನಿಂದ ಹೊರಗೆ ತೆರಳುವ ಮುನ್ನ ಅವ ನನ್ನನ್ನು ಬಂದು ಕಾಣದಿರಲಿಲ್ಲ. ನನಗೆ ಬಿಡುಗಡೆಯಾದಮೇಲೆ ಅವನ ಊರಾದ ಮನ್ನಾರ್ಗುಡಿಗೆ ಬರಬೇಕೆಂದು ಅನಂತ ನನ್ನನ್ನು ಅಪೇಕ್ಷಿಸಿದ. "ಆಗಲಿ ನೋಡುವಾ" ಎಂದು ಹೇಳಿದೆ ನಾನು.

ಅನಂತನಿಗೆ ಬಿಡುಗಡೆಯಾಗಿ ಹದಿನೈದು ದಿನಗಳು ಕಳೆಯಲು ಹೆಡ್ ವಾರ್ಡರರ ಮಗಳು ಕಮಲೆ ಫರಾರಿಯಾದಳೆಂಬ ವಾರ್ತೆಯು ಜೇಲಿನಲ್ಲಿ ಹರಡಿತು. ಇದು ಅನಂತನ ಕೆಲಸವೆಂದು ಕೆಲವರು ಊಹಿಸಿದರು. ತನ್ನ ಸ್ವಂತದ ಇಷ್ಟದಂತೆ ಮನೆಯನ್ನು ಬಿಟ್ಟಿರುವೆನೆಂದು ಕಮಲೆ ಬರೆದಿಟ್ಟುದರಿಂದಲೂ, ಅವಳು ಪ್ರಾಯಪೂರ್ತಿಯಾದವಳಿದ್ದುದರಿಂದಲೂ, ಹೆಡ್ ವಾರ್ಡರರು ಮಗಳನ್ನು ಶೋಧಿಸಿ ಮರಳಿ ಕರೆದುಕೊಂಡು ಬರುವ ಕೆಲಸಕ್ಕೆ ಹೊರಡಲಿಲ್ಲವಂತೆ!

* * *

ನನಗೆ ಬಿಡುಗಡೆಯಾದಾಗ ಕಾಯಿದೆಭಂಗ ಚಳವಳಿಯು ತಣ್ಣಗಾಗಿತ್ತು. ನಾನು ಊರಿಗೆ ಹೋದೆ; ಮನೆಯಲ್ಲಿ ಹಿರಿಯರು ಹೇಳಿದರು: 'ಜೇಲಿಗೆ ಹೋಗಿ ಹೊಲೇರನ್ನಾ ತಿಂದು ಮುಡುಗ ಕುಲಗೆಟ್ಟು ಬಂದಿದ್ದಾನೆ; ಪ್ರಾಯಶ್ಚಿತ್ತವಾಗಬೇಕು.'

'ಒಲ್ಲೆ' ಎಂದು ನಾನು ಹೇಳಿದೆ.

"ಹಾಗಾದರೆ ಮನೇಲಿ ಇರಕೂಡದು!" ಎಂದು ಹಿರಿಯರ ಆಜ್ಞೆ ಹೊರಟಿತು.

ನಾನು ಮನೆಯಿಂದ ಹೊರಟೆ; ಈ ಸಮಯಲ್ಲಿಯೇ ಕಾರಾಗೃಹದಲ್ಲಿ ನನ್ನ ಗೆಳೆಯನಾಗಿದ್ದ ನಟೇಶನ ಕಾಗದವೊಂದು ಬಂದಿತು. ತನ್ನ ಊರಾದ **ಮಾಯಾವರಂ**ಗೆ ಬರಬೇಕೆಂದು ನನಗೆ ಬರೆದಿದ್ದ ನಟೇಶ. ಒಂದು ಸಲ ದೇಶಸಂಚಾರ ಮಾಡಿಕೊಂಡು ಬರೋಣವೆಂದೆನಿಸಿತು ನನಗೆ; ಹಾಗೆಯೇ ಊರಿನಿಂದ ಹೊರಟೆ.

ಕೈಯಲ್ಲಿ ಕಾಸಿಲ್ಲ. S. I. Rಗೆ ಠೋಕರ್ ಕೊಟ್ಟು, ಟಿಕೇಟಿಲ್ಲದೆ ಪ್ರಯಾಣವನ್ನು ಮಾಡಿದೆ. ತಮಿಳುದೇಶದ ಅನೇಕ ಊರುಗಳಲ್ಲಿ ತಿರುಗಿದುದಾಯಿತು. ಹಾಗೆಯೇ ಈ ಸಂಚಾರದ ಮಧ್ಯದಲ್ಲಿ ಮನ್ನಾರ್ಗುಡಿಗೆ ಬಂದು ತಲುಪಿದೆ. ಚಹಾ ಕುಡಿಯಬೇಕೆಂದು ಅಲ್ಲಿ ಒಂದು ಚಹಾ ಅಂಗಡಿಯೊಳಗೆ ಪ್ರವೇಶಿಸಿದೆ. ಚಹಾ ಅಂಗಡಿಯವನು ನನ್ನನ್ನು ಕಂಡೊಡನೆಯೇ "ಬನ್ನಿ ಸ್ವಾಮಿಾ! ಎಂದು ಆದರದಿಂದ ನನ್ನನ್ನು ಸತ್ಕರಿಸಿದ. ಅಪರಿಚಿತವಾದ ಈ ತಮಿಳುದೇಶದಲ್ಲಿ ಒಬ್ಬನು ಹೀಗೆ ಆದರಿಸುವುದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಅಂಗಡಿಯವನು ಚಹಾ ಕೊಟ್ಟು ಹೇಳಿದ: "ನನ್ನ ಗುರುತು ನಿಮಗೆ ಸಿಗಲೊಲ್ಲದೇ?"

ನಾನು ಮಾತಾಡದೆ ಅವನ ಮೋರೆಯನ್ನು ನೋಡಿದೆ. ಅವನ ಗುರುತು ಸಿಕ್ಕಿತು ನನಗೆ; ಜೇಲಿನಲ್ಲಿ ನನಗೆ ಪರಿಚಿತನಾದ ಅನಂತನಾಗಿದ್ದ. "ಏನಪ್ಪಾ, ನೋಡಿದೊಡನೆಯೇ ನಿನ್ನ ಗುರುತು ಸಿಗಲಿಲ್ಲ." ಎಂದು ಹೇಳಿದೆ ನಾನು.

ಆ ಮೇಲೆ ಅನಂತನ ವರ್ತಮಾನಗಳನ್ನು ತಿಳಿದುದಾಯಿತು. ಅವನು ನನ್ನ ಸಂಗಡ ಹೀಗೆ ಹೇಳಿದ: "ನೋಡಿ ಸ್ವಾಮಿಾ, ಬಿಡುಗಡೆಯಾದ ಮೇಲೆ ನಾನು ಕಮಲೆಯನ್ನು ನೋಡಿದೆ. ಆಕೆ ನನ್ನ ಸಂಗಡ ಬರುತ್ತೇನೆಂದು ಹೇಳಿದಳು; ಅದಕ್ಕೆ ನಾನು ಒಪ್ಪಿದೆ. ನನಗೆ ಜೇಲಿನಿಂದ ಬಿಡುಗಡೆಯಾದ ಹತ್ತು ಹನ್ನೆರಡು ದಿನಗಳಲ್ಲಿಯೇ ತನ್ನ ತಂದೆಯ ಮನೆಯಿಂದ ಹೊರಬಿದ್ದಳು. ಆಕೆಯನ್ನು ಕರೆದುಕೊಂಡು ನಾನಿಲ್ಲಿಗೆ ಬಂದೆ. ಅವಳು ತಂದೆಯ ಮನೆಯಿಂದ ತಂದಿದ್ದ ಕೆಲವು ರತ್ನಾಭರಣಗಳನ್ನು ಮಾರಿ ಬಂದ ಹಣವು, ಈ ಚಹಾದ ಅಂಗಡಿಗೆ ಭಂಡವಾಳವಾಯಿತು— ತಕ್ಕ ಮಟ್ಟಿಗೆ ವ್ಯಾಪಾರವಾಗುತ್ತಿದೆ!"

ಅವನ ಆಗ್ರಹದಂತೆ ಆ ದಂಪತಿಗಳ ಆತಿಥ್ಯವನ್ನು ಸ್ವೀಕರಿಸಿ ಅವರಲ್ಲಿ ನಾನು ಎಂಟು ಹತ್ತು ದಿನಗಳಿದ್ದೆ. ಕಮಲೆ ಒಳ್ಳೆಯ ಹೆಂಗುಸು; ಅವರಿಬ್ಬರೂ ಚೆನ್ನಾಗಿ ಸಂಸಾರ ಮಾಡಿಕೊಂಡಿದ್ದಾರೆ. ಪ್ರೀತಿಯ ಬಳ್ಳಿಯು ಆ ಎರಡು ಹೃದಯಗಳನ್ನು ಒಂದುಮಾಡಿದೆ. ಕಮಲೆಯೇನೋ ಜಾತಿಭ್ರಷ್ಟಳಾದಳು. ಜಾತಿಯ ಕಟ್ಟಿನಿಂದ ಪಾರಾದುದಕ್ಕೆ ಅವಳಿಗೆ ಹರುಷವಲ್ಲದೆ ವ್ಯಸನವಿಲ್ಲ; ಅವಳು ಅನಂತನನ್ನು ಪ್ರೀತಿಸುತ್ತಿದ್ದಾಳೆ; ಅವನ ಜೀವನದ ಪಾಲುಗಾರಳಾಗಿದ್ದಾಳೆ.

ಉದ್ಯೋಗಮಂದಿರ ಧಾರವಾಡ

ಇವರಲ್ಲಿಯ 'ದಂತಪ್ರಭಾ' 'ಅಭ್ಯಂಗಚೂರ್ಣ'ಗಳು ನಿಮ್ಮ ದೇಹವನ್ನು ನಿರ್ಮಲವಾಗಿರಿಸುವುವು.
ಬಗೆಬಗೆಯ ಹಿಟ್ಟುಗಳು, ಶುದ್ಧವಾದ ಮಸಾಲೆ, ಮೆಂತೆಯಹಿಟ್ಟು, ಸಾರಿನಪುಡಿ ಇವೆಲ್ಲ
ನಿಮಗೆ ಪರಿಶುದ್ಧವಾದ ಆಹಾರಸಾಮಗ್ರಿಯನ್ನು ಒದಗಿಸಿಕೊಡುವವು.

ನನ್ನ ದೀಪಾವಳಿಯ

ಹದಿನಾಲ್ಕು ದೀಪಗಳು

ಶ್ರೀ. ದೇಸಾಯಿ ದತ್ತಮೂರ್ತಿ

ಮುನ್ನುಡಿ: ನನ್ನ ದೀಪಾವಳಿಯ ಹದಿನಾಲ್ಕು ದೀಪಗಳ
ಹೊನ್ನ ಬೆಳಕಲಿ ಬೆಳಗಿ, ಹಬ್ಬಮಾಡಿದುದನ್ನು
ಕನ್ನಡಿಗರೆಲ್ಲರಿಗೆ ತಿಳುಹಲಿಕೆ ಬರೆದೆನಿದ
ದೇಸಾಯಿ ದತ್ತಮೂರ್ತಿ.

ದೀಪ ೧ ತಡೆಹಿಡಿದು ಕನ್ನಡದಪಪ್ರಚಾರವ ತನ್ನ
ಸಿಡಿಲ ಸಿಡಿನುಡಿಯಿಂದ ಸಂಯುಕ್ತ ಕರ್ಣಾಟ-
ದಡಿ-ಮುಡಿಯನೆಚ್ಚರಿಸಿ ನೀಮೊಗೆರೆ ಬರೆದರೈ
ಮುದವೀಡು ಶ್ರೀಕೃಷ್ಣರು !

ದೀಪ ೨ ಕನ್ನಡಿಗರಿಗೆ ನೀಡಿ ಅಧ್ಯಾತ್ಮ ರಸಝುರಿಯ,
ತನ್ನ ತ್ಯಾಗದ ತಪವ ಕನ್ನಡಕೆ ಧಾರೆಯೆರೆ-
ದುನ್ನತಿಯ ಪಥದೋರಿ ಬೆಳಗುವ ದಿವಾಕರನೆ
ರಾಮಸುತ ರಂಗನಾಥ !

ದೀಪ ೩ ತಾನು ತಲೆದೂಗಿ ಜನತೆಯನು ತಲೆದೂಗಿಸುತ,
ಆನಂದ ಕಂಡುಂಡು ಬಂಧುಜನಕುಣ್ಣಿಸುತ,
ತಾನತಾನದ ತರಂಗದ ಮೋಡಿಗಾರುಡಿಗ
ಅಂಬಿಕಾತನಯದತ್ತ !

ದೀಪ ೪ ‘ ಕಾನಡೀ ಕರ್ಣಕಟು’ ಎಂಬುಲುಹ ತನ್ನ ನವಿ-
ಗಾನನಿಭ ಕವನದಲಿ ಹುಸಿಗೊಳಿಸಿ, ಕನ್ನಡವು
ಏನು ನವಿಯೆಂಬುದನು ಮನಗಾಣಿಸಿದ ಧೀರ
ಬೆಟಗೇರಿ ಕೃಷ್ಣಶರ್ಮ !

ದೀಪ ೫ ತನ್ನ ತರ್ಕದಿ ತೂಗಿ, ಬುದ್ಧಿಯೊರೆಗಲ್ಲಿನಲಿ
ಚೆನ್ನಾಗಿ ಶಬ್ದಗಳ ತಿಕ್ಕಿ, ಹೊಸ ಹೊಸ ಭಾವ-
ಬಣ್ಣ ಹೊರಡಿಸಿ ನಗೆಯಕಡಲಲ್ಲಿ ತೇಲಿಸುವ
ನಗೆಗಾರ ಶ್ರೀರಂಗರು !

ದೀಪ ೬ ಪಾವನೆಯ ಮಾತೃಭೂಮಿಯ ಸೇವೆಯೊಂದೆ ಗುರಿ;
ನಾವು-ನೋವುಗಳಿಗೂ ಅಳುಕದೆಯೆ ನೀ ಹಾಡಿ
ಪಾವಿತ್ರ್ಯ ಮೈಗೊಂಡ ರಾಮಾಯಣವನೊರೆದೆ
ಶ್ರೀಪಾಲಿ ರಾಮಚಂದ್ರ !

ದೀಪ ೭ ಕಾಳರಾತ್ರಿಯ ಕಳೆದು ಜ್ಞಾನದಿನವನು ತಿಳಿದು,
ಬಾಳುವೆಯು ನವಿಯಾಗೆ ‘ ನನ್ನನಲ್ಲ’ನ ಕಂಡು,
ಏಳು-ಬೀಳಿನ ಜೀಕದಾಟಿ ನಸುನಗೆ ನಗುತ
ನಿಂತೆ ನೀ ಮಧುರಚೆನ್ನ !

ದೀಪ ೮ ಅತಿ ಪ್ರೇಮಯುತ, ಗದುವರಹಿತ, ಶ್ರೀ—ಸರ-
ಸ್ವತಿಯರಿಬ್ಬರಿಗು ಸಚ್ಚಿನವ, ಕನ್ನಡ ಮೊದಲು-
ಕತೆಗಾರ, ಶ್ರೀ ಮಾಸ್ತಿ ವೆಂಕಟಯ್ಯಂಗಾರ್ಯ
‘ ಸುಬ್ಬಣ’ನ ಶ್ರೀನಿವಾಸ !

ದೀಪ ೯ ಹಿತಮಿತದ ನುಡಿಯಾಡಿ ಜನರ ಮನ ಹದಮಾಡಿ,
ಗತಿದೋರಿ ಕನ್ನಡದ ಬಾವುಟವ ಹಿಡಿದೆತ್ತಿ,
ಧೃತಿಗೀತ ಹಾಡಿದರು; ಕನ್ನಡದ ಕರುಳೆ ಸರಿ
ಶ್ರೀಕಂಠ ಗುರುವರ್ಯರು !

ದೀಪ ೧೦ ಚುರುಕುಮಾತಿನ ಸಹಜಕವಿ ‘ಹತ್ತು ವರುಷ’ದಲಿ
ಚುರುಕು-ಚೂರುಗಳಿಂದ ಗುರಿಯ ಜನರಿಗೆ ತೋರಿ,
ಮಿರುಗುತ್ತು ಕನ್ನಡಕೆ ‘ಯೆಂಡ್ಕುಕ ರತ್ನ’ನಿಂ
ಮೆರೆಯುತಿಹ ರಾಜರತ್ನ !

ದೀಪ ೧೧ ಮರೆಮೋಸ ಕಂಡೊಡನೆ ಉರಿದುರಿದು ಜಗಯೊಳಗೆ,
ನರುವ ಕಲೆಗಳನರಿತು ಬಾಲಪ್ರಪಂಚದಲಿ
ಮೆರೆಯುತಿಹ ಬಿಚ್ಚುಸತ್ಯದ ಬೇಹುಗಾರರೀ
ಶಿವರಾಮ ಕಾರಂತರು !

ದೀಪ ೧೨ ‘ಉದಯರಾಗ’ವನು‘ಸಂಧ್ಯಾರಾಗ’ದೊಳುಮುಗಿಸಿ,
ಕುದಿವೆದೆಯ ಹೆಣ್ಣ ‘ಜೀವನ ಯಾತ್ರೆ’ ತೋರಿಸಿದೆ,
ಬದಿಗಳೆಯೆ ಹಳೆಯ ಕೊಳಕೆಲ್ಲವನು ನಡುಕಟ್ಟಿ
ನಿಂತೆ ಅ. ನ. ಕೃಷ್ಣರಾಯ !

ದೀಪ ೧೩ ಮಲೆನಾಡ ಕವಿ, ಶಬ್ದಬ್ರಹ್ಮ ಗುಮ್ಮಟದಲ್ಲಿ
ಒಲಿದುಲಿಯುತಿಹನು; ಶಬ್ದದ ನವಿಯನೀಂಟಿಸುವ
ಕಲೆಯರಿತ ನವಿಗಾರ ‘ ಕೊಳಲು’ದೊರೆ ಧೀಮಂತ
ಕುಪ್ಪಳ್ಳಿ ಪುಟ್ಟಪ್ಪನು !

ದೀಪ ೧೪ ಮೊದಲು ಮನೆಮಾತ ಬಳಕೆಗೆ ತಂದೆ ನಾಟಕದಿ;
ಮೊದಲು ಮನೆಯಾಟಗಳ ರಂಗಭೂಮಿಗೆ ತಂದೆ;
ಮೊದಲ ನಾಟಕಕಾರ, ಜುಚ್ಚುನಗೆಯರಸ ನೀ
ನಟರಾಜ ಕೈಲಾಸನೆ !

ಕನ್ನಡ-ಮರಾಠೀ ವಾದವು ಎಲ್ಲಿ, ಯಾರಿಂದ, ಹೇಗೆ ಹುಟ್ಟಿತು?



★

ಧಾರವಾಡದಲ್ಲಿ ಕೂಡ ಒಂದು ಕಾಲ ಹೀಗಿದ್ದಿತು; ಇಂದಿನ ಕನ್ನಡ ಚಳವಳಿಯ ಧುರೀಣರೇ ಮರಾಟಿಯ ಪತ್ರಿಕೆ ನಡೆಯಿಸುತ್ತಿದ್ದರು. ಆಗಿನ ಇಲ್ಲಿಯ ಮುಂದಾಳುಗಳಿಗೆ ಕರ್ನಾಟಕ ಇತಿಹಾಸ-ಸಾಹಿತ್ಯ-ಸಂಸ್ಕೃತಿಗಳ ಕಲ್ಪನೆ ನಸುವೂ ಇರಲಿಲ್ಲ. ಕರ್ನಾಟಕ ಏಕೀಕರಣದ ಭಾವನೆಯ ಬೀಜ ಬಿತ್ತಿದವರು ಶ್ರೀಮಾನ್ ಬೆನೆಗಲ್ಲು ರಾಮರಾಯರು. ನೀರುಣ್ಣಿಸತೊಡಗಿದವರು ಶ್ರೀಮಾನ್ ಆಲೂರ ವೆಂಕಟರಾಯರು.

— ೩ —

ಈ ಲೇಖನ ಮಾಲೆಯನ್ನು ಮುಂದು ವರಿಸುವ ಮೊದಲು ಇಲ್ಲಿಯ ಹಳೆಯ ಕಾಲದ ಕನ್ನಡ ಹಾಗು ಕನ್ನಡ ಜನಜೀವನದ ಸ್ಥಿತಿ-ಗತಿಗಳನ್ನು ಈಗಿನ ವಾಚಕರು ಅರಿತುಕೊಳ್ಳುವುದು ಇಷ್ಟವೂ ಯೋಗ್ಯವೂ ಆಗಿದೆ. ಹಾಗಾದರೆ ಮಾತ್ರ ಈ ವಾದದ ನ್ಯಾಯಾನ್ಯಾಯದ ವಿಮರ್ಶೆಯನ್ನು ಅವರು ಚೆನ್ನಾಗಿ ಮಾಡಬಲ್ಲರು. ಅದುದರಿಂದ ಈಗ ಅದೇ ವಿಷಯವನ್ನು ಮೊದಲು ವಿವರಿಸಬೇಕಾಗಿದೆ.

ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘವು ಸ್ಥಾಪಿತವಾದ ಕಾಲಕ್ಕೆ ಧಾರವಾಡದ ಕನ್ನಡತನವು ಹೇಗಿದ್ದಿತೆಂಬುದನ್ನು ಸಂಘದ ಮುಖಪತ್ರವೇ ಆಗಿರುವ "ವಾಗ್ಭೂಷಣ"ದ ಹೊಸ ಸಂಪುಟದ ೩ನೆಯ ಸಂಚಿಕೆಯಲ್ಲಿ ನಾನೇ ಬರೆದಿದ್ದೇನೆ. ಅದನ್ನೇ ಇಲ್ಲಿ ಪ್ರಕೃತವನ್ನನುಸರಿಸಿ ಎತ್ತಿಕೊಡುವುದು ಯುಕ್ತವಾಗಿದೆ.

"ಧಾರವಾಡದಲ್ಲಿ ಮರಾಠಿಗರ ಸಂಖ್ಯೆ ಎಂದಿಗಾದರೂ ಕಡಿಮೆ. ದೊಡ್ಡ ದೊಡ್ಡ ಸರಕಾರೀ ಅಧಿಕಾರಿಗಳು—ಉತ್ತರದ ಕಡೆಯಿಂದ ಬರುವವರು ಮಾತ್ರ—ಬಹುಶಃ ಅವರೇ. ಸದರ್ನ ಮರಾಠಾ ರೇಲ್ವೆಯ ಹೆಡ್ ಆಫೀಸಿನಲ್ಲಿ ನವಕರಿಗಾಗಿ ಬಂದ ಪುಣೆ, ಸಾತಾರೆಯ ಕಡೆಯವರು ಕೆಲವು ಜನರು. ಇವರನ್ನು ಬಿಟ್ಟರೆ ಮಿಕ್ಕವರೆಲ್ಲರೂ ಕನ್ನಡಿಗರೇ. ಊರೊಳಗಿನ ದೊಡ್ಡ ಮನುಷ್ಯರು, ಪ್ರತಿಷ್ಠಿತ ವಕೀಲರು ಎಲ್ಲರೂ ಕನ್ನಡಿಗರೇ. ಇಲ್ಲಿಯ ಮೊದಲನೆಯ ಇಂಗ್ಲಿಷ್ ವಕೀಲರಾಗಿದ್ದ ಘಾಟಕ ಗುರುನಾಥರಾಯರು, ಅತವಲೇ ಪಾಂಡುರಂಗರಾಯರು ಕೊಂಕಣಸ್ಥ ಬ್ರಾಹ್ಮಣ ಮನೆತನದವರಾದ ಮೂಲಕ ಮನೆಯಲ್ಲಿ ಮರಾಠೀ ಮಾತನಾಡುತ್ತಿದ್ದರೂ, ವ್ಯವಹಾರದಲ್ಲಿ ಅಚ್ಚ ಕನ್ನಡಿಗರೇ. ಘಾಟಕರವರ ಮನೆತನ ಹಾವೇರಿ ತಾಲೂಕ ಹಾವನೂರಿನದು. ಅತವಲೆಯವರು ಗದಗ ತಾಲೂಕ ಮುಳಗುಂದದವರು. ನೂರಿನ್ನೂರು ವರ್ಷಗಳಿಂದ ಈ ಮನೆತನಗಳು ಇಲ್ಲಿಯೇ ನೆಲೆಗೊಂಡಿರುವ ಮೂಲಕ ಅಚ್ಚ ಕನ್ನಡಿಗರೆಂದೇ ಹೇಳಬೇಕು. ಜೋಗರವರು, ಜೋಶಿಯವರು, ಗೋಖಲೆಯವರು, ಬಾಪಟರವರು, ಜೋಗಳೇಕರರು, ಪಟವರ್ಧನರು ಮೊದಲಾದ ಕೊಂಕಣಸ್ಥ ಮನೆತನಗಳು, ಹಾಗೆಯೇ ಜಠಾರ, ಕಿರ್ಲೋಸ್ಕರ ಮೊದಲಾದ ಕರ್ಹಾಡೆ ಮನೆತನಗಳೂ ಇದೇ ಮಾದರಿಯವಾಗಿರುವುದು ಇತ್ತ ಕಡೆಗೆಲ್ಲ ಪ್ರಸಿದ್ಧವಾಗಿದೆ. ಆದುದರಿಂದ ಆಗಿನ ಕಾಲಕ್ಕೆ ಕನ್ನಡ ಮರಾಠೀ ವಾದವಿರಲಿಲ್ಲ; ತಿಕ್ಕಾಟವಿರಲಿಲ್ಲ; ಸೆಣಸಾಟವಿರಲಿಲ್ಲ. ಹೊರಗಿನಿಂದ ಅಧಿಕಾರ ಸ್ಥಾನಗಳಿಗೆ ಬಂದ ಮರಾಠಿಗರು ಕನ್ನಡದ ವಿಷಯಕ್ಕೆ ಬಹಳವಾದರೆ ಉದಾಸೀನರಾಗಿರುತ್ತಿದ್ದರು. ಅವರಲ್ಲಿ ತಿರಸ್ಕಾರವಿರುತ್ತಿರಲಿಲ್ಲ. ಇವರಾಗಲಿ ಬೇರೆಯವರಾಗಲಿ ತಮ್ಮಷ್ಟಕ್ಕೆ ತಾವು ಮರಾಠೀ ಮಾತನಾಡಿಕೊಳ್ಳುತ್ತಿದ್ದರೂ ಸಾರ್ವಜನಿಕ ಸಂದರ್ಭಗಳಲ್ಲಿ ಇಲ್ಲಿಯವರೊಂದಿಗೆ ಸಮರಸವಾಗಿಯೇ ಹೋಗುತ್ತಿದ್ದರು. ಇಂಥ ಸಂಪೂರ್ಣ ಅನುಕೂಲ ಪರಿಸ್ಥಿತಿಯಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ ಸ್ಥಾಪನೆಯಾದದ್ದು ಕನ್ನಡದ ಉಜ್ವಲ ಭವಿತವ್ಯತೆಯ ಬೀಜರೂಪ ಉಪಕ್ರಮವೆಂದೇ ಪರಿಗಣಿಸಲ್ಪಟ್ಟಿತು."

ಹೀಗೆ ತುದಿ-ಮೊದಲೊಂದಾಗಿ ಕನ್ನಡವನ್ನೇ ತುಂಬಿಕೊಂಡಿದ್ದ ಧಾರವಾಡದಲ್ಲಿ ಮರಾಠಿಗೆ ಬಹಿಷ್ಕಾರವೇ ಇದ್ದಿತೆಂದು ಮಾತ್ರ ಯಾರೂ ತಿಳಿಯಕೂಡದು. ಕನ್ನಡ ಭಾಷೆಯಲ್ಲಿ ಪ್ರವೀಣರಾಗಿ ಗ್ರಂಥಕಾರರಾಗಿ, ಕವಿಗಳಾಗಿ ಕೀರ್ತಿವೆತ್ತಿರುವ

ಶ್ರೀ. ಮುದವೀಡು ಕೃಷ್ಣರಾಯರು

ಅವರಿಂದ

ಅನೇಕ ಮಹನೀಯರು ಕಾಲ ಪರಿಸ್ಥಿತಿಗನುಗುಣವಾಗಿ ಮರಾಠಿಯಲ್ಲಿಯೂ ಕನ್ನಡಿಗರೂ ಪ್ರಭುತ್ವವನ್ನು ಸಂಪಾದಿಸಿದ್ದ ದೃಷ್ಟಾಂತಗಳು ಆಗಿನಕಾಲಕ್ಕೂ ದೊರೆಯುತ್ತವೆ. ಕಾಲಿದಾಸನ ಶಾಕುಂತಲವು "ವಿವಿಧ ಜನರ್ಕಳಿಂ ವಿವಿಧ ಭಾಷೆಯೊಳ್ ಅಂತರಿಸಲಾ"ಗಿದ್ದರೂ "ಕರ್ನಾಟಕದೊಳಗೆ" ಭಾಷಾಂತರವಾಗಿಲ್ಲವೆಂಬ ಸಿಟುಕಿನಿಂದ ಅದನ್ನು ಭಾಷಾಂತರಿಸಿ, ಆಗಿನ ಕಾಲದ ಹೊಸಗನ್ನಡದ ಶ್ರೇಷ್ಠಕವಿಗಳೆಂದು ಪ್ರಖ್ಯಾತರಾಗಿದ್ದ ಕೀರ್ತಿಶೇಷ ಚುರಮುರಿ ಶೇಷಗಿರಿರಾಯರು, ಲಕ್ಷ್ಮೀಶನ ಜೈಮಿನಿ ಭಾರತದ ಸವಿಯನ್ನು ಮಹಾರಾಷ್ಟ್ರರಿಗೆ ತಿಳಿಸಿ ಕೊಡುವುದಕ್ಕಾಗಿ ಮರಾಠಿಯಲ್ಲಿ ಪದ್ಯರೂಪವಾಗಿ ಭಾಷಾಂತರಿಸಿ, ಆಗಿನಕಾಲದ ಸುಪ್ರಸಿದ್ಧ ಮರಾಠೀ ಮಾಸಪತ್ರಿಕೆಯಾಗಿದ್ದ ಮುಂಬಯಿಯ "ವಿವಿಧಜ್ಞಾನ ವಿಸ್ತಾರ"ದಲ್ಲಿ ಪ್ರಕಟಿಸಿದ್ದುಂಟು. ಕನ್ನಡ ಟ್ರಾನ್ಸ್‌ಲೇಟರರಾಗಿ ಕನ್ನಡ ಟ್ರೇನಿಂಗ್ ಕಾಲೇಜಿನ ಪ್ರಿನ್ಸಿಪಾಲರಾಗಿ ಅನೇಕ ಕನ್ನಡ ಗ್ರಂಥಗಳ ಕರ್ತೃಗಳಾಗಿ ಹೊಸಗನ್ನಡದ ಪ್ರತಿಭಾವಂತ ನಿರ್ಮಾಣಕರೆಂದು ಇಂದಿಗೂ ಗಣ್ಯರಾಗಿರುವ ಸ್ವರ್ಗಸ್ಥ ವೆಂಕಟ ರಂಗೋ ಕಟ್ಟಿಯವರು, ಎಷ್ಟೆಷ್ಟೋ ಗ್ರಂಥಗಳನ್ನು ಮರಾಠಿಯಲ್ಲಿಯೂ ಬರೆದು ಪ್ರಕಟಿಸಿದ್ದಾರೆ. ಅವರ 'ಕರ್ನಾಟಕ ಪತ್ರ'ವೆಂಬ ವಾರಪತ್ರಿಕೆಯಲ್ಲಿ ಪ್ರತಿವಾರವೂ ಒಂದು ಮರಾಠೀ ಲೇಖವು ಪ್ರಸಿದ್ಧವಾಗುತ್ತಲೇ ಇತ್ತು. ಮೊದಲಿನ ಲೇಖದಲ್ಲಿ ಉಲ್ಲೇಖಿಸಲಾಗಿರುವ ಶ್ರೀ. ದಿವಂಗತ ಕೃಷ್ಣಾಜಿ ಆಬಾಜೀ ಗುರುಜಿಯವರು ಲೋಕಮಾನ್ಯ ತಿಲಕರ ರಾಜಕೀಯ ಪ್ರಕರಣದ ಕೋಲಾಹಲದೊಳಗೆ "ಡಿಸ್‌ಮಿಸ್" ಆದಬಳಿಕ, ಅವರ ಯೋಗಕ್ಷೇಮಕ್ಕೆಂದೂ ಕರ್ನಾಟಕದ ಚಳವಳಿಗಳ ಸ್ವರೂಪವು ಮಹಾರಾಷ್ಟ್ರಕ್ಕೆ ತಿಳಿಯಲೆಂದೂ "ಕಾಲಿದಾಸ"ಎಂಬ ಮರಾಠೀ ಸಾಪ್ತಾಹಿಕವನ್ನು ನಾವೇ ನಮ್ಮ ಗುಂಪಿನವರು ಹೊರಡಿಸಿ, ಶ್ರೀ. ಗುರುಜಿಯವರ ಸಂಪಾದಕತ್ವದಲ್ಲಿ ೧೮೯೭ರಲ್ಲಿ ಪ್ರಕಟಿಸಹತ್ತಿದೆವು. ೧೯೧೧ರಿಂದ ಎರಡು ಮೂರು ವರ್ಷಗಳವರೆಗೆ 'ಧಾರವಾಡವೃತ್ತ'ವೆಂಬ ಪುರಾತನ ಮರಾಠೀ ವರ್ತಮಾನಪತ್ರವು ಮುಗ್ಗಬಾರದೆಂಬ ಅನುಕಂಪೆಯಿಂದ, ನಾನೇ ಸಂಪಾದಕನಾಗಿ ನನ್ನ ಮುದ್ರಣಾಲಯದಲ್ಲಿಯೇ ಮುದ್ರಿಸಿ ಪ್ರಕಟಿಸುತ್ತಿದ್ದೆನು. ಹೀಗೆಲ್ಲ ಪರಿಸ್ಥಿತಿಯಿದ್ದ ಎಂದರೆ ಮರಾಠಿಯ ವಿಷಯವಾಗಿ ಇಲ್ಲಿ ಒಂದು ಬಗೆಯ ಆದರವೂ ಆತ್ಮೀಯಭಾವವೂ ವಿಶ್ವಾಸವೂ ನೆಲೆಗೊಂಡಿದ್ದ ಧಾರವಾಡದಲ್ಲಿ ಮರಾಠಿಯ ವಿಷಯವಾಗಿ ತಿರಸ್ಕಾರವಿರಲಿಲ್ಲವೆಂಬುದು ಸ್ಪಷ್ಟವಾಗಿ ಕಂಡುಬರದಿರಲಾರದು.

ಧಾರವಾಡದ ಸುಶಿಕ್ಷಿತ ಕನ್ನಡಿಗರಲ್ಲಿ ಈ ಬಗೆಯಾಗಿ ಮರಾಠಿಯ ಬಗ್ಗೆ ಇದ್ದ ಆದರಬುದ್ಧಿಯ ಪ್ರಯೋಜನ ಹೊಂದಬೇಕೆಂದು ಬಗೆದು, ಈ ಹಿಂದೆ ಹೇಳಿದಂತೆ ಮರಾಠಿಯ ತೀವ್ರ ಅಭಿಮಾನದಿಂದ ಸ್ಫುರಣಗೊಂಡು, ಅದರ ವಿಕಾಸಕ್ಕೂ ವಿಸ್ತರಣಕ್ಕೂ ಪ್ರಯತ್ನಿಸಬೇಕೆಂಬ ಮನೋವೃತ್ತಿಯನ್ನುಳ್ಳ ಮಹಾರಾಷ್ಟ್ರೀಯ ಪರಿಷ್ಠಾಧಿಕಾರಿಗಳು ಜಿಗುಟುತನದ ಉದ್ಯೋಗವನ್ನು ನಡಿಸಿದರು. ಪುಣೆ ಸಾತಾರೆಯತ್ತ ಕಡೆಯ ಸಂಬಂಧವು ರೇಲ್ವೆಯ ಸಂಯೋಜನೆಯಿಂದ ಸುಲಭವಾದ ಮೂಲಕ, ಅತ್ತಕಡೆಯ ಸುಶಿಕ್ಷಿತ ನಿರುದ್ಯೋಗಿಗಳಿಗೆ ಕರ್ನಾಟಕದ ಈ ಭಾಗದಲ್ಲೊಂದು ಹೊಸಕ್ಷೇತ್ರವು ತೆರೆದಿಟ್ಟಂತಾಗಿ, ವಕೀಲಿಯ ವ್ಯವಸಾಯಕ್ಕೆ—ವ್ಯಾಪಾರ ಉದ್ಯೋಗಕ್ಕೆ—ಅತ್ತಕಡೆಯವರು ಮುಗಿಬೀಳಹತ್ತಿದರು. ಸದರ್ನ್ ಮರಾಠಾ ರೇಲ್ವೆಯ ಹೆಡ್ ಆಫೀಸುಗಳು ಧಾರವಾಡದಲ್ಲಿಯೇ ಇದ್ದುದರಿಂದ, ಅದರಲ್ಲಿ ಕೆಲಸಹಿಡಿದು ಉಪಜೀವನ ಸಾಗಿಸಲು ಅನೇಕ ಮರಾಠೀ ಕುಟುಂಬಗಳು ಧಾರವಾಡದಲ್ಲಿ ಬಂದು ನೆಲೆಗೊಂಡುವು. ಹೀಗೆ ಧಾರವಾಡದಲ್ಲಿ ಮಹಾರಾಷ್ಟ್ರೀಯರ ವಸತಿಯು ಬೆಳೆದ ಮೂಲಕ ಮರಾಠೀ ನಾಟಕಕಾರರು, ಕೀರ್ತನದವರು, ಕಥೆಗಾರರು, ಗಾಯಕರು, ನರ್ತಕಿಯರು ಇತ್ತಕಡೆಗೆ ಸುಗ್ಗಹತ್ತಿದರು. ಇಲ್ಲೆಲ್ಲ ಮರಾಠೀ ಭಾಷೆಯನ್ನು ಹಬ್ಬಿಸಬೇಕೆಂಬಹಾತೊರಿಕೆಯುಳ್ಳ ಮರಾಠೀ ಅಧಿಕಾರಿಗಳಿಗೆ ಇವರೆಲ್ಲರ ಅಭಿಯೋಗಗಳು ಅನುಕೂಲ ವಾತಾವರಣವನ್ನೆ ಹುಟ್ಟಿಸಿದುವೆಂದು ಹೇಳಬಹುದು. ಈ ರೀತಿಯಿಂದ ಧಾರವಾಡದಲ್ಲಿ ಮರಾಠಿಯ ವರ್ಚಸ್ಸವು ಬೆಳೆಯಹತ್ತಿದ್ದು, ಮುಂದೆ ಇಲ್ಲಿಯ ಮೂಲಭಾಷೆಯಾದ ಕನ್ನಡದ ಕುತ್ತಿಗೆಗೆ ಕತ್ತರಿಯಾಗಿ ಪರಿಣಮಿಸಬಹುದೆಂಬ ಆಲೋಚನೆಯು ಸ್ಥಾನಿಕ ಮುಖಂಡರಿಗೆ ಹೊಳೆಯುವ ಪರಿಸ್ಥಿತಿಯೇ ಆಗ ಉಂಟಾಗಿರಲಿಲ್ಲ. ರಾಜಕೀಯ ವಿಚಾರ, ವ್ಯವಹಾರಗಳಲ್ಲಿ ಪುಣೆ–ಮುಂಬಯಿ ಕಡೆಯ ಮಹಾರಾಷ್ಟ್ರೀಯ ಮುಖಂಡರ ಅನುಯಾಯಿಗಳಾಗಿಯೇ ನಡೆಯುತ್ತ ಬಂದಿದ್ದ ಇಲ್ಲಿಯ ಪುರಪ್ರಮುಖರಿಗೆ ಪ್ರಾಚೀನ ಕನ್ನಡ ನಾಡಿನ ಹಿರಿಮೆಯಾಗಲಿ, ಹೆಚ್ಚುಳವಾಗಲಿ ಎಷ್ಟೂ ತಿಳಿದಿರಲಿಲ್ಲ. ೧೯೦೭ರಲ್ಲಿ ಧಾರವಾಡದಲ್ಲಾದ ಮುಂಬಯಿ ಪ್ರಾಂತಿಕ ಪರಿಷತ್ತಿನ ಸ್ವಾಗತಾಧ್ಯಕ್ಷರಾಗಿದ್ದ ದಿವಂಗತ ಅಠವಲೇ ಪಾಂಡುರಂಗರಾಯರು, ತಮ್ಮ ಸ್ವಾಗತ ಭಾಷಣದಲ್ಲಿ ಧಾರವಾಡದ ಐತಿಹಾಸಿಕ ಮಹಿಮೆಯನ್ನು ವರ್ಣಿಸುವಾಗ, ಪೇಶ್ವೆಯರ ದಂಡನಾಯಕರೊಳಗೊಬ್ಬನಾಗಿದ್ದ **ಧೋಂಡೋಪಂತ ಗೋಖಲೆ**, ಅವನ ವೀರಪತ್ನಿ, ಅವರ ಹಿರಿಕಿರಿಯ ಮಗ **ಬಾಪೂ ಗೋಖಲೆ** ಇವರ ಉಲ್ಲೇಖವನ್ನು ಮಾತ್ರ ಮಾಡಿದ್ದುಂಟು. ಇಷ್ಟರಿಂದಲೇ ಪ್ರಾಚೀನ ಕರ್ನಾಟಕದ ಇತಿಹಾಸದ ಪರಿಜ್ಞಾನವು ಇತ್ತಕಡೆಯ ಮುಖಂಡರಿಗೆ ಎಷ್ಟರಮಟ್ಟಿಗೆ ಇದ್ದಿರಬಹುದೆಂಬುದು ಚೆನ್ನಾಗಿಯೇ ತಿಳಿದು ಬರುವಂತಿದೆ.

ಇತಿಹಾಸದ ಅವಸ್ಥೆಯೇ ವಾಙ್ಮಯದ್ದೆಂದು ಹೇಳಬಹುದು. ಜೈಮಿನಿ, ಭಾರತ, ರಾಮಾಯಣ, ರಾಜಶೇಖರ, ಶಬರಶಂಕರವಿಳಾಸ ಮೊದಲಾದ ಕೆಲವು ಗ್ರಂಥಗಳ ಹೊರತಾಗಿ ಬೇರೆ ಕನ್ನಡ ಗ್ರಂಥಗಳ ಪರಿಚಯವೇ ಯಾರಿಗೂ ಇರಲಿಲ್ಲವೆಂಬಂತೆ ಕಂಡುಬರುತ್ತದೆ. ವಿಜಯನಗರದ ವಿನಾಶದನಂತರ ಎರಡು ಶತಮಾನಗಳವರೆಗೆ ಮುಸಲ್ಮಾನರಿಗೋ ಮರಾಟರಿಗೋ ಅಂಕಿತವಾಗ್ಗಿ, ಅವರವರ ರಾಜಕೀಯ ವರ್ಚಸ್ಸದ ಕಾಳಗದ ಕಣವಾಗಿ, ಪ್ರಶಾಂತ ಜೀವನಕ್ಕೇ ಎರವಾಗಿದ್ದ ಕನ್ನಡ ನಾಡಿನ ಈ ಭಾಗದಲ್ಲಿ, ಬ್ರಿಟಿಶರ ಪರಕೀಯ ಅಧಿ-

ಪತ್ಯವು ನೆಲೆಗೊಂಡನಂತರದ ಶಾಂತಿಮಯ ಆಡಳಿತೆಯಲ್ಲಿಯೂ ಕನ್ನಡ ಸಂಸ್ಕೃತಿಯ ಮೂಲಾಧಾರವಾದ ಕನ್ನಡ ವಾಙ್ಮಯದ ವಿಷಯವಾಗಿ ಇಷ್ಟೊಂದು ಅಜ್ಞಾನವು ಮುಸುಕಿಕೊಂಡಿದ್ದದ್ದು ಆಶ್ಚರ್ಯದ ಮಾತಾಗಲಾರದು. ಆದರೆ ವಿಜಯನಗರದ ಪರಂಪರೆಯನ್ನೇ ಎತ್ತಿಕೊಂಡು ಆ ಕನ್ನಡ ಸಾಮ್ರಾಜ್ಯದ ಅವಶೇಷವೆಂದೇ ಇಂದಿಗೂ ಹೆಮ್ಮೆಯಿಂದ ಹೇಳಿಕೊಳ್ಳುತ್ತ ಬಂದಿರುವ, ಇಂದಿನ ಕನ್ನಡಿಗರಿಗೆಲ್ಲ ತಮ್ಮ ಪ್ರಾಚೀನ ವೈಭವದ ಕುರುಹೆಂದು ಅಭಿಮಾನಪಾತ್ರವಾಗಿರುವ ಮೈಸೂರು ಸೀಮೆಯಲ್ಲಿಯೂ ಕನ್ನಡಕ್ಕೆ ಇದೇ ದುರವಸ್ಥೆಯೊದಗಿದ್ದಿತೆಂಬುದು ಕೇವಲ ದೈವದುರ್ವಿಲಾಸವೆಂದೇ ಹೇಳಬಹುದಷ್ಟೆ! ಬೆಂಗಳೂರಿನಲ್ಲಿ ೧೮೯೨ರಿಂದ ಪ್ರಸಿದ್ಧವಾಗುತ್ತಿದ್ದ "ಕರ್ನಾಟಕ ಕಾವ್ಯಮಂಜರಿ" ಎಂಬ ಮಾಸಪತ್ರಿಕೆಗೂ ಮುಂದೆ ಅದು ನಿಂತು ಹೋದನಂತರ ೧೮೯೯ರಿಂದ "ಕರ್ನಾಟಕ ಕಾವ್ಯಕಲಾನಿಧಿ" ಎಂಬ ಮಾಸಪತ್ರಿಕೆಗೂ ಸಂಪಾದಕರಾಗಿದ್ದ ಕೀರ್ತಿಶೇಷ ಶ್ರೀಮಾನ್ ಬಿ. ರಾಮಾನುಜಯ್ಯಂಗಾರ್ಯರು ೧೯೨೬ರ ಪ್ರಬುದ್ಧ ಕರ್ನಾಟಕದ ದೀಪಾವಳಿಯ ಸಂಚಿಕೆಯಲ್ಲಿ ಈ ವಿಷಯವಾಗಿ ಹೀಗೆ ಬರೆದಿದ್ದಾರೆ: —

"ಸುಮಾರು ೩೫-೪೦ ವರ್ಷಗಳ ಹಿಂದೆ ಕನ್ನಡ ಭಾಷಾಮಾತೆಗೆ ಪ್ರಾಪ್ತವಾದ ದುರವಸ್ಥೆಯನ್ನು ನೆನಸಿಕೊಂಡರೆ ಈಗಲೂ ಎದೆ ಜುಮ್ಮೆನ್ನುತ್ತದೆ. ಷಟ್ಪದಿಗಳಲ್ಲಿ ಭಾರತ, ರಾಮಾಯಣ, ಜೈಮಿನಿ, ಚಂಪೂ ಕಾವ್ಯಗಳಲ್ಲಿ ಶಬರಶಂಕರ ವಿಳಾಸ, ರಾಜಶೇಖರ ಇನ್ನೂ ಒಂದೆರಡು ಗ್ರಂಥಗಳು ವಿನಾ ಬೇರೆ ಯಾವ ಉದ್ಗ್ರಂಥಗಳ ಹೆಸರನ್ನೂ ಯಾರೂ ಕೇಳಿರಲಿಲ್ಲ. ಇವೇ ಕನ್ನಡದಲ್ಲಿರುವ ಉದ್ಗ್ರಂಥಗಳೆಂದು ತಿಳಿದಿದ್ದರು. ಆ ಕಾಲದಲ್ಲಿ ಕನ್ನಡ ಭಾಷೆಯ ಔತ್ಕೃಷ್ಟ್ಯವನ್ನೂ ವಾಙ್ಮಯದ ಸಮೃದ್ಧಿಯನ್ನೂ ತಿಳಿಸಲು ಯಾವ ಸೂಚನೆಯೂ ಇರುತ್ತಿರಲಿಲ್ಲ. ಆಗಿನ ಪಂಡಿತರು ಅಸಂಸ್ಕೃತವಾದ ಗ್ರಾಮ್ಯಭಾಷೆಗಳಲ್ಲಿ ಕನ್ನಡವೂ ಒಂದೆಂದು ಯೋಚಿಸುತ್ತಿದ್ದರು. ತೇಜಸ್ವಿಗಳಾದ ನಕ್ಷತ್ರಗಳು ಪ್ರಕಾಶಿಸದೆ ಇರುವ ಅಂಧಕಾರದಲ್ಲಿ ಎಲ್ಲವೂ ಅಂಧಕಾರವೇ ಎಂದು ತಿಳಿಯುವುದು ಸಹಜ. ಕನ್ನಡ ಮಾತೆಯ ಮೆಯ್ಸಿರಿಯೂ ಆಭರಣಕಾಂತಿಯೂ ಜನರ ವಿಸ್ಮೃತಿಯೆಂಬ ಆವರಣದಲ್ಲಿ ಮುಚ್ಚಲ್ಪಟ್ಟಿರಲು, ಹೇಗೆ ತಾನೆ ಅವಳು ಪ್ರಾಜ್ಞರ ಕಣ್ಣನ್ನು ತೆರೆಯಿಸಿ ತನ್ನ ಕಡೆಗೆ ಅವರನ್ನು ತಿರುಗಿಸಿ ತನ್ನನ್ನು ಆಶ್ರಯಿಸುವಂತೆ ಮಾಡುವಳು? ಆ ಕಾಲದ ಪ್ರಾಜ್ಞರು, ಯಾವ ಕಾಂತಿಯೂ ಸಂಸ್ಕಾರವೂ ಅಲಂಕಾರವೂ ಇಲ್ಲದೆ ತುಚ್ಛವಾದ ಹರಕು ಬಟ್ಟೆಗಳನ್ನುಟ್ಟು, ಮೂಳೆಯ ನಗಗಳನ್ನು ತೊಟ್ಟು, ಅಲ್ಲಲ್ಲಿ ಕೋಣೆಗಳಲ್ಲಿ ಅವಿತುಕೊಂಡು, ಕಂಡೂ ಕಾಣದಂತೆ ಅಲೆದಾಡುತ್ತಿರುವ ಬಡ-ಹೆಂಗುಸಿನಂತಿರುವ ಕನ್ನಡ ಮಾತೆಯನ್ನು ನೋಡಿ, ಅವಳ ಜೊತೆಯಲ್ಲಿರಲು ತಮಗೆ ಹೇಸಿಗೆಯುಂಟಾಗುವುದೆಂದು ನಂಬಿ, ಅವಳು ಹತ್ತಿರ ಬಂದರೆ ಹೀಯಾಳಿಸಿ ಜುಗುಪ್ಸೆಯನ್ನು ತೋರಿಸುತ್ತ ದೂರಕ್ಕೆ ಅಟ್ಟುತ್ತಾ ಬಂದರು. ಕುರೂಪಿಯನ್ನು ಕುರೂಪಿಯೆಂದರೆ ಅವಳೂ ದುಃಖಿಸುವುದಿಲ್ಲ; ಕೇಳಿದವರೂ ದುಃಖಿಸುವುದಿಲ್ಲ; ಸುರೂಪಿಯನ್ನೂ ಸಂಪತ್ಸಮೃದ್ಧಳನ್ನೂ ಕುರೂಪಿಯೆಂದೂ ಸಹವಾಸಕ್ಕೆ ಅನರ್ಹಳೆಂದೂ ಜರಿದರೆ ಅವಳೂ ದುಃಖಿಸುವಳು; ಅವಳ ನೈಜಸ್ಥಿತಿಯನ್ನು ಕಂಡವರಂತೂ ಹೆಚ್ಚಾಗಿ ಶೋಕಿಸುವರು. ಆಗಿನ ಪ್ರಾಜ್ಞರೆಂಬುವರು ಅವಳನ್ನು ಗ್ರಾಮ್ಯ ಬಡಹೆಂಗುಸೆಂದು ಜರಿದುದಲ್ಲದೆ, ಮದರಾಸ್ ಬೊಂಬಾಯಿ ಅಧಿಪತ್ಯಗಳ ಸರ್ವವಿದ್ಯಾಶಾಲೆಗಳ ವ್ಯಾಸಂಗ ಶಾಲೆಗಳಲ್ಲಿ, ಅವಳ ಸಹೋದರಿಯರ ಹತ್ತಿರವೂ ಸುಳಿಗೊಳಿಸದೆ ಓಡಿಸಲು ಯತ್ನಿಸಿದರು. ಸುಂದರಳಾಗಿಯೂ ಸುಸಂಸ್ಕೃತಳಾಗಿಯೂ ಸಂಪತ್ಸಮೃದ್ಧಳಾಗಿ ಅನೇಕ ರತ್ನಹಾರಗಳಿಂದ ಜಾಜ್ವಲ್ಯಮಾನಳಾಗಿಯೂ ತನ್ನ ಅಕ್ಕ-ತಂಗಿಯರಾದ ತಮಿಳು-ತೆಲುಗು ಸಹೋದರಿಯರಿಗೆ ಸರ್ವವಿಧದಲ್ಲಿಯೂ ಸಮಾನಳು ಇಲ್ಲವೆ ಮೇಲು ಎಂದು ಹೇಳಿಸಿಕೊಳ್ಳುವಷ್ಟು ಯೋಗ್ಯತೆಯುಳ್ಳವಳಾಗಿಯೂ ಇದ್ದರೂ, ಕನ್ನಡಮಾತೆಗೆ ಉಂಟಾದ ಈ ದುರವಸ್ಥೆಯನ್ನು ನೋಡಿದರೆ, ಅವಳಿಗೂ ಅವಳ ಹಾಲನ್ನು ಕುಡಿದು ಬೆಳೆದ ಅವಳ ಮಕ್ಕಳಿಗೂ ಹೇಗೆ ತಾನೆ ಸಹಿಸಲಾದೀತು? ಹೀಗಿರಲು ಅವಳ ನೈಜಸ್ಥಿತಿಯನ್ನು ಹೊರಪಡಿಸಿ, ಅವಳ ದುರವಸ್ಥೆಯನ್ನು ಮಾಣಿಸುವುದು ಅವಳ ಮಕ್ಕಳಿಗೆ ಕರ್ತವ್ಯವಲ್ಲವೆ?"

ಇತ್ತ ಧಾರವಾಡದ ಕಡೆಗೆ, ಅತ್ತ ಮೈಸೂರಿನಲ್ಲಿ, ಎತ್ತನೋಡಿದತ್ತ ಕನ್ನಡ ನಾಡಿನ ಬೇರೆ ಬೇರೆ ತುಂಡುಗಳಲ್ಲಿ ಇದೇ ದುರವಸ್ಥೆ ನೆಲೆಗೊಂಡುದನ್ನು ಕಣ್ಣಾರೆ ಕಂಡು, ಮನನೊಂದು ತಳಮಳಗೊಂಡು, ಅದರ ಉನ್ನತಿಗಾಗಿ ಅಲ್ಲಲ್ಲಿ ನಡೆಯುವ ಅನೇಕ ಬಗೆಯ ಚಟುವಟಿಕೆಗಳಿಂದ ಸಾಕಷ್ಟು ಪ್ರಗತಿಯಾಗದಿರುವುದನ್ನು ಬಹು ದಿವಸ ನಿರೀಕ್ಷಿಸಿ ಮನಗಂಡು, ಈ ಅಪಯಶಸ್ಸಿನ ಕಾರಣಪರಂಪರೆಯ ಸಂಶೋಧನೆಯಲ್ಲಿ ತಲೆಯನ್ನು ಕೆಡಿಸಿಕೊಂಡು, ಹದಿನೆಂಟನೆಯ ಶತಮಾನದ ಕೊನೆಯಭಾಗದಲ್ಲಿ ದಕ್ಷಿಣಹಿಂದುಸ್ತಾನದಲ್ಲಿ ಉದ್ಭೂತವಾದ ಆಗಂತುಕ ರಾಜಕೀಯ ಕಾರಣಗಳ ಮೂಲಕ ಹತಬಲವಾದ ಹತಪ್ರಜ್ಞವಾದ ಕನ್ನಡ ಜನಾಂಗವು, ವಿಭಕ್ತವಾಗಿ ಪರಚಕ್ರಗಳ ಮಹತ್ವಾಕಾಂಕ್ಷೆಗೆ ಬಲಿಯಾಗಿ ಬಿದ್ದುಕೊಂಡಿರಬೇಕಾದ ಪ್ರಸಂಗಬಂದು, ಎಲ್ಲೆಲ್ಲಿಯೂ ಪರಭಾಷೆಯವರ ಪ್ರಭುತ್ವ, ಅವರದೇ ಆಕ್ರಮಣ, ಅವರ ಭಾಷೆಯ ವರ್ಚಸ್ಸವೇ ಮೇಲು ಎಂಬ ದುರವಸ್ಥೆ ಕನ್ನಡ ಜನಾಂಗಕ್ಕೆ ಉಂಟಾದುದೇ ಕನ್ನಡದ ಅಧಃಪಾತಕ್ಕೆ ಮುಖ್ಯಕಾರಣವೆಂಬ ನಿಃಸಂದಿಗ್ಧ ನಿದಾನವು ಕನ್ನಡನಾಡಹಿರಿಯರ ಚಿಕಿತ್ಸಕಬುದ್ಧಿಗೆ ಗೋಚರವಾಯಿತು. ಇದಕ್ಕೆ ಪ್ರತಿಕ್ರಿಯೆಯಾಗಿ ಕನ್ನಡನಾಡು ಮೊದಲಿನಂತೆ ಒಂದಾಗದೆ ಗತ್ಯಂತರವಿಲ್ಲವೆಂಬ ಅವಿಚ್ಛಿನ್ನ ಸಿದ್ಧಾಂತವು ಅವರ ದೃಷ್ಟಿಗೆ ಸ್ಪಷ್ಟವಾಗಿ ಹೊಳೆಯಿತು. ೧೯೦೩ರಲ್ಲಿಯೆ ಈ ಸಿದ್ಧಾಂತವು ಮೊಟ್ಟಮೊದಲು ಧಾರವಾಡದಲ್ಲಿ ಉದ್ಘೋಷಿತವಾಗಿ ಪ್ರಕಟವಾಯಿತು.

ಅಖಂಡ ಕನ್ನಡನಾಡಿನ ಪ್ರಾಚೀನ ಸಂಸ್ಕೃತಿಯ ಪುನರುಜ್ಜೀವನಕ್ಕೂ ಕನ್ನಡ ಜನಾಂಗದ ಸಾರ್ವತ್ರಿಕ ಉನ್ನತಿಗೂ ಅತ್ಯಂತ ಆವಶ್ಯಕವಾದ ಕರ್ನಾಟಕದ

ಏಕೀಕರಣವಿಚಾರವು ಹೀಗೆ ಉದ್ಘೋಷಿತವಾದದ್ದೊಂದೇ ತಡ; ಅದಕ್ಕೆ ತಾತ್ಕಾಲಿಕ ವಿರೋಧವೂ ಕಟ್ಟಿಟ್ಟದ್ದೇ ಆಯಿತು. ಅದೂ ಧಾರವಾಡದ ಮಹಾರಾಷ್ಟ್ರೀಯರೊಬ್ಬರಿಂದ! ಇಲ್ಲಿಯ ಸರಕಾರೀ ಶಾಲೆಯಲ್ಲಿ ಹೆಡ್‌ಮಾಸ್ತರರಾಗಿದ್ದ ದಿವಂಗತ ಗೋವಿಂದ ದಾಮೋದರ ದೀಕ್ಷಿತರೆಂಬವರು— ಕರ್ನಾಟಕ ವಿದ್ಯಾವರ್ಧಕ ಸಂಘದ ವಾರ್ಷಿಕೋತ್ಸವಕ್ಕಾಗಿ, ವಿಕ್ಟೋರಿಯಾ ಹಾಯಸ್ಕೂಲಿನ ವಿಶಾಲವಾದ ಚಿತ್ರಕಲಾವರ್ಗದಲ್ಲಿ ಆಗ ಧಾರವಾಡದ ಒಸೆಯ ವರ್ಗದ ಸಬ್‌ಜಜ್ಜರಾಗಿದ್ದ ರಾವಬಹಾದ್ದೂರ ಗಂಗೊಳ್ಳಿ ವಾಗಿದೆ. ವರ್‍ಹಾಡ, ಮಧ್ಯಪ್ರಾಂತಗಳು ಬೇರೆಯಾಗಿವೆ. ಇಂದೂರು, ಬಡೋದಾ, ಗ್ವಾಲೇರ, ಮುಂತಾದ ಮರಾಠೀ ಸಂಸ್ಥಾನಗಳು ಎಲ್ಲಿಯೋ ದೂರವಾಗಿವೆ. ಆದರೂ ಮಹಾರಾಷ್ಟ್ರೀಯರು ತಮ್ಮ ಭಾಷೆಯ ಬೆಳವಣಿಗೆಗೆ ಹೆಣಗುತ್ತಾರೆ; ಪ್ರಸಾರಕ್ಕೆ ಪ್ರಯತ್ನಿಸುತ್ತಾರೆ. ಅಂತೆಯೆ ಆ ಪರ ಭಾಷೆ ಉತ್ಕರ್ಷಹೊಂದುತ್ತದೆ." ಎಂದು ಮೊದಲಾಗಿ ಶ್ರೀ. ದೀಕ್ಷಿತರು ತಮ್ಮ ಅನುಭವ ಹೇಳಿದರು. ಆಗ ನಾನೂ ನನ್ನ ಮಿತ್ರರಾಗಿದ್ದ ದಿವಂಗತ ರೊದ್ದ ವ್ಯಾಸರಾಯರೂ ನಮಗೆ ತಿಳಿದಮಟ್ಟಿಗೆ ಶ್ರೀ. ದೀಕ್ಷಿತರಿಗೆ ಸಮರ್ಪಕ ಉತ್ತರಕೊಟ್ಟು ಕರ್ನಾಟಕದ ಏಕೀಕರಣ ವಿಚಾರವನ್ನು ಕೈಕೊಂಡು, ಆ ಕಲ್ಪನೆಗೆ ಮೂರ್ತ ಸ್ವರೂಪವನ್ನು ಕೊಡಲು ತಕ್ಕುದಾದ ಚಳವಳಿಯನ್ನು ಹೂಡುವ ಕೆಚ್ಚೆದೆಯ ಬಂಟರು ತತ್ಕಾಲಕ್ಕೆ ಯಾರೂ ದೊರೆಯಲಿಲ್ಲ. ದಿವಂಗತ ಕರಿಗುದರಿ ನಾರಾಯಣರಾಯರು ಹಾಗು ಹೊನ್ನಾಪುರಮಠ ಗದಿಗೆಯ್ಯನವರು ಇವರಿಬ್ಬರಿಂದ ಮಾತ್ರ ಸಹಾನುಭೂತಿಪರ ಬೆಂಬಲದ ಪ್ರೋತ್ಸಾಹನ ದೊರೆಯುತ್ತಿತ್ತು. ಆದರೆ ಪ್ರತ್ಯಕ್ಷಕೃತಿಗೆ ಕೈಯಿಕ್ಕುವ ಬಿಡುವು ಆ ಕಾಲದ ಪುರಸ್ಕರ್ತರಿಗೆ ದೊರೆಯುವಂತಿರಲಿಲ್ಲವೆಂದು ಹೇಳಬಹುದು. ಮುಂದೆ

ಕರ್ನಾಟಕದ ಒಂದು ಮೂಲೆಯಲ್ಲಿ ಕವಿದ ಕಗ್ಗತ್ತಲೆಯಲ್ಲಿ, ಕನ್ನಡದ ಜ್ಯೋತಿಯನ್ನು ಬೆಳಗಿಸಿದ ಮಹನೀಯರು

ಶ್ರೀ. ವಿಷ್ಣು ಅನಂತ ಮುಸೂರಕರ
ವಕೀಲರು

★

ಅಂದು ಕವಿ ರನ್ನನಿಗೆ ಜನ್ಮವಿತ್ತ ಮುದುವೊಳಲು (ಮುಧೋಳ) ಇಂದು ಪರಭಾಷೆಯ ದೊರೆಯ ಆಡಳಿತದ ಮೂಲಕ—೧೦೦ಕ್ಕೆ೧೦೦ ಕನ್ನಡ ಪ್ರಜರಿದ್ದರೂ— ಕನ್ನಡನುಡಿಗೆ ದೂರವಾಗಿದ್ದಿತು. ಅಲ್ಲಿ ಈ ಮಹನೀಯರಿಬ್ಬರೂ ಸೇರಿ ಕಾರ್ಯಮಾಡಿ, ಕನ್ನಡದ ನಂದಾದೀಪಕ್ಕೆ ಮತ್ತೆ ಎಡೆಮಾಡಿಕೊಟ್ಟರು.

★



ಶ್ರೀ. ಸೊನ್ನದ ರಾಮಣ್ಣನವರು
ಲೋಕಪಕ್ಷದ ಪ್ರತಿನಿಧಿಗಳು

...ಅವರ ಅಧ್ಯಕ್ಷತೆಯಲ್ಲಿ ಕೂಡಿದ ಧಾರವಾಡದ ನಾಗರಿಕರ ಸಾರ್ವಜನಿಕ ಸಭೆಯಲ್ಲಿ, ಮಂಗಳೂರಿನ ಶ್ರೀ. ಬೆನಗಲ್ಲು ರಾಮರಾವ ಎಂ. ಎ., ಎಲ್‌ಎಲ್. ಬಿ. ಅವರು ತಮ್ಮ ನಾಲ್ಕೂನಿಟ್ಟಿನ ಅನುಭವದ ಮನಗಂಡು ಸಾರಿಹೇಳಿದ ಈ ಸಿದ್ಧಾಂತವನ್ನು— ವಿರೋಧಿಸಿ, ಕನ್ನಡದಲ್ಲಿಯೇ ಹೀಗೆ ಭಾಷಣ ಮಾಡಿದರು. ಕನ್ನಡಿಗರಲ್ಲಿ ಕನ್ನಡವನ್ನು ಬೆಳೆಯಿಸುವ ಬುದ್ಧಿಯಿಲ್ಲ; ಹವ್ಯಾಸವಿಲ್ಲ; ಕರ್ತೃತ್ವವಿಲ್ಲ. ಅದರಿಂದ ಕನ್ನಡದ ಗತಿ ಹೀಗಾಗಿದೆ. ರಾಜಕೀಯ ವಿಭಕ್ತೀಕರಣವು ಇದಕ್ಕೆ ಕಾರಣವಲ್ಲ. ಮಹಾರಾಷ್ಟ್ರವೂ ವಿಭಕ್ತವಾಗಿದೆ ಅವರ ಬಾಯಿಮುಚ್ಚಿ, ಶ್ರೀ. ರಾಮರಾಯರ ಸಿದ್ಧಾಂತಕ್ಕೆ ಬೆಂಬಲಕೊಡಲು ಪ್ರಯತ್ನಿಸಿದೆವು. ಹೀಗೆ ಕನ್ನಡಿಗರ ಉತ್ಕರ್ಷದ ದಾರಿಯಲ್ಲಿ ಬುದ್ಧಿಭೇದದ ಬಂಡೆಗಲ್ಲುಗಳನ್ನೊಡ್ಡಿ ಪ್ರತಿಬಂಧ ಮಾಡುವ ಪ್ರಯತ್ನವು, ಮೊದಲಿನಿಂದಲೂ ಮಹಾರಾಷ್ಟ್ರೀಯ ಮನೋವೃತ್ತಿಯ ನಿಸರ್ಗಸಿದ್ಧ ಧರ್ಮವೇ ಆಗಿರುವುದೆಂದು ನಿಷ್ಕರ್ಷೆ ಮಾಡುವುದಾದರೆ ತಪ್ಪಾಗಲಾರದಷ್ಟೇ?

ಧಾರವಾಡದ ಆಗಿನ ಹೊಸ ಪೀಳಿಗೆಯ ವಿಚಾರಶಕ್ತಿಗೆ ತೀವ್ರತರಗತಿಯ ಚಾಲನೆ ಕೊಟ್ಟು ಕೋಲಾಹಲವನ್ನೇ ಎಬ್ಬಿಸಿದ ಮೂರು ನಾಲ್ಕು ವರ್ಷಗಳ ವರೆಗೆ ಏಕೀಕರಣದ ವಿಚಾರವು ನೆನೆಗುದಿಗೆ ಬಿದ್ದಂತಾಯಿತು. ೧೮೭೭ ರ ದಿಲ್ಲಿಯ ದರಬಾರದ ಕಾಲಕ್ಕೆ ಹಿಂದೀ ರಾಷ್ಟ್ರದ ಸಂಘಟನೆಯ ಕಲ್ಪನೆಯು ಮೊಟ್ಟಮೊದಲು ಹೊಳೆದರೂ, ಮುಂದೆ ಎಂಟು ವರ್ಷಗಳ ವರೆಗೆ ದೇಶದ ಧುರೀಣರು ಪ್ರಯತ್ನ ಮಾಡಿದನಂತರ ೧೮೮೫ ರಲ್ಲಿ ರಾಷ್ಟ್ರೀಯ ಮಹಾಸಭೆಯ ಜನ್ಮವಾಯಿತು. ಹೀಗೆ ಯಾವುದಾದರೂ ಮಹತ್ಕಾರ್ಯವು ಕಲ್ಪನಾಸೃಷ್ಟಿಯಿಂದ ಬೆಳೆಯುತ್ತ ಬಂದು ರೂಪುಗೊಳ್ಳುವುದಕ್ಕೆ ಒಂದು ಕಾಲಾವಧಿಯು ಆಗತ್ಯವಾಗಿ ಬೇಕಾಗುತ್ತದೆ.

ಪತ್ಯವು ನೆಲೆಗೊಂಡನಂತರದ ಶಾಂತಿಮಯ ಆಡಳಿತೆಯಲ್ಲಿಯೂ ಕನ್ನಡ ಸಂಸ್ಕೃತಿಯ ಮೂಲಾಧಾರವಾದ ಕನ್ನಡ ವಾಙ್ಮಯದ ವಿಷಯವಾಗಿ ಇಷ್ಟೊಂದು ಅಜ್ಞಾನವು ಮುಸುಕಿಕೊಂಡಿದ್ದುದ್ದು ಆಶ್ಚರ್ಯದ ಮಾತಾಗಲಾರದು. ಆದರೆ ವಿಜಯನಗರದ ಪರಂಪರೆಯನ್ನೇ ಎತ್ತಿಕೊಂಡು ಆ ಕನ್ನಡ ಸಾಮ್ರಾಜ್ಯದ ಅವಶೇಷವೆಂದೇ ಇಂದಿಗೂ ಹೆಮ್ಮೆಯಿಂದ ಹೇಳಿಕೊಳ್ಳುತ್ತ ಬಂದಿರುವ, ಇಂದಿನ ಕನ್ನಡಿಗರಿಗೆಲ್ಲ ತಮ್ಮ ಪ್ರಾಚೀನ ವೈಭವದ ಕುರುಹೆಂದು ಅಭಿಮಾನಪಾತ್ರವಾಗಿರುವ ಮೈಸೂರು ಸೀಮೆಯಲ್ಲಿಯೂ ಕನ್ನಡಕ್ಕೆ ಇದೇ ದುರವಸ್ಥೆಯೊದಗಿದ್ದಿತೆಂಬುದು ಕೇವಲ ದೈವದುರ್ವಿಲಾಸವೆಂದೇ ಹೇಳಬಹುದಷ್ಟೆ! ಬೆಂಗಳೂರಿನಲ್ಲಿ ೧೮೯೨ರಿಂದ ಪ್ರಸಿದ್ಧವಾಗುತ್ತಿದ್ದ **“ಕರ್ನಾಟಕ ಕಾವ್ಯಮಂಜರಿ”** ಎಂಬ ಮಾಸಪತ್ರಿಕೆಗೂ ಮುಂದೆ ಅದು ನಿಂತು ಹೋದನಂತರ ೧೮೯೭ರಿಂದ “ಕರ್ನಾಟಕ **ಕಾವ್ಯ ಕಲಾನಿಧಿ”** ಎಂಬ ಮಾಸಪತ್ರಿಕೆಗೂ ಸಂಪಾದಕರಾಗಿದ್ದ **ಕೀರ್ತಿಶೇಷ ಶ್ರೀಮಾನ್ ಎ. ರಾಮಾನುಜಯ್ಯಂಗಾರ್ಯರು** ೧೯೨೮ರ **ಪ್ರಬುದ್ಧ ಕರ್ನಾಟಕದ** ದೀಪಾವಳಿಯ ಸಂಚಿಕೆಯಲ್ಲಿ ಈ ವಿಷಯವಾಗಿ ಹೀಗೆ ಬರೆದಿದ್ದಾರೆ: —

“ಸುಮಾರು ೩೫–೪೦ ವರ್ಷಗಳ ಹಿಂದೆ ಕನ್ನಡ ಭಾಷಾಮಾತೆಗೆ ಪ್ರಾಪ್ತವಾದ ದುರವಸ್ಥೆಯನ್ನು ನೆನಸಿಕೊಂಡರೆ ಈಗಲೂ ಎದೆ ಜುಮ್ಮೆನ್ನುತ್ತದೆ. ಷಟ್ಪದಿಗಳಲ್ಲಿ **ಭಾರತ, ರಾಮಾಯಣ, ಜೈಮಿನಿ,** ಚಂಪೂ ಕಾವ್ಯಗಳಲ್ಲಿ **ಶಬರಶಂಕರ ವಿಳಾಸ, ರಾಜಶೇಖರ** ಇನ್ನೂ ಒಂದೆರಡು ಗ್ರಂಥಗಳು ವಿನಾ ಬೇರೆ ಯಾವ ಉದ್ಗ್ರಂಥಗಳ ಹೆಸರನ್ನೂ ಯಾರೂ ಕೇಳಿರಲಿಲ್ಲ. ಇವೇ ಕನ್ನಡದಲ್ಲಿರುವ ಉದ್ಗ್ರಂಥಗಳೆಂದು ತಿಳಿದಿದ್ದರು. ಆ ಕಾಲದಲ್ಲಿ ಕನ್ನಡ ಭಾಷೆಯ ಔತ್ಕೃಷ್ಟ್ಯವನ್ನೂ ವಾಙ್ಮಯದ ಸಮೃದ್ಧಿಯನ್ನೂ ತಿಳಿಸಲು ಯಾವ ಸೂಚನೆಯೂ ಇರುತ್ತಿರಲಿಲ್ಲ. ಆಗಿನ ಪಂಡಿತರು ಅಸಂಸ್ಕೃತವಾದ ಗ್ರಾಮ್ಯಭಾಷೆಗಳಲ್ಲಿ ಕನ್ನಡವೂ ಒಂದೆಂದು ಯೋಚಿಸುತ್ತಿದ್ದರು. ತೇಜಸ್ವಿಗಳಾದ ನಕ್ಷತ್ರಗಳು ಪ್ರಕಾಶಿಸದೆ ಇರುವ ಅಂಧಕಾರದಲ್ಲಿ ಎಲ್ಲವೂ ಅಂಧಕಾರವೇ ಎಂದು ತಿಳಿಯುವುದು ಸಹಜ. ಕನ್ನಡ ಮಾತೆಯ ಮೆಯ್ಸಿರಿಯೂ ಆಭರಣಕಾಂತಿಯೂ ಜನರ ವಿಸ್ಮೃತಿಯೆಂಬ ಆವರಣದಲ್ಲಿ ಮುಚ್ಚಲ್ಪಟ್ಟಿರಲು, ಹೇಗೆ ತಾನೆ ಅವಳು ಪ್ರಾಜ್ಞರ ಕಣ್ಣನ್ನು ತೆರೆಯಿಸಿ ತನ್ನ ಕಡೆಗೆ ಅವರನ್ನು ತಿರುಗಿಸಿ ತನ್ನನ್ನು ಆಶ್ರಯಿಸುವಂತೆ ಮಾಡುವಳು? ಆ ಕಾಲದ ಪ್ರಾಜ್ಞರು, ಯಾವ ಕಾಂತಿಯೂ ಸಂಸ್ಕಾರವೂ ಅಲಂಕಾರವೂ ಇಲ್ಲದೆ ತುಚ್ಛವಾದ ಹರಕು ಬಟ್ಟೆಗಳನ್ನುಟ್ಟು, ಮೂಳೆಯ ನಗಗಳನ್ನು ತೊಟ್ಟು, ಅಲ್ಲಲ್ಲಿ ಕೋಣೆಗಳಲ್ಲಿ ಅವಿತುಕೊಂಡು, ಕಂಡೂ ಕಾಣದಂತೆ ಅಲೆದಾಡುತ್ತಿರುವ ಬಡ ಹೆಂಗುಸಿನಂತಿರುವ ಕನ್ನಡ ಮಾತೆಯನ್ನು ನೋಡಿ, ಅವಳ ಜೊತೆಯಲ್ಲಿರಲು ತಮಗೆ ಹೇಸಿಗೆಯುಂಟಾಗುವುದೆಂದು ನಂಬಿ, ಅವಳು ಹತ್ತಿರ ಬಂದರೆ ಹೀಯಾಳಿಸಿ ಜುಗುಪ್ಸೆಯನ್ನು ತೋರಿಸುತ್ತ ದೂರಕ್ಕೆ ಅಟ್ಟುತ್ತಾ ಬಂದರು. ಕುರೂಪಿಯನ್ನು ಕುರೂಪಿಯೆಂದರೆ ಅವಳೂ ದುಃಖಿಸುವುದಿಲ್ಲ; ಕೇಳಿದವರೂ ದುಃಖಿಸುವುದಿಲ್ಲ; ಸುರೂಪಿಯನ್ನೂ ಸಂಪತ್ಸಮೃದ್ಧಳನ್ನೂ ಕುರೂಪಿಯೆಂದೂ ಸಹವಾಸಕ್ಕೆ ಅನರ್ಹಳೆಂದೂ ಜರಿದರೆ ಅವಳೂ ದುಃಖಿಸುವಳು; ಅವಳ ನೈಜಸ್ಥಿತಿಯನ್ನು ಕಂಡವರಂತೂ ಹೆಚ್ಚಾಗಿ ಶೋಕಿಸುವರು. ಆಗಿನ ಪ್ರಾಜ್ಞರೆಂಬವರು ಅವಳನ್ನು ಗ್ರಾಮ್ಯ ಬಡ ಹೆಂಗುಸೆಂದು ಜರಿದುದಲ್ಲದೆ, **ಮದರಾಸ್ ಬೊಂಬಾಯಿ** ಅಧಿಪತ್ಯಗಳ ಸರ್ವವಿದ್ಯಾಶಾಲೆಗಳ ವ್ಯಾಸಂಗ ಶಾಲೆಗಳಲ್ಲಿ, ಅವಳ ಸಹೋದರಿಯರ ಹತ್ತಿರವೂ ನಿಲ್ಲಗೊಳಿಸದೆ ಓಡಿಸಲು ಯತ್ನಿಸಿದರು. ಸುಂದರಳಾಗಿಯೂ ಸುಸಂಸ್ಕೃತಳಾಗಿಯೂ ಸಂಪತ್ಸಮೃದ್ಧಳಾಗಿ ಅನೇಕ ರತ್ನಹಾರಗಳಿಂದ ಜಾಜ್ವಲ್ಯಮಾನಳಾಗಿಯೂ ತನ್ನ ಅಕ್ಕ-ತಂಗಿಯರಾದ **ತಮಿಳು-ತೆಲುಗು** ಸಹೋದರಿಯರಿಗೆ ಸರ್ವವಿಧದಲ್ಲಿಯೂ ಸಮಾನಳು ಇಲ್ಲವೆ ಮೇಲು ಎಂದು ಹೇಳಿಸಿಕೊಳ್ಳುವಷ್ಟು ಯೋಗ್ಯತೆಯುಳ್ಳವಳಾಗಿಯೂ ಇದ್ದರೂ, ಕನ್ನಡಮಾತೆಗೆ ಉಂಟಾದ ಈ ದುರವಸ್ಥೆಯನ್ನು ನೋಡಿದರೆ, ಅವಳಿಗೂ ಅವಳ ಹಾಲನ್ನು ಕುಡಿದು ಬೆಳೆದ ಅವಳ ಮಕ್ಕಳಿಗೂ ಹೇಗೆ ತಾನೆ ಸಹಿಸಲಾದೀತು? ಹೀಗಿರಲು ಅವಳ ನೈಜಸ್ಥಿತಿಯನ್ನು ಹೊರಪಡಿಸಿ, ಅವಳ ದುರವಸ್ಥೆಯನ್ನು ಮಾಣಿಸುವುದು ಅವಳ ಮಕ್ಕಳಿಗೆ ಕರ್ತವ್ಯವಲ್ಲವೆ?”

ಇತ್ತ ಧಾರವಾಡದ ಕಡೆಗೆ, ಅತ್ತ ಮೈಸೂರಿನಲ್ಲಿ, ಎತ್ತನೋಡಿದತ್ತ ಕನ್ನಡನಾಡಿನ ಬೇರೆ ಬೇರೆ ತುಂಡುಗಳಲ್ಲಿ ಇದೇ ದುರವಸ್ಥೆ ನೆಲೆಗೊಂಡುದನ್ನು ಕಣ್ಣಾರೆ ಕಂಡು, ಮನಸಾರೆ ತಳಮಳಗೊಂಡು, ಅದರ ಉನ್ನತಿಗಾಗಿ ಅಲ್ಲಲ್ಲಿ ನಡೆಯುವ ಅನೇಕ ಬಗೆಯ ಚಟುವಟಿಕೆಗಳಿಂದ ಸಾಕಷ್ಟು ಪ್ರಗತಿಯಾಗದಿರುವುದನ್ನು ಬಹು ದಿವಸ ನಿರೀಕ್ಷಿಸಿ ಮನಗಂಡು, ಈ ಅಪಯಶಸ್ಸಿನ ಕಾರಣಪರಂಪರೆಯ ಸಂಶೋಧನೆಯಲ್ಲಿ ತಲೆಯನ್ನು ಕೆಡಿಸಿಕೊಂಡು, ಹದಿನೆಂಟನೆಯ ಶತಮಾನದ ಕೊನೆಯಭಾಗದಲ್ಲಿ ದಕ್ಷಿಣಹಿಂದುಸ್ಥಾನದಲ್ಲಿ ಉದ್ಭೂತವಾದ ಆಗಂತುಕ ರಾಜಕೀಯ ಕಾರಣಗಳ ಮೂಲಕ ಹತಬಲವಾದ ಹತಪ್ರಜ್ಞವಾದ ಕನ್ನಡ ಜನಾಂಗವು, ವಿಭಕ್ತವಾಗಿ ಪರಚಕ್ರಗಳ ಮಹತ್ವಾಕಾಂಕ್ಷೆಗೆ ಬಲಿಯಾಗಿ ಬಿದ್ದುಕೊಂಡಿರಬೇಕಾದ ಪ್ರಸಂಗಬಂದು, ಎಲ್ಲೆಲ್ಲಿಯೂ ಪರಭಾಷೆಯವರ ಪ್ರಭುತ್ವ, ಅವರದೇ ಆಕ್ರಮಣ, ಅವರ ಭಾಷೆಯ ವರ್ಚಸ್ಸವೇ ಮೇಲು ಎಂಬ ದುರವಸ್ಥೆ ಕನ್ನಡ ಜನಾಂಗಕ್ಕೆ ಉಂಟಾದುದೇ ಕನ್ನಡದ ಅಧಃಪಾತಕ್ಕೆ ಮುಖ್ಯಕಾರಣವೆಂಬ ನಿಃಸಂದಿಗ್ಧ ನಿದಾನವು ಕನ್ನಡನಾಡಹಿರಿಯರ ಚಿಕಿತ್ಸಕ ಬುದ್ಧಿಗೆ ಗೋಚರವಾಯಿತು. ಇದಕ್ಕೆ ಪ್ರತಿಕ್ರಿಯೆಯಾಗಿ ಕನ್ನಡನಾಡು ಮೊದಲಿನಂತೆ ಒಂದಾಗದೆ ಗತ್ಯಂತರವಿಲ್ಲವೆಂಬ ಅವಿಚ್ಛಿನ್ನ ಸಿದ್ಧಾಂತವು ಅವರ ದೃಷ್ಟಿಗೆ ಸ್ಪಷ್ಟವಾಗಿ ಹೊಳೆಯಿತು. ೧೯೦೩ರಲ್ಲಿಯೆ ಈ ಸಿದ್ಧಾಂತವು ಮೊಟ್ಟಮೊದಲು ಧಾರವಾಡದಲ್ಲಿ ಉದ್ಘೋಷಿತವಾಗಿ ಪ್ರಕಟವಾಯಿತು.

ಅಖಂಡ ಕನ್ನಡನಾಡಿನ ಪ್ರಾಚೀನ ಸಂಸ್ಕೃತಿಯ ಪುನರುಜ್ಜೀವನಕ್ಕೂ ಕನ್ನಡ ಜನಾಂಗದ ಸಾರ್ವತ್ರಿಕ ಉನ್ನತಿಗೂ ಅತ್ಯಂತ ಆವಶ್ಯಕವಾದ ಕರ್ನಾಟಕದ

ಏಕೀಕರಣವಿಚಾರವು ಹೀಗೆ ಉದ್ಭೋ‌ಷಿತವಾದದ್ದೊಂದೇ ತಡ; ಅದಕ್ಕೆ ತಾತ್ಕಾಲಿಕ ವಿರೋಧವೂ ಕಟ್ಟಿಟ್ಟದ್ದೇ ಆಯಿತು. ಅದೂ ಧಾರವಾಡದ ಮಹಾರಾಷ್ಟ್ರೀಯರೊಬ್ಬರಿಂದ! ಇಲ್ಲಿಯ ಮರಾಠೀ ಶಾಲೆಯಲ್ಲಿ ಹೆಡ್‌ಮಾಸ್ತರರಾಗಿದ್ದ **ದಿವಂಗತ ಗೋವಿಂದ ದಾಮೋದರ ದೀಕ್ಷಿತರೆಂಬವರು— ಕರ್ನಾಟಕ ವಿದ್ಯಾವರ್ಧಕ ಸಂಘದ** ವಾರ್ಷಿಕೋತ್ಸವಕ್ಕಾಗಿ, ವಿಕ್ಟೋರಿಯಾ ಹಾಯಸ್ಕೂಲಿನ ವಿಶಾಲವಾದ ಚಿತ್ರಕಲಾವರ್ಗದಲ್ಲಿ ಆಗ ಧಾರವಾಡದ ೧ನೆಯ ವರ್ಗದ ಸಬ್‌ಜಜ್ಜರಾಗಿದ್ದ **ರಾವಬಹಾದ್ದೂರ ಗಂಗೊಳ್ಳಿ**ಯವರ ಅಧ್ಯಕ್ಷತೆಯಲ್ಲಿ ಕೂಡಿದ ಧಾರವಾಡದ ನಾಗರಿಕರ ಸಾರ್ವಜನಿಕ ಸಭೆಯಲ್ಲಿ, ಮಂಗಳೂರಿನ **ಶ್ರೀ. ಬೆನಗಲ್ಲು ರಾಮರಾವ** ಎಂ. ಎ., ಎಲೆಲ್. ಬಿ. ಯವರು ತಮ್ಮ ನಾಲ್ಕೂನಿಟ್ಟಿನ ಅನುಭವದಿಂದ ಮನಗಂಡು ಸಾರಿಹೇಳಿದ ಈ ಸಿದ್ಧಾಂತವನ್ನು— ವಿರೋಧಿಸಿ, ಕನ್ನಡದಲ್ಲಿಯೇ ಹೀಗೆ ಭಾಷಣ ಮಾಡಿದರು. "ಕನ್ನಡಿಗರಲ್ಲಿ ಕನ್ನಡವನ್ನು ಬೆಳೆಯಿಸುವ ಬುದ್ಧಿಯಿಲ್ಲ; ಹವ್ಯಾಸವಿಲ್ಲ; ಕರ್ತೃತ್ವವಿಲ್ಲ. ಇದುವರಿಂದ ಕನ್ನಡದ ಗತಿ ಹೀಗಾಗಿದೆ. ರಾಜಕೀಯ ವಿಭಕ್ತೀಕರಣವು ಇದಕ್ಕೆ ಕಾರಣವಲ್ಲ. ಮಹಾರಾಷ್ಟ್ರವೂ ವಿಭಕ್ತವಾಗಿದೆ. ವರ್‍ಹಾಡ, ಮಧ್ಯಪ್ರಾಂತಗಳು ಬೇರೆಯಾಗಿವೆ. ಇಂದೂರು, ಬಡೋದಾ, ಗ್ವಾಲೇರ, ಮುಂತಾದ ಮರಾಠೀ ಸಂಸ್ಥಾನಗಳು ಎಲ್ಲಿಯೋ ದೂರವಾಗಿವೆ. ಆದರೂ ಮಹಾರಾಷ್ಟ್ರೀಯರು ತಮ್ಮ ಭಾಷೆಯ ಬೆಳವಣಿಗೆಗೆ ಹೆಣಗುತ್ತಾರೆ; ಪ್ರಸಾರಕ್ಕೆ ಪ್ರಯತ್ನಿಸುತ್ತಾರೆ. ಅಂತೆಯೆ ಅವರ ಭಾಷೆ ಉತ್ಕರ್ಷಹೊಂದುತ್ತದೆ." ಎಂದು ಮೊದಲಾಗಿ **ಶ್ರೀ. ದೀಕ್ಷಿತರು** ತಮ್ಮ ಅನುಭವ ಹೇಳಿದರು. ಆಗ ನಾನೂ ನನ್ನ ಮಿತ್ರರಾಗಿದ್ದ **ದಿವಂಗತ ರೊದ್ದ ವ್ಯಾಸರಾಯರೂ** ಸಮಗೆ ತಿಳಿದಮಟ್ಟಿಗೆ **ಶ್ರೀ. ದೀಕ್ಷಿತರಿಗೆ** ಸಮರ್ಪಕ ಉತ್ತರಕೊಟ್ಟು ಅವರ ಬಾಯಿಮುಚ್ಚಿ, **ಶ್ರೀ. ರಾಮರಾಯರ** ಸಿದ್ಧಾಂತಕ್ಕೆ ಬೆಂಬಲಕೊಡಲು ಪ್ರಯತ್ನಿಸಿದೆವು. ಹೀಗೆ ಕನ್ನಡಿಗರ ಉತ್ಕರ್ಷದ ದಾರಿಯಲ್ಲಿ ಬುದ್ಧಿಭೇದದ ಬಂಡೆಗಲ್ಲುಗಳನ್ನೊಡ್ಡಿ ಪ್ರತಿಬಂಧ ಮಾಡುವ ಪ್ರಯತ್ನವು, ಮೊದಲಿನಿಂದಲೂ ಮಹಾರಾಷ್ಟ್ರೀಯ ಮನೋವೃತ್ತಿಯ ನಿಸರ್ಗಸಿದ್ಧ ಧರ್ಮವೇ ಆಗಿರುವುದೆಂದು ನಿಷ್ಕರ್ಷೆ ಮಾಡುವುದಾದರೆ ತಪ್ಪಾಗಲಾರದಷ್ಟೇ?

ಧಾರವಾಡದ ಆಗಿನ ಹೊಸ ಪೀಳಿಗೆಯ ವಿಚಾರಶಕ್ತಿಗೆ ತೀವ್ರತರಗತಿಯ ಚಾಲನೆ ಕೊಟ್ಟು ಕೋಲಾಹಲವನ್ನೇ ಎಬ್ಬಿಸಿದ **ಕರ್ನಾಟಕದ ಏಕೀಕರಣ ವಿಚಾರವನ್ನು** ಕೈಕೊಂಡು, ಆ ಕಲ್ಪನೆಗೆ ಮೂರ್ತಸ್ವರೂಪವನ್ನು ಕೊಡಲು ತಕ್ಕುದಾದ ಚಳವಳಿಯನ್ನು ಹೂಡುವ ಕೆಚ್ಚೆದೆಯ ಬಂಟರು ತತ್ಕಾಲಕ್ಕೆ ಯಾರೂ ದೊರೆಯಲಿಲ್ಲ. **ದಿವಂಗತ ಕರಿಗುದರಿ ನಾರಾಯಣರಾಯರು** ಹಾಗು **ಹೊನ್ನಾಪುರಮಠ ಗದಿಗೆಯ್ಯನವರು** ಇವರಿಬ್ಬರಿಂದ ಮಾತ್ರ ಸಹಾನುಭೂತಿಪರ ಬೆಂಬಲದ ಪ್ರೋತ್ಸಾಹನ ದೊರೆಯುತ್ತಿತ್ತು. ಆದರೆ ಪ್ರತ್ಯಕ್ಷಕೃತಿಗೆ ಕೈಯಿಕ್ಕುವ ಬಿಡುವು ಆ ಕಾಲದ ಪುರಸ್ಕರ್ತರಿಗೆ ದೊರೆಯುವಂತಿರಲಿಲ್ಲವೆಂದು ಹೇಳಬಹುದು. ಮುಂದೆ ಮೂರು ನಾಲ್ಕು ವರ್ಷಗಳ ವರೆಗೆ ಏಕೀಕರಣದ ವಿಚಾರವು ನೆನೆಗುದಿಗೆ ಬಿದ್ದಂತಾಯಿತು. ೧೯೦೨ರ ದಿಲ್ಲಿಯ ದರಬಾರದ ಕಾಲಕ್ಕೆ ಹಿಂದೀ ರಾಷ್ಟ್ರದ ಸಂಘಟನೆಯ ಕಲ್ಪನೆಯು ಮೊಟ್ಟಮೊದಲು ಹೊಳೆದರೂ, ಮುಂದೆ ಎಂಟು ವರ್ಷಗಳ ವರೆಗೆ ದೇಶದ ಧುರೀಣರು ಪ್ರಯತ್ನ ಮಾಡಿದನಂತರ ೧೯೧೦ರಲ್ಲಿ ರಾಷ್ಟ್ರೀಯ ಮಹಾಸಭೆಯು ಜನ್ಮವಾಯಿತು. ಹೀಗೆ ಯಾವುದಾದರೂ ಮಹತ್ಕಾರ್ಯವು ಕಲ್ಪನಾಸೃಷ್ಟಿಯಿಂದ ಬೆಳೆಯುತ್ತ ಬಂದು ರೂಪುಗೊಳ್ಳುವುದಕ್ಕೆ ಒಂದು ಕಾಲಾವಧಿಯು ಆಗತ್ಯವಾಗಿ ಬೇಕಾಗುತ್ತದೆ.

ಕರ್ನಾಟಕದ ಒಂದು ಮೂಲೆಯಲ್ಲಿ ಕವಿದ ಕಗ್ಗತ್ತಲೆಯಲ್ಲಿ, ಕನ್ನಡದ ಜ್ಯೋತಿಯನ್ನು ಬೆಳಗಿಸಿದ ಮಹನೀಯರು



ಶ್ರೀ. ವಿಷ್ಣು ಅನಂತ ಮುಸೂರಕರ
ವಕೀಲರು

★

ಅಂದು ಕವಿ ರನ್ನನಿಗೆ ಜನ್ಮವಿತ್ತ ಮುದುವೊಳಲು (ಮುಧೋಳ) ಇಂದು ಪರಭಾಷೆಯ ದೊರೆಯ ಆಡಳಿತದ ಮೂಲಕ— ೧೦೦ಕ್ಕೆ೧೦೦ ಕನ್ನಡ ಪ್ರಜರಿದ್ದರೂ— ಕನ್ನಡನುಡಿಗೆ ದೂರವಾಗಿದ್ದಿತು. ಅಲ್ಲಿ ಈ ಮಹನೀಯರಿಬ್ಬರೂ ಸೇರಿ ಕಾರ್ಯಮಾಡಿ, ಕನ್ನಡದ ನಂದಾದೀಪಕ್ಕೆ ಮತ್ತೆ ಎಡೆಮಾಡಿಕೊಟ್ಟರು.

★



ಶ್ರೀ. ಸೊನ್ನದ ರಾಮಣ್ಣನವರು
ಲೋಕಪಕ್ಷದ ಪ್ರತಿನಿಧಿಗಳು

ಕರ್ನಾಟಕದ ಏಕೀಕರಣದಂತಹ ಮಹತ್ ಪ್ರಯಾಸದ ದುರ್ಘಟಕಾರ್ಯದ ದಾರಿಯಲ್ಲಿಯ ಎಡರು-ತೊಡರುಗಳು ಅಷ್ಟಿಷ್ಟಿರಲಿಲ್ಲ. ಅವುಗಳನ್ನೆಲ್ಲ ಕೂಲಂಕಷವಾಗಿ ಚರ್ಚಿಸಿ, ವಿಚಾರಮಾಡಿ, ವಿಮರ್ಶಿಸಿ, ಆ ಕಾಲದ ನಾಲ್ಕಾರು ಜನ ಕನ್ನಡ ಯುವಕರ ಸಂಘಟನೆಗೈದು, ಹಿರಿಯರ ಬೆಂಬಲ ಹೊಂದಿ, ಏಕೀಕರಣದ ವಿಚಾರಕ್ಕೆ ಯಾರಿಂದಲೂ ವಿರೋಧವಾಗಬಾರದಂತಹ, ಸರ್ವಜನ ಸಮ್ಮತವಾಗುವಂತಹ ಮಾರ್ಗವನ್ನು ಹುಡುಕಿ ತೆಗೆಯಬೇಕಾಗಿದ್ದಿತು. ಈ ಶ್ರೇಯಸ್ಸು ಆಗಿನ ಕಾಲದ ತರುಣ ಪದವೀಧರರೊಳಗೆ ದೇಶಸೇವೆಯ ತೀವ್ರಭಾವನೆಯಿಂದ ಉತ್ಕಂಠಿತರಾಗಿ ಮುಂದುವರಿಯುವ ಬುದ್ಧಿಯೂ ಶಕ್ತಿಯೂ ಸ್ವಂತ ಪರಿಸ್ಥಿತಿಯೂ ಅನುಕೂಲವಾಗಿದ್ದುದರಿಂದ ಒಳ್ಳೇ ಯೋಗ್ಯರೂ ಸಮರ್ಥರೂ ಕರ್ತೃತ್ವಶಾಲಿಗಳೂ ಆದ ಶ್ರೀಮಾನ್ ಆಲೂರ ವೆಂಕಟರಾಯರಿಗೆ ವಹಿಸಲಾಗಿಟ್ಟಂತಾಯಿತು. ಅವರು ಎಲೆಲ್. ಬಿ. ಪದವೀಧರರಾಗಿ, ವಕೀಲಿಯ ವ್ಯವಸಾಯಕ್ಕೆ ಧಾರವಾಡದಲ್ಲಿ ಬಂದು ನಿಂತಕೂಡಲೆ ಇದೇ ವಿಚಾರವನ್ನು ಮುಖ್ಯವಾಗಿ ಕಣ್ಣ ಮುಂದಿಟ್ಟುಕೊಂಡು ಪ್ರಯತ್ನಮಾಡಹತ್ತಿದರು. ಅದರ ಫಲವಾಗಿಯೇ ೧೯೦೭ರ ಕರ್ನಾಟಕ ವಿದ್ಯಾವರ್ಧಕ ಸಂಘದ ವಾರ್ಷಿಕೋತ್ಸವದ ಜೊತೆಯಲ್ಲಿಯೇ ಅಖಿಲ ಕರ್ನಾಟಕದ ಗ್ರಂಥಕಾರರ ಸಮ್ಮೇಲನವನ್ನು, ಧಾರವಾಡದಲ್ಲಿ ಮೈಸೂರಿನ ಶ್ರೀಮಾನ್ ಎಸ್. ಜಿ. ನರಸಿಂಹಾಚಾರ್ಯ ಎಂ. ಎ. ಅವರ ಅಧ್ಯಕ್ಷತೆಯಲ್ಲಿ ಕೂಡಿಸಲಾಯಿತು. ಮರುವರುಷವೂ ಈ ಸಮ್ಮೇಲನವು ಧಾರವಾಡದಲ್ಲಿಯೆ ನಡೆಯಿತು. ಅಖಿಲ ಕರ್ನಾಟಕದ ಕಲ್ಪನೆಯು ಎಲ್ಲೆಲ್ಲಿಯೂ ಉಂಟಾಗದಿರುವ ಆ ಕಾಲದಲ್ಲಿ, ಈ ಸಮ್ಮೇಲನಗಳಿಗೆ ಸಾಕಷ್ಟು ಪ್ರಾತಿನಿಧ್ಯವು ದೊರೆಯಲು ಅವಕಾಶವಾಗದಿದ್ದರೂ, ಮೊದಲಿನ ಉಪಕ್ರಮಗಳೆಂದು ಇವುಗಳ ಮಹತ್ವವು ಎಂದಿಗೂ ಕಡಿಮೆಯಾಗಲಾರದು. ಇವುಗಳಲ್ಲಿ ಎದ್ದು ತೋರುತ್ತಿದ್ದ ಅಖಿಲ ಕನ್ನಡನಾಡಿನ ಪ್ರಾತಿನಿಧ್ಯದ ಕೊರತೆಯನ್ನು ಹೋಗಲಾಡಿಸುವ ಉದ್ದೇಶದಿಂದಲೇ ಶ್ರೀಮಾನ್ ಆಲೂರ ವೆಂಕಟರಾಯರು, ಮೈಸೂರ ಸರಕಾರದ ಶಿಕ್ಷಣ ಖಾತೆಯವರೊಂದಿಗೆ ಸಂಧಾನ ಮಾಡಿ, ಅಲ್ಲಿಯ ಕನ್ನಡ ಅಧಿಕಾರಿಗಳೊಂದಿಗೆ ಮನಸಾರೆ ಚರ್ಚೆಮಾಡಿ, ನಾಲ್ಕಾರು ವರ್ಷ ಪರಿಶ್ರಮಪೂರ್ವಕ ಪ್ರಯತ್ನಮಾಡಿದನಂತರ ೧೯೧೫ರಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತಿನ ಸ್ಥಾಪನೆಯು ಬೆಂಗಳೂರಿನಲ್ಲಾಯಿತು. ಆಗ ಮಾತ್ರ ಕರ್ನಾಟಕದ ಏಕೀಕರಣದ ವಿಚಾರಕ್ಕೆ—ಸಾಂಸ್ಕೃತಿಕ ದೃಷ್ಟಿಯ ಮಟ್ಟಿಗಾದರೂ—ಅಖಂಡ ಕರ್ನಾಟಕದ ಪ್ರಾತಿನಿಧಿಕ ಒಪ್ಪಿಗೆಯು ದೊರೆತಂತಾಯಿತು.

ಅಖಿಲ ಕರ್ನಾಟಕ ಸಾಹಿತ್ಯಪರಿಷತ್ತಿನ ಸ್ಥಾಪನೆಯೊಂದಿಗೆ ಕರ್ನಾಟಕ ಏಕೀಕರಣದ ಸಾಂಸ್ಕೃತಿಕ ಹೊಣೆಯನ್ನು ಅದಕ್ಕೆ ಒಪ್ಪಿಸಿಕೊಟ್ಟಂತಾದುದರಿಂದ, ರಾಜಕೀಯ ಏಕೀಕರಣ ಎಂದರೆ ತಾತ್ಕಾಲಿಕವಾಗಿ ಬ್ರಿಟಿಶ್ ಸರಕಾರದ ಆಡಳಿತೆಗೆ ಅಲ್ಲಲ್ಲಿ ಒಳಪಟ್ಟಿರುವ ಕರ್ನಾಟಕ ಭಾಗಗಳ ಏಕೀಕರಣ ಮತ್ತು ಅವೆಲ್ಲವುಗಳ ಸಂಯೋಜನೆಯಿಂದ ಕರ್ನಾಟಕದ ಸ್ವತಂತ್ರ ಪ್ರಾಂತೀಕರಣ ವಿಚಾರವು ಧಾರವಾಡದ ಪ್ರಮುಖರ ಲಕ್ಷ್ಯವನ್ನು ಸೆಳೆಯಹತ್ತಿತು. ಶ್ರೀಮಾನ್ ಆಲೂರ ವೆಂಕಟರಾಯರೇ ಬರೆದು ಪ್ರಕಟಿಸಿದ್ದ ಶ್ರೀಮದ್ವಿದ್ಯಾರಣ್ಯರ - ವಿಜಯನಗರ ಸಾಮ್ರಾಜ್ಯಪ್ರತಿಷ್ಠಾಪನೆಯ ರಾಜಕೀಯ ವ್ಯವಹಾರಕ್ಕೆ ಸಂಬಂಧಿಸಿದ ಚಿಕ್ಕ ಚರಿತ್ರೆಯೂ, ಹಾಗೆಯೇ "**ಕರ್ನಾಟಕ ಗತವೈಭವ**"ವೂ ಇತ್ತ ಕಡೆಯ ಕನ್ನಡಿಗರನ್ನು ಚೆನ್ನಾಗಿಯೇ ಬಡಿದೆಬ್ಬಿಸಿದುವು. ಇದೇ ಕಾಲಕ್ಕೆ ಹಿಂದುಸ್ಥಾನದ ರಾಜಕೀಯ ಸುಧಾರಣೆಗಳ ವಿಷಯವಾಗಿ ಬ್ರಿಟಿಶ್ ಸರಕಾರದವರು ಮಾಡಿದ ಘೋಷಣೆಯಿಂದ ಭಾರತದ ಪ್ರಾಂತೀಯ ಸರಕಾರಗಳ ಪುನರ್ಘಟನೆಯ ಪ್ರಶ್ನೆಗೆ ಚೆನ್ನಾಗಿಯೇ ಚಾಲನೆ ದೊರೆಯಿತು. ಇದೇ ಅನುಕೂಲ ಸಂದರ್ಭವನ್ನು ಸಾಧಿಸಿಕೊಂಡು ಧಾರವಾಡದ ಪ್ರಮುಖ ಕನ್ನಡಿಗರು, ಕರ್ನಾಟಕದ ರಾಜಕೀಯ ಏಕೀಕರಣದ ವಿಷಯವಾಗಿ ಪ್ರಚಂಡವಾದ ಆಂದೋಲನವನ್ನು ಹೂಡುವ ಸಂಕಲ್ಪಮಾಡಿ ಕಾರ್ಯಪ್ರವೃತ್ತರಾದರು. ಕೀರ್ತಿಶೇಷ **ಕಡಪಾ ರಾಘವೇಂದ್ರರಾಯ**ರಂತಹ ಪ್ರಭಾವಶಾಲಿಗಳಾದ ಕಾರ್ಯಕುಶಲಧುರೀಣರ ನೇತೃತ್ವದಲ್ಲಿ ಚಳವಳಿಗೆ ಆರಂಭವಾಯಿತು. ಕೇವಲ ಭಾಷೆ ಸಂಸ್ಕೃತಿ ಇವುಗಳ ಮಟ್ಟಿಗೆ ನಿರಾತಂಕವಾಗಿ ಸಾಗಿದ್ದ ಏಕೀಕರಣದ ಚಳವಳಿಗೆ ಪ್ರಾದೇಶಿಕ ಮತ್ತು ರಾಜಕೀಯ ಏಕೀಕರಣದ ಪ್ರಯತ್ನಗಳ ಸ್ವರೂಪ ಬಂದಕೂಡಲೆ, ಇಲ್ಲಿಯ ಮರಾಟಿಗರ ಹಾಗು ಅವರ ಹಿಂಬಾಲಿಗರ ವಿರೋಧಕ್ಕೆ ಆರಂಭವಾಯಿತು. ಕನ್ನಡಕ್ಕಾಗಿ ಕರ್ನಾಟಕದ ಏಕೀಕರಣಕ್ಕಾಗಿ ಪ್ರಯತ್ನಮಾಡುವುದೆಂದರೆ ಮರಾಠಿಯ ಹಾಗು ಮಹಾರಾಷ್ಟ್ರದ ದ್ವೇಷವೆಂಬ ಬಣ್ಣಬಳಿದು, ಅದನ್ನು ಎಲ್ಲ ಬಗೆಯಿಂದಲೂ ಕುಗ್ಗಿಸುವ ವಿಶ್ವಪ್ರಯತ್ನಕ್ಕೆ ಮೊದಲಾಯಿತು. ಅಂದಿನಿಂದ ಈ ಮಹಾರಾಷ್ಟ್ರ ವಿದ್ವೇಷದ ಹುಯಿಲು ಇತ್ತ ಕರ್ನಾಟಕದಲ್ಲಿಯೂ ಅತ್ತ ಮಹಾರಾಷ್ಟ್ರದಲ್ಲಿಯೂ ಒಂದೇ ಸವನೆ ಹಬ್ಬಿ ಬೆಳೆದು, ಇಂದಿಗೆ ಅತ್ಯಂತ ಉಗ್ರವಾದ ಕಡುತರವಾದ ಸ್ವರೂಪಕ್ಕೆ ಬಂದು ನಿಂತಿದೆ. ಇದರ ಸವಿಸ್ತರ ವಿವೇಚನೆಯನ್ನು ಮುಂದಿನ ಬರೆಹದಲ್ಲಿ ವಾಚಕರು ಕಂಡುಕೊಳ್ಳಬಹುದು.



ವಾರದ ಭವಿಷ್ಯ

ವ್ಹಿ. ಎಮ್. ಇನಾಮದಾರ ಬಿ.ಎ. (ಆನರ್ಸ್)

ಅವರಿಂದ

★

'ಅಪೂರ್ವ ಧನಲಾಭದ ಜೊತೆಯಲ್ಲಿ ಅಸಹ್ಯ ಅಪಮಾನದ ಪ್ರಸಂಗವಿದೆ' ಎಂದು ವಾರದ ಭವಿಷ್ಯವನ್ನೋದಿದರು. ಎಂದೂ ನಿಜವಾಗದ ವಾರದ ಭವಿಷ್ಯ ಇಂದು ನಿಜವಾಯಿತು; ರಾಯರನ್ನು ಬಿರುಗಾಳಿಯ ಬಾಯ್ಗೆ ಸಿಕ್ಕಿಸಿತು.

".. ಇದು ನೋಡಿರಿ, ನಾಳೆಗೆ ನನಗ ಛತ್ರೀ ತಂದು ಕೊಡಲಿಕ್ಕೇ ಬೇಕು.."

ಆ ದಿವಸ ಬಿಡುವಿನ ದಿನವಾದುದರಿಂದ ಊಟ ಸ್ವಲ್ಪ ವಿಶೇಷವಾಗಿತ್ತು. ಎಲೆ-ಅಡಿಕೆ ಹಾಕಿಕೊಂಡು, ಆದೇ ಬಂದ **ಸಾಪ್ತಾಹಿಕ ಸಂಯುಕ್ತ ಕರ್ನಾಟಕ** ಓದುತ್ತ ಬಿದ್ದುಕೊಂಡಿದ್ದೆ. ಓದುತ್ತ ಓದುತ್ತ ಸಾಪ್ತಾಹಿಕ ಭವಿಷ್ಯದ ಕಡೆಗೆ ದೃಷ್ಟಿ ಹೋಯಿತು. ಈ ವಾರದ ಭವಿಷ್ಯದಲ್ಲಿ ವಿಶ್ವಾಸವಿರದಿದ್ದರೂ ಕಣ್ಣೆದುರಿಗೆ ಹಾಯ್ದ ಮೇಲೆ ಅದನ್ನು ಓದುವ ಕುತೂಹಲವನ್ನು ತಡೆಯುವುದು ದುಸ್ತರವೆಂಬುದು ಸಾಮಾನ್ಯ ಅನುಭವ. ನನಗಾದರೂ ಹಾಗೆಯೇ ಆಯಿತು. ನನ್ನ ರಾಶಿಯ ಭವಿಷ್ಯವನ್ನು ಓದಿ ನೋಡಿದೆ. "**ಅಪೂರ್ವ ಧನಲಾಭದ ಜೊತೆಯಲ್ಲಿ ಅಸಹ್ಯ ಅಪಮಾನದ ಪ್ರಸಂಗವಿದೆ**" ಎಂದು ಓದಿದ ಕೂಡಲೆ, ಭವಿಷ್ಯದಲ್ಲಿ ಎಷ್ಟೂ ವಿಶ್ವಾಸವಿರದಿದ್ದರೂ ಮನಸ್ಸಿನಲ್ಲಿ ಒಂದು ಬಗೆಯ ಅಸಮಾಧಾನ ಸುಳಿದು ಹೋಯಿತು. ಈ ಭವಿಷ್ಯವನ್ನು ಓದುವುದೆಂದರೆ ಕೇವಲ ಮೂರ್ಖತನವೆಂದು ಸ್ವಂತಕ್ಕೆ ಸಮಾಧಾನ ಹೇಳಿ ಮುಂದೆ ಓದತೊಡಗಿದೆ. ಇಷ್ಟರಲ್ಲಿಯೆ ಗುಡುಗು:

"ಇದೇನಿದು; ನನಗೆ ಕೊಡೆ ಬೇಕಾಗಿದೆಯೆಂಬುದು ನಿಮಗೆ ಇನ್ನೂ ನೆನಪಾಗವೊಲ್ಲದಲ್ಲ! ನಿಮ್ಮ ನೆನಪಾದರೂ ಎಂಥಾದೊ!"

ನೋಡಿದರೆ ಅನೇನೂ ಮಳೆಗಾಲದ ದಿವಸಗಳಾಗಿರಲಿಲ್ಲ; ಮಳೆಗಾಲವು ಆದೇ ಮುಗಿದು ಹೋದುದರಿಂದ ಮೇಘದರ್ಶನಕ್ಕೇನೂ ಅವಕಾಶವಿರಲಿಲ್ಲ. ಆದರೆ ನಮ್ಮಲ್ಲಿ, ನಮ್ಮ "ಈಕೆ"ಯ ಮನಸ್ಸಿನ ಮೇಲೆ ತಕೊಂಡರೆ ಯಾವ ಋತುವಿನಲ್ಲಿಯೂ ಗುಡುಗಿ ಆರಂಭವಾಗಬಹುದೆಂಬುದು ನನ್ನ ಅನುಭವವಾಗಿತ್ತು. ನಾನು ಹಾಗೆಯೇ ಓದುವ ನೋಗು ನಟಿಸಹತ್ತಿದೆ; ಮಧ್ಯಾಹ್ನದಲ್ಲಿಯೇ ನಮ್ಮ ಇಸ್‍ಪೇಟಿನ ಕ್ಯಾಂಪಿಗೆ ಯಾಕೆ ಹೋಗಬಾರದಾಗಿತ್ತೆಂದು ಸುಮ್ಮನೆ ವಿಚಾರ ಮಾಡಿದೆ. ಆದರೆ ಮಾಡುವುದೇನು? ಪಶ್ಚಾತ್ ಬುದ್ಧಿ—

"ನಾ, ಇಷ್ಟು ಮಾತಾಡಿದರೂ ನನ್ನ ಕಡೆ ಲಕ್ಷವೇ ಇಲ್ಲ ಅಲ್ಲ? ನಾ ಹೇಳಕೊಂಡದ್ದು ಒಂದನ್ನೂ ಕಿವೀ ಮ್ಯಾಲೆ ಹಾಕ್ಕೋಳ್ಳೂ ಹಾಂಗಿಲ್ಲ! ನಾ ಅಂದರ ಅಷ್ಟು ಬ್ಯಾಸರ ಆಗಿ ಹೋಗೇನಿ; ಅಂತೇ ಲಕ್ಷ್ಯಕೊಡೂದಿಲ್ಲ ಅಲ್ಲs?"

ಇಂತಹ ಪ್ರಸಂಗದಲ್ಲಿ ಮೌನವೇ ಉತ್ತಮ ಸಾಧನವೆಂದು, ನಾನು ಅನುಭವದಿಂದಲೇ ಕಂಡುಹಿಡಿದಿದ್ದೆ. ಓದುವ ನೋಗನ್ನು ಹಾಗೆಯೇ ಸಾಗಿಸಿದೆ. ಅವಳಿಗೆ ಇದರಿಂದ ಸಿಟ್ಟು ಸಹಿಸಲಾರದಂತಾಗಿರಬೇಕು. ಕೂಡಲೆ ಮುಂದಕ್ಕೆ ಬಂದು, ನನ್ನ ಕೈಯಲ್ಲಿಯ ವೃತ್ತಪತ್ರವನ್ನು ಕಸಿದುಕೊಂಡು ಸಿಡಿಸುಡಿಯಲ್ಲಿ ಮಾತನಾಡಿದಳು :

"ಆದರಾಗ ಏನು ಅಂಥಾದು ತುಂಬೇದೋ.. ಇಲ್ಲೆ ನಿಂತು ಒಂದೇ ಸವನೆ ಮಾತಾಡಿದ್ದು ಕೂಡಾ ಕೇಳಸಲಾರದಂಥಾದ್ದು! ಇದು ನೋಡಿರಿ, ನಾಳಿಗೆ ನನಗೆ ಛತ್ರೀ ತಂದು ಕೊಡಲಿಕ್ಕೇ ಬೇಕು. ಪಗಾರನೂ ಬರತದ; ಅನಾಯಾಸ ಶನಿವಾರನೂ ಅದ. ಕಚೇರಿಯಿಂದ ಬರೋ ಮುಂದ ತರಲಿಕ್ಕೇ ಬೇಕು. ಮಧ್ಯಾಹ್ನದಾಗ ಬಿಸಲಾಗ ಹೊಲಿಗೀ ಕ್ಲಾಸಿಗೆ ಹೋಗೋವಾಗ ತಲೀ ತಲೀ ಬಿಸಿಲು ಎಷ್ಟು ಬಡೀತದ ನಿಮಗೇನು ಗೊತ್ತು?"

ಇಷ್ಟಾದರೂ ನಾನು ಒಂದು ಶಬ್ದವನ್ನೂ ಉಚ್ಚರಿಸದಿದ್ದುದನ್ನು ನೋಡಿ ಮಾತು ಮುಂದುವರಿಯಿತು :

' ನನ್ನ ನಸೀಬೇ ಅಂಥಾ ನುಡಗಾಡ ಅದ ; ಅಂತಲೇ ಇಂಥಾ ಒಂದು ಸಣ್ಣ ಮಾತನ್ನ ಸುದ್ಧಾ ನೀವು ನಡಿಸಿ ಕೊಡೂದಿಲ್ಲ ! ''

' ನಾಳಿನ ದಿವಸ ಕೊಡೆಯನ್ನು ತರಲಿಕ್ಕೇಬೇಕು ' ಎಂದು ಹುಕುಮು ಕೊಡುವಾಗಿನ ವೀರರಸವು ಇಷ್ಟರಲ್ಲಿಯೇ ಕರುಣ ರಸದಲ್ಲಿ ರೂಪಾಂತರವಾದದ್ದನ್ನು ಕಂಡು ನನಗೆ ಆಶ್ಚರ್ಯ ವಾಯಿತು. ಆದರೆ ಆ ಕರುಣರಸವು ನಿಜವಾಗಿಯೂ, ಕಣ್ಣು ಗಳೊಳಗಿಂದ ಹೊರಬೀಳಹತ್ತಿದಾಗ ಮಾತ್ರ, ಮರುದಿವಸ ಕೊಡೆ ಯನ್ನು ಕೊಂಡುತರುವುದಕ್ಕೆ ಒಪ್ಪಲೇ ಬೇಕಾಯಿತು.

ಇಷ್ಟೊಂದು ಗೊಂದಲವನ್ನೆಬ್ಬಿಸಿದ ಕೊಡೆಯ ಪೂರ್ವೇತಿ ಹಾಸ ಹೀಗೆ: ಮಳೆಗಾಲಕ್ಕಿಂತಲೂ ಮುಂಚಿತವಾಗಿ ನಾನು ಅವಳಿಗೊಂದು ಸುಂದರವಾದ ಕೊಡೆಯನ್ನು ಕೊಂಡುಕೊಟ್ಟಿದ್ದೆ. ಆದರೆ ಮಳೆಯ ದಿನಗಳು ಮುಗಿಮುಗಿಯುತ್ತಿರುವಾಗಲೇ ಒಂದು ದಿವಸ ಅವಳ ಹೊಲಿಗೆಯ ಕ್ಲಾಸಿನೊಳಗಿಂದ ಆ ಕೊಡೆಗೆ ' ಪರಗೃಹವಾಸ ' ಸಂಭವಿಸಿತು. ಆದ್ದರಿಂದ ಈಗ ಅವಳು ಕೊಡೆಯಿಲ್ಲದೆ ಹೋಗಬೇಕಾಗುತ್ತಿದ್ದಿತು. ಮಳೆಯೇ ಇಲ್ಲ ವೆಂದ ಮೇಲೆ ಕೊಡೆ ಏತಕ್ಕೆಂದು ನಾನು ಅತ್ತಕಡೆಗೆ ಲಕ್ಷ್ಯ ಕೊಟ್ಟಿರಲಿಲ್ಲ. ಅವಳಿಗೆ ಮಧ್ಯಾಹ್ನದಲ್ಲಿ ಬಿಸಿಲಿನ ತಾಪವಾಗುವು ದರ ಕಡೆಗೆ ನನ್ನ ಲಕ್ಷ್ಯವಿರಲಿಲ್ಲವೆಂತಲ್ಲ. ನನಗೆ ಹೆದರಿಕೆಯೆಂದರೆ ' ಅಂದವಾದ ಮತ್ತೊಂದು ಕೊಡೆ ತಂದುಕೊಟ್ಟ ಕೂಡಲೆ ಅದಕ್ಕೂ ಯಾರಾದರೂ ಆಪ್ಪಣೆಕೊಡಿಸಿಬಿಟ್ಟರೆ ಹೇಗೆ ? ' ಎಂದು. ' ಕೊಳ್ಳುವುದನ್ನೇ ಮುಂದಕ್ಕೆ ಹಾಕುತ್ತ ಹೋದರೆ, ಅದು ಕಳೆದು ಹೋಗುವ ಸಂಭವವನ್ನು ಮುಂದಕ್ಕೆ ಹಾಕಿದಂತೆ ' ಎಂದು ತಿಳಿದು ' ತರೋಣವಂತೆ ' ಎಂದು ಹೇಳಿಹೇಳಿ ಎರಡು ಮೂರು ಪಗಾರದ ದಿನಗಳನ್ನು ದಾಟಿಸಿದ್ದೆ. ಇದೆಲ್ಲದರ ಪರಿಣಾಮವೆಂದರೆ ಮೇಲೆ ಹೇಳಿದ ರಸಗಳ ಮೋಜವಾಣಿ !

* * *

ಮರುದಿವಸ ಪಗಾರವೂ ಆಯಿತು. ಶನಿವಾರವಿದ್ದುದರಿಂದ ಕಚೇರಿಯಿಂದ ಬಿಡುಗಡೆಯೂ ಬೇಗನೆ ಆಯಿತು. ಕೊಡೆಯನ್ನು ಕೊಂಡುತರುವ ನಿಶ್ಚಯವೂ ಆಗಿತ್ತು. ನೆರೆಮನೆಯ ಕೇಶವ ರಾಯನಿಗೆ ಈ ಕೊಡೆಯ ವಿಚಾರವೆಲ್ಲವೂ ಗೊತ್ತಿದ್ದುದರಿಂದ, ಹೊಸದೊಂದು ಕೊಂಡುತರುವ ನಿಶ್ಚಯವನ್ನು ಅವರಿಗೂ ತಿಳಿಸಿದೆ. ಕೇಶವರಾಯನ ಹೆಂಡತಿ ನಾಲ್ಕುತಿಂಗಳ ಪೂರ್ವದಲ್ಲಿ ದೇಹವನ್ನು ನೀಗಿದ್ದಳು. ಅವನಾದರೂ ಒಬ್ಬನೇ ಇರುತ್ತಿದ್ದ. ' ಕೊಡೆ ಕೊಂಡುಕೊಟ್ಟರೆ ಕಚೇರಿಯ ಟೀ ಕ್ಲಬ್ಬಿನಲ್ಲಿ ಒಂದು ತಿಂಗಳು ಚಹ ಬಿಟ್ಟುಬಿಡಬೇಕಾಗುತ್ತದೆ ಕೇಶವರಾಯ; ಅಂತಲೇ ನಾನು ಇಷ್ಟು ದಿವಸ ಮುಂದೆ ನೂಕಿದ್ದು ! ' ಎಂದು ನಾನು ಹೇಳಿದ್ದಕ್ಕೆ ಅವನು " ನಾನು ಒಂದು ಯುಕ್ತಿ ಹೇಳುತ್ತೇನೆ ನಿನಗೆ ಒಪ್ಪಿಗೆ ಇದ್ದರೆ ಹೇಳು ! " ಎಂದನು. ನನಗೆ ಏನೆಂಬುದು ತಿಳಿಯದಂತಾಯಿತು. ಕೇಶವರಾಯ ಏನು ಯುಕ್ತಿ ಹೇಳುವನೋ, ಎಂಬುದು, ಎಷ್ಟು ವಿಚಾರಮಾಡಿದರೂ ಬಗೆ ಹರಿಯಲಿಲ್ಲ ಕೊನೆಗೆ ಅವನೇ ಹೇಳಿದ :

" ಈಗೇನೂ ಕೊಡೆ ಕೊಂಡುತರುವ ವಿಚಾರವನ್ನು ನೀನು ಮಾಡಬೇಡ— "

" ಛೆ ! ಛೆ ! , ತರದಿದ್ದರೆ ನಿನಗೇನು ಗೊತ್ತು, ಮಹಾ. ರಾಯಾ ! "

" ನಾ ಹೇಳುವುದನ್ನಾದರೂ ಕೇಳು ಮೊದಲು ! ಈಗೇನೂ ಕೊಡೀ ಹೊಸಾದು ಕೊಳ್ಳಬ್ಯಾಡ ! ನಮ್ಮ ಮನೀ ಒಳಗ ನಮ್ಮಾಕೀ ಕೊಡೀ ಹೊಸಾದು ಹಾಂಗೇ ಬಿದ್ದದ. ಅದನ್ನೇ ಒಯ್ದು ಕೊಟ್ಟುಬಿಡು ! ಅಂದ್ರ ಅವರಿಗೆ ಕೊಡೀ ಆಯ್ತು, ನಿನಗೆ ಚಹಾ ಬಿಡೋ ಪ್ರಸಂಗ ತಪ್ಪಿತು— "

" ಯಾತಕ್ಕ ಇಷ್ಟೆಲ್ಲಾ ! ಎಂದಾದರೂ ಒಂದು ತಗೋಳ್ಳೋದೇ ಅದ ! ತಗೊಂಡುಬಿಟ್ಟರ ಆಯ್ತಿಲ್ಲ ! " ನಾನೆಂದೆ.

" ತಗೊಳ್ಳೋ ಮುಂದ ತಗೊಂಡೀ ಅಂತ, ಈಗ ಇಲ್ಲೆ ನಮ್ಮಲ್ಲೆ ಸುಮ್ಮನೇ ಬಿದ್ದದ. ಎದುರಿಗಿನ ಮನಿಯೊಳಗಿನ ಆ ರಾಮೂ ಒಂದೇ ಸವನ ಅದನ್ನ ತಗೊಂಡು ಓಡ್ಯಾಡತಿರತದ. ಆ ಹುಡುಗೂರೊಯ್ದು ಮುರಿದು ಹಾಕೋದಕ್ಕಿಂತ, ನೀ ಒಯ್ದರ ನಿಮ್ಮವರಿಗೆ ಉಪಯೋಗವಾದರೂ ಆದೀತು.... ಕಣ್ಮರಿ ಅದರ ನನಗೂ ಆಕೀ ನೆನಪರೆ ಕಮ್ಮಿ ಆದೀತು.... "

' ಪುಕ್ಕಟೆಯಾಗಿ ಕೊಡೆ ಸಿಕ್ಕಿತಲ್ಲಾ ' ಎಂದು ಮನಸ್ಸಿನಲ್ಲಿ ಆನಂದವಾಗಿದ್ದರೂ ಅದನ್ನು ಹೊರಗೆ ತೋರಗೊಡದೆ, ಔಪಚಾರಿ ಕವಾಗಿ ನಾಲ್ಕೆಂಟುಸಾರೆ ಬೇಡಬೇಡವೆಂದು, ಕೊನೆಗೆ ಕೇಶವ ರಾಯನ ಮನೆಯಲ್ಲಿಯ ಕೊಡೆಯನ್ನು ನಮ್ಮಲ್ಲಿ ತಂದು ಇಟ್ಟೆ. ಅದಾದರೂ ಸುಂದರವಾದ ಕೊಡೆಯಿತ್ತು. ಆದರೆ ಕೇಶವ ರಾಯನ ಹೆಂಡತಿ ಕಸೀದೆಯಿಂದ ತನ್ನ ಹೆಸರನ್ನು ಮಾತ್ರ ಅದರ ಮೇಲೆ ಹಾಕಿದ್ದಳು. ಆ ಹೆಸರನ್ನು ನೋಡಿದ ಕೂಡಲೆ ನಮ್ಮವ ಳಿಗೆ ಉಂಟಾದ ಕೋಪಾವೇಶವನ್ನು ವರ್ಣಿಸುವುದಕ್ಕೆ ಬಾಣ ಭಟ್ಟನೇ ಭೂಮಿಗಿಳಿದು ಬಂದರೆ ಸರಿ ! ಆದರೆ ಕೊನೆಗೆ, ಮನಸ್ಸಿಲ್ಲ ದಿದ್ದರೂ ಮಿತ್ರನ ಆಗ್ರಹದ ಮೂಲಕ ತರಬೇಕಾದುದನ್ನೂ, ಕಸೀದೆಯಿಂದ ಹಾಕಿದ ಹೆಸರನ್ನು ತೆಗೆದು ಬಿಟ್ಟುಬಿಟ್ಟರೆ ಹೊಸ ಕೊಡೆಗಿಂತಲೂ ಸುಂದರವಾಗಿದೆಯೆಂತಲೂ ಮತ್ತೆ ಏನೇನನೋ ಹೇಳಿ, ಅದನ್ನು ಉಪಯೋಗಿಸಲು ಅವಳ ಮನವನ್ನು ಒಲಿಸಿದೆ.

* * *

ಅಂದು ಆದಿತ್ಯವಾರ; ಎಂದರೆ ಕೊಡೆಯನ್ನು ತಂದ ಮರು ದಿವಸ. ಊರಲ್ಲಿಯ ನಾಟಕಕಂಪನಿಯಲ್ಲಿನ ನಟವರ್ಯ ನೊಬ್ಬನು — ನನ್ನ ಗುರುತಿನವ — ಮುಂಜಾನೆಯೇ ಒಂದು ಮುಂದಿನ ಕುರ್ಚಿಗಳ ಪಾಸು ಕೊಟ್ಟು, ತನ್ನ ಅಭಿನಯವನ್ನು ಬಂದು ನೋಡಲೇ ಬೇಕೆಂದು ಆಗ್ರಹಪೂರ್ವಕವಾಗಿ ಹೇಳಿಕೊಂಡು ಹೋಗಿದ್ದ. ಪುಕ್ಕಟೆಯಾಗಿ ಪಾಸು ಸಿಕ್ಕರೆ — ನಾಟಕವ

ಎಂತಹದೇ ಆಗಲಿ— ನಾಟಕ ನೋಡಲಿಕ್ಕೆ ನನ್ನದೇನೂ ಅಡ್ಡಿ ಇರದುದರಿಂದ, ಆ ದಿವಸ ಮಧ್ಯಾಹ್ನ ನಾನು ಮತ್ತು ಸೌಭಾಗ್ಯವತಿ ಕೂಡಿ ನಾಟಕಕ್ಕೆ ಹೋಗುವುದೆಂದು ನಿಶ್ಚಯವಾಗಿತ್ತು. ಆದಿತ್ಯವಾರವಿದ್ದ ಮೂಲಕ ನಾಟಕವು ಮೂರುವರೆಗೆ ಆರಂಭವಾಗುವುದಿತ್ತು. ಬಿಸಿಲು ವಿಪರೀತವಾಗಿದ್ದುದರಿಂದ ಆ ಹೊಸ ಕೊಡೆಯನ್ನು ತೆಗೆದುಕೊಳ್ಳಲಿಕ್ಕೆ ಆಕೆಗೆ ನಾನೇ ಸೂಚಿಸಿದೆ. ಆಕೆ ಎಲ್ಲಿ ಅದಕ್ಕೆ ಇಲ್ಲವೆನ್ನುವಳೋ ಎಂದುಕೊಂಡಿದ್ದೆ; ಆದರೆ ಹಾಗೇನೂ ಆಗಲಿಲ್ಲ; ಕೊಡೆಯ ಮೇಲೆ ಕೇಶವರಾಯನ ಮೃತ ಪತ್ನಿಯ ಹೆಸರಿದ್ದರೂ ಅದನ್ನು ತೆಗೆದುಕೊಂಡು ಹೊರಬಿದ್ದಳು.

ನಾಟಕಗೃಹಕ್ಕೆ ಬಂದು ತಲುಪಿದೆವು. ನಮ್ಮಿಬ್ಬರಿಗೂ ಪಾಸು ಇದ್ದ ಮೂಲಕ ತಿಕೀಟುಕೊಳ್ಳುವ ಗೊಂದಲವೇ ಇದ್ದಿಲ್ಲ. ಆದರೆ ದಾರಿಯಲ್ಲಿ ಭೆಟ್ಟಿಯಾದ ನನ್ನ ಹಳೆಯ ಮಿತ್ರ ಗೋವಿಂದರಾಯ ತನ್ನ ಜೊತೆಗಾರನಿಗೆ ತಿಕೀಟು ತರಹೇಳಿ ದಾರಿಯನ್ನು ಕಾಯುತ್ತ ನಿಲ್ಲಬೇಕಾದ್ದರಿಂದ, ನಾನೂ ಅವನ ಹತ್ತಿರ ಮಾತನಾಡುತ್ತ ನಿಂತಿದ್ದೆ. ನನ್ನ ಪತ್ನಿ ನನ್ನ ಹಿಂದೆಯೇ ನಿಂತಿದ್ದಳು. ನಾವು ಅಲ್ಲಿ ನಿಂತಿರುವಾಗಲೇ ನಮ್ಮ ಮನೆಯ ಎದುರಿನ ಚಿಕ್ಕ ಮಗು ರಾಮುವು, ಅವಳ ತಾಯಿ, ತಂದೆ ಎಲ್ಲರೂ ತಿಕೀಟು ಪಡೆದುಕೊಂಡು ಬಂದರು. ಚಿಕ್ಕ ರಾಮುವು ಮಾತ್ರ ನಾವು ನಿಂತಲ್ಲಿಗೆ ಓಡಿ ಬಂದು, ಒಮ್ಮೆಲೆ ನನ್ನ ಪತ್ನಿಯ ಕಡೆಗೆ ಹೋಗಿ,

"ನನ್ನ ಛತ್ರೀ ಯಾಕ ತಂದೀರೀ ನೀವು? ಕೊಡಿರಿ, ಕೇಶವಮಾಮಾ ನನಗ ಬಕ್ಷೀಸ್ ಕೊಟ್ಟಾರ ಆ ಛತ್ರೀ! ಕೊಡಿರಿ. . . ."
ಎಂದು ಕೊಡೆಯನ್ನು ಎಳೆಯಹತ್ತಿದ.

ಇಷ್ಟರಲ್ಲಿಯೇ ರಾಮೂನ ತಾಯಿ ಬಂದು ಕರೆದುಕೊಂಡು ಹೋಗಿ ಸಮಾಧಾನ ಹೇಳಿದಳು. ಎಲ್ಲರೂ ಒಳಗೆ ಹೋಗಿ ಕುಳಿತು, ನಾಟಕಕ್ಕಾರಂಭವಾದರೂ ರಾಮುವು ಮಾತ್ರ 'ತನ್ನ' ಕೊಡೆಗಾಗಿ ಹಾತೊರೆಯುತ್ತಿದ್ದ. ಆತನಿಗೆ ಸಮಾಧಾನ ಹೇಳಿ ಹೇಳಿ ಬೇಸತ್ತು, ರಾಮುವಿನ ತಾಯಿಯು

"ಯಾರು ಹೇಳಿದ್ರು ತಾಯಿ ಮಹಾರಾಯತಿಗೆ, ಆ ಕೇಶವರಾಯನ ಹೇಣತೀ ಛತ್ರೀ ತರಲಿಕ್ಕೆ! ನಾಚಿಕೆರೇ ಹ್ಯಾಂಗ ಆಗಲಿಲ್ಲೋ! ಮಂದೀ ಹೆಂಡಂದಿರು ಸಾಯೋ ಹಾದೀನೇ ನೋಡತಿರೋ ಹಾಂಗ—"

ಎಂಬದ್ದು ಸ್ಪಷ್ಟವಾಗಿ ನನ್ನ ಕಿವಿಯಲ್ಲಿ ಕಾದ ಎಣ್ಣೆಗಿಂತಲೂ ಹೆಚ್ಚಾದ ವೇದನೆಯನ್ನುಂಟುಮಾಡುತ್ತ ಸೇರಿತು. ಥಿಯೇಟರಿನ ಹೊರಗೆ ಆ ಹುಡುಗ ಬಂದು ಕೊಡೆಯನ್ನು ಎಳೆಯಹತ್ತಿದಾಗಿನಿಂದಲೇ ಚಡಪಡಿಸುತ್ತಿದ್ದ ನನ್ನ ಪತ್ನಿಗೆ, ಈ ಶಬ್ದಗಳನ್ನು ಕೇಳಿ ಏನೆನಿಸಿತೋ ಎಂಬುದನ್ನು ಶಬ್ದಗಳಿಂದ ವರ್ಣಿಸುವುದೆಂದರೆ ಸಾಧ್ಯವಾಗುವುದಿಲ್ಲ. 'ಇದರ ಪರಿಣಾಮ ಇನ್ನು ಮೇಲೆ ಮನೆಯಲ್ಲಿ ಆಗಬಹುದು' ಎಂಬುದರ ಕಲ್ಪನೆಯನ್ನು ಕೂಡ ನನ್ನಿಂದ ಮಾಡುವುದಕ್ಕಾಗಲಿಲ್ಲ. ರಾಮುವಿನ ತಾಯಿಯು ಆಡಿದ ಆ ಮಾತುಗಳು ಶಬ್ದಗಳೇ ಆಗಿರದೆ, ಭೂಕಂಪದ ಧಕ್ಕೆಗಳೇ ಎನ್ನುವಂತೆ ಭಾಸವಾಯಿತು ನನಗೆ. ಈ ಭೂಕಂಪವು ಮನೆಗೆ ಹೋದಮೇಲೆ ಜ್ವಾಲಾಮುಖಿಯಾಗಿ ಪರಿಣಮಿಸುವುದರಲ್ಲಿ ಎಳ್ಳಷ್ಟೂ ಸಂಶಯವಿರಲಿಲ್ಲ. ಅವಳನ್ನು ಮಾತನಾಡಿಸುವುದಂತೂ ಬಿಡಿರಿ, ಅವಳ ಕಡೆಗೆ ಹೊರಳಿ ನೋಡುವ ಧೈರ್ಯವು ಕೂಡ ನನ್ನಿಂದ ಆಗಲಿಲ್ಲ. ಅವಳೇ ಒಮ್ಮೆ ನನ್ನ ಕಡೆಗೆ ನೋಡಿದಾಗ ಅವಳ ಕಣ್ಣುಗಳು "ಇದು ಥಿಯೇಟರು ಅದೆ; ಮನೆಗಂತೂ ನಡೀರಿ" ಎನ್ನುವಂತೆ ತೋರಿದುವು. ಇಂತಹ ಪರಿಸ್ಥಿತಿಯಲ್ಲಿ ಅವಳ ಜೊತೆಯಲ್ಲಿ ಮನೆಗೆ ಹೋಗುವುದಕ್ಕಿಂತ ಎಲ್ಲಿಯಾದರೂ ಓಡಿಹೋಗಿಬಿಡಲೇ ಎನಿಸಿತು. 'ಲಗ್ನ ನಡೆದ ವೇಳೆಯಲ್ಲಿ ರಾಮದಾಸರು ಓಡಿಹೋದರೆಂದು ಕಥೆ; ಲಗ್ನವಾದನಂತರ ನಾನು ಈಗ ಓಡಿಹೋದರೆ ಹೇಗೆ?' ಎಂದು ವಿಚಾರಮಾಡಿದೆ. ಆದರೆ ಎಲ್ಲವೂ ವ್ಯರ್ಥ. ನನ್ನ ಮಿತ್ರನ ಅಭಿನಯವನ್ನು ನೋಡುವುದಂತೂ ದೂರವೇ ಉಳಿಯಿತು. ನನ್ನ ನಾಟಕವೇ ನನಗೆ ಸಾಕಾಗಿಹೋದಾಗ ಎಲ್ಲಿಯ ಅಭಿನಯ, ಎಲ್ಲಿಯದೇನು?

ಪ್ರಯೋಗವು ಮುಗಿದ ಕೂಡಲೆ ಅದೇನೇನೋ ವಿಚಾರ ಮಾಡುತ್ತ ಅವಳ ಹಿಂದಿನಿಂದಲೇ ಮನೆಗೆ ಸಾಗಿದೆ. ಅವಳಾದರೂ ಒಂದು ಶಬ್ದವನ್ನು ಕೂಡ ಉಚ್ಚರಿಸಲಿಲ್ಲ. ಆದರೆ ಅದು ಬಿರುಗಾಳಿಯ ಪೂರ್ವದಲ್ಲಿಯ ಶಾಂತತೆ ಎಂಬುದು ನನಗೆ ಗೊತ್ತು! ಆ ಕೊಡೆಯನ್ನು ಜೊತೆಯಲ್ಲಿ ತೆಗೆದುಕೊಳ್ಳಲಿಕ್ಕೆ ಹೇಳುವ ಮೂರ್ಖತನ ನನ್ನದೇ ಆಗಿತ್ತೆಂಬುದನ್ನು ನಾನು ಮರೆತಿರಲಿಲ್ಲ.

ಅಂತೂ 'ನಾರದ ಭವಿಷ್ಯ'ವು ನಿಜವಾಯಿತು; ಇಷ್ಟೇ!

ಕರ್ಣಾಟಕ ಜನಜೀವನ
(ಸಂಶೋಧನಾತ್ಮಕ ಗ್ರಂಥ)

ಬರೆದವರು : ಬೆಟಗೇರಿ ಕೃಷ್ಣಶರ್ಮ

ಮುಂಬಯಿ ಸರಕಾರದ ಸಂಸ್ಕೃತಿ ಸಂಶೋಧನ ಸಮಿತಿಯ ಪ್ರೋತ್ಸಾಹದಿಂದ ಪ್ರಕಟವಾಗಿದೆ.

ನೊನ್ನೆ ನೊನ್ನೆಯೆ ಅಚ್ಚಾಗಿ ಹೊರಕ್ಕೆ ಬಂದಿದೆ.

ಪ್ರೊ. ಜಾಗಿರದಾರರು ವಿಚಾರಪ್ರಚೋದಕ ಮುನ್ನುಡಿಯನ್ನು ಬರೆದಿದ್ದಾರೆ.

ಸುಂದರ ಪ್ರತಿಗೆ ೧-೮-೦ ಕ್ಯಾಲಿಕೊ ಪ್ರತಿಗೆ ೨-೦-೦

ಬೇಕಾದವರು 'ಜಯಂತಿ' ಕಾರ್ಯಾಲಯಕ್ಕೆ ಬರೆಯಿರಿ!

ಮನೋಹರ ಗ್ರಂಥಭಾಂಡಾರದಲ್ಲಿಯೂ ಸಿಕ್ಕುವುದು.

ಶ್ರೀಮದಾನಂದತೀರ್ಥರ ಶಿಕ್ಷಣ ಮೀಮಾಂಸೆ

★

ಅನಂತಜೀವರು ಯೋಗ್ಯತೆಯಲ್ಲಿ ಪರಸ್ಪರ ಭಿನ್ನರಾಗಿರುವುದರಿಂದ ಜಗತ್ತಿನಲ್ಲಿ ಪುನರುಕ್ತಿಯಿಲ್ಲ. ಸ್ವಯೋಗ್ಯತೆಯನ್ನು ಬೆಳಸಿಕೊಂಡು ನಿಜವಾಗಿ ಉಂಡುಟ್ಟು ಕೊನೆಯವರೆಗೂ ವ್ಯಕ್ತಿತ್ವವನ್ನು ಕಾಯ್ದುಕೊಳ್ಳುವುದೇ ಶಿಕ್ಷಣದ ಪರಮೋದ್ದೇಶವು.

ಶ್ರೀ. ಗು. ಭೀ. ಜೋಶಿ ಎಂ.ಎ., ಬಿ.ಟಿ.

ಅವರಿಂದ

ಅನೇಕ ವಸ್ತುಗಳಿಂದೊಡಗೂಡಿದ ಈ ಅಗಾಧ ವಿಶ್ವದಲ್ಲಿ ಏಕತಾನವಾಗಿ ಅನುಭವಹೊಂದಿ, ಏಕಸೂತ್ರವಾಗಿ ಕೆಲಸ ಕೈಕೊಳ್ಳಲಿಕ್ಕೆ ಏಕತಂತ್ರವಾದ ಆಚರಣೆಯು ಆವಶ್ಯವಾದುದು. ಯುಗ-ಯುಗಕ್ಕೂ ಲಯ ಸೃಷ್ಟಿಗಳಿದ್ದರೂ, ಪ್ರವಾಹರೂಪದಿಂದ ಅಖಂಡವಾಗಿ ಹರಿಯುವ ಈ ಜಗತ್ತು, ಯುಗಯುಗಕ್ಕೆ ಹೊಸಹೊಸದಾಗಿ ಮೊಗವೆತ್ತುತ್ತಿದೆ. ಈ ಹೊಸತಿಗೆ ಬಾಹ್ಯಸೃಷ್ಟಿಯಲ್ಲಿ ಅಂತಹ ಪ್ರಬಲವಾದ ಕಾರಣವೇನೂ ಇಲ್ಲ; ಅಂತ-ರ್ದೃಷ್ಟಿಯೇ ನಾನಾವಸ್ತುಗಳ ವಿಕೀರ್ಣ ಪ್ರಪಂಚವನ್ನು ಒಳಸುಗ್ಗಿ, ಜೀವನಗುರಿಯ ಕೈದೀಪದ ಬೆಳಕಿನಲ್ಲಿ ಅವುಗಳನ್ನು ವಿಂಗ-ಡಿಸಿ, ವಿವೇಚಿಸಿ, ಸಂಯೋಜಿಸಿ, ಹೊಸ ಹಂಚಿಕೆಯನ್ನು ಹುಡುಕಿ, ಅದನ್ನು ಇಡಿಯ ಜಗತ್ತಿನ ಅಭ್ಯಾಸಕ್ಕಾಗಿ, ಆಚರಣೆಗಾಗಿ, ಬಯಲಿಗಿಡುವುದು. ಈ ತರದ ಹೊಸ ಹಂಚಿಕೆಗೆ ಸರ್ವವ್ಯಾಪಕವಾದ, ಸುಸಂ-ಬದ್ಧವಾದ ಆಷ್ಟ ಅರಿವು ತಳಹದಿಯಾಗ ಬೇಕು. ವ್ಯಕ್ತಿಗೆ, ಅನೇಕ ವಸ್ತುಗಳ ಪ್ರಾಮಾಣಿಕ ವ್ಯವಹಾರವನ್ನು ಮಾಡಲಿಕ್ಕೆ – ಎಂದರೆ ಶುದ್ಧವಾದ ಆಚರಣೆಗೆ – ಶುದ್ಧವಾದ ಮತ್ತು ಸುಸಂಬದ್ಧವಾದ ಜ್ಞಾನವು ಬೇಕು. ಅಜ್ಞಾನದಲ್ಲಿ ಅರೆದು ಮುದ್ದೆಮಾಡಿದ ಐಕ್ಯವಲ್ಲ; ಬರಿದೆ ಭ್ರಾಂತನೆಂದು ದೂರಿದ ಮಾಯೆಯಲ್ಲ; ಆದರೆ ಕೇವಲ ನಿರ್ದುಷ್ಟವಾದ ಏಕತಾನವೇ, ಏಕಸೂತ್ರತೆಯೇ ಅದರ ವ್ಯಾಪಕತ್ವವನ್ನು ನಿರ್ಣಯಿಸುವುದು. ಈ ಏಕತಾನದ ಅರಿವಿನಿಂದ ಜೀವನ ಸ್ಥಾನಮಾನಗಳು ತಿಳಿದು ಗುರಿಯು ಗೊತ್ತಾಗಿ, ಅವನ ಬಾಳುವೆಗೆ ಬೆಡಗು ಬರುವುದು:

" Whenever Philosophy has been taken seriously it has always been assumed that it signified achieving a wisdom which would influence the conduct of life. " —*Dewey*

ತತ್ತ್ವವಿಚಾರವು ಜೀವನಚರಿತ್ರೆಗೆ ಅನುಕೂಲವಾದ ವಿಜ್ಞಾನವನ್ನು (wisdom) ಒದಗಿಸಿಕೊಡುವುದು. ಶಿಕ್ಷಣವು ಆ ವಿಜ್ಞಾನಕ್ಕೆ ಅನುಕೂಲವಾಗುವ ಹಾಗೆ, ಸೃಷ್ಟಿನಿಯಮವನ್ನು ಲಕ್ಷ್ಯದಲ್ಲಿಟ್ಟುಕೊಂಡು ವ್ಯಕ್ತಿಗಳ ಶೀಲಸ್ವಭಾವಗಳನ್ನೂ, ಬುದ್ಧಿಭಾವನೆಗಳನ್ನೂ, ಆಚಾರವಿಚಾರಗಳನ್ನೂ ಮಾರ್ಪಾಟಮಾಡುವುದು–ಒಂದು ಪಡಿಯಚ್ಚಿನಲ್ಲಲ್ಲ; ನಾನಾ ಸೃಷ್ಟಿಸ್ವಭಾವದಿಂದ ಸಿದ್ಧವಾದ ಅನೇಕ ಪಡಿಯಚ್ಚುಗಳ ವೈವಿಧ್ಯವನ್ನು ಕಾಯ್ದುಕೊಂಡು ಅನೇಕತೆಯಲ್ಲಿ ಏಕತ್ವವನ್ನು ತರುವುದು.

ಈ ತರದ ತತ್ತ್ವವಿಚಾರದ ತಳಹದಿಯು ಪೂರ್ಣಪ್ರಜ್ಞರ ಮತದಲ್ಲಿ ಆಧುನಿಕ ಪ್ರಪಂಚದಲ್ಲಿ ಶಿಕ್ಷಣದ ಪ್ರಸಾರಕ್ಕೆ ಎಷ್ಟು ಮನೋಹರವಾಗಿ ದೊರೆಯುತ್ತಿದೆಯೆಂಬುದನ್ನು ತೋರಿಸುವುದೇ ಈ ಪುಟ್ಟಲೇಖನದ ಉದ್ದೇಶವಾಗಿದೆ.

ಜಗತ್ತಿನ ಅಸಂಗತ ಸಂಗತಿಗಳನ್ನು (facts) ಕಲೆಹಾಕಿ, ಅವುಗಳ ಪ್ರಾಮಾಣ್ಯವನ್ನಲ್ಲಗಳೆಯದೆ ಅವುಗಳ ಸುಸಂಗತಿಯನ್ನು ಹುಡುಕುವುದು ಮೊದಲಿನ ಕೆಲಸವು. ಪ್ರತ್ಯಕ್ಷಕ್ಕೆ ಪ್ರಾಮಾಣ್ಯವನ್ನೊಪ್ಪದ ಮತದಲ್ಲಿ ಶಿಕ್ಷಣ ತತ್ತ್ವವಿಚಾರದ ಈ ಮೂಲನಿಯಮಕ್ಕೇ ಬಾಧೆ ಬರುವುದು. 'भेदसहस्रैरपि घटो न पटायते ।' ಎಂದು ಸಾರಿಹೇಳಿ, ಇಂದ್ರಿಯಗಳಿಗೆ ಗೋಚರಿಸುವ ವಸ್ತುಗಳಲ್ಲಿ ಪ್ರತ್ಯಕ್ಷವೇ ಪ್ರಬಲವಾದ ಪ್ರಮಾಣವೆಂದು ಒಪ್ಪಿದ್ದರಿಂದ, ಜಗತ್ತೂ ಜಗತ್ತಿನಲ್ಲಿರುವ ಅನುಭವಗಳೂ ಸತ್ಯವಾದುವು. ಅದರ ವೈವಿಧ್ಯದಿಂದ ನಾನಾತ್ವದಿಂದ' ಬೆದರಿ ಬೆಚ್ಚಿ ಬೀಳುವ ಆವಶ್ಯಕತೆಯಿಲ್ಲ. ಜೀವನ ಅವುಗಳಲ್ಲಿಯ ಏಕತಂತ್ರತೆಯನ್ನು ಹುಡುಕಿಕೊಂಡರೆ, ತನ್ನ ವ್ಯಕ್ತಿತ್ವವನ್ನು ಗಳಿಸಿ ಉಳಿಸಿ ಅವೆಲ್ಲವುಗಳಿಗೂ ಉತ್ತ ಕೊಡಬಹುದು. ನಿಲ್ಲಲು ನೆಲವಿಲ್ಲದ ಇವನು ಹೊಂದುವ ಶಿಕ್ಷಣವು ಮಾಯೆಯೇ ಆದುದರಿಂದಲೇ 'न शास्ता न शास्त्रम्'— ಕಲಿವವನು ಇಲ್ಲ, ಕಲಿಸುವವನು ಇಲ್ಲ, ಕಲಿಯುವುದು ಮೊದಲೇ ಇಲ್ಲ, ಎಂ ಒಪ್ಪುವರು.

ಮಹಾಶಿಕ್ಷಣತಜ್ಞರಾದ ಟಿ. ಪಿ. ನನ್ನ " Individuality is the ideal life. " ಎಂದು ಪ್ರತಿಪಾದಿಸಿರುವರ ಜೀವನ ಚರಿತ್ರೆಯಲ್ಲಿ ತೋರುವ ವೈಶಿಷ್ಟ್ಯವು ಮಹಾ ಪವಿತ್ರವಾದದ್ದು. ಶಿಕ್ಷಣವು ಮಹಾಪ್ರಯಾಸದಿಂದ ಆ ವೈಶಿಷ್ಟ್ಯವನ್ನು ಗುರುತಿಸಿ, ಹುರುಪಿಸಿ ಹೊಸ ಸಂತೆ ಹರಿಸಬೇಕು. ಹೀಗೆ ವ್ಯಕ್ತಿಗಳ ವೈಶಿಷ್ಟ್ಯವಿರುವಂತೆ ಸಾಂಗತ್ಯವೂ ಕಂಡು ಬರುವುದು. ವೈಶಿಷ್ಟ್ಯವು ವಿಸ್ಫುಲಿತವಾ

ಟೆಯಲಾರದು. ಸಮಾಜಸಂಗತಿಯಲ್ಲಿ ವ್ಯಕ್ತಿಯ ಪುಷ್ಟಿಯು. Unity amid diversity. ಅನಂತಜೀವರು ಯೋಗ್ಯತೆ, ಯಲ್ಲಿ ಪರಸ್ಪರ ಭಿನ್ನರಾಗಿರುವುದರಿಂದ ಜಗತ್ತಿನಲ್ಲಿ ಪುನರುಕ್ತಿಯಿಲ್ಲ. ಸ್ವಯೋಗ್ಯತೆಯನ್ನು ಬೆಳಸಿಕೊಂಡು ನಿಜವಾಗಿ ಉಂಡುಟ್ಟು ಕೊನೆಯವರೆಗೂ ವ್ಯಕ್ತಿತ್ವವನ್ನು ಕಾಯ್ದುಕೊಳ್ಳುವದೇ ಶಿಕ್ಷಣದ ಪರಮೋದ್ದೇಶವು.

ಶಿಕ್ಷಣದಲ್ಲಿ ಜೀವನಿಗೆ ಸ್ವಾತಂತ್ರ್ಯವೆಷ್ಟು? ಈ ಪ್ರಶ್ನೆಯೆಂದರೆ ತತ್ತ್ವವಿಚಾರದಲ್ಲಿ ಬಲು ಕಠಿನವಾದ ಸಂಕಲ್ಪಸ್ವಾತಂತ್ರ್ಯವು (Freedom of will) ಜೀವನಿಗೆ ಉಂಟೋ ಇಲ್ಲವೋ ಎಂಬ ವಿಚಾರವು. ಪೂರ್ವದಲ್ಲಿಸಿದ್ಧವಿದ್ದುದೇ ವಿಕಾಸಹೊಂದುವುದೆಂದು ಪ್ರಾಕೃತವಾದಿಗಳೂ, ಮನಸ್ಸಿಗೆ ಸಂಪೂರ್ಣ ಸ್ವತಂತ್ರತೆಯುಂಟೆಂದು ತಾತ್ತ್ವಿಕರೂ ಹೇಳುವ ಎರಡೂ ಮಾತುಗಳು ತೀರ ನಿಕರದ ಮಾತುಗಳೆಂದು ಆಚಾರ್ಯರು "कर्ता शास्त्रार्थवत्वात २-३-३३" ಜೀವನು ಸ್ವತಂತ್ರ ಕರ್ತೃವಾದರೂ, ಎಲ್ಲ ಪರಮಾತ್ಮಾಧೀನವಾದುದರಿಂದ ಅವನಿಗೆ ದತ್ತಸ್ವಾತಂತ್ರ್ಯವುಂಟೆಂದು ಒಪ್ಪಿದ್ದಾರೆ. ಜೀವನು ಗಟ್ಟಿಮುಟ್ಟಿಯಾಗಿ ಬಾಳಿ ಬದುಕಬೇಕಾದುದರಿಂದ, ಈ ಮಿತಿಯಲ್ಲಿ ಸ್ವಾತಂತ್ರ್ಯವುಳ್ಳವನಾಗಿ ತನ್ನ ಬೆಳೆವಣಿಗೆಯನ್ನು ತಂದುಕೊಳ್ಳಲಿಕ್ಕೆ ಶಕ್ತನಾಗುತ್ತಾನೆ.

ಸರ್ವಾಂಗಸೌಷ್ಟವವಾದ ಶಿಕ್ಷಣವು ನಿರ್ಮಾಣವಾಗಬೇಕಾದರೆ ಭಾವ-ಬುದ್ಧಿ ಕರ್ತೃತ್ವಶಕ್ತಿಗಳ ಬೆಳೆವಣಿಗೆಯಲ್ಲಿ ಒಂದು ಸಮ್ಮೇಳವು ಬೇಕು. "When the cold analytic intellect is suffered by the warm, life-giving glow of love, it becomes the greatest for good". ಇದಕ್ಕೆ ಜ್ಞಾನ-ಕರ್ಮ-ಭಕ್ತಿಗಳ ವೈಷಮ್ಯವನ್ನು ಅಳಿದು ಮೂರನ್ನೂ ಬೆರಸಿದ ಮಹಾಪದ್ಧತಿಯನ್ನು ಸಿದ್ಧಮಾಡಬೇಕು. ಆಚಾರ್ಯರ ಭಕ್ತಿಯ ವ್ಯಾಖ್ಯೆಯಲ್ಲಿ ಜ್ಞಾನವೂ ಕರ್ಮವೂ ಸ್ನೇಹವೂ ಬೆರೆತು ಏಕಪ್ರವಾಹವಾಗಿದೆ. 'कुरुकर्म निजम्=ನಿನ್ನ ಕೆಲಸವನ್ನು ನೀನು ಮಾಡು' ಎಂಬ ಮಾತನ್ನು ಸೊಲ್ಲುಸೊಲ್ಲಿಗೂ ಹೇಳಿ ಮನದ ಮೂರೂ ಎಳೆಗಳು ಗಟ್ಟಿಯಾಗಿ ಹುರಿಯಾಗಿ ಕೊನೆಗೆ ಹೊಸೆಯಬೇಕೆಂದು ಆಚಾರ್ಯರ ಅಭಿಪ್ರಾಯವು. ಪ್ರೇಮದಲ್ಲಿ ವಿವೇಕವಿರಲಿ; ವಿವೇಕದಲ್ಲಿ ಸ್ನೇಹ ಬೆರೆಯಲಿ; ವಿವೇಕ-ಸ್ನೇಹಗಳೆರಡಕ್ಕೂ ಕೃತಿಯು ದಾರಿ ತೋರಲಿ. ಇದು ಶಿಕ್ಷಣದ ಮೆಟ್ಟು.

ಶಿಕ್ಷಣದ ಅಂತಿಮಧ್ಯೇಯವು ನನ್ನ ವ್ಯಕ್ತಿತ್ವವನ್ನು ಬೆಳಸಿಕೊಂಡು ನನ್ನ ನಿಜವಾದ-ಯಥಾಯೋಗ್ಯವಾಗಿ ಪೂರ್ಣವಾದ ನನ್ನ ರೂಪವನ್ನು ಹೊಂದುವುದು. 'Be thyself' ಇದೇ ಅಲ್ಲವೇ ಮುಕ್ತಿಯು. (मुक्तिर्हित्वाऽन्यथारूपं स्वरूपेण व्यवस्थितिः) ನನ್ನ ಸ್ವರೂಪವು ಸಾಂಗತ್ಯವನ್ನವಲಂಬಿಸಿದೆ. ಆ ಸಾಂಗತ್ಯವು ನನ್ನಂತಹ ಅನೇಕ ವ್ಯಕ್ತಿಗಳ ಸಾಂಗತ್ಯವಷ್ಟೇ ಅಲ್ಲ; ಆದರೆ ಆ ಎಲ್ಲ ವ್ಯಕ್ತಿಗಳಿಗೂ ವ್ಯಕ್ತಿತ್ವವನ್ನು ಕೊಟ್ಟು, ಎಲ್ಲರಿಗೂ ಪರಮಸಾಂಗತ್ಯವನ್ನು ತನ್ನದ್ವಾರಾ ಸಿದ್ಧಗೊಳಿಸುವ ಪರಮಾತ್ಮನ ಸಾಂಗತ್ಯವು ಬೇಕು. ಅವನಿಂದಲೇ ವ್ಯಕ್ತಿತ್ವದ ಪೂರ್ತಿಯು. "न सामान्यादप्युपलब्धेर्मृत्युवन्नहि लोकापत्तिः ॥ ३-३-५३" ಎಂಬ ಸೂತ್ರದಲ್ಲಿ ಪರಮಾತ್ಮನ ಸಾಮಾನ್ಯರೂಪದಿಂದ ಜೀವನಿಗೆ ಮುಕ್ತಿಯಿಲ್ಲ; ವ್ಯಕ್ತ್ಯನುಯೋಗ್ಯವಾದ ವಿಶಿಷ್ಟವಾದ ಬಿಂಬರೂಪದಿಂದಲೇ ಅವನಿಗೆ ಮುಕ್ತಿಯು. ಪರಮಾತ್ಮನಲ್ಲಿಯ ಏಕತ್ವ ಅನೇಕತ್ವಗಳು ಜೀವನಲ್ಲಿಯೂ ಒಂದುತರದ ಏಕತ್ವನಾನಾತ್ವಗಳನ್ನು ಸಿದ್ಧಗೊಳಿಸುತ್ತವೆ.

ಇಂತಹ ಉಚ್ಚತರಗತಿಯು ದೊರೆಯಬೇಕಾದರೆ ಶಿಕ್ಷಣವೂ (ಸಾಧನವೂ) ಉಚ್ಚತರಗತಿಯದೇಬೇಕು. God-realisation ವಿಭೂತಿದರ್ಶನ, ಅಪರೋಕ್ಷವೇ ಶಿಕ್ಷಣದ ಅಂತಿಮಧ್ಯೇಯವು. ಅದಕ್ಕೆ ವ್ಯವಹಾರವನ್ನು ಅಲ್ಲಗಳೆಯುವ ಕಾರಣವಿಲ್ಲ. ಸಣ್ಣಪುಟ್ಟದರಲ್ಲಿ ಹಿರಿಯ ಕಿರಿಯದರಲ್ಲಿ ಅವನನ್ನು ಕಾಣುವುದು ಕೊಂಡಾಡುವುದೇ ಅಭ್ಯಾಸವು. ಈ ಅಭ್ಯಾಸದ ಅತಿರೇಕದಲ್ಲಿ ಎಲ್ಲೆಡೆಯಲ್ಲಿಯೂ ಅವನೇ ತೋರುತ್ತಾನೆ. ಎಲ್ಲ ಶಬ್ದಗಳಿಂದಲೂ ಅವನೇ ಬೋಧಿತನಾಗುತ್ತಾನೆ. ಅನ್ಯಿಗರು ಲೌಕಿಕವನ್ನು ಮಾತಾಡಿದರೂ ಅದರಿಂದ ಇವನಿಗೆ ಪರಮಾತ್ಮನ ಬೋಧೆಯೇ ಆಗುತ್ತದೆ. ಮುಖ್ಯವಾಗಿ ಎಲ್ಲ ಶಬ್ದಗಳೂ ಪರಮಾತ್ಮನನ್ನು ಬೋಧಿಸುತ್ತವೆ; ಅಮುಖ್ಯವಾಗಿ ಇತರ ವಸ್ತುಗಳನ್ನು. ಇಂಗ್ಲೀಷಿನಲ್ಲಿ ದೊಡ್ಡಕ್ಷರಗಳಿಂದ ಬರೆದ Him, Who ದೇವರಿಗೆ ಸಂಬಂಧಪಟ್ಟವು; ಅವೇ him who ಸಣ್ಣಕ್ಷರದಿಂದ ಬರೆದರೆ ಲೋಕಕ್ಕೆ ಸಂಬಂಧಪಟ್ಟವು. ಎಲ್ಲಕಡೆಗೂ ಅವನ ಬೆಳಕೇ; ಎಲ್ಲ ನಪ್ಪುಳವೂ ಅವನ ಸ್ತುತಿಯೇ; ಎಲ್ಲ ವೈಭವವೂ ಅವನ ಸಂಪತ್ತೇ. ಈಗ ನಿಜವಾದ ಜಗತ್ತಿನ ಬೆಲೆಯು ಅವನಿಗೆ ದೊರೆಯುವುದು; ಎಲ್ಲ ವಸ್ತುಗಳ ಸಾರ್ಥಕತೆಯು ಮನವರಿಕೆಯಾಗುವುದು. ತನ್ನ ಬಾಳಿಗೆ ಕಳೆ ಏರುವದು.

ಶಿಕ್ಷಣವು ಹೊಸ ಮಾರ್ಪಡು ಹೊಂದುವಾಗ, ಹಳೆಯ ಶಿಕ್ಷಣವಿಮಾಮಾಂಸೆಯೂ, ಅದರ ಹೆಗ್ಗುರಿಗಳೂ ಅಧಿಕಾರಿಗಳ ಗಮನಕ್ಕೆ ಬರಲೆಂಬುದೇ ಇದರ ಫಲಶ್ರುತಿಯು.

'ಆನಂದಕಂದ'ರ .... ಹೊಸ ಕಥಾಸಂಗ್ರಹ .... 'ನಮ್ಮ ಬದುಕು'

— ಬೇಕಾದವರು —

'ಜಯಂತಿ' ಕಾರ್ಯಾಲಯಕ್ಕೆ ಕಾಗದ ಬರೆಯಿರಿ!

[illegible]

ಹಾವಳಿ

'ವಿನೋದ ಪ್ರಬಂಧ'

★

ಅಜ್ಞಾನಮೂಲವಾದ ಹೆದರಿಕೆ ಹಗ್ಗವನ್ನೂ ಹಾವೆಂದು ಭಾವಿಸಹಚ್ಚುವುದು. ಈ ಹಾವಳಿಯ ನಾಯಕನ ಹೆದರಿಕೆ, ನಿಶ್ಚಿಂತೆಯಿಂದಿರಬಹುದಾದ ರಾತ್ರಿಯನ್ನೂ ಗಲಾಟೆಗೆ ಆಸ್ಪದವನ್ನಾಗಿ ಮಾಡಿತು; ಬಾರ್ಬರ್ಸ್ ಸ್ಕ್ವೇರಿನ ಜನರ ಹರಟೆಗೆ ಸೊಗಸಾದ ಸನ್ನಿವೇಶವನ್ನು ಒದಗಿಸಿ ಕೊಟ್ಟಿತು.

★

ನಮ್ಮೂರಲ್ಲಿ ಸಿರಿವಂತರೇ ಬಹಳ ಜನ. ನನ್ನಂತಹ ಬಡವರಿಲ್ಲವೆಂತಲ್ಲ; ಆದರೆ ಪರಪೂರಿನವರಿಗೆ ನಾವೆಲ್ಲರೂ ಸಿರಿವಂತರಾಗಿಯೆ ಕಾಣುತ್ತಿದ್ದೆವು. ಆದುದರಿಂದ ನಮ್ಮ ಊರಲ್ಲಿ ಕಳ್ಳರ ಹಾವಳಿಯು ಪ್ರತಿವರ್ಷವೂ ಇದ್ದದ್ದೇ. ಸಾಧಾರಣವಾಗಿ, ನುರಿತ ಕಳ್ಳರೆಂದರೆ ತಮ್ಮ ಬೇಟೆಯನ್ನು ಜಪ್ಪಿಸಿ ಟಣ್ಣನೆ ಬಲೆಯಲ್ಲಿ ಹಿಡಿಯುವವರು. ಕಳವೆಂದರೆ ಅದೊಂದು ದೊಡ್ಡ ಶಾಸ್ತ್ರ; ಕಲೆ. ಸುಲಭಸಾಧ್ಯವಲ್ಲ; ಜೂಜಾಡಿದ ಹಾಗೆ. ಗೆದ್ದರೆ ಕೈತುಂಬ ಹೊನ್ನು; ಇಲ್ಲವಾದರೆ ಕೈಯಲ್ಲಿ ಕಾರ್‌ಬೊನ್ನಿನ ಕಡಗ; ಬಾಡಿಗೆಯಿಲ್ಲದ ಮನೆಯ ವಾಸ! ಆದುದರಿಂದಲೆ ಈ ಶಾಸ್ತ್ರವನ್ನು ಅವಗತ ಮಾಡುವುದು ಕಠಿನ. ಈ ಕಸಬು ಗೊತ್ತಿಲ್ಲದ ಹೊಸಬರು ನಮ್ಮಂತಹ ಬಡವರನ್ನು ಪೀಡಿಸುವ ಸಂಭವವೂ ಉಂಟು.

ದೀಪಾವಳಿಯೆಂದರೆ ಹಬ್ಬದ ಹಬ್ಬ, ಆವಳಿ, ಆಗರ, ಸುರಿಮಳೆ! ಅಳಿಯಂದಿರು ಅಳಿಯತನಕ್ಕೂ, ಅವರ ಆಪ್ತೇಷ್ಟರು ಮಿತ್ರರು ಮತ್ತು "ಮಿಷ್ಟಾನ್ನ ಮಿತರೇ ಜನಾಃ" ಎಂಬಂತೆ ಬೇರೆ ಜನರು ಇವರೆಲ್ಲ ಬೀಗತನಕ್ಕೂ ಬರುವರು. ಬದಿಗೆಯ ದಿವಸ ಸಹೋದರಿಯರು ತಮ್ಮ ತಮ್ಮ ಸಹೋದರರನ್ನು ಕರೆದುಣಿಸಿದ ಸವಿಯೂಟದ ಪ್ರತಿಫಲವೆಂದು, ಸಹೋದರರು ಅವರಿಗೆ ತದಿಗೆಯ ದಿವಸ ಮುಯ್ಯಿಮಾಡುವರು. ಹೀಗಾಗಿ ಎಲ್ಲರಲ್ಲಿಯೂ ಬರುವ ಹೋಗುವ ಜನ ಬಹಳ. ಅಲ್ಲದೆ ದೀವಳಿಗೆಯೆಂದರೆ ಎಲ್ಲೆಡೆಯೂ ಜಯಜಯಕಾರ! ಲಕ್ಷ್ಮೀಪೂಜೆಯ ಸಡಗರ, ಸಿಂಗಾರ!! ದೊಡ್ಡವರ ದೊಡ್ಡಸ್ತಿಕೆಯು ಹೊರಬೀಳಲು ಅಥವಾ ಅದನ್ನು ಹೊರಗೆಡುಹಲು ಇದು ಒಳ್ಳೆಯ ಸಂದರ್ಭ. ಹೆಂಗೆಳೆಯರು ವಸ್ತ್ರ ಒಡವೆಗಳನ್ನಿಟ್ಟುಕೊಂಡು, ಚಿಗುರೆಯ ಹಿಂಡಿನಂತೆ ಬೀದಿಯಲ್ಲಿ ಅಲೆದಲೆದು, ಹೆಮ್ಮೆಪಟ್ಟು, ಒನಪು-ವಯ್ಯಾರದಿಂದ ಮೆರೆಯುವರು. ಚಿಕ್ಕಮಕ್ಕಳು ಹಬ್ಬದೂಟ ಫಲಹಾರಾದಿಗಳಿಂದ ಹುರಿದುಂಬಿದವರಾಗಿ, ವಸ್ತ್ರಾಭರಣಗಳ ಲಾಭದಿಂದ ಉನ್ಮತ್ತರಾಗಿ, ತಮ್ಮ ಆನಂದೋದ್ರೇಕಗಳನ್ನು ವ್ಯಕ್ತಪಡಿಸುವರು. ಒಂದೇ ಮಾತಿನಲ್ಲಿ ಹೇಳಬೇಕಾದರೆ ದೀಪಾವಳಿಯು ಸಿರಿವಂತರ ಸಿರಿವಂತಿಕೆಯ ಸಂಪತ್ತನ್ನು ಎಲ್ಲರೆದುರಿನಲ್ಲಿ ತೂಗಿ ಪರೀಕ್ಷಿಸುವ ಒರೆಗಲ್ಲು; ಕಳ್ಳರಿಗೆ ಪುಕ್ಕಟೆಯಾಗಿ ಸಿಕ್ಕ ಮಾಪು—ತಕ್ಕಡಿ!

ಇವೆಲ್ಲ ಕಾರಣಗಳ ಮೂಲಕ ಕಳ್ಳರ ಹಾವಳಿಯು ದೀಪಾವಳಿಯಲ್ಲಿಯೇ ಹೆಚ್ಚು. ಆಗಲೇ ಅವರಿಗೆ ಸುಗ್ಗಿ. ಅವರು ತಮ್ಮ ವರ್ಷದ ಬೇಜಿಮೆಯನ್ನು ಈ ಹಬ್ಬದ ತಿಂಗಳಲ್ಲಿಯೆ ದುಡಿಯುವುದು ರೂಢಿ. ಮೇಲಾಗಿ ಈ ವರ್ಷದ ದುಷ್ಕಾಳವು ಹೊಟ್ಟೆಗಿಲ್ಲದವರನ್ನೆಲ್ಲ ಕಳವಿಗೆಳೆಯುತ್ತಿತ್ತು. ಪ್ರತಿದಿನವೂ ಎದ್ದಕೂಡಲೆ ಜನರು ತಮ್ಮ ತಮ್ಮೊಳಗೆ ಕ್ಷೇಮಸಮಾಚಾರವನ್ನು ಕುರಿತು ಆಡುವ ಮಾತೆಂದರೆ "ಕಳ್ಳರ ಸುದ್ದಿ ಏನು?" ಎಂದು. ಪ್ರಶ್ನೆಗೆ ಉತ್ತರಗಳು ಮಾತ್ರ ನಾನಾವಿಧವಾಗಿ ಹೊರಬೀಳುತ್ತಿದ್ದುವು. ರಾತ್ರಿಯಲ್ಲಿ ಎಲ್ಲಿಯಾದರೂ ಸ್ವಲ್ಪ ಕಾಲುಸಪ್ಪಳವೊ, 'ಸರ್‌ಸರ್' ಎಂದು ಇನ್ನಾವುದಾದರೂ ಸಪ್ಪಳವೊ ಆದರೆ, ಅಥವಾ ಆದಂತೆ ಭಾಸವಾದರೆ ತೀರಿತು; ಇಂಥವರಲ್ಲಿ ಕಳ್ಳರು ಬಂದಿದ್ದರೆಂದು ಕೆಲವರು, ಕಳವಾಯಿತೆಂದು ಹಲವರು! ಮತ್ತೆ ಕೆಲಜನರು ಎಷ್ಟು ದುಡ್ಡು ಹೋಯಿತು, ಹೇಗೆ ಹೋಯಿತು, ಎಲ್ಲಿ ಕನ್ನ ಕೊರೆದರು, ಹೇಗೆ ಮನೆಯವರನ್ನು ಬಡಿದರು, ಕಳ್ಳರ ಮುಖ, ಮುದ್ರೆ, ಸಂಖ್ಯೆ ಸಾಹಿತ್ಯಾದಿಗಳೆಲ್ಲವನ್ನೂ ವಿಚಾರಿಸಿ, ಚರ್ಚಿಸಿ ಅದನ್ನೇ ಫಲದ್ರೂಪವಾದ ಮಿದುಳಿನಿಂದ ಎಲ್ಲೆಡೆಯೂ ಸಾಗುಮಾಡುತ್ತಿದ್ದರು.

ನಮ್ಮೂರ ಮಧ್ಯದಲ್ಲಿ ಒಂದು ಚೌಕು ಉಂಟು. ಅದು ಲಂಡನ್ನಿನ "Trafalgar Square (ಟ್ರ್ಯಾಫಲ್ಗಾರ್ ಸ್ಕ್ವೇರ್)"ಗಿಂತ ಮಹತ್ವದ್ದು. ಅದಕ್ಕೆ ನಾವು– ಕಾಲೇಜಿನ ಸುಶಿಕ್ಷಿತ ವಿದ್ಯಾರ್ಥಿಗಳು– "Barbers' Square (ಬಾರ್ಬರ್ಸ್ ಸ್ಕ್ವೇರ್)" ಎನ್ನುವೆವು. ಇದಕ್ಕೆ ಎರಡು ಕಾರಣಗಳಿರುವುವು. ಮೊದಲನೆಯದೆಂದರೆ ನಾಪಿತರು ಕೂಡುವ ಸ್ಥಳವದು. ಎರಡನೆಯದೆಂದರೆ, ಊರಲ್ಲಿಯ ಚಿಕ್ಕ ಚಿಕ್ಕ ಬಾಲಕರಿಂದ ವಯೋವೃದ್ಧರವರೆಗೆ ಎಲ್ಲರೂ ಗುಂಪುಗಟ್ಟಿ ನಿಲ್ಲುವ ಜಾಗೆಯದು; ಮನಸೋಕ್ತ ಗೊಡ್ಡುಹರಟೆ ಕೊಚ್ಚುವ ಅಡ್ಡೆ. ಮಿತ್ರರು ಭೆಟ್ಟಿಯಾದರೆಂದರೆ ತಾಸಾನುತಾಸುಗಳವರೆಗೆ ಅಲ್ಲಿ ಹರಟೆ ಹೊಡೆಯುವರು. ಹರಟೆಗೆ ಆದಿಯಿಲ್ಲ, ಅಂತ್ಯವಿಲ್ಲ; ಆಳತೆಯಿಲ್ಲ, ಮಾಪಿಲ್ಲ. ಅದಕ್ಕೆ ಊರೊಳಗಿನ ಇದ್ದಬಿದ್ದ ಸುದ್ದಿಗಳೆಲ್ಲವೂ ಚರ್ಚಾರ್ಹವಾದ ವಿಷಯಗಳೇ. ವೇದಾಂತ– ರಾಜಕಾರಣಗಳಂತಹ ಗಹನವಿಚಾರಗಳೂ, ಚುನಾವಣೆ-ಗ್ರಾಮೋದ್ಧಾರದಂತಹ ಸಾಮಾಜಿಕವಿಷಯಗಳೂ ಶಾಲೆ–ಕಾಲೇಜಿನಲ್ಲಿಯ ಹುಡುಗ–ಹುಡುಗಿಯರ ಉಡಿಗೆ-ತೊಡಿಗೆಗಳೂ, ಚಟುವಟಿಕೆಗಳೂ, ನಡತೆ–ನಡಾವಳಿಗಳೂ, ಇನ್ನಿತರ ವ್ಯವಸಾಯಗಳೂ ಸಾಧಾರಣವಾಗಿ ಮಂಡಿಸಿ ಖಂಡಿಸಲ್ಪಡುತ್ತಿದ್ದುವು.

ಶ್ರೀ. ಶ್ರೀ. ದ. ಕುರ್ತಕೋಟಿ ಬಿ.ಎ. (ಆನರ್ಸ್)

ಅವರಿಂದ

ಇಲ್ಲಿ ಪ್ರಣಯಿ-ಪ್ರಣಯಿನಿಯರ ಪ್ರೇಮಕಥೆ, ಪ್ರೇಮಭಂಗದ ಪ್ರಲಾಪ, ಪ್ರೇಮವೀರರ ಸಾಹಸ- ಶತಕೃತ್ಯ ಇವುಗಳ ಪ್ರಸರು ಚ್ಚಾರವಾಗದ ದಿವಸವಿಲ್ಲ. ಸಿನೇಮಾದಲ್ಲಿಯ ನಟನಟಿಯರ ಅಭಿನಯದ ವಿಮರ್ಶೆ, ವಿವೇಚನೆ ಮತ್ತು ಕೆಲವು ಸಲ ಅದರ ಅಣಕುಗಳೂ ನಡೆಯುತ್ತಿದ್ದುವು. ಇಲ್ಲಿ ಗುಣಗಳಿಗಿಂತ ಅವಗುಣಗಳೇ ಹೆಚ್ಚು ಪ್ರತಿಪಾದಿಸಲ್ಪಡುತ್ತಿದ್ದುವು. ಅದಕ್ಕೇ ಇದರ ಹೆಸರು "Barbers' Square" "ಕ್ಷೌರದವರ ಚೌಕು" ಎಂದು.

ಈ ಚೌಕಿನಲ್ಲಿಯ ಈಗಿನ ವಿಷಯವೆಂದರೆ ಯಾರು ಪಗಡೆಯಾಟದಲ್ಲಿ ಹೇಗೆ ಗೆದ್ದರು, ಯಾರಿಗೆ ಮೂರು ಆಟವಾದರೂ ಕೈಹತ್ತಲಿಲ್ಲ, ಯಾರು ಚಂಡಿಕೆ ಕಟ್ಟಿಯತ್ನಮಾಡಿದರೂ "ಪಶ್ಯಾ" ಬೀಳಲಿಲ್ಲ, ಯಾರಿಗೆ ಕಡೆತನಕ 'ಛಕ್ಕಾ' ಬಿದ್ದುವು ಇತ್ಯಾದಿ ಇತ್ಯಾದಿ. ಇದಕ್ಕೂ ಹೆಚ್ಚಿನದೆಂದರೆ ಕಳವಿನ ಮಾತು. ಕಳ್ಳರ ಸುದ್ದಿ ಗಾಳಿಗಿಂತ ವೇಗವಾಗಿ ಹರಡುತ್ತಿತ್ತು. ಗಾಳಿಯು ಬೀಸುವಾಗ ಸುಗಂಧವನ್ನೂ ತರುತ್ತದೆ; ದುರ್ಗಂಧವನ್ನೂ ತರುತ್ತದೆ. ಈ ಚೌಕಿನಲ್ಲಿ ಮಾತ್ರ ಎರಡನೆಯದೇ ಬಹಳ. ಕಾಲ್ಪನಿಕ ಕಟ್ಟುಕಥೆಗಳನ್ನು ಹುಟ್ಟಿಸಿ ಹೇಳುವ ಜನರು ಇಲ್ಲಿ ಹೆಚ್ಚು.

ಮಾತಿನ ಮಲ್ಲರು ಹೆದರಿಕೆಯಿಂದ ರಾತ್ರಿಯಲ್ಲಿ ಹೊರಬೀಳುತ್ತಿರಲಿಲ್ಲ. ಎಂತಲೆ ಬಾರ್ಬರ್ಸ್ ಸ್ಕ್ವೇರಿನಲ್ಲಿ ರಾತ್ರಿ ಯಾರೂ ಇರುತ್ತಿರಲಿಲ್ಲ. ಆಗ ಕಳ್ಳರು "curfew order" ತೆಗೆದಂತೆ ಭಾಸವಾಗುತ್ತಿತ್ತು. ಹತ್ತುಗಂಟೆ ಹೊಡೆದನಂತರ ಬೀದಿಯು ನಿರ್ಜನವಾಗುತ್ತಿತ್ತು, ಆದರೆ ನಿಶ್ಶಬ್ದವಾಗುತ್ತಿರಲಿಲ್ಲ. ಯಾಕೆಂದರೆ, ಮನೆಯಲ್ಲಿಯೇ ಕುಳಿತು ಗಾಯನಪ್ರೇಮಿಗಳು ನಡೆಯಿಸಿದ ಗಾಯನ-ವಾದನಗಳ ಇಂಪುನಾದವೂ, "ರೇಡಿಯೊ" "ಫೋನೊ"ಗಳ ಧ್ವನಿಯೂ ಹಬ್ಬದ ಮೂಲಕ ಬಹಳ ಹೊತ್ತಿನ ವರೆಗೆ ಇರುತ್ತಿದ್ದುವು. ಯಾರಾದರೂ ಅತ್ಯಗತ್ಯವಾಗಿ ಹೊರಬೀಳುವ ಪ್ರಸಂಗ ಬಂದರೆ ಅಂಜಅಂಜುತ್ತಲೇ ಹೊರಬೀಳುತ್ತಿದ್ದರು. ಕಳ್ಳರ ಭಯದಿಂದ ಬರುಬರುತ್ತ ರಾತ್ರಿಗಳು ಗಂಭೀರ ಮತ್ತು ಭಯಾನಕವಾಗತೊಡಗಿದ್ದುವು.

ನಾವಿರುವುದು ಕಡೆಯ ಸಾಲಿನ ಮನೆ; ಕೇಳುವುದೇನು? ಒಂದೊಂದು ರಾತ್ರಿಯೆಂದರೆ ಒಂದೊಂದು ಯುಗ; ಹೆದರಿಕೆ ನಾವು! ನಾನಂತೂ ಅಭ್ಯಾಸಕ್ಕೆಂದು ನಮ್ಮ ಕಿರುಮನೆಯಲ್ಲಿ ಮಲಗುತ್ತಿದ್ದೆ. ಕಿರುಮನೆಯೆಂದರೆ ಹೋದ ಕೂಡಲೆ ಒಂದು ಕೋಣೆ—ಕಟ್ಟಿಗೆ, ಕಾವಲು, ಎಲೆಯ ಸರ, ಹೆಚ್ಚಾದ ಸಾಮಾನನ್ನು ಒಗೆಯುವ ಒಟ್ಟುವ ಕೋಣೆ— ಕೊಠಡಿ; ಅದನ್ನು ದಾಟಿ ನನ್ನ ಅಭ್ಯಾಸದ ಭವ್ಯ ಪಡಸಾಲೆ— Drawing Hall— ಒಬ್ಬನೇ ರಾತ್ರಿಯನ್ನು ಕಳೆಯಬೇಕೆಂದರೆ ತುಂಬ ಕಷ್ಟವೆನಿಸುತ್ತಿದ್ದಿತು.

* * *

ಇಂದು ನಮ್ಮೂರ ಸಂತೆ; ನನ್ನ ಸೋದರತ್ತೆಯ ಮಕ್ಕಳಿಬ್ಬರೂ ಬಂದಿದ್ದಾರೆ. ಅವರನ್ನು ಮನೆಗೆ ಬರಮಾಡಿಕೊಂಡೆ. ಈ ದಿನಗಳಲ್ಲಿ ಅತಿಥಿಗಳಿಗೆ ತುಂಬಾ ಆದರ; ಏಕೆಂದರೆ ಮನೆ ಕಾಯಲಿಕ್ಕೆ ಕೂಲಿ ಇಲ್ಲದ ಆಳು ಸಿಕ್ಕಂತಲ್ಲವೇ? ಅಂದೆಯೆ ಮರಳಬೇಕೆಂದು ಅವರ ಹಟ; ನನ್ನ ಅತ್ಯಾಗ್ರಹದ ಮೂಲಕ ನಮ್ಮಲ್ಲಿಯೇ ಉಳಿದು ಮುಂಜಾವದಲ್ಲಿ ಎದ್ದು ಹೋಗುವುದಕ್ಕೆ ಒಪ್ಪಿದರು. ನನಗೆ ಹೊಟ್ಟೆ ಹಿಡಿಸಲಾರದಷ್ಟು ಆನಂದವಾಯಿತು. ಒಬ್ಬರಿಗಿಂತ ಇಬ್ಬರು ಲೇಸು. ಮೂವರಿದ್ದರಂತೂ ಮತ್ತಿಷ್ಟು ವಿಹಿತ. ಇಂದಾದರೂ ನಿಶ್ಚಿಂತೆಯಿಂದ ನಿದ್ರೆಗೈಯಬೇಕೆಂದು ನಿರ್ಧರಿಸಿದೆನು. ಮತ್ತೊಂದು ಸಮಾಧಾನವೆಂದರೆ ನನ್ನ ಗೆಳೆಯನಾದ ವೆಂಕಣ್ಣನ ಮನೆಯಲ್ಲಿ ಇಂದು ಪಗಡೆಯಾಟವಿದ್ದುದರಿಂದ ಸುತ್ತುಮುತ್ತಲೂ ಕಳ್ಳರ ಹಾವಳಿ ಕಡಿಮೆಯೆಂದು ನನ್ನ ತರ್ಕ. ನನ್ನನ್ನು ಒತ್ತಾಯದಿಂದ ಆಟಕ್ಕೆ ಕರೆದೊಯ್ಯಲು ವೆಂಕಣ್ಣನು ಬಂದಿದ್ದ. ಎಷ್ಟೋ ದಿನಗಳಿಂದಲೂ ನಿದ್ರೆ ಇಲ್ಲದ್ದರಿಂದ ನಮ್ಮಲ್ಲಿ ಅಪ್ತರು ಬಂದಿರುವರೆಂದೂ, ಅದರಾತಿಥ್ಯ ಮಾಡಿ ಅವರನ್ನು ಮುಂಜಾವದಲ್ಲಿ ಬೀಳ್ಕೊಳ್ಳಬೇಕಾಗಿರುವುದೆಂದೂ ಹೇಳಿ ಪಾರಾದೆನು.

......ಲಕ್ಷ್ಮಣನು ನಿದ್ರೆಗಣ್ಣಿನಲ್ಲಿ ನನ್ನೊಡನೆಯೆ ತಕ್ಕೆ ಬಿದ್ದು ಗುದ್ದಾಡುತ್ತಿದ್ದನು.

ಮನೆಯಲ್ಲಿ ಸಂಜೆಯೂಟವಾದ ಕೂಡಲೆ ಕಿರುಮನೆಗೆ ಅತಿಥಿಗಳೊಂದಿಗೆ ತೆರಳಿದೆನು. ಸುದ್ದಿಗಳಿಗೆ ಸುರುವಾಯಿತು; ಮಾತಿಗೆ ಮೊದಲಿಲ್ಲ ತುದಿಯಿಲ್ಲ. ಆ ಮಾತು ಈ ಮಾತು ಹೊರಡುತ್ತ ಹರಟೆಯು ಕಳವಿನ ಕಡೆಗೆ ಹೊರಳಿತು. ಕಳವಿನ ದಿನಗಳಲ್ಲಿ ಕಳವಿನ ಮಾತು ಸಹಜ. ನಾನೊಬ್ಬ "Barbers' Square" ನ ಸದಸ್ಯ; ಸಾಧಾರಣ ಉಪಾಧ್ಯಕ್ಷನೆನ್ನಲೂ ಅಡ್ಡಿ ಇಲ್ಲ. ಹರಟೆಯ ಮರ್ಮವನ್ನರಿತವ; ಕಾಲ್ಪನಿಕ ಕತೆಗಳನ್ನು ಸ್ವಲ್ಪ ಉಪ್ಪುಕಾರ ಹಚ್ಚಿ, ಪ್ರಸಂಗಾನುಸಾರ ಕರಿಬೇವಿನೊಗ್ಗರಣೆ ಕೊಟ್ಟು ವರ್ಣಿಸುವುದರಲ್ಲಿ ನಿಷ್ಣಾತ. ವಾಗ್ದೇವತೆಯನ್ನು ನನ್ನ ಇಚ್ಛಾನುಸಾರ ತಾಳಕ್ಕೆ ಮೇಳಗೂಡುವಂತೆ ಕುಣಿಸುತ್ತಿದ್ದೆನು. ಆಧಾರಪೂರ್ವಕ, ಉದಾಹರಣೆ ಸಹಿತ ತರತರದ ಕಳವನ್ನೂ, ಕಳ್ಳರ ಚಾರ್ಯ-ಚಾತುರ್ಯವನ್ನೂ ಬಣ್ಣಿಸಿದೆನು. ರಾಮನು (ನಮ್ಮ ಅತ್ತೆಯ ಹಿರಿಯ ಮಗ) ತನ್ನ ಅಲ್ಪಮತಿಗೆ ತಿಳಿದಷ್ಟು ಉತ್ತರಕ್ಕೆ ಪ್ರತ್ಯುತ್ತರವನ್ನು ಕೊಡುತ್ತ ನನ್ನ ಮತಗಳನ್ನಲ್ಲಗಳೆಯಲು ಯತ್ನಿಸಿದನು. ಅದನ್ನು ನಾನು ಲೆಕ್ಕಿಸುತ್ತಿದ್ದಿಲ್ಲ. ಲಕ್ಷ್ಮಣ (ರಾಮುವಿನ ತಮ್ಮ)

For GREY HAIR

BRAHMICA is

A TONIC AND A VITALIZER

incorporating the volatile extracts of Brahmi, Arnica Montana with other approved hair remedies. Prevents falling and turning of hair prematurely grey. Encourages renewed growth and Strengthens the Scalp.

Get it To-day at

ROY & COMPANY

176, *Princess Street*, BOMBAY No. 2.

ಮಾತ್ರ ಮಲಗಿದನು. ನಿದ್ದೆ ಹತ್ತಿತು. ಆತನದು ಕುಂಭಕರ್ಣನ ನಿದ್ದೆ; ಮೇಲಾಗಿ ಎಮ್ಮೆಕರುವಿನಂತೆ "ಗೊರ್ ಗೊರ್" ಸಪ್ಪಳ ಮಾಡಹತ್ತಿದ. ಆದ್ದರಿಂದ ನನ್ನ ಶ್ರೋತೃವೃಂದದಲ್ಲಿ ನೂರಕ್ಕೆ ಐವತ್ತರಂತೆ ಕಡಿಮೆಯಾದದ್ದಲ್ಲದೆ ನನ್ನ ವ್ಯಾಖ್ಯಾನಕ್ಕೆ ಬೇಸತ್ತು ಸ್ಟ್ಯಾಂಪಿಂಗ್ (stamping) (ಕಾಲೇಜಿನಲ್ಲಿಯ ನಿತ್ಯ ದೃಶ್ಯವದು !) ಮಾಡಿದಂತೆ ಎನಿಸಿತು. ಹೀಗಾದಾಗ ಲೆಕ್ಚರರಿಗೆ ಏನೆನಿಸುವದೆಂಬುದನ್ನು ಮನಗಂಡೆ. ಕಾಲೇಜಿನಲ್ಲಿ stampingನ ಮುಖಂಡ ನಾನೇ. ನನ್ನ ಶಸ್ತ್ರವನ್ನು ನನಗೇ ಹೂಡಿದಂತಾಗಿತ್ತು. "ಢಣ್, ಢಣ್ . . . ." ಹನ್ನೆರಡು ಬಡಿದುವು. ರಾಮು ತೂಕಡಿಸ ಹತ್ತಿದನು. ಹರತಾಳ ಮಾಡಿದ ವರ್ಗದಲ್ಲಿಯ ಶಿಕ್ಷಕನಂತೆ ಗೋಡೆ-ಕಂಬಗಳೊಡನೆ ಮಾತಾಡುವುದಿದೆಯೇ? ನಿರ್ವಾಹವಿಲ್ಲದೆ ಮಾತನ್ನು ಮುಗಿಸಿ (ಅರ್ಧಕ್ಕೇ ನಿಲ್ಲಿಸಿ) ಮಲಗಿದೆವು.

* * *

"ಅಯ್ಯಯ್ಯಪ್ಪಾ ಕಳ್ಳರು ! ಏ ಶ್ರೀಪಾದಾ, ಏಳೋ ಕಳ್ಳರು ಬಂದಾರ! . . . ." ಎಂದು ಯಾರೋ ಒದರಿದಂತೆ ಎನಿಸಿತು. ಗಾಬರಿಗೊಂಡೆದ್ದೆ. ಚೀರುತ್ತಿದ್ದವ ರಾಮು. ಆತನು ಕನಸಿನಲ್ಲಿ ಕನವರಿಸುತ್ತಿರುವನೆಂದುಕೊಂಡೆ. "ರಾಮೂ, ಏ ರಾಮೂ ! ಏನು ಕನಸುಗಿನಸು ಬಿದ್ದಿತ್ತೇನು ?" ಎಂದೆ. ಕಳ್ಳರೇ ತನ್ನನ್ನು ಹಿಡಿದರೆಂದು ನಿದ್ದೆಗಣ್ಣಿನಲ್ಲಿ ಹೆದರಿ "ಬಿಡ್ರ್ಯೋ, ನಾ ಬಡವ, ನನ್ನಲ್ಲೇನದ !" ಎಂದು ಕಿರಿಚಿದ. ಸ್ವಲ್ಪ ನಗೆಯಾಡಬೇಕೆಂದು "ಏ ಸುಳ್ಳು ಹೇಳತೀದಿ ! ಎಲ್ಲಾ ಕೊಡತೀದ್ಯೋ ಏನು ತಗೊಳ್ಳ್ಯೋ ಜೀವಾ ! " ಎಂದು ಹೆದರಿಸಿದಂತೆ ಮಾಡಿ ಕುತ್ತಿಗೆಗೆ ಕೈಹಾಕಿದೆ. ರಾಮೂ ಎಚ್ಚತ್ತ. ಕನಸೋ ನೆನಸೋ ತಿಳಿಯದಾಯಿತು. "ಕಳ್ಳರೇನಂತಿದ್ರುಪಾ ?" ಎಂದೆ. ಕಂಡದ್ದು ಕನಸೆಂದು ಮನವರಿಕೆಯಾಗಿ ಬೊಳ್ಳೆಂದು ನಕ್ಕ; ನಾನೂ ಅವನನ್ನನುಕರಿಸಿದೆ. ಪುನಃ ಮಲಗಿದೆವು.

* * *

ಎಲ್ಲೆಡೆಯೂ ಶಾಂತತೆಯು ಹಬ್ಬಿತ್ತು; ಕತ್ತಲೆಯು ಪಸರಿಸಿತ್ತು. ಅಮಾವಾಸ್ಯೆಯ ರಾತ್ರಿಯು ಮಳೆಗಾಲದ ಕಾರ್ಮೋಡಗಳಿಂದುಂಟಾದ ಕಾಡಿಗೆಯಂತಹ ಕಗ್ಗತ್ತಲೆಯಿಂದ ಮತ್ತಿಷ್ಟು ಹೆದರಿಕೆಯನ್ನುಂಟುಮಾಡುತ್ತಿತ್ತು. ಇದಲ್ಲದೆ ಹುಳು-ಹುಪ್ಪಡಿಗಳ "ಚಿರ್ ಚಿಂಯ್" ಎಂಬ ಸಪ್ಪಳವು ಕೀಸರಪಡುತ್ತಿದ್ದಿತು. ನಿದ್ರೆ ಹತ್ತದಿರಲಿಕ್ಕೆ ಇದೊಂದು ಕಾರಣ. ಅಪರಾತ್ರಿಯಲ್ಲಿ ಒಂದು ಬಂಸ್ರ ನಿದ್ದೆಯಾಗಿ ಎದ್ದದ್ದೂ ಒಂದೆಂದು ಬೇರೆಯಾಗಿ ಹೇಳಬೇಕಿಲ್ಲ. ಲಕ್ಷ್ಮಣನ ಘೊರಗುಡುವದೂ ಇವೆಲ್ಲಕ್ಕೆ ಕೈಗೂಡಿಸುತ್ತಿತ್ತು. ನನಗೆ ಮಾತ್ರ ನಿದ್ದೆ ಬರಲೊಲ್ಲದು. ಉರಿಯುವುದರ ಮೇಲೆ ಹುಲ್ಲುಹಾಕಿದ ಹಾಗೆ ಪಗಡೆಯಾಡುವವರ ಒದರಾಟ ಬೇರೆ. "ಕುರುಕುರುಚಾರಿ;— ಹುಳ ಪಲ್ಯಾದ ಕಟ್ಟೀ ಹಿಡದ್ರು ಹೌದಲ್ಲೋ !— ಆನೀ ಮುಂದ ಬಿಡೋ— ಇಂವ್ಯಾಕೋ ಛಕ್ಕಾಕ್ಕs ಬೆನ್ನ ಹತ್ಯಾನ;— ಹೊಟ್ಟೀ ಮನ್ಯಾಗಿನ ಆಕಳಾ ಸರಸು. . . . .ಹುರ್ರ್ಯೋ . . . ." ಕಡಿತವಾದಂತೆ ತೋರಿತು. ನನಗೆ ಮಾತ್ರ ನಿದ್ದೆಹತ್ತಲೊಲ್ಲದೆಂಬ ಹೊಟ್ಟೆಕಡಿತ ! ಬೆಕ್ಕಿಗೆ ಆಟ, ಇಲಿಗೆ ಪ್ರಾಣಸಂಕಟ ! ಆಟವು ಮುಗಿದಂತೆ ತೋರಿತು. ಎಲ್ಲೆಡೆಯಲ್ಲಿಯೂ ಸ್ತಬ್ಧತೆಯಾಯಿತು.

ಕಣ್ಣಿಗೆ ಕಣ್ಣು ಹತ್ತುವುದಿತ್ತು; ಅಷ್ಟರಲ್ಲಿ "ಸರ್ ಸರ್" ಎಂದು ಮಾಳಿಗೆಯ ಮೇಲೆ ಸಪ್ಪಳವಾಯಿತು. ಗಾಳಿ ಎಂದು ಸುಮ್ಮನಿದ್ದೆ. ಸಪ್ಪಳವು ಹೆಚ್ಚಿತು. ಹೆಜ್ಜೆಯ ಸಪ್ಪಳವು ಸ್ಪಷ್ಟವಾಗಿ ಕೇಳ ಬಂತು. ಮಲಗಿದಲ್ಲಿಂದಲೇ ಕಣ್ಣು ಹೊರಳಿಸಿ ರಾಮೂನ ಕಡೆಗೆ ನೋಡಿದೆ. ಅವನು ತಟ್ಟನೆ ಎದ್ದು ಕುಳಿತ, ನಾನೂ ಸಪ್ಪಳ ಮಾಡದೆ ಎದ್ದು ಕುಳಿತೆ. ಒಬ್ಬರಿಗೊಬ್ಬರು ಮಾತನಾಡಲಿಲ್ಲ; ಕೈಸನ್ನೆಯಿಂದಲೇ ಏನುಏನೆಂದು ಕೇಳಿದೆವು. ಸುಮ್ಮನಿರಹೇಳಿದೆವು. ಮೇಲಿನಿಂದ ಕೇಳಬಂದ ಹೆಜ್ಜೆಯ ಸಪ್ಪಳವು ಕಳ್ಳರದಿರಬಹುದೆಂದು ನಮ್ಮ ತರ್ಕ. ಸಪ್ಪಳವು ಕೋಠಡಿಯಲ್ಲಿಯೇ ಕೇಳಬಂತು. ನಮ್ಮ ತರ್ಕವು ನಿಜನೆಂದುಕೊಂಡೆವು. ನಮ್ಮ ಮುಂದಿನ ಪ್ರಶ್ನೆ ಎಂದರೆ "ಸುಮ್ಮನಿರಬೇಕೋ, ಒದರಬೇಕೋ ? ಮಲಗಿದಂತೆ ನಟಿಸಬೇಕೋ, ಎಚ್ಚರಿರಬೇಕೋ ? ಶತ್ರುಗಳಿಗೆ ಶರಣುಹೋಗಬೇಕೋ ಅಥವಾ ಅವರ ಕೂಡ ಕಾದಾಡಬೇಕೋ ?" ಮಲಗುವುದಕ್ಕಿಂತ ಮೊದಲು ಈ ಪ್ರಶ್ನೆಗಳ ವಿವೇಚನೆ ಮಾಡಿದಂತಿದ್ದಿತು. ನಾವು ಹೇಳಿದ ಉದಾಹರಣೆಗಳಲ್ಲಿ, ಇಂತಹ ಪ್ರಸಂಗಗಳಲ್ಲಿ ಯಾರು ಹೇಗೆ ಪಾರಾದರೆಂಬುದನ್ನು ನೆನಪಿಗೆ ತಂದುಕೊಂಡೆವು. ಈ ನಿಷ್ಕರ್ಷೆಯಿಂದ ಹೊರಟ ಮಥಿತಾರ್ಥವೆಂದರೆ, ನಮ್ಮಲ್ಲಿ ಯಾವ ಮೌಲ್ಯವಾದ ವಸ್ತುಗಳಿವೆ ಕಳ್ಳರೇನು ವಿದ್ಯಾರ್ಥಿಗಳೇ; ಅಶನಾರ್ಥಿಗಳು ! ವಾಙ್ಮಯ ಸಾಹಿತ್ಯಗಳ ಚೌರ್ಯಕ್ಕೆ ಬಂದವರಲ್ಲ; ಅನ್ನದೇವತೆಯನು ಬೆನ್ನಟ್ಟಿ ಬೆದರಿಸಿ ಸೆರೆಹಿಡಿಯಲು ಬಂದವರು ! ಆದರೆ ನಮ್ಮಮ್ಮನ ಮಡಿಸೀರೆಯೊಂದು ನನ್ನ ದೃಷ್ಟಿಯಿಂದಲ್ಲದಿದ್ದರೂ ಅವಳ ದೃಷ್ಟಿಕೋನದಿಂದ ಬೆಲೆಬಾಳುವುದು— ಮಹತ್ತ್ವದ್ದು. ಕಳ್ಳರು ಅದನ್ನೇ ಒಯ್ದರೆ ಏನು ಮಾಡಬೇಕು ? ಅಷ್ಟರಲ್ಲಿ ನನಗೆ ಜ್ಞಾಪಕಕ್ಕೆ ಬಂತು. ನಾನೊಮ್ಮೆ ನಗೆಯಾಡಬೇಕೆಂದು ಅಮ್ಮನನ್ನು ಕೇಳಿದ್ದೆ: 'ನಾನೊಬ್ಬನೇ ಇಲ್ಲಿ ಮಲಗುವವ; ಕಳ್ಳರು ಬಂದು ಬಡಿದು ಅದನ್ನಪಹರಿಸಿದರೆ ಹೇಗೆ ?' ಎಂದು. ಆಕೆಯೆಂದಳು

ಅಲ್ಲೋ ಇದೇನಂತೀಯೋ! ನಾನು ಸೀರೀನ ಹಸಿದ ಮಡೀಲೇ ಒಣಗಹಾಕೇನಿ, ಮಡ್ನೀರೂ ಮ್ಯಾಲನೀರೂ ಹಾಕಿ ಹಿಂಡೀನಿ ಅವರ್ಯ್ಯಾಂಗ ಮುಟ್ಟತಾರೋ? ಮೈಲಿಗಿ ಆಗೂದಿಲ್ಲೇನ ಅವರು ಮುಟ್ಟಿದರ?'. ಇಂದು ಕೂಡ ಅಮ್ಮನು ಸೀರೆಯನ್ನು "ಕಳ್ಳರ ಪ್ರೂಫ್" ಮಾಡಿ, ಮಡಿಯಿಂದಲೇ ಒಣಗಹಾಕಿದ್ದು ನನಗೆ ಗೊತ್ತಿತ್ತು. ಆದರೆ ಕಳ್ಳರಿಗೇನು? ಹೇಳೀಕೇಳೀ ಕಳ್ಳರು; ಕೈಗೆ ಸಿಕ್ಕ ಕಿಮ್ಮತ್ತಿನ ವಸ್ತುಗಳನ್ನೆಲ್ಲ ದೋಚಿಕೊಂಡು ಹೋಗುವ ವೀರಭಟರು!

ತಲೆಯಲ್ಲಿಯಂತೂ ವಿಚಾರಸರಣಿಯು ನಡೆದೇ ಇತ್ತು; "ಜಗಣ್ಣನ ಹೊಸ 'ಮೆಕ್ಯಾನೊ' 'ಬ್ಯಾಟ್' ಮೊದಲಾದ ಆಟದ ಸಾಮಾನುಗಳನ್ನೊಯ್ದರೇನು ಮಾಡುವುದು? ಅತನಂತೂ ಹಟಮಾರಿ. ಮೊನ್ನೆ ಅವನಿಲ್ಲದಾಗ ಯಾತಕ್ಕೋ ಅವನದೊಂದು ರೂಪಾಯಿ ತಗೊಂಡೆ; ಬಂದ ಕೂಡಲೇ ಪ್ರಾಮಾಣಿಕತನದಿಂದ ಹೇಳಿದೆ. ಅದೇ ನೆವದಿಂದ 'ಹೋ..'ಅಂತ ಮೂರು ತಾಸು ಅತ್ತ. ಅದಕ್ಕೆ ಎರಡು ರೂಪಾಯಿ ಕೊಟ್ಟರೂ ಸುಮ್ಮನಾಗಲಿಲ್ಲ. ನನ್ನದೇ ಬೇಕೆಂದು ಹಟ ಹಿಡಿದ. ಈಗ ಅವನ ಸಾಮಾನು ಗಳನ್ನು ಕಳ್ಳರಿಂದ ಹೇಗೆ ಕಾಯಬೇಕು? ಕಳ್ಳರ ಕೈಕಾಲುಬಿದ್ದು ಮತ್ತೇನು ತಗೊಂಡರೂ ಅಡ್ಡೀ ಇಲ್ಲ; ಜಗಣ್ಣನ ಆಟದ ಸಾಮಾನುಗಳನ್ನು ಮಾತ್ರ ಮುಟ್ಟಬೇಡಿರಿ' ಎಂದು ಅಂಗಲಾಚಿ ಬೇಡಿಕೊಳ್ಳಬೇಕೆಂದೆ. ಆದರೆ, ಕಳ್ಳರೇನು ಸುಶಿಕ್ಷಿತರೇ? ದಯಾವಂತರೇ? ಮತ್ತು ಮನೆಯೊಡೆಯನಿಗೆ ಬೇಕಾದದ್ದು ಬಿಟ್ಟು ಬೇಕ್ಕದ್ದನ್ನೊಯ್ಯುವವನು ಎಂತಹ ಕಳ್ಳ?"

* * *

ಇವೆಲ್ಲ ವಿಚಾರತರಂಗಗಳ ಮಡುವಿನಲ್ಲಿ ಈಸುತ್ತಿರುವಾಗ ನನಗೊಂದುಪಾಯವು ತೋಚಿತು. ಮೊದಲು ಮೆಲ್ಲಗೆ ಎದ್ದು ದೀಪವನ್ನು ಮತ್ತಿಷ್ಟು ಇಳಿಸಿದೆನು. ಅನಂತರ ಕೋಟಿನ ಕಿಸೆಯಲ್ಲಿದ್ದ ಒಂದೂಕಾಲು ರೂಪಾಯಿಗಳನ್ನು ಟೊಂಕಕ್ಕೆ ಸಿಕ್ಕಿಸಿ, ಫೌಂಟನ್‌ಪೆನ್ ಮತ್ತು ಕೈಗಡಿಯಾರವನ್ನು ತೆಗೆದುಕೊಂಡು, ತುದಿಗಾಲಿನಿಂದ— ಸದ್ದಾಗದಂತೆ ಮೆಲ್ಲನೆ— ಬಾಗಿಲ ಸಮೀಪ ದಲ್ಲಿದ್ದ ಕಪಾಟಿನ ಹತ್ತಿರ ಹೋಗಿ, ಪೆನ್ ಮತ್ತು ಗಡಿಯಾರಗಳನ್ನು ಅದರ ಬುಡದಲ್ಲಿ ಹಿಂದಕ್ಕೆ ಸರಿಸಿ ಇಟ್ಟೆನು. ಅಲ್ಲಿಂದ ಕಪಾಟನ್ನು ತೆರೆಯಲುದ್ಯುಕ್ತನಾದೆನು. ಅದನ್ನು ಸಪ್ಪಳವಾಗದಂತೆ ತೆಗೆಯ ಬೇಕಾದರೆ ಅದೆಷ್ಟು ಹೊತ್ತು ಹಿಡಿಯಿತೋ ಏನೋ, ಅದು ನನ್ನ ಲಕ್ಷ್ಯಕ್ಕೆ ಬರಲೇ ಇಲ್ಲ! ಅಂತೂ ಇಂತೂ ಕಪಾಟನ್ನು ತೆರೆದದ್ದಾ ಯಿತು. ಅದರಲ್ಲಿಯ ಜಗಣ್ಣನ "ಮೆಕ್ಯಾನೊ" "ಬ್ಯಾಟ್" ಮತ್ತು ಇನ್ನಿತರ ಆಟಿಗೆಯ ಸಾಮಾನುಗಳನ್ನು ತೆಗೆದು ಸಮೀಪದ ಮೂಲೆಯಲ್ಲಿಟ್ಟು, ಅವುಗಳ ಮೇಲೆ ವೃತ್ತಪತ್ರವನ್ನು—ಅದಷ್ಟು ಸದ್ದಾಗದಂತೆ— ಚೆನ್ನಾಗಿ ಮುಚ್ಚಿದೆನು. ಎದ್ದುನಿಂತು ಎಲ್ಲ ಕಡೆಗೂ ನೋಡಿ ನಿರೀಕ್ಷಿಸಿದೆನು. ಏನೂ ಕಾಣಿಸಲಿಲ್ಲ. ಎಲ್ಲ ಕಡೆಗೂ ಸ್ತಬ್ಧತೆಯಿತ್ತು. ಅನಂತರ "ಕಳ್ಳರ ಕಳ್ಳ ನಾನೆಂಥವ!" ಎಂದು ಹೆಮ್ಮೆಪಡುತ್ತ ಮೆಲ್ಲಗೆ ನನ್ನ ಹಾಸಿಗೆಯ ಕಡೆಗೆ ಸಾಗಿದೆನು. ಹೋಗುವಾಗ ಹಾದಿಯಲ್ಲಿದ್ದ ದೀಪಮಂಚದ ಕಾಲಿಗೆ ಕಾಲುತಾಗಿ, ದೀಪವು ಕೆಳಕ್ಕೆ ಬಿದ್ದು ನಂದಿಯೇ ಹೋಯಿತು. ಬೆಂಕಿಯ ಪೆಟ್ಟಿಗೆ ಹುಡುಕತೊಡಗಿದೆ; ಆದರೆ ಇಟ್ಟ ಜಾಗೆ ನೆನಪಾಗಲೊಲ್ಲದು. ಏನು ಮಾಡಬೇಕೆಂಬುದು ತೋಚ ದಾಯಿತು. ಮೆಲ್ಲಗೇ ಸಣ್ಣ ಧ್ವನಿಯಲ್ಲಿ ರಾಮೂನನ್ನು ಕೇಳಿದೆ; ಅಷ್ಟರಲ್ಲಿ ಮತ್ತೆ ಏನೋ ಸಪ್ಪಳವಾದಂತಾಯಿತು. ಅವನು "ಏಕ್ಕಲಾದದ್ದೇನಿಲ್ಲ; ಶಂಖನಾದ"! ಎಂದ. ನುರುವಾಯಿತು; ಅವನ ಕೈಸೋತ ಕೂಡಲೆ ನಾನು, ನನ್ನ ಸಹಾಯಕ್ಕವ "ಕಳ್ಳರು ಕಳ್ಳರು" ಎಂದು ಬೊಬ್ಬೆಕುಟ್ಟಿದೆವು.

ಕೋಣೆಯಲ್ಲಿ ಯಾರೋ ನಡೆದಾಡಿದ ಸಪ್ಪಳವು ಕೇಳಬರ ಹತ್ತಿತು; ಹೆದರಿದೆ. ಸಾಯುವುದು ಲೇಸು, ಹೆದರುವುದು ಬೇಡ! ಕಣ್ಣು ಕತ್ತಲೆಗೂಡಿಸಿದುವು. ಮೈ ಕೈ ನಡುಗಿದುವು. ಮೈಯೆಲ್ಲ ಬೆವರೊಡೆಯಿತು. ಬಡಿಯಬೇಡಿರೆಂದು ಅಂಗಲಾಚಿ ಬೇಡಿಕೊಳ್ಳ ಬೇಕೆಂದೆ. ಮಡಿದರೂ ಕಾದಿ ಮಡಿಯಬೇಕು. "Be caught out or bowled out, never throw down the bat" ಎಂದು ಒಂದು ಮನಸ್ಸು ಹೇಳುತ್ತಿತ್ತು. ಇನ್ನೊಂದು "ತಡವಬೇಡ" "Discretion is the better part of valour" ಎಂದು ಹೇಳುತ್ತಿತ್ತು. ದ್ವಿಮನಸ್ಕನಾದೆ; ಮುಗ್ಧನಂತೆ ನಿಂತೆ ಮಾತ್ರ. ಎಲ್ಲ ಅವಯವಗಳೊಂದಿಗೆ ವಿಚಾರವೂ ನಿಂತಿತು. ಏನೂ ತಿಳಿಯದು; ತಿಳಿದದ್ದು ಹೊಳೆಯದು. ಆದರೂ ಧೈರ್ಯಗುಂದದೆ, ಬಡಿಗೆಯನ್ನು ತರಬೇಕೆಂದು ಮೂಲೆಯಲ್ಲಿ ಹೋಗಿ ನೋಡಿದೆ. ಅಜ್ಜಿಯು ಮಡಿಸೀರೆಯನ್ನು ಒಣಗಹಾಕ ಲಿಕ್ಕೆ ತೆಗೆದುಕೊಂಡಿದ್ದಳೋ ಏನೋ, ಅದು ಅಲ್ಲಿರಲಿಲ್ಲ! ಉಪಾಯಗಾಣದೆ ಅಲ್ಲಿಯೇ ನಿಂತುಬಿಟ್ಟೆ.

ಅಷ್ಟರಲ್ಲಿ ಯಾರೋ ದೀರ್ಘಶ್ವಾಸ ಬಿಡುತ್ತ ನನ್ನ ಕಡೆಗೆ ಬರುತ್ತಿರುವಂತೆ ಭಾಸವಾಯಿತು. ಕತ್ತಲೆಯಲ್ಲಿ ಏನೂ ಕಾಣಿಸದು. ಸ್ಪರ್ಶಜ್ಞಾನ ಒಂದೇ ಕೆಲಸಮಾಡುವುದು. ವ್ಯಕ್ತಿಯು ತೀರ ಸಮೀಪಕ್ಕೆ ಬಂದಿತು; ಹತಾಶನಾದೆ. ಈ ಆಪತ್ತಿನಿಂದ ಪಾರು ಮಾಡಿದರೆ ಪಂಚಾಮೃತಾಭಿಷೇಕ ಮಾಡಿಸುವೆನೆಂದು ಕುಲದೇವ ರಿಗೆ ಬೇಡಿಕೊಂಡೆ. ಹನುಮತ್ರಯಗಳ–ರಾಯರ ಹಣಮಪ್ಪ, ನವಾಪುರ ಹಣಮಪ್ಪ, ಸುಗ್ಗೀಕೇರಿ ಹಣಮಪ್ಪ– "combined

ಫೋಟೋ ಎನ್‌ಲಾರ್ಜ್‌ಮೆಂಟ್ಸ್

ಸುಂದರವಾಗಿಯೂ ಮೆಚ್ಚುಗೆಯಾಗುವಂತೆಯೂ ಪ್ರಾಮಾಣಿಕತೆ
ಯಿಂದಲೂ ಕೆಲಸಮಾಡಿ ಕೊಡಲಾಗುವುದು;
ಸಮಯನಿಷ್ಠತೆ ನಮ್ಮ ಬಿರುದು!
ತಮ್ಮ ಫೋಟೋ ಕಳಿಸಿ, ಎನ್‌ಲಾರ್ಜಮೆಂಟ್ ಯಾವ ಅಳತೆಯದಿರ
ಬೇಕೆಂಬುದನ್ನು ಕೂಡಲೆ ತಿಳಿಸಿರಿ!
ಬಣ್ಣಬಣ್ಣದ ಎನ್‌ಲಾರ್ಜ್‌ಮೆಂಟೂ ನಮ್ಮಲ್ಲಿ ಆಗುವುದು:
ಬೆಲೆ ಸುಲಭ! ✡ ತೃಪ್ತಿಕರವಾದ ಕೆಲಸ!!
ಸಿನೇಮಾ ಸ್ಲೈಡುಗಳನ್ನೂ ಸುಂದರವಾಗಿ ಮಾಡಿಕೊಡುವೆವು!

ಗೋವಾರೀಕರ್ ಅಂಡ್ ಸನ್ಸ್,
ಫೋಟೋಗ್ರಾಫಿಕ್ ಡೀಲರ್ಸ್ ಕೊಲ್ಹಾಪುರ

ಕೊಲ್ಹಾಪುರದಲ್ಲಿಯ
ಹೆಸರಾದ ಟೊಪ್ಪಿಗೆಯ ವ್ಯಾಪಾರಿಗಳು
ಬೋಂಗಾಳೇ ಬ್ರದರ್ಸ್, ಕ್ಯಾಪ್ ಮೇಕರ್ಸ್
ಮಹಾದ್ವಾರ ರೋಡ್, ಕೊಲ್ಹಾಪುರ ಸಿಟಿ.
* ಎಲ್ಲ ಮಾದರಿಯ ಟೊಪ್ಪಿಗೆಗಳೂ ಸರಿಯಾದ ಬೆಲೆಗೆ ಸಿಕ್ಕುವವು. ಕರ್ನಾಟಕದಲ್ಲಿಯ ಗೋಕಾಕ, ಚಿಕ್ಕೋಡಿ, ರಾಮದುರ್ಗ ಮೊದಲಾದ ಮುಖ್ಯ ಸ್ಥಳಗಳಲ್ಲೆಲ್ಲ ಪ್ರಸಿದ್ಧಿಯಿದೆ. ತಾವೂ ವಿಚಾರ ಮಾಡಿರಿ, ನಮ್ಮ ಟೊಪ್ಪಿಗೆಗಳನ್ನು ತರಿಸಿ ಅನುಭವ ಪಡೆಯಿರಿ.

force"ನ್ನು ನೆನಸಿದೆ; ಯಾರಿಗೆ ಬುತ್ತೀಪೂಜೆ, ಯಾರಿಗೆ ಎಲೆಪೂಜೆ, ಕುಂಕುಮಪೂಜೆ, ಕಾರ್ತಿಕಗಳ ಆಶೆ ಹಚ್ಚಿದೆ. ಸತ್ಯನಾರಾಯಣನನ್ನು ಮೊರೆಹೋಗಬೇಕೆಂದೆ. ಸತ್ಯಸಂಕಲ್ಪವು ಮಾತ್ರ ಬಿಡಲಿಲ್ಲ. ಎದುರು ಬಂದ ವ್ಯಕ್ತಿಯು ಬಿಸಿಯುಸಿರು ಬಿಡಹತ್ತಿತು. ನನ್ನಲ್ಲಿಯೂ ಆವೇಶವು ತುಂಬಿತು. ಇಷ್ಟೆಲ್ಲವೂ ನಾನು ನೆನಸಿದ ಆ ಪವನಸುತನ ಅಮೋಘಶಕ್ತಿಯ ಪರಿಣಾಮವಿರಬಹುದು! ಮಾರುತಿಯ ಅವತಾರವನ್ನು ತಾಳಿದೆ. ವ್ಯಕ್ತಿಯು ಕುತ್ತಿಗೆಗೆ ಕೈ ಹಾಕಿತು; ಮತ್ತೆ ನನ್ನ ಮಾನವವ್ಯಕ್ತಿಯು ತಲೆಯೆತ್ತಿತು. ಚೀರಿದೆ; ಬೆದರಿ ಒದರಿದೆ. ಮೊದಲು ಬಿಡಿಸಿಕೊಂಡು ಓಡಿಹೋಗಬೇಕೆಂದು ಒದ್ದಾಡಿದೆ. ಹೊರಗೆ ಎಷ್ಟು ಮಂದಿ ಕಳ್ಳರಿರಬಹುದೆಂಬುದರ ಕಲ್ಪನೆಯೇ ಬರಲೊಲ್ಲದು. ಹೀಗಾಗಿ ನಡೆದದ್ದೇನೋ ('ಗನೀಮೀ ಕಾವಾ ಯುದ್ಧ') 'Guerilla warfare'; ಆದರೆ, ಅನ್ಯರಾಷ್ಟ್ರದಲ್ಲಿ ನಿಶ್ಶಸ್ತ್ರ ಹೋಯ್ದಾಡುವ ಹುರಿಯಾಳು ನಾನು. ಆಗ ವ್ಯಕ್ತಿಯು ನನಗಿಂತಲೂ ಗಟ್ಟಿಗನಲ್ಲವೆಂದು ತಿಳಿದೊಡನೆಯೆ "ಜಯ ಬಲಭೀಮ" ಎಂದು ಜಯಘೋಷವನ್ನು ಮಾಡಿದೆ. ಇಷ್ಟು ಬಾರಿ ಪರೀಕ್ಷೆಗೆ ಕುಳಿತಾಗೊಮ್ಮೆ ಕೊಟ್ಟಾಗೊಮ್ಮೆ, ಹೀಗೆ 'ದುಗುಣ ದಕ್ಷಿಣೆ' ಎರಡೆರಡು ತೆಂಗಿನಕಾಯಿ ಸ್ವೀಕರಿಸಿದ ಬಲಭೀಮದೇವನು, ಈ ನನ್ನ ಪೂಜೆ–ಕಾರ್ತಿಕದ ಅಭಿವಚನದಿಂದ ನನಗೆ ಶಕ್ತಿ, ಉತ್ಸಾಹ, ಸ್ಫೂರ್ತಿಗಳನ್ನು ಏಕಕಾಲಕ್ಕೇ ಕೊಟ್ಟ. ಕೇಳುವುದೇನು? "ನಿರ್ವೀರ್ಯಮುರ್ವೀತಲಂ" ಎಂದು ಹೊರಟ ಪರಶುರಾಮನಂತೆ ದ್ವಂದ್ವಯುದ್ಧವನ್ನು ಜೋರಿನಿಂದ ಪ್ರಾರಂಭಮಾಡಿದೆನು. ನಮ್ಮ ಹೊಡೆದಾಟವೆಂದರೆ ಎರಡು ಸಮಬಲವುಳ್ಳ ಹೋರಿಗಳು ಕಾದಾಡಿದ ಹಾಗೆ. ಒಬ್ಬರಿಗೊಬ್ಬರು ಮಾತಿಲ್ಲದೆ ಗುದ್ದಾಟ ಹೊಡೆದಾಟದಲ್ಲಿ ಗುಂಗಾಗಿದ್ದೆವು. ಬಡಿತಕ್ಕೆ ಬಡಿತ, ಏಟಿಗೆ ಏಟು, ಒಬ್ಬರಿಂದ ಮತ್ತೊಬ್ಬರಿಗೆ ಬೀಳುತ್ತಿದ್ದುವು. ಇಂತಹ ಆವೇಶ–ಅವತಾರಗಳನ್ನು ಶಬ್ದಗಳಿಂದ ವರ್ಣಿಸುವುದು ಅಸಾಧ್ಯ. "ರಾಮರಾವಣಯೋರ್ಯುದ್ಧಂ ರಾಮರಾವಣಯೋರಿವ" ಎಂಬಂತೆ ಅದ್ವಿತೀಯವು! ಮೊದಲು ಹೆದರಿದ ನನಗೆ ಈಗ ಹೆಮ್ಮೆ ಎನಿಸಹತ್ತಿತು. "ಕಳ್ಳರ ಕೂಡ ಕಾದಾಡಿ ಅವರನ್ನು ಹಿಡಿದ ತುಂಟರ ತುಂಟ" ಎಂಬ ಬಿರುದು ಸಿಗುವುದೆಂದು ಹಿಗ್ಗಿದೆ. "ಕತ್ತಲೆಯಲ್ಲಿ ಪ್ರತಿಭಟರ ಸೈನ್ಯವನ್ನು ಸಾಮಗ್ರಿ ಸಾಹಿತ್ಯಗಳಿಲ್ಲದೆ ಎದುರಿಸಿ ಚದರಿಸುವುದೆಂದರೆ ಸಾಮಾನ್ಯ ಸಾಹಸವೇ? ಅದಕ್ಕೆ ನನ್ನಂಥ ವೀರರೇ ಬೇಕು!" ಎಂದುಕೊಂಡೆ.

ಹೊರಗಿನಿಂದ ಒದರಾಟ ಚೀರಾಟಗಳು ಕೇಳಬರುತ್ತಿದ್ದುವು. ಎಷ್ಟು ಮಂದಿ ಇದ್ದರೇನು, ಒಬ್ಬೊಬ್ಬರನ್ನೇ ಹಣಿಯಬೇಕೆಂದು ನಿಶ್ಚಯಿಸಿದೆನು. ಹಿಂಡು ಜನರ ಕೂಗು ಸ್ಪಷ್ಟ ಕೇಳಬಂತು. "ಹಿಡಿಯಿರಿ. ಭಾಂವೀ ಸಂದ್ಯಾಗ ನೋಡಿರಿ, ಕೊಟಿಗಿ ಒಳಗ.. ...." ಮುಂತಾದ ಶಬ್ದಗಳು ಕೇಳತೊಡಗಿ, ಹೊರಗಿದ್ದವರು ಕಳ್ಳರಿರದೆ ನೆರೆಹೊರೆಯವರೆಂದು ಮನವರಿಕೆಯಾಯಿತು. ಎಷ್ಟಾದರೂ ರಾಮು ವಿವೇಕಿ; ಪ್ರಸಂಗಾವಧಾನಿ; ಧಡಪಡಿಸುತ್ತ ಬಾಗಿಲನ್ನು ತೆರೆದ. ಕೋಲು, ಬಡಿಗೆ, ಕಲ್ಲು ಮುಂತಾದ ಕೈಗೆ ಸಿಕ್ಕ ಆಯುಧಗಳನ್ನು ತೆಗೆದುಕೊಂಡು ಸುಸಜ್ಜಿತವಾದ ಜನಜಂಗುಳಿಯು ದೀಪಗಳೊಂದಿಗೆ ಕೋಣೆಯಲ್ಲಿ ನುಗ್ಗಿತು.

ದೀಪ ಬಂದೊಡನೆಯೆ ನನ್ನ ತಲೆಯಲ್ಲಿ ನಿಚ್ಚಳ ಬೆಳಕು ಬಿತ್ತು. ಲಕ್ಷ್ಮಣನು ನಿದ್ದೆಗಣ್ಣಿನಲ್ಲಿ ನನ್ನೊಡನೆಯೆ ತಕ್ಕೈಬಿದ್ದು ಗುದ್ದಾಡುತ್ತಿದ್ದನು!

ಕೊಠಡಿಯಲ್ಲಿ ಎಲೆಯ ನರದ ಮೇಲಿಂದ ನನ್ನ ಮಿತ್ರ ವೆಂಕಣ್ಣನ 'ನೋತ್ಯಾ' ಜಿಗಿಯಿತು!!

ಮಾಳಿಗೆಯ ಮೇಲಿಂದ ಜಗಣ್ಣನ "ಪಾ" ಅರ್ಥಾತ್ ನಮ್ಮ "ಮನೀ" ಹಾರಿತು!!!

* * *

Barbers' Sqaure ಗೆ ಎಷ್ಟೋ ದಿನಗಳ ವರೆಗೆ ಚರ್ಚೆಗೊಂದು ಹೊಸವಿಷಯವಾಯಿತು.

IN THE FIELD OF
HOMŒOPATHY
ROY & Co. have stood the test of time and trial for half-a-century. Insure your interests by buying your requirements
FROM
ROY & Co., Homoeopaths,
BOMBAY 2.
Sole Agents for Bombay Presidency, for
BOEKICKE & TAFEL
of Philadelphia, U. S. A.

ಮುಂಬಯಿ ಮೈಸೂರು ಸರಕಾರದ ವಿದ್ಯಾಖಾತೆಯ ಅಧಿಕಾರಿಗಳು, ಎಲ್ಲ ಪಾಠಶಾಲೆಗಳಿಗೂ 'ಜಯಂತಿ' ಯನ್ನು ತರಿಸಿಕೊಳ್ಳಬಹುದೆಂದು ಮನ್ನಣೆಯನ್ನು ಕೊಟ್ಟಿದ್ದಾರೆ!

ಒಬ್ಬ ಜಗದ್ವಿಖ್ಯಾತ ಜರ್ಮನ್ ಡಾಕ್ಟರನು ಮಾಡಿದ

ನಮ್ಮ ಸಮಾಜದ ರೋಗನಿದಾನ

★

ಡಾ. ಸಿಗ್ಮಂಡ್ ಫ್ರಾಯಿಡರು ಇಂದಿನ ಭಾರತೀಯರ ಸಮಸ್ಯೆಯನ್ನು ಕುರಿತು ಪ್ರಕಟಿಸಿದ ಅಭಿಪ್ರಾಯಗಳಿವು. ಅವರೆನ್ನುವುದು ಹೀಗೆ: "ಉಪನಿಷತ್ಕಾಲದ ಉದಾತ್ತ ತತ್ತ್ವಜ್ಞಾನಿಗಳ ಪರಂಪರೆಯವರೂ ಜಿನ-ಗೌತಮಬುದ್ಧರಂತಹ ಉದಾರ ವಿಚಾರಿಗಳ ನಾಡಿನವರೂ ಆದ ನೀವೂ ಗುಣಗಳಿಗೆ ಗೌಣಸ್ಥಾನ ಕಲ್ಪಿಸಿ, ಜನ್ಮಜಾತಿಗೇ ಪ್ರಧಾನ ಪಟ್ಟವನ್ನು ಕಟ್ಟಬೇಕೆ ?" ಎಂದು. ಇದಕ್ಕೇನೆನ್ನುತ್ತೀರಿ ?

★

*ಲೇಖಕರು: 'ತತ್ತ್ವಜಿಜ್ಞಾಸಿ'

ಡಾ. ಫ್ರಾಯಿಡನು ಜಗದ್ವಿಖ್ಯಾತನಾದ ಮಾನಸಶಾಸ್ತ್ರಜ್ಞನು, ಜಗತ್ತಿನಲ್ಲಿ ಅದ್ವಿತೀಯ ವಿಚಾರಕ್ರಾಂತಿಯನ್ನುಂಟು ಮಾಡಿದ ಮಹಾಪುರುಷರಲ್ಲಿ ಅಗ್ರಗಣ್ಯನು. ಇವನ ವಿಚಾರಗಳ ಪರಿಣಾಮಗಳಿಗೆ ಒಳಗಾಗದೆ ಇರುವ ಸಾಹಿತ್ಯವು ಇಂದಿನ ಜಗತ್ತಿನ ಒಂದೂ ದೇಶದಲ್ಲಿಲ್ಲ. ಸಮಾಜಶಾಸ್ತ್ರದೊಳಗಿನ ಅನೇಕ ಅಗಮ್ಯ ಪ್ರಮೇಯಗಳು ಫ್ರಾಯಿಡನ ಹೊಸ ಸಿದ್ಧಾಂತದ ಬೆಳಕಿನಲ್ಲಿ ತೀರ ಸುಲಭರೀತಿಯಲ್ಲಿ ಬಿಟ್ಟುಹೋಗುತ್ತಲಿವೆ. ಆದುದರಿಂದ ಫ್ರಾಯಿಡನು, ನಮ್ಮ ನಾಡಿನೊಳಗಿನ ನಾಮಧಾರಿ ಜಗದ್ಗುರುಗಳಿಗಿಂತ, ಆಧುನಿಕ ಯುಗದ ನಿಜವಾದ 'ಜಗದ್ಗುರು'ಗಳಲ್ಲಿ ಒಬ್ಬನೆಂದು ನಿಃಸಂದೇಹವಾಗಿ ಹೇಳಬಹುದು.

ಇಂತಹನ ಕಣ್ಣಿನಿಂದ ನಮ್ಮ ಸಮಾಜದ ರೋಗನಿದಾನವನ್ನು ಒಮ್ಮೆ ಮಾಡಿಕೊಳ್ಳಬೇಕೆಂಬ ಹಂಬಲವು ನನಗೆ ಹಲವು ದಿನಗಳಿಂದಲೂ ಇದ್ದಿತು. ಆದರೆ ನನಗೆ ಇದು ಸಹಜಸಾಧ್ಯವೆಂದು ಎನಿಸಿರಲಿಲ್ಲ. ಡಾ. ಫ್ರಾಯಿಡನು 'ಜ್ಯೂ' ಜಾತಿಯವನು. ಜರ್ಮನ್ ದೇಶ. ಜಾತಿಗಳ ಮದದಿಂದ ಕೆರಳಿದ ಹಿಟ್ಲರನ ಸೆರೆಯೊಳಗಿಂದ

ಅವರಿಂದ

ಬಿಡುಗಡೆ ಹೊಂದಿ ಫ್ರಾಯಿಡನು, ಇಂಗ್ಲೆಂಡಿನಲ್ಲಿ— ಕಾಲಕಳೆಯಲು— ಬಂದಿದ್ದನು. ಆವನನ್ನು ಹತ್ತಿರದಿಂದ ಅರಿತುಕೊಳ್ಳಬೇಕೆಂಬ ನನ್ನ ಅಪೇಕ್ಷೆಯೂ ಸ್ವಲ್ಪ ಪರಿಶ್ರಮದಿಂದ ಪೂರ್ಣವಾಯಿತು.

ತೆಳುವೂ ಅಲ್ಲ, ದಪ್ಪವೂ ಅಲ್ಲದ ಮಧ್ಯಮ ಆಕಾರದ, ಮುಪ್ಪಿನಿಂದ ಹಣ್ಣಾಗಿದ್ದರೂ ಉತ್ಸಾಹಶಾಲಿಯಾದ ಫ್ರಾಯಿಡನ ಮುಖಮುದ್ರೆಯನ್ನು ನೋಡಿದರೆ, ಯಾರಿಗಾಗಲಿ ಆದರವುಂಟಾಗುವಂತಿದ್ದಿತು. ತೇಜಃಪುಂಜವಾದ ಕಣ್ಣಿನ, ನಿಡುಮೂಗಿನ, ಗಂಭೀರ-ಮುದ್ರೆಯ, ಬೆಳ್ನೊರೆಯಂತಹ, ಗಡ್ಡದ,ಎಂಬತ್ತು ವರುಷದ ಈ ವೃದ್ಧ ಗೃಹಸ್ಥನನ್ನು ಕಂಡರೆ ಒಬ್ಬ ಆರ್ಯ ಮುನಿಪುಂಗವನಂತೆ ಭಾಸವಾಗುತ್ತಿದ್ದಿತು. 'ಕಾಮ'ನಿಗೆ ಬ್ರಹ್ಮಪದವಿಯನ್ನು ಕಲ್ಪಿಸಿಕೊಟ್ಟ ಫ್ರಾಯಿಡನಿಗೆ ಮುನಿಯೆಂದು ಹೇಳಿದುದು ಕೆಲವರಿಗೆ ಅಸಹ್ಯವೆನಿಸಬಹುದು; ಕಾಮಶಾಸ್ತ್ರವನ್ನು ಬರೆದ ವಾತ್ಸ್ಯಾಯನನು ಮುನಿಯಾದರೆ 'ಲಿಂಗ'ಮಹಾತ್ಮ್ಯವನ್ನು ಜಗತ್ತಿಗೆ ಅರುಹಿದ ಫ್ರಾಯಿಡನೂ ಏಕೆ ಒಬ್ಬ ಋಷಿಯಾಗಲಾರನು ? ಇದರಿಂದ ಫ್ರಾಯಿಡನ ಎಲ್ಲ ವಿಚಾರಗಳೂ ನನಗೆ ಮಾನ್ಯವಾಗಿವೆಯೆಂದು ತಿಳಿವ ಕಾರಣವಿಲ್ಲ. ಫ್ರಾಯಿಡನ ವಿಚಾರಗಳು ಆತ್ಯಂತಿಕ ಸತ್ಯವಾಗಿರದಿದ್ದರೂ ವ್ಯಾವಹಾರಿಕಸತ್ಯವು ಅದರಲ್ಲಿ ತುಂಬ ಇದೆಯೆಂದು ಹೇಳಲು ಅಡ್ಡಿಯಿಲ್ಲ.

ಡಾ. ಫ್ರಾಯಿಡನು ಯಾವುದೊಂದು ಮಾತನ್ನು, ಹಲವು ಬಗೆಯ ಪ್ರಯೋಗಗಳಿಂದ ಆಳವಾಗಿ ವಿಚಾರಿಸಿ ಮನಗಂಡು ಮಾತನಾಡತಕ್ಕವನು. ಇಂತಹನ ದೃಷ್ಟಿಯಿಂದ ನಮ್ಮ ಸಮಾಜದ ಲೋಪ-ದೋಷಗಳನ್ನು ಅರಿತುಕೊಳ್ಳಬೇಕೆಂಬ ನನ್ನ ಕುತೂಹಲವನ್ನು, ನಾನು ನನ್ನ ಮಟ್ಟಿಗೆ ಪೂರ್ಣ ಮಾಡಿಕೊಂಡಿದ್ದೆ; ಆದನ್ನು ಪ್ರಕಟಿಸುವ ಇಚ್ಛೆ ನನಗಿರಲಿಲ್ಲ. ಆದರೆ ನನ್ನ

---

* ಈ ಲೇಖಕರು ನಮ್ಮ ಸ್ನೇಹಿತರಾದ ಶ್ರೀಮಾನ್ ದಂ. ಬಾ. ಜೋಶಿಯವರ ತೀರ ಬಳಿಯ ಮಿತ್ರರು. ಅವರ ಲೇಖನವನ್ನು ಜಯಂತಿಗೆ ಒದಗಿಸಿಕೊಟ್ಟುದಲ್ಲದೆ, ಮೂಲ ಇಂಗ್ಲಿಷಿನಲ್ಲಿದ್ದುದನ್ನು ಕನ್ನಡಿಸಿಯೂ ಕೊಟ್ಟುದಕ್ಕಾಗಿ ಶ್ರೀ. ದಂ. ಬಾ. ಜೋಶಿಯವರಿಗೆ ನಮ್ಮ ಕೃತಜ್ಞತೆಯ ವಂದನೆಗಳು.

—ಸಂ. ಜಯಂತಿ

ವಿಚಿತ್ರರಾದ ಜಯಂತಿಯ ಸಂಪಾದಕರು ದೀವಳಿಗೆಯ ಸಂಚಿಕೆಗಾಗಿ ಏನನಾದರೂ ಸಾಮಾಜಿಕ ಸಮಸ್ಯೆಯನ್ನೆತ್ತಿ ಬರೆಯಲೇಬೇಕೆಂದು ಒತ್ತಾಯಪಡಿಸಿದ್ದರಿಂದ ನಿರುಪಾಯನಾದೆ. ನನಗೆ ಈಗ ಬರೆವುದಕ್ಕೆ ಬಿಡುವಾಗಲಿ, ತಲೆಯಲ್ಲಿ ಹೊಸ ವಿಚಾರಗಳಾಗಲಿ ಇಲ್ಲದ್ದರಿಂದ ಡಾ. ಫ್ರಾಯಿಡನ ಸಂಗತಿಯಲ್ಲಿದ್ದಾಗ ಮಾಡಿಟ್ಟಿದ್ದ ಟಿಪ್ಪಣೆಗಳನ್ನೇ ಕಳುಹುತ್ತಿದ್ದೇನೆ. ನನ್ನ ಈ ಟಿಪ್ಪಣೆಗಳು, ಆದ ಸಂವಾದರೂಪದಲ್ಲಿರದೆ ಸಂಗ್ರಹರೂಪವಾಗಿವೆ. ಡಾ. ಫ್ರಾಯಿಡನು ಮೊನ್ನೆ ತಾನೇ ತೀರಿಕೊಂಡನು. ಅವನ ಒಂದು ನೆನಹು ಎಂದೂ ಇದನ್ನು ಈಗ ಪ್ರಕಟಿಸುವುದು ಉಚಿತವೆನಿಸಿತಲ್ಲದೆ, ಒಬ್ಬ ಸುವಿಖ್ಯಾತ ತಜ್ಞನಿಂದಾದ ನಮ್ಮ ಸಮಾಜದ ರೋಗಪರೀಕ್ಷೆಯ ಪರಿಚಯವು ನಮ್ಮ ಜನಗಳಿಗೆ ಆಗಲೆಂಬ ಭಾವನೆಯೂ ಇದರಲ್ಲಿ ಅಡಕವಾಗಿದೆ.

....ಸರ್ಕಲ್ ಲಂಡನ್ ಫೆಬ್ರುವರಿ ೨೯

"ನನ್ನ ಅಭಿಪ್ರಾಯದಂತೆ 'ಲಿಂಗ' (libido) ವೇ ಎಲ್ಲಕ್ಕೂ ಮೂಲ. 'ಲಿಂಗ' ತತ್ತ್ವವನ್ನು ದುರ್ಲಕ್ಷಿಸಿದುದರಿಂದಲೇ ಹಿಂದೂದೇಶದ ಜನಗಳ ಅವನತಿಯಾಗಿದೆ. ಹಿಂದೂಸಮಾಜದ ತೊಡಕುಗಳಿಗೆಲ್ಲ ಮೂಲ 'ಲಿಂಗ' ವೆಂದು ಹೇಳಿದರೆ ಯಾರೂ ಬೆದರುವ ಕಾರಣವಿಲ್ಲ. ಬೆಂಗುಗೊಳ್ಳುವ ಕಾರಣವಿಲ್ಲ; ಉದಾಹರಣೆಗಾಗಿ ನಿಮ್ಮಲ್ಲಿಯ ಬ್ರಾಹ್ಮಣ-ಬ್ರಾಹ್ಮಣೇತರವಾದವನ್ನೆ ತೆಕ್ಕೊಳ್ಳಿ; ಸ್ಪೃಶ್ಯ-ಅಸ್ಪೃಶ್ಯರ ತಿಕ್ಕಾಟವನ್ನೇ ನೋಡಿ: ಇದರಲ್ಲೆಲ್ಲ ಕೇವಲ ರಾಜಕೀಯ ಹಕ್ಕುಗಳಿಗಾಗಿಯೆ ಹೊಡೆದಾಟವಿಲ್ಲ; 'ಸಮಾಜದಲ್ಲಿ ಬೇರೂರಿರುವ ತರ-ತಮಭಾವನೆಯನ್ನು ಸಮೂಲ ನಷ್ಟಪಡಿಸಿರಿ' ಎಂದು ಕೆಳಗಿನವೆಂದು ತಿಳಿಯಲ್ಪಟ್ಟ ಜಾತಿಗಳು ಕಸಿವಿಸಿಯಿಂದ ಕಿರಿಚಿಕೊಳ್ಳುತ್ತಲಿವೆ. ತಾರತಮ್ಯವನ್ನು ಕಿತ್ತೊಗೆಯಿರಿ'; ನಮ್ಮನ್ನೂ ಮನುಷ್ಯರಂತೆ ನಡೆಯಿಸಿಕೊಳ್ಳಿರಿ' ಎಂಬ ಬೇಡಿಕೆಯು ಮೇಲು-ತೋರಿಕೆಯದಾಯಿತು. ಇದರ ನಿಜವಾದ ಅರ್ಥವೇನು? ನಿಮ್ಮ ನಾಡಿನ ತಲೆಯಾಳುಗಳೆಲ್ಲ ಈ ವಾಕ್ಯಗಳನ್ನು ಅಡಿಗಡಿಗೆ ಉಸಿರುವರು; ಎತ್ತಿಹಿಡಿಯುವರು; ಆದರೂ ಅದರ ಸ್ಪಷ್ಟಾರ್ಥವನ್ನು ಹೇಳಲೊಲ್ಲರು! ನಿಮ್ಮ ಗಾಂಧಿ(ಜಿ) * ಯವರು ಸಹ ಈ ಮಾತಿನ ಸುಳಿಯಲ್ಲಿ ಸಿಲುಕಿಕೊಳ್ಳಬಹುದೆಂಬ ಹೆದರಿಕೆಯಿಂದಲೊ ಏನೊ—ತಪ್ಪಿಸಿ ದೂರದಿಂದಲೆ ತಮ್ಮ ದೋಣಿಯನ್ನು ಒಯ್ಯುತ್ತಿರುವಂತೆ ಕಾಣುತ್ತದೆ. ಅವರು ಮಾತಿನಲ್ಲಿ ಸ್ವಲ್ಪ ಸಂದಿಗ್ಧತೆ, ಅಸ್ಪಷ್ಟತೆಯುಳ್ಳವರಾದರೂ ಕೃತಿಯಲ್ಲಿ ಗಟ್ಟಿಗರಾಗಿದ್ದಾರೆ. ಮೇಲಣಜಾತಿಯವರಿಗೆ ಕೆಳಗಣ ಜಾತಿಯವರು ತಮ್ಮನ್ನು ಮನುಷ್ಯರೆಂದು ತಿಳಿಯಿರಿ ಎಂದು ಕೇಳಿಕೊಳ್ಳುವ್ರದರ ನಿಜವಾದ ಅರ್ಥವೇನು? ಇದರ ಬುಡದಲ್ಲಿಯೂ 'ಲಿಂಗ' ವಿಚಾರವೇ ಅಡಗಿಕೊಂಡಿವೆಯೆಂದು ನನ್ನ ಮತ. 'ನೀವು ನಮ್ಮನ್ನು ಮನುಷ್ಯರೆಂದು ಭಾವಿಸಿರಿ' ಎಂಬಲ್ಲಿ, 'ಉಚ್ಚಜಾತಿಯವರಾದ ನೀವು ಮನುಷ್ಯರಷ್ಟೆ? ಹಾಗೆ ನಾವೂ ಮನುಷ್ಯರಾಗಿದ್ದರೆ ನಮ್ಮ ನಿಮ್ಮ ನಂಟೂ ನಣ್ಪೂ ಇರಲು ಅಡ್ಡಿಯೇನು?' ಎಂಬುದೇ ಮುಖ್ಯ ಪ್ರಶ್ನೆ. 'ಮನುಷ್ಯರು ಮನುಷ್ಯರಲ್ಲಿ ಅನ್ನ ಮತ್ತು ಕನ್ಯಾವ್ಯವಹಾರಗಳಿಗೆ ಅಡೆತಡೆಗಳೇಕೆ ಇರಬೇಕು?' ಎಂದು ಅಸ್ಪೃಶ್ಯರು ಸ್ಪೃಶ್ಯರಿಗೆ, ಬ್ರಾಹ್ಮಣೇತರರು ಬ್ರಾಹ್ಮಣರಿಗೆ ವ್ಯಕ್ತಾವ್ಯಕ್ತರೀತಿಯಿಂದ ಕೇಳುತ್ತಿದ್ದಾರೆ. ಈ ಪ್ರಶ್ನೆಯನ್ನು ಕಿವಿಯಿಂದ ಕೇಳಿಯೂ ಕೇಳದವರಂತೆ ಮೇಲಣ ವರ್ಣದವರು ನಟಿಸುತ್ತಲಿದ್ದಾರೆ. ಆದರೆ ಈ ಗತ್ತುಗಾರಿಕೆಯ ಕಣ್ಣುಮುಚ್ಚಾಟವು ಇನ್ನು ಹೆಚ್ಚು ದಿನ ನಡೆಯಲಾರದು.

"ಹಿಂದೂದೇಶವು ಒಂದು ರಾಷ್ಟ್ರವಾಗಬೇಕೆಂದು ನಿಮ್ಮ—ಇಂಡಿಯಾದವರ—ಅಭಿಪ್ರಾಯವಷ್ಟೆ? ಒಂದು ರಾಷ್ಟ್ರವಾಗಬೇಕಾದರೆ ಜನಸಾಮಾನ್ಯರಲ್ಲೆಲ್ಲ ಒಂದೇ ರಾಷ್ಟ್ರಭಾವನೆಯು ಬೇರೂರಬೇಕಾಗುತ್ತದೆ. 'ನಾವೆಲ್ಲ ಒಂದು' ಎಂಬ ವಿಚಾರವು ದೃಢವಾಗಿ, ನಮ್ಮ ನಡೆನುಡಿಗಳಲ್ಲಿ ಅದು ಚೆನ್ನಾಗಿ ಕಾಣಿಸಿಕೊಳ್ಳಬೇಕಲ್ಲವೆ? ಚಿಕ್ಕಮಕ್ಕಳಿರುವಾಗಿನಿಂದ 'ಇವನು ಬ್ರಾಹ್ಮಣ, ಇವನು ಶೂದ್ರ, ಇವನು ಮುಸಲ್ಮಾನ, ಇವನು ಹೊಲೆಯ, ಅವನು ಬೇರೆ, ನೀನು ಬೇರೆ' ಎಂದು ಕಿವಿಯಿಂದ ಕೇಳಿಕೇಳಿ, ಆ ಬಗೆಯಾಗಿ ನುಡಿದು ನಡೆದು, ಮತ್ತೆ ಮೇಲ್ತೋರಿಕೆಯ ಮಾತುಗಳಲ್ಲಿ 'ನಾವೆಲ್ಲರೂ ಒಂದು ದೇಶದವರು, ಭಾರತೀಯರು; ಎಲ್ಲರೂ ಒಂದೇ' ಎಂದು ವ್ಯಾಸಪೀಠಗಳ ಮೇಲಿಂದ ಕೂಗಾಡಿದರೆ ಆಗಬೇಕಾದುದೇನು? ಈ ಕೂಗಿಗೆ ಬ್ರಿಟಿಶರು ಬೆದರುವರೆ? ಅವರಿಗೆ ಒಳಗಿನ ಒಡಕುಗಳೆಲ್ಲವೂ ಗೊತ್ತಿವೆ.

"ನಿಮ್ಮಲ್ಲಿ ಜಾತಿಗೆ ಇರುವ ಬೆಲೆಯು ಗುಣಗಳಿಗೆ ಇಲ್ಲ! ಧರ್ಮಾಂಧರಾದ ಮುಹಮ್ಮದೀಯರು ಈ ಬಗೆಯ ಅವಿವೇಕಿಗಳಾಗಿದ್ದರೆ ಸೋಜಿಗವೆನಿಸುತ್ತಿರಲಿಲ್ಲವೆನಗೆ. ಎಚ್. ಜಿ. ವೆಲ್ಸರು ಮುಹಮ್ಮದನ ಬಗ್ಗೆ ಬರೆದ ಸ್ಪಷ್ಟೋಕ್ತಿಗಳಿಗಾಗಿ ಅವರು ಹೀಗೆ ಬುದ್ಧಿಗೇಡಿಗಳಂತೆ ನಡೆದರು, ನುಡಿದರು! ಆದರೆ ಉಪನಿಷತ್ಕಾಲದ ಉದಾತ್ತ ತತ್ತ್ವಜ್ಞಾನಿಗಳ ಪರಂಪರೆಯವರೂ, ಜಿನ-ಗೌತಮಬುದ್ಧರಂತಹ ಉದಾರ ವಿಚಾರಿಗಳ ನಾಡಿನವರೂ ಆದ ನೀವೂ ಶ್ರೇಷ್ಠ ಸದ್ಗುಣಗಳಿಗೆ ಗೌಣಸ್ಥಾನವನ್ನು ಕಲ್ಪಿಸಿ, ಜನ್ಮಜಾತಿಗೇ ಪ್ರಧಾನಪಟ್ಟವನ್ನು ಕಟ್ಟಬೇಕೇ? ಆದುದರಿಂದಲೇ ಜಾತಿಗೇ ಪ್ರಾಶಸ್ತ್ಯವು ಒಂದು ಧೈರ್ಯ, ಶೌರ್ಯ, ಸಾಹಸ, ಬುದ್ಧಿವಂತಿಕೆಗಳ ಬೆಳೆವಣಿಗೆಯು ನಿಮ್ಮಲ್ಲಿ ಕುಗ್ಗಿದಂತಾಗಿದೆ.

"ನಾನು ಆಡುವ ಈ ಮಾತಿನ ಅರ್ಥವು ನಿಮಗೆ ಆಗಿರಲಿಕ್ಕಿಲ್ಲ. ಗಂಡುಸು, ತಾನು ಪುರುಷಾರ್ಥವನ್ನು ಮಾಡಿ ಕೃತಕೃತ್ಯನೆನಿಸಬೇಕೆಂಬ ಹಂಬಲವುಳ್ಳವನಾಗಬೇಕಾಗಿದ್ದರೆ ಅವನಿಗೆ ಆ ಬಗೆಯ ಒಂದು ಆಂತರಿಕ ಪ್ರಚೋದನಶಕ್ತಿಯಿರಬೇಕಾಗುತ್ತದೆ. ಆ ಪ್ರಚೋದಕ ಶಕ್ತಿಯೆ ಹೆಂಗುಸು! ನಿಮ್ಮ ನಾಡಿನಲ್ಲಿ ಹೆಣ್ಣುಮಕ್ಕಳ ಪಾಡು ನಾಯಿಪಾಡು. ಒಬ್ಬ ಬ್ರಾಹ್ಮಣ ಉಪವರ ವಧು ವಿದ್ಯಳೆಂದು ತಿಳಿಯಿರಿ, ಅವಳು ಸಾಧಾರಣ ರೂಪವುಳ್ಳವಳಾಗಿದ್ದರೂ ಬುದ್ಧಿವಂತೆಯಾಗಿದ್ದಾಳೆಂದೂ ಕಲ್ಪಿಸಿರಿ. ಇವಳಿಗೆ ಬ್ರಾಹ್ಮಣರಲ್ಲಿ ಕೂಡ ತಮ್ಮ ವಿಶಿಷ್ಟ ಜಾತಿಯ ಹೊರಗಿನ ಬೇರೆ (ಬ್ರಾಹ್ಮಣ)

* 'ಜಿ' ಎಂಬುದು ಟಿಪ್ಪಣಿಕಾರನದು

ವರನನ್ನು ವರಿಸುವುದಕ್ಕೂ ಸಾಧ್ಯವಿಲ್ಲವಂತೆ! ತಮ್ಮ ಪಂಗಡದಲ್ಲಿ ಆ ವಧುವಿಗೆ ತಕ್ಕ ವರನು ಸಿಕ್ಕದೆ ಇರುವಲ್ಲಿ (ಇಂತಹ ಸಂದರ್ಭಗಳೇ ಹೆಚ್ಚು; ಈ ಒಳಪಂಗಡಗಳು ಸಣ್ಣವಾಗಿರುವುದರಿಂದ ಉಪಯುಕ್ತ ವರಗಳ ಸಂಖ್ಯೆಯು ಸಾಕಷ್ಟು ಇರಲಾರದು), ಅವಳು ಅವಿವಾಹಿತಳಾಗಿಯಾದರೂ ಉಳಿಯಬೇಕು; ಇಲ್ಲವೆ ತನಗಿಂತಲೂ ಕಡಿಮೆ ತರಗತಿಯವನನ್ನು ಮದುವೆಯಾಗಬೇಕು. ಸ್ತ್ರೀಯ ಅವಿವಾಹಿತ ಸ್ಥಿತಿಯು ಹಿಂದೂ ಸಮಾಜಕ್ಕೆ ಅಮಾನ್ಯವಾಗಿರುವುದರಿಂದ ನಿಮ್ಮಲ್ಲಿ ಕುಮಾರಿಕಾ ಜೀವನವು ಸಾಧ್ಯವೇ ಇಲ್ಲ. ವಧುಗಳು ಹೆಚ್ಚು ಕಲಿತರೆ ಮುಂದೆ ಅವಳ ವಿದ್ಯೆ, ವಿಚಾರಶಕ್ತಿಗಳಿಗೆ ತಕ್ಕವನಾದ ವರನು ಸಿಕ್ಕುವುದು ಕಷ್ಟವೆಂದು ನಿಮ್ಮ ದೇಶದಲ್ಲಿ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ದೊಡ್ಡ ಅಡ್ಡಿಯುಂಟಾಗಿದೆಯೆಂದು ನಾನು ಕೇಳಿದ್ದೇನೆ.

"ನಿಜವಾಗಿ ಹೆಣ್ಣುಮಕ್ಕಳಿಗೆ ಅವರ ವಿದ್ಯಾಭ್ಯಾಸದಲ್ಲಿ ಈ ಬಗೆಯ ತಡೆಯುಂಟಾಗುತ್ತಿರುವುದು ಶೋಚನೀಯ. ನಿಮ್ಮ ನಾಡು ನಿಮ್ಮಲ್ಲಿಯ ಹೆಣ್ಣುಮಕ್ಕಳ ಬುದ್ಧಿಶಕ್ತಿಗೆ ಸಂಪೂರ್ಣವಾಗಿ ಎರವಾಗಿದೆ. ಇದುವೆ ನಿಮ್ಮ ನಾಡಿಗೆ ಆಗಿರುವ ಅರ್ಧಾಂಗರೋಗ. ಹೆಣ್ಣುಮಕ್ಕಳು ತಮ್ಮ ಒಲವಿನ ವಿದ್ಯೆಯನ್ನು ಕಲಿಯಬೇಕು, ಅದರಲ್ಲಿ ಪಾರಂಗತತೆಯನ್ನು ಪಡೆಯಬೇಕು. ಹಾಗೆ ವಿದ್ಯಾ—ಕಲಾಲಂಕೃತಳಾದ ವಧುವಿನ ಪ್ರೇಮಕ್ಕೆ ತಾನು ಪಾತ್ರನಾಗಬೇಕೆಂಬ ಹಂಬಲವು ನಿಮ್ಮ ನಾಡಿನ ತರುಣರಲ್ಲಿ ಉಂಟಾಗಬೇಕು. ಅಂತಹಳು ತನಗೆ ಒಲಿಯಬೇಕು, ಅಂತಹಳನ್ನು ತಾನು ವರಿಸಬೇಕೆಂಬ ಹುಮ್ಮಸದಿಂದ ತರುಣರು ಹೆಚ್ಚಿನ ಧೈರ್ಯ, ಸಾಹಸ, ಬುದ್ಧಿವಂತಿಕೆ, ಚಾತುರ್ಯಗಳನ್ನು ತೋರ್ಪಡಿಸಲು ತಾನು ತಾನೆಂದು ಮುಂದೆ ಬರಬೇಕು. ಆಗ ತಾನೆ ನಿಮ್ಮ ಸಮಾಜವು ಸ್ಫೂರ್ತಿ-ಸದ್ಗುಣಗಳಿಗೆ ಆಗರವಾದೀತು.

"ಒಬ್ಬ ಬ್ರಾಹ್ಮಣವಧುವಿಗೆ ಬ್ರಾಹ್ಮಣರಲ್ಲಿ ತಕ್ಕ ವರನು ಸಿಕ್ಕದಿದ್ದಾಗ ಬ್ರಾಹ್ಮಣರ ಹೊರಗಿನ ಸಮಾಜದಲ್ಲಿ ಅದಕ್ಕೂ ಎಷ್ಟೋ ಪಟ್ಟು ಮೇಲಾದ ಗುಣಗಳುಳ್ಳ ತರುಣನು ದೊರೆಯುತ್ತಿದ್ದರೆ ಆ ಬಗೆಯ ಮದುವೆಯಾಗಲು ಅಡ್ಡಿಯೇನು? ಉಪವರಳೂ ಸುಶಿಕ್ಷಿತಳೂ ಆದ ಅಸ್ಪೃಶ್ಯ ಕನ್ಯೆಯನ್ನು, ಬ್ರಾಹ್ಮಣಕನ್ಯೆಯನ್ನು ಬಯಸುವ ಬ್ರಾಹ್ಮಣೇತರರೂ ಸ್ವೀಕರಿಸುವ ಮನಸ್ಸಿನ ಔದಾರ್ಯವನ್ನು ಏಕೆ ತೋರಿಸಬಾರದು? ಗಾಂಧಿಯವರು ಮಾತಿನಲ್ಲಿ ಮೆತ್ತಗಿದ್ದರೂ ಕೃತಿಯಲ್ಲಿ ಗಡುಸಾಗಿದ್ದಾರೆಂದು ನಾನು ಈ ಮೊದಲು ಹೇಳಿದೆನಲ್ಲವೆ? ಬ್ರಾಹ್ಮಣಕನ್ಯೆಯನ್ನು ಬ್ರಾಹ್ಮಣೇತರರಿಗೂ, ಅಸ್ಪೃಶ್ಯಕನ್ಯೆಯನ್ನು ಬ್ರಾಹ್ಮಣನಿಗೂ ಧಾರೆಯೆರೆದು ಭಾವೀ ಹಿಂದೀಸಮಾಜದ ಸಾಮರಸ್ಯದ ಅಡಿಗಲ್ಲನ್ನು ಅವರು ಹಾಕಿದ್ದಾರೆ.

"ಆರ್ಯರೆಂಬ ಹೆಮ್ಮೆಯನ್ನು ತಾಳುವ ಹಿಟ್ಲರನ ವಿಚಾರಸರಣಿಯನ್ನು ನೋಡಿದರೆ, ವಂಶ-ಕುಲಗಳಲ್ಲಿ ಮೂಲಭೂತವಾಗಿಯೆ ಕೆಲವು ಶ್ರೇಷ್ಠ, ಕೆಲವು ಕನಿಷ್ಠವಾಗಿರುವುವೆಂದು ಹೇಳಬೇಕಾಗುತ್ತದೆಯೆಂದು ನೀವು ಆಕ್ಷೇಪಿಸಿದಿರಿ. ಇಂದು ನಿಮಗೆ—ಹಿಂದೂ ಜನರಿಗೆ ಹಿಟ್ಲರನ ವೈಷಮ್ಯದ ತತ್ತ್ವಜ್ಞಾನವು ಸಂಪೂರ್ಣ ಸಮ್ಮತವಾಗಿರಲಿಕ್ಕೆ ಸಾಕು. ಏಕೆಂದರೆ ಬ್ರಹ್ಮನ ಬಾಯಿಂದ, ತೋಳು-ತೊಡೆಗಳಿಂದ ಮೂಲ ಮಾನವರು ಹುಟ್ಟಿದರೆಂದೂ ಜನ್ಮದಿಂದಲೇ ಜಾತಿಗಳೆಂದೂ ನಂಬಿರುವ ನಿಮಗೆ ಹಿಟ್ಲರನ ಆರ್ಯಪಂಥದ ಅತಿವಾದವು ರುಚಿಸುವುದು ಸಹಜ.

"ಆದರೆ ಶಿಕ್ಷಣ-ಸಂಸ್ಕಾರಗಳಿಂದ ಯಾವ ಜಾತಿ, ಕುಲಗಳೂ ಸಂಸ್ಕೃತಿಪಥದಲ್ಲಿ ಮುಂದುವರಿಯಬಲ್ಲುವೆಂದು ಇಂದಿನ ಪ್ರಯೋಗಗಳಿಂದ ಸಿದ್ಧವಾಗಿದೆ. ಸಂಸ್ಕೃತಿಯ ಉತ್ತಮ ಶಿಖರವನ್ನು ಮುಟ್ಟುವುದಕ್ಕಾಗಿ ನಡೆದ ಪ್ರಯತ್ನಗಳಲ್ಲಿ ಕೆಲವು ಜನಾಂಗಗಳು ಮುಂದೆ ನಡೆದಿವೆ; ಇನ್ನು ಕೆಲವು ಇದೀಗ ಎಚ್ಚೆತ್ತು ಪ್ರಗತಿಪಥದಲ್ಲಿ ಕಾಲಿಡುತ್ತಲಿವೆಯೆಂಬುದು ನಿಜ. ಮೂಲತಃ ಕೆಲವರು ಹೀನರು, ಕೆಲರು ಹೆಚ್ಚಿನವರೆಂದು ಗಣಿಸುವುದರಲ್ಲಿ ಹುರುಳಿಲ್ಲ. ಯಾರ ಲಾಭವೂ ಇಲ್ಲ. ಹೆರವರಿಗೆ ಹೀನವೆನ್ನುವುದರಿಂದ ಯಾರ ಏಳ್ಗೆಯೂ ಆಗುವುದಿಲ್ಲ.

"ನಾನು ಗುಣ-ಶೀಲಗಳಿಗೆ ಮಹತ್ತ್ವ ಕೊಡಬೇಕೆಂದಿದ್ದೇನೆ, ನೆನಪಿಡಿರಿ. ಸಮಾನ ಸಂಸ್ಕೃತಿಯ ವಧೂವರರು ಯಾವ ಜಾತಿ

ನಮ್ಮ ಸಮಾಜದ ಹಿರಿಯರು!



"ಏನು ಈಕಿ ಮ್ಯಾಟ್ರಿಕಿನಾಗ ಕಲೀತಾಳs?"
"ಹುಂ, ಹೌದು, ಇಷ್ಟ್ಯಾಕ ಘಾಬರ್ಯಾಗತೀರಿ?"
"ಘಾಬರ್ಯಾಗದs ಏನ ಮಾಡಬೇಕರೀ! ಮನಿಯುದ್ದಕ್ಕ ನುಗಳನ್ನ ಬೆಳಸಿದ್ದೀರಿ ಮದಿವಿ ಇಲ್ಲದs ನs! ಮ್ಯಾಲ ಮ್ಯಾಟ್ರಿಕ್ ಕಲೀತಾಳಂತ ಹೇಳತೀರಿ! ಅಪ್ಪಾ, ನಮ್ಮ ಜನರೊಳಗ ಇಂಥಾ ಕನ್ಯಾ ಮದಿವೀ ಮಾಡಿಕೊಳ್ಳೂ ವರಾ ಆರೇ ಎಲ್ಲೆ ಸಿಗತಾವ್ರೀ! ಛೀ! ಛೆ! ಮೊದಲು ಈಕಿನ್ನ ಸಾಲೀ ಬಿಡಸರಿ!"

ಮತ-ಪಂಥದವರೇ ಇರಲಿ, ಅವರ ಮದುವೆಗೆ ಯಾವ ತೊಡಕು-ತೊಂದರೆಗಳೂ ಇರಕೂಡದೆಂದು ನನ್ನ ಮತ. ಹಿಟ್ಲರನು 'ಆರ್ಯ'ತನದ ಆರ್ಭಟೆ ನಡೆಯಿಸಿದ್ದಾನೆ. ಆದರೆ ಜಗತ್ತಿನಲ್ಲಿ ಕೇವಲ ಆರ್ಯಜನಾಂಗವಾಗಲಿ, ಇನ್ನುಳಿದ ಯಾವ ಕುಲವಾಗಲಿ ಉಳಿದಿಲ್ಲ; ಉಳಿಯುವುದು ಸಾಧ್ಯವಿಲ್ಲ! ಜ್ಯೂ ಜನರನ್ನು ಹಿಟ್ಲರನು ಹೊರಗಟ್ಟಿದ್ದುದು ನಿಜ; ಆದರೆ ಜ್ಯೂ ಜನರ ರಕ್ತವನ್ನು ಜರ್ಮನರ ಧಮನಿಗಳೊಳಗಿಂದ ಬೇರ್ಪಡಿಸುವುದು ಹಿಟ್ಲರನಿಂದಾಗಲಿ, ಪ್ರತ್ಯಕ್ಷ ಬ್ರಹ್ಮನಿಂದಾಗಲಿ ಸಾಧ್ಯವಿಲ್ಲ. ಜ್ಯೂ ಜನರನ್ನು ಜರ್ಮನಿಯ ಹೊರಗೆ ಅಟ್ಟಿದನೆಂದರೇನು ಮಾಡಿದನು? ಜ್ಯೂ ಜನರ ಮನೆತನಗಳನ್ನು ತಳ್ಳಿದನಷ್ಟೆ! ಆದರೆ ಜ್ಯೂ ಜನರ ಹೆಣ್ಣುಮಕ್ಕಳನ್ನು ಮದುವೆಯಾಗಿ ಸಾವಿರಾರು ವರುಷಗಳಿಂದ ಬೆಳೆದ ಸಂತಾನವು ಜರ್ಮನಿಯ ಮನೆ-ಮನೆಗಳಲ್ಲಿಯೂ ಇದೆಯಲ್ಲ! ಅದನ್ನು ಹೇಗೆ ನಿರ್ಮೂಲ ಮಾಡುವನು? ಜ್ಯೂ ಗಂಡಸರನ್ನು ದ್ವೇಷಿಸಿದರೂ ಜ್ಯೂ ಹೆಣ್ಣುಮಕ್ಕಳನ್ನು ಪ್ರೀತಿಸದಿರುವಷ್ಟು ಅರಸಿಕರಾದ ತರುಣರು ಯುರೋಪಿನ ಯಾವ ದೇಶದಲ್ಲಿಯೂ ಇಲ್ಲ! ಜರ್ಮನಿಯ ದೇಹದಲ್ಲಿ ಜ್ಯೂ ರಕ್ತವು ಬೇಕಾದ ಹಾಗೆ ಹರಿದಾಡುತ್ತಲಿದೆ. ಹಿಟ್ಲರನಿಗೂ ಇದು ಗೊತ್ತಿಲ್ಲದೆ ಇಲ್ಲ. ಆದರೂ ಜರ್ಮನಿಯಲ್ಲಿ ದೇಶಾಭಿಮಾನದ ಆವೇಶವನ್ನು ತುಂಬುವುದಕ್ಕಾಗಿ ಆತನು 'ಆರ್ಯ'ತನದ ಹೆಮ್ಮೆಯ ಬಿರುಗಾಳಿಯನ್ನು ಎಬ್ಬಿಸಿದ್ದಾನೆ. ಇದೊಂದು ಕೇವಲ ರಾಜಕೀಯ ತಂತ್ರ! ಮಾಟ!

"ನೀವು ಹಿಂದೂದೇಶದವರೂ ಈ ಬಗೆಯ ಅಪಪ್ರಚಾರಕ್ಕೆ ಮೋಸಹೋಗಬೇಡಿ! ನಿಮ್ಮದು ಒಂದು ರಾಷ್ಟ್ರವಾಗಬೇಕಾಗಿದ್ದರೆ ನಿಮ್ಮಲ್ಲಿ 'ಬಂದಿಕೆ'ಯಾಗಲೇಬೇಕು. ಮುಸಲ್ಮಾನರ ಧರ್ಮದ ಮದವು ಕಡಿಮೆಯಾಗುವವರೆಗೆ ಹಿಂದೂ ಮತ್ತು ಮುಸಲ್ಮಾನರೊಳಗಿನ ಮದುವೆಗಳು ಆಗಬೇಕೆಂದು ನಾನು ಹೇಳಲಾರೆನಾದರೂ **ಹಿಂದೂ ಜನರಲ್ಲಿಯಾದರೂ ಸಮಾನ-ಸಂಸ್ಕೃತಿಯ ಯಾವುದೇ ಜಾತಿಯ ಹೆಣ್ಣು-ಗಂಡಿನ ಮದುವೆಗಳು ಆಗಲು** ಅಡ್ಡಿಯಿರಲಾಗದು. ಈ ಬಗೆಯ ಅಡ್ಡಿಯು ಇರುವವರೆಗೂ ನಿಮ್ಮ ನಾಡಿನ ಪ್ರಗತಿಯು ವೇಗದಿಂದ ಸಾಗಲಾರದು.

"ಹಿಂದೂ ಸಮಾಜವು ಜಾತಿಗಳ ಜಗಳಗಳೊಳಗಿಂದ, ಧರ್ಮಗಳ ಹೊಡೆದಾಟದೊಳಗಿಂದ ತಲೆಯೆತ್ತಬೇಕಾದರೆ ನಿಮಗೆ ಇದೊಂದೇ ಮೇಲಾದ ಉಪಾಯ. ನನ್ನ ಅಭಿಪ್ರಾಯದಂತೆ 'ಲಿಂಗ' ಧರ್ಮವನ್ನು ನೀವೆಲ್ಲ ಕಡೆಗಣಿಸಿರುವುದರಿಂದ, ಈ ಎಲ್ಲ ಅನರ್ಥಕ್ಕೆ ಈಡಾಗಿದ್ದೀರಿ. ಧರ್ಮ-ಮತ-ಪಂಥದ ಹೆಸರಿನಲ್ಲಿ ನಡೆದ ಕಡಿದಾಟ, ಕಾದಾಟಗಳೆಲ್ಲವೂ ಸುಳ್ಳು; ಕೇವಲ ಮೇಲುತೋರಿಕೆಯವು. ಅಂತರಂಗದ ಕಾರಣವೇ ಬೇರೆ. ಮನುಷ್ಯನ ಜೀವನದಲ್ಲಿ 'ಲಿಂಗ' ವಿಚಾರಕ್ಕಿರುವಷ್ಟು ಪ್ರಾಶಸ್ತ್ಯವು ಬೇರೊಂದಕ್ಕಿಲ್ಲ. ಅದೇಕೆ 'ಲಿಂಗ'ದ ಆರಾಧನೆಗಾಗಿಯೇ ಮಾನವನ ಪ್ರತಿಯೊಂದು ಚಟುವಟಿಕೆಗಳು ನಡೆದಿವೆಯೆಂದು ನನ್ನ ಮನವರಿಕೆಯಾಗಿದೆ. ಆದರೆ ಬಹುಜನರಿಗೆ ಈ ಸಂಗತಿಯನ್ನು ಸ್ಪಷ್ಟವಾಗಿ, ಬಿಚ್ಚುಮಾತಿನಿಂದ ಒಪ್ಪಿಕೊಳ್ಳುವುದಕ್ಕೆ ನಾಚಿಕೆಯಾಗುತ್ತಲಿದೆ. ಆದಕ್ಕಾಗಿಯೆ ಧರ್ಮ, ಮತ, ಪಂಥಗಳ ಇವೆಲ್ಲ ಸೋಗು. ಮನಸ್ಸಿನ ಬೇದಿಕೆಗಳನ್ನು ಸ್ಪಷ್ಟವಾಗಿ ಬಾಯಿಬಿಟ್ಟು ಹೇಳಲಿಕ್ಕಾಗದೆ ಒಳಗೆ ಒತ್ತಿ ಒಚ್ಚಿ ಇಡಬೇಕಾದಾಗ, ಆ ಬಯಕೆಗಳು ಲೋಕಸಮ್ಮತವಾದ ಬೇರೆ ಬೇರೆ ಮಾತು-ಕೃತಿಗಳ ರೂಪದಿಂದ ಹೊರಗೆ ಬರುತ್ತಲಿರುವುದೊಂದು ರೀತಿ.

"ಹಿಂದೂ ದೇಶದ ಪ್ರಾಚೀನ ಇತಿಹಾಸವನ್ನು ನೋಡಿದರೆ ನಿಮ್ಮಲ್ಲಿ ಗುಣಕ್ಕೇ ಮಹತ್ತ್ವವನ್ನು ಕೊಟ್ಟು ಜಾತಿ-ಕುಲಗಳನ್ನು ಲಕ್ಷ್ಯಿಸದೆ ಮದುವೆಗಳಾಗುತ್ತಿದ್ದುದು ಕಂಡುಬರುತ್ತದೆ. ಆ ಬಗೆಯ ಮದುವೆಯ ಫಲವಾಗಿ ಅನೇಕ ನಿಮ್ಮ ಋಷಿ-ಮುನಿಗಳು ಜನ್ಮತಾಳಿದ್ದುದನ್ನು ನಾನು ಓದಿದ್ದೇನೆ. ಋಷಿಗಳ ಕುಲ, ನದಿಗಳ ಮೂಲ ನೋಡಬಾರದೆಂದು ನಿಮ್ಮಲ್ಲಿ ಗಾದೆಯಿರುವುದಾಗಿ ನೀವೇ ಹೇಳುವಿರಿ. ಇದೂ ನನ್ನ ಮಾತಿಗೇ ಪೋಷಕವಾಗಿದೆ. ಈ ಬಗೆಯ ಬೆರಕೆಯಿಂದ ಹೀನಸಂತತಿಯಾಗಿಲ್ಲವೆಂಬುದಕ್ಕೆ ಈ ತೆರನಾದ ಹುಟ್ಟು ಇರುವ ಋಷಿಗಳೇ ಸಾಕ್ಷಿ.

"ಇಂತಹ ಹಿತಕಾರಕವಾದ ಮಿಶ್ರ-ವಿವಾಹಗಳು ನಿಂತುಹೋಗಿ, ನಿಮ್ಮ ಸಮಾಜದಲ್ಲಿ ನಿಃಸತ್ತ್ವದ ಪೀಳಿಗೆಯು ತಲೆದೋರಿತು. ಜಾತಿಗೆ ಮಹತ್ತ್ವವು ಬಂದು, ಗುಣಗಳು ಹಿಮ್ಮೆಟ್ಟಿದುವು. ನಿಮ್ಮ ದೇಶವು ಹಿಂದುಳಿಯಿತು." *

---

* ಸೂಚನೆ: ಲೇಖಕರ ಟಿಪ್ಪಣಿಯ ಸ್ವಲ್ಪ ಭಾಗವನ್ನು ಮಾತ್ರ ಇಲ್ಲಿ ಕೊಟ್ಟಿದೆ. ನಮ್ಮ ವಾಚಕರು ತಮ್ಮ ಅಭಿಪ್ರಾಯವನ್ನು ತಿಳಿಸಿ, ಬೇಕೆಂದು ಬಯಸಿದರೆ ಇನ್ನುಳಿದ ಭಾಗವನ್ನೂ ಪ್ರಕಟಿಸಬಹುದು

—ಸಂ. ಜಯಂತಿ

ಸೇಫ್ಟಿ ರೇಝರ್ ೨ ಬ್ಲೇಡು ಸಮೇತ,
೫ ಆಣೆಗೆ ಒಂದು ಸೆಟ್ಟು.

೧ ಬ್ಲೇಡಿಗೆ ೬ ಉತ್ತಮ ಕ್ಷೌರ!
೫ ಬ್ಲೇಡಿಗೆ ೪ ಆಣೆ.



ನೆನಪಿದೆಯೆ ?

ಶ್ರೀ. ಎಂ. ವಿ. ಸೀ.

॥ ೧ ॥

ಯಾರೂ ಕಾಣದ ತೆರದಲ್ಲಿ
ದಿನದಿನವೂ ನಾವ್ ಜೊತೆಗೂಡಿ
ಒಲಿದು ಆಡಿದುದು ನೆನಪಿದೆಯೆ ?

॥ ೨ ॥

ಯಾರೂ ಇಲ್ಲದ ವೇಳೆಯಲಿ
ಇರ್ವರೆ ತೂಗುಯ್ಯಾಲೆಯಲಿ
ಆಡಿದ ಆಟವು ನೆನಪಿದೆಯೆ ?

॥ ೩ ॥

ನಿನ್ನಣ್ಣನ ಮಗು ನೀನೆತ್ತಿ
ನಿಂತಿರೆ, ಮಗುವೆನ್ನನು ನೋಡಿ
'ಮಾಮಾ' ಎಂದುದು ನೆನಪಿದೆಯೆ ?

॥ ೪ ॥

ಹಿಂದಿನಿಂದ ನಾ ಬಳಿಸಾರಿ
ಕಣ್ಣ ಮುಚ್ಚೆ, ಹೆಸರನು ಹೇಳಿ
ನೀನಿತ್ತುದೇನು ನೆನಪಿದೆಯೆ ?

॥ ೫ ॥

ಬರಿಹಣೆಯಲ್ಲಿರೆ ನೀನೊಮ್ಮೆ
'ತುಟಕೆಂಪನು ಕೊಡು ಹಣೆಗಿಡುವೆ'
ಎನ್ನಲು ಕೊಟ್ಟುದು ನೆನಪಿದೆಯೆ ?

॥ ೬ ॥

ಎಲ್ಲವನೆಲ್ಲವನೆಲ್ಲವನೂ
ನೆನೆವೆನು ನೆನೆವೆನು ದಿನದಿನವೂ—
ನಿನಗೊಂದಾದರು ನೆನಪಿದೆಯೆ ?

ಗಾಣಿಗನ ಹಾಡು

ಶ್ರೀ. 'ಶ್ರೀಧರ' ಪುಣೆ

॥ ೧ ॥

ಎತ್ತs ಮುಂದಕ ನಡೀ ನಡೀ !
ಸೆಲ್ಲಕ ಒಂದೊಂದಡೀ ಅಡೀ !
ಹೊತ್ತು ಮುಣುಗುತಲೆ ಬಿಡತೇನಿ ನಿನ್ನ
ಇದೇ ಸಾರಿಗೀ ಕಡೀ ಕಡೀ !

॥ ೨ ॥

ಜೀವಾ ಹಿಂಡ್ಬೇಕು ಹೊಟ್ಟೆ
ಹೊರೀಬೇಕು
ಹೀಂಗ ನಡಿಯಬೇಕು ಸಂಸಾರಾ !
ಯಾಂವ ಮಾಡಿದನೋ ಕರುಣವಿಲ್ಲದೀ
ಬಟ್ಟೆಗೇಡಿನದಿದು ವ್ಯಾಪಾರಾ !

॥ ೩ ॥

ಮಡದಿ ಮಕ್ಕಳಾ ಹೊಟ್ಟೆಯೊಳಗ ನಾ
ಹಾಕಬೇಕು ಅನ್ನದ ತುತ್ತು !
ಅಡವಿಯೊಳಗ ನಾ ಓಡಿ ಹೋದರs
ಹುಲೀ ಕರಡಿ ಬೆನ್ನಿನ ಸುತ್ತು !

॥ ೪ ॥

ಹ್ಯಾಂಗ ತೆಗೆಯಲೀ ಕುತ್ತು ? ಎತ್ತನೀಗ
ಬಿಟ್ಟು ಬಿಟ್ರೆ, ಬಂಡಿಯ ಹೇರಿ
ಬಾರುಕೋಲಿನಿಂದ ಸೆಳೆದು ಸೆಳೆದು ಇದ-
ನ್ಹಣ್ಣು ಮಾಡತಾರ ಭಿರಿ ಭಿರಿ !

॥ ೫ ॥

ಗಾಣಾ ಬಿಟ್ಟುಕೊಟ್ರೆ ಇದೇ ಗಾಣ ನನ-
ಗಾಗತsದ ಗಂಟಲಗಾಣಾ !
ಸಾಣೆಗ್ಹಚ್ಚಿದಾ ಹರತ ಚೂರಿಹಾಂಗ
ಹೊಟ್ಟೆ ಹರಿಯತsದ ನನ್ನ ಪ್ರಾಣಾ !

॥ ೬ ॥

ಎತ್ತೆ, ಹೇಳು ನಾನೇನು ಮಾಡಬೇಕು ?
ಸುರಿಯ ಬ್ಯಾಡ ಕಣ್ಣೀರ ಹನಿ !
ನಿನ್ನ ಕಣ್ಣಿನಿಂದ ಬಿದ್ದ ನೀರಿನಿಂದ
ಬೆಂದು ಹೋದೀತಪ್ಪ ನನ್ನ ಮನಿ !

॥ ೭ ॥

ದೇವರಿಲ್ಲವೀ ಜಗದ ಜಾಲದಾಗ
ನೀನೆ ನನಗ ನೀ ದೇವ ಶಿವಾ !
ಕೈಯ ಮುಗಿದು ನಾ ಕಾಲ ಹಿಡೀತೇನಿ
ನಡೀ, ಬ್ಯಾಗ, ಹಿಗ್ಗಾಗಿ ಜಿವಾ !

ಮರುಕ

ಶ್ರೀ. ಗುಡಗುಂಡಿ ಶ್ರೀನಿವಾಸ.

॥ ೧ ॥

ಇನಿದು ಸರವ ಸೈವಕಾಲ
ಪೋಗಿ—ಕೋಕಿಲೇ—
ತಿರುಗಿ ಬಹುದು, ಆಗ ಕೊರಲ
ದನಿಯು ತೋರಲೆ !........

॥ ೨ ॥

ಹೂತು ಕಾತು ಮೆರೆವ ತರುವೆ
ಬತ್ತಿ ಬಿಡುತಿಹೆ ;
ಮತ್ತೆ ಸರಿಯು ಸುರಿಯೆ ಮೊಗವ-
ನೆತ್ತಿ ಮೆರೆಯುವೆ !......

॥ ೩ ॥

ಇಂಗದಿರಾ, ಕೊರಗಿ ಕೊರಗಿ
ಕಾಣದಾಗುವೆ ;
ತಿಂಗಳರ್ಧ ಕಳೆದು ಹೋಗೆ
ತೊಳಗ ತೊಡಗುವೆ !

॥ ೪ ॥

ಉರಗರಾಜ ಮುಪ್ಪು ಬಂದು
ತೊಳಲ ತೊಡಗುವೆ ;
ಪರೆಯ ತೊರೆದು ತಿರುಗಿ ನೀ
ಹರೆಯ ಪಡೆಯುವೆ !

॥ ೫ ॥

ರವಿಯು ಉದಯದಂತೆ ಕಳೆದ
ಸೋವ ಪಡೆವಿರಿ,
ದುಃಖಪರಧಿ ಬಿಟ್ಟು ಮುಂದೆ
ಮುಂದೆ ನಡೆವಿರಿ !

ಸುರಾ-ಸುರ ಯುದ್ಧ

ಇಲ್ಲವೆ

ಅಮರಾವತಿಯಲ್ಲಿ ಅಗಸ್ತ್ಯ!

ಶ್ರೀರಂಗ

ಪಾತ್ರಗಳ ವಿವರ

೧ ವಿಷ್ಣು	೨ ಬ್ರಹ್ಮ	೩ ಶೇಷ
೪ ಶಿವ	೫ ಇಂದ್ರ	೬ ಅಗ್ನಿ
೭ ಯಮ	೮ ವಾಯು	೯ ಋಷಿ
	೧೦ ಮರ್ತ್ಯ	

★

ದೃಶ್ಯ ೧

[ಬ್ರಹ್ಮಲೋಕದಲ್ಲಿ ಬ್ರಹ್ಮನು ಹೌಹಾರಿದವನಂತೆ ಕುಳಿತಿದ್ದಾನೆ; ಇಷ್ಟೇಕೆ — ಹೆದರಿ ನಡುಗುತ್ತಲಿದ್ದಾನೆ ಎಂದು ಹೇಳಬಹುದು. ಯಾಕೆಂದರೆ ಅವನ ಆಸನವಾದ ಕಮಲವು ನಡುಗುತ್ತಿದೆ. ಕಮಲ ಹೊಯ್ದಾಡದೆ ಮಾಡುವುದೇನು? ಯಾಕೆಂದರೆ, ಅದನ್ನು ಉದರದಲ್ಲಿ ಧರಿಸಿದ ವಿಷ್ಣುವು ಉರುಳಾಡುವ ಸ್ಥಿತಿಯಲ್ಲಿದ್ದಾನೆ. ಪಾಪ! ಅವನಾದರೂ ಮಾಡಬೇಕೇನು? ಅವನ ಹಾಸಿಗೆಯಾದ ಶೇಷನು ಅತ್ಯಂತ ಕೋಪಾವಿಷ್ಟನಾಗಿ ಭುಸುಗುಡುತ್ತ ಹೆಡೆಯನ್ನು ತೂಗುತ್ತಿದ್ದಾನೆ. ಹೀಗೆ ಆದಿಶೇಷನ ನಿಮಿತ್ತವಾಗಿ ಅಂತ್ಯಬ್ರಹ್ಮನ ವರೆಗೂ ಇಡಿಯ ದೃಶ್ಯವು ಹೊಯ್ದಾಡುತ್ತಿದೆ.]

ವಿಷ್ಣು:— (ಒಮ್ಮೆಲೆ ತಲೆ ಹಿಡಿದುಕೊಂಡು ಕಣ್ಣು ಮುಚ್ಚಿ) ಪಿತಾಮಹಾ, ಇನ್ನು ಹೊಯ್ದಾಡುವುದನ್ನು ತಡೆಯಬಾರದೇ! ನನಗೆ ತಲೆ ತಿರುಗಿ ಪಿತ್ತವಿಕಾರವಾಗುವಂತಿದೆ.

ಬ್ರಹ್ಮ:— (ಹುಕ್ಕಿಂದು ದನಿದು ಮಾತನಾಡುತ್ತ) ಭೋ ಪದ್ಮನಾಭಾ, ನಿನ್ನ ತಲೆತಿರುಗಿ ಪಿತ್ತವಿಕಾರವಾಗುವುದೆಂದಮೇಲೆ, ನಿನಗಿಂತಲೂ ಮೇಲಕ್ಕೆ ಕುಳಿತ ನನ್ನ ತಲೆ ಎಷ್ಟು ತಿರುಗುತ್ತಿರಬಹುದು! ಊಹಿಸಬಲ್ಲೆಯಾ? ಇದಲ್ಲದೆ ಪದ್ಮವೂ ಹೊಯ್ದಾಡುತ್ತಿರುವುದರಿಂದ ಸಿಡಿಮೇಳುವ ಭೃಂಗಸಮೂಹದ ಬಾಧೆಯೂ ನನಗೆ ತಡೆಯದಂತಾಗಿದೆ. ನಿಜವಾಗಿ ನೀನು ತಡೆದರೆ ಈ ತೂಗಾಟ ನಿಲ್ಲುವುದು.

ಶೇಷ:— (ಬುಸುಗುಡುತ್ತ ತಿರಸ್ಕಾರದ ದನಿಯಲ್ಲಿ) ಯಾರು ತಡೆದರೂ ತೂಗಾಟ ನಿಲ್ಲದು! ಎಲ್ಲರಿಗೂ ಆಧಾರನಾಗಿ ನಾನು ಕೆಳಗೆ ನಿಂತಿದ್ದೇನೆ. ನಾನು ಹೊಯ್ದಾಡುತ್ತಿದ್ದೇನೆ, ಅನಂತ ಕಲ್ಪಗಳವರೆಗೂ ನಾನು ಹೊಯ್ದಾಡುವ ನಿಶ್ಚಯವನ್ನು ಮಾಡಿದ್ದೇನೆ —

ಬ್ರಹ್ಮ:— (ಓಕರಿಕೆ ಬಂದವನಂತೆ ನಟಿಸಿ ಬಾಯಿ ಮುಚ್ಚಿಕೊಳ್ಳುವನು.)

ಶೇಷ:— (ಅಣಕಿನಿಂದ) ಓಹೋ! ಈಗ ತಿಳಿಯಿತೆ ಪಿತಾಮಹನಿಗೆ? ಮೈ ತೂಗಿದರೆ ತಲೆತಿರುಗುವುದೆಂಬ ಅನುಭವ ಈಗ ಬಂದಿತೆ ಆದಿಬ್ರಹ್ಮನಿಗೆ?

ಬ್ರಹ್ಮ:—(ದೀನವಾಣಿಯಿಂದ) ವಾಸುಕಿರಾಯಾ, ವೃದ್ಧನಮೇಲೆ ಕರುಣೆಯಿಂದಾದರೂ ತಡೆಯಬಾರದೆ?

ವಿಷ್ಣು:— ಆದಿಶೇಷಾ, ಸೃಷ್ಟಿಕರ್ತನ ತಲೆ ತಿರುಗಿದೆ, ಅನರ್ಥವಾದೀತು! ತಡೆಯಬಾರದೆ?

ಶೇಷ:—ಆಗಬೇಕಾದ ಅನರ್ಥ ಉಳಿದಿದೆ ಏನು! ಸೃಷ್ಟಿಕರ್ತನ ತಲೆ ತಿರುಗಿದೆ ಎಂಬುದು ಅವನ ಸೃಷ್ಟಿಯೊಳಗಿನ ತಲೆ ತಿರುಗಿದ ಜನರಿಂದಲೆ ತಿಳಿದು ಬಂದಿದೆ ನನಗೆ. ತಲೆ ತಿರುಗಿದರೆ ಮೈನೋವು, ಮನನೋವು ಆಗುವುವೆಂಬುದು ನನ್ನನ್ನು ಮಂದಾರಕ್ಕೆ ಕಟ್ಟಿ ಸಮುದ್ರಮಂಥನ ಮಾಡುವಾಗ ಸ್ಮರಣೆಗೆ ಬರಲಿಲ್ಲವಲ್ಲ ನಿಮಗೆ! ಆಗ ನನ್ನ ಸ್ಥಿತಿ ಏನಾಗಿರಬೇಕು?

ವಿಷ್ಣು:— ಅದು ಲೋಕಸಂಗ್ರಹದ ಕಾರ್ಯ!

ಶೇಷ:—(ತಿರಸ್ಕಾರದ ನಗೆಯಿಂದ) ಯಾವ ಲೋಕದಲ್ಲಿ ಯಾವುದರ ಸಂಗ್ರಹವಾಯಿತೊ! ನಿರರ್ಥಕವಾಗಿ ನನ್ನನ್ನು ಅಂದು ಗೋಳಿಡಿಸಿ—

ಬ್ರಹ್ಮ:— ಫಣೀಂದ್ರಾ, ಹದಿನಾಲ್ಕು ರತ್ನಗಳನ್ನು ದೇವತೆಗಳಿಗೆ ಒದಗಿಸಿಕೊಟ್ಟು—

ಶೇಷ:— (ಸಿಟ್ಟಿನಿಂದ) ಹದಿನಾಲ್ಕು ಅಲ್ಲ — ಹದಿಮೂರು ಎನ್ನು — ಪಿತಾಮಹಾ—

ವಿಷ್ಣು:— (ಆಶ್ಚರ್ಯದಿಂದ) ಹದಿಮೂರು! ಹಾಗೆಂದರೆ ಒಂದನ್ನು ಮತ್ತೆ ರಾಕ್ಷಸರು ಅಪಹರಿಸಿದರೊ? ಎಲಾ ದಾನವಾಧಮರೆ, ಇದೊ ಇನ್ನೊಂದು ಅವತಾರವನ್ನು ತಾಳಿ—

ಶೇಷ:— (ಹಂಗಿಸುವ ದನಿಯಲ್ಲಿ) ಹಾಂ, ಹಾಂ, ಅವತಾರಧಣೀ, ಚಕ್ರಪಾಣೀ, ನನ್ನ ಮಾತನ್ನು ಪೂರ್ತಿಯಾಗಿ ಕೇಳಿಕೊಳ್ಳುವಂತಹನಾಗು. ಒಂದು ರತ್ನ ಅಪಹೃತವಾಗಿವೆ; ಆದರೆ ಅದನ್ನು ಅಪಹರಿಸಿದವರು ದಾನವರಲ್ಲ, ಮಾನವರು!

ಬ್ರಹ್ಮ:— (ಚಕಿತನಾಗಿ) ಏನು? — ನನ್ನ ಸೃಷ್ಟಿಯೊಳಗಿನ ಮಾನವರೆ?

ವಿಷ್ಣು:— (ವೀರಾವೇಶದಿಂದ) ಹೇಳು — ಹೇಳು — ಯಾವ ರತ್ನವನ್ನು? ಲಕ್ಷ್ಮಿಯನ್ನೆ? (ಶೇಷನು 'ಅಲ್ಲ' ಎಂದು ತಲೆ ಅಲ್ಲಾಡಿಸುವನು.) ಕೌಸ್ತುಭವನ್ನೆ? (ಶೇಷನು ಮೊದಲಿನಂತೆ ತ

ಆಲ್ಲಾಡಿಸುವ ರಭಸಕ್ಕೆ ಬ್ರಹ್ಮನು ಬೆಚ್ಚಿ 'ಅಯ್ಯೊ, ಸಾವಿರ ನಾಲಗೆಗಳ ಶೇಷಾ, ಬಾಯಿಯಿಂದ ಹೇಳು ತಲೆಯಿಂದ ಬೇಡ' ಎನ್ನುತ್ತ ಮುದುಡಿ ಕೊಳ್ಳುವನು)...... ಪಾರಿಜಾತವನ್ನೆ?

ಶೇಷ:— (ಗದ್ಗದಿಸುತ್ತ) ಅಲ್ಲ— ಅಲ್ಲ— ಅಲ್ಲ— ! ಬಾಯಿಯಿಂದಲೇ ಹೇಳುವೆ. ಅಂದು ನನ್ನನ್ನು ಕಡೆಗೋಲಿಗೆ ಕಟ್ಟಿ ತಿರುಗಿಸಿದುದಕ್ಕೆ ಇಂದಿಗೂ ನನ್ನ ಮೈ ತಿರುಗುತ್ತಿದ್ದು, ಅದಕಾಗಿ ನನ್ನ ಬೆನ್ನುಮೇಲಿನ ಪೃಥ್ವಿ ಕೂಡ ತಿರುಗುತ್ತಲಿದೆ! ನೋಡಿದಿರಾ! ಇಷ್ಟು ಕಷ್ಟದಿಂದ ಕಡೆದ ರತ್ನಗಳಲ್ಲಿ ಒಂದಾದ ಸುರೆಯನ್ನು—

ವಿಷ್ಣು:— (ಬೆಚ್ಚಿ) ಏನು— ಸುರೆಯನ್ನು—

ಶೇಷ:—ಸುರೆಯನ್ನು ಮಾನವರು ಸುಟ್ಟು ಶೇಷ ವಿಲ್ಲದಂತೆ ಮಾಡಿದರು! ದೇವತೆಗಳ ರತ್ನವಾದ ಸುರೆಯು ನಿಂದ್ಯವಂತೆ—! ಹಸುವಿನ ಹಾಲು ಹಿತಕರ ವಂತೆ!

ವಿಷ್ಣು:—(ಆನಂದದಿಂದ) ಹಸುವಿನ ಹಾಲು! ಭೂಲೋಕದಲ್ಲಿ ಹಸುಗಳ ಪ್ರಚಾರ ನಡೆದಿದೆಯೆ! ಆಹಾ! ಹಾಗಾದರೆ ನಾನು ಮತ್ತೆ ಕೃಷ್ಣಾವತಾರವನ್ನು ತಾಳಿ— ಮತ್ತೆ ಗೋಪಿಕಾ ಕ್ರೀಡೆಯನ್ನು—

ಶೇಷ:—(ನಡುವೆಯೆ) ಕೃಷ್ಣಾವತಾರದ ಸುಖ ತಪ್ಪಿಟ್ಟಿತು! ಗೋಪಿಕೆ ಯರ ಪೀಡೆ ತಪ್ಪಿಟ್ಟಿತು! ನೀನು ಕೃಷ್ಣ ಆಗುವೆ ಹೇಗೆ? ಮುಂಚೆ ಬಲರಾಮನಿಲ್ಲದೆ ಕೃಷ್ಣನ ಪ್ರವೇಶವೆ ಇಲ್ಲ. ಮಾನವ ಲೋಕದಲ್ಲಿ ಮದಿರಾ-ಪಾನವೆ ನಿಷಿದ್ಧವಾದಾಗ ನಿನಗೆ ಬಲರಾಮನಾಗಿ ಯಾರು ಸಹಾಯ ಮಾಡುವರು? ಅವತಾರವಂತೆ! ಮಾನವರಿಂದಾದ ಅವಮಾನವನ್ನು ತಡೆದುಕೊಳ್ಳುವ ಹೇಡಿ ದೇವನನ್ನು—

ಬ್ರಹ್ಮ:— (ಕನಲಿ) ಮಾನವರು! ನನ್ನ ಮನಸಿನಿಂದ ಹುಟ್ಟಿ ಬೆಳೆಯುವ ಹುಳುಗಳು! ಅವರಿಗೆ ದೇವ ಹೇಡಿಯೇ! ಸಂತಪ್ತವಾದ ನನ್ನ ಸರ್ವಾಂಗ ನಡುಗುತ್ತಿದೆ—

ಶೇಷ:— (ತಿರಸ್ಕಾರದ ನಗೆಯಿಂದ) ಕೆಳಗಿನಿಂದ ನಾನು ನಡುಗಿ-

ಸುತ್ತೇನೆಂದು ನಡುಗುತ್ತಿರುವಿ, ಪಿತಾಮಹಾ, ಸಿಟ್ಟಿನಿಂದ ಏಂದು ಸಾಧಿಸಿಕೊಳ್ಳಬೇಡ.

ಬ್ರಹ್ಮ:— (ದರ್ಪದಿಂದ) ಯಾರು? ಶಿವನೆಲ್ಲಿ? (ಚಪ್ಪಾಳೆ ತಟ್ಟುತ್ತ) ಭೋ, ನೀಲಕಂಠಾ—

ಶಿವ:— (ಪ್ರವೇಶಿಸಿ) ಹಿರಣ್ಯಗರ್ಭನೆ, ಆಜ್ಞೆಯಾಗಲಿ.

ಬ್ರಹ್ಮ:— (ರಭಸದಿಂದ) ಇದೊ— ಈಗಿಂದೀಗ ಈ ಮಾನವ ಕ್ರಿಮಿಗಳ ಸಂಹಾರಕಾರ್ಯವನ್ನು ಕೈಕೊಳ್ಳುವಂಥಾತ್ಮನಾಗು.

ಶಿವ:—(ಅತ್ಯಂತ ನಮ್ರತೆಯಿಂದ ಕೈಮುಗಿದು, ಉಗುಳ್ನುಂಗುತ್ತ) ಹೇ, ಸ್ವಯಂಭುವಾ, ಶಿರಸಾ ವಂದಿಸುವೆ,ಕ್ಷಮೆ ಇರಲಿ. ತನ್ನ ಆಜ್ಞೆ ನನ್ನ ಜೀವನದುಸಿರು— ಆದರೆ ಇದೊಂದು ಆಜ್ಞೆ ಎಂದರೆ ಮಾತ್ರ ಕಂಠದಲ್ಲಿ ಸಿಕ್ಕ ಉಸಿರಿನಂತೆ—

ವಿಷ್ಣು:—(ಚಕಿತನಾಗಿ) ಶಂಕರಾ, ಸಂಹಾರ ಭಯಂಕರಾ, ಇದೇನು ಹೇಳುವೆ? ಜಗತ್ತನ್ನು ಸುಡುವ ಹಾಲಾಹಲವನ್ನು ಕಂಠದಲ್ಲಿ ದಕ್ಕಿಸಿ ಕೈಲಾಸವಾಸಿ ಎನಿಸಿದ ನೀನು ಮಾನವರೆದುರು ಮೆತ್ತಗಾಗುವುದೆ?

ಶಿವ:— ಮಾನವರು! ವೈಕುಂಠವಾಸಿಯಾದ ನಿನಗೆ ಭೂಲೋಕವು ದೂರವಾಗಿದೆ. ಕೈಲಾಸಕ್ಕೆ ಸಮೀಪದಲ್ಲಿಯೆ ಇದ್ದಾರೆ ಮಾನವರು. ಅವರನ್ನು ಬಲ್ಲೆ ನಾನು. ನಾನು ಹಾಲಾಹಲ ಒಂದನ್ನೆ ದಕ್ಕಿಸಿದರೆ ಮಾನವರು ಎಷ್ಟೋ ಹಾಲಾಹಲಗಳನ್ನು ದಕ್ಕಿಸಿಕೊಂಡಿದ್ದಾರೆ! ಕ್ಷೀರಸಾಗರದಲ್ಲಿದ್ದ ನಿನಗೆ ಲವಣನೀರಿನಿಂದ ವಿಷದಕ್ಕಿಸುವ ಮಾನವರ ಶಕ್ತಿ ತಿಳಿಯುವುದು ಹೇಗೆ? ವ್ಯರ್ಥ ಮಾತೇಕೆ?

ಬ್ರಹ್ಮ:— (ಚಂಚಿಕೆ ಹಾಕುತ್ತ) ಹಾಗಾದರೆ, ವಿಷ್ಣೋ, ನೀನು ಈ ಕಾರ್ಯವನ್ನು ವಹಿಸಬೇಕು. ಪುರುಷೋತ್ತಮನಾದ ನೀನು ಹಿಂದಿನಂತೆ ಮೋಹಿನಿಯ ವೇಷದಿಂದ ಭೂಮಿಗಿಳಿದು—

ವಿಷ್ಣು:—(ನಡುವೆಯೆ) ವಿಧಾತಾ, ಯಾಕೆ ನನ್ನನ್ನು ನಾಚಿಕೆಗೆ

ಋಷಿಯು ಹಿಂದೆ ಸರಿಯಲು ಹೋಗಿ ಮುಗ್ಗರಿಸಿ ಬೀಳುವನು. ಸೋಮವು ಚೆಲ್ಲುವುದು. ಕೂಡಲೆ ಆನಂದದ ಹುಂಕಾರದಿಂದ ನಾಲ್ಕೂ ದೇವತೆಗಳು ಅಡ್ಡಬಿದ್ದು ನೆಲಕ್ಕೆ ನಾಲಗೆ ಚಾಚುವರು.

ಗುರಿಮಾಡುವೆ ? ಮಾನವಲೋಕಕ್ಕೆ ಬೇಕಾದ ವೇಷದಿಂದ ಹೋಗಲು ಸಿದ್ಧನಿದ್ದೇನೆ, ಆದರೆ ಹೆಣ್ಣಿನ ವೇಷ ಬೇಡ. ನನ್ನ ಹೆಂಡತಿಯಾದ ಲಕ್ಷ್ಮಿ ದಿನೇ ದಿನೇ ಮಾನವರ ಸಹವಾಸವನ್ನೆ ಹೆಚ್ಚಾಗಿ ಕೋರುತ್ತಿರುವಾಗ ನಾನು ಹೆಣ್ಣಿನ ವೇಷದಿಂದ–

ಬ್ರಹ್ಮ:— (ಹತಾಶನಾಗಿ) ಹಾಗಾದರೆ ಮಾಡಬೇಕೇನು? ನಾನೇ ಇನ್ನು ಮುಂದೆ ಸೃಷ್ಟಿಯನ್ನು ತಡೆದುಬಿಡಲಾ ?

ಶೇಷ:— (ಪೊಳ್ಳನೆ ನಕ್ಕು) ಮುದುಕರಾದವರು ಮತಿಗೇಡಿಗಳಾಗುವರೆಂಬ ಮಾತು ಸುಳ್ಳಲ್ಲ. ಪೃಥ್ವಿಯ ಭಾರವನ್ನು ಯಾವಾಗಲೂ ಹೊತ್ತು ನಿಂತ ನನ್ನ ಅನುಭವದ ಮಾತನ್ನೂ ಕೇಳಿರಿ. ಸೃಷ್ಟಿ–ಸ್ಥಿತಿ–ಸಂಹಾರಗಳ ಶಕ್ತಿ ಈಗ ಮಾನವನಲ್ಲಿಯೆ ಇದೆ. ನಿಮ್ಮ ಆಟ ನಡೆಯದು.

ವಿಷ್ಣು:— ನನಗೊಂದು ಹಂಚಿಕೆ ಹೊಳೆದಿದೆ. ಮಾನವರ ಗುಣದೋಷಗಳನ್ನು ಇಂದ್ರನು ಚೆನ್ನಾಗಿ ಬಲ್ಲನು. ಅವನಿಗೇ ಆಜ್ಞೆಯನ್ನು ಕೊಡೋಣ. ಸುರಾಸಂಸ್ಥಾಪನೆ ಮಾಡೆಂದು ಹೇಳೋಣ.

ಶೇಷ:— ಇಲ್ಲವಾದರೆ— ಸಮುದ್ರಮಂಥನದ ಯಾತನೆಯ ಸೇಡನ್ನು ತೀರಿಸಲು ನಾನು—

ಬ್ರಹ್ಮ:— ಹಾಂ— ತಡೆ, ಶೇಷಾ, ತೂಗಾಡಬೇಡ. ಹಂಸದ ಮೇಲೆ ಕುಳಿತಾಗ ಕಣ್ಣು ತಿರುಗಿ ಬಿದ್ದೇನು. ತಡೆ.

(ಚಪ್ಪಾಳೆ ತಟ್ಟುವನು. ದೃಶ್ಯ ಮಾಯವಾಗುವುದು.)

ದೃಶ್ಯ ೨

[ಅಮರಾವತಿಯಲ್ಲಿ ಇಂದ್ರಸಭೆ. ಸಭೆಯ ಆಸನಗಳು ಬರಿದಾಗಿವೆ. ಇಂದ್ರನೊಬ್ಬನೆ ಚಕಿತನಾಗಿ ಬಾಗಿಲಿನಿಂದ ತನ್ನ ಸಿಂಹಾಸನದವರೆಗೆ ಮೇಲಿಂದಮೇಲೆ ತಿರುಗಾಡುತ್ತಿದ್ದಾನೆ. ಒಮ್ಮೆ ಆಶ್ಚರ್ಯ, ಒಮ್ಮೆ ಸಿಟ್ಟು, ಒಮ್ಮೆ ಹೆಮ್ಮೆ ಹೀಗೆ ಒಂದೊಂದಾಗಿ ಭಾವನೆಗಳು ತಿರುಗಾಡುವಾಗ ಅವನ ಮುಖದಲ್ಲಿ ಮೂಡುತ್ತವೆ. ಕೆಲಹೊತ್ತಿನ ಮೇಲೆ ಸಭಾಮಂದಿರದ ನಟ್ಟನಡುವೆ ನಿಂತು ಮುಗುಳ್ನಗೆಯಿಂದ ಮುಖವರಳಿ—]

ಇಂದ್ರ:—ಭೂಮಿಯಲ್ಲಿ ಕಲಿಕಾಲ ಬಂದರೆ ಸ್ವರ್ಗದಲ್ಲಿ ವಿಪರೀತ ಫಲ ! ಹಹ ! ಬ್ರಹ್ಮಾದಿಗಳು ನನಗೆ ಶರಣುಬರಬೇಕೆಂದರೆ— ? (ಮತ್ತೆ ಒಮ್ಮೆಲೆ ಸಿಟ್ಟಿನಿಂದ ಬಾಗಿಲ ಕಡೆ ನಡೆಯುತ್ತ) ಈ ಹೊತ್ತು ಆಸ್ಥಾನಕ್ಕೆ ಯಾರೂ ಬಂದಿಲ್ಲವೇಕೆ ? ಈ ಹಾಳು ರಂಭೆಯಾದರೂ ಬರಬಾರದಾಗಿತ್ತೆ? ಅಗ್ನಿ ಬೆಂಕಿಯಲ್ಲಿ ಸುಟ್ಟುಕೊಂಡನೇ?. . ವಾಯು ಹಾರಿ ಹೋದನೆ ಗಾಳಿಯಲ್ಲಿ ? . . ವರುಣ ಮುಳುಗಿದನೆ ಸಮುದ್ರದಲ್ಲಿ? . . ಅಥವಾ ಇಂದ್ರನಿಗೆ ಅಮರ್ಯಾದೆ ಮಾಡಬೇಕೆಂದಿರುವರೊ (ತಡೆದು ನಿಂತು ಮತ್ತೆ ಮುಗುಳ್ನಗೆಯಿಂದ) ಬ್ರಹ್ಮಾದಿಗಳೆ ಇಂದು ಕೈಮುಗಿದು ನಿಂತಾಗ ನನ್ನ ಅಮರ್ಯಾದೆ ಮಾಡುವವರು ಯಾರು ? (ಸಡಗರದಿಂದ ನಡೆದು ಹೋಗಿ ಸಿಂಹಾಸನದ ಮೇಲೆ ಕುಳಿತುಕೊಂಡು) ಸ್ವಾಹಾಸೇವನವನ್ನಾದರೂ ಮಾಡೋಣ. ಯಾವುದನ್ನು ಸೇವಿಸೋಣ ? ಕೃತಯುಗದ ಅಮೃತ—? ಥೆ— ಸರ್ವಸಾಮಾನ್ಯರ ಪೇಯವದು. ತ್ರೇತಾಯುಗದ ಸುರೆಯನ್ನು ಸೇವಿಸೋಣವೆ—? ಉಹುಂ. . ಯಜ್ಞಕುಂಡದ ಹೊಗೆ ಬಡಿದಿದೆ ಅದಕ್ಕೆ. . ದ್ವಾಪರದ ಮದಿರೆಯನ್ನು— ? ಥೂ—ಅದರಲ್ಲಿ ಮದಿರೆಗಿಂತ ಮಥುರೆಯ ಹಾಲೇ ಹೆಚ್ಚು. . ಅಂತೂ ಕಲಿಯುಗದ ಸೋಮರಸವನ್ನೇ ಸೇವಿಸಬೇಕಾಯಿತು. . ಯಾವುದೇನು ? ಆನಂದೋದ್ರೇಕದಲ್ಲಿ ಮನಸ್ಸೇ ಮಾದಕವಾಗಬಹುದು. ಯಾರಲ್ಲಿ ?

(ಮರ್ತ್ಯಜೀವಿಯೊಬ್ಬನು ಬರುವನು.)

ಇಂದ್ರ:—(ಬೆರಗಾಗಿ) ಯಾರು ? ಯಾರು ನೀನು ? ಇಲ್ಲಿ ಯಾಕೆ ಬಂದೆ ? ಹೇಗೆ ಬಂದೆ ? ನಿನ್ನ—

ಮರ್ತ್ಯ:—ಹಾಂ, ಹಾಂ, ತಡೆ. ದೇವತೆಗಳು ಕಣ್ಣೆವೆ ಬಡೆಯೋದಿಲ್ಲ ಅಂದರೆ ಬಾಯಿ-ಉಸಿರೂ ಹಿಡಿಯೋದಿಲ್ಲವೊ ಏನು ? ನಾನು ಮರ್ತ್ಯ. ಹುಟ್ಟಿ— ಸತ್ತು— ಮತ್ತೆ ಹೊಸತಾಗಿ ಹುಟ್ಟಿ— ಮತ್ತೆ— ಸತ್ತು —ಮತ್ತೆ ಹೊಸತಾಗಿ ಹುಟ್ಟಿ— ಮತ್ತೆ—ಹೀಗೆ ನವಚೈತನ್ಯದಿಂದ ಬೆಳಗುವ ಶಾಶ್ವತ ತಾರುಣ್ಯ ಭೋಗಿಸುವ ನನ್ನಂತಹರಿಗೆ ಮರ್ತ್ಯ ಅಂತಾರೆ — ತಿಳಿಯಿತೆ ? ಹುಟ್ಟಿದ್ದು ಯಾಕೆ ಗೊತ್ತಿಲ್ಲ, ಸಾಯೋದು ಹೇಗೆ ಗೊತ್ತಿಲ್ಲ ಇಂತಹ ನೀನು ! ಹೋಗಲಿ. ನಿನ್ನ ಮಾತು ಕೇಳಿ ಭೂಲೋಕದಿಂದ ಬಂದೆ.

ಇಂದ್ರ:—(ಬೆರಗಾಗಿ) ಭೂಲೋಕದಲ್ಲಿ ನನ್ನ ಮಾತು—

ಮರ್ತ್ಯ:—(ನಡುವೆಯೆ) ಸ್ವರ್ಗಲೋಕದಲ್ಲಿ ಮೊದಲು ನನ್ನ ಮಾತು ಕೇಳು. ಗುಡುಗಿನ ನಿನ್ನ ದನಿ ಕೇಳಿಸಲಿಲ್ಲ ನನಗೆ. ಯಾರು ಎಲ್ಲಿ ಮಾತಾಡಿದರೂ ಕೇಳಿಸುವಂತಹ ಯಂತ್ರ ನನ್ನಲ್ಲಿದೆ, ಆದರಿಂದ ನಿನ್ನ ಮಾತು ಕೇಳಿಸಿತು. ಬೇಕಾದ ಲೋಕಕ್ಕೆ ಹಾರಿ ಹೋಗುವ ಯಂತ್ರ ನಮ್ಮಲ್ಲಿದೆ, ಅದರ ಸಹಾಯದಿಂದ ಬಂದೆ. ಇದಲ್ಲದೆ ನನಗೆ ಇಂದಿಲ್ಲ ನಾಳೆ ಸ್ವರ್ಗಕ್ಕೆ ಬರಲೇ ಬೇಕಾಗಿತ್ತು. ಇಲ್ಲಿನ ಕೆಲಸ ನನಗೆ ಒಪ್ಪಿಸಿದ್ದಾರೆ—

ಇಂದ್ರ:—(ಅವನನ್ನು ದಿಟ್ಟಿಸಿ) ನೀನು ಮತಿಗೆಟ್ಟ ಮಾನವನಿದ್ದೀಬಹುದು.

ಮರ್ತ್ಯ:—ಮತಿಗೆಟ್ಟ ಮಾನವ ಅಲ್ಲ, ಮದ್ಯ ಬಿಟ್ಟ ಮಾನವ ನಾನು. ನಾನಷ್ಟೆ ಅಲ್ಲ, ಜಗತ್ತಿನಲ್ಲಿ ಯಾರ್ಯಾರು ಮದ್ಯಸೇವನೆ ಮಾಡುವರೊ ಅವರೆಲ್ಲರಿಗೂ ಮದ್ಯವನ್ನು ಬಿಡಿಸುವ ಪ್ರಚಾರಕ ನಾನು— ಈಗ ನೀನೇನೋ ಕಲಿಯುಗದ ಸೋಮರಸ ಕುಡಿಯೋದು ಅಂತ ಮಾತನಾಡುತ್ತಿದ್ದೆಯಲ್ಲ— ಅದನ್ನು ಮರೆತು ಬಿಡು. ಈಗ ನಮ್ಮಲ್ಲಿ ಪೋಸ್ಟಲ್ ಡಿಪಾರ್ಟಮೆಂಟ್ ಸುರುವಾಗಿ ಯಜ್ಞದ ರನರ್ (Runner) ರೂಢಿ ಹೋಗಿ ಬಿಟ್ಟಿದೆ. ಇನ್ನು ಯಾರೂ ಯಜ್ಞ ಮಾಡೋದಿಲ್ಲ, ಸೋಮ ನೀಡೋದಿಲ್ಲ, ಕದ್ದು ಯಜ್ಞ ಮಾಡುವುದು ಹಿಂಸೆ, ಕದ್ದು ಸೋಮ ಕುಡಿಯೋದು ಅಸತ್ಯ; ನಮ್ಮಲ್ಲಿದೆ ಸತ್ಯ-ಅಹಿಂಸೆಗಳ ಕಾಲ. ಈ ಪ್ರಕಾರವಾಗಿ, ಹೇ ಮಹೇಂದ್ರನೆ, ಈ ಕಲಿಯುಗದಲ್ಲಿ ಹೇಳುವಂಥಾತ್ತಲ್ಲಿ ಬರುವುದಲ್ಲಾ—

ಇಂದ್ರ:—(ಹೌಹಾರಿದವನಂತೆ) ಏನು— ಏನು ? ಭೂಮಿಯಲ್ಲಿ ಯಜ್ಞವೆ ಇಲ್ಲವೆ ? ಸೋಮರಸದ ಸುದ್ದಿಯೆ ಇಲ್ಲವೆ ? ಛೆ—

ಎಂದಿಗೂ ಶಕ್ಯವಿಲ್ಲ. ಭೂಮಿಗೆ ಬೇಕು ದೇವತೆಗಳು, ದೇವತೆಗಳಿಗೆ ಬೇಕು ಅನ್ನ-ಪಾನ; ಸುರರು ನಾವು, ನಾವು ಜೀವಿಸುವುದು ಸುರಾ—ಸೇವನದಿಂದಲೆ ; ಸುರೆ ಇಲ್ಲದಿದ್ದರೆ ನಮಗೆ ಜೀವವಿಲ್ಲ. ಮುಂದೆ ವಿಶ್ವದ ಗತಿ—

ಮರ್ತ್ಯ:—(ನಡುವೆಯೆ) ಒಮ್ಮೆಲೆ ತರ್ಕ-ಸಿದ್ಧಾಂತಗಳಿಗೆ ಬೀಳಬೇಡ. ವಿಶ್ವದ ಗತಿ ಹಾಳಾಯಿತು. ಸುರೆ ಇಲ್ಲದಿದ್ದರೆ ಸಾಯುವೆ ಎಂದು ಹೆದರಬೇಡ. ಅಂತಹ ಪರಿಸ್ಥಿತಿ ಇದ್ದವರಿಗಾಗಿ ಸ್ಪೆಶಲ್ ಪರ್ಮಿಟ್ ಕೊಡುವೆವು. ಅದನ್ನೆ ಹೇಳಲು ಬಂದಿರುವೆ. ಆದರೆ ಎರಡು ಸಂಗತಿಗಳನ್ನು ಮಾತ್ರ ಲಕ್ಷ್ಯದಲ್ಲಿಡು. ಸ್ಪೆಶಲ್ ಪರ್ಮಿಟ್ ಬೇಕಾದರೆ ಮೆಡಿಕಲ್ ಸರ್ಟಿಫಿಕೇಟ ಬೇಕು. ಇದಲ್ಲದೆ ಕೃತಯುಗದ ಅದು, ತ್ರೇತಾಯುಗದ ಇದು—ಅಂತ ಏನೇನೊ ಮಾತಾಡುತ್ತಿದ್ದೆ. ಹಿಂದಿನ ಯಜ್ಞಗಳಿಂದ ನೀನು ಮದ್ಯವನ್ನು ಕೂಡಿಸಿಟ್ಟಂತೆ ಕಾಣುತ್ತದೆ. ಅದನ್ನು ಮೊದಲು ಮರ್ತ್ಯಲೋಕದ ಸರಕಾರಕ್ಕೆ ಒಪ್ಪಿಸು.

ಇಂದ್ರ:—(ಏನೂ ತಿಳಿಯದೆ) ಪರಮಿಟ್! ಸರ್ಟಿಫಿಕೇಟ! ಸರಕಾರ! ಏನಿದು? ನನಗೆ ನಿನ್ನ ಮಾತಿನ ಅರ್ಥವೆ ಆಗುವದಿಲ್ಲವಲ್ಲ?

ಮರ್ತ್ಯ:—ಹೇಗೆ ಆದೀತು ಅರ್ಥ? ಒಂದು ದಿವಸಲ್ಲ, ಒಂದು ವರ್ಷ ಅಲ್ಲ, ಯುಗಾನುಯುಗ ಒಂದೇ ಸವನೆ ಮದ್ಯ ಕುಡಿದಿರುವೆ. ಉಸಿರಾಡಿಸಿದರೆ ಮುಂದೆ ಹಾರಾಡುವ ನೊಣಕ್ಕೆ ಮದ ಏರಬಹುದು! ತಲೆಗೆ ತಿಳಿದುಕೊಳ್ಳುವಷ್ಟು ತ್ರಾಣ ಬೇಕಲ್ಲ? ಈಗ ಉಳಿದ ಎಲ್ಲ ದೇವತೆಗಳಿಗೂ ಹೇಳಿ ಬಂದೀನಿ. ನನ್ನ ಮಾತು ಕೇಳಿ ಅವರದೂ ಕೈಕಾಲು ಸತ್ತು ಹೋಗಿವೆ, ಮನೆ ಹಿಡಿದು ಕೂತಾರೆ. ಆದರೆ ಅವರಲ್ಲಿ ಕೂಡಿಸಿಟ್ಟ ಮದ್ಯ ಇಲ್ಲ ನಿನ್ನಂತೆ. ನಿನ್ನ ಸಂಗ್ರಹ ನನ್ನ ಸಿಪಾಯಿಯರಿಗೆ ಒಪ್ಪಿಸು—ನಾನು ಹೇಳಿದ್ದು ತಿಳಿಯಲಿ ಬಿಡಲಿ—ನಾಳೆನಿಂದ ನಾಳೆಗೆ ಒಪ್ಪಿಸು. (ಗುಂ—ಎಂಬ ಸದ್ದು ಪ್ರಾರಂಭವಾಗಿ ಮರ್ತ್ಯನು ಮಾಯವಾಗುವನು.)

ಇಂದ್ರ:—(ಚಕಿತನಾಗಿ, ದಿಗ್ಭ್ರಾಂತನಾಗಿ ಕಣ್ಣೊರೆಸಿಕೊಳ್ಳುತ್ತ) ಏನಿದು? ಕನಸನ್ನು ಕಂಡೆನೆ ನಾನು? ಅಥವಾ ಬ್ರಹ್ಮಾದಿಗಳಿಗೆ ದ್ರೋಹ ಬಗೆದು ಹೆಮ್ಮೆಪಟ್ಟೆನೆಂದು ಮಾಯೆಯು ನನಗೆ ಬುದ್ಧಿ ಕಲಿಸಿದಳೊ? ಅಥವಾ— [‘ಮಹೇಂದ್ರಾ, ಮಹೇಂದ್ರಾ’ ಎಂದು ಕಳ್ಳದನಿಯ ಕೂಗು ಕೇಳಿಸಲು ಅತ್ತಿತ್ತ ನೋಡಹತ್ತ] ಯಾರು—ಯಾರು?

ಅಗ್ನಿ:—(ಮೆಲ್ಲಗೆ ನಡೆಯುತ್ತ, ಅತ್ತಿತ್ತ ಹೆದರಿಕೆಯಿಂದ ನೋಡುತ್ತ, ಇಂದ್ರನಿಗೆ ‘ಶಶ್’ ಎಂದು ಸುಮ್ಮನಾಗಲು ಸನ್ನೆಮಾಡುತ್ತ ಕಳ್ಳದನಿಯಲ್ಲಿ) ಮಹೇಂದ್ರಾ, ಮಹೇಂದ್ರಾ, ಅವನು ಹೋದನೆ?

ಇಂದ್ರ:—(ನೋಡಿ) ಯಾರು? ಅಗ್ನಿ! ಹುತಾಶನಾ!

ಅಗ್ನಿ:—(ಕಳ್ಳದನಿಯಲ್ಲಿ) ಶಶ್! ನಾನೇ ಅಹುದು. ನನ್ನ ಹೆಸರನ್ನಾದರೂ ಗಟ್ಟಿಯಾಗಿ ಕೂಗಬೇಡ. ಅವನು ಹೋದನೇನು?

ಇಂದ್ರ:—ಯಾರು? (ನಗೆಯಿಂದ) ಓಹೊ! ಮರ್ತ್ಯನೆಂದು ಹೇಳಿಕೊಳ್ಳುವ ಆ ಮರುಳನೊ? ಅವನಿಗೇಕಿಷ್ಟು ಹೆದರುವೆ?

ಅಗ್ನಿ:—ಮದ್ಯಸೇವನ ಮಾಡುವದಿಲ್ಲೆಂದು ವಚನ ಕೊಟ್ಟಿದ್ದೇನೆ ಅವನಿಗೆ. ನನ್ನಲ್ಲಿಯೂ ಸಂಗ್ರಹವಿಲ್ಲ. ಆದರೆ ನನ್ನ ಬಾಯಿ ಬತ್ತಿದೆ; ಕೈಕಾಲ್ಗಳು ಸೇದುತ್ತಲಿವೆ; ಕಣ್ಣುಗಳಲ್ಲಿ ಉರಿ ಎದ್ದಿದೆ. ಮೊದಲು ನಿನ್ನಲ್ಲಿದ್ದ ಸುರೆಯನ್ನಾಗಲಿ ಸೋಮವನ್ನಾಗಲಿ ಕೊಡು. ಆಮೇಲೆ ಮಾತನಾಡುವ ಶಕ್ತಿ ಬಂದೀತು ನನಗೆ. (ಉಸುರ್ಗರೆಯುತ್ತ ಹತ್ತಿರದ ಆಸನದ ಮೇಲೆ ಕುಕ್ಕರಿಸುವನು.)

[ಇಂದ್ರನು ಮಾಯವಾಗಿ ಕೆಲಹೊತ್ತಿನಲ್ಲಿ ಮತ್ತೆ ಕಾಣಿಸಿ ಭ್ರಾಂತಿಷ್ಟನಂತೆ ತಲೆಗೂದಲು ಕೆದರುತ್ತ, ಕಾಲು ಬಡಿಯುತ್ತ, ಚೀರುತ್ತ]

ಇಂದ್ರ:—ಧಿಃಕಾರ— ಧಿಕ್ಕಾರವಿರಲಿ ಮಾನವಕುಲಕ್ಕೆ! ನನ್ನ ಸಂಗ್ರಹವನ್ನು ಅಪಹರಿಸಿದ್ದಾರೆ! ನನ್ನ ಸುರೆಯನ್ನು ಕದ್ದೊಯ್ದಿದ್ದಾರೆ! ಛಡ ಛಡ! ಒಂದು ಹನಿಯಾದರೂ ಉಳಿದಿದ್ದಾದರೆ ಐರಾವತನ ಸೊಂಡೆಯಿಂದ ಸವರಿ, ಐರಾವತನಲ್ಲಿ ಮದತುಂಬಿ ಮರ್ತ್ಯಕುಲವನ್ನು ಪಾದತಲದಲ್ಲಿ ಮೆಟ್ಟಿ ಪುಡಿ ಪುಡಿ ಮಾಡಲು ಅವನನ್ನು ನುಗ್ಗಿ ಬಿಡುತ್ತಿದ್ದೆ! ಧಿಕ್ಕಾರ ಭೂಲೋಕಕ್ಕೆ! ಸಾವಿರ ಶಾಪ ಮಾನವಕುಲಕ್ಕೆ! ದೇವತೆಗಳಿಗೆ, ದೇವೇಂದ್ರನಾದ ನನಗೆ ಸಲ್ಲತಕ್ಕ ಸುರೆಯನ್ನು ತಪ್ಪಿಸಿದ್ದಕ್ಕಾಗಿ ಯಾವ ಯಾತನೆಯನ್ನು ಕಳುಹಲಿ? ಆದರೆ ಮೊದಲು ಒಂದು ಗುಟುಕಾದರೂ ಮದಿರೆ ಬೇಕು, ಒಂದು ಹನಿಯಾದರೂ ಬೇಕು. (ಚೀರುತ್ತ) ರಂಭೇ, ತಿಲೋತ್ತಮೇ, ಆಕೇ, ಈಕೆ, ಯಾರಾದರೊಬ್ಬರು ಬನ್ನಿ! ನಿಮ್ಮ ಅಧರಪಾನದಿಂದ ನಿಮ್ಮ ಅಧರಕ್ಕೆ ಗುಣವಾಗಿ, ರೂಢಿಯಾಗಿ ತಗುಲಿಕೊಂಡ ಮದಿರೆಯ ರುಚಿಯನ್ನು ನಾಲಗೆಯಿಂದ ಒಮ್ಮೆ ಸವರುವೆ. ಇದೊ! ಬೇಗ ಬನ್ನಿ. ನನ್ನ ಕಾಲ್ಗಳು ಕುಗ್ಗತೊಡಗಿದುವು, ನನ್ನ ಕಣ್ಣು ತಗ್ಗತೊಡಗಿದುವು; ಸುರೆ! ಸುರೆ! ಸುರರ ಜೀವನದ ಸುಧಾಸಾರ! ಅಮರರ ಜೀವನದ ಅಮೃತರಸ! (ಎನ್ನುತ್ತ ಆಸನದಲ್ಲಿ ಮುಗ್ಗರಿಸುವನು.

[‘ಹಾಳಾಯಿತು ಸುರರ ಜೀವನ’ ಎನುತ್ತ ಯಮನು ಶಕ್ತಿ ಕುಂದಿದ ವಾಯುವನ್ನು ಆಯಾಸದಿಂದ ಎಳೆದುಕೊಂಡು ಬರುವನು.]

ಯಮ:—ಹಾಳಾಯಿತು ಸುರರ ಜೀವನ! ಅಮರರಂತೆ! ಇದೊ, ನೋಡಿದಿರಾ ಈ ವಾಯುದೇವತೆಯನ್ನು? ಸುರೆಯಿಲ್ಲದ್ದಕ್ಕಾಗಿ ಯಮನಾದ ನನ್ನ ಲೋಕಕ್ಕೆ ಬಂದಿದ್ದಾನೆ! ದೇವೇಂದ್ರಾ, ಏಳು, ಹತಾಶನಂತೆ ತಲೆಹಿಡಿದುಕೊಂಡು ಕುಳಿತಿರುವೆ ಏಕೆ? ನಿನ್ನ ದೇವಲೋಕದ ಪ್ರಜೆಗಳೆಲ್ಲ ಹಿಂಡು ಹಿಂಡಾಗಿ ನನ್ನ ಲೋಕವನ್ನು ನುಗ್ಗುತ್ತಿದ್ದಾರೆ! ನಿನ್ನ ರಂಭೆ, ನಿನ್ನ ವಿಲಾಸದ ನಚ್ಚಿನ ರಂಭೆ, ಎಲುಬಿನ ಗೊಂಬೆಯಾಗಿ, ಬಿದುರಿನ ಬೆಚ್ಚಾಗಿ ನನ್ನ ಲೋಕದಲ್ಲಿದ್ದಾಳೆ! ಸುರೆಯ ಕ್ಷಾಮದಿಂದ ನಿನ್ನ ಪ್ರಜೆಗಳಲ್ಲಿ ಕ್ಷೋಭವೆದ್ದಾಗ ನೀನು ಕರ್ತವ್ಯಚ್ಯುತನಾದೆ! ನೋಡಿದೆಯಾ? ಸುರೆ ಇಲ್ಲದ್ದಕ್ಕಾಗಿ ನನ್ನ ಕೋಣನ ಬಣ್ಣ ಬದಲಾಗಿ ಸುಣ್ಣದಂತಾಗಿದೆ!

ವಾಯು:—(ದೀನವಾಣಿಯಿಂದ) ಭೋ ಮಘವನ್, ಬ್ರಹ್ಮಾದಿಗಳು ಕೂಡ ನಿನಗೇ ಮೊರೆ ಹೊಕ್ಕಿದ್ದಾರಂತೆ! ಹಾಗಿದ್ದರೆ ನಿನ್ನಲ್ಲಿ ಸುರಾಸಂಗ್ರಹವಿದ್ದಿರಬೇಕು. ದಯವಿಟ್ಟು, ಒಂದು ಹನಿಯನ್ನು

ಈ ವಾಯುವಿನ ಗಂಟಲಲ್ಲಿ ಹರಿಬಿಡು. ಕೊನೆಗೆ ನೀನೇ ಸುರೆಯನ್ನು ಸೇವಿಸುವ ಹಟವಿದ್ದರೆ, ಕುಡಿದ ಮೇಲೆ ನನ್ನ ಕಂಠದಲ್ಲಿ ಉಫ್ ಎಂದು ಉಸಿರು ಬಿಡು! ನನ್ನ ಜೀವ ಹರಿದಾಡಲಿ!

ಯಮ:— (ಅಗ್ನಿಯನ್ನು ನೋಡಿ) ಯಾರು? ಅಗ್ನಿ? ಹುತಾವಹಾ, ನೀನೂ ಹತಾಶನಂತೆ ಹಾಸಿಗೆ ಹಿಡಿದಿರುವೆಯಾ?

ಅಗ್ನಿ:— (ಅಳುದನಿಯಲ್ಲಿ) ನನ್ನ ಕಂಠದಲ್ಲಿ ದಾಹ ತಡೆಯದಾಗಿದೆ, ಏನು ಮಾಡಲಿ?

ಯಮ:—ಏನು ಮಾಡಲಿ! ಸರ್ವಭಕ್ಷಕನಾದ ನೀನು ಸ್ವಂತದ ಹಲ್ಲನ್ನು ತಿನ್ನುತ್ತ ಕುಳಿತಿರುವೆಯಾ?

[ಒಳಗಿನಿಂದ 'ಭೋ ಮಹೇಂದ್ರಾ, ನಿನಗೆ ವಿಜಯವಾಗಲಿ' ಎಂಬ ದನಿ]

ಇಂದ್ರ:— (ಚಟ್ಟನೆ ಸಿಡಿದೆದ್ದು) ಯಾರು? ಓಹೊ ಋಷಿವರ್ಯರು! ಅಗ್ನಿಯೇ, ವಾಯೋ, ಯಮಧರ್ಮಾ—ಏಳಿರಿ. ಋಷಿವರ್ಯರು ಮಾನವಲೋಕವನ್ನು ಸಂಚರಿಸಿ ಬಂದಿರಬೇಕು. ಅವರ ಸಲಹೆಯನ್ನು ಕೇಳಿ ಅದರಂತೆ ನಡೆಯೋಣ. ನಮೋ ಭಗವತೇ.

[ಋಷಿವರ್ಯನನ್ನು ಎಲ್ಲರೂ ಎದ್ದು ಸತ್ಕರಿಸಿ ಅಗ್ರಾಸನದಲ್ಲಿ ಕುಳ್ಳಿರಿಸುವರು. ಋಷಿಯು ಕೈಯಲ್ಲಿ ಸೋಮಪಾತ್ರೆಯನ್ನು ತಂದಿದ್ದಾನೆ. ಅದರೊಳಗಿನ ಸೋಮವನ್ನು ಕುಡಿಯುವಾಗ ನಾಲ್ಕೂ ದೇವತೆಗಳ ನಾಲಗೆಯಿಂದ ನೀರಧಾರೆ ಹರಿಯುವುದು.]

ಋಷಿ:— (ಅವರನ್ನು ನೋಡಿ) ಇದೇನು? ನನ್ನ ಆಗಮನದಿಂದ ಆನಂದಾಶ್ರುಗಳು ನಿಮ್ಮ ಕಣ್ಣು ತುಂಬಿ ತುಳುಕಿ ಕೊನೆಗೆ ಬಾಯಿಯಿಂದ ಹೊರಬೀಳುತ್ತಿವೆಯೊ ಏನು?

ಇಂದ್ರ:—(ನೀರು ತುಂಬಿದ ಬಾಯಿಂದ) ನಿಮ್ಮ ಕೈ ಒಳಗ—

ಅಗ್ನಿ:— (,, ,, ,,)—ಸೋಮ—ಸಸ್—

ವಾಯು:—(,, ,, ,,) —ರಸ——ಸ್‌ಸ—

ಯಮ:— (ನಾಲಗೆ ಸವರುತ್ತ) ಆಹುದ್- ಸ್‌ಸ್- ಏನೂ ಅಂತ- ಸ್‌ಸ್—

ಇಂದ್ರ:— (ಅಗ್ನಿಯನ್ನು ನೋಡುತ್ತ) ಋಷಿವರ್ಯರು ಅತ್ಯಂತ ಯಜ್ಞನಿಷ್ಠರು—

ವಾಯು:— (ಗಾಂಭೀರ್ಯದ ದನಿಯಲ್ಲಿ) ನಮಗೆ ಹೇಳಬೇಕೆ? ಇಂತಹ ಸೋಮಯಾಜಿಗಳು—

ಯಮ:— (ನಸುನಂಬಿ) — ಮತ್ತು ಧರ್ಮನಿಷ್ಠರು—

ಅಗ್ನಿ:— ಧರ್ಮನಿಷ್ಠರೆಂದೇ ದೇವತಾಂಶ ಸೋಮವನ್ನು ನೀಡಲು ಇಲ್ಲಿಯವರೆಗೆ ಬಂದಿದ್ದಾರೆ—

[ಋಷಿಯು ಪೆಚ್ಚಾದವನಂತೆ ಮಾತನಾಡುವ ಒಬ್ಬೊಬ್ಬರನ್ನು ದಿಟ್ಟಿಸುವನು]

ಇಂದ್ರ:— ಯಜ್ಞದ ದೇವತೆ ಯಾರೇ ಇದ್ದರೂ ಋಷಿವರ್ಯರ ಧರ್ಮನಿಷ್ಠೆಗೆ ನಾವೆಲ್ಲರೂ ಮೆಚ್ಚಿದೆವೆಂದು ತೋರಿಸಲು ಎಲ್ಲರೂ ಭಾಗವನ್ನು ವಹಿಸೋಣ. ಸ್ವಾಹಾ— (ಎನುತ್ತ ಮುಂದೆ ಬರಲು ಋಷಿಯು ಎದ್ದು ನಿಲ್ಲುವನು)

ವಾಯು:— ಅಥವಾ ಸವಿತೃವು ದೇವತೆಯಾಗಿರಬಹುದು. ಹಾಗಿದ್ದರೆ ಅವನ ರಥವಾಹಕನಾದ ನನಗೆ ಒಪ್ಪಿಸಬಹುದು— (ಎನುತ್ತ ಮುಂದೆ ಬರಲು ಋಷಿಯು ಸೋಮಪಾತ್ರೆ ಹಿಡಿದ ಕೈಯನ್ನು ಮೇಲೆತ್ತಿ ಹಿಡಿಯುವನು)

ಅಗ್ನಿ:—(ಹಿರಿತನದ ದನಿಯಲ್ಲಿ ಇಂದ್ರ-ವಾಯುಗಳನ್ನು ದ್ವೇಷಿಸಿ) ಋಷಿವರ್ಯರು— ಧರ್ಮನಿಷ್ಠರೆಂದು ಹೇಳುವಿರಿ. ಅದಕ್ಕಾಗಿಯೆ ಅವರು ಪ್ರಥಮಾಹ್ವಾನದ ದೇವತೆಯಾದ ನನಗೆ ಅದನ್ನು- (ಎನುತ್ತ ಮುಂದೆ ಬರಲು ಋಷಿಯು ಟಣ್ಣನೆ ಜಿಗಿದು ಆಸನದ ಮೇಲೆ ನಿಂತುಕೊಳ್ಳುವನು)

ಯಮ:— [ಎಲ್ಲ ಸೂಕ್ಷ್ಮವನ್ನೂ ಅರಿತವನಂತೆ) ಓಹೊ! ನನಗೆ ಅರ್ಥವಾಯಿತು. ಪಿತೃಗಳಿಗಾಗಿ ತಂದ ಸೋಮವಿದು. ಋಷಿವರ್ಯಾ, ಪಿತೃಗಳು ನನ್ನ ಲೋಕದಲ್ಲಿ ಕ್ಷೇಮದಿಂದಿದ್ದಾರೆ. ನಾನು ಮುಟ್ಟಿಸುವೆ ಅವರಿಗೆ. ನೀಡು— (ಎನುತ್ತ ಮುಂದೆ ಬರಲು ಋಷಿಯ ಹಿಂದೆ ಸರಿಯಲು ಹೋಗಿ ಮುಗ್ಗರಿಸಿ ಬೀಳುವನು. ಸೋಮವು ಚೆಲ್ಲುವುದು, ಕೂಡಲೆ ಆನಂದದ ಹುಂಕಾರದಿಂದ ನಾಲ್ಕೂ ದೇವತೆಗಳು ಅಡ್ಡಬಿದ್ದು ನೆಲಕ್ಕೆ ನಾಲಗೆ ಚಾಚುವರು.)

ಋಷಿ:— (ಗದ್ದರಿಸುತ್ತ) ಹಾಂ, ಉತ್ತಿಷ್ಠತ! ಜಾಗ್ರತ! ಇಲ್ಲವಾದರೆ ಶಾಪಾನ್ ನಿಬೋಧತ! (ಎಂದು ಕೈ ಎತ್ತಲು ಅನಿಚ್ಛೆಯಿಂದ ಅನಿವಾರ್ಯವಾಗಿ ನಾಲ್ಕೂ ದೇವತೆಗಳು ಎದ್ದು ನಿಲ್ಲುವರು.)

ಋಷಿ:— (ಕೆಳಗೆ ಕುಳಿತು ನೆಲದಿಂದ ಸವರಿದ ಸೋಮವನ್ನು ಪಾತ್ರೆಯಲ್ಲಿ ಸುರಿಯುತ್ತ) ಸುರಶ್ರೇಷ್ಠರೇ, ಕೇಳುವಂತಹರಾಗಿರಿ. ಈ ಸೋಮ ಯಾರ ಭಾಗವೂ ಅಲ್ಲ, ನನ್ನದು; ಕೇವಲ ನನ್ನದು. ಸಂಸಾರ ಬಿಟ್ಟಿದ್ದರಿಂದ ಮಾನವ ನಾನಲ್ಲ, ಸ್ವರ್ಗವಾಸಿಯಾದ ದೇವತೆಯೂ ನಾನಲ್ಲ; ಅಂತಹ ನನ್ನದು ಈ ಸೋಮ. ಮಾನವ ಲೋಕದಲ್ಲಿ ಈಗ ಸೋಮ ದೊರೆಯುವಂತಿಲ್ಲ, ಅದಕಾಗಿ ಸ್ವರ್ಗದ ಜಕಾತನಾಕೆಯವರಂತಿದ್ದು ನಿಮಗೆ ಇನ್ನು ಮುಂದೆ ಸೋಮ ಸಿಕ್ಕುವಂತಿಲ್ಲ. ನಾನು ಋಷಿ, ತಪೋಧನ, ಬ್ರಹ್ಮತೇಜಸ್ವಿ ಬಲಿಷ್ಠ. ನನಗೆ ಸೋಮ ಕುಡಿಯುವ ಆಸೆ ಇಲ್ಲ, ಕುಡಿದ ಸೋಮ ಏರೀತೆಂಬ ಹೆದರಿಕೆ ಇಲ್ಲ.

ಇಂದ್ರ:— (ನಮ್ರನಂತೆ) ಋಷಿವರ್ಯಾ, ಅಪರಾಧವನ್ನು ಮಾಡಿದ ಈ ಪಾಕಶಾಸನನಿಯನ್ನು ನಿನ್ನ ಕೈಯಿಂದ ಮು ಕ್ಷಮಿಸು.

ಅಗ್ನಿ:— (ನಮ್ರನಂತೆ) ಅಧರ್ಮದ ಮಾತುಗಳನ್ನಾಡಿದ ವಹ್ನಿಯ ನಾಲಗೆಯನ್ನು ಕೈಮುಟ್ಟಿ ಕೀಳು.

ವಾಯು:— (ನಮ್ರನಂತೆ) ತಿಳಿಯದೆ ಮಾಡಿದ ತಪ್ಪಿಗಾಗಿ ಅನಿಲನ ಕಿವಿಯನ್ನು ಕೈಮುಟ್ಟಿ ಹಿಂಡು.

ಯಮ:— (ನಮ್ರನಂತೆ) ಹುಡುಗಾಟದ ಹುಂಬತನಕ್ಕಾಗಿ ಈ ಯಮನಿಗೆ ಕೈಮುಟ್ಟಿ ಅಭಯವನ್ನು ಕೊಡು.

ಋಷಿ:— ದೇವತೆಯರಿರಾ, ನಿಮ್ಮ ವಿನಯಕ್ಕೆ ನಾನು— (ಎಂದು ಕೈ ಎತ್ತುವಾಗ ಏನೊ ಹೊಳೆದು, ನಕ್ಕು, ಎತ್ತಿದ ಕೈಯನ್ನು ನೋಡಿಕೊಳ್ಳುತ್ತ) ಓಹೋ! ಇದೊ ನಿಮ್ಮ ವಿನಯದ ರಹಸ್ಯ? ನನ್ನ ಕೈಗೆ ಸೋಮರಸ ಹತ್ತಿದ್ದರಿಂದ ನಿಮಗೆ ನಾನು ಕೈಮುಟ್ಟಿ ಆಶೀರ್ವಾದ ಕೊಡಬೇಕೆಂಬ ಹಂಚಿಕೆಯೆ?

ಇಂದ್ರ:— (ತಲೆ ತಗ್ಗಿಸಿ) ಋಷಿವರ್ಯರೆ, ಇನ್ನು ತಡೆಯುವುದೆಷ್ಟು! ಬಚ್ಚಿಡುವುದಾದರೂ ಯಾಕೆ?

ವಾಯು:— (ತಲೆ ತಗ್ಗಿಸಿ) ನಮ್ಮ ದುಃಸ್ಥಿತಿಯನ್ನು ನೀವು ಸಾಕ್ಷಾತ್ತಾಗಿ ಕಂಡಿರುವಿರಿ.

ಅಗ್ನಿ:— (ತಲೆತಗ್ಗಿಸಿ) ಸುಧೆ ಇಲ್ಲದ್ದಕ್ಕಾಗಿ ನಮ್ಮ ಪೌರುಷದಂತಿದ್ದ ಸುರತ್ವ ನಷ್ಟವಾದುದನ್ನು ನೋಡಿರುವಿರಿ.

ಯಮ:— (ತಲೆ ತಗ್ಗಿಸಿ) ಈ ದುಃಸ್ಥಿತಿಯಲ್ಲಿ ನಮಗಾಗಿ ಒಂದು ತರಣೋಪಾಯವನ್ನು ಯೋಚಿಸಿಕೊಡಿರಿ.

ಋಷಿ:—(ಸಾವಕಾಶವಾಗಿ) ಹಂ—ಚಿ—ಕೆ ಇ—ದೆ.

ವಾಯು:—(ತವಕದಿಂದ) ಹೇಳಿರಿ—

ಇಂದ್ರ:—(ಮಿಕ್ಕವರಿಗೆ) ಸುಮ್ಮನಿದ್ದು ಕೇಳಿರಿ—

ಅಗ್ನಿ:—ಶ್—ತಾಳಿರಿ—

ಯಮ:—(ಋಷಿಗೆ) ಚಿರಾಯು ಬಾಳಿರಿ—

ಋಷಿ:—ಸುರಲೋಕವನ್ನು ಸಂಹರಿಸಿ ಮಾನವರಾಗಿ ಅವತರಿಸಿರಿ. (ಎಲ್ಲರೂ ಬೆಪ್ಪಾಗಿ ನಿಲ್ಲಲು— ಹಹಹಹ— ಎಂದು ನಗುತ್ತ ಹೋಮವನ್ನು ಗುಟುಕರಿಸುತ್ತ ಹೋಗುವನು)

[ಕೆಲಹೊತ್ತು ನಿಃಶಬ್ದತೆ]

ಇಂದ್ರ:—(ಕನಸಿನಲ್ಲಿಯಂತೆ) ಸುರಲೋಕವನ್ನು—

ಅಗ್ನಿ:—(,,) .. .. ಸಂಹರಿಸಿ—

ಯಮ:—(,,) .. .. .. ಮಾನವರಿಗಾಗಿ—

ವಾಯು:—(,,) .. .. ಅವತರಿಸಬೇಕಂತೆ!—

ಇಂದ್ರ:— (ಒಮ್ಮೆಲೆ ಕನಲಿ) ಉದ್ಧಟ! ಉನ್ಮತ್ತ!

ಅಗ್ನಿ:— ಯಾವನೊ ಮಾನವನೇ ನಮ್ಮನ್ನು ಅವಮಾನಗೊಳಿಸುವುದಕ್ಕೆ ಋಷಿಯ ವೇಷದಿಂದ ಬಂದಿರಬಹುದು.

ವಾಯು:— ನನಗೆ—ವಾಯುದೇವತೆಗೆ—ಅವಮಾನ! ನನ್ನ ಶ್ವಾಸದಿಂದ ಇಡಿಯ ಮಾನವಪ್ರಪಂಚವನ್ನೆ ನೆಲೆ ಇಲ್ಲದೆ ಹಾರಿಸಿಬಿಡುವೆ.

ಯಮ:—(ಆವೇಶದಿಂದ) ನನ್ನ ಪಾಶದಿಂದ ಏಕಕಾಲಕ್ಕೆ ಇಡಿಯ ಭೂಲೋಕವನ್ನೆ ಹೆಡಮುರಿಗೆಯಿಂದ ಬಿಗಿಯುವೆ.

ಅಗ್ನಿ:—(ಬುಸುಗುಡುತ್ತ) ಧಗಧಗಿಸುವ ನನ್ನ ಜ್ವಾಲಾಜಿಹ್ವೆಯಿಂದ ಸಕಲ ಸಂಸಾರಗಳನ್ನು ಸುಟ್ಟುಬಿಡುವೆ.

ಇಂದ್ರ:—(ಹೆಮ್ಮೆಯಿಂದ ಅವರೆಲ್ಲರನ್ನೂ ನೋಡುತ್ತ) ಭಲೆ! ನೀಗ ದೇವತೆಗಳ ದೇವತ್ವ! ಅಮರಾವತೀವೀರರ ಅಮರತ್ವ! ಎಳೆಯ, ಕ್ಷುದ್ರ ಮಾನವರಿಗೆ ಹೆದರುವೆವೆ ನಾವು? ಇದೆಲ್ಲಿಯ ಮತಿಭ್ರಾಂತಿಯಾಗಿದೆ ನಮಗೆ? ನಾವು 'ಹುಂ' ಎಂದಾಗ ಹುಟ್ಟಿ, 'ಉಫ್' ಎಂದಾಗ ಉದುರಿ ಹೋಗುವ ಕ್ಷಣಿಕ ಮರ್ತ್ಯನಿಗೆ ನಾವು ಹೆದರಬೇಕೆಂದರೆ? ನಮಗೆ ಕೂಡ ಸುರೆಯನ್ನು ದೊರಕಿಸಿಕೊಡುವುದಿಲ್ಲವಂತೆ! ಅಜ್ಞಾನಿಗಳ ಅಹಂಕಾರ! ಮಿಕ್ಕಿದ ಸೊಕ್ಕು! (ಒಮ್ಮೆಲೆ ಚಪ್ಪಾಳೆ ತಟ್ಟಿ) ಹಂ—ನನ್ನ ನಚ್ಚಿನ ನಾಕನಿವಾಸಿಗಳೆ, ಸ್ವರ್ಗದ ಸಹವಾಸಿಗಳೆ, ನನಗೊಂದು ಹಂಚಿಕೆ ಹೊಳೆದಿದೆ! ಈ ಮರುಳ ಮಾನವನಿಗೆ ಚೆನ್ನಾಗಿ ಬುದ್ಧಿ ಕಲಿಸೋಣ. ನಮ್ಮನ್ನು ಎದುರಿಸುವುದೆಂದರೆ ತನ್ನ ವಿನಾಶ ಎಂದು ತೋರಿಸಿಕೊಡೋಣ. ನಮ್ಮ ಸಹಾಯಸಂರಕ್ಷಣೆಗಳಿಲ್ಲದೆ ಅವರಿಗೆ ಜೀವಿಸುವುದೆ ಶಕ್ಯವಿಲ್ಲೆಂದು ಸಿದ್ಧ ಮಾಡಿ ಬಿಡೋಣ.. ಇದೊ! ನಾವು ದಿಕ್ಪಾಲಕರಲ್ಲವೆ? ಇದಲ್ಲದೆ, ಭೂಲೋಕದ ವಾತಾವರಣದ ಅಧಿಷ್ಠಾನ ದೇವತೆಗಳಲ್ಲವೆ? ಏಕಕಾಲಕ್ಕೆ ನಾವೆಲ್ಲರೂ ನಮ್ಮ ಸಹಕಾರವನ್ನು ತಡೆಯೋಣ. ನಾನು ಭೂಲೋಕಕ್ಕೆ ಪರ್ಜನ್ಯವೃಷ್ಟಿಯನ್ನು ಸುರಿಸುವುದಿಲ್ಲ—

ಅಗ್ನಿ:—ನಾನು ಮಾನವನ ಅನ್ನವನ್ನು ಕುದಿಸುವುದಿಲ್ಲ, ಚಳಿಯನ್ನು ಬಿಡಿಸುವುದಿಲ್ಲ—

ವಾಯು:—ಉಣ್ಣುವುದಂತೂ ಉಳಿಯಲಿ, ಉಸಿರಾಡಿಸಲು ಹವೆಯನ್ನು ಕೂಡ ನಾನು ಬೀಸುವುದಿಲ್ಲ—

ಯಮ:— ಹವೆಯ ಮಾತೇಕೆ?— ಉಸಿರಾಡಿಸಲು ಅವಕಾಶವನ್ನೆ ಕೊಡದಂತೆ ನನ್ನ ದೂತರ ದಾಳಿ ಬಿಡುವೆ.

ಇಂದ್ರ:—(ಹೆಮ್ಮೆಯ ದನಿಯಲ್ಲಿ) ಹೀಗೆ ಅಸಹಕಾರ ಹೂಡಿದೆವೆಂದರೆ—

ಅಗ್ನಿ:—ಹೊಟ್ಟೆಯ ಆಹಾರ ತಡೆದೆವೆಂದರೆ—

ವಾಯು:—ಹೃದಯದ ಹಾರಾಟ ಹಿಡಿದೆವೆಂದರೆ—

ಯಮ:—(ಎಲ್ಲರೂ ಪರಸ್ಪರ ಕೈತಟ್ಟುತ್ತ) ಜೀವಹೊಡೆದೆವೆಂದರೆ—

[ಹಹಹ ಎಂದು ಎಲ್ಲರೂ ಗಟ್ಟಿಯಾಗಿ ನಗುವರು. ಇಷ್ಟರಲ್ಲಿ ಹೊರಗಿನಿಂದ ಯಾರೊ ಗಟ್ಟಿಯಾಗಿ ನಗುವ ಶಬ್ದವನ್ನು ಕೇಳಿ ನಾಲ್ವರೂ ಚಕಿತರಾಗಿ ತಡೆಯುವರು. ಹೊರಗಿನ ನಗೆ ಸಮೀಪ ಬಂದಂತೆ ಹೆಚ್ಚಾಗಲು—]

ಇಂದ್ರ:—(ಸಿಟ್ಟಿನಿಂದ) ಯಾರವರು? (ಎಂದು ಗದ್ದರಿಸುವನು)

[ಹೊಟ್ಟೆ ಹೊಟ್ಟೆ ಬಡಿದುಕೊಂಡು ನಗುತ್ತ ಮರ್ತ್ಯಜೀವಿಯು ಬರುವನು. ಬಂದು ನಿಂತು ಒಬ್ಬೊಬ್ಬರನ್ನು ನೋಡುತ್ತ ಹೆಚ್ಚೆಚ್ಚಾಗಿ ನಗುವನು. ಕ್ರಮೇಣ ದಣಿದು ನಗೆಯ ಅಬ್ಬರವನ್ನು ತಡೆಯುತ್ತಲೆ]

ಮರ್ತ್ಯ:—ಪರ್ಜನ್ಯವೃಷ್ಟಿ— ಅಂ— (ಇಂದ್ರನನ್ನು ತಿವಿಯುವನು.) ಆಹಾರ— ಅಂ— (ಅಗ್ನಿಯನ್ನು ತಿವಿಯುವನು) ಹವಾ—ಅ— ಅಂ— (ವಾಯುವನ್ನು ತಿವಿಯುವನು) ಜೀ— ವ— ಅ—ಅ— (ಎಂದು ಯಮನನ್ನು ತಿವಿದು).. ಚುಚುಚುಚೂ— ನೀವು ಬೇಕಾದಲ್ಲಿ ಮಾತಾಡಿದರೂ ನನಗೆ ಕೇಳಿಸೋದು ಎಂದು ಹೇಳಿದೆನಲ್ಲ— ನಿಮ್ಮೆಲ್ಲರ ಹಂಚಿಕೆ-ಹುಡುಗಾಟ ತಿಳಿದಿದೆ ನನಗೆ! ನಿಮ್ಮನ್ನು

ಉಳಿಸಬೇಕು ಎಂಬ ಸದ್ವಿಚಾರದಿಂದ ಬಂದಿರುವೆ. ಹೇಳಿರಿ .. ಶರಣಾಗತರಾಗುವಿರಾ—?

ಇಂದ್ರ:— ಮೂರ್ಖ!

ಅಗ್ನಿ:— ಮದಾಂಧ!

ವಾಯು:— ಕ್ಷುದ್ರ!

ಯಮ:— ಪಾತಕಿ!

ಮರ್ತ್ಯ:— ನಿಂನಿಮ್ಮ ಹೆಸರನ್ನು ಹೇಳಿದಿರಾ? ಆಗಲಿ— ಗೊತ್ತಾಯಿತು. ಈಗಲಾದರೂ ಹೇಳಿರಿ— ಶರಣಾಗತರಾದರೆ ನಿಮ್ಮನ್ನು ಉಳಿಸುವೆ.

ನಾಲ್ವರೂ:— (ರಭಸದಿಂದ) ಎಲಾ ಮಾನವರಾಕ್ಷಸಾ — (ಎಂದು ಏಕಕಾಲಕ್ಕೆ ನುಗ್ಗಿ ಒಬ್ಬರೊಬ್ಬರನ್ನು ನೋಡಿ ತಡೆಯುವರು).

ಮರ್ತ್ಯ:— (ಎದೆ ಸೆಟಿಸಿ) ನಾನು ಮಾನವನೂ ಅಹುದು, ರಾಕ್ಷಸನೂ ಅಹುದು. ಯಾಕೆಂದರೆ ನನಗೆ ಮಾಯಾಶಕ್ತಿ ಇದೆ. ಇಂದಿನ ಮಾನವನಿಗೆ ಮಾಯಾ-ಶಕ್ತಿ ಇದೆ ಎಂದೇ ನಿಮ್ಮ ಅಸಹಕಾರ ನಿಶ್ಚಯವನ್ನು ಕೇಳಿ ನಗೆಬಂದಿತು ನನಗೆ. (ಇಂದ್ರನಿಗೆ) ಪರ್ಜನ್ಯವೃಷ್ಟಿಯನ್ನು ತಡೆಯುವ ವೃತ್ರಘಾತುಕ ವೀರ ನೀನಲ್ಲವೆ? ಆದರೆ ಆ ಪರ್ಜನ್ಯ ತಡೆದರೆ, ನಿನಗೆಯೆ ಅಜೀರ್ಣವಾಗಿ ಹೊಟ್ಟೆ ಗುಡುಗುಡು ಸದ್ದು ಮಾಡೀತಲ್ಲದೆ ಮಾನವನಿಗೆ ಹೆದರಿಕೆ ಇಲ್ಲ. ಯಾಂತ್ರಿಕಮಾಯೆ ಇದೆ. (ಅಗ್ನಿಗೆ) ಅನ್ನವನ್ನು ಕೊಡಬಾರದೆಂದು ನಿನ್ನ ಪ್ರತಿಜ್ಞೆ. ಹ ಹ! ಅನ್ನದ ಹೆದರಿಕೆ ಯಾವ ಮಾನವನಿಗೆ? ಇದಲ್ಲದೆ, ಇತ್ತಿತ್ತಲಾಗಿ ಉಪವಾಸಮಾಡುವ ರೂಢಿಯೆ ಭೂಲೋಕದಲ್ಲಿ ಹೆಚ್ಚಾಗಿದೆ. ಬೆಂಕಿಯಲ್ಲಿ ಬೆಂದ ಅನ್ನ ಯಾರು ತಿನ್ನುವರೀಗ? ಹಸಿವೆ ಹಿಂಗುವ ಮಾಲ್ಟ (malt) ಇದೆ, ಮಾತ್ರೆಗಳಿವೆ! (ವಾಯು-ಯಮರಿಗೆ) ನಿಮ್ಮ ಬೆದರಿಕೆಯೂ ಒರಿ ಬಾಯಿಬಡುಗಿನ ಬೂಟಾಟಿಕೆ! ನೀವೆಲ್ಲರೂ ಮಾನವನ ಕಿರುಬೆರಳಿನ ವಶವಾಗಿದ್ದೀರಿ. ಬಟನ್ ಒತ್ತಿದರೆ ಸಾಕು, ಮಳೆಬೀಳುವುದು, ಒಲೆಹೊತ್ತುವುದು, ಗಾಳಿ ಬೀಸುವುದು, ಜೀವ ಹಾರುವುದು!

ಇಂದ್ರ:— (ಸಂಶಯದಿಂದ) ಅಂತೂ ಇಂದಿನ ಮಾನವರಿಗೆ ನಮ್ಮ:— ದೇವತೆಗಳ— ಅಗತ್ಯವೇ ಇಲ್ಲ?

ಮರ್ತ್ಯ:— ಹಾಂ — ಜಾಣಾ! — ಮಾತಿನ ಮರ್ಮ ತಿಳಿದುಕೊಂಡೆ ನೋಡು.

ಅಗ್ನಿ:— ಉಂ— (ಎಂದು ಬೆಮರೊರಸಿಕೊಳ್ಳುವನು.)

ವಾಯು:— ಉಶ್— (ಎಂದು ಗಾಳಿ ಹಾಕಿಕೊಳ್ಳುವನು.)

ಯಮ:— ಅಯ್ಯೋ! (ಎಂದು ಮೂರ್ಛೆ ಹೋಗುವನು.)

ಮರ್ತ್ಯ:— ಅದಕಾಗಿಯೆ ಹೇಳಿದೆ. ನನಗೆ ಶರಣೆನ್ನಿರಿ — ನಿಮಗೆ ಸುರೆಯನ್ನು ದೊರಕಿಸಿಕೊಡುವೆ.

ಇಂದ್ರ:— (ಆನಂದದಿಂದ) ಸುರೆಯನ್ನು!

ಅಗ್ನಿ:— ಶರಣು!

ವಾಯು:— ಶರಣು!

ಯಮ:— ಶರಣು!

ಇಂದ್ರ:— (ಸಂಶಯದಿಂದ) ಶರಣು ಬರುವುದೆಂದರೆ —?

ಮರ್ತ್ಯ:— (ನಡುವೆಯೆ) ವಿಶೇಷವೇನೂ ಇಲ್ಲ. ನನ್ನ ಜೊ ಯಲ್ಲಿ ಬರಬೇಕು. ಹಗ್ಗ ಕಟ್ಟಿಯಾಗಲಿ, ಗಾಡಿಯಲ್ಲಿ ಎಳೆದಾಗ ನಿಮ್ಮ ಸರ್ಕಸ್ ಹೂಡುವೆ, ಧನಸಂಪಾದನೆ ಮಾಡುವೆ ನಮ್ಮಂತಹರಿಗೆ ನೋಕರಿ ಸಿಕ್ಕುವ ಪರಿಸ್ಥಿತಿ ಇಲ್ಲ.

ನಾಲ್ವರೂ:— (ಒಂದು ಕ್ಷಣ ಪರಸ್ಪರರನ್ನು ನೋಡಿ, ಕೈ ಎತ್ತಿ ಗಟ್ಟಿಯಾಗಿ) ತಥಾಸ್ತು —

ಮರ್ತ್ಯ:— ನಡೆಯಿರಿ ಹಾಗಾದರೆ —

ನಾಲ್ವರೂ:— ಆದರೆ — ಸುರಾಸೇವನ —

ಮರ್ತ್ಯ:— (ನಕ್ಕು) ಅಯ್ಯೋ, ಮರುಳ ಮಹೇಂದ್ರಾ! ಮ ಹಿತ್ತಲದಲ್ಲಿಯೆ ಕಲ್ಪವೃಕ್ಷವಿದೆ. ಆದರ ಕೆಳಗೆ ನಿಂತು— ಹ ಹ ನಿನಗೆ ಹೊಳೆದಿರಲಿಲ್ಲವಲ್ಲ ಈ ಯುಕ್ತಿ!

ಇಂದ್ರ:— ಆದರೆ— ನೀನು—? ಮದ್ಯಪಾನ ಪ್ರಚಾರಕ—

ಮರ್ತ್ಯ:— (ನಕ್ಕು) ಅದಕ್ಕೇ ಹೇಳಿದೆ ಮಾನವಶಕ್ತಿ ಇಂ ಅಗಾಧವಿದೆ ಎಂದು.

ಇಂದ್ರ:— (ಲಗಬಗೆಯಿಂದ) ಭೋ ಬ್ರಹ್ಮ-ವಿಷ್ಣು-ಮಹೇಶ ಗಳೆ, ಇದೊ ಇಂದ್ರನು ಸುರಾಪುನರುತ್ಥಾಪನೆಯನ್ನು ಮಾ ದ್ದಾನೆ —ಬನ್ನಿ— ಏಳಿ— (ಎಂದು ಅತ್ತಿತ್ತ ಸುಳಿದಾಡುತ್ತ, ಎಚ್ಚರ ಕಳೆದಾಕುವವನಂತೆ ತ್ವರಿತದಿಂದ ಮಿಕ್ಕ ಮೂವರನ್ನು ನೂಕುತ್ತ ಹೋಗುವನು.)

ಮರ್ತ್ಯ:— (ದಿಟ್ಟಿಸಿ ನೋಡಿ) 'ಇಂದ್ರನು ಸುರಾಪುನರುತ ಪನೆ—' ಅಬ್ಬ! ಅದೆಂತಹ ಅಹಂಕಾರ! ಅದಕಾಗಿಯೆ ಈ ಸುರ ಇಂದು ಉಪಸಂಹಾರ.

[ಗುಂ— ಎಂಬ ಘುಮಘುಮಿಸುವ ಸದ್ದಿನೊಡನೆ ಮಾ ವಾಗುವನು. ಎಲ್ಲವೂ ಕತ್ತಲೆಯಾಗುವುದು. ಕ್ರಮೇಣ ಬೆ ಮೂಡಲು— ರಂಗಭೂಮಿಯ ನಟ್ಟನಡುವೆ ಮೊದಲನೆಯ ದೃಶ್ಯ ತೋರಿಸಿದಂತೆ ಶೇಷ, ವಿಷ್ಣು, ಕಮಲ, ಬ್ರಹ್ಮ ಕಾಣಿಸುವರು; ಕ ಬಾಡಿದೆ, ಮಿಕ್ಕವರು ನಿಶ್ಚೇಷ್ಟರಾಗಿ ಅಸ್ತವ್ಯಸ್ತವಾಗಿ ಬಿದ್ದುಕೊ ದ್ದಾರೆ. ರಂಗಭೂಮಿಯನ್ನು ತುಂಬಿ ಶಿವನೂ, ಇಂದ್ರಾದಿ ದೇ ಗಳೂ ಅಲ್ಲಲ್ಲಿ ಅವರಂತೆಯೆ ಬಿದ್ದುಕೊಂಡಿದ್ದಾರೆ. ಇವ ಮಧ್ಯದಲ್ಲಿ ಸಮುದ್ರಮಂಥನದಿಂದೇಳುವಾಗ ಜೊತೆಯಲ್ಲಿ ದ್ದೇನೊ ಎನುವಂತಹ ಬುರುಗಿನಿಂದ ಹಾಸ್ಯಯುತವಾಗಿ ಕಾ ಸುರಾರತ್ನ ಮಿಂಚುತ್ತಿದೆ.]

[ಒಳಗಿನಿಂದ ಮರ್ತ್ಯನ ದನಿ:— 'ಸುರಾ-ಸುರ ಯುದ್ಧದ ನಡುವೆ ನಿಂತಿದೆ ಸುರೆ— ದೇವತೆಗಳನ್ನು ಗೆದ್ದ ಅಹಂಕಾರ ಸೆಟೆದು ನಿಂತಿದೆ! ಆದರೂ ಇದು ಮಾನವನ ಕೈಗೆ ಆಯುಧ ವ ದೇವನನ್ನು ಎದುರಿಸಿ ಸೋಲಿಸುವ ಆಯುಧ. ಹ ಹ ಹ ಹ ಹ!' ಎಂದು ಸುರಾಪಾತ್ರೆಯನ್ನು ಸಶಬ್ದವಾಗಿ ತೆರೆಗಳಂತೆ ಬರುವ ನಗೆಗುಂಟೆ—]

(ತೆರೆ ಬೀಳುವುದು)

* All rights of translation, adaptation, staging and filming reserved by the Author.



ಇಂದಿನ ಧರ್ಮರಕ್ಷಕರು ತಂತಮ್ಮ ಅನುಯಾಯಿಗಳ ವರ್ಗಕ್ಕೆ ಧರ್ಮದ ಮೂಲವಾದ ನಿತ್ಯತತ್ತ್ವಗಳನ್ನು ತಿಳುಹುತ್ತಿಲ್ಲ. ಹುರುಳಿಲ್ಲದ ಪರಂಪರೆಗಳಿಗೆ ಮಹತ್ತ್ವಕೊಟ್ಟು 'ಸಂಪ್ರದಾಯ ಪಾಲನೆಯೇ ತತ್ತ್ವದ ಸಿದ್ಧಿ' ಎಂದು ಬೋಧಿಸುತ್ತ ಹೊರಟಿದ್ದಾರೆ. ಇವರಿಂದ ಧರ್ಮದ ರಕ್ಷಣೆಯಾಗುವ್ರ ದೂತ್ತಟ್ಟಿಗುಳಿದು, ಸಮಾಜದಲ್ಲಿ ಕಗ್ಗತ್ತಲು ಹಬ್ಬುತ್ತ ನಡೆದಿದೆ.

★

ಈಗಿನ ಕಾಲದಲ್ಲಿ ಬಹುಜನರಿಗೆ ರ್ಮಗಳೇ ಬೇಡವಾಗಿರುವಾಗ, ಧರ್ಮ 'ಅಡಿಗಲ್ಲಾದ ದೇವನ ಬಗ್ಗೆ, ಹೋಣೆ ರಾದ ನೀವು ಈ ತೆರನಾಗಿ ಬರೆಯು ಸಿದೇ ?" ಎಂದು ಉಸುರಿದರು ಸನಾ ಗಳೊಬ್ಬರು. ಸರಿ, ಅದು ಅವರ ಷ್ಟಿಯಿಂದ ಸರಿಯೇ ಇರಬಹುದು. ರೆ ಕುರುಡುನಂಬುಗೆಯ ಈ ಸನಾತನಿ ಗೆ ಧರ್ಮದ ಪೂರ್ಣ ಪರಿಚಯವು ಇಲ್ಲ ಟುದಾಗಿ ಕಾಣುತ್ತದೆ. ಧರ್ಮವೆಂದ ನೆಬುದನ್ನು ಪೂರ್ಣ ತಿಳಿದವರು, ಹೀಗೆ ಸ್ಸೊಬ್ಬರ ಬಗೆಗೆ ಅಲ್ಲಗಳೆಯುವ ಮಾತ ಡುತ್ತಿರಲಿಲ್ಲ. ಇನ್ನೊಬ್ಬರಾಡುವ ತು, ನಡೆಗಳನ್ನೂ ಇವರ ಸರ್ವ ಮೀ—ಸರ್ವಪ್ರೇರಕ ದೇವನು ಆಡಿ ಡಿಸುತ್ತಿರುವಾಗ, ತಾವುಮಾಡಿದುದೂ ಡುತ್ತಿರುವುದೂ, ಅಷ್ಟೇ ಒಪ್ಪೆಂದು ುವುದೂ ಇನ್ನೊಬ್ಬರು ಆಡಿದುದೂ ಡಿದುದೂ, ತಪ್ಪೆಂದು ಹೇಳುವುದೂ ಸರ್ವಪ್ರೇರಕನಾದ ಅಧಿದೇವತೆ ಸ್ನೆಗಳುಹಿದಂತೆಯಲ್ಲವೆ ?

ಈಗ ಜಗತ್ತಿನಲ್ಲಿ ಕಂಡುಬರುವ ಧರ್ಮಗಳು ಬಂದು ಕಾಲಕ್ಕೆ ಇರಲಿಲ್ಲ; ಅವುಗಳ ಮೂಲ ಉತ್ಪಾದಕರ—ಸಂಸ್ಥಾಪಕರ— ತರುವಾಯ ಬಂದುವುಗಳಾಗಿವೆ. ಸಂಸ್ಥಾಪಕರು ತಮ್ಮ ಜೀವನವನ್ನು ಅನೇಕ ಬಗೆಯ ಸಾಧನಗಳಿಂದ ಮಾರ್ಪಡಿಸಿ, ತಮ್ಮ ಅನುಭವದಿಂದ ಕೆಲವು ತತ್ತ್ವಗಳನ್ನು ಕಂಡು, ಅವುಗಳನ್ನು ಆಚರಣೆಯಲ್ಲಿ ತಂದ`, ತಮ್ಮದೊಂದು ಮತವೆಂದು ಸ್ಥಾಪಿಸಿದರು; ಅವರ ಸಾಧನದಿಂದ, ದೀರ್ಘಪ್ರಯತ್ನದಿಂದ ಅವರಿಗೆ ಬಂದ ಅನುಭವಗಳು ಸಾಮಾನ್ಯ ಮಾನವನಿಗೆ ಕೇವಲ ಮಾರ್ಗದರ್ಶಕವಾಗುವುವೆಂದು ತಿಳಿದದ್ದರಿಂದ, ಅವರು ಹಾಕಿಕೊಟ್ಟ ಮಾರ್ಗವನ್ನು (ಅದರ ಹಿಂದೆ ಇದ್ದ ತತ್ತ್ವಕ್ಕಾಗಿ,) ಆಚರಿಸುವುದೇ ಆ ಧರ್ಮಪಾಲನೆಯೆಂದು ಹೇಳಬಹುದು. ಧರ್ಮಸ್ಥಾಪಕರಾರೂ ತಮ್ಮ ತತ್ತ್ವಗಳು ಎಲ್ಲರಿಗೂ ಮಾನ್ಯವಾಗಬೇಕೆಂಬ ಹಂಬಲದಿಂದ ಸಾಧನಗೈದವರಲ್ಲ. ಅವರು ಕೇವಲ ತಮ್ಮ ಉನ್ನತಿಗೋಸುಗ ಸಾಧನ ಮಾಡಿ, ಅದರಿಂದ ಪಡೆದ ಅನುಭವವನ್ನು ಜನತೆಯ ಮುಂದೆ ಇಡುವವರು; ಜನತೆಯಲ್ಲಿ ಬಹುಸಂಖ್ಯಾಕರು— ತಾವಾಗಿ ತಮ್ಮ ಅನುಭವವನ್ನು ಸಂಪಾದಿಸಿಕೊಳ್ಳುವಷ್ಟು ತಾಳ್ಮೆ ಇರದೆ,— ಮಹಗಂಡವರ ವಿಚಾರವನ್ನೇ ತಮ್ಮದನ್ನಾಗಿ ಮಾಡಿಕೊಳ್ಳಬೇಕೆಂಬ ಕುತೂಹಲದಿಂದ— ಆ ಅನುಭಾವಿಗಳನ್ನು ಕೇಳಿ, ಅವರ ಅನುಯಾಯಿಗಳಾಗುವರು. ತನ್ನ ತಾನರಿಯಬೇಕೆಂದು ಪ್ರತಿಯೊಬ್ಬನೂ ಹೆಣಗಿದರೆ, ಧರ್ಮಗಳು ಹುಟ್ಟುವ ಸಂಭವವಿರುತ್ತಿದ್ದಿಲ್ಲ. ಧರ್ಮಗಳು ಆಗಿ ಬಂದುದು ಕೇವಲ ಮಾನವನ ಮನೋದೌರ್ಬಲ್ಯಕ್ಕಾಗಿ. ವೇಳೆಯ— ಶಕ್ತಿಯ— ಮಿತಿಯಿಂದ, ಹೆರವರು ತಮ್ಮ ವೇಳೆಯನ್ನು ವೆಚ್ಚಮಾಡಿ ಗಳಿಸಿದ ಅನುಭವಾಮೃತದಿಂದ —In the lives of great men we make our life sublime— ಎನ್ನುವಂತೆ ತಮ್ಮ ಜೀವನವನ್ನು ಸಾರ್ಥಕ ಮಾಡಿಕೊಳ್ಳಬೇಕೆನ್ನುವವರಿರುವುದರಿಂದಲೇ ಧರ್ಮಗಳು ಹುಟ್ಟುವುವ, ಬದುಕುವುವು—ಬಾಳುವುವು. ಧರ್ಮಸ್ಥಾಪಕರ ಕಾರ್ಯಕ್ಕಿಂತ ಅನು-ಯಾಯಿಗಳ ಕಾರ್ಯವೇ ಅದನ್ನು ಮುಂದೆ ತರುವುದು. ಯಾವ ಮತಸ್ಥಾಪಕನೂ ಅನುಯಾಯಿಗಳಿಲ್ಲದೆ ತನ್ನ ಧರ್ಮವು ಚಿರಾಯುವಾಗಿ ಬಾಳೀತೆಂಬ ಕಲ್ಪನೆಗೆ ಒಳಗಾಗಿಲ್ಲವೆಂಬುದು ನನ್ನ ತಿಳಿವಳಿಕೆ.

ಅನುಭವಗಳನ್ನು ಶಬ್ದಗಳ ರೂಪದಲ್ಲಿ ತರುವುದರಿಂದ ಅದಕ್ಕೆ ಪರಿಮಿತಿ ಕೊಟ್ಟಂತಾಗುವುದು. ಭಾಷೆಯು ಎಷ್ಟೇ ಪ್ರೌಢವಿದ್ದರೂ ಅನುಭವಗಳನ್ನು ತಿಳುಹಿಸುವುದು ಅದಕ್ಕೆ ಕಷ್ಟಸಾಧ್ಯ. ಅನುಭವಗಳನ್ನು ಅನುಭವಿಸಿಯೆ ಅರಿಯಬೇಕು. ಅನುಭವವು ಮನಸ್ಸಿನ ಅವಸ್ಥೆಯೊಂದು. ಅವರವರ ಅನುಭವವು ಅವರವರಿಗೆ ಮಾತ್ರ; ಹೆರವರು ಅವರಷ್ಟೇ ಕಟ್ಟುನಿಟ್ಟಾಗಿ ಅನುಭವಿಸಲಾರರು ಎಂದು ನನ್ನ ಮತ. ತಾಯಿಹೃದಯದ ಅನುಭವವನ್ನು ತಾಯಿಯಾಗಿಯೆ ಅನುಭವಿಸಬೇಕು; ಬರಿಯ ಶಬ್ದದ ವರ್ಣನೆಯಿಂದ ತಾಯಿಯಲ್ಲದವಳು ತಿಳಿಯಲಾರಳು. ಮತ್ತು ಎಲ್ಲ ತಾಯಂದಿರಿಗೂ ಒಂದೇ ತೆರನಾದ ಅನುಭವವು

ಬರುವುದೆಂತಲ್ಲ; ಅದೇಕೆ? ಬೇರೆ ಬೇರೆಯಾಗಿಯೆ ಇವೆಯೆಂದು ತಿಳಿದವರು ಹೇಳುತ್ತಾರೆ. ಇದೇ ರೀತಿ ಅನುಭವಕಥನದ ಬೇರೆ ಯಾವ ಸನ್ನಿವೇಶವನ್ನು ಕುರಿತಾದರೂ ಹೇಳಬಹುದು. Emotions and feelings are past power of words". ಅಲ್ಲದೆ, ಒಬ್ಬನ ಅನ್ನ ಇನ್ನೊಬ್ಬನಿಗೆ ವಿಷವಾಗಿ ಪರಿಣಮಿಸುವುದೂ ಉಂಟು.

ಆಧ್ಯಾತ್ಮಿಕ ಜೀವನದ ಸೊಬಗು—ಸೊಗಸು, ಅದರಲ್ಲಿ ನಿರತನಾಗುವವನಿಗೇ ತಿಳಿಯುವುದು. ಗುರಿಯೊಂದೆ ಇದ್ದರೂ ಒಬ್ಬನು ಮಾಡಿಕೊಂಡ ಮಾರ್ಗವೇ ಎಲ್ಲರಿಗೂ ಸಾಧ್ಯವಾದೀತೆಂಬುದನ್ನು ಹೇಳಲಿಕ್ಕಾಗುವುದಿಲ್ಲ. ಧರ್ಮಸ್ಥಾಪಕರು ತಮ್ಮ ಧ್ಯೇಯ ಸಾಧನೆಗಾಗಿ ಕೆಲವು ತತ್ತ್ವಗಳನ್ನನುಸರಿಸಿ, ತಮ್ಮ ದಾರಿಯನ್ನು ಹಾಕಿಕೊಂಡಿರುತ್ತಾರೆ. ಅವರವಿಚಾರಕ್ಕೂ ಅವರ ಆಚಾರಕ್ಕೂ ಮೇಳವಿರುವುದು. ಅದರ ಸಾಧನೆಯ ಮೂಲಕ ಅವರ ಮನಸ್ಸಿನ ಬೆಳೆವಣಿಗೆ, ಸಾಮಾನ್ಯ ಮಾನವನ ಮಟ್ಟು ಮೀರಿರುವುದು. ಸಾಮಾನ್ಯ ಮಾನವನು ಧರ್ಮಸ್ಥಾಪಕರು ಹಾಕಿಕೊಟ್ಟ ಮಾರ್ಗವನ್ನು ತನ್ನ ಬುದ್ಧಿಯಿಂದ ತಿಳಿಯುವುದರಿಂದ, ಇವನ ಬುದ್ಧಿಯು ಮೂಲ ಗುರುವಿನಷ್ಟು ಬೆಳೆಯದೆ ಇರುವುದರಿಂದ, ಇವನ ಆಚಾರ-ವಿಚಾರಗಳಲ್ಲಿ ಮೂಲಗುರುವಿನಲ್ಲಿ ಕಂಡುಬರುವ ಪೂರ್ಣತೆಯು ಕಾಣಲಾರದು. ಇದುವೆ ಕಾರಣದಿಂದಲೆ ಆಚಾರ-ವಿಚಾರಗಳಲ್ಲಿ ಭಿನ್ನತೆಗಳು ತಲೆದೋರುವುವು. ಧರ್ಮಸ್ಥಾಪಕರು ಕಾಲವಾದ ಮೇಲೆ, ಅವರ ಸಹಕಾರಿಗಳೂ ಅನುಯಾಯಿಗಳೂ, ಅವರ ವಿಚಾರಗಳನ್ನು ಎಷ್ಟೇ ತೀಕ್ಷ್ಣಬುದ್ಧಿಯಿಂದ ಮನನ ಮಾಡಿಕೊಂಡರೂ, ಗುರುವಿನ ಪರಿಮಿತಿಯನ್ನು ಅವರು ಹೊಂದಲಾರರು. ಒಂದು ವೇಳೆ ಅನುಯಾಯಿಗಳಲ್ಲಿ ವಿಚಾರವಂತನೊಬ್ಬನಿದ್ದು, ಅವನೂ ಕೂಡ ಮೂಲ ಗುರುವಿನ ವಿಚಾರದಲ್ಲಿ ತತ್ತ್ವವನ್ನು ಹುಡುಕಿ ತೆಗೆಯಲು ಯತ್ನಿಸಿದರೆ, ಪ್ರಾಯಶಃ ಭಿನ್ನಾಭಿಪ್ರಾಯವುಂಟಾಗಿ, ತಾನೊಂದು ಬೇರೆ ಮತವನ್ನೇ ನಿರ್ಮಾಣ ಮಾಡುವನು. ಇದಕ್ಕೆಲ್ಲ ಕಾರಣ ಮಾನವನ ತಿಳಿವಳಿಕೆಯು ಭಿನ್ನ ಭಿನ್ನ ಮಟ್ಟಕ್ಕೆ ಇದ್ದುದೇ!

ಈ ತಿಳಿವಳಿಕೆಯ ಭಿನ್ನತೆಯೆಂಬುದು ಯಾರೂ ಒಪ್ಪಬೇಕಾದ ವಿಷಯ. ಗುರುವು ಹೇಳಿದುದನ್ನು ಶಿಷ್ಯನು ೧೦೦ಕ್ಕೆ ನೂರರಷ್ಟು ತಿಳಿದುಕೊಳ್ಳಬಹುದೆ? ಗುರುವು ತನ್ನ ಅನುಭವಾಮೃತವನ್ನು ಶಬ್ದದ ಪರಿಮಿತಿಯಲ್ಲಿ ತಂದು, ಅದರ ಪೂರ್ವದ ಅನುಭವದ ಬೆಲೆಯನ್ನು ಕಡಿಮೆ ಮಾಡುವನು. ಆ ಮೇಲೆ ಶಿಷ್ಯನ ಬುದ್ಧಿಯ ಪರಿಮಿತಿಯ ಬೇಲಿಗೆ ಸಿಲುಕಿ, ಅದು ಮತ್ತೆ ತನ್ನ ಬೆಲೆಯನ್ನು ಕಡಿಮೆ ಮಾಡಿಕೊಳ್ಳುವುದು. ಹೀಗಾಗಿ, ಗುರುವು ತನ್ನ ಧ್ಯೇಯ-ಸಾಧನೆಗಾಗಿ, ಹಾಕಿಕೊಂಡ ಮಾರ್ಗವನ್ನು ಆ ಗುರುವಿನ ಧ್ಯೇಯದ ವಿಚಾರವಿಲ್ಲದೆ ಬರಿಯೆ ಆಚಾರವನ್ನು ಪಾಲಿಸುವುದರಿಂದ, ನಮಗೆ ನಮ್ಮ ಪುರುಷಾರ್ಥ ಸಾಧಿಸುವುದಿಲ್ಲ. ಪ್ರತಿಯೊಬ್ಬ ಮಾನವನು ತನ್ನ ಏಳ್ಗೆಯನ್ನು ತಾನೇ ಮಾಡಿಕೊಳ್ಳಬಲ್ಲನು. ತನ್ನ ಧ್ಯೇಯಕ್ಕನುಸಾರವಾಗಿ ತನ್ನ ದಾರಿಯನ್ನು ತಾನೇ ಹುಡುಕಿಕೊಳ್ಳಬೇಕಾಗುವುದು. ಎಲ್ಲರೂ ಮೋಕ್ಷಕ್ಕಾಗಿ ಹೆಣಗಿದರೂ ಅವರವರ ಮೋಕ್ಷದ ಮಟ್ಟ ಅವರನ್ನೆ ಅವಲಂಬಿಸಿದೆ. ಹೀಗಾಗಿ, ಗುರುವು ಹೇಳಿದ ಆಚರಣೆಯಿಂದ ಆ ತತ್ತ್ವಗಳು ಮಾಯವಾಗಿ, ಕೇವಲ ಆಚರಣೆಯು ಮಾತ್ರ ಉಳಿದು ಅದರ ಮೂಲವಾದ ವಿಚಾರ—ತತ್ತ್ವವು—ಕಾಣದಾಗುವುದು. ವಿಚಾರವು ಆಂತರಿಕವಾದುದು; ಆಚಾರವು ಬಹಿರಂಗವಾದುದು. ಇವುಗಳಲ್ಲಿ ಯಾವುದಾದರೂ ಒಂದೇ ಒಂದು—ಎಂದರೆ ಬರಿ ವಿಚಾರ ಇಲ್ಲವೆ ಬರಿ ಆಚಾರ—ಯಾವ ಕಾರ್ಯವನ್ನೂ ಮಾಡಲಾರದು. ಆಚಾರ ವಿಚಾರಗಳ ಮೇಳವಿದ್ದರೆ, ಸಾಧನದಿಂದ ಧ್ಯೇಯ ಸಾಧ್ಯವಾಗುವುದು. ಅದು ಇರದೆ ಇದ್ದರೆ, ಅದು ಕೇವಲ ಡಾಂಭಿಕವೆನಿಸುವುದು.

ಇಂದು ನಮ್ಮ ಸಮಾಜದಲ್ಲಿ ಕಂಡುಬರುವ ಧರ್ಮದ ಗಂಡಸ್ಥಲಗಳೆಂದು ನಾವು ತಿಳಿದಿರುವ ಸ್ಥಾನಗಳನ್ನು, ಈ ಆಚಾರ-ವಿಚಾರಗಳ ಮೇಳದ ಮಟ್ಟಿನಿಂದ ಪರೀಕ್ಷಿಸಿದರೆ, ನಮಗೆ, ಕೇವಲ ಧರ್ಮದ ಹೊದಿಕೆಯೊಂದೇ ಉಳಿದುದೂ, ಅದರ ತಿರುಳು ಎಂದೋ ಮಾಯವಾದುದೂ ಕಂಡುಬರುವುದು. ಸಮಾಜದ ಈ ಧರ್ಮದ ಅಡಿಗಲ್ಲುಗಳನ್ನು ಒಂದೊಂದನ್ನಾಗಿ ಪರಿಶೀಲನ ಮಾಡುವುದು ಒಳಿತು. ಇದರಲ್ಲಿ ಯಾರನ್ನೂ ಅಲ್ಲಗಳೆಯುವ ಪ್ರಯತ್ನವಿಲ್ಲ; ದೂಷಿಸುವ ಆಶೆಯಿಲ್ಲ. ಕಣ್ಣಿಗೆ ಕಂಡುದದನ್ನು ಕಂಡಂತೆಯೆ ಹೇಳಿ, ಮನಸ್ಸಿನ ಸಮಾಧಾನಕ್ಕಾಗಿ ಅದರ ಇತ್ಯರ್ಥವನ್ನು ಕಂಡುಕೊಳ್ಳುವುದಿದೆ. ಧರ್ಮವು ಮಾನವ ಸಮಾಜದ ಹಿತಕ್ಕಾಗಿಯೆ ಇದ್ದರೆ, ಅದು ಇದ್ದ ಸ್ಥಿತಿಯಲ್ಲಿ ಸರಿಯಾಗಿರುವುದೆ! ಇಲ್ಲದಿದ್ದರೆ, ಅದರ ಪರಿಸ್ಥಿತಿಯೇನು? ಧರ್ಮದ ರಕ್ಷಣೆಯನ್ನು ನಡೆಸುವದಕ್ಕೆಯೆ ಹೊಣೆಹೊತ್ತು ನಿಂತ ಈ ಧರ್ಮರಕ್ಷಕರು ಯಾವ ರೀತಿಯಿಂದ ಧರ್ಮರಕ್ಷಣೆ ಮಾಡುತ್ತಿರುವರು?—ಎಂಬುದನ್ನು ಕೇವಲ ಸಮಾಜಹಿತ ಬುದ್ಧಿಯಿಂದ ಅರಿಯುವುದೇ ಈ ಲೇಖನದ ಉದ್ದೇಶ. ಪ್ರತಿಯೊಬ್ಬರು ತಮ್ಮ ತಮ್ಮ ದೃಷ್ಟಿಯಿಂದ ಸರಿಯಾಗಿಯೆ ಆ ಕಾರ್ಯ ಮಾಡುತ್ತಿರಬಹುದು. ಆದರೆ ಅವರ ಕೃತಿಯು ಸಮಾಜದ ಹಿತದ ದೃಷ್ಟಿಯಿಂದ ಎಷ್ಟು ಬೆಲೆ ಪಡೆಯಬಹುದು? ವ್ಯಕ್ತಿಯು ಸಮಾಜದ ಸದಸ್ಯ. ಅವನು ಯಾವಾಗಲೂ ಸಮಾಜದ ಆರೋಗ್ಯವನ್ನು ಕಾಯಲು ಯತ್ನಿಸಬೇಕು. ಯಾವನೊಬ್ಬನು ತನ್ನದೇ ಹಿತವನ್ನು ಬಯಸುವುದರಿಂದ ಹೆರರಿಗೆ ಹಾನಿಯಾಗುತ್ತಿದ್ದರೆ ನಸುವೆ ವಿಚಾರ ಮಾಡಿ ಅಂತಹ ಕೆಲಸ ಮಾಡಬೇಕು. ವ್ಯಕ್ತಿ ಸಮಾಜದಿಂದ ಹೊರ ಹೊರಗೆ ಇರುವುದು ಇಂದು ಸಾಧ್ಯವಿಲ್ಲ. ಸಮಾಜವಾದರೊ ವ್ಯಕ್ತಿಗಳನ್ನು ಬಿಟ್ಟು ಬೇರೊಂದಲ್ಲ. ಅದು ಕಾರಣ ವ್ಯಕ್ತಿ-ಸಮಾಜಗಳು ಪರಸ್ಪರ ಹಿತಬಯಸಬೇಕು.

ಧರ್ಮರಕ್ಷಣೆಯ ಕಾರ್ಯದ ಹಿರಿಯ ಹೊಣೆಯು ಇಂದು ಧರ್ಮಗುರುಗಳೆಂದು ಪೀಠಸ್ಥರಾದವರ ಮೇಲೆ ಇದೆ. ಅವರಲ್ಲೀಗ ಇರಲೇ ಬೇಕಾದ ತಾಳ್ಮೆ (Tolerance) ಇಲ್ಲ. ಧರ್ಮಗುರುಗಳು

ತಮ್ಮ ಆಚಾರ ವಿಚಾರಗಳಿಂದ ಜನತೆಯನ್ನು ತಮ್ಮ ಕಡೆಗೆ ಸೆಳೆದುಕೊಳ್ಳಬೇಕೇ ಹೊರತು, ಅದರಮೇಲೆ ಬಲುಮೆ ಮಾಡಿ, “ನೀನು ನಮ್ಮವನು ಅದಕ್ಕಾಗಿ ನೀನು ನಮ್ಮನ್ನು ಮನ್ನಿಸು, ಇಲ್ಲವಾದರೆ . . . . ಬಹಿಷ್ಕಾರ ” ಈ ರೀತಿಯಾಗಿ ಹಿಂಸಿಸುವುದು ಸರಿಯೆ ? ಇದರಿಂದ ಧರ್ಮಪ್ರಸಾರವಾಗುವುದೆ ? ತಿಳಿಯದೆ ಇದ್ದವನಿಗೆ ತಿಳಿದುಕೊಳ್ಳಬೇಕೆಂಬ ಕುತೂಹಲ ಹುಟ್ಟುವುದೆ ? “One should command respect and not demand it.” ಕೆಲವರೆನ್ನಬಹುದು. “ಅಜ್ಞಾನಿಯಾದ ಮಾನವನಿಗೆ ತನ್ನಹಿತ ಯಾವುದು ಎಂಬುದು ತಿಳಿಯುವುದಿಲ್ಲ. ಅದಕ್ಕಾಗಿ, ಎಲ್ಲವನ್ನೂ ತಿಳಿದವರಾದ ಧರ್ಮಗುರುಗಳು ಬಲುಮೆಯಿಂದಾದರೂ ನಿಮ್ಮ ಕೈಯಿಂದ ಸೇವೆ ತೆಗೆದುಕೊಳ್ಳುವರು.” ಸರಿ. ಬಲುಮೆ ಮಾಡಿದುದಾಯಿತು. ಆದರೆ ಆ ಬಲುಮೆಯ ಮುಖಾಂತರ, ಅಜ್ಞಾನಿಯಾದವನಿಗೆ, ತಿಳಿಹೇಳಿ, ಅವನಲ್ಲಿ ಜ್ಞಾನೋದಯವಾಗುವ ಹಾಗೆ ಪ್ರಯತ್ನ ಮಾಡಿದರೆ ಆ ಬಲುಮೆಯ ಉಪಯೋಗ, ಇಲ್ಲವಾದರೆ, ಬಲುಮೆಯೊಂದು ನಿಜವಾಗಿ, ಅವನ ಅಜ್ಞಾನವು ಇದ್ದ ಸ್ಥಿತಿಯಲ್ಲಿಯೆ ಉಳಿಯುವುದು. ಧರ್ಮಗುರುಗಳು ತಮ್ಮ ಸುತ್ತಲಿನ ಪರಿಸರವನ್ನು ಪರಿಶುದ್ಧ ಮಾಡುವಂತೆ ಮೊದಲು ಪ್ರಯತ್ನಿಸಬೇಕು. ಏಕೆಂದರೆ, ಇವರ ಸುತ್ತಲೂ ಸುಳಿದಾಡುವವರು ಕೇವಲ ಸ್ವಾರ್ಥ ಸಾಧಿಸುವ ದಾಂಭಿಕರೇ ಆಗಿ, ಅವರ ಅವ್ಯಾಪಾರದ ಪರಿಣಾಮವು ಧರ್ಮಗುರುಗಳ ಮೇಲೆ- ಕಾಲಾಂತರದಲ್ಲಿ ಧರ್ಮದಮೇಲೆ— ಆಗುವುದು.

ನದಿಗೆ ಮಹಾಪೂರ ಬಂದಂತೆ, ದಿಗ್ವಿಜಯ ಮಾಡುವ ಧರ್ಮಗುರುಗಳ ಮೂಲಕ ಟ್ಟಂಗಿಗಳಿಗೆ ಎಡೆಕೊಟ್ಟಂತಾಗುವುದು. ಸ್ವಾರ್ಥಸಾಧಕರು, ಗುರುಗಳು ಊರಲ್ಲಿ ವ ಸುದ್ದಿಯನ್ನು ಕೇಳಿ, ತಲೆ ಬೋಳಿಸಿ ಂಡು, ಕೇವಲ ಧರ್ಮಮೂರ್ತಿಗಳೇ ನ್ನುವಂತೆ ಸೋಗುಹಾಕಿ, ಇಡಿಯ ವರ್ಷ ನ್ನೂ ಮಾಡಿದ ಕೃತ್ಯಗಳನ್ನು ತಮ್ಮ ನ್ರತೆಯ ಮುಸುಕಿನಲ್ಲಿ ಮುಚ್ಚಿಟ್ಟು, ವಲ ಸಚ್ಚಿಷ್ಯರ ಮಾಲಿಕೆಯಲ್ಲಿ ಬಂದು ಇತರ ಬಡಪಾಯಿ ಧರ್ಮಾಚಾರ್ಯರ ವಿರುದ್ಧ ಏನಾದರೊಂದನ್ನು ಹೇಳಿ ಅವರ ಮುಂಡನ ಮಾಡಿ ತಮ್ಮ ಡುಬ್ಬದ ತೊಗಲನ್ನು ಕಾಯ್ದುಕೊಳ್ಳಲು ಹವಣಿಸುವರು. ಇವರು ಧರ್ಮರಕ್ಷಕರೇ? ಇಂತಹರಿಗೆ ಎಡೆಕೊಡುವುದು ಧರ್ಮಗುರುಗಳಿಗೆ ಯೋಗ್ಯವೆ?

ತತ್ತ್ವಕ್ಕಾಗಿ ಬರುವುವು ಆಚಾರಗಳು. ಕಾಲಮಾನದಿಂದ ತತ್ತ್ವಗಳು ಮಾಯವಾಗಿ ಆಚಾರಗಳು ಉಳಿದುವೆಂದರೆ, ಅವುಗಳ ತತ್ತ್ವ ಮಾನ್ಯವೆಂದು ತಿಳಿಯುವುದು ಹಟದ ಸಿದ್ಧಾಂತ. ಆಚಾರಗಳು ಸಾಧನ, ತತ್ತ್ವಗಳು ಸಾಧ್ಯ. ಈ ಸಾಧ್ಯ–ಸಾಧನಗಳನ್ನು ಅದಲು ಬದಲುಮಾಡಿ, ಸಾಧನಗಳೇ ಸಾಧ್ಯವೆಂದು ಹೇಳುವುದು ಹುಚ್ಚುಹಟದ ಸಿದ್ಧಾಂತ.

ನಮ್ಮ ಸಮಾಜದಲ್ಲಿಯ ಆಚಾರ್ಯರು (Priesthood), ಕೇವಲ ಕಣ್ಣಿಗೆ ಕಾಣುವಂತಹ ಬಹಿರಂಗದ ಸೋಗಿನಿಂದ ಕೆಲವು ಸಂಪ್ರದಾಯವಂತರ ಮನಮೆಚ್ಚಿಸಿ ತಮ್ಮ ಜೀವನದ ಸ್ವಾಸ್ಥ್ಯವನ್ನೂ ಸಮಾಜದಸ್ವಾಸ್ಥ್ಯವನ್ನೂ ಕಳೆಯುವರು. ಇಂದು ಸಮಾಜದಲ್ಲಿ ಜನತೆಗೆ ಧರ್ಮವು ಬೇಡವಾಗುತ್ತಿರುವುದು ಧರ್ಮವು ಕೀಳೆಂದಲ್ಲ. ಧರ್ಮಮೂರ್ತಿಗಳಾದ ಈ ವೈದಿಕರು ಮಾಡುವ ಸೋಗಿಗಾಗಿ, ಸೋಗು ಎಷ್ಟೇ ಮನಮೆಚ್ಚುವಂತಹದಾದರೂ ಅಂತರಂಗದ- ಅಂತರಾತ್ಮನ ವಿಷಯವಾದ ತತ್ತ್ವವು ಮನಮುಟ್ಟುವಂತೆ ಮಾಡಲಿಕ್ಕೆ ಈ ಸೋಗಿಗೆ ಸಾಧ್ಯವಿರದು. ತತ್ತ್ವವು ಯಾವಾಗಲೂ ಒಳ್ಳೆಯದೆ; ಅದಕ್ಕೆ ತಕ್ಕ ಮನ್ನಣೆಯು ಸಿಕ್ಕೇಸಿಕ್ಕುವುದು. ಹೊಣೆಗಾರರಾದ ಧರ್ಮಮೂರ್ತಿಗಳು ಮಾಡುವ ಅನೇಕ ಅಸಹ್ಯಕೃತ್ಯಗಳ ಮೂಲಕ, ಧರ್ಮದ ಪ್ರತಿನಿಧಿಗಳಾದ ಇವರ ಮೇಲೆ ಬೀಳುವ ಹೊಡೆತ ಧರ್ಮಕ್ಕೆ ತಗಲುವುದು. ಪರಸ್ತ್ರೀಗಮನವು ಪಾಪವೆಂದು ಮುಕ್ತಕಂಠವಾಗಿ ಬಹಿರಂಗದಲ್ಲಿ ಹೇಳಿ, ಅಂತರಂಗದಲ್ಲಿ ಹೇಸಿ ಕೆಲಸಮಾಡುವ ಜನರೆಷ್ಟು ಮಂದಿಯಿಲ್ಲ ? ಎಲ್ಲರೂ ಈ ರೀತಿ ಇರುವರೆಂದು ಮಾತ್ರ ಅರ್ಥ ಮಾಡಬಾರದು. ಒಳ್ಳೆಯವರು ಎಲ್ಲಿ ಇದ್ದರೂ ಯಾವ ಕಾಲಕ್ಕೆ ಇದ್ದರೂ ಅವರು ಒಳ್ಳೆಯವರೆ! ಇತರರು ಮಾಡುವ ಆರೋಪಗಳು ಅವರನ್ನು ಅಂಟಲಾರವು. ಅಂತಹ ಒಳ್ಳೆಯ ಜೀವಿಗಳಿಗೆ ನನ್ನ ಅನಂತ ಪ್ರಣಾಮಗಳು. ಆದರೆ ಅವರು ಸಮಾಜವನ್ನು ದೂರದಿಂದಲೇ ಕಾಣುವರು. ಅವರು ಇಲ್ಲದುದನ್ನು ಇದ್ದಂತೆ ತೋರಲು ಹೋಗುವುದೇ ಇಲ್ಲ. ಇಲ್ಲದುದನ್ನು ಇದ್ದಂತೆ ತೋರಿಸಿ, ಅಜ್ಞಾನಿ ಸಮಾಜಕ್ಕೆ ಮಂಕುಮಾಡಬೇಕೆನ್ನುವ ಜನರಿಗೆ, ಧರ್ಮಸಾಮ್ರಾಜ್ಯದಲ್ಲಿ ಸ್ಥಾನವಿಲ್ಲ. ಅಂತಹರಿಗೆ, ಧರ್ಮದ ಹೆಸರಿನಿಂದ ಯಾವ ಕಾರ್ಯವನ್ನು ಮಾಡಲೂ ಬರುವಂತಿಲ್ಲ. ಸಮಾಜದ ಆರೋಗ್ಯವನ್ನು ಕಾಯುವುದಕ್ಕಾಗಿ, ಸತ್ತವರನ್ನು ಸ್ಮಶಾನಕ್ಕೆ ಒಯ್ಯಲು ಮುಂದೆ ಬರಬೇಕೆಂದು ‘ಪವಿತ್ರ’ ಗ್ರಂಥಗಳು ಸಾರುತ್ತಿರುವಾಗ, ಹೆಣ ಹೊರಲಿಕ್ಕೆ ಹಣತೆಗೆದುಕೊಳ್ಳುವವರು ಧರ್ಮರಕ್ಷಕರೇ ? ಅವರಿಗೆ ಧರ್ಮದಲ್ಲಿ ಯಾವ ಸ್ಥಾನ ಕೊಡಬೇಕು ? ಅಂತಹರ ಬಗ್ಗೆ ಸಮಾಜವು ವಿಚಾರಮಾಡಬೇಕು.

ವೈದಿಕರ ತಂಡದಲ್ಲಿ, ವಿಶೇಷವಾದ ಉಪಧಂದೆಯನ್ನು ಮಾಡಿಕೊಂಡವರೆಂದರೆ ಪುರಾಣಿಕರು. ಸಮಾಜಕ್ಕೆ ಲಾಭವಾಗುವುದೂ ಹಾನಿಯಾಗುವುದೂ ಇವರನ್ನು ಹೆಚ್ಚಾಗಿ ಅವಲಂಬಿಸಿದೆ. ಇವರು ಸಾಮಾನ್ಯ ಜನತೆಗೆ— ಕಲಿಯದೆ ಇದ್ದ ಜನತೆಗೆ — ಮುಖ್ಯವಾಗಿ ಹೆಂಗಳೆಯರಿಗೆ, ಧರ್ಮವನ್ನು ತಿಳಿಹೇಳುವರು. ಪುರಾಣಿಕರು ತಾವು ಮೊದಲು ಆಚಾರಸಂಪನ್ನರಿರಬೇಕು. ತಾವು ಪುರಾಣದ ಅರ್ಥಹೇಳುವಾಗ ಓಘದಲ್ಲಿ ಜನತೆಗೆ ಉಪದೇಶಮಾಡುವುದೊಂದು ತಮ್ಮ ನಿತ್ಯದ ನಡೆವಳಿಯು ಬೇರೊಂದು ಆದರೆ ಮಾತ್ರ ಇವರ ಪುರಾಣವೆಲ್ಲವೂ ಬದನೇಕಾಯಿ ಪುರಾಣವಾಗುವುದು. ಇವರ ಮಾತಿನಲ್ಲಿ ನಿಜವಾಗಿಯೂ ಜನತೆಯ ವಿಶ್ವಾಸವಿದೆ. ಇವರು ಜನತೆಯನ್ನು ಅಡ್ಡಹಾದಿಯನ್ನೂ ಹಿಡಿಸಬಲ್ಲರು; ಸನ್ಮಾರ್ಗಕ್ಕೂ ಎಳೆಯಬಲ್ಲರು. ಇಂತಹರು, ಇಂದು ಕೇವಲ ಹೊಟ್ಟೆಗಾಗಿ ‘ಪುರಾಣ’ ಎಂಬ ಸಿದ್ಧಾಂತದ ಮೇಲೆ ಹೊರಟಿರುವುದರಿಂದ ಜನತೆಯಾದರೂ ತಮ್ಮ ದಾರಿಯನ್ನು ತಪ್ಪುತಲಿಯು

ಹತ್ತಿದೆ. ಇವರು ಮನಸ್ಸುಮಾಡಿದರೆ, ಜನತೆ ಸುಧಾರಿಸುವುದು ತಡವಿಲ್ಲ. ಆದರೆ ಇವರ ಮನಸ್ಸು ಒಮ್ಮೊಮ್ಮೆ ಇವರ ಸ್ವಾಧೀನತಪ್ಪಿಹೋಗಿರುವುದು. ಪುರಾಣಿಕರೆ, ದಯೆಯಿಟ್ಟು ನಿಮ್ಮ ನಿಮ್ಮ ಮನಸ್ಸನ್ನು ನಿಮ್ಮ ಸ್ವಾಧೀನದಲ್ಲಿಟ್ಟುಕೊಳ್ಳಿ. ನೀವು ಪುರಾಣವನ್ನು ಅರ್ಥಮಾಡಿ ತಿಳಿಹೇಳುವುದನ್ನು, ನಿಮ್ಮ ಆಚರಣೆಯಲ್ಲಿ ತಂದರೆ, ಸಮಾಜದಲ್ಲಿ ನಿಮ್ಮಿಂದ ಅತ್ಯಂತ ಉಪಯುಕ್ತಕಾರ್ಯವಾಗುವುದು. ಇಲ್ಲದಿದ್ದರೆ, 'ಇವರು ಧರ್ಮರಕ್ಷಕರೊ?' ಎಂದು ಕೇಳುವ ಭಾಗ ಬೀಳುವುದು.

ಪುರಾಣಿಕರು ದಾರಿತಪ್ಪಿದರೆ, ಅದರ ಪರಿಣಾಮ ನಮ್ಮ ಅಶಿಕ್ಷಿತ ಹೆಂಗಳೆಯರ ಮೇಲೆ ಆಗುವುದು. ಹೆಂಗಳೆಯರು ದಾರಿ ತಪ್ಪಿದರೆ ಆಗುವ ಹಾನಿಗೆ ಅಂತವಿಲ್ಲ. ಧರ್ಮವನ್ನು ಇದುವರೆಗೆ ಕಾಯ್ದವರು, ಕಾಯುವವರು ಇವರು. ಇವರನ್ನು ಜಾಣರನ್ನಾಗಿಮಾಡಬೇಕು. ಇಲ್ಲವಾದರೆ, ಧರ್ಮದ ಹೆಸರಿನಿಂದ ಇವರು ಮಾಡುವ ಕಾರ್ಯಗಳು ಒಮ್ಮೊಮ್ಮೆ ಹೇಸಿಕೆಯನ್ನುಂಟುಮಾಡುವುವು. ನಾನು ನೋಡಿದ ಸಂಗತಿಯೊಂದನ್ನು ಇಲ್ಲಿ ಹೇಳಿದರೆ ತಪ್ಪಾಗಲಾರದು. ಸಾಧಾರಣವಾಗಿ, ಹೆಂಗುಸರು ಪರಪುರುಷರ ಸಂಗಡ ಮಾತನಾಡುವುದೂ ಇಲ್ಲ; ಅವರೆದುರು ನಿಲ್ಲುವುದೂ ಇಲ್ಲ. ಆದರೆ ಮೊನ್ನೆ ಮೊನ್ನೆ ಶ್ರೀಗಳವರು ಬಂದಾಗ, ತೀರ್ಥ-ಪ್ರಸಾದಕ್ಕಾಗಿ, ಅಲ್ಲಿ ನೆರೆದ ಜನಜಂಗುಳಿಯಲ್ಲಿ, ಕೇವಲ ಧರ್ಮಾಭಿಮಾನದಿಂದ, ಎಷ್ಟೋ ಹೆಂಗಳೆಯರು ತಮ್ಮ ಮಾನಮರ್ಯಾದೆಯ ಪರಿವೆ ಕೂಡ ಇಲ್ಲದೆ, ಪುರುಷರನ್ನು ತಿವಿಯುತ್ತ ಹಾಯುತ್ತ ಹೋದುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಪರಕೀಯನು, ತಪ್ಪಿ ಪಡಸಾಲೆಯಿಂದ ನಡುಮನೆಗೆ ಇಣಿಕಿದರೆ, ಕಣ್ಣು ಕಿಸಿಯುವವರು ನಮ್ಮ ಜನ. ಅಂದು ಜನರೊಂದಿಗೆ ತಿಕ್ಕಾಡಿ, ತಮ್ಮ ಮಾರ್ಗಮಾಡಿಕೊಂಡು ಹೋಗುವ ಹೆಂಗಳೆಯರನ್ನು ಅವರವರ ಯಜಮಾನರು ನೋಡಬೇಕಿತ್ತು.

ಇಂದು ನಾವು ಹಾಳಾದುದು, ಬಹಿರಂಗದ ಸೋಗಿಗೆ ಮನಸೋತುದಕ್ಕಾಗಿ. ಯಾವ ಧರ್ಮಗಳೂ ಕೆಡುಕಾಗಿಲ್ಲ. ಧರ್ಮಗಳ ತತ್ತ್ವಗಳ ಗುಂಪೊಂದು. ಅವುಗಳನ್ನು ಉಪಯೋಗಮಾಡಿಕೊಳ್ಳುವುದರಲ್ಲಿಯಿದೆ ಮಾನವನ ಜಾಣತನ. ಮಾನವನ ಅಂತಿಮಧ್ಯೇಯವಾದ ಮೋಕ್ಷಸಾಧನೆಗಾಗಿ ಮಾಡುವುದೆಲ್ಲವೂ ಧರ್ಮ. ಎಷ್ಟು ಮತಗಳಿರುವವೊ ಅಷ್ಟು ದಾರಿಗಳು. ಯಾವ ದಾರಿಯನ್ನಾದರೂ ಅನುಸರಿಸಬಹುದು. ಪ್ರತಿಯೊಬ್ಬನೂ ತನ್ನ ದಾರಿಯನ್ನು ತಾನೇ ನಿಶ್ಚಯಿಸಿಕೊಳ್ಳಬೇಕಾಗುವುದು. ಧರ್ಮದಂತೆ ನಡೆಯುವುದೆಂದರೆ ಅದರ ಬಹಿರಂಗದ ಆಚರಣೆಗಳನ್ನಷ್ಟು ನಡೆಯಿಸಿದರಾಗದು. ಅದರಲ್ಲಿಯ ತತ್ತ್ವವನ್ನು ತಿಳಿಯುವುದು. ತತ್ತ್ವವನ್ನು ತಿಳಿಯಲು ಯತ್ನಿಸದೆ ಕೇವಲ ಹಾಕಿಕೊಟ್ಟ ಆಚಾರವನ್ನು ಅನುಲಕ್ಷಿಸಿದರೆ, ಅದರಿಂದ ಹಾನಿಯುಂಟಾಗುವುದೇ ಹೊರತು ಬೇರೊಂದಿಲ್ಲ. 'ಆಚಾರಃ ಪರಮೋ ಧರ್ಮಃ' ಎಂಬುದು ತತ್ತ್ವ ತಿಳಿದುಕೊಂಡರೆ ಸತ್ಯ; ಇಲ್ಲವಾದರೆ ಅದು ಬರಿಯ ಡೊಂಬತನವಾಗುವುದು. ಆಚಾರಗಳು ಒಮ್ಮೊಮ್ಮೆ ದೇಶ-ಕಾಲ-ಪಾತ್ರವನ್ನು ಅನುಸರಿಸಿರುವುವು. ಆದರೆ ತತ್ತ್ವಗಳು ಮಾತ್ರ ಮೂಲಭೂತವಾಗಿರುವುವು (Fundamentals).

ಇಂದಿನ ಸಮಾಜವನ್ನು ಎಂಗಡಿ ನೋಡಿದರೆ, ಧರ್ಮರಕ್ಷಕರೆಂದು ಎನಿಸಿಕೊಳ್ಳುವ ಇವರು ಧರ್ಮದ ನಿಜವಾದ ರಕ್ಷಣೆಮಾಡುತ್ತಿರುವರೇ ?—ಎಂದು ಸಂಶಯಬರುವುದು. ಈ ಸಂಶಯವು ಒಬ್ಬ ಕವಿಯ ಕವನದ ಒಂದೆರಡು ಸಾಲುಗಳನ್ನು ನೆನಪಿಗೆ ತರುವುದು :

" ಧರ್ಮರಕ್ಷಕರಿವರೇನು ?
ಧರ್ಮರಕ್ಷಕರೊ, ಕರ್ಮರಕ್ಷಕರೊ। ತಮ್ಮ
ಚರ್ಮರಕ್ಷರೋ; ಧರ್ಮರಕ್ಷಕರಿವರೇನು ?"

ಹಿಂದುಸ್ಥಾನದ ಶ್ರೇಷ್ಠ ತರಗತಿಯ ವಿಮಾಸಂಸ್ಥೆಗಳಲ್ಲಿ ಒಂದಾದ

ದಿ ಏಶಿಯಾಟಿಕ್ ಗವ್ಹರ್ನಮೆಂಟ್ ಸೆಕ್ಯೂರಿಟಿ

ಲೈಫ್ ಅಶ್ಯೂರನ್ಸ್ ಕಂಪನಿ, ಲಿ. ಬೆಂಗಳೂರು

ಇದುವರೆಗೆ ರೂ. ೨,೫೦,೦೦೦,೦೦ ವಿಮಾಕಾರ್ಯ ಮಾಡಿದೆ. ● ೨೫,೦೦೦ ಸಂಸಾರಗಳಿಗೆ ವಿಮಾ ರಕ್ಷಣೆ ದೊರಕಿಸಿದೆ.

ಕಡಿಮೆದರದ ಹಪ್ತೆಯ ಮೇಲೆ ವಿಮಾ ಇಳಿಸಬಹುದು.

ಏಶಿಯಾಟಿಕ್ ಕಂಪನಿಯ ಪ್ರಗತಿಯು ಕನ್ನಡಿಗರು ಹೆಮ್ಮೆ ಪಡತಕ್ಕದ್ದಾಗಿದೆ. ವಿಮೆ ಇಳಿಸಲು ಸುರಕ್ಷಿತವಾದ, ಭದ್ರವಾದ ಮೈಸೂರಿನ ವಿಮಾ ಸಂಸ್ಥೆ. ಹೆಚ್ಚಿನ ವಿವರಕ್ಕೆ ಬರೆಯಿರಿ.

ಏಜನ್ಸಿ ಸುಪರಿಂಟೆಂಡೆಂಟ್,

ಏಶಿಯಾಟಿಕ್ ಲೈಫ್ ಆಫೀಸ್, ಧಾರವಾಡ.

ಎರಡು ಲೋಟ ಹಾಲು

ಅಂದು ಗುಡಿಸಿಲಲ್ಲಿ ಸಿಕ್ಕ ಎರಡು ಲೋಟ ಹಾಲೆಂದರೆ ಅದಕ್ಕೆ ಬೆಲೆಮಾಡುವುದು ಅಸಾಧ್ಯ. ಅದೇ ಸ್ಥಳದಲ್ಲಿ ಮೇಲಕ್ಕೆದ್ದು ನಿಂತ ಎರಡಂತಸ್ತಿನ ಬಂಗಲೆಯಲ್ಲಿ ದೊರೆತ ಎರಡುಲೋಟ ಹಾಲಿಗೆಬರಿಯೆ ಎರಡಾಣೆ ಬೆಲೆ. ಆಗ ಕುಡಿದುದೂ ಹಾಲೆ, ಈಗ ಕುಡಿದುದೂ ಹಾಲೆ! ಹಾಗಾದರೆ ಬೆಲೆಯಲ್ಲಿ ಇಷ್ಟೊಂದು ಅಂತರವಾಗಲು ಕಾರಣವೇನು?

ಅಷ್ಟರಲ್ಲಿ ಆ ಹುಡುಗಿ ಎರಡು ಕಂಚಿನ ಥಾಲಿಗಳ ತುಂಬ ಹಾಲನ್ನು ತಂದು ನಮ್ಮಿಬ್ಬರ ಮುಂದಿಟ್ಟಳು.

ಈಗ ಕೆಲವು ವರ್ಷಗಳ ಹಿಂದಿನ ಮಾತು. ನಾನೂ ರಾಮೂ ಒಂದು ಸೈಕಲ್ ಟ್ರಿಪ್ ಹೊರಟಿದ್ದೆವು. ಚೆನ್ನಪಟ್ಟಣಕ್ಕೆ ಮೂರು ಮೈಲಿ ದೂರದಲ್ಲಿ ಅಬ್ಬೂರು ಎಂಬ ಗ್ರಾಮ. ಅಲ್ಲಿ ಬ್ರಹ್ಮಣ್ಯ-ತೀರ್ಥರ ಬೃಂದಾವನವಿದೆ. ಜ್ಯೇಷ್ಠಮಾಸದಲ್ಲಿ ಅಲ್ಲಿ ಆರಾಧನೆ ನಡೆಯುತ್ತದೆ. ಎಷ್ಟೋ ಜನ ಬ್ರಾಹ್ಮಣರು ದೂರದ ಊರುಗಳಿಂದ ಬಂದು ಆ ಕಾರ್ಯದಲ್ಲಿ ಭಾಗವಹಿಸುತ್ತಾರೆ. ನಾವಿಬ್ಬರೂ ಅದಕ್ಕಾಗಿಯೆ ಬೆಂಗಳೂರಿನಿಂದ ಹೊರಟಿದ್ದುದು. ಬೆಂಗಳೂರಿಂದ ೪೦ ಮೈಲಿ ಪ್ರಯಾಣಮಾಡಿ ಆರಾಧನೆಗೆ ಹಾಜರಾಗಿದ್ದುದಾಯಿತು; ಆರಾಧನೆ ಮುಗಿಯಿತು.

ಆಗ ಇರ್ವಿನ್ ನಾಲಾ ಕೆಲಸ ಸಾಗಿತ್ತು. ರಾಮೂ ಭಾವ ಆ ಕೆಲಸದಲ್ಲಿ ನೌಕರವಾಗಿದ್ದರು. ಅವರಿದ್ದುದು 'ಬೇವಿನ ಕುಪ್ಪೆ'ಯಲ್ಲಿ. ರಾಮೂಗೆ ಅಕ್ಕನನ್ನು ನೋಡಿ ಬರೋಣವೆನ್ನಿಸಿತು. ಸರಿ, ಹೊರಟೆವು ಬೈಸಿಕಲ್ಲುಗಳ ಮೇಲೆ. ಸುಮಾರು ಮೂವತ್ತು ಮೈಲಿ ಪ್ರಯಾಣ ಮಾಡಬೇಕಾಗಿತ್ತು.

ಅವೊತ್ತು ಮಧ್ಯಾಹ್ನ ಊಟ ತೀರಿಸಿಕೊಂಡು ಸುಮಾರು ಒಂದು ಘಂಟೆಯ ಹೊತ್ತಿಗೆ ಬೈಸಿಕಲ್ಲಿನ ಮೇಲೆ ಕುಳಿತೆವು. ಹೊರಡುವಾಗ ಸ್ವಲ್ಪ ಮೋಡ ಕವಿದಿದ್ದಹಾಗೆ ಇತ್ತು. ಆದರೆ ನಾವು ಹೊರಟ ಮರುಕ್ಷಣದಲ್ಲಿಯೇ ದೊಡ್ಡ ಬಿರುಗಾಳಿ ಎದ್ದು ಆಕಾಶವೆಲ್ಲ ನಿರ್ಮಲವಾಯಿತು. ಬೇಸಗೆಯ ಬಿಸಿಲಿನ ಝಳ ತಗುಲಿತು. ಜೊತೆಗೆ ಎದುರು ಗಾಳಿ. ಆಗ ಆಷಾಢಮಾಸವಲ್ಲದಿದ್ದರೂ—ಕಲಿಗಾಲ—ಆಷಾಢದ ಗಾಳಿಯಂತೆಯೇ ಬಿರುಸಾಗಿ ಬೀಸತೊಡಗಿತು. ನಾಲ್ಕು ಮೈಲಿ ಬರುವ ಹೊತ್ತಿಗೇ ನಮ್ಮ ದೇಹದಲ್ಲಿ ನಿಶ್ಶಕ್ತಿಯು ಅಂಕುರ ತೋರತೊಡಗಿತು. ರಾಮು ಹಿಂದಿರುಗೋಣವೆಂದು ಸೂಚಿಸಿದ. ಆದರೆ ನಾನು ಅದಕ್ಕೆ ಒಪ್ಪಲಿಲ್ಲ. ಹೊರಟ ಮೇಲೆ—ಶತಾಯ-ಗತಾಯ— ಹಿಂದಿರುಗುವ ಸ್ವಭಾವದವನಲ್ಲ ನಾನು. ಹಾಗೂ ಹೀಗೂ ಬಹುಶ್ರಮದಿಂದ ಸುಮಾರು ಇಪ್ಪತ್ತು ಮೈಲಿಗಳಷ್ಟು ಬಂದುಬಿಟ್ಟಿದ್ದೆವು. ರಾಮು "ಇನ್ನು ಒಂದು ಸಲವೂ ಪೆಡಲ್ ಮಾಡೋದಕ್ಕೆ ನನ್ನಿಂದ ಸಾಧ್ಯವಿಲ್ಲಪ್ಪ" ಅಂತ ಬೈಸಿಕಲ್ ಇಳಿದೇ ಬಿಟ್ಟ. ನನಗೂ ಸಾಕಾಗಿ ಹೋಗಿತ್ತು. ಆದರೆ ಅರ್ಧದಾರಿಯಲ್ಲಿ ಏನು ಮಾಡುವುದೆಂದು ತೋರಲಿಲ್ಲ. ಸ್ವಲ್ಪ ಹೊತ್ತು ಅಲ್ಲೇ ಕುಳಿತುಕೊಂಡೆವು. ದಾರಿಯಲ್ಲಿ ಒಬ್ಬ ರೈತ ಸಿಕ್ಕಿದ. ರಾಮು ಅವನನ್ನು "ಬೇವಿನ ಕುಪ್ಪೆಗೆ ಇನ್ನೆಷ್ಟು ಮೈಲಿಯಯ್ಯಾ?" ಎಂದು ಕೇಳಿದ. 'ಹೂ ಬುದ್ಧಿ' ಎಂದು ಉತ್ತರ ಬಂತು. 'ಇಲ್ಲಿಗೆ ಎಷ್ಟು ಮೈಲಿ ಇದೆಯಯ್ಯಾ?' ಎಂದ ರಾಮು. '೧೮' ಎಂದು ಉತ್ತರ ಬಂತು. ಅಷ್ಟರಲ್ಲಿ ಗಾಳಿ ಜೋರಾಗಿ ಬೀಸಿ, ನಿಲ್ಲಿಸಿದ್ದ ಬೈಸಿಕಲ್ಲುಗಳೆರಡೂ ಕೆಳಗುರುಳಿದುವು. ರಾಮೂ ಬೈಸಿಕಲ್ಲಿಗೆ ಇದ್ದ ಎಣ್ಣೆಯ ಲ್ಯಾಂಪು ಉರುಳಿ ಎಣ್ಣೆ ಚೆಲ್ಲಿತು. ಕ್ಯಾರಿಯರ್ ಮೇಲಿದ್ದ ಬಟ್ಟೆಗಳು ಕೆಲವು ಕೊಳೆಯಾದುವು. ರಾಮು ಹಲ್ಲು ಹಲ್ಲು ಕಡಿದ. "ಥೂ, ಹಾಳು

ಶ್ರೀ. ಕೈನಾರ್ ರಾಜಾರಾವ್ ಬಿ. ಎ.

ಪೇಟೆಂಟ್ ಮತ್ತು ಟ್ರೇಡಮಾರ್ಕ್ ರೆಜಿಸ್ಟ್ರೇಶನ್ನಿನ ಬಗ್ಗೆ
ಸಿ. ಜಿ. ಅನುಂದ್ ಆ್ಯಂಡ್ ಕಂಪನಿ
೧೪ ಹೇರಸ್ಟ್ರೀಟ್, ಕಲಕತ್ತಾ
ಇವರಿಗೆ ಬರೆಯಿರಿ.
ವೆಚ್ಚ ಕಡಿಮೆ! ಹೆಚ್ಚಿನ ಸಂರಕ್ಷಣೆ!

ಹತ್ತಿರವೇ ಇದ್ದಿತು. ಮನೆಯ ಮುಂದೆ ಕುಳಿತುಕೊಳ್ಳುವಂತೆ ಹೇಳಿ ಅವಳು ಒಳಗೆ ಹೋದಳು.

ಅದೊಂದು ಸಣ್ಣ ಗುಡಿಸಿಲು. ಬಹು ಬಡತನದಲ್ಲಿ ಜೀವನ ನಡಸುತ್ತಿರುವಂತೆ ತೋರಿತು. ಮನೆಯ ಮುಂದೆ ಚೊಕ್ಕಟವಾಗಿ ಗುಡಿಸಿ, ಸಾರಿಸಿ ರಂಗೋಲೆ ಹಾಕಿತ್ತು. ಆ ರಂಗೋಲೆಯ ಚಿತ್ರ ಬಹು ತೊಡಕಿನದು. ನಮ್ಮ ಪಟ್ಟಣದ ಜನ ಹಾಗೆ ಚಿತ್ರವಿಡ ಬೇಕಾದರೆ ಕೆಲವು ತಿಂಗಳುಗಳ ಶಿಕ್ಷಣ ಅವಶ್ಯಕ. ಮನೆಯ ಮುಂದೆ ಆಗ ತಾನೇ ಚಿಗುರಿದ ಹೊಂಗೆಯ ಮರ. ಗಿಡದ ತುಂಬ ಹೂ. ಅರಳು ಚೆಲ್ಲಿದ ಹಾಗೆ ಹೂಗಳು ಕೆಳಗೆ ಉದಿರಿದ್ದುವು. ಆ ಉರಿಬಿಸಿಲಿನಿಂದ ಆ ಮರದ ನೆರಳಿಗೆ ಬಂದ ಕ್ಷಣವೇ ನಮ್ಮ ಆಯಾಸವೆಲ್ಲಾ ಪರಿಹಾರವಾದಂತಾಯಿತು. "ಹೊಂಗೆ ನೆಳಲು ತಾಯಿ ಮಡಿಲು" ಎಂಬ ಗಾದೆ ಸುಳ್ಳಲ್ಲ. ಅದನ್ನು ಅನು ಭವಿಸಿಯೇ ತಿಳಿಯಬೇಕು.

ಸ್ವಲ್ಪ ಕಾಲದಲ್ಲಿಯೇ ಸುಮಾರು ಎಂಭತ್ತು ವರುಷದ ಮುದುಕಿ ಹೊರಗೆ ಬಂದಳು. ಅವಳು ಆ ಹುಡುಗಿಯ ಅಜ್ಜಿ. ಆ ವಯಸ್ಸಿನಲ್ಲಿಯೂ ಆ ಮುದುಕಿಯ ಕಣ್ಣೋಟ ಪ್ರಕಾಶಮಾನ ವಾಗಿತ್ತು. ಎಳನಗು ಅವಳ ಮುಖವನ್ನು ಬಿಟ್ಟು ಹೋಗಿರಲಿಲ್ಲ. ಅವಳು ನಮ್ಮ ಸ್ಥಳ, ಪ್ರಯಾಣದ ವಿಷಯ ಎಲ್ಲವನ್ನೂ ಬಹು ಆದರದಿಂದ ವಿಚಾರಿಸಿದಳು. ನಾವು ದಾರಿ ತಪ್ಪಿ ಬಂದೆವೆಂದೂ ಆದರೂ ಸುಮಾರು ಒಂದು ಮೈಲಿಯ ದೂರದಲ್ಲಿಯೇ ಬೇಬಿನ ಕಟ್ಟೆ ಇರುವುದೆಂದೂ, ಅಡ್ಡದಾರಿಯಲ್ಲಿ ಹೋಗಬೇಕೆಂದೂ, ಹೇಳಿದಳು. ನಾವೂ ಅವಳ ವಿಷಯವನ್ನು ಕೇಳಿದೆವು. ಅವರು ಹಿಂದೆ ಬಹು ಉತ್ತಮ ಸ್ಥಿತಿಯಲ್ಲಿದ್ದರಂತೆ. ಅವಳ ಮಗ — ಆ ಹುಡುಗಿಯ ತಂದೆ— ಬೆಂಗಳೂರು ಸೇರಿ, ನಡತೆ ಕೆಟ್ಟು, ಆಸ್ತಿ ಎಲ್ಲವನ್ನೂ ಪೋಲು ಮಾಡಿದನಂತೆ. ಅವನೂ ರೋಗದಿಂದ ಸತ್ತು ಹೋದ, ಅವನ ಹೆಂಡತಿಯೂ ಹೋದಳು. ಈಗ ಆ ಮನೆಯಲ್ಲಿ ಇರುವವರು ಆ ಮುದುಕಿ, ಮೊಮ್ಮಗಳು ಮಾತ್ರ. ಆ ಮೊಮ್ಮಗ ಳನ್ನು ಒಂದು ಮನೆಗೆ ಸೇರಿಸುವುದಕ್ಕಾಗಿಯೇ ಅವಳು ಬದುಕಿರು ವಳೆಂದೂ, ಅದಾದ ಮಾರನೆಯ ದಿನವೇ ಅವಳ ಪ್ರಾಣ ಹಾರಿ ಹೋಗುವುದೆಂದೂ ಹೇಳಿದಳು. ಅವಳ ನಂಬಿಕೆಗೆ ನಾವು ಬೆರ ಗಾದೆವು. ಅವಳ ಚರಿತ್ರೆಯನ್ನು ಕೇಳಿ ನಿಟ್ಟುಸಿರುಬಿಟ್ಟೆವು. ಆದರೆ ಅವಳು ಮಗನನ್ನಾಗಲಿ ದೈವವನ್ನಾಗಲಿ ದೂರಲಿಲ್ಲ. 'ಎಲ್ಲಾ ದೇವರು ನಮ್ಮಪ್ಪ ಮಾಡಿಸಿದ ಹಾಗಾಗುತ್ತೆ" ಅಂದಳು. ದೇವರು ದೊಡ್ಡವನು, ಅವನ ಇಷ್ಟಕ್ಕೆ ಎದುರಿಲ್ಲ, ಅವನು ನಡಸಿ ದಂತೆ ಜಗತ್ತು. ಮಾನವರು ಆ ಆಜ್ಞೆಗೆ ಎದುರಾಗದೆ ತಲೆತಗ್ಗಿಸಿ ನಡೆಯಬೇಕು' ಎಂಬ ತತ್ತ್ವ ಆ ಮುದುಕಿಯ ಮಾತಿನಲ್ಲಿ ಅಡಗಿತ್ತು.

ಮುದುಕಿ ಹಾಗೆ ನಮ್ಮನ್ನು ಮಾತನಾಡಿಸುತ್ತ ಕಾಲಕಳೆಯು ತ್ತಿದ್ದುದು ವ್ಯರ್ಥವಾಗಿ ಅಲ್ಲ; ಅದರಲ್ಲಿ ಒಂದು ಅರ್ಥವಿತ್ತು. ಒಳಗೆ ಮೊಮ್ಮಗಳು ಹಾಲು ಬಿಸಿಮಾಡುತ್ತಿದ್ದಳು. ಹಾಲು ಕಾಯುವವರೆಗೂ ಮುದುಕಿ ನಮ್ಮನ್ನು ಮಾತನಾಡಿಸುತ್ತಿದ್ದಳು. ಅಷ್ಟರಲ್ಲಿ ಆ ಹುಡುಗಿ ಎರಡು ಕಂಚಿನ ಥಾಲಿಗಳ ತುಂಬ ಹಾಲನ್ನು ತಂದು ನಮ್ಮಿಬ್ಬರ ಮುಂದಿಟ್ಟಳು. ನಾವು ಒಬ್ಬರ ಮುಖ ವನ್ನೊಬ್ಬರು ನೋಡಿಕೊಂಡೆವು. ಮುದುಕಿ "ಅನುಮಾನ ಏಕೆ ನೋಡಿ ತೊಕೊಳ್ಳಿ" ಎಂದಳು; ನಾವು ಕುಡಿದೆವು. ಆ ಬಗೆಯ ಹಾಲಿನ ರುಚಿಯನ್ನು ನಮ್ಮ ಜನ್ಮದಲ್ಲಿ ಎಂದೂ ಅನುಭವಿಸಿರಲಿಲ್ಲ. ಆ ಒಂದೊಂದು ಥಾಲಿಯಲ್ಲಿಯೂ ಒಂದುವರೆ ಪಾವಿನಷ್ಟು ಹಾಲು ಹಿಡಿಯುತ್ತಿತ್ತು. ಹುಡುಗಿ ಎರಡು ಪಾತ್ರೆಯ ತುಂಬ ತಂದಿದ್ದಳು. ನಮಗೆ ಹೊಟ್ಟೆ ತುಂಬಿಹೋಯಿತು.

ಇನ್ನೂ ಸ್ವಲ್ಪಕಾಲ ಅಲ್ಲೇ ಇರಬೇಕೆಂದು ಮನಸ್ಸು ಇದ್ದರೂ ಸಂಜೆಯು ಮುಗಿದು ರಾತ್ರಿಯಾಗುತ್ತಾ ಬಂದಿತ್ತು. ಊರು ಸೇರಬೇಕಾಗಿತ್ತು. ಮುದುಕಿ ದಾರಿಯನ್ನು ತೋರಿಸಿದಳು. ನಾವು ಅವಳನ್ನು ಬೀಳ್ಕೊಟ್ಟು ಹೊರಟೆವು. ಹೊರಡುವ ಮುಂಚೆ ನಾನು ಮುದುಕಿಯ ಬಳಿಹೋಗಿ, ಅವಳ ಉಪಕಾರಕ್ಕೆ ಕೃತಜ್ಞತೆ ಯನ್ನು ತೋರಿ, ಒಂದು ರೂಪಾಯನ್ನು ಕೊಡಲು ಹೋದೆ; ಆದರೆ ಆಕೆ ಅದನ್ನು ತೆಗೆದುಕೊಳ್ಳಲಿಲ್ಲ. 'ನೀವು ದೇವ್ರು ಬುದ್ಧಿ, ನಾನು ಎಷ್ಟೋ ಪುಣ್ಯ ಮಾಡಿದ್ದೆ' ಎಂದುಬಿಟ್ಟಳು. ಎಷ್ಟು ಬಲವಂತ ಮಾಡಿದರೂ ಅವಳು ರೂಪಾಯನ್ನು ತೆಗೆದುಕೊಳ್ಳಲಿಲ್ಲ. ರಾಮು ಆ ಹುಡುಗಿಗೆ ರೂಪಾಯನ್ನು ಕೊಡಲು ಹೋದ, ಆದರೆ ಅವನೂ ಕೃತಕಾರ್ಯನಾಗಲಿಲ್ಲ. ಆದ್ಯಾತಕ್ಬುದ್ಧಿ, ಅದ್ನ ತಕೊಂಡ್ಲಾ ನೇನ ಮಾಡಾನಿ' ಅಂದು ಗಟ್ಟಿಯಾಗಿ ನಕ್ಕುಬಿಟ್ಟಳು. ನಾವು ಹೊರಟೆವು. ದೂರದಲ್ಲಿ ಹೋದಾಗ ಆ ಮುದುಕಿ ನಾವು ದೇವ ರೆಂದು ನಮಗೆ ನಮಸ್ಕಾರ ಮಾಡಿದಳು. ನಾವು ನಿಜವಾಗಿಯೂ

ಎಲ್ಲಕ್ಕಿಂತ ಅಗ್ಗ! ಎಲ್ಲಕ್ಕಿಂತ ಉತ್ತಮ!
ಮಿಕ್ಕ ಬ್ಲೇಡುಗಳಿಂದ ಅಚ್ಚುಕಟ್ಟಾದ ಹೆಚ್ಚಿನ ಕೆಲಸ!



೪ ಆಣೆಗೆ ೧೦ ಬ್ಲೇಡು!

ದೇವರಾಗಿದ್ದಿದ್ದರೆ ಅವಳಿಗೊಂದು ವರವನ್ನು ಕರುಣಿಸಿ ಅವಳ ದಾರಿದ್ರ್ಯವನ್ನು ನೀಗುತ್ತಿದ್ದೆವು. ಆದರೇನು ಮಾಡುವುದು ? ಬ್ರಾಹ್ಮಣರು ಆ ಅನುಗ್ರಹ ಶಕ್ತಿಯನ್ನು ಕಳೆದುಕೊಂಡು ಎಷ್ಟೋ ಶತಮಾನಗಳಾಗಿ ಹೋದುವು. ಅಂತೂ ಬೇಗನೆ ಬೆಳುದಿಂಗಳ ಬೆಳಕಿನಲ್ಲಿ ನಾವು 'ಬೇವಿನಕುಪ್ಪೆ' ಯನ್ನು ಸೇರಿದೆವು.

*　　*　　*

ಈಚೆಗೆ—ಎಂದರೆ ಹಿಂದಿನ ಈ ವಿಷಯ ನಡೆದ ೮-೧೦ ವರ್ಷಗಳಾದ ಮೇಲೆ ಪುನಃ ಆ ಕಡೆಗೇ ಹೋಗಬೇಕಾಗಿ ಬಂತು; ಹೋಗಿದ್ದೆವು. ಈಗ ಆ ಹಳ್ಳಿ ಪಟ್ಟಣವಾಗಿಬಿಟ್ಟಿದೆ. ಆ ಊರಲ್ಲಿ ದೊಡ್ಡ ಕಾರ್ಖಾನೆಯೊಂದು ಸ್ಥಾಪನೆಯಾದುದೇ ಈ ಮಾರ್ಪಾಡಿಗೆ ಕಾರಣ. ನಾವು ಆ ಮನೆ ಇದ್ದ ಜಾಗವನ್ನು ಹುಡುಕುವುದು ಕಷ್ಟವಾಗಲಿಲ್ಲ. ಅಂದಿನ ಹೊಂಗೆಯ ಮರ ಇನ್ನೂ ಹಾಗೆಯೇ ಇದೆ. ಹಿಂದಿನಂತೆಯೇ ಆ ಮರ ಚಿಗುರುತ್ತಾ, ಹೂ ಬಿಡುತ್ತಾ ಬಹು ಮನೋಹರವಾಗಿ ಕಾಣುತ್ತಿದೆ. ಅದರ ನೆಳಲು ಈಗಲೂ ತಾಯಿ ಮಡಿಲೇ ಆಗಿದೆ. ಆದರೆ ಮನೆ ಮಾತ್ರ ಬದಲಾಗಿದೆ. ಆ ಗುಡಿಸಿಲಿನ ಜಾಗದಲ್ಲಿ ಈಗ ಎರಡಂತಸ್ತಿನ ನವೀನ ಮಾದರಿಯ ಮನೆ ಕಟ್ಟಲ್ಪಟ್ಟಿದೆ. ಅಚ್ಚುಕಟ್ಟಾಗಿ ಅಂದವಾಗಿ ಕಟ್ಟಿದ ಮನೆ. ಮುಂದೆ ಚಿಕ್ಕ ಹೂದೋಟ. ಸುತ್ತಲೂ ಕಾಂಪೌಂಡು. ದೊಡ್ಡ ಗೇಟು. ಆ ಮನೆ ನೋಡಿದ ಕೂಡಲೇ ನಮ್ಮ ಕುತೂಹಲ ಕೆರಳಿತು. ನಾವು ಗೇಟುಚಿಲಕವನ್ನು ಅಲ್ಲಾಡಿಸಿ "ಸಾರ್, ಸಾರ" ಎಂದು ಕೂಗಿದೆವು. ಉತ್ತರಕ್ಷಣದಲ್ಲಿಯೇ ಭಯಂಕರವಾದ ನಾಯಿಯೊಂದು ಬೊಗುಳುತ್ತಾ ಮೇಲೆ ಬೀಳುವುದಕ್ಕೆ ಬಂತು. ನಾನು ಹೆದರಿ ಸ್ವಲ್ಪ ಹಿಂದೆ ಸರಿದು, ಅರೆ ತೆರೆದಿದ್ದ ಬಾಗಿಲನ್ನು ಬೇಗನೆ ಮುಚ್ಚಿಬಿಟ್ಟೆ. ಸ್ವಲ್ಪ ಹೊತ್ತು ನೀರವ. ಆಮೇಲೆ ಟಪ್ ಟಪ್ ಎಂಬ ಬೂಡ್ಸಿನ ಕರ್ಕಶ ಧ್ವನಿ. ಅನಂತರ ಆಜಾನುಬಾಹುವಾದ ಜಟ್ಟಿಯ ಹಾಗಿದ್ದ ಒಬ್ಬ ಮನುಷ್ಯ ತನ್ನ ಭಯಂಕರವಾದ ನಾಯಿಯೊಡನೆ ಬಂದು ನಿಂತುಕೊಂಡ. ನಿಂತವನು ಅರೆಕ್ಷಣ ನಮ್ಮನ್ನು ದುರದುರನೆ ನೋಡಿ, ಗಡುಸಾದ ಸಿಡುಕಿನ ಧ್ವನಿಯಿಂದ "ಏನು ಬೇಕು ?" ಎಂದು ಕೇಳಿದ. ನಾವು ಸ್ವಲ್ಪ ತಪ್ಪುಮಾಡಿದ ಹಾಗೆ ತೋರಿತು. ನಮ್ಮ ಹಾಗೆ ದಾರಿ ತಪ್ಪಿ ಬಂದ ಜನರನ್ನು ಮಾತನಾಡಿಸಲು ಬಿಡುವಿಲ್ಲದ ಒಬ್ಬ ಭಾರಿ ಮನುಷ್ಯನ ಶಾಂತಿಗೆ ಭಂಗತಂದೆನೆಂದು ನಮಗೆ ಭಾಸವಾಯಿತು. ನಾನು ಸ್ವಲ್ಪ ಅಂಜುತ್ತಂಜುತ್ತಾ ಅವನ ಕ್ಷಮೆ ಬೇಡುವುದರಲ್ಲಿದ್ದೆ; ಆದರೆ ರಾಮು—ಮೊದಲಿನ ಹಾಗೆಯೆ ಮುಂಗೋಪಿ—"ಸ್ವಲ್ಪ ಹಾಲು ಬೇಕು, ಕುಡಿಯೋದಕ್ಕೆ" ಅಂದುಬಿಟ್ಟ. ನನಗೂ ಸ್ವಲ್ಪ ಆಶ್ಚರ್ಯವಾಯಿತು ಅವನ ಮಾತು ಕೇಳಿ. ಅಂಥಾ ಸಂದರ್ಭದಲ್ಲಿ ಒಂದು ಲೋಟ ನೀರು ಕೇಳುವುದು ಸಹಜ. ಆದರೆ ಹಾಗೆ ಹಾಲು ಕೇಳುವುದು ನಮ್ಮಲ್ಲಿ ರೂಢಿಯಿಲ್ಲ. ಆದರೆ ರಾಮೂಗೆ ಆ ಜಾಗಕ್ಕೆ ಬಂದೊಡನೆಯೇ ಹಿಂದೆ ಆ ಹುಡುಗಿ ತಂದುಕೊಟ್ಟ ರುಚಿಯಾದ ಆ ಹಾಲಿನ ನೆನಪು ಬಂದು, ಅವನ ಬಾಯಿಂದ ಆ ಮಾತು ಹೊರಬಿದ್ದಿರಬೇಕು. ರಾಮು ಹಾಗೆ ಕೇಳುತ್ತಲೆ ಮುಂದೆ ನಿಂತಿದ್ದ ಮನುಷ್ಯ ನಮ್ಮನ್ನು ತಿಂದು ಬಿಡುವ ಹಾಗೆ ದುರದುರನೆ ನೋಡಿ, "ಇದೇನೂ ಹೋಟೆಲಲ್ಲ!" ಎಂದು ಹೇಳಿ ಹಿಂದಿರುಗುವುದರಲ್ಲಿದ್ದ. ರಾಮೂಗೆ ಸ್ವಲ್ಪ ರೇಗಿತ್ತು ಅಂತ ಕಾಣುತ್ತೆ. "ನೀವೇನೂ ಬಿಟ್ಟಿ ಕೊಡಬೇಕಾಗಿಲ್ಲ. ದುಡ್ಡು ತೊಗೆಂಡು ಕೊಡಿ !" ಅಂದುಬಿಟ್ಟ. ಆ ಮನುಷ್ಯನಿಗೆ ಇನ್ನೂ ರೇಗಿತು. ಇನ್ನು ಸುಮ್ಮನಿದ್ದರೆ ಏನು ಅನರ್ಥವಾಗಿ ಬಿಡುವುದೋ ಅಂದುಕೊಂಡು ನಾನು ನಡುವೆ ಬಾಯಿಹಾಕಿ "ಕ್ಷಮಿಸಬೇಕು ಸಾರ್, ನಾವು ಪ್ರಯಾಣಿಕರು; ಹಸಿದಿದ್ದೇವೆ. ಇಲ್ಲಿ ಮನೆ ಕಂಡೆವು, ಕೇಳಿದೆವು. ತಮ್ಮ ಮನೇಲಿ ಹಾಲಿದ್ದರೆ ದಯವಿಟ್ಟು ನಮಗೆ ಕೊಟ್ಟು ತಾವು ಬೇರೆ ತರಿಸಿಕೊಂಡರೆ ತುಂಬ ಉಪಕಾರವಾಗುತ್ತೆ" ಎಂದು ವಿನಯವಾಗಿ ಹೇಳಿದೆ. ಆ ಮನುಷ್ಯನ ಮುಖದ ಬಣ್ಣ ಬದಲಾಯಿಸಿತು. ಮಾತಾಡದೆ ಒಳಗೆ ಹೊರಟು ಹೋದ. ಸ್ವಲ್ಪ ಹೊತ್ತಿನಲ್ಲಿ ಸುಮಾರು ಇಪ್ಪತ್ತು ವಯಸ್ಸಿನ ಒಬ್ಬ ಹೆಂಗುಸು ಒಂದು ತಟ್ಟೆಯಲ್ಲಿ, ಎರಡು ಗಾಜಿನ ಲೋಟಗಳಲ್ಲಿ ಹಾಲು ತಂದಳು. ಆ ಹೆಂಗುಸು ರೂಪವಂತಿಯೇನೋ ಹೌದು. ತೆಳ್ಳಗೆ ಬೆಳ್ಳಗೆ ಎತ್ತರವಾಗಿದ್ದಳು. ಶುಭ್ರವಾದ ಬಟ್ಟೆಗಳನ್ನು ಹಾಕಿಕೊಂಡಿದ್ದಳು. ಆದರೆ ಮೌನವ್ರತ, ಮುಖ ಹುಬ್ಬುಗಂಟು ಹಾಕಿತ್ತು, ಕಾಂತಿಹೀನವಾಗಿತ್ತು. ನಮಗೆ ಹೆಚ್ಚು ಕಾಲ ಅಲ್ಲಿ ನಿಲ್ಲುವ ಮನಸ್ಸು ಬರಲಿಲ್ಲ. "ಕಾಲ ಹೊನ್ನು, ಮಾತು ಮುಚ್ಚು" ಎನಿಸಿದ್ದ ಸಮಯ. ಹಾಲು ಕುಡಿದೆವು. ಅದರಲ್ಲಿಯೂ ರಾಮೂನೇ ಮೊದಲು ಮುಗಿಸಿದ. ಮುಗಿಸಿದ ಕೂಡಲೆ "ಏನು ಕೊಡಬೇಕು ?" ಎಂದು ಕೇಳಿದ. ಆಕೆ ಅದೇ ಸಿಡುಕಿನ ಮೋರೆಯಿಂದಲೇ 'ಎರಡಾಣೆ' ಎಂದಳು. ಋಣ ತೀರಿಸಿದ್ದಾಯಿತು. ಅವಳು ಮರುಮಾತಿಲ್ಲದೆ ಧಡಾರನೆ ಬಾಗಿಲು ಹಾಕಿಕೊಂಡು ಹೋದಳು; ನಾವು ಹಿಂದಿರುಗಿದೆವು.

ಆ ಮನೆಯೇನೋ ಬಹು ಸುಂದರವಾಗಿತ್ತು. ಆದರೆ ಅಲ್ಲಿ ಹಿಂದಿನ ಆ ಮುರುಕು ಗುಡಿಸಿಲಿನ ಆತಿಥ್ಯದ ಸಂತೋಷ ಅಭಾವವಾಗಿತ್ತು.

ಬೇಕಾದವರಿಗಿದು ಚೆಲ್ಲವೆ!

ಈಗ ಜನರು ಬೇರೆ ಆಹಾರಕ್ಕಿಂತಲೂ ಅಕ್ಕಿಯ ಅನ್ನವನ್ನೇ ಹೆಚ್ಚಾಗಿ ಸೇವಿಸುತ್ತಲಿದ್ದಾರೆ.

*　　*　　*

ಆಗ ತಾನೇ ಸೇಬುಹಣ್ಣನ್ನು ತಿಂದವನ ಉಸಿರು ಒಳ್ಳೆಯ ವಾಸನೆಯಿಂದ ಕೂಡಿರುವುದು.

ಸ್ವೀಡರು, ಡೇನರು, ನಾರ್ವೇಜಿಯನ್ನರು ಜಗತ್ತಿನಲ್ಲಿಯೇ ಅತಿಯಾಗಿ ಕಾಫಿ ಕುಡಿಯುವವರು.

*　　*　　*

ಮನುಷ್ಯನ ಮುಖದ ಒಂದು ಚೌರಸ ಇಂಚಿನಷ್ಟು ತೊಗಲಿನ ಮೇಲೆ ೩೬೦ ಕೂದಲುಗಳಿವೆ.

ಅಲಕ್ಷಿಸಬಾರದ ಅಲ್ಪಸಂಗತಿಗಳು.

ಶ್ರೀ. ಬನ್ನಂಜೆ ರಾಮಾಚಾರ್ಯರು
- ಉಡುಪಿ -

"ಧುರೀಣ"ದ ಸಂಪಾದಕರು

ಹರವಿಯು ತುಂಬ ಹಾಲಿರಲಿ, ಒಂದೆ ಒಂದು ಹುಳಿಯ ಹನಿ ಅವನ್ನೆಲ್ಲ ಕೆಡಿಸಿಬಿಡುವುದು! ಚೆಲುವೆಯ ಮುಖದ ಒಂದು ಸಣ್ಣ ಕಲೆ ಆಕೆಯ ಕಳೆಯನ್ನೇ ಕಂದಿಸಿ ತೋರಿಸಬಹುದು! ಹಾಗೆಯೆ ಕನ್ನಡಿಗರು ಅಲ್ಪವೆಂದು ಅಲಕ್ಷಿಸಿಬಿಡುತ್ತಿರುವ ಚಿಕ್ಕ ಪುಟ್ಟ ಮಾತುಗಳೆ ಕನ್ನಡತನದ ಹಾಲ ಹರವಿಗೆ ಹುಳಿಯ ಹನಿಗಳಾಗಿ ಪರಿಣಮಿಸುತ್ತಿವೆ; ಕನ್ನಡತಾಯ ಚೆಲುವಿನ ಮುಖದ ಹುಳುಕುಗಳಾಗಿ ಕೆಲಸಮಾಡುತ್ತಿವೆ!

★

ನಮ್ಮದು—ಕನ್ನಡಿಗರದು—ಒಂದು ಸ್ವಭಾವವಿದೆ; ಎಂತಹ ಗಂಡಾಂತರ ಪ್ರಾಪ್ತವಾಗಿದ್ದರೂ ಉದಾಸೀನಭಾವದಿಂದ ಅದನ್ನು ಅಲಕ್ಷಿಸಿಬಿಡುವುದು! ಅದನ್ನೆದುರಿಸಿ ನಿವಾರಿಸುವ ಕರ್ತೃತ್ವಶಕ್ತಿ ಇಲ್ಲವೆಂದಲ್ಲ—ಇವೆ ಇದೆ; ಆದರೆ ನಾವು ಅದನ್ನು ಉಪಯೋಗಿಸಿಕೊಳ್ಳುವುದಿಲ್ಲ. ಬಂದ ವಿಪತ್ತಿನ ಕಡೆಗೆ ನಾವು ತಳೆದಿರುವ ಒಂದು ಬಗೆಯ ಅಲಕ್ಷ್ಯಭಾವವೆ ಇದರ ಕಾರಣ. "ಅದರಿಂದೇನಾದೀತು?—ಅದೇನು ಮಹಾ?—ಆಗಲಿ, ಪರವಾ ಇಲ್ಲ!" ಆಪತ್ತು ಬಂದಾಗ ನಾವು ಉದ್ಗರಿಸುತ್ತಿರುವ ನುಡಿಗಳಿವು!

ಇದರ ಕಾರಣವೇನು? ಯುಕ್ತಾಯುಕ್ತ ವಿವೇಚನೆಯ ಶಕ್ತಿ ಇಲ್ಲವೆನ್ನೋಣವೇ? ಹಾಗೆನ್ನಲಿಕ್ಕೆ ಬರುವುದಿಲ್ಲ. ತಮ್ಮ ತಮ್ಮ ಹೊಟ್ಟೆಗೆ ಪ್ರಾಪ್ತವಾಗುವ ವಿಪತ್ತನ್ನು ಹೊಡೆದೋಡಿಸಲು ನಾವು ಎಂತೆಂತಹ ಚತುರೋಪಾಯಗಳನ್ನು— ಸಾಹಸಕಾರ್ಯಗಳನ್ನು ಮಾಡುತ್ತೇವೆ! ಇದೆ ಅಭ್ಯಾಸವು ಸಾಮೂಹಿಕ ವಿಪನ್ನಿವಾರಣೆಯಲ್ಲಿಯೂ ಬೆಳೆದು ಬಂದಿದ್ದರೆ ಎಷ್ಟು ಸೊಗಸಾಗುತ್ತಿತ್ತು! ನಮ್ಮ ಈ ಬಗೆಯ ಅರ್ಥವಿಲ್ಲದ ಜಡವೃತ್ತಿಯೆ ನಮ್ಮನ್ನು ಈ ಮೆಟ್ಟಿಲಲ್ಲಿ ತಂದು ನಿಲ್ಲಿಸಿದೆ. 'ಇದ್ದರೂ ಉಣಲಿಕ್ಕಿಲ್ಲ'ದವನ ಸ್ಥಿತಿಗೆ ಬಂದು ಮುಟ್ಟಿದ್ದೇವೆ.

ನಮ್ಮಲ್ಲಿ ಇನ್ನೂ ಒಂದು ದೋಷವಿದೆ; ಇನ್ನೊಬ್ಬನು—ಸ್ವಾರ್ಥದ ಉದ್ದೇಶದಿಂದಲೆ ಆಗಿರಲಿ—ನಮ್ಮನ್ನು ಹೊಗಳಿದನೆಂದರೆ ನಾವು ಉಬ್ಬಿಹೋಗುತ್ತೇವೆ. ಹಾಗೆಯೆ ಉಬ್ಬಿಸುತ್ತ ಅವನು ನಮ್ಮ ಜೇಬನ್ನೆ ಕತ್ತರಿಸಲು ಉದ್ಯುಕ್ತನಾದರೂ ನಾವು—ಒಂದು ಬಗೆಯ ದಾಕ್ಷಿಣ್ಯದಿಂದ—ಅದನ್ನು ತಡೆಯುವುದಿಲ್ಲ! 'ನಮ್ಮ ಔದಾರ್ಯವನ್ನು ಅವನು ಇನ್ನೊಬ್ಬನಲ್ಲಿಯೂ ಹೊಗಳಲಿ' ಎಂದೇ ಇದರ ತಾತ್ಪರ್ಯ. ಇಂತಹ ಮನೋವೃತ್ತಿಯಿಂದ ಎಂತಹ ಹಾನಿಯಾಗುತ್ತದೆ ಎಂಬುದರ ಅರಿವು ಇರುತ್ತಿದ್ದರೆ ನಾವು ಸತ್ತ್ವಗೇಡಿಗಳ ಹಾಗೆ ಆಗಲು ಎಂದಿಗೂ ಸಾಧ್ಯವಿರುತ್ತಿದ್ದಿಲ್ಲ.

ಮುಖ್ಯವಾಗಿ ಹೀಗೆಲ್ಲ ಆಗಲು, ಸರ್ವಾಂಗೀಣ ಜ್ಞಾನದ ವಿಕಾಸ—ನಾಡಿನ ವಿವಿಧಾಂಗೀಣ ಉನ್ನತಿಯ ಆವಶ್ಯಕತೆ—ಜೀವನಕ್ಕೂ ನಾಡಿಗೂ ಇರುವ ಸಂಬಂಧ—ಸ್ವಾಭಿಮಾನ, ಸ್ವಾತಂತ್ರ್ಯಗಳ ಸರಿಯಾದ ಸೊಬಗು—ಇವುಗಳ ಸಾಕಾದ ಜ್ಞಾನವು ಸಾಮೂಹಿಕ ಕ್ಷೇತ್ರದಲ್ಲಿ ವಿಕಾಸಗೊಳ್ಳದಿದ್ದುದೆ ಕಾರಣವೆಂದು ಹೇಳಬಹುದು. ಆದುದರಿಂದಲೆ ಇಷ್ಟೆಲ್ಲ ತಪ್ಪುಗಳನ್ನು ಅನುಭವಿಸಬೇಕಾಗಿದೆ. ನಾವು ಅಲಕ್ಷಿಸಿದ ವಿಚಾರಗಳೆ ಗುಡ್ಡವಾಗಿ ಬೆಳೆದು ನಮ್ಮ ಪ್ರಗತಿಯ ಹಾದಿಯಲ್ಲಿ ಅಡ್ಡವಾಗಿ ಕುಳಿತು ಬಿಡುತ್ತವೆ. ನಮ್ಮ ಪೋಷಣೆಯಿಂದಲೆ ಬೆಳೆದ ಅವುಗಳು ಸಾಧಾರಣವಾದ ಪ್ರತಿಕ್ರಿಯೆಗಳಿಂದ ನಿವಾರಣೆಯಾಗುವುದಿಲ್ಲ! ಆದರೆ ಅದರಿಂದ ಲಭಿಸಬಹುದಾದ ಎಲ್ಲಾ ಬಗೆಯ ನಷ್ಟಗಳೂ ಸುಲಭವಾಗಿ ನಮ್ಮ ಪಾಲಿಗೆ ಬಂದುಬಿಡುತ್ತವೆ. ಆದರೂ ನಾವು ಕಣ್ಣು ತೆರೆಯುವುದನ್ನು ಕಲಿಯಾರವೆಂದು ಕುಳಿತರೆ ಹೇಗೆ? ಈಚೀಚೆಗೆ ನಮ್ಮಲ್ಲಿ ಇಂತಹ ಮನೋಧರ್ಮವು ಬಲವಾಗಿ ಬೆಳೆದುಬಿಟ್ಟಿದೆ. ಇದನ್ನು "ನಾಡಿಗೆ ಕೇಡಾಗುವ ಕಾಲದ ಸೂಚನೆ" ಎಂದು ನಾವು ಭಾವಿಸಬಹುದು. ಎಂತಲೆ—ನನ್ನ ಅಭಿಪ್ರಾಯದಂತೆ—

ನಮ್ಮ ಪ್ರಗತಿಯ ಪಥದಲ್ಲಿ ತಡೆಯಾಗಿ ಪರಿಣಮಿಸಬಹುದಾದ ವಿಚಾರಗಳನ್ನು– ನಾವು ವಿವೇಕವುಳ್ಳವರು ಅಹುದಾದರೆ–ಸಕ್ರಿಯ ಚಳವಳದಿಂದ ಹೊಡೆದೋಡಿಸಬೇಕು. ಸಂದರ್ಭಗಳು ಅಲ್ಪವಿರಲಿ–ಮಹತ್ತ್ವದುವಿರಲಿ — ನಾವು ಅವನ್ನು ಚಿಕಿತ್ಸಕದೃಷ್ಟಿಯಿಂದಲೆ ನೋಡಬೇಕು. ಅಲ್ಪಸಂಗತಿಯೆಂದು ಅಲಕ್ಷ್ಯಿಸಲು ಸಾಧ್ಯವಿಲ್ಲ. ಕಿಡಿ ಕಿರಿದೆಂದು ಬೀಳುಗಳೆದರೆ, ಅದು ಸಂದರ್ಭಬಂದಾಗ ಹೊತ್ತಿಕೊಂಡು ಸಿಕ್ಕಿದುದನ್ನೆಲ್ಲ ಬೂದಿ ಮಾಡದಿರುವುದೇ?

ತೋರುವಿಕೆಗೆ ಅಲ್ಪಸಂಗತಿಗಳೆಂದು ಕಾಣಬಹುದಾದರೂ ನಮ್ಮ ಪ್ರಗತಿಘಾತಕಗಳಾಗಿ ಪರಿಣಮಿಸಬಲ್ಲ ಕೆಲವು ಸಂಗತಿಗಳನ್ನು ಉದಾಹರಿಸಬಹುದು :

ನಾವು ಸಾಮಾನ್ಯವಾಗಿ ಉತ್ತರಕರ್ನಾಟಕದ ಜಿಲ್ಲೆಗಳಲ್ಲಿ ತಿರುಗಿದರೆ ಒಂದು ವಿಚಿತ್ರವನ್ನು ನೋಡುತ್ತೇವೆ. ಎಂದರೆ ಅಂಗಡಿಗಳ ತೂಗುಹಲಗೆಗಳಲ್ಲಿ ಎಲ್ಲ, ಕಿರಿದಾದ ಕನ್ನಡದ ಅಕ್ಷರಗಳ ನಡುವೆ ತೂರಿಕೊಂಡ ದೊಡ್ಡ ದೊಡ್ಡ ಮರಾಠಿ ಅಕ್ಷರಗಳನ್ನು ಕಾಣುತ್ತೇವೆ. ''ವಿ. ಆರ್. ಪಾಟೀಲ–ಜವುಳಿ ವ್ಯಾಪಾರಿ–ಹುಬ್ಬಳ್ಳಿ'' ಎಂದಿಷ್ಟೆ ಕನ್ನಡದಲ್ಲಿದ್ದರೆ, ಮಹಾರಾಷ್ಟ್ರ ಲಿಪಿಯಲ್ಲಿ–ಭಾಷೆಯಲ್ಲಿ ''ಗಟ್ಟಿರಂಗು ಖಾತ್ರಿಮಾಲು—ದರ ಕಮ್ಮಿ—ಗಿರಾಕಿಗಳ ತೃಪ್ತಿಯೆ ನಮ್ಮ ತೃಪ್ತಿ!'' ಎಂದು ಬರೆದು ಪುನಃ ಹೀಗೆ ಮುಂದುವರಿಯುವುದನ್ನು ಕಾಣಬಹುದು. ''ವ್ಹಿ. ಆರ್. ಪಾಟೀಲರ ಜವಳೀ ದುಕಾನ–ಹುಬ್ಬಳ್ಳಿ''! ಇದಕ್ಕೆ ಅಲ್ಪ ಸ್ವಲ್ಪ ಅಪವಾದವೂ ದೊರೆಯಬಹುದು. ಹೀಗೆಯೆ ಕೆಲವು ಪೋಸ್ಟಾಫೀಸುಗಳಲ್ಲಿ ''ಪೋಸ್ಟ್ ಮತ್ತು ತಾರು ಆಫೀಸ್'' ಎಂದು, ಚಿನ್ನದಂತಹ ಕನ್ನಡದ ಬರೆಹಗಳಿರಬೇಕಾಗಿದ್ದ ಜಾಗೆಯಲ್ಲಿ, ''ಪೋಸ್ಟ್ ಆಣಿ ತಾರ ಆಫೀಸ್'' ಎಂಬ ಮಹಾರಾಷ್ಟ್ರಲಿಪಿಯ ಮಣೆಗಳೆ ತೂಗಾಡಿ, ಕಣ್ಣು ಕುಗ್ಗಿಸುತ್ತಿವೆ! ಸಾರ್ವಜನಿಕರಿಗೆ ಹಂಚಲಾಗುವ ಕರಪತ್ರಗಳಲ್ಲಿ ಕೂಡ ಕನ್ನಡದ ಜತೆಗೆ ಮರಾಠಿಯು ಇದ್ದೆ ಇದೆ! ಅದೂ ಅಲ್ಲದೆ ಕೆಲವು ಕ್ಯಾಲೆಂಡರುಗಳಲ್ಲಿ ಉತ್ತರಕರ್ನಾಟಕದ ಊರುಗಳನ್ನು ''ದಕ್ಷಿಣ ಮಹಾರಾಷ್ಟ್ರ''ಎಂದೆ ಸಂಕೇತಿಸಿವೆ. ಮಹಾರಾಷ್ಟ್ರೀಯರ ಸಬಲ ಪ್ರಚಾರವು ಅಷ್ಟು ಫಲದಾಯಕವಾಗಿದೆ! ಬಳ್ಳಾರಿಯ ಜಿಲ್ಲೆಯಲ್ಲಿ ಕೂಡ ಇದೇ ಬಗೆಯ ಸಂಕಟ ಉಪಸ್ಥಿತವಾಗಿದೆ. ಉತ್ತರಕರ್ನಾಟಕದಲ್ಲಿ ಮರಾಠಿಯ ಪ್ರಾಬಲ್ಯವಿದ್ದಂತೆಯೆ ಇಲ್ಲಿ ತೆಲುಗಿನ ಉಪದ್ರವ ಹೆಚ್ಚಿರುವುದು! ಸರಕಾರೀ ಭಾಷೆಯೂ ತೆಲುಗಾಗಿರುವುದರಿಂದ, ಕನ್ನಡದ 'ಹಣೆಬರೆಹ'ವನ್ನು ಹೇಳಿತೀರದು. ಈಚೆಗೆ ಬಳ್ಳಾರಿಯ ಕನ್ನಡಿಗರೊಬ್ಬರು ನನಗೆ ಪತ್ರಬರೆದಿದ್ದರು. ಅದರ ಲಿಪಿ ತೆಲುಗು–ಭಾಷೆ ಕನ್ನಡ! ಬೆಳಗಾಂವಿಯ ಕನ್ನಡಿಗರು ಕೆಲವರು ಮರಾಠಿಯಲ್ಲೆ ಪತ್ರವ್ಯವಹಾರ ನಡೆಯಿಸುತ್ತಾರೆ. ಏಕೆಂದರೆ ಅವರಿಗೆ ಮಾತನಾಡಲಿಕ್ಕೂ ಓದಲಿಕ್ಕೂ ಕನ್ನಡ ಬರುವುದಾದರೂ ಬರೆಯಲಿಕ್ಕೆ ಬರುವುದಿಲ್ಲ! ಸಮಗ್ರ ಕನ್ನಡಿಗರ ಸೌಕರ್ಯದ ದೃಷ್ಟಿಯಿಂದ ಒಂದು ಮಹಾವಿದ್ಯಾಪೀಠದ ಅಭಾವವಿರುವುದೇ ಈ ಎಲ್ಲ ಫಜೀತಿ'ಗಳನ್ನು ಸಂಪಾದಿಸಿಕೊಟ್ಟಿದೆ.

ನಮ್ಮ ಮಂಗಳೂರಿನಲ್ಲಿ ಕೂಡ ಈ ರೋಗಕ್ಕೆ ಕಮ್ಮಿಯಿಲ್ಲ. ಕಾಸರಗೋಡು ತಾಲೂಕಿನಲ್ಲಿ ಮಲಯಾಳಿಗಳ ಪ್ರಾಬಲ್ಯ ಸಾಕಷ್ಟು ಪ್ರಮಾಣದಲ್ಲಿ ಹೆಚ್ಚಿದೆ.

''ಇದರಿಂದೇನಪ್ಪ! ಇಸ್ಸಿ, ಇವೆಲ್ಲ ಚಿಲ್ಲರೆ ವಿಷಯಗಳು! ಎಂದು ನೀವು ಆಕ್ಷೇಪಿಸಬಹುದು. ನಿಮ್ಮ ಆ ಬುದ್ಧಿಯೆ ಸರಿಯಾದುದಲ್ಲವೆಂದು ನಾನೀಗ ಹೇಳಲು ಹೊರಟಿರುವುದು.

ಮೇಲೆ ಬರೆದ ವಿದ್ಯಮಾನದಿಂದ ಪರಪ್ರಾಂತೀಯರು ತಪ್ಪು ಅಭಿಪ್ರಾಯವನ್ನು ಹೊಂದಲಿಕ್ಕೆ ಎಡೆದೊರೆಯುತ್ತದೆ. ಬಳ್ಳಾರಿಯಲ್ಲಿ ತಿರುಗಿದ ಪರಪ್ರಾಂತೀಯನೊಬ್ಬನು ಬಳ್ಳಾರಿಯನ್ನು ತೆಲುಗರ ನಾಡೆಂದೇ ನಂಬುತ್ತಾನೆ. ಉತ್ತರಕರ್ನಾಟಕದ ಊರುಗಳಲ್ಲಿ ಸಂಚರಿಸಿದವನು ಇವನ್ನು ದಕ್ಷಿಣ ಮಹಾರಾಷ್ಟ್ರದ ಊರುಗಳೆಂದೇ ಭಾವಿಸುತ್ತಾನೆ. ಕಾಸರಗೋಡಿನಲ್ಲಿ ತಿರುಗಿದವನು ಅದನ್ನು ಕೇರಳದ ಅಂಗವೆಂದೇ ತಿಳಿಯುತ್ತಾನೆ. ಇವರು ಹೀಗೆ ತಿಳಿದುಕೊಳ್ಳುವುದೆ ನಮ್ಮ ಮುನ್ನಡೆಗೆ ತಡೆಯಾಗುವುದು. ಅಥವಾ ಮೂರನೆಯ ಮನುಷ್ಯರೆ ಏಕೆ— ಈ ವಿದ್ಯಮಾನಗಳಿಂದ ನಮ್ಮವರು ಕೂಡ ಜಡರಾಗುತ್ತಾರೆ. ಚಿಕ್ಕಂದಿನಿಂದಲೆ ಅಚ್ಚಕನ್ನಡಿಗನಲ್ಲಿರಬೇಕಾದ ಗುಣಗಳ ಬದಲು ಸಮ್ಮಿಶ್ರಸ್ವಭಾವವೆ ಬೆಳೆಯುತ್ತದೆ. ಇಂತಹ ಅನ್ಯಾಯವನ್ನು ನಾವು ಅಲಕ್ಷ್ಯಿಸಲು ಸಾಧ್ಯವೇ ಇಲ್ಲ! ಅತಂದ್ರಿತ ಆಂದೋಲನದಿಂದ ಇಂತಹ ದುರ್ವ್ಯಾಪ್ತಿಯನ್ನು ಅವಸಾನಗೊಳಿಸದಿದ್ದರೆ, ನಾವು ಬಲವಾದ ಹಿಂಸೆಯನ್ನು ಸಹಿಸಬೇಕಾದೀತು. ಕನ್ನಡನಾಡಿನಲ್ಲಿ ಎಲ್ಲವು ಕನ್ನಡವೆ ಆಗಬೇಕು. ಬಂದವರು ಬೇಕಾದರೆ ಕನ್ನಡಕ್ಕೆಯೆ ಸೊಕ್ಕಿ ಹೋಗಬೇಕು. ಅಂತಹ ಪರಿಸ್ಥಿತಿಯನ್ನು ಉಂಟುಮಾಡುವ ಹೊಣೆಗಾರಿಕೆ ನಮ್ಮದು! 'ಕರ್ನಾಟಕ'ದ ಘೋಷಣೆಯನ್ನು ಊರಿನ ಉದ್ದಗಲವೆಲ್ಲ ಕೂಗಿ— ಸಾರಬೇಕು. ಈ ತತ್ತ್ವಕ್ಕೆ ವಿರೋಧಿಗಳಾಗಿರುವವರನ್ನು ''ಹಕ್ಕಿಸಹಗೆಗಾರ''ರೆಂದು ಭಾವಿಸಬೇಕು.

ಇಂತಹದೆ ಇನ್ನೊಂದು ಸಂಗತಿಯಿಂದಲೂ ನಾವು ಬಹುವಂಚಿತರಾಗುತ್ತಿದ್ದೇವೆ. ಅದು ಕೆಲವು ಪತ್ರಿಕೆಯವರಿಂದಾಗಿ ಬರುವಂತಹದು. ವಿಶಾಲ ಕರ್ನಾಟಕದ ಎಲ್ಲ ಜನರಲ್ಲಿ ಏಕಮತ್ಯವನ್ನೂ— ಕನ್ನಡತನದ ಜಾಗೃತಿಯನ್ನೂ— ಉಂಟುಮಾಡಿ ಜನಜೀವನದ ಅಂತಸ್ಸತ್ತ್ವವನ್ನು ಸ್ಫುರಿಸಿ ಮೆರೆಯಿಸುವುದೆ ಪತ್ರಿಕೆಗಳ ಗುರಿಯಾಗಿರಬೇಕು. ಹಾಗಲ್ಲದೆ ಕೇವಲ ಹಣಮಾಡುವ ಉದ್ದೇಶದಿಂದ ಕನ್ನಡನಾಡಿಗೆ ಬಹಳ ವ್ಯಾಘಾತಕಾರಿಯಾದ—ಅಪಾಯಕಾರಿಯಾದ— ವಾತಾವರಣವನ್ನು ತಯಾರುಮಾಡುವ ಪರ್ಗ ಯನ್ನು ಕೆಲವು ಪತ್ರಿಕೆಗಳು ವಹಿಸಿದುದಕ್ಕೆ ಬಹಳವಾಗಿ ಶೋಚಿಸಬೇಕಾಗಿದೆ. ಕನ್ನಡದ ಎಲ್ಲಾ ಪತ್ರಿಕೆಗಳೂ ಹಾಗೆಂದು ನನ್ನ ಅಭಿಪ್ರಾಯವಲ್ಲ. ನಾಡಿನ ಹಿತದೃಷ್ಟಿಯಿಂದ ದುಡಿವ ಪತ್ರಿಕೆಗಳು ಬೇಕಷ್ಟು ಇವೆ; ಆದರೆ ಯಾವತರದ ಧ್ಯೇಯ-ಧೋರಣೆಗಳಿಲ್ಲದ ಕೆಲವು ಪತ್ರಿಕೆಗಳು ಅವುಗಳ ಪ್ರಚಾರದಲ್ಲಿ ಅಡ್ಡಬಂದಿವೆ. ಮನುಷ್ಯನಿಗೆ ಉತ್ತಮವಾದ ಆಹಾರವು ಬೇಕಷ್ಟು ದೊರೆತರೂ

ಕಳ್ಳಿ(ಸಿಂದಿ)ಗಾಗಿ ಹಾತೊರೆಯುವುದಿಲ್ಲವೇ? ಯಾವುದೋ ಒಂದು ಬಗೆಯ ಆನಂದದ ಭ್ರಮೆಯು ಆತನನ್ನು ಬೇರೆ ದಾರಿಯಿಂದ ನಿವೃತ್ತಿಪಡಿಸಿ ತನ್ನ ಕಡೆಗೆ ಸೆಳೆದುಕೊಳ್ಳುತ್ತದೆ. ಹಾಗೆಯೆ ಕನ್ನಡದ ಕೆಲವು ಪತ್ರಿಕೆಯವರು ಜನರ ರುಚಿಶುದ್ಧಿಯನ್ನು ಕೆಡಿಸಿ ಬಿಟ್ಟಿದ್ದಾರೆ— ಜನತೆಯ ಜ್ಞಾನದ ಮಟ್ಟವನ್ನು ಕೆಳ-ಕೆಳಗೊಯ್ದಿದ್ದಾರೆ. "ಜನರು ಅದನ್ನೇ ಅಪೇಕ್ಷಿಸುತ್ತಾರೆ— ನಾವೇನು ಮಾಡಬಹುದು?" ಎಂದು ಅವರು ನನ್ನನ್ನು ಪ್ರಶ್ನಿಸಬಹುದು. ಅದಕ್ಕೆ ನನ್ನ ಉತ್ತರವು ಹೀಗೆ:— "ಜನರ ಮನಸ್ಸನ್ನು ಆ ಮಟ್ಟಕ್ಕಿಳಿಸಿ – ರುಚಿಗೆಡಿಸಿ – ಹಾಳುಮಾಡಿದವರು ನೀವು! ಆ ಪಾಪಕ್ಕೆ ನೀವೆ ಹೊಣೆಗಾರರು! ನೀವು ಅವರನ್ನು ಒಳ್ಳೆಯ ಜ್ಞಾನವಂತರನ್ನಾಗಿಮಾಡುವುದಕ್ಕೆ ಸಾಧ್ಯವಿತ್ತು; ಆದರೆ ಪತ್ರಿಕೆಯ ಆಯುಸ್ಸನ್ನು ಉಳಿಸುವ ಪರಮೋದ್ದೇಶದಿಂದಲೆ ನೀವು ಇಂತಹ ವಿಷಮಪರಿಸ್ಥಿತಿಯನ್ನು ಉಂಟುಮಾಡಿದ್ದೀರಿ. "ಜರ್ಮನ್ ಸೂಳೆಗೇರಿ— ಜಪಾನಿನ ವೇಶ್ಯೆಯರು—ಮುಸಲೋನಿಯ ಊಟದ ಬಟ್ಟಲು — ರೂಸ್‌ವೆಲ್ಟರ ಗರುಡಪುರಾಣ— ಪೋಲೆಂಡದ ಪವಾಡ ಪುರುಷರು— ಹಿಟ್ಲರರ ಚುಂಬನಸ್ಪರ್ಧೆ—" ಮುಂತಾದ ಕನ್ನಡಿಗರ ಸಂಸ್ಕಾರಸಮನ್ವಯಕ್ಕೆ— ಜೀವನಸಿದ್ಧಿಗೆ ಆವಶ್ಯಕವಿಲ್ಲದ — ಜ್ಞಾನವಿಕಾಸಕ್ಕೆ ಹೇತುವಲ್ಲದ — ವಿಷಯಗಳನ್ನು ಸಂಪಾದಿಸಿಕೊಟ್ಟು, ಜನರ ಭಾವನೆಯ ಪಾವಿತ್ರ್ಯವನ್ನು ಕೆಡಿಸಿದ್ದೀರಿ" ಎಂದು. ರಾಷ್ಟ್ರೀಯ ಹಾಗೂ ಪರರಾಷ್ಟ್ರೀಯ ರಾಜಕಾರಣದ ಸತ್ಯಸ್ವರೂಪವನ್ನು ತಿಳಿಸುವುದೂ — ಸರ್ವಾಂಗೀಣ ಜ್ಞಾನವಿಕಾಸಕ್ಕೆ ಸಾಧಕವಾಗುವಂತೆ ವಿಷಯಗಳನ್ನು ಸಂಗ್ರಹಿಸುವುದೂ — ಜನರಲ್ಲಿ ತಾಯ್ನಾಡಿನ ಮೇಲಿನ ಮಮತೆಯನ್ನು ಬೆಳೆಯಿಸುವುದೂ ಪತ್ರಿಕೆಗಳ ನೀತಿಯಾಗಿರಬೇಕು. ಈ ಬಗೆಯ ಧ್ಯೇಯಸಾಧನೆಗಾಗಿ ಪತ್ರಿಕೆಗಳು ಸಮರ್ಥರಾದ ಲೇಖಕರ ಮಂಡಲವನ್ನು ನಿರ್ಮಿಸಿಕೊಂಡು ವಿವಿಧ ಸ್ವತಂತ್ರ ಲೇಖನಗಳನ್ನು ಒದಗಿಸುತ್ತಿರಬೇಕು. ವ್ಯರ್ಥವಾದ ಅನುವಾದಗಳನ್ನು ಕೂಡಲೆ ನಿಲ್ಲಿಸಬೇಕು. ಇಲ್ಲವಾದರೆ ವಿದ್ಯಾವಂತರಾದವರು ಮೇಲೆ ಬರೆದಂತಹ ಪತ್ರಿಕೆಗಳನ್ನು ಅನಾದರಿಸುವರು. ಸಾಮಾನ್ಯರು ಅವುಗಳಿಂದ, ಸತ್ಪ್ರಯೋಜನದಿಂದ ವಂಚಿತರಾಗುತ್ತಾರೆ. ಇಂತಹ ಪತ್ರಿಕೆಗಳಿದ್ದೇನು ಪ್ರಯೋಜನ? ಅಂತಹ ಪತ್ರಾಧಿಪರಲ್ಲಿ ನನ್ನದೊಂದು ಅರಿಕೆಯಿದೆ; ಏನೆಂದರೆ—ಮಾತಿನ ಕೊನೆಗೆ ಕೋಪಿಸಿಕೊಳ್ಳದೆ ಸತ್ಯಸಂಗತಿಯನ್ನರಿತು—ದಯಮಾಡಿ ಸುಧಾರಿಸಿರಿ — ನಿಮ್ಮ ದಾರಿ ಅಪಾಯಕರ — ಜನರನ್ನು ನವಿರಾದ ಗುರಿಯ ಕಡೆಗೊಯ್ಯಿರಿ!" ಎಂದು!

ಇನ್ನೂ ಒಂದು ತೊಂದರೆಯ ವಿಷಯವೆಂದರೆ ನಮ್ಮಲ್ಲಿಯ ಪ್ರಾಂತಭೇದ. ಕಾರಣವಿಲ್ಲದೆ ಈ ಪ್ರಾಂತಭೇದವು ನಮ್ಮ ನಮ್ಮಲ್ಲಿ ಭಿನ್ನಭಾವನೆಯನ್ನು ಹುಟ್ಟಿಸಿದೆ. ಧಾರವಾಡದವರ ಕಾರ್ಯಕಲಾಪಗಳು ಮಂಗಳೂರಿನವರ ದೃಷ್ಟಿಯಲ್ಲಿ ಅಯೋಗ್ಯಗಳಾಗಿ ಪರಿಣಮಿಸುತ್ತಿವೆ. ಮಂಗಳೂರಿನವರ ಉದ್ಯೋಗ ಮೈಸೂರಿನವರಿಗೆ ನಿಷ್ಪ್ರಯೋಜಕವಾಗಿ ತೋರುವುದು. ಸಾಮಾನ್ಯವಾಗಿ ಉಡುಗೆ ತೊಡುಗೆಗಳಲ್ಲಿ—ತಿಂಡಿತಿನಿಸುಗಳಲ್ಲಿ—ಅನುಭವಭಾವನೆಗಳಲ್ಲಿ,— ಮೈಸೂರು — ಮಂಗಳೂರು—ಧಾರವಾಡಗಳು ಭಿನ್ನಧರ್ಮಿಯಗಳಾಗಿವೆ ಎಂಬುದನ್ನು ಒಪ್ಪಬೇಕು. ಆದರೆ ಒಬ್ಬನು ಇನ್ನೊಬ್ಬನದನ್ನು ಹೀಯಾಳಿಸುವ ರೂಢಿ ಈಗ ಕೆಲವೆಡೆ ತೋರುತ್ತದೆ. ಈ ರೋಗ ಮಾತ್ರ ಒಳ್ಳೆಯದಲ್ಲ. ಶಿಕ್ಷಿತ ಜನಸಮುದಾಯ ಕೂಡ ಈ 'ಹೊಲಸಿ'ಗೆ ಬಲಿ ಬಿದ್ದಿರುವುದೆಂಬುದು ಬಲು ದುಃಖದ ಸಂಗತಿಯಾಗಿದೆ. ಈ 'ವ್ಯಭಿಚಾರ'ವು ನಿವಾರಣೆಯಾಗದಿದ್ದರೆ ನಮ್ಮ ಕ್ಷೇಮಾಭ್ಯುದಯಗಳಿಗೆ ಬಾಧಕವಿದೆ. ಇದಕ್ಕೆ ಏಕೀಕರಣಕ್ಕಿಂತ ಉತ್ತಮವಾದ ಮದ್ದು ಬೇರೆಯೇನಿದೆ?

ಪ್ರಾಂತಭೇದದ ಗೊಂದಲವನ್ನು ವಿವರಿಸಲು ನಾನು ಕನ್ನಡದ ಉದ್ದಗಲವನ್ನೆಲ್ಲ ಸುತ್ತಬೇಕಾಗಿಲ್ಲ. ನಮ್ಮ ದಕ್ಷಿಣಕನ್ನಡದ ಜಿಲ್ಲೆಯಲ್ಲಿಯೆ ಇರುವ ಒಂದು ಉದಾಹರಣೆಯನ್ನು ಹೆಕ್ಕಿ ತೋರಿಸಬಹುದು. ನಮ್ಮ ಜಿಲ್ಲೆಯಲ್ಲಿ ಹೆಚ್ಚಿನವರು ತುಳುವರು, ಉಳಿದವರು ಕೊಂಕಣಿ ಭಾಷೆಯನ್ನಾಡುವ ಕ್ರೈಸ್ತ ಹಾಗೂ ಸಾರಸ್ವತ-ಗೌಡಸಾರಸ್ವತರುಗಳು. ಇನ್ನು ಅಲ್ಪಸ್ವಲ್ಪ ಮಹಮ್ಮದೀಯರೂ ಮಲೆಯಾಳಿಗಳೂ ಬೇರೆಯೆ ಇದ್ದಾರೆ. ಇವರಲ್ಲಿ ಒಬ್ಬರದೂ ಮಾತೃಭಾಷೆ ಕನ್ನಡವಲ್ಲ! ಕುಂದಾಪುರ ತಾಲೂಕಿನ ಕೆಲವು ಭಾಗದವರೂ ಮಂಗಳೂರು ಕಡೆಯ ಹವ್ಯಕ ಬ್ರಾಹ್ಮಣರೂ ವಿಕೃತವಾದ ಕನ್ನಡವನ್ನು ಮನೆಮಾತಾಗಿ ಉಪಯೋಗಿಸುತ್ತಾರೆ. ಆದರೆ ಆ ಭಾಷೆ ಬಹಳೇ ಅಪಭ್ರಷ್ಟವಾದುದಾಗಿದೆ. ಒಬ್ಬರಲ್ಲಿಯೂ ಸರಿಯಾದ ಒಕ್ಕಟ್ಟಿಲ್ಲ; ಪರಸ್ಪರ ಅಸೂಯೆ! ಕೋರ್ಟುಭಾಷೆಯು ಕನ್ನಡವಾಗಿರುವುದರಿಂದ ನಿರುಪಾಯರಾಗಿ ಎಲ್ಲರೂ ಕನ್ನಡವನ್ನೇನೋ ಕಲಿಯುತ್ತಾರೆ; ಆದರೆ ನಾವು ಕನ್ನಡಿಗರು—ನಮಗೂ ಒಂದು ನೆಲೆಯಿದೆ— ಸಂಸ್ಕೃತಿಯಿದೆ—ನಾವೂ ಎಲ್ಲರಹಾಗೆಯೆ ಪುರೋಗಾಮಿಗಳಾಗಬೇಕು—ಎಂದು ತಿಳಿದವರ ಸಂಖ್ಯೆಗೆ ಬಲವಾದ ಬಡತನವಿದೆ! ಮುಂದಾಳುಗಳಾಗಿರುವವರನ್ನು ಕುರಿತು ಬರೆಯುವುದಾದರೆ — ಅವರಿಗೆ ಕನ್ನಡವೂ ಬೇಕಾಗಿಲ್ಲ — ಯಾವುದೂ ಬೇಕಾಗಿಲ್ಲ—ಅವರಿಗೆ ಬೇಕಾದುದು ಬರಿಯೆ ಮನ್ನಣೆ—! ಮಂಗಳೂರ ಮುಂದಾಳುಗಳ ಸುದ್ದಿ ಮಾತ್ರವೇಕೆ— ಕನ್ನಡದ ಎಲ್ಲ ಮುಂದಾಳುಗಳೆನಿಸಿಕೊಂಡವರ ಇತಿಹಾಸವನ್ನು ಹೇಳುವಾಗಲೂ ಗಂಟಲೆಲ್ಲ ನೋಯುತ್ತದೆ. ಮಂಗಳೂರಿನ ಪತ್ರಿಕೋದ್ಯೋಗಿಗಳೊಬ್ಬರು ಕೇರಳದ ಕುರಿತಾದ ಪ್ರಚಾರವನ್ನು ಕೈಕೊಂಡಾಗ ನಾನು ಅವರಿಗೆ "ದಯಮಾಡಿ ತಾವು ಆ ಬುದ್ಧಿಯನ್ನು ಬಿಡಬೇಕು" ಎಂದೆ. ಅವರು ನನ್ನ ಮಾತಿಗೆ ಕೊಟ್ಟ ಉತ್ತರವನ್ನು ನೋಡಿರಿ:—"ಏನಯ್ಯಾ ನೀವು ಹೇಳೋದು? ನಮ್ಮ ಮನೆಮಾತು ಕೊಂಕಣಿ. ನಮಗೆ ಕನ್ನಡವಾದರೇನು ಕೇರಳವಾದರೇನು? ಹೊಟ್ಟೆಯ ಪಾಡಿಗಾಗಿ ಹಲವರು ಹಲವು ದಾರಿಗಳನ್ನು ಹುಡುಕುವುದಿಲ್ಲವೆ? ಹಾಗೆಯೆ ನಮ್ಮದೂ ಇದೊಂದು ಹಣಗಳಿಸುವ ವ್ಯಾಪಾರ—!" ಈ ಮಾತಿನ ಮಾನದಿಂದ ಅವರನ್ನು ಅಳೆದು ತೂಗಿನೋಡಿದರೆ ಕನ್ನಡತನದ ಕುರುಹು ಕೊಂಚವಾದರೂ ಸಿಕ್ಕೀತೇ? ಇಂತಹ 'ಮಹಾತ್ಮ'ರ ಮನೋಧರ್ಮದ ಫಲವಾದ ಪತ್ರಿಕೆಯನ್ನು ಕೊಂಡೋದುವವರ ಭಾವನೆಯಲ್ಲಿಯೂ ಇಂತಹ ದುರ್ಭಾವನೆಯು ಮೈಗೂಡಲಾರದೆ? ನಾನು ಹಲವು

ಬಾರಿ ಕಂಡುಂಡ ಮಾತಿದು! ಇದರಿಂದ ಹಲವು ಬಾರಿ ನನ್ನ ನೆತ್ತರು ಕುದಿದಿದೆ-ಕರುಳು ಬೆಂದಿದೆ! ಪರಿಸ್ಥಿತಿಯು ಹೀಗೆಯೆ ಮುಂದುವರಿದರೆ ನಮ್ಮ ಅಭಿಲಾಷೆ ಹೇಗೆ ಕೈಗೂಡಬಲ್ಲದು? ನನ್ನ ಅಭಿಪ್ರಾಯದಂತೆ-ವಿಧಾಯಕವಾದ ಒಂದು ಸಕ್ರಿಯಾಂದೋಲನ ಇಲ್ಲದಿರುವಿಕೆಯೆ ಇಂತಹ ಸಂಕಟಕ್ಕೆ ಪೋಷಕವಾಗಿದೆ!

ಹೀಗೆ ಕೆಲವನ್ನು ಚರ್ಚಿಸಿ ಆಯಿತು. ಇಂತಹ ಅಲ್ಪವಿಚಾರಗಳು ನೂರಾರು-ನೂರಾರು-ನೆಲಸಿವೆ. ನಮ್ಮ ಉದಾರದೃಷ್ಟಿಗೆ ಅವೆಲ್ಲ ತೊಡಕುಗಳಾಗಿ ಕಂಡುಬರಲಾರವು. ಆದರೆ ಇಂತಹ ಸಂಗತಿಗಳೆ ನಮ್ಮ ಮುಂದಿನ ಮುನ್ನಡೆಗೆ ತಡೆಯಾಗಿ ನಿಲ್ಲುತ್ತವೆ-ಅಸಹನೀಯವಾದ ಅನ್ಯಾಯವನ್ನು ಉಂಟುಮಾಡುತ್ತಿವೆ. ಈ ಬಗೆಯ ವಾತಾವರಣವು ಅಚ್ಚ ಕನ್ನಡಿಗನೊಬ್ಬನನ್ನು ದೇಶಕ್ಕೆ ದಾನಮಾಡಲು ಅಸಮರ್ಥವಾಗುತ್ತದೆ. ಹಾಗಾಗಿ ನಮ್ಮ ನಾಡು-ನುಡಿ-ಕಲೆ - ಸಂಸ್ಕೃತಿಗಳು ಶತಮಾನ - ಶತಮಾನಗಳ ವರೆಗೂ ಉನ್ನತಿಯನ್ನು ಕಾಣಲಾರವು. ನಮ್ಮ ಎಲ್ಲ ಹಂಬಲು ಹಾರಯಿಕೆಗಳೂ ಕುಸುರುಗೊಳ್ಳದೆ - ಕೈಗೂಡದೆ - ಕನಸಿನ ಮಾತಾಗಿಯೆ ಉಳಿದಾವು.

ಇದಕ್ಕೆ ಕನ್ನಡದ ಅಭಿಮಾನಿಗಳಾದ ತರುಣರು ಕೂಟವಾಗಿ ಕಲೆತು ಕಸುವಿನಿಂದ ಚಳವಳಿಸಬೇಕು. ಸಕಲಸಮಸ್ಯೆಗಳನ್ನು ವಿಶ್ಲೇಷಿಸಿ ನೋಡುವ ರೂಢಿ ಬಲಿಯಬೇಕು. ಕನ್ನಡತನದ ಸಾರ್ವತ್ರಿಕ ಪ್ರಚಾರವನ್ನು ಅನುದಿನವೂ ನಡೆಯಿಸಿ ನಾಡಿಗರಲ್ಲಿ ಒಂದು ನವೀನವಾದ ಜಾಗೃತಿಯನ್ನು ಜನಿಯಿಸಬೇಕು. ನಮ್ಮ-ತನದ ಉಳಿಸುವಿಕೆಗಾಗಿ ನಮ್ಮಲ್ಲಿ ಹೆಮ್ಮೆ-ಹುಮ್ಮಸುಗಳು ಮೂಡಿ ಮುಪ್ಪುರಿಗೊಳ್ಳಬೇಕು. ಮೂಲೆ ಮೂಲೆಯಲ್ಲಿ ಕನ್ನಡದ ಕೂಗು ಮೊಳಗಿ ಜನರೆಚ್ಚರುಗೊಂಡು ಕರ್ತವ್ಯದ ಕಡೆಗೆ ತಿರುಗುವಂತಾಗಬೇಕು. ನಾಡನುಡಿಯು ಸಂಸ್ಕೃತಿಯೊಡನೆ ತಲೆಯೆತ್ತಿ ವಿಕಾಸಗೊಂಡಾಗ ಜನಜೀವನದ ಮಟ್ಟ ಮೇಲೆ ಮೇಲಕ್ಕೆ ಮುಟ್ಟಿ ಬಾಳು ನವಿರಾಗುವದು! ಹಾಗಾಗಬೇಕೆಂದು ಯಾರು ತಾನೆ ಅಪೇಕ್ಷಿಸಲಿಕ್ಕಿಲ್ಲ? ಅದಕ್ಕಾಗಿ ದೀಪಾವಳಿಯ ಈ ಶುಭಸನ್ನಿವೇಶದಲ್ಲಿಯೇ ಒಂದು ಜ್ವಲದಾಂದೋಲನವನ್ನು ಆರಂಭಿಸಬೇಕು. ಕನ್ನಡದ ಮುನ್ನಡೆಗೆ ತೊಡಕಾಗಿ ನಿಲ್ಲುವ ಎಲ್ಲ ವಿಚಾರಗಳನ್ನೂ ಹೇಳಹೆಸರಿಲ್ಲದಂತೆ ಮಾಡಬೇಕು. ಈ ಜವಾಬ್ದಾರಿ ನಮ್ಮದು-ತರುಣರದು! ಹಿಂದುಸ್ಥಾನದ ಬೇರೆ ಬೇರೆ ಪ್ರಾಂತೀಯ ಭಾಷೆಗಳು ಯಾವ ಭರದಿಂದ ಬೆಳೆಯುತ್ತಿವೆಯೆಂಬುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ನಮ್ಮಲ್ಲಿ ಕ್ರಿಯಾಶಕ್ತಿಗೆ ಕೊರತೆಯಿಲ್ಲ-ಹೊತ್ತು ಹದವಾಗಿದೆ; ಆದಕಾರಣ ಈಗಲೆ ನಾವು ಜನಜಂಗುಳಿಯ ಜಡಧರ್ಮವನ್ನು ಒಡಿಸಿ, ಧಮನಿಬಿಂದುಗಳಲ್ಲಿ 'ಸ್ವಾಭಿಮಾನ'ದ ವೀರಾವೇಶವು ಚಲಿಸುವಂತೆ ಮಾಡೋಣ!

ಆಗ ನಮ್ಮ ನಾಡು ಮೆರೆದೀತು—ನುಡಿ ಅರಳೀತು—ಕನ್ನಡದ ಚೆಲುವಿಗೆ ವಿಶ್ವವೇ ಮೆಚ್ಚೀತು — ಕನ್ನಡಿಗರ ಹೊಸ ಬಾಳ್ವೆಯ ಹೂವು, ತಿಳಿವಳಿಕೆಯ ಪರಿಮಳದೊಡನೆ ತಾನಾಗಿ ತೊನೆದೀತು!! ಹಾಗಾಗಲಿ!

ಕನ್ನಡವನುಳಿದೆನಗೆ ಅನ್ಯಚಿಂತನೆಯಿಲ್ಲ!

ಸುಶೀಲೆಯ ಸಂತಾನಸೌಖ್ಯ!

ತನಗೆ ಮಕ್ಕಳಿಲ್ಲದುದರಿಂದ ಸಂತಾನಾಪೇಕ್ಷೆಯ ಭಾವವನ್ನು ಸುಶೀಲೆಗೆ ಹೇಗಾದರೂ ಹೊರಕ್ಕೆ ಹಾಕಬೇಕಾಗಿದ್ದಿತು. ಆದಕ್ಕಾಗಿ ಆಕೆ ಒಂದು ಸುಂದರವಾದ ಚಿತ್ರವನ್ನು ಹೆಣಿಕೆಯಲ್ಲಿ ರಚಿಸಿದಳು.

ಅದರ ಹೆಸರೇ

ಸಂತಾನಸೌಖ್ಯ!

★ ಆ ಚಿತ್ರದ ಹೆಣಿಕೆಗಾಗಿ ಉಪಯೋಗಿಸಿದ ಬಣ್ಣಬಣ್ಣದ ನೂಲು, ಚಿತ್ರಕಾರನ ಕುಂಚದ ಕೆಲಸದಷ್ಟು ಸೂಕ್ಷ್ಮವಾದ ಕುಸುರನ್ನು ತೋರಿಸುತ್ತಿದ್ದಿತು.

★ ನೋಡಿದವರೆಲ್ಲ ಕೇಳತೊಡಗಿದರು: 'ಈ ಹೆಣಿಗೆಗೆ ಉಪಯೋಗಿಸಿದ ನೂಲ ಎಲ್ಲಿಯದು—ಎಲ್ಲಿಯದು?' ಎಂದು. ಜನರಿಗೇನು ಗೊತ್ತು? ಆಕೆ ಹೆಣಿಕೆಯ ಎಲ್ಲ ಸಲಕರಣೆಗಳನ್ನೂ

ಸಿಟಿ ಸ್ಟೋರ್ಸ್ ಧಾರವಾಡ

ಇವರಲ್ಲಿಯೇ ಕೊಂಡಿದ್ದಳು.

ಹೆಣಿಕೆ, ಕಸೀದೆ, ಎಂಬ್ರಾಯಡರಿಗಳಿಗೆ ಬೇಕಾಗುವ ಪ್ರತಿಯೊಂದು ಪದಾರ್ಥವೂ ಇಲ್ಲಿ ಸಿಗುವುದು.

ಸಿಟಿ ಸ್ಟೋರ್ಸ್ ಮಾರ್ಕೆಟ್‌ರೋಡ್, ಧಾರವಾಡ.

. . . . ರೆ!

★

ಶ್ರೀ. ಹುಯಿಲಿಗೋಳ
ರಾಮಚಂದ್ರರಾಯರು
ಬಿ. ಎಸ್‌ಸಿ.

ಅವರಿಂದ

'ಅಮ್ಮಾ, ರೈಲು ಬಿದ್ದು ಬಿಟ್ಟರೆ?' ಎಂದಿತು.

★

ಹತ್ತಿಕ್ಕಿದ ಬಯಕೆಗಳ ವಿಕೃತವೇಷವೇ ಕನಸು. ಗಾಡಿಯಲ್ಲಿ ಕಂಡ ಆ ಮುದ್ದಾದ ಹುಡುಗಿ ಮನಸ್ಸನ್ನು ಸೆಳೆದುಕೊಂಡಿತು. ಆ ಹತ್ತಿಕ್ಕಿದ ಮಮತೆ ಎಷ್ಟೊಂದು ಕಳವಳಕ್ಕೆ ಗುರಿಮಾಡಿತು?

★

ಹುಬ್ಬಳ್ಳಿಯಿಂದ ಗದುಗಿಗೆ ಟಿಕೆಟ್ಟನ್ನು ಕೊಂಡು ರೈಲು ಹತ್ತಿದೆ. ಜೇಬಿನಲ್ಲಿರುವ ಗಡಿಯಾರವನ್ನು ತೆಗೆದು ನೋಡಿದೆ. ಹನ್ನೊಂದು ಘಂಟೆ ಹತ್ತು ನಿಮಿಷ. ಇನ್ನೂ ಹದಿನೆಂಟು ನಿಮಿಷಗಳಿವೆ ಎಂದುಕೊಂಡೆ. ಬೇಸಗೆಯ ಕಾಲ; ಬಿಸಿಲು ತುಂಬ ಜೋರಾಗಿತ್ತು. ಗಾಡಿಯಲ್ಲಿ ಗದ್ದಲವೂ ವಿಶೇಷವಾಗಿರಲಿಲ್ಲ. ನಾನೊಬ್ಬನೇ ಕುಳಿತಿದ್ದೆ ಒಂದು ಡಬ್ಬಿಯಲ್ಲಿ. ಸ್ಟೇಶನ್ನಿನ ಮೇಲೆ ಹುಡುಗನು "Times" ಎಂದು ಕೂಗುತ್ತ ಬಂದನು. "ಒಂದು ಪೇಪರಾದರೂ ಇರಲಿ; ಹೊತ್ತೇ ಹೋಗುವುದಿಲ್ಲ. ಸೆಕೆಯಲ್ಲಿ ಗಾಳಿ ಹಾಕಿಕೊಳ್ಳುವುದಕ್ಕಾದರೂ ಆದೀತು" ಎಂದು ಒಂದಾಣೆ ಕೊಟ್ಟೆ.

ಸ್ವಲ್ಪ ಹೊತ್ತಿನ ಮೇಲೆ ಒಬ್ಬ ಹೆಂಗುಸು ತನ್ನ ಚಿಕ್ಕ ಮಗಳನ್ನು ಕರೆದುಕೊಂಡು ನಾನು ಕುಳಿತ ಡಬ್ಬಿಯಲ್ಲಿಯೆ ಪ್ರವೇಶಿಸಿದಳು. ಇಲ್ಲಿಯವರೆಗೆ ಒಬ್ಬನೇ ಇದ್ದುದರಿಂದ ಸ್ವಲ್ಪ ಅವಾಕ್ಕಾದೆನು. 'ಇದು ಹೆಂಗುಸರ ಡಬ್ಬಿಯೇ?' ಎಂದು ಥಟ್ಟನೆ ಕೇಳಿಬಿಡುತ್ತಿದ್ದೆ. ಕೇಳಿದ್ದರೆ ಮಾತ್ರ ಬಹಳ ನಾಚಿಕೆಗೀಡಾಗುತ್ತಿದ್ದೆ.

ರೈಲು ಬಿಟ್ಟಿತು. ಹತ್ತು ಹದಿನೈದು ನಿಮಿಷಗಳಾದನಂತರ ಆ ಸಣ್ಣ ಹುಡುಗಿಯು ಮೆಲ್ಲಗೆ ಮಾತನಾಡಬುಪಕ್ರಮಿಸಿತು. ಅಷ್ಟು ಹೊತ್ತಿನವರೆಗೆ ನಾನು ಅದರ ಕಡೆಗೆ ನೋಡುವುದು, ಅದು ನನ್ನನ್ನೆ ಸಂಶಯಯುಕ್ತವಾದ ದೃಷ್ಟಿಯಿಂದ ನೋಡುವುದು—ಇದೇ ಕೆಲಸವಾಗಿದ್ದಿತು. ಅವಳ ಕಡೆಗಿರುವ ದೃಷ್ಟಿಯನ್ನು ಹೊರಳಿಸಿ ಪೇಪರಿನ ಮೇಲೆ ಹಾಕಿದೆ. ಆದರೂ ಮನಸ್ಸು ಮಾತ್ರ ಹುಡುಗಿಯ ಮಾತಿನ ಕಡೆಗೇ ಇದ್ದಿತು. "ಅಮ್ಮಾ, ರೈಲು ಬಿದ್ದುಬಿಟ್ಟರೆ?" ಎಂದಿತು "ಹಾಗೆಲ್ಲ ಅನಬಾರದು ಸುಮ್ಮನಿರು" ಎಂದಳು ತಾಯಿ. "ಏನಾಗ್ತದಮ್ಮಾ?" ಎಂದು ತುಂಬಾ ಕುತೂಹಲದಿಂದ ಕೇಳಿತು ಹುಡುಗಿ. "ಎಲ್ಲರೂ ಸತ್ತು ಹೋಗ್ತೇವೆ" ಎಂದು ಗಂಭೀರಮುದ್ರೆಯಿಂದ ಉತ್ತರ ಬಂತು. 'ಆರೇಳು ವರುಷದ ಹುಡುಗಿ, ಎಷ್ಟು ಸ್ವಚ್ಛ ಉಚ್ಚಾರ!' ಎಂದುಕೊಂಡೆ. ನೀಟಾದ ಮೂಗು, ಚಂಚಲದೃಷ್ಟಿ. ಆ ಹುಡುಗಿ ನನ್ನನ್ನು ಮತ್ತಷ್ಟು ಆಕರ್ಷಿಸಿತು. ಏನೋ ಯೋಚಿಸುತ್ತಿರುವ ಹಾಗೆ ಕಾಣಿಸಿತು. ಕೂಡಲೇ ಹುಡುಗಿ ಕೇಳಿತು: "ಸತ್ತೋಗೋದು ಅಂದರೆ ಏನಮ್ಮಾ?" "ಹಾಗೆಲ್ಲ ಕೇಳಬಾರದು ನಿನಗೆ ತಿಳಿಯೋದಿಲ್ಲ ಸುಮ್ಮನಿರು" ಸ್ವಲ್ಪ ಸಿಟ್ಟಿನಿಂದಲೇ ಹೇಳಿದಳು ಅವಳ ಅಮ್ಮ.

ನನ್ನ ಎದೆಯು ಡವಡವನೆ ಬಡಿಯತೊಡಗಿತು. 'ನಿಜವಾಗಿಯೂ ರೈಲು ಬಿದ್ದುಬಿಟ್ಟರೆ.., ನಾವೆಲ್ಲರೂ ಸತ್ತುಹೋದರೆ.., ದೀರ್ಘ ಗಾಯಗಳಾದರೆ.., ಆಜೀವ ಪರಾವಲಂಬಿಗಳಾಗುವ ಹೊತ್ತು ಬಂದರೆ..' ಎಂದು ಇಲ್ಲದ ಸಲ್ಲದ ಯೋಚನೆಗಳು ಸುಳಿದಾಡಹತ್ತಿದುವು. 'ಚಿಕ್ಕ ಮಗುವಿನ ಮಾತುಗಳು ನಿಜವಾದರೆ, ಏನು ಗತಿ?' ಎಂಬ ಭಯವೂ ಬೆರತಿತು.....

'ಎಲ್ಲರಿಗೂ ಆದ ಗತಿಯು ನನಗೂ ಉಂಟು. ಇಂಥ ಯೋಚನೆ ಯಾಕೆ? ಯಾವುದು ಒದಗಿದರೂ ಎದುರಿಸಬೇಕು. ತಪ್ಪಿಸಲು ಸಾಧ್ಯವಿಲ್ಲ ಆಗುವುದೇ ಇದ್ದರೆ!' ಎಂದು ಧೈರ್ಯಗೊಂಡು ಹೇಳಿ, ಪುನಃ ಪೇಪರಿನಲ್ಲಿ ಮನಸ್ಸು ಹಾಕಿದೆ.

ರೈಲು ಹಾಗೆಯೇ ಸಾಗಿತ್ತು. ಮಧ್ಯಾಹ್ನದ ಸಮಯ. ಊಟ ಬೇರೆ ಆಗಿತ್ತು. ಹಾಗೆಯೇ ನಿದ್ರೆ ಬಂದಿತು. ಕಿಟಕಿಗೆ ಆತು ಕೊಂಡು ಕಣ್ಣು ಮುಚ್ಚಿದೆ. ಹೊರಗೆ ಬಿಸಿಲು ಬಲು ತೀಕ್ಷ್ಣ ವಾಗಿತ್ತು. ಒಳಗೆ ತಾಪ, ಸೆಕೆ. ಸರಿಯಾಗಿ ನಿದ್ರೆ ಬರಲೊಲ್ಲದು. ಐದ ನಿಮಿಷಗಳಲ್ಲಿ ಎರಡು ಸಲ ಕಣ್ಣು ತೆರೆಯುವುದೂ, ಒಂದು ಮಗ್ಗಿಲಿನಿಂದ ಮತ್ತೊಂದು ಮಗ್ಗಿಲಿಗೆ ತಿರುಗುವುದೂ ನಡೆಯಿತು. ಆ ಹುಡುಗಿ ಒಂದು ಬಾಕಿನಿಂದ ಇನ್ನೊಂದರ ಮೇಲೆ ಹೋಗು ವುದು, ಅಲ್ಲಿ ನೋಡುವುದು ಇಲ್ಲಿ ನೋಡುವುದು ನಡೆಯಿಸಿತ್ತು. “ಗದಗು ಎಷ್ಟು ದೂರವಮ್ಮಾ?” “ಹೊಲದಾಗ ಚಿಗರಿ ಅವ ನೋಡವಮ್ಮಾ” ಎಂದು ಒಮ್ಮೆ ಎಂದರೆ ಮಗುದೊಂದು ನಿಮಿಷದಲ್ಲಿ “ಬಾ ಬಾ” ಎಂದು ಹೊಲದಲ್ಲಿರುವ ಹುಡುಗರನ್ನು ಕರೆಯುತ್ತಿದ್ದಿತು ಹುಡುಗಿ. ತಾನೇ ಜೋರಾಗಿ ಹೋಗುತ್ತೇನೆಂಬ ಉತ್ಸಾಹದಿಂದ ನಗುತ್ತಿತ್ತು.

* * *

ಹೀಗೆಯೇ ಸ್ವಲ್ಪಹೊತ್ತು ಕಳೆದಿರಬಹುದು. ನಾನು ಮಗ್ಗಿಲಿಗೆ ತಿರುಗುವ ಹೊತ್ತಿಗೆ ಆ ಹುಡುಗಿಯು ಮೆಲ್ಲನೆ ಬಾಗಿಲಕಡೆಗೆ ಹೋಯಿತು, ತಾಯಿಯು ಕರೆದಳು. “ಇಲ್ಲಿ ಬಾ ಅಲ್ಲಿ ಹೋಗ ಬಾರದು”. “ಇಲ್ಲಿ ನೋಡವಮ್ಮಾ....” ಎಂದು ಏನೋ ಹೇಳುತ್ತ ಬಾಗಿಲಿನಮೇಲೆ ಭಾರಹಾಕುವ ಹೊತ್ತಿಗೆ ಬಾಗಿಲು ತೆರೆದುಬಿಟ್ಟಿತು; ಮಗುವು ಮುಂದಕ್ಕೆ ಉರುಳಿತು. ತಾಯಿಯು “ಅಯ್ಯೋ..” ಎಂದವಳೆ ಬಾಗಿಲಿನ ಕಡೆಗೆ ಧಾವಿಸಿದಳು. ನಾನೂ ಅವಳ ಹಿಂದೆಯೇ ಓಡಿದೆ. ಆದರೇನು! ನಾನು ಬಾಗಿಲಿನ ಬಳಿಗೆ ಹೋಗುವ ಹೊತ್ತಿಗೆ ಅವಳು ರೈಲಿನಿಂದ ಕೆಳಕ್ಕೆ ಹಾರಿದ್ದಳು. ಗಾಬರಿಯಾಗಿ ಸರಪಳಿಯನ್ನೆಳೆದೆ. ಗಡಗಡ ಸಪ್ಪಳಮಾಡುತ್ತ ರೈಲು ನಿಂತಿತು. ನಾನೂ ಕೆಳಕ್ಕೆ ಹಾರಿದೆ, ಹಿಂದೆ ಓಡಿದೆ. ಗಾರ್ಡನೂ ಉಳಿದ ಕೆಲವರೂ ಇಳಿದರು. ಹುಡುಗಿಯ ಕಡೆಗೆ ಕೆಲವರು, ತಾಯಿಯ ಕಡೆಗೆ ಕೆಲವರು ಓಡಿದರು. ನಾನು ತಾಯಿಯನ್ನು ನೋಡಿಕೊಂಡು ಹುಡುಗಿಯ ಬಳಿಗೆ ಹೋಗಬೇಕೆಂದು ನಿಶ್ಚಯಿಸಿ ಓಡಿದೆ. ತಾಯಿಯ ಬಳಿಯಲ್ಲಿ ನಿಂತೆ. ತಲೆಯ ಹಿಂಭಾಗವು ಒಡೆದು ರಕ್ತವು ಹರಿಯುತ್ತಿತ್ತು. ಬಟ್ಟೆಗಳೆಲ್ಲವೂ ಕೆಂಪಾಗಿದ್ದುವು. “ನನ್ನ ಮಗು, ನನ್ನ ಮಗು!” ಎಂದು ಕೂಗಿದಳು. ಅಷ್ಟರಲ್ಲಿಯೇ ಹುಡುಗಿಯನ್ನು ಕರೆದುಕೊಂಡು ಕೆಲವರು ಬಂದರು. ಆ ಮಗುವಿಗೆ ಕೈಯಮೇಲೂ, ಮುಖದಮೇಲೂ ಸ್ವಲ್ಪ ಕೆತ್ತಿದ ಗಾಯಗಳಾಗಿದ್ದುವೇ ಹೊರತು ವಿಶೇಷ ಧಕ್ಕೆಯೇನೂ ಆಗಿರಲಿಲ್ಲ. ತುಂಬಾ ಜೋರಾಗಿ ಅಳುತ್ತಿತ್ತು. ನಾನೇ ಸಮಾಧಾನಮಾಡಿದೆ! “ಹೋಯಿತೇಳು. ನಾನು ಮಂತ್ರ ಹಾಕ್ತೇನಿ” ಅಂತ. ತಾಯಿಯು ತನ್ನ ಕೈಗಳನ್ನು ಚಾಚಿ ಆ ಹುಡುಗಿಯನ್ನು ಎದೆಗೆ ಅವಚಿಕೊಂಡಳು. ತಲೆಯಮೇಲೆ ಕೈಯನ್ನು ಸವರುತ್ತ ದೀನಸ್ವರದಲ್ಲಿ ನುಡಿದಳು. “ನಾನು ಬದುಕುವುದಿಲ್ಲ. ನನ್ನ ಮಗುವನ್ನು ನೀವೇ ನೋಡಿಕೊಳ್ಳಿ. ಇದೊಂದು ನನ್ನ ಕೊನೆಯ ಬಯಕೆ. ನಿಮ್ಮ ಗುರುತು ನನಗೆ ಹೆಚ್ಚಿಗೆ ಇಲ್ಲ..ಆದರೂ ನಿಮ್ಮನ್ನೇ..ಬೇಡಿ ಕೊಳ್ಳುತ್ತೇನೆ.” ಎಂದು ನನ್ನನ್ನೆ ಕುರಿತು ಅಪೂರ್ಣವಾದ ಮಾತು ಗಳಿಂದ ಹೇಳಿದಳು. ಕಣ್ಣುಗಳಲ್ಲಿ ನೀರು ತುಂಬಿತ್ತು. ಧ್ವನಿಯು ಕುಗ್ಗಿತ್ತು. ಆದರೂ ಗಾಂಭೀರ್ಯವಿತ್ತು. ತುಟಿಯು ನಡುಗುತ್ತಿತ್ತು. ಮುಖವು ಬಿಳುಪಾಗಿತ್ತು. ಅತಿಕಟುವಾದ ನೋವನ್ನು ಸೂಚಿಸುತ್ತಿತ್ತು. ಉಕ್ಕಿಬರುವ ದುಃಖವನ್ನು ತಡೆದಿರುವಕೆಂಬ ಸಂಗತಿಯನ್ನು ಸೂಚಿಸುತ್ತಿತ್ತು ಅವಳ ಧೈರ್ಯ.

ಗಾರ್ಡನು ಇಷ್ಟರಲ್ಲಿ ಪ್ರಥಮ ಚಿಕಿತ್ಸೆಯನ್ನು ನಡೆಯಿಸಿದ್ದನು. ತೊಳೆಯುವುದೂ ಪಟ್ಟಿಕಟ್ಟುವುದೂ, ಎಲ್ಲವೂ ಸಾಂಗವಾಗಿ ನಡೆದಿದ್ದುವು. ಕೊನೆಗೆ ಅವಳನ್ನು ಹೊತ್ತು ತಂದುದಾಯ್ತು. ಹುಡುಗಿಯನ್ನು ನನ್ನ ಹತ್ತಿರವೇ ಕುಳ್ಳಿರಿಸಿಕೊಂಡೆ; ರೈಲು ಬಿಟ್ಟಿತು. ತಾಯಿಯ ಪ್ರಾಣವೂ ಅವಳ ದೇಹವನ್ನು ಬಿಟ್ಟಿತು. ಗಾರ್ಡನೂ ನನ್ನ ಹತ್ತಿರವೇ ಕುಳಿತಿದ್ದ. ನನಗೆ ಅತಿ ಸಂಕಟ ವಾಯ್ತು.

ಎಲ್ಲವೂ ನಿಃಶಬ್ದ. ರೈಲಿನ ಗಡಗಡವೊಂದು ಮಾತ್ರ ಕೇಳಿ ಸುತ್ತಿತ್ತು. ಹುಡುಗಿಯೂ ನಿಃಶಬ್ದವಾಗಿ ಕುಳಿತಿತ್ತು. ನನ್ನ ಯೋಚನೆಗಳು ರೈಲಿಗಿಂತಲೂ ವೇಗವಾಗಿ ಓಡಹತ್ತಿದುವು ‘ಇವರು ಯಾರ ಮನೆಯವರು? ಹುಡುಗಿಯ ಗತಿ ಏನು? ನಾನು ಇವಳನ್ನು ಸಾಕಿ ಸಲಹಲು ಸಮರ್ಥನಾಗಬಹುದೇ. ತಾಯಿಯನ್ನು ಮರೆತು ನನ್ನ ಹತ್ತಿರ ಸೌಖ್ಯವಾಗಿ ಇರುವಳೇ’ ಎಂಬೀ ಕಲ್ಪನೆಗಳು ನನ್ನನ್ನು ಹಣ್ಣಾಗಿ ಮಾಡಿದುವು..........

“ಗದಗ ಸ್ಟೇಶನ್ ಗದಗ!” ಎಂಬ ಪೋರ್ಟರನ ಕೂಗು ನನ್ನನ್ನು ಎಚ್ಚರಿಸಿತು. ಗಡಬಡಿಯಿಂದ ಎದ್ದೆ. ನನ್ನ ಎದುರಿಗೆ ಕುಳಿತಿದ್ದ ಚಿಕ್ಕ ಮಗುವನ್ನೂ ಅವಳ ತಾಯಿಯನ್ನೂ ನೋಡಿ ಆನಂದವು ಉಕ್ಕಿಬಂತು. ಆ ಮಗುವನ್ನು ಎತ್ತಿ ಮುದ್ದಾಡಲೇ ಎನ್ನುವಷ್ಟು ಉದ್ವೇಗವು ಇತ್ತು. ಶಾಂತಚಿತ್ತದಿಂದ ತಡೆದು ಕೊಂಡೆ. ಕಣ್ಣಿನಿಂದ ಒಂದು ಹನಿ ನೀರುಬಿತ್ತು. ಕಣ್ಣೊರಸಿ ಕೊಂಡು ಮೆಲ್ಲಗೆ ಹುಡುಗಿಯ ಹತ್ತಿರ ಹೋಗಿ, ಅವಳ ಕೈಯಲ್ಲಿ ಒಂದು ರೂಪಾಯಿ ಇಟ್ಟೆ. ಅವಳ ತಾಯಿ ಏನೋ ಹೇಳಬೇಕೆಂಬುವಷ್ಟರಲ್ಲಿಯೇ ಲಗುಬಗೆಯಿಂದ ರೈಲು ಬಿಟ್ಟು ಇಳಿದು ಬಿಟ್ಟೆ.

“ಈಗ ಕನಸಿನಲ್ಲಿ ಕಂಡ ಭಯಂಕರ ದೃಶ್ಯವು ನಿಜವಾಗಿದ್ದರೆ’ ಎಂದು ಯೋಚಿಸುತ್ತ ಹೊರಗೆ ಹೊರಟೆ.



ಅಚ್ಚುಕಟ್ಟಿನ ಉಡಿಗೆ-ತೊಡಿಗೆ, ನಿಚ್ಚ ದೀವಳಿಗೆ !

ಕನ್ನಡನಾಡಿನ ಮಹಿಳೆಯರು ಬುದ್ಧಿ-ಸಂಸ್ಕೃತಿಗಳ ದೃಷ್ಟಿಯಿಂದ ಮಿಕ್ಕ ಯಾವ ಪ್ರಾಂತದ ಮಹಿಳೆಯರಿಗಿಂತ ಕಡಿಮೆಯಾಗಿಲ್ಲವಾದರೂ, ಸಮಯಾನುಸಾರ ಮಾರ್ಪಡದ ಅವರ ಸಾಂಪ್ರದಾಯಿಕ ಉಡಿಗೆ ತೊಡಿಗೆಗಳು ಅವರನ್ನು ಕೀಳರನ್ನಾಗಿಸಿವೆ. ಇದಕ್ಕಾಗಿ ಕನ್ನಡಿತಿಯರು ಮಾಡಬೇಕಾದ ಕಾರ್ಯ ಏನೂ ಇಲ್ಲವೇ ?

ಶ್ರೀ. ಹಳಪೇಟೆ ಚಿಂತಾಮಣಿರಾಯರು, ಟಿ. ಸಿ. ಡಿಪ್ಲೋಮಿಸ್ಟ್

"ಸಿಂಪಿಗನೂ, ಇತಿಹಾಸಕಾರನೂ ಒಂದೇ ಹಜ್ಜೆಯಲ್ಲಿ ನಡೆಯುವವರು..... ನಗ್ನ ಜನಾಂಗಗಳಿಗೆ ಇತಿಹಾಸವೇ ಇಲ್ಲ. ಸಿಂಪಿಗನ ಅಸ್ತಿತ್ವವು ಅದರಲ್ಲಿ ಬರುವವರೆಗೂ ಅವರ ಇತಿಹಾಸವನ್ನು ಬರೆಯಲಾಗುವುದಿಲ್ಲ. ಎರಡು ಕಾಲಿನ ಕಾಡುಪ್ರಾಣಿಯನ್ನು ಇಂದಿನ ಸಭ್ಯ ನಾಗರಿಕನನ್ನಾಗಿಸಿದವನು ಸಿಂಪಿಗ. ಅವನಿಂದ ಸಿದ್ಧವಾದ ಉಡುಪಿನಿಂದಲೆ ಆ ಪ್ರಾಣಿಯು ಇಂದು ರಾಜನೊ, ರೈತನೊ ಆಗುವನು"

—ಕಾರ್ಲಾಯಿಲ್.

ಮಾನವನು ದೇವನಿರ್ಮಿತನು ಆಹುದೋ ಅಲ್ಲವೋ ಎಂಬ ವಾದವನ್ನು ನಾವು ಬಿಟ್ಟುಬಿಡೋಣ ; ಇಂದು ನಮ್ಮೆದುರು ಕಾಣುವ ಪ್ರತಿಯೊಬ್ಬ ಮನುಷ್ಯನೂ ಸಿಂಪಿಗನಿಂದ ನಿರ್ಮಿತನಾಗಿರುವ (Tailor made person.) ನೆಂದು ಧಾರಾಳವಾಗಿ ಹೇಳಬಹುದು. ಮೇಲೆ ಕೊಟ್ಟ ಮಹನೀಯನ ಮಾತೇ ಅದಕ್ಕೆ ಸಾಕ್ಷಿ. ಪ್ರತಿಯೊಂದು ಮುಂದುವರಿದ ಜನಾಂಗವೂ, ಉಡುಪಿನ ಅಚ್ಚುಕಟ್ಟುತನಕ್ಕೆ ಕೊಡುತ್ತಿರುವ ಮಹತ್ತ್ವದಿಂದ ಮೇಲಿನ ಮಾತಿನ ಸತ್ಯತೆಯು ಅನುಭವ ನಮಗೆ ಆಗದಿರದು. ಮನುಷ್ಯನು ಸಾಮಾನ್ಯವಾಗಿಯೇ ಸೌಂದರ್ಯಪ್ರಿಯನು. ಪುರುಷನೆ ಆಗಲಿ, ಸ್ತ್ರೀಯೆ ಆಗಲಿ, ತೀರ ಪ್ರಾಚೀನ ಕಾಲದಲ್ಲಿ ನಗ್ನಸ್ಥಿತಿಯಲ್ಲಿದ್ದಾಗಲೂ ನಿಸರ್ಗನಿರ್ಮಿತ ಸುಗಂಧ ಪುಷ್ಪಗಳನ್ನೊ ಚಿತ್ರವಿಚಿತ್ರದ— ವರ್ಣವರ್ಣದ— ಗಿಡದ ತೊಗಟೆಗಳನ್ನೊ, ಪಶುಗಳ ಚರ್ಮಗಳನ್ನೊ ಧರಿಸುತ್ತಿದ್ದರು. ಅದೇ ಭಾವನೆಯೇ ಬೆಳೆಯುತ್ತ ಬೆಳೆಯುತ್ತ, ಕಾಲಾನುಸಾರ ಮಾರ್ಪಡುತ್ತ, ಅಚ್ಚುಕಟ್ಟಿನ ಸುಂದರ ಉಡಿಗೆ-ತೊಡಿಗೆಗಳನ್ನು ಧರಿಸುವ ಇಂದಿನ ರೀತಿಯ ವರೆಗೆ ಬಂದು ನಿಲುಕಿದೆ. ಈ ಉಡುಪಿನ ಸಾಧನದಿಂದಲೆ ಸಮಾಜದ ಅಚ್ಚುಕಟ್ಟುತನವನ್ನೂ ಕಾಯ್ದುಕೊಳ್ಳುವಂತೆ ಮನುಷ್ಯನು ತಾರತಮ್ಯಗಳನ್ನು

ಉಡಿಗೆ ತೊಡಿಗೆಗಳಲ್ಲಿಯ ಸಾಂಪ್ರದಾಯಿಕ ಸೌಂದರ್ಯ

ಗೊತ್ತುಮಾಡಿಕೊಂಡಿದ್ದಾನೆ ; ಅಥವಾ ಉಡುಪಿನ ಈ ಸಾಧನವೇ ತನ್ನ ಶಕ್ತಿಯಿಂದ ಆ ಸ್ಥಾನವನ್ನು ಪಡೆದಿದೆ ಎಂದೂ ಹೇಳಬಹುದು. ಒಬ್ಬನು ಸೈನ್ಯದ ಮುಖ್ಯಾಧಿಕಾರಿಯಾಗಿರುವನೆಂದು ಕ್ಯಾಪ್ಟನ್ನನ ಉಡುಪನ್ನು ಧರಿಸುವನು—ಎನ್ನುವುದಕ್ಕಿಂತ ಅವನು ಅಂತಹ ಉಡುಪನ್ನು ಧರಿಸಿರುವುದರಿಂದಲೇ ಅವನನ್ನು ಕ್ಯಾಪ್ಟನ್ನನೆಂದು ತಿಳಿಯಲಿಕ್ಕಾಗುವುದು ಎಂಬ ಮಾತು ಹೆಚ್ಚು ಸಯುಕ್ತಿಕವಾಗಬಹುದು. ಈ ತಾರತಮ್ಯಭಾವ ಇಂದೆಯೆ ಬಂದಿದೆ—ಹಿಂದೆ ಇರಲಿಲ್ಲವೆಂದಲ್ಲ. ನಮ್ಮ ಭಾರತದಲ್ಲಿ ಆರ್ಯರು ತಮ್ಮ ಹೆಮ್ಮೆಯನ್ನು ಪ್ರಕಟಿಸುವಾಗ ಅನಾರ್ಯರು ತಮಗಿಂತಲೂ ಹೆಚ್ಚಿನ ತರದ ಉಡಿಗೆ-ತೊಡಿಗೆಗಳನ್ನು ಧರಿಸದಂತೆ ನೋಡಿಕೊಳ್ಳುತ್ತಿದ್ದರೆಂಬುದಾಗಿ ಇತಿಹಾಸವು ಹೇಳುತ್ತದೆ. ಮಾನವನು ಹೆಚ್ಚು ಹೆಚ್ಚು ಸುಧಾರಣೆ ಹೊಂದಿದಂತೆ ಉಡುಪಿನಲ್ಲಿರುವ ಮಹತ್ತ್ವವು ಹೆಚ್ಚುತ್ತಲೇ ಸಾಗಿದೆ. ಇಂದು ಯಾವನೇ ಒಬ್ಬ—ರಾಜನಿರಲಿ, ದರಿದ್ರನಿರಲಿ—ಅವನು ತನ್ನ ಮನೆಯಲ್ಲಿ ಪಂಚಪಕ್ವಾನ್ನಗಳನ್ನು ಉಣ್ಣುವನೆ, ಕಂದಮೂಲಗಳನ್ನು ತಿಂದು ಜೀವಿಸುತ್ತಿರುವನೆ— ಎಂಬುದನ್ನಾರೂ ಕೇಳರು. ಮೊಟ್ಟಮೊದಲು ಸಮಾಜಕ್ಕೆ ಕಾಣುವುದು ಅವನ ಬಾಹ್ಯಸ್ವರೂಪ. ಇಂದು ನಮ್ಮ ಸಾಮಾಜಿಕಜೀವನದ ಆಳಗೋಲು ಆಹಾರವಲ್ಲ, ಉಡಿಗೆ-ತೊಡಿಗೆ! ಮೋಕ್ಷ ಕೊಡುವ ಸ್ವರ್ಗದೊಳಗಿನ ದೇವನಿಗೆ ನಮ್ಮ ಮನದ ಶುಚಿರ್ಭೂತತನವು ಅವಶ್ಯವಾಗಿದ್ದರೆ, ಸಮಾಜದಲ್ಲಿ ಸುವ್ಯವಸ್ಥಿತ ಜೀವನ ನಾಗಿಸುವುದಕ್ಕಾಗಿ ಅರ್ಥಾತ್ ಸಮಾಜಪುರುಷನ ಪೂಜೆಗಾಗಿ ಮನುಷ್ಯನು ಬಾಹ್ಯಸ್ವರೂಪವನ್ನು ಅಚ್ಚುಕಟ್ಟಾಗಿ ಇಟ್ಟುಕೊಳ್ಳುವುದು ಅತ್ಯವಶ್ಯವಾಗಿದೆ. ಅಂತೆಯೆ ಸುಧಾರಣೆಯ ಅತ್ಯುನ್ನತ ಶಿಖರವನ್ನೇರಿ ನಿಂತ ಸ್ವತಂತ್ರ ರಾಷ್ಟ್ರಗಳು ತಂತಮ್ಮ ಜನಾಂಗದ ಉಡಿಗೆ ತೊಡಿಗೆಗಳ ವಿಷಯದಲ್ಲಿ ಅತ್ಯಂತ ದಕ್ಷತೆ

ವಹಿಸುತ್ತಲಿವೆ. ಕಾಯಿದೆ—ಕಾನೂನುಗಳಂತಹ ಉಗ್ರ ಉಪಾಯಗಳಿಂದ ಕೂಡ ಉಡುಪಿನ ಅಚ್ಚುಕಟ್ಟುತನವನ್ನು ಕಾಯಲು ಯತ್ನಿಸುತ್ತಿವೆ.

ಇಂತಹ ಒಂದು ಮಹತ್ತ್ವದ ವಿಷಯದ ಬಗ್ಗೆ ಭಾರತದಲ್ಲಿ ಯಾವ ಸ್ಥಿತಿ ಇದೆ ಎಂಬ ದೊಡ್ಡ ಮಾತಿಗೆ ತಕ್ಕೆ ಹಾಯುವುದು ಬೇಡ; ಸಣ್ಣ ಕ್ಷೇತ್ರವನ್ನೇ ಆರಿಸಿಕೊಳ್ಳೋಣ! ನಮ್ಮದಾದ ಕರ್ನಾಟಕದಲ್ಲಿ ಉಡಿಗೆ-ತೊಡಿಗೆಗಳ ಶಕ್ತಿಯಂತಹ ಒಂದು ಮಹತ್ತ್ವದ ರಾಷ್ಟ್ರನಿರ್ಮಾಣ ಶಕ್ತಿಯ ಕಡೆಗೆ ನಾವು ಯಾವ ದೃಷ್ಟಿಯಿಂದ ನೋಡುತ್ತಿದ್ದೇವೆ? ಯಾವ ಸುಧಾರಣೆಗಳನ್ನು ಮಾಡಿಕೊಂಡಿದ್ದೇವೆ? ಮಾಡಿಕೊಳ್ಳುತ್ತಲಿದ್ದೇವೆ? ಹೀಗೆಂದಾಕ್ಷಣವೇ ಅನೇಕರು ಈ ವಿಷಯವನ್ನೇ ಗೇಲಿಮಾಡಿ ಬಿಡುವ ಸಾಹಸ ಮಾಡಬಹುದು. ಅಂತಹರು ಕೂಡ ಸ್ವಲ್ಪ ಸೂಕ್ಷ್ಮವಾಗಿ ವಿಚಾರಿಸಲಿ, ನಮ್ಮ ನೆರೆಹೊರೆಯ ಪ್ರಾಂತಗಳ ಜನರು ರಾಜಕೀಯ ಪ್ರಪಂಚದಲ್ಲಿ ನಮ್ಮಂತೆಯೆ ಗುಲಾಮರಾಗಿದ್ದರೂ,ತಮ್ಮ ತಮ್ಮ ಉಡುಪಿನ ವೈಶಿಷ್ಟ್ಯವನ್ನು ಕಾಲಾನುಸಾರ ಮಾರ್ಪಡಿಸುತ್ತ ನಡೆದದ್ದನ್ನು ನೋಡಲಿ. ಗುಜರಾತಿಗಳು, ಮರಾಟಿಗರು, ಬಂಗಾಲಿಗಳು, ಎಲ್ಲರೂ 'ಹೊತ್ತುಹೊತ್ತಿಗೆ ಹೊಸಪರಿಯ ಸಿಂಗರದ' ಉಡಿಗೆ-ತೊಡಿಗೆಗಳನ್ನು ನಿರ್ಮಿಸಿ ಬಳಸುತ್ತಿದ್ದಾರೆ. ಆಯಾ ಪ್ರಾಂತದ ವೈದಿಕ-ಲೌಕಿಕ ಧುರೀಣರೆಲ್ಲರೂ ಜನತೆಯ ಸೌಂದರ್ಯಭಾವನೆಗೆ ಬೆಂಬಲ ಕೊಡುತ್ತ ಬಂದಿದ್ದಾರೆ. ನಮ್ಮಲ್ಲಿಯೊ, ಎಲ್ಲ ಅಂಧಾನುಕರಣ. ಹಿಡಿದ ದಾರಿ ಬಿಡಲಾರರು. ಯಾವುದೊಂದು ಬಿರುಗಾಳಿ ಬರುತ್ತಲೇ ಅದರಲ್ಲಿ ತೇಲಿ ಹೋಗಿ, ತಮ್ಮ ಅಸ್ತಿತ್ವವನ್ನೇ ಮರೆತುಬಿಡುವ ಸ್ವಭಾವವು ನಮ್ಮ ಜನರಲ್ಲುಂಟು. ಎಂತಲೆ ನಮ್ಮ ಉಡಿಗೆ-ತೊಡಿಗೆಗೊಂದು ಪರಂಪರೆ ಉಳಿದಿಲ್ಲ. ಮರಾಟಿಗರು ನಮ್ಮನ್ನಾಳಿದರು; ಅವರ ಉಡುಪಿನ ಆದರ್ಶವನ್ನು ಸ್ವೀಕರಿಸಿದೆವು. ಮುಸಲ್ಮಾನರು ಆಳಿದರು; ಅವರ ರೀತಿಯನ್ನೂ ಸ್ವೀಕರಿಸಿದೆವು. ಈಗ ಕೂಡ ಇಂದು ಭಾರತದ ರಾಜಕಾರ್ಯದಲ್ಲಿ ಮುಂದಾಳುಗಳಾಗಿ ನಿಂತಿದ್ದ ಒಂಗಾಲ್ಯ, ಗುಜರಾತಿಗಳ ಉಡುಪಿನ ಆದರ್ಶವನ್ನು ಸ್ವೀಕರಿಸುತ್ತ ಸಾಗಿದ್ದೇವೆ. ಕಣ್ದೆರೆದು ನೋಡಿದವರಿಗೆ ಈ ಮಾತು ನಿಚ್ಚಳವಾಗಿ ಕಾಣುವುದು.

ಉಡಿಗೆ-ತೊಡಿಗೆಯ ಸುಧಾರಣೆ-ಸುವ್ಯವಸ್ಥೆಗಳ ಬಗೆಗೆ ನಾಡಿನಲ್ಲಿಯ ಪ್ರತಿಯೊಂದು ವ್ಯಕ್ತಿಯೂ ಹೊಣೆಗಾರಿಕೆಯಿಂದ ನೋಡಿಕೊಳ್ಳಬೇಕಾದುದು ಆವಶ್ಯಕ. ಸುಧಾರಿಸಿದ ರಾಷ್ಟ್ರಗಳಲ್ಲೆಲ್ಲ ಹೀಗೆ ಪದ್ಧತಿಯಿದೆ. ಭಾರತದಲ್ಲಿ ವ್ಹಾಯಿಸರಾಯರಾಗಿದ್ದ ಇಂದು ಬ್ರಿಟಿಶ್ ಪಾರ್ಲಮೆಂಟಿನ ಮಂತ್ರಿಗಳಲ್ಲೊಬ್ಬರಾಗಿರುವ ಲಾರ್ಡ್ ಹ್ಯಾಲಿ-

ಹೊಸಕಾಲಕ್ಕೆ ಹೊಂದಿಕೆಯಾದ
ಉಡಿಗೆತೊಡಿಗೆಯ ಸೌಂದರ್ಯ

ಫಾಕ್ಸರು ತಮ್ಮ ಉಡುಪಿನ ವಿಷಯವಾಗಿ ತೋರಿಸುತ್ತಿದ್ದ ಅನಾಸ್ಥೆಯನ್ನು ಕಂಡು, ಬೇಸತ್ತು, ಇಂಗ್ಲಂಡಿನ ಸುಪ್ರಸಿದ್ಧ ಹೊಲಿಗೆಯ ವಿಷಯಕ ಮಾಸಪತ್ರಿಕೆಯೊಂದು ಅವರ ಭಾವಚಿತ್ರವನ್ನು ತನ್ನ ಮುಖಪುಟದ ಮೇಲೆ ಹಾಕಿ 'ಇವರು ಹೀಗೆ ಮಾಡುವುದು ಸರಿಯೆ?' ಎಂದು ಟೀಕಿಸಿ ಜನತೆಯನ್ನೂ ಅವರನ್ನೂ ಎಚ್ಚರಿಸಲು ಹಿಂದೆಮುಂದೆ ನೋಡಲಿಲ್ಲ. ನಮ್ಮಲ್ಲಿ ಉಡುಪಿನ ವ್ಯವಸಾಯವನ್ನು ಕೈಕೊಂಡ ಸಿಂಪಿಗರಿಗೆ ನಮ್ಮ ಸಮಾಜದಲ್ಲಿಯೇ ಗಣ್ಯಸ್ಥಾನವಿಲ್ಲ; ಇನ್ನು ಅವರು ಮಾಡುತ್ತಿರುವ ಕಾರ್ಯದಿಂದ ರಾಷ್ಟ್ರಪೋಷಣೆಯ ಗುಣಗಳಿಗೆ ಸಹಾಯವಾಗುವುದು ಎತ್ತಣ ಮಾತೊ!

ಮೇಲಿಂದ ಮೇಲೆ ನಮ್ಮ ಸಂಸ್ಕೃತಿ ಸಂವರ್ಧನೆಗಾಗಿ ನೆರೆಯುತ್ತಲಿದ್ದ ಪರಿಷತ್ತು, ಪ್ರದರ್ಶನ, ಜಾತ್ರೆಗಳಲ್ಲಿ ನಮ್ಮ ಉಡುಪಿನ ವೈಶಿಷ್ಟ್ಯದ ವಿಚಾರ ಚರ್ಚೆಯಾಗಬೇಕಾದುದೂ ತುಂಬ ಅಗತ್ಯ. ಉಡಿಗೆ-ತೊಡಿಗೆಗಳ ಬೆಡಗನ್ನು ಹೆಚ್ಚಿಸಿ ತೋರಿಸಲಿಕ್ಕೆ ನಾಟಕವಂತೂ ಹಿರಿಯ ಸಾಧನವು. ನಾಟಕವು ಸಮಾಜದ ಪ್ರತಿಬಿಂಬವೆಂದು ಸಾಹಿತಿಗಳು ಬೇಕಾದರೆ ಹೇಳಲಿ; ಉಡುಪಿನ ವಿಷಯದಲ್ಲಿ ಮಾತ್ರ ಸಮಾಜವೇ ನಾಟಕದ ಪ್ರತಿಬಿಂಬವೆಂಬುದರಲ್ಲಿ ಸಂಶಯವಿಲ್ಲ. ನಮ್ಮ ನೆರೆಯ ಪ್ರಾಂತೀಯರಾದ ಮರಾಟಿಗರ ಉಡುಪಿನಲ್ಲಿ ಕ್ರಾಂತಿಯನ್ನು ಮಾಡಿದ ಶ್ರೇಯವು ಅಲ್ಲಿಯ ನಾಟಕ ಮಂಡಲಿಗಳಿಗೇ ಸೇರಿದುದು. ನಮ್ಮಲ್ಲಿ ನಾಟಕ ಕಂಪನಿಗಳೇ ಕಡಿಮೆ; ಇದ್ದರೂ ಪೌರಾಣಿಕವೋ, ಐತಿಹಾಸಿಕವೋ ನಾಟಕಗಳನ್ನಾಡುವಂತಹವೇ ಹೆಚ್ಚು. ಇವುಗಳಲ್ಲಿ ಇಂದಿನ ಉಡಿಗೆ-ತೊಡಿಗೆಗಳ ಬೆಡಗು ಎಲ್ಲಿ ದೊರೆಯಬೇಕು?

ಪುರುಷರದೇ ಈ ಸ್ಥಿತಿಯಾದ ಮೇಲೆ ಸ್ತ್ರೀಯರ ಉಡಿಗೆ-ತೊಡಿಗೆಯ ವಿಷಯವನ್ನಂತೂ ಕೇಳುವುದೇ ಬೇಡ. ಅವರು ತಮ್ಮ ಉಡುಪಿನ ವಿಷಯದಲ್ಲಿ ಪರಂಪರೆಯನ್ನು ಕಾಯ್ದುಕೊಳ್ಳುವುದರಲ್ಲಿ ಪುರುಷರನ್ನು ಹಿಂದೆ ಹಾಕಿದ್ದಾರೆ. ಭಾರತೀಯರಾದ ನಾವು ಇಂದಿನವರೆಗೂ ಅಚ್ಚಳಿಯದೆ ಕಾಯ್ದುಕೊಂಡು ಬಂದ ಮುಖ್ಯ ಸಂಗತಿಗಳೆಂದರೆ ಎರಡು; ಒಂದು ನಮ್ಮ ಗುಲಾಮಗಿರಿ, ಇನ್ನೊಂದು ಸ್ತ್ರೀಯರ ಉಡುಪು. ಭಾರತಮಹಿಳೆಯರು ಕಾಯ್ದುಕೊಂಡು ಬಂದ ಈ ರೂಢಿಯ ಮೂಲಕ ಪ್ರಪಂಚದ ಸ್ತ್ರೀಯರ ಲಕ್ಷ್ಯವನ್ನೇ ತಮ್ಮ ಕಡೆಗೆ ಎಳೆದುಕೊಂಡಿದ್ದಾರೆ. ಜಗತ್ತಿನ ಸುಂದರ ಉಡುಪುಗಳಲ್ಲಿ ಭಾರತದ ನಾರಿಯರ ಸೀರೆಯು ಅತ್ಯಂತ ಶ್ರೇಷ್ಠವೆಂದು ಅನೇಕ ಪರರಾಷ್ಟ್ರೀಯ ಸೌಂದರ್ಯೋಪಾಸಕರೂ ಹೊಗಳಿದ್ದಾರೆ. ಈ ಮಾನದಲ್ಲಿ ಕನ್ನಡಿ

(೪೯೯ನೆಯ ಪುಟ ನೋಡಿರಿ)



ನಿ. ಸೂ: ನಮ್ಮಲ್ಲಿ ಬಂದು ಅಸ್ವೀಕೃತವಾದ ಲೇಖನಗಳ ಲೇಖಕರಿಗೆ ಸಂಪಾದಕಮಂಡಲಿ ಮಾಡಿದ ಸೂಚನೆಗಳಿವು. ಲೇಖಕರಲ್ಲದವರು ಇವನ್ನು ಬೇಕಾದರೆ ಓದಲಿ, ಬೇಡವಾದರೆ ಬಿಡಲಿ!

ಆದರ್ಶವಿವಾಹ (ಒಂದು ವಿನೋದ ಪ್ರಬಂಧ)

ಮೂರ್ಖತನವು ಹೊರಡಿಸುವ ನಗೆ ತಿರಸ್ಕಾರಜನ್ಯವಾದುದು; ವಿನೋದಜನ್ಯವಾದುದಲ್ಲ. ತಮ್ಮ ಲೇಖನ ಓದಿ ನಗಬಹುದೆಂಬ ಭಾವನೆ ತಮಗಿದ್ದರೆ ಆ ನಗೆ ಮೊದಲನೆಯ ವರ್ಗಕ್ಕೆ ಸೇರಿದುದು.

ನಾರೀಮಣಿ ಅಂದರೆ ಕೂತಲ್ಲೇ ಮಣಿ (ಚಿಕ್ಕದೊಂದು ಚಿತ್ರ)

ನಮ್ಮ ದೀಪಾವಳಿಯ ಸಂಚಿಕೆಯ ಬೆಳಕು ತಮ್ಮ ನಾರೀಮಣಿಗೆ ಸಾಲದು. ಅದು ತಮ್ಮ ಚಿತ್ರಕ್ಕೆ ಬೆಳಕು ಕೊಟ್ಟರೂ, ಜನ ಕತ್ತಲೆಯಲ್ಲಿ ಅದನ್ನು ಎಸೆಯಬಹುದೆಂಬ ಹೆದರಿಕೆ ನಮಗೆ.

ಮದಿರಾಸುರನ ನಾಶವಸ್ತು (ಪದ್ಯ)

"ಏನಿದು ಏನಿದು ಏನಿದು ಸೊಲ್ಲು?
ಕೇಳುವುದೆಲ್ಲೆಡೆ ಏನಿದು ಗುಲ್ಲು?"
"ಇನ್ನೇನಿಲ್ಲ, ಬೇಕಾದವರು
ಬಾಯಿಗೆ ಬಂದದ್ದೆಲ್ಲ ಬರೆವರು!
ಕವಿತೆ-ಕವನ ಎನ್ನುತ ಕೂಗುವರು!"

ಸಾಹಸೀ ಶ್ರೀಃ ಪ್ರತಿವಸತಿ! (ಸಣ್ಣ ಕತೆ)

ಹೆಸರು ಸಂಸ್ಕೃತದಲ್ಲಿದ್ದರೇನಾಯಿತು; ಬರೆವಣಿಗೆ, ತಮ್ಮ ಕಥಾನಾಯಕನಿರ್ಮಿತಿ ಇವು ತೀರ ಅಸಂಸ್ಕೃತ!

ಕುಂಭಕರ್ಣಸಮಾಜವೆ ಎದ್ದೇಳು! (ಪದ್ಯ)

ಪಾಪ, ಸುಮ್ಮನೆ ಏನಾದರೂ ಕಹಿಮಾತಾಡಿ ನಿಮ್ಮ ಮನಸ್ಸನ್ನಾದರೂ ಯಾಕೆ ನೋಯಿಸೋಣ!

ಬುದ್ಧಿಯಿಲ್ಲದ ದೇವರು (ಉತ್ತರ)

ಅವರು ಬರೆದದ್ದು ಹರಟೆಯೆಂದು. ನೀವು ತಾರ್ಕಿಕರಾಗಿ ಅವರ ಮಾತುಗಳನ್ನು ಖಂಡಿಸಹೊರಟಿದ್ದೀರಿ. ನೀವು ಹರಟೆ ಹೊಡೆಯುವಾಗ ಆಡಿದ ಮಾತುಗಳಲ್ಲಿ ವಿಮರ್ಶಾಪೂರ್ವಕ ಆಡುವ ಮಾತು ಎಷ್ಟು ಹೊರಡಬಹುದು?

ಸಮಾಜಸುಧಾರಣೆಯೂ ಸ್ತ್ರೀಶಿಕ್ಷಣವೂ (ನಿಬಂಧ)

ನೂರಕ್ಕೆ ೬೫ ರಷ್ಟು ಗುಣ ಬೀಳುವಂತಹ ಲೇಖನ ಇದ್ದರೂ ಹೆಂಗುಸರ ಲೇಖನ ಪ್ರಕಟಿಸಲಾಗುವುದೆಂದು ಜಯಂತಿ ತನ್ನ ಸ್ತ್ರೀದಾಕ್ಷಿಣ್ಯ ತೋರಿಸಿದೆ; ಆದರೆ........

ಸತಿ (ಸಣ್ಣ ಕತೆ)

ನಮ್ಮ ಸಂಪಾದಕ ಮಂಡಲಿಯ ಪ್ರತಿಯೊಬ್ಬ ಸದಸ್ಯನಿಗೂ, ತಮ್ಮ ಹಸ್ತಪ್ರತಿಯ ೨ ಪುಟಗಳನ್ನೋದಿ ಮುಗಿಸಿ ೩ ನೆಯ ಪುಟಕ್ಕೆ ಹೋಗುವಷ್ಟು ತಾಳ್ಮೆ ಉಳಿಯಲಿಲ್ಲವಂತೆ. ಆದರೆ ಹೊಣೆಗಾರಿಕೆಯನ್ನರಿತವರಾದುದರಿಂದ ತಮ್ಮ ಕೈಬರೆಹದ ಪ್ರತಿಯ ಸುರಕ್ಷಿತತೆಯ ಬಗ್ಗೆ ಪ್ರತಿಯೊಬ್ಬರೂ ಸಕಾಲದಲ್ಲಿ ವಿವೇಕವನ್ನಾಶ್ರಯಿಸಿದ್ದಾರೆ.

ಭಯದ ನಗೆ (ಒಂದು ದೃಶ್ಯ)

ಪ್ರಕಟಿಸಲಿಕ್ಕಾಗದು, ಕ್ಷಮಿಸಿ!

(೪೬೮ನೆಯ ಪುಟದಿಂದ ಮುಂದುವರಿದುದು)

...ರಿಗೂ ಪಾಲು ಇಲ್ಲದೆ ಇಲ್ಲ. ಆದರೇನು! ...ವರ ಉಡುಪುಗಳಲ್ಲಿ ಕಾಲೋಚಿತ ...ಂದರ್ಯಕ್ಕೆಡೆಯಿಲ್ಲ. ಬಿಕ್ಕ ಪ್ರಾಂತ ...ಸ್ತ್ರೀಯರಿಗೆ ಸಂಸ್ಕೃತಿಯ ದೃಷ್ಟಿಯಲ್ಲಿ- ...ಗಳಿಗೆ ಹೆಗಲು ಕೊಟ್ಟು ನಿಲ್ಲಬಲ್ಲ ...ಗ್ಯತೆಯಿರುವುದಾದರೂ ಇನ್ನಿತರರಿಗೆ ...ಸ್ಕೃತಿರುವ ಮಾನದಷ್ಟು ಕನ್ನಡಿತಿಯ ...ಸಿಕ್ಕದಿರುವದಕ್ಕಿರುವ ಕಾರಣಗಳಲ್ಲಿ, ...ವರ ಉಡುಪಿನ ಅಂಧಪರಂಪರಾ...ತೆಯೂ ಒಂದು. ಇದರ ಅರ್ಥ ಕನ್ನಡಿತಿ... ಇನ್ನಿತರರಿಗಿಂತ ಉಡಿಗೆ-ತೊಡಿಗೆಗಳಿ...ಗೆ ಕಡಿಮೆ ಖರ್ಚುಮಾಡುವರೆಂದಲ್ಲ. ...ಯುಳ್ಳ ವಸ್ತ್ರ-ಒಡವೆಗಳನ್ನು ಕೊಳ್ಳು...ದರೂ ಅವುಗಳಿಗೊಂದು ಬೆಡಗಿರದು; ಇದ್ದುವುಗಳನ್ನೂ ಅಚ್ಚುಕಟ್ಟಾಗಿ ಇಟ್ಟುಕೊಳ್ಳುವ ಸೌಂದರ್ಯದೃಷ್ಟಿಯಿರದು. ಇದರಿಂದಲೆ ಕನ್ನಡಿತಿಯರು ಓರಣಗೇಡಿಗಳಾಗಿ ಕಂಡು ಸಮಾಜದಲ್ಲಿ ನಗೆಗೀಡಾಗುವರು. ಕನ್ನಡಿತಿಯರಲ್ಲಿ ಸ್ವಹೀನತಾ ಭಾವನೆಯು (Inferiority complex) ಮನೆಮಾಡಿಕೊಂಡಿರುವುದಕ್ಕೂ ಅವರ ಉಡಿಗೆ-ತೊಡಿಗೆಗಳ ಅಂದಗೇಡಿತನವೇ ಕಾರಣವಾಗಿರುವುದು.

ಹಿಂದೆ ಹೇಗೋ ಇತ್ತು; ಹೇಗೋ ಸಾಗಿತು. ಇನ್ನು ಮುಂದೆ ಹಾಗೆ ಸಾಗಲಾರದು; ಸಾಗಬಾರದು. ಇಷ್ಟ ಇದ್ದರೂ ಪೂರಯಿಸುವ ಸಾಧನಗಳಿಲ್ಲದುದರಿಂದ ನಾವು ಸುಮ್ಮನಿರಬೇಕಾಗಿದ್ದಿತು. ಇಂದು ಇಚ್ಛೆ ಇಲ್ಲದಿದ್ದರೂ ಪೂರಯಿಕೆಯು ಅಖಂಡವಾಗಿ ನಡೆದಿರುವಾಗಲಾದರೂ ನಾವು ಎಚ್ಚರಾಗಬೇಡವೇ? ಹಿಂದೆ ಅಂದಚೆಂದದ ಉಡಿಗೆ-ತೊಡಿಗೆಗಳನ್ನು ಧರಿಸಬೇಕೆಂಬ ಇಚ್ಛೆ ಇದ್ದರೂ, ಹಬ್ಬ ಹುಣ್ಣಿವೆಗಳಲ್ಲಿ ಸಹ ತೊಡಬೇಕಾದರೆ ಸಾಕುಸಾಕಾಗುತ್ತಿದ್ದಿತು. ಇಂದು ದಿನವೂ ಅಂತಹ ಉಡುಪನ್ನು ಧರಿಸಬಹುದಾಗಿದೆ. ನಮ್ಮ ಸಮಾಜದಲ್ಲಿಯ ಮೇಲು-ಕೀಳುಗಳನ್ನು ಕಿತ್ತೊಗೆಯಲು, ಸಮಾಜದಲ್ಲಿಯ ಸುಪ್ರಸನ್ನತೆಯನ್ನು ಕಾಯಲು ಮುಖ್ಯಸಾಧನ, ಅಚ್ಚುಕಟ್ಟಿನ ಉಡಿಗೆ ತೊಡಿಗೆ. ಆ ಅಚ್ಚುಕಟ್ಟಿನ ಉಡಿಗೆ ತೊಡಿಗೆಯೇ ಕನ್ನಡಿಗರಿಗೆ ನಿಚ್ಚ ದೀವಳಿಗೆ.

ನಗೀಗೆ ನೇವಿದ್ಯ

ನಾನು ಬದುಕಿ ಉಳಿದುದು ಹೇಗೆ?

ತರುಣಕವಿ ಬಂಡೇರಾಯರು ××× ಮಾಸಪತ್ರಿಕೆಯ ದೀಪಾವಳಿಸಂಚಿಕೆಗೊಂದು ಪ್ರೇಮಗೀತವನ್ನು ರಚಿಸಿ ಕಳುಹಿದ್ದರು. ಆ ಕವಿತೆಯ ಹೆಸರು "ನಾನು ಬದುಕಿ ಉಳಿದುದು ಹೇಗೆ?" ಎಂದು.

ಸಂಚಿಕೆ ಬಂದಿತು. ಒಡೆದು ನೋಡಿದರೆ ಕವಿತೆ ಪ್ರಕಟವಾಗಿರಲಿಲ್ಲ. 'ಕಿವಿಮಾತಿ' ನಲ್ಲಿ ಹೀಗೆ ಬರೆದಿದ್ದಿತು:—

"ನಾನು ಬದುಕಿ ಉಳಿದುದು ಹೇಗೆ? (ಪ್ರೀತಿಗೀತ)
ನೀವು ನಿಮ್ಮ ಕವಿತೆ ತೆಗೆದುಕೊಂಡು ಪ್ರತ್ಯಕ್ಷ ನಮ್ಮ ಕಾರ್ಯಾಲಯಕ್ಕೆ ಬಾರದುದರಿಂದಲೇ ಬದುಕಿ ಉಳಿದಿದ್ದೀರಿ!"

* * *

ಏಳು ದಿನದ ರಜೆ

"ರಾಯರs! ನನ್ನ ಹೆಂಡತಿ ಕಾಗದಾ ಬರದಾಳ.. ದೀಪಾವಳೀಗೆ ಬಂದೇ ತೀರ ಬೇಕೂ ಅಂತ. ಅದಕ್ಕ ಹ್ಯಾಂಗಾದರೂ ಮಾಡಿ ಒಂದು ಏಳು ದಿನದ ರಜಾ ಸಿಗೂ ಹಾಂಗ ಮಾಡ್ರೀ!"

"ಸರಿ! ಹೀಂಗೇನು? ಅಲ್ಲಾ, ಈ ವೊತ್ತೇ ನಿಮ್ಮ ಮಾವನವರ ಕಡಿಂದs ಪತ್ರ ಬಂದsದರಿ! 'ನಮ್ಮ ಅಳಿಯ ರಜಾ ಗಿಜಾ ಬೇಡಿದರ ದಯಮಾಡಿ ಮಂಜೂರ್ ಮಾಡಬ್ಯಾಡ್ರಿ' ಅಂತ ಬರದಾರಲ್ಲಾ ನಿಮ್ಮ ಮಾವ!"

"ಭಲೆ ಭಲೆ! ಈ ಆಫೀಸಿನೊಳಗ ನಾ ಒಬ್ಬನೇ ಬುರುಡೀ ಹೊಡ್ಯಾಂವ ಇಲ್ಲಾ ಅಂಬೂದನ್ನ ನೋಡಿ ನನಗ ಭಾಳ ಆನಂದ ಆಗಸತsದ. ನಂದಿನ್ನೂ ಲಗ್ನನs ಆಗಿಲ್ಲ; ಇನ್ನಮ್ಯಾಲ ಆಗಬೇಕಾಗೇದ ರಾಯರ!"

* * *

ಅಲ್ಲಾದೇವರ ಕೆಲಸ

"ಬರ್‍ರೀ ಮೋಹನರಾವ್! ಎಂದು ಹೊರಡವರ್‍ರಿಪಾ ಮಾವನ ಮನಿಗೆ ಅಳೀ-ತನಕ್ಕ? ದೀಪಾವಳೀ ಬಂದs ಬಿಟ್ಟಿತಲಾ!"

"ಎಲ್ಲೀ ದೀಪಾವಳೀ, ಏನು ಅಳೀತನ! ಇಂದs ತಂತಿ ಬಂದsದ: ನಮ್ಮ ಮಾವನ ಮನೀಗೆ ಕಳ್ಳರು ದರೋಡೆ ಹಾಕಿದ್ದರಂತ!"

"ಎಲೇಲೆ ಎಲ್ಲಾ ಭಟ್ಟೀ ತಪ್ಪಿ ಹೋಯ್ತಲಾ: ನೀವು ಮಾಡಬೇಕಾದ ಕೆಲಸಾನ ಮೊದಲs ಕಳ್ಳರs ಮಾಡಿಬಿಟ್ಟರs ಹಾಂಗಾದರ?"

* * *

ಸಂಪೂರ್ಣ ಸ್ವಾತಂತ್ರ್ಯ

ಆಕೆ:— ಈ ಸಾರೆ ದೀವಳಿಗೀ ಹಬ್ಬಕ್ಕ ಮುತ್ತಿನ ಕಂಠೀ ಮಾಡಿಸಬೇಕೂ ಅಂತೀನಿ. ನಿಮ್ಮದೇನೂ ಅಡ್ಡೀ ಇಲ್ಲ ಹೌದಲ್ಲೋ ಮತ್ತ?

ಆತ:— ಏನೇನೂ ಅಡ್ಡೀ ಇಲ್ಲ ನಂದು! ಮಾಡಿಸಕು ಅಂತ ಅನ್ನಲಿಕ್ಕೆ ಸಂಪೂರ್ಣ ಸ್ವಾತಂತ್ರ್ಯ ಅದs ನಿನಗ!

* * *

ಗ್ರಾಮೋಫೋನಿನ ಉಪಯೋಗ

"ಏನ್ರೀ, ನಮ್ಮ ಗೋಪಾಳರಾಯರ ಅಳಿಯ ಗ್ರಾಮೋಫೋನ್ ಬೇಕಂತ ಹಟಾನs ಹಿಡಿದಾನಂತ! ಸಂಗೀತದ ಹುಚ್ಚು ಭಾಳಿರ ಬೇಕವಗsಂತ ಕಾಣತsದ!"

"ಅಲ್ರೀ ಸಂಗೀತಕೇಳ್ಲಿಕ್ಕೇ ಗ್ರಾಮೋ ಫೋನ್ ಬೇಕಾಗತsದ ಅಂತ ನಿಮ್ಮ ಕಲ್ಪನಾಸೋ ಏನು?"

"ಹಾಂಗಾದರ ಗ್ರಾಮೋಫೋನಿನ ಉಪಯೋಗ ಇನ್ನ ಯಾತಕ್ಕಾದರೂ ಆಗತsದೇನು?"

"ಆಗದೇ ಏನು? ಅದನ್ನ ಹಚ್ಚಿ ಕೂತುಕೊಂಡರ ಆತು! ಹೇಣತಿ ಬೇಕಾದಷ್ಟು ವಟವಟಸಿಗೋತs ಕೂಡ್ರಲಿ, ಕೇಳಿಸೂದೇ ಇಲ್ಲ!"

* * *

ಹೊಸಾಮನೀ ಹೌಸು!

"ಅಲ್ಲs! ಇದಷ್ಟು ಹಬ್ಬಾನರೆ ಮುಗಿ ಸೂಣಂತ ತಡೀಬಾರದs!.. ಹೋಗಲಿ, ಈ ಮನೀಗೆ ಏನಾಗೇದಂತ ಬದಲಿಸಬೇಕಂತೀ! ಎಂಥಾ ಛಲೋ ಅದs ಈ ಜಾಗಾ!"

"ಸಾಕ್ಹೋಗ್ರೀ, ಛಲೋ ಜಾಗಾ ಅಂತ ದಿನಕ್ಕದಿನಾ ಅದೇಅದೇ ಹೆಂಗಸರು— ಅದೇಅದೇ ಝಗಳಾಟು; ನನಗಂತೂ ಬ್ಯಾಸರು ಬಂದು ಹೋಗೇದ!"

* * *

ಗುಂಡ ನುಂಗಿದ ಉಂಡಿ

"ಅಲ್ಲೋ ಗುಂಡ್ಯಾ ಉಂಡೀ ಇದಿ-ನ್ನೆಲ್ಲಾ ನುಂಗಿಬಿಟ್ಟ ಹೌದಲ್ಲೋ!"

"ಇದೀದನ್ನೆಲ್ಲಾ ಹ್ಯಾಂಗ ನುಂಗಿಬಿಡಲಿಕ ಬಂದೀತs ಅವ್ವಾ! ಮೊದಲ ಅದನ್ನ ಒಡೆದೆ ಆಮ್ಯಾಲ ಒಂದೊಂದೇ ಚೂರಿನಂತೆ ಬಾಯಿಗೆ ಹಾಕಿಕೊಂಡು ತಿಂದೆ!"

* * *

ನಿಜವಾದ ಗೆಳೆತನ

"ಏನಪಾ ರಾಮು, ಈ ದೀವಳಗಿ ಸುಮುಹೂರ್ತದಿಂದ ನಮ್ಮ ಸಂಸಾ ಪ್ರಾರಂಭ ಆಗೂದದ! ನನ್ನ ಪ್ರಿಯ ಶಾರದಾ ಮೊದಲನೆಯ ಅಡಿಗೀ ಉಟಕ್ಕ ನಿನ್ನ ಬೇಕಂತ ಮಾಡೀನಿ! ಬರತೀ ಹೌದಲೆ ಮತ್ತ?"

"ಅಲ್ಲೋ ಭೀಮೂ, ಯಾವ ಪ್ರಸಂಗದೊಳಗ ನಿನ್ನ ಕೂಗು ಕೇಳಿ ಕೂಡಲೆ ಓಡಿ ಬಂದಿಲ್ಲ ನಾನು? ಸ್ವಭಾವ ಗೊತ್ತಿಲ್ಲದವರ್‍ಹಾಂಗ ಹೀಂಗ ಸಂಶಯದಿಂದ ಕೇಳತೀ ನನ್ನ?"

* * *

ಮುದುವೆಗೆ ಕಾರಣ

"ಅಲ್ಲೋ ಎಂಗಾ ಸುಂದರ ಹುಡುಗಿ; ಅಲ್ಲದs ಕಲಿತಾಕಿ ಬ್ಯಾರೆ! ಇಷ್ಟು ಆ ಕೃಪಣ ಕೃಷ್ಣಪ್ಪನಾಯಕನ್ನ ಹ್ಯಾಂಗ ಮದಿವ್ಯಾದಳಪಾ!"

" ನಿನಗೊತ್ತಿಲ್ಲೇನು ? ' ನಿನ್ನ ಸಲುವಾಗಿ ಸಾಯಲಿಕ್ಕೆ ಕೂಡಾ ಸಿದ್ಧ ಇದ್ದೇನಿ ' ಅಂತ ಆ ನಾಯಕ ಆಕೀಗೆ ಹೇಳ್ಯಾನಂತ. ಅಲ್ಲದೇ ಅಂವಗ ಮಕ್ಕಳು ಇಲ್ಲಂಬೂದೂ ಆಕೀಗೆ ಗೊತ್ತಾಯಿತಂತ ! "

* * *

ಮಗನು ಬಯಸುವ ನಂಬಿಗೆ

ಇತ್ತೀಚೆಗೆ ಐದಾರು ದಿನಗಳಿಂದ ಗುಂಡ್ಯಾ ತನ್ನ ತಾಯಿ ಹೇಳಿದ ಮಾತನ್ನ ಒಂದೂ ಮೀರುತಿದ್ದಿಲ್ಲ. ಆದರಿಂದ ತಾಯಿಗೆ ತುಂಬಾ ಖುಷಿ. ಅವಳು ಖುಷಿಯಾಗಿದ್ದುದನ್ನು ಕಂಡ ಗುಂಡ್ಯಾ ಕೇಳಿದ :

" ಅವ್ವಾ ಇತ್ತೀಚೆಗೆ ನಾ ಏನಾದರೂ ಕೆಟ್ಟ ಕೆಲಸಾ ಮಾಡತೀನೇನವಾ ? "

" ಏನೂ ಇಲ್ಲಪ್ಪಾ, ಭಾಳ ಜಾಣ ಆಗಿಬಿಟ್ಟೀದೀ ನೋಡು ಗುಂಡಾ ಈಗ ನೀನು ! "

" ಹಾಂಗಾದರ ನೋಡು ಅವ್ವಾ ! ನೀನು ನನ್ನ ಮ್ಯಾಲ ನಂಬಿಗೀ ಯಾಕ ಇಡೂದಿಲ್ಲ? "

" ಅಯ್ಯ, ನಂಬಿಗೀ ಇಡದ ಏನೋ ಗುಂಡಾ ! "

" ಹಾಂಗಾದರ ದೀಪಾವಳಿಗೆ ಮಾಡಿದ ಉಂಡೀ, ಅನಾರಸಾ, ಕರಚೀಕಾಯಿ, ಇವನ್ನೆಲ್ಲಾ ಕೀಲೀಹಾಕಿ ಯಾಕ ಇಟ್ಟೀದಿ ? ಮುದಲಿನ್ಹಾಂಗ ಹೊರಗ ಯಾಕ ಇಡೂದಿಲ್ಲ ? "

* * *

ಧೋಂಡೋಪಂತರ ಬುದ್ಧಿ

ಟಪ್ಪಾಲಾಫೀಸಿಗೆ ಬಂದಿದ್ದ ಪ್ರೊಫೆಸರ್ ಧೋಂಡೋಪಂತರಿಗೆ ಪೋಸ್ಟಮಾಸ್ತರರು ಹೇಳಿದರು:—

" ಏನ್ರೀ ರಾಯರ, ಮರಗೂಳಿತನ ದಿನದಿನಕ ನಿಮ್ಮಲ್ಲಿ ಹೆಚ್ಚಾಗಲಿಕ್ಕೆ ಹತ್ತೇದ; ಅಡ್ರೆಸ್ ಬರೀದ ಇರೂ ಪತ್ರ ನೂರು ನೂರುಗಟ್ಲೇ ಪೆಟಗೀ ಒಳಗ ಬೀಳತಿರತಾವ ! ಏನು ಮಾಡಬೇಕೆಂಬೂದ ತಿಳಿವ್ಹಾಂಗ ಆಗೇದ !

" ಹೀಂಗೇನು ? ಆದರ ಇದೂವರಿಗೆ ಅಡ್ರೆಸ್ ಇಲ್ಲದ ಪತ್ರ ಒಂದೂ ನನ್ನಕಡೆ ಬಂದಿಲ್ಲಲಾ ! "

* * *

ಸೆಟ್ಟರ ಸೊಸೆಮುತ್ತು

ಧನಗೋಪಾಲಸೆಟ್ಟರು ಮಗನ ಮದುವೆ ಮಾಡಬೇಕೆಂದರು. ಬೇರೆ ಬೇರೆ ಇಬ್ಬರು ಹೆಣ್ಣು ತೋರಿಸಲಿಕ್ಕೆ ಬಂದರು. ಒಂದು ಕನ್ಯೆ ತುಂಬ ಚೆಲುವೆಯಾಗಿದ್ದಿತು; ಇನ್ನೊಂದು ತೀರ ಕುರೂಪಿಯಾಗಿದ್ದಿತು. ಸೆಟ್ಟರು ಎರಡನೆಯದನ್ನೇ ಸೊಸೆಯನ್ನಾಗಿ ಮಾಡಿಕೊಳ್ಳಲು ಸಮ್ಮತಿಸಿದರು. ಈ ವಿಚಾರದಲ್ಲಿ ಜನರೆಲ್ಲ ಅವರಿಗೆ ಹೆಸರಿಡತೊಡಗಲು ಸೆಟ್ಟರು ತಮ್ಮ ಆಯ್ಕೆಯನ್ನು ಕುರಿತು ವಿವರಿಸತೊಡಗಿದರು :

" ನೀವು ನೋಡಿದ್ದು ಚೆಲುವಿಕೆ ಒಂದನ್ನ ಏನ್ರೆಪಾ ! ಆದರ ನಾ ಆರಿಸಿದ ಹೆಣ್ಣಿನಲ್ಲಿರುವ ಎರಡು ದೊಡ್ಡ ಗುಣಾ ನಿಮ್ಮ ಕಣ್ಣಿಗೆ ಹ್ಯಾಂಗ ಕಾಣಿಸ್ಯಾವು ! "

" ಅವ್ಯಾವ್ರೆಪಾ ಅಂಥಾ ಎರಡು ಗುಣ? "

" ನೋಡ್ರಿ, ಆಕೀ ಅಪ್ಪ ಶ್ರೀಮಂತ ಇದ್ದು ಮುದುಕ ಆಗ್ಯಾನ; ಇನ್ನೊಂದು ಅಂದರ ಆ ಹುಡುಗಿ ಒಬ್ಬಾಕೇ ಮಗಳು ಆ ಮುದುಕಗ ! "

* * *

ದೊಡ್ಡಬ್ಯಾನಿ ಅಲ್ಲ ಖರೆ !

ಡಾಕ್ಟರ್:— ಹುಗುಳುಂನೆಗಡಿ ಅಂದರ ಅದೇನು ದೊಡ್ಡ ಬ್ಯಾನಿ ಅಲ್ಲ ಖರೇ ; ಆದರ ಒಮ್ಮೊಮ್ಮೆ ಅದರ ಪರಿಣಾಮ ಭಯಂಕರ ಆಗತಿರತದ !

ರೋಗಿ:— ತಮ್ಮ ಮಾತಿನ ಸತ್ಯತಾ ಕಾಣಲಿಕ್ಕೆ ದೂರೇನೂ ಹೋಗಬೇಕಾಗಿಲ್ಲ ! ತಮ್ಮ ಬಿಲ್ಲು ನೋಡಿದಾಗಲೇನೇ ಈ ಮಾತು ಗೊತ್ತು ಆದ್ಹಾಂಗ ಆತು !

* * *

ಇದ್ದಾರಂತ ಈ ಗತೀ ಬಂದದ

" ಅಲ್ಲೋ ನೀ ಭಿಕ್ಷಾ ಯಾಕ ಬೇಡಲಿಕ್ಕೆ ಹತ್ತೀದೀಯಪಾ ? ನಿನಗ ನಿನ್ನ ಸಮಾಜದ ಸಂಬಂಧಿಕರು ಯಾರೂ ಇಲ್ಲೇನು ? "

" ಇಲ್ಲ್ಯಾಕರಪಾ, ಇದ್ದಾರಂತ ಈ ಗತೀ ಬಂದದ ನನಗ ! ಹೇಣತಿ ಇದ್ದಾಳ; ಆಕೀ ಹೊಟ್ಟೀಲೆ ಹುಟ್ಟಿದ ಹತ್ತುಮಕ್ಕಳೂ ಜೀವಂತ ಅವ; ಅಲ್ಲದ, ಮೊನ್ನೆಮೊನ್ನೆ ಹನ್ನೊಂದನೇ ಸಾರೆ ಹಡೆದಾಳ ಅವಳಿ-ಜವಳಿ ಮಕ್ಕಳನ್ನ! "

* * *

ವೇಳೆಯ ಸದುಪಯೋಗ



ರಾಯರು ದೀಪಾವಳಿಯ ಬೆಳಗಿನ ಉಪಾಹಾರಕ್ಕೆಂದು ಭೀಮಭಟ್ಟರಿಗೆ ಹೇಳಿಕಳುಹಿದ್ದರು. ಅವರು ಬಾಗಿಲೊಳಗೆ ಹೊಕ್ಕು ನೋಡಿ ಚಕಿತರಾಗಿ ಕೇಳಿದರು :

" ಏನು ರಾಯರ ಇದೇನು ನಡದ್ಯದ ? "

" ಏನೂ ಇಲ್ಲ ಬಿಡ್ರಿ, ನೀವು ಬರಲಿಕ್ಕೆ ತಡಾ ಆತು...ಅಷ್ಟರೊಳಗ ಹುಡುಗೂರಿಗೆ ವ್ಯಾಯಾಮ ಮಾಡೂಪದ್ಧತಿ ಹೇಳಿಕೊಡಬೇಕಂತ ಮಾಡಿದ್ದೆ ! "



ಕನ್ನಡ ನಾಡಹಬ್ಬ

(ಕಳೆದ ಸಲ ನಮ್ಮ 'ನಿರೀಕ್ಷಕರು' ನಾಡಹಬ್ಬದ ವಿಷಯದಲ್ಲಿ ಈ ಕೆಳಗೆ ಬರೆದ ಮಾತನ್ನು ಬರೆದಿದ್ದರು. ಸ್ಥಳಸಂಕೋಚದ ಮೂಲಕ ಆ ಸಂಚಿಕೆಯಲ್ಲಿ ಪ್ರಕಟವಾಗಲಿಲ್ಲ. ನಾಡಹಬ್ಬದ ವಿರೋಧಕರ ಗಲಾಟೆಯೇಳುವುದಕ್ಕಿಂತ ಮೊದಲೆ ಬರೆದಿಟ್ಟ ಮಾತಿದು. ನಮ್ಮ ನಿರೀಕ್ಷಕರ ಬರಲಿರುವ ಕಾಲದ ಬಗೆಗಿರುವ ನಿಚ್ಚಳವಾದ ನೋಟ ಹೇಗಿರುವುದೆಂಬುದು ಎಲ್ಲರಿಗೂ ಗೊತ್ತಾಗಲೆಂದು, ಮುದ್ರಿಸದೆ ಬಿಟ್ಟಿದ್ದ ಆ ಮಾತುಗಳನ್ನು ಇಲ್ಲಿ ಪ್ರಕಟಿಸಲಾಗಿದೆ. . --ಸಂ. ಜ.)

ಬೇಗನೆ ಬರಲಿದೆ ಕನ್ನಡ ನಾಡಹಬ್ಬ. ಇಂತಹ ಸಾರ್ವಜನಿಕ ಉತ್ಸವದಿನಗಳನ್ನು ಪಾಲಿಸುವುದಕ್ಕೆ ಮುಖ್ಯಕಾರಣವೆಂದರೆ ನಾಡಿನ ಜನರ ಮನಸ್ಸು-ಹೃದಯ-ಬುದ್ಧಿಗಳೆಲ್ಲ ಒಂದೆ ಬಗೆಯ ಅಭಿಮಾನಭಾವನೆಯೊಂದಿಗೆ ಓಡಿ, ಪರಸ್ಪರರಲ್ಲಿ ಸಹಾನುಭೂತಿ-ಸಹಕಾರಶಕ್ತಿಗಳನ್ನು ಹೆಚ್ಚಿಸುವುದು. ಸದ್ಯ ನಮ್ಮ ನಾಡಿನಲ್ಲಿ ದೇಶೋನ್ನತಿಯ ಭಾವನೆಗಿಂತ ಅಧಿಕಾರಲಾಲಸೆಯ ಭಾವನೆ ಹೆಚ್ಚು ಮುಂದೆ ಬಂದು ಕರಾಳಸ್ವರೂಪವನ್ನು ಧಾರಣೆಮಾಡಿ ಕುಣಿಯತೊಡಗಿದೆ. ಈ ಅಧಿಕಾರಲಾಲಸೆಯೆ ಬ್ರಾಹ್ಮಣ-ಅಬ್ರಾಹ್ಮಣ, ಲಿಂಗಾಯತ-ಲಿಂಗಾಯತೇತರ, ಕುರುಬ-ಒಕ್ಕಲಿಗ, ರಡ್ಡಿ-ಕೊಂಬಟಿಗ ಎಂಬ ಜಾತಿಭೇದಗಳನ್ನು ಹುಟ್ಟಿಸುತ್ತ, ಕನ್ನಡ ನಾಡಿನ ಹೃದಯವನ್ನೇ ಒಡೆದೊಡೆದು ಹಾಕಲು ಹವಣಿಸತೊಡಗಿದೆ. ರಾಜಕೀಯ ವ್ಯವಸ್ಥೆಯ ಮೂಲಕ ಭೌತಿಕ ಕರ್ನಾಟಕವು ಖಂಡಖಂಡವಾದುದಂತೂ ಸರಿಯೆ; ಇಂದಿನ ಅಧಿಕಾರಲಾಲಸೆಯು ಕರ್ನಾಟಕದ ಆತ್ಮವನ್ನೂ ಖಂಡಖಂಡಗೊಳಿಸತೊಡಗಿದೆ. ಅದರಲ್ಲಿಯೂ ರಾಮದುರ್ಗದ ಗೊಂದಲವೂ, ಅದರ ವಿಷಯಕವಾಗಿ ನಮ್ಮ ಪಕ್ಷಪಕ್ಷದ ಮುಂದಾಳುಗಳು ತಳೆದ ಧೋರಣವೂ, ನ್ಯಾಯಮೂರ್ತಿ ವಾಪರರ ವರದಿಯೂ ಸೇರಿ, ಕರ್ನಾಟಕವನ್ನು ಕಡಿಯಲು ನಿಂತ ಕೊಡಲಿಯನ್ನು ಕುಲಿಮೆಯಲ್ಲಿ ಕಾಯಿಸಿ ಕಾಯಿಸಿ ನೀರುಕುಡಿಸತೊಡಗಿವೆ. ಎಂತಲೆ ಇಂದು ನಮ್ಮ ಜನರಿಗೆ ಕರ್ನಾಟಕ ಬೇಡವಾಗಿದೆ. ಏಕೀಕರಣ ವಿಚಾರವಂತೂ ಎಂದೋ ಓಡಿಹೋಗಿದೆ. ಅಧಿಕಾರಪ್ರಿಯರಾದ ಜಾತಿಜಾತಿಗಳ ಮುಂದಾಳುಗಳು ವೈಯಕ್ತಿಕ ಸ್ವಾರ್ಥಸಾಧನೆಗಾಗಿ ಕನ್ನಡ ಜನಪದವನ್ನೇ ಆಹುತಿಕೊಡಲು ಸಿದ್ಧರಾಗಿ ನಿಂತಿದ್ದಾರೆ. ಇಂತಹ ವೇಳೆಯಲ್ಲಿ ಕನ್ನಡಜನಪದದಲ್ಲಿಯ ಬಹುಜನಸಮಾಜವು—ಅಧಿಕಾರಮೋಹವನ್ನು ಕನಸಿನಲ್ಲಿ ಕೂಡ ಕಾಣದ ಸಾಮಾನ್ಯ ಜನತೆಯು—ಮುಂದಾಳುಗಳ ಈ ದೇಶಘಾತಕವೃತ್ತಿಯನ್ನು ಅಲ್ಲಲ್ಲಿ ಖಂಡಿಸಬೇಕಾದುದು ಅತ್ಯಗತ್ಯವಾಗಿದೆ. ಹಾಗೆ ಖಂಡಿಸುವುದೆಂದರೆ ಕನ್ನಡಿಗರ ಒಕ್ಕಟ್ಟನ್ನು ಒಂದೆ ದನಿಯಿಂದ ಘೋಷಿಸಿ ಹೇಳಿ—ಪರಸ್ಪರರ ಸಹಕಾರಕ್ಕಾಗಿ ಸ್ನೇಹದಿಂದ ಕಾರ್ಯಮಾಡುವುದು. ನಾಡಹಬ್ಬವು ಜನಪದದ ಹಬ್ಬ. ಆಗ ಕನ್ನಡಿಗರೆಲ್ಲ ಸೇರಿ ಜನಪದ ಪೋಷಕವಾದ ಚಟುವಟಿಕೆಗಳನ್ನು ಮಾಡಿ, ನಾಡಿನಲ್ಲಿ ಹಬ್ಬಿ ನಿಂತಿರುವ ಜಾತಿದ್ವೇಷ-ವ್ಯಕ್ತಿದ್ವೇಷಗಳ ಬೆಂಕಿಯ ಮೇಲೆ ನೀರು ಹನಿಸಿ ತಣ್ಣಗೆ ಮಾಡಬೇಕೆಂದು ನಮ್ಮ ಬಿನ್ನಹ. ಹಾಗೆ ಮಾಡದ ನಾಡಹಬ್ಬ ಎಂದೂ ನಾಡ (ರಾಷ್ಟ್ರೀಯ) ಹಬ್ಬವಾಗಿ ಪರಿಣಮಿಸದು!

ಕನ್ನಡಿಗರ ಕಾಡಹಬ್ಬ

ಈ ಸಲದ ಮಹಾನವಮಿಯ ಉತ್ಸವದಲ್ಲಿ ಜರುಗಿದ ಹೆಚ್ಚಿನ ಅನಾಹುತ ಯಾವುದೆಂದು ನಮ್ಮನ್ನು ಕೇಳಿದರೆ ನಾವು ಅನಿವಾರ್ಯವಾಗಿ ಶ್ರೀ. ಕೆ. ಆರ್. ಕಾರಂತರ ಕೈ ತಪ್ಪಿದ ಪ್ರಕಟನೆಯೆ ಆ ಅನಾಹುತ ಎಂದು ಹೇಳಬೇಕಾಗಿದೆ. ಅದಕ್ಕೆ ಎರಡು ಕಾರಣಗಳಿವೆ. ಅವುಗಳ ಜೊತೆಯಲ್ಲಿ ಶ್ರೀ. ಕಾರಂತರು ಕರ್ನಾಟಕದ ಮುಖಂಡತ್ವದ, ಏಕೀಕರಣ ಪರಿಷತ್ತಿನ ಅಧ್ಯಕ್ಷಪದವಿಯ ಹೊಣೆಯನ್ನು ಹೊತ್ತ ಸಂಗತಿಯ ಮಹತ್ವವೂ ಇದೆ. ಮೊದಲನೆಯ ಕಾರಣ ಶ್ರೀ. ಕಾರಂತರು ನಾಡಹಬ್ಬದ ವಿರೋಧಚಳವಳವು ಕೇವಲ ಜಾತಿದ್ವೇಷದಿಂದ ಪ್ರೇರಿತವಾಗಿದೆ ಎಂದು ಅಭಿಪ್ರಾಯಪಟ್ಟುದು (ಅದನ್ನು ಮತ್ತೆ ಎದೆತಟ್ಟಿ ದೃಢೀಕರಿಸಿದ್ದಾರೆ!); ಎರಡನೆಯದೆಂದರೆ, ಇಂತಹ ಪರಿಸ್ಥಿತಿಯಲ್ಲಿ ಏಕೀಕರಣವು ಅನಿಷ್ಟವಾದುದೆಂದೂ, ಕೊನೆಗೆ ತಮ್ಮವರಾದ ಮಂಗಳೂರಿನವರಿಗೆ ಅದಕಾಗಿ ಹೆಣಗಬೇಡಿರೆಂದು ಉಪದೇಶಿಸಬೇಕಾಗುವುದೆಂದೂ ಪ್ರತಿಜ್ಞೆಯನ್ನೆ ಮಾಡಿದುದು. ಒಂದು ಕಡೆ ಒಂದು ತರದ ವಿರೋಧ; ಇನ್ನೊಂದು ಕಡೆ ಅದರಲ್ಲಿ ಭಾಗವಹಿಸಿದ ಹೊಣೆಗಾರಿಕೆಯ ಮುಂದಾಳುಗಳ ಈ ಅಭಿಪ್ರಾಯ; ಮೂರನೆಯ ಕಡೆ, ಪಕ್ಷಪಾತದ ಪತ್ರಿಕೆಗಳ (ಕ್ಷಮಿಸಬೇಕು) ಹೋಳಿಹುಣ್ಣಿಮೆ! ಇಂತಹ ಅನಿಷ್ಟ ವಾತಾವರಣದಲ್ಲಿ ಜರುಗಿದ್ದು ನಾಡಹಬ್ಬವೊ ಕಾಡಹಬ್ಬವೊ?

ಜಾತಿದ್ವೇಷ ತೋರಿಕೆಗಿರಬಹುದು, ಪ್ರೇರಕವಾಗಿಲ್ಲ!

ರಾಮದುರ್ಗದ ಭೂತವು ಕೆ.ಪಿ.ಸಿ.ಸಿ. ಗೆ ಬಡಿದುಕೊಳ್ಳುವುದೆಂದು ಹೋದ ಸಂಚಿಕೆಯಲ್ಲಿ ನಾವು ಎಚ್ಚರಿಕೆಯನ್ನು ಕೊಟ್ಟಿದ್ದೆವಷ್ಟೆ; ಮುಂದೆ ಹತ್ತೇ ದಿವಸಗಳಲ್ಲಿ ನಾಡಹಬ್ಬಕ್ಕೆ ವಿರೋಧಕ

ಚಳವಳವೆದ್ದಿತು! ಇದರಲ್ಲಿ ಸಮಗಾಗಿ ನಮ್ಮ ಹೆಮ್ಮೆ ಇಲ್ಲ; ನಮ್ಮಂತಹರ ಎಚ್ಚರಿಕೆಗೆ ಅಲಕ್ಷ್ಯ ತೋರಿಸಿದ ಹಿರಿಯರಿಗಾಗಿ ಹಳಹಳಿ ಇದೆ. ನಾಡಹಬ್ಬವಿರೋಧ ಚಳವಳವು ಜಾತಿದ್ವೇಷ ದಿಂದಲೆ ಪ್ರೇರಿತವಾಗಿದೆ ಎಂದು ಒಂದು ನಿಮಿಷ ಒಪ್ಪಿಕೊಳ್ಳೋಣ; ಇಂತಹ ಸ್ಥಿತಿಯಲ್ಲಿ ಹಿರಿಯರೆನಿಸಿಕೊಳ್ಳುವ ಮುಂದಾಳುಗಳು ಅದನ್ನು ತಿದ್ದಲು ಯತ್ನಿಸಬೇಕೆ, ಇಲ್ಲವೆ ಅದನ್ನೆ ಕಣ್ಣಾಲ್ಲಿ ತಿವಿದು ಹಣ್ಣಾಗಬೇಕೆ? ರಾಮದುರ್ಗದ ವಿಷಯದಲ್ಲೂ ಗುತಾಸು ಗಳೊಳಗಾಗಿ ಹಿರಿತನದ ಪ್ರಕಟನೆಯನ್ನು ಹೊರಡಿಸಿದರು; ಈಗಲೂ ಅದನ್ನೆ ಮಾಡಿದರು. ಮುಂದಾಳುಗಳೆಂದರೆ ಕೇವಲ ಮೇಲಿನಿಂದ ನಿರ್ಣಯಕೊಡುವ ನ್ಯಾಯಾಧೀಶರೊ, ಪರಿಸ್ಥಿತಿಯನ್ನು ತಿಳಿದು ಕೊಂಡು ಅದರ ಜವಾಬ್ದಾರಿಯನ್ನು ಹೊರಬೇಕಾದ ಕಾರ್ಯ ಕಾರ್ಯಧುರೀಣರೊ? ಒಂದು ಚಳವಳವು ಜಾತಿದ್ವೇಷದಿಂದ ಪ್ರೇರಿತವಾಗಿದೆ ಎಂಬ ನಿರ್ಣಯಕೊಟ್ಟಷ್ಟಕ್ಕೆ ಹೊಣೆಗಾರಿಕೆ ಹಾರಿತೆ? ಹಾಗೆ ನೋಡಿದರೆ ಈ ನಿರ್ಣಯವೂ ಸಮರ್ಪಕವಾದು ದಲ್ಲ. ನಾಡಹಬ್ಬವಿರೋಧದ ಚಳವಳದಲ್ಲಿ ತೋರಿಕೆಯಲ್ಲಷ್ಟೆ ಜಾತೀಯತಾ ಪಕ್ಷಪಾತವಿದ್ದಿತು ಎಂದು ನಮ್ಮ ಅಭಿಪ್ರಾಯ.

ಸಿದ್ಧಮಾಡಿತೋರಿಸುವ ಹೊಣೆಗಾರಿಕೆ

ಈ ವಿರೋಧ ಚಳವಳದಲ್ಲಿ ಜಾತಿದ್ವೇಷವಿದೆ ಎಂದವರು ಅದನ್ನು ಸಿದ್ಧಮಾಡಿ ತೋರಿಸಬೇಕಾಗಿತ್ತು; ಹಾಗೆ ಮಾಡದೆ ಹೋದಲ್ಲಿ ನ್ಯಾಯತತ್ತ್ವದ ತಳಹದಿಯನ್ನೆ ಕಿತ್ತೊಗೆದಂತಾಗು ವುದು. ಈ ಚಳವಳವು ಜಾತಿದ್ವೇಷಪ್ರೇರಿತವೆಂದು ಯಾಕೆ ಹೇಳುವುದು? ವಿರೋಧಕರ ಮುಂದಾಳುಗಳೆಲ್ಲರೂ ಒಂದು ಜಾತಿಯವರಿದ್ದರೆಂದೊ? ಆದರೆ ಅದೇ ಜಾತಿಯವರಾದ ಕಾಂಗ್ರೆಸ್ ಮುಂದಾಳುಗಳು, ಕೆ.ಪಿ.ಸಿ.ಸಿ. ಅಧಿಕಾರಿಗಳು, ಶಾಸನಸಭೆಯ ಸದಸ್ಯರು ಈ ವಿರೋಧಕ್ಕೆ ತಮ್ಮ ರುಜುವನ್ನು ಕೊಟ್ಟಿದ್ದರೆ? ಕೇವಲ ಕೆಲವೇ ಮುಂದಾಳುಗಳ ಜಾತಿಯಿಂದ ಒಂದು ಚಳವಳಕ್ಕೆ ಸರಿಹುವುದಾದರೆ 'ಕಾಂಗ್ರೆಸ್ಸು ಹಿಂದುಜನರ ಸಂಸ್ಥೆ' ಎಂದು ಮುಸ್ಲಿಂ ಲೀಗದವರು ಹೇಳುವುದು ತಪ್ಪೇಕೆ? ರಾಮದುರ್ಗದ ಪ್ರಾಂತಕ್ಕೆ ಸಹಾನುಭೂತಿಯುಳ್ಳವರೆಲ್ಲರೂ ಒಂದೇ ಜಾತಿ- ಯವರೇ? ಕೆಲವು ಬ್ರಾಹ್ಮಣರು ನಾಡಹಬ್ಬವನ್ನು ನಡೆಯಬೇ ಎನಪೂ ಮುಂದಾಗಿರಲಿಕ್ಕಿಲ್ಲ; ಕೆಲ ಬ್ರಾಹ್ಮಣೇತರರು ನಾಡಹಬ್ಬ ನಡೆಯಬಾರದೆಂದೂ ಅನಿವಾರ್ಯವಾಗಿ ಕರಿಯ ನಿಶಾನೆಯನ್ನು ಹಿಡಿದಿರಬಹುದು. ಇಂತಹ ಪರಿಸ್ಥಿತಿಯ ಕಲ್ಪನೆ ಇಲ್ಲವೆ ಊಹಾ- ಪೋಹವನ್ನು ಯಾರಾದರೂ ಮಾಡಿದ್ದಾರೆಯೆ?

ರೆಯ ಮರೆಯಲ್ಲಿ

ನಿಜವಿದ್ದ ಮಾತೆಂದರೆ ನಾಡಹಬ್ಬವಿರೋಧ ಚಳವಳವು ಒಮ್ಮೆಲೆ ರೆಯಂತೆ ರಂಗಸ್ಥಲವನ್ನು ಮುಚ್ಚಿ ಬಿದ್ದುಕೊಂಡಿತು. ತೆರೆಯ ಂದಿನ ಪರಿಸ್ಥಿತಿಯನ್ನು ಹಣಿಕಿಕ್ಕಿ ನೋಡಿದರೆ ಬೇರೊಂದು ಕ್ಯವೇ ಕಂಡುಬರುವುದು. ಅಧಿಕಾರಲಾಲಸೆಯಿಂದ, ಸ್ವಾರ್ಥ ಧಕದೃಷ್ಟಿಯಿಂದ ಪ್ರೇರಿತರಾಗಿ ಯಾರಾರು ಇತ್ತಿತ್ತಲಾಗಿ ಂಗ್ರೆಸ್ ದೀಕ್ಷೆಯನ್ನು ಪಡೆದಿರುವರೊ ಅಂತಹರಲ್ಲಿ ಕೆಲವರು, ಈ ವಿರೋಧಚಳವಳಕ್ಕೆ ಮೂಲಕಾರಣರಾದರು. ಏನು ಮಾಡಿ ದರೂ ಅಧಿಕಾರಪದವಿ ದೊರೆಯಲಿಲ್ಲ, ಕೊನೆಗೆ 'ನಾಡಹಬ್ಬಸಮಿತಿ ಗಳಲ್ಲೂ ಅಧ್ಯಕ್ಷ ಮೊದಲಾದ ಅಧಿಕಾರಪದವಿಗಳು ದೊರೆಯ ಬಾರದೆ?' ಎಂಬುದೆ ಇವರ ಹೊಟ್ಟೆಯುರಿ. ಈ ಸಂದರ್ಭದಲ್ಲಿ ರಾಮದುರ್ಗದಲ್ಲಿ ಒಂದಿಲ್ಲೊಂದು ಕಾರಣದಿಂದ ನಷ್ಟಕ್ಕೆ ಗುರಿ ಯಾದ ವ್ಯಕ್ತಿಗಳ ಯೋಗ್ಯಲಾಭವನ್ನು ಪಡೆದುಕೊಳ್ಳಬೇಕೆಂದು ಈ ಸ್ವಾರ್ಥಸಾಧಕರಿಗೆ ತೋಚಿದ್ದು ಅವರ ಬುದ್ಧಿಮತ್ತೆಗೆ ಭೂಷಣ (?) ವೆ ಆಗಿದೆ. ತೋರಿಕೆಯಲ್ಲಿ ವಿರೋಧಕರು ಕಾಂಗ್ರೆಸ್ ಭಕ್ತರಿದ್ದುದು ನಿಜ; ಆದರೆ ಬಹುಜನರು ಟೊಪ್ಪಿಗೆಭಕ್ತಿ ಮಾರ್ಗದವರೆ! ಹಾಗೆ ನೋಡಿದರೆ ಇದುವರೆಗೆ ಜಾತಿಯ ಇಲ್ಲವೆ ರಾಜಕಾರಣದ ಸಂಪರ್ಕವಿಲ್ಲದೆ ನಡೆದ ನಾಡಹಬ್ಬವು ಇಂದು ಕಾಂಗ್ರೆಸ್ಸಿಗರಿಂದ ಈ ಅವದಸೆಯನ್ನು ಪಡೆಯಿತು ಎಂದು 'ಕನ್ನಡ ಪಕ್ಷ' ದವರು ದೂರಬಹುದಾಗಿತ್ತು. ಆದರೆ ವಸ್ತುಸ್ಥಿತಿಯನ್ನು ತಿಳಿಯದೆ ಯಾರೂ ಅಂತಹದಕ್ಕೆ ದುಡುಕಲಿಲ್ಲ. ನಮ್ಮ ಏಕೀಕರಣ ಪರಿಷತ್ತಿನ ಅಧ್ಯಕ್ಷರು ಮಾತ್ರ—

ಇದು ತರ್ಕಕ್ಕೆ ಹೊಂದುವುದಿಲ್ಲ

ಹೋಗಲಿ, ವ್ಯಕ್ತಿಯನ್ನು ಟೀಕಿಸುವುದು ನಮ್ಮ ಉದ್ದೇಶವಿಲ್ಲ. ಹಾಗೆ ನೋಡಿದರೆ ಶ್ರೀ. ಕೆ.ಆರ್. ಕಾರಂತರ ಮುಂದಾಳುತನದಲ್ಲಿ, ದಿಟ್ಟತನದ ಸ್ವಭಾವದಲ್ಲಿ, ಬುದ್ಧಿಯ ಪ್ರತಿಭೆಯಲ್ಲಿ ನಮಗೆ ಹೆಚ್ಚು ವಿಶ್ವಾಸವಿದೆ. ನಮ್ಮ ಹಿಂದಿನ 'ಹಸಿಬಿಸಿ' ಮುಂದಾಳುಗಳಿಂದ ಏಕೀಕರಣಕ್ಕೆ ಬಲವಿಲ್ಲ. ಶ್ರೀ. ಕಾರಂತರಂತಹರಿಂದಲೆ ಅದು ಸಾಧ್ಯ ಎಂಬ ಆಶೆಯಿಂದ ನಾವು ಸಂತುಷ್ಟರಾಗಿರುವಾಗಲೆ ಶ್ರೀ. ಕಾರಂತರು ತರ್ಕಕ್ಕೆ ಹೊಂದದ ಹಾದಿಯಲ್ಲಿ ಧುಮುಕಿದರಲ್ಲ ಎಂಬ ವಿಷಾದದಿಂದಲೆ ನಾವು ಹೀಗೆ ಹೇಳಬೇಕಾಗಿದೆ. ಮಂಗ- ಳೂರಿನ ಪರಿಷದಧ್ಯಕ್ಷರೂ ಬೆಳಗಾಂವಿಯ ಕಾರ್ಯಾಧ್ಯಕ್ಷರೂ ಪರಸ್ಪರ ರಾಜೀನಾಮೆಗಳನ್ನು ಕಳುಹಿಸುವ ಪತ್ರವ್ಯವಹಾರವನ್ನೆ ಇಡುವ ದುಃಸ್ಥಿತಿ ಬರುವ ಕಾರಣವೆ ಇಲ್ಲ. ಜಾತಿದ್ವೇಷವಿದ್ದರೆ ಏಕೀಕರಣವನ್ನೇಕೆ ತಡೆಯಬೇಕು? ಜಾತಿದ್ವೇಷವಿದೆ ಎಂದು ಕಾಂಗ್ರೆಸ್ ಚಟುವಟಿಕೆಗಳನ್ನು ತಡೆಯಬೇಕೊ, ಇಲ್ಲವೆ ಆ ದ್ವೇಷ ವನ್ನು ಕಿತ್ತೊಗೆಯಲು ಸಹಾಯಕವಾಗುವಂತೆ ಆ ಚಟುವಟಿಕೆ ಗಳನ್ನೆ ಒಲಗೊಳಿಸಬೇಕೊ? ಅದರಂತೆಯೆ ಏಕೀಕರಣದ ಪ್ರಶ್ನೆ- ಇದಲ್ಲದೆ ನಿಜವಾಗಿ ನಾಡಹಬ್ಬವಿರೋಧದಲ್ಲಿ ಜಾತಿದ್ವೇಷವಿರಲಿಲ್ಲ. ಸ್ವಾರ್ಥಸಾಧಕರ ವೈಯಕ್ತಿಕ ದ್ವೇಷಾಸೂಯೆಗಳಿದ್ದುವು ಎಂಬು ದಸ್ಸರಿತು ಅದಕ್ಕೆ ಪುಟಗೊಡದಂತೆ ಯತ್ನಿಸುವುದು ಶ್ರೀ. ಕಾರಂತರಂತಹ ಮುಂದಾಳುಗಳಿಗೆಯೆ ಸಾಧ್ಯವಾಗಿದೆ. ಅದಕಾಗಿ ಎರಡು ಪ್ರಕಟನೆಗಳನ್ನು ಕೊಟ್ಟ ಶ್ರೀಯುತರು ಕೂಡಲೆ ಮೂರನೆಯ ಪ್ರಕಟನೆಯನ್ನು ಹೊರಡಿಸಿ, ಮೂಗಕ್ಕೆ ಮುಕ್ತಿ ಎಂಬಂತೆ, ಅದರಿಂದ ತಮ್ಮ ಮಾಯೆಯಿಂದ ಮುಕ್ತಿ ದೊರಕಿತೆಂದು ಸಾರಿ, ಕೆಲ ನಿಸ್ವಾರ್ಥ ಕನ್ನಡಿಗರ ಸಹಾಯದಿಂದ ಪರಿಸ್ಥಿತಿಯನ್ನು ತಿಳಿದುಕೊಂಡು, ಮತ್ತೆ ತಮ್ಮ ಕೈಯಲ್ಲಿರಿಸಿಕೊಳ್ಳಬೇಕೆಂದು ನಾವು ಸಾಷ್ಟಾಂಗಪ್ರಣಾಮಪೂರ್ವಕವಾಗಿ ಬೇಡುತ್ತೇವೆ.

ನಮ್ಮ ರಾಜಕೀಯ ಪರಿಸ್ಥಿತಿ

ಹೋದ ಸಲ ವರ್ಕಿಂಗ್ ಕಮಿಟಿಯ ನಿರ್ಣಯಕ್ಕಾಗಿ ನಾವು ತಾಳಿದ ಧೋರಣೆಯ ಸತ್ಯತೆಯು ವೈಸರಾಯರು ಕೊಟ್ಟ ಸಂದರ್ಶನಗಳಿಂದ, ಪ್ರಕಟಿಸಿದ ಘೋಷಣೆಗಳಿಂದ, ಸರ್ ಸ್ಯಾಮ್ಯುಯಲ್ ಹೋರರ ಅಧಿಕಾರಯುಕ್ತ ಭಾಷಣದಿಂದ ಹೆಚ್ಚೆಚ್ಚಾಗಿ ಕಂಡು ಬರುತ್ತಿದೆ. ಇಂಗ್ಲಂಡವು ಹಿಂದುಸ್ಥಾನಕ್ಕಾಗಿ ತಾಳಿದ ಧೋರಣೆ ಸಹಜವಾಗಿ ತಿಳಿಯುವಂತಹದಿದ್ದು, ವರ್ಕಿಂಗ ಕಮಿಟಿಯು, ಪುನಃ ಪುನಃ ಸರಕಾರದವರು ಅದನ್ನು ಸಾರಬೇಕೆಂದು ಬೇಡಿಕೊಳ್ಳುತ್ತ ಅಧಿಕಾರಪದವನ್ನು ಬಿಟ್ಟುಕೊಡಲು ತನಗೆ ಅಷ್ಟೊಂದು ಇಚ್ಛೆಯಿಲ್ಲವೆಂಬುದನ್ನೆ ತೋರಿಸಿಕೊಟ್ಟಿತು. ಅದನ್ನರಿತು ಬ್ರಿಟಿಶ ಮುತ್ಸದ್ದಿಗಳು ಕಾಂಗ್ರೆಸ್ಸು ಹಿಂದುಸ್ಥಾನದ ಪತಿಯಿಂದ ನಿಂತ ಒಂದೇ ಒಂದು ಪಕ್ಷವಲ್ಲ ಎಂಬ ತಮ್ಮ ಕಪಟದ ಮಾತನ್ನು ದೃಷ್ಟಾಂತಸಹಿತವಾಗಿ ಸಿದ್ಧಮಾಡಿ ತೋರಿಸಲು ಯತ್ನಿಸಿದರು. ಯುದ್ಧವನ್ನು ಸಾರಿ ಹಿಂದುಸ್ಥಾನವನ್ನೂ ಅದರಲ್ಲಿ ಸೇರಿಸಿದ ದಿವಸವೆ ಕಾಂಗ್ರೆಸ್ಸು ದಿಟ್ಟತನದಿಂದ ಮಂತ್ರಿಪದದ ಮೆತ್ತನ್ನ ಕುರ್ಚಿಗಳಿಂದೆದ್ದಿದ್ದರೆ ಪರಿಸ್ಥಿತಿಯ ಪರಿಣಾಮವೆ ಬೇರೆಯಾಗುತ್ತಿತ್ತು; ಆ ಮೇಲೆ ಸರಕಾರವು ಕಾಂಗ್ರೆಸಿನೊಡನೆ ಸಂಧಾನವನ್ನು ನಡೆಸಿದರೆ (ನಡೆಸಲೇ ಬೇಕಾಗುತ್ತಿತ್ತು) ಕಾಂಗ್ರೆಸ್ಸು ಅದ್ವಿತೀಯ ಸಂಸ್ಥೆ, ಅದನ್ನು ಅಲಕ್ಷಿಸಿದರೆ ಸಾಗದು ಎಂಬ ಮಾತುಗಳ ನಿಷ್ಕರ್ಷವಾಗಿ ಕಾಂಗ್ರೆಸ್ಸಿನ ಇಭ್ರತ್ತು ಶುಭ್ರವಾಗಿ ಆಕಾಶದಲ್ಲಿ ಮಿನುಗಬಹುದಾಗಿತ್ತು. ಆದರೆ ಈಗ ಮಿಕ್ಕ ಚಿಕ್ಕ-ಪುಟ್ಟ ಅನಾಮಧೇಯ ಸಂಸ್ಥೆಗಳ ಮಾಲೆಯಲ್ಲಿ ಒಂದೆನಿಸಿ, ಬಹಳವಾದರೆ ಮುಂದೆನಿಸಿ ಧಾರಣೆಯ ಏರಿಳಿತಗಳಿಗಾಗಿ ಹೋರಾಡಬೇಕಾಗಿದೆ !

ಮುಖ್ಯ ಮಾತುಗಳು

ಆದರೂ ಇಂದು ಕಾಂಗ್ರೆಸ್ ಮಂತ್ರಿಮಂಡಳಗಳು ರಾಜೀನಾಮೆ ಕೊಡಬೇಕೆಂದು ವರ್ಕಿಂಗ್ ಕಮಿಟಿ ನಿರ್ಧರಿಸಿದೆ. ವೈಸರಾಯರ ಪ್ರಕಟನೆ ತಾವು ಕೇಳಿದ ಪ್ರಶ್ನೆಗಳಿಗೆ ಉತ್ತರವನ್ನೆ ಕೊಟ್ಟಿಲ್ಲವೆಂದೂ, ಕೊಡಬೇಕಾದ ಪ್ರಯತ್ನ ಕೂಡ ಅಸಮಾಧಾನಕಾರಕವೆಂದೂ ವರ್ಕಿಂಗ್ ಕಮಿಟಿಯು ಅಭಿಪ್ರಾಯಪಟ್ಟಿದೆ. ಈ ವಾದವು ಇನ್ನೂ ಮುಗಿದಿಲ್ಲ. ವೈಸರಾಯ ಮತ್ತು ಭಾರತೀಯ ಮುಂದಾಳುಗಳು ಮತ್ತೆ ಪರಸ್ಪರ ವಿಚಾರವಿನಿಮಯ ಮಾಡಿದ್ದಾರೆ. ಸದ್ಯಕ್ಕೆ ಕಾಂಗ್ರೆಸ್ ಮಂತ್ರಿಮಂಡಳಗಳ ಸ್ಥಳದಲ್ಲಿ ಬೇರೊಂದು ಮಂತ್ರಿಮಂಡಳವನ್ನು ಹೂಡದೆ, ಪ್ರಾಂತಿಕ ಸ್ವಾಯತ್ತತೆಯ ಘಟನೆಯನ್ನೆ ರದ್ದುಗೊಳಿಸಿ, ಗವ್ಹರ್ನರರು ವಿಶೇಷಾಧಿಕಾರಗಳಿಂದ ಪ್ರಾಂತಗಳ ಆಡಳಿತವನ್ನು ನಡೆಯಿಸುವವರಿದ್ದಾರೆ. ಈ ಘಟನಾತ್ಮಕ ತೊಡಕಿನಲ್ಲಿ ಒಂದೆರಡು ಮಾತುಗಳನ್ನು ನಾವು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾಗಿದೆ. ಪ್ರಾಂತಿಕ ಸ್ವಾಯತ್ತತೆಯನ್ನು ಒಂದು ತರದ ಆಂತರಿಕ ಸಮಾಧಾನದಿಂದ ನಡೆಯಿಸಿದ ಕಾಂಗ್ರೆಸ್ಸು ಇಂದು ಇಂಗ್ಲಂಡವು ಯುದ್ಧದಲ್ಲಿ ತೊಡಗಿದಾಗ ಒಮ್ಮೆಲೆ ವಸಾಹತ ಸ್ವರಾಜ್ಯ (ಸಂಪೂರ್ಣ ಸ್ವಾತಂತ್ರ್ಯ ಎಂಬ ಶಬ್ದವನ್ನು ತಪ್ಪಿ ಕೂಡ ಕಾಂಗ್ರೆಸ್ ಮುಂದಾಳುಗಳು ಉಪಯೋಗಿಸಿಲ್ಲ) ವನ್ನು ಬೇಡುತ್ತಿದೆ ! ಅದಕ್ಕೆ ಪ್ರತಿಯಾಗಿ ಬ್ರಿಟಿಶ್ ಸರಕಾರವು—ಅಲ್ಪಸಂಖ್ಯಾಕರೆಲ್ಲ ಸಂತುಷ್ಟರಾಗಿ ಭಾರತೀಯರ ಐಕ್ಯವಾದ ದಿವಸ ವಸಾಹತ ಸ್ವರಾಜ್ಯವನ್ನು ಕೊಡುವೆವು ಎಂದು ಎಂದಿಗಿಂತ ಒಂದು ಹೆಜ್ಜೆ ಮುಂದೆ ಹೋಗಿ ಮಾತನಾಡಿದೆ. ಆದರೆ ಅಲ್ಪಸಂಖ್ಯಾಕರೆಂದರೆ ಯಾರು ? ನಿರುದ್ಯೋಗಿಗಳ ಇಲ್ಲವೆ ಸ್ವಾರ್ಥಸಾಧಕರ ಇಲ್ಲವೆ ದೇಶಹಿತಶತ್ರುಗಳ ಗೂಡು-ಗುಂಪುಗಳಿಗೆ ' ಸಂಸ್ಥೆ ' ಎಂಬ ಸನ್ಮಾನವನ್ನು ಸಲ್ಲಿಸಬಹುದೆ ? ಇದಲ್ಲದೆ ' ಅಲ್ಪಸಂಖ್ಯಾಕರ ಸಂರಕ್ಷಣೆ ನಮ್ಮದು ' ಎಂದು ಬ್ರಿಟಿಶರು ನುಡಿಯುವುದು ಪ್ರಜಾತತ್ತ್ವದ, ವಸಾಹತಸ್ವರಾಜ್ಯ ಸ್ವಾತಂತ್ರ್ಯದ ಮೂಲತತ್ತ್ವಕ್ಕೆಯೆ ವಿರುದ್ಧವಾಗಿದೆ. ಅಲ್ಪಸಂಖ್ಯಾಕರ ಸಂರಕ್ಷಣೆಯ ಹೊಣೆಗಾರಿಕೆ ಬಹುಸಂಖ್ಯಾಕರದು. ಕಾಂಗ್ರೆಸ್ಸು ಬಹುಸಂಖ್ಯಾಕರ ಸಂಸ್ಥೆ. ಕಾಂಗ್ರೆಸಿನಿಂದ ಅಲ್ಪಸಂಖ್ಯಾಕರಿಗೆ ಅನಿಷ್ಟವಾಗಿದೆ ಎಂದು ಬ್ರಿಟಿಶರು ತಿಳಿಯುವರೆ ? ಇದುವರೆಗೆ ಕಾಂಗ್ರೆಸ್‌ರಾಜ್ಯದ ಪ್ರಾಂತಗಳಲ್ಲಿ ಇಂತಹ ಅಕಾರ್ಯವಾಗಿದೆಯೆ? ಆಗಿಲ್ಲ-ಎಂದೇ ಧೈರ್ಯವಾಗಿ ಹೇಳಬಹುದು. ಯಾಕೆಂದರೆ ಅಲ್ಪಸಂಖ್ಯಾಕರನ್ನು ರಕ್ಷಿಸುವ ವಿಶೇಷಾಧಿಕಾರ ಗವ್ಹರ್ನರರಿಗಿದೆ. ಒಬ್ಬ ಗವ್ಹರ್ನರನೂ ಆ ಅಧಿಕಾರಗಳನ್ನು ಉಪಯೋಗಿಸಿಲ್ಲ ಎಂಬುದರ ಅರ್ಥವೇನು ? ಅಲ್ಪಸಂಖ್ಯಾಕರಿಗೆ ಕಾಂಗ್ರೆಸು ಅಹಿತವನ್ನು ಬಗೆದೆ ಇಲ್ಲ—ಎಂದಲ್ಲವೆ ? ಈ ಪರಿಸ್ಥಿತಿಯಲ್ಲಿ ವೈಸರಾಯರಾಗಲಿ ಬ್ರಿಟಿಶ ಸರಕಾರವಾಗಲಿ ಅಲ್ಪಸಂಖ್ಯಾಕಸಂರಕ್ಷಣೆಗಾಗಿ ಈಗ ಹೇಳುವ ಮಾತನ್ನು ಹೇಳಲು ಅನಧಿಕಾರಿಗಳು, ಅದಕಾಗಿ ಕುಂಟುನೆಪವನ್ನು ಮುಂದೊಡ್ಡಿದ್ದಾರೆ ಎಂಬ ರಾಷ್ಟ್ರಪತಿಗಳ ಅಭಿಪ್ರಾಯವು ಯಥಾರ್ಥವಾಗಿದೆ.

ಭವಿತವ್ಯ ?

ಸದ್ಯದ ಪರಿಸ್ಥಿತಿಯಲ್ಲಿ ಕಾಂಗ್ರೆಸ್ಸು ಅಚೇತನ ಅಸಹಕಾರವನೆ ಮುಂದೆ ಸಾಗಿಸುವುದೊ — ಇಲ್ಲವೆ ಕೆಲವೊಂದು ಘಟನಾತ್ಮಕ ತತ್ತ್ವಗಳ (ಮೇಲೆ ಹೇಳಿದಂತಹ) ಸ್ಪಷ್ಟೀಕರಣವನ್ನು ಪಡೆದುಕೊಂಡು ಪರಿಸ್ಥಿತಿಯ ಲಾಭವನ್ನು ಪಡೆದುಕೊಳ್ಳುವುದೊ — ಎಂಬುದೆ ಮಹತ್ತ್ವದ ಪ್ರಶ್ನೆಯಾಗಿದೆ. ಒಂದು — ಧ್ಯೇಯಸಾಧಕ ವಿರೋಧ, ಇಲ್ಲವೆ — ಕಾರ್ಯಸಾಧಕ ಸಹಕಾರ ಇವೆರಡು ಮಾರ್ಗಗಳನ್ನೂ ಬಿಟ್ಟಲ್ಲಿ, ವರ್ಕಿಂಗ್ ಕಮಿಟಿಗೆ ನೇತೃತ್ವಕ್ಕಾಗಿ ಶಕ್ತಿಯಾಗಲಿ ಚಾತುರ್ಯವಾಗಲಿ ಧೈರ್ಯವಾಗಲಿ ಸಾಲಲಿಲ್ಲ ಎಂದೇ ಹೇಳಬೇಕಾಗುವುದು.

ದಿವಳಿಗೆ ಕನ್ನಡಿಗರನ್ನು ಬೆಳಕಿನ ದಾರಿಯಲ್ಲಿ ನಡೆಯಿಸಲಿ !

ಅಲಕ್ಷಿಸಬಾರದ ಅಲ್ಪ ಸಂಗತಿಗಳು (ಕನ್ನಡಿಗರ ಸ್ವಭಾವ ವಿಮರ್ಶೆ)	ಶ್ರೀ. ಬನ್ನಂಜೆ ರಾಮಾಚಾರ್ಯರು	೪೯೧
......ರಿ..! (ಸಣ್ಣ ಕಥೆ)	ಶ್ರೀ. ಆರ್. ಪಿ. ಹುಯಿಲಗೋಳ ಬಿ. ಎಸ್‌ಸಿ.	೪೯೫
ಅಚ್ಚುಕಟ್ಟಿನ ಉಡಿಗೆ-ತೊಡಿಗೆ, ನಿಚ್ಚ ದೀವಳಿಗೆ! (ಪ್ರಸಾಧನ ವಿಚಾರ)	ಶ್ರೀ. ಹಳಕಟ್ಟಿ ಚಿಂತಾಮಣಿರಾಯರು ಬಿ. ಸಿ. ಡಿ.	೪೯೭
ಕವಿಮಾತು	ಸಂಪಾದಕ ಮಂಡಲಿ	೪೯೯
ನಗೀಗೆ ನೇವಿದ್ಯ	ಶ್ರೀ. ' ಸಕಲೀ ನಾರಾಯಣಾಚಾರ '	೫೦೦
ನಾಲ್ಕಾ ನಿಟ್ಟಿನ ನೋಟ	' ನಿರೀಕ್ಷಕರು '	೫೦೨

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾರವಾಡ.

- **ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು ಈ ಭರದಿಂದ ಬೆಳೆಯುತ್ತಿರುವ ಕನ್ನಡಕಂಪನಿಯ ಪಾಲಿಸಿಯನ್ನೇ ಪಡೆಯಬೇಕು !**
- ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.
- ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಳಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ ಎಲ್ಲರ ನಂಬಿಗೆಗೂ ತಕ್ಕುದಾಗಿದೆ.
- ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡ ನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೆ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು :—

ಎಸ್. ಗೋವರ್ಧನರಾವ್ ಮ್ಯಾನೇಜರ್

The United Karnatak Insurance Co. Ltd., DHARWAR.

ಪಂಚಗಣಿ ಹಿಂದೂ ಹೈಸ್ಕೂಲ್

ಪಂಚಗಣಿ, ಸಾತಾರಾ ಜಿಲ್ಲೆ

ಹಿಂದೂ ಬಾಲಕರಿಗಾಗಿ ವಸತಿಗೃಹವುಳ್ಳ, ಮಾದರಿಯ ಮಾಧ್ಯಮಿಕ ಶಾಲೆಯಿದು. ಮಹಾಬಳೇಶ್ವರದ ಬಳಿಯಲ್ಲಿ - ಸಮುದ್ರಪಾತಳಿಯಿಂದ ೪೩೦೦ ಅಡಿ ಎತ್ತರದ ಮೇಲೆ- ಆಲ್ಹಾದಕರವಾದ ಹವೆಯಲ್ಲಿಯೂ, ಚಿತ್ತಾಕರ್ಷಕವಾದ ಪ್ರದೇಶದಲ್ಲಿಯೂ ಈ ಶಾಲೆಯ ಸ್ವತಂತ್ರ ಕಟ್ಟಡವಿದೆ. ಪ್ರಾಥಮಿಕ ಶಿಕ್ಷಣದಿಂದ ಮ್ಯಾಟ್ರಿಕಿನ ವರೆಗೆ ಇಲ್ಲಿ ಶಿಕ್ಷಣವು ದೊರೆಯುವುದು. ಹೊಸ ಟರ್ಮು ಮೇ ತಿಂಗಳ ೧ನೆಯ ತಾರೀಖಿನಿಂದ ಪ್ರಾರಂಭವಾಗುವುದು. ಕನ್ನಡ ಕಲಿಸುವ ಏರ್ಪಾಡೂ ಇದೆ. ಮಕ್ಕಳನ್ನು ಬೇಕಾದಾಗ ಕಳುಹಿದರೂ ಪ್ರವೇಶ ದೊರೆಯುವುದು. ವಿವರಗಳಿಗಾಗಿಯೂ ಪ್ರಾಸ್‌ಪೆಕ್ಟಸ್ಸಿಗಾಗಿಯೂ ಸಂಸ್ಥೆಯ ಸುಪರಿಂಟೆಂಡೆಂಟರಿಗೆ ಬರೆದುಕೊಳ್ಳಿರಿ.

ಕನ್ನಡಿಗರಿಗೊಂದು ಅಭಿಮಾನದ ಸಂಗತಿ

ಸೇವಾದಳದ ಮೂಲಕ ಹುಬ್ಬಳ್ಳಿಯ ಹೆಸರು ಹಿಂದುಸ್ಥಾನಕ್ಕೆಲ್ಲ ಗೊತ್ತಾಯಿತು!

—— ಅದರಂತೆಯೆ ——

'ಸಿದ್ಧೇಶ್ವರ ಮತ್ತು ಕಂಪನಿ' ಯ

ಹೊಸ ಮಾದರಿಯ

ತಿಜೋರಿಗಳು

ಹುಬ್ಬಳ್ಳಿಯ ಹೆಸರನ್ನು ಭಾರತದ ತುಂಬ ಎತ್ತಿ ಮೆರೆಯಿಸುತ್ತಿವೆ.

★

ಕಳ್ಳರ ಭೀತಿಗಾಗಿ
ಕಳವಳಿಸುವ
ಕಾರಣವೇ
ಇಲ್ಲ!

★



★

ಬೆಂಕಿಯ ಭಯದಿಂದ
ಬೆದರುವ
ಸಂದರ್ಭವೂ
ಇಲ್ಲ!

★

ಹಣಗಾರ! ನಿಮ್ಮ ಹಣಕ್ಕೆ ಸಂರಕ್ಷಣೆ ಬಯಸಿ ... ಗಳಿಗೆ ಅಲೆದಾಡಬೇಕಾಗಿಲ್ಲ!
ಬಡ್ಡಿಯಿಲ್ಲದ ಬ್ಯಾಂಕಿನಲ್ಲಿ ಇಡುವುದಕ್ಕಿಂತ ನಿಮ್ಮ ಹಣವನ್ನು ನಿಮ್ಮ ಬಳಿಯಲ್ಲಿಯೇ
ಭದ್ರವಾಗಿ ಇರಿಸಿಕೊಳ್ಳುವುದು ಒಳ್ಳೆಯದಲ್ಲವೆ?

ಅದಕ್ಕಾಗಿ 'ಸಿದ್ಧೇಶ್ವರ ಮತ್ತು ಕಂಪನಿ, ಹುಬ್ಬಳ್ಳಿ' ಇವರನ್ನು

ಕೂಡಲೆ ಬಿಲ್ಲಿಯ ಫಾಯರ್ ಪ್ರೂಫ್ ತಿಜೋರಿಯನ್ನು ಕೊಳ್ಳಿರಿ!

ಹೈದ್ರಾಬಾದ್ (ದಕ್ಷಿಣ), ಬೆಳಗಾಂವಿಗಳಲ್ಲಿ ನಮ್ಮ ಬ್ರಾಂಚ್ ಆಫೀಸುಗಳಿವೆ.
ಕೊಲ್ಹಾಪುರ, ದಾವಣಗೇರಿಗಳಲ್ಲಿ ನಮ್ಮ ಏಜನ್ಸಿಗಳಿವೆ.

Printer K. R. Bhise Karnatak Printing Works, Dharwar. Edited and published by M. ... Patil at the Jayanti Office ...

చందమామ

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚಸೇರಿ ೩—೦—೦ …… ವ್ಹಿ. ಪಿ. ಯಿಂದ ೩-೫-೦ …… ಬಿಡಿಸಂಚಿಕೆಗೆ ೪ ಆಣೆ.

ಸಂಪಾದಕರು :

ಪಾಟೀಲ ಮಾಧವರಾಯರು   ಬೆಟಗೇರಿ ಕೃಷ್ಣಶರ್ಮರು

೨ನೆಯ ವರ್ಷ	ಡಿಸೆಂಬರ್ ೧೯೩೯	೮ನೆಯ ಸಂಚಿಕೆ

ಮುಖ್ಯ ವಿಷಯಗಳ ಪರಿವಿಡಿ

ಬೇಹಾರಗಾತಿ (ವಿಚಾರತರಂಗಿಣಿ)	ಶ್ರೀ. ' ಸಾಮಾಜಿಕ '	[illegible]
ಹಸಿವಿಗಾಗಿ ಈ ಹೋರೆ ' (ಚಿತ್ರ)	ಶ್ರೀ. ಶಂ. ವಾ. ಆಳಂದೀಕರ್	[illegible]
ಸಂಪಾದಕೀಯ	ಸಂಪಾದಕರು	[illegible]
ಮಂಗನ ಮಲ್ಲಿನಾಥತನ	' ಮಲ್ಲಿನಾಥ '	[illegible]
ಕೆರ್ ವ್ಯಾಸ್ ರಿಬನ್ ಟ್ರೊಫಾ (ವ್ಯಕ್ತಿ ಪರಿಚಯ)	ಶ್ರೀ. ಜಾರ್ಮನಿಯ ' ಸಿರಂಗ '	[illegible]
ಕವಿಮಾತು	ಸಂಪಾದಕ ಮಂಡಲಿ	[illegible]
ಗೋಧಿಸಾಗರ (ಪತ್ತೇದಾರಿ ಕಥೆ)	ಶ್ರೀ. ಎನ್. ಸೂರಪ್ಪ ಚಿತ್ರದುರ್ಗ	[illegible]
ಸಹಶಿಕ್ಷಣ (ಖಂಡನಾತ್ಮಕ ವಿಮರ್ಶೆ)	ಶ್ರೀ. ಜೋಶಿ ಶಾಮಾಚಾರ್ಯರು	[illegible]
ನಿನಗೆ ನಾನೆಂತು (ಕವನ)	ಶ್ರೀ. ಕೃಷ್ಣಮೂರ್ತಿ ಪುರಾಣಿಕ ಬಿ. ಎ.	[illegible]
ನೌಕಾವಿಹಾರ (ಕವನ)	ಶ್ರೀ. ' ಶ್ರೀಕೃಷ್ಣ ' ಶಾರದಾಮಂಡಲ	[illegible]
ಏಕಪತ್ನೀವ್ರತ (ಏಕಾಂಕ ನಾಟಕ)	ಶ್ರೀ. ಸಿ. ಕೆ. ಅಣ್ಣಾಸ್ವಾಮಿರಾವ್	[illegible]
ಸೋಲರಿಯದ ಜಪಾನೀಯರ ವ್ಯಾಪಾರ ಪಣ	ಡಾ. ಎನ್. ಎಸ್. ಗೋಡಬೋಲೆ ಎಂ.ಎ., ಪಿ.ಎಚ್.ಡಿ	[illegible]
ಬೈರಾಗಿ ಭಾಷೆ ಸಲ್ಲಿಸಿದ (ಸಣ್ಣಕಥೆ)	ಶ್ರೀ. ಎಚ್. ಎ. ಭಟ್ ಬಿ. ಎಸ್‌ಸಿ.	[illegible]
ಕನ್ನಡಿಗನೊಬ್ಬ ಕಟ್ಟಿದ ಕೀರ್ತಿಯ ಗುಡಿ (ಕಾರಖಾನೆಯ ಪರಿಚಯ)	ಶ್ರೀ. ಕೃಷ್ಣಮೂರ್ತಿ ಹೆಬ್ಬಳ್ಳಿ	[illegible]
ಸಮಾಜಸಮರ್ಪಣ (ನಾಗಪ್ಪನ ಕಥೆ)	ಪ್ರೊ. ಎನ್. ಎಂ. ಕುಲಕರ್ಣಿ ಎಂ. ಎ.	[illegible]
ಸ್ವಲ್ಪದರಲ್ಲಿ ಸ್ವಾರಸ್ಯ (ಹರಟೆ)	ಶ್ರೀ. ' ಶ್ರೀರಂಗ '	[illegible]
ಹುಳು (ಕವನ)	ಶ್ರೀ. ಸಾಲಿ ರಾಮಚಂದ್ರರಾಯರು ಬಿ. ಎ.	[illegible]
ಮದ್ರಾಸಿ ಕರ್ನಾಟಕ (ಪರಿಸ್ಥಿತಿ ವಿಮರ್ಶೆ)	ಶ್ರೀ. ಎಂ. ರಾಘವೇಂದ್ರರಾವ್ ಬಿ.ಎ., ಎಲ್‌ಎಲ್.ಬಿ.	[illegible]
ಬಳಕುಪ್ಪಸ (ಹೊಲಿಗೆಯ ಜೀವನ)	ಶ್ರೀ. ಹಳಪೇಟೆ ಚಿಂತಾಮಣಿರಾಯರು ಟಿ. ಸಿ. ಡಿ.	[illegible]
ಪುಸ್ತಕವಿಮರ್ಶೆ	ಶ್ರೀ. ಎಚ್. ಎಸ್. ಪಾಟೀಲ, ' ಕಂ. ಪ ' ಮಂ.	[illegible]
ನಗೀಗೆ ನೇವಿದ್ಯ	ಶ್ರೀ. ' ನಕಲೀ ನಾರಾಯಣಾಚಾರ '	[illegible]
ಸಾದರಸ್ವೀಕಾರ	.. ..	[illegible]
ನಾಲ್ಕ್ಯಾ ನಿಟ್ಟಿನ ನೋಟ	' ನಿರೀಕ್ಷಕರು '	[illegible]

ಜಯಂತಿಯ ' ಮಹಾಯುದ್ಧದ ಸಂಚಿಕೆ ' ಹೊರಡಲಿದೆ; ತಮ್ಮ ಲಕ್ಷ್ಯದಲ್ಲಿರಲಿ !

ಸಂಚಿಕೆ ೮

ಡಿಸೆಂಬರ್



ವರ್ಷ ೨

೧೯೩೯

ಬೇಹಾರಗಾತಿ

★

ಹರಿದಾಸಿಯರು ತಾಳಕಟಿದು ಹಾಡುತ್ತ ಹೊತ್ತುಕಳೆಯುವರು; ಶಿವಶರಣೆಯರು ಶಿವಧ್ಯಾನದಲ್ಲಿ ದಿವಸಗಳನ್ನು ದಬ್ಬುವರು; ಯೋಗಿನಿಯರು ಕಣ್ಮುಚ್ಚಿ ಧ್ಯಾನಾಸಕ್ತರಾಗಿ ದಿನಗಳೆಯುವರು. ಬೇಹಾರಗಾತಿ ತಿರುಗಾಡುತ್ತ ತನ್ನ ವ್ಯಾಪಾರದಲ್ಲಿ ಮನಸ್ಸನ್ನು ತೊಡಕಿಸಿರುವಳು.

★

ಹರಿದಾಸಿಗೂ, ಹಸಿವೆಯಿದೆ; ಶಿವಶರಣೆಗೂ ಹಸಿವೆಯಿದೆ; ಯೋಗಿನಿಗೂ ಹಸಿವೆಯಿದೆ; ಬೇಹಾರಗಾತಿಗೂ ಹಸಿವೆಯಿದೆ. ಆದರೆ ಹಸಿವೆಗಾಗಿ ತಾನೆ ದುಡಿಯುವಳು ಬೇಹಾರಗಾತಿ, ಇನ್ನೊಬ್ಬರ ಮೇಲೆ ಹೊರೆಹಾಕುವರು ಮಿಕ್ಕವರು.

★

ಹರಿದಾಸಿ ತನ್ನೊಬ್ಬಳ ಆನಂದಕ್ಕಾಗಿ ಹವಣಿಸುವಳು. ಶಿವಶರಣೆ ತನ್ನೊಬ್ಬಳ ಸಂತೋಷಕ್ಕಾಗಿ ಚಿಂತಿಸುವಳು. ಯೋಗಿನಿ ತನ್ನೊಬ್ಬಳ ಮುಕ್ತಿಗಾಗಿ ಹಾರಯಿಸುವಳು. ಬೇಹಾರಗಾತಿ ತನ್ನ ಸುಖ-ಸಂತೋಷಗಳನ್ನು ನೋಡುವಳಲ್ಲದೆ ಇನ್ನೊಬ್ಬರ ಯೋಗ-ಕ್ಷೇಮಗಳಿಗೂ ನೆರವಾಗಿ ನಿಲ್ಲುವಳು.

★

ಸಾಂಪ್ರದಾಯಿಕ ದೃಷ್ಟಿಗೆ ಹರಿದಾಸಿ-ಶಿವಶರಣೆ-ಯೋಗಿನಿಯರು ಮೇಲುಮಟ್ಟಕ್ಕೇರಿದವರು; ಕರ್ಮಯೋಗಿನಿಯಾದ ಬೇಹಾರಗಾತಿ, ಭೂತಳದ ಕೆಸರಲ್ಲಿ ಹೊರಳಾಡುವವಳು. ಬೇಹಾರಗಾತಿಯಿಂದ ಸಮಾಜದ ಹಸಿವೆಯ ಬೆಂಕಿಗೆ ತಣ್ಣೀರು ಬೀಳುವುದು; ಮಿಕ್ಕ ಮೇಲುಮಟ್ಟದ ಮಾನಿನಿಯರಿಂದ ಎಣ್ಣೆ-ಬೆಣ್ಣೆ ಬೀಳುವುದು. ಆದರೂ ಬೇಹಾರಗಾತಿ ಮಾನವಿ; ದಾನವಿ!

— ಸಾಮಾಜಿಕ

ಹಸಿವೆಗಾಗಿ ಈ ಹೊರೆ!

‘ಇಷ್ಟೂ ನು ಮಾಡೋದು ಹೊಟ್ಟೆಗಾಗಿ,
ಗೇಣು ಬಟ್ಟೆಗಾಗಿ’ ಸರಿ! ಮಾಡದ ಬಟ್ಟೆ?



ಬರಲಿರುವ ಕ. ಸಾ ಸಮ್ಮೇಳನ

ಗಡಿನಾಡಿನ ಕನ್ನಡಿಗರ ಹೃದಯದಲ್ಲಿ ಕನ್ನಡದ ಪ್ರೀತಿಯ ಕೋಟೆಯನ್ನು ಕಟ್ಟಬೇಕಾಗಿದೆ. ಅದುದರಿಂದಲೆ ಕನ್ನಡಿಗರ ಬುದ್ಧಿ-ಭಾವನೆ-ಪರಾಕ್ರಮಗಳು ಮಾಡಿದ—ಮಾಡುತ್ತಿರುವ—ಕಾರ್ಯಗಳ ಪ್ರದರ್ಶನವು ಕರ್ನಾಟಕದ ಸೀಮಾಪ್ರದೇಶಗಳಲ್ಲಿ ಆಗಾಗ ಆಗಬೇಕಾದುದು ತುಂಬ ಅಗತ್ಯ; ಮಾಡಲಿರುವ ಕಾರ್ಯಗಳ ಬಗೆಗೆ ಊಹಾಪೋಹವಾಗಬೇಕಾದುದು ಅವಶ್ಯಕ. ಎಂತಲೆ ಅಖಿಲಕರ್ನಾಟಕ ಸಾಹಿತ್ಯಸಮ್ಮೇಲನದ ಅಧಿವೇಶನವು ಇದೀಗ ನಾಲ್ಕನೆಯ ಸಲ (ಜಮಖಂಡಿಯದನ್ನು ಸೇರಿಸಿ) ಬೆಳಗಾಂವಿಯ ನಾಡಿಗೆ ಬರುತ್ತಲಿದೆ. ಇಂದಿನ ಕರ್ನಾಟಕ ರಾಜಕಾರ್ಯದ ಪಕ್ಷ-ಪಂಗಡಗಳ ಹೊಡೆದಾಟದ ಮೂಲಕ, ನಮ್ಮ ನಾಡಿಗೆ ಅನಿವಾರ್ಯವೆನಿಸಿರುವ ಏಕೀಕರಣದ ಮಾತು ಮೌನವನ್ನು ತಾಳುತ್ತ ನಡೆದಿದೆ. ಕರ್ನಾಟಕ ಸಾಹಿತ್ಯಸಮ್ಮೇಳನದ ಈ ಅಧಿವೇಶನವು ಆ ಮೌನಕ್ಕೆ ಮತ್ತೆ ಮಾತುಗಳನ್ನು ಮೂಡಿಸಬೇಕಾಗಿದೆ. ರಾಜಕಾರ್ಯಪ್ರಪಂಚದಲ್ಲಿ ಏನೇನೋ ಸ್ವಾರ್ಥದ ಮಿಂಚುಗಳು ಮಿಂಚಿ ಕಣ್ಣುಗಳನ್ನು ಕುಕ್ಕಿಸುವುವು. ಅವುಗಳನ್ನು ತನ್ನ ಅಧೀನದಲ್ಲಿ ಇರಿಸಿಕೊಳ್ಳಬೇಕೆಂಬ ರಜೋವೃತ್ತಿ ಡೊಂಬರಾಟವನ್ನು ನಡೆಯಿಸಿ, ಪಕ್ಷ-ಪಂಗಡಗಳನ್ನು ಸೃಷ್ಟಿಸುವುದು. ಸಾಹಿತ್ಯಸಮ್ಮೇಳನವಾದರೊ ಕೇವಲ ಸಾಂಸ್ಕೃತಿಕ ಕ್ಷೇತ್ರವನ್ನೊಳಗೊಂಡುದು. ಇಲ್ಲಿ ಭೌತಿಕಸ್ವಾರ್ಥದ ಮಿಂಚುಗಳಾವುವೂ ಕಣ್ಣನ್ನು ಕಟ್ಟವು. ಬುದ್ಧಿ-ಜ್ಞಾನಗಳ ದಿವ್ಯಜ್ಯೋತಿಯ ಬೆಳಕಿನಲ್ಲಿ ಸತ್ಯವನ್ನೇ ಕಂಡುಕೊಳ್ಳಬಹುದಾದ ಎಡೆಯಿದು. ಎಂತಲೆ ಇಲ್ಲಿ ಜಾತಿಗೆ ಬೆಲೆಯಿಲ್ಲ, ನೀತಿಗೆ ಬೆಲೆಯಿದೆ. ಹಿರಿಯತನಕ್ಕೆ ಬೆಲೆಯಿಲ್ಲ, ಅರುಹಿಗೆ ಬೆಲೆಯಿದೆ. ದುಡ್ಡಿದ್ದವರೆಲ್ಲ ದೊಡ್ಡವರೆನಿಸರು, ಜ್ಞಾನಸಾಧಕರಿಗೆ ಮಾನವಿದೆ. ಕುರಿಯ ಹಿಂಡಿನಂತಹ ಜನಸಾಮಾನ್ಯರ ಬಹುಮತಕ್ಕೆ ಬೆಲೆ ಇರದು; ಅರಿದು ಒರೆದು ನೋಡುವ ಒಬ್ಬನೆ ಒಬ್ಬ ವಿಚಾರವಾದಿಯ ಒಂದೆ ಒಂದು ಮಾತಿಗೂ ವಿಶಿಷ್ಟವಾದ ಬೆಲೆಯಿದೆ. ಎಂತಲೆ ಸಾಹಿತ್ಯ-ಪ್ರಪಂಚದಲ್ಲಿ ವ್ಯಕ್ತಿ-ವ್ಯಕ್ತಿಗಳಲ್ಲಿಯೂ ಗುಂಪು-ಗುಂಪುಗಳಲ್ಲಿಯೂ ವೈಷಮ್ಯ ಬೀಳಲಾಗದು; ಇರಲಾರದು. ಆದುದರಿಂದ ಬರಲಿರುವ ಸಾಹಿತ್ಯಸಮ್ಮೇಳನದ ಅಧಿವೇಶನವಾದರೂ ಒಡೆದುಹೋಗಿರುವ ಕನ್ನಡಿಗರ ಎದೆಗಳ ಒಸುಗೆಗೆ ಕಾರಣವಾಗಬಹುದೆಂದು ನಿರೀಕ್ಷೆಯಿದೆ. ನಿರೀಕ್ಷೆಗೆ ತಕ್ಕಂತೆ ಕನ್ನಡಿಗರೆಲ್ಲರ ಒಲುಮೆಗೂ ಮನ್ನಣೆಗೂ ಪಾತ್ರರಾದ ಶ್ರೀಮಾನ್ ಮುದವೀಡು ಕೃಷ್ಣರಾಯರು ಸಾ. ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಹೊಂದಿದ್ದಾರೆ. ಅಖಂಡವಾಗಿ ಜ್ವಲಿಸುತ್ತಿರುವ ಅವರ ಹೃದಯದಲ್ಲಿಯ ಕನ್ನಡದ ಅಭಿಮಾನಜ್ಯೋತಿ, ತನ್ನ ಪ್ರಕಾಶದಲ್ಲಿ ಕನ್ನಡಿಗರನ್ನೆಲ್ಲ ಒಂದುಗೂಡಿಸಿ ಮುಂದೆ ಕರೆದೊಯ್ಯಲೆಂಬುದೇ ನಮ್ಮ ಮುಖ್ಯವಾದ ಆಕಾಂಕ್ಷೆ.

ಮಾನ್ಯ ಮುದವೀಡು ಕೃಷ್ಣರಾಯರು

ಕನ್ನಡದ ಪ್ರೀತಿಯೆ ಮೂರ್ತಿಗೊಂಡು, ಶ್ರೀಮಾನ್ ಮುದವೀಡು ಕೃಷ್ಣರಾಯರಾಗಿದ್ದಾರೆ. ಅವರ ಗುಡುಗಿನ ದನಿಯ ಸಿಡಿಲುನುಡಿಗಳಿಗೆ ಬೆಚ್ಚಿ ಎಚ್ಚರುಗೊಳ್ಳದ ಕನ್ನಡಿಗರಿಲ್ಲ. ಕನ್ನಡನಾಡಿಗೆ ಬಂದ ಪರಭಾಷೆಯ ದೇಶಭಕ್ತರೆಲ್ಲ ತಮ್ಮ ಮಾತುಗಳನ್ನು ಶ್ರೀ. ಕೃಷ್ಣರಾಯರ ಮಾತಿನಲ್ಲಿ ಪ್ರತಿಧ್ವನಿಗೊಳಿಸಲು ಆಶಿಸುವರು. ಇಂಗ್ಲಿಷಿರಲಿ, ಹಿಂದಿಯಿರಲಿ, ಮೂಲಭಾಷಣದ ಆಶಯವನ್ನು—ಸ್ವಲ್ಪವೂ ಕೊರತೆಯೆನಿಸದಂತೆ—ನಿಂತುನಿಂತಲ್ಲಿಯೆ ಕನ್ನಡಿಸಿ ತೋರಿಸುವಂತಹ ವಿಲಕ್ಷಣ ಸಾಮರ್ಥ್ಯವಿವರದು. ಪತ್ರಿಕಾವ್ಯವಸಾಯ, ರಾಜಕೀಯ ಚಳವಳಿ ಇವುಗಳಿಗೆ ತಮ್ಮ ಆಯುಷ್ಯವನ್ನೇ ಧಾರೆಯೆರೆದವರಿವರು. ಕರ್ನಾಟಕದಲ್ಲಿ ನಾಟಕಾಭಿನಯಗಳ ಕಡೆಗೆ ಮನಸ್ಸು ಹಾಕಿದ ಸುಶಿಕ್ಷಿತ ಕನ್ನಡಿಗರಲ್ಲಿ—ಉತ್ತರ ಕರ್ನಾಟಕದಲ್ಲಂತೂ—ಇವರೇ ಮೊದಲಿಗರೆಂದು ಹೇಳಬಹುದು. ಗ್ರಂಥಲೇಖನ ಹೆಚ್ಚಾಗಿ ಮಾಡಲಿಲ್ಲವಿಷ್ಟೇ; ಮಾಡಿದ್ದರೆ ಅದರಲ್ಲಿಯೂ ತೃಪ್ತಿಕರವಾಗಿ ಇವರ ಕಲೆ ಕುಸುರುಗೊಂಡುದನ್ನು ಕಾಣಬಹುದಾಗಿದ್ದಿತು. ಏನಿಲ್ಲವೆಂದರೂ ರಾಯರು ಕಾದಂಬರಿ ಬರೆದಿದ್ದಾರೆ; ನಾಟಕಗಳನ್ನು ಬರೆದಿದ್ದಾರೆ; ಸಣ್ಣಕತೆ ಬರೆದಿದ್ದಾರೆ; ಹಾಡು-ಕವಿತೆಗಳನ್ನು ಬರೆದಿದ್ದಾರೆ. ಸಾಹಿತ್ಯದ ಅಭ್ಯಾಸದೃಷ್ಟಿಯಿಂದ ನೋಡಬಹುದಾದರೆ ಲಕ್ಷ್ಮೀಶ, ಕುಮಾರವ್ಯಾಸರ ಗ್ರಂಥಗಳ ಎಷ್ಟೋ ಭಾಗಗಳು ರಾಯರಿಗೆ ಮುಖೋದ್ಗತವಾಗಿವೆ. ದಾಸವಾಙ್ಮಯದ ಮೇಲಂತೂ ಇವರ ಪ್ರಭುತ್ವ ಸಾಕಷ್ಟಿದೆ. ಇವರ ರಸಿಕತೆಯನ್ನು ಕಾಣಬೇಕೆಂದು ಅಪೇಕ್ಷೆಯಿದ್ದವರು—ಈಗಲೂ—ಚುರಮುರಿ ಶಾಕುಂತಲ ನಾಟಕದ ವಿಷಯವನ್ನೆತ್ತಿ ಇವರನ್ನು ಕೆಣಕಿನೋಡಬೇಕು. ತಾಸೋ ಎರಡು ತಾಸೋ ತಾವೂ ಮೈಮರೆಯುವರು; ಎದುರು ಕುಳಿತವರನ್ನೂ ಮೈಮರೆಯಿಸುವರು. ಚುರಮುರಿ ಶಾಕುಂತಲದಲ್ಲಿಯ ಸ್ವಾರಸ್ಯವನ್ನು ಶ್ರೀ. ಕೃಷ್ಣರಾಯರಂತೆ ಒಳಹೊಕ್ಕು ಕಂಡ ಹಿರಿಯರು ಇನ್ನಾರೂ ಇಲ್ಲವೆಂದು ಖಂಡಿತವಾಗಿ ಹೇಳಬಹುದು. ಬರೆದರೂ ಸರಿಯೆ, ಮಾತನಾಡಿದರೂ ಸರಿಯೆ, ರಾಯರ ಭಾಷೆ ಕನ್ನಡನಾಡಿನ ಎಲ್ಲಭಾಗದವರಿಗೂ ಚೆನ್ನಾಗಿ ತಿಳಿಯುವಂತಹದು. ಸರಳಾರ್ಥದಿಂದ ಕೂಡಿದುದಾದರೂ ಬಂಧದ ಬಿಗುಪಿನಿಂದ ತುಂಬುಗಾಂಭೀರ್ಯದಿಂದ ಮೆರೆಯುವುದು. ಈ ಮೊದಲೆ ಶ್ರೀ. ಕೃಷ್ಣರಾಯರಿಗೆ ಕ. ಸಾ. ಸಮ್ಮೇಳನದ ಅಧ್ಯಕ್ಷಪದದ ಮಾನ ಸಲ್ಲಬೇಕಾಗಿದ್ದಿತು; ಅದೇತಕ್ಕೋ ಸಿಕ್ಕಿರಲಿಲ್ಲ. ಬೆಳಗಾಂವಿಯ ಸ್ವಾಗತಮಂಡಲದವರು ತಮ್ಮ ಕರ್ತವ್ಯಬುದ್ಧಿಯನ್ನು ತೋರಿಸಿ, ರಾಯರಿಗೆ ಆ ಮನ್ನಣೆಯ ಸಂದರ್ಭವನ್ನು ಒದಗಿಸಿ ಕೊಟ್ಟಿದ್ದಾರೆ. ಅದಕ್ಕಾಗಿ ಬೆಳಗಾಂವಿಯ ಕನ್ನಡಿಗರನ್ನು ಮನಸಾರೆ ಅಭಿನಂದಿಸುತ್ತೇವೆ.

ಚಂದಾದಾರರಲ್ಲಿ ಬಿನ್ನಹ

ಅನೇಕ ಜನರಿಂದ ಜಯಂತಿಯ ೨ನೆಯ ವರ್ಷದ ಚಂದಾಹಣ ಇದುವರೆಗೂ ಬರಲಿಲ್ಲ. ಕಳುಹಿಯೇ ಕಳುಹುತ್ತಾರೆಂಬ ವಿಶ್ವಾಸದಿಂದ ಇಲ್ಲಿಯವರೆಗೆ ಸಂಚಿಕೆಗಳನ್ನು ಕಳುಹುತ್ತಲೇ ಬಂದಿದ್ದೇವೆ. ದಯೆಯಿಟ್ಟು ವ್ಹಿ.ಪಿ.ಯ ದಾರಿಯನ್ನು ಕಾಯದೆ, ಬರಲಿರುವ ಡಿಸೆಂಬರ್ ೨೫ರೊಳಗಾಗಿ **೩-೦-೦ ಚಂದಾಹಣವನ್ನು ಮನಿಯಾರ್ಡರಿನಿಂದ ಕಳುಹಬೇಕಾಗಿ ಬಿನ್ನಹ.** ವ್ಹಿ. ಪಿ. ಮಾಡಿದರೆ ವ್ಯರ್ಥವಾಗಿ ಪ್ರತಿಯೊಬ್ಬರೂ ಮೂರಾಣೆಗಳನ್ನು ಹೆಚ್ಚಿಗೆ ತೆರಬೇಕಾಗುವುದೆಂಬುದನ್ನು ಎಲ್ಲರ ಲಕ್ಷ್ಯಕ್ಕೊ ತರಲೆಳಸುವೆವು.

ಮೈಸೂರು ಸಂಸ್ಥಾನದ ಪಾಠಶಾಲೆಗಳಿಗೆ:—

ಮೈಸೂರು ಸಂಸ್ಥಾನದ ಎಲ್ಲ ಹೈಸ್ಕೂಲು, ಮಿಡಲ್ ಸ್ಕೂಲು, ನಾರ್ಮಲ್ ಸ್ಕೂಲುಗಳಿಗೆ ಜಯಂತಿಯನ್ನು ತರಿಸಿಕೊಳ್ಳಬಹುದೆಂದು ಮೈಸೂರು ವಿದ್ಯಾಖಾತೆಯ ಮೇಲಧಿಕಾರಿಗಳಿಂದ (ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸ್ಟ್ರಕ್ಷನ್) ಒಪ್ಪಿಗೆ ದೊರೆತಿದೆ. 'ಜಯಂತಿ' ಮಾಸಪತ್ರಿಕೆಯ ವಿಶೇಷಪ್ರಯೋಜನವನ್ನರಿತು ಸಂಸ್ಥಾನದಲ್ಲಿಯ ಎಲ್ಲ ಪಾಠಶಾಲೆಗಳ ಮುಖ್ಯಾಧ್ಯಾಪಕರೂ ಅವಶ್ಯವಾಗಿ ತರಿಸಿಕೊಳ್ಳಬೇಕು. ಹೊಸಕಾಲದಲ್ಲಿ ಬದುಕಲಿರುವ ಪ್ರತಿಯೊಬ್ಬ ವಿದ್ಯಾರ್ಥಿಯೂ ಉಪಾಧ್ಯಾಯರೂ ಜಯಂತಿಯನ್ನು ಓದಿ ತಮ್ಮ ಜ್ಞಾನವನ್ನು ವಿವಿಧಮುಖವಾಗಿ ಹೆಚ್ಚಿಸಿಕೊಳ್ಳುವುದನ್ನು ಮರೆಯಲಾಗದು.

—ಸಂಪಾದಕರು.

ಮಂಗಪರಿಷತ್ತು

ಈ ತಿಂಗಳು ಇಡಿಯ ದೇಶದ ತುಂಬ ನೂರಾರು ಪರಿಷತ್ತುಗಳು ಸೇರಲಿವೆ. ಈ ಸಂದರ್ಭದಲ್ಲಿ ಮಂಗರಾಯನದೊಂದು ಸೂಚನೆ ಇದೆ. ಇತ್ತಿತ್ತಲಾಗಿ ಮಂಗಗಳಲ್ಲಿ ಜಾಗೃತಿ ಹೆಚ್ಚಾಗುತ್ತಲಿದೆ. ಈ ಪರಿಸ್ಥಿತಿಯ ಲಾಭವನ್ನು ಪಡೆದು ಮಂಗಗಳು ತಮ್ಮದೊಂದು ಪರಿಷತ್ತನ್ನು ಕೂಡಿಸಬೇಕು. ಯಾಕೆ ಕೂಡಿಸಬಾರದು ? ಅದರಲ್ಲಿ ರಾಜಕಾರಣದಲ್ಲಂತೂ ಮಂಗಸಮಾಜ ದಷ್ಟು ಅನುಭವವು ಮತ್ತಾವ ಸಮಾಜಕ್ಕೂ ಇಲ್ಲ. ದೇಶದಲ್ಲಿ ಯಾವ ಕಾಲಕ್ಕೆ ಯಾವ ಚಳ ವಳ ಏಳುವುದೊ ಆ ಚಳವಳದಲ್ಲಿ ಮೊದಲು ಧುಮುಕುವುದು ಮಂಗಸಮಾಜ; ಯಾವ ಪಕ್ಷವೆ ರಾಜಕಾರಣ ಧುರೀಣತ್ವವನ್ನು ವಹಿಸಿದರೆ ಸಾಕು ಟ್ಟನೆ ಆ ಪಕ್ಷವನ್ನು ಸೇರಿ ಕಸುಗೂಡಿಸುವುದು ಮಂಗಸಮಾಜ. ಹೀಗಾಗಿ ಅನೇಕ ಚಳವಳ ಗಳಲ್ಲಿ ಧುಮುಕಿದ ಗೌರವವೂ, ಅನೇಕ ಪಕ್ಷ ಗಳನ್ನು ಸೇರಿ ಪಡೆದುಕೊಂಡ ವಿವಿಧ ಅನು ಭವವೂ ಮಂಗಗಳಿಗಿದೆ. ಅದಕಾಗಿ ಮಂಗಗಳೂ ತಮ್ಮದೊಂದು ಪರಿಷತ್ತನ್ನು ಸೇರಿಸಬೇಕು, ಅರ್ಥಾತ್ ಮಂಗರಾಯನನ್ನು ಅಧ್ಯಕ್ಷನಾಗಿ ಆರಿಸಿ, ಅವನ ನೇತೃತ್ವದಲ್ಲಿ—ಸಾಕು, ನಯದಿಂದ ಮುಂದೆ ನಾಲಗೆಯು ಏಳದಂತಾ ವೆ; ಆದರೂ ನಮಸ್ತೇ!

* * *

೨. ಮಂಗರಾಯನು ಮೂರ್ಛೆಹೋದ ಕತೆ

ಮುಂಬಯಿಯಲ್ಲಿ ಕ್ರಿಕೆಟ್ ಪಂದ್ಯಾಟ ನಡೆ ದೆಯಷ್ಟೆ. ಅದರ ಮಾಹಿತಿಯನ್ನು ಕೊಡುವ ದಲ್ಲಿ ಕನ್ನಡ ವೃತ್ತಪತ್ರವೊಂದು ‘ಸ್ಫುಟ’ ವನ್ನು ಬರೆದಿದೆ! ಈ ಪಂದ್ಯಾಟವು ಜಾತೀಯ ತೆಯ ತಳಹದಿಯ ಮೇಲೆ ನಿಂತಿದೆ ಎಂದೂ, ನ್ನು ಮುಂದೆ ಜಾತೀಯತೆಯನ್ನು ಬಿಟ್ಟು ಬೇರೆ ತ್ತ್ವಗಳನ್ನನುಸರಿಸಿ ಟೀಮುಗಳನ್ನು ಆರಿಸಬೇ ಎಂದೂ ಈ ಸಂಪಾದಕೀಯದಲ್ಲಿ ಉದುರಿಸಿದ ಮುತ್ತುಗಳು! ಇವನ್ನು ಓದಿದ್ದರೆ ಸಿ. ಕೆ. ನಾಯುಡು ಅವರು ಇಡಿಯ ಆಯುಷ್ಯದ ವರೆಗೆ bowled out ಆಗಬಹುದಾಗಿತ್ತು! ಆಗದೆ ಏನು? ಅದನ್ನೋದಿ ಮಂಗರಾಯನಂತಹನೆ ಕೆಲ ಹೊತ್ತು ಮೂರ್ಛಿತನಾದನು. ಪ್ರತಿಯೊಂದು ಪುಟದಲ್ಲಿ, ನವರಸಗಳ ವಿವಿಧತೆಯಿಂದ ಅನ್ಯ-ಜಾತೀಯರನ್ನು ಕೆಣಕುವ ವೃತ್ತಪತ್ರವು ಇನ್ನೊಬ್ಬರಿಗೆ ಉಪದೇಶ ಮಾಡಬೇಕೆಂದರೆ—ಹಾಯ್! ಹಾಯ್! ಕಲಿಯುಗವೆ! ವಿಪರೀತ ಭೋಗವೆ! ಕ್ರಿಕೆಟ್‌ದ ಚಂಡು ಗಟ್ಟಿಯಾಗಿದ್ದು ಈ ಆಟವು ಅಹಿಂಸಾ ತತ್ತ್ವಕ್ಕೆ ಅನ್ವಯಿಸುವುದಿಲ್ಲವೆಂಬುದು ನಮ್ಮ ಸಹೋದ್ಯೋಗಿಗೆ ಗೊತ್ತಿರಬಹುದೆ? ಅಥವಾ ಗುಂಡುಹೊಡೆವಾಗ ಓಡಲು ಕುಶಲ ನಾದ ತನಗೆ ಚಂಡುಹೊಡೆದು ಓಡುವ ಆಟವೂ ಸುಲಭಸಾಧ್ಯವೆಂಬ ಕಲ್ಪನೆ ಇರಬಹುದೆ? ಅಥವಾ ವಾಚಕರೆ, ಈ ವಿಷಯವು ಎಲ್ಲ ದೃಷ್ಟಿಯಿಂದಲೂ ಮಂಗರಾಯನ ಬುದ್ಧಿಶಕ್ತಿಯನ್ನು ಮೀರಿದ್ದರಿಂದ ಅವನು ತಮ್ಮೆಲ್ಲರ ಅಪ್ಪಣೆಯಿಂದ ಇನ್ನೊಮ್ಮೆ ಮೂರ್ಛೆಹೋಗುವನು.

* * *

೩. ಅಮರ-ಮಂಗ-ಕೋಶ

‘ದುರಂತ, ದುರಂತ’ ಎಂಬ ಶಬ್ದವು ಈಗ ಎಲ್ಲ ಕಡೆಯಲ್ಲೂ ಪ್ರಚಾರದಲ್ಲಿ ಬಂದಿದೆಯಷ್ಟೆ? ಹೋದ ತಿಂಗಳು ಬೆಳಗಾಂವಿಯಲ್ಲಿ ಸೇರಿದ ಕರ್ನಾಟಕ ಕಾಂಗ್ರೆಸ್ ಕಾರ್ಯಕರ್ತರ ಸಭೆ ಯಿಂದಂದಿನಿಂದ ಈ ‘ದುರಂತ’ ಪರಿಸ್ಥಿತಿ ಹೋಯಿತಂತೆ. ಇದಕಾಗಿ ವಾಚಕರಿಂದ ಮಂಗ ರಾಯನಿಗೆ ಅನೇಕ ಪತ್ರಗಳು ಬಂದಿವೆ. ದುರಂತ ದೂರಾದ ಪರಿಸ್ಥಿತಿಯನ್ನು ಯೋಗ್ಯವಾಗಿ ಬಣ್ಣಿ ಸುವ ಶಬ್ದ ಯಾವುದು? ‘ದುರಂತ’ದ ವಿರುದ್ಧ ವಾದ ಅರ್ಥವುಳ್ಳ ಶಬ್ದ ಯಾವುದು? ಹೀಗೆ ನೂರಾರು ಜನರು ಕೇಳಿದ್ದಾರೆ. ಮಂಗರಾಯನಿಗೆ ಅಭಿಮಾನವಿದೆ; ‘ದುರಂತ’ ವಲ್ಲದ, ‘ದುರಂತ’ ವಿಲ್ಲದ ಪರಿಸ್ಥಿತಿಯನ್ನು ಬಣ್ಣಿಸಲು ಅಚ್ಚ ಕನ್ನಡ ಶಬ್ದವೇ ಒಂದಿದೆ ಎಂದು ತಿಳುಹಿಸಲು ಮಂಗ ರಾಯನಿಗೆ ಇನ್ನೂ ಅಭಿಮಾನವಿದೆ. ‘ದುರಂತ’— ಇದಕ್ಕೆ ಎದುರಾದ ಶಬ್ದ—‘ಕಾರಂತ’ ಆದಕ್ಕಲ್ಲಿನ ಹೇಳುವುದು—‘ಸುಲಿದ ಬಾಳೆಯಹಣ್ಣಿನಂದದ—’ ಕನ್ನಡ ಎಂದು—ಅಥವಾ ಲೆಕ್ಕಣಿಕೆ ಜಾರಿತೊ?

* * *

೪. ಪ್ರಗತಿಯ ಮಾರ್ಗದಲ್ಲಿ

(ಅ) ಅಲಹಾಬಾದದಲ್ಲಿ ಕಾಂ. ವರ್ಕಿಂಗ್ ಕಮಿಟಿ ಸೇರಿ, ಎರಡು ದಿವಸ ಅಖಂಡ ಚರ್ಚೆ-ಅಲ್ಲ-ಬೋಧ ಮಾಡಿ, ಸದ್ಯದ ಪರಿಸ್ಥಿತಿಯ ಬಗ್ಗೆ ಹಿಂದಿನ ತನ್ನ ಎಲ್ಲ ಗೊತ್ತುವಳಿಗಳನ್ನು ಒಂದುಗೂಡಿಸಿ, ಅವನ್ನು ಅಹಿಂಸಾತತ್ತ್ವಕ್ಕೆ ಹೊಂದಿಸಿ ಮತ್ತೊಮ್ಮೆ ಸ್ವೀಕರಿಸಿದೆ.

(ಆ) ಕರ್ನಾಟಕದ ಎಲ್ಲಕಡೆಗಳಿಂದ ಕಾಂಗ್ರೆಸ್ ಕಾರ್ಯಕರ್ತರು ನೂರಕ್ಕೆ ಹೆಚ್ಚಾಗಿ ಬೆಳಗಾಂವಿಗೆ ನುಗ್ಗಿ, ಇಡಿಯ ದಿವಸ ಅಖಂಡ ಚರ್ಚೆ ಮಾಡಿ, ಹಿಂದಕ್ಕೊಮ್ಮೆ ಮುಂಬಯಿಯಲ್ಲಿ ನಿರ್ಣಯಿಸಿದ ಗೊತ್ತುವಳಿಯನ್ನು ಬೆಳಗಾಂವಿಯಲ್ಲಿಯೆ ಮುದ್ರಿಸಿ ಪ್ರಕಟಿಸಿದ್ದಾರೆ.

(ಇ) ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಹಿರಿಯ ಸದಸ್ಯರು ರಾಜೀನಾಮೆಯನ್ನೇಕೆ ಕೊಡುತ್ತಿರುವರು ಎಂಬ ಪ್ರಶ್ನೆ ಮಂಗ-ರಾಯನಿಗೆ ಕೇಳಿದ್ದಾರೆ. ಇದು ಪ್ರಗತಿಯ ಹೆಜ್ಜೆ ಎಂದು ಮಂಗರಾಯನ ಅಭಿಪ್ರಾಯ. ಪರಿಷತ್ತಿಗೆ ಬೇಡಾದರೂ ಅಂಟಿಕೊಳ್ಳುವ ಹಿರಿಯರಿಗಿಂತ ಪರಿ ಷತ್ತೇ ಬೇಡಾದ ಹಿರಿಯರು ಹಿತಕರ ವಲ್ಲವೆ? ವಾಕ್ಯ ತಪ್ಪಿದ್ದರೆ ಕ್ಷಮೆ ಇರಲಿ.

* * *

ಮಂಗರಾಯನ ಡೆಪ್ಯುಟೇಶನ್

ಧಾರವಾಡ ಸಬ್ ಜಜ್ ಕೋರ್ಟಿನ ಪಕ್ಷಗಾರ ರೆಲ್ಲ ಮಂಗರಾಯನ ಬಳಿ ಬಂದು ಮೊರೆ ಹೊಕ್ಕಿದ್ದಾರೆ. ಹೊಸತಾಗಿ ಇಲ್ಲಿ ಬಂದ ಸಬ್‌ಜಜ್ಜರಿಗೆ ಕನ್ನಡ ಭಾಷೆ ಬರುವುದಿಲ್ಲ; ಮರಾಟಿಯೂ

ಬರುವುದಿಲ್ಲ. 'ಬೋಣಿ' ಯೊ 'ಕಚ' ಯೊ ಯಾವುದೋ ಅವರ ಮಾತೃಭಾಷೆಯಂತೆ; ಉರ್ದು ಕೂಡ ಅಲ್ಪ ಸ್ವಲ್ಪ ತಿಳಿಯುವುದಂತೆ. ಅದುದ ರಿಂದ ತಮಗೂ ತಮ್ಮ ವಕೀಲರಿಗೂ ತುಂಬ ತೊಂದರೆಯಾಗುತ್ತಲಿದೆಯೆಂದು ಪಕ್ಷಗಾರರ ದೂರು. ಅದಕ್ಕಾಗಿ ಮಂಗರಾಯ ತುಂಬ ವಿಚಾರ ಮಾಡಿ ನಿರ್ಣಯವೊಂದನ್ನು ಮಾಡಿದ್ದಾನೆ. ಅದೇನೆಂದರೆ ಧಾರವಾಡ ಕೋರ್ಟಿನ ಪಕ್ಷಗಾರರ ಪರವಾಗಿ ಮುಂಬಯಿ ಹೈಕೋರ್ಟಿಗೆ 'ಡೆಪ್ಯೂಟೇಶನ್' ಒಂದು ಒಯ್ಯಬೇಕು—ಎಂದು. ಆ ಡೆಪ್ಯೂಟೇಶನ್ನಿನಲ್ಲಿ ಮಂಗರಾಯ ಹೈಕೋರ್ಟ್ ರಜಿಸ್ಟ್ರಾರರಿಗೆ ಹೀಗೆ ಬಿನ್ನವಿಸಿಕೊಳಬೇಕೆಂದಿದ್ದಾನೆ: —

"ಮಹಾಶಯ, ಕನ್ನಡಿಗರ ಮೇಲೆ ಎಲ್ಲರಂತೆ ತಾವೂ ಉಪಕಾರ ಮಾಡಲು ಸಿದ್ಧರಾದುದನ್ನು ಕಂಡು ತುಂಬ ಆನಂದವಾಗಿದೆ. ಆ ಆನಂದದ ಅತಿಶಯತೆಯಲ್ಲಿಯೆ ನಾನಿಲ್ಲಿ ಲಾಗಹೊಡೆಯುತ್ತ ಓಡಿ ಬಂದಿದ್ದೇನೆ. ಈಗ ಬಂದ ಹೊಸ ಸಬ್-ಜಜ್ಜರ ಮಾತೃಭಾಷೆಯನ್ನು ಧಾರವಾಡ ಕೋರ್ಟಿನ ಪಕ್ಷಗಾರರಿಗೂ ವಕೀಲರಿಗೂ ಕಲಿಸುವ ಏರ್ಪಾಡನ್ನು ದಯೆಯಿಟ್ಟು ತಾವು ಮಾಡಬೇಕು. ಅವರಿಗೆ ಆ ಭಾಷೆ ಬರುವ ವರೆಗೆ ಕೋರ್ಟಿನ ಎಲ್ಲ ಕೇಸುಗಳನ್ನೂ ತಡೆದು ಹಿಡಿಯಬೇಕು. ಅದುವರೆಗೆ ಸಬ್‌ಜಜ್ಜರಿಗೆ ವಿಶ್ರಾಂತಿಯ ರಜೆಯನ್ನು ಕೊಟ್ಟು ಪ್ರತಿತಿಂಗಳೂ ತಪ್ಪದೆ ಸಂಬಳ ಸಲ್ಲಿಸುತ್ತಿರಬೇಕು. ಧಾರವಾಡದ ಕನ್ನಡಿಗರಿಗೆ ಹೊಸದೊಂದು ಭಾಷೆಯನ್ನು ಕಲಿಯುವ ಸುಯೋಗವನ್ನು ಒದಗಿಸಿಕೊಟ್ಟುದಕ್ಕಾಗಿ ಮಂಗರಾಯ ಹನ್ನೆರಡು ತಿಂಗಳೂ ತಮಗೆ ಋಣಿಯಾಗಿದ್ದಾನೆ."

ನೀಡ್ಲೊ ಲವಪನಿಗೆ ಜಯಜಯಕಾರ್ !
ಮಾಡಿದನೊಂದೆಂಥಾ ಉಪಕಾರ್ !

* * *

ನಾಗಚಂದ್ರನ 'ಅಭಿನವಪಂಪ ಪುರಾಣ'

ಮೊನ್ನೆ ಮೊನ್ನೆ ಪತ್ರಿಕೆಯೊಂದರಲ್ಲಿ ಬಂದ ಸಂಶೋಧಕ ಗ್ರಂಥವೊಂದರ ವಿಮರ್ಶೆಯನ್ನು ನೋಡುವಾಗ, ವಿಮರ್ಶಕರೊಬ್ಬರು 'ನಾಗಚಂದ್ರನ ಅಭಿನವಪಂಪ ಪುರಾಣ' ಎಂಬುದಾಗಿ ಒಂದು ಗ್ರಂಥದ ಹೆಸರನ್ನು ಸೂಚಿಸಿದ್ದಾರೆ. ಓದಿದೊಡನೆಯೆ ಮಂಗರಾಯ ಗಡಬಡಿಸಿದ; ಒಮ್ಮೆಲೆ ಕವಿಚರಿತ್ರಕಾರರ 'ಇಂಟರ್‌ವ್ಯೂ'ಕ್ಕೆ ಹೋಗಬೇಕೆಂದು ಹಾರಯಿಸಿದ. ವಿಚಾರಾಂತ್ಯದಲ್ಲಿ ಸಾಧ್ಯವಿಲ್ಲವೆಂದು ಗೊತ್ತಾದ ಮೇಲೆ, ಹಲ್ಲು ಕಿರಿಯುತ್ತ ತಲೆ ಕೆರೆಯುತ್ತ ಕುಳಿತೇ ಕುಳಿತ. "ನಾಗಚಂದ್ರ ಕವಿಯ ಹೆಸರನ್ನು ಬಲ್ಲ ಕವಿಚರಿತ್ರಕಾರರಿಗೆ ಅವನು ಬರೆದ 'ಅಭಿನವಪಂಪ ಪುರಾಣ'ದ ಪ್ರತಿ ಸಿಕ್ಕದೆ ಹೋಗಿದೆಯಲ್ಲ! ಕೊನೆಗೆ ಹೆಸರು ಕೂಡ ತಿಳಿಯದೆ ಹೋಗಿದೆಯಲ್ಲ!" ಎಂದು ಯೋಚಿಸಿದ ಮಂಗರಾಯನಿಗೆ ಕವಿ-ಚರಿತ್ರಕಾರರ ಬಗೆಗೆ ಕರುಣೆಯೆನಿಸಿತು; ವಿಮರ್ಶಕರ ಹೊಸ ಗ್ರಂಥದ ಸಂಶೋಧನೆಯ ಬಗೆಗೆ ಆದರವೆನಿಸಿತು. ನಾಳೆ ಬೆಳಗಾಂವಿಯಲ್ಲಿ ಸೇರಲಿರುವ ಸಾಹಿತ್ಯಸಮ್ಮೇಳನದಲ್ಲಿ ಆ ವಿಮರ್ಶಕರು 'ನಾಗಚಂದ್ರ ಕವಿಯ ಅಭಿನವಪಂಪ ಪುರಾಣ' ಗ್ರಂಥದ ವಿಚಾರದಲ್ಲಿ ಬರೆದ ವಿಮರ್ಶಾತ್ಮಕ ಪ್ರಬಂಧವನ್ನೂ ಓದುವವರಿದ್ದಾರೆಂದು ಮಂಗರಾಯನಿಗೆ ವೈರ್‌ಲೆಸ್ಸಿನಿಂದ ತಿಳಿದು ಬಂದಿದೆ.

* * *

ನಿಷಿಧಿಗಲ್ಲಿನ ಪರಂಪರಾಪಾಲನೆ

ಯಾವ ಕಾರಣದಿಂದಲೋ, ದೇಶಾಂತರ ಮಾಡಿದ ಧರ್ಮಾಸಕ್ತರಾದ ಸಂನ್ಯಾಸಿಗಳೊಬ್ಬರು— ಯಾರಿಗೂ ಗೊತ್ತಾಗದಂತೆ— ಟ್ರ್ಯಾವಲರ್ಸ ಬಂಗಲೆಯೊಂದರಲ್ಲಿ ಉರುಲು ಹಾಕಿಕೊಂಡು ಸಮಾಧಿಸ್ಥರಾದರು. ಅವರು ಉರುಲು ಹಾಕಿಕೊಳ್ಳಲಿಕ್ಕೆ ಉಪಯೋಗಿಸಿದುದು ಅಪವಿತ್ರವಾದ ಹಗ್ಗವನ್ನಲ್ಲ; ಪವಿತ್ರವಾದ ಕಾವಿಯ ಬಟ್ಟೆಯನ್ನು! ಹಿಂದಿನ ಕಾಲದಲ್ಲಿ ಜೈನಯತಿಗಳು ಇಹಲೋಕ ಬೇಡವಾದಾಗ ನಿರಶನವ್ರತವನ್ನು ಕೈಕೊಂಡು ನಿರ್ವಾಣಕ್ಕೆ ಹೋಗುತ್ತಿದ್ದರಂತೆ. ಅಂತಹರ ಕೀರ್ತಿಯನ್ನು ಕೊಂಡಾಡಿದ ನಿಷಿಧಿ-ಗಲ್ಲುಗಳು ಕನ್ನಡನಾಡಿನಲ್ಲಿ ಬೇಕಾದಷ್ಟಿವೆ. ಆ ಪ್ರಾಚೀನ ಪರಂಪರೆಯನ್ನು ಕಾಯಬೇಕೆಂಬ ಅಪೇಕ್ಷೆಯಿಂದಲೇನೋ, ವೃತ್ತಪತ್ರವೊಂದು, ಉರುಲುಹಾಕಿಕೊಂಡು ಸ್ವರ್ಗವನ್ನು ಸಾರಿದ ಶ್ರೀ ಶ್ರೀಗಳವರ ಮಾಹಾತ್ಮ್ಯಗೀತವೊಂದನ್ನು ಸಚಿತ್ರವಾಗಿ ಪ್ರಕಟಿಸಿ, ನಿಷಿಧಿಕಲ್ಲುಗಳು ಮಾಡುವ ಕೆಲಸ ಮಾಡಿದೆ. ಆ ಮಾಹಾತ್ಮ್ಯಗೀತದ ಕೊನೆಯ ಪದ್ಯದ ಸ್ವಭಾವೋಕ್ತಿ ತುಂಬ ಪ್ರಶಂಸನೀಯವಾಗಿದೆ. ಅದು ಹೇಗೆಂದರೆ:—

"ಕೀರುತಿಯನು ನೆಲೆಗೊಳಿಸು-
ತ್ತಾರರಿಯದ ತೆರದೆ ಶಿಷ್ಯ ನೆರವಿಯ
ತೊರೆಯು-
ತ್ತೋರಂತೆಯೆ ಪರಲೋಕವ-
ನೇರಿದ ಯತಿವರ್ಯರ್......"

ಮಂಗರಾಯ ಕವಿಯ ಸ್ವಭಾವೋಕ್ತಿಗಾಗಿ ತಲೆದೂಗಿ ನಿದ್ದೆ ಹೋಗಿದ್ದಾನೆ.

* * *

ಶಿಷ್ಯಸ್ತೇಹಂ....ತ್ವಾಂ ಪ್ರಪನ್ನಂ !

ಮೊನ್ನೆ ಒಂದಿಬ್ಬರು ಬಹಳ ಚಿಂತಾಭಾವಯುಕ್ತವಾದ ಮುಖದವರಾಗಿಯೆ ಮಂಗರಾಯನ ಬಳಿ ಬಂದರು. ಮಂಗರಾಯ ಅವರನ್ನು ಸ್ವಾಗತಿಸಿ ಕುಳ್ಳಿರಿಸಿಕೊಂಡ, ಬಂದವರಿಬ್ಬರೂ ತರುಣರು. ಅವರಲ್ಲಿಯವನೊಬ್ಬ ಹೇಳತೊಡಗಿದ:

"ನೋಡು ಮಂಗಣ್ಣ, ಒಂದು ವಿಚಾರ ಬಗೀ ಹರಿಯದವರಾಗಿ ನಿನ್ನ ಕಡೆ ಬಂದಿದ್ದೇವೆ. ಈಗ ಯುದ್ಧದ ಸಲುವಾಗಿ ಅಸಹಕಾರ ಮಾಡಬೇಕೆಂದು ಹೇಳುತ್ತಿರುವ ಕಾಂಗ್ರೆಸ್ಸೆಂದರೆ ಏನು? ಕಾಂಗ್ರೆಸ್ಸಿನಲ್ಲಿ ಹಿಂದುಗಳಿದ್ದಾರೆ, ಮುಸಲ್ಮಾನರಿದ್ದಾರೆ; ಬ್ರಾಹ್ಮಣರಿದ್ದಾರೆ, ಲಿಂಗಾಯತರಿದ್ದಾರೆ; ಎಲ್ಲರೂ ಇದ್ದಾರೆ ಅನ್ನು! ಆದರೇನು, ಒಂದೊಂದು ಜಾತಿಯವರೂ ತಮ್ಮದೊಂದು ಸ್ವಾತಂತ್ರ್ಯ ಕಾಂಗ್ರೆಸನ್ನು ಮಾಡಿಕೊಂಡಿದ್ದಾರೆ. ಉದಾಹರಣೆಗಾಗಿ ಹಿಂದೂಮಹಾಸಭೆ; ಮುಸ್ಲಿಂಲೀಗ್; ವೀರಶೈವ ಮಹಾಸಭೆ ಇತ್ಯಾದಿ. ರಾಷ್ಟ್ರೀಯಮಹಾಸಭೆಯಲ್ಲಿ ಸೇರಿದವರೇ ಜಾತೀಯಮಹಾಸಭೆಗಳಲ್ಲಿ ಕೆಲಸ ಮಾಡುತ್ತಾರೆ. ರಾಷ್ಟ್ರೀಯ ಮಹಾಸಭೆಗಳಲ್ಲಿ ನಿಂತು ಬ್ರಿಟಿಷರಿಗೆ ಬಹಿಷ್ಕಾರ ಹಾಕಬೇಕೆನ್ನುವವರೇ ಜಾತೀಯ ಮಹಾಸಭೆಗಳಲ್ಲಿ ಪಾಸಾಗುವ—ಬ್ರಿಟಿಷರಿಗೆ ಸಹಾನುಭೂತಿ-ಸಹಕಾರಗಳನ್ನು ಕೊಡುವ—ಗೊತ್ತುವಳಿಗಳಿಗೆ ಸಮ್ಮತಿ ಕೊಟ್ಟು ಬರುತ್ತಾರೆ. ಮೊನ್ನೆ ಮೊನ್ನೆ ನಮ್ಮ ಕರ್ನಾಟಕದಲ್ಲಿ, ವೀರಶೈವ ಮಹಾಸಭೆಯವರು ಕೂಡ—ಇಂದು ಯಾರು ಕಾಂಗ್ರೆಸಿನಲ್ಲಿ ಬಹುಸಂಖ್ಯಾಕ ಜಾತಿಯವರಾಗಿದ್ದಾರೋ ಅವರು ಕೂಡ—ಈ ಬಗೆಯ ಸಹಕಾರದ ಠರಾವೊಂದನ್ನು ಪಾಸು ಮಾಡಿದ್ದಾರೆ. ಕಾಂಗ್ರೆಸಿನಲ್ಲಿರುವ ಬೇರೆ ಬೇರೆ ಜಾತಿಯವರು ತಮ್ಮ ತಮ್ಮ ಮಹಾಸಭೆಗಳಿಗೆ ತಮಗೂ ಏನೂ ಸಂಬಂಧವಿಲ್ಲವೆಂಬುದನ್ನು ಪ್ರಕಟಿಸಿ ಸಹಕಾರದ ಠರಾವನ್ನು ವಿರೋಧಿಸಬೇಕಲ್ಲವೇ ?'

ಮಂಗಣ್ಣ ಅವರಿಗೆ ಹೀಗೆ ಹೇಳಿದ: —

"ಅಯ್ಯೋ ಪಾಪ, ಭಾವನಾತ್ಮಕ ತರುಣರು ನೀವು! ನಿಮಗಿನ್ನೂ ರಾಜಕಾರಣದ ಅರ್ಥವೇ ಆಗಿಲ್ಲ. ನಾನು ಹೇಳುತ್ತೇನೆ ಕೇಳಿ:—ರಾಷ್ಟ್ರೀಯ ಮಹಾಸಭೆಯಿಂದ ನಿಮ್ಮ ವೈಯಕ್ತಿಕ ಹಿತವಾಗುತ್ತಿದೆಯೆನಿಸಿದಾಗ ನಾವು ಕಾಂಗ್ರೆಸಿನವರೆಂದು ಹೇಳಿಕೊಳ್ಳಬೇಕು; ಜಾತೀಯ ಮಹಾಸಭೆಯಿಂದ ಅಂತಹ ಹಿತ ಆಗುವುದೆನಿಸಿದಾಗ ನಾನು ಹಿಂದುವೆಂದೋ ನಾನು ಮುಸಲ್ಮಾನನೆಂದೋ ನಾನು ವೀರಶೈವನೆಂದೊ—ಬ್ರಾಹ್ಮಣನೆಂದೋ ಹೇಳಿಕೊಳ್ಳಬೇಕು. ನಾನು ಮಾಡುತ್ತಿರುವದು ಯಾವಾಗಲೂ ಹೀಗೆಯೆ!"

ತರುಣರಿಬ್ಬರೂ ಕೈಯೆತ್ತಿ ಜಯಜಯಕಾರ ಮಾಡಿದರು: —

'ಮಂಗಮಹಾರಾಜಕೀ ಜಯ್ !
ಬೇಡಾದಾಗ ಬೇಕಾದವರನ್ನ ಬಯ್!'

ರಾಹು-ಕೇತುಗಳನ್ನು ಒಂದೆಡೆ ತಂದ ಚತುರ

ಹೆರ್ ವ್ಹಾನ್ ರಿಬನ್‌ಟ್ರೊಪ್

ಬೆರಗುಗೊಳಿಸುವ ಬುದ್ಧಿಶಾಲಿ—ಹಿಟ್ಲರನ ಬಲದ ಕೈ!

ಜರ್ಮನಿಯ ‘ನೆರಂಗ’ರು ಬರೆದುದು.

★

ಮದ್ಯದ ವ್ಯಾಪಾರಿಯೊಬ್ಬನಿಂದು ತನ್ನ ಸನಿಮಾತಿನ ಮದ್ಯದಿಂದ ಜರ್ಮನಿಯನ್ನೆ ಮೋಹಗೊಳಿಸಿ ಬಿಟ್ಟಿದ್ದಾನೆ. ಸ್ಟಾಲಿನ್ನನ ರಶಿಯಾ ಹಿಟ್ಲರನ ಜರ್ಮನಿ ಇವುಗಳ ಮಧ್ಯದ ಮತಾಂತರವನ್ನು ಕಡಿಮೆಮಾಡಿದ ಮಾಟಗಾರ ಈ ರಿಬನ್‌ಟ್ರೊಪನೇ!

ಜರ್ಮನಿಯ ಇಂದಿನ ನವೀನರಚನೆಗಾಗಿ ಅನೇಕಮಂದಿ ಒಹುದಾದುದು ಒಂದು ವ್ಯಕ್ತಿಯಲ್ಲ—ವ್ಯಕ್ತಿಗಳ ಸಮೂಹ ಹೆಣಗಿದ್ದಾರೆ. ೧೯೧೪ರ ಮಹಾಯುದ್ಧದನಂತರ ಜರ್ಮನಿ ದಾಯ—ಸಂಘ. ಯನ್ನು ಸಬಲರಾಷ್ಟ್ರವಾಗಿ ಮಾಡಲು ಹುಚ್ಚೆದ್ದವನಾಗಿದವನು ಹಿಟ್ಲರನು. ದರೆ ರಾಷ್ಟ್ರನಿರ್ಮಾಣ ಮಾಡಬೇಕಾದಾಗ ಹಿಟ್ಲರನು ಒಂಟಿಯಾಗಿದ್ದರೆ ಏನು ಮಾಡಬಹುದಾಗಿತ್ತು? ಕಂದಿಹೋದ ಜೀವಕಳೆಯನ್ನೂ ನಂದಿಹೋದ ದೀಪವನ್ನೂ ಮತ್ತೆ ಬೆಳಗುವಂತೆ ಮಾಡಬೇಕಾದರೆ, ಒಂದೇ ಒಂದು ಮನಸ್ಸಿನಿಂದ ಕಳವಳ ಪಡುತ್ತಿರುವವರದೆ ಒಂದು ಗುಂಪು ಬೇಕು. ವ್ಯಕ್ತಿಯೊಬ್ಬನಿಗೆ ಸಾಧ್ಯವಾಗದುದನ್ನು ಗುಂಪು ಸಹಜವಾಗಿ ಮಾಡಬಲ್ಲುದು. ವ್ಯಕ್ತಿ ಆ ಗುಂಪಿನ ಚೈತನ್ಯ ಇವೆರಡೂ ಸೇರಿ ಒಂದು ಕೆಲಸ ಮಾಡತೊಡಗಿದರೆ, ವೈಯಕ್ತಿಕವಾಗಿ ಮಾಡುವ ಕಾರ್ಯದ ಪ್ರಾಪ್ತಿಗಿಂತ ಹೆಚ್ಚು ಆಗುವುದು. ಇದುವೇ ಸಂಘಮಹಿಮೆ—ಸಾಂಘಿಕಜೀವನದ ಹಿರಿಮೆ. ಗುಂಪೊಂದು ನಿರ್ಮಾಣವಾಗಿ ಕೆಲವು ಕಟ್ಟಳೆ—ನಿಬಂಧನೆಗಳನ್ನು ಹಾಕಿಕೊಂಡರೆ, ಅದೊಂದು ಪಕ್ಷವಾಗಿ ಪರಿಣಮಿಸಿ ರಾಜಕೀಯರಂಗದಲ್ಲಿ ಅದರ ಪ್ರಭಾವವು ಬೆಳೆಯುತ್ತದೆ. ದೇಶಹಿತದ ದೃಷ್ಟಿಯಿಂದ ಕಾರ್ಯಮಾಡುತ್ತಿರುವ ಇಂತಹ ಪಕ್ಷವು ಜನತೆಯ ಸಹಾನುಭೂತಿಯನ್ನು ದೊರಕಿಸಿದರೆ ಇದುವೆ ರಾಜ್ಯತಂತ್ರವನ್ನು ಪಡೆಯಬಹುದು—ಇಷ್ಟೆಲ್ಲ ಮಾಡ



ಹೆರ್ ವ್ಹಾನ್ ರಿಬನ್‌ಟ್ರೊಪ್‌ರು

ಜರ್ಮನಿಯಲ್ಲಿ ಪ್ರಭಾವಶಾಲಿಯಾಗಿ ಮೆರೆದು, ರಾಜ್ಯತಂತ್ರವನ್ನು ವಶಮಾಡಿಕೊಂಡು, ಹೊಸಹುರುಪಿನಿಂದ ಹೋದ ಶಕ್ತಿಯು ಪುನಃ ಬರುವಂತೆ ಮಾಡಿದ ಗುಂಪು — ಸಂಘ — ಪಕ್ಷವೆಂದರೆ — ನಾಜಿ. ಗುಂಪಿಗೊಬ್ಬ ಹಿರಿಯನಿರುವ. ನಾಜೀಪಕ್ಷದ ಹಿರಿಯನೇ—ಹಿಟ್ಲರ್. ಹಿರಿಯನ ಹೊಣೆಯನ್ನು ತಮ್ಮ ತಮ್ಮ ರೀತಿಯಲ್ಲಿ ಒಂದೇ ತತ್ತ್ವಕ್ಕಾಗಿ ಅನೇಕರು ಹೊರುವರು. ಹಿರಿಯನಿಗೆ ಎಷ್ಟು ಮನ್ನಣೆ ಕೊಡಬಹುದೋ ಅಷ್ಟೇ ಮನ್ನಣೆಯನ್ನು, ಹಿರಿಯರ ಹಿರಿಯತನವನ್ನು ಕಾಯಲಿಕ್ಕೆ ಪ್ರಯತ್ನ ಮಾಡಿದ— ಮಾಡುತ್ತಿರುವ— “ಕಿರಿಯರ ಪ್ರಪಂಚ” ಕ್ಕೆ ಕೊಡಲೇ ಬೇಕಾಗುವುದು. ಹಿರಿಯನಾದ ಹಿಟ್ಲರನ ಭುಜಕ್ಕೆ ಭುಜ ತಗಲಿಸಿ ಕಾರ್ಯಮಾಡುವವರು ಹಿರಿಯ ಹಿಟ್ಲರನಷ್ಟೇ ಹೊಗಳಿಕೆಗೆ ಪಾತ್ರರು. ನಾವು ಕೇಳುವ ಹಿಟ್ಲರನ ಸಂಗಾತಿಗಳ ಅನೇಕ ಹೆಸರುಗಳಲ್ಲಿ—ಗೆರಿಂಗ್, ಕೆಪ್ಲರ್, ಹಿಮ್ಲರ್, ರಿಬನ್‌ಟ್ರೊಪ್, ಗೊಬೆಲ್ಸ್ ಇವು ಮುಖ್ಯ. ವಿವಿಧ ವಿಶಾಲವಾದ ರಾಜ್ಯತಂತ್ರದಲ್ಲಿ ಒಬ್ಬೊಬ್ಬರೂ ಒಂದೊಂದು ವಿಭಾಗಕ್ಕೆ ಹೊಣೆಗಾರರಾಗಿ ಕಾರ್ಯಮಾಡುತ್ತಿದ್ದಾರೆ. ವೈಮಾನಿಕದಳದ

ಮುಖ್ಯಸ್ಥನು ಗೆರಿಂಗನಾದರೆ, ಕೆಪ್ಲರನು ಹಿಟ್ಲರನಿಗೆ ಕುಬೇರನಾಗಿ ಪರಿಣಮಿಸಿದರೆ, ರಾಜ್ಯತಂತ್ರದಲ್ಲಿ ಪ್ರವೀಣನಾಗಿ ಇಂದು ಹಿಟ್ಲರನ ಬಲಗೈಯಂತೆ ಇರುವವನು **ಜೋಕಿಮ್ ವ್ಹಾನ್ ರಿಬನ್‌ಟ್ರೊಪ್ !**

ಜೋಕಿಮನ ಜೀವನವು ವಿಚಿತ್ರವಾಗಿದೆ. ಇವನು ಈಗ ಅನುಭವಿಸುತ್ತಿರುವ ಸ್ಥಾನವನ್ನು ಇವನೆಂದಾದರೂ ಪಡೆಯಬಹುದಿದ್ದಿತೆಂದು ಯಾರೂ ತಿಳಿದಿದ್ದಿಲ್ಲ. ಆದರೆ, ಈತನ ಜೀವನದ ಧುರಿಯನ್ನು ಕೂಲಂಕಷವಾಗಿ ವಿಮರ್ಶಿಸಿ ನೋಡಿದರೆ, ಇವನಲ್ಲಿಯ ಅಸಾಧಾರಣಶಕ್ತಿಯ ಅರಿವು ಉಂಟಾಗುವುದಲ್ಲದೆ, ಇವನ ಇಂದಿನ ಸ್ಥಾನದ ಬಗೆಗೆ ನಮಗೆ ಯೋಗ್ಯ ಕಲ್ಪನೆಬರುವುದು. ಜೋಕೀಮನ ಜೀವನವು ಅನೇಕ ವಿಧದಿಂದ ಮಾರ್ಪಟ್ಟಿದೆ. ಇವನ ಕಾರ್ಯರಂಗವು ಇಂತಹದೇ ಎಂದು ವಿಂಗಡಿಸಲು ಬರಲಾರದಂತಹದು. ಇಂದಾದರೂ ಇವನು ನಾಜೀರಾಜ್ಯದ ಮಂತ್ರಿಯಾಗಿದ್ದರೂ, ಪರದೇಶಗಳಲ್ಲಿ ಜರ್ಮನ್‌ರಾಷ್ಟ್ರದ ಉನ್ನತಿಯ ಬಗೆಗೆ ನಾಜೀತತ್ತ್ವಕ್ಕನುಸರಿಸಿಯೇ ಹೆಣಗುತ್ತಿದ್ದರೂ, ಇವನು ಹುಚ್ಚು-ತಲೆತಿರುಕ (fanatic) ನಾಜಿಯಲ್ಲ. ಇವನು ನಾಜಿ ಸಂಗಡದಲ್ಲಿ ಸೇರಿದುದು ತೀರ ಮೊನ್ನೆಮೊನ್ನೆ; ೧೯೩೨ ರಲ್ಲಿ ನಾಜೀಪಕ್ಷದ ಸದಸ್ಯವರ್ಗದಲ್ಲಿ ಇವನ ಹೆಸರನ್ನು ನಾವು ಕಾಣೆವು.

ಜೋಕೀಮ ರಿಬನ್‌ಟ್ರೊಪನ ಮನೆತನವು ಅಷ್ಟು ಸಿರಿವಂತಿಕೆಯಿಂದಿದ್ದುದಲ್ಲ. ಮೊದಲು ಮಧ್ಯಮತರಗತಿಯ ಮನೆತನದಲ್ಲಿ ಹುಟ್ಟಿದನು ಚಿಕ್ಕ ವಯಸ್ಸಿನಲ್ಲಿಯೇ ಶ್ರೀಮಂತ ಮನೆತನಕ್ಕೆ 'ದತ್ತಕ' ಹೋದುದರಿಂದ, ಇವನ ಹೆಸರಿನ ಹಿಂದೆ "ವ್ಹಾನ್" ಎಂಬ ಉಪಪದವು ಬಂದಿತು. ಈ "ಶ್ರೀಮಂತ" ಎಂಬ ಪದವಿಯ ಮೂಲಕನೇ ಇವನ ವಿದ್ಯಾಭ್ಯಾಸವು ಉಚ್ಚತರಗತಿಯಲ್ಲಿ ಜರುಗಿತು. ಸ್ವಿಟ್ಝರ್‌ಲಂಡಿನಲ್ಲಿ ಕೆಲಕಾಲ, ಫ್ರಾನ್ಸಿನಲ್ಲಿ ಕೆಲಕಾಲ, ಇಂಗ್ಲಂಡಿನಲ್ಲಿ ಸ್ವಲ್ಪಕಾಲ ಇವನು ವಿದ್ಯಾರ್ಜನೆ ಮಾಡಿದುದರಿಂದ, ಭಿನ್ನ ಭಿನ್ನ ದೇಶದ ಆಚಾರ-ವಿಚಾರ-ಸಂಸ್ಕೃತಿಗಳು ಇವನ ಮೇಲೆ ತಮ್ಮ ಪ್ರಭಾವವನ್ನು ಬೀರಿ, ಇವನನ್ನು ಸಂಪೂರ್ಣ 'ಸುಸಂಸ್ಕೃತ'ನನ್ನಾಗಿ ಮಾಡಿವೆ. ಇವನನ್ನು ಕಂಡರೆ ಎಲ್ಲರಿಗೂ ಪ್ರೀತಿ: ಇವನ ಮಾತುಗಾರಿಕೆಯಲ್ಲಿ ರಾಜಕಾರಣಕ್ಕೆ ಬೇಕಾದ—ಅವಶ್ಯವಾದ—ಮಾರ್ದವವೂ ಸವಿಯೂ ಇದೆ. ರೂಪದಿಂದ ಚೆಲುವ; ಬುದ್ಧಿ ಮಿಗಿಲು: ನಡೆನುಡಿಗಳಲ್ಲಿ ಸಂಸ್ಕೃತಿಯ ಹಿರಿಮೆಯನ್ನೂ ಕಾಣಬಹುದು, ಜರ್ಮನಿಯ ರಾಯಭಾರಿಯ ಪರಂಪರೆಯಲ್ಲಿ ಇವನಷ್ಟು ಜನತೆಯ ಪ್ರೇಮಾದರಕ್ಕೆ ಪಾತ್ರನಾದವರು ಯಾರೂ ಇಲ್ಲವೆಂದು ಹೇಳಿದರೂ ತಪ್ಪಾಗಲಾರದು. ಇವನು ಮಾತನಾಡುವಾಗ, ನಾಜಿಗಳಲ್ಲಿ ವಿಶಿಷ್ಟವಾಗಿ ಕಂಡುಬರುವ ಪ್ರಚಾರವೃತ್ತಿ ಇರುವುದಿಲ್ಲ. ಜೀವನದಲ್ಲಿ ಇವನು, ಚಿಕ್ಕ ತರುಣ— ನಾಜಿಗಳಂತೆ ಎದೆಯುಬ್ಬಿಸಿದ ದುರಾಗ್ರಹಿಯೂ ಅಲ್ಲ, ನರೆತ ತಲೆಯ ನಾಜೀಗಳಂತಹ ಕರ್ಮಠವೃತ್ತಿಯವನೂ ಅಲ್ಲ. ಆಲ್ಫ್ರೆಡ್ ರೋಸೆನ್‌ಬರ್ಗನಂತೆ ಆಚಾರನಿಷ್ಠನಲ್ಲ. ಕೂದಲೆಳೆ ಕೂಡ ಕೊಂಕಗೊಡದಂತಹ ಆಚಾರಮಾರ್ಗದ ಅನುಯಾಯಿಯಲ್ಲ. ತಂತ್ರಗಾರನಿಗೆ ಬೇಕಾದ ಕೊಡುಕೊಂಬುವ—ಹಿಡಿದು ಬಿಡುವ—ಸರಿದು ಜಗ್ಗುವ—ಬಿಗಿ ಹಿಡಿಯುವ ಸಾಧನಗಳಿವೆ ಇವನಲ್ಲಿ. ಯಾವ ದೇಶಕ್ಕೂ, ಯಾವ ದೇಶದ ಜನತೆಯ ಬಗೆಗೂ ಅನಾದರ ಬುದ್ಧಿಯಿಲ್ಲ. ಅವರ ಸ್ಥಾನಕ್ಕೆ ತಕ್ಕಂತೆ ಮಾನಕೊಡುವ ವ್ಯಾವಹಾರಿಕ ಬುದ್ಧಿ ಇವನದು. ಇದುವೆ ಇವನನ್ನು ಇಂದು ಈ ಘನತೆಗೇರಿಸಿದೆ.

ಮೂಲತಃ ಇವನೊಬ್ಬ ವ್ಯಾಪಾರಿ—ವ್ಯವಹಾರ ಚತುರ. ಇದರೆ, ತನ್ನ ವ್ಯವಹಾರದಲ್ಲಿದ್ದುಕೊಂಡು, ತನ್ನ ಕುಶಾಗ್ರಬುದ್ಧಿಯಿಂದ ಅನೇಕರನ್ನು ಆಕರ್ಷಿಸಿಕೊಂಡಿದ್ದ; ಹೀಗೆ ಆಕರ್ಷಿತರಾದವರಲ್ಲಿ ಹಿಟ್ಲರನೊಬ್ಬ. ಹಿಟ್ಲರನಿಗೆ ಬೆಟ್ಟಿಯಾಗುವುದಕ್ಕೆ ಮುಂಚೆ ಇವನು ಸೆರೆಯನ್ನು ಮಾರುವ ವರ್ತಕನೊಬ್ಬ. ಸುಪ್ರಸಿದ್ಧ ಫ್ರಾನ್ಸದ ಸೆರೆಯನ್ನು (Champagne) ಮಾರುವುದಕ್ಕೆ ಇವನು ಜರ್ಮನಿಯಲ್ಲಿ ಏಜಂಟನಾಗಿದ್ದ. ಇದುವೆ ಸಂಧಿಕಾಲವೆಂದು ಹೇಳಬಹುದು. ಸೆರೆಯ ಮಾರಾಟದಲ್ಲಿ ಇವನಿಗೆ ಸೆರೆಯ ವರ್ತಕರ ಪರಿಚಯವಾಯಿತು. ಓಟೊ ಹೆಂಕೆಲನೆಂಬ ಲಕ್ಷಾಧೀಶನಾದ ಸೆರೆಯ ವರ್ತಕನ ಪ್ರತ್ಯಕ್ಷ ಪರಿಚಯವಾದದ್ದು ಇವನ ಜೀವನದಲ್ಲಿ ಪರಿವರ್ತನೆಯನ್ನು ಮಾಡಿತು. ೧೯೨೦ರಲ್ಲಿ ಜೋಕೀಮನು ಹೆಂಕೇಲನ ಸುಸ್ವರೂಪಿ ಮಗಳನ್ನು ಮದುವೆಮಾಡಿಕೊಂಡು, ಸೆರೆಯ ಮಾರಾಟವನ್ನು ಮನೆತನದ ಉದ್ಯೋಗವನ್ನಾಗಿ ಮಾಡಿದನಲ್ಲದೆ ಫ್ರಾನ್ಸದ ಏಜೆನ್ಸಿಯನ್ನೂ ಬಿಟ್ಟುಕೊಟ್ಟ. ತನ್ನ ಅಸಾಧಾರಣ ವ್ಯವಹಾರ ಚಾತುರ್ಯದಿಂದ ಶತಮಾನಗಳಲ್ಲಿ ಆಗದೆ ಇದ್ದುದನ್ನು, ಸಾಧ್ಯಮಾಡಿ ತೋರಿಸಿದನು. ಜರ್ಮನ್ ಶಾಂಪೇನನ್ನು ಫ್ರಾನ್ಸಿನಲ್ಲಿ ಮಾರಹತ್ತಿದನು. ಕೆಲವುವರ್ಷಗಳ ವರೆಗೆ ಇವನು ಹೆಂಡರು ಮಕ್ಕಳೊಂದಿಗೆ, ಶಾಂತಿಮಯವಾದ ಜೀವನವನ್ನು ಕಳೆದನು.

ಆದರೂ ಇವನ ಜೀವನದ ವಿವಿಧಾಂಗಗಳನ್ನು ಪರೀಕ್ಷಿಸಿದರೆ, ಇವನು ಮಾಡದೆ ಇದ್ದ ಉದ್ಯೋಗವಿಲ್ಲವೆಂಬುದು ತಿಳಿಯುವುದು. ತೀರ ಚಿಕ್ಕ ವಯಸ್ಸಿನಲ್ಲಿ—೧೭ ವರುಷದವನಿದ್ದಾಗ—ಕೆನಡಾದಲ್ಲಿ ಎಂಜನಿಯರ್ ಖಾತೆಯಲ್ಲಿ ಕೆಲಸ ಮಾಡಿದನು. ೧೯೧೪ ರಲ್ಲಿ ಯುದ್ಧ ಪ್ರಾರಂಭವಾದ ಕೂಡಲೆ, ಕೆನಡಾ ಸರಕಾರದ ಕಣ್ಣು ತಪ್ಪಿಸಿ ಬಣ್ಣಗಾರನ ಸೋಗು ಹಾಕಿ, ಪೋಲೀಸರ ಕಣ್ಣಿಗೆ ಮಂಕುಬೂದಿ ಚೆಲ್ಲಿ, ಡಚ್ ಹಡಗದಿಂದ ಜರ್ಮನಿಗೆ ಬಂದು, ಸೈನ್ಯಖಾತೆಯಲ್ಲಿ ಸೇರಿದನು. ಇವನ ಜಾಣತನವು ಇವನನ್ನು ಸೈನಿಕನಂತೆ ಅಲ್ಲಿಯು ಇರಗೊಡದೆ, ದಿನೇ ದಿನೇ ಮೇಲಿನ ಸ್ಥಾನ ದೊರಕಿಸಿಕೊಟ್ಟು, ಕೊನೆಗೆ ಕರ್ನಲ್ ಆದನು. ಆದರೆ ಯುದ್ಧ ಮುಗಿದು ವ್ಹರ್ಸೇಲ್ಸದ ಒಪ್ಪಂದವಾದ ಮೇಲೆ, ಸೈನ್ಯಖಾತೆಯನ್ನು ಬಿಟ್ಟು ಮತ್ತೆ ತನ್ನ ಶಾಂತವಾದ ವ್ಯಾಪಾರವನ್ನು ಕೈಕೊಂಡನು. ಆಗಿನ್ನೂ—೧೯೧೯ರಲ್ಲಿ—೨೬ ವರ್ಷದ ವಯಸ್ಸು ಇವನಿಗೆ. ತಾರುಣ್ಯದಲ್ಲಿ ಅನೇಕ ಕಾರ್ಯಗಳಲ್ಲಿ ಕೈಹಾಕಿ, ಯಶಸ್ವಿಯಾಗಿ, ಮಾನ್ಯತೆಯನ್ನು ಪಡೆದನು. ಸೆರೆಯ ವ್ಯವಸಾಯದಲ್ಲಿ ಸಿಕ್ಕ ಸ್ಥಾನ-ಮಾನವೇ ಈತನ ಇಂದಿನ ಸ್ಥಾನ-ಮಾನಕ್ಕೂ ಕಾರಣವೆಂದು ಹೇಳಬಹುದು.

ನಾಜೀಸಂಗಡದ ಹಿರಿಯನಾದ ಹಿಟ್ಲರನನ್ನು ಇವನು ಮೊದಲು ಸಲ ಕಂಡದ್ದು ೧೯೩೨ ರಲ್ಲಿ. ಒಂದು ದಿನ ಇಬ್ಬರೂ ಬೆಟ್ಟಿ

ಧನವಂತ ಸರದಾರನ ಮನೆಯಲ್ಲಿ ಸವಿಯೂಟಕ್ಕೆಂದು ಹೋದಾಗ. ಆ ಸರದಾರನು ಹಿಟ್ಲರನನ್ನು ಚೆನ್ನಾಗಿ ಅರಿತವನಷ್ಟೇ ಅಲ್ಲ, ಅವನ ಪ್ರಚಾರಕರ್ತ್ರು, ಅವನ ಪಕ್ಷದ ಬೆಳವಣಿಗೆಗೂ ಬೇಕಾಗುವ ಧನವನ್ನು ಕೊಡಲೊಪ್ಪಿದವನು. ಅವನೇ ಸ್ಕ್ರೋಡರ್ ಎಂಬ ಹೆಸರಿನ ಪ್ರಸಿದ್ಧ ವ್ಯಕ್ತಿ.

ಅಂದಿನ ಸವಿಯೂಟಕ್ಕೆ ಬಂದಾಗ ಸ್ಕ್ರೋಡರನು ಹಿಟ್ಲರನಿಗೆ ರಿಬನ್‌ಟ್ರೋಪನನ್ನು ಪರಿಚಯ ಮಾಡಿಕೊಟ್ಟನು. ಆಗ ಸ್ಕ್ರೋಡರನು ಇವನನ್ನು ಬಹುವಾಗಿ ಒಪ್ಪಿಸಿದನು: “ಇವನು ಚಮತ್ಕಾರವನ್ನು ಮಾಡಿದ್ದಾನೆ. ಜರ್ಮನಿಯ ಶಾಂಪೇನನ್ನು ಫ್ರಾನ್ಸಿನಲ್ಲಿ ಮಾರಾಟಮಾಡುವುದರಲ್ಲಿ ಯಶಸ್ವಿಯಾಗಿದ್ದಾನೆ” ಎಂಬುದನ್ನು ಹೇಳಿದನು. ಇದಿಷ್ಟೇ ಸಾಕಾಯಿತು ನಾಜೀ ಹಿರಿಯನಿಗೆ. ಜರ್ಮನಿಯ ಪ್ರಭಾವವನ್ನು ಬೇರೆ ಬೇರೆ ದೇಶಗಳಲ್ಲಿ ಬೇರೆಬೇರೆಯ ರೀತಿಯಿಂದ ಬೀರಬೇಕೆಂಬುದೇ ಹಿಟ್ಲರನ ಹಿರಿಯಾಶೆಯಾಗಿತ್ತು. ಜರ್ಮನಿಯ ಸರ್ವತೋಮುಖ ಬೆಳವಣಿಗೆಗೆ ಕೈ-ಹಾಕಿದವನಿಗೆ, ಇಂತಹ ಅಸಾಧಾರಣ ವ್ಯಕ್ತಿಯ ಪರಿಚಯದಿಂದ ಆನಂದವಾಗದೆ ಏನು ಮಾಡೀತು. ಹಿಟ್ಲರನು ಇವನ ರೂಪ-ಲಾವಣ್ಯಕ್ಕೂ ಬುದ್ಧಿಚಾತುರ್ಯಕ್ಕೂ ವ್ಯವಹಾರದೃಷ್ಟಿಗೂ ತಲೆದೂಗಿ ಮಾರುಹೋದನು. ಇದಲ್ಲದೆ ಇಬ್ಬರಿಗೂ ಸಾಮಾನ್ಯವಾದ ಆಸಕ್ತಿಯೊಂದೆಂದರೆ ಕಲೆ-ಸಂಗೀತ. ರಿಬನ್‌ಟ್ರೋಪನು ಪಿಟೀಲುವಾದನದಲ್ಲಿ ಪ್ರವೀಣನು. ಹಿಟ್ಲರನಿಗೆ ಅನೇಕಮುಖವಾದ ಅನುಭವಗಳಿಂದ ಮಾರ್ಪಟ್ಟ ತರುಣ ಸಹಕಾರಿಯೊಬ್ಬ ಬೇಕಿದ್ದ. ಅವೆಲ್ಲವೂ ರಿಬನ್‌ಟ್ರಾಪನಲ್ಲಿ ಇದ್ದುವು; ಇಷ್ಟೇ ಅಲ್ಲ, ಧನಾಢ್ಯನಾದುದರಿಂದ ಸರಕಾರದ ಅನೇಕ ವರಿಷ್ಠ ಜನತೆಯ ಪರಿಚಯವಿದ್ದಿತು. ಯಾವುದೊಂದು ಪಕ್ಷಕ್ಕೆ ರಾಜಕೀಯ ಅಧಿಕಾರ ಸಿಕ್ಕಬೇಕಿದ್ದರೆ, ಸರಕಾರದ ಆಡಳಿತ ತಂತ್ರಜಾಲವನ್ನು ತಿಳಿಯುವುದು ಅವಶ್ಯ. ಹಿಟ್ಲರನಿಗೆ ರಿಬನ್‌ಟ್ರಾಪನಿಂದ ಆದ ಸಹಾಯಕ್ಕೆ ಮೇರೆ-ಮಿತಿಯಿಲ್ಲ. ಅಂದೇ ಒಂದು ದಿನದ ಪರಿಚಯವು ದಿನೇ ದಿನೇ ಬೆಳೆಯುತ್ತ ಹಿಟ್ಲರನು ಅನೇಕ ಸಲ ಇವನ ಮನೆಯಲ್ಲಿ ಕಾಲಕಳೆದುದೂ ಇವನು ಹಿಟ್ಲರನ ನಿವಾಸದಲ್ಲಿ ಕಾಲವನ್ನು ಕಳೆದುದೂ ಸರ್ವಶ್ರುತವಿದೆ.

ಸ್ಕ್ರೋಡರನು ಪರಿಚಯಮಾಡಿಕೊಟ್ಟುದು ಇಷ್ಟೊಂದು ದೀರ್ಘಪರಿಚಯದಲ್ಲಿ ಪರಿಣಮಿಸಬಹುದೆಂದು ಅಂದು ಯಾರಿಗೂ ತಿಳಿದಿರಲಿಲ್ಲ. ಜೀವನದಲ್ಲಿ ಹಲವಾರು ಸಲ ಹೀಗೆ ಅನಿರೀಕ್ಷಿತ ಕಾರ್ಯಗಳು ಆಗುತ್ತಿರುತ್ತವೆ. ಅಧಿಕಾರ—ರಾಜಕೀಯ ಅಧಿಕಾರ ಪಡೆಯುವುದರಲ್ಲಿ ಹಿಟ್ಲರನಿಗೆ ರಿಬನ್‌ಟ್ರಾಪ್‌ನು ಸಾಧನವಾದನು. ರಿಬನ್‌ಟ್ರಾಪ್‌ನಿಗೂ ವ್ಹಾನ್‌ಪೇಪನ್‌ನಿಗೂ ಮಿತ್ರತ್ವವಿತ್ತು. ಇಬ್ಬರೂ ಅಮೇರಿಕೆಯಲ್ಲಿ ಕಾಲಕಳೆದವರು. ವ್ಹಾನ್-

ನೀವು ಯಾವಾಗ ಅನ್ನುವಿರಿ?

ಅದು ತಿರುಗಿ ಬರುವದಿಲ್ಲವೆಂದು ಖಾತ್ರಿ ಆದಾಗ ಅಲ್ಲವೆ?
ಆದರೆ ನಿಮಗೆ ಎಂದಾದರೂ ಹೀಗೆ ಖಾತ್ರಿ ಅನಿಸಿರುವದೋ ಹೇಗೆ?

ದಮ್ಮಿನ ಬಾಧೆಯು ಬಹು ತ್ರಾಸದಾಯಕ ಇದ್ದುದರಿಂದ ಅದನ್ನು ನಿವಾರಿಸಿಕೊಳ್ಳುವ ಸಹಜ ಮಾರ್ಗವನ್ನು ಬಿಟ್ಟು ದಮ್ಮು ಹತ್ತಿದವನು ಆರಾಮದ ಆಶೆಯಿಂದ ಬಿಳ್ಳ ಬಿಳ್ಳ ಉಪಾಯಗಳಿಗೆ ಮೊರೆ ಹೋಗುತ್ತಾನೆ. ಐದು ಹತ್ತು ಮಿನಿಟುಗಳಲ್ಲಿ ದಮ್ಮನ್ನು ನೆಟ್ಟಗೆ ಮಾಡುವ ಪ್ರತಿಜ್ಞೆಯು ಪೇಟೆಯಲ್ಲಿಯ ಪೇಟಂಟ ಔಷಧಗಳು ಅವನನ್ನು ಸಹಜವಾಗಿ ಮೋಹಗೊಳಿಸುವವು. ಔಷಧ ಪುಡಿ, ಎಫೆಡ್ರಿನ್‌ದ ಸುಳಿಗೆಗಳಂಥ ಕ್ಷಣಿಕ ಗುಣಕಾರಿ ಮತ್ತು ವಾತಸ್ಪರ್ಶಕ ಉಪಾಯದ ನಾದದಿಂದ ನೀವು ಅದರ ಗುಲಾಮರಾಗಿ ಕಾಯಂ ದಮ್ಮಿನವರಾಗಿ ಉಳಿದದ್ದು ಬಹಳ ಕದ ಮಾಡಿ ಲಕ್ಷಕ್ಕೆ ಬರುತ್ತದೆ.

ದಮ್ಮು ಹತ್ತಿದವನ ಪ್ರಕೃತಿಯು ಒಳಗಿಂದೊಳಗೆ ಕೆಟ್ಟಿರುತ್ತದೆ. ದಮ್ಮು ಕೇವಲ ಬಾಹ್ಯ ಲಕ್ಷಣ. ಅದ್ದರಿಂದ ಹಾಹಾ ಅನ್ನುವುದರಲ್ಲಿ ಗುಣಮಾಡಿಕೊಳ್ಳುವ ಆಶೆ ಹಿಡಿಯುವದು ಹುಚ್ಚುತನವೇ ಸರಿ. ಉಸುರಾಡಿಸುವದನ್ನು ನಿಯಮಿತ ಮತ್ತು ದಸ್ತ ಪ್ರಸನ್ನ ಮಾಡುವ ಔಷಧಗಳೇ ದಮ್ಮನ್ನು ಗುಣಪಡಿಸಬಲ್ಲವು. ಆದರೆ ಈ ಔಷಧಿಗಳು ಗುಣಕಾರಿಯಾಗಬೇಕಾದರೆ ಅವುಗಳೊಂದಿಗೆ ನಿಯಮಿತ ರೀತಿ ಶುದ್ಧಿಯಾಗಿ ಪಚನಕ್ರಿಯೆ ಸುಧಾರಿಸುವ ಮತ್ತು ಶಕ್ತಿಯನ್ನು ಹೆಚ್ಚಿಸುವ ಯೋಜನೆಯು ಆಗಬೇಕು ದೇಹಕ್ಕು.

ಪುರೋಹಿತ ಶ್ವಾಸಹಾರಿ (ರಜಿಸ್ಟರ್ಡ್) ಯಲ್ಲಿ ಈ ತರದ ಕಷ್ಟಾಗದಂಥ ಮತ್ತು ಸಮತೋಲ ಮಿಶ್ರಣವು ಸಾಧ್ಯವಾಗಿದ್ದರಿಂದ, ದಮ್ಮಿನ ಮೂಲಕಾರಣವನ್ನು ಹುಡುಕಿ ಅದರ ಮೇಲೆ ತನ್ನ ಪ್ರಭಾವವನ್ನು ಬೀರಿ, ದಮ್ಮನ್ನು ಮೆಲ್ಲ ಮೆಲ್ಲನೆ ಆದರೆ ಖಂಡಿತವಾಗಿ ನೆಟ್ಟಗೆ ಮಾಡುವ ಶಾಸ್ತ್ರೀಯ ಔಷಧದಲ್ಲಿ ಅದು ಅನೇಕ ವರ್ಷಗಳಿಂದ ಅಗ್ರೇಸರತ್ವ ಪಡೆದಿದೆ. ದಮ್ಮು, ಕೆಮ್ಮು, ಬೆಳಗು ಮುಂಜಾನೆ ಉಸಿರು ಗಟ್ಟುವದು, ಗಂಟಲು ಊರಿಯುವಂಥ ಕೆಮ್ಮು ಮತ್ತು ಪುಪ್ಪುಸದ ಯಾವತ್ತು ವಿಕಾರಗಳಿಗೆ ಅದರಿಂದ ಗುಣವಾಗುವದು.

ರೂ. ೨, ರೂ. ೩-೮-೦, ರೂ. ೬ ಈ ಕಿಮ್ಮತ್ತುಗಳಲ್ಲಿ ಸಣ್ಣ ದೊಡ್ಡ ಬಾಟಲಿಗಳು ಸರ್ವತ್ರ ದೊರೆಯುತ್ತವೆ.

ತಯಾರಕರು:

ಡಾ. ಪುರೋಹಿತ ಫಾರ್ಮಸಿ, ಕೊಲ್ಹಾಪುರ
ಅಥವಾ ಮುಂಬಯಿಯ ಯಾವದೇ ಔಷಧದ ಅಂಗಡಿಕಾರರ ಕಡೆಯಿಂದ

ಪುರೋಹಿತ ಶ್ವಾಸಹಾರಿ

ಪೇಪೆನ್‌ನು ಜರ್ಮನಿಯ ಚಾನ್ಸಲರ್‌ನಾದಕೂಡಲೆ, ರಿಬನ್‌ಟ್ರೊಪನು ತನ್ನ ಕಾರ್ಯವನ್ನು ಪ್ರಾರಂಭಿಸಿದನು. ಇವನ ಸಹಾಯದಿಂದ ಜರ್ಮನ್ ಸರಕಾರದ ಎಲ್ಲ ಆಡಳಿತಸೂತ್ರಗಳ ವಿವರವೂ ಹಿಟ್ಲರನಿಗೆ ಸಿಕ್ಕಿತು. ಮತ್ತು ನಾಜೀ ಪ್ರಚಾರದಿಂದ ಜರ್ಮನಿಯಲ್ಲಿ ತನಗೆ ಬಹುಮತವಾಗಬಹುದೆಂಬ ಭರವಸೆಯಿಂದ ಹಿಟ್ಲರನು, ಸಂಧಿಗಾಗಿ ಕಾಯುತ್ತಿದನು. ಆ ಸಂಧಿಯನ್ನು ಒದಗಿಸಿಕೊಟ್ಟ ಶ್ರೇಯಸ್ಸಾದರೂ ರಿಬನ್‌ಟ್ರೊಪನದೆ. ೧೯೩೩ ರಲ್ಲಿ ಹಿಟ್ಲರನು ವ್ಯಾನ್ ಪೇಪೆನ್‌ನ ಸಂದರ್ಶನ ತೆಗೆದುಕೊಂಡು, ಅವನನ್ನು ಇದಿರಾಗಿಯೆ ಸ್ಪಷ್ಟವಾಗಿ, ಚಾನ್ಸಲರನ ಅಧಿಕಾರವನ್ನು ತನಗಾಗಿ ಬಿಟ್ಟುಕೊಡಬೇಕೆಂದು ಕೇಳಿದನು; ಪೇಪೆನ್ ನಿರುಪಾಯನಾಗಿ, ಜರ್ಮನ ಸೇನಾಧಿಪತಿಯಾದ ವ್ಯಾನ್ ಹಿಂಡೆನ್‌ಬರ್ಗನ ಅನುಮತಿಯಿಂದ ಚಾನ್ಸಲರ್ ಪದವಿಯನ್ನು ಬಿಟ್ಟುಕೊಟ್ಟನು. ಅಂದಿಯೆ ಹಿಟ್ಲರನು ಅಧಿಕಾರಾರೂಢನಾದುದು.

ಹಿಟ್ಲರನು ಅಧಿಕಾರಸೂತ್ರಗಳನ್ನು ತೆಗೆದುಕೊಂಡನಂತರ ಜೊಕೀಮನೂ ಏಳ್ಗೆಯನ್ನು ಪಡೆದನು. ೧೯೩೬ರಲ್ಲಿ ಲಂಡನಿನಲ್ಲಿ ಕೂಡಿದ League of Nations ದ ಸಮಿತಿಗೆ ಜರ್ಮನಿಯ ಪ್ರತಿನಿಧಿಯಾಗಿ ಹೋದವನು ರಿಬನ್‌ಟ್ರೊಪನೇ. ಸವಿಮಾತಿನಿಂದ ಒಬ್ಬರ ಮನಸ್ಸನ್ನು ನೋಯಿಸದೆ, ತನ್ನ ಕಾರ್ಯವನ್ನು ಮಾಡಿಕೊಂಡು ಬಂದನು. ಈ ಯಶಸ್ಸಿನ ಪರಿಣಾಮದಿಂದಲೆ ಜರ್ಮನ ರಾಯಭಾರಿಯಾಗಿ ಇಂಗ್ಲಂಡಿಗೆ ಕಳಿಸಲ್ಪಟ್ಟನು. ಇಂಗ್ಲಂಡಿಗೆ ಬಂದ ರಾಯಭಾರಿಗಳಲ್ಲಿ ಇವನಷ್ಟು ಪ್ರೇಮದಾದರಕ್ಕೆ ಪಾತ್ರನಾದವನು ಬೇರೊಬ್ಬನಿಲ್ಲ. ಇವನ ಶಾಂತಸ್ವಭಾವದ ಪ್ರಭಾವವು ಹಿಟ್ಲರನ ಮೇಲೆ ಆಗಿರುವುದರಿಂದಲೆ, ತಿಕ್ಕಾಟಗಳು ಕಡಿಮೆಯಾಗಿ ಇರುತ್ತಿದ್ದುವು. ಇವನು ತುಂಬ ಮಾರ್ಮಿಕ ಮಾತುಗಾರ. "ಮಾತುಬಂದವನಿಗೆ ಜಗಳವಿಲ್ಲ" ಎಂಬುದನ್ನು ಇವನ ಮಾತಿನಲ್ಲಿ ಕಾಣಬಹುದು.

ಈ ವರುಷ ಯುದ್ಧ ಪ್ರಾರಂಭವಾಗುವುದಕ್ಕಿಂತ ಮೊದಲು ಇವನನ್ನು ಇಂಗ್ಲಂಡಿನಿಂದ ಕರೆಯಿಸಿಕೊಂಡರು. ಶಾಂತಿಕಾಲದಲ್ಲಿ ಇವನ ಮಾತು ದೇಶದ ಹಿತಕ್ಕೆ ಅನುಕೂಲವಾಗುತ್ತಿದ್ದಾಗ, ಯುದ್ಧ ಸಮಯದಲ್ಲೆಷ್ಟು ಆದೀತೆಂಬುದು ಇವನ ಬುದ್ಧಿಯನ್ನು ಬಲ್ಲವರಿಗೆ ಗೊತ್ತು. ರಶಿಯ-ಜರ್ಮನಿಗಳ ನಡುವೆ ಅಪಾರವಾದ ಅಂತರವು ಇದ್ದರೂ, ತತ್ವಗಳು ಉತ್ತರ ದಕ್ಷಿಣ-ಧ್ರುವಗಳಂತೆ ಇದ್ದರೂ, ಹಿಟ್ಲರ್-ಸ್ಟಾಲಿನ್‌ರು ವೈಯಕ್ತಿಕವಾಗಿ ಒಬ್ಬರನ್ನೊಬ್ಬರು ನೋಡದೆ ಇದ್ದರೂ, ಜೊಕೀಮನು ಜಾಣತನದಿಂದ ಆ ಉಭಯ ರಾಷ್ಟ್ರಗಳಲ್ಲಿಯೂ ಒಪ್ಪಂದವನ್ನು ಮಾಡಿ, ಇಡಿಯ ಜಗತ್ತನ್ನೆ ಬೆರಗುಗೊಳಿಸಿದ್ದಾನೆ. ಈ ಒಪ್ಪಂದದಿಂದ ಎರಡೂ ರಾಷ್ಟ್ರಗಳ ಉತ್ಕರ್ಷಕ್ಕೆ ಅನುಕೂಲವಾಗಿದೆ.

ಏನು ಕಾರ್ಯಮಾಡಿದರೂ ಜಾಣತನದಿಂದಲೂ ಶಾಂತರೀತಿಯಿಂದಲೂ ಮಾತಿನ ಮೇಲ್ಮೆಯಿಂದಲೂ ಮಾಡುವುದರಿಂದ, ಯಾರಿಗೂ ಬೇಡವಾಗದೆ ತನ್ನ ಕಾರ್ಯವನ್ನು ಸಾಧಿಸಿಕೊಂಡು ಪ್ರೇಮಾದರಕ್ಕೆ ಪಾತ್ರನಾದುದು ರಿಬನ್‌ಟ್ರೊಪನದೊಂದು ಹಿರಿಮೆ.



ಸಿ. ಸೂ: ನಮ್ಮಲ್ಲಿ ಬಂದು ಅಸ್ವೀಕೃತವಾದ ಲೇಖನಗಳ ಲೇಖಕರಿಗೆ ಸಂಪಾದಕಮಂಡಲಿ ಮಾಡಿದ ಸೂಚನೆಗಳಿವು. ಲೇಖಕರಲ್ಲಿ ದಯವಿ... ಇದನ್ನು ಬೇಕಾದರೆ ಓದಲಿ, ಬೇಡವಾದರೆ ಬಿಡಲಿ!

ಬಾಲ್ಯಾವಸ್ಥೆಯು ಎತ್ತಂಪೋದುದು? (ಕವಿತೆ)

ಎಲ್ಲಿಯೂ ಹೋಗಿಲ್ಲವೆಂಬುದನ್ನು ತಮ್ಮ ಕವಿತೆಯ ರೀತಿ, ಭಾಷೆ ಇವು ಸ್ಪಷ್ಟಗೊಳಿಸುತ್ತಲೆ ಇವೆ; 'ಯೋಚನೆಯ ಮಾಡಿ ನೀ ಕೆಡಬೇಡ ಮನವೆ!'

ಪ್ರೇಮವೇ ಸೌಭಾಗ್ಯದಾಗರವು ಮನುಜಂಗೆ! (ಕವನ)

ಸಣ್ಣಬಾಯಿಗೆ ದೊಡ್ಡ ತುತ್ತನ್ನು ಹಾಕಬಾರದಲ್ಲವೆ? ಇನ್ನು ತಮ್ಮ ನೆಲೆಯು ತಮಗೆ ತೋರದಿರುವಾಗ ಮನುಜಕುಲಕ್ಕೇ ಅನ್ವಯಿಸುವ ಮಾತನ್ನು ಹೇಳುವ ಸಾಹಸಮಾಡುವುದು ... ತನವೇ!

ಮೀರಾ! (ಜೀವನಪರಿಚಯ)

ಮುಂಬಯಿ ವಿದ್ಯಾಖಾತೆಯ ಕ್ರಮಿಕ ೭ ನೆಯ ಪುಸ್ತಕವು ಈ ನೊದಲೆ ನಮಗೆ ಮೀರಾಬಾಯಿಯ ಪರಿಚಯ ಮಾಡಿಕೊಟ್ಟಿದೆ. ತಾವು ರಾಷ್ಟ್ರಭಾಷಾವಿಶಾರದರಾಗಿದ್ದುದು ಸಂತೋಷ. ಆದರೆ ತಮ್ಮ 'ಲಿಟರೀ ಹಿಡ್ಡಿ' ನಲ್ಲಿ ಇಂಗ್ಲಿಷ್-ಹಿಂದಿಗಳಿಗೆ ಸ್ಥಾನಕೊಟ್ಟು ಕನ್ನಡದ ಕತ್ತಿಗೆ ಕೈಕೊಟ್ಟುದು ನಮ್ಮ ಸಿಮ್ಮ ದುರ್ದೈವ!

ಆರ್ತ (ಪ್ರಬಂಧ)

'ತಿಳಿಯಾದ ನೀಲಾಕಾಶದಲ್ಲಿ ಕಾರ್ಮೋಡಗಳು ಎಲ್ಲೆಲ್ಲಿಯೂ ಬಿಡದೆ ಹಬ್ಬಿವೆ. ಮೇಲಿಂದ ಮೇಲೆ ಮೋಡಗಳ ತಾಕಲಾಟದಿಂದ ಹುಟ್ಟುವ ಅಬ್ಬರದ ಸಪ್ಪಳವು ಜನರ ಕಿವಿಗಳನ್ನು ಕತ್ತರಿಸಿ ಗೂಡಿಸುತ್ತದೆ.'

ಪ್ರಣಯ (ಒಂದು ಗದ್ಯಗೀತ)

ಇದಕ್ಕೆ ತಕ್ಕುದಾದ ಸ್ಥಾನದಲ್ಲಿ ಈಗಾಗಲೆ ಮುದ್ರಿತವಾಗಿದೆ. ಜಯಂತಿಯ ದೀಪಾವಳಿ ಸಂಚಿಕೆಯಲ್ಲಿ ಇನ್ನೊಮ್ಮೆ ಮುದ್ರಿಸಬೇಕೆಂದು ಹಾರಯಿಸುತ್ತಿದ್ದಿರಿ! ಇನ್ನೊಮ್ಮೆ ಏತಕ್ಕಾಗಿ ಮುದ್ರಿಸಬೇಕೆಂದಿದ್ದಿರಿ ಇದನ್ನು?

ಗೊಮ್ಮಟೇಶ್ವರ (ಕವಿತೆ)

ತಮ್ಮಯ್ಯಾ, ನಿನ್ನ ತೊದಲ್ನುಡಿಗಳನ್ನು ನಾನೇನೋ ಪ್ರೀತಿಯಿಂದ ಕೇಳಿದೆ. ಎಲ್ಲರೂ ನಿನ್ನ ನುಡಿ ಕೇಳಬೇಕೆಂಬ ಅಪೇಕ್ಷೆ ನಿನಗಿದ್ದರೆ ಅಭ್ಯಾಸ-ಅನುಭವಗಳಿಂದ ನಿನ್ನ ತೊದಲನ್ನು ತಿದ್ದಿಕೊಂಡು ಮಾತನಾಡತೊಡಗು, ತಿಳಿಯಿತೇನು?

ಗೋಧಿನಾಗರ!

(ಪತ್ತೇದಾರಿ ಕಥೆ) *

ಶ್ರೀ. ಎನ್. ಸೂರಪ್ಪ ಚಿತ್ರದುರ್ಗ

ಅವತರಣಿಕೆ

★

೧೯೩೭ನೆಯ ಇಸವಿ ಡಿಸೆಂಬರು, ೧೪ನೆಯ ಶನಿವಾರ ರಾತ್ರಿ ನಾನೂ ಪ್ರಕಾಶನೂ ನಾಟಕಕ್ಕೆ ಹೋಗಿದ್ದೆವಾದುದರಿಂದ, ಮರಳಿ ಬಂದು ಅವನ ಮನೆಯಲ್ಲಿಯೆ ಮಲಗಿಕೊಂಡೆ. ಬೆಳಗಿನ ಸುಮಾರು ೬ ಘಂಟೆಯ ಹೊತ್ತಿನಲ್ಲಿ ನನ್ನ ತಂಗಿ ಮಹಡಿಯ ಮೇಲಕ್ಕೆ ಬಂದು, ಪ್ರಕಾಶನನ್ನು ಎಬ್ಬಿಸಿ ಯಾರೋ ವರಾಂಡಾದಲ್ಲಿ ಕಾದಿರುವರೆಂದು ತಿಳಿಸಿದಳು. ನನ್ನ ತಂಗಿ ಕೋಣೆಯೊಳಗೆ ಬಂದ ಸುಳಿವರಿತು ಮುಖಕ್ಕೆ ಮುಸುಕು ಹಾಕಿಕೊಂಡೆ. ಅವಳು ವಿಷಯವನ್ನು ತಿಳಿಸಿ ಹೊರಟುಹೋದನಂತರ ಪ್ರಕಾಶನು "ಏಳಯ್ಯಾ ಪ್ರಭೂ, ಯಾಕೆ ಮುಸುಕು ಹಾಕಿಕೊಂಡೆ...ಇಷ್ಟು ಹೊತ್ತೂ ಎಚ್ಚರ ಇದ್ದಿದ್ದು!' ಎಂದ. ನಾನು ಮುಸುಕನ್ನು ತೆಗೆದು, ಮಂಚದ ಪಕ್ಕದಲ್ಲಿಯೆ ಟೇಬಲ್ಲಿನ ಮೇಲಿದ್ದ ಸಿಗರೇಟಿನ ಪ್ಯಾಕನ್ನು ತೆಗೆದುಕೊಂಡು "ಏನೋ ಹಾಕಿಕೊಂಡೆ; ಇದಿರಲಿ, ವಿಷಯ ಏನು? ಆಗಲೇ ಡ್ರೆಸ್ ಮಾಡಿಕೊಳ್ಳುತ್ತಿದ್ದೀಯಲ್ಲಾ!" ಎಂದು ಪ್ಯಾಕನ್ನು ಅವನ ಮುಂದೆ ಎಸೆದೆ. ಅವನು ಬೂಡ್ಸಿನ ಲೇಸನ್ನು ಕಟ್ಟುತ್ತಾ. "ಪ್ರಭೂ, ಯಾರೋ ಈಗಲೆ ನನ್ನನ್ನು ನೋಡಬೇಕಂತೆ. ಇಷ್ಟು ಹೊತ್ತಿನಲ್ಲಿ ನಿದ್ರೆ ಮಾಡುವವರನ್ನು ಎಬ್ಬಿಸಬೇಕಾದರೆ ತುಂಬಾ ಗಾಬರಿಯಾಗುವ ವಿಷಯವೇ ಜಗರಬೇಕಲ್ಲವೆ!" ಎಂದು ಕಾಫಿಯನ್ನು ತರುವಂತೆ ನನ್ನ ತಂಗಿಯನ್ನು ಕೂಗಿದ. ಅಷ್ಟು ಹೊತ್ತಿಗೆ ನಾನೂ ಹಾಸಿಗೆಯಿಂದ ಎದ್ದು, ಅವಸರವಸರವಾಗಿ ಬಟ್ಟೆಗಳನ್ನು ಹಾಕಿಕೊಂಡು ಹೊರಡಲು ಸಿದ್ಧನಾದೆ. ಕಾಫಿಯನ್ನು ಕುಡಿದು ವರಾಂಡಾಕ್ಕೆ ನಾವು ಬರುವ ಹೊತ್ತಿಗೆ ಸುಮಾರು ೬॥ ಘಂಟೆಯಾಗಿತ್ತು. ನಮಗಾಗಿ ಕಾಯುತ್ತಿದ್ದ ಒಬ್ಬ ಯುವಕನು, ನಾವು ಬಂದುದನ್ನು ನೋಡಿ ಎದ್ದು ನಮಸ್ಕರಿಸಿದ. ಆಗಂತುಕನಿಗೆ ಸುಮಾರು ೧೮-೧೯ ವರ್ಷಗಳಿದ್ದಿರಬಹುದು. ಬಿಳಿಯ ಷರಾಯಿಯನ್ನೂ, ಒಂದು ತೆಳ್ಳನೆಯ ಸಿಲ್ಕ್ ಜುಬ್ಬಿಯನ್ನೂ ತೊಟ್ಟಿದ್ದ; ತಲೆಯಲ್ಲಿ ಒಳ್ಳೆಯ ಗುಂಗುರು ಗುಂಗರಿನ ಕೂದಲೂ ಬಾಚದೆ ಇದ್ದ ಕ್ರಾಪೂ ಇದ್ದಿತು. ೧೮ ವರ್ಷಗಳ ವಯಸ್ಸಿನವನಾದರೂ ಮುಖದ ಮೇಲೆ ಗಾಢವಾದ ಚಿಂತೆಯು ಮುದ್ರಿತವಾಗಿತ್ತು. ಯಾವುದೋ ಮಹತ್ತಾದ ಯೋಚನೆಯಿಂದ, ಅವನು ತನ್ನ ಇಹಲೋಕದ ಜೀವನವನ್ನೇ ನಾಶಮಾಡಿಕೊಂಡಿದ್ದವನಂತೆ ನೋಡಿದವರಿಗೆ ಕೂಡಲೆ ತೋರುತ್ತಿದ್ದ. ಮುಖವೆಲ್ಲಾ ಒಂದು ಸಪ್ಪೆಯ ಬಣ್ಣವನ್ನು ಹೊಂದಿ, ಕೆನ್ನೆಗಳೂ ಕಣ್ಣುಗಳೂ ಗುಳಿಬಿದ್ದು, ರಕ್ತಹೀನತೆಯಿಂದ ನರಳುವ ರೋಗಿಯಂತೆ ಕಾಣುತ್ತಿದ್ದ.

ಪ್ರಕಾಶನು ಒಂದೆರಡು ನಿಮಿಷ ಮೌನವಾಗಿ ಅವನನ್ನು ಕಾಲಿನಿಂದ ತಲೆಯವರೆಗೂ ನೋಡಿ "ಇಷ್ಟು ಹೊತ್ತಿನಲ್ಲಿ ತಾವು ಸುಮಾರು ೫-೬ ಮೈಲಿ ನಡೆದುಕೊಂಡು ಬಂದು ನಿದ್ರೆ ಮಾಡುವವರನ್ನು ಎಬ್ಬಿಸಬೇಕಾದರೆ, ನೀವು ಪ್ರಾಣದ ಹೆದರಿಕೆಯಿಂದಲೇ ಹೀಗೆ ಮಾಡುತ್ತಿದ್ದೀರಲ್ಲವೇ" ಎಂದ. ಯುವಕನ ಮುಖದಲ್ಲಿ ಎದ್ದು ಕಾಣುವಂತಹ ಬದಲಾವಣೆಯುಂಟಾಯಿತು. ನೋಡಿದ ಕೂಡಲೆ ಈತನು ತನ್ನ ಹೃದಯವನ್ನು ಹೇಗೆ ಅರಿತುಕೊಂಡನೆಂದು ಆತನಿಗೆ ಆಶ್ಚರ್ಯವಾಯಿತೋ ಏನೊ! "ಹೌದು ನನಗೆ ಪ್ರಾಣದ ಹೆದರಿಕೆಯಿದೆ. ಆದರೆ, ವಿಷಯವನ್ನು ನಿಮಗೆ ತಿಳಿಸಿದರೆ ಪರಿಹಾರೋಪಾಯವನ್ನು ತಾವು ಮಾಡಬಹುದೆಂದು ನಂಬಿ ಬಂದಿರುತ್ತೇನೆ" ಎಂದ. ಪ್ರಕಾಶನು ಸ್ವಲ್ಪ ಹೊತ್ತು ಏನನ್ನೊ ಯೋಚಿಸಿ "ಅಗತ್ಯವಾಗಿ, ನನ್ನ ಕೈಯಲ್ಲಾದ ಸಹಾಯವನ್ನು ಮಾಡುತ್ತೇನೆ. ದಯಮಾಡಿಟ್ಟು ವಿಷಯಗಳೆಲ್ಲವನ್ನೂ ತಿಳಿಸಿ" ಎಂದು, ಪದ್ಧತಿಯಂತೆ ಸಿಗರೇಟನ್ನು ಹಚ್ಚಿ, ಹೊಗೆಯು ಅಂತರಿಕ್ಷಕ್ಕೆ ಹೋಗುವುದನ್ನೇ ನೋಡುತ್ತಾ ಮೌನವನ್ನು ಧರಿಸಿಕೊಂಡ. ಯುವಕನು "ನನಗೆ ಜ್ಞಾಪಕವಿರುವ ಸಂಗತಿಗಳೆಲ್ಲವನ್ನೂ ಸ್ವಲ್ಪವೂ ಮರೆಮಾಚದೆ ಹೇಳುತ್ತೇನೆ. ವಿಶದವಾಗಿಲ್ಲದಿದ್ದರೆ. ತಾವು ಕೇಳಬಹುದು, ಮತ್ತು ಯಾವ ಪ್ರಶ್ನೆಯನ್ನಾದರೂ ಹಾಕಬಹುದು. ನನ್ನ ಹೆಸರು ಮೋಹನರಾವ್ ಎಂದು. ನಮ್ಮ ತಂದೆ ಸತ್ತು ಸುಮಾರು ೧೪-೧೫ ವರ್ಷಗಳಾಗಿರಬಹುದು. ನನಗೆ ತಾಯಿಯೂ ಇಲ್ಲ. ನಮ್ಮ ತಂದೆಯಿದ್ದಾಗ ತುಂಬಾ ಹಣವನ್ನು ಎಂದರೆ ಸುಮಾರು ೨॥ ಲಕ್ಷ ರೂಪಾಯಿಗಳನ್ನು ಸಂಪಾದಿಸಿದ್ದರಂತೆ. ನನಗೆ ಒಬ್ಬ ಅಣ್ಣನಿದ್ದ; ಅವನೂ ನಾನೂ ಅವಳಿ ಜವಳಿ ಮಕ್ಕಳು. ನಮ್ಮ ತಂದೆ ಸತ್ತನಂತರ, ಆಸ್ತಿಯೆಲ್ಲವನ್ನೂ ನಮ್ಮ ಚಿಕ್ಕಪ್ಪ ಡಾಕ್ಟರ್ ಗೋಪಾಲರಾವ್, ತನ್ನ ಕೈಗೆ ತೆಗೆದುಕೊಂಡು ನಮ್ಮಿಬ್ಬರನ್ನೂ ಸಾಕತೊಡಗಿದ....." ಎಂದು ಹೇಳುತ್ತಿರುವಷ್ಟರಲ್ಲಿ

★

ಭೀಕರರಾತ್ರಿ! ಏನಾದರೂ ಸ್ವಲ್ಪವೆ ಹೆಚ್ಚುಕಡಿಮೆಯಾಗಿದ್ದರೆ ಮೋಹನನನ್ನು ಉಳಿಸಲು ಹೋದ ಪ್ರಕಾಶ, ಪ್ರಭಾಕರ ಇಬ್ಬರೂ ಪ್ರಾಣಕ್ಕೆ ಎರವಾಗಬೇಕಾಗುತ್ತಿದ್ದಿತು. ಇನ್ನೊಬ್ಬರಿಗಾಗಿ ತನ್ನ ಪ್ರಾಣದ ಮೇಲೆ ಪಣವನ್ನೊಡ್ಡುವುದು ಪ್ರಕಾಶನಿಗೊಂದು ಹುಚ್ಚು ಅಪೇಕ್ಷೆ!

★

* Sir A. Connon Doyle ರವರ "The Speckled Band" ಎಂಬ ಕಥೆಯ ಅನುಸರಣದ ಫಲವಿದು.

ಪ್ರಕಾಶನು ಅವನ ಮಾತಿಗೆ ಅಡ್ಡ ಬಂದು "ಯಾರೂ? ಸ್ಕಾಟ್ಲೆಂಡಿನಲ್ಲಿ ವಿದ್ಯಾಭ್ಯಾಸ ಮಾಡಿ ಪ್ರಸಿದ್ಧಿಯಾಗಿರುವ ಡಾಕ್ಟರ್ ಗೋಪಾಲರಾವ್ ತಾನೇ?" ಎಂದ. ಮೋಹನನು "ಹೌದು, ಅವನೇ ನನ್ನ ಚಿಕ್ಕಪ್ಪ. ಅವನ ಹೆಸರನ್ನು ಕೇಳಿದ ಕೂಡಲೆ ನನ್ನ ಮೈ ಜುಂ ಎನ್ನುತ್ತದೆ." ಎಂದು ಹೇಳಿ ಮಾತು ಮುಂದುವರಿಸಿದ:

"ನಮ್ಮ ಮನೆ ಗವೀಪುರದ ಕೊನೆಯಲ್ಲಿದೆ. ಮನೆಗೆ ಸುಮಾರು ೧ ಫರ್ಲಾಂಗಿನಷ್ಟು ದೊಡ್ಡ ಕಾಂಪೌಂಡಿರುತ್ತದೆ. ಸುತ್ತ ಮುತ್ತಲೂ ಗಿಡಗಳೂ ಮರಗಳೂ ಹೇರಳವಾಗಿ ಬೆಳೆದಿರುವುದರಿಂದ, ರಾತ್ರಿಯ ಹೊತ್ತು ತಿರುಗಾಡಲು ಬಹು ಬೇಸರಿಕೆಯಾಗುವುದರಲ್ಲಿ ಸಂಶಯವಿಲ್ಲ. ನನ್ನ ಚಿಕ್ಕಪ್ಪನನ್ನು ಕಂಡರೆ, ನೆರೆಹೊರೆಯವರಿಗೆ–ಯಾಕೆ ಯಾರಿಗೂ—ಆಗುವುದಿಲ್ಲ. ಬಹಳ ಮುಂಗೋಪಿ, ಕ್ರೂರಿ, ಮಾತಿಗೆ ಮುಂಚೆ ಹೊಡೆಯುವುದೇ ಬಡಿಯುವುದೇ ಅವನ ಸ್ವಭಾವ" ಎಂದು ಕರವಸ್ತ್ರದಿಂದ ಮುಖವನ್ನು ಒರಸಿಕೊಂಡ. ಪ್ರಕಾಶನು "ಅವರ ಕ್ರೂರಸ್ವಭಾವವು ನಿಮ್ಮನ್ನು ನೋಡಿದ ಕೂಡಲೆ ತಿಳಿಯುತ್ತದೆ. ನಿಮಗೂ ಹೊಡೆತಗಳು ತಪ್ಪಿಲ್ಲವೆಂದು ತೋರುತ್ತದೆ" ಎಂದ. ಮೋಹನನು ಎದೆಯ ಮೇಲಿದ್ದ ಏಟಿನ ಗುರುತನ್ನು ಮುಚ್ಚಿಕೊಳ್ಳುತ್ತಾ "ನನಗೂ ತಪ್ಪಿಲ್ಲ; ಹಾಗೆ ನೋಡಿದರೆ ಸತ್ತ ನಮ್ಮಣ್ಣನೇ ಪುಣ್ಯವಂತ! ನನ್ನ ಚಿಕ್ಕಪ್ಪನ ಸ್ವಭಾವವನ್ನು ಅರಿಯಲಿಕ್ಕೆ ಸಾಧ್ಯವೇ ಇಲ್ಲ. ಯಾವಾಗ ಮಾತನಾಡಿಸಿದರೂ ಮೇಲೆ ಬೀಳುತ್ತಾನೆ. ಯಾರನ್ನು ಕಂಡರೂ ಅಷ್ಟೇ. ನಮ್ಮ ಮನೆಗೆ ಒಬ್ಬನೂ ಬಂದು ಸಂತೋಷವಾಗಿ ಮರಳಿ ಹೋಗಿರುವುದನ್ನು ನಾನು ನೋಡಿಲ್ಲ. ಕಾಂಪೌಂಡಿನ ಬಾಗಿಲು ಯಾವಾಗಲೂ ಹಾಕಿಯೇ ಇರುತ್ತದೆ. ಮೊನ್ನೆ ತಾನೆ ಪೋಲೀಸಿನವನನ್ನು ಹೊಡೆದು ದೊಡ್ಡ ಗಲಾಟೆಯಾಗಿ, ಅದರಿಂದ ತಪ್ಪಿಸಿಕೊಳ್ಳಲು ನನ್ನ ಚಿಕ್ಕಪ್ಪನಿಗೆ ೨-೩ ಸಾವಿರ ರೂಪಾಯಿ ಖರ್ಚಾಯಿತು. ಅದೂ ಅಲ್ಲದೆ ಅವನ ಬುದ್ಧಿಯೇ ವಿಚಿತ್ರವಾದದ್ದು. ಕಾಡುಪ್ರಾಣಿಗಳನ್ನು ಕಂಡರೆ ಅವನಿಗೆ ತುಂಬಾ ಪ್ರೀತಿ. ಮನೆಯಲ್ಲಿ ಒಂದು ದೊಡ್ಡ ಆಫ್ರಿಕಾ ದೇಶದ ಕೋತಿಯನ್ನೂ ಒಂದು ಚಿರತೆಯ ಮರಿಯನ್ನೂ ಸಾಕಿದ್ದಾನೆ. ರಾತ್ರಿಯ ಹೊತ್ತು ಕಾಂಪೌಂಡಿನಲ್ಲಿ ಅವು ನಿರಾತಂಕವಾಗಿ ತಿರುಗಾಡುತ್ತಿರುತ್ತವೆ. ಇವುಗಳ ಮೂಲಕ ಹೊರಗಿನವರು ನಮ್ಮ ಮನೆಯ ಕಡೆಗೆ ತಿರುಗಿ ಕೂಡ ನೋಡದ ಹಾಗೆ ಆಗಿದೆ. ನಮ್ಮ ಚಿಕ್ಕಪ್ಪನಿಗೆ ಮದುವೆಯಿಲ್ಲ. ಸ್ಕಾಟ್ಲೆಂಡಿನಿಂದ ಬರುವಾಗ ಒಬ್ಬ ತರುಣಿಯನ್ನು ಕರೆದುಕೊಂಡು ಬಂದಿದ್ದ. ಇವನ ಗುಣಗಳನ್ನೂ ರೀತಿಯನ್ನೂ ಚಿತ್ರಹಿಂಸೆಯನ್ನೂ ಸಹಿಸಲಾರದೆ ಅವಳು ಬಂದ ಮೂರು ತಿಂಗಳಲ್ಲಿಯೇ ಓಡಿಹೋದಳು. ಇವೆಲ್ಲ ಹೇಗಾದರೂ ಇರಲಿ, ನನ್ನ ಅಣ್ಣನು ಸತ್ತ ವಿಷಯವನ್ನು ಜ್ಞಾಪಿಸಿಕೊಂಡರೆ ನನಗೆ ತುಂಬಾ ದುಃಖವುಂಟಾಗುತ್ತದೆ. ನಾವಿಬ್ಬರೂ ಒಬ್ಬರನ್ನೊಬ್ಬರು ಬಹಳ ಪ್ರೀತಿಸುತ್ತಿದ್ದೆವು. ಚಿಕ್ಕಪ್ಪನು ಕ್ರೂರತನದಿಂದ ವರ್ತಿಸಿದರೆ, ಒಬ್ಬರಿಗೊಬ್ಬರು ಹೇಳಿಕೊಂಡು ಸಮಾಧಾನಪಟ್ಟುಕೊಳ್ಳುತ್ತಿದ್ದೆವು. ಒಂದು ದಿನವೂ ನಾವು ಅಗಲಿರಲಿಲ್ಲ." ಎಂದು ಕಣ್ಣುಗಳಲ್ಲಿ ಬರುತ್ತಿದ್ದ ನೀರನ್ನು ಕರವಸ್ತ್ರದಿಂದ ಒತ್ತಿಕೊಂಡ. ಪ್ರಕಾಶನು, ಮೋಹನನನ್ನು ಸಮಾಧಾನಪಡಿಸುತ್ತ "ಈಗ ಚಿಂತಿಸಿ ಫಲವಿಲ್ಲ, ನಿಮ್ಮ ಅಣ್ಣ ಸಾಯಲು ಕಾರಣವೇನು; ಮತ್ತು ಈಗ ನಿಮಗೆ ಯಾವುದರಿಂದ ಭಯವುಂಟಾಗಿದೆ. . ಎಂಬುದನ್ನು ತಿಳಿಸಿದರೆ ಮುಂದೆ ಯೋಚಿಸಲು ಅನುಕೂಲವಾಗುತ್ತೆ" ಎಂದ. ಮೋಹನನು ಸ್ವಲ್ಪ ಚೇತರಿಸಿಕೊಂಡು "ನನ್ನ ಅಣ್ಣನ ವಿಷಯವನ್ನು ಹೇಳುವುದಕ್ಕೆ ಮೊದಲು, ನಮ್ಮ ಮನೆ ಮತ್ತು ಖಾಸಿ–ಚಿಕ್ಕಪ್ಪನ ವಿಷಯವಾಗಿ ಹೇಳುವುದು ಅವಶ್ಯವೆಂದು ಭಾವಿಸಿ, ನನ್ನ ದುಃಖವೆಲ್ಲವನ್ನೂ ಬಿಟ್ಟು ಹೇಳಿದೆ; ಅದನ್ನು ವಿಶದವಾಗಿರಬೇಕೆಂಬುದೇ ನನ್ನ ಉದ್ದೇಶ. ನಮ್ಮ ಮನೆ ಸ್ವಲ್ಪ ಹೆಚ್ಚುಕಡಿಮೆ ಬಂಗಲೆಯೋಪಾದಿಯಲ್ಲಿದೆ. ಪ್ರವೇಶಿಸುತ್ತಲೂ ಮೊದಲು ಒಂದು ವರಾಂಡಾ; ಅನಂತರ ಎಡಬಲ ಭಾಗಗಳಲ್ಲಿ ಎರಡು ಕೊಠಡಿಗಳಿವೆ. ಆ ಕೊಠಡಿಗಳಿಗೆ ನಾವೆಂದೂ ಹೋಗಿಲ್ಲ. ಚಿಕ್ಕಪ್ಪನೇ ತನ್ನ ವೈದ್ಯಕದ ಮತ್ತು ರಸಾಯನಶಾಸ್ತ್ರದ ಸಾಮಾನುಗಳನ್ನೂ, ಪುಸ್ತಕಗಳನ್ನೂ ತುಂಬಿಕೊಂಡಿದ್ದಾನೆ. ಅನಂತರ ಒಂದು ಸಣ್ಣ ಅಂಗಳ; ಅದರಿಂದ ಮುಂದಕ್ಕೆ ಮೂರು ಕೊಠಡಿಗಳಿವೆ. ನನ್ನದು ಎಡಭಾಗದಲ್ಲಿ ಕೊನೆಯದು. ಅದರ ಪಕ್ಕದಲ್ಲಿ ನನ್ನ ಅಣ್ಣನಿರುತ್ತಿದ್ದ. ಅವನ ಕೊಠಡಿಗೂ, ಅದರ ಪಕ್ಕದಲ್ಲಿರುವ, ನನ್ನ ಚಿಕ್ಕಪ್ಪನ ಮಲಗುವ ಕೋಣೆಗೂ ಒಂದೇ ಗೋಡೆ ಅಡ್ಡವಾಗಿದೆ. ಚಿಕ್ಕಪ್ಪನ ಕೋಣೆಗೆ ಕೂಡ ನಾವು ಹೋಗುವುದೇ ಇಲ್ಲ. ನನ್ನ ಕೋಣೆಯಿಂದ ಗಾಳಿ ಬರುವುದಕ್ಕೆ ಒಂದು ಕಿಟಕಿಯಿದೆ. ಈಗ ಮೂರು ತಿಂಗಳ ಹಿಂದೆ ಒಂದು ದಿವಸ ಬೆಳಗಿನಲ್ಲಿ ನನ್ನ ಅಣ್ಣನು ನನ್ನ ಕೋಣೆಗೆ ಬಂದು 'ಮೋಹನಾ, ನನಗ್ಯಾಕೋ ನನ್ನ ಕೋಣೆಯಲ್ಲಿ ಮಲಗಲು ಭಯವಾಗುತ್ತೆ. ರಾತ್ರಿಯೆಲ್ಲಾ ನಿದ್ರೆ ಬರುವುದೇ ಇಲ್ಲ. ನಿನಗೇನಾದರೂ ಈ ದಿವಸ ಬೆಳಿಗ್ಗೆ ಸುಮಾರು ೪॥-೫ ಘಂಟೆಯ ಹೊತ್ತಿನಲ್ಲಿ ಶೀಟಿ (whistle) ಯ ಶಬ್ದ ಕೇಳಿಸಿತೇ?' ಎಂದ. ನಾನು ಅವನನ್ನು ಸಮಾಧಾನ ಮಾಡಿ 'ಏನೂ ಇಲ್ಲ, ಸುಮ್ಮನೆ ದಿಗಿಲುಪಡಬಾರದು. ನಿನ್ನ ಮನಸ್ಸಿನ ಅಧೈರ್ಯದಿಂದ, ಹಾಗಾಗಿರಬೇಕು' ಎಂದು ಉತ್ತರ ಕೊಟ್ಟೆ. ಅದಕ್ಕೆ ಅವನು ಅಸಮಾಧಾನದಿಂದ ಇದ್ದನೇ ಹೊರತು ಪೂರ್ಣಧೈರ್ಯವನ್ನು ಹೊಂದಲಿಲ್ಲ. ಇದಾದ ಮಾರನೆಯ ದಿವಸ ಬೆಳಗಿನಲ್ಲಿ ಪುನಃ ಅವನು, ನನ್ನನ್ನು ನೋಡಿದ ಕೂಡಲೆ 'ತಮ್ಮಾ, ಈವೊತ್ತೂ ನನಗೆ ಅದೇ ಶಬ್ದ ಕೇಳಿಸಿತು. ಸುಮಾರು ೨-೩ ನಿಮಿಷ ಯಾರೋ ಸಣ್ಣಗೆ ಶೀಟಿ (whistle) ಹೊಡೆದಂತಾಯ್ತು. ಅನಂತರ "ಟಿಣ್" ಎಂದು ಕಿಟಕಿಯನ್ನು ಹಾಕಿದ ಹಾಗೆ ಶಬ್ದವಾಯಿತು. ನನಗೆ ಚೆನ್ನಾಗಿ ಜ್ಞಾಪಕ ಇದೆ. ನೀನೇನಾದರೂ ಬೆಳಗಿನ ೪ ಘಂಟೆಯಲ್ಲಿ ಕಿಟಕಿಯ ಬಾಗಿಲನ್ನು ಹಾಕಿದೆಯಾ?' ಎಂದು ಪ್ರಶ್ನಿಸಿದ. ನನಗೆ ಅವನ ಮಾತುಗಳನ್ನೂ, ಅವನು ಇದ್ದ ಸ್ಥಿತಿಯನ್ನೂ ನೋಡಿ ಸ್ವಲ್ಪ ಆಶ್ಚರ್ಯವೇ ಆಯಿತು. ನಾವು ಯಾವಾಗಲೂ ಕಿಟಕಿಯನ್ನು ತೆಗೆದು ಮಲಗುತ್ತಿರಲಿಲ್ಲ. ಯಾಕೆಂದರೆ ಕೋತಿ ಮತ್ತು ಚಿರತೆಯ ಭಯ. ಆದರೂ 'ಏನೂ ಇಲ್ಲವೋ, ನಾನೇ ಕಿಟಕಿಯನ್ನು ಹಾಕಿದೆ' ಎಂದು ಸುಳ್ಳು ಹೇಳಿ, ಬೆದರಿದ್ದ ಅವನ ಹೃದಯಕ್ಕೆ ಧೈರ್ಯವನ್ನು ತುಂಬಲು ಪ್ರಯತ್ನಪಟ್ಟೆ.

ಯಾವುದೋ ಅನಿರೀಕ್ಷಿತವಾದ ಸನ್ನಿವೇಶದಿಂದ ಅವನು ಸಂಪೂರ್ಣವಾಗಿ ಗಾಬರಿಯಾಗಿದ್ದ. ಅವನ ಮುಖವೆಲ್ಲ ವಿವರ್ಣವಾಗಿ ಸಪ್ಪೆಯಾಗಿತ್ತು. ಯಾವುದರಿಂದ ಭಯ ಎನ್ನುವುದು ಮಾತ್ರ ಅವನಿಗಾಗಲಿ ನನಗಾಗಲಿ ಗೊತ್ತಿರಲಿಲ್ಲ. ಹೀಗೆಯೆ ಎರಡು ದಿವಸಗಳು ನಡೆದ ಮೇಲೆ ಮೂರನೆಯ ದಿವಸ ಬೆಳಗು ೪-೪॥ ಘಂಟೆಯ ಹೊತ್ತಿನಲ್ಲಿ 'ಅಯ್ಯೋ, ಅಯ್ಯೋ!' ಎಂದು ನಮ್ಮ ಅಣ್ಣ ಜೋರಾಗಿ ತನ್ನ ಕೋಣೆಯಿಂದ ಕೂಗಿಕೊಂಡ. ಪಕ್ಕದ ಕೋಣೆಯಲ್ಲಿಯೇ ಮಲಗಿದ್ದ ನನಗೆ ಜೀವವೇ ಹೋದಂತಾಯ್ತು. ಕೂಡಲೆ ಎದ್ದು ಓಡಿದೆ. ನನ್ನ ಅಣ್ಣನ ಕೋಣೆಯ ಬಾಗಿಲಿನ ಹತ್ತಿರಕ್ಕೆ ಹೋದ ಕೂಡಲೆ "ಟಣ್" ಎಂದು ಶಬ್ದವಾಯಿತು."

ಪ್ರಕಾಶ:— ಶಬ್ದವನ್ನು ನೀವು ಸರಿಯಾಗಿ ಕೇಳಿದಿರಾ?

ಮೋಹನ:— ಹೌದು ನನಗೆ ಸರಿಯಾಗಿ ಈಗಲೂ ಕೇಳಿದ ಹಾಗಿದೆ. ಒಳಗೆ ಏನಾಯಿತೋ ಎಂದು ಬಾಗಿಲನ್ನು ತಳ್ಳಿ ನೋಡಿದೆ. ನನ್ನ ಅಣ್ಣನು ಮಂಚದ ಪಕ್ಕದಲ್ಲಿ ಬಿದ್ದಿದ್ದ. ದೀಪವನ್ನು ಹಚ್ಚುವುದಕ್ಕೆ ಪ್ರಯತ್ನಪಟ್ಟಂತೆ ಅವನ ಕೈಗೆ ಸಿಕ್ಕಿದ್ದ ಮೇಣದ ಬತ್ತಿಯೂ ಬೆಂಕಿಪಟ್ಟಣವೂ ಸೂಚಿಸುತ್ತಿದ್ದುವು. ನಾನು ಅವನನ್ನು ಎತ್ತಿ ತೊಡೆಯ ಮೇಲೆ ಮಲಗಿಸಿಕೊಂಡೆ. ಇನ್ನೂ ಜೀವವಿದ್ದುದರಿಂದ ಮೆಲ್ಲಗೆ ಕಣ್ಣು ಬಿಟ್ಟು, ನನ್ನನ್ನು ನೋಡಿ 'ಅಯ್ಯೋ, ಕ್ರೋಧಿ.. ಮಚ್ಚೆಗಳು.. ಮಚ್ಚೆಗಳು..' ಎಂದು ನುಡಿಯುತ್ತಲೆ ಪ್ರಾಣವನ್ನು ಬಿಟ್ಟ. ನನಗೇನೂ ತೋಚದೆ 'ಚಿಕ್ಕಪ್ಪಾ' ಎಂದು ಕಿರಿಚಿಕೊಂಡೆ. ಶಬ್ದವನ್ನು ಕೇಳಿದಕೂಡಲೆ ಪಕ್ಕದ ಕೋಣೆಯಿಂದ ಚಿಕ್ಕಪ್ಪನು, ಒಂದು ಓವರ್‌ಕೋಟನ್ನು ಹಾಕಿಕೊಂಡು ಬಂದು 'ಏನೋ ಇದು?' ಎಂದ. ನಾನು ಅಳುತ್ತಾ 'ಅಣ್ಣ ಸತ್ತು ಹೋದ!' ಎಂದೆ. ಅವನೂ ಸ್ವಲ್ಪ ದುಃಖವನ್ನು ವ್ಯಕ್ತಪಡಿಸಿ 'Heart failure ಆಗಿದೆ; ನಾನು ಯಾವಾಗಲೂ ಅವನಿಗೆ ಹೇಳುತ್ತಲೇ ಇದ್ದೆ' ಎಂದು ಮುಂದಿನ ಕೆಲಸಗಳನ್ನು ನೆರವೇರಿಸಿದ.



.... ನೀವು ಪ್ರಾಣದ ಹೆದರಿಕೆಯಿಂದ ಹೀಗೆ ಮಾಡುತ್ತಿದ್ದೀರಲ್ಲವೆ?

ಇದು ನಡೆದು ಇನ್ನೂ ಮೂರು ತಿಂಗಳಾಗಿಲ್ಲ. ಈಗ ನನ್ನ ಕೋಣೆಗೆ ರಿಪೇರಿ ಆಗುತ್ತಿರುವುದರಿಂದ ನಾನು, ಅಣ್ಣನು ಸತ್ತ ಮಂಚದ ಮೇಲೆಯೆ ಮಲಗಿಕೊಳ್ಳಬೇಕಾಗಿದೆ. ನನಗೆ ಪ್ರತಿ ನಿಮಿಷವೂ ಹಿಂದೆ ನಡೆದ ಘಟನೆಗಳು ನೆನಪಿಗೆ ಬಂದು ಜೀವದಲ್ಲಿ ಜೀವವಿಲ್ಲದಂತೆ ಆಗಿದೆ. ಅದರಲ್ಲಿಯೂ ನಿನ್ನೆಯ ರಾತ್ರಿ ನಾನು ಮಲಗಿಕೊಳ್ಳುವಾಗ ೧೧ ಘಂಟೆಯಾಗಿತ್ತು. ಪಕ್ಕದ ಕೋಣೆಯಿಂದ ಚುರುಟ್ಟಾವಾಸನೆ ವಿಪರೀತವಾಗಿ ಬರುತ್ತಿದ್ದುದರಿಂದ, ನಿದ್ದೆ ಬೇಗ ಬರಲಿಲ್ಲ!"

ಪ್ರಕಾಶ:— ಹಾಗಾದರೆ, ನಿಮ್ಮ ಮತ್ತು ಡಾಕ್ಟರ ಕೋಣೆಗಳಿಗೆ ಮಧ್ಯದಲ್ಲಿ ಕಿಟಕಿ ಅಥವಾ ಬಾಗಿಲು ಇರಬೇಕು!

ಮೋಹನ:— ಇಲ್ಲ, ಒಂದು ಸಣ್ಣ ಕಿಂಡಿ ಮಾತ್ರ ತಾರಸಿಯ ಹತ್ತಿರ ಇದೆ. ನಾನು ಸುಮ್ಮನೆ ಹಾಸಿಗೆಯಮೇಲೆ ಬಿದ್ದು ಹೊರಳಾಡುತ್ತಿದ್ದೆ. ಬೆಳಗಿನ ಘಂಟೆಯ ಹೊತ್ತಿನಲ್ಲಿ ಸಣ್ಣಗೆ ಶೀಟಿ ಹಾಕಿದ ಶಬ್ದ ಕೇಳಿಸಿತು. ನನ್ನ ಎದೆಯು ಹೊಡೆದುಕೊಳ್ಳುವುದಕ್ಕೆ ಪ್ರಾರಂಭವಾಯಿತು. ಮನಸ್ಸಿಗೆ ಎಷ್ಟು ಧೈರ್ಯ ತಂದುಕೊಂಡರೂ, ದೀಪವನ್ನು ಹಚ್ಚಲು ಕೂಡ ನನ್ನ ಕೈಯಿಂದಾಗಲಿಲ್ಲ. ಸ್ವಲ್ಪ ಹೊತ್ತಿನನಂತರ 'ಟಣ್' ಎಂದು ಶಬ್ದವಾಯಿತು. ಬೆಳಗಾಗುವವರೆಗೂ ಹಾಗೆಯೇ ಕುಳಿತಿದ್ದು ನಿಮ್ಮ ಹತ್ತಿರಕ್ಕೆ ಓಡಿಬಂದೆ" ಎಂದು ನಡೆದ ವಿಷಯಗಳನ್ನೆಲ್ಲಾ ಹೇಳಿ, ನಿಟ್ಟುಸಿರನ್ನು ಬಿಟ್ಟ. ಪ್ರಕಾಶನು ಮೋಹನನಿಗೆ ಸ್ವಲ್ಪ ಕಾಫಿಯನ್ನು ತರಿಸಿಕೊಟ್ಟು "ನಿಮ್ಮ ತಂದೆಯವರು ಸಾಯುವ ಮುನ್ನ ಮರಣಪತ್ರ (Will) ವನ್ನೇನಾದರೂ ಬರೆದಿದ್ದರೋ?" ಎಂದು ಪ್ರಶ್ನಿಸಿದ. "ನನ್ನ ತಾಯಿ ಸಾಯುವಾಗ ಹೇಳಿದ್ದಳು, ಏನೆಂದರೆ: ನಮ್ಮ ಅಣ್ಣ ತಮ್ಮಂದಿರಿಬ್ಬರಿಗೂ ೧೮ ವರ್ಷಗಳು ತುಂಬಿದನಂತರ ೫೦-೫೦ ಸಾವಿರ ರೂಪಾಯಿಗಳು ಒಬ್ಬೊಬ್ಬರಿಗೆ ಬರಬೇಕೆಂದೂ ಅದುವರೆಗೂ ಡಾಕ್ಟರೇ ಹಣದ ಮೇಲ್ವಿಚಾರಣೆಯನ್ನು ಹೊಂದಿರತಕ್ಕದ್ದೆಂದೂ ಬರೆದಿದ್ದಾರಂತೆ" ಎಂದು ಮೋಹನನು ಉತ್ತರ ಕೊಟ್ಟ. ಪ್ರಕಾಶನು ನಗುತ್ತಾ "ಪ್ರಭೂ, ಅದ್ವಿತೀಯ ಬುದ್ಧಿಯು ಕೀಳುತರದ ಮೋಸ, ಕೊಲೆ, ಖೂನಿ, ಕಳವುಗಳ ಕಡೆಗೆ ತಿರುಗಿದರೆ.. ಪೋಲಿಸಿನವರೇಕೆ ಅವರ ತಾತಂದಿರು ಕೂಡ ಕಣ್ಣಿಗೆ ಮಣ್ಣೆರಚಿಸಿಕೊಳ್ಳುತ್ತಾರೆನ್ನುವುದಕ್ಕೆ ಇದೂ ಒಂದು ದೃಷ್ಟಾಂತ" ಎಂದು, ಮೋಹನನನ್ನುದ್ದೇಶಿಸಿ "ನಾವಿಬ್ಬರೂ ನಿಮ್ಮ ಮನೆಯನ್ನು ನೋಡಲು ಸಾಯಂಕಾಲ ಬರುತ್ತೇವೆ; ಮನೆಯನ್ನು ತೋರಿಸುವುದಕ್ಕಾಗುತ್ತದೆಯೆ?" ಎಂದು ಕೇಳಿದ. ಮೋಹನನು ಸ್ವಲ್ಪಹೊತ್ತು ಯೋಚಿಸಿ

"ಚಿಕ್ಕಪ್ಪನಿಗೆ ತಿಳಿದರೆ ನನ್ನನ್ನು ಕೊಂದೇ ಹಾಕುತ್ತಾನೆ. ನಮ್ಮ ಮನೆಗೆ ಯಾರೂ ಬರಲೇ ಕೂಡದು. ನಾನು ಈಗ ಇಲ್ಲಿಗೆ ಬಂದಿರುವುದು ಕೂಡ ಅವನಿಗೆ ಗೊತ್ತಿಲ್ಲ. ಆದರೂ ಈ ದಿನ ಅತನು ಸಾಯಂಕಾಲ ಸಿನಿಮಾಕ್ಕೆ ಹೋಗುವುದರಿಂದ, ನೀವು ಬೇಗ ಕೆಲಸ ಮುಗಿಸಬಹುದು" ಎಂದ. ಪ್ರಕಾಶನು "ಹಾಗಾದರೆ ಈಗ ನೀವು ಹೊರಡಿ; ಬಹಳ ಜಾಗರೂಕತೆಯಿಂದ ಮಾತ್ರ ಇರಬೇಕು!" ಎಂದು ಹೇಳಿ ಕುರ್ಚಿಯಿಂದ ಮೇಲಕ್ಕೆ ಎದ್ದ. "ನೀವು ಬರುವುದನ್ನೇ ಕಾಯುತ್ತಿರುತ್ತೇನೆ; ೫॥ ಘಂಟೆಗೆ ಸರಿಯಾಗಿ ಬರಬೇಕು" ಎಂದು ಮೋಹನನು ಹೇಳಿ, ನಮಗೆ ವಂದಿಸಿ ಹೊರಟು ಹೋದ. ನನಗೆ ಮೋಹನನ ಕತೆಯು ಬಹಳ ಸ್ವಾರಸ್ಯವಾಗಿ ಕಂಡಿತು. ಹಾಗೂ ಅವನ ದುರದೃಷ್ಟವನ್ನು ನೋಡಿ ಕನಿಕರವೂ ಉಂಟಾಯಿತು. ಪ್ರಕಾಶನನ್ನು ಒಂದು ಸಾರಿ ನೋಡಿದೆ; ತನ್ನ ಮುಂದಿನ ಕೆಲಸಗಳನ್ನು ಹೇಗೆ ಮಾಡಬೇಕೆಂದು ಯೋಚಿಸುತ್ತಿರುವಂತೆ ಅವನ ಮುಖಮುದ್ರೆಯು ಸೂಚಿಸು ತ್ತಿತ್ತು. "ಏನಯ್ಯಾ ಪ್ರಕಾಶ, ಮೋಹನನ ಜೀವಕ್ಕೇನಾದರೂ ತೊಂದರೆ ಉಂಟೇ?" ಎಂದು ಪ್ರಶ್ನಿಸಿದೆ. ಅವನು ನನ್ನ ಕಡೆಗೆ ತಿರುಗಿ "ಪ್ರಭೂ, ನಾವು ಈ ದಿವಸ ಜಾಗರೂಕರಾಗಿಲ್ಲದೆ ಹೋದರೆ, ನಾಳೆ ಬಹುಶಃ ಮೋಹನನು ಈ ಪ್ರಪಂಚದಲ್ಲಿರ ಲಾರ!" ಎಂದ. ಅವನ ಮಾತುಗಳನ್ನು ಕೇಳಿ ನನಗೆ ಆಶ್ಚರ್ಯ ವುಂಟಾಯಿತು. ಮೋಹನನು ಹೇಳಿದ್ದೆಲ್ಲವನ್ನು ನಾನೂ ಕೇಳಿದ್ದೆ. ಆದರೆ ಪ್ರಕಾಶನು ಯಾವ ಕಾರಣಗಳಿಂದ ಹಾಗೆ ಹೇಳಿದನೆಂಬುದು ಮಾತ್ರ ತಿಳಿಯಲಿಲ್ಲ. ಮೋಹನನ ಅಣ್ಣ ಯಾವ ಕಾರಣದಿಂದಲೋ ಸತ್ತ ಮಾತ್ರದಿಂದಲೇ ಅವನ ತಮ್ಮನು ಕೂಡ ಸಾಯುತ್ತಾನೆನ್ನು ವುದಕ್ಕೆ ಸಾಕಾದ ದೃಷ್ಟಾಂತಗಳು ಇಲ್ಲಿ ಕಾಣಬರುವುದಿಲ್ಲ. ನಾನು ಯೋಚಿಸುತ್ತಾ ಕುಳಿತಿರುವುದನ್ನು ನೋಡಿ ಪ್ರಕಾಶನು ಸಿಗರೇಟ್ ಪ್ಯಾಕನ್ನು ಮುಂದಿಟ್ಟ.

ಊಟವಾಗಿ, ಸ್ವಲ್ಪ ಹೊತ್ತು ವಿಶ್ರಾಂತಿಯನ್ನು ತೆಗೆದು ಕೊಂಡು ನಾವು ಗಣೇಶಪುರಕ್ಕೆ ಹೊರಟೆವು. ಡಾಕ್ಟರ ಮನೆಯ ಹತ್ತಿರ ಹೋಗುವಾಗ ಸುಮಾರು ೫॥ ಗಂಟೆಯಾಗಿತ್ತು. ನಮಗಾಗಿ ಮೋಹನನು ಬಾಗಿಲಿನಲ್ಲಿಯೇ ಕಾಯುತ್ತಿದ್ದ. ನಮ್ಮನ್ನು ನೋಡಿದ ಕೂಡಲೆ ವಂದಿಸಿ "ಚಿಕ್ಕಪ್ಪ ಪದ್ಧತಿಯಂತೆ ಸಿನಿಮಾಕ್ಕೆ ಹೋಗಿದ್ದಾನೆ; ಮನೆಯಲ್ಲೂ ಯಾರೂ ಇಲ್ಲ. ನಿಮ್ಮ ಕೆಲಸವನ್ನು ನಿರಾತಂಕವಾಗಿ ಮಾಡಬಹುದು!" ಎಂದ. ಮೊದಲು ಮೋಹನನು ಇದ್ದ ಕೋಣೆಯ ಕಡೆಗೆ ಹೋಗೋಣವೆಂದು ಪ್ರಕಾಶನು ನನಗೆ ಸೂಚಿಸಿದ. ಅದರಂತೆಯೆ ನಾವು ಮೂವರೂ ಮನೆಯ ಹಿಂಭಾಗಕ್ಕೆ ಬಂದೆವು. ಮೋಹನನ ಕೋಣೆಗೆ ಗಳ (Bamboo) ಗಳನ್ನು ಕಟ್ಟಿ ರಿಪೇರಿ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಂತೆ ಕಂಡುಬಂದಿತು. ಅಲ್ಲಿಯೆ ಸುಣ್ಣದ ನೀರು, ಗಾರೆ, ಕುಚ್ಚು ಮೊತ್ತೆ ಎಲ್ಲವೂ ಬಿದ್ದಿತ್ತು. ಅದೆಲ್ಲವನ್ನೂ ಸೂಕ್ಷ್ಮವಾಗಿ ಪ್ರಕಾಶನು ನೋಡಿ "ಪ್ರಭೂ, ಈ ಕೋಣೆಗೆ ರಿಪೇರಿ ಅನಾವಶ್ಯಕವಾಗಿರು ವಾಗ ರಿಪೇರಿ ಮಾಡಿಸುವುದು ಆಶ್ಚರ್ಯವೇ ಸರಿ!" ಎಂದು ಮಧ್ಯದ ಕೋಣೆಯ ಕಡೆಗೆ ಬಂದ. ಇದೇ ಕೋಣೆಯಲ್ಲಿ ಈಗ ಮೋಹನನಿರುವನು. ಕೋಣೆಯು ಸುಮಾರು ೫ ಅಡಿ ಅಗಲ, ೭ ಅಡಿ ಉದ್ದವಿತ್ತು. ಅದರಲ್ಲಿಯೇ ಒಂದು ದೊಡ್ಡ ಮಂಚ. ಮಂಚವನ್ನು ಬಿಟ್ಟರೆ ಪಕ್ಕದಲ್ಲಿ ಉಳಿದಿದ್ದ ಸ್ವಲ್ಪ ಜಾಗದಲ್ಲಿ ಒಂದು ಮೇಜೂ, ಒಂದೆರಡು ಕುರ್ಚಿಗಳೂ ಇದ್ದುವು. ಅಂತೂ ಕೋಣೆಯಲ್ಲಿ ಒಬ್ಬರು ಮಲಗಲು ಮಾತ್ರ ಸಾಧ್ಯವಿತ್ತೇ ವಿನಾ ಇಬ್ಬರಿಗೆ ಸ್ಥಳ ಇಕ್ಕಟ್ಟಾಗುತ್ತಿತ್ತು. ಪ್ರಕಾಶನು ಆ ಕೋಣೆಯ ನೆಲವನ್ನು ಬಹು ಸೂಕ್ಷ್ಮವಾಗಿ ಪರೀಕ್ಷಿಸಿ, ಅನಂತರ ಮಂಚ ವನ್ನು ಹಿಡಿದು ಅಲ್ಲಾಡಿಸಿದ. ಅದು ಅಲ್ಲಾಡಲಿಲ್ಲ. ಅದರ ಕಾಲುಗಳು ನೆಲದಲ್ಲಿ ಹೂಳಲ್ಪಟ್ಟಿದ್ದುವು. ಅನಂತರ ಪ್ರಕಾಶನು, ಕೋಣೆಯ ತಾರಸಿಯೆಲ್ಲವನ್ನೂ ತಲೆಯೆತ್ತಿ ನಿಧಾನವಾಗಿ ನೋಡಿ, ಒಂದು ಮೂಲೆಯಲ್ಲಿದ್ದ ಸಣ್ಣ ಕಿಂಡಿಯೊಂದನ್ನು ತೋರಿಸಿ "ಇದೇ ತಾನೇ ಗಾಳಿ ಹೋಗಲು ಮಾಡಿರುವುದು?" ಎಂದು ಮೋಹನ ನನ್ನು ಪ್ರಶ್ನಿಸಿದ. ಅವನು "ಹೌದು, ಅದು ಮಾಡಿಸಿ ಈಗ ಒಂದು ವರ್ಷವಾಯಿತು!" ಎಂದು ಉತ್ತರ ಕೊಟ್ಟಮೇಲೆ, ಪ್ರಕಾಶನು ಒಂದು ಸಲ ನನ್ನನ್ನು ನೋಡಿ "ಹಾಗಾದರೆ, ಆ ತಂತಿ (Wire) ಎಲ್ಲಿಗೆ ಹೋಗುತ್ತೆ?" ಎಂದು ಮಂಚದ ಮೇಲೆ ಸರಿಯಾಗಿ ನೇತಾಡುತ್ತಿದ್ದ ತಂತಿಯನ್ನು ಕೈಯಲ್ಲಿ ಹಿಡಿದುಕೊಂಡು ಮೋಹನನನ್ನು ಕೇಳಿದ. ಮೋಹನನು "ಇದು ಊಟದ ಮನೆಯ ಕಾಲಿಂಗ್ ಬೆಲ್ಲಿನ (Calling bell) ತಂತಿ" ಎಂದು ಹೇಳಿದ. ಪ್ರಕಾಶನು "ಆ ಕಿಂಡಿಯೊಳಗೆ ಹೋಗಿದೆಯಲ್ಲಾ, ಬಹುಶಃ ನಿಮ್ಮ ಚಿಕ್ಕಪ್ಪನ ಕೋಣೆಯಿಂದ ಹಾಯ್ದು ಹೋಗಿರಬೇಕಲ್ಲವೇ?" ಎಂದು ಮೋಹನನನ್ನು ಪ್ರಶ್ನಿಸಿ "ಪ್ರಭೂ, ಅಡಿಗೆಯ ಮನೆಗೂ, ಊಟದ ಮನೆಗೂ ಹೋಗಿ ನೋಡು, ಗಂಟೆಯ ಶಬ್ದ ಕೇಳಿಸುತ್ತದೆ ಯೇನೋ!" ಎಂದ. ನಾನು ಕೂಡಲೆ ಅಡಿಗೆಯ ಮನೆಗೆ ಬಂದೆ. ಪ್ರಕಾಶನು ಹೇಳಿದ ಯಾವ ಶಬ್ದವೂ ನನ್ನ ಕಿವಿಗೆ ಬೀಳಲಿಲ್ಲ. ನನ್ನ ಉತ್ತರವನ್ನು ಕೇಳಿ, ಪ್ರಕಾಶನು ವ್ಯಂಗ್ಯವಾಗಿ ನಕ್ಕು "ಮಿಸ್ಟರ್ ಮೋಹನ್, ಇನ್ನು ಡಾಕ್ಟರರ ಕೋಣೆಯನ್ನು ಸ್ವಲ್ಪ ನೋಡಬಹುದೇ?' ಎಂದ. ಮೋಹನನು "ಅವನು ಯಾವಾಗಲೂ ಬೀಗ ಹಾಕಿಯೇ ಇರುತ್ತಾನೆ. ಒಳಗೆ ಹೋಗಲು ಸಾಧ್ಯವಿಲ್ಲ!" ಎಂದು ಹೇಳುತ್ತಲೂ ಪ್ರಕಾಶನು "ಬೀಗದ ಕೈಯಿಲ್ಲದಿದ್ದರೆ ಚಿಂತೆಯಿಲ್ಲ, ನನ್ನ ಗೊಂಚಲಿನ ಯಾವ ಕೈ ಆದರೂ ಉಪಯೋಗಕ್ಕೆ ಬೀಳಬಹುದು" ಎಂದು ಹೇಳಿ, ಡಾಕ್ಟರ ಕೋಣೆಯ ಬಾಗಿಲನ್ನು ಒಂದು ನಿಮಿಷದಲ್ಲಿ ತೆಗೆದ. ಡಾಕ್ಟರರ ಕೋಣೆಯು ಮಿಕ್ಕ ಎರಡು ಕೊಠಡಿಗಳಿಗಿಂತ ಬಹಳ ವಿಶಾಲವಾಗಿತ್ತು. ಒಳಗೆ ಎರಡು ದೊಡ್ಡ ಬೀರುಗಳು, ಒಂದು ಮಂಚ, ೫ ಕುರ್ಚಿಗಳು ೨ ಮೇಜು ಗಳು ಇದ್ದುವು. ದಪ್ಪದಪ್ಪಗಿನ ಪುಸ್ತಕಗಳು ನಿಕ್ಷಾಪತ್ರ ಮೇಜಿನ ಮೇಲೆ ಬಿದ್ದಿದ್ದುವು. ಮಂಚದ ಪಕ್ಕದಲ್ಲಿ ಒಂದು ಕಬ್ಬಿಣದ ತಿಜೋರಿಯಿತ್ತು; ಅದರ ಮೇಲೆ ಒಂದು ಸಣ್ಣ ಗಾಜಿನ ತಟ್ಟೆಯಲ್ಲಿ ಹಾಲಿದ್ದುದನ್ನು ಪ್ರಕಾಶನು ನೋಡಿ "ಇದೇನು ತಟ್ಟೆಯಲ್ಲಿ ಹಾಲು?" ಎಂದು ಪ್ರಶ್ನಿಸಿದ. ಮೋಹನನು "ಬೆಕ್ಕು ಸಾಕಿಕೊಂಡಿದ್ದಾನೆ; ಅದಕ್ಕೇನಾದರೂ ಇಟ್ಟಿರ ಬಹುದು" ಎಂದು ಉತ್ತರ ಕೊಟ್ಟ. ಪ್ರಕಾಶನು ನಾವಕಾಶವಾಗಿ

ಕೋಣೆಯೆಲ್ಲವನ್ನೂ ಪರೀಕ್ಷಿಸಿದ ಮೇಲೆ ಬಾಗಿಲನ್ನು ಹಾಕಿ ಮೋಹನನನ್ನೂ ನನ್ನನ್ನೂ ಕರೆದುಕೊಂಡು ತೋಟದೊಳಗೆ ಪ್ರವೇಶಿಸಿದ. ಇಷ್ಟು ಹೊತ್ತೂ ಉತ್ಸುಕತೆಯಿಂದ ನಮ್ಮ ಕಾರ್ಯಗಳನ್ನು ನೋಡುತ್ತಿದ್ದ ಮೋಹನನು "ಮಿಸ್ಟರ್ ಪ್ರಕಾಶ್, ಏನು ನಿರ್ಧಾರ ಮಾಡಿದಿರಿ? ಮುಂದೆ ನಾನೇನು ಮಾಡಬೇಕು?" ಎಂದ. ಒಂದು ಸಿಗರೇಟನ್ನು ಹಚ್ಚುತ್ತಾ ಪ್ರಕಾಶನು "ಮೋಹನ, ಈ ದಿವಸ ರಾತ್ರಿ ನೀವು ಒಂದು ಕೆಲಸ ಮಾಡಬೇಕು. ಏನೆಂದರೆ, ನಾವು ಇಲ್ಲಿಗೆ ಎದುರಾಗಿ ಕಾಣುವ ಹೋಟೆಲಿನ ಮಹಡಿಯ ಕೋಣೆಯಲ್ಲಿ ಈ ರಾತ್ರಿ ಇರುತ್ತೇವೆ. ನೀವು ಊಟ ಮಾಡಿ ಕೋಣೆಗೆ ಹೋಗಿ; ನಿಮ್ಮ ಚಿಕ್ಕಪ್ಪ ತನ್ನ ಕೋಣೆಗೆ ಹೋದ ಮೇಲೆ ನಿದ್ರೆ ಬಂದಿರುವುದನ್ನು ತಿಳಿದು, ಈ ಕೊನೆಯ ಕೋಣೆಯಲ್ಲಿ ಒಂದು ದೀಪವನ್ನಿಡಿ. ನಾವು ಅದರ ಗುರುತನ್ನು ತಿಳಿದು ಕೂಡಲೆ ಇಲ್ಲಿಗೆ ಬಂದು ಈ ರಾತ್ರಿ ನೀವು ಮಲಗುವ ಕೋಣೆಯಲ್ಲಿ ಮಲಗುತ್ತೇವೆ. ನಿಮಗೆ ಸ್ವಲ್ಪ ತೊಂದರೆ ಯಾದರೂ ಚಿಂತೆಯಿಲ್ಲ, ರಿಪೇರಿಯಾಗುತ್ತಿರುವ ಕೊಠಡಿಯಲ್ಲಿಯೇ ಈ ರಾತ್ರಿಯನ್ನು ಕಳೆಯಬೇಕು. ಮುಂದಿನ ಸಮಾಚಾರಗಳನ್ನು ನಾಳೆಯ ಬೆಳಗಿನಲ್ಲಿ ತಿಳಿಸುತ್ತೇನೆ" ಎಂದು ಹೇಳಿ ಅವನಿಗೆ ವಂದಿಸಿ, ನನ್ನೊಡನೆ ಹೋಟೆಲಿನ ಕಡೆಗೆ ಹೊರಟ. ಹೋಟೆಲಿನ ಮಾಲೀಕನಿಗೆ ಈ ದಿನ ರಾತ್ರಿ ಮಹಡಿಯ ಕೋಣೆಯನ್ನು ನಮಗಾಗಿ ಇಟ್ಟಿರಬೇಕೆಂದು ತಿಳಿಸಿ "ಪ್ರಭೂ, ಮನೆಗೆ ಹೋಗಿ ಬರೋಣ. ಇನ್ನೂ ಇದೀಗ ೭ ಗಂಟೆ; ೯ ಗಂಟೆಗೆ ಬಂದರೆ ಸಾಕು. ಬರುವಾಗ ರಿವಾಲ್ವರನ್ನು ಮರೆಯಬೇಡ!" ಎಂದ. ಅವನ ಮಾತುಗಳಿಂದ ಯಾವುದೋ ಅನಿರೀಕ್ಷಿತ ಅಪಾಯವನ್ನು ಅವನು ಆಗಲೇ ಊಹಿಸಿದ್ದಂತೆ ನನಗೆ ಭಾಸವಾಯಿತು. ಅವನ ಮಾತಿನಲ್ಲಿ ವಿಶೇಷ ನಂಬಿಕೆ ಇದ್ದುದರಿಂದಲೂ, ಅವನ ಅದ್ವಿತೀಯ ಗ್ರಹಣಶಕ್ತಿಯು ನನಗೆ ಚೆನ್ನಾಗಿ ಗೊತ್ತಿದ್ದುದರಿಂದಲೂ ನಾನು 'ಹಾಗೆಯೇ ಆಗಲಿ' ಎಂದು ಒಪ್ಪಿಕೊಂಡೆ.

ರಾತ್ರಿ ಊಟಮಾಡಿ ಹೋಟೆಲಿನ ಹತ್ತಿರಕ್ಕೆ ಬರಲು ೯ ಘಂಟೆ ಹೊಡೆಯಿತು. ನಮಗಾಗಿ ಕಾದಿಟ್ಟಿದ್ದ ಕೋಣೆಯನ್ನು ಪ್ರವೇಶಿಸುತ್ತಲೂ ಪ್ರಕಾಶನು ಕೈಯಲ್ಲಿದ್ದ ಬೆತ್ತವನ್ನು ಮೇಜಿನ ಮೇಲಿಟ್ಟು, ಕಿಟಕಿಯ ಹತ್ತಿರ ಕುರ್ಚಿಯನ್ನು ಎಳೆದುಕೊಂಡ. ದೂರದಲ್ಲಿ—ಎಂದರೆ ಸುಮಾರು ೨॥ ಫರ್ಲಾಂಗುಗಳಿರಬಹುದು—ಡಾಕ್ಟರ ಮನೆಯು ಕಾಣಿಸುತ್ತಿತ್ತು. ಎಷ್ಟುಹೊತ್ತಿಗೆ ನಮಗೆ ಸಂಜ್ಞೆಯು ಕೊಡಲ್ಪಡುವುದೋ ಎಂದು ಆತುರತೆಯಿಂದ ಇಬ್ಬರೂ ನೋಡುತ್ತ ಕುಳಿತಿದ್ದೆವು. ಆಕಾಶದಲ್ಲಿ ಚಂದ್ರನು ಮೋಡಗಳ ಹಿಂದೆ ಅವಿತುಕೊಂಡು ಭೂಮಿಯನ್ನೆಲ್ಲಾ ಕತ್ತಲೆಯಿಂದ ಆವರಿಸುವಂತೆ ಮಾಡಿದ. ಸುಮಾರು ೧೧ ಘಂಟೆಯ ಹೊತ್ತಿಗೆ ಕಿಟಕಿಯ ಹಿಂದಿನಿಂದ ಸಣ್ಣ ದೀಪವು ಕಂಡು ಬಂದಿತು. ಪ್ರಕಾಶನು ಕೂಡಲೆ ಎದ್ದು, ಬೂಟ್ಸನ್ನು ಬಿಚ್ಚಿ ಹಾಕಿ, ಕೈಯಲ್ಲಿ ಬೆತ್ತವನ್ನು ತೆಗೆದುಕೊಂಡ. ನಾನೂ ಬೂಟ್ಸನ್ನು ಬಿಚ್ಚಿ, ಜೇಬಿನಲ್ಲಿದ್ದ ರಿವಾಲ್ವರನ್ನು ಮುಟ್ಟಿ ನೋಡಿಕೊಂಡು, ಒಂದು ನಿಮಿಷದಲ್ಲಿ ಹೊರಡಲು ಸಿದ್ಧನಾದೆ. ಇಬ್ಬರೂ ದೀಪವನ್ನೇ ನೋಡುತ್ತಾ ಕತ್ತಲಿನಲ್ಲಿ ಎಡಹುತ್ತಾ, ಮುಳ್ಳುಗಳನ್ನು ತುಳಿಯುತ್ತಾ ಹೊರಟೆವು. ಡಾಕ್ಟರ ಮನೆಯ ಕಾಂಪೌಂಡನ್ನು ಹಾರಿ ಒಳಗೆ ಕಾಲಿಟ್ಟ ಕೂಡಲೆ, ದೂರದಲ್ಲಿ ಚಿರತೆಯ ಕೂಗು ಕೇಳಬಂದು ನಮ್ಮಿಬ್ಬರ ಎದೆಯನ್ನು ಝಲ್ ಎನ್ನಿಸಿತು. ಪ್ರಕಾಶನು ಸ್ವಲ್ಪ ಹೊತ್ತು ಶಬ್ದವನ್ನು ಆಲಿಸಿ, ಮನೆಯ ಹತ್ತಿರಕ್ಕೆ ಬಂದು ದೀಪವಿದ್ದ ಕಿಟಕಿಯ ಮುಖಾಂತರ ಒಳಗೆ ಪ್ರವೇಶಿಸಿದ. ನಾನೂ ಅವನ ಹಿಂದೆಯೇ ಒಳಗೆ ಹೋದೆ. ಮೋಹನನು ಕೋಣೆಯ ಮಧ್ಯೆ ಒಂದು ಕುರ್ಚಿಯನ್ನು ಹಾಕಿಕೊಂಡು ಕುಳಿತಿದ್ದ. ಪಕ್ಕದಲ್ಲೆಲ್ಲಾ, ಮಣ್ಣು, ಸುಣ್ಣ, ಗಾರೆ ಬಿದ್ದು ಕೊಠಡಿಯೆಲ್ಲಾ ತುಂಬಾ ಹೊಲಸಾಗಿತ್ತು. ಪ್ರಕಾಶನು ಮೆಲ್ಲಗೆ "ಎಲ್ಲವೂ ನಾನು ಹೇಳಿದ ಹಾಗೆ ಸರಿಯಾಗಿದೆಯೇ?" ಎಂದು ಮೋಹನನನ್ನು ಪ್ರಶ್ನಿಸಿದ. ಅವನು "ಎಲ್ಲವೂ ಸರಿಯಾಗಿದೆ. ಚಿಕ್ಕಪ್ಪ ಮಲಗಿದ್ದಾನೆ. ಅವನು ಗೊರಕೆ ಹೊಡೆಯುವುದನ್ನು ಪ್ರಾರಂಭಿಸುತ್ತಲೂ ನಾನು ಮೆಲ್ಲಗೆ ಈ ಕೋಣೆಗೆ ಬಂದು ದೀಪವನ್ನು ಹಚ್ಚಿದೆ" ಎಂದ. ಪ್ರಕಾಶನು ಅವನನ್ನು ಆ ಕೋಣೆಯಲ್ಲಿಯೇ ಮಲಗುವಂತೆ ಹೇಳಿ, ನನ್ನನ್ನು ಕರೆದುಕೊಂಡು ಮಧ್ಯದ ಕೊಠಡಿಗೆ ಬಂದ. ಚಿಕ್ಕದಾದ ಒಂದು ಮೇಣದ ಬತ್ತಿಯು ಅಲ್ಲಿ ಉರಿಯುತ್ತಿತ್ತು. ಪ್ರಕಾಶನು ಕೋಟನ್ನು ಬಿಚ್ಚಿ, ಮಂಚದ ಮೇಲೆ ಕುಳಿತುಕೊಂಡು, ಪಕ್ಕದಲ್ಲಿ ಬೆತ್ತವನ್ನೂ ಬೆಂಕಿಯ ಪೊಟ್ಟಣವನ್ನೂ ಇಟ್ಟುಕೊಂಡ. ನಾನು ರಿವಾಲ್ವರನ್ನು ತೆಗೆದು ಮೇಜಿನ ಮೇಲಿಟ್ಟು ಕುರ್ಚಿಯ ಮೇಲೆ ಕುಳಿತುಕೊಂಡೆ. ಪ್ರಕಾಶನು ಮೆಲ್ಲಗೆ ನನ್ನ ಕಿವಿಯಲ್ಲಿ "ನಿದ್ರೆ ಮಾಡಿದರೆ, ಬೆಳಗಾಗುವುದರೊಳಗೆ ಸಾವು ಖಂಡಿತ! ಹುಷಾರಾಗಿರು!!" ಎಂದು ಹೇಳಿ ದೀಪವನ್ನು ಆರಿಸಿದ. ಅವನ ಮಾತುಗಳನ್ನು ಕೇಳಿ ನನಗೂ ಹೆದರಿಕೆಯಾಯಿತು. ಕಣ್ಣುರೆಪ್ಪೆಗಳನ್ನು ಕೂಡ ನಿಧಾನವಾಗಿ ಹೊಡೆಯುತ್ತ, ಅಲ್ಲಾಡದೆ ಕುಳಿತಿದ್ದೆ. ಕತ್ತಲಲ್ಲಿಯೇ ನನ್ನ ಮುಂದೆ ಪ್ರಕಾಶನು ಮಂಚದಮೇಲೆ ಕುಳಿತಿರುವುದೂ, ಭಯಹೊಂದಿದ್ದ ನನ್ನ ಕಣ್ಣುಗಳಿಗೆ ಕಾಣಿಸುತ್ತಿತ್ತು. ಒಂದು..ಎರಡು..ಮೂರು..ನಾಲ್ಕು ಗಂಟೆಗಳು ಸಮೀಪದ ಪೋಲಿಸ್ ಠಾಣೆಯಿಂದ ಹೊಡೆದುದನ್ನು ಎಣಿಸಿಕೊಂಡೆ. ಅಷ್ಟರಲ್ಲಿ ಸಣ್ಣಗೆ ಶೀಟಿಯನ್ನು ಹೊಡೆದ ಶಬ್ದವು ಕೇಳಿಸಿತು. ನನ್ನ ಸ್ಥಿತಿಯನ್ನು ಹೇಳಲಿಕ್ಕಾಗದು. ಪ್ರಕಾಶನು ಅದೇ ಕೋಣೆಯಲ್ಲಿರುವನೆಂಬುದರ ಧೈರ್ಯದಮೇಲೆ, ಜೀವವನ್ನು ಬಿಗಿಹಿಡಿದು ನೆಟ್ಟಗೆ ಕುಳಿತುಕೊಂಡೆ. ಕೇವಲ ಒಂದೆರಡು ನಿಮಿಷಗಳನಂತರ ಪ್ರಕಾಶನು, ಝಗ್ಗನೆ ಕುಳಿತಿದ್ದ ಸ್ಥಳದಿಂದ ಎದ್ದು, ತನ್ನ ಬೆತ್ತದಿಂದ ರಪರಪನೆ ಗೋಡೆಯ ಮೇಲೆ ಹೊಡೆದು "ಪ್ರಭೂ, ಪ್ರಭೂ, ಬೇಗ ದೀಪ ಹಚ್ಚು" ಎಂದು ಹೇಳುವುದರಲ್ಲಿಯೇ ಡಾಕ್ಟರರ ಕೋಣೆಯಿಂದ "ಅಯ್ಯಯ್ಯೋ" ಎಂಬ ಆರ್ತಧ್ವನಿಯು ಕೇಳಬಂದಿತು. ದೀಪವನ್ನು ಹಚ್ಚಿದೆ. ಪ್ರಕಾಶನ ಮುಖದಲ್ಲಿ ಬೆವರು ಸುರಿಯುತ್ತಿತ್ತು. ಮಂಚದ ಮೇಲೆ ನೇತಾಡುತ್ತಿದ್ದ ತಂತಿಯು ತುಂಡಾಗಿ ಬಿದ್ದಿತ್ತು. ಮುಖದ ಬೆವರನ್ನು ಒರಸಿಕೊಳ್ಳುತ್ತ ಪ್ರಕಾಶನು "ಮುಗಿಯಿತು ಡಾಕ್ಟರ ಕೆಲಸ" ಎಂದ. ನನಗೇನೂ ತಿಳಿಯಲಿಲ್ಲ. ಆರ್ತಧ್ವನಿಯನ್ನು ಕೇಳಿದ ಮೋಹನನು ಎದ್ದು ನಮ್ಮ ಕೋಣೆಗೆ ಓಡಿಬಂದ.

ಡೋಂಗರೆ ಇವರ ಬಾಲಾಮೃತವು

ಸೊರಗಿ ಕಡ್ಡಿಯಂತಾಗಿ ನಿರ್ಬಲರಾದ

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಪ್ರಕಾಶನು ರಿವಾಲ್ವರನ್ನು ತೆಗೆದು ಕೈಯಲ್ಲಿ ಹಿಡಿದುಕೊಂಡು, ಮೋಹನನಿಗೆ ಟಾರ್ಚ್ (Torch light) ಲೈಟನ್ನು ತರುವಂತೆ ಹೇಳಿದ. ಅದೇ ಕೋಣೆಯಲ್ಲಿದ್ದ ಮೇಜಿನಿಂದ ಮೋಹನನು ಒಂದು ಪ್ರಕಾಶಮಾನವಾದ ಬ್ಯಾಟರಿಯನ್ನು ತೆಗೆದು ನನ್ನ ಕೈಗೆ ಕೊಟ್ಟನಂತರ, ಮೂವರೂ ಡಾಕ್ಟರ ಕೋಣೆಯ ಕಡೆಗೆ ಹೊರಟೆವು. ಪ್ರಕಾಶನು ಜಾಗರೂಕತೆಯಿಂದ ಬಾಗಿಲನ್ನು ತಳ್ಳಿ ಹೊಸ್ತಿಲಿನ ಮೇಲೆಯೇ ನಿಂತುಕೊಂಡು, ಬ್ಯಾಟರಿಯಿಂದ ಕೋಣೆಯೆಲ್ಲಾ ಪ್ರಕಾಶಮಾನವಾಗುವಂತೆ ಮಾಡಿದ. ಒಳಗಿನ ದೃಶ್ಯವನ್ನು ನೋಡಿ ಮೋಹನನು ಕಿಟ್ಟನೆ ಚೀತ್ಕರಿಸಿದ. ನನಗೂ ತುಂಬಾ ಗಾಬರಿಯಾಯಿತು. ಪ್ರಕಾಶನು ಮೆಲ್ಲಗೆ ಎರಡುಹೆಜ್ಜೆಯನ್ನು ಒಳಕ್ಕಿಟ್ಟ. ಮಂಚದ ಪಕ್ಕದಲ್ಲಿದ್ದ ಕುರ್ಚಿಯ ಮೇಲೆ ಡಾಕ್ಟರು ಬಿದ್ದು ಸತ್ತುಹೋಗಿದ್ದರು. ಬಾಯಿಂದ ನೊರೆ ಬಂದು, ಕಣ್ಣಿನ ಗುಡ್ಡೆಗಳು ನೆತ್ತಿಯಲ್ಲಿ ಸಿಕ್ಕಿಕೊಂಡು, ನೋಡುವವರಿಗೆ ಭಯವನ್ನುಂಟುಮಾಡುವಂತಿತ್ತು. ಅವರ ತಲೆಯ ಸುತ್ತಲೂ ಒಂದು ಹಾವು ಸುತ್ತಿಕೊಂಡಿದ್ದುದನ್ನು ಪ್ರಕಾಶನು ನನಗೆ ದೂರದಿಂದಲೇ ತೋರಿಸುತ್ತಾ "ನೋಡು ಪ್ರಭೂ, ಇದರಿಂದಲೇ ಮೋಹನನ ಅಣ್ಣನ ಪ್ರಾಣವು ಹೋಗಿದ್ದುದು. ಕಚ್ಚಿದ ಮೂರು ನಿಮಿಷಗಳಲ್ಲಿ ಯಾವ ಪ್ರಾಣಿಯೇ ಆಗಲಿ — ಜೀವವನ್ನು ಬಿಡಬೇಕು; ಅಂತಹ ಕೆಟ್ಟ ವಿಷದ ಜಾತಿಯಿದು!" ಎಂದು ಹೇಳಿ, ಮೂಲೆಯಲ್ಲಿ ಬಿದ್ದಿದ್ದ ದೊಡ್ಡ ಇಕ್ಕಳದಿಂದ, ಉಪಾಯವಾಗಿ ಹಾವಿನ ತಲೆಯನ್ನು ಹಿಡಿದು, ಆ ಕಬ್ಬಿಣದ ತಿಜೋರಿಯಲ್ಲಿ ಹಾಕಿ, ಬಾಗಿಲನ್ನು ಮುಚ್ಚಿದ; ಟಣ್ ಎಂದು ಶಬ್ದವಾಯಿತು. ಅನಂತರ ಪ್ರಕಾಶನು ಪೋಲೀಸಿನವರಿಗೆ ವರ್ತಮಾನವನ್ನು ಹೇಳಿಕಳುಹಿಸಿ, ಹೇಗೆ ಡಾಕ್ಟರು ಮೋಹನನನ್ನು ಕೊಲ್ಲುವ ಪ್ರಯತ್ನದಲ್ಲಿ ತಾನೇ ಜೀವವನ್ನೊಪ್ಪಿಸಿದನೆಂಬ ವಿಷಯವನ್ನು ತಿಳಿಸಿ, ಮುಂದಿನ ಕೆಲಸಗಳನ್ನು ಮಾಡಿಸಿದ. ಈಗ ಎಲ್ಲಾ ಆಸ್ತಿಗೂ ಮೋಹನನೇ ಹಕ್ಕುದಾರ. ಚಿಕ್ಕಪ್ಪನು ಸತ್ತುದಕ್ಕಾಗಿ ಅವನಿಗೆ ಸ್ವಲ್ಪವಾದರೂ ದುಃಖವಿಲ್ಲ.

*   *   *

ಇದಾದ ಮೂರು ದಿನಗಳ ನಂತರ ಪ್ರಕಾಶನನ್ನು ಪ್ರಶ್ನಿಸಿದೆ. ಅವನು ನಗುತ್ತಾ "ಪ್ರಭೂ, ಈ ಸಾರಿಯೂ ನಿನಗೆ ಗೊತ್ತಾಗಲಿಲ್ಲವೇ? ನೀನೂ ಯೋಚಿಸಿದರೆ, ಅದು ಹೇಗೆ ತಿಳಿಯಿತು ಎಂಬುದು ಕಷ್ಟವಾಗುವುದಿಲ್ಲ" ಎಂದ. "ನಾನು ಯೋಚಿಸುವ ತೊಂದರೆಯೇ ಬೇಡ. ಯಾಕೆಂದರೆ ಯೋಚಿಸಿ ಫಲವಿಲ್ಲ. ನೀನೇ ಹೇಳು. ಹೇಗೆ ಡಾಕ್ಟರೇ ಕೊಲೆಪಾತಕನೆಂದು ಕಂಡುಹಿಡಿದೆ?" ಎಂದು ಗುರುತುಹಾಕಿಕೊಳ್ಳಲು ಪುಸ್ತಕವನ್ನು ಕೈಗೆ ತೆಗೆದುಕೊಂಡೆ. ನನ್ನ ಭಾವನು ಸಿಗರೇಟನ್ನು ಹಚ್ಚಿ "ಪ್ರಭೂ, ಸ್ವಲ್ಪ ತರ್ಕಮಾಡಿ ನೋಡಿದರೆ ಮೋಹನನ ಚಿಕ್ಕಪ್ಪ, ಆಸ್ತಿಗೆ ಹಕ್ಕುದಾರರಿಬ್ಬರ ಜೀವವನ್ನೂ ಉಪಾಯದಿಂದ ತೆಗೆದು, ಹಣವೆಲ್ಲವನ್ನೂ ತಾನೇ ದಕ್ಕಿಸಿಕೊಳ್ಳಲು ಪ್ರಯತ್ನಪಟ್ಟಿರುವುದು ಸುಲಭವಾಗಿ ತಿಳಿಯುತ್ತದೆ. ಹೇಗೆಂದರೆ, ಮೊದಲು, ಅಣ್ಣನಿಗೆ ೧೮ ವರ್ಷಗಳು ತುಂಬಲು, ಅವನೆಲ್ಲಿ ಆಸ್ತಿಗೆ ಹೊಡೆದಾಡುವನೋ ಎಂದು ಅವನ ಪ್ರಾಣವನ್ನು ಸುಲಭವಾಗಿ ತೆಗೆದುಬಿಟ್ಟ. ಅದೇ ರೀತಿ ತಮ್ಮನ ಜೀವವನ್ನೂ ತೆಗೆಯಲು ಸಿದ್ಧನಾದ. ಆದರೆ ಅವನಿಗಿಂತ ಬುದ್ಧಿವಂತರು ಬೇರೆಯಿರುವರೆಂಬುದನ್ನು ಅವನು ಸಂಪೂರ್ಣವಾಗಿ ಮರೆತಿದ್ದಂತೆ ತೋರುತ್ತದೆ. ಮೋಹನನು ತನ್ನ ವಿಷಯವನ್ನು ಹೇಳುತ್ತಿರುವಾಗಲೇ ನನಗೆ ಡಾಕ್ಟರ ಮೇಲೆ ಅನುಮಾನಬಂದಿತು. ಹೇಗೆಂದರೆ ೧೮ ವರ್ಷಗಳು ತುಂಬಿದ ಕೂಡಲೇ ಒಬ್ಬನು ಸತ್ತಿದ್ದಾನೆ. ಮತ್ತು ಅದೇ ಕೊಠಡಿಗೆ ಅವನ ತಮ್ಮನು, ಕೇವಲ ಮೂರು ತಿಂಗಳಿನಲ್ಲಿಯೆ ಹೋಗಬೇಕಾಗುವಂತೆ ಮಾಡಿದ್ದಾನೆ. ಇದೆಲ್ಲಾ — ನಾನು ಸ್ಥಳವನ್ನು ನೋಡಿದಮೇಲಂತೂ — ನಿಸ್ಸಂದಿಗ್ಧವಾಗಿ ತಿಳಿಯಿತು. ನೀನೂ ನೋಡಿದೆಯಲ್ಲವೇ.. ಆ ಕೊನೆಯ ಕೊಠಡಿಗೆ ರಿಪೇರಿಮಾಡುವ ಆವಶ್ಯಕತೆಯಿಲ್ಲದಿದ್ದರೂ ರಿಪೇರಿ ಮಾಡಿಸುತ್ತಿರುವುದನ್ನು! ಇದು ಯಾತಕ್ಕೆಂದರೆ ಆ ಕೋಣೆಯಲ್ಲಿದ್ದ ಮೋಹನನನ್ನು ಮಧ್ಯದ ಕೊಠಡಿಗೆ ಕಳುಹಿಸುವುದಕ್ಕಾಗಿ. ಎರಡನೆಯದೇನೆಂದರೆ ಆ ಮಧ್ಯದ ಕೋಣೆಯಲ್ಲಿ ಮಲಗುವ ವ್ಯಕ್ತಿ ಮಂಚವನ್ನು ಬದಲಾಯಿಸದಂತೆ, ಮಂಚದ ಕಾಲುಗಳನ್ನು ನೆಲದೊಳಗೆ ಹೂತಿದ್ದಾರೆ. ಎಂದರೆ ಅವನು ಯಾವಾಗಲೂ ಒಂದೇ ಜಾಗದಲ್ಲಿ ಮಲಗಬೇಕು. ಒಂದು ಕೋಣೆಯಿಂದ — ಗಾಳಿಬರಲು — ಇನ್ನೊಂದು ಕೋಣೆಯಿರುವ ಗೋಡೆಯಲ್ಲಿ ಯಾರೂ ಕಿಂಡಿಯನ್ನು ಮಾಡುವುದಿಲ್ಲ. ಆ ಕಿಂಡಿಯಿಂದ

ಪೇಟೆಂಟ್ ಮತ್ತು ಟ್ರೇಡಮಾರ್ಕ್ ರಜಿಸ್ಟ್ರೇಶನ್ನಿನ ಬಗ್ಗೆ
ಸಿ. ಜಿ. ಅನುಂದ್ ಆ್ಯಂಡ್ ಕಂಪನಿ
೧೪ ಹೇರಸ್ಟ್ರೀಟ್, ಕಲಕತ್ತಾ
ಇವರಿಗೆ ಬರೆಯಿರಿ.
ವೆಚ್ಚ ಕಡಿಮೆ! ಹೆಚ್ಚಿನ ಸಂರಕ್ಷಣೆ!

ಮಂಚದಮೇಲೆ ನೇತಾಡುತ್ತಿದ್ದ ತಂತಿಯು ಕಾಲಿಂಗ ಬೆಲ್ ಹಾಗೆ ಇತರರಿಗೆ ತೋರಿದರೂ, ಅದಕ್ಕೆ ಸಂಬಂಧವೇ ಇಲ್ಲ. ಆ ಕಿಂಡಿಯಿಂದ ಮಾತ್ರ ಮಂಚದವರೆಗೆ ನೇತಾಡುತ್ತದೆ. ಇದು ಆಶ್ಚರ್ಯಕರವಾದ ವಿಷಯವಲ್ಲವೇ? ಇದೆಲ್ಲವನ್ನೂ ಚೆನ್ನಾಗಿ ಯೋಚಿಸಿ ನೋಡಿದರೆ, ಮೋಹನನು ಹೇಳಿದ ಮಾತುಗಳಿಗೂ ಅಲ್ಲಿರುವ ಸನ್ನಿವೇಶಗಳಿಗೂ ಹೋಲಿಕೆ ಸರಿಯಾಗುತ್ತದೆ. ಏನೆಂದರೆ ಡಾಕ್ಟರೇ ಈ ಉಪಾಯಗಳೆಲ್ಲವನ್ನೂ—ಹುಡುಗರ ಜೀವವನ್ನು ತೆಗೆಯುವುದಕ್ಕಾಗಿ—ಬಹಳ ದಿವಸಗಳಿಂದಲೂ ಯೋಚಿಸಿ ಮಾಡಿದ್ದಾನೆ. ಮೋಹನನು ಹೇಳಿದ ವಿಷಯಗಳಲ್ಲಿಯೆ ತನ್ನ ಚಿಕ್ಕಪ್ಪನಿಗೆ ಕಾಡುಪ್ರಾಣಿಗಳಲ್ಲಿ ತುಂಬಾ ಪ್ರೀತಿ ಎಂದಿದ್ದಾನೆ. ಈ ರೀತಿ ಪ್ರಾಣಿಗಳ ಮೇಲೆ ಮಮತೆಯಿದ್ದ ಮನುಷ್ಯನು, ಅವುಗಳಿಂದಲೇ ತನ್ನ ಉಪಾಯವು ಕೊನೆಗಾಣಬಹುದೆಂದು ಯೋಚಿಸಿ ಒಂದು ವಿಷದ ಹಾವನ್ನು ತನ್ನ ಕೋಣೆಯಲ್ಲಿರುವ ತಿಜೋರಿಯಲ್ಲಿಟ್ಟು ಸಾಕಿದ. ತಿಜೋರಿಯ ಮೇಲಿದ್ದ ಹಾಲಿನ ತಟ್ಟೆಯೂ ಇದಕ್ಕೆ ಸಾಕ್ಷಿ. ಚಿರತೆ, ಕೋತಿ, ಹಾವು ಮುಂತಾದ ಜಂತುಗಳಲ್ಲಿ ತುಂಬ ಅನುಭವವುಳ್ಳವನಾದುದರಿಂದ, ತಾನು ಸಾಕುತ್ತಿದ್ದ ಹಾವನ್ನು ಚೆನ್ನಾಗಿ—ತಾನು ಹೇಗೆ ಹೇಳಿದರೆ ಹಾಗೆ ಕೇಳುವಂತೆ ತರಪೇತುಮಾಡಿ, ತನ್ನ ಆಕಾಂಕ್ಷೆಯನ್ನು ನೆರವೇರಿಸಲು ತೊಡಗಿದ. ಪಕ್ಕದ ಕೋಣೆಯಲ್ಲಿ ವ್ಯಕ್ತಿಯು ಮಲಗಿ, ಚೆನ್ನಾಗಿ ನಿದ್ದೆ ಹತ್ತಿದೆಯೆಂದು ತಿಳಿದಕೂಡಲೆ ತಿಜೋರಿಯಿಂದ ಹಾವನ್ನು ಆಚೆಗೆ ತೆಗೆದು, ಕಿಂಡಿಯ ಮುಖಾಂತರ ಬಿಡುತ್ತಿದ್ದ. ಹಾವು ನೆಟ್ಟಗೆ ಆ ಕಾಲಿಂಗ್ ಬೆಲ್ಲಿನ ತಂತಿಯ ಮೇಲೆ ಇಳಿದು, ಮಂಚದ ಮೇಲಿರುವವನ ಮುಖದ ಹತ್ತಿರಕ್ಕೆ ಸರಿಯಾಗಿ ಬರುತ್ತದೆ. ಹೀಗೆ ಒಂದು ದಿನ ಕಚ್ಚದೆ ಇದ್ದು ವಾಪಸ್ಸು ಬಂದರೂ, ಎರಡನೆಯ ದಿವಸವಾದರೂ ಮಲಗಿರುವ ವ್ಯಕ್ತಿಗೆ ಸಾವು ಖಂಡಿತ. ಅದು ತನ್ನ ಕೆಲಸವನ್ನು ಮಾಡಿದ ಮೇಲೆ ಮರಳಿ ತನ್ನ ಹತ್ತಿರಕ್ಕೆ ಬರುವಂತೆ ಶೀಟಿಹೊಡೆದು, ಕಿಂಡಿಯಲ್ಲಿ ಹಾಲಿನ ತಟ್ಟೆಯನ್ನಿಟ್ಟು, ಹಾವನ್ನು ತನ್ನ ಕೋಣೆಗೆ ಕರೆದುಕೊಳ್ಳುತ್ತಾನೆ. ಅನಂತರ ಅದರ ಸ್ಥಳದಲ್ಲಿ ಅದನ್ನು ಬಂಧಿಸಿ ಬಾಗಿಲನ್ನು ಹಾಕುವಾಗ ಟಣ್ ಎಂದು ಶಬ್ದವಾಗುತ್ತದೆ. ಮೋಹನನ ಅಣ್ಣ ದೀಪವನ್ನು ಹಚ್ಚಿದನಿಗೆ ಯಾವುದರಿಂದ ಮರಣವುಂಟಾಯಿತೆಂಬುದನ್ನು ನೋಡಿದ್ದರೂ, ತನ್ನ ತಮ್ಮನಿಗೆ ಸರಿಯಾಗಿ ತಿಳಿಸುವಷ್ಟರಲ್ಲಿ ಪ್ರಾಣವನ್ನು ಬಿಟ್ಟ.'' ಎಂದು ತನ್ನ ತನಿಖೆಯ ತಳಹದಿಯನ್ನು ಪ್ರಮೂಲಾಗ್ರವಾಗಿ ತಿಳಿಸಿದ. ನನಗೆ ಆಗ ಎಲ್ಲವೂ ವಿಶದವಾಗಿ ಅರ್ಥವಾದರೂ, ಡಾಕ್ಟರು ಯಾತಕ್ಕೆ ಸತ್ತನೆಂಬುದು ತಿಳಿಯಲಿಲ್ಲ. "ಪ್ರಕಾಶ, ಹಾಗಾದರೆ, ತಾನು ಚೆನ್ನಾಗಿ ಸಾಕಿದ್ದ ಹಾವಿನಿಂದಲೇ ಡಾಕ್ಟರ ಮರಣವುಂಟಾದದ್ದು ಆಶ್ಚರ್ಯವಲ್ಲವೇ?'' ಎಂದೆ. ಅವನು "ಆಶ್ಚರ್ಯವೇನೂ ಇಲ್ಲ ಪ್ರಭೂ! ನಾವು ರಾತ್ರಿಯೆಲ್ಲ ನಿದ್ರೆ ಮಾಡದೆ ಕುಳಿತು ಏನು ಆಗುತ್ತದೋ ಎಂದು ಕಾಯುತ್ತಿದ್ದುದು ಏತಕ್ಕೆ? ಅವನು ಸಾಕಿರುವ ಪ್ರಾಣಿ— ಮೋಹನನ ಅಣ್ಣನ ಪ್ರಾಣವನ್ನು ತೆಗೆದ ಹಾವು — ಬರಲೆಂದು ತಾನೆ! ಊಹಿಸಿದ್ದಂತೆಯೇ ಅವನು ಶೀಟಿಹೊಡೆದು ಹಾವನ್ನು ಕಿಂಡಿಯ ಮುಖಾಂತರ ಬಿಟ್ಟಕೂಡಲೆ, ನಾನು ಕೋಲಿನಿಂದ ಜೋರಾಗಿ ಹಗ್ಗದಮೇಲೆ ಮತ್ತು ಕಿಂಡಿಯ ಕಡೆಗೆ ಹೊಡೆದೆ. ಹಾವಿಗೆ ರೋಷಬಂದು ಸರ್ರನೆ ಹಿಂದಿರುಗಿ, ತನ್ನ ಎದುರಿಗೆ ಸಿಕ್ಕಿದ ಡಾಕ್ಟರನ್ನು ಕಚ್ಚಿತು'' ಎಂದು ಉತ್ತರಕೊಟ್ಟ. ಅಂತೂ ಈ ಸನ್ನಿವೇಶವೂ, ಮತ್ತು ರಾತ್ರಿಯೆಲ್ಲಾ ಕಣ್ಣು ರೆಪ್ಪೆಯನ್ನು ಕೂಡ ಹೊಡೆಯದೆ ಕುಳಿತಿದ್ದುದೂ, ವೈದಿಕನಸಂಘದ ಸಮಸ್ಯೆಯಲ್ಲಿ—ಮೈಸೂರು ಬ್ಯಾಂಕಿನ ಹಣವಿಡುವ ಕಟ್ಟಡದಲ್ಲಿ ಕಾಯ್ದು ಕುಳಿತಿದ್ದುದಕ್ಕಿಂತ, ಹೆಚ್ಚು ಭೀತಿಯನ್ನುಂಟುಮಾಡುತ್ತಿತ್ತು. ಪ್ರಕಾಶನಿಗೆ ಇಂತಹ ಸಾಹಸದಲ್ಲಿ ಯಾವಾಗಲೂ ಅಪೇಕ್ಷೆ.

ಕರ್ನಾಟಕ ಜನಜೀವನ
(ಸಂಶೋಧನಾತ್ಮಕ ಗ್ರಂಥ)
ಬರೆದವರು: ಚಿಟಗೇರಿ ಕೃಷ್ಣಶರ್ಮ
ಮುಂಬಯಿ ಸರಕಾರದ ಸಂಸ್ಕೃತಿ ಸಂಶೋಧನ ಸಮಿತಿಯ ಪ್ರೋತ್ಸಾಹದಿಂದ ಪ್ರಕಟವಾಗಿದೆ.
ಮೊನ್ನೆ ಮೊನ್ನೆಯೆ ಅಚ್ಚಾಗಿ ಹೊರಕ್ಕೆ ಬಂದಿದೆ.
ಪ್ರೊ. ಜಾಗಿರದಾರರು ವಿಚಾರಪ್ರಚೋದಕ ಮುನ್ನುಡಿಯನ್ನು ಬರೆದಿದ್ದಾರೆ.
ಸುಂದರ ಪ್ರತಿಗೆ ೧-೮-೦ ಕ್ಯಾಲಿಕೊ ಪ್ರತಿಗೆ ೨-೦-೦
ಬೇಕಾದವರು 'ಜಯಂತಿ' ಕಾರ್ಯಾಲಯಕ್ಕೆ ಬರೆಯಿರಿ!
ಮನೋಹರ ಗ್ರಂಥಭಾಂಡಾರದಲ್ಲಿಯೂ ಸಿಕ್ಕುವುದು.



(ಶ್ರೀ. ಟಿ. ರೂಬೆನ್ ಅವರ ಬರೆಹದ ಖಂಡನಾತ್ಮಕ ವಿಮರ್ಶೆ)

★

ಸ್ತ್ರೀ-ಪುರುಷರಲ್ಲಿಯ ಪರಸ್ಪರಾವಲಂಬಿತ್ವವನ್ನು ನಿಸರ್ಗವೆ ಬಿಡಿಸಲಾಗದಂತೆ ಬಿಗಿದಿಟ್ಟಿದೆ. ಅದಕ್ಕೆ 'ಸಹಶಿಕ್ಷಣ'ದ ಸಹಾಯ ಸಹ ಬೇಕಿಲ್ಲ. 'ಸಹಶಿಕ್ಷಣ'ದಂತಹ ಆಚಾರಗಳಿಂದ ಉಂಟಾಗುವ ಪರಿಣಾಮಗಳು ವಂಶ, ಸಮಾಜ, ರಾಷ್ಟ್ರ ಇವುಗಳಿಗೆ ಸಂಬಂಧಿಸುತ್ತಿರುವುದರಿಂದ, ಈ ಸಮಸ್ಯೆಯನ್ನು ಇಷ್ಟೊಂದು ಭಾವನಾಪರವಶತೆಯಿಂದ ನಿರ್ಣಯಿಸಬೇಕಾದುದಿಲ್ಲ!

★

ಉತ್ತರಾರ್ಧ

ಇದೇ ಬರೆಹದ ಪೂರ್ವಾರ್ಧದಲ್ಲಿ, ಶ್ರೀ. ಟಿ. ರೂಬೆನ್ ಅವರ ಸಿದ್ಧಾಂತವಾದ ಸ್ತ್ರೀ-ಪುರುಷರ ಅಂತರರಚನೆಯ ಸಾಮಾನ್ಯತೆಯನ್ನು ನೋಡಿ ಆಗಿದೆ. ಅದರೊಡನೆಯೆ ಸ್ತ್ರೀಯರಿಗೆ ಕೊಡುತ್ತಿರುವ ಉಚ್ಚ-ಶಿಕ್ಷಣದಿಂದ, ಅವರ ಆರೋಗ್ಯ, ಸೌಂದರ್ಯ ಇವುಗಳ ಮೇಲಾಗುತ್ತಿದ್ದ ದುಷ್ಪರಿಣಾಮಗಳನ್ನು, ನಮ್ಮ ಪರಾತ್ಪರ ಗುರುಗಳಾದ ಯುರೋಪಿಯನ್ ಪಂಡಿತರ ವಚನಾಧಾರದಿಂದಲೆ ತೋರಿಸಿ ಆಗಿದೆ. ಈಗ ಈ ಉತ್ತರಾರ್ಧದಲ್ಲಿ, ಬರೆಹಗಾರರ ಸಹ-ಶಿಕ್ಷಣದ ಮುಖ್ಯ ವಿಷಯವನ್ನೆತ್ತಿಕೊಂಡು ಅದರ ಹಿತಾಹಿತಗಳನ್ನು ಪರೀಕ್ಷಿಸಬೇಕಾಗಿದೆ.

ಶ್ರೀ. ಜೋಶಿ ರಾಮಾಚಾರ್ಯ

ಅವರಿಂದ

ಬರೆಹಗಾರರು ಉತ್ತರಕ್ಕಾಗಿ, ತಮ್ಮ ಬರೆಹದಲ್ಲಿ ಮೂರನೆಯ ಆಕ್ಷೇಪಣೆಯೆಂದು 'ಯೌವನಾವಸ್ಥೆಯಲ್ಲಿ ಹುಡುಗ-ಹುಡುಗಿಯರಿಗೆ ಏಕತ್ರವಾಗಿ ಶಿಕ್ಷಣ ಕೊಡುವುದರಿಂದ ದುರ್ನಡತೆ ನೆಲೆಗೊಳ್ಳುವುದು' ಎಂಬ ಮಾತನ್ನೂ, ಈ ಆಕ್ಷೇಪಣೆಯು ಆಕ್ಷೇಪಕರು ತಮ್ಮ ಮಾತಿಗೆ ಆಧಾರವೆಂದು ತೋರಿಸುತ್ತಿರುವ ಅಮೇರಿಕೆಯ ಲಿಂಡ್ಸೆ ಎಂಬ ನ್ಯಾಯಾಧೀಶನು ಮಾಡಿದ ವಿಧಾನವನ್ನೂ ಇಟ್ಟುಕೊಂಡು, ಲಿಂಡ್ಸೆ ನ್ಯಾಯಾಧೀಶನ ಮಾತಿಗಂತೂ "ಸುದ್ದೈವದಿಂದ ಈ ಸಮಸ್ಯೆಯು ರೂಢಿಗಿಂತ ಮಾತಿನಲ್ಲಿಯೆ ಹೆಚ್ಚು ತಲೆಯೆತ್ತುವುದೆಂದು ಕಾಣುವುದು" ಎಂದು ಕಾಣಿಕೆಯ ನ್ಯಾಯವನ್ನೂ ನ್ಯಾಯದ ಕಾಣಿಕೆಯನ್ನೂ ಕೊಟ್ಟುಬಿಟ್ಟಿದ್ದಾರೆ. ಮುಂದೆ "ಮೇಲೆ ಉಲ್ಲೇಖಿಸಿದ ಗಂಡಾಂತರಗಳು ತೀರ ಕ್ವಚಿತ್ತಾಗಿ ಕಂಡು ಬರುವುವೆಂದು, ಸಹಶಿಕ್ಷಣ ಸಂಸ್ಥೆಗಳ ಮುಖ್ಯಾಧ್ಯಾಪಕರ ಸಾಮಾನ್ಯವಾದ ಅಭಿಪ್ರಾಯವಿದೆ" ಎಂದೂ ಹೇಳಿದ್ದಾರೆ. ನಿಜ, ಯಾವ ಪ್ರಮಾಣವೂ ಇಲ್ಲದ ಈ ಅಧ್ಯಾಪಕರ ಅಭಿಪ್ರಾಯವು ಒಂದರ್ಥದಲ್ಲಿ ತೀರ ಸಾಮಾನ್ಯವೆಂದೇ ಹೇಳಬೇಕು. "ಸ್ತ್ರೀ-ಪುರುಷರು, ಸ್ವೇತರ ಜಾತಿಯ ಬಗ್ಗೆ ಸದಾ ನಿದಿಧ್ಯಾಸವನ್ನು ಹಿಡಿಯುವ ಹುಚ್ಚು ಪ್ರವೃತ್ತಿಗೆ ಸಹಶಿಕ್ಷಣ ಸಂಸ್ಥೆಯಲ್ಲಿಯ ಬಳಕೆಯ ಆಟ-ನೋಟಗಳೂ, ಉಭಯತರು ಮಾಡುವ ವಿದ್ಯಾಭ್ಯಾಸವೂ (ಕೆಲಸಗಳಿಂದ ಸಿಕ್ಕುವ ನಿರ್ದುಷ್ಟ ಆನಂದವೂ), ಬೌದ್ಧಿಕ ವ್ಯವಸಾಯದ ಮೂಲಕ ಲಭಿಸುವ ಪರಿಚಯ-ಸ್ನೇಹಗಳ ಸಂತೋಷಗಳೂ, ಸ್ತ್ರೀ-ಪುರುಷ ವಿದ್ಯಾರ್ಥಿಗಳ ಸ್ವೈರಾಚರಣೆಗೆ ಹಿರಿದಾದ ತಡೆಗಳಾಗಿವೆ" ಎಂದು ಬರೆಯುತ್ತಾರೆ. ಇದರಲ್ಲಿ ತುಸು ಮಟ್ಟಿಗೆ ಯೋಚಿಸಬೇಕಾದ ವಿಷಯ ಹೊಂದಿದೆ. 'ಯಾವುದೊಂದು ವಸ್ತುವಿನ ಬಗೆಗೆ ಉಂಟಾದ ನಿದಿಧ್ಯಾಸವನ್ನು ಹೋಗಲಾಡಿಸಬೇಕಾದರೆ, ಆ ವಸ್ತುವನ್ನೆ ಹತ್ತಿರಕ್ಕೆ ತಂದಿಟ್ಟುಬಿಟ್ಟರೆ, ಪರಿಚಯದಿಂದ ಆ ವಿಷಯದ ಬಗೆಗೆ ಇರುವ ಕುತೂಹಲವು ಅಳಿದು ಅದು ತಾನಾಗಿ ಹೋಗಿ ಬಿಡುವುದು' ಎಂಬುದೊಂದು ವಿಚಾರಸರಣಿ ಇದರಲ್ಲಿದೆ. ಇದೊಂದು ಹೇತ್ವಾಭಾಸದ

ಕಪ್ಪು ತಿಳಿವಳಿಕೆ. ಹಿಂದೆ ಯಾವ ಕಾರಣವೂ ಇಲ್ಲದೆ, ಕೇವಲ ನಿದಿಧ್ಯಾಸವಿಷ್ಟೇ ಇರುತ್ತಿದ್ದರೆ ಇಲ್ಲವೆ 'ಯಾವುದೊಂದು ವಸ್ತುವು ತನ್ನ ಹತ್ತಿರಕ್ಕೆ ಮಾತ್ರ ಇದ್ದರೆ ಸಾಕು' ಎಂಬುದಿಷ್ಟೇ ನಿದಿಧ್ಯಾಸವಿರುತ್ತಿದ್ದರೆ, ಮೇಲಿನ ಮಾತನ್ನು ಒಪ್ಪಬಹುದಾಗಿತ್ತು. ಆದರೆ, ಇಲ್ಲಿ ಸ್ತ್ರೀ-ಪುರುಷರಲ್ಲಿಯ ಪರಸ್ಪರ ನಿದಿಧ್ಯಾಸವು, ಒಂದು ವಿಶಿಷ್ಟ ವಯಸ್ಸಿನಲ್ಲಿಯೆ ಉಂಟಾಗುತ್ತಿದ್ದು, ಇಂತಹ ವಿಶಿಷ್ಟ ವಯಸ್ಸಿನಲ್ಲಿಯೆ ಹುಟ್ಟಿದ ಈ ನಿದಿಧ್ಯಾಸವು, 'ಯಾವ ಕಾರಣ ಮೂಲಕವಾಗಿದೆ?' ಎಂದು ಕೇಳಿದರೆ ಲೇಖಕರು ಸಹ ಥಟ್ಟನೆ ಉತ್ತರ ಕೊಡಬಹುದು "ಕಾಮವಿಕಾರದ ಮೂಲಕ" ಎಂದು. ನಾವಿಲ್ಲಿ ಮತ್ತೆ ಕೇಳುವೆವು: "ನೀವು ಪರಸ್ಪರರ ನಿದಿಧ್ಯಾಸವನ್ನು ಅಳಿಸಲು ಒಂದನ್ನೊಂದು ತೀರ ಹತ್ತಿರಕ್ಕೆ ತಂದಿಟ್ಟು, ಪರಿಚಯ-ಸ್ನೇಹಗಳಿಂದ ಕುತೂಹಲವನ್ನು ಮರೆಯಿಸಿ, ನಿದಿಧ್ಯಾಸವನ್ನು — ಆ ವಸ್ತು ತನ್ನ ಹತ್ತಿರಕ್ಕೆ ಇರಬೇಕೆಂಬ ನಿದಿಧ್ಯಾಸವನ್ನು — ದೂರ ಮಾಡಿದಿರಿ; ಆದಾಯಿತು ಎನ್ನೋಣ. ಇದರಿಂದ ನೀವು ನಿದಿಧ್ಯಾಸಕ್ಕೆ ಕಾರಣವಾಗಿ ನಿಂತಿದ್ದ ಕಾಮವನ್ನೇನು ನಾಶಮಾಡಲಿಲ್ಲವಲ್ಲ! ಮುಂದೆ, ಎಡಹನೆಯ ಪೆಟ್ಟಿಲೆಂದು ಕಾಮಪೂರಯಿಕೆಯ ನಿದಿಧ್ಯಾಸವು ಮತ್ತೆ ಹತ್ತದೀತೆ? ಅಜೇಯವಾದ ಆ ನೈಸರ್ಗಿಕ ಮೂಲ ಬೇಡಿಕೆಯನ್ನು ಯಾವ ಯೋಜನೆಯಿಂದ ದೂರವಾಗಿಸುವಿರಿ?" ಎಂದು. ಇದಕ್ಕೆ ಉತ್ತರನಾವುದು? ಮತ್ತೆ ಇದಕ್ಕೊಂದು ಉದಾಹರಣೆಯಿಂದ ಉತ್ತರಕೊಡುವುದಾದಲ್ಲಿ ಅದು ಹೀಗೆ:— ಒಂದು ಮಗು ಹಸಿದಿದೆ; ಯಾವುದೋ ಒಂದು ಪದಾರ್ಥವನ್ನು ತಿನ್ನಬೇಕೆಂದು ನಿದಿಧ್ಯಾಸದಿಂದ ಹಂಬಲಿಸುತ್ತಿದೆ; ಹಟತೊಟ್ಟಿದೆ. ಅದರ ನಿದಿಧ್ಯಾಸವನ್ನು —ಹಂಬಲವನ್ನು— ಕಳೆಯುವುದಕ್ಕೆಂದು ಆ ವಸ್ತುವನ್ನು ತಂದುಕೊಟ್ಟೆವೆಂದು ಭಾವಿಸೋಣ. ಆ ಮಗು ಅದನ್ನು ಹತ್ತಿರಕ್ಕೆ ಇಟ್ಟುಕೊಂಡು ಆದರದಿಂದ ಭಯ-ಭಕ್ತಿಗಳಿಂದ ನೋಡುತ್ತ ಕೂಡುವುದೇ, ಇಲ್ಲವೆ ತಟ್ಟನೆ ಬಾಯಿಯಲ್ಲಿ ಹಾಕಿಕೊಂಡುಬಿಡುವುದೆ?— ಎಂಬುದೇ ಇಲ್ಲಿಯ ಪ್ರಶ್ನೆ. ಈ ಪ್ರಶ್ನೆಯ ಉತ್ತರದಲ್ಲಿಯೆ ಮೇಲಿನ ಸಮಸ್ಯೆಯ ಉತ್ತರವಿದೆ. ಇನ್ನು ಆ ನಿದಿಧ್ಯಾಸವೆ ಕಾಮಮೂಲಕವಿರುವುದರಿಂದ, ಸಾನ್ನಿಧ್ಯವಿಶೇಷದಿಂದ ಹೋಗಲಿರುವ ನಿದಿಧ್ಯಾಸದೊಡನೆ ಕಾಮವೂ ಅಳಿದುಹೋಗುವುದೆಂದು ಹೇಳಹೋದರೆ, ಈ ಮಾತು — ಕಾರ್ಯನಾಶದೊಡನೆ ಕಾರಣವೂ ನಾಶವಾಗುವುದೆಂಬ ಮಾತು — ಅನುಭವಕ್ಕೆ ತೀರ ವಿರುದ್ಧವಾದುದು. ಅಲ್ಲದೆ ಯಾವಳೊಬ್ಬ ಚೆಲುವೆ ದಾರಿಯಲ್ಲಿ ಹೋಗುತ್ತಿರುವಾಗ, ಕೆಲವು ಯುವಕರು ಸೌಂದರ್ಯಾಭಿಲಾಷೆಯ ಸಾಮಾನ್ಯ ದೃಷ್ಟಿಯಿಂದ ಅವಳನ್ನು ನಿಟ್ಟಿಸಿ ನೋಡಬಹುದು; ತಮ್ಮತಮ್ಮಲ್ಲಿ ಗೇಲಿ ಮಾಡಬಹುದು. ಮತ್ತೆ ಮತ್ತೆ ನೋಡಬೇಕೆಂದು ಹಾರಯಿಸಲೂ ಬಹುದು. ಇವೆಲ್ಲ ಒಂದು ಬಗೆಯಿಂದ ಕಾಮಮೂಲಕವೆ ಆಗಿದ್ದರೂ, ಆ ಕಾಲಕ್ಕೆ ತತ್ಕಾಲಕ್ಕೆ— ಆ ಕಾಮವಿಕಾರವು ಅವರ ಅಂಗಾಂಗಗಳಲ್ಲಿ ಚೇತನಗೊಂಡು ಪ್ರಜ್ವಲಿಸುತ್ತಿರುವುದೆಂಬುದು ಕಂಡುಬರುವುದಿಲ್ಲ. ಹಾಗಾಗುತ್ತಿದ್ದರೆ, ಪ್ರತಿನಿತ್ಯವೂ ರಾಜಮಾರ್ಗದಲ್ಲಿ ಅದೆಷ್ಟೋ ಅತ್ಯಾಚಾರಗಳಾಗಬೇಕಾಗಿದ್ದುವು. ಇನ್ನು ಯಾವುದೊಂದು ವ್ಯಕ್ತಿಯ ವಿಷಯದಲ್ಲಿ ಹಾಗಾಗಿದೆ ಎಂದು ಹೇಳಿದರೂ, ಪರಸ್ಪರರ ಅಪರಿಚಯ— ಗುಣ-ಸ್ವಭಾವಗಳ ಅಪರಿಚಯದಿಂದುಂಟಾಗುತ್ತಿರುವ ಭೀತಿ, ಅಂತಹ ಯಾವ ಸಾಹಸಕ್ಕೂ ಕೈಯಿಕ್ಕಗೊಡುವುದಿಲ್ಲ. ಸ್ತ್ರೀ-ಪುರುಷರ ಯಾವ ನೈತಿಕ ಅಧಃಪಾತದ ಉದಾಹರಣೆಯನ್ನೂ ಶೋಧಿಸಿ ನೋಡಿ; ಮೊದಲು ಪರಿಚಯ-ಸ್ನೇಹಗಳು, ಒಳಕೆಯ ಆಟ-ನೋಟಗಳು, ಸಲುಗೆಯ ಸಲ್ಲಾಪಗಳು, ಆಗಾಗ ಒದಗುತ್ತಿದ್ದ ಏಕಾಂತದ ಅವಸರಗಳು ಇವೇ ಅದಕ್ಕೆ ಮೊದಲಾಗಿದ್ದುದನ್ನು ಕಾಣಬಹುದು. ಹೀಗಿರುವಾಗ, ಸಹಶಿಕ್ಷಣದಿಂದ ಆ ವಿಕಾರವು ಅಳಿದುಹೋಗುವುದೆಂಬ ಅನುಭವವಿರುದ್ಧ ಮತ್ತು ಅಸಿದ್ಧವಿಧಾನವನ್ನು ಮಾಡುವುದು ಹೇಗೆ? ಇದಕ್ಕೆ ಮುಂದೆ "ಹುಡುಗ-ಹುಡುಗಿಯರನ್ನು ಕೃತ್ರಿಮವಾಗಿ ಬೇರೆ ಬೇರೆ ಇರಿಸುವುದರಿಂದ, ಸಂಯಮಶಕ್ತಿಯ ಮೇಲಿನ ಭಾರವು ವಿಪರೀತ ಹೆಚ್ಚುವುದು. ಈ ಭಾರದ ಅಸಹನೆಯಿಂದ ಅವರ ನಡತೆ ಹಲವು ಸಾರೆ ಅನೀತಿಯ ಕಡೆಗೆ ವಾಲುವುದು" ಎಂದು ಶ್ರೀಯುತರು ಬರೆಯುತ್ತಾರೆ. ಆದರೆ, ಕೂಡಿ ಇರಿಸುವುದರಿಂದ ಸಂಯಮಶಕ್ತಿಯ ಮೇಲಿನ ಭಾರವು ಏಕೆ — ಹೇಗೆ — ಯಾವ ರೀತಿಯಿಂದ— ಹಗುರಾಗುವುದೆಂಬುದನ್ನು ಮಾತ್ರ ಹೇಳಲಿಲ್ಲ. ಸಾಮಾನ್ಯವಾದ ಹವೆಯ ಮೂಲಕ ಕರಗುತ್ತಿದ್ದ ತುಪ್ಪವನ್ನು ಹೆಪ್ಪುಗಟ್ಟಿಸಲೆಂದು ಬೆಂಕಿಯನ್ನು ಬಳಿ ತಂದಿಟ್ಟಂತಲ್ಲವೆ ಈ ಮಾತು? "ಸಹಶಿಕ್ಷಣ ಶಾಲೆಗಳಲ್ಲಿ ಹುಡುಗಿಯರಿರುವುದರಿಂದ, ಅಲ್ಲಿಯ ವಾತಾವರಣವು ಸಾಧುವಾಗುವುದು" ಎಂದು ಹೇಳುವವರಾದರೂ, ಹೆಣ್ಣುಮಕ್ಕಳು ಸ್ಕೂಲು-ಕಾಲೇಜುಗಳಲ್ಲಿ ಕಾಲಿಟ್ಟೊಡನೆ ಅವೆಲ್ಲ ದೇವಾಲಯಗಳೆ ಆಗಿ ಬಿಡುವುವೆಂದು ಭಾವಿಸಿದ ಭಾವನೆಯ ಮಾತುಗಳನ್ನು ನಾವು ಒಪ್ಪಲಾರೆವು. ಏಕೆಂದರೆ, ಈಗಿಲ್ಲಿ ಸಹಶಿಕ್ಷಣ ನಡೆದ ಶಾಲೆ-ಕಾಲೇಜುಗಳಲ್ಲಿಯ ವಾತಾವರಣವನ್ನು ನಾವು ನೋಡುತ್ತೇವೆ. "ಕೇವಲ ಗಂಡುಮಕ್ಕಳಿಗಾಗಿ ಇದ್ದ ಶಾಲೆಗಳು ಅನೀತಿಯ ಕೋಟೆಗಳಂತಿದ್ದು, ಅಲ್ಲಿ ಹುಡುಗರ ನೀತಿ ಕೀಳ್ಮಟ್ಟಕ್ಕಿಳಿದಿದೆ" ಎಂಬ ಒಬ್ಬ ಪಾಶ್ಚಾತ್ಯ ತಜ್ಞನ ಅಭಿಪ್ರಾಯವನ್ನು ಲೇಖಕರು ತೋರಿಸುತ್ತಿದ್ದಾರೆ. ಆದರೆ ಆ ತಜ್ಞರ ಅನೀತಿಯ ವ್ಯಾಖ್ಯೆಯೇನೆಂಬುದೆ ಅಸ್ಪಷ್ಟವಾಗಿದೆ. ಅನೀತಿಯು ಸ್ತ್ರೀ-ಪುರುಷರಿರ್ವರಲ್ಲಿಯೂ ಪರಸ್ಪರಾವಲಂಬಿಯಾಗಿದ್ದ ದೇಹಭ್ರಷ್ಟತಾರೂಪವಾದ ಇದ್ದಲ್ಲಿ, ಕೇವಲ ಗಂಡುಮಕ್ಕಳ ಶಾಲೆಯಲ್ಲಿ ಅದಕ್ಕೆ ಆಸ್ಪದವೆಲ್ಲಿ? ಇನ್ನದು ಕೇವಲ ಚಿಂತನಾತ್ಮಕವಾದುದೆ ಆದಲ್ಲಿ, ಚಿಂತಿಸುವ ವಸ್ತುವೆ ಹತ್ತಿರಕ್ಕೆ ಬಂದು ನಿಂತರೆ ಚಿಂತನೆಯು ಹೋಗಿ ಬಿಡುವುದೆಂಬುದಕ್ಕೆ ಪ್ರಮಾಣವಾವುದು? ಚಿಂತನೆ ಹೋದರೂ ಅನೀತಿ ಹೋಗುವುದೆಂದು ಯಾವ ಆಧಾರದ ಮೂಲಕ ಹೇಳಬೇಕು? ಇರಲಿ, ಇವೆಲ್ಲವನ್ನು ಹೇಳಿಯೂ ಸಹಶಿಕ್ಷಣ ಶಾಲೆಗಳಲ್ಲಿ ನಡೆಯಬಹುದಾದ ದುರ್-ನಡತೆಯ ಕಲ್ಪನೆಯು ಬರೆಹಗಾರರ

ಕಣ್ಣೆದುರು ಬಾರದೆ ಇಲ್ಲ. ಎಂತಲೆ, ಅವನ್ನವರು ಸಮರ್ಥಿಸಬೇಕಾಗಿ, ''ಗಂಡುಸಿನ ಪಾಶವವೃತ್ತಿಗಳು ಒಮ್ಮೊಮ್ಮೆ ಸ್ಥಾನ–ಪ್ರಸಂಗಗಳನ್ನೂ ಲೆಕ್ಕಿಸದೆ ತಮ್ಮ ಚೇಷ್ಟೆಗಳನ್ನು ನಡೆಯಿಸಿ, ಅನಿಷ್ಟವಾದ ಪರಿಣಾಮಗಳಿಗೆ ಕಾರಣವಾಗುವ ಗಂಡಾಂತರವು ಯಾವಾಗಲೂ ಇದ್ದೇ ಇರುವದು'' ಎಂದು–ಇದೊಂದು ಮಹತ್ತ್ವವಿಲ್ಲದ ಸಹಜವಾದ ವಿಷಯವೆಂಬಂತೆ — ಹೇಳಬಂದಿದ್ದಾರೆ. ಮತ್ತು ನಾವು ಇದರಿಂದ 'ಸ್ತ್ರೀಯರಲ್ಲಿ ಪಾಶವ-ವೃತ್ತಿಗಳಿಲ್ಲ, ಅನಿಷ್ಟಚೇಷ್ಟೆಗಳಿಲ್ಲ, ಅವೆಲ್ಲ ಗಂಡುಸಿನಲ್ಲಿಯೆ ಇವೆ' ಎಂದು ತಿಳಿದುಕೊಂಡು ನಡೆಯಬೇಕೆಂಬೊಂದರ್ಥವೂ ಇದರಲ್ಲಿದೆ. ಮುಂದೆ, ತಮ್ಮ ಇವೆಲ್ಲ ವಿಧಾನಗಳಿಗೇ ವಿಘಾತಕವಾಗುವ ವಿಶ್ವಾಮಿತ್ರನ ಉದಾಹರಣೆಯನ್ನೂ ಕೊಟ್ಟಿದ್ದಾರೆ. ಪಾಪ, ವಿಶ್ವಾಮಿತ್ರನು! ''ನಾನೂ ನೀನೂ ಸಂಗಾತಿಗಳಾಗೋಣ, ಅನೇಕ ವಿಷಯಗಳನ್ನು ಕೂಡಿ ಕಲಿಯೋಣ, ಉಭಯತರೂ ಒಂದೆ ಆಟ-ಪಾಟವನ್ನಾಡೋಣ. ಬಿಡುವಿನ ವೇಳೆಯನ್ನು ನಿರಾತಂಕವಾಗಿ ಕೂಡಿಯೆ ಕಳೆಯೋಣ!'' ಎಂದೇನು ಮೇನಕೆಯನ್ನು ಕರೆದಿದ್ದಿಲ್ಲ. ಸ್ತ್ರೀ-ಸಂಪರ್ಕವನ್ನೇ ತಪ್ಪಿಸಬೇಕೆಂದು ಕಾಡಿಗೆ ಓಡಿ ಹೋಗಿದ್ದ. ಹೆಣ್ಣಿನ ಚಿತ್ರ ಮನಸ್ಸಿನಲ್ಲಿಯೂ ಮೂಡಬಾರದೆಂದು ಗಾಳಿಯನ್ನೆ ತಿಂದು ದೇಹವನ್ನು ಸವಿಸುತ್ತಿದ್ದ. ಹೀಗಿದ್ದರೂ, ಮೇನಕೆ ಮುಂದೆ ಬಂದೊಡನೆ ಎಲ್ಲವೂ ಹಾಳಾಗಿ, ಅವಳ ಬಲೆಗೆ ಸಿಲುಕಿ ಬಿದ್ದ. ಆದರೆ ಇಂದು ನಾವು ಸಹಶಿಕ್ಷಣದಲ್ಲಿ ಒಬ್ಬಳನ್ನಲ್ಲ; ಸ್ತ್ರೀಜಾತಿಯನ್ನೆ ಹತ್ತಿರಕ್ಕೆ ಇಟ್ಟುಕೊಳ್ಳಬೇಕೆಂದು ಬಯಸುತ್ತೇವೆ. ಒಬ್ಬಿಬ್ಬರು ಕ್ವಚಿತ್ತಾಗಿ ದಾರಿ ತಪ್ಪಿ ನಡೆಯಬಹುದು; ಚಿಂತೆಯಿಲ್ಲ; ಅದು ಅಪರಿಹಾರ್ಯವೆ. ಆದರೂ, ಉಳಿದವರೆಲ್ಲ ಶುಕಮುನಿಗಳಾಗಿಯೆ ತೀರುವರೆಂದು ಭಾವಿಕತನದಿಂದ ನಂಬುತ್ತಿದ್ದೇವೆ. ಏನೋ, ನಮ್ಮ 'ಹೊಸಜೀವನದ' ಶಕ್ತಿಯಿಂದ ಹಾಗಾಗಬಹುದೆನ್ನಿ. ಮುಂದೆ ಇದಕ್ಕೆ ತರ್ಕಸರಣಿಯಿಂದು ''ಪ್ರವಾಸದಲ್ಲಿ ಕುತ್ತುಗಳವೆಯೆಂದು ಯಾರಾದರೂ ಪ್ರವಾಸವನ್ನೇ ಬಿಡುವರೊ?'' ಎಂದು ಕೇಳಿದ್ದಾರೆ. 'ಜೀವನ ಪ್ರವಾಸವು ಸುಖಕರವಾಗಬೇಕು. ಸಮೃದ್ಧವಾಗಬೇಕು. ಆ ಮಾರ್ಗದಲ್ಲಿ ಕುತ್ತುಗಳಿಗೆ—ಶಕ್ಯವಿದ್ದಮಟ್ಟಿಗೆ–ಎಡೆಯಿರಬಾರದು ಎಂದು ನಮ್ಮ ಸಮಾಜಶಾಸನವು—ಈಗಿನ ಪಾಶ್ಚಾತ್ಯ ವಿಜ್ಞಾನಿಗಳೂ ಹೊಗಳುವ ಮನು ಮೊದಲಾದವರ ಸಮಾಜಶಾಸನವು — ಹಾಕಿಕೊಟ್ಟ ಒಳಿತಾದ ರಾಜಮಾರ್ಗವನ್ನು ಬಿಟ್ಟು, ಯಾರವನ್ನೋ ನೋಡಿ, ಬೆಟ್ಟದ ತುದಿಯಿಂದ ಕಲೆಕೆಳಗೆ ಮಾಡಿ ಉರುಳುತ್ತ 'ಇದು ಪ್ರವಾಸ' ಎಂದು ಹೇಳಬಂದರೆ 'ಬಿದ್ದುಕೊಳ್ಳಿ' ಎಂದು ಹೇಳುವುದರ ಹೊರತು ಇನ್ನಾವ ಉಪಾಯವಿದೆ ? ಇರಲಿ ಸದ್ಯಕ್ಕೆ ಇದೆಲ್ಲವನ್ನೂ ಬದಿಗಿಟ್ಟು, ಲೇಖಕರ ಅಭಿಪ್ರಾಯದಂತೆ ಸಹಶಿಕ್ಷಣದ ಮೂಲಕ ಸ್ತ್ರೀ–ಪುರುಷರ ಬಳಕೆಯನ್ನು ತಂದುದೇ ಆದಲ್ಲಿ, ಅವರ ಸಂಯಮಶಕ್ತಿಯ ಮೇಲೆ ಬೀಳುವ ಭಾರ ಹಗುರಾಗುವುದೇ ಅಥವಾ ಮತ್ತಷ್ಟು ಬೆಳೆಯುವುದೆ ? ಇಲ್ಲವೆ ಅತಿಯಾಗಿ ಬೆಳೆದು ಕೊನೆಗೆ ಕೊಳೆಯುವುದೆ ?–ಎಂಬುದನ್ನು ನೋಡುವುದು ಈಗ ಅವಶ್ಯವಿದೆ. ಸ್ತ್ರೀಯರಿಗೆ ಇದೀಗಿನ ಸ್ತ್ರೀಶಿಕ್ಷಣದ ಸಂಬಂಧವು ಸುಮಾರಾಗಿ ವಯಸ್ಸಿನ ಆರು–ಏಳು ವರುಷದಿಂದ ಮೊದಲಾಗಿ ಇಪ್ಪತ್ತು ವರುಷಗಳವರೆಗೆ ಬರುತ್ತಿರುವದರಿಂದ, ಈ ಅವಧಿಯಲ್ಲಿ, ಸ್ತ್ರೀದೇಹ-ಮನಸ್ಸುಗಳಲ್ಲಿ ಉಂಟಾಗುತ್ತಿದ್ದ ಸ್ಥಿತ್ಯಂತರಗಳನ್ನು ನಿರುಕಿಸಿ, ಅವುಗಳ ಕಾರಣಗಳನ್ನು ಗೊತ್ತುಗಂಡು ನಿರ್ಣಯಿಸಿ, ಬಳಿಕ ಈ ಬಳಕೆಯ ಹಿತಾಹಿತವನ್ನು ನಿರ್ಧರಿಸಬೇಕು.

ಈ ಬಗೆಯಿಂದ ನೋಡಿದರೆ, ಸ್ತ್ರೀದೇಹ-ಮನಸ್ಸುಗಳ ರಚನೆ ಅತ್ಯಂತ ಸಂಶ್ಲಿಷ್ಟವಾಗಿದ್ದು, ಸಾಮಾನ್ಯ ಕಣ್ಮನಗಳಿಗೆ ಕಾಣದ ಎಷ್ಟೋ ರಹಸ್ಯಗಳು ಅಲ್ಲಿ ಬಹು ಆಳವಾಗಿ ಹುದುಗಿಕೊಂಡುದು ಕಂಡುಬರುವುದು. ನಿಸರ್ಗವು ಮುಖ್ಯವಾಗಿ ಆ ದೇಹದ ಸಹಾಯದಿಂದಲೆ ತನ್ನ ವಿಕಾಸ ಮತ್ತು ಉತ್ಕ್ರಾಂತಿ ಈ ಎರಡು ಗುರಿಗಳನ್ನೂ ಸಾಧಿಸುತ್ತಿರುವುದರಿಂದ, ಅದಕ್ಕೆ ಉಪಕಾರಿಯಾಗುವಂತೆ ಇಂತಹದೊಂದು ಸಂಶ್ಲಿಷ್ಟಯಂತ್ರವನ್ನು ತಾನು ನಿರ್ಮಿಸಿಕೊಂಡಿದೆ. ಸಾಧಾರಣವಾಗಿ ಆ ಯಂತ್ರದ ಮುಖ್ಯ ಮತ್ತು ಮೊದಲಿನ ಕಾರ್ಯವೆಂದರೆ, '**ಸಂಸ್ಕಾರ ಗ್ರಹಣ**' ಎಂದು ಹೇಳಬೇಕಾಗುವುದು. ಪುರುಷದೇಹದಲ್ಲಿ ಆನುವಂಶಿಕವಾಗಿ ಬೀಜರೂಪದಿಂದಿಳಿದು ಬಂದ ಗುಣ-ಧರ್ಮ-ಸಂಸ್ಕಾರಗಳನ್ನು ಗ್ರಹಿಸಿ, ಅವುಗಳನ್ನು ತನ್ನ ದೇಹದಲ್ಲಿ ಶೇಖರಿಸಿ, ಅದೇ ಬಗೆಯಿಂದ ತನ್ನಲ್ಲಿಯೂ ಆನುವಂಶಿಕವಾಗಿ ಬಂದ ಬೇರೆ ಗುಣ-ಧರ್ಮ-ಸಂಸ್ಕಾರಗಳಿದ್ದುವನ್ನು ಬೇರೆ ಬೇರೆ ರೀತಿಯಲ್ಲಿ ಬೆರಸಿ, ಆ ಬೇರೆ ಬೇರೆ ರೀತಿಗಳ ಬೆರಕೆಗಳಿಂದುಂಟಾದ ಬೇರೆ ಬೇರೆ ಮಾದರಿಗಳನ್ನು ಅಪತ್ಯರೂಪದಿಂದ ಹೊರಕ್ಕೆ ಕಳುಹುವುದು. ಇದು ಸಂಸ್ಕಾರ ಗ್ರಹಣದ ಗುರಿ (ಮತ್ತು ಅರ್ಥ). ಈ ಮಾದರಿಗಳಲ್ಲಿ ಅತ್ಯದ್ಭುತ–ಅಪವಾದಾತ್ಮಕವಾದ ಮಾದರಿಯೇನಾದರೂ ಉಂಟಾಯಿತೇನೆಂಬುದನ್ನು ನೋಡುವುದು ನಿಸರ್ಗದೃಷ್ಟಿ. ಎಂತಲೆ ಈ ಸಂಸ್ಕಾರಗ್ರಹಣದ ಹಸಿವು, ಬೇಡಿಕೆ, ಸ್ತ್ರೀದೇಹದಲ್ಲಿ ನೈಸರ್ಗಿಕವಾಗಿದೆ. ಇನ್ನು ಈ ಕಾರ್ಯಾನುರೂಪವಾದ ಸ್ಥಿತ್ಯಂತರಗಳೇನಾದರೂ ಸಕಾಲಕ್ಕೆ— ಯಾವುದೊಂದು ವಿಶಿಷ್ಟಕಾಲಕ್ಕೆ—ಆಗಬೇಕಾದುದು ಸ್ವಾಭಾವಿಕ, ಆವಶ್ಯಕ! ಈ ಬಗೆಯಿಂದ ಸ್ಥಿತ್ಯಂತರಗಳೇನಾಗುವುವೆಂಬುದನ್ನಿನ್ನು ನೋಡೋಣ: ಚಿಕ್ಕ ವಯಸ್ಸಿನಲ್ಲಿ ಯಾವ ಲಜ್ಜೆ-ಭೀತಿಗಳ ಸಂಪರ್ಕವೂ ಇಲ್ಲದೆ ಗಂಡುಮಕ್ಕಳೊಡನೆ ಜಿಗಿದು ನೆಗೆದು ಆಡುತ್ತಿರುವ ಹೆಣ್ಣಿನಲ್ಲಿ, ಸುಮಾರಾಗಿ ಹತ್ತು-ಹನ್ನೆರಡು ವರುಷ ವಯಸ್ಸಿನ ಹಿಂದುಮುಂದು, ಎಂದೂ ಇಲ್ಲದ ಒಂದು ಬಗೆಯ ಸಂಕೋಚವೃತ್ತಿ ತಲೆಯೆತ್ತುವುದು. ತಾನು ಮೊದಲು ಜೊತೆಯಾಗಿ ಆಟ-ಪಾಟಗಳನ್ನಾಡಿದ ಗಂಡಿನೊಡನೆ, ಒಮ್ಮೆಲೆ ಬೇರೊಂದು ಬಗೆಯಿಂದ ನಡೆದುಕೊಳ್ಳತೊಡಗುವುದು. ಗಂಡಿನ ಸ್ಪರ್ಶದಿಂದ ದೂರವಿರಬೇಕೆಂದು ಹವಣಿಸುವುದು. ಎಲ್ಲಿಯಾದರೂ ತಪ್ಪಿ ಮೈಗೆ ಮೈ ತಾಗಿದರೆ ಮುದುಡಿಕೊಳ್ಳುವುದು. ತಪ್ಪಿಸಿಕೊಳ್ಳಬೇಕೆನ್ನುವುದು. ಯಾವುದನ್ನೂ ಅರಿಯದ ಗಂಡು ತಾನಾಗಿ ಸ್ಪರ್ಶಿಸ ಬಂದರೆ

ಒಮ್ಮೊಮ್ಮೆ ಕಾರಣವಿಲ್ಲದೆ ಕೋಪಿಸಿಕೊಳ್ಳುವುದು. ಈ ಸ್ಥಿತ್ಯಂತರದ ಹಿಂದಡಗಿದ ಗುಟ್ಟು-ಗುರಿಗಳೇನೆಂಬುದನ್ನು ನೋಡಹೋದರೆ "ತನ್ನ ದೇಹವು ಏತಕ್ಕೊ ಸಿದ್ಧವಾಗುವು'ದರಲ್ಲಿದೆ. ಬೇಗನೆ ಏನನ್ನೊ ಬೇಡಲಿದೆ" ಎಂಬ ಬರಲಿದ್ದ ಬೇಡಿಕೆಯ ಒಳಗಣ ಕಣ್ಸನ್ನೆಯ ಅಸ್ಪಷ್ಟ ಅರಿವು, ಇದರೊಡನೆಯೆ 'ಹಾಂ! ಇನ್ನೂ ನಿನ್ನ ದೇಹದಲ್ಲಿ ಆ ಸಿದ್ಧತೆಯ ಪೂರ್ತತೆಯಾಗಿಲ್ಲ' ಎಂದು ನಿಸರ್ಗವು ಕೊಡುತ್ತಿರುವ ಜಾಗ್ರತೆಯಿಂದುಂಟಾದ ಅವ್ಯಕ್ತ ಜಾಗರೂಕತೆ ಇವೆರಡರ ಸಮ್ಮಿಶ್ರ ಭಾವನೆಯೆ ಆ ಸಂಕೋಚವೃತ್ತಿಯ ಹಿಂದಡಗಿ ನಿಂತಿದೆ ಎಂಬುದು ಕಂಡುಬರುವುದು. ಈ ಭಾವನೆ, ಪವಿತ್ರವಾದ ಕೌಮಾರ್ಯರಕ್ಷಣೆಗೆ ಸಾಹಾಯ್ಯಕವಾಗಿಯೆ ಉಂಟಾದುದು. ಇದರ ಮುಂದಿನ ತೀರ ಸಮೀಪದ ಕಾಲವೇ ಸ್ತ್ರೀಯರ ದೇಹ-ಮನಸ್ಸುಗಳಲ್ಲಿ ಹೊಸದೊಂದು ಚೈತನ್ಯವನ್ನೆ ತುಂಬಿ ಕುಲುಕಿಸುವ ಆರ್ತವ ಕಾಲ 'ಇಗೊ ನೋಡಿ! ಈ ದೇಹವು ಸಂಸ್ಕಾರಗ್ರಹಣಕ್ಕೆ ಸಿದ್ಧವಾಯಿತು?' ಎಂದು ನಿಸರ್ಗವು ಸೂಚಿಸುತ್ತಿರುವ ಕಾಲ. ಈ ಕಾಲದ ಅವಳ ದೇಹ-ಮನಸ್ಸುಗಳ ಸ್ಥಿತ್ಯಂತರವನ್ನು ನೋಡಹೋದರೆ, ಎಲ್ಲವೂ ಬೇರೆಯಾದುದನ್ನು ಕಾಣುವೆವು. ಅಲ್ಲಿ ನಾನಾ ಬಗೆಯ ಶೃಂಗಾರ ಚೇಷ್ಟೆಗಳ ಬೆಡಗುಗಳು ಮೈದೋರತೊಡಗುವುವು. 'ಲಜ್ಜೆ' ಎಂಬ ಹೊಸದೊಂದು ಮಿಶ್ರಭಾವನೆಯುಂಟಾಗಿ ಆ ಶೃಂಗಾರದಲ್ಲಿ ಬೆರತುಕೊಂಡು ಬಿಡುವುದು. ಮೈಯನ್ನೆಲ್ಲ ಒಂದು ಬಗೆಯ ಮದಾಲಸತೆ ಆವರಿಸಿಕೊಳ್ಳುವುದು. ಅದರ ಮೂಲಕ ಯಾವ ವಿಷಯಕ್ಕೂ ಜಾಗೃತಿಯಿಲ್ಲ, ಮನೆಗೆಲಸದ ಅರಿವಿಲ್ಲ, ಹಿರಿಯರ ಹೇಳಿಕೆಯ ಪರಿವೆ ಇಲ್ಲ. ಆಗಾಗ ಎಡಹುತ್ತ ನಡೆಯುವುದು; ಕೈಯ್ಯಲ್ಲಿದ್ದುದನ್ನು ನೆನಪಿಲ್ಲದಂತೆ ಚೆಲ್ಲುವುದು; ಒಳಗಿನಿಂದ ಯಾವ ಸೂಚನೆಗಳೊ ಬರುತ್ತಿರುವುದರಿಂದ ಅದನ್ನು ನಿರುಕಿಸಲು ಯಾವಾಗಲೂ ಒಂದು ಬಗೆಯ ಒಳನೋಟ! ಇಂತಹ ಕಾಲಕ್ಕೆ ಅವಳು ಯಾವನೊಬ್ಬ ಯುವಕನನ್ನು ಸಹಜವಾಗಿ ನೋಡುತ್ತಿದ್ದಾಗ- 'ಏನೆ, ಅವನನ್ನು ಬಹಳ ನಿಟ್ಟಿಸುತ್ತಿರುವೆ...ಚೆನ್ನಾಗಿದ್ದಾನಲ್ಲವೆ?' ಎಂದಾಗಲಿ, 'ಅಕೊ; ನಿಮ್ಮ ಯಜಮಾನರು ಬಂದಿದ್ದಾರೆ ನೋಡು!' ಎಂದಾಗಲಿ ಗೆಳತಿಯರು ಗೇಲಿ ಮಾಡಿದರೆ, ತತ್ಕಾಲಕ್ಕೆ ದೇಹದಲ್ಲಿ ಏನೋ ಒಂದು ಬಗೆಯ ಪ್ರಕ್ಷುಬ್ಧತೆಯುಂಟಾಗಿ, ಅದರ ಹೊರಗಣ ಗುರುತು ಎಂದು ಮೊಗವು ಕೆಂಪೇರುವುದು. ಅದರೊಡನೆಯೆ ಲಜ್ಜೆಯು ಕೆಂಪಡರಿದ ಮೊಗವನ್ನು— ಎಂದರೆ ಒಳಗಿನ ಪ್ರಕ್ಷುಬ್ಧತೆಯನ್ನು— ಕಾಣದಂತೆ ತಿರುಹಲು— ಮುಚ್ಚಿಡಲು—ಕಲಿಸುವುದು; ಮೈ-ದನಿಗಳನ್ನು ನಡುಗಿಸುವುದು; ಒಮ್ಮೊಮ್ಮೆ ಕೃತಕಕೋಪದಲ್ಲಿ ಆ ಪ್ರಕ್ಷುಬ್ಧತೆಯನ್ನು ಅಡಗಿಸಲು ಪ್ರಯತ್ನಿಸುವುದು. ಇಷ್ಟೊಂದು ಮಿಶ್ರಭಾವನೆಗಳಿಂದೊಡಗೂಡಿದ ಭಂಗಿಗಳಿಗೇ ನಾವು ಶೃಂಗಾರಚೇಷ್ಟೆಗಳೆಂದು ಕರೆಯುತ್ತಿದ್ದುದು. ಸರಿ, ಇದೆಲ್ಲವನ್ನು ಎಲ್ಲರೂ ನಿತ್ಯದಲ್ಲಿ ಕಾಣುತ್ತಿದ್ದರೂ, ಇವುಗಳ ಹಿಂದೆ ನಿಂತು ಇಷ್ಟೆಲ್ಲವನ್ನೂ ಮಾಡಿಸುವ ಪ್ರೇರಕಶಕ್ತಿ ಯಾವುದೆಂಬುದನ್ನು ನೋಡುವವರೆಷ್ಟು ಜನ? ಇಷ್ಟೆಲ್ಲಕ್ಕೆ ಕಾರಣವಾಗಿ ತಾನು ಅಡಗಿ ನಿಂತುದೆಂದರೆ ಆ 'ಸಂಸ್ಕಾರಗ್ರಹಣ'ದ ಆಶೆ; ಏನನ್ನೋ ಬೇಡುತ್ತಿರುವ ಲಾಲಸೆ! ಸಂಸ್ಕಾರಗಳನ್ನು ಕೊಡಬಲ್ಲ ಶಕ್ತಿಯ ಸಾನ್ನಿಧ್ಯದಿಂದಲೊ, ನೆನಹಿನಿಂದಲೊ, ಒಮ್ಮೆಲೆ ಆ ಲಾಲಸೆ ಚೇತರಿಸಿಕೊಂಡು, ಅದರ ಬಹಿರಂಗದ ತರಂಗಗಳೇ ಸಿಂಗರದ ಬಗೆಬಗೆಯ ಭಾವ-ಭಂಗಿಗಳಾಗಿ ಪರಿಣಮಿಸುವುವ. ಇನ್ನು ಲಾಲಸೆಯೆ ಇಂತಹ ಭಾವ-ಭಂಗಿಗಳಿಗೆ ಮೂಲವೆಂಬುದಕ್ಕೆ ಆಧಾರವೇನೆಂದು ನಿರೀಕ್ಷಿಸಹೋದರೆ, ಒಂದು ವಿಶಿಷ್ಟಕಾಲದ ವರೆಗೆ ಈ ಭಾವಗಳಿರುವುದಿಲ್ಲ; ಒಂದು ವಿಶಿಷ್ಟಕಾಲ ಕಳೆದ ಬಳಿಕ ಇವು ಉಳಿಯುವುದೂ ಇಲ್ಲ. ಏಕೆಂದರೆ, ಕೆಲಕಾಲದವರೆಗೆ (ಬಾಲ್ಯದಲ್ಲಿ) ಆ ಲಾಲಸೆ ಹುಟ್ಟದಿದ್ದುದು, ಕೆಲಕಾಲದ ನಂತರ ಅದರ ಪೂರಯಿಕೆಯಿಂದ ಅಳಿದು ಹೋದುದು ಇವೇ ಇದಕ್ಕೆ ಕಾರಣ. ಇನ್ನೊಂದು ನೋಡತಕ್ಕ ವಿಷಯವೆಂದರೆ, ಸಾಮಾನ್ಯವಾಗಿ ನಮ್ಮ ಹೊಟ್ಟೆಯ ಹಸಿವಿನಲ್ಲೂ ಈ ಲಾಲಸೆಯಲ್ಲೂ ಕೆಲವಂಶದಿಂದ ಸಾಮ್ಯವಿದೆ. ಹಸಿವಿನಲ್ಲೂ ಪ್ರಕ್ಷುಬ್ಧತೆಯುಂಟಾಗುವುದು; ಆ ಉಷ್ಣತೆಯ ಮೂಲಕ ಮುಖವೂ ಕೆಂಪೇರುವುದು. ಸಂಯಮಶಕ್ತಿ ಸಡಿಲಾಗಿ ಕೋಪವು ಬಹು ಬೇಗ ಬರುವುದು. ನವಯುವತಿಯರಲ್ಲಿಯ ಈ ಸಂಯಮಶಕ್ತಿಯ ಅಭಾವದಮೂಲಕವೆ ಚಂಡಿ (ಅತ್ಯಂತ ಕೋಪಿಷ್ಠಳು) ಎಂತಲೂ, ಅಲಸತೆಯ ಮೂಲಕ ಪ್ರಮದೆ ಎಂತಲೂ ನಮ್ಮಲ್ಲಿಯ ಮೊದಲಿಗರು ಯುವತಿಯರನ್ನು ಸಂಬೋಧಿಸುತ್ತಿದ್ದುದು. ಇನ್ನು ಈ ಹಸಿವು ಉಷ್ಣತೆಯನ್ನುಂಟುಮಾಡಿ ಮುಖಕ್ಕೆ ಕೆಂಬಣ್ಣವನ್ನು ಬಳಿದರೆ, ಅದರ ಅಸ್ಪಷ್ಟ ಅರಿವಿನಿಂದುಂಟಾದ ಭೀತಿ— ಆ ಹಸಿವು ಜನರಲ್ಲಿ ಪ್ರಕಟವಾದೀತೆಂಬ ಭೀತಿ— ಶೃಂಗಾರದೊಡನೆ ಬೆರತು, ಲಜ್ಜೆಯ ರೂಪವನ್ನು ತಾಳಿ, ಆ ಪ್ರಕ್ಷುಬ್ಧತೆಯನ್ನು ಮುಚ್ಚಿಡಲು ಹವಣಿಸುವುದು. ಇದು ಮೊದ-ಮೊದಲು ದೇಹದಲ್ಲಿ ಮೂಡಿಯೂ ಮನಸ್ಸಿಗೆ ಸ್ಪಷ್ಟವಾಗಿ ಮುಟ್ಟದಿರುವಾಗ ಅವ್ಯಕ್ತವಾಗಿದ್ದು, ಬಗೆಬಗೆಯ ಬೆಡಗುಗಳನ್ನು ತೋರುತ್ತ, ಮುಂದೆ ಮನಸ್ಸಿಗೆ ಮುಟ್ಟಿದೊಡನೆ ಕಾಮದ ಸ್ಪಷ್ಟರೂಪವನ್ನು ತಾಳಿ, ತನ್ನ ಬೇಡಿಕೆಯೇನೆಂಬುದನ್ನರಿತು ಉಗ್ರವಾಗುವುದು. ತನ್ನ ಹಸಿವನ್ನು ಹಿಂಗಿಸಿಕೊಳ್ಳಲು ಹವಣಿಸುವುದು. ಹೀಗೆಯೆ ಸ್ತ್ರೀ ದೇಹ-ಮನಸ್ಸುಗಳಲ್ಲಿ ಉಂಟಾಗುವ ಲಾಲಸೆಯಿಂದ ಭಿನ್ನವಾದ ಇನ್ನೊಂದು ಲಾಲಸೆಯು, ಪುರುಷದೇಹದಲ್ಲಿಯೂ ತುಸು ಹೆಚ್ಚು ವಯಸ್ಸಿಗೆ ಉಂಟಾಗುತ್ತಿದ್ದು, ಆ ಕಾಲವು ಸುಮಾರಾಗಿ ೧೮-೨೦ ವರುಷಗಳ ವಯಸ್ಸಿಗೆ ಎನ್ನಬಹುದು. ಸ್ತ್ರೀದೇಹದಲ್ಲಿ ಸಂಸ್ಕಾರಗ್ರಹಣದ ಹಸಿವು ಹುಟ್ಟುವಂತೆ ಪುರುಷದೇಹದಲ್ಲಿ ಸಂಸ್ಕಾರದಾನದ ಹಂಬಲವು ನೈಸರ್ಗಿಕವಾಗಿಯೆ ಹುಟ್ಟುವುದು. ಈ ನಿಸರ್ಗರಚನೆ ಬಹು ಸೋಜಿಗವಾದುದು; ತುಂಬ ಕುಶಲತೆಯದು. ಒಂದು ತನ್ನಲ್ಲಿ ಇಲ್ಲದುದನ್ನು ಬಯಸುತ್ತದೆ. ಇನ್ನೊಂದು ತನ್ನಲ್ಲಿ ಇದ್ದುದನ್ನು ಕೊಡಲು ಹಾತೊರೆಯುತ್ತದೆ. ಬೇಡಿಕೆ ಮತ್ತು ಗ್ರಹಣ ಇವುಗಳಲ್ಲಿ ಲೀನತೆ ಇದೆ. ದಾನೇಚ್ಛೆ

ಮತ್ತು ದಾನದಲ್ಲಿ ಆಸಕ್ತಿ ಇದೆ. ಒಂದು ಮೃದು ತತ್ತ್ವಕ್ಕೆ ಸಂಬಂಧಿಸಿದ ಭೀತಿ ಮೂಲಕವಾದ ಲಜ್ಜೆಯಿಂದ ಬೇಡಲು ಬೆದರುತ್ತದೆ; ಇನ್ನೊಂದು ಕಠಿನ ತತ್ತ್ವಕ್ಕೆ ಸಂಬಂಧಿಸಿದ ಧೈರ್ಯದ ಮೂಲಕ ಲಜ್ಜೆ-ದೊರೆದು ಕೊಡಲು ಹಾತೊರೆಯುತ್ತಿದೆ. ಇಂತಹ ಲಾಲಸೆಯ ತರಂಗಗಳು ಯಾವುದೊಂದು ವಿಶಿಷ್ಟವ್ಯಕ್ತಿಯ ವಿಷಯದಲ್ಲಿಯೆ ನೈಸರ್ಗಿಕವಾಗಿ ಕಂಡುಬರುತ್ತಿದ್ದರೆ ಯಾವ ಹಾನಿಯೂ ಇದ್ದಿರಲಿಲ್ಲ. ಆನುವಂಶಿಕ ಸಂಸ್ಕಾರಗಳಾಗಿ ಬಂದ ಪೂಜ್ಯತೆಗೆ ಇಲ್ಲವೆ ವಾತ್ಸಲ್ಯಕ್ಕೆ ಸಂಬಂಧಿಸಿದ ತಂದೆ, ತಾಯಿ, ಅಣ್ಣ-ತಮ್ಮಂದಿರು, ಅಕ್ಕ-ತಂಗಿಯರು ಮುಂತಾದ ಬಾಂಧವರನ್ನುಳಿದು, ಇನ್ನಾವ ತರುಣವ್ಯಕ್ತಿಗಳ ವಿಷಯದಲ್ಲೂ ಈ ಭಾವನೆಗಳಿಗೆ ತಡೆಯಿಲ್ಲ; ಎಂತಲೆ ಇಂತಹ ಕಾಲದಲ್ಲಿ ತತ್ಕಾಲಕ್ಕೆ ಸಂಸ್ಕಾರಗ್ರಹಣಕ್ಕಾಗಿ ಯಾವುದೇ ಒಂದು ವಿಶಿಷ್ಟವ್ಯಕ್ತಿಯನ್ನೆ ಒಂದನ್ನೊಂದಕ್ಕೆ ಕೊಟ್ಟುಬಿಟ್ಟರೆ, ಆ ಲಾಲಸೆಯ ಆವೇಗವು ಕಡಿಮೆಯಾಗಿ, ಅದು ಒಂದೇ ಸ್ಥಳದಲ್ಲಿ ಸ್ಥಿತವಾಗುವುದು. ಮೇಲೆ ಹೇಳಿದಂತೆ, ಸ್ತ್ರೀ-ಪುರುಷರ ದೇಹ ಮತ್ತು ಮನಸ್ಸುಗಳು, ಸಂಸ್ಕಾರಗ್ರಹಣ ಮತ್ತು ದಾನಕ್ಕಾಗಿ ಹಸಿದು ಹಂಬಲಿಸುವಾಗ, ಸಹಶಿಕ್ಷಣದ ಮೂಲಕ ಪರಸ್ಪರರ ಸಾಮೀಪ್ಯವನ್ನೂ, 'ಆಟ-ಪಾಟಗಳ' ಮೂಲಕ ಸಲುಗೆಯ ಬಳಕೆಯನ್ನೂ, 'ಬಿಡುವಿನ' ವೇಳೆಯಲ್ಲಿ 'ನಿರಾತಂಕ'ವಾದ ಏಕಾಂತದ ಅವಸರಗಳನ್ನೂ ತಂದುಕೊಡಬೇಕೆಂದು ಲೇಖಕರು ಹಟದಿಂದ ಹೇಳುತ್ತಿದ್ದಾರೆ. ಅಲ್ಲದೆ, ಅದು ಸಂಯಮಶಕ್ತಿಯ ಮೇಲೆ ಬೀಳುವ ಅತಿಯಾದ ಭಾರವನ್ನೂ ಹಗುರಾಗಿಸಿ, ನೀತಿಮಾರ್ಗದಲ್ಲಿ ನಡೆಯಿಸುವುದೆಂಬ ವಿಚಿತ್ರ ವಿಚಾರಸರಣಿಯನ್ನೂ ತೋರಿಸುತ್ತಿದ್ದಾರೆ. ಇಂತಹ ಪ್ರಖರ ಪ್ರಕ್ಷುಬ್ಧತೆಯ ಕಾಲಕ್ಕೆ ಇದೆಲ್ಲವನ್ನೂ ಮಾಡಲು 'ಹಸಿದ ಹೊಟ್ಟೆ ಹೊಲೆಯನ ಮನೆ ಹೊಗಿಸಿತು.' ಎಂಬ ನಾಣ್ನುಡಿಯನ್ನು ನಿಜವಾಗಿಸಲಿಕ್ಕಿಲ್ಲವೆ — ಎಂಬ ಭೀತಿ ನಮಗಿದೆ. ನಾನು ಮೇಲೆ ಹೇಳಿದ ಋತುಕಾಲದ ಸ್ತ್ರೀ ಮನೋಧರ್ಮದ ಅವಸ್ಥೆಯ ವಿಷಯದಲ್ಲಿ, ಡಾ. ಕಿಶ್ ಎಂಬವನು "ಈ ಕಾಲದಲ್ಲಿ ಹೆಂಗುಸಿನ ದೇಹದಲ್ಲಿಯ ಜ್ಞಾನತಂತುಜಾಲವೆಲ್ಲ ಸರ್ವಸಾಧಾರಣವಾಗಿ ಪ್ರಕ್ಷುಬ್ಧವಾಗುತ್ತಿದ್ದು, ಅವಳ ಒಲವು ಹೆಚ್ಚಾಗಿ ಬೇದಾಸೀಸ್ವದ ಕಡೆಗೇ ಇರುತ್ತದೆ. ಮತ್ತು ಇದೇ ವೇಳೆಯಲ್ಲಿಯೆ ಶೃಂಗಾರಚೇಷ್ಟೆಯ ಅಸ್ಪಷ್ಟಜಾಗೃತಿಯೂ ಅವಳ ದೇಹದಲ್ಲಿ ಸಂಚರಿಸತೊಡಗುವುದು. (Teh Sexual Life of Woman P. 45 by Dr. E. H. Kisch, M. D. William Heinemann. Ltd. 1926)" ಎಂದು ಹೇಳುತ್ತಾನೆ. ಇದೇ



ಕಾಲದ ಸ್ಥಿತಿಯನ್ನು ವರ್ಣಿಸುವಾಗ ಹೆವ್‌ಲಾಕ್ ಎಲಿಸ್‌ನೂ "ಸಂಸ್ಕಾರಗ್ರಹಣಮಾಡುವ ಅವಳ ದೇಹಧರ್ಮ, ಆ ದೇಹಧರ್ಮಕಾರಣವಾದ ಅವಳ ಮನೋಧರ್ಮದ ಸೂಚಕತೆ ಇವುಗಳ ಮೂಲಕ ಆತ್ಮನಿಯಂತ್ರಣಕ್ಕೆ ಅವಶ್ಯವಿದ್ದ ನಿಗ್ರಹಶಕ್ತಿಯು ಆ ಕಾಲಕ್ಕೆ ಕಡಿಮೆಯಾಗುತ್ತದೆ (Man and Woman P. 344) ಎಂದು ಹೇಳಿದ್ದಾನೆ. ಮತ್ತೆ ಅದೇ ಶಾಸ್ತ್ರಜ್ಞನು ಕಾಮವಾಸನೆಯ ವಿಷಯದಲ್ಲಿ ಬರೆಯುವಾಗ "ರಜೋದರ್ಶನದ ಪೂರ್ವದಲ್ಲಿಯೂ ಅನಂತರವೂ, ಕೆಲಕಾಲದವರೆಗೆ ಸ್ತ್ರೀಯರ ರತಿಸುಖದ ಆಶೆಯು ಅತ್ಯಂತ ಪ್ರಬಲವಿರುತ್ತಿದ್ದು, ಆತ್ಮನಿಯಂತ್ರಣಕ್ಕೆ ಆವಶ್ಯಕವಾದ ನಿಗ್ರಹಶಕ್ತಿಯ ಅಭಾವದ ಮೂಲಕ, ಆ ಕಾಲಕ್ಕೆ ಸಂಧಿ ದೊರೆತರೆ, ಇಲ್ಲವೆ ಯಾರಾದರೂ ಆ ಸಂಧಿಯನ್ನು ತಂದುಕೊಟ್ಟರೆ, ಕೌಮಾರ್ಯದಲ್ಲಿರುವ ಹುಡುಗಿಯರ ನಡತೆ ಅಡ್ಡದಾರಿಯಲ್ಲಿ ಹೋಗುವ ಸಂಭವವೆ ಹೆಚ್ಚು' ಎಂದು ಹೇಳಿ, ಮುಂದೆ "ವಿದ್ಯಾರ್ಥಿದಶೆಯಲ್ಲಿರುವಾಗ ಹೀಗೆ ಸಂಭವಿಸಿದ ಅನೇಕ ಉದಾಹರಣೆಗಳು ಕಂಡುಬಂದಿವೆ' (Studies in the Psychology of Sex Vol. I. P.103) ಎಂದೂ ಬರೆಯುತ್ತಾನೆ. ಯಾವುದೊಂದು ಸಮಾಜದ ನೀತಿಮತ್ತೆಯನ್ನು ಪರೀಕ್ಷಿಸುವ ಹಲವು ಮಾರ್ಗಗಳಲ್ಲಿ, ಲಗ್ನಬಂಧನವಿಲ್ಲದೆ ಹುಟ್ಟಿ ಬೆಳೆಯುವ ಪ್ರಜರ ಸಂಖ್ಯೆ ಒಂದಾಗಿದೆ. ಈ ಸಂಖ್ಯೆ ನಮ್ಮ ಹಿಂದೀಸಮಾಜಕ್ಕಿಂತ ಪಾಶ್ಚಾತ್ಯ ಸಮಾಜದಲ್ಲಿ ಹೆಚ್ಚಾಗಿದೆ. ಅದರಲ್ಲಿಯೂ ಶಿಕ್ಷಣಸಂಪರ್ಕವಿಲ್ಲದ ಹಳ್ಳಿಗಳಿಗಿಂತ ಶಿಕ್ಷಣ-ಸಂಸ್ಕೃತಿಗಳಿಗೆ ತವರುಮನೆಯಾಗಿದ್ದ ಪಟ್ಟಣಗಳಲ್ಲಿಯೆ ಅದು ಹೆಚ್ಚಾಗಿ ಕಂಡುಬಂದಿದೆ. ಕೆಲವೊಂದು ಭಾಗದ ಸಮಾಜದ ವಿಷಯದಲ್ಲಿಯಂತೂ ಹದಿನಾರು ವರುಷಗಳನಂತರ ಯಾವ ಹುಡುಗಿಯೂ ಕುಮರಿಯಾಗಿ ಉಳಿಯುವುದಿಲ್ಲವೆಂದು ಹೇಳುತ್ತಾರೆ. ಇದೆಲ್ಲವನ್ನು ನೋಡಿಯೆ **ಜಾರ್ಜ್ ಮೆರಿಡಿಥ್** ಎಂಬವನು "ಎಷ್ಟೋ ದೈವವತಿಯರಾದ ಕುಮಾರಿಕೆಯರ ಕೌಮಾರ್ಯರಕ್ಷಣವು ಆಗುತ್ತಿದ್ದುದು ಅವರಿಗೆ ಸಂಧಿದೊರೆಯದೆ ಇದ್ದುದಕ್ಕೆ (Quoted in Prostitution in Europe. by A. Flexner P. 71; the century Co. Newyork 1919)" ಎಂದು ಚುಚ್ಚುಮಾತಿನಲ್ಲಿ ಹೇಳಿದ್ದಾನೆ. ಹೀಗೆ ಅಲ್ಲಿಯ ಶಾಸ್ತ್ರಜ್ಞರೆಲ್ಲ ಸ್ತ್ರೀಶಿಕ್ಷಣ, ಸಹಶಿಕ್ಷಣ, ಸ್ತ್ರೀಸ್ವಾತಂತ್ರ್ಯ ಇವುಗಳಿಂದ ಸಮಾಜದ ಮೇಲಾಗುತ್ತಿರುವ ಘಾತುಕಪರಿಣಾಮಗಳನ್ನು ಕಂಡುಂಡು ಕೂಗಿಕೊಳ್ಳುತ್ತಿರುವಾಗ, ಇದಕ್ಕಿನ್ನು ಹೇಗೆ ತಡೆಹಾಕಬೇಕೆಂದು ಯೋಚಿಸುತ್ತಿರುವಾಗ, ನಾವು ಬಳಿತವಾಗಿದ್ದ ನಮ್ಮದನ್ನು ಬಿಸುಟಿ, ಅವೇ

ಕೆಲವು ಘಾತುಕ ಪ್ರಯೋಗಗಳನ್ನು ಮಾಡುತ್ತಿದ್ದೇವೆ; ಮತ್ತೆ ಕೆಲವನ್ನು ಮಾಡಬೇಕೆನ್ನುತ್ತಿದ್ದೇವೆ. ಈಗ ನಾವು ಸ್ತ್ರೀಜಾತಿಗೆ ತೋರಿಸುತ್ತಿರುವ ಸಹಾನುಭೂತಿ, ದಯಾರ್ದ್ರತೆ ಇವು ನಮ್ಮ ಮಹಾ ಔದಾರ್ಯದ ಗುಣಗಳೆಂದು ನಮ್ಮಲ್ಲಿಯ ಜಾಗೃತ ಮನಸ್ಸು ಅದೆಷ್ಟು ಹೆಮ್ಮೆಪಟ್ಟುಕೊಳ್ಳುತ್ತಿದ್ದರೂ, ಇವುಗಳ ಹಿಂದಡಗಿದ ಸುಪ್ತಚಿತ್ತದ ರಂಗಮಂಟಪದಲ್ಲಿ, ಅದಾವ ಪ್ರೇರಕವಾಸನೆಗಳು ತಾಂಡವವನ್ನಾರಂಭಿಸಿವೆ ಎಂಬುದನ್ನು ಮನೋವಿಶ್ಲೇಷಣದ ದೃಷ್ಟಿಯಿಂದ ನೋಡುವುದು ಆ ಶಾಸ್ತ್ರಜ್ಞರ ಕೆಲಸವಾಗಿದೆ.

ಇನ್ನು ಅಮೇರಿಕೆಯಲ್ಲಿಯ ಶಾಲೆ-ಕಾಲೇಜುಗಳಲ್ಲಿ ನಡೆಯುತ್ತಿರುವ ಅನಾಚಾರಗಳ ಬಗೆಗೆ ಲಿಂಡ್‌ಸೆ ಅವರ ಅಭಿಪ್ರಾಯವನ್ನು ಖಂಡಿಸುವಾಗ "ಯಾವುದೇ ಜನತೆಯ ಆರೋಗ್ಯದ ವಿಷಯದಲ್ಲಿ, ಅವರಲ್ಲಿರುವ ಆಸ್ಪತ್ರೆಗಳ ಸಂಖ್ಯೆಯ ಮೇಲಿಂದಲೂ, ನೀತಿಯ ವಿಷಯವಾಗಿ ಸೆರೆಮನೆಗಳ ಮೇಲಿಂದಲೂ ಅಭಿಪ್ರಾಯ ಮಾಡಿಕೊಂಡಂತಹ ತಪ್ಪನ್ನು ನಾವು ಈ ಸಂದರ್ಭದಲ್ಲಿ ಮಾಡಕೂಡದು!" ಏಕೆಂದರೆ, "ನ್ಯಾಯಾಧೀಶ ಲಿಂಡ್‌ಸೆ ಅವರ ಅನುಭವವು ಕೋರ್ಟಿನದು; ಅಲ್ಲಿ ಅವರ ಕಣ್ಣಿಗೆ ಬೀಳುವವರೆಲ್ಲ ದೋಷಿಗಳೆ. ತಮ್ಮ ಮನೆಯ ಹೊಲಸನ್ನೆಲ್ಲ ಬಹಿರಂಗವಾಗಿ ತೊಳೆಯಬೇಕೆನ್ನುವವರು ಮಾತ್ರ ಕೋರ್ಟಿಗೆ ಹೋಗುವವರು" (ತೊಳೆಯಬಾರದೆನ್ನುವವರು ಆ ಹೊಲಸನ್ನು ಮನೆಯಲ್ಲಿಯೆ ಮುಚ್ಚಿಟ್ಟುಕೊಳ್ಳುವರೊ? ಅಂತೂ 'ಹೊಲಸಿದೆ'ಯೆಂದಂತಾಯಿತು.) ಎಂದು ಹೇಳುತ್ತಾರೆ, ನಾವು ಇಲ್ಲಿ ಬರೆಹಗಾರರನ್ನೇ ಕೇಳುತ್ತೇವೆ: ಹಾಗಾದರೆ, ಯಾವುದೊಂದು ಜನಾಂಗದ ಆರೋಗ್ಯವನ್ನಾಗಲಿ, ನೀತಿಮತ್ತೆಯನ್ನಾಗಲಿ ಪರೀಕ್ಷಿಸುವ ಮಾರ್ಗವು ಮತ್ತಾವುದಿದೆ? ಆರೋಗ್ಯನಿರೀಕ್ಷಣೆಗಾಗಿ ಆಸ್ಪತ್ರೆಗಳನ್ನು ಬಿಟ್ಟು ಅನ್ನಛತ್ರಗಳಿಗೂ, ನೀತಿಮತ್ತೆಯ ನಿರೀಕ್ಷಣೆಗಾಗಿ ಸೆರೆಮನೆಗಳಲ್ಲದೆ ಅರಮನೆಗಳಿಗೂ ಹೋಗಬೇಕೆ? ಸಂಶೋಧಕರು ಯಾವುದೊಂದು ದೇಶದ ಆರೋಗ್ಯ ವಿಷಯದ ನಿರೀಕ್ಷಣೆಯನ್ನು ನಡೆಯಿಸಿದಾಗ, ಪ್ರತಿಯೊಂದು ಆಸ್ಪತ್ರೆಯಲ್ಲಿಯೂ ಉಪಚಾರ ಹೊಂದುತ್ತಿರುವ ರೋಗಿಗಳ ನೂರರಲ್ಲಿ ನಲವತ್ತಕ್ಕೆ ಮಿಕ್ಕಿದ ರೋಗಗಳು ಪ್ರಮೇಹ, ಇಲ್ಲವೆ ಉಪದಂಶಕ್ಕೆ ಸಂಬಂಧಿಸಿದುವಾದರೆ, ಆ ಸಂಶೋಧಕರು ಆ ದೇಶದಲ್ಲಿಯ ಸ್ತ್ರೀ-ಪುರುಷರ ನೈತಿಕ ಅಧಃಪಾತವೆ ಆ ರೋಗಗಳಿಗೆ ಕಾರಣವೆಂದು ಹೇಳದೆ 'ಈ ರೋಗಗಳಿಗೆ ಕಮ್ಮನೆಗಡಿಗಳು ಕಾರಣ' ಎಂದು ಹೇಳಬೇಕೆ? ಹಾಗೆಯೆ ಸೆರೆಮನೆಗಳನ್ನು ನಿರೀಕ್ಷಿಸುವಾಗ, ಅಲ್ಲಿದ್ದ ಅಪರಾಧಿಗಳಲ್ಲಿ ಸುಮಾರು ಅರ್ಧಕ್ಕಿಂತ ಹೆಚ್ಚಾದವರ ಅಪರಾಧವು ಯಾವುದೊಂದು ವಿಶಿಷ್ಟ ಅಪರಾಧವೆಂದು ಕಂಡು ಬಂದರೆ 'ಈ ದೇಶದಲ್ಲಿ ಇಂತಹದೊಂದು ಅಪರಾಧವು ಹೆಚ್ಚುತ್ತಿದೆ' ಎಂದು ಹೇಳದೆ ಆ ಅಪರಾಧಿಗಳೆಲ್ಲ ದಾನ-ಧರ್ಮ ಮಾಡಿದ ಅಪರಾಧಕ್ಕಾಗಿ ಸೆರೆಮನೆಯನ್ನು ಸೇರಿರುವರೆಂದು ಭಾವಿಸಬೇಕೆ? ಕೋರ್ಟಿನೆದುರು ಬರುತ್ತಿರುವ ಹೊಲಸುಗಳಲ್ಲಿ ನೂರರಲ್ಲಿ ಸುಮಾರು ನಲವತ್ತೆಂಟು ಹೊಲಸುಗಳು ಸ್ತ್ರೀ-ಪುರುಷ ಸಂಬಂಧದ ಹೊಲಸುಗಳಾಗಿದ್ದು, ಅವೆಲ್ಲವುಗಳ ಸೂತ್ರಗಳ ಒಂದು ತುದಿಯು ಕೋರ್ಟಿಗೆ ಬಂದು, ಇನ್ನೊಂದು ತುದಿಯು ನೇರವಾಗಿ ಸಹಶಿಕ್ಷಣ ಸಂಸ್ಥೆಗಳಲ್ಲಿ ಸೇರಿ, ಅಲ್ಲಿಂದಲೆ ಹೊರಟಿದ್ದಾದಲ್ಲಿ, ಲಿಂಡ್‌ಸೆ ಅವರು ಆ ಬಗೆಗೆ ಏನನ್ನು ಊಹಿಸಬೇಕಾಗಿತ್ತೆಂಬುದನ್ನು ಬರೆಹಗಾರರೆ ಅವರಿಗೆ ತಿಳುಹಿಸಬೇಕಿತ್ತು. ಮನೆಯ ಹೊಲಸನ್ನು ಕೋರ್ಟಿನಲ್ಲಿ ತೊಳೆಯುವ ಉತ್ಸುಕತೆ ಇದೆಯೆ ಜನಕ್ಕೆ? ಕೋರ್ಟು ಇದು ಭಾಗೀರಥಿಯೆ? ಮನೆಯ ಹೊಲಸನ್ನು ಕೋರ್ಟಿನೆದುರು ತಂದು, ಮಾನವಂತರು ತಮ್ಮ ಮಾನಹಾನಿಗೆ ತಲೆಯೊಡ್ಡಬೇಕಾದರೆ, ಅದೆಷ್ಟು ಅವರ ಹೊಟ್ಟೆ ಉರಿದೆದ್ದಿರಬೇಕು, ಅದೆಷ್ಟು ಅಗತಿಕರಾಗಿರಬೇಕು—ಎಂಬುದನ್ನಷ್ಟು ಊಹಿಸಬಾರದಿತ್ತೆ? ಇದರ ಮುಂದೆ ಯಾರೋ ಒಬ್ಬರು, ಯಾರೋ ಒಬ್ಬ ಅಧ್ಯಾಪಕರನ್ನು 'ನಿಮಗೆ ಸಹಶಿಕ್ಷಣ ಸೇರುವುದೆ?' ಎಂದು ಕೇಳಿದರಂತೆ. ಅದಕ್ಕವರು ಪ್ರತ್ಯುತ್ತರವಾಗಿ "ನಿಮಗೆ ಊಟವು ಸೇರುವುದೇನು? ಅಥವಾ ನಾವು ಎರಡೂ ಕಾಲಿಗೆ ಮೊಜ್ಜೆಯನ್ನು ಏಕೆ ಹಾಕಬೇಕು?" ಎಂದು ತಿರುಗಿ ಕೇಳಿದರಂತೆ .. ಎಂದು ಚಿಕ್ಕ ಕತೆಯೊಂದನ್ನು ಹೇಳಿದ್ದಾರೆ. ಆದರೆ, ನಾನಿಲ್ಲಿ ಬರೆಹಗಾರರಿಗೆ ಒಂದು ಮಾತನ್ನು ವಿನಯದಿಂದ ಸೂಚಿಸಬೇಕೆನ್ನುತ್ತೇನೆ. "ನೀವು ಮೊಜ್ಜೆಯ ಉದಾಹರಣೆಯನ್ನು ಹೇಳಿದಂತೆ ಬಲಗಾಲ ಮೊಜ್ಜೆ ಬಲಗಾಲಿಗೆ, ಎಡಗಾಲ ಮೊಜ್ಜೆ ಎಡಗಾಲಿಗೆ ಹಾಕಲು ಹೇಳಿದ್ದರೆ ಹಾನಿಯಿರಲಿಲ್ಲ. ನಾವೂ ಅದನ್ನು ತುಸುಮಟ್ಟಿಗೆ ಒಪ್ಪಬಹುದಿತ್ತು. ಆದರೆ, ಸ್ವಾಮಿ! ತಾವು ಒಂದೇ ಮೊಜ್ಜೆಯಲ್ಲಿ ಎರಡೂ ಕಾಲುಗಳನ್ನು ಸೇರಿಸಲು ಹೇಳುತ್ತಿರುವಿರಲ್ಲ! ನಿಮ್ಮ ಸಲಹೆಯಂತೆ ಆ ವಿಚಿತ್ರಪ್ರಯೋಗವನ್ನು ಮಾಡಿ ನಾವು ನಡೆಯಹೋದರೆ ಮೈತೂಕ ತಪ್ಪಿ, ಮೋರೆಯೊಡೆದು, ವಿದ್ರೂಪಿಗಳಾದೇವೆಂದು ಹೆದರುತ್ತಿದ್ದೇವೆ." ಎಂದು. ಇನ್ನಿದರ ಮುಂದೆ ಬರೆಹಗಾರರು "ಅದು ಗಂಡುಬೀರಿಗಳಾದ ಹೆಣ್ಣುಮಕ್ಕಳನ್ನೂ ಹೆಂಗಸರಾತಿರುವ ಗಂಡುಸರನ್ನೂ ಉಂಟುಮಾಡುವುದು" ಅಲ್ಲವೆ "ಅದು ಮನೆಯ ವ್ಯವಸ್ಥೆಯನ್ನು ಇಟ್ಟುಕೊಳ್ಳಲು ಬಾರದ, ಹಾಗೂ ತಾಯಿಯ ಕರ್ತವ್ಯವನ್ನರಿಯದ ಹೆಣ್ಣುಮಕ್ಕಳನ್ನು ನಿರ್ಮಿಸುವುದು" ಮುಂತಾದ 'ಆಕ್ಷೇಪಣೆಗಳಿಗೆಲ್ಲ "ಅನುಭವದಿಂದ ಉತ್ತರ ದೊರೆತಿದೆ. ಅವುಗಳ ಖಂಡನೆಯಿಂದ ಸ್ಥಳವನ್ನು ತುಂಬುವುದಿಲ್ಲ" ಎಂದು ಹೇಳಿದ್ದಾರೆ. ಹಾಗಾದರೆ ಸಂಪಾದಕರಿಗೆ ತೊಂದರೆಯಾದರೂ ಚಿಂತೆಯಿಲ್ಲ. ಆ ಅನುಭವವನ್ನು ಇದ್ದಕ್ಕಿದ್ದಂತೆ ಕೊಟ್ಟು, ನಾನು ಸ್ಥಳವನ್ನು ತುಂಬಿಬಿಡುತ್ತೇನೆ; ನೋಡಿಕೊಳ್ಳಿ!

"We have now at least eight good and independent statistical studies, which show the ideals of boys from 10 years on are almost always those of their own sex, while girls' ideals are increasingly of the opposite sex, or also those of men. That the ideals of pubescent girls are not found in the

great and noble women of the world or in their literature, but more and more in men, suggests a divorce between the ideals adopted and the line of life best suited to the interests of the race. We are not furnished in our public schools with adequate womanly ideals in histroy or literature. The new love of freedom which women have lately felt, inclines girls to abandon the home for the office. 'It surely can hardly be called an ideal education for women that permits eighteen out of one hundred College girls to state boldly that they would be rather men than women.' More than one half of the school girls in these censuses choose male ideals, as if those of the feminity are disintegrating. A recent writer, in view of this fact states that 'unless there is a change of trend we shall have a female sex without a female character.'—(Adolescence. Vol. II. P. 602- by G. Stanley Hall.)

ಓದುಗರೆ, ನೋಡಿದಿರಾ ಅನುಭವದಿಂದ ದೊರೆತ ಉತ್ತರವನ್ನು? ಲೇಖಕರು ಮುಂದೆ ತಮಗೆ ಆಧಾರಕ್ಕಾಗಿ ಪೆಸ್ಟಾಲಾಜಿ ಎಂಬೊಬ್ಬ ಶಿಕ್ಷಣತಜ್ಞನನ್ನು ಬರಮಾಡಿಕೊಂಡಿದ್ದಾರೆ. ಅವನು ನೆಪೋಲಿಯನ್ನನ ಸಮಕಾಲೀನನು. ಮೇಲಾಗಿ ಅವನ ಶಿಕ್ಷಣಶಾಸ್ತ್ರವೆಲ್ಲ ಭಾವನಾಪ್ರವಾಹದಲ್ಲಿ ತೇಲಾಡುತ್ತಿದೆ. ಎಂದಿಷ್ಟು ಹೇಳಿದರೆ ಸಾಕು. ಮತ್ತೊಂದು ಶ್ರೀ. ರುಬೆನ್‌ರ ಹೇಳಿಕೆಯೆಂದರೆ, "ನಮ್ಮ ದೇಶದಲ್ಲಿ ಸ್ತ್ರೀಯರ ಜಾಗೃತಿಯಾಗಿದೆ. ಆ ಮೂಲಕ ಅವರು ಸಾಹಸಪಡದ ಕ್ಷೇತ್ರವೇ ಇಲ್ಲ" ಎಂದು. ಸಾಹಸಪಡುತ್ತಿರಬಹುದು; ಇಲ್ಲಿ ಸ್ತ್ರೀಯರು ಸಾಹಸ ಪಡುತ್ತಿರುವರೊ ಇಲ್ಲವೊ ಎಂಬ ಪ್ರಶ್ನೆ ಇರದೆ 'ಪಡಬೇಕೆ?' ಎಂಬ ಪ್ರಶ್ನೆ ಇದೆ. ಸಹಶಿಕ್ಷಣವು ನೆರವೇರಿಸುತ್ತಿರುವ ಮೂರು ಕಾರ್ಯಗಳಲ್ಲಿ 'ಪರಸ್ಪರಾವಲಂಬಿತ್ವದ' ಕಾರ್ಯವೊಂದನ್ನು ಮೊದಲಿನದೆಂದು ಇಟ್ಟು "ಕಣ್ಣುಗಳು ಕೈಗೆ 'ನನಗೆ ನಿನ್ನಿಂದ ಆಗಬೇಕಾದುದೇನೂ ಇಲ್ಲ' ಎಂದು ಹೇಳಬಹುದೆ?" ಎಂದೂ ಕೇಳಿದ್ದಾರೆ. ಸ್ತ್ರೀ-ಪುರುಷರಲ್ಲಿಯ ಪರಸ್ಪರಾವಲಂಬಿತ್ವವನ್ನು ನಿಸರ್ಗವೆ ಬಿಡಿಸಲಾಗದಂತೆ ಬಿಗಿದಿಟ್ಟಿದೆ. ಅದಕ್ಕೆ ನಿಮ್ಮ 'ಸಹಶಿಕ್ಷಣ'ದ ಸಹಾಯ ನಮಗೂ ಬೇಕಿಲ್ಲ. ಮತ್ತಾವ ಶಿಕ್ಷಣವನ್ನಾದರೂ ಸಂಶೋಧಿಸಿ ಅದನ್ನು ಬಿಡಿಸಬಹುದೇನೆಂಬುದನ್ನು ಬೇಕಾದರೆ ನೋಡಿಕೊಳ್ಳಿ. ಸರಿ, ಇನ್ನು ಮುಂದೆ ತಾವು ಹಿಂದೆ ಹೇಳಿದ ವಿಷಯಗಳನ್ನೆ ಮತ್ತೆ ಬೇರೆ ಬೇರೆ ಬಗೆಯಿಂದ ಹೇಳುತ್ತಿರುವುದರಿಂದ ಅವುಗಳ ಬಗೆಗೆ ಬರೆಯುವ ಆವಶ್ಯಕತೆ ಇಲ್ಲ. ಒಟ್ಟಿನಲ್ಲಿ ನಾನು ಹೇಳಬೇಕಾದುದಿದು: 'ಸಹಶಿಕ್ಷಣ'ದಂತಹ ಆಚಾರಗಳಿಂದುಂಟಾಗುವ ಪರಿಣಾಮಗಳು ವಂಶ, ಸಮಾಜ, ರಾಷ್ಟ್ರ ಇವುಗಳಿಗೆ ಸಂಬಂಧಿಸುತ್ತಿರುವುದರಿಂದ, ಈ ಸಮಸ್ಯೆಯನ್ನು ಇಷ್ಟೊಂದು ಗಡಿಬಿಡಿಯಿಂದ, ಭಾವನಾಪರವಶತೆಯಿಂದ ನಿರ್ಣಯಿಸಬೇಕಾದುದಿಲ್ಲ!

ಕೊನೆಗೆ ಸಂಪಾದಕರಲ್ಲಿಯೂ, ಓದುಗರಲ್ಲಿಯೂ, ಹೇಳಿಕೊಳ್ಳಬೇಕಾದ ಮಾತೊಂದು:—ಉತ್ತರ ರೂಪವೆಂದು ಬಂದ ಈ ಬರೆಹವು, ಮಿತಿಮೀರಿ ಬೆಳೆದಿದೆಯೆಂಬುದರ ಅರಿವು ನನಗೆ ತುಂಬ ಇದೆ. ಆದರೂ 'ಜಯಂತಿ'ಯಲ್ಲಿ ಶ್ರೀ. ರೂಬೆನ್‌ರು ಬರೆದ '**ಸಹಶಿಕ್ಷಣ**' ಎಂಬ ಬರೆಹಕ್ಕೆ ಕೇವಲ ಉತ್ತರವೆಂದು ನಾನೀ ಬರೆಹವನ್ನು ಬರೆದಿಲ್ಲ. ಆ ಬರೆಹವು ಇದಕ್ಕೆ ಪ್ರೇರಕ (ಮಾತ್ರ) ವಾಗಿದೆ ಎಂಬುದನ್ನು ಮೊದಲಿಗೇ ತಿಳುಹಿಸಿದ್ದೇನೆ. ಈಗ ಸ್ತ್ರೀಶಿಕ್ಷಣವಾಗಲಿ, ಸಹಶಿಕ್ಷಣವಾಗಲಿ ಅದೆಷ್ಟೊ ನಮ್ಮ ಬಳಕೆಯಲ್ಲಿ ಬಂದಿದೆ; ಇನ್ನೂ ಹೆಚ್ಚು ಹೆಚ್ಚಾಗಿ ಬರುವುದರಲ್ಲಿದೆ. ಎಂತಲೆ ಆ ವಿಷಯದ ಹಿತಾಹಿತದಲ್ಲಿ ಅನೇಕ ಮುಖವಾಗಿ ಚರ್ಚೆಗಳಾಗಬೇಕು, ಅಭ್ಯಾಸಗಳಾಗಬೇಕು. ಬಗೆಬಗೆಯಿಂದ ವಾದ-ವಿವಾದಗಳೂ ನಡೆಯಬೇಕು. ಇಷ್ಟೆಲ್ಲ ಆಗಿ ಯಾವುದೊಂದನ್ನು ನಿರ್ಣಯಿಸಲಿ.. ಎಂಬುದಕ್ಕೆ ನನ್ನ ಈ ಬರೆಹ ಪೂರ್ವರಂಗವಾಗುತ್ತಿದ್ದರೆ ಆಗಿ ಹೋಗಲಿ—ಎಂದಿಷ್ಟೆ ನನ್ನ ಮನೀಷೆ. ಇನ್ನು ಶ್ರೀಮಾನ್ ರೂಬೆನ್‌ರಿಗೂ ಬೇಡಿಕೊಳ್ಳಬೇಕಾದ ಮಾತೊಂದಿದೆ. ನಾನು ಅವರ ಹೆಸರನ್ನೆದುರಿಸಿ, ಕೆಲವೆಡೆಗೆ ಚುಚ್ಚುಮಾತುಗಳನ್ನೂ ಮತ್ತೆ ಹಲವೆಡೆಗೆ ಬಿರುನುಡಿಗಳನ್ನೂ ಉಪಯೋಗಿಸಿದುದುಂಟು. ಆದರೆ ಈಗ ಬಗೆಬಗೆಯ ಆ ಭಾಸಿಕ ವಿಧಾನಗಳನ್ನೆತ್ತಿಕೊಂಡು, ಅಲ್ಲಲ್ಲಿ ಬರುತ್ತಲಿರುವ ಸ್ತ್ರೀಶಿಕ್ಷಣ, ಸಹಶಿಕ್ಷಣ, ಮುಂತಾದ ವಿಷಯಗಳನ್ನು, ದೊಡ್ಡದಾಗಿಸಿ ನೋಡುವುದಕ್ಕೆಂದು, ಬರೆಹಗಾರರ ಹೆಸರನ್ನು ಮಹತ್ಕಾರಿಯಾದ ಕನ್ನಡಕದಂತೆ (microscope) ಉಪಯೋಗಿಸಿಕೊಂಡಿರುವೆನೇ ಹೊರತು, ಅವರನ್ನು ಬೀಳ್ಗಳೆಯಬೇಕೆಂದಾಗಲಿ, ಸೊಕ್ಕಿನಿಂದಾಗಲಿ ಅಲ್ಲ. ಇಲ್ಲಿ ಶ್ರೀಮಾನ್ ರೂಬೆನ್ ರೆಂದರೆ '**ಸಹಶಿಕ್ಷಣ**' ಎಂದಿಷ್ಟೆ ಅರ್ಥ. ವ್ಯಕ್ತಿಮಾತ್ರದ ವಿಷಯದಲ್ಲಿ ನಾನವರಿಗೆ ತುಂಬ ವಿಧೇಯ. '**ಸಹಶಿಕ್ಷಣ**' ವಿಷಯದಲ್ಲಿ ನಾನವರ ಹೆಸರನ್ನು ಉಪಯೋಗಿಸಿಕೊಂಡುದಕ್ಕಾಗಿ ಶ್ರೀಮಾನ್ ರೂಬೆನ್‌ರು ದಯೆಯಿಟ್ಟು ನನ್ನನ್ನು ಕ್ಷಮಿಸಲಿ! ವಾದ-ವಿವಾದಗಳಲ್ಲಿ ವೈಯಕ್ತಿಕ ವೈಷಮ್ಯಭಾವನೆಯಿರಬಾರದೆಂಬುದನ್ನು ನಾನೇನು ಬೇರೆ ಹೇಳಬೇಕಿಲ್ಲ!

——೦——

ಸೇಫ್ಟಿ ರೇಝರ್ ೩ ಬ್ಲೇಡು ಸಮೇತ,

೫ ಆಣೆಗೆ ಒಂದು ಸೆಟ್ಟು.

೧ ಬ್ಲೇಡಿಗೆ ೬ ಉತ್ತಮ ಕ್ಷೌರ!

೫ ಬ್ಲೇಡಿಗೆ ೪ ಆಣೆ.

ನಿನಗೆ ನಾನೆಯೆ !

ಶ್ರೀ. ಕೃಷ್ಣಮೂರ್ತಿ ಪುರಾಣಿಕ ಬಿ. ಎ. (ಆನರ್ಸ್)

ನಗುತ ನಲಿಯುತ, ನಲಿಯುತೊಲಿಯುತ
ಬಾಗು ರಮಣಿ ಬಾಳಿಗೆ;
ತೂಗುತೆದೆಯನೊಲುಮೆಗೆ.
ಬಾಳ ಮೋಡಕೆನ್ನ ಗಾಢ ಪ್ರೇಮ ಗೆಳತಿಯೆ;
ಗಾಳಿ ಮೋಡ ಬಾಳದೂಡ ನಿನಗೆ ನಾನೆಯೇ. ೧

ಹರಯ ಜೀವನಾ ಪರಮ ಪಾವನಾ
ನೋಡು ಪ್ರಣಯಜೀವನಾ;
ಕಾಡು ಬಿರಿದ ಭಾವನಾ.
ಹರಯ ಹಾಸಿನಲ್ಲಿ ಸೂಸಿ ನಗೆಯನೊಂದೆಯೆ;
ತೆರೆದ ಬಾಳನರಳಿಸೇಳ ನಿನಗೆ ನಾನೆಯೇ. ೨

ಬಾಳ ಗೋಳಿನೊಳು, ನಗೆಯ ತೇಲಲು.
ಅದುವೆ ನಮ್ಮ ಜೀವನಾ;
ಬದುಕಲೆಮ್ಮ ಸಾಧನಾ.
ಹರಯದೆಲರ ಕಂಪಿಗಿದರ ಸೊಂಪು ಗೆಳತಿಯೆ;
ಬೆರೆಯಲದರ ಪೆಂಪು ಸದರ ನೋಡ ನಮಗೆಯೇ. ೩

ಗೋಳ ಗುರುತಿಸಿ, ಬಾಳನುರುಳಿಸಿ
ಯಾಕ ಕೊಲೆಯು ನಿಂದೆಯೇ;
ಸಾಕು ಸಾಗು ಮುಂದೆಯೆ.
ಮುಂದು ಮುಂದು ಮುಂದಕೆಂದು ಬಂದ ಚದುರಿಯೆ;
ಬೆದರ ಬೇಡ ಹೆದರ ಬೇಡ ನಿನಗೆ ನಾನೆಯೇ. ೪

ನಿನಗೆ ನಾನೆಯೆ, ನನಗೆ ನೀನೆಯೆ,
ನೀನೆ ನನಗೆ ಜೀವನಾ;
ನಾನೆ ನಿನಗೆ ಪಾವನಾ.
ನನಗೆ ನೀನು ನಿನಗೆ ನಾನು ಎಂಬ ಭಾವನಾ;
ಮನದ ತಾಣದಲ್ಲಿ ಲೀನ ಧನ್ಯಜೀವನಾ. ೫

ನೌಕಾವಿಹಾರ

ಶ್ರೀ. 'ಶ್ರೀಕೃಷ್ಣ' ಶಾರದಾಮಂಡಲ

೧

ಕುಣಿಯುತಿರುವ ತೆರೆಗಳಲ್ಲಿ ತೂರುತಿರುವ ಹನಿಗಳಲ್ಲಿ
ತೇಲುತಿಹುದು-ಸಾಗುತಿಹುದು ಸುಂದರ ಈ ನೌಕೆಯು;
ಹೊರಟದಾರಿ-ಮೇಲೆ ಎಂಥದೆಂಬುದನ್ನು ಲೆಕ್ಕಿಸದೆ
ಭವಸಾಗರದಲ್ಲಿ ಸಾಗುತಿರುವ ಬಾಳಿನಂತೆಯೆ !

೨

ಬೆಳ್ಳಕ್ಕಿಯು ಆನಂದದಿ ತೆರೆಗಳನ್ನು ತಟ್ಟುತಿದೆ,
ಮೀನುಗಳೂ ನೀರಿನೊಡನೆ ಆಡಿ ಆಡಿ ನಲಿಯುತಿವೆ,
ಎಲ್ಲೆಡೆಗೂ ಆನಂದವು, ಅಂದವೀ ನಿಸರ್ಗ !
ನಮ್ಮ ಎದೆಗೆ ಏಕೆ ಬೇಡ ಇಂಥ ಸುಖದ ಸ್ವರ್ಗ !!

೩

ಸಾಗು ನೌಕೆ ನಿನ್ನ ದಾರಿಗೀಗ ಕೊನೆಯು ಇರದಿರಲಿ,
ಇಂಥ ದಿಕ್ಕು ಎಂಬ ಗುರಿಯ ಆಶೆಯೂ ಹುಟ್ಟದಿರಲಿ
ಸಾಗುವುದೊಂದೇ ಈಗ ನಿನಗಿರುವಾ ಧ್ಯೇಯವು !
ಹುಟ್ಟುಹಾಕುವುದೊಂದೇ ನಮ್ಮದೀಗ ಕಾರ್ಯವು !

೪

ಒಳಿತು ಈಗ ಎಲ್ಲವೂ ! ಅರಿವರಾರು ವಿಧಿಯನು ?
'ಏರಿಯಲ್ಲಿ' ನಲ್ಲಿ ನಲಿದ 'ಶೆಲ್ಲಿ'ಗಿತ್ತೆ ಅದರರಿವು ?!
ಹಾಡುವ ಆ ಹಕ್ಕಿ ಆಡುತಿರುವ ಮೀನ ನುಂಗದಿಹುದೆ ?
ನೌಕೆಯನ್ನು ನಡಸುತಿರುವ ಗಾಳಿ ಅದನು ಮುಳುಗಿಸದೆ ?

೫

ಮಳೆಯು ಬೀಳಲಿ, ಗಾಳಿ ಬೀಸಲಿ, ಹೊಳೆಯು ನಮ್ಮನು ನುಂಗಲಿ
ಭೀತಿ ಏಕೆ ಕೀಳು ಸಾವಿಗೆ ? ಪೌರುಷಕ್ಕದು ಆಳು !
ಉಲ್ಲಾಸದೀಕ್ಷಣ ಕ್ಲೈಬ್ಯ-ನಿಸ್ಸತ್ತ್ವಗಳ ನಮ್ಮಿಂ ದೂಡಲಿ
'ವಿರಸ ಜೀವನಕಿಂತಲೂ ಸರಸ ಮೃತ್ಯುವೆ ಮೇಲು !! '

ಏಕಪತ್ನೀವ್ರತ ಅಥವಾ ಸಾವು ಬಾರದೇಕೆ?

(ಏಕಾಂಕ ನಾಟಕ) *

★

ಪಾತ್ರಗಳು

ವೆಂಕಣ್ಣ	—	ಮನೆಯ ಯಜಮಾನ
ಲೀಲಾವತಿ	—	ವೆಂಕಣ್ಣನ ಪ್ರೇಯಸಿ
ರಾಜಮ್ಮ	—	ವೆಂಕಣ್ಣನ ಧರ್ಮಪತ್ನಿ

(ಸಮಯ : ಒಂದು ದಿನ ಮಧ್ಯಾಹ್ನ)

ಮೊದಲನೆಯ ದೃಶ್ಯವಾಗಿ ಎರಡು ಗಂಟೆಯಮೇಲೆ ಎರಡನೆಯ ದೃಶ್ಯವು ಪ್ರಾರಂಭವಾಗುತ್ತದೆ.

ಒಂದನೆಯ ದೃಶ್ಯ

[ಲೀಲಾವತಿಯ ಮನೆ. ಒಂದು ಮೇಜು, ಒಂದೆರಡು ಕುರ್ಚಿಗಳು ರಂಗಭೂಮಿಯ ಮಧ್ಯಭಾಗದಲ್ಲಿವೆ. ಮೇಜಿನ ಮೇಲೆ flower pot ಇದೆ. ನವನಾಗರಿಕತೆಗೆ ತಕ್ಕಂಥಾದ ಏರ್ಪಾಡುಗಳು ನಡೆದಿರುತ್ತವೆ.

ಎದುರಿಗೆ ಒಳಗೆ ಹೋಗುವ ಬಾಗಿಲು. ಬಲಭಾಗದಲ್ಲಿ ಮನೆಯ ಹೆಬ್ಬಾಗಿಲು.

ಲೀಲಾವತಿಯು ಮೈಯನ್ನು ಬಳುಕಿಸುತ್ತ ಸ್ವಲ್ಪ ಚಿಂತಾಮಗ್ನಳಾಗಿಯೇ ಪ್ರವೇಶಿಸುವಳು. ೨೦–೨೫ ವರ್ಷದ ಸುಂದರಯುವತಿ. ಹೊಸ ರೇಷ್ಮೆಯ ಸೀರೆ, ರೇಷ್ಮೆಯ ಕುಪ್ಪಸವನ್ನು ಧರಿಸಿರುವಳು. ತಿದ್ದಿದ ಗುಂಗುರು – ಗುಂಗುರು ಕೂದಲು, ಉದ್ದವಾದ ಜಡೆ.]

ಲೀಲಾವತಿ:—ಗಂಟೆ ಹನ್ನೆರಡಾಯ್ತು. ಇಷ್ಟು ಹೊತ್ತಾದರೂ ಏಕೆ ಇವರು ಬರಲಿಲ್ಲ? . . . . ಕಾರಣವೇನು? . . . . ಕೆಲಸವೇನಾದರೂ ಹೆಚ್ಚಾಗಿದ್ದು ಬರುವುದಕ್ಕೆ ಸಾಧ್ಯವಾಗಿಲ್ಲದೆ ಇರಬಹುದೇ? . . ಅದೇಕೆ, ಹೀಗೆ ನನ್ನನ್ನು ಇದು ಯೋಚನೆಗಿಟ್ಟುಕೊಂಡಿದೆ? ಇಷ್ಟು ಹೊತ್ತಾದರೂ ಅವರಿಗೆ ಹಸಿವಾಗಿಲ್ಲವೇ? . . ಹುಂ. . ಇನ್ನೂ ಸ್ವಲ್ಪ ಹೊತ್ತು ನೋಡೋಣ; ಆಗಲೂ ಬಾರದೆ ಇದ್ದರೆ ನಾನು ಊಟ ಮಾಡಿಬಿಡ್ತೇನೆ. ಹಸಿವು ನನಗೆ ಹೆಚ್ಚಾಗಿದೆ. . ನನಗಿಂತ ಅವರಿಗೆ ಹೆಚ್ಚಾಗಿರಬಹುದಲ್ಲವೆ? . ಈ ಹಾಳಾದ ಕೆಲಸವೇ ಅಷ್ಟು! ಹೊತ್ತು-ಹೊತ್ತಿಗೆ ಊಟವಿಲ್ಲ; ಆಹಾರವಿಲ್ಲ!! ಉಪವಾಸ ಸಾಯುವ ಕೆಲಸ! ಹುಂ! ಎಷ್ಟೇ ಹಸಿವಾಗಲೀ ನನಗೆ,.... ಅವರು ಬರುವ ತನಕ ನಾನು ಊಟ ಮಾಡುವುದಿಲ್ಲ. . ನೋಡೋಣ, ಅವರು ಬರುತ್ತಿದ್ದಾರೇನೋ!

(ಒಂದೆರಡು ಹೆಜ್ಜೆ ಮುಂದಿಡುವಳು. ಅಷ್ಟು ಹೊತ್ತಿಗೆ ಸರಿಯಾಗಿ ರಾಜಮ್ಮನು ಪ್ರವೇಶಿಸುವಳು. ವಯಸ್ಸು ೪೦–೪೫ ಕ್ಕೆ ಮೀರಿದೆ. ಸ್ಥೂಲದೇಹ. ಹಳೆಯ ಸೀರೆ ಉಟ್ಟು ಹಳೆಯ ಕುಪ್ಪಸ ತೊಟ್ಟಿರುವಳು. ಸೀರೆಯನ್ನು ಮೇಲೆತ್ತಿ ಕಟ್ಟಿಕೊಂಡಿರುವಳು. ಕೆನ್ನೆ ಮತ್ತು ಕೈಕೋಲುಗಳು ಅರಿಸಿಣದಿಂದ ಲಿಪ್ತವಾಗಿರುವುವು. ಗೊಗ್ಗರು ಧ್ವನಿ.)

ರಾಜಮ್ಮ:—ಲೀಲಾವತಿಬಾಯಿ, ಸ್ವಸ್ಥವಾಗಿದ್ದೀರಾ?

ಲೀಲಾವತಿ:— (ತನ್ನ ಚಿಂತೆಯನ್ನು ಮರೆಯಿಸಿಕೊಂಡು) . . ಏನೋ, ದೇವರ ದಯದಿಂದ ಇಷ್ಟುಮಟ್ಟಿಗೆ ಇದ್ದೇನಮ್ಮಾ!

ರಾಜಮ್ಮ:—ಒಳ್ಳೆಯದಮ್ಮಾ . . ನೀವು ಪುಣ್ಯವಂತರು; ನಾವೋ. .

ಲೀಲಾವತಿ:— (ಕುತೂಹಲದಿಂದ) ಏನ್ರಮ್ಮಾ ನೀವು-?

ರಾಜಮ್ಮ:— ಏನೆಂದು ಹೇಳಿಕೊಳ್ಳಲಮ್ಮಾ ನಾನು. ನೋಡಿ, ನಮ್ಮ ಯಜಮಾನರು ಊರಿಗೆ ಹೋಗಿ ಇಂದಿಗೆ ಎಂಟು ದಿನಗಳಾಯ್ತು. ಇಂದು ಬರಬೇಕಾಗಿತ್ತು; ಬರತಾರೇಂತ ಕಾಣಸತ್ತೆ . . ಮನೆಯಲ್ಲಂತೂ ಸುತರಾಂ ಸಾಮಾನಿಲ್ಲ. ತಿಂಗಳ ಕಡೆ ನೋಡಿ; ಈಗ ಎಲ್ಲರಿಗೂ ಅನಾನುಕೂಲ.

ಲೀಲಾವತಿ:—ಹೌದರಮ್ಮಾ ಹೌದು; ನಮ್ಮ ಮನೆಯಲ್ಲೂ ಅದೇ ಗೋಳು! ನೋಡಿ, ಇಂದು ನನ್ನ ಮನೆಯಲ್ಲಿ ಬೇಳೇನೆ ಇರಲಿಲ್ಲ. ಒಂದಾಣೆ ಕೊಟ್ಟು ಒಂದು ಪಾವು ಬೇಳೆ ತರಿಸಿ, ಹುಳೀ ಮಾಡ್ದೆ ಕಾಣ್ರಮ್ಮಾ!

ರಾಜಮ್ಮ:— ಲೀಲಾವತಮ್ಮನವರೇ, ನೀವು ಹೊಸ ಕಾಲದವರು; ನಾನು ಹಳೇ ಕಾಲದ ಗೂಬೆ. ನಾನು ಹೀಗೆಲ್ಲಾ ಒಂದು ಮಾತಾಡಿದ್ನೇಂತ ತಾವು ಏನೂ ಮನಸ್ಸಿಗೆ ತಿಳ್ಕೋಬಾರದ್ರಮ್ಮಾ . . ನೋಡಿ, ನನಗೆ ಸ್ವಲ್ಪ ಉಪ್ಪು ಬೇಕಾಗಿತ್ತು. ಇದ್ದರೆ ಸ್ವಲ್ಪ ಕೊಡತೀರಾ?

(ಒಂದು ಚಿಕ್ಕ ಪಾತ್ರೆಯನ್ನು ತೋರಿಸಿ)

ಇದರಲ್ಲಿದ್ದರೆ ಸಾಕು; ಅದಕ್ಕೋಸ್ಕರ ನಿಮ್ಮ ಮನೆಗೆ ಬಂದೆ ನೋಡಿ. ನಿಮ್ಮ ಮನೆಗೆ ಬರೋದಕ್ಕೆ ನನಗೆ ನಾಚಿಕೆ! ನೀವು ಈ ಊರಿಗೆ ಇನ್ನೂ ಹೊಸಬರು; ನನ್ನ ನಿಮ್ಮ ಸ್ನೇಹ ಇನ್ನೂ ಹೊಸದು. ಒಂದೋ, ಎರಡೋ ತಿಂಗಳಾಗಿರಬಹುದು. ಈಗಾಗಲೇ ನಿಮ್ಮನ್ನು ನಾಲ್ಕು ಕೇಳೋದಕ್ಕೆ ಬಂದಿದ್ದೇನೆ; ದಯವಿಟ್ಟು ಏನೂ ತಿಳಕೋಬೇಡ್ರಮ್ಮಾ . . ನೋಡಿ, ನಮ್ಮ ಬೀದಿಯಲ್ಲಿರುವ, ಗುರುತಿರುವ ಮನೆಯಲ್ಲೆಲ್ಲಾ ಕೇಳ್ದೆ: ಯಾರಲ್ಲಿಯೂ ಉಪ್ಪಿಲ್ಲ! ಏನೋನಮ್ಮಾ, ಇಟ್ಟುಕೊಂಡೇ ಇಲ್ಲಾಂತಾರೋ ಅಥವಾ ಇಲ್ಲವೇ ಇಲ್ಲವೋ

ಶ್ರೀ. ಸಿ. ಕೆ. ಅಣ್ಣಾಸ್ವಾಮಿರಾವ್

---

* ವಿ. ಸೂ.—ಈ ನಾಟಕದ ಸರ್ವ ಸ್ವಾತಂತ್ರ್ಯವೂ ಕರ್ತೃವಿಗೆ ಸೇರಿದೆ.

ಗೊತ್ತಿಲ್ಲ. ನನಗೂ, ಎಲ್ಲಾಕಡೆ ಕೇಳಿ ಕೇಳಿ ಬೇಜಾರಾಗಿ, ಇದೇ ಕೊನೆಯಮನೆ ಎಂದು ಯೋಚನೆಮಾಡಿ. ನಿಮ್ಮ ಮನೆಗೆ ಬಂದೆ.. ನಾನು ಬಂದೇ ಅಂತ ನೀವು ಏನೂ ಮನಸ್ಸಿಗೆ ಅಸಹ್ಯಪಟ್ಟುಕೋ ಬೇಡ್ರಮ್ಮಾ!

ಲೀಲಾವತಿ:—ಏನೂ ಪರವಾ ಇಲ್ಲ, ರಾಜಮ್ಮನವರೇ,.. ಬಂದರೆ ಅದರಲ್ಲೇನೂ ತಪ್ಪಿಲ್ಲ..! ಸಮಯದಲ್ಲಿ ಸಹಾಯಮಾಡದೆ ನ್ನ ಯಾ ವಾ ಗ ರ ಮ್ಮಾ ನಾವು ನಹೋದು. ಏನೋ, ನಿಮಗೂ ಬಹಳ ಸಯವಾದದ್ದರಿಂದ ಬಂದಿದ್ದೀರಿ. ಲ್ಲದೇ ಇದ್ದರೆ, ನೀವು ಬರುತ್ತಿದ್ದಿರಾ?

ರಾಜಮ್ಮ:—(ತಲೆಯಲ್ಲಾಡಿಸುತ್ತ, ಒಂದು ಯನ್ನು ಸೊಂಟದ ಮೇಲಿಟ್ಟುಕೊಂಡು—) ಜವಮ್ಮಾ, ನಿಜ.. ನೋಡಿ ಲೀಲಾ-ಬಾಯೀ, ನಿಮ್ಮ ಮನಸ್ಸು ಬಹಳ ದು. ನಿಮ್ಮಂತೆ ತಿಳಿದುಕೊಳ್ಳೋರು ಳ ಕಡಿಮೇನ್ರಮ್ಮಾ ಲೋಕದಲ್ಲಿ! ದು ದೇವರಿಂದ ಬಂದ ವರಾ ಅಂತ ತಿಳೀ ್ರಮ್ಮಾ, ದೇವರಿಂದ ಬಂದ ವರಾ ದು! ಈ ತರಹದ ಮನಸ್ಸು ಎಲ್ಲರಿಗೂ ಹೋದಿಲ್ಲ! ನಿಮ್ಮ ಪೂರ್ವ ಪುಣ್ಯ ಫಲ!

ಲೀಲಾವತಿ:— ನಿಮಗೆ ಉಪ್ಪು ಎಷ್ಟು ್ರಮ್ಮಾ?

ರಾಜಮ್ಮ:— (ಪಾತ್ರೆಯನ್ನು ಮುಂದೆ ಡಿ-) ಇಬ್ಬರ ಅಡಿಗೇಗೆ ಎಷ್ಟು ಬೇಕಾ ರಮ್ಮಾ! ಈ ಪಾತ್ರೆಯಲ್ಲಿ ಕೊಟ್ಟರೆ ಸು!

ಲೀಲಾವತಿ:— (ಪಾತ್ರೆಯನ್ನು ತೆಗೆದು ಂಡು-) ಆಗಲಿ. ತಂದು ಕೊಡ್ತೀನೆ. ಳಗೆ ಹೋಗಿ ಸ್ವಲ್ಪಹೊತ್ತಿನಮೇಲೆ ಪಾತ್ರೆಯ ುಬ ಉಪ್ಪನ್ನು ತುಂಬಿಕೊಂಡು ಪ್ರವೇಶಿಸು ು. ಅದುವರೆಗೂ ರಾಜಮ್ಮನು ಮನೆಯ ್ಲ ಮೇಲೆ, ಕೆಳಗೆ, ಸುತ್ತಲೂ ನೋಡುತ್ತಿರು ು. ಲೀಲಾವತಿಯು ಬಂದಕೂಡಲೆ ಅವಳ ಗೆ ನೋಡುವಳು. ಲೀಲಾವತಿಯು ಉಪ್ಪನ್ನು ಜನ ಮೇಲಿಡುವಳು.) ತಗೊಳ್ರಮ್ಮಾ ಪ್ಪು; ಸಾಕೇ ಇಷ್ಟು?

ರಾಜಮ್ಮ:— ಸಾಕು ಸಾಕು; ಬೇಕಾ ್ಟಾಯ್ತು ....! ಏನ್ರಮ್ಮಾ, ನಿಮ್ಮ ಟವಾಯಿತೇ? ಏನೇನು ಅಡಿಗೆ ಡಿದ್ದೀರಿ?

ಲೀಲಾವತಿ:— ನನ್ನದಿನ್ನೂ ಊಟ ವಿಲ್ಲ. ಅವರಿನ್ನೂ ಬಂದಿಲ್ಲ, ಬೆಳಿಗ್ಗೆ ಹೋದವರು!

ರಾಜಮ್ಮ:— (ಅತ್ಯಂತ ಆಶ್ಚರ್ಯದಿಂದ) ಇನ್ನೂ ಊಟವಿಲ್ಲವೇ?.... ನೀವೂ ನಮ್ಮ ಜಾತೀಗೆ ಸೇರಿದ್ದೀರಿ.... ನನ್ನ ಗಾಳಿಯೇ ನಿಮಗೂ ಎಲ್ಲೋ ಬೀಸಿರಬೇಕು!

ಲೀಲಾವತಿ:— (ಕುರ್ಚಿಯನ್ನು ಹಿಡಿದು ಕೊಂಡು, ಮುಗುಳ್ನಗೆಯಿಂದ) ಊಂ...

ರಾಜಮ್ಮ:— (ಕುತೂಹಲದಿಂದ) ಏನ್ರಮ್ಮಾ, ನಿಮ್ಮ ಯಜಮಾನರನ್ನು ನಾನು ನೋಡೇ ಇಲ್ಲವಲ್ಲಾ! ಅಂ.... ನೀವೆಲ್ಲಿ ನೋಡುವುದಕ್ಕೆ ಸಾಧ್ಯ!

ರಾಜಮ್ಮ:— ಪಾಪ! ಪಾಪ!...... ನೋಡಿ, ನಮ್ಮ ಮನೆಯವರೂ ಅಷ್ಟೆ! ಅವರಿಗೂ ಕೆಲಸ ಹೆಚ್ಚು. ಬೆಳಿಗ್ಗೆ, ಸಾಯಂಕಾಲ ಯಾವಾಗಲೂ ಅಲ್ಲೇ ಇರ್ತಾರೆ. ನೀವು ಹೇಳಿದ ಹಾಗೇ, ನಮ್ಮವರು ಕೂಡ ಒಂದೊಂದು ಸಲ ಏಳೆಂಟು ದಿವಸವಾದರೂ ಮನೇಕಡೆ ತಿರುಗೋಲ್ಲ!..... ಅಂದಹಾಗೇ, ನಿಮ್ಮವರು ಯಾವ ಕಛೇರಿಯಲ್ಲಿರೋದು?

ಲೀಲಾವತಿ:— ಇನ್‌ಷೂರೆನ್ಸ್ ಆಫೀಸಿನಲ್ಲಿರೋದು!

"ಓಹೊ, ತಿಳಿಯಿತು ಇವರ ಆಟ. ಕಛೇರಿಯಲ್ಲಿ ಕೆಲಸ ಹೆಚ್ಚು ಎಂದು ನೆವ ಹೇಳಿ ಇಲ್ಲಿಗೆ ಬರ್ತಾರೋ ಇವಳ ಮನೆಗೆ...."

ಲೀಲಾವತಿ:— ಎಲ್ಲಿ.. ಅವರು ಮನೆಯಲ್ಲೇ ಇರೋದಿಲ್ಲ! ಕೆಲಸ ಹೆಚ್ಚು ನೋಡಿ! ಯಾವಾಗಲೂ ಕಛೇರಿಯಲ್ಲೇ ಇರುತ್ತಾರೆ. ಬೆಳಿಗ್ಗೆ ಎಂಟು ಗಂಟೆಗೆ ಹೊರಟು ಹೋದರೆ ಊಟದ ಹೊತ್ತಿಗೆ ಬರುತ್ತಾರೆ. ಊಟಮಾಡಿಕೊಂಡು ಹೊರಟು ಹೋದರೆ ಇನ್ನು ರಾತ್ರಿಯೇ ನಾನು ಅವರನ್ನು ನೋಡೋದು! ಒಂದೊಂದು ಸಲ ಏಳೆಂಟು ದಿವಸವಾದರೂ ಮನೆಗೆ ಬರೋದಿಲ್ಲ. ಹೋಟಲಿನ ಊಟ! ಅಲ್ಲಿಂದಲೆ ಕಾಫಿ ತಿಂಡಿ! ನೋಡಿ, ನಾನೇ ಅವರನ್ನು ನೋಡೋದು ಅಪರೂಪ;

ರಾಜಮ್ಮ:- (ಉತ್ಸುಕತೆಯಿಂದ) ಏನು! ಇನ್‌ಷೂರೆನ್ಸ್ ಆಫೀಸ್ನಲ್ಲೇ? .... ಅಲ್ಲೇ ನಮ್ಮವರೂ ಇರೋದು...... ಹಾಗಿದ್ದರೆ ನಮ್ಮವರು ನಿಮ್ಮ ಯಜಮಾನರಿಗೆ ಗೊತ್ತಿರಬೇಕೊಂತ ಕಾಣ್ತತ್ತೆ!

ಲೀಲಾವತಿ:—ಏನೋ, ಕೇಳಬೇಕು.. ನಿಮ್ಮ ಯಜಮಾನರ ಹೆಸರು ಗೊತ್ತಿಲ್ಲವಲ್ಲಾ!

ರಾಜಮ್ಮ:— ಅದಕ್ಕೇನು, ಎಲ್ಲಾ ಅವರಿಗೆ ಗೊತ್ತಿರುತ್ತದೆ. ಇನ್ನು ಬರುತ್ತೇನಮ್ಮಾ ನಾನು, ಹೊತ್ತಾಯಿತು!

[ಮುಂದೆ ಹೋಗಿ ಮೇಜಿನ ಮೇಲಿಟ್ಟಿದ್ದ ಉಪ್ಪಿನ ಪಾತ್ರೆಯನ್ನು ತೆಗೆದುಕೊಂಡು, ಹಿಂತಿರುಗಿ ಹೊರಡಲು ಒಂದುಹೆಜ್ಜೆ ಮುಂದಿಡುವಳು; ಅದೇ ಹೊತ್ತಿಗೆ ಸರಿಯಾಗಿ ವೆಂಕಣ್ಣನು (ಲೀಲಾವತಿಯ ಮತ್ತು ರಾಜಮ್ಮನ ಗಂಡ) ಕೈಯಲ್ಲಿ walking stick ನ್ನು ಹಿಡಿದುಕೊಂಡು ಜೋರಾಗಿ ಬೀದಿಯಿಂದ ಪ್ರವೇಶಿಸಿ, ಹೆಂಗುಸರ ಕಡೆ ನೋಡದೆ ತಲೆಬಗ್ಗಿಸಿಕೊಂಡೇ ಒಳಗೆ ಹೋಗುವನು. ರಾಜಮ್ಮನು ಇವನನ್ನು ನೋಡಿದ ತಕ್ಷಣವೇ ಅವಾಕ್ಕಾಗಿ ನಿಲ್ಲುವಳು. ವೆಂಕಣ್ಣನು ಒಳಗೆ ಹೋಗುವ ವರೆಗೂ ಅವನನ್ನೇ ದುರು-ಗುಟ್ಟಿ ನೋಡುವಳು. ಕಣ್ಣು ಕೆಂಪಗೆಮಾಡಿ ತಲೆಯನ್ನು ಮೇಲೆ ಕೆಳಗೆ ಆಡಿಸುತ್ತಾ-]

ರಾಜಮ್ಮ:— ಓಹೋ! ತಿಳಿಯಿತು ಇವರ ಆಟ! ಕಛೇರಿಯಲ್ಲಿ ಕೆಲಸ ಹೆಚ್ಚು ಎಂದು ನೆವಹೇಳಿ ಇಲ್ಲಿಗೆ ಬರ್ತಾರೋ, ಇವಳ ಮನೇಗೆ . . . . ಹುಂ, ಆಗಲಿ, ಮನೇಗೆ ಬರಲಿ; ಮಾಡ್ತೀನಿ ಪೂಜೆ!

(ಲೀಲಾವತಿಯನ್ನು ಕುರಿತು-)

ಇವರೇನೋ ನಿಮ್ಮ ಯಜಮಾನ್ರು? . .

ಲೀಲಾವತಿ:— ಆ-ಹು-ದು.

(ನಗುತ್ತಾ ತಲೆಯಲ್ಲಾಡಿಸುವಳು.)

ರಾಜಮ್ಮ— ಅಹುದೋ . . ! . . ಆಗಲಿ, ನಾನು ಬರುತ್ತೀನಮ್ಮಾ, ಇನ್ನು.

ಲೀಲಾವತಿ:— ಒಳ್ಳೆಯದಮ್ಮಾ. ಆಗಾಗ ಬರುತ್ತಿರಿ ಮರೆಯದೆ!

ರಾಜಮ್ಮ:—ಮರೆಯೋದುಂಟೇ ಛೇ! ಛೇ! . . ಖಂಡಿತ ಬರುಹೋಗ್ತಿರ್ತೀನಿ. ನೀವೂ ಈಗ ಊಟಮಾಡಿಕೊಂಡು ಒಳ್ಳೆ ಬೇಜಾರಾಗುತ್ತೆ, ಏನಾದರೂ ಮಾತಾಡ್ತಿರೋಣ!

ಲೀಲಾವತಿ:— ಆಗಲಿ ಒರ್ತೀನಿ.

ರಾಜಮ್ಮ:— ಒಳ್ಳೆಯದು, ಒರ್ತೀನಿ.

(ಕೋಪದಿಂದ ಹೊರಟುಹೋಗುವಳು.)

[ತೆರೆಯ ಹಿಂದಿನಿಂದ]

ಲೀಲಾ, ಲೀಲಾ . . . . . .

ಲೀಲಾವತಿ:— ಬಂದೇ . . . . . .

(ಒಳಗೆ ಹೋಗುವಳು.)

[ತೆರೆಯು ಬೀಳುವುದು.]

ಎರಡನೆಯ ದೃಶ್ಯ

[ರಾಜಮ್ಮನ ಮನೆ. ಕೋಣೆಯಲ್ಲಿ ಯಾವ ಸಾಮಾನೂ ಇರುವುದಿಲ್ಲ. ಖಾಲಿ ಕೋಣೆ; ಕೋಣೆಯ ಮಧ್ಯದಲ್ಲಿ ಒಂದು ದಪ್ಪ ಹಗ್ಗವು ತೂಗಾಡುತ್ತಿರುತ್ತದೆ. ಕೋಣೆಯ ಎಡಭಾಗದಲ್ಲಿ ಒಳಗೆ ಹೋಗುವ ಬಾಗಿಲು. ಬಲ ಭಾಗದಲ್ಲಿ ಹೊರಗೆ ಹೋಗುವ ಹೆಬ್ಬಾಗಿಲು.

ಮೊದಲು ಕೋಣೆಯಲ್ಲಿ ಯಾರೂ ಇರುವುದಿಲ್ಲ. ಸ್ವಲ್ಪ ಹೊತ್ತಿನ ತರುವಾಯ ವೆಂಕಣ್ಣನು ಹೊರಗಡೆಯಿಂದ ಪ್ರವೇಶಿಸುವನು. ಕೈಯಲ್ಲಿ ಬೆತ್ತ ಮತ್ತು ಕೆಲವು ಕಾಗದ-ಪತ್ರಗಳನ್ನು ಹಿಡಿದಿರುವನು. ೪೦-೪೫ ವರ್ಷ ವಯಸ್ಸಿರಬಹುದು. ಆಳು ಅಷ್ಟು ಎತ್ತರವೂ ಇಲ್ಲ; ಅಷ್ಟು ಕುಳ್ಳಾಗಿಯೂ ಇಲ್ಲ. ಹಲ್ಲಿಯಂತೆ ತೆಳ್ಳಗಿರುವ ದೇಹ. ಕೋಟು, ಟೋಪಿ, ಪಂಚೆಯನ್ನು ಧರಿಸಿರುವನು.]

ವೆಂಕಣ್ಣ:—ಲೇ! ಲೇ! . . ಬಾರೇ ಸ್ವಲ್ಪ.

ರಾಜಮ್ಮ:— (ತೆರೆಯ ಹಿಂದಿನಿಂದ) ಏನು!... ಬರಬೇಕೋ ಸ್ವಲ್ಪ?

ವೆಂಕಣ್ಣ:—ಹುಂ, ಕಾಣೇ . . ಬಾ!

ರಾಜಮ್ಮ:—ಆಗಲಿ, ಬರೋಣ.

ವೆಂಕಣ್ಣ:— ಬಾ, ಬೇಗ ಬಾ. . . ನಿದಾನಿಸಬೇಡ!

ರಾಜಮ್ಮ:– (ಬೀದಿಯಿಂದ ಮತ್ತು ಕೋಪದಿಂದ ಪ್ರವೇಶಿಸುವಳು.) ಹುಂ. . . . . ಬರಬೇಕೋ ನಿಮಗೆ! . . ಆಗಲಿ. ಬಂದೆ, ಏನಾಗಬೇಕು?

ವೆಂಕಣ್ಣ:— ನೋಡೂ . . ಕರೆದರೆ ಬೇಗ ಬರಬೇಕು . . ಇಷ್ಟು ನಿದಾನ ಮಾಡಿದರೆ ಹೇಗೆ, ಹೇಳು!

ರಾಜಮ್ಮ:— ಇರಲಿ, ನನ್ನಿಂದೇನಾಗಬೇಕು?

ವೆಂಕಣ್ಣ:— (ಕಾಗದಗಳು ಮತ್ತು ಬೆತ್ತವನ್ನು ಅವಳ ಕಡೆಗೆ ನೀಡಿ-) ತಗೋ, ಇದನ್ನು ಒಳಗಿಡು!

ರಾಜಮ್ಮ:—ನಾನು ಇಡಬೇಕೋ?— ಇರಲಿ, ನೀವೇ ಹೋಗಿ ಇಡಿ!

ವೆಂಕಣ್ಣ:—ಏನೇ ಹೀಗಂತೀಯಾ!—

ರಾಜಮ್ಮ:— ಹೌದು, ಹೇಳೋದು ಹಾಗೇ!

ವೆಂಕಣ್ಣ:— ಏನಿದು? . . ಯಾಕೆ ಕೋಪ? . . ಕಾರಣ?

ರಾಜಮ್ಮ:—ಪಾಪ! . . ಏನುಗೊತ್ತು ನಿಮಗೆ? . . . . ಕಾರಣ ನಿಮಗೇ ಗೊತ್ತಾಗುತ್ತೆ? . . ಪಾಪ! ಏನೂ ತಿಳೀದು!

ವೆಂಕಣ್ಣ:— ಏನದು ತಿಳಿಸು, ಸ್ವಲ್ಪ ಕೇಳೋಣ!

ರಾಜಮ್ಮ:— ಸ್ವಲ್ಪವೇಕೆ? ಪೂರ್ತೀನೇ ಗೊತ್ತಾಗುತ್ತೆ!

ವೆಂಕಣ್ಣ:—ಏನೇ, ನೀನು ಹೇಳೋದು, ನನಗೆ ಸ್ವಲ್ಪವೂ ಅರ್ಥವೇ ಆಗೋದಿಲ್ಲ. ಇರಲಿ, ಹೋಗಿ ಉಡುಪನ್ನು ಬಿಚ್ಚಿಟ್ಟು ಬರೋಣ. (ವೆಂಕಣ್ಣನು ಒಳಗೆ ಹೋ[ಗಿ] ಕೋಟು-ಟೋಪಿಗಳನ್ನು ಬಿಚ್ಚಿಟ್ಟು, ಒಂದೆರ[ಡು] ನಿಮಿಷದ ತರುವಾಯ ಹೊರಗೆ ಬರುವನು. ನೋಡೂ. . ., ಅರ್ಥವಾಗುವ ಹಾ[ಗೆ] ಹೇಳಿದರೆ ನನಗೆ ವಿಷಯ ಗೊತ್ತಾಗುತ್ತೆ. ಸರಿಯಾಗಿ ಹೇಳಿಬಿಡು!

ರಾಜಮ್ಮ:— ಊಹೂಂ, ನಿಮ[ಗೆ] ಗೊತ್ತಾಗಬೇಕೋ? . . ಆಗಲಿ!

ವೆಂಕಣ್ಣ:-ಹೋಗಿ ಕಾಫೀ ತಗೊಂಡು ಬಾ, ಆಮೇಲೆ ನಿದಾನವಾಗಿ ಮಾತಾಡೋಣ!

ರಾಜಮ್ಮ:— ಕಾಫೀನೂ ಇಲ್ಲ - ಗೀಫೀನೂ ಇಲ್ಲ. ಬೇಕಾದರೆ ತಣ್ಣೀರಿ[ದೆ]

ವೆಂಕಣ್ಣ:— ಯಾಕೆ? . . ಕಾಫಿ ಮಾಡಲಿಲ್ಲವೇನೇ?

ರಾಜಮ್ಮ:— ಇಲ್ಲ. . . . ನಿಮಗೆ ಇಲ್ಲಿಯ ಕಾಫಿ. . . ಎಲ್ಲಾ ಆಗುತ್ತೆ ಅವ[ಳ] ಮನೇಲಿ!

ವೆಂಕಣ್ಣ:— (ಬೆಚ್ಚಿಬಿದ್ದು) ಏ[ನು] ಅದು? . . ಯಾರ ಮನೇನೇ?

ರಾಜಮ್ಮ:—ಯಾರ ಮನೇ ಅಂ[ತ] ಕೂಡ ಹೇಳಬೇಕೇನೋ! . . ಪಾಪ[!] ನಿಮಗೆ ಗೊತ್ತೇ ಇಲ್ಲ!

ವೆಂಕಣ್ಣ:— ಇಲ್ಲ ಕಾಣೇ; ನನ[ಗೆ] ಗೊತ್ತಿಲ್ಲ!

ರಾಜಮ್ಮ:— ಜ್ಞಾಪಿಸಿಕೊಂ[ಡರೆ] ಎಲ್ಲಾ ಗೊತ್ತಾಗುತ್ತೆ!

ವೆಂಕಣ್ಣ:— ನನಗೆ ಜ್ಞಾಪಕ ಬರೋದಿಲ್ಲ, ನೀನೇ ಹೇಳೇ.

ರಾಜಮ್ಮ:— ಪಾಪ! ಅದ್ಯೇಗೆ ...ಜ್ಞಾಪಕ ಬರುತ್ತೆ ಹೇಳಿ... ಈ ಮನೆ ...ಬಿಟ್ಟು ಒಂದು ಹೆಜ್ಜೆ ಹೋಗಿಟ್ಟರೆ ಸಾಕು, ...ಅವಳ ಮನೆ ಜ್ಞಾಪಕಕ್ಕೆ ಬರುತ್ತೇನೋ..! ...ಹೋಗಿ, ಹೊರಗೆ ಒಂದು ಹೆಜ್ಜೆ ಇಟ್ಟು ...ಬಿಟ್ಟು ಜ್ಞಾಪಕ ಮಾಡಿಕೊಂಡು ಬನ್ನಿ!

ವೆಂಕಣ್ಣ:— ಯಾರ ಮನೆಯೇ? ...ನನಗೆ ಹಾಸ್ಯ ಮಾಡ್ತಿಯೇನೇ? ನಾನೊಬ್ಬ ...ಡಪಾಯಿ ಕಾಣೇ!.... ನಿನಗೆ ಏನು ...ಸಂಶಯವಿದೆಯೋ ನನ್ನ ಮೇಲೆ..ಅದನ್ನು ...ಹೇಳೇ. ಅದನ್ನು ಪರಿಹಾರವಾದರೂ ...ಮಾಡೋಣ!

ರಾಜಮ್ಮ:— ಏನು?.. ನೀವು ನನ್ನ ...ಸಂಶಯವನ್ನು ಪರಿಹಾರ ಮಾಡ್ತೀರೋ?.... ...ನಾನೇ ಮಾಡ್ತೇನೆ ನಿಮಗೆ!

ವೆಂಕಣ್ಣ:— ನನಗೇನು ಮಾಡಿ ...ಬಿಡ್ತೀಯೋ, ನೀನು?

ರಾಜಮ್ಮ:— ಏನು ಮಾಡ್ತೇನೋ ...ಮೇಲೆ ಗೊತ್ತಾಗುತ್ತೆ .... ಹುಂ. ...ಜ್ಞಾಪಕಕ್ಕೆ ಬಂತೋ?.. ಪಾಪ! ಅದು ...ಹ್ಯಾಗೆ ಬಂದೀತು?

ವೆಂಕಣ್ಣ:— ನನಗೆ ಜ್ಞಾಪಕಕ್ಕೆ ...ಬಲ್ಲವೇ..ನೀನೇ ಹೇಳಬಿಡು; ಕೇಳಿ ...ಬಿಡ್ತೇನೆ!

ರಾಜಮ್ಮ:— (ಬಹಳ ಕೋಪದಿಂದ ...ಕಿರುಚಿಯುತ್ತ–) ಕೇಳಿ ಬಿಡ್ತೀರೋ, ...ಕೇಳಿ...ನೀವು, ಈವೊತ್ತು ಆ..ಆ ...ಲೀಲಾವತೀಬಾಯಿ ಮನೇಲಿ ಏನ್ಮಾಡ್ತಿದ್ದಿ ...ರಿ?.. ..ಗೊತ್ತಾಯ್ತೇ? ಚೆನ್ನಾಗಿ ...ಗೊತ್ತೇ?..ಅಲ್ಲೇನು ಮಾಡ್ತಿದ್ದಿರಿ?

ವೆಂಕಣ್ಣ:— (ಬೆಚ್ಚಿಬಿದ್ದು, ಭಯದಿಂದ) ...ಏ ಅದು?..ಯಾರೇ ಅವಳು, ಲೀಲಾ ...ವತೀಬಾಯಿ?..ನನಗೆ ಅವಳು ಗೊತ್ತೇ ...ಇಲ್ಲೇ....ಇದೇನೆ, ನೀನು ಹೀಗೆಲ್ಲ ...ಸಂಶಯಪಡ್ತೀ ನನ್ನ ಮೇಲೆ?

ರಾಜಮ್ಮ— ನಿಜ ನಿಜ! ನಾ–ನು ...ಸಂಶಯಪಡ್ತೇನೋ?....ನನ್ನ ಮುಂದೆ ...ಎಲ್ಲಾ ಕಟ್ಟಿಬಿಡಿ. ಈಗ ಬೇಡ, ...ಈ ವಿಚಾರ ಸರಿಯಾಗಿ ಹೇಳಿಬಿಟ್ಟರೆ ...ಹೋಯ್ತು; ಇಲ್ಲದಿದ್ದರೇ....!

ವೆಂಕಣ್ಣ:— ಏನೇ, ನೀನು ಹೀಗೆಲ್ಲಾ ಸಂಶಯಪಟ್ಟುಕೊಂಡು ನನ್ನ ಮೇಲೆ ಕಲ್ಲು ಹೊತ್ತಾಕ್ತೀಯೇನೆ? ನಾನು ಇನ್ನೂ ಸ್ವಲ್ಪ ದಿನ ಬದುಕಿರ್ತೇನೆ?....ನಾನು ಈಗಲೇ ಕಛೇರಿಯಿಂದ ಬರ್ತಿದ್ದೇನಲ್ಲೇ!

ರಾಜಮ್ಮ:— ನಿಜ.. ..ನೋಡಿ, ಸುಮ್ಮನೇ ಸುಳ್ಳು ಹೇಳೋದರಿಂದ ಪ್ರಯೋಜನವಿಲ್ಲ...ಇರೋ ವಿಚಾರ ಇದ್ದ ಹಾಗೇ ಹೇಳಿಬಿಡಿ!

ವೆಂಕಣ್ಣ:—ನೋಡು, ನಾನು ಈಗಲೇ ಕಛೇರಿಯಿಂದ ಬಂದಿದ್ದೇನೆ. ನನ್ನನ್ನು ಸುಮ್ಮನೇ ಸತಾಯಿಸಬೇಡ,.. ಹೋಗಿ ಕಾಫೀ ತಗೊಂಡು ಬಾ.

ರಾಜಮ್ಮ:— ಕಾಫೀ ಮಾತನ್ನೇ ಮರೆತುಬಿಡಿ...ನೀವು ಅವಳ ಮನೆಯಲ್ಲಿ ಏನು ಮಾಡ್ತಿದ್ದಿರೀಂತ ತಿಳಿಸಿಬಿಟ್ಟು, ಹೋಗಿ ಮಲಗಿಕೊಳ್ಳಿ!

ವೆಂಕಣ್ಣ:— (ಮನಸ್ಸಿನಲ್ಲಿಯೇ ಯೋಚಿಸುವನು.) ಇವಳಿಗೆ ಹೀಗೆಲ್ಲಾ ಮಾಡಿದರೆ ಹೇಳಿದರೆ ಪ್ರಯೋಜನವಿಲ್ಲ; ಸರಿಯಾಗಿ ಮಾಡಬೇಕು. ಇವಳು ದಾರಿಗೆ ಬರೋ ಹಾಗೆ ಕೆಲಸ ಕೊಡಬೇಕು. ಎಲ್ಲೋ, ಯಾರಿಂದಲೋ ನನ್ನ ಗುಟ್ಟು ತಿಳ್ಕೊಂಡು ಬಿಟ್ಟಿದ್ದಾಳೆ. ಈಗ ನನ್ನನ್ನು ಫಜೀತಿ ಪಡಿಸ್ತಾ ಇದ್ದಾಳೆ. ಹುಂ, ಇರಲಿ! (ಹೆಂಡತಿಯನ್ನು ಕುರಿತು ಕೋಪದಿಂದ) ಲೇ, ನೋಡು, ಹುಷಾರು, ನಾನು ಹೇಳಿದ ಕೆಲಸ ಮಾಡ್ತೀಯೋ ಅಥವಾ ಆಗಬೇಕೋ ಪೂಜೆ?...ಹುಂ, ಹೇಳು!

ರಾಜಮ್ಮ:— ಏನು ಆಗೋದು, ನೋಡೇ ಬಿಡ್ತೇನೆ....ಊಹುಂ. ನಾನು ಮಾಡೋದಿಲ್ಲ!

ವೆಂಕಣ್ಣ:— ಏನು?.. ಮಾಡೋದಿಲ್ಲವೇ ನೀನು? ಆಗಲಿ .. ನಿನ್ನನ್ನು ನೋಡ್ಕೊಳ್ಳೋದಕ್ಕೆ ನನ್ನ ಕೈಯ್ಯಲ್ಲಾಗೋದಿಲ್ವೇ? .... ನೋಡು. ನಾನು ಹೇಳಿದ ಕೆಲಸ ಮಾಡದೇ ಇದ್ದರೆ ಇಲ್ಲೇ— ನಿನ್ನೆದುರಿಗೆ ಪ್ರಾಣಕಳ್ಕೊಂಡ್ಬಿಡ್ತೇನೆ.. ಜೋಕೆ, ನಿನ್ನ ಮಾಂಗಲ್ಯ ಗಟ್ಟಿಯಾಗಿರಬೇಕೂಂತಿದ್ದರೆ ನಾನು ಕೇಳಿದ ಕೆಲಸ ಮಾಡು!

ರಾಜಮ್ಮ:— ಏನೂ ಪರವಾ ಇಲ್ಲ. ನನ್ನ ಮಾಂಗಲ್ಯ ಗಟ್ಟಿಯಾಗೇ ಇದೆ. ದಪ್ಪ ಹಗ್ಗದಿಂದಾನೇ ಪೋಣಿಸಿದ್ದೇನೆ. ನೀವು ಪ್ರಾಣ ಕಳ್ಕೊಂಡರೆ ಅದೇನು ಕಡಿದು ಬಿದ್ದುಹೋಗೋದಿಲ್ಲ ....ನೀವು ಪ್ರಾಣ ಕಳ್ಕೋಬಹುದು!

ವೆಂಕಣ್ಣ:– ಏನು!..ಪ್ರಾಣ ಕಳ್ಕೋಬಹುದೇ? ... ಆಗಲಿ. ನಿನಗೆ ಸರಿಯಾಗಿ ಮಾಡ್ತೇನೆ. (ಒಳಗೆ ಹೋಗಿ ಒಂದು ಬೆಂಚನ್ನು ಹೊತ್ತುಕೊಂಡು ಬಂದು, ಹಗ್ಗವು ತೂಗಾಡುತ್ತಿದ್ದುದರ ಕೆಳಗೆ ಸರಿಯಾಗಿ ಹಾಕುವನು) ನೋಡು, ಜೋಕೆ....ನಾನು ಇಲ್ಲೇ ನೇಣುಹಾಕಿಕೊಂಡು ಬಿಡ್ತೇನೆ......ಸ್ವಲ್ಪ ಯೋಚನೆಮಾಡು; ನಿನ್ನ ಮಾಂಗಲ್ಯ ಇರಬೇಕಂತಿದ್ದರೆ ನಾನು ಹೇಳಿದ ಕೆಲಸ ಮಾಡು!

ರಾಜಮ್ಮ:— ನಾನು ಮಾಡೋದೇ ಇಲ್ಲ .. ನೀವು ನೇಣನ್ನಾದ್ರೂ ಹಾಕಿಕೊಳ್ಳಿ.—ಕತ್ತನ್ನಾದರೂ ಕಡಿದುಕೊಳ್ಳಿ.. ನನಗೇನೂ ಚಿಂತೆಯಿಲ್ಲ!

ವೆಂಕಣ್ಣ:— ನೇಣನ್ನು ಹಾಕಿಕೊಂಡು ಬಿಡಲೋ? ಆಗಲಿ, ನಿನ್ನ ಇಷ್ಟವಿದ್ದಂತೆಯೇ ಆಗಲಿ. (ಬೆಂಚಿನ ಮೇಲೆ ನಿಂತುಕೊಳ್ಳುವನು. ತೂಗಾಡುತ್ತಿದ್ದ ಹಗ್ಗವನ್ನು ಹಿಡಿದುಕೊಳ್ಳುವನು.) ನೋಡು, ಹಾಕಿಕೊಂಡು ಬಿಡಲೋ?

ರಾಜಮ್ಮ:— ಹಾಕಿಕೊಳ್ಳಿ. ಸತ್ತರೆ ಮುಂದಿನ ಏರ್ಪಾಡಿಗೆ ನಾನಿದ್ದೇನೆ.

ವೆಂಕಣ್ಣ:—ಹಾಕ್ಕೊಂಡು ಬಿಡಲೋ? ಹಾಕ್ಕೊಂಡು ಬಿಡಲೋ?

ರಾಜಮ್ಮ:—ಹಾಕ್ಕೊಂಡುಬಿಡೀಂದ್ರೆ! ಎಷ್ಟು ಸಲ ಹೇಳೋದು?........ ನೇಣು ಹಾಕ್ಕೊಳ್ಳೋದಕ್ಕೆ ನಿಮಗೆ ಹೆದರಿಕೆಯಾದರೆ ನಾನೇ ಹಾಕ್ತೇನೆ; ಬರಲೇ?

ವೆಂಕಣ್ಣ:–ನನಗೆ ಹೆದರಿಕೆಯೇ?....ಹೇಡಿ ನೀನು! ನೋಡು ಹಾಕ್ಕೊಂಡೇ ಬಿಟ್ಟೆ!

ರಾಜಮ್ಮ:— ಏನನ್ನು— ?

ವೆಂಕಣ್ಣ:— ನೇಣು! ನೇಣು! ಹಾಕ್ಕೊಂಡೆ, ಹಾಕ್ಕೊಂಡೆ!

ರಾಜಮ್ಮ:— ಹಾಕ್ಕೊಳ್ಳಿ, ಬೇಗ ಹಾಕ್ಕೊಳ್ಳಿ. (ವೆಂಕಣ್ಣನು ಹಗ್ಗವನ್ನು ತನ್ನ ಕತ್ತಿಗೆ ಸುತ್ತಿಕೊಳ್ಳುವನು)

ವೆಂಕಣ್ಣ:— ಹೋದೆ ಕಾಣೇ; ಹೋದೆ....!

ರಾಜಮ್ಮ:—ಬೆಂಚು ತೆಗೆದು ಬಿಡಲೇ? (ವೆಂಕಣ್ಣನು ನಿಂತಿದ್ದ ಬೆಂಚಿನ ಹತ್ತಿರ ಹೋಗಿ ಅದನ್ನು ಅಲುಗಾಡಿಸುವಳು. ವೆಂಕಣ್ಣನು ಗಾಬರಿಯಿಂದ ಹಗ್ಗವನ್ನು ಗಟ್ಟಿಯಾಗಿ ಹಿಡಿದು ಕೊಳ್ಳುವನು.)

ವೆಂಕಣ್ಣ:— ಬೇಡ ಕಾಣೇ! ಬೇಡ ಕಾಣೇ! ಅಯ್ಯೋ, ಅಯ್ಯೋಯ್ಯೋ........! ಇಲ್ಲವೇ ಸಾಯೋದಿಲ್ಲವೇ!

ರಾಜಮ್ಮ:— ನೇಣು ಹಾಕ್ಕೊಂಡು ಬಿಡಿ, ಪರವಾ ಇಲ್ಲ. ಅರ್ಧ ಆಗಿದೆ. ಇನ್ನರ್ಧಾನೂ ಮುಗಿದು ಹೋಗಲಿ!

ವೆಂಕಣ್ಣ:— ಇಲ್ಲವೇ, ಹಾಕ್ಕೊಳ್ಳೋದಿಲ್ವೇ! ಬೆಂಚು ಸರಿಯಾಗಿಡೆ. ಕತ್ತು ಉರಿಯುತ್ತೆ. ಪ್ರಾಣಹೋಗೇ ಬಿಡತ್ತೇ! ಇಡೇ!

ರಾಜಮ್ಮ:— ನೇಣು ಹಾಕ್ಕೊಳ್ತೀನೆ ಅಂದ್ರಿ....ಬೆಂಚು ತಂದು ಹಾಕಿಕೊಂಡ್ರಿ. ಯಾಕಷ್ಟು ಹೆದರಿಕೆ?........ ಹಾಕ್ಕೊಳ್ಳಿ ನಾನಿದ್ದೀನೆ, ನೂಕೋದಕ್ಕೆ!

ವೆಂಕಣ್ಣ:— ಇಲ್ಲವೇ ತಪ್ಪಾಯ್ತು! (ರಾಜಮ್ಮನು ಬೆಂಚನ್ನು ಸರಿಯಾಗಿಟ್ಟು ಮುಂದೆ ಬರುವಳು. ವೆಂಕಣ್ಣನು ಹಗ್ಗವನ್ನು ಬಿಚ್ಚಿಕೊಂಡು, ಕತ್ತನ್ನು ಉಜ್ಜಿಕೊಳ್ಳುತ್ತ ಕೆಳಗಿಳಿಯುವನು.) ಏನೇ ನೀನು! ನಿಜವಾಗಿಯೂ ಪ್ರಾಣಕಳೆದು ಬಿಡುತ್ತಿದ್ದೆಯಲ್ಲೇ!........ ಅಯ್ಯೋ! ಅಯ್ಯೋ!... ನಾನು ನಿನಗೆ ಹೆದರಿಸೋದಕ್ಕೇಂತ ಮಾಡಿದರೆ, ನನ್ನನ್ನೇ ಹೆದರಿಸಿಬಿಟ್ಟೆಯಲ್ಲೇ!....ನನ್ನ ಗುಂಡಿಗೇನೇ ಹಾರ್ಹೋಗಿತ್ತಲ್ಲೇ!.. ಅಬ್ಬಬ್ಬಾ! (ಎದೆ ಮುಟ್ಟಿಕೊಳ್ಳುವನು) ನೋಡೆ! ನೋಡೆ! ನನ್ನ ಹೃದಯ ಹೇಗೆ ಬಡಕೊಳ್ಳುತ್ತೆ; ನಿಮಿಷಕ್ಕೆ ಸಾವಿರ ಸಲ ಹೊಡ್ಕೊಳ್ಳುತ್ತೆ, ನೋಡೆ!

ರಾಜಮ್ಮ:— ಅಯ್ಯೋ ಪಾಪ! ಪಾಪ!....ನೀವೇ ಹೇಳಿದಿರಿ, ನೇಣು ಹಾಕಿಕೊಂಡು ಪ್ರಾಣಬಿಟ್ಟಬಿಡ್ತೀನಂತ. ಅದಕ್ಕೇ ನಾನು, ಬೇಗ ಪ್ರಾಣ ಹೋಗಿಬಿಡಲೀಂತ ಸಹಾಯ ಮಾಡ್ದೆ!

ವೆಂಕಣ್ಣ:—ಒಳ್ಳೇ ಸಹಾಯ ಕಾಣೇ ನೀನ್ಮಾಡೋದು,... ಏನೇ, ನಾನು ಬದುಕಿರೋದು ನಿನಗೆ ಇಷ್ಟವಿಲ್ಲವೇನೇ?

ರಾಜಮ್ಮ:— ಇಲ್ಲ. (ಕೋಪಗೊಂಡು) ಇರಲಿ, ಮಾತು ಬದಲಾಯಿಸೋದಕ್ಕೆ ಸಾಹಸ ಮಾಡಬೇಡಿ. ಅವಳ ಮನೇಲ್ಲಿ ಏನ್ಮಾಡತಿದ್ರೀಂತ ಹೇಳಿದರೆ ಸರಿಹೋಯ್ತು; ಇಲ್ಲದಿದ್ದರೆ ನಿಮ್ಮನ್ನ.......

ವೆಂಕಣ್ಣ:— ಅವಳು ಯಾರೋ ನನಗೆ ಗೊತ್ತೇ ಇಲ್ಲವೇ. ನಾನು ಅವಳನ್ನು ನೋಡೇ ಇಲ್ಲವೆ....ನನ್ನನ್ನು ಸುಮ್ಮನೇ ಗೋಳುಹೊಯ್ಕೊಂಡು ಪ್ರಾಣಕಳೆದುಬಿಡ್ತೀಯಲ್ಲೇ.

ರಾಜಮ್ಮ:— ಪಾಪ! ನೀವೆಲ್ಲಿ ಸಾಯಿತ್ತೀರಿ. ನೇಣು ಹಾಕಿದ್ರೂ ಸಾಯೋದಿಲ್ಲ!.... ಹುಂ....ನೀವೇನು ಮಾಡ್ತಿದ್ದಿರಿ! ಅಲ್ಲಿ, ಹೇಳಿದರೆ ಸರಿ; ಇಲ್ಲಾ, ಅವಳ ಮನೆಗೇ ಹೊರಟುಹೋಗಿ! ಇಲ್ಲಿರಬೇಕಾಗಿಲ್ಲ!

ವೆಂಕಣ್ಣ:— ನೋಡೆ.. ನಾನು ಹಾಗೆಲ್ಲಾ ಹೋಗೂದಿಲ್ಲ ಕಾಣೆ! ನನಗೆ ಅಂಥ ದುರಭ್ಯಾಸವಿಲ್ಲವೇ..ನನಗೆ ಯಾರೂ ಗೊತ್ತಿಲ್ಲ; ನಾನು ಎಲ್ಲೂ ಹೋಗೋದಿಲ್ಲವೇ.. ಏಕಪತ್ನೀವ್ರತಸ್ಥನೇ ನಾನು!

ರಾಜಮ್ಮ:— ಊ-ಹೂಂ .. ಏಕ-ಪತ್ನೀ-ವ್ರತಸ್ಥ. ಅಬ್ಬಬ್ಬಾ! ಎಂತಹ ದೊಡ್ಡ ವ್ರತ! ..ಏನು? ನೀವು ಬಹು-ಪತ್ನೀವ್ರತ ಮಾಡೋದಿಲ್ಲವೊ?

ವೆಂಕಣ್ಣ:— ಉಹುಂ...ಇಲ್ಲ ಕಾಣೆ!

ರಾಜಮ್ಮ:— ಏಕಪತ್ನಿ ಯಾರು?— ಅವಳೋ?

ವೆಂಕಣ್ಣ:— ನೀನೇ, ನೀನೇ .... ಅವಳಲ್ಲವೇ!

[ಈ ಹೊತ್ತಿಗೆ ಸರಿಯಾಗಿ ಲೀಲಾವತಿಯು 'ರಾಜಮ್ಮನವರೇ' ಎಂದು ಕೂಗಿ, ಒಳಗೆ ಪ್ರವೇಶಿಸುವಳು. ವೆಂಕಣ್ಣನು ಗಾಬರಿಯಾಗಿ, ತಲೆಕೆರೆಯುತ್ತ ನಡುಗಲಾರಂಭಿಸುವನು. ಲೀಲಾವತಿಯು ಇವನನ್ನು ನೋಡಿ ಬೆಚ್ಚಿಬಿದ್ದು, ಆವಾಕ್ಕಾಗಿ ನಿಂತುಬಿಡುವಳು. ಲೀಲಾವತಿಯು ವೆಂಕಣ್ಣನನ್ನು ನೋಡುತ್ತಿರುವಳು. ವೆಂಕಣ್ಣನು ತಲೆಯನ್ನು ಬಗ್ಗಿಸಿ, ಪಕ್ಕಕ್ಕೆ ತಿರುಗಿ, ಭೂಮಿಯನ್ನು ಏಕದೃಷ್ಟಿಯಿಂದ ನೋಡುತ್ತಿರುವನು. ರಾಜಮ್ಮನು ಇವರಿಬ್ಬರನ್ನೂ ನೋಡುತ್ತಿರುವಳು.]

ರಾಜಮ್ಮ:— ಲೀಲಾವತಿಬಾಯಿ, ನೀವು ಸರಿಯಾದ ಹೊತ್ತಿಗೇ ಬಂದ್ರಿ.. ನೋಡಿ, ಇವರು ಸ್ವಲ್ಪ ಹೊತ್ತಿಗೆ ಮುಂಚೆ ನೇಣುಹಾಕಿಕೊಂಡು ಪ್ರಾಣಬಿಟ್ಟುಬಿಡ್ತೀನೇಂತ ಹೇಳಿ ಬೆಂಚುಹಾಕಿಕೊಂಡು, ಕತ್ತಿಗೆ ಹಗ್ಗಸುತ್ತಿಕೊಂಡು ಬಿಟ್ರು .. ಆದರೆ ಅವರಿಗೆ ಪ್ರಾಣಬಿಡೋದಕ್ಕೆ ಬಹಳ ಭಯವಾಗ್ಹೋಯ್ತಂತೆ. ಕಣ್ಣಾಣ್ಣಬಿಟ್ಟು ಇದ್ದರು. ಆದರೆ ಪೂರ್ತಿ ಸಾಯಲಿಲ್ಲ ಅರ್ಧಸತ್ತರಂತೆ. ಆ ಮೇಲೆ ಕೆಳಗಿಳಿದುಬಿಟ್ರುವಮ್ಮಾ!

ಲೀಲಾವತಿ:—ಊಹೂಂ..ರಾಜಮ್ಮನವರೇ, ಇವರು ನಿಮ್ಮ ಯಜಮಾನ್ರೇ

ರಾಜಮ್ಮ:— ನನ್ನ ಪೂರ್ವಪುಣ್ಯಫಲ ಕಾಣ್ರಮ್ಮ!

ಲೀಲಾವತಿ:— (ಹಣೆ ಹಣೆ ಹೊಡೆದುಕೊಂಡು) ನೋಡ್ರಮ್ಮ, ಇವರು ನನಗೆ ಎಷ್ಟು ಮೋಸ ಮಾಡಿದ್ದಾರೆ. ನನ್ನ ಸಂಸಾರವನ್ನೆಲ್ಲಾ ಹಾಳು ಮಾಡಿದರು ಇವರನ್ನು ನಂಬಿ ನಾನು ಕೆಟ್ಟುಹೋದೆನಲ್ರವಮ್ಮಾ .... ಈಗೇನು ಮಾಡಲಮ್ಮ ನಾನು? ನನ್ನ ಮುಂದಿನ ಜೀವನ ಹೇಗ್ರವಮ್ಮಾ ನಡೆಸೋದು .. ನಿಮ್ಮನ್ನೂ ಹಾಳುಮಾಡಿದ್ರಲ್ಲ ಇವರು! (ವೆಂಕಣ್ಣನ ಕಡೆಗೆ ನೋಡಿ ಕೋಪದಿಂದ) ಏನ್ರೀ ಇದು ಮೋಸ..'' ನನಗೆ ಮದುವೇನೇ ಆಗಿಲ್ಲ ಎಲ್ಲಾ ನೀನೇ, ನೀನೇ ನನ್ನ ಸರ್ವಸ್ವ ಎಂತ ಹೇಳಿದ್ರೂ ಹೇಳಿದ್ದೇ. ಎಷ್ಟು ಬಿನ್ನಾಣದ ಮಾತಾಡಿದಿರಿ. ಈ ತರದ ಮೋಸ ಮಾಡಿ ನನ್ನನ್ನೂ — ಅವರನ್ನೂ ಮೋಸ ಮಾಡಿದಿರಾ? .. ಏನು? ಮಾತಾಡಿ. ಬಾಯಿಯಿಲ್ಲವೇ?.. ಆಗ — ಬಿನ್ನಾಣ ಮಾತಾಡೋವಾಗ ಹೇಗಿತ್ತು ಬಾಯಿ ಥೂ, ನಿಮ್ಮ ಬಾಳಿಗೆ—ಸಂಸಾರಸ್ಥರಾ ನಿಮ್ಮ ಬಾಳಿಗೆ—ಬೆಂಕಿಹಾಕಬೇಕು.... ಹುಂ .. ಹೀಗೇ ನೀವು ಎಷ್ಟು ಜನರನ್ನ ಹಾಳುಮಾಡಿದ್ದೀರಿ. ....

(೫೩೭ನೆಯ ಪುಟ ನೋಡಿರಿ)

ಸೋಲರಿಯದ ಜಪಾನಿಯರ ವ್ಯಾಪಾರಪಣ

ಡಾಕ್ಟರ್ ಎನ್. ಎಸ್. ಗೋಡಬೋಲೆ,
ಎಂ. ಎ , ಬಿ. ಎಸ್‌ಸಿ., ಪಿ. ಎಚ್. ಡಿ., (ಬರ್ಲಿನ್)
ಕಾಶಿಯ ಹಿಂದೂ ವಿಶ್ವವಿದ್ಯಾನಿಲಯದ ಉದ್ಯಮರಸಾಯನ
ವಿಭಾಗದ ಮುಖ್ಯಾಧ್ಯಾಪಕರು *

ಡಾಕ್ಟರ್ ಗೋಡಬೋಲೇ ನರಸಿಂಹರಾಯರು

ತಾನು ಪರದೇಶದಿಂದ ತುಟ್ಟಿಯ ಬೆಲೆಗೆ ತರಿಸಿಕೊಳ್ಳುತ್ತಿದ್ದ ಪದಾರ್ಥಗಳನ್ನೇ ಹಿಂದುಸ್ತಾನಕ್ಕೆ ಅಗ್ಗದ ಬೆಲೆಗೆ ಪೂರಯಿಸುವಂತಹ ವಿಚಿತ್ರವ್ಯಾಪಾರ ಪದ್ಧತಿ ಜಪಾನಿನವರದು. ವ್ಯಾಪಾರದಲ್ಲಿಯ ಮೇಲಾಟಕ್ಕಾಗಿ ಒದಗುತ್ತಿರುವ ಹಾನಿಯನ್ನು, ರಾಷ್ಟ್ರದ ಜನತೆಯ ಮೇಲೆಲ್ಲ ಹಂಚಿಹಾಕುವ ಪದ್ಧತಿಯನ್ನು ಜಪಾನ್ ಸರಕಾರವು ನಿರ್ಮಿಸಿದೆ. ಇದರಿಂದಲೆ ಇಂದು ಜಪಾನು ಎಂತೆಂತಹ ತೊಂದರೆಗಳನ್ನೂ ಎದುರಿಸಿ, ಪಶ್ಚಿಮರಾಷ್ಟ್ರಗಳೊಂದಿಗೆ ಮೇಲಾಟವಾಡಿ, ಜಯಶಾಲಿಯಾಗುತ್ತಿದೆ.

★

ಕೆಲವು ಪರದೇಶದ ವ್ಯಾಪಾರಿಗಳು ಜಪಾನಾ ದೇಶ ಯಾವಾಗಲೂ ತಮ್ಮ ಕಂಪನಿಗಳ ಷೇರ್‌ಹೋಲ್ಡರರಿಗೆ ಹೆಚ್ಚು ಲಾಭವನ್ನು ಕೊಡುವರೆಂದೂ, ಈ ರೀತಿಯ ಮೂಲಕ ತಮ್ಮ ಕಂಪನಿಗಳಿಗೆ ಹಾನಿಯಾಗುವುದೆಂದೂ ಹೇಳುತ್ತಾರೆ. ಈ ತರದ ಉಪೇಕ್ಷೆಯು ಲ್ಯಾಂಕಷಾಯರಿನ ಗಿರಣಿಯ ಮಾಲಿಕರಿಂದ ಕೇಳಬರುತ್ತದೆ. ಆದರೆ ಜಪಾನಿಯರು ಇದಕ್ಕೆ ಹೇಳುವ ಉತ್ತರವೇ ಬೇರೆ. ಅವರು ಎನ್ನುವಂತೆ, ಜಪಾನಿನ ಗಿರಣಿಗಳು ತಮ್ಮ ಮೆಂಬರರಿಗೆ ಹೆಚ್ಚು ಬೋನಸ್ ಕೊಡುವುದೇನೋ ನಿಜ; ಆದರೆ ಲಾಭದ ಕಾರಣವು ಪರದೇಶದವರು ಹೇಳುವಂತಹದಲ್ಲ. ವಸ್ತುಸ್ಥಿತಿಯೆಂದರೆ, ಜಪಾನಿನಲ್ಲಿ ಎಲ್ಲ ಕೊಳ್ಳುವುದೂ ಮಾರುವದೂ ವ್ಯಾಪಾರ ಸಂಘಗಳಿಂದ ನಿರ್ಣಯಿಸುತ್ತಿದ್ದು, ಹೊರಗಣ ಪೇಟೆಗಳಲ್ಲಿ ಬಂದ ಎಲ್ಲ ಹಾನಿಯನ್ನೂ ತಮ್ಮ ಪೇಟೆಯಲ್ಲಿಯೇ ಹೆಚ್ಚು ಬೆಲೆಗೆ ಮಾರಿಕೊಂಡು ತುಂಬಿಕೊಳ್ಳುತ್ತಾರೆ. ಇದೇ ಕಾರಣದಿಂದ ಜಪಾನಾ ಕಂಪನಿಗಳು ಯಾವಾಗಲೂ ಹೆಚ್ಚು ಲಾಭವನ್ನು ತೋರಿಸುತ್ತವೆ. ಆದರೂ ಈ ಕೃತ್ರಿಮ ಲಾಭದಿಂದ ಜಪಾನಿನ ಆರ್ಥಿಕಸ್ಥಿತಿಯು ಅವನತಿ ಹೊಂದುತ್ತಿದ್ದು, ಕೊನೆಯವರೆಗೆ ಇಷ್ಟು ಹೆಚ್ಚು ಬೋನಸ್ಸನ್ನು ಕೊಡಲು ಶಕ್ಯವಾಗುವುದಿಲ್ಲವೆಂದು ಅವರ ಈಗಿನ ಚಿಂತೆ.

ಜಪಾನಿನ ವ್ಯಾಪಾರವು ಎಷ್ಟೊಂದು ಸೂಕ್ಷ್ಮ ರೀತಿಯಿಂದಲೂ, ಸರ್ವತೋಮುಖ ಜಾಗೃತಿಯಿಂದಲೂ ನಡೆಯಿಸಲ್ಪಡುತ್ತದೆಂಬುದನ್ನು ಈ ರೀತಿಯಲ್ಲಿ ತಿಳಿದುಕೊಳ್ಳಬಹುದು. ೧೯೩೮ರಲ್ಲಿ ಜಪಾನಿಯರು ಹೊರಗಿನಿಂದ ಹತ್ತಿಯನ್ನು ಹೆಚ್ಚಾಗಿ ಕೊಳ್ಳಲು ಶಕ್ಯವಿರಲಿಲ್ಲ; ಏಕೆಂದರೆ ಜಪಾನಿನಲ್ಲಿ ಈ ಹತ್ತಿಗೆ ಕೊಡುವ ಧನವು ಸಾಕಷ್ಟು ಇರಲಿಲ್ಲ. ಈ ಸಮಸ್ಯೆಯನ್ನು ಜಪಾನಿಯರು ಈ ರೀತಿಯಲ್ಲಿ ದೂರ ಮಾಡಿದರು. ಜಪಾನಾ ಸರಕಾರವು ಎಲ್ಲ ತರದ ನೂಲಿನ ಬಟ್ಟೆಗಳನ್ನೂ ತಮ್ಮ ದೇಶದಲ್ಲಿ ಮಾರಲಿಕ್ಕಾಗದೆಂದು ಕಾಯಿದೆ ಮಾಡಿತು. ಅಲ್ಲದೆ ಜಪಾನಿನಲ್ಲಿ ತಯಾರಿಸುವ ಕೃತ್ರಿಮ-ರೇಶಿಮೆಯ ಬಟ್ಟೆಯನ್ನೇ ಸರ್ವರೂ ಉಪಯೋಗಿಸಬೇಕೆಂದೂ ನಿಯಮವಾಯಿತು. ನೂಲಿನ ಬಟ್ಟೆಗಳು ಕೇವಲ ಪರದೇಶಕ್ಕೆ ಕಳಿಸಲಿಕ್ಕೆಂದೇ ತಯಾರಿಸಲ್ಪಡಹತ್ತಿದವು. ಅಲ್ಲದೆ ಈ ರೀತಿಯಲ್ಲಿ

---

* ಮೂಲ ಇಂಗ್ಲಿಷ್ ಲೇಖನವನ್ನು ಅನುವಾದಿಸಿ ಕೊಟ್ಟವರು ನನ್ನ ಆಪ್ತಮಿತ್ರರಾದ ಪ್ರೊ. ಎನ್. ಎಂ. ಕುಲಕರ್ಣಿ ಎಂ. ಎ. ಅವರು.

ಕೊಲ್ಹಾಪುರದಲ್ಲಿಯ
ಹೆಸರಾದ ಟೊಪ್ಪಿಗೆಯ ವ್ಯಾಪಾರಿಗಳು
ಬೋಂಗಾಳೇ ಬ್ರದರ್ಸ್, ಕ್ಯಾಪ್ ಮೇಕರ್ಸ್
ಮಹಾದ್ವಾರ ರೋಡ್, ಕೊಲ್ಹಾಪುರ ಸಿಟಿ.
* ಎಲ್ಲ ಮಾದರಿಯ ಟೊಪ್ಪಿಗೆಗಳೂ ಸರಿಯಾದ ಬೆಲೆಗೆ ಸಿಕ್ಕುವವು. ಕರ್ನಾಟಕದಲ್ಲಿಯ ಗೋಕಾಕ, ಚಿಕ್ಕೋಡಿ, ರಾಮದುರ್ಗ ಮೊದಲಾದ ಮುಖ್ಯ ಸ್ಥಳಗಳಲ್ಲೆಲ್ಲ ಪ್ರಸಿದ್ಧಿಯಿದೆ. ತಾವೂ ವಿಚಾರ ಮಾಡಿರಿ, ನಮ್ಮ ಟೊಪ್ಪಿಗೆಗಳನ್ನು ತರಿಸಿ ಅನುಭವ ಪಡೆಯಿರಿ.

ಪರದೇಶದ ಪೇಟೆಗಳಿಗೆ ಕಳಿಸುವ ಜಪಾನಿಯ ನೂಲುಬಟ್ಟೆಗಳಿಗೆ ಪೂರೈಸುವಷ್ಟೇ ಹತ್ತಿ-ಅರಳೆಯನ್ನು ಮಾತ್ರ ಜಪಾನು ಕೊಳ್ಳುತ್ತಿತ್ತು. ಈ ವ್ಯಾಪಾರನಿಯಮದಿಂದ ಪರದೇಶಕ್ಕೆ ಕಳಿಸುವ ಜಪಾನಿಯ ನೂಲುಗಳ ಧಾರಣಿಯು ಕಡಿಮೆಯಾಗಹತ್ತಿತು. ಜಪಾನು ಈ ಪರದೇಶದ ಪೇಟೆಗಳಿಗೆ ಮಾಲು ಕಳಿಸುವ ಸಂಘಗಳಿಗೆ ತುಂಬಾ ತೆರಿಗೆಯನ್ನು ಹೇರಿ, ಆ ಹಾನಿಯನ್ನೂ ತುಂಬಿಕೊಳ್ಳುತ್ತಿತ್ತು. ಎಂದರೆ ಬಟ್ಟೆಸ ಮೇಲೆ ಜಪಾನಿನಲ್ಲಿ ಪರದೇಶದ ಪೇಟೆಯಲ್ಲಿ ಬಂದ ಹಾನಿಯು ತನ್ನ ದೇಶದ ಪೇಟೆಯಲ್ಲಿ ಹೆಚ್ಚು ಕಿಮ್ಮತ್ತಿನಿಂದ ಬರುವ ಲಾಭದಿಂದ ತುಂಬಿಕೊಳ್ಳಲ್ಪಡುವುದು

ಇದರಂತೆಯೇ ಕೃತ್ರಿಮ ರೇಶಿಮೆಯ ವ್ಯಾಪಾರ: ಈ ರೇಶಿಮೆ (Rayon) ಯಿಂದ ತಯಾರಿಸಿದ ಮಾಲಿನ ನೂರರಲ್ಲಿ ಎಂಬತ್ತು ಪಾಲು ಜಪಾನಿನಲ್ಲಿಯೇ ಮಾರಾಟವಾಗುವುದು. ಹೊರಗೆ ಕಳಿಸುವುದೆಂದರೆ ನೂರರಲ್ಲಿ ಹದಿನೈದು ಪಾಲು ಮಾತ್ರ. ಹೊರಗಿನಿಂದ ಬರುವ ಯಾವ ತರದ ರೇಶಿಮೆಯ ಮಾಲಿನ ಮೇಲೂ ಜಪಾನ್ ಸರಕಾರವು ವಿಪರೀತ ಸುಂಕ ಹೇರಿಬಿಟ್ಟಿರುವುದು.

ಇನ್ನು ವಿದ್ಯುದ್ದೀಪಗಳ (Electric bulbs) ವಿಷಯವನ್ನು ವಿಚಾರಿಸೋಣ. ಈ ದೀಪಗಳು ಜಪಾನಿನ ಎಲ್ಲ ಭಾಗಗಳಲ್ಲಿಯೂ ಉಪಯೋಗಿಸಲ್ಪಡುತ್ತವೆ: ಹಳ್ಳಿಗಳಲ್ಲಿಯೂ ಇವುಗಳನ್ನು ಉಪಯೋಗಿಸುತ್ತಾರೆ. ಇದಕ್ಕೆ ಜಪಾನಿನಲ್ಲಿ ದೊರಕುವ ವಿದ್ಯುಚ್ಛಕ್ತಿಯ ಸೌಕರ್ಯವೇ ಕಾರಣವಾಗಿದೆ. ಎಣ್ಣೆಯ ದೀಪಗಳನ್ನು ಪ್ರದರ್ಶನದಲ್ಲಿ ಮಾತ್ರ ಕಾಣಬಹುದು. ೧೯೩೪ ರಲ್ಲಿ ಈ ದೀಪಗಳ ಸಂಖ್ಯೆ ೬೬,೦೦೦,೦೦೦ ಡಜನ್ ಇತ್ತು. ಇವುಗಳ ಒಟ್ಟು ಬೆಲೆ ೨೦,೦೦೦,೦೦೦ ಯೆನ್ಸ್; ಎಂದರೆ ೧.೩೦ ಡಜನ್ನಿಗೆ ೧.೦೦ ಯೆನ್ನಿನಂತೆ ಧಾರಣೆ. ಇವುಗಳಲ್ಲಿ ೧೦,೦೦೦,೦೦೦ ಡಜನ್ನು ಜಪಾನಿನಲ್ಲಿಯೇ ಉಪಯೋಗಿಸಲ್ಪಟ್ಟು, ಇನ್ನುಳಿದ ೧೬ ೦೦೦,೦೦೦ ಡಜನ್ನು ಪರದೇಶಕ್ಕೆ ಕಳಿಸಲ್ಪಟ್ಟುವು. ಈ ಪರದೇಶಕ್ಕೆ ಕಳಿಸಿದ ದೀಪಗಳಿಂದ ೭,೬೦೦,೦೦೦ ಯೆನ್ ಬೆಲೆ ಬಂತು; ಎಂದರೆ ಸುಮಾರು ೨೧ ಡಜನ್ನಿಗೆ ೧.೦೦ ಯೆನ್ನಿನಂತೆ ಇವು ಪರದೇಶದಲ್ಲಿ ಮಾರಲ್ಪಟ್ಟುವು. ಜಪಾನಿನಲ್ಲಿಯೇ ಮಾರಿದ ದೀಪಗಳ ಬೆಲೆ ೧.೦೦ ಯೆನ್ನಿಗೆ ೦.೪೦ ಡಜನ್ನು ಮಾತ್ರ, ಈ ವ್ಯಾಪಾರದಿಂದ ಯಾವಬಗೆಯ ಲಾಭಹಾನಿಯಾಗುತ್ತದೆಂಬುದನ್ನು ಕೆಳಗಣ ಪಟ್ಟಿಯಿಂದ ತಿಳಿದುಕೊಳ್ಳಬಹುದು.

(ಅ) ವಿದ್ಯುದ್ದೀಪಗಳನ್ನು ತಯಾರಿಸಲಿಕ್ಕಾಗುವ ಖರ್ಚು ೧.೦೦ ಯೆನ್ನಿಗೆ ೧.೩ ಡಜನ್ನು.
(ಬ) ಜಪಾನಿನಲ್ಲಿ ಮಾರುವ ಧಾರಣೆ ೧.೦೦ ಯೆನ್ನಿಗೆ ೧.೮೦ ಡಜನ್.
(ಕ) ಪರದೇಶದ ಪೇಟೆಗಳಲ್ಲಿ ಬರುವ ಬೆಲೆ ೧-೦೦ ಯೆನ್ನಿಗೆ ೨.೧೦ ಡಜನ್.

ಈ ದೀಪಗಳನ್ನು ಮಾರುವ ಒಂದು ವೈಶಿಷ್ಟ್ಯವೆಂದರೆ ಇವುಗಳನ್ನು ದೊಡ್ಡ ದೊಡ್ಡ ಪೆಟ್ಟಿಗೆಗಳಲ್ಲಿ ಪ್ಯಾಕ್‌ಮಾಡಿ "ಗ್ಯಾರಂಟಿ ಇಲ್ಲದೆ" ಮಾರುತ್ತಾರೆ. ಮಾರಾಟದ ಬೆಲೆ ಅತ್ಯಗ್ಗವೆಂದು ಬೇರೆ ಹೇಳಬೇಕಾಗಿಲ್ಲ. ಮೇಲ್ಕಂಡ ಉದಾಹರಣೆಗಳಿಂದ ತಿಳಿದುಬರುವ ಸಂಗತಿಯೆಂದರೆ: ಜಪಾನಿನಲ್ಲಿಯೇ ಹೆಚ್ಚು ಬೇಡಿಕೆ ಇದ್ದ ಮಾಲುಗಳೆಂದರೆ ಸಿಮೆಂಟ್, ಕೃತ್ರಿಮ ರೇಶಿಮೆ ಮತ್ತು ದೊಡ್ಡ ಕಾಚು; ಇವುಗಳಲ್ಲಿ ಸ್ವಲ್ಪ ಭಾಗ ಮಾತ್ರ ಪರದೇಶಕ್ಕೆ ಕಳಿಸಲ್ಪಡುವುದು. ಇನ್ನು ಹೊರಗಿನ ಬಾಜಾರಗಳಿಗೆ ಕಳಿಸುವ ಮಾಲುಗಳೆಂದರೆ ಬಟ್ಟೆಗಳು (ರೇಶಿಮೆ ಮತ್ತು ಉಣ್ಣೆಯವು), ವಿದ್ಯುದ್ದೀಪಗಳು, ಚರ್ಮದ ಸಾಮಾನು ಮತ್ತು ಚಾಕು ಕತ್ತರಿಗಳು. ಇವುಗಳಲ್ಲಿ ಒಂದು ಸಣ್ಣಪ್ರಮಾಣಮಾತ್ರ ಜಪಾನಿನಲ್ಲಿಯೇ ಮಾರಿ ಉಳಿದುವೆಲ್ಲ ಪರಸ್ಥಳಕ್ಕೆ ಕಳಿಸಲ್ಪಡುತ್ತವೆ. ಉದಾಹರಣೆಯೆಂದರೆ ಜಪಾನಿನಲ್ಲಿ ಒಂದು ಬೂಟಿಗೆ ಅಟ್ಟೆ ಹಾಕಿಸಲಿಕ್ಕೆ ಸುಮಾರು ಆರು ಶಿಲಿಂಗ್ ಎಂದರೆ ನಾಲ್ಕು ರೂಪಾಯಿ ಖರ್ಚುಬರುತ್ತದೆ. ಈ ಬೆಲೆಗೆ ಹಿಂದುಸ್ಥಾನದಲ್ಲಿ ಇಡೀ ಬೂಟಿನ ಜತೆಯನ್ನೇ ಕೊಳ್ಳಬಹುದು. ಈ ನಾಲ್ಕು ರೂಪಾಯಿಗಳಲ್ಲಿ ತೆರಿಗೆ, ಏಜೆಂಟರ ಕಮಿಶನ್ ಇತ್ಯಾದಿ ಎಲ್ಲ ಖರ್ಚೂ ಕೂಡಿರುವುದು. ಆದರೆ ಅದೇ ಬೂಟಿಗೆ ಜಪಾನಿನಲ್ಲಿ ನಿದಾನ ೭ ರೂಪಾಯಿ ಬೆಲೆ ಬೀಳುವುದು.

ಇನ್ನು ದಪ್ಪ ಕಾಚಿನ ವ್ಯಾಪಾರದಲ್ಲಿಯೂ ಇದೇ ರೀತಿಯಾದ ವಿಪರ್ಯಾಸ. ಜಪಾನಿನಲ್ಲಿ ೧ ಪೆಟ್ಟಿಗೆ ದಪ್ಪ ಕಾಚು ೮.೨೦ ಯೆನ್ನು (ಆರೂವರೆ ರೂಪಾಯಿ) ಬೆಲೆ ತರುತ್ತದೆ; ಆದರೆ ಅದೇ ಪೆಟ್ಟಿಗೆಯು ಹಿಂದುಸ್ಥಾನದಲ್ಲಿ ತೆರಿಗೆ, ಕಮಿಶನ್ ಮೊದಲಾದ ಖರ್ಚು ಕೂಡಿಕೊಂಡೂ ಕೇವಲ ನಾಲ್ಕುವರೆ ರೂಪಾಯಿಗೆ ಮಾರಲ್ಪಡುತ್ತದೆ. ಇದರ ಕಾರಣವನ್ನು '**ಜಪಾನಿನ ವಾರ್ಷಿಕ ಪುಸ್ತಕ**'ದಲ್ಲಿ ಹೀಗೆ ಹೇಳಲಾಗಿದೆ. "ಜಪಾನು ಹೊರಗೆ ಕಳಿಸುವ ಕಾಚಿನ ಬೆಲೆಯನ್ನು ಅಗ್ಗವಾಗಿಟ್ಟಿದೆ; ಏಕೆಂದರೆ ಆ ಕಾಚು ಪರದೇಶದ ಕಾಚಿಗಿಂತ ಕಡಿಮೆಯ ದರದಲ್ಲಿ ಮಾರಬೇಕೆಂದು. ಈ ಬೆಲೆಯು ಪರದೇಶದ ವಿಪರೀತವಾದ ಸುಂಕವನ್ನೂ ಒಳಗೊಂಡಿರುವುದು."

ಜಪಾನಿನ ವ್ಯಾಪಾರವಿನಿಮಯದಲ್ಲಿಯ ಒಂದು ವೈಶಿಷ್ಟ್ಯವೆಂದರೆ ಜಪಾನು ಒಂದೇ ಸಮಯದಲ್ಲಿ ಕೆಲವೊಂದು ಮಾಲುಗಳನ್ನು ತಯಾರಿಸುವುದನ್ನೂ, ಪರದೇಶಕ್ಕೆ ಕಳಿಸುವದನ್ನೂ ಮತ್ತು ಅದೇ ಮಾಲುಗಳನ್ನು ಹೊರಗಿನ ದೇಶಗಳಿಂದ ತರಿಸುವುದನ್ನೂ ಮಾಡುತ್ತದೆ. ಈ ರೀತಿಯನ್ನು ತಿಳಿದುಕೊಳ್ಳಲಿಕ್ಕೆ ನಾಲ್ಕು ಮಾಲುಗಳ ಉದಾಹರಣೆ ತೆಗೆದುಕೊಳ್ಳೋಣ; (೧) "Caustic Soda" (೨) "Soda Ash" (೩) "Amonium Sulfate" ಮತ್ತು (೪) ಮೋಟಾರು ಗಾಡಿಗಳು,

೧. ಕಾಸ್ಟಿಕ್ ಸೋಡಾ ವ್ಯಾಪಾರ :

(ಮೆಟ್ರಿಕ್ ಟನ್ನುಗಳಲ್ಲಿ ಪ್ರಮಾಣ)

ವರ್ಷ	ಜಪಾನಿನಲ್ಲಿ ತಯಾರಾಗುವ ಪ್ರಮಾಣ	ಪರದೇಶದಿಂದ ತರಿಸುವ ಪ್ರಮಾಣ	ಪರದೇಶಗಳಿಗೆ ಕಳಿಸುವ ಪ್ರಮಾಣ
೧೯೧೩	೪,೨೫೭	೧೨,೦೦೪	—
೧೯೧೮	೮,೯೯೭	೨೧,೫೪೫	೩೯೭
೧೯೨೧	೯,೫೧೨	೧,೨೯೪	೮೦೬
೧೯೩೧	೪೮,೫೩೬	೪೧,೫೯೫	೧೦
೧೯೩೩	೧೩೧,೭೦೯	‡೧೨ ೪೭೭	† ೫,೧೧೬
೧೯೩೬	೨೬೩,೩೨೭	,, ೧೧,೫೮೭	,,೨೩,೫೧೪
೧೯೩೭	*೩೪೦,೦೦೦	,,೨೭,೪೨೯	,, ೫,೫೧೪

೨. ಸೋಡಾ ಆ್ಯಶ್ ವ್ಯಾಪಾರ :

(ಮೆಟ್ರಿಕ್ ಟನ್ ಪ್ರಮಾಣದಲ್ಲಿ)

ವರ್ಷ	ಜಪಾನಿನಲ್ಲಿ ತಯಾರಿಸುವುದು	ಪರದೇಶದಿಂದ ತರಿಸುವುದು	ಪರದೇಶಕ್ಕೆ ಕಳಿಸುವುದು
೧೯೧೪	೧ ೭೨೨	೩೨,೭೦೦	—
೧೯೨೪	೯,೬೨೮	೧೧೮,೮೦೦	—
೧೯೩೨	೧೩೨,೮೦೭	೪೭,೮೩೪	೮,೩೬೯
೧೯೩೭	—	೪೬,೦೦೦	೧೨,೨೯೧

ಟಿಪ್ಪಣಿ :–ಸೋಡಾ ಆ್ಯಶ್ ಇತ್ತೀಚೆಗೆ ಮಾತ್ರ ಹೊರಗೆ ಕಳಿಸಹತ್ತಿದ್ದಾರೆ.

* ೧೦೦ ಕ್ಕೆ ೭೦ ರಂತೆ ಕಾಸ್ಟಿಕ್ ಸೋಡಾ ಜಪಾನಿನಲ್ಲಿಯ ಕೃತ್ರಿಮ ರೇಶಿಮೆಯ ಮತ್ತು ಇತರ ನೂಲಿನ ವಸ್ತ್ರಗಳಿಗೆ ಉಪಯೋಗಿಸಲ್ಪಡುವದು.

೩. ಅಮೋನಿಯಮ್ ಸಲ್ಫೇಟ್ ವ್ಯಾಪಾರ:

(ಮೆಟ್ರಿಕ್ ಟನ್ ಪ್ರಮಾಣದಲ್ಲಿ)

ವರ್ಷ	ಜಪಾನಿನ ತಯಾರಾಗುವದು	ಹೊರಗಿನಿಂದ ತರಿಸುವದು	ಪರದೇಶಕ್ಕೆ ಕಳಿಸುವದು.
೧೯೨೬	೧೪೭,೦೦೦	೨೯೭,೦೨೬	೪,೨೦೨
೧೯೨೭	೧೩೬,೪೫೫	೨೫೦,೦೧೪	೭೭೪
೧೯೩೦	೨೬೫,೮೨೬	೩೦೨,೯೦೫	೧೪,೯೨೪
೧೯೩೧	೩೯೩,೨೩೭	೨೨೪,೧೪೮	೧೧,೬೦೮
೧೯೩೩	೪೭೧,೩೪೮	೧೦೮,೪೪೯	೫೦,೦೬೧
೧೯೩೪	೪೯೪,೩೫೦	೧೬೦,೪೦೧	೧,೫೨೬
೧೯೩೬	೧,೨೭೧,೦೦೦	೩೧೪,೦೦೦	೧೭,೭೦೦
೧೯೩೭	ಜಾನೇವರಿಯಿಂದ ಜುಲೈವರೆಗೆ		೭,೨೦೦

ಟಿಪ್ಪಣಿ:—೧೯೩೭ ರಲ್ಲಿ 'ಚೈನಾಯುದ್ಧ'ದ ಮೂಲಕ ಈ ವ್ಯಾಪಾರದಲ್ಲಿ ವಿಶೇಷ ಹೆಚ್ಚು ಕಡಿಮೆಯಾಯಿತು.

‡ ಹೊರಗಿನಿಂದ ಬರುವ ಕಾಸ್ಟಿಕ್ ಸೋಡಾ ಅಮೇರಿಕಾ ಮತ್ತು ಬ್ರಿಟನ್ನಿನಿಂದ.

† ಹೊರಗೆ ಹೋಗುವ ಕಾಸ್ಟಿಕ್ ಸೋಡಾ ಚಾಯನಾ, ಹಿಂದು-ಸ್ಥಾನ, ಅರ್ಜೆಂಟಾಯಿನಾ ಮತ್ತು ಬೆಲ್ಜಂಗಳಿಗೆ.

ಮೇಲ್ಕಂಡ ಪಟ್ಟಿಗಳಿಂದ ಕಂಡುಬರುವಂತೆ Caustic Soda, Soda Ash ಮತ್ತು Ammonium Sulphate ಗಳು ಪ್ರತಿ ವರ್ಷ ಹೆಚ್ಚು ಹೆಚ್ಚಾಗಿ ತಯಾರಿಸಲ್ಪಡುತ್ತಿದ್ದು, ಜಪಾನಿಗೆ ಈ ಪದಾರ್ಥಗಳ ಬೇಡಿಕೆಯು ಕೂಡ ಅದಕ್ಕೂ ವಿಶಾರಿ ಹೆಚ್ಚುತ್ತಿದ್ದು, ಜಪಾನು ಈ ಪದಾರ್ಥಗಳನ್ನು ಪರದೇಶದಿಂದ ತರಿಸಲೇಬೇಕಾಗುವದು. ಇದರಲ್ಲಿ ಆಶ್ಚರ್ಯವೇನೂ ಇಲ್ಲ; ಆದರೆ ಒಂದೇ ಸಮಯಕ್ಕೆ ತನ್ನಲ್ಲಿಯೇ ಈ ಮಾಲುಗಳನ್ನು ತಯಾರಿಸುವುದೂ, ಹೊರಗಿನಿಂದ ತರಿಸುವುದೂ ಮತ್ತು ಪರದೇಶದ ಪೇಟೆಗಳಿಗಿಂತ ಅಗ್ಗವಾಗಿ ಹೊರಗೆ ಮಾರುವುದೂ ಮಾತ್ರ ನಿಜವಾಗಿಯೂ ಜಪಾನಿಯರ ವ್ಯಾಪಾರವಿನಿಮಯದ ವೈಶಿಷ್ಟ್ಯವನ್ನೂ ಕರ್ತೃತ್ವ ಶಕ್ತಿಯನ್ನೂ ತುಂಬಾ ವ್ಯಕ್ತಮಾಡುತ್ತವೆ. ಉದಾಹರಣೆಯೆಂದರೆ: ಜಪಾನು ಹಿಂದುಸ್ಥಾನದ(Imperial Chemical Industries Limited) ಕಂಪನಿಯು ಬಳಿ Caustic Soda ಮತ್ತು Soda Ash ಈ ಮಾಲುಗಳನ್ನು ಕೊಳ್ಳುತ್ತದೆ; ಆದರೆ ಅದೇ ಕಂಪನಿಯು ಈ ಮಾಲುಗಳನ್ನು, ಮಾರುವುದಕ್ಕಿಂತ ಕಮ್ಮಿ ಬೆಲೆಗೆ ತಾನು ಅದೇ ಮಾಲನ್ನು ಹಿಂದುಸ್ಥಾನದಲ್ಲಿಯೂ ಮಾರುತ್ತದೆ! ಇದು ನಿಜವಾಗಿಯೂ ಇಂದ್ರಜಾಲಕಾರ್ಯ. ಅಲ್ಲದೆ ಜಪಾನಿಯರು ಪರದೇಶದಿಂದ ಯಾವುದೇ ಮಾಲನ್ನು ಕೊಳ್ಳುವಾಗ, ಅದೇ ಮಾಲನ್ನು ಆ ದೇಶದಲ್ಲಿಯೇ ಪ್ರತಿಯಾಗಿ ತಮಗೆ ಬೇಕಾದ ಬೆಲೆಯಲ್ಲಿ ಮಾರುವ ಬಾಧ್ಯತೆಯನ್ನು ಇಟ್ಟುಕೊಳ್ಳುತ್ತಾರೆ!

ಮೋಟಾರ್ ಕಾರಿನ ಧಂದೆಯಲ್ಲಿಯೂ ಇದೇ ವಿಚಿತ್ರ ವೈಶಿಷ್ಟ್ಯವಿದೆ. ಜಪಾನಿಗೆ ಬೇಕಾಗುವಷ್ಟು ಮೋಟಾರುಗಳನ್ನು ಜಪಾನು ಇನ್ನೂ ತಯಾರಿಸುವುದಿಲ್ಲ. ಆದರೂ ಸದ್ಯ ಜಪಾನು Datsun ಎಂಬ ಕಾರುಗಳನ್ನು ಪರದೇಶಗಳಲ್ಲಿ ಸಣ್ಣ ಪ್ರಮಾಣದಲ್ಲಿ ಮಾರುತ್ತಿರುವುದು. ಇದು ಭಾವೀ ವ್ಯಾಪಾರದ ಸೂಚನೆಗೆಂದು, ಅಥವಾ ಜಾಹೀರಾತಿಗೆಂದು. ಹೀಗೆ ಮಾಡಲಿಕ್ಕೆ ಜಪಾನಿಗೆ ಎರಡು ಬಗೆಯ ಸೌಕರ್ಯಗಳಿವೆಯೆಂದು ನಂಬಬೇಕಾಗುತ್ತದೆ. (೧) ಪರದೇಶದ ಮೋಟಾರಿನ ಭಾಗಗಳು ಜಪಾನಿಗೆ ಅಗ್ಗವಾದ ಭಾವದಲ್ಲಿ ಸಿಗುತ್ತವೆ; ಇಲ್ಲವೆ (೨) ಜಪಾನು ತಾನು ತಯಾರಿಸುವ ಈ ಮೋಟಾರಿನ ಭಾಗಗಳನ್ನು ಅತ್ಯಲ್ಪ ಪ್ರಮಾಣದಲ್ಲಿ ಮಾತ್ರ ಪರದೇಶಕ್ಕೆ ಕಳಿಸುತ್ತದೆ.

ಈ 'ಜಾಹೀರಾತು' ಪದ್ಧತಿಯು ಜಪಾನಿನ Ammonium Sulphate ವ್ಯಾಪಾರದಲ್ಲಿ ಯಶಸ್ವಿಯಾಗಿದೆ. ೧೯೩೮ ಕ್ಕೆ ಪೂರ್ವದಲ್ಲಿ ಜಪಾನು ಈ ಪದಾರ್ಥವನ್ನು–ತನ್ನ ದೇಶಕ್ಕೆ ಬೇಕಾಗುವಷ್ಟು ತನ್ನಲ್ಲಿಯೇ ತಯಾರಿಸ ಹತ್ತಿ, ಆಗಾಗ ಜಾಹೀರಾತಿನ ಸಲುವಾಗಿ ಸ್ವಲ್ಪ ಪ್ರಮಾಣದಲ್ಲಿ ಮಾತ್ರ ಪರಪೇಟೆಗೂ ಕಳಿಸುತ್ತಿತ್ತು. ಸದ್ಯ ತನಗೆ ಬೇಕಾದಷ್ಟು ತಯಾರಿಸುವುದಲ್ಲದೆ ಪರದೇಶಕ್ಕೆ ಕೂಡ ಅತ್ಯಗ್ಗ ಧಾರಣಿಯಲ್ಲಿ ಕಳಿಸಹತ್ತಿದೆ. ಇದು ಜಪಾನಿಯರ ಸೋಲರಿಯದ ವ್ಯಾಪಾರಪಣದ ಒಂದು ವಿಶಿಷ್ಟ ಉದಾಹರಣೆಯಾಗಿದೆ.

'Caustic Soda' ವ್ಯಾಪಾರದಲ್ಲಿಯೂ ಇದೇ ವಿನಿಮಯ ರೀತಿಯು ಕಂಡುಬರುವುದು. ೧೯೩೭ ರಲ್ಲಿ ಜಪಾನಿನಲ್ಲಿ ತಯಾರು

ಆಗುವ ಈ ಮಾಲಿನ ೧ ಹಂಡ್ರೆಡ್‌ವೇಟಿಗೆ ೯ ಅಥವಾ ೧೦ ಯೆನ್ನು ಬೆಲೆ ಇತ್ತು. ಜಪಾನಿನಿಂದ ಹಿಂದುಸ್ಥಾನಕ್ಕೆ ಬರುವ ೧ ಹಂಡ್ರೆಡ್‌ವೇಟಿನ ಹಡಗುಖರ್ಚು ಸುಮಾರು ೧ ಯೆನ್ನು; ಅಲ್ಲದೆ ಹಿಂದುಸ್ಥಾನವು ಇದರ ಮೇಲೆ ತೆಗೆದುಕೊಳ್ಳುವ ತೆರಿಗೆಯು ೧೦೦ ಕ್ಕೆ ೩೦ ರಂತೆ; ಇಷ್ಟಾದರೂ ಜಪಾನು ಹಿಂದುಸ್ಥಾನದಲ್ಲಿ ಈ ಮಾಲನ್ನು ಎಲ್ಲ ದೇಶಗಳಿಗಿಂತಲೂ ಕಡಿಮೆಯ ಧಾರಣೆಯಲ್ಲಿಯೇ (೯ ರೂಪಾಯಿಗೆ ೧ ಹಂಡ್ರೆಡ್‌ವೇಟ್) ಮಾರುತ್ತಿರುವುದು!

ಜಪಾನು ಇಷ್ಟು ರೀತಿಯಲ್ಲಿ ಅಗ್ಗವಾಗಿ ತನ್ನ ಮಾಲುಗಳನ್ನು ಮಾರುತ್ತಿರುವುದರಿಂದ, ಜಪಾನ್ ಸರಕಾರವು ಈ ಎಲ್ಲ ಮಾಲಿನ ವ್ಯಾಪಾರಕ್ಕೆ ದುಡ್ಡು ಪೂರಯಿಸುತ್ತದೆಂದು ಅನೇಕಜನರು ಹೇಳುತ್ತಾರೆ. ಇದರಲ್ಲಿ ಸ್ವಲ್ಪ ಸತ್ಯಾಂಶವಿದ್ದರೂ ಮೇಲ್ಕಂಡ ಪಟ್ಟಿಗಳಿಂದ ತಿಳಿದುಬರುವಂತೆ ಈ ತರದ ಸರಕಾರ ಸಹಾಯವು ಎಲ್ಲ ಮಾಲುಗಳ ವ್ಯಾಪಾರದಲ್ಲಿಯೂ ಕಂಡುಬರುವುದಿಲ್ಲ. ಜಪಾನ್ ಸರಕಾರವು ದುಡ್ಡಿನಿಂದ ಸಹಾಯಮಾಡುವುದೆಂದರೆ ಕೇವಲ ಹೊಸದಾಗಿ ಹೊರಡಿಸುವ ಯಂತ್ರಕಾರಖಾನೆಗಳಲ್ಲಿ ಮಾತ್ರ. ಇವು ಕೇವಲ ಪ್ರಥಮಪ್ರಯತ್ನದ ಕಾರ್ಖಾನೆಗಳಿದ್ದು, ಜಪಾನ್ ಸರಕಾರವು ಇವುಗಳಿಗೆ ಉತ್ತೇಜನಕೊಡುತ್ತದೆ. ಉದಾಹರಣೆಯೆಂದರೆ, ನೂಲುನೇಯುವ ಗಿರಣಿಗಳು, ಉಣ್ಣೆಯ ಗಿರಣಿಗಳು, ಚರ್ಮದ ಕಾರ್ಖಾನೆಗಳು, ಹಡಗುಪಡೆಕಟ್ಟುವ ಕಾರ್ಖಾನೆಗಳು. ಈ ತರದ ಕಾರ್ಖಾನೆಗಳು ಪ್ರಥಮದಲ್ಲಿ ಸಹಾಯ ಹೊಂದುತ್ತವಲ್ಲದೆ ಅವು ದಿನಗತವಾದಂತೆ ಸ್ವತಂತ್ರ, ಸ್ವಾವಲಂಬಿ ಕಾರ್ಖಾನೆಗಳಾಗುತ್ತಿವೆ. ಈಚೆಗೆ ಜಪಾನ್ ಸರಕಾರವು ಮೋಟಾರು, ಫೋಟೋಸಾಮಾನಿನ ಧಂದೆಗಳಿಗೆ ಮಾತ್ರ ಉತ್ತೇಜನ ಕೊಡಹತ್ತಿದೆ. ಜಪಾನ್ ಸರಕಾರದ (Department of commerce and Industry) ಪ್ರತಿ ವರ್ಷಕ್ಕೆ ೧೩೦೦೦೦ ಯೆನ್ನುಗಳನ್ನು ಈ ಉದ್ಯಮಗಳಿಗೆ (ವಿಶೇಷವಾಗಿ ಮೋಟಾರಿನ ಉದ್ಯಮಕ್ಕೆ) ಕೊಡುತ್ತಿರುವುದು. ಈ ವಿಷಯದಲ್ಲಿ ಜಪಾನ್ ಸರಕಾರವು ಕೆಳಗಣ ಸೌಕರ್ಯಗಳನ್ನು ಒದಗಿಸಿಕೊಡುವುದು.

೧. ಕೆಲವು ದಿನಗಳ ವರೆಗೆ ಎಲ್ಲ ತರದ ಸುಂಕ-ತೆರಿಗೆಗಳಿಂದ ಬಿಡುಗಡೆ;

೨. ಬೇಕಾದಷ್ಟು ಸಾಲ ತೆಗೆಯಲಿಕ್ಕೆ ಅಧಿಕಾರ;

೩. ಹೊರಗಿನಿಂದ ತರಿಸುವ ಮೋಟಾರಿನ ಭಾಗಗಳ ಮೇಲೆ ಯಾವ ಸುಂಕವೂ (Import Duties) ಇಲ್ಲ.

ಫೋಟೋ ಸಾಮಾನಿನ ಉದ್ಯಮಕ್ಕೂ ಈ ರೀತಿಯಲ್ಲಿ ಸರಕಾರದಿಂದ ಸಹಾಯಸಿಕ್ಕುತ್ತದೆ. ಇದರಿಂದ ಜಪಾನಿನಲ್ಲಿ ಮಾರುವ ಫೋಟೋ ಕ್ಯಾಮರಾಗಳೂ, ಸೂಕ್ಷ್ಮದರ್ಶಕ ಯಂತ್ರಗಳೂ ಅತ್ಯಗ್ಗವಾಗಿರುತ್ತವೆ; (ಈ ಅಗ್ಗವು ಬೆಲೆಯಲ್ಲಿ ಮಾತ್ರ, ಗುಣದಲ್ಲಿ ಅಲ್ಲ.) ಎಲ್ಲ ಶಾಲೆ-ಕಾಲೇಜುಗಳಲ್ಲಿಯೂ ತಾವು ತಯಾರಿಸುವ ಸೂಕ್ಷ್ಮದರ್ಶಕ ಯಂತ್ರ ಮತ್ತು ಕ್ಯಾಮರಾಗಳನ್ನೇ ಉಪಯೋಗಿಸುವರು; ಕೇವಲ ಹೆಚ್ಚಿನ ಶಾಸ್ತ್ರಸಂಶೋಧನೆಯಲ್ಲಿ ಮಾತ್ರ ಪರದೇಶದಿಂದ ತರಿಸಿದ ಯಂತ್ರಗಳನ್ನು ಉಪಯೋಗಿಸುವರು.

ಕಲ್ಲಿದ್ದಲಿಯಿಂದ ತಯಾರಿಸುವ 'Synthetic' ಪೆಟ್ರೋಲಿನ ಧಂದೆಗೂ ಜಪಾನ್ ಸರಕಾರವು ವರ್ಷಕ್ಕೆ ೩೦೦,೦೦೦ ಯೆನ್ನು ಕೊಡುತ್ತದೆ. ಈ ಪೆಟ್ರೋಲನ್ನು ತಯಾರಿಸುವುದು 'Fuel Research Department' ನಲ್ಲಿ.

ಇನ್ನು ಜಪಾನಿನ ಹಡಗುಪಡೆಯು, ವ್ಯಾಪಾರವಿನಿಮಯದಲ್ಲಿ ಒಂದು ವಿಶಿಷ್ಟ ಸಹಾಯಕಾರಿಯಾಗಿದೆ. ೧೮೯೯ ರಿಂದ ಜಪಾನಾ ಸರಕಾರವು ಎಲ್ಲ ಹಡಗುಗಳನ್ನೂ ತನ್ನ ಸ್ವಾಧೀನತೆಯಲ್ಲಿಟ್ಟುಕೊಂಡು, ಅವುಗಳಿಗೆ ಧನಸಹಾಯ ಮಾಡಹತ್ತಿದೆ. ಈ ಹಡಗುಗಳ ಹೋಗಿ ಬರುವ ವೇಳೆಯೂ ಸರಕಾರದಿಂದಲೇ ನಿರ್ಣಯಿಸಲ್ಪಡುವುದು. ಉದಾಹರಣೆಯೆಂದರೆ ಸೋಮಾಲಿಲ್ಯಾಂಡಿನ ಕೂಡ ವ್ಯಾಪಾರ ಮಾಡುವ ಹಡಗುಗಳು, ಅಲ್ಲಿಂದ ಮರಳಿ ಜಪಾನಿಗೆ ಬರುವಾಗ ಉಪ್ಪನ್ನು ತರುತ್ತವೆ. ಈ ಉಪ್ಪಿನ ಒಂದು ಟನ್ನಿಗೆ ೧೨ ಯೆನ್ನು ಮಾತ್ರ ಹಡಗುಖರ್ಚು. ಇದರಿಂದ ಜಪಾನಿಗೆ ಬೇಕಾಗುವ ಎಲ್ಲ ಉಪ್ಪು ೭೦೦೦ ಮೈಲಿನಿಂದ ಬರುತ್ತಿದ್ದರೂ ಜಪಾನಿನಲ್ಲಿ ಟನ್ನೊಂದಕ್ಕೆ ೧೨ ರೂಪಾಯಿಯಂತೆ ಮಾತ್ರ ಬೆಲೆ ಬೀಳುತ್ತದೆ. ಇದೇ ರೀತಿಯಲ್ಲಿ ಜಪಾನಿನಿಂದ ತಯಾರಾದ ಮಾಲಿನ ಹಡಗುಖರ್ಚು ಅತ್ಯಗ್ಗವಾಗಿರುತ್ತವೆ. ಅಂತೆಯೇ ಅವು ಅಷ್ಟು ಕಡಿಮೆಯ ಧಾರಣೆಗೆ ಮಾರಲು ಶಕ್ಯವಿದೆ. ೧ ಟನ್ನಿಗೆ ೫೦೦೦ ಮೈಲು ದೂರ ಹೋಗುವ ಹಡಗುಖರ್ಚು ಹಿಂದುಸ್ಥಾನದಲ್ಲಿ ರೇಲ್ವೆಯ ೩೦೦ ಮೈಲಿಗಿಂತ ಕಡಿಮೆ ಇರುತ್ತದೆ!

ಎಲ್ಲಕ್ಕೂ ಹೆಚ್ಚಿನ ಸೌಕರ್ಯವು ಜಪಾನಿನಲ್ಲಿ "Cottage Industries" ಗೆ ಸಿಗುತ್ತವೆ. ಇದರಿಂದ ಜಪಾನಿಯರು ಕೆಲವೊಂದು ಉದ್ಯಮಗಳಲ್ಲಿ "Specialization" ಮಾಡಿಕೊಂಡಿರುತ್ತಾರೆ. ಈ ಕಾರಣದಿಂದಲೇ ಅವರ ಮಾಲುಗಳು ಎಷ್ಟು ಕಡಿಮೆಯ ಬೆಲೆಗೆ ಹೊರಗೆ ಮಾರಿದರೂ ಅವರಿಗೆ ಹಾನಿಯಿಲ್ಲ. ನಾವು ಜಪಾನವು "Cottage Industries" ಪ್ರದೇಶವೆಂದು ಹೇಳುವುದು ಸರಿಯಲ್ಲ; ಇದು ತಪ್ಪು ತಿಳಿವಳಿಕೆ. ಇದರಲ್ಲಿ ಸತ್ಯಾಂಶವು ಅತ್ಯಲ್ಪವಿದೆ. ಸಣ್ಣ ಉದ್ಯಮಗಳಲ್ಲಿ ಕೆಲಸ ಮಾಡುವವರು ಕೆಲವು ಕಡೆಯಲ್ಲಿ ೫ ರಿಂದ ೧೦ ಜನರವರೆಗೆ ಕೂಡಿಕೊಂಡು ಮಾಡುತ್ತಾರೆ. ಈ ಸಣ್ಣ ಗುಂಪುಗಳಿಂದ ಮಾತ್ರ ಜಪಾನನ್ನು "Cottage Industries" ದೇಶವೆಂದು ಹೇಳಬಹುದು. ಆದರೆ ಈ ಜನರು ನಿರಕ್ಷರಕುಕ್ಷಿಗಳಲ್ಲ; ಪ್ರತಿಯೊಬ್ಬನೂ ಚೆನ್ನಾಗಿ ವಿದ್ಯೆ ಕಲಿತವನಿದ್ದು, ತನ್ನ ಧಂದೆಯಲ್ಲಿಯೂ ಹೆಚ್ಚಾಗಿ ಜ್ಞಾನಾರ್ಜನೆ ಮಾಡಿಕೊಂಡವನಿರುತ್ತಾನೆ. ಅಲ್ಲದೆ ಜಪಾನಿನ ಪ್ರತಿಯೊಂದು ಮೂಲೆಯಲ್ಲಿದ್ದ ಹಳ್ಳಿಯಲ್ಲಿಯೂ ವಿದ್ಯುಚ್ಛಕ್ತಿಯು ಉದ್ಯಮಗಳಲ್ಲಿ ಅಗ್ಗವಾಗಿ ಉಪಯೋಗಿಸಲ್ಪಡುತ್ತದೆ. ಇದಕ್ಕೂ ಹೆಚ್ಚಿನ ಸೌಕರ್ಯವೆಂದರೆ ಈ ರೀತಿ ತಯಾರಾದ ಮಾಲುಗಳನ್ನು ಹಾಗೂ ಮೂಲದ್ರವ್ಯಗಳನ್ನು (Raw materials), ಪೇಟೆಗಳಿಗೆ ಕಳಿಸಲಿಕ್ಕೂ ಅಲ್ಲಿಂದ ತರಲಿಕ್ಕೂ ಜಪಾನಿನ ಎಲ್ಲ ಭಾಗದಲ್ಲಿಯೂ ಮಾಲುಗಾಡಿ-ಮೋಟಾರುಗಳ ಏರ್ಪಾಡು ಇರುತ್ತದೆ. ಇನ್ನೂ ಒಂದು ವೈಶಿಷ್ಟ್ಯವೆಂದರೆ ಪ್ರತಿಯೊಂದು ಉದ್ಯಮದಲ್ಲಿಯ ಬೇರೆ ಬೇರೆ ಭಾಗಗಳು ಬೇರೆ ಬೇರೆ ವ್ಯಕ್ತಿಗಳಿಂದ ಮಾಡಲ್ಪಡುತ್ತವೆ. ಇದರಿಂದ

ಗುಡಿ ಧಂದೆಗಳ ಜನರಲ್ಲಿ ಕರ್ತೃತ್ವಶಕ್ತಿ ಹೆಚ್ಚುವುದಲ್ಲದೆ ಒಟ್ಟಿನ ಮೇಲೆ ತಯಾರಾಗುವ ಮಾಲುಗಳು ಹೆಚ್ಚು ಸುಲಭವಾಗಿ ಮಾಡಲ್ಪಡುತ್ತವೆ. ಉದಾಹರಣೆಗೆ ಸಾಯಕಲ್ ಧಂದೆ ತೆಗೆದುಕೊಳ್ಳೋಣ: ಸಕಾಯಿ (Sakai) ಎಂಬ ಹಳ್ಳಿಯಲ್ಲಿ ಈ ಉದ್ಯಮವು ನಡೆಯುತ್ತದೆ. ಇದು ಒಸಾಕಾದಿಂದ ೩೦ ಮೈಲಿನ ಅಂತರದಲ್ಲಿದೆ. ಹೊರಗಿನಿಂದ ಬಂದವರಿಗೆ ಈ ಹಳ್ಳಿಯನ್ನು ನೋಡಿದರೆ, ಇದರಲ್ಲಿ ಸಾಯಕಲ್ ತಯಾರುಮಾಡುವ ಜನರೂ ಕಾರ್ಖಾನೆಗಳೂ ಇರಬಹುದೆಂಬ ಕಲ್ಪನೆಯೇ ಬರುವುದಿಲ್ಲ. ಇಲ್ಲಿಯ ಮನೆಗಳೆಲ್ಲ ಕಟ್ಟಿಗೆಯಿಂದ ತಯಾರಿಸಿದುವು! ಆದರೆ ಪ್ರತಿಯೊಂದು ಮನೆಯಲ್ಲಿಯೂ ವಿದ್ಯುಚ್ಛಕ್ತಿಯ ಸೌಕರ್ಯವಿದೆ. ಮತ್ತು ಕಲ್ಲಿದ್ದಲಿ ಗ್ಯಾಸು ಕೂಡ ಅತ್ಯಗ್ಗವಾಗಿ ಸಿಕ್ಕುತ್ತದೆ. (ಒಂದು ಮಿನಿಟ್ಟಿಗೆ ೧ ಬಿಲ್ಲಿಯಿಂದ ೨ ಬಿಲ್ಲಿಯವರೆಗೆ ಖರ್ಚು ಬರುವುದು.) ಇಂತಹ ಮನೆಯೊಂದರಲ್ಲಿ ೫ ರಿಂದ ೧೦ ಜನರು ತಮಗೆ ಬೇಕಾದಷ್ಟು ವೇಳೆಯ ವರೆಗೆ ಕೆಲಸ ಮಾಡುವರು; ಏಕೆಂದರೆ ಜಪಾನಿನಲ್ಲಿ ಇಷ್ಟೇ ವೇಳೆ ಕೆಲಸ ಮಾಡಬೇಕೆಂಬ ನಿಯಮ (Factory Law) ಇಲ್ಲ. ಆದರೆ ಒಂದೊಂದು ಮನೆಯಲ್ಲಿ ಸಾಯಕಲ್ಲಿನ ಒಂದೊಂದು ಭಾಗ ಮಾತ್ರ ತಯಾರಿಸಲ್ಪಡುವುದು. ಈ ರೀತಿಯಾಗಿ ಉದ್ಯೋಗ ನಿಯಮವಿದ್ದು, ಒಟ್ಟಿನ ಮೇಲೆ ತಯಾರಾದ ಸಾಮಾನುಗಳನ್ನು ಸುಲಭಬೆಲೆಗೆ ಮಾರಲು ಶಕ್ಯವಿದೆ. ಪ್ರತಿಯೊಂದು ಮನೆಯಲ್ಲಿ ಸಣ್ಣ ಪ್ರಮಾಣದಿಂದಲೇ ಈ ಭಾಗಗಳು ಮಾಡಲ್ಪಡುತ್ತಿದ್ದು, ಈ ಕಾರ್ಖಾನೆಗಳಿಗೆ ಹೆಚ್ಚು ಮೂಲ ಹಣ ಬೇಕಾಗುವುದಿಲ್ಲ. ಜಪಾನಿಯರು ಗಂಡ್ಸಕ್ಕೆ ಹಗ್ಗ ಹಾಕುವವರಲ್ಲ. ಇನ್ನು ಈ ಎಲ್ಲ ತಯಾರಾದ ಸಾಯಕಲ್ ಭಾಗಗಳನ್ನು ಒಬ್ಬ ವ್ಯಾಪಾರಿಯು ಕೊಳ್ಳುತ್ತಾನೆ. ಅವನು "Cycle Export Association"ನ ನಿಯಮದಂತೆ ಈ ಭಾಗಗಳನ್ನು ಕೂಡಿಸಿ, ಪರದೇಶಕ್ಕೆ ಆ ಸಂಘದ ಮೂಲಕವೇ ಕಳಿಸುತ್ತಾನೆ. ಇವನ ಈ ಉದ್ಯೋಗದ ಕಮಿಶನ್ ಕೂಡ ಈ ಸಂಘವೇ ಕೊಡುತ್ತದೆ. ಇದು ಕೇವಲ ಸಾಯಕಲ್ ಧಂದೆಯಲ್ಲಿ ಅಷ್ಟೇ ಅಲ್ಲ, ಜಪಾನಿನಿಂದ ಹೊರಗೆ ಕಳಿಸುವ ಎಲ್ಲ ಮಾಲಿಗೂ ಒಂದೊಂದು ಪರೀಕ್ಷಕ ಸಂಘವಿರುತ್ತದೆ. ಜಪಾನಿನಲ್ಲಿಯೂ ಈ ಸಂಘಗಳು ನಿರ್ಣಯಿಸಿದ ಬೆಲೆಗೇ ಈ ಮಾಲುಗಳು ಮಾರಲ್ಪಡುತ್ತವೆ. ಫೌಂಟನ್‌ಪೆನ್, ಪೆನ್ಸಿಲ್, ರಬ್ಬರ್ ಮುಂತಾದ ಎಲ್ಲ ಸಣ್ಣ ಧಂದೆಗಳಲ್ಲಿಯೂ ಇದೇ ವಿನಿಮಯಸೌಕರ್ಯ, ಉದ್ಯೋಗ ಸೌಕರ್ಯ ಕಂಡುಬರುತ್ತದೆ.

ಜಪಾನಿಗಳು ಕರ್ತೃತ್ವ ಶಾಲಿಗಳು. ಜಗತ್ತಿನ ಪೇಟೆಯನ್ನು ಆಕ್ರಮಿಸುವುದು ಅವರ ಧ್ಯೇಯ. ಈ ಧ್ಯೇಯವು ಕೊನೆಗಾಣಲಿಕ್ಕೆ ಉದ್ಯೋಗದ ವಿನಿಮಯ ಮಾಡುತ್ತಾರೆ. ಎಲ್ಲ ಉದ್ಯಮಗಳಲ್ಲಿ ಒಂದು ವಿಶಿಷ್ಟ ನಿಯಮವನ್ನು ಅನುಸರಿಸುತ್ತಾರೆ; ಪರಸ್ಪರ ಸಹಕಾರ ಮಾಡುತ್ತಾರೆ. ವ್ಯಾಪಾರದ ಎಲ್ಲ ವಿದ್ಯೆಗಳನ್ನೂ ಸೂಕ್ಷ್ಮವಾಗಿ ಕಲಿತಿದ್ದಾರೆ; ಧಾರಣೆ-ಬೆಲೆಗಳನ್ನು ತಾಂತ್ರಿಕರೀತಿಯಲ್ಲಿ ನಿರ್ಮಿಸುತ್ತಾರೆ. ಅವರು ಹೊಸ ಉದ್ಯಮಗಳನ್ನು ಮಾಡಬಲ್ಲರು; ಹೊರಗಿನಿಂದ ಬರುವ ಮಾಲುಗಳನ್ನು ಅನುಕರಿಸಿ ಅವಕ್ಕಿಂತಲೂ ಮಿಗಿಲಾದ ಮತ್ತು ಅಗ್ಗವಾದ ಮಾಲನ್ನು ತಯಾರಿಸುತ್ತಾರೆ. ಯಂತ್ರಗಳಲ್ಲಿಯೂ ಇವರಿಗೆ ಬುದ್ಧಿಬಲವಿದೆ; ಟೊಯಾಡಾ ಮಗ್ಗ (Toyada Loom) ವೊಂದನ್ನು ನಿರ್ಮಿಸಿದ್ದಾರೆ. ಇದು ಬ್ರಿಟಿಶ್ ಮಗ್ಗಕ್ಕಿಂತ ಹತ್ತುಪಾಲು ಹೆಚ್ಚು ಕೆಲಸ ಕೊಡುತ್ತದೆ. ಪರದೇಶದಿಂದ ಕೆಲವೊಂದು ಯಂತ್ರದ ಭಾಗ ತರಿಸಿ, ಅವುಗಳನ್ನು ತಾವೇ ಉತ್ತಮ ರೀತಿಯಲ್ಲಿ ಪುನಃ ತಯಾರಿಸಿಕೊಳ್ಳುತ್ತಾರೆ. ಅಂತೆಯೇ ನಮ್ಮಂತೆ ಅವರು ಪರದೇಶದ ಯಂತ್ರಸಾಮಗ್ರಿಗಳ ಮೇಲೆ ಅವಲಂಬಿಸಿರುವುದಿಲ್ಲ. ಪರದೇಶದಿಂದ ಯಂತ್ರಸಾಮಗ್ರಿ ತರಿಸಿಕೊಳ್ಳುವ ದೇಶದಲ್ಲಿಯ ಯಂತ್ರಖರ್ಚಿನ ಮೂರರಲ್ಲೊಂದು ಪಾಲು ಮಾತ್ರ ಜಪಾನ್‌ಯಂತ್ರಗಳಿಗೆ ಖರ್ಚು ಬೀಳುತ್ತದೆ. ಎಂದಮೇಲೆ ಇಷ್ಟು ಅಗ್ಗವಾಗಿ ಅವರು ಮಾಲು ಮಾರುವುದು ಆಶ್ಚರ್ಯವಲ್ಲ. ಈಚೆಗೆ ವಿಮಾನಗಳನ್ನು ಕೂಡ ತಯಾರಿಸ ಹತ್ತಿದ್ದಾರೆ.

ಈ ಎಲ್ಲ ದೃಷ್ಟಿಗಳಿಂದ ನೋಡುತ್ತಿರಲಿಕ್ಕಾಗಿ ಜಪಾನಿನ ವ್ಯಾಪಾರಧ್ಯೇಯವು ಒಂದೇ ಒಂದು, ಅದೇನೆಂದರೆ: ದಿನದಿನಕ್ಕೆ ಬೆಳೆಯುತ್ತಿರುವ ಜಪಾನ್ ಜನಸಂಖ್ಯೆಗೆ ಆಹಾರ ಒದಗಿಸಿಕೊಡುವುದು. ಜಪಾನಿನಲ್ಲಿ ಪ್ರತಿವರ್ಷ ಲಕ್ಷಗಟ್ಲೆ ಜನಸಂಖ್ಯೆ ಬೆಳೆಯ ಹತ್ತಿದೆ. ಆದರೆ ಜಪಾನ್ ಸರಕಾರವು ಪರದೇಶಗಳಂತೆ ತನ್ನ ಉದ್ಯೋಗವಿಲ್ಲದ ಜನರಿಗೆ ಬಕ್ಷೀಸುಗಳನ್ನು ಕೊಡಲು ಸಮ್ಮತಿಸುವುದಿಲ್ಲ; ಇಂಥವರಿಗೆ ಕೆಲಸ ಕೊಡುತ್ತಾರೆ. ಅಲ್ಲದೆ ಹೊರಗಿನಿಂದ ಬರುವ ಎಲ್ಲ ಮಾಲುಗಳ ಮೇಲೆ ವಿಪರೀತವಾಗಿ ಸುಂಕ ಹೇರುತ್ತಾರೆ. ಹೊರಗಿನವರು ಕೂಡ ತಮ್ಮ ದೇಶದ ಸಲುವಾಗಿ ಇದೇ ರೀತಿ ಸುಂಕ ಹೇರಬಲ್ಲರು ಎಂಬುದನ್ನು ಜಪಾನಿಯರು ಕೆಲವೊಂದು ವೇಳೆ ಮರೆಯುತ್ತಾರೆ. ಚಾಯನಾದ ಯುದ್ಧ ನಡೆದದ್ದು ಈ ಮರೆವಿನ ಪರಿಣಾಮವೇ.

(೫೩೬ನೆಯ ಪುಟದಿಂದ ಮುಂದುವರಿದುದು)

ರಾಜಮ್ಮ:—ನೋಡಿ, ಇವರು ಏಕ-ಪತ್ನೀ-ವ್ರತ ಮಾಡ್ತಾರಂತೆ!

ಲೀಲಾವತಿ:—ನಿಜ, ನಿಜ. ನೋಡ್ರಮ್ಮ, ಇಂತಹವರು ಭೂಲೋಕದಲ್ಲಿದ್ದು ಬಿಟ್ಟರೆ ಸಾರ್ಥಕವಾದ ಹಾಗೆ, ಹೆಂಗಸರ ಬಾಳು!

ರಾಜಮ್ಮ:— ಲೀಲಾವತಿಬಾಯಿ, ಇವರಿಗೆ ಆರತಿ ಬೆಳಗೋಣವೇ?

ಲೀಲಾವತಿ:— (ನಗುವಳು) ಬನ್ನಿ, ಮಾಡೋಣ ಮಂಗಳಾರತಿ!

ವೆಂಕಣ್ಣ:—(ನಡುಗುತ್ತ, ತೊದಲುತ್ತ) ದ-ಯ-ವಿಟ್ಟು—ಕ್ಷಮಿಸ್ಸಿ!— ಕಾ-ಲಿ-ಗೆ ಬೀ—ಬೀ—ಳ್ತೀ—ತೇ—ನೆ! (ನಮಸ್ಕಾರ ಮಾಡುವನು)

ರಾಜಮ್ಮ:— ಏಕ - ಪತ್ನಿ - ವ್ರತ ಮಾಡ್ತೀರೋ? (ವೆಂಕಣ್ಣನು ಮೇಲೇಳುವನು. ಲೀಲಾವತಿ ಮತ್ತು ರಾಜಮ್ಮ, ಇಬ್ಬರೂ ವೆಂಕಣ್ಣನ ಒಂದೊಂದು ಕೋಳನ್ನು ಹಿಡಿದು ಎಳೆಯುತ್ತಿರುವರು.)

ಲೀಲಾವತಿ ಮತ್ತು ರಾಜಮ್ಮ:— ಏಕ-ಪತ್ನಿ-ವ್ರತವಾಯಿತೇ———?

ವೆಂಕಣ್ಣ:—(ದುಃಖದಿಂದ ಕಣ್ಣೀರಿಡುತ್ತ) ದೇವರೇ! ಎಂತಹ ಕಷ್ಟ ಕೊಟ್ಟೆಯಪ್ಪಾ—ನನಗೆ ಸಾವು ಬಾರದೇಕೆ!— ಸಾವನ್ನಾದರೂ ದಯೆಪಾಲಿಸು, ದೇವರೇ!

—ತೆರೆಯು ಬೀಳುವುದು.*

* All Rights Reserved by the author.

ಬೈರಾಗಿ ಭಾಷೆ ಸಲ್ಲಿಸಿದ.

ಶ್ರೀ. ಹೆಚ್. ಎ. ಭಟ್ಟ, ಬಿ.ಎಸ್‌ಸಿ.

ಅವರಿಂದ

ಆ ಜೀವನದ ಸಂಜೆಯಲ್ಲಿ ಅವಳಿಗೆ ಯಾವುದೋ ಪ್ರಬಲವಾದ ದುಃಖ ಆವರಿಸಿದೆ.

★

ಪಶ್ಚಿಮಘಟ್ಟಗಳ ತಪ್ಪಲಲ್ಲಿ ಎತ್ತರವಾದ ಸ್ಥಳದಲ್ಲಿ ಪಶ್ಚಿಮಾಭಿಮುಖವಾಗಿ ಕಟ್ಟಿದ ಗುಡಿಸಿಲು; ಗುಡಿಸಿಲಿನ ಗೋಡೆಗಳು ಅಲ್ಲಲ್ಲಿ ಬಿದ್ದು ಹೋಗಿವೆ; ಗುಡಿಸಿಲಿನ ಮುಂದೆ ಒಂದು ವೃಂದಾವನ, ಒಂದೆರಡು ಹೂಗಿಡಗಳು, ಒಂದೆರಡು ತರಕಾರಿ ಗಿಡಗಳು: ಗುಡಿಸಿಲಿನ ಮುಂಭಾಗದಲ್ಲಿ ಬಹಳ ದೂರದವರೆಗೆ ಗದ್ದೆಯ ಕೋಗು; ಆ ಗದ್ದೆಯ ಕೋಗನ್ನು ಸಮಭಾಗವಾಗಿ ಛೇದಿಸಿಕೊಂಡು ಹರಿಯುವ ಸಣ್ಣ ತೊರೆ. ಗದ್ದೆಯಾಚೆ ಗುಡ್ಡದ ಸಾಲುಗಳು. ಅದರ ತಪ್ಪಲಲ್ಲಿ ಗಹನವಾದ ಕಾನಾರ. ಗುಡಿಸಿಲಿನ ಎದುರುಭಾಗದಲ್ಲಿ ಗುಡ್ಡದ ಸಾಲುಗಳು ತಗ್ಗಾಗಿವೆ. ಪ್ರಶಾಂತವಾದ ವಾತಾವರಣ; ಮನಸ್ಸಿಗೆ ಉಲ್ಲಾಸವನ್ನುಂಟು ಮಾಡುತ್ತಿದೆ. ಗುಡ್ಡದ ಸಾಲಿನ ಹಿಂದೆ ರವಿಯು ಕಣ್ಮರೆಯಾಗುತ್ತಿದ್ದಾನೆ; ಆದರೂ ಕತ್ತಲೆಯಾಗಲು ಇನ್ನೂ ಬೇಕಾದಷ್ಟು ಹೊತ್ತಿದೆ. ಅಲ್ಲೊಬ್ಬ ಇಲ್ಲೊಬ್ಬ ಗೋವಳನು ದನಗಳನ್ನು ಕೊಟ್ಟಿಗೆಗೆ ಹೊಡೆದುಕೊಂಡು ಹೋಗುತ್ತ ಭಾವಪರವಶನಾಗಿ ಹಾಡುಹೇಳುತ್ತಿದ್ದಾನೆ.

ಆ ಸಮಯದಲ್ಲಿ ಮುದುಕಿಯೊಬ್ಬಳು ಗುಡಿಸಿಲಿನ ಮುಂದೆ ಅಂಗಳದಲ್ಲಿ ಕುಳಿತಿದ್ದಾಳೆ. ತನ್ನ ಮುಂದೆ ರಾಶಿ ಹಾಕಿರುವ

ಮುದುಕಿಯ ಮಾತು ಸುಳ್ಳಲ್ಲ. 'ನಿಜಕ್ಕಿಂತ ಸುಳ್ಳೇ ಎಷ್ಟೋ ಸುಖ! ನಿಜವೆಂಬುದು ಬರಿಯೆ ಒಣಗಿ ಬರಲು ಬರಲಾಗಿರುವ ಮರ. ಸುಳ್ಳು ಚಿಗುರ್ತ ಚೈತ್ರ ಮಾಸದ ಮರ'! ಬೈರಾಗಿ ಬಾರದೆ ಇದ್ದರೆ ಮುದುಕಿ ತನ್ನ ಮಗನ ವಿಷಯದಲ್ಲಿ ಇನ್ನೂ ಎಷ್ಟೆಷ್ಟೋ ಸವಿಗನಸುಗಳನ್ನು ಕಾಣಬಹುದಾಗಿತ್ತು!

★

ಮುರುಗನ ಹರಳನ್ನು (ಒಂದು ಜಾತಿಯ ಎಣ್ಣೆಬರುವ ಬೀಜಗಳು) ಒಂದೊಂದಾಗಿ ಬಿಡಿಸುತ್ತ, ತಲೆಯನ್ನು ಎಡೆಯಮೇಲೆ ಜೋಲು ಬಿಟ್ಟು ಒಂದೊಂದು ನಿಟ್ಟುಸಿರು ಬಿಡುತ್ತಿದ್ದಾಳೆ. ಗತಜೀವನದ ಯಾವುವೋ ಸವಿನೆನಪುಗಳನ್ನು ನೆನೆಯುತ್ತಿರಬಹುದು. ಎಳೆಗರುವೊಂದು ನೆಗೆನೆಗೆದು ಕುಣಿಯುತ್ತ ಅವಳ ಸುತ್ತುಮುತ್ತು ಆಟವಾಡುತ್ತಿದೆ. ಆದರವಳು ಅದರ ಮುಗ್ಧತೆಯ ಪ್ರದರ್ಶನಕ್ಕೆ ಪ್ರೋತ್ಸಾಹ ಕೊಡುತ್ತಿಲ್ಲ. ಉದಾಸೀನ ದೃಷ್ಟಿಯಿಂದ ದಿಗಂತದ ವರೆಗೆ ಅಕೆ ನೋಡುತ್ತಿದ್ದಾಳೆ. ಕಣ್ಣುಗಳಲ್ಲಿ ಆಶೆಯು ಪ್ರಜ್ವಲಿಸುತ್ತಿದೆ. ಆಗಾಗ ಕಣ್ಣೀರನ್ನು ಎಡಗೈಯ ಬೆರಳಿನಿಂದ ಮಿಡಿಯುತ್ತಿದ್ದಾಳೆ. ಕುತ್ತಿಗೆ ಉದ್ದಕ್ಕೆ ಮಾಡಿ ಮಾಡಿ ಬೇಸತ್ತು ಅವಳು ಯಾವುದೋ ವಿಚಾರದಲ್ಲಿ ಮಗ್ನಳಾಗಿ ಕುಳಿತಿದ್ದಾಳೆ. ಆ ಜೀವನದ ಸಂಜೆಯಲ್ಲಿ ಅವಳಿಗೆ ಯಾವುದೋ ಪ್ರಬಲವಾದ ದುಃಖವು ಆವರಿಸಿದೆ.

ಇದ್ದಕ್ಕಿದ್ದಂತೆ 'ಜಯ ಭಗವನ್' ಎಂಬ ನಾದವು ಅವಳ ಕರ್ಣಕುಹರವನ್ನು ಪ್ರವೇಶಿಸಿತು. ಮುದುಕಿ ತಲೆಯೆತ್ತಿ ನೋಡಿದಳು; ಎದುರಿನಲ್ಲೊಬ್ಬ ಹರುಕು ಬಟ್ಟೆಯ ಬೈರಾಗಿ. ಗಡ್ಡವು ಬೆಳೆದು ಮುಖವೆಲ್ಲಾ ಮುಚ್ಚಿ ಹೋಗಿದೆ. ಆ ಕೂದಲರಾಶಿಯ ನಡುವೆ ಕಣ್ಣುಗಳೆರಡು ಉಜ್ವಲವಾಗಿ ಪ್ರಕಾಶಿಸುತ್ತಿವೆ. ಸಂನ್ಯಾಸಿಯು ಬಹಳ ದೂರದಿಂದ ನಡೆದು ಬಂದು ಆಯಾಸಪಟ್ಟಿದ್ದನು. ಹಣೆಯಲ್ಲಿ ಚಿಮ್ಮುತ್ತಿದ್ದ ಬೆವರನ್ನು ಎಡಗೈಯಿಂದ ಒರಸುತ್ತಾ ಬೈರಾಗಿಯು 'ಜೈ ಭಗವನ್! ತಾಯಿ, ಪರದೇಶಿಯೊಬ್ಬನಿಗೆ ರಾತ್ರಿ ಮಲಗಲು ಆಶ್ರಯ ಸಿಕ್ಕೀತೇ?' ಎಂದು ದೈನ್ಯದಿಂದ ಕೇಳಿದನು. ಮುದುಕಿ ಮೊದಮೊದಲು ಆ ಅಪರಿಚಿತ ಬೈರಾಗಿಗೆ ಆಶ್ರಯಕೊಡಲು

ಹಿಂಜರಿದಳು. ಆದರೆ ಬೇರೆಯೇನೋ ಯೋಚನೆಬಂದು 'ಆಗಲಿ, ಇಂದು ಇಲ್ಲಿ ಮಲಗಲು ನೀನು ಋಣಪಡೆದಿದ್ದರೆ ಅದಕ್ಕೆ ನಾನೇಕೆ ಅಡ್ಡಿ ಬರಲಿ?' ಎಂದಳು.

ಬೈರಾಗಿಯು ತನ್ನ ಜೋಳಿಗೆಯನ್ನು ಕೆಳಗಿಳಿಸಿ, ಕೈ ಕಾಲು ತೊಳೆದುಕೊಂಡು, ಚೀಲದಿಂದ ಭಂಗಿಯನ್ನು ತೆಗೆದು ಚಾಕುವಿನಿಂದ ಸಣ್ಣಗೆ ಕತ್ತರಿಸಿ, ನೀರುಹಾಕಿ ಹದಮಾಡತೊಡಗಿದನು. ಮುದುಕಿ ಒಂದುಸಾರೆ ಬೈರಾಗಿಯ ಕಡೆಗೆ ನೋಡಿ ತನ್ನಷ್ಟಕೆ ತಾನೇ 'ಪಾಪ! ಸುಬ್ಬುವೂ ಎಲ್ಲಿಯೋ ಹೀಗೆಯೇ ಇರುಳಾದಲ್ಲಿ ತಂಗುತ್ತ, ಬೆಳಗಾದೊಡನೆ ನಡೆಯುತ್ತ ಅಲೆಯುತ್ತಿರಬಹುದು' ಎಂದುಕೊಂಡಳು. ಬೈರಾಗಿಗೆ ಆ ವಾಕ್ಯದ ಕೊನೆಯಭಾಗ ಮಾತ್ರ ಕೇಳಿಸಿತು. ಭಂಗಿಯನ್ನು ತೀಡುತ್ತಿದ್ದ ಅವನ ಕೈಬೆರಳುಗಳು ಅಲ್ಲಿಯೇ ನಿಂತುವು. 'ಏನು ತಾಯಿ, ಹಾಗೆ ಹೇಳ್ತೀರಿ?' ಎಂದು ಬೈರಾಗಿ ಕೇಳಿದನು.

"ಏನಿಲ್ಲಪ್ಪ. ಹಾಳು ಹೊಟ್ಟೆಯ ಸಂಕಟ, ಹೆತ್ತ ಕರುಳು. ತಡೆಯಲಾರದ ಸಂಕಟಕ್ಕೆ ಹೇಳಿಕೊಂಡೆ!"

ಬೈರಾಗಿ ಸುಮ್ಮನೆ ಕುಳಿತುಕೊಂಡನು. ಅವನ ಮನಸ್ಸು ಯೋಚನೆಯಲ್ಲಿ ತೊಡಗಿತ್ತು. ಮುದುಕಿಯೂ ಒಂದೆರಡು ನಿಮಿಷ ಸುಮ್ಮನಿದ್ದು ತಾನಾಗಿಯೇ ಹೇಳತೊಡಗಿದಳು:

"ಅವನು ಹೊರಟುಹೋಗಿ ಆರು ವರ್ಷವಾಯಿತು. ಸುಬ್ಬು ಎಂತ ಅವನ ಹೆಸರು. ಚಿನ್ನದಂತಾ ಹುಡುಗ. ನಾನೇನೋ ತಾಯಿಯೆಂಬ ಅಭಿಮಾನದಿಂದ ಹಾಗೆಂತ ಹೇಳಿದೆನೆಂತ ತಿಳಿದುಕೋ ಬೇಡ! ಬೆಳಗಾದ ಮೇಲೆ ಸುತ್ತುಮುತ್ತ ಯಾರನ್ನಾದರೂ ವಿಚಾರಿಸು; ಎಲ್ಲರಿಗೂ ಅಂತಹ ಅಚ್ಚುಮೆಚ್ಚಾಗಿದ್ದನು. ನಮ್ಮನ್ನೆಲ್ಲಾ ಬಿಟ್ಟು ಹೋಗುವುದಕ್ಕೇ ಅಂತಹ ಒಳ್ಳೆಯಬುದ್ಧಿ ಅವನಿಗೆ ದೇವರು ಕೊಟ್ಟಿದ್ದ ಎಂದು ಕಾಣುತ್ತೆ. ಒಬ್ಬರ ಹತ್ತಿರವಾದರೂ ಒಂದು ಕೆಟ್ಟ ಮಾತು ಕೇಳಿದವನಲ್ಲ, ನನ್ನನ್ನು ಕಂಡರೆ ಅಷ್ಟು ಪ್ರೀತಿಯಿಟ್ಟಿದ್ದ. ಆದರೆ ನಾನೇ ಅವನ ಸುಖಕ್ಕೆ ಕಲ್ಲು ಹಾಕಿದೆ" ಮುದುಕಿ ಕಣ್ಣೀರನ್ನು ಸೆರಗಿನಿಂದ ಒರಸಿಕೊಂಡಳು.

"ಬೈರಾಗಿ! ನಿನ್ನನ್ನು ನೋಡಿ ನನ್ನ ಮಗನೂ ಎಲ್ಲೋ ಬೈರಾಗಿಯಾಗಿದ್ದಾನೆ ಎಂದು ಕಂಡಿತಾಗಿ, ನಿನ್ನೊಡನೆ ಎಲ್ಲ ಹೇಳುತ್ತೇನೆ. ಮುಂದೆ ಎಂದಾದರೊಂದು ದಿನ

ಬಹಳ ಹೊತ್ತಿನ ವರೆಗೆ ಯೋಚಿಸಿ ಯೋಚಿಸಿ ಪುನಃ ಗುಡಿಸಿಲಿನ ಕಡೆಗೆ ಹೊರಟನು.

ನೀನವನನ್ನು ನೋಡಿದರೂ ನೋಡಬಹುದು. ನೋಡಲ್ಲಿ, ಅಲ್ಲಿ ಕಾಣುವ ಮನೆಯ ಯಜಮಾನನ ಹೆಸರು ನರಸಯ್ಯ. ಬಾಲ್ಯದಿಂದಲೂ ಸುಬ್ಬುವೂ ನರಸಯ್ಯನ ಮಗಳು ಲಕ್ಷ್ಮಿಯೂ ಒಟ್ಟಿಗೆ ಆಡಿ ಬೆಳೆದವರು. ನಾನು ಲಕ್ಷ್ಮಿಗೆ ತಿಂಡಿ-ಗಿಂಡಿ ಕೊಟ್ಟು ದಿನವೂ ಬರುವಂತೆ ಮಾಡುತ್ತಿದ್ದೆ. ಲಕ್ಷ್ಮಿಯೂ ಮುತ್ತಿನಂತಹ ಹುಡುಗಿ. ಸುಬ್ಬುವಿಗೂ ಅವಳಿಗೂ ಸ್ನೇಹ ಬಳೆಯಿತು. ನನಗೇನು ಗೊತ್ತು? ಅದು ಅಷ್ಟು ನೆಲೆಯಾಗಿ ಬಿಡುತ್ತೆ ಅಂತ! ನರಸಯ್ಯನ ಮಗಳು ಕೊಡುಗೂಸಾಗಿ ಬೆಳೆದಳು. ಅವಳೂ ಸುಬ್ಬುವನ್ನು ಮನಸಾರೆ ಪ್ರೀತಿಸುತ್ತಿದ್ದಳಂತೆ. ಅವನೇ ಗಂಡನಾಗಬೇಕೆಂದು ಗೆಳತಿಯರೊಡನೆ ಹೇಳುತ್ತಿದ್ದಳಂತೆ. ಸುಬ್ಬು ಎಲ್ಲಾ ವಿಚಾರ ನನ್ನೊಡನೆ ಹೇಳಿದ. ಅವನು ನನಗೆ ಹೇಳದಿದ್ದ ಗುಟ್ಟೇ ಇರುತ್ತಿರಲಿಲ್ಲ. ನಾನು ನರಸಯ್ಯನೊಡನೆ ಲಕ್ಷ್ಮಿಯನ್ನು ತಂದುಕೊಳ್ಳುವ ವಿಚಾರ ಪ್ರಸ್ತಾಪ ಮಾಡಿದೆ; ಆದರೆ ನರಸಯ್ಯ ಬಹಳ ಜಿಪುಣ. ಕಾಸು ಎಂದರೆ ಅವನಿಗೆ ಪ್ರಾಣ. ಅವನು ಒಂದು ಸಾವಿರ ರೂಪಾಯಿ ತೆರ ಕೊಡಬೇಕು ಎಂದು ಹೇಳಿದ. ನಮ್ಮ ಬಡತನಕ್ಕೆ ನೂರು ರೂಪಾಯಿ ಕೊಡುವುದೂ ಕಷ್ಟವಾಗಿದ್ದಿತು; ಸಾವಿರ ರೂಪಾಯಿ ಎಲ್ಲಿಂದ ತರುವುದು? ಆ ಲಾಗಾಯಿತು ಸುಬ್ಬು ಬದಲುಮನುಷ್ಯನಾದ. ಪ್ರಪಂಚದಲ್ಲಿ ಯಾವುದೂ ಬೇಡವಾದವನಂತೆ ಇರಹತ್ತಿದ. ನಾನು ಸಮಾಧಾನ ಹೇಳಿದೆ. ಮುಪ್ಪಿನ ಮುದುಕಿಯನ್ನು ಬಿಟ್ಟು ಎಲ್ಲಿಯಾದರೂ ಪ್ರಾಣಕ್ಕೆ ಅಪಾಯ ತಂದುಕೊಂಡಾನು ಎಂಬ ಸಂಶಯವನ್ನು ವ್ಯಕ್ತಪಡಿಸಿದೆ. ಆದರವನು ತಾನು ಹಾಗೆ ಒಂದು ಹೆಣ್ಣಿಗಾಗಿ ಪ್ರಾಣ ಕಳೆದುಕೊಳ್ಳುವಂತಹ ಹೇಡಿಯಲ್ಲವೆಂದು ಹೇಳಿದನು. ನನಗೆ ಸಮಾಧಾನವಾಯಿತು. ಆದರೆ ಬೈರಾಗಿ, ಪ್ರೀತಿ ಎಲ್ಲಕ್ಕಿಂತ ದೊಡ್ಡದು. ಅದರಲ್ಲೂ ಯೌವನದಲ್ಲಿ ತಾನಾಗಿ ಬೆಳೆದ ನಿಷ್ಕಪಟವಾದ ಪ್ರೇಮವು ಎಣೆಯಿಲ್ಲದುದು. ಲಕ್ಷ್ಮಿಯ ಮದುವೆಯ ಹಿಂದಿನ ದಿನ ಲಕ್ಷ್ಮಿಯೂ ಸುಬ್ಬುವೂ ಬಹಳ ಕಾಲ ಒಬ್ಬರೊಡನೊಬ್ಬರು ಮಾತನಾಡುತ್ತಿದ್ದರಂತೆ. ಅಂದು ಸುಬ್ಬು ಮನೆಗೆ ಬರುವಾಗ ಅವನ ಕಣ್ಣುಗಳು ಊದಿಕೊಂಡು ಕೆಂಪಾಗಿದ್ದುವು. ಮರುದಿವಸ ಬೆಳಗಾಗುವುದರಲ್ಲಿ

ಈ ದುರ್ದೈವಿಯಾದ ಗುಡಿಸಿಲು ತನ್ನಲ್ಲಿದ್ದ ಮಾಣಿಕ್ಯವನ್ನು ಕಳೆದುಕೊಂಡಿತು ಸುಬ್ಬು ನನ್ನೊಬ್ಬಳನ್ನೇ ಬಿಟ್ಟು ಹೊರಟುಹೋದ'' ಮುದುಕಿ ಗಳಗಳನೆ ಅಳತೊಡಗಿದಳು.

ಬೈರಾಗಿಗೆ ಮುಳ್ಳ ಮೇಲೆ ಕುಳಿತಂತಾಗಿತ್ತು. ಎಡೆಬಿಡದೆ ಕಟ್ಟಿರುವೆಗಳು ಕಡಿಯುತ್ತಿದ್ದರೆ ಹೇಗಾಗಬಹುದೋ ಆ ಸ್ಥಿತಿಯು ಅವನ ಮುಖದಲ್ಲಿ ಕಾಣುತ್ತಿತ್ತು. ಅವನು ಮುದುಕಿಗೆ ಅದೇ ಸುಬ್ಬುವಿನ ಕೊನೆಯ ಸಂದೇಶವನ್ನು ತಂದಿದ್ದನು.

"ತಾಯಿ.."

''ಬೈರಾಗಿ, ಸುಬ್ಬು ಇಷ್ಟು ಹೊತ್ತಿಗೆ ಸತ್ತುಹೋಗಿರಬಹುದು; ಆದರೆ ನನ್ನ ಮನಸ್ಸು ಅದಕ್ಕೊಪ್ಪುವುದಿಲ್ಲ. ಅಲ್ಲಿ ಇಲ್ಲಿ ಅಲೆದು ಮನಸ್ಸಿಗೆ ಸ್ವಲ್ಪ ಶಾಂತಿಯುಂಟಾದ ಮೇಲೆ ತಾಯಿಯನ್ನು ನೆನೆದು ಎಂದಿಲ್ಲೊಂದು ದಿನ ಬಾರದೇ ಬರುವನೆಂದು ಹೇಳುತ್ತದೆ ಅದು. ಅಂತಹ ಪ್ರಬಲವಾದ ಕಾರಣವಿರದಿದ್ದರೆ ನನ್ನನ್ನೆಂದೂ ಅವನು ಬಿಟ್ಟುಹೋಗುತ್ತಿರಲಿಲ್ಲ. ಈ ಬಾಯ್ಲಿಂದಲೂ ಅವನು ನನ್ನನ್ನು ಅಲಕ್ಷಿಸಿ ಹೋದನೆಂಬ ಮಾತು ಬರುವುದಿಲ್ಲ. ನನಗಿಂತ ಅವನಿಗೇ ಹೆಚ್ಚಿನ ಕಷ್ಟವಾಗಿರಬಹುದು. ಇಲ್ಲಿದ್ದರೆ ಅವನಿಗೆ ಸಮಾಧಾನವನ್ನಾದರೂ ಹೇಳುತ್ತಿದ್ದೆ. ಊಟವಿದೆಯೋ ಇಲ್ಲವೋ? ಎಲ್ಲೋ ಏನೋ? ಆದರೂ ಅವನು ಬರುತ್ತಾನೆ ಎಂಬುದೇ ಮನಸ್ಸಿಗೆ ಸಂತೋಷ. ನಾನಿಲ್ಲಿ ಕುಳಿತು ಪ್ರತಿದಿನವೂ ಅವನು ಬರುವನೋ ಎಂದು ನೋಡುತ್ತಿರುತ್ತೇನೆ. ಬರುವುದಿಲ್ಲನೆಂದು ಮನಸ್ಸಿನ ಯಾವುದೋ ಮೂಲೆಯಿಂದ ಧ್ವನಿಯು ಕೇಳಿಬರುತ್ತಿದ್ದರೂ ಪ್ರತಿದಿನವೂ ಆಶೆ ಹೊಸತಾಗುವುದು. ಒಂದು ಸಾರೆ ಅವನು ಎಲ್ಲಿಯೋ ಒಬ್ಬಳನ್ನು ಮದುವೆಯಾಗಿ ಸುಖವಾಗಿರಬಹುದೆಂದು ಭಾವಿಸಿಕೊಳ್ಳುತ್ತೇನೆ. ಆದರೆ ಆ ಯೋಚನೆ ತಪ್ಪು. ನನ್ನ ಮಗುವು ಆ ರೀತಿ ನನ್ನನ್ನು ಮರೆಯುವವನಲ್ಲ. ಇನ್ನೊಂದು ಸಾರೆ ತಾನು ಮಾಡಿದ ಹುಡುಗಾಟಿಕೆಯ ಕೆಲಸಕ್ಕೆ ಪಶ್ಚಾತ್ತಾಪಪಟ್ಟು ಹಿಂದಿರುಗಿ ಬರುತ್ತಾನೆಂದು ಕಲ್ಪಿಸಿಕೊಳ್ಳುತ್ತೇನೆ. ನಿಜಕ್ಕಿಂತ ಸುಳ್ಳೇ ಎಷ್ಟೋ ಸುಖ! ನಿಜ ಬರೀ ಒಣಗಿ ಬರಲು ಬರಲಾಗಿ ನಿಂತಿರುವ ಮರ; ಸುಳ್ಳು ಚಿಗುರ್ತ ಚೈತ್ರ-ಮಾಸದ ಮರ!''

ಮುದುಕಿಯ ಮುಖವು ಕ್ಷಣಿಕವಾದ ಆನಂದದಿಂದ, ದೂರದಾಶೆಯಿಂದ ಪ್ರಜ್ವಲಿಸಿತು. ಬೈರಾಗಿಗೂ ಬಹಳ ದುಃಖವಾಗಿ ಎರಡು ಹನಿಗಳು ಕಣ್ಣಿನ ಮೂಲೆಯಲ್ಲಿ ತಲೆ ಹಾಕಿದುವು. ಸುಬ್ಬುವು ತಿರುಗಿ ಬರುತ್ತಾನೆಯೇ? ಅವನು! ಹೋದವರಾರೂ ಹಿಂತಿರುಗಿ ಬಾರದಂತಹ ಪ್ರದೇಶಕ್ಕೆ ಹೊರಟು ಹೋಗಿದ್ದನೆಂಬುದು ಬೈರಾಗಿಗೆ ತಿಳಿದಿತ್ತು. ಆದರೆ ತಾಯಿ ಇಲ್ಲಿ ಕಲ್ಪನೆಯ ಕಟ್ಟಡ ಕಟ್ಟುತ್ತಿದ್ದಳು. ಅವನು ಬರಲಾರನೆಂಬುದನ್ನು ಯೋಚಿಸಲು ಸಹ ಅವಳು ಹೆದರುತ್ತಿದ್ದಳು. ಬೈರಾಗಿ ಸುಬ್ಬುವಿನ ಮರಣವಾರ್ತೆಯನ್ನು ತಿಳಿಸಲು ದೇಶ-ದೇಶವನ್ನಲೆದು ಬಂದಿದ್ದನು. ಆದರೆ ತಾಯಿಯ ಮೃದುಹೃದಯದಲ್ಲಿ ಶೂಲವನ್ನು ನೆಡಲಾರದೆ ಮೌನವಾಗಿ ಕುಳಿತಿದ್ದನು.

ಮುದುಕಿ ಮತ್ತೆ ಕೇಳಿದಳು: ''ಬೈರಾಗಿ, ಒಂದು ಪ್ರಶ್ನೆ ಹೇಳ್ತೀಯಾ? ಸುಬ್ಬು ಎಷ್ಟು ದಿನಕ್ಕೆ ಬರ್ತಾನೆ? ಎಲ್ಲಿದ್ದಾನೆ? ಸುಖವಾಗಿರುವನೆ? ಜೋಯಿಸರು ಎರಡು ತಿಂಗಳ ಹಿಂದೆ ಅವನನ್ನು ಎಂಟು ದಿವಸಗಳಲ್ಲಿ ಮನೆಗೆ ಬರುವಂತೆ ಮಾಡುತ್ತೇನೆಂದು ಒಂದು ಖಂಡುಗ ಭತ್ತ, ೨ ರೂಪಾಯಿ ತೆಗೆದುಕೊಂಡರು; ಇನ್ನೂ ಬರಲಿಲ್ಲ! ನೀನಾದರೂ ಸಾಯುವವಳಿಗೆ ಮೋಸ ಮಾಡದೆ, ಇದ್ದುದನ್ನು ಇದ್ದಂತೆ ಹೇಳಿಬಿಡು!''

ಬೈರಾಗಿ ಮಾತನಾಡದೆ ಇದ್ದುದನ್ನು ನೋಡಿ ಮುದುಕಿ, ಪುಗಸಟ್ಟೆ ಪ್ರಶ್ನೆ ಹೇಳುವುದನ್ನು ತಪ್ಪಿಸಿಕೊಳ್ಳುತ್ತಿದ್ದಾನೆಯೆಂದು ತಿಳಿದು ''ಬೈರಾಗಿ! ಕೊಡಲು ನನ್ನಲ್ಲಿ ಕಾಸೇನೂ ಉಳಿದಿಲ್ಲ, ಕಂಡ ಕಂಡ ಪ್ರಶ್ನೆ ಹೇಳುವವರು, ಮಾಂತ್ರಿಕರು ಮೊದಲಾದವರಿಗೆ ಕೊಟ್ಟು ಇದ್ದದ್ದೆಲ್ಲಾ ಖರ್ಚಾಯಿತು. ಆದರೂ ನೀನು ಪುಗಸಟ್ಟೆ ಹೇಳಬೇಡ; ನನ್ನ ಕಿವಿಯಲ್ಲಿ ನನ್ನ ತಾಯಿ ಕೊಟ್ಟ ಮುರುಗು ಇದೆ, ಅದನ್ನೇ ಕೊಡುತ್ತೇನೆ. ಹೇಗಾದರೂ ಸುಬ್ಬು ಬಂದು ಸಾಯುವಾಗ ನನ್ನ ಬಾಯಿಗೆ ಒಂದು ತೊಟ್ಟು ನೀರು ಹಾಕಿದರೆ ಸಾಕು!" ಎಂದು ಕಿವಿಯ ಮುರುಗನ್ನು ತೆಗೆಯಲು ಕೈಹಾಕಿದಳು, ಬೈರಾಗಿ 'ಬೇಡ ತಾಯಿ' ಎಂದನು. ಮುದುಕಿ ಕುತೂಹಲದಿಂದ ತಲೆಯೆತ್ತಿ ನೋಡಿದಳು. ಪ್ರಶ್ನೆಹೇಳಲು ಈ ರೀತಿ ಹಿಂತೆಗೆದ ಬೈರಾಗಿಯನ್ನೂ ಕೊಟ್ಟ ದುಡ್ಡು ಬೇಡವೆಂದವನನ್ನೂ ಅವಳು ನೋಡಿರಲಿಲ್ಲ. ಸಂನ್ಯಾಸಿಯ ಕಣ್ಣಿನಿಂದಲೂ ಹನಿಗಳು ಉರುಳಿ ಗಡ್ಡದ ಪೊದೆಯಲ್ಲಿ ಮಾಯವಾಗುವುದು ಅವಳಿಗೆ ಕಾಣಿಸಿತು. 'ಪಾಪ, ಅವನಿಗೂ ಯಾವ ದುಃಖವಿದೆಯೋ!' ಎಂದವಳು ಯೋಚಿಸಿಕೊಂಡಳು.

ಬೈರಾಗಿಗೆ ಇನ್ನು ತಡೆಯಲಾಗಲಿಲ್ಲ. ತಾನು ಕೊಟ್ಟ ಭಾಷೆಯನ್ನೂ ಮರೆತು, ಕಮಂಡಲು ಡೊಣ್ಣೆ ಜೋಳಿಗೆ ಮೊದಲಾದ ಎಲ್ಲಾ ಪರಿಕರಗಳನ್ನು ತೆಗೆದುಕೊಂಡು ಹೊರಡಲನುವಾದನು. ಮುದುಕಿ ಆಶ್ಚರ್ಯದಿಂದ 'ಇದೇನು, ಎಲ್ಲಿಗೆ ಹೊರಟೆ?' ಎಂದು ಕೇಳಿದಳು. ಬೈರಾಗಿಯು ಬಹಳ ಕಷ್ಟದಿಂದ 'ನಾನು ಬೇರೆ ಎಲ್ಲಾದರೂ ಉಳಿದುಕೊಳ್ಳುತ್ತೇನೆ...' ಎಂದನು. ತನ್ನ ಕತೆ ಕೇಳಿ ಅವನಿಗೆ ಬೇಸರವಾಗಿರಬಹುದೆಂದು ಯೋಚಿಸಿ ಮುದುಕಿಯು 'ಬೇಜಾರು ಮಾಡಿಕೊಳ್ಳಬೇಡ; ಏನೋ ಹೊಟ್ಟೆಯಲ್ಲಿ ಕುದಿಯುವ ಸಂಕಟವನ್ನು ತಡೆಯಲಾರದೆ ಹೇಳಿಕೊಳ್ಳುತ್ತೇನೆ. ನಾನು ಚೆನ್ನಾಗಿರುವಾಗ ಎಲ್ಲರೂ ನನ್ನ ಮನೆಗೆ ಬರುತ್ತಿದ್ದರು. ಈಗ ಯಾರು ಈ ಪಾಪಿಯನ್ನು ಮಾತಾಡಿಸುವವರು? ಆದ್ದರಿಂದ ಅಪರೂಪವಾಗಿ ಯಾರನ್ನಾದರೂ ನೋಡಿದರೆ ಅವರೊಡನೆ ನನ್ನ ದುಃಸ್ಥಿತಿಯನ್ನು ಹೇಳಿಕೊಳ್ಳೋಣವೆಂದು ಮನಸ್ಸಾಗುತ್ತದೆ' ಎಂದು ತನ್ನ ಗತಜೀವನವನ್ನು ನೆನೆದು ಧಾರಾಕಾರವಾಗಿ ಸುರಿಯುತ್ತಿದ್ದ ಕಂಬನಿಯನ್ನು ತೊಡೆದುಕೊಂಡಳು. ಆದರೆ ಬೈರಾಗಿ ಹೊರಟೇ ಬಿಟ್ಟನು. ''ರಾತ್ರಿಯ ಹೊತ್ತು, ಕಾಣದ ಸ್ಥಳದಲ್ಲಿ ಹೇಗೇಕೆ ಹೊರಡುವೆ; ಗಂಜಿ ಮಾಡುತ್ತೇನೆ; ಉಂಡು ಹಾಯಾಗಿ ಮಲಗು; ಬೆಳಗಾದ ಮೇಲೆ ದೇಶವೇ ನಿನ್ನದು!'' ''ಕ್ಷಮಿಸಿ'' ಎಂದು ಹೇಳಿ ಬೈರಾಗಿ ಹೊರಟೇ ಬಿಟ್ಟನು. 'ಏನಾಯಿತೋ ಏನೋ' ಎಂದುಕೊಂಡಳು ಮುದುಕಿ.

ಬೈರಾಗಿ ಸರಸರನೆ ಬಹುದೂರ ಹೋದ. ಅಲ್ಲೊಂದು ಹಲಸಿನ ಮರದ ಕೆಳಗೆ ಕುಳಿತು ಕೊಂಡನು. ಬಹಳ ಹೊತ್ತು ಯೋಚಿಸಿ ಪುನಃ ಗುಡಿಸಿಲಿನ ಕಡೆಗೆ ಹೊರಟನು. ಮುದುಕಿ ಅಲ್ಲಿಯೇ ಕುಳಿತಿದ್ದಳು. ಬೈರಾಗಿ ಯನ್ನು ನೋಡಿ "ಬಂದೆಯಾ? ಮುದುಕಿಯ ನಾತನ್ನು ತೆಗೆದುಹಾಕಲಿಲ್ಲವಲ್ಲ! ದೇವರ ಧ್ಯಾನಮಾಡು, ಅಷ್ಟುಹೊತ್ತಿಗೆ ಗಂಜಿ ಮಾಡುತ್ತೇನೆ" ಎಂದು ಎದ್ದಳು. "ತಾಯಿ, ಈ ಪಾಪಿಗೆ ನೀವು ವಿಷಹಾಕಬೇಕು" ಎಂದ ಬೈರಾಗಿ. ತಾಯಿ ಅಲ್ಲಿಯೇ ನಿಂತಳು. "ತಾಯಿ, ನಾನು ನಿಮ್ಮ ಮಗನ ಮರಣವಾರ್ತೆಯನ್ನು ತಿಳಿಸಲು ಬಂದಿದ್ದೇನೆ. ಅವನು ಈಗೆರಡು ವರ್ಷಗಳಿಗೆ ಹಿಂದೆ ಪ್ರಯಾಗದಲ್ಲಿ ಸತ್ತುಹೋದ" ಮುದುಕಿ 'ಆಂ' ಎಂದು ಕುಳಿತುಬಿಟ್ಟಳು. ಬೈರಾಗಿ ಮನಸ್ಸನ್ನು ಗಟ್ಟಿಮಾಡಿಕೊಂಡು "ತಾಯಿ, ಈಗ ೮ ವರ್ಷಗಳಿಗೆ ಹಿಂದೆ ಅವನು ಒಂದು ನಮ್ಮ ಗುಂಪಿಗೆ ಸೇರಿದನು. ಬಹಳ ಒಳ್ಳೆಯವನಾಗಿದ್ದ. ತನಗಾರೂ ಇಲ್ಲ ವೆಂದು ಹೇಳಿದನು. ೩ ವರ್ಷ ನಮ್ಮ ಜೊತೆಯಲ್ಲಿ ಅನೇಕ ಪ್ರದೇಶಗಳನ್ನು ಸಂಚರಿಸಿದನು. ಅವನ ಪ್ರಾಮಾಣಿಕತೆಯನ್ನು ನೋಡಿ ನನಗೆ ಬಹಳ ಮೆಚ್ಚಿಕೆಯಾಯಿತು. ಆದರೆ ಅವನಿಗೆ ದೇವರ ಮೇಲೆ ಭಕ್ತಿಯಿರಲಿಲ್ಲ. ನಾನೆಷ್ಟು ಪ್ರಯತ್ನಪಟ್ಟರೂ ಆ ಕಡೆ ಅವನ ಮನಸ್ಸು ತಿರುಗಲಿಲ್ಲ. ಅವನ ಪುರಾಕೃತ ಕರ್ಮವೆಂದು ನಾನು ಸುಮ್ಮನಾದೆ. ಕೊನೆಗೊಂದು ದಿನ ಅವನಿಗೆ ಕಾಹಿಲೆ ಬಂದಿತು. ನಾನೂ ಅದಷ್ಟು ಪ್ರಯತ್ನಪಟ್ಟೆ; ಆದರೆ ಅವನಿಗೆ ಬದುಕುವ ಯೋಗವಿರಲಿಲ್ಲ. ಕೊನೆಗೆ ಅವನ ಮರಣ ಸಮೀಪಿಸಿತು. ನನ್ನನ್ನು ಕರೆದು 'ಅಣ್ಣಾ, ನನಗೆ ತಾಯಿಯೊಬ್ಬಳಿದ್ದಾಳೆ. ನನ್ನ ವರ್ತಮಾನವನ್ನು ಅವಳಿಗೆ ತಿಳಿಸಬೇಕು' ಎಂದನು. ನಾನು 'ಎಲ್ಲಿದ್ದಾಳೆ?' ಎಂದೆ. 'ಮೈಸೂರಲ್ಲಿ..' ಮುಂದೆ ಏನು ಹೇಳಿದನೋ ನನಗೆ ಗೊತ್ತಾಗಲಿಲ್ಲ. ನಾನು ಹಿಂದುಮುಂದು ಯೋಚಿಸದೆ 'ಆಗಲಿ' ಎಂದೆ. ಸಾಯುವಾಗ ಅವನ ಕಣ್ಣಲ್ಲಿ ನೀರು ತುಂಬಿತ್ತು. ಅವನ ಅಂತ್ಯಸಂಸ್ಕಾರವನ್ನು ನಾನೇ ಮಾಡಿದೆ. ಅವನು ನನಗೆ ತಮ್ಮನಂತಿದ್ದ!"

ಮುದುಕಿ ಅಧೋವದನಳಾಗಿ ಕುಳಿತಿದ್ದಳು. ದುಃಖವು ಅವಳ ವಾಕ್ಶಕ್ತಿಯನ್ನು ಅಪಹರಿಸಿದ್ದಿತು. ಬೈರಾಗಿ ಕೃತನಿಶ್ಚಯನಾಗಿ ನೆಲದಕಡೆಗೆ ದೃಷ್ಟಿಯಿಟ್ಟು ಮುಂದುವರಿಸಿದನು: "ನಾನು ನನ್ನ ಜೊತೆಗಾರನಿಗೆ ಕೊಟ್ಟ ವಚನವನ್ನು ಪರಿಪಾಲಿಸಲು ಮೈಸೂರು ದೇಶಕ್ಕೆ ಬಂದೆ. ಆದರೆ ನನಗೆ ಅವನ ಸ್ಥಳ ಹೇಳುವವರಾರು? ನನ್ನ ಯಾತ್ರೆಯನ್ನೆಲ್ಲಾ ಬದಿಗಿಟ್ಟು ಊರೂರು ಅಲೆದು ವಿಚಾರಿಸಿದೆ. ೬ ವರ್ಷದ ಹಿಂದೆ ಓಡಿಹೋದವನ ಮನೆ ಎಲ್ಲೆಂದು ಕಂಡ ಕಂಡವರನ್ನು ವಿಚಾರಿಸಿದೆ. ಯಾರೂ ಹೇಳರು. ೨ ವರ್ಷ ಕಳೆಯಿತು. ನನ್ನ ಭಾಷೆಯನ್ನು ನೆರವೇರಿಸುವ ಆಶೆ ನಿರಾಶೆಯಾಗುತ್ತಬಂದಿತು. ಆದರೆ ೮ ವರ್ಷ ಅವನು ನನಗೆ ಮಾಡಿದ ಸೇವೆಗೆ ಪ್ರತಿಯಾಗಿ ಇಷ್ಟೂ ಮಾಡದಿದ್ದರೆ ನಾನು ಕೃತಘ್ನನಾಗುತ್ತಿದ್ದೆ. ದೇವರನ್ನು ಪ್ರಾರ್ಥಿಸುತ್ತ ಅಲೆಯುತ್ತಿರುವಾಗ, ನಿನ್ನೆ ಯಾರೋ—ಈ ದಿಕ್ಕಿನಲ್ಲಿ ಹೋದರೆ ಅಂಥವನೊಬ್ಬನ ಮನೆ ಸಿಕ್ಕುವುದೆಂದು ಹೇಳಿದರು. ಮನಸ್ಸು ಸ್ವಲ್ಪ ಹಗುರವಾಗಿ ಇಲ್ಲಿಗೆ ಬಂದೆ. ಹುಟ್ಟಿದವ ಸಾಯಲೇಬೇಕು; ಆದ್ದರಿಂದ ಅವನ ಮರಣವನ್ನು ಅಂತಹ ಪ್ರಮಾದವೆಂದು ಭಾವಿಸಿರಲಿಲ್ಲ. ಆದರೆ ತಾಯಿ, ನಿನ್ನನ್ನು ನೋಡಿ ಅದನ್ನು ಬದಲಾಯಿಸಬೇಕಾಯಿತು. ಹೇಳದಿದ್ದರೆ ವಿಧಿಯಿಲ್ಲ, ಹೇಳಿಯಾಯಿತು. ತಾಯಿ, ಇನ್ನು ನಾನು ಹೊರಟೆ. ನಿನ್ನ ಮಗನಿಗೆ ಸದ್ಗತಿಯಾಗಿದೆ. ಗಂಗೆಯಲ್ಲಿ ಅವನ ಅಸ್ಥಿಗಳು ಮುಳುಗಿವೆ. ಮುಂದಿನ ಜನ್ಮದಲ್ಲಿ ತಾವಿಬ್ಬರೂ ತಾಯಿ-ಮಕ್ಕಳಾಗಿ ಸುಖವಾಗಿ ಬಾಳುತ್ತೀರಿ. ಜಯ ಭಗವನ್!"

ಬೈರಾಗಿ ಹೊರಟನು. ಮುದುಕಿ ಎಚ್ಚೆತ್ತು ಅವನನ್ನು ಕೂಗಿದಳು "ಬೈರಾಗಿ, ನನ್ನ ಮಗನಿಗೆ ಕೊನೆಗಾಲದಲ್ಲಿ ನೀನು ನೀರುಕೊಟ್ಟೆ; ಈ ದಿವಸ ನಮ್ಮ ಮನೆಯಲ್ಲಿ ನಾನು ಕೊಡುವ ನೀರನ್ನು ಕುಡಿಯದೆ ನೀನು ಹೊರಡಬಾರದು! ಬಾ, ನೀನಿಲ್ಲಿಯೇ ಇರಬೇಕು! ನನ್ನ ಮಗು ಹೇಗಿತ್ತು? ಏನು ಮಾತಾಡುತ್ತಿತ್ತು? ಎಲ್ಲೆಲ್ಲಿ ಸುತ್ತಾಡಿತು? ಸುಖವಾಗಿದ್ದನೇ? ಊರಿನ ಪ್ರಸ್ತಾಪವನ್ನೆಂದೂ ಎತ್ತಲಿಲ್ಲವೇ? ಎಂದೂ ತನ್ನ ದುಃಖವನ್ನು ನಿನ್ನೊಡನೆ ಹೇಳಲಿಲ್ಲವೆ? ಹೇಗೆ ಸತ್ತ? ಅವನಿಗೆ ಹೇಗೆ ಗತಿಕಾಣಿಸಿದೆ? ಎಲ್ಲ ವಿಶದವಾಗಿ ಹೇಳಬೇಕು. ಇಷ್ಟು ಮಾಡಿದವನು ಇದಿಷ್ಟು ಮಾಡಬೇಕು. ನೀವು ಹಿಂದಿನ ಜನ್ಮದಲ್ಲಿ ಅಣ್ಣ-ತಮ್ಮಂದಿರಾಗಿದ್ದಿರಿ?" ಎಂದು ಒಳಗೆ ಹೋಗಲು ತಿರುಗಿದಳು. ಅತಿಯಾಗಿ ದುಃಖವಾದರೆ ಕಣ್ಣೀರು ಬಾರದು; ರೋದನವು ಹೊರಡದು.

ಸಂಪೂರ್ಣವಾಗಿ ಕತ್ತಲಾಗಿತ್ತು. ಸುಖ-ದುಃಖಗಳನ್ನು ಸಮನಾಗಿ ತಿಳಿದಿದ್ದ ಬೈರಾಗಿ ಸಹ ಮೌನವಾಗಿ ಕಣ್ಣೀರು ಸುರಿಸುತ್ತಿದ್ದನು. ಅವನ ಮನಸ್ಸು ಯಾವುದೋ ಗಹನವಾದ ವಿಚಾರದಲ್ಲಿ ಮಗ್ನವಾಗಿತ್ತು.

ಉದ್ಯೋಗಮಂದಿರ ಧಾರವಾಡ

ಇವರಲ್ಲಿಯ 'ದಂತಪ್ರಭಾ' 'ಅಭ್ಯಂಗಚೂರ್ಣ'ಗಳು ನಿಮ್ಮ ದೇಹವನ್ನು ನಿರ್ಮಲವಾಗಿರಿಸುವುವು.
ಬಗೆಬಗೆಯ ಹಿಟ್ಟುಗಳು, ಶುದ್ಧವಾದ ಮಸಾಲೆ, ಮೆಂತೆಯಹಿಟ್ಟು, ಸಾರಿನಪುಡಿ ಇವೆಲ್ಲ
ನಿಮಗೆ ಪರಿಶುದ್ಧವಾದ ಆಹಾರಸಾಮಗ್ರಿಯನ್ನು ಒದಗಿಸಿಕೊಡುವುವು.

ಕನ್ನಡಿಗನೊಬ್ಬ ಕಟ್ಟಿದ ಕೀರ್ತಿಯ ಗುಡಿ

ಹುಬ್ಬಳ್ಳಿ 'ಸಿದ್ಧೇಶ್ವರ' ಕಂಪನಿಯ ಕಾರಖಾನೆ!

ಕನ್ನಡನಾಡಿನ ಪುನರ್ಘಟನೆಗಾಗಿ ಎಲ್ಲರೂ ವಿದ್ಯಾರಣ್ಯರೆ ಆಗಬೇಕಾಗಿಲ್ಲ; ಎಲ್ಲರೂ ಹುಕ್ಕ-ಬುಕ್ಕರೆ ಆಗಬೇಕಾಗಿಲ್ಲ; ಎಲ್ಲರೂ ಪಂಪ-ರನ್ನರೇ ಆಗಬೇಕಾಗಿಲ್ಲ! ಹೊಸಕಾಲದ ಕನ್ನಡನಾಡಿಗೆ ದಿವಂಗತ ಕಮ್ಮಾರ ಸಿದ್ಧಪ್ಪನಂತಹರೂ ಹಿಂಡು-ಹಿಂಡಾಗಿ ಬೇಕಾಗಿದ್ದಾರೆ. ಸಾಹಸವಿರುವಲ್ಲಿ ಸಿರಿದೇವಿ ಬಂದು ನೆಲೆಯೂರಿ ನಿಲ್ಲುತ್ತಾಳೆಂಬುದಕ್ಕೆ ಸಿದ್ಧೇಶ್ವರ ಕಂಪನಿಯು ಇಂದು ಪ್ರತ್ಯಕ್ಷಸಾಕ್ಷಿಯಾಗಿದೆ!

★

ಮುನ್ನುಡಿ

ಸುಮಾರು ನಾಲ್ಕೈದು ತಿಂಗಳುಗಳ ಹಿಂದೆ ಹುಬ್ಬಳ್ಳಿಯ ಖಾದೀಭಾಂಡಾರದಲ್ಲಿ ಕಳವಾದ ಸಂಗತಿಯನ್ನು ಪತ್ರಿಕೆಗಳಲ್ಲಿ ಅನೇಕರು ಓದಿರಬಹುದು. ಸುಮಾರು ನೂರಿನ್ನೂರು ರೂಪಾಯಿಯ ಅರಿವೆ ಮಾತ್ರ ಕಳವಾಯಿತೆಂದು ತಿಳಿದು ಬಂದಿತು. ರೋಖುಹಣವೇನೂ ಹೋಗಿರಲಿಲ್ಲವಂತೆ! ಕಳ್ಳರದವೆಂತಹ ದೇಶಾಭಿಮಾನ! ಅಂಗಡಿಯಲ್ಲಿ ರೋಖುಹಣವಿದ್ದರೂ ಕೇವಲ ಬಟ್ಟೆಯನ್ನಷ್ಟೇ ಕಳವು ಮಾಡಬೇಕಿದ್ದರೆ ಅವರಿಗೆಷ್ಟೊಂದು ಖಾದೀ ಪ್ರೇಮ! ಖಾದಿಯನ್ನೇ ಧರಿಸಬೇಕೆಂಬ ಹಟವಿದ್ದರೂ- ಹಣವಿಲ್ಲದ ಮೂಲಕ- ಕಳವು ಮಾಡಿಯಾದರೂ ವ್ರತವನ್ನು ಪೂರಯಿಸುವ ಸಾಹಸಮಾಡಿರಬಹುದೆಂದು ಭಾವಿಸಬೇಕೆ? ಛೇ! ಹಾಗಲ್ಲ! ಕಳ್ಳರು ಕಳವು ಮಾಡಬೇಕೆಂದೆಣಿಸಿದುದು ಕೇವಲ ಹಣವನ್ನೆ; ಆದರೆ ಅದು ಕಳ್ಳರಿಗೆ ಸಾಧಿಸಲಿಲ್ಲ. ಉಪಾಯಗಾಣದೆ, ಏನನ್ನಾದರೂ ಕಳವು ಮಾಡಿಯೆ ತೀರೋಣವೆಂಬ ಹಟದಿಂದ ಅವರು ಅರಿವೆಯನ್ನು ಕಳವು ಮಾಡಿದ್ದರೆಂದು ಕಂಡುಬಂತು. ಹಣವನ್ನು ಏತಕ್ಕೆ ಕಳವು ಮಾಡಲು ಬರಲಿಲ್ಲವೆಂದು ಅನೇಕರು ಕೇಳಬಹುದು. ನನಗಾದರೂ ಮೊದಲು ಅದೇ ಗುಂಭವಿದ್ದಿತು; ಬಳಿಕ ವಿಚಾರಿಸಲಾಗಿ ಖಾದೀಭಾಂಡಾರದಲ್ಲಿರುವ ಕ್ಯಾಶ್‌ಬಾಕ್ಸ (Cash Box) 'ಸಿದ್ಧೇಶ್ವರ' ಕಂಪನಿಯಲ್ಲಿ ತಯಾರಾದುದಿದ್ದು, ಕಳ್ಳರಿಗೆ ಮುರಿಯಲು ಬಾರದಷ್ಟು ಗಟ್ಟಿಯಾದುದರಿಂದ ರೋಖುಹಣವು ಕಳವಾಗಿರಲಿಲ್ಲ ಎಂದು ತಿಳಿದು ಬಂದಿತು. ಕೂಡಲೆ ಸಿದ್ಧೇಶ್ವರ ಕಂಪನಿಯ ವಿಷಯವಾಗಿ ತಿಳಿದುಕೊಳ್ಳಬೇಕೆಂದು ಕುತೂಹಲವುಂಟಾಯಿತು. ಹಾಗೆಯೆ ಕಂಪನಿಯ ಹುಟ್ಟು, ಹಬ್ಬುಗೆ, ಪ್ರಯೋಗ- ಕೈಗಾರಿಕೆಗಳ ಇಡಿಯ ಕತೆಯನ್ನೇ ಕೇಳಿಕೊಂಡೆ. ಆ ಕತೆ ಇಂದಿನ ನಮ್ಮ ಜೀವನದಲ್ಲಿ ಪ್ರಬೋಧಕವೂ ಪ್ರಚೋದಕವೂ ಎನಿಸಬಹುದೆಂಬ ಭರವಸೆಯಿಂದ ಇದೀಗ ಜಯಂತಿಯ ವಾಚಕರೆದುರು ಅದನ್ನು ಇಡಲಿರುವೆ.

ಕಾರಖಾನೆಗೆ ಮೊದಲಿಗರು

ಸಿದ್ಧೇಶ್ವರ ಕಂಪನಿಯಿರುವುದು ಹುಬ್ಬಳ್ಳಿಯಲ್ಲಿ. ಬಣ್ಣಗಾರರ ಓಣಿಯಲ್ಲಿದೆ (ಬಮ್ಮಾಪೂರವೆಂತಲೂ ಹೆಸರಿದೆ) ಈ ಕಂಪನಿಯ ಕಾರಖಾನೆ. ಈ ಕಂಪನಿಯನ್ನು ಪ್ರಾರಂಭಿಸಿದವರು ದಿವಂಗತ ಕಮ್ಮಾರ ಸಿದ್ದಪ್ಪನವರು. ಮೊದಲಿನಿಂದಲೂ ಎಣಿಕೆಹಾಕಿ ಕಟ್ಟಿದ ವ್ಯವಸಾಯವಲ್ಲ ಇದು. ವಿಶಿಷ್ಟಸಂಗತಿಗಳು ವಿಲಕ್ಷಣ ರೀತಿಯಲ್ಲಿ ಸಂಭವಿಸಿದುದರ ಪರಿಣಾಮವಾಗಿ ಕಂಪನಿ ಹುಟ್ಟಿತು. ಹೊಟ್ಟೆಯ ಪಾಡಿಗಾಗಿ ಮನೆತನದ ಉದ್ಯೋಗವಾದ ಕಮ್ಮಾರಿಕೆಯನ್ನೆ ಸಿದ್ದಪ್ಪನವರು ಅವಲಂಬಿಸಿದ್ದರು. ಕುಟುಂಬ ದೊಡ್ಡದಿದ್ದುದರಿಂದ ಇದೊಂದೇ ಉದ್ಯೋಗವು ಹೊಟ್ಟೆಗೆ ಪೂರಯಿಸದಾಯಿತು ಅವಶ್ಯವಾಗಿ ಮತ್ತೊಂದನ್ನು ಮೊರೆಹೊಗಬೇಕಾಯಿತು; ಕಮ್ಮಾರಿಕೆಗೆ ಹತ್ತಿರದ ಉದ್ಯೋಗವಾದ ಬಡಿಗತನವನ್ನೂ ಸಿದ್ದಪ್ಪನವರು ಕೈಕೊಂಡರು. ಸಹಜವಾದ ಇವರ ಕುತೂಹಲಬುದ್ಧಿಗೆ ಆವಶ್ಯಕತೆಯ ಒತ್ತಾಯವೊಂದು ಕೂಡಿದುದರಿಂದ, ಬಡಿಗತನದಲ್ಲಿಯೂ ಸಮನಾಗಿ ನೈಪುಣ್ಯವನ್ನು ಪಡೆದರು. ಊರಲ್ಲಿಯ ಅನೇಕ ದೊಡ್ಡ ದೊಡ್ಡ ಕಟ್ಟಡಗಳಲ್ಲಿವರು ತಮ್ಮ ಕೈಚಳಕವನ್ನು ತೋರಿದ್ದಾರೆ. ಕಾರ್ಯಕೌಶಲವನ್ನು ತೋರಿಸುವುದು ಇವರದೊಂದು ಹುಟ್ಟುಗುಣ. ಅದಕ್ಕಾಗಿ ಹಗಲಿರುಳೂ ಯೋಚಿಸಿ, ಪಣಿಗಿ ತಮ್ಮದೊಂದು ವೈಶಿಷ್ಟ್ಯವನ್ನು ತೋರಿಸುವುದು ಇವರ ಸ್ವಭಾವ

ಶ್ರೀ. ಕೃಷ್ಣಮೂರ್ತಿ ಹೆಬ್ಬಳ್ಳಿ

ಅವರಿಂದ

ಹೀಗಾಗಿ ಕೆಲವು ದಿನಗಳಲ್ಲಿಯೆ ಊರಲ್ಲಿ ಕಮ್ಮಾರಿಕೆ ಬಡಿಗತನದ ಬಗೆಗೆ ಇವರು ತುಂಬಾ ಹೆಸರನ್ನು ಪಡೆದರು. ಊರಲ್ಲಿಯ ದೊಡ್ಡ ಕಟ್ಟಡಗಳಲ್ಲಿ ಇವರ ಕೈಯಿರಲೇ ಬೇಕು. ಇಲ್ಲವಾದರೆ ಕನಿಷ್ಠಪಕ್ಷ ಇವರು ಸಲಹೆ ಯನ್ನಾದರೂ ಕೊಡುತ್ತಿರಬೇಕು— ಇಷ್ಟರಮಟ್ಟಿಗೆ ಬೆಳೆದಿದ್ದಿತು ಸಿದ್ದಪ್ಪನವರ ಕಾರ್ಯನೈಪುಣ್ಯ!

ದೊಡ್ಡಕಾರ್ಯಕ್ಕೊಂದು ಸಣ್ಣ ಕಾರಣ !

ಹೀಗಿರುವಾಗ ಒಮ್ಮೆ, ಇವರ ಪರಿಚಯದವರಾಗಿದ್ದ ಶ್ರೀ. **ಕೋಟೂರ ಗುರುಶಾಂತಪ್ಪನವರು**, ತಮ್ಮ ದೊಂದು ಹಳೆಯತಿಜೋರಿಯನ್ನು ಸರಿಪಡಿಸಿಕೊಡುವು ದಾಗಿ ಹೇಳಿದರು. ಕಮ್ಮಾರಿಕೆಯ ವ್ಯವಸಾಯದಲ್ಲಿ ಪ್ರಖ್ಯಾತರಿದ್ದರೂ ಸಿದ್ದಪ್ಪನವರಿಗೆ ಒಮ್ಮೆಲೆ ಈ ಕಾರ್ಯವನ್ನು ಕೈಕೊಳ್ಳುವುದಕ್ಕೆ ಧೈರ್ಯವಾಗಲಿಲ್ಲ; ಆದರೆ ಬಿಡಲೂ ಬರುವಂತಿರಲಿಲ್ಲ. ಏಕೆಂದರೆ ಗುರು-ಶಾಂತಪ್ಪನವರು ಉಳಿದ ಕಡೆಗೆಲ್ಲ ಈ ಕಾರ್ಯವು ಅಸಾಧ್ಯವೆಂದು ಮನಗಂಡು, ಉಪಾಯಗಾಣದೆ ಸಿದ್ದಪ್ಪನವರ ಕಡೆಗೆ ಬಂದಿದ್ದರು, ಅಲ್ಲದೆ ತುಂಬಾ ಬೇಕಾದವರು; ಕಾರಣ ಈ ಕೆಲಸ ಕೈಕೊಳ್ಳಲೇ ಬೇಕಾಯಿತು. ಈ ಕಾರ್ಯದಲ್ಲಿ ಸಿದ್ದಪ್ಪನವರಿಗೆ ಅಸಾಧಾರಣ ಜಾಗರೂಕತೆಯನ್ನು ತಳೆಯಬೇಕಾ ಯಿತು. ಯಾಕೆಂದರೆ ಬುದ್ಧಿವಂತರಿಗೆ—ಯಾವುದೊಂದು ಕಲೆ-ಕೈಗಾರಿಕೆಯನ್ನು ಬಲ್ಲವಂಗೆ—ಬೆದರಿಕೆ ಬಹಳ. ಅದರಲ್ಲಿಯೂ ಸಿದ್ದಪ್ಪನವರಿಗೆ ಸ್ವಾಭಿಮಾನದ ಅರಿವೂ ಸಾಕಷ್ಟಿದ್ದಿತು. ಆದುದರಿಂದ ಕೈಕೊಂಡ ಕಾರ್ಯವು ಮನಸ್ಸೊಪ್ಪುವಂತಾಗುವುದೊ ಇಲ್ಲವೊ ಎಂಬ ಅಳುಕು ಯಾವಾಗಲೂ ಇದ್ದುದೆ. ಎಲ್ಲಿ ಅಪಹಾಸ್ಯಕ್ಕೀಡಾಗು ವೆನೊ ಎಂದು ಸಂಶಯ. ಹೀಗಾಗಿ ವಿಂತಿಪಾರಿ ಶ್ರಮ ವಹಿಸಿ ತಿಜೋರಿಯನ್ನು ಸರಿಪಡಿಸಿದರು. ಅದರ ಒಡೆಯರಿಗೆ ಕೆಲಸವು ಮುಗಿದಿದೆಯೆಂದು ತಿಳಿಸಿದರು. ಅದನ್ನು ಮನೆಗೊಯ್ಯಲು ಬಂದ ಗುರುಶಾಂತಪ್ಪನವರು ತಿಜೋರಿಯನ್ನು ಕಂಡು ಬೆರಗಾದರು. 'ತಿಜೋರಿಯು ತಮ್ಮದೇ ಅಹುದೆ ?' ಎಂಬ ಸಂಶಯವೂ ಅವರಿಗೆ ಬಂದಿತಂತೆ; ಅಷ್ಟೊಂದು ಚೊಕ್ಕಟ ವಾಗಿದ್ದಿತು ಸಿದ್ದಪ್ಪನವರ ಕೆಲಸ. ಹೊಸದನ್ನು ಹಂಗಿಸು ವಂತಾಗಿದ್ದಿತು. ಅಂದು ಅವರಿಬ್ಬರಲ್ಲಿಯೂ ಹೀಗೆ ಹೀಗೆ ಸಂಭಾ ಷಣೆ ನಡೆಯಿತಂತೆ :

ಗುರುಶಾಂತಪ್ಪ:— ಇಷ್ಟೊಂದು ಚೊಕ್ಕಟ ಕೆಲಸಮಾಡಬಲ್ಲ ನೀವು ಹಾಗೆ ಅನುಮಾನಿಸಿದುದೇಕೆ ?

ಸಿದ್ದಪ್ಪ:— ಏನೋ, ಪ್ರಯತ್ನ ಪಟ್ಟೆನು, ಅದು ಹೀಗಾಗಿದೆ.

ಗುರುಶಾಂತಪ್ಪ:—ಇಷ್ಟೊಂದು ಕೈಗಾರಿಕೆಯಿರಲು ಬಳಲುವು ದೇಕೆ ? ಇದೇ ವ್ಯವಸಾಯವನ್ನೇತಕ್ಕೆ ನೀವು ಅವಲಂಬಿಸಬಾರದು ?

ಸಿದ್ಧೇಶ್ವರಕಂಪನಿಯ ಸಂಸ್ಥಾಪಕರಾದ ದಿವಂಗತ ಕಮ್ಮಾರ ಸಿದ್ಧಪ್ಪನವರು.

ಸಿದ್ದಪ್ಪ:— "ಅಹುದು, ಆಶೆಯೇನೊ ಉಂಟಾಗಿದೆ; ಆದರೆ ಅದಕ್ಕೆ ಬಂಡವಾಳ ಬೇಕಾಗುವುದು. ನಾನಂತೂ ಬರಿಗೈಯ ಬಡವ!"

ಗುರುಶಾಂತಪ್ಪನವರಿಗೆ ಸಿದ್ದಪ್ಪನವರ ಮಾತಿನ ಅರ್ಥವು ಮನ ದಟ್ಟಾಯಿತು. 'ವ್ಯವಸಾಯವನ್ನು ಕೈಕೊಳ್ಳಬೇಕಾದರೆ ಬಂಡ ವಾಳವು ಬೇಕೇ ಬೇಕು; ಆದರೆ ಕೇವಲ ಬಂಡವಾಳದ ಸಲುವಾಗಿ ಇವರು ನಿರಾಶರಾದರೆ ಕೈಗಾರಿಕೆಯ ಕೊಲೆಯಾಗುತ್ತದೆ. ಹೀಗಾ ದರೆ ನಾಡಿಗೆ ಹಾನಿ. ಆದುದರಿಂದ ಹೇಗಾದರೂ ಮಾಡಿ ಸಿದ್ದಪ್ಪ ನವರಿಂದ ಈ ವ್ಯವಸಾಯವನ್ನು ನಡೆಯಿಸಲು ಹಚ್ಚಬೇಕು' ಎಂದು ಯೋಚಿಸಿ ಹೀಗೆ ಹೇಳಿದರು :—

"ನೋಡಿರಿ, ನೀವು ಒಮ್ಮೆಲೆ ಕೈಕಾಲುಗೆಡಬೇಡಿರಿ. ಕಾರ್ಯ ಮಾಡಲು ಸಿದ್ಧರಿರುವಿರಲ್ಲವೇ ತೀರಿತು. ನಿಮಗೆ ಎಲ್ಲ ರೀತಿಯಲ್ಲೂ ನಾನು ನೆರವಾಗುತ್ತೇನೆ. ಈಗ ನನಗೆ ಇನ್ನೊಂದು ಹೊಸ

ತಿಜೋರಿಯನ್ನು ತಯಾರಿಸಿಕೊಡಿರಿ; ಅದಕ್ಕೆ ಬೇಕಾಗುವ ಸಾಧನ ಸಲಕರಣೆಗಳನ್ನು ನಾನು ಕೊಡಿಸುವೆ!"

ತಿಜೋರಿಯನ್ನು ಸರಿಪಡಿಸಿದಾಗಿನಿಂದ ಸಿದ್ದಪ್ಪನವರಿಗೆ ಅದೇ ವ್ಯವಸಾಯವನ್ನು ಕೈಕೊಳ್ಳಬೇಕೆಂಬ ವಿಚಾರವು ಹೊಳೆದಿದ್ದಿತು. ಅವರಲ್ಲಿ ಅಡಗಿದ್ದ ಕೈಗಾರಿಕೆಯ ಕೌಶಲ ಪ್ರಕಟವಾಗಿ ಅವರನ್ನೆ ಬೆರಗುಗೊಳಿಸಿತ್ತು. ಆದರೆ ಬಂಡವಾಳದ ಕೊರತೆಯು ಕೊರಗೊಂದಿದೆಯಲ್ಲ! 'ಇದೇ ವ್ಯವಸಾಯವನ್ನು ಕೈಕೊಂಡರೆ ಎಷ್ಟು ಚೆನ್ನಾಗುವದು!' ಎಂಬ ಅವರ ಕನಸುಗಳು ಬೇಕಿದ್ದ ಬಂಡವಾಳದ ವಿಚಾರದ ಬಂಡೆಗಲ್ಲಿಗೆ ಅಪ್ಪಳಿಸಿ ಒಡೆದುವು. ಗುರುಶಾಂತಪ್ಪನವರು ಹೊಸದೊಂದು ತಿಜೋರಿಯನ್ನು ತಯಾರಿಸಿಕೊಡಿರೆಂದು ಹೇಳಿದೊಡನೆ ತುಸು ಧೈರ್ಯಬಂದಿತು. ಸಿದ್ದಪ್ಪನವರು ತುಂಬಾ ದಕ್ಷತೆಯಿಂದ ಕೆಲಸಮಾಡಿದರು. ಎಲ್ಲ ಬುದ್ಧಿಶಕ್ತಿ-ಕಾರ್ಯಶಕ್ತಿಗಳನ್ನು ಉಪಯೋಗಿಸಿದರು. ಕೆಲವು ದಿನಗಳಲ್ಲಿಯೆ ಹೊಸ

ಸದ್ಯ ಸಂಚಾಲಕರಾಗಿ ಇರುವ ಶ್ರೀಮಾನ್ ಗಂಗಪ್ಪನವರು

ತಿಜೋರಿ ತಯಾರಾಯಿತು. ಗುರುಶಾಂತಪ್ಪನವರು ಕೆಲವು ಗೆಳೆಯರೊಡನೆ ತಿಜೋರಿಯನ್ನು ನೋಡಲು ಬಂದರು. ಅವರು ಎಣಿಸಿದುದಕ್ಕೆ ಎಷ್ಟೋಪಾಲು ಮಿಗಿಲಾಗಿದ್ದಿತು ಸಿದ್ದಪ್ಪನವರ ಕೈಗಾರಿಕೆ. ನೋಡಬಂದ ಗೆಳೆಯರು ಬೆರಗಾದರು. ಸಿದ್ದಪ್ಪನವರನ್ನು ಮನಸಾರೆ ಹೊಗಳಿದರು. ಇದೇ ವ್ಯವಸಾಯವನ್ನು ಮುನ್ನಡೆಯಿಸುವದಾಗಿ ಸಿದ್ದಪ್ಪನವರಿಗೆ ಹೇಳಿದರು. ಸಾಧ್ಯವಿದ್ದ ಎಲ್ಲ ರೀತಿಯಲ್ಲಿ ನೆರವು ನೀಡುವದಾಗಿ ಭರವಸೆ ಕೊಟ್ಟರು. ಕನಸು ನನಸಾಗಲಿದ್ದುದನ್ನು ಕಂಡು ಸಿದ್ದಪ್ಪನವರ ಆಶೆಯ ಮೊಗ್ಗು ಅರಳಿತು. ಹಾಂ, ಹಾಂ, ಎನ್ನುವದರಲ್ಲಿ ಸಿದ್ದಪ್ಪನವರ ಕೈಗಾರಿಕೆಯ ಕೀರ್ತಿ ಸುತ್ತಲೆಲ್ಲ ಹಬ್ಬಿತು. ಅನೇಕರು ತಿಜೋರಿಯನ್ನು ನೋಡಲು ಬಂದರು; ನೋಡಿ ತಲೆದೂಗಿದರು. ಹೀಗೆಯೆ ಕಿವಿಯಿಂದ ಕೇಳಿದ್ದನ್ನು—ಕಣ್ಮುಟ್ಟ ನೋಡಲು ಬಂದ ಬಂಕಾಪುರದ 'ಹಾಲು' ಮನೆತನದ ಕುರುಬರು, ತಿಜೋರಿಯ ಅಸಾಮಾನ್ಯ ಭದ್ರತೆಯನ್ನು ಕಂಡು, ಒಮ್ಮೆಲೆ ೬ ತಿಜೋರಿಗಳನ್ನು ತಮಗೆ ಮಾಡಿಕೊಡುವದಾಗಿ ಕೂಡಲೆ ಕೇಳಿಕೊಂಡರು; ಸಿದ್ದಪ್ಪನವರಿಗೆ ಆನಂದವು ಹಿಡಿಸದಾಯಿತು. ಗುರುಶಾಂತಪ್ಪನವರ ಸಲಹೆಯನ್ನೂ ಸಹಾಯವನ್ನೂ ತುಂಬಾ ನೆನೆದರು. ಅವರಿಗೆ ಅನಂತ ಧನ್ಯವಾದಗಳನ್ನು ಅರ್ಪಿಸಿದರು. ಈ ಹೊಸ 'ಆರ್ಡರು'ಗಳನ್ನು ತಯಾರಿಸಲು ಬೇಕಾಗುವ ಉಕ್ಕಿನ ತಗಡುಗಳನ್ನು ಹುಬ್ಬಳ್ಳಿಯಲ್ಲಿ ಪ್ರಸಿದ್ಧ ವ್ಯಾಪಾರಿಗಳಾಗಿದ್ದ ಯಳವತ್ತಿಯವರ ಅಂಗಡಿಯಲ್ಲಿ ತಮ್ಮ ಹೊಣೆಯಮೇಲೆ ಸಾಲವಾಗಿ ಕೊಡಿಸಿದರು. ಅಲ್ಲದೆ ಇವರಿಗೆ ಬೇಕಾದಾಗಲೆಲ್ಲ ತಗಡುಗಳನ್ನು ಪೂರಯಿಸಲು ಅಡ್ಡಿಯಿಲ್ಲವೆಂದು ಭರವಸೆ ಕೊಟ್ಟಿದ್ದರು. ಈಗ ಎಂದರೆ ೧೯೧೮ರಲ್ಲಿ ನಿಜವಾಗಿ ಈ ಕಂಪನಿ ಪ್ರಾರಂಭವಾಯಿತೆನ್ನಬಹುದು.

ಕಾರಖಾನೆಯ ಪ್ರಾರಂಭ

ಕಂಪನಿಯೇನೊ ಪ್ರಾರಂಭವಾಯಿತು; ಜೊತೆಗೆ ಸಿದ್ದಪ್ಪನವರ ಹೊಣೆಯೂ ಹೆಚ್ಚಿತು. ಕೇವಲ ಕನಸೆನಿಸಿದ್ದ ಅವರ ಈ ವ್ಯವಸಾಯವು ಇಂದು ನನಸಾಗಿರಲು ಅದನ್ನು ನಡೆಯಿಸಿಕೊಂಡು—ಯಶಸ್ವಿಯಾಗಿ ನಡೆಯಿಸಿಕೊಂಡು—ಹೋಗುವ ಹೊಣೆಯ ಎನಿಸಿಕೆ ಅವರನ್ನು ಬಾಧಿಸತೊಡಗಿತು. ಬೇಕಾದಷ್ಟು ಬೇಡಿಕೆಗಳು ಬರತೊಡಗಿದುವು. ಅವುಗಳನ್ನು ಪೂರಯಿಸುವದು ಕಠಿಣವೆನಿಸತೊಡಗಿತು. ದುಡಿಯಲಾರದುದಕ್ಕಲ್ಲ; ಸಾಕಷ್ಟು ವೇಗದಿಂದ ಕಾರ್ಯವನ್ನು ನಡೆಯಿಸಲು ಬೇಕಷ್ಟು ಸಲಕರಣೆಯಿಲ್ಲದುದರಿಂದ. ಪೇಟೆಯಲ್ಲಿ ಮೇಲಾಟ ನಡೆಯಿಸಬೇಕಾದುದರಿಂದ ಪೂರಯಿಕೆಯ ಜೊತೆಗೆ—ಉಳಿದ ಯಾವುದೇ ಕಂಪನಿಯ ಸರಕುಗಳಿಗೆ ಕಡಿಮೆಯೆನಿಸದಷ್ಟು—ತಮ್ಮ ಒಡವೆ ಚೊಕ್ಕಾಗಬೇಕಾಯಿತು; ಇನ್ನೊಂದೆಂದರೆ ವಿಶೇಷ ಆಕರ್ಷಣೆಗೆಂದು ತಮ್ಮ ಕೆಲಸದಲ್ಲಿ ಏನಾದರೂ ವೈಶಿಷ್ಟ್ಯವಿರಬೇಕೆಂದೂ ಅವರ ಹೆಬ್ಬಯಕೆ ಇದ್ದಿತು. ಗಳಿಸಿದ ಹೆಸರನ್ನು ಉಳಿಸಿಕೊಳ್ಳುವದಿಷ್ಟೆ ಅಲ್ಲದೆ ಪ್ರಯತ್ನದಿಂದ ಬೆಳೆಯಿಸಬೇಕೆನ್ನುವದೇ ಸಿದ್ದಪ್ಪನವರ ಮನದ ಮಂತ್ರವಾಗಿದ್ದಿತು. ಇದರಿಂದ ಯೋಚನೆಗೊಳಗಾದರು. ಬೇಕಾದ ಸಲಕರಣೆಗಳನ್ನು ಕೊಳ್ಳುವ ಬಗೆಯೆಂತು? "ಹಣವನ್ನು ಎಲ್ಲಿಂದ ತರಬೇಕು? ತರದಿದ್ದರೆ, ಅದೇ ತಲೆಯೆತ್ತಿದ ಆಶಾದಾಯಕ ವ್ಯವಸಾಯವನ್ನು ನಡೆಯಿಸುವದೆಂತು? ಪೇಟೆಯಲ್ಲಿಯ ಮೇಲಾಟದಲ್ಲಿ ಸರಿಗಟ್ಟಿ ನಿಲ್ಲುವದೆಂತು?" ಇತ್ಯಾದಿಯಾಗಿ ಹಗಲಿರುಳೂ ವಿಚಾರಿಸತೊಡಗಿದರು. ಇನ್ನೂ ಸಾಧನೆಗಳನ್ನು ಸ್ವಂತವಾಗಿ ತಯಾರಿಸಿಕೊಳ್ಳಬೇಕೆಂಬ ವಿಚಾರ ಹೊಳೆದಿರಲಿಲ್ಲ. ತಯಾರಿಸಿಕೊಂಡರೂ ಅವು ಸಾಕಷ್ಟು ಉಪಯುಕ್ತವಾಗಬಹುದೇ? ಮನವೊಪ್ಪುವಂತೆ ಕಾರ್ಯಮಾಡಬಹುದೇ—ಎಂಬ ಸಂಶಯ ಕಾಡುತ್ತಿದ್ದಿತು. ಅಂತೂ ಈ ಇಕ್ಕಟ್ಟಿನೊಳಗಿಂದ ಪಾರಾಗಲು ಒಮ್ಮೆ ತಾವೇ ತಯಾರಿಸಿ ನೋಡುವದೇ ವಿಹಿತವೆಂದು ತೋರಿತು. ಅನೇಕ ಸಾಧನ-ಸಲಕರಣೆಗಳನ್ನು ಸ್ವತಂತ್ರವಾಗಿಯೆ ತಯಾರಿಸಿಕೊಂಡು ಕೆಲಸವನ್ನು ಮುಂದುವರಿಸಿದರು. ೨೫೦ ಟನ್ ಪ್ರೆಶ್ಶರ್ ಕೊಡುವ—ಉಕ್ಕಿನ ತಗಡನ್ನು ಒಗ್ಗಿಸುವ—ಎರಡು ಯಂತ್ರಗಳನ್ನು ತಾವೆಯೆ ತಯಾರಿಸಿಕೊಂಡರು. ಈ ಯಂತ್ರಗಳು

ಸಿದ್ದಪ್ಪನವರ ಹಣ ಉಳಿಸಿ ಗುಣ ಬೆಳೆಸಿದುವಲ್ಲದೆ ಒಳ್ಳೆ ಯಶಸ್ಸಿಯಾಗಿ ಕಾರ್ಯಕೊಡಲಾರಂಭಿಸಿದುವು. ಸ್ವಾವಲಂಬಿಗಳಾಗಿ ಸ್ವದೇಶಿಯತೆಯನ್ನು ಕಾಯ್ದುಕೊಳ್ಳಬೇಕೆನ್ನುವವರಿಗೆ ಸಿದ್ದಪ್ಪನವರ ಈ ಪ್ರಯತ್ನವೊಂದು ಒಳ್ಳೆಯ ಆದರ್ಶವಾಗಿ ನಿಂತಿದೆ.

ಮೊದಲಿನ ನಾಲ್ಕಾರು ವರುಷ ತಿಜೋರಿಗಳನ್ನು ತಯಾರಿಸುವಾಗ, ಉಕ್ಕಿನ ತಗಡುಗಳನ್ನು ಜೋಡಿಸಿ ಬೆಸೆಯುತ್ತಿದ್ದರು. ಆದರೆ ಮೇಲೆ ವಿವರಿಸಿದ—ತಗಡು ಬಗ್ಗಿಸುವ— ಯಂತ್ರವನ್ನು ತಯಾರಿಸಿದನಂತರ, ಪಾಶ್ಚಾತ್ಯರ ಪದ್ಧತಿಯಂತೆ ಅಖಂಡ ತಗಡುಗಳನ್ನು ಹನ್ನೆರಡು ಮೂಲೆಗಳಲ್ಲಿಯೂ ಬಗ್ಗಿಸಿ ತಯಾರಿಸುತ್ತಿದ್ದಾರೆ. ಇದರಿಂದ ತಿಜೋರಿಗಳ ಭದ್ರತೆಯು ಹೆಚ್ಚಿದೆಯಲ್ಲದೆ ನೋಟವೂ ಹೆಚ್ಚು ಮುದ್ದಾಗಿದೆ. ಜೋಡಿಸಬೇಕಾದ ಕೇವಲ ಎರಡೇ ತುದಿಗಳನ್ನೂ ಸಾಮಾನ್ಯವಾದ ರಿವ್ಹಿಟ್ (Rivet) ಪದ್ಧತಿಯಿಂದ ಬೆಸೆಯದೆ, ಇಲೆಕ್ಟ್ರಿಕ್ ಆರ್ಕ ವೆಲ್ಡಿಂಗ್ (Electric arc welding) ಪದ್ಧತಿಯ ಮೇರೆಗೆ ಬೆಸೆಯುತ್ತಾರೆ. ಇದರಿಂದ ಬೆಸುಗೆಯು ಜೋಡಣೆಯೆನಿಸದೆ ಅಖಂಡ ತಗಡಿನಷ್ಟೆ ಗಟ್ಟಿಯಾಗುತ್ತದೆ. ಈಗಿನ ಕಾಲದಲ್ಲಿ ಉಳಿದೆಲ್ಲ ಕಂಪನಿಗಳೂ ಇದೇ ರೀತಿಯನ್ನನುಸರಿಸುತ್ತಿರಬಹುದು. ಆದರೆ ಸುಮಾರು ೧೩ ವರುಷಗಳಿಗೆ ಹಿಂದೆ, ಎಂದರೆ ೧೯೩೭ ರಲ್ಲಿ ಈ ರೀತಿಯನ್ನನುಸರಿಸಿದುದು ಕಲ್ಪಕತೆಯ ಒಂದು ವೈಶಿಷ್ಟ್ಯವೆಂದೇ ಹೇಳಬಹುದು. ಈ ಬಗೆಯನ್ನು ಮೊದಲು ಬಳಸಿದುದರ ಮಾನವು ಸಿದ್ದಪ್ಪನವರಿಗೇ ಸಲ್ಲುವುದು.

ಕಾರ್ಯಕ್ಕೆ ದೊರೆತ ಮನ್ನಣೆ

ಈ ಸುಧಾರಣೆಯನ್ನು ಸಾಧಿಸಿದ ಮರುವರುಷವೇ ಎಂದರೆ ೧೯೩೨ರಲ್ಲಿ, ಮೈಸೂರು ದಸರಾ ಪ್ರದರ್ಶನಕ್ಕಾಗಿ ಕೆಲವು ತಿಜೋರಿಗಳನ್ನು ಒಯ್ದರು. ಈ ಕಾಲಕ್ಕೆ ಅನೇಕ ಕಡೆಯಿಂದ ಬರುವ ಜನರು, ಕರ್ನಾಟಕದಲ್ಲಿ ಇಂತಹ ಕೈಗಾರಿಕೆಯು—ಇಷ್ಟು ಮೇಲ್ಮರಗತಿಯಲ್ಲಿ—ನಡೆಯುವುದೆಂಬುದನ್ನು ಕಂಡು ಹಿಗ್ಗಿದರು. ಸ್ವತಃ ಮಹಾರಾಜರು ಈ ಕಂಪನಿಯ ಕಾರ್ಯಕೌಶಲವನ್ನು ಕಂಡು ಕೊಂಡಾಡಿದರು. ಪ್ರದರ್ಶನವನ್ನು ನೋಡಬಂದ ಮಹಾರಾಣಿಯವರು ತಿಜೋರಿಗಳ ಅಂಗಡಿಗೂ ಬಂದು, ತಿಜೋರಿಗಳನ್ನು ನೋಡಿದರು; ನೋಡಿ ಹುಡುಗರಂತೆ ನಲಿದಾಡಿದರು. ಕೂಡಲೆ ಒಂದು 'ಕ್ಯಾಶ್‌ಬ್ಯಾಕ್ಸ'ನ್ನು ಕೊಂಡರು. ಒಂದು ತಿಜೋರಿಯನ್ನು ಕೊಳ್ಳುವುದಾಗಿ ಅಭಿವಚನ ಕೊಟ್ಟರು. ಪ್ರದರ್ಶನದಲ್ಲಿ ಪ್ರಶಸ್ತಿಪತ್ರಿಕೆಯ ಸಂಗಡ ಮಹಾರಾಜರ ಮೆಚ್ಚಿಕೆಯಿಂದು ಒಂದು ಬಂಗಾರ ಪದಕದ ಬಹುಮಾನವೂ ದೊರೆಯಿತು.

ಇದರಿಂದ ಸಿದ್ದಪ್ಪನವರ ಆಶೆ ಮತ್ತಿಷ್ಟು ಹೆಚ್ಚಿತು. ತಮ್ಮ ವ್ಯವಸಾಯವು ಕೊನೆಯವರೆಗೆ ಪ್ರಗತಿಪರವಾಗಿ ನಡೆಯಬೇಕೆಂದು ಹವಣಿಸಿದರು. ಮೈಸೂರು ಪ್ರದರ್ಶನಕ್ಕೆ ಹೋಗಿ ಬಂದ ಬಳಿಕ ಸುಮಾರು ಎರಡು ವರುಷಗಳಲ್ಲಿಯೇ ಮತ್ತೊಂದು ಸುಧಾರಣೆಯನ್ನು ಸಾಧಿಸಿದರು. ಈ ವರೆಗೆ ತಿಜೋರಿಗಳಲ್ಲಿ ಲಂಡನಿನ ಚಾಬ್ (Chaub) ಕಂಪನಿಯ ಕೀಲಿಗಳನ್ನು ಉಪಯೋಗಿಸುತ್ತಿದ್ದರು. ಆದರೆ ೧೯೩೪ ರ ಸುಮಾರಿಗೆ ಕೀಲಿಗಳನ್ನೂ ಸ್ವಂತವಾಗಿಯೆ ತಯಾರಿಸತೊಡಗಿದರು. ಇವರ ಕೀಲಿಗಳು ನಾಡಿನಲ್ಲೆಲ್ಲ ಹೆಸರುಪಡೆದಿವೆ. ಕೀಲಿಗಳನ್ನು ಕೇವಲ ಕೈಯ ಕೆಲಸದಿಂದಲೆ ತಯಾರಿಸುತ್ತಾರೆ. ಸಣ್ಣ ಸಣ್ಣ ಕೀಲಿಗಳಲ್ಲಿಯೂ ೮-೧೦ ಲಿವ್ಹರುಗಳಿರುತ್ತವೆ. ತಿಜೋರಿಯ ಕೀಲಿಗಳ ವಿಷಯವಾಗಿಯಂತೂ ಬೇರೆ ಹೇಳಬೇಕಿಲ್ಲ. ಕಳ್ಳರ ಕೈ ಹಿಡಿಯುವ ತಿಜೋರಿಗಳಲ್ಲಿ ಉಪಯೋಗಿಸುವ ಕೀಲಿಗಳು ಇವರ ವೈಶಿಷ್ಟ್ಯ. ಅಲ್ಲದೆ ಕಾಂಬಿನೆಶನ್ ಲಾಕ್ (Combination Lock) ಅಂತೂ ಇವರ ಹೆಮ್ಮೆಯ ಹೆಗ್ಗುರುತು. ತಿಜೋರಿಗಳಿಗೆ ಜೋಡಿಸಿದ ಈ ಕೀಲಿಗಳನ್ನು ಹಾಕಿ, ಕೈಯನ್ನು ಅದರ ಎದುರಿಗೆ ಒಗೆದು ಹೋಗಬಹುದು. ಹರಿ-ಹರ-ಬ್ರಹ್ಮಾದಿಗಳಿಗೂ ತೆಗೆಯಲು ಬಾರದು.

WONDER OF THE DAY

SIDDESHWAR'S

SPECIAL SAFES

ಕಳ್ಳರ ಕೈಹಿಡಿಯುವ ವಿಸ್ಮಾಡಿನ ತಿಜೋರಿ

ಈ ಕೀಲಿಯನ್ನು ಯಾರಾದರೂ ತೆಗೆದುಕೊಟ್ಟರೆ ೧೦೦೦ ರೂಪಾಯಿಯ ಬಹುಮಾನ ಕೊಡುವುದಾಗಿ ಕಂಪನಿಯವರೆ ಪಣ ತೊಟ್ಟಿದ್ದಾರೆ. ತಮ್ಮ ಕೀಲಿಯ ಭದ್ರತೆಯಲ್ಲಿ ಅಷ್ಟರ ಮಟ್ಟಿಗೆ ಇವರಿಗೆ ಭರವಸೆಯಿದೆ. ಅಷ್ಟು ಕೌಶಲಪೂರ್ಣ ಯೋಜನೆಯಿದೆ ಇದರಲ್ಲಿ. ಇನ್ನೊಂದು ವೈಶಿಷ್ಟ್ಯವೆಂದರೆ ಕೀಲಿ-ಹಾಗೂ ಕೈಗಳಿಗೆ ಉಪಯೋಗಿಸುವ ಧಾತುವು ವರುಷಾನುವರುಷ ನೆಲದಲ್ಲಿ ಹೂತಿಟ್ಟರೂ ಜಂಗುಹಿಡಿಯುವುದಿಲ್ಲ.

ಬೆಂಕಿಯ ಬಂಟ

ಕೆಲವು ದಿನಗಳಲ್ಲಿಯೆ ಮತ್ತೊಂದು ಸುಸಂಧಿ ದೊರೆಯಿತು. ೧೯೩೧ ರಲ್ಲಿ ಹುಬ್ಬಳ್ಳಿಯಲ್ಲಿ ಅಖಿಲಭಾರತ ಸ್ವದೇಶೀ ವಸ್ತು ಪ್ರದರ್ಶನ ಜರುಗಿತು. ಪಂಡಿತ ಜವಾಹರಲಾಲರು ಅದನ್ನು



ಬಾಗಿಲನ್ನು ತೆರೆದ ತಿಜೋರಿಯ ಒಳಗಿನ ನೋಟ

ತೆರೆದರು. ಈ ಸಂಧಿಯಲ್ಲಿ ಭಾರತದ ಮೂಲೆಮೂಲೆಗಳಿಂದಲೂ ಪ್ರದರ್ಶನವನ್ನು ನೋಡಲು ಬಂದ ಜನರಿಗೆ ತಮ್ಮ ಕೈಗಾರಿಕೆಯ ಮೇಲ್ಮೆಯನ್ನು ತೋರಲೆಂದು, ಸಿದ್ಧೇಶ್ವರ ಕಂಪನಿಯವರೂ ಪ್ರದರ್ಶನದಲ್ಲಿ ಒಂದು ಅಂಗಡಿಯನ್ನು ತೆರೆದಿದ್ದರು. ಆ ಸಮಯದಲ್ಲಿ ಕಂಪನಿಯು ತನ್ನ ಮತ್ತೊಂದು ವೈಶಿಷ್ಟ್ಯದ ಬಗೆಗೆ ಪರೀಕ್ಷೆ ಕೊಟ್ಟಿತು. ಕೆಲವು ದಿನಗಳ ಹಿಂದೆಯೆ ಸಾಧಿಸಿದ **ಬೆಂಕಿಯ ಭಯವಿಲ್ಲದ** (Fire proof) ತಿಜೋರಿಯ ಗುಣಪರೀಕ್ಷೆಯಲ್ಲಿ ಆಗ ಯಶಸ್ವಿಯಾಯಿತು. ಇಂತಹ ಒಂದು ತಿಜೋರಿಯಲ್ಲಿ ಕಾಗದಪತ್ರಗಳನ್ನೂ-ನೋಟುಗಳನ್ನೂ ಇರಿಸಿ ಬೀಗ ಹಾಕಿ, ಮೂರು ನಾಲ್ಕು ಖಂಡುಗ ಕಟ್ಟಿಗೆಗಳಿಂದ ತಿಜೋರಿಯನ್ನು ಸುಟ್ಟರು. ನೋಟವನ್ನು ನೋಡಲು ಸಾವಿರಾರು ಜನರು ನೆರೆದಿದ್ದರು. ಎಂಟು ತಾಸು ತಿಜೋರಿಯು ಉರಿಯಲ್ಲಿದ್ದಿತು. ಮರುದಿನ ಮುಂಜಾನೆ ತಿಜೋರಿಯು ಆರಿದ ನಂತರ ಸಾವಿರಾರು ಜನರ ಎದುರಿಗೆ ತಿಜೋರಿಯ ಕೀಲಿಯನ್ನು ತೆರೆದು, ಕಾಗದಪತ್ರಗಳು, ನೋಟುಗಳು ಇದ್ದಕ್ಕಿದ್ದಂತೆಯೆ ಇದ್ದುದನ್ನು ತೋರಿಸಿದರು. ನೆರೆದವರೆಲ್ಲರೂ ಬೆರಗಾದರು. ಅಲ್ಲಿ ಬಂದಿದ್ದ ಅನೇಕ ವ್ಯಾಪಾರಿಗಳೂ-ವ್ಯವಸಾಯಿಗಳೂ ತಮ್ಮ ಮಹತ್ವದ ಕಾಗದಪತ್ರಗಳು— ಬೆಂಕಿಯ ಭಯದಿಂದ ಇನ್ನು ಸಂರಕ್ಷಿತವಾದುವೆಂದು ಹಿಗ್ಗಿದರು. ಹಾಗೆಯೆ ೧೯೩೪ರಲ್ಲಿ ದಿಲ್ಲಿಯಲ್ಲಿ ಜರುಗಿದ ಅಖಿಲ ಭಾರತ ಸ್ವದೇಶೀ ವಸ್ತುಪ್ರದರ್ಶನದಲ್ಲಿಯೂ ತಮ್ಮ ಅಂಗಡಿಯನ್ನು ತೆರೆದಿದ್ದರು. ಅಲ್ಲಿ ಕೂಡ ಮೆಚ್ಚುಗೆಯನ್ನು ಪಡೆದರು. ಮೊನ್ನೆ ಮೊನ್ನೆ ೧೯೩೮ರಲ್ಲಿ ಬೆಳಗಾಂವಿಯಲ್ಲಿ ಜರುಗಿದ 'ಕರ್ನಾಟಕದ ಒಕ್ಕಲತನ ಹಾಗೂ ಕೈಗಾರಿಕೆಯ' ಪ್ರದರ್ಶನದಲ್ಲಿ ಭಾಗವಹಿಸಿದ್ದರು. ಪ್ರದರ್ಶನವನ್ನು ತೆರೆಯಲು ಬಂದಿದ್ದ ಸರ್ ರೋಜರ್ ಲುಮ್ಲೆ (ಮುಂಬಯಿ ಗವರ್ನರ್) ಹಾಗೂ ಶ್ರೀಮತಿ ಲುಮ್ಲೆಯವರು ಇವರ ಅಂಗಡಿಯನ್ನು ಸಂದರ್ಶಿಸಿ, ತಿಜೋರಿಯ ಕೈಗಾರಿಕೆಯನ್ನು ಕಂಡು ಸೋಜಿಗಪಟ್ಟರು. "Very fine. Is it made of wood?" ಎಂದು ಕೇಳಿದರು. "No sir, it is made of hard steel" ಎಂದು ಹೇಳಿದ ಕೂಡಲೆ "Oh" ಎಂದು ಉದ್ಗಾರ ತೆಗೆದರು. ಎಂದರೆ ಅವರ ಮನಸ್ಸಿನ ಮೇಲೆ ಅಷ್ಟರ ಮಟ್ಟಿಗೆ, ಕಾರ್ಯದ ನಮುದ ಸುಣ್ಬಿಸ ಪರಿಣಾಮವಾಯಿತು. ಅವರು ಕ್ಷಣಕಾಲ ಕಳ್ಳರೂ ಆಗಿದ್ದರು. ಕಳ್ಳರ ಕೈ ಹಿಡಿಯುವ ತಿಜೋರಿಯಲ್ಲಿ ಕೈಯನ್ನು ಕೊಟ್ಟು ಹಿಡಿಸಿಕೊಂಡು ಯೋಜನೆಯ ಜಾಣ್ಮೆಯನ್ನು ಮನಗಂಡರು. "Really it is Burglar proof" ಎಂದು ನಗುತ್ತ ನುಡಿದರು. ಹೀಗೆ ಈ ಕಂಪನಿಯು, ಕಾಲಕಾಲಕ್ಕೆ ನಡೆಯಿಸಿದ ಪ್ರಯೋಗಗಳನ್ನೂ ಸಾಧಿಸಿದ ಪ್ರಗತಿಯನ್ನೂ ಅನೇಕ ಸಂದರ್ಭಗಳಲ್ಲಿ ಪ್ರಕಟಿಸಿ, ಜನತೆಗೆ ತನ್ನ ಕೈಗಾರಿಕೆಯ ವಿಷಯವಾಗಿ ಮನಗಾಣಿಸಿಕೊಟ್ಟಿದೆ.

ಬಡರೀತಿಯಲ್ಲಿ ಹುಟ್ಟಿದ ಈ ವ್ಯವಸಾಯವು ಭವ್ಯವಾಗಿ ಮೆರೆಯಲು ಕೇವಲ ಸಿದ್ದಪ್ಪನವರ ಅಸಾಧಾರಣ ಬುದ್ಧಿ, ಕಾರ್ಯಶಕ್ತಿ, ಪ್ರಯೋಗ-ಪ್ರಯತ್ನಗಳ ಹಂಬಲ, ಹಾಗೂ ಸಾಹಸಿಗತನ ಇವೇ ಮುಖ್ಯವಾಗಿವೆ. ಕನ್ನಡನಾಡಿನ ಕೀರ್ತಿಗೆ ಕಾರಣರಾದ ಇವರು ಹುಟ್ಟಿದುದು ಹುಬ್ಬಳ್ಳಿಯಲ್ಲಿಯೆ, ಹೇಳಿಕೊಳ್ಳುವಂತಹ ವಿದ್ಯಾಭ್ಯಾಸವೇನೂ ಆಗಿರಲಿಲ್ಲ. ಕನ್ನಡ ನಾಲ್ಕೈದು ಇಯತ್ತೆಗಳ ವರೆಗೆ ಕಲಿತಿರಬಹುದು. ಈ ಮೊದಲು ಹೇಳಿದಂತೆ ಸಣ್ಣ ವಯಸ್ಸಿನಲ್ಲಿಯೆ ಮನೆತನದ ವ್ಯವಸಾಯವನ್ನು ಕೈಕೊಂಡರು. ಅನಂತರ ಈ ವ್ಯವಸಾಯವನ್ನು ಪ್ರಾರಂಭಿಸಿದರು. ಶ್ರೀ. ಸಿದ್ದಪ್ಪನವರು ಇನ್ನೂ ಕೆಲವು ಕಾಲ ಬದುಕಿ ಇದ್ದರೆ, ಕನ್ನಡನಾಡು ತನ್ನ ಕೀರ್ತಿಯನ್ನು ಪರನಾಡುಗಳಲ್ಲಿ ಕೂಡ ಬೆಳಗಿಸಲು ಕಾರಣರಾಗುತ್ತಿದ್ದರು. ಆದರೆ ೧೯೩೩ರಲ್ಲಿ ತಮ್ಮ ವಯಸ್ಸಿನ ೪೮ನೆಯ ವರುಷದ ಅಕಾಲದಲ್ಲಿಯೆ ಮರಣ ಹೊಂದಿದರು. ನಾಡಿನ ದುರ್ದೈವ!

ಸದ್ಯದ ವ್ಯವಸ್ಥೆ

ಸದ್ಯಕ್ಕೆ ಈ ಕಂಪನಿಯ ಕಾರ್ಯವನ್ನು ಸಿದ್ದಪ್ಪನವರ ಮಕ್ಕಳಾದ ಶ್ರೀ. **ಗಂಗಪ್ಪನವರು** ನಿರ್ವಹಿಸುತ್ತಿದ್ದಾರೆ. ತಂದೆಯಂತೆಯೆ ಕಲ್ಪಕಬುದ್ಧಿಯ ಮಗ. ಇವರ ಶಾಲೆಯ ವಿದ್ಯಾ-

ಫೋಟೋ ಎನ್‌ಲಾರ್ಜ್‌ಮೆಂಟ್ಸ್

ಸುಂದರವಾಗಿಯೂ ಮೆಚ್ಚುಗೆಯಾಗುವಂತೆಯೂ ಪ್ರಾಮಾಣಿಕತೆಯಿಂದಲೂ ಕೆಲಸಮಾಡಿ ಕೊಡಲಾಗುವುದು;

ಸಮಯನಿಷ್ಠತೆ ನಮ್ಮ ಬಿರುದು!

ತಮ್ಮ ಫೋಟೋ ಕಳಿಸಿ, ಎನ್‌ಲಾರ್ಜಮೆಂಟ್ ಯಾವ ಅಳತೆಯದಿರಬೇಕೆಂಬುದನ್ನು ಕೂಡಲೆ ತಿಳಿಸಿರಿ!

ಬಣ್ಣ ಬಣ್ಣದ ಎನ್‌ಲಾರ್ಜ್ ಪೇಂಟೂ ನಮ್ಮಲ್ಲಿ ಆಗುವುದು!

ಬೆಲೆ ಸುಲಭ! ★ ತೃಪ್ತಿಕರವಾದ ಕೆಲಸ!!

ಸಿನೇಮಾ ಸ್ಲೈಡುಗಳನ್ನೂ ಸುಂದರವಾಗಿ ಮಾಡಿಕೊಡುವೆವು!

ಗೋವಾರೀಕರ್ ಅಂಡ್ ಸನ್ಸ್,

ಫೋಟೋಗ್ರಾಫಿಕ್ ಡೀಲರ್ಸ್ ಕೊಲ್ಹಾಪುರ

ಪ್ಯಾಸವೂ ಬಹಳವಾಗಿಲ್ಲ. ಇಂಗ್ಲಿಷ್ ೬ನೆಯ ಈಯತ್ತೆಯ ವರೆಗೆ ಕಲಿತಿದ್ದಾರೆ. ತಂದೆಗೆ ನೆರವಾಗಲೆಂದೂ, ಕ್ರಮೇಣ ಬೆಳೆಯುತ್ತಿದ್ದ ಬೇಡಿಕೆಗಳನ್ನು ಪೂರಯಿಸಲು ಕಂಪನಿಯ ಕಾರ್ಯವನ್ನು ಹೆಚ್ಚು ವೇಗದಿಂದ ಸಾಗಿಸಲೆಂದೂ, ಮುಂದೆ ಕಲಿಯುವ ಗೊಡವೆಯನ್ನು ಬಿಟ್ಟು ಕೆಲಸಮಾಡತೊಡಗಿದರು. ಮನಮುಟ್ಟಿ ದುಡಿದು ಕೆಲವು ದಿನಗಳಲ್ಲಿಯೆ ಕೈಗಾರಿಕೆಯನ್ನು ಕೈವಶಪಡಿಸಿಕೊಂಡರು. ತಂದೆಯವರು ತೀರಿದ ನಂತರ ಸುವ್ಯವಸ್ಥಿತವಾಗಿ ತಾವೇ ಕಂಪನಿಯನ್ನು ಸಾಗಿಸಿದ್ದಾರೆ. ಗಂಗಪ್ಪನವರಿಗೆ ಚೆನ್ನಪ್ಪ, ನೀಲಕಂಠಪ್ಪ ಎಂಬ ಇಬ್ಬರು ಕಕ್ಕಂದಿರಿರುವರು. ಇವರು ಕೂಡ ಕಂಪನಿಯ ಕಾರ್ಯವನ್ನು ನಿರ್ವಹಿಸುವುದರಲ್ಲಿ ಗಂಗಪ್ಪನವರಿಗೆ ಸಲಹೆ-ಸಹಕಾರಗಳನ್ನು ಕೊಡುತ್ತಿದ್ದಾರೆ. ಒಬ್ಬರು ಕಂಪನಿಯಲ್ಲಿ ಮೇಲ್ವಿಚಾರಣೆ ಮಾಡುತ್ತಿದ್ದಾರೆ; ಇನ್ನೊಬ್ಬರು ಅಡ್ಡಾಡಿ ಪ್ರಚಾರಮಾಡುತ್ತಾರಲ್ಲದೆ, **ಹೈದರಾಬಾದ್**, ಕೊಲ್ಹಾಪೂರ, ದಾವಣಗೆರೆ ಹಾಗೂ **ಬೆಳಗಾಂವಿ** ಮೊದಲಾದ ಸ್ಥಳಗಳಲ್ಲಿ ಇರುವ ಇವರ ಅಂಗಡಿಗಳ ಮೇಲ್ವಿಚಾರಣೆಯನ್ನೂ ಮಾಡುತ್ತಿದ್ದಾರೆ.

ಗಂಗಪ್ಪನವರು ಸ್ವಭಾವದಿಂದ ಸರಳರೂ ಸಾಸಿಗರೂ ಇರುತ್ತಾರೆ. ಒಟಟುತನದ ಪರಿಚಯು ಕೂಡ ಇವರಿಗಿರುವುದಿಲ್ಲ. ಕೈಕೆಳಗಿನ ಕೆಲಸಗಾರರ ಸಂಗಡ ಬಹಳ ಸಲುಗೆಯಿಂದ ನಡೆದುಕೊಳ್ಳುತ್ತಾರೆ. ಮುಂಜಾವಿನಿಂದ ಸಂಜೆಯ ವರೆಗೆ ಬೆವರಿಳಿಯುವಂತೆ ಕೈಯಿಂದ ಕೆಲಸಮಾಡುತ್ತಿರುವುದರಿಂದ ಇವರಿಗೆ ದುಡಿಮೆಯ ಬೆಲೆಯು ಗೊತ್ತಾಗಿದೆ. ಅಂತೆಯೇ ಕಂಪನಿಯಲ್ಲಿ ದುಡಿಯುವವರಿಂದ ಕೆಲಸವನ್ನು ಹಿತವಾಗಿ ಮಿತವಾಗಿ ತೆಗೆದುಕೊಳ್ಳುತ್ತಾರೆ. ತಂದೆಯವರು ಕಟ್ಟಿದ ಭವ್ಯಮಂದಿರಕ್ಕೆ ಇವರು ಬೇಗುವ ಕಳಸವನ್ನಿಡುತ್ತಿರುವುದರಲ್ಲಿ ಸಂದೇಹವಿಲ್ಲ. ಈಗಾಗಲೆ ಇವರ ವ್ಯವಸಾಯವು ಸಾಕಷ್ಟು ವ್ಯಾಪಕವಾಗಿದೆ. ಇಂದಿನ ಸಮಾಜಕ್ಕೆ ಅವಶ್ಯವೆನಿಸುವ ತರತರದ ಸಾಧನಗಳನ್ನು ತಯಾರಿಸುತ್ತಿದ್ದಾರೆ. ವಿಧವಿಧದ ತಿಜೋರಿಗಳಂತೆ, ಕ್ಯಾಶ್ ಬಾಕ್ಸ್, ಡೆಸ್ಕ್, ಟೇಬಲ್, ಆಸ್ಪತ್ರೆಯ ಸಲಕರಣೆ ಮೊದಲಾದ ಅನೇಕ ಸರಕುಗಳನ್ನು ಸಿದ್ಧಮಾಡುತ್ತಿದ್ದಾರೆ. ಇದರಿಂದ ಇವರ ಹೆಸರು ಕರ್ನಾಟಕದಲ್ಲೆಲ್ಲ ಹಬ್ಬಿದೆ. ಪರಪ್ರಾಂತಗಳಲ್ಲಿಯೂ ಕಾಲಿಟ್ಟಿದೆಯೆಂಬುದಕ್ಕೆ ಹೈದ್ರಾಬಾದ್, ಕೊಲ್ಹಾಪೂರಗಳಲ್ಲಿರುವ ಇವರ ಅಂಗಡಿಗಳೆ ನಿದರ್ಶನ. ಹೈದರಾಬಾದಿನ ಲಕ್ಷ್ಮೀನಿವಾಸದ ಹೆಬ್ಬಾಗಿಲನ್ನು ಇವರೇ ತಯಾರಿಸಿದ್ದಾರೆ. ಅಲ್ಲದೆ **ಹೈದರಾಬಾದ್**, **ಮೈಸೂರು**, ಬಡೋದಾ ಮುಂತಾದ ಅರಸುಮನೆತನಗಳಿಗೆ, ಸರಕಾರಗಳ ಬ್ಯಾಂಕು-ಕಚೇರಿಗಳಿಗೆ ಇವರೇ ತಿಜೋರಿಗಳನ್ನು ಪೂರಯಿಸಿದ್ದಾರೆ.

ಇದೇ ಮಾದರಿಯಮೇಲೆ ಇವರ ವ್ಯವಸಾಯ-ವ್ಯಾಪಾರಗಳು ಇಡಿ ಭಾರತದಲ್ಲಿ, ಅದೇಕೆ ಪರದೇಶಗಳಲ್ಲಿ ಕೂಡ ಬೆಳೆಯಬೇಕು. ಅದಕ್ಕಾಗಿ ಅವಶ್ಯವಿರುವ ಪ್ರಯೋಗ–ಪ್ರಚಾರ ಮೊದಲಾದ ಚಟುವಟಿಕೆಗಳನ್ನು ಕಂಪನಿಯವರು ಬೇಗನೆ ಕೈಕೊಳ್ಳುವರೆಂಬ ನಂಬುಗೆಯೂ ಇದೆ. ಹೊಸ ಹೊಸ ಮಾದರಿಗಳನ್ನು ತಯಾರಿಸಿ, ಕಾರ್ಯವನ್ನು ಇನ್ನೂ ವೇಗದಿಂದ ಸಾಗಿಸಿ, ಈ ಕನ್ನಡ ಕಂಪನಿಯು ಪರದೇಶದ ಸರಕುಗಳನ್ನು ಎಲ್ಲ ವಿಧದಲ್ಲೂ ಸರಿಗಟ್ಟುವಂತೆ ಪ್ರಯತ್ನಿಸಿ, ಕನ್ನಡನಾಡಿನ ಕೀರ್ತಿಯನ್ನು ಬೆಳಗಿಸುವುದೆಂದು ಹಾರಯಿಸಿದರೆ ಅದು ಅಸ್ವಾಭಾವಿಕವಲ್ಲ. ಈ ಕಾರಖಾನೆಯವರು ಕೈಕೊಳ್ಳಲಿರುವ ಹೊಸ ಹೊಸ ಪ್ರಯೋಗ— ಪ್ರಯತ್ನಗಳು ಯಶಸ್ವಿಯಾಗಲೆಂದು ಕನ್ನಡಿಗರೆಲ್ಲ ಏಕಮುಖವಾಗಿ ಅಪೇಕ್ಷಿಸುವುದು ಅತ್ಯಗತ್ಯ !

ಹಿಂದುಸ್ಥಾನದ ಶ್ರೇಷ್ಠ ತರಗತಿಯ ವಿಮಾಸಂಸ್ಥೆಗಳಲ್ಲಿ ಒಂದಾದ

ದಿ ಏಶಿಯಾಟಿಕ್ ಗವ್ಹರ್ನಮೆಂಟ್ ಸೆಕ್ಯೂರಿಟಿ

ಲೈಫ್ ಅಶ್ಯೂರನ್ಸ್ ಕಂಪನಿ, ಲಿ. ಬೆಂಗಳೂರು

ಇದುವರೆಗೆ ರೂ. ೨,೫೦,೦೦೦,೦೦ ವಿಮಾಕಾರ್ಯ ಮಾಡಿದೆ. ● ೨೫,೦೦೦ ಸಂಸಾರಗಳಿಗೆ ವಿಮಾ ರಕ್ಷಣೆ ದೊರಕಿಸಿದೆ.

ಕಡಿಮೆದರದ ಹಪ್ತೆಯ ಮೇಲೆ ವಿಮಾ ಇಳಿಸಬಹುದು.

ಏಶಿಯಾಟಿಕ್ ಕಂಪನಿಯ ಪ್ರಗತಿಯು ಕನ್ನಡಿಗರು ಹೆಮ್ಮೆ ಪಡತಕ್ಕದ್ದಾಗಿದೆ. ಎಲ್ಲ ಬಗೆಯಿಂದಲೂ
ಸುರಕ್ಷಿತವಾದ, ಭದ್ರವಾದ ಮೈಸೂರಿನ ವಿಮಾ ಸಂಸ್ಥೆ. ಹೆಚ್ಚಿನ ವಿವರಕ್ಕೆ ಬರೆಯಿರಿ.

ಏಜನ್ಸಿ ಸುಪರಿಂಟೆಂಡೆಂಟ್,

ಏಶಿಯಾಟಿಕ್ ಲೈಫ್ ಆಫೀಸ್, ಧಾರವಾಡ.

ಸಮಾಜದರ್ಪಣ

ಪ್ರೊ. ಎನ್. ಎಂ. ಕುಲಕರ್ಣಿ, ಎಂ. ಎ.
ಬನಾರಸ ಹಿಂದೂ ಯುನಿವ್ಹರ್ಸಿಟಿ

ಒಬ್ಬರ ನಗೆಯಾಟ ಇನ್ನೊಬ್ಬರಿಗೆ ಪ್ರಾಣಸಂಕಟವನ್ನು ತಂದು ಒಡ್ಡಿದ್ದಿತು. ತಾನೊಂದು ಗಂಡಾಂತರದಲ್ಲಿ ಸಿಕ್ಕಿ ಬಿದ್ದಿರುವೆನೆಂದು ಸುಳ್ಳುಸುಳ್ಳೇ ಧಡಪಡಿಸಿದ ರಂಗರಾಯ, ವಾಚಕರ ಕುತೂಹಲಕ್ಕೂ ನಗೆಗೂ ಪಾತ್ರನಾಗದಿರಲಾರ.

★

"ವಿಶ್ರಾಂತಿಗೃಹದಲ್ಲಿ ಆ ದಿವಸ ಗಿರಾಕಿಗಳು ತುಂಬ ಸಂಭ್ರಮದಿಂದ ನೆರೆದಿದ್ದರು. ನಮ್ಮೂರಲ್ಲಿ ಆ ದಿನ ಒಂದು ಹೊಸದಾದ ಮಾಸಪತ್ರಿಕೆಯು ಪ್ರಾರಂಭವಾಗಿ, ಅನೇಕರಿಗೆ ಮಾದರಿಯ ಪ್ರತಿಗಳು ಬಂದಿದ್ದುವು; ಚಹ ಕುಡಿಯುತ್ತ ಗಿರಾಕಿಗಳು ಮಾಸಪತ್ರದ ಮುದ್ರಣವನ್ನೂ, ಅದರಲ್ಲಿಯ ಲೇಖನಗಳನ್ನೂ ಓದುತ್ತ, ಚರ್ಚೆಮಾಡುತ್ತ ಕುಳಿತಿದ್ದರು. ನಾಗಪ್ಪನು ಡಿಕ್ಷಿಯೊಂದಿಗೆ ಯಥಾವಿಧಿ ತನ್ನ ದೈನಿಕ ಚಹವನ್ನು ಕುಡಿದು, ತಾಂಬೂಲ ಸೇವನೆ ಮಾಡುತ್ತ, ತನ್ನ ಮೂಲೆಯ ಸ್ಟೂಲಿನ ಮೇಲೆ ಕುಳಿತು ಗಿರಾಕಿಗಳ ಆ ದಿನದ ಸಂಭ್ರಮವನ್ನು ತುಂಬಾ ಕುತೂಹಲದಿಂದ ಅವಲೋಕಿಸುತ್ತ ಕುಳಿತಿದ್ದ. ಡಿಕ್ಷಿಗೆ ಮಾಸ-ಪತ್ರದಲ್ಲಿ ಅಭಿರುಚಿಯೆಲ್ಲಿಯದು? ಬಿಸ್ಕೀಟು ಮುಗಿದುವೋ ಇನ್ನೂ ಬರುವುವೋ ಎಂಬುದನ್ನು ತನ್ನ ಮೂಗಿನ ಮೇಲೆ ಕುಳಿತ ನೊಣಗಳನ್ನು ವಿಚಾರಿಸುತ್ತಿತ್ತು. ನಾಗಪ್ಪ ಪಕ್ಕದಲ್ಲಿ ಕುಳಿತ ಗಿರಾಕಿಯೊಬ್ಬನ ಕೈಯಲ್ಲಿಯ ಮಾಸಪತ್ರವನ್ನು ನೋಡಿದ. "ಸಮತಾವಾದ" ಎಂದು ಬರೆದಿತ್ತು. ಸರಿ, ನಮ್ಮೂರ ಕೆಲವು ಉತ್ಸಾಹಿ ರಾಜಕಾರಣ ಧುರೀಣರು "ಸಮತಾವಾದ"ವನ್ನು ಹೊರಡಿಸಿದ್ದರು.

"ಏನ್ರೀ ನಾಗಪ್ನೋರೇ, ಹೊಸಾ ಮಾಸಪತ್ರ ನೋಡಿದ್ದೀರಾ?" ಎಂದು ಗಿರಾಕಿಯೊಬ್ಬ ಪ್ರಶ್ನೆಮಾಡಿದ.

"ಏನೋ 'ಸಮತಾವಾದ' ಅಂತ ಬರೆದಿದೆ; ಅದೇ ಪತ್ರವೋ?" ನಾಗಪ್ಪ ಕೇಳಿದ.

"ಅದೇ ಸ್ವಾಮಿ, ಅದೇ! ಒಳ್ಳೇ ಝೋಕಾಗಿ ಪ್ರಿಂಟುಮಾಡಿದ್ದಾರೆ; ಅಲ್ಲದೆ ಮಾದರಿಯ ಪ್ರತಿಗಳೂ ಸಿಕ್ಕಿವೆ."

"ಅಂತ್ಲೇ ಎಲ್ಲರೂ ಸಮತಾವಾಚನ ನಡಿಸಿದ್ದಾರೆ!" ನಾಗಪ್ಪ ನಗುತ್ತ ಹೇಳಿದ.

"ಅಷ್ಟೇ ಅನ್ರಿ! ನಾಗಪ್ನೋರೆ, ದುಡ್ಡು ಕೊಟ್ಟು ಪತ್ರ ಓದೋ ಜನ ಬಹಳ ಕ್ವಚಿತ್ ಅಲ್ಲವೆ? ಊರಿಗೊಂದು ಧರ್ಮಾರ್ಥ ವಾಚನಾಲಯ ಇದ್ದೇ ಇರುತ್ತದಷ್ಟೇ! ಸರಿ, ಅಲ್ಲಿಗೆ ಹೋಗಿ ಓದಿ ಬಂದರಾಯಿತು" ಗಿರಾಕಿ ಒಪ್ಪಿಗೆ ಕೊಟ್ಟ.

"ವಾಚನಾಲಯ ಇಲ್ಲದಿದ್ದರೂ ಇದೇ ಹಾಡು; ಯಾರಾದರೂ ಒಬ್ಬರು ತರಿಸಿಬಿಟ್ಟರೆ ಸಾಕು. ಎಲ್ಲರೂ ಅದಕ್ಕೇ ಗಂಟುಬಿದ್ದುಬಿಡುತ್ತಾರೆ. ನಮ್ಮ ಜನರಲ್ಲಿ ದುಡ್ಡುಕೊಟ್ಟು ಓದುವ ರುಚಿ ಬಾರದ ವಿನಾ ನಮ್ಮ ವೃತ್ತಪತ್ರಗಳಿಗೆ ಪ್ರಗತಿ ಇಲ್ಲ. ಪರದೇಶದಲ್ಲಿ ನೋಡ್ರಿ; ಕೂಲಿಕಾರರು ಕೂಡಾ ತಮ್ಮ ದೈನಿಕಪತ್ರ ಕೊಳ್ಳುತ್ತಾರಂತೆ. ನಮ್ಮಲ್ಲಿ ದುಡ್ಡಿದ್ದವರೂ ಮಾದರೀಪ್ರತಿಯ ಮೇಲೆ ಸಾಗಿಸುತ್ತಾರೆ." ನಾಗಪ್ಪ ಇನ್ನೂ ಇದೇ ರೀತಿ ನಮ್ಮ ಜನರ ಓದುವ ಪದ್ಧತಿಯ ಮೇಲೆ ಅಭಿಪ್ರಾಯ ಕೊಡುತ್ತಿದ್ದ. ಅಷ್ಟರಲ್ಲಿ ಮತ್ತೊಂದು ಗಿರಾಕಿ ಅವರನ್ನು ಕೂಡಿತು.

"ಈಚೆಗೆ ನಮ್ಮ ಪ್ರಾಂತದಲ್ಲಿ ತುಂಬಾ ಮಾಸಪತ್ರ ಹೊರಡಲಿಕ್ಕೆ ಹತ್ತ್ಯಾವ್ರೀ; ನಾವೇನು ಓದೋದರಾಗ ಕಮ್ಮಿ ಇಲ್ಲ" ಎಂದು ಎರಡನೆಯ ಗಿರಾಕಿ ತನ್ನ ಪ್ರಾಂತದ ಅಭಿಮಾನದಿಂದ ಹೇಳಿದ.

"ಆದರೆ ಸದ್ಯದ ಸಂಪಾದಕರೂ, ಲೇಖಕರೂ ಹಿರಿಯದೇವಿಯ ಮೊಮ್ಮಕ್ಕಳೇ (ಬಡವರು) ಆಗಿ ಉಳಿದಿದ್ದಾರೇಕೆ ಹಾಗಾದರೆ?" ಎಂದು ನಾಗಪ್ಪ ಕೇಳಿದ. ಇದು ಉತ್ತರವಿಲ್ಲದ ಪ್ರಶ್ನೆಯಾದ್ದರಿಂದ ನಾಗಪ್ಪ ಬೇರೆಯ ಮಾತಿನ ಕಡೆಗೆ ತಿರುಗಬೇಕಾಯಿತು.

"ಸದ್ಯ ನಮ್ಮ ಕಾಂಗ್ರೆಸ್ಸಿನವರು ನಿರಕ್ಷರತೆ ಹೊಡೆದೋಡಿಸುತ್ತಿದ್ದಾರೆ; ಇನ್ನು ಮುಂದಾದರೂ ನಮ್ಮ ವೃತ್ತಪತ್ರಗಳ ಪ್ರಗತಿಯಾಗುವುದೆಂದು ಆಶೆ ಇದೆ ಸ್ವಾಮಿ; ಆದರೆ ಒಂದು ಮಾತನ್ನು ಮಾತ್ರ ವೃತ್ತಪತ್ರಗಳ ಸಂಚಾಲಕರು ಮರೆಯಬಾರದು. ಅದೇನೆಂದರೆ ತಾವು ಇದರಿಂದಲೇ ದುಡ್ಡು ಸಂಪಾದಿಸುವುದು ಎನ್ನುವ ಆಶೆಯನ್ನು ಮಾತ್ರ ಬಿಡಬೇಕು. ಪತ್ರಗಳನ್ನು ಓದುವವರು ಹೆಚ್ಚಿದರೂ ಅವುಗಳನ್ನು ಕೊಳ್ಳುವವರು ಅಷ್ಟೇ ಜನರು. ನಿರಕ್ಷರತೆ ಹೊಡೆದೋಡಿಸಿದರೇನಾಯಿತು; ನಿರರ್ಥಕತೆ ಹಾಗೆಯೆ ಉಳಿಯುತ್ತದಷ್ಟೇ! ಅದು ದೂರವಾದಮೇಲೆ ಸಾಂಸ್ಕೃತಿಕ ಪ್ರಗತಿ. ಸದ್ಯ ನಮ್ಮ ವೇಳೆ-ಬುದ್ಧಿ-ಬಲವೆಲ್ಲ ಮಧ್ಯಾಹ್ನದ ಊಟಕ್ಕೆ ಖರ್ಚಾಗುತ್ತಲಿದೆ" ಎಂದು ನಾಗಪ್ಪ ನುಡಿದ.

"ಆದರೂ ಪತ್ರಗಳಲ್ಲಿ ಸಾಕಷ್ಟು ಮನೋರಂಜಕ ಸುದ್ದಿಗಳಿದ್ದರೆ ಜನರು ಹೆಚ್ಚುಕೊಳ್ಳಬಹುದು. ಮುಖ್ಯವಾಗಿ ಜನರಿಗೆ ತಮ್ಮ ದೈನಿಕ ವ್ಯವಹಾರದ ಏಕನಾದದಿಂದ ಬೇಜಾರು ಬಂದು, ಏನಾದರೂ

ಹಾಸ್ಯ-ವಿಡಂಬನ-ಮಾರ್ಮಿಕ ಲೇಖನಗಳನ್ನು ಓದಲು ಬಯಸುವರು. ಆ ರೀತಿ ಪತ್ರಗಳು ಹೆಚ್ಚಾದರೆ...." ಎಂದು ಎರಡನೆಯ ಗಿರಾಕಿ ಹೇಳತೊಡಗಿದ್ದ.

"ತಾವು ಹೇಳುವ ರೀತಿಯ ಪತ್ರವೊಂದನ್ನು ನಮ್ಮ ಪಲ್ಲೂ ಪ್ರಾರಂಭ ಮಾಡಿದ್ದ..." ನಾಗಪ್ಪ ಹೇಳಿದ.

"ತಮ್ಮ ಕ್ರಾಂತಿಕಾರಕ ಪಲ್ಲೂ ಏನ್ರೀ ನಾಗಪ್ನೋರೇ?" ಮೊದಲನೆಯ ಗಿರಾಕಿ ಕೇಳಿದ.

"ಅವನೇ, ಅವನೇ, ಆ ಪೋಲೀಸ್ ಇನ್‌ಸ್ಪೆಕ್ಟರರನ್ನು ಮೋಸಗೊಳಿಸಿ, ತಂದೆಯ ರಾಮಟಂಕೆ ವರಹಗಳನ್ನು ಪೋಲೀಸರ ಮುಖಾಂತರವಾಗಿಯೇ ಎತ್ತಿಕೊಂಡು, ಕಾಲೇಜು ಕಲಿಯಲಿಕ್ಕೆ ಹೋಗಿದ್ದನಲ್ಲ, ಅದೇ ಪಲ್ಲೂ! ತಾವು ಕೇಳಿದ್ದೀರಷ್ಟೇ?"

"ಕೇಳಿದ್ದೇವೆ ಸ್ವಾಮಿ, ಮರೆಯದ ಕತೆ ಅದು; ಬಹು ಮಾರ್ಮಿಕವಾದದ್ದು!" ಎಂದೊಬ್ಬ ಗಿರಾಕಿ ಅಭಿಪ್ರಾಯಪಟ್ಟ.

"ಸರಿ, ಅದೇ ಪಲ್ಲೂ ಬಿ. ಎ. ಆದ ಮೇಲೆ, ಕೆಲಸ ಸಿಗಲಿಲ್ಲಾ ಅಂತ ಏನಾದರೂ ಸ್ವತಂತ್ರಧಂದೆ ಮಾಡಲಿಕ್ಕೆ ವಿಚಾರ ಮಾಡಿದ. ಯಾವ ಧಂದೆಯೂ ಸರಿಬಾರದ್ದರಿಂದ ಒಂದು ವೃತ್ತಪತ್ರವನ್ನಾದರೂ ಹೊರಡಿಸೋಣಾ ಅಂತ ತನ್ನ ಮೂರು ನಾಲ್ಕು ಜನ 'ನಿರುದ್ಯೋಗಿ' ಗೆಳೆಯರೊಂದಿಗೆ ನಿರ್ಣಯಿಸಿಬಿಟ್ಟ. ಅದರ ಕತೆ ದೊಡ್ಡದು; ತಮಗೆ ವೇಳೆ ಇದ್ದರೆ...."

"ವೇಳೆ ಕಳೀಲಿಕ್ಕೇ ಬರೋದ್ರೀ ಇಲ್ಲಿಗೆ! ಹುಂ, ಸುರುವಾಗಲಿ!" ಎಂದು ಮೊದಲನೆಯ ಗಿರಾಕಿ ಉತ್ತೇಜನ ಕೊಟ್ಟ. ನಾಗಪ್ಪ ಕತೆಗೆ ಪ್ರಾರಂಭಿಸಿದ.

"ಪಲ್ಲೂನ ಗೆಳೆಯರು ನಿರ್ಣಯಿಸಿದ ಪ್ರಕಾರ ಪತ್ರವನ್ನು ಸಾಪ್ತಾಹಿಕವಾಗಿ ಹೊರಡಿಸುವುದು ಗೊತ್ತಾಯಿತು. ಅದರ ಹೆಸರು 'ಸಮಾಜದರ್ಪಣ' ಎಂದು ನಿರಾಯಿಸಿದರು. ಅದನ್ನು ನಮ್ಮೂರ 'ಭಾರತ ಮುದ್ರಣಾಲಯ'ದಲ್ಲಿಯೇ ಅಚ್ಚುಮಾಡಿಸುವುದೆಂದು ಗೊತ್ತುಮಾಡಿದರು. ಭಾರತ ಮುದ್ರಣಾಲಯದ ಮ್ಯಾನೇಜರು ನಮ್ಮ ರಂಗ. ತಾವು ಕೇಳಿರಬಹುದು ಅವನ ವಿಷಯಕ್ಕೆ; ಉಗ್ಗು ತಿದ್ದಿಕೊಳ್ಳುವುದಕ್ಕೆ ಕಲಕತ್ತೆಗೆ ಹೋಗಿ ಬಂದಿದ್ದನಲ್ಲಾ ಅದೇ ರಂಗ! ಈಗ ದೊಡ್ಡ ಮನುಷ್ಯನಾಗಿದ್ದಾನೆ. ಅವನ ಛಾಪಖಾನೆ ತುಂಬಾ ಹೊಸ ಮಾದರಿಯದು. ಹೊಸದಾಗಿ ಪ್ರಾರಂಭಿಸುವ 'ಸಮಾಜದರ್ಪಣ'ಕ್ಕೆ ಉತ್ತೇಜನ ಕೊಡಲಿಕ್ಕೆಂದು ಸುಲಭ ದರದಲ್ಲಿ 'ಪಲ್ಲೂ ಆ್ಯಂಡ್ ಫ್ರೆಂಡ್ಸ್' ಸೂಚಿಸಿದ ಕಾಂಟ್ರ್ಯಾಕ್ಟಿಗೆ ಒಪ್ಪಿಕೊಂಡ. ಪತ್ರವು ತುಂಬ ಉತ್ಸಾಹದಿಂದ ಜಾಹೀರ್ ಮಾಡಲ್ಪಟ್ಟಿತು. ಸಂಪಾದಕಮಂಡಳಿ ಲೇಖನಗಳು ತುಂಬಾ ಮಾರ್ಮಿಕವಾಗಿಯೂ, ಹಾಸ್ಯ-ವಿನೋದಪೂರಿತವಾಗಿಯೂ ಇದ್ದು, ನಮ್ಮ ಸಮಾಜದ ಅನೇಕ ಕುಂದು-ಕೊರತೆಗಳನ್ನು ದೂರಿಸುವ ದೃಷ್ಟಿಯಿಂದ ಬರೆಯಲ್ಪಡುತ್ತಿದ್ದುವು. ಸಂಪಾದಕ ಮಂಡಳಿಯವರು ಎಲ್ಲರೂ ಬಿ. ಎ., ಎಮ್. ಎ. ಆದ ಉತ್ಸಾಹಿ ತರುಣರಿದ್ದರಷ್ಟೇ! 'ಸಮಾಜದರ್ಪಣ'ವು ಬಲವಾಗಿ ಪ್ರಗತಿಯಾಗತೊಡಗಿತು; ಪ್ರಾಂತದ ತುಂಬಾ ಹರಡಿತು. ಪಲ್ಲೂ ಆ್ಯಂಡ್ ಫ್ರೆಂಡ್ಸರ ಆನಂದಕ್ಕೆ ಎಣೆಯಿರಲಿಲ್ಲ. ಲೇಖಕರಿಗೂ ಹಣಕೊಡಲು ಶಕ್ತರಾದರು

" ಆರ್ಡರು ಕೊಟ್ಟವರ ವಿಳಾಸ ಬರೆದಿದೆಯಲ್ಲವೇ ? "
" ಅದು ಆರ್ಡರ್ ಫಾರ್ಮಿನಲ್ಲಿಯೇ ಇದೆ."

ಪಲ್ಲೂ ಆ್ಯಂಡ್ ಫ್ರೆಂಡ್ಸ್; ಏಜಂಟರು ಪ್ರತಿಯೊಂದು ಹಳ್ಳಿಯಲ್ಲಿಯೂ ನಾ ಮುಂದೆ ನಾ ಮುಂದೆ ಎಂದು ಬಂದರು. ಲೇಖಕರಿಗಂತೂ ಕೊರತೆಯೇ ಇರಲಿಲ್ಲ. ಮೊದಲನೇ ಪತ್ರಕ್ಕೇನೆ ನೂರಾರು ಲೇಖನಗಳನ್ನು ನಿರಾಕರಿಸಬೇಕಾಯಿತು. ವರ್ಗಣಿಯ ದರವೂ ಸ್ವಲ್ಪೇ ಇತ್ತು. ಆದರೆ ಯಾವ ಸಂಸ್ಥೆಗೂ ಪುಕ್ಕಟೆಯಾಗಿ ಕೊಡಬಾರದೆಂದು ಸಂಪಾದಕ ಮಂಡಳಿಯು ನಿರ್ಣಯಿಸಿದ್ದರಿಂದ ಪತ್ರದ ಪ್ರಸಾರವು ಸರಿಯಾಗಿ ಆಗಹತ್ತಿತು. ಪತ್ರದ ಆದರ್ಶ ಸಮಾಜಸುಧಾರಣೆಯೆಂದು ತಮಗೆ ಬೇರೆ ಹೇಳಬೇಕಿಲ್ಲವಷ್ಟೇ! ಎಂದಮೇಲೆ ಪತ್ರದ ಪ್ರಗತಿ ಎಷ್ಟಾಗಿದ್ದಿತು ಎಂಬುದನ್ನು ತಾವೇ ಕಲ್ಪಿಸಬೇಕು. ಪತ್ರದಲ್ಲಿ ಅನೇಕ ಬಗೆಯ ಆಕರ್ಷಕ ವಿಷಯಗಳು ಇರುತ್ತಿದ್ದುವು. ಮುದ್ರಕರೂ ತಮ್ಮ ಬಾಲ್ಯಾನುಭವದ ಚಕ್ರಬಂಧದ ಸ್ಪರ್ಧೆಗಳನ್ನು ಒಂದು ಕಾಲಮಿನಲ್ಲಿ ಕೊಡುತ್ತಿದ್ದರು. ತಾವು ಕೇಳಿದ್ದೀರಷ್ಟೇ—ನಮ್ಮ ರಂಗರಾಯ ತಾನು ಲಗ್ನವಾಗುವ ಮುಂದೆ ಭಾವೀಪತ್ನಿಯ ಜೊತೆಗೆ ಸ್ಪರ್ಧೆಯಲ್ಲಿ ಪಾತ್ರ ವಹಿಸುತ್ತಿದ್ದನೆಂಬುದನ್ನು? ಈಗ ಅದೇ ಸ್ಪರ್ಧೆಯಲ್ಲಿ ಇನ್ನೂ ಹೆಚ್ಚಾಗಿ ಆಸ್ಥೆ ತೋರಿಸುತ್ತಿದ್ದ. ಈ ರೀತಿಯಾಗಿ ಎಲ್ಲರಿಗೂ

'**ಸಮಾಜದರ್ಪಣ**' ತುಂಬಾ ಅಭಿಮಾನದ ಪತ್ರವಾಗಿತ್ತು.

ಒಂದು ದಿನ ಪಲ್ಲೂನ ಕಾಲೇಜುಗೆಳೆಯನೊಬ್ಬ ಅವನಲ್ಲಿಗೆ ಬಂದು, ತಾನು ಒಂದು '**ವಿನೋದವರ್ಧಕ ಸ್ಪರ್ಧೆ**' ಯನ್ನು ಹೊರಡಿಸುವುದಾಗಿ ಸೂಚಿಸಿದ. ಪಲ್ಲೂ ತನ್ನ ಸಲಹೆಗಾರರನ್ನು ಕರೆಯಿಸಿಕೊಂಡು ಮಿತ್ರನ ಸೂಚನೆಯನ್ನು ಅವರಲ್ಲಿ ನಿವೇದಿಸಿದ. 'ವಿನೋದವರ್ಧಕ ಸ್ಪರ್ಧೆ' ಯು ಬಲು ಮೋಜಿನದಾಗಿತ್ತು. ಅದರಲ್ಲಿ ಭಾಗ ವಹಿಸುವವರು ತಮ್ಮ ಚೇಷ್ಟಾಬಲವನ್ನು ವ್ಯಕ್ತಮಾಡಬೇಕಾಗಿದ್ದಿತು. ಯಾರನ್ನಾದರೂ ತುಂಬ ಬಿಗುಹಿನ ಪ್ರಸಂಗದಲ್ಲಿ ಕೆಡಹುವಂತೆ ಏನಾದರೂ ಚೇಷ್ಟಾಕಾರ್ಯವನ್ನು ಯಾವನು ಮಾಡುವನೋ ಅವನಿಗೆ, ಸ್ಪರ್ಧೆಯ ಪತಿಯಿಂದ ಒಂದು ಪದಕ ಕೊಡುವುದೆಂದು ಗೊತ್ತಾಗಿತ್ತು. ಅನೇಕ ಸ್ಪರ್ಧೆಗಾರರು ತಮ್ಮ ಬುದ್ಧಿಯೆಲ್ಲವನ್ನೂ ಖರ್ಚು ಮಾಡಿ ಆ ಪದಕವನ್ನು ದೊರಕಿಸಲಿಕ್ಕೆ ಆತುರರಾಗಿದ್ದರು; ಆದರೆ ಪದಕ ಸಿಕ್ಕುವುದು ದುಸ್ತರವಾಗಿತ್ತು. ಒಂದು ಸಾರೆ ಇಬ್ಬರು ಸ್ಪರ್ಧೆಗಾರರು ಮಾತ್ರ ವಿಚಿತ್ರಯುಕ್ತಿಯನ್ನು ಹೂಡಿದರು. '**ಸಮಾಜ ದರ್ಪಣ**'ದ ಒಂದು ವಿಶೇಷ ಸಂಚಿಕೆಯನ್ನು ಹೊರಡಿಸಿ, ಅದರಲ್ಲಿ ನಿಜವಾಗಿಯೂ ಇರುವ ಸಮಾಜದ ಕೆಲವು ಕುಂದುಗಳನ್ನು ವೈಯಕ್ತಿಕ ಟೀಕೆಯೊಂದಿಗೆ ಪ್ರಸಿದ್ಧಪಡಿಸಬೇಕೆಂದು ನಿರ್ಣಯಿಸಿದರು. ಸಮಾಜದರ್ಪಣದಲ್ಲಿ ಇದುವರೆಗೆ ಪ್ರಸಿದ್ಧಿಸಿದ ಸಾಮಾಜಿಕ ಕುಂದು-ಕೊರತೆಗಳು ವ್ಯಕ್ತಿಗಳ ಸ್ವಭಾವ ಟೀಕೆಗೆ ಸಂಬಂಧಿಸಿದ್ದಿಲ್ಲ. ಕೇವಲ ಸಾರ್ವಜನಿಕ ಟೀಕೆಯಾಗಿರುತ್ತಿದ್ದುವು. ಅವುಗಳಿಂದ ಯಾವ ವ್ಯಕ್ತಿಗೂ ಬಾಧೆಯಿರದೆ ಕುಂದು-ಕೊರತೆಗಳನ್ನು ಓದುತ್ತಿದ್ದರೂ ಜನರು ತಮ್ಮ ನಡೆವಳಿಯಲ್ಲಿ ಅದಲು-ಬದಲು ಮಾಡುತ್ತಿರಲಿಲ್ಲ. ಹೀಗಾಗಿ 'ಸಮಾಜ-ದರ್ಪಣ' ತನ್ನ ಆದರ್ಶವನ್ನು ಕರ್ಮಭೂಮಿಯಲ್ಲಿ ಕನ್ನಡಿಸಿ ತೋರಿಸಲಿಕ್ಕೆ ಶಕ್ಯವಿರಲಿಲ್ಲ. ಅಂತೆಯೇ ಈ ಸ್ಪರ್ಧೆ ಪಲ್ಲೂನಿಗೂ ಸರಿಯೆಂದೆನಿಸಿತು. ಅದಕ್ಕೆ ಸಹಾಯಮಾಡಲು ಒಪ್ಪಿಕೊಂಡ.

'ವಿನೋದ ವರ್ಧಕ ಸ್ಪರ್ಧೆ'ಯವರು ತಮ್ಮ ಕೆಲಸವನ್ನು ಒಳ್ಳೇ ಉತ್ಸಾಹದಿಂದ ಸಾಗಿಸಿದರು. ಅದರಲ್ಲಿಯ ಇಬ್ಬರು ಸ್ಪರ್ಧೆಗಾರರು ಒಂದು ದಿನ ರಂಗರಾಯನಲ್ಲಿಗೆ (ರಂಗ ಈಗ ದೊಡ್ಡವನಾಗಿದ್ದು ಅವನಿಗೆ ರಾಯನೆಂದು ಕರೆಯಹತ್ತಿದ್ದೇನೆ) ಬಂದು, ಒಳ್ಳೇ ಗಡಿಬಿಡಿಯಿಂದ, ಲೇಖನಗಳಿಂದ ತುಂಬಿದ ಒಂದು ಫಾಯಿಲ್ ಕೊಟ್ಟರು.

"ಇದು 'ಸಮಾಜದರ್ಪಣ'ದ ವಿಶೇಷ ಸಂಚಿಕೆಯಾಗಿ ಅಚ್ಚಾಗಬೇಕಾಗಿದೆ. ಕೆಲಸ ತೀವ್ರವಾಗಬೇಕು. ಈಗಾಗಲೆ ಸಾಪ್ತಾಹಿಕ ಪತ್ರ ಪ್ರಸಿದ್ಧವಾಗಿ ಬಿಟ್ಟಿದೆ. ನಾಳೆ ಮುಂಜಾನೆ ಹತ್ತರೊಳಗೆ ನಮಗೆ ಈ ವಿಶೇಷ ಸಂಚಿಕೆಯ ಪ್ರತಿಗಳನ್ನು ಕೊಡಲೇಬೇಕು!" ಎಂದು ಅವರಲ್ಲಿಯವನೊಬ್ಬ ಹೇಳಿದ.

"ನಾನು ನಾಳೆಯ ಹತ್ತು ಗಂಟೆಗೆ ಇಲ್ಲಿಗೆ ಬಂದು ಬಿಡುತ್ತೇನೆ. ಅಷ್ಟೊತ್ತಿಗೆ ತಯಾರಾಗಿರಲಿ!" ಎಂದು ಎರಡನೆಯವನು ಹೇಳಿದ.

"ಇದರ ಬಿಲ್ಲಿನ ಹಣ ಈಗಲೇ ಕೊಟ್ಟು ಬಿಡುತ್ತೇವೆ. ಏಕೆಂದರೆ ಕಾರ್ಯ ತೀವ್ರವಾಗಬೇಕು; ಇದೋ!" ಎಂದು ರೂಪಾಯಿ ಕೂಡ ಕೊಟ್ಟು ಬಿಟ್ಟ.

ರಂಗರಾಯನಿಗೆ ಪ್ರೆಸ್ಸಿಗೆ ಕೆಲಸ ದೊರೆಯಿತೆಂದು ಆನಂದವಾಯಿತು. ಕೂಡಲೆ "ಆಗಬಹುದು" ಎಂದು ಹೇಳಿ, ಸ್ಪರ್ಧೆಗಾರರನ್ನು ಕಳಿಸಿಕೊಟ್ಟ. ಅನಂತರ ಜಾನಕೀರಾಮನನ್ನು ಕರೆದು, ಫಾಯಿಲ್ ಪ್ರಿಂಟು ಮಾಡಲಿಕ್ಕೆ ಕೊಟ್ಟು 'ತೀವ್ರ ಕೆಲಸವಾಗಲಿ' ಎಂದು ಆರ್ಡರ್ ಮಾಡಿಬಿಟ್ಟ. (ಜಾನಕೀರಾಮ ಪ್ರೆಸ್ಸಿನ ಫೋರಮನ್) ಸರಿ, ಕೆಲಸ ತೀವ್ರವಾಗಿಯೇ ಪ್ರಾರಂಭವಾಯಿತು. ಜಾನಕೀರಾಮನಿಗೆ ಫಾಯಿಲನ್ನು ಓದಿದಾಗ ನಗೆಯೂ, ಅದರೊಂದಿಗೆ ಸ್ವಲ್ಪ ಭಯವೂ ಬಂದಿತು. ಆದರೂ 'ಹೇಳಿದ ಕೆಲಸ ಮಾಡುವ' ಆರ್ಡರ್ ಅವನಿಗಿತ್ತು. ಹಿಂದೆ ಎರಡು ಮೂರು ಸಲ ತಾನು ಸ್ವಂತ ಅಭಿಪ್ರಾಯ ಕೊಡಲುಹೋದಾಗ, ರಂಗರಾಯ ತುಂಬಾ ಕೋಪಗೊಂಡಿದ್ದ. ಅಂತೆಯೇ ಈಗ ಏನೂ ಮಾತನಾಡದೇ ಕಂಪೋಜಿಟರ್ಸಿಗೆ ಹಂಚಿ ಕೊಟ್ಟು ಕೆಲಸ ಪ್ರಾರಂಭ ಮಾಡಿಸಿದ.

ಮರುದಿನ ಹಗಲು ಎರಡು ಗಂಟೆಗೆ, ರಂಗರಾಯ ಆಫೀಸಿನಲ್ಲಿ ಕುಳಿತಾಗ ಕೆಲವು ಪತ್ರಗಳು ಮೇಜಿನ ಮೇಲೆ ಇಡಲ್ಪಟ್ಟಿದ್ದುವು. "ಅರ್ಜೆಂಟ್" ಎಂಬ ಟಿಪ್ಪಣಿಯನ್ನು ಕೆಂಪು ಮಸಿಯಿಂದ ಬರೆಯಲಾಗಿತ್ತು. ರಂಗರಾಯ ಆತುರದಿಂದ ಪತ್ರಗಳನ್ನು ಓದತೊಡಗಿದ :

"ಭಾರತಮುದ್ರಣಾಲಯದ ಮ್ಯಾನೇಜರರಿಗೆ:— ತಾವು ಛಾಪಖಾನೆ ಸುರುಮಾಡಿ ಎಷ್ಟು ದಿನವಾಗಿದೆ? ತಮಗೆ ತಮ್ಮ ಸ್ಥಾನದ ಜವಾಬ್ದಾರಿಗಳು ಗೊತ್ತಿವೆಯೇ? ನಾನು 'ನ್ಯೂ ಮಾಡೆಲ್ ಕಾರು' ಬಿಟ್ಟು ಏರ್‌ಷಿಪ್ ಇಟ್ಟುಕೊಂಡರೂ ತಮ್ಮ ಗಂಟೇನು ಹೋಯಿತು? ಅಲ್ಲದೆ ನನ್ನ ಪ್ರಾಯವ್ಹೇಟ್ ಜೀವನದ ಸಂಗತಿಯಲ್ಲಿ ನೀವು ಯಾವ ಅಧಿಕಾರದಿಂದ ಕೈಹಾಕಿದ್ದೀರಿ? ಈ ಎಲ್ಲ ಪ್ರಶ್ನೆಗಳಿಗೆ ಮರುಟಪಾಲಿಗೇನೇ ಉತ್ತರ ಬರೆಯದಿದ್ದರೆ, ನನ್ನ ವಕೀಲರಿಂದ ನಿಮಗೆ ತಕ್ಕ ಜವಾಬು ಬರುವುದು.

'ಕಾಂತಾವಿಹಾರ'
ಶ್ರೀಮತಿ ಚಂಚಲಾಕ್ಷಿಬಾಯಿ'

ಈ ಪತ್ರ ಓದಿದ ಕೂಡಲೆ ರಂಗರಾಯನಿಗೆ ವಿದ್ಯುದ್ದೀಪದ ತಂತಿಯನ್ನು ಮುಟ್ಟಿದಂತಾಯಿತು. 'ಇವಳು ಯಾವ ಶ್ರೀಮತಿ..! ಎಲ್ಲಿಯ ಕಾಂತಾವಿಹಾರ..? ಮೋಟ ಏನು..? ಏರಷಿಪ್ ಏನು..?' ಯಾವುದೂ ತಿಳಿಯದವನಾಗಿ ಪುನಃಪುನಃ ಪತ್ರ ವಿಳಾಸ ನೋಡಿದ. ಅದರಲ್ಲಿ ಯಾ ನ್ಯೂನತೆಯೂ ಇರಲಿಲ್ಲ. ಸ್ಪಷ್ಟವಾ ಅಕ್ಷರದಲ್ಲಿ 'ಭಾರತ ಮುದ್ರಣಾಲಯ' ಮ್ಯಾನೇಜರರಿಗೆ ಬರೆದುದಾಗಿತ್ತು. ಸ ಎರಡನೆಯ ಪತ್ರ ಒಡೆದು ನೋಡಿದ:

"ಭಾರತಪ್ರೆಸ್ ಮಾಲಕರಿಗೆ:— ತ ಪ್ರೆಸ್ಸಿನಿಂದ ಪ್ರಸಿದ್ಧವಾದ 'ಸಮಾಜ ದರ್ಪಣ'ದ ವಿಶೇಷಸಂಚಿಕೆಯು ಚಾ ನಿಂದೆಗಳಿಂದ ನಿಬಿಡಿತವಾಗಿದೆ. ತಮ್ಮಂ ಜವಾಬ್ದಾರಿಯುಳ್ಳವರಿತ ಸಾರ್ವಜನಿಕ ಪ್ರ ಖರು ಇಂಥ ವಿಷಯಗಳನ್ನು ಛಾಪಿಸಿ ಪ್ರಸಿ ಪಡಿಸಿದ್ದನ್ನು ನೋಡಿ ಮಹದಾಶ್ಚರ್ಯವಾ

ತ್ತದೆ. ಈ ತರದ ವಿಷಯ ಛಾಪಿಸುವವರಿಗೆ ಯಾವ ರೀತಿಯ ಮರ್ಯಾದೆಯಿದೆ ಎಂಬುದು ನಿಮಗೆ ತಿಳಿಯದೇ ಇರಲಾರದೆಂದು ಆಶಿಸುತ್ತೇನೆ. ನನ್ನ ಕೂದಲು ನಿಸರ್ಗತಃ ಕಪ್ಪೇ ಇವೆ. ನಾನು ಜನ್ಮದಲ್ಲಿ ಇಂದಿನ ವರೆಗೆ ಯಾವ ಕೂದಲುರಂಗನ್ನೂ ಉಪಯೋಗಿಸಿಲ್ಲ. ನನ್ನ ವಕೀಲರು ನಿಮಗೆ ಹಿಂದಿನಿಂದ ಬರೆಯುತ್ತಾರೆ.

ಪ್ರಾಂತಿಕ ವಿದ್ಯಾಖಾತೆ—
ರಾವಸಾಹೇಬ ಮೂರ್ತಿರಾಜನ್"

ರಂಗರಾಯನಿಗೆ ಪುನಃ ವಿದ್ಯುಚ್ಛಲಿಸಯಿತು. ಅದರ ಕೂಡ ಸ್ವಲ್ಪ ಬೆಳಕೂ ಆಯಿತು. ಮುಂದಿನ ಪತ್ರಗಳನ್ನು ...ತದೆ ಫೋರಮನ್ ಜಾನಕೀರಾಮನ ಕರೆದು ಕೇಳಿದ:

"ಬೆಳಿಗ್ಗೆ ಛಾಪಿಸಿದ 'ಸಮಾಜ-...ರ್ಪಣ' ದ ವಿಶೇಷಸಂಚಿಕೆಯ ಪ್ರೂಫ್ ...ಇದೆಯೋ?"

"ಛಾಪಿಸಿದ ಪೂರ್ಣ ಫಾಯಿಲೇ ಇದೆ."

"ಮೊದಲು ತಾ ಅದನ್ನು!" ಎಂದು ಹೇಳಿ ...ನೆ ಮತ್ತೊಂದು ಪ್ರಶ್ನೆಯನ್ನು ಕೇಳಿದ. "ಆರ್ಡರ್ ಕೊಟ್ಟವರ ವಿಳಾಸ ಬರೆಯಲ್ಲವೆ?"

"ಅದು ಆರ್ಡರಿನ ಫಾರ್ಮಿನಲ್ಲಿಯೇ ...!"

ರಂಗರಾಯನಿಗೆ ಸ್ವಲ್ಪ ಸಮಾಧಾನ ಆಯಿತು. ಕೊನೆಗೆ ಈ ಕಾರ್ಯಮಾಡಿದ ...ಕರಿಗಳನ್ನು ಹಿಡಿದು ತರಲಿಕ್ಕೆ ಶಕ್ಯವಿದೆ ...ಬ ಧೈರ್ಯ ತಂದುಕೊಂಡ. ...ಮಾಜದರ್ಪಣ' ದ ವಿಶೇಷಸಂಚಿ...ಯ ಆಫೀಸ್ ಕಾಪಿಯನ್ನು ತುಂಬ ಆತುರ...ದ ಓದತೊಡಗಿದ. ಕೆಲಸವು ತೀವ್ರ...ಗಬೇಕಾಗಿದ್ದುದರಿಂದ ಲೇಖನವನ್ನು ...ನು ಓದದೆಯೆ ಪ್ರಿಂಟಿಗೆ ಕೊಟ್ಟು...ದ್ದ. ಅಲ್ಲದೆ ಸಮಾಜದರ್ಪಣದಲ್ಲಿ ...ತಹ ವಿಷಯ ಬಂದಾವೆಂಬ ಕನಸು ...ಡ ಇದ್ದಿಲ್ಲ ರಂಗರಾಯನಿಗೆ. ಅಂತೆಯೇ ...ಟಿಯೊಂದು ಪಙ್ಕ್ತಿಯನ್ನೂ ಓದಿದ ಹಾಗೆ ...ನಸಿಗೆ ವಿದ್ಯುಚ್ಛಲಿಸೆಯಾಗಹತ್ತಿತು. ...ಷಸಂಚಿಕೆಯ ಮೇಲ್ಬಙ್ಕ್ತಿಯಲ್ಲಿ "ಕೆಲವೊಂದು ಸಾಮಾಜಿಕ-ಅವಲೋಕನಗಳು" ಎಂದು ಇತ್ತು. ಆ ಸಂಚಿಕೆಯಲ್ಲಿ ಹೀಗೆ ಹೀಗೆ ಬರೆದಿತ್ತು:—

ಕಳೆದ ಎಪ್ರಿಲ್ ೨೦ನೆಯ ತಾರೀಖಿಗೆ ನಾಂಗವಾದ ರಾವಬಹಾದ್ದೂರ್ ರತಿಕಾಂತರ ವಿವಾಹಕ್ಕೆ ನಮ್ಮ ಸ್ಪೆಶಲ್ ಸುದ್ದಿಗಾರರು ಹಾಜರಿದ್ದರು. ಪ್ರೌಢವಿವಾಹವೆಂದು ಅದನ್ನು ಕರೆದದ್ದು ಕೇವಲ ಔಪಚಾರಿಕವರ್ಣನೆ; ಏಕೆಂದರೆ ವಧುವಿಗೆ ಹನ್ನೆರಡು ವರ್ಷ ಪೂರಿದ್ದಿಲ್ಲ. ದೊಡ್ಡವರು ಶಾರ್ದಾ ಬಿಲ್ಲಿಗೆ ಮಾನ್ಯ ಮಾಡದಿದ್ದರೆ ಸಾಗಿ ಹೋಗುತ್ತದೆ. ಅಲ್ಲದೆ 'ವಧೂ-ವರರು ತುಂಬಾ ಸಂತೋಷದಲ್ಲಿದ್ದರು' ಎಂದು ಹೇಳಿದವರು ಸತ್ಯವಾಡಲಿಲ್ಲ; ನಮ್ಮ ಸುದ್ದಿಗಾರರು ನೋಡಿದಂತೆ ವಧುವು ದೀನಮುಖಳಾಗಿ ಜನರಿಗೆ ಕಾಣದಂತೆ ರೋದಿಸುತ್ತಿದ್ದಳು. ಅಲ್ಲದೆ ರಾವ್‌ಬಹಾದ್ದೂರರು ಮಾವನವರಿಗೆ ಕಾಣಿಕೆ ಎಂದು ಕೊಟ್ಟ ಹಣದ ಚೀಲ ಹೊರಲಾರದಷ್ಟು ಭಾರವಾಗಿ ಇತ್ತೆಂದು ಕಂಡುಬಂತು. ಈ ರೀತಿ ನಮ್ಮ ಸಮಾಜ ಪ್ರಗತಿಯಾದರೆ, ನಮಗೆ ಸ್ವರಾಜ್ಯ ಬರುವುದು ಪ್ರಾಯಶಃ ಕಲಿಯುಗ ಮುಗಿದ ಮೇಲೆಯೇ ಸರಿ ಎಂದು ನಮ್ಮ ಅಭಿಪ್ರಾಯ.

ರಂಗರಾಯ ಇದನ್ನೋದಿ ಜೋರೆಂದು ಚಿಮುತುಟ್ಟ. "ಇದು ನಮ್ಮ ಆಶ್ರಯ-ದಾತೃಗಳಾದ ರಾವ್‌ಬಹಾದ್ದೂರರ ವಿವಾಹದ ವಿಷಯ! ನಿದಾನ ನಾಲ್ಕು ಸಾವಿರ ರೂಪಾಯಿಗಳಿಲ್ಲದೆ ಅವರು ಸುಮ್ಮಗಿರಲಿಕ್ಕಿಲ್ಲ!" ಎಂದುಕೊಂಡು ಮುಂದೆ ಓದಿದ:

"ಕಾಂತಾವಿಹಾರದ ಶ್ರೀಮತಿ ಚಂಚಲಾಕ್ಷಿಯವರು ಈಗ ಸ್ನೋ ಪೌಡರ್ ಮೋಟಾರು ಕಾರ್ ಕೊಂಡಿದ್ದಾರೆಂದು ತಿಳಿಯುತ್ತದೆ. ನಮಗೆ ಗೊತ್ತಿದ್ದಂತೆ ಅವರ ಗಂಡನಿಗೆ ಸಬ್‌ರಜಿಸ್ಟ್ರಾರ ಕಚೇರಿಯಲ್ಲಿ ಮೂವತ್ತು ರೂಪಾಯಿ ಸಂಬಳವಿದೆ. ಈ ತರದ ಷೋಕಿಗೆ ಬರುವ ದುಡ್ಡು ಎಲ್ಲಿಂದ ಎಂಬುದನ್ನು ಸಮಾಜಹಿತೈಷಿಗಳು ತೀವ್ರವಾಗಿ ವಿಚಾರಣೆ ನಡೆಯಿಸಬೇಕೆಂದು ನಮ್ಮ ಬಲವಾದ ಸೂಚನೆ."

"ಸರಿ, ಈಗ ತಿಳಿಯಿತು. ಚಂಚಲಾಕ್ಷಿಬಾಯಿ ಯಾರೆಂಬುದು! ಇವರು ಏನಿಲ್ಲೆಂದರೂ ಎರಡು ಸಾವಿರಕ್ಕೆ ಅಜಿರೂಬುಕಶ್ಶಿನ್ ದಾವಾ ತರುವುದೇ ನಿಜ! ಮುಂದೆ ಗತಿ?" ಎಂದು ರಂಗರಾಯ ಮುಂದೆ ಓದಿದ:

"ನಮ್ಮೂರ ಕಿರಾಣೀ ಅಂಗಡಿಯ ಮಾಲೀಕರಾದ ಶ್ರೀ. ಹೊಸೂರ ಚೆನ್ನಮಲ್ಲಪ್ಪನವರು, ಮೊನ್ನೆ ಕುಮಟಾದಿಂದ ಎಲ್ಲ ಸಾಮಾನುಗಳನ್ನೂ ಸಟ್ಟಾ ಖರೀದಿ ಮಾಡಿಕೊಂಡು ಸುಖವಾಗಿ ಮರಳಿ ಬಂದರೆಂಬುದನ್ನು ತಿಳಿಸಲು ನಮಗೆ ತುಂಬಾ ಸಂತೋಷ; ಆದರೆ ಈ ಸಂತೋಷಕ್ಕೆ ಒಂದೇ ಒಂದು ಕೊರತೆ. ಸಕ್ಕರೆಯ ಚೀಲಗಳೊಂದಿಗೆ ಉಸುಬಿನ ಚೀಲಗಳೂ ಬಂದಿವೆ. ಈಗಿದ್ದ ಸಕ್ಕರೆಯ ಧಾರಣೆಯಿಂದಲೇ ಅಂಗಡಿಗೆ ಹೆಚ್ಚಾಗಿ ಲಾಭವಿದೆ. ಹೀಗಿದ್ದೂ ಉಸುಬಿನ ಚೀಲದ ಆವಶ್ಯಕತೆ ಏನು ಎಂಬುದನ್ನು ಗಿರಾಕಿಗಳ ವೃಂದವು ವಿಚಾರಿಸಿದಲ್ಲಿ, ಹೆಚ್ಚಾಗಿ ಕ್ಷೇಮವಾಗುವುದೆಂದು ನಮ್ಮ ಕಿವಿಮಾತು."

"ಕಿವಿಮಾತನ್ನು ಒಳ್ಳೆಯ ರೀತಿಯಲ್ಲಿ ಹೇಳಿದ್ದಾರೆ ಚಂಡಾಳ-ಚೌಕಳಿ ಮಂಡಳಿಯವರು! ಇವನೆಷ್ಟಕ್ಕೆ ತರುತ್ತಾನೋ ದಾವಾ?" ಎಂದು ರಂಗರಾಯ ತನ್ನ ಬ್ಯಾಂಕ್ ಬ್ಯಾಲನ್ಸ್ ನೆನಪುಮಾಡಿಕೊಂಡ. ಮತ್ತೆ ಓದಲಾರಂಭಿಸಿದ:

"ಪ್ರಾಂತಿಕ ವಿದ್ಯಾಖಾತೆಯ ಮಹಿಲಾ-ಮಂಡಳದ ಡೈರೆಕ್ಟರರಾದ ರಾವಸಾಹೇಬ್ ಮೂರ್ತಿರಾಜನ್ ಅವರಿಗೆ ತುಂಬಾ ವಯಸ್ಸಾಗಿದ್ದರೂ ಅವರ ತಲೆ ಮೀಸೆಗಳಲ್ಲಿ ಒಂದಾದರೂ ಬಿಳಿಯ ಕೂದಲಿಲ್ಲದುದು ಅನೇಕರಿಗೆ ಆಶ್ಚರ್ಯದ ಸಂಗತಿಯೆನಿಸಿತು. ಈಚೆಗೆ ನಮ್ಮ ಪತ್ತೇದಾರಿ ಏಜಂಟರಿಂದ ತಿಳಿದು ಬಂದಂತೆ ರಾವ್‌ಸಾಹೇಬರು ವಾರಕ್ಕೆ ಎರಡು ಡಜನ್ ಕೂದಲುರಂಗಿನ ಬಾಟ್ಲಿಗಳನ್ನು ತರಿಸುತ್ತಾರಂತೆ. 'ಕೂದಲು ಕಪ್ಪಾದರೆ ವಯಸ್ಸು ಒಪ್ಪಾದೀತೆ?' ಎಂದು ಅವರಿಗೆ ಪ್ರಶ್ನೆ ಮಾಡಿದ್ದೇವೆ."

"ಅಯ್ಯೋ ಛಂಡರೇ, ಮೂರ್ತಿರಾಜನ್ ಅವರು ಆಜನ್ಮ ಸಮಾಜಸೇವೆಗೆ, ಅದರಲ್ಲೂ ಮಹಿಳೆಯರ ಉನ್ನತಿಗೆ ಹೋರಾಡಿದ್ದಾರೆ. ಅಂತಹ ಮತಿಗೆಟ್ಟ ಮಾತಿದು!" ಎಂದು ರಂಗರಾಯ ಮರುಗಿದ. ಅಲ್ಲದೆ ಈ ಅವಲೋಕನ ಓದಿದ ಮೇಲೆ ತನಗೆ ಒಂದ

ರಾವಸಾಹೇಬರ ಪತ್ರದ ಅರ್ಥ ಪೂರ್ಣ ಆಯಿತು. ಮತ್ತೊಂದು ವಿಷಯ:

"ನಮ್ಮೂರ ಬಸ್-ಸರ್ವಿಸಿನವರು ಇನ್ನು ಮುಂದೆ ಎಷ್ಟು ಪ್ಯಾಸೆಂಜರರನ್ನೂ ತಮ್ಮ ಗಾಡಿಗಳಲ್ಲಿ ತುಂಬಲು ಅಡ್ಡಿ ಇಲ್ಲ. ಅಷ್ಟೇ ಏಕೆ, ಅವರು ಏನು ಅಪಘಾತ ಮಾಡಿದರೂ ಕ್ಷಮ್ಯವಾಗುವ ಒಂದು ಪೇಟೆಂಟು ಹೊರಟಿದೆ. ಅದೇನೆಂದು ನಮ್ಮ ವಾಚಕರು ಕೇಳುವುದು ಸ್ವಾಭಾವಿಕ. ಅದು ಇಷ್ಟೇ: ಪೋಲೀಸ್ ಅಮಲ್ದಾರರು ಸದಾ ತಮ್ಮ ಪ್ರಾಯವೇಟ್ ರೂಮಿನಲ್ಲಿ ಬಸ್ ಮಾಲೀಕರಿಗೆ ಇಂಟರವ್ಯೂ ಕೊಡುತ್ತಾರೆ. ಚೆಕ್ಕುಗಳು ಮಾತ್ರ ಸ್ವೀಕೃತ ವಾಗುವುದಿಲ್ಲ. ರೋಖುಹಣದ ಪ್ರಶ್ನೆ. ಪಾವತೀ ಮಾತ್ರ ಕೇಳಬಾರದು. ಎಲ್ಲ ಕೆಲಸ 'ಸುರಳೀತ' ಸಾಗುವುದು. ಈ ರೀತಿ ಪಡೆದ ಪೇಟೆಂಟಿನಿಂದ ಬಸ್ಸಿನವರು ತಮಗೆ ಬೇಕಾದಷ್ಟು ಜನ ಪ್ರಯಾಣಿಕರನ್ನು ತುಂಬುವುದಲ್ಲದೆ, ಬೇಡವಾದ ಯಾವತ್ತೂ ಜನ-ದನ-ಕರುಗಳ ಮೇಲೆ ಲೈಸೆನ್ಸಿನಿಂದ ಬಸ್ಸು ಓಡಿಸಬಹುದು. ಇಷ್ಟೇ ಮೈಲು ವೇಗದಿಂದ ಹೋಗುವುದು ಎಂಬ ಕಟ್ಟಳೆ ಇಲ್ಲ. ತಿಳಿಯುವುದು."

"ಸರಿ, ಸರಿ, ಈ ಎಲ್ಲ ಜನರಿಂದ ದಾವೇ ಬಂದರೆ ಸಪ್ತಕೋಟಿ ನಾರಾಯಣರಿಗೂ ಎದುರಿಸಲು ಸಾಧ್ಯವಿಲ್ಲ" ಎಂದು ರಂಗರಾಯ ಉಸ್ಸೆಂದು ಉಸಿರ್ಗರೆದು, ಒಂದು ಗ್ಲಾಸು ನೀರನ್ನು ತರಹೇಳಿದ. ನೀರು ಬರುವವರೆಗೆಂದು ಮತ್ತೆ ಓದಲಾರಂಭಿಸಿದ:

"ಹೋದ ವರ್ಷ ಉದ್ಘಾಟನವಾದ ನಮ್ಮೂರ ಮಾಡೆಲ್ ಹೈಸ್ಕೂಲಿನಲ್ಲಿ, ಇನ್ನು ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಉತ್ತೀರ್ಣವಾಗುವುದು ಅತಿ ಸುಲಭ ಅನುಕೂಲತೆಯಾಗಿದೆಯೆಂದು ತಿಳಿದುಬಂದಿದೆ. ಅದೇನೆಂದರೆ: ತಮಗೆ ಕಠಿನವಾದ ವಿಷಯವುಳ್ಳ ವಿದ್ಯಾರ್ಥಿಗಳು ಆಯಾ ವಿಷಯ ಕಲಿಸುವ ಶಿಕ್ಷಕರಲ್ಲಿ ಕೋಚಿಂಗಕ್ಕೆ ಹೋಗಬೇಕು. ಎಲ್ಲಾ ವಿಷಯ ಕಠಿನವಾಗಿದ್ದವರಿಗೆ ಮಾತ್ರ ಸ್ವಲ್ಪ ತೊಂದರೆ; ಆದರೆ ಅಸಾಧ್ಯ ಮಾತಲ್ಲ, ದುಃಸಾಧ್ಯ!"

ರಂಗರಾಯ ನೀರು ಕುಡಿದು, ಬೆವರು ಒರಸಿಕೊಂಡು, ಫೋರಮನ್ ಜಾನಕೀರಾಮನನ್ನು ಕರೆದು ಆರ್ಡರ್ ಫಾರ್ಮು ತರಲು ಹೇಳಿದ. '**ಸಮಾಜದರ್ಪಣ**'ದ ವಿಶೇಷಸಂಚಿಕೆಯ ಓದನ್ನು ಸಶೇಷವಾಗಿ ಬಿಟ್ಟು, ಮೊದಲು ಆ ಸಂಚಿಕೆ ಬರೆದ ಆ ಇಬ್ಬರು ತರುಣರ ಹೆಸರು–ವಿಳಾಸಗಳನ್ನು ನೋಡಿಕೊಂಡ. ವಿಲಂಬ ಮಾಡದೆ ಟೊಪ್ಪಿಗೆಯನ್ನು ಕೂಡ ಮರೆತು, ಆ ವಿಳಾಸಕ್ಕೆ ಹೊರಟ. ದಾರಿಯಲ್ಲಿ ಅತ್ತಿತ್ತ ಹುಡುಕುತ್ತ ಎಲ್ಲ ಮನೆಗಳನ್ನೂ, ನಂಬರುಗಳನ್ನೂ ನೋಡಿದ. ಎಲ್ಲೆಲ್ಲಿಯೂ ಆ ವಿಳಾಸದ ನಂಬರು ಇರಲಿಲ್ಲ, ಎರಡು ಗಂಟೆಯವರೆಗೂ ಹುಡುಕಿ ತುಂಬಾ ದಣಿದುಕೊಂಡು, ಒಂದು ಕಾಫೀ ಕ್ಲಬ್ ಹೊಕ್ಕು ಚಹ ಕುಡಿಯುತ್ತ ಕುಳಿತಾಗ, ಕಿಡಕಿಯೊಳಗಿಂದ ಹೊರಗೆ ನೋಡಿದ. ಅದೇ ನಂಬರಿನ ಮನೆ! ಕಾಫೀ ಕ್ಲಬ್ಬಿನ ಮ್ಯಾನೇಜರನನ್ನು ವಿಚಾರಿಸಿದ:

"ಆ ಮನೆಯಲ್ಲಿ ಯಾರಿದ್ದಾರೆ, ತಮಗೆ ಪರಿಚಯವುಂಟೋ?" ಎಂದು ಕೇಳಿದ.

"ಯಾವುದು, ಆ ಮನೆಯೋ? ಅಲ್ಲಿ ಈಗ ಎರಡು ತಿಂಗಳಿಂದ ಯಾರೂ ಇಲ್ಲ. ಅದು ನಾನು ಕಟ್ಟಿಸಿದ ಮನೆಯೇ. ಗಿರಾಕಿಗಳೇ ಸಿಕ್ಕಿಲ್ಲ ಸ್ವಾಮಿ! ಏಕೆ ತಮಗೆ ಭಾಡಿಗೆಗೆ ಹಿಡಿಯಬೇಕಾಗಿದೆಯೆ?" ಎಂದು ತುಂಬಾ ಆಶಾಜನಕವಾಣಿಯಲ್ಲಿ ಕೇಳಿಬಿಟ್ಟ.

ಸರಿ, ರಂಗರಾಯನಿಗೆ ಬಾಡಿಗೆ ಇಲ್ಲದ ಮನೆಗೆ ಹೋಗುವ ಸಂಭವವಿದ್ದುದರಿಂದ, ಚಹದ ರೊಕ್ಕ ಕೊಟ್ಟು ಮನೆಗೆ ಹೊರಟ. ರಾತ್ರಿ ೮ ಗಂಟೆಯಾಗಿತ್ತು. ಊಟಮಾಡದೆ ಮಲಗಿಬಿಟ್ಟ. ರಂಗರಾಯನ ಹೆಂಡತಿ ಕಮಲಾಬಾಯಿ ಎಂಬುದು ತಮಗೆ ಹೇಳಿದ್ದೇನಷ್ಟೇ. (ದೊಡ್ಡವಳಾದ್ದರಿಂದ ಬಾಯಿ ಎಂದು ಕರೆಯುತ್ತೇನೆ.) ಕಮಲಾಬಾಯಿ ಬಂದು "ಊಟಕ್ಕೆ ಏಳಿರಿ" ಎಂದು ಹೇಳಿದಳು.

"ಇನ್ನೆಲ್ಲಿಯ ಊಟ; ಇನ್ನು ಮುಂದೆ ಓಟ!" ಎಂದು ಸಂದಿಗ್ಧವಾಗಿ ಹೇಳಿದ.

"ಅದೇನು ಹಾಗೆಂದರೆ? ಮುಂಜಾನೆ ಹತ್ತುಗಂಟೆಗೆ ಉಂಡವರು ಮಧ್ಯಾಹ್ನ ಚಹಕ್ಕೆ ಕೂಡ ಬಂದಿದ್ದಿಲ್ಲ; ಈಗ ಮತ್ತೆ ಊಟವಿಲ್ಲವೆಂದು ಹೇಳುತ್ತೀರಿ .... ಅಂಥದೇನು ವಿಶೇಷ?"

"ವಿಶೇಷ ಬಹಳವಿದೆ, ಕಮಲೇ ವಿಶೇಷ! ಆ ವಿಶೇಷಸಂಚಿಕೆಯಿಂದಲೇ ಹಾಳಾದೆ! ಇನ್ನು ಪ್ರೆಸ್ಸು ಮಾರಿಬಿಟ್ಟು ದೇಶಾಂತರ ಹೊರಡುವುದೊಂದು ಬಾಕಿ! ನಾಳೆಯೆ ಮುಗಿಸಿ ಬಿಡುತ್ತೇನೆ ಖರೀದಿ! ಬಂದಷ್ಟು ಬರಲಿ; ಸರಕಾರೀ ಸವಾಲಿಗೆ ನಿಂತರೆ ನಾಲ್ಕಾಣೆ ಬರಲಿಕ್ಕಿಲ್ಲ! ಅಯ್ಯೊ, ವಿಶೇಷ ಸಂಚಿಕೆಯೇ! ಆಹಾ, ಏನು ಸಮಾಜಾ, ಏನು ದರ್ಪಣಾ! ಅಬ್ಬಾ ಲುಕ್ಸಾನ್ ದಾವೆ! ಕೋರ್ಟುಫೀ! ವಕೀಲರ ಫೀ! ಸಾಕ್ಷಿಗಳ ಭತ್ತೇ! ಬಾಡಿಗಿಲ್ಲದ ಮನೀ! ಅಯ್ಯೋ ಹಾಳಾದೆ! ಪ್ರೆಸ್ಸಿನಿಂದಾ ಪೂರ್ಣ ಹಾಳಾದೆ!" ಎಂದು ರಂಗರಾಯ ಇನ್ನೂ ಏನೇನೋ ಆವೇಶದಲ್ಲಿ ಅನ್ನುತ್ತಿದ್ದ. ಕಮಲೆಗೆ ಭಯವೂ ಆಶ್ಚರ್ಯವೂ ಆಯಿತು. "ಮುಂಜಾನೆಸಲ್ಲಿ ನೆಟ್ಟಗಿದ್ದ ಗಂಡನಿಗೆ ರಾತ್ರಿಯ ಹೊತ್ತಿಗೆ ಏನು ಹಿಡಿಯಿತು..? ದೆವ್ವವೋ, ಭೂತವೋ" ಎಂದು ಶಂಕಿಸುತ್ತ ರಂಗರಾಯನನ್ನು ಸಂತಸವಿಡುವ ಸ್ವರದಲ್ಲಿ "ಏನಿದೆಲ್ಲಾ ಹರಟೆ?" ಎಂದು ಕೇಳಿದಳು

"ನಾನು ಹೇಳುವುದು ಹರಟೆಯಲ್ಲಾ ನಾಳೆ ಕೈಯಲ್ಲಿ ಬರುವುದು ಪಟ್ಟಿ. ತಿಳಿಯಿತೇ!" ಎಂದು ಇದ್ದ ವೃತ್ತಾಂತವನ್ನೆಲ್ಲ ಹೇಳಿಬಿಟ್ಟ.

ಕಮಲಾಬಾಯಿಗೆ ಆಗ ತಿಳಿಯಿತು ಗಂಡನ 'ಹುಚ್ಚು'! "ನಾಳೆಯ ಮಾತು ನಾಳೆಗಿರಲಿ, ಇಂದು ಊಟಾ ಅಷ್ಟು ಮಾಡಿಯೇ ಬಿಡಬೇಕು" ಎಂದು ತನ್ನ ಪ್ರೇಮದ ಮಾತಿನಿಂದೆಬ್ಬಿಸಿ, ರಂಗರಾಯನನ್ನು ಉಣಿಸಿಬಿಟ್ಟಳು. ರಾತ್ರಿ ರಂಗರಾಯನಿಗೆ ನಿದ್ರೆಯೆ ಇರಲಿಲ್ಲ. ಆಗಾಗ ಸ್ವಲ್ಪ ಜಂಪು ಹತ್ತಿದಾಗ ಕನಸಿನಲ್ಲಿ ಕೇವಲ ಕೋರ್ಟಿನ ಚಿತ್ರಗಳೇ ಕಾಣುತ್ತಿದ್ದುವು. "ನಾನು ನಿರಪರಾಧಿ, ಜೀಯಾ!" ಎಂದು ಗಟ್ಟಿಯಾಗಿ ಕೂಗಿಕೊಂಡು ಆಗಾಗ ಎಚ್ಚರು ಹೊಂದುತ್ತಿದ್ದ. ಅಂತೂ ಒಮ್ಮೆ ಬೆಳಗಾಯಿತು. ಚಹ ತೆಗೆದುಕೊಂಡು ಪ್ರೆಸ್ ಕೊಳ್ಳುವ ಗಿರಾಕಿಗಳನ್ನು ಹುಡುಕುತ್ತ ಹೋಗಬೇಕೆನ್ನುವಷ್ಟರಲ್ಲಿ, ಪೋಸ್ಟ್‌ಮನ್ ಬಂದು ಒಂದು ಪತ್ರ ಕೊಟ್ಟ. ಇದು ಒಂದು "**ಸಮಾಜದರ್ಪಣ**"ದ

ಮುಖ ನೋಡಿಕೊಂಡ ಗಿರಾಕಿಯದೇ ಇರಬಹುದೆಂದು ಭಯಪಡುತ್ತ ಒಡೆದು ಓದಿದ.

" ವಿ. ವ. ಸಂಘ, ಅನ್‌ಲಿಮಿಟೆಡ್, ಅನ್ ರಜಿಸ್ಟರ್ಡ್ ಆಫೀಸಿನಿಂದ—

'ಭಾರತಮುದ್ರಣಾಲಯ'ದ ಮುದ್ರಕ ರಂಗರಾಯರಲ್ಲಿ:— ಮೇಲ್ಕಂಡ ಸಂಘದ ಕಚೇರಿಗೆ ತಾವು ಈ ದಿನ ಪ್ರಾತಃಕಾಲ ಎಂಟು (S. T.) ಗಂಟೆಗೆ ಸರಿಯಾಗಿ ಹಾಜರಿರಬೇಕು. ವಿಷಯ— 'ಸಮಾಜ ದರ್ಪಣ'ದ ವಿಶೇಷಸಂಚಿಕೆಯ ಸಲುವಾಗಿ.

ಸೆಕ್ರೆಟರಿ ವಿ. ವ. ಸಂಘ."

ರಂಗರಾಯನಿಗೆ ಏನೋ ಒಂದು ದೊಡ್ಡ ಭಾರವನ್ನು ಇಳಿಸಿದಂತಾಯಿತು. 'ಅಂತೂ ಸಿಕ್ಕಿತು ಒಮ್ಮೆ ಈ ಚಂಡಾಳ ಚೌಕಳಿಯ ಜನ'ಎಂದುಕೊಂಡು, ಲಗುಬಗೆಯಿಂದ ಸಂಘಕ್ಕೆ ಹೊರಟ. ಹೋಗುತ್ತ ದಾರಿಯಲ್ಲಿ 'ಈ ಬೇಜವಾಬ್ದಾರಿ ಮಂಡಳಿಯ ಸೇಡನ್ನು ಯಾವ ರೀತಿಯಿಂದ ತೀರಿಸಿಕೊಳ್ಳಲಿ?' ಎಂದು ಲೆಕ್ಕ ಹಾಕುತ್ತ ಹೊರಟಿದ್ದ; ಅಷ್ಟರಲ್ಲಿಯೆ ಸಂಘದ ಬೋರ್ಡು ಕಂಡಿತು. ಒಳಗೆ ಬಂದು ನೋಡಿದ. ಮೇಜಿನ ಹಿಂದೆ ಹಾಕಿದ ಖುರ್ಚಿಯಲ್ಲಿ ಪಲ್ಲೂನೇ ಕುಳಿತಿದ್ದ. ಅವನ ಸಲಹೆಗಾರ ಸಂಪಾದಕೀಯ ಮಂಡಳಿಯವರು ಪಕ್ಕದ ಖುರ್ಚಿಯಲ್ಲಿ ಕುಳಿತಿದ್ದರು. ತನ್ನಲ್ಲಿಗೆ ಬಂದು ವಿಶೇಷ ಸಂಚಿಕೆಗೆ ಆರ್ಡರ್ ಕೊಟ್ಟ ಯುವಕರೂ ಅಲ್ಲಿಯೆ ಕುಳಿತಿದ್ದರು. 'ಒಳ್ಳೇ ಸಿಕ್ಕರು ಪೋಲಿಗಳು' ಎಂದು ತುಂಬಾ ಆವೇಶದಿಂದ ರಂಗರಾಯ, ಏನೇನನೊ ಮಾಡಬೇಕು ಎಂದುಕೊಳ್ಳುತ್ತಲೆ ಮುಂದಕ್ಕೆ ಬಂದ. ಅಷ್ಟರಲ್ಲಿ ಪಲ್ಲೂ ಖುರ್ಚಿಯಿಂದೆದ್ದು, ವಿನಯಪೂರ್ವಕವಾಗಿ ರಂಗರಾಯನಿಗೆ ಒಂದು ಖುರ್ಚಿಯ ಮೇಲೆ ಕೂಡಲು ಬಿನ್ನವಿಸಿದ. ಅನಂತರ ಈ ರೀತಿ ಸಂಘದ ಕಾರ್ಯ ನಡೆಯಿತು:

"ಸಂಘದ ಸದಸ್ಯರೇ ಮತ್ತು ರಂಗರಾಯರೇ, ಈ ದಿನದ ಕಾರ್ಯಕ್ರಮಕ್ಕೆ ನನ್ನನ್ನು ಅಧ್ಯಕ್ಷನನ್ನಾಗಿ ಮಾಡಿದ್ದು ನಿಮ್ಮ ಸೌಜನ್ಯದ ಚಿಹ್ನೆ. ಕಾರ್ಯಕ್ರಮದ ಮೇರೆಗೆ ಇಂದಿನ ಸುವರ್ಣಪದಕ ಹಂಚುವ ಕೆಲಸ ನನ್ನದಿದ್ದು, ಆ ಪದಕಗಳನ್ನು ನಮ್ಮ ಮಿತ್ರರಾದ ಶ್ರೀಯುತ ಶಾಂತಾರಾಮ ಹಾಗೂ ಕಾಂತಾನಾಥ ಇವರಿಬ್ಬರಿಗೂ ಸಲ್ಲಿಸಲು ನನಗೆ ತುಂಬಾ ಅಭಿಮಾನವೂ, ಆನಂದವೂ ಎನಿಸುತ್ತಲಿದೆ. ಸದರೀ ಪದಕಗಳು ನಮ್ಮ ಸಂಘದ ಸ್ಪರ್ಧೆಯಲ್ಲಿ ಉತ್ತೀರ್ಣರಾದದ್ದಕ್ಕಾಗಿ ಎಂದು ನಿಮಗೆ ಬೇರೆ ಹೇಳಬೇಕಾಗಿಲ್ಲ. ಆದರೂ ನಮ್ಮ ಸನ್ಮಾನ್ಯ ಅತಿಥಿಗಳಾದ ಶ್ರೀಯುತ ರಂಗರಾಯರಿಗೆ ಈ ವಿಷಯವನ್ನು ಸಾಂಗವಾಗಿ ಹೇಳಬೇಕಾಗಿದೆ. ಎರಡೇ ಮಾತಿನಲ್ಲಿ ಹೇಳಿ ತಮ್ಮ ವೇಳೆ ಉಳಿಸುತ್ತೇನೆ.

ರಂಗರಾಯರೆ, ಈ ನಮ್ಮ ಸಂಘವು ವಿನೋದವರ್ಧಕ ಸ್ಪರ್ಧೆಯೊಂದನ್ನು ಹೊರಡಿಸಿದೆ. ಆ ಸ್ಪರ್ಧೆಯಲ್ಲಿ ಯಶಸ್ವಿಯಾಗುವವರು ಯಾವುದಾದರೂ ಒಂದು ರೀತಿಯಿಂದ, ಯಾವನೇ ಒಬ್ಬ ಗೃಹಸ್ಥನಿಗೆ ರಾತ್ರಿ ನಿದ್ರೆ ಬಾರದಂಥ ಒಂದು ಸಮಸ್ಯೆಯನ್ನು ತಂದು ಒಡ್ಡುವ ವಿನೋದ ಸನ್ನಿವೇಶವನ್ನು ಏರ್ಪಡಿಸಬೇಕು. ಅಂತಹ ರೀತಿಯನ್ನು ನಮ್ಮ ಮಿತ್ರದ್ವಯರು 'ಸಮಾಜದರ್ಪಣ'ದ ವಿಶೇಷ ಸಂಚಿಕೆಯ ಮೂಲಕ ಕಾಣಿಸಿದ್ದಾರೆ. ಆದರಿಂದ ಅವರು ಯಶಸ್ವಿಗಳಾಗಿದ್ದಾರೆ. ಆ ಯಶಸ್ಸಿನ ಪಾತ್ರಮಾಡಿಕೊಳ್ಳಲಿಕ್ಕೇ ತಮ್ಮನ್ನು ಕರೆಯಿಸಿದುದು. ತಮಗೆ ನಿನ್ನೆಯ ರಾತ್ರಿ ನಿದ್ರೆ ಹತ್ತಿದ್ದಿತೆ ?

"ಬರೇ ನಿದ್ದೆ ಹತ್ತಿದ್ದಿಲ್ಲ ಇಷ್ಟೇ ಯಾಕೆ ಪಲ್ಲೂ, ಅದರ ಕೂಡ ಬುದ್ಧಿಯೂ ಹೋಗಿತ್ತು!" ಎಂದು ರಂಗರಾಯ ಹೇಳಿದ.

"ಸರಿ, ಹೀಗೆಂದಮೇಲಂತೂ ನಮ್ಮ ಮಿತ್ರರು ಪೂರ್ಣವಾಗಿಯೇ ಯಶಸ್ವಿಗಳಾದಂತಾಯಿತು; ತುಂಬಾ ಸಂತೋಷದ ಸಂಗತಿ!"

"ನಿಮಗೆಲ್ಲಾ ಸಂತೋಷ ಸರಿ, ಆದರೆ ನನ್ನ ಗತಿ? ಈ ಎಲ್ಲಾ ಗಿರಾಕಿ ಅಬ್ಸೊಲ್ಯುಟ್ಲಿ ಕ್ಯಾನ್ಸ್.."

"ಅದೇ, ಅದನ್ನೇ ಹೇಳಲಿಕ್ಕೆ ಕರೆಯಿಸಿದ್ದು ತಮ್ಮನ್ನು! ಆ ಪತ್ರಗಳೆಲ್ಲವೂ ನಮ್ಮ ಮಿತ್ರದ್ವಯರಿಂದಲೇ ಬರೆಯಲ್ಪಟ್ಟಿವೆ. ಅದೂ ಅವರ ಸ್ಪರ್ಧೆಯಲ್ಲಿಯ ಒಂದು ಭಾಗ. ಅಲ್ಲದೆ ಆ ವಿಶೇಷಸಂಚಿಕೆಯಲ್ಲಿ ಬರೆದ ಎಲ್ಲ ಹೆಸರುಗಳೂ, ಪಾತ್ರಗಳೂ ಕೇವಲ ಕಲ್ಪನೆಯವು. ಮುದ್ರಿಸಿದ ಸಂಚಿಕೆಗಳು ಯಾರಲ್ಲಿಯೂ ಹೋಗಿಲ್ಲ. ನಾನೂ ವೃತ್ತಪತ್ರದ ಸಂಪಾದಕನಿದ್ದೇನಷ್ಟೇ? ನನಗೂ ಗೊತ್ತಿದೆ ನನ್ನ ಜವಾಬ್ದಾರಿ! ಸಂಚಿಕೆ ಪ್ರಕಟವಾಗಿದ್ದರೆ ಬರಿಯೆ ಮುದ್ರಕರಿಗೇಕೆ, ಪ್ರಕಾಶಕರಿಗೂ ಸಂಕಟ. ಅಂತೆಯೆ ಎಲ್ಲವನ್ನೂ ಗೌಪ್ಯವಾಗಿಟ್ಟಿದೆ; ನಮ್ಮ ಮುಖ್ಯ ಉದ್ದೇಶವೊಂದು ಮಾತ್ರ ಸಾಧಿಸಿದೆ. ನಮ್ಮ ಸಂಘದ ಆದರ್ಶವೇ ಅದು. ದೈನಿಕವ್ಯವಹಾರದ ಏಕನಾದ ಕೇಳಿ ಬೇಜಾರುಗೊಂಡ ಮಾನವರಲ್ಲಿ ಕೆಲವೊಂದು ನಾದಭಿನ್ನತೆಯನ್ನು ಒದಗಿಸಿಕೊಡುವುದು; ಅದೇ ನಮ್ಮ ಗುಟ್ಟು! ಇನ್ನು ಈ ಸಂದರ್ಭದಲ್ಲಿ ತಮಗೆ ಕೊಟ್ಟ ಚಿಂತೆ-ಕಷ್ಟಗಳನ್ನೂ ಸಂಘವು ಮರೆತಿಲ್ಲ.."

"ಏನೂ ಬೇಡ ನನಗೆ ಮಹಾತ್ಮಾ, ಸುಮ್ಮನೆ ಮನೆಗೆ ಬಿಟ್ಟುಬಿಡಿರಿ ನನ್ನನ್ನು! ನಾನೇ ತಮಗೆ ತುಂಬಾ ಕೃತಜ್ಞನಾಗಿದ್ದೇನೆ; ಇನ್ನು ಮುಂದೆ ಮಾತ್ರ ನನ್ನ ನರತಿ ಬೇಡ, ಇಷ್ಟೇ ನನ್ನ ಪ್ರಾರ್ಥನೆ!" ಎಂದು ರಂಗರಾಯ ಹೊರಡಲನುವಾದ.

"ಛೇ, ಛೇ, ಹಾಗೆಂದರೇನು ರಂಗರಾವ್? ವಿನೋದವರ್ಧಕ ಸಂಘವು ತಮಗೆ ಒಂದು ರಜತಪದಕವನ್ನು ಸಲ್ಲಿಸುತ್ತದೆ. ಅದು ತಾವು ಕಷ್ಟಪಟ್ಟುಕೊಂಡದ್ದಕ್ಕೆ. ಅಲ್ಲದೆ ಇನ್ನು ಮುಂದೆ ನಮ್ಮ 'ಸಮಾಜ-ದರ್ಪಣ' ವನ್ನು ಇಮ್ಮಡಿಯಾಗಿ ಹೆಚ್ಚಿಸುವುದಿದ್ದು, ಆದರ ಆರ್ಡರನ್ನೂ ಇದೇ ಮೀಟಿಂಗಿನಲ್ಲಿ ತಮಗೆ ಸಲ್ಲಿಸಲಾಗಿದೆ" ಎಂದು ಪಲ್ಲೂ ರಂಗರಾಯನಿಗೆ ಪದಕವನ್ನರ್ಪಿಸಿದ.

* * *

ಗಿರಾಕಿಗಳು ನಾಗಪ್ಪನಿಗೂ ಮತ್ತು ಡಿಕ್ಕಿಗೂ ಪುನಃ ಚಹ ತರಿಸಿ "ಸಮಾಜ-ದರ್ಪಣ" ವನ್ನು ಕೊಂಡಾಡಿ, ಹೊಟ್ಟೆ ತುಂಬ ನಗುತ್ತ ಮನೆಗೆ ತೆರಳಿದರು. ನಾಗಪ್ಪನೂ ಊಟದ ವೇಳೆಯಾಯಿತೆಂದು ಡಿಕ್ಕಿಯೊಂದಿಗೆ ತನ್ನ ಮೋಲಿಗೆ ಹೊರಟ.

—— ೦ ——

ಸ್ವಲ್ಪದರಲ್ಲಿ ಸ್ವಾರಸ್ಯ

ಅ ರ್ಥಾ ತ್

ಕುದುರೆಮೋತಿ ಕನಕಾಚಾರ್ಯರು

ಕನಕಾಚಾರ್ಯರ ದೃಷ್ಟಿ ತೀರ ಸಂಕುಚಿತವಾದುದೆಂದು ಎಷ್ಟೋ ಜನರು ಹಳಿಯಬಹುದು. ಆದರೆ ಅನೇಕ ಅಭಿಮಾನಿಗಳ ದೃಷ್ಟಿಗೆ ಆಚಾರ್ಯರು ಸಾವಿರ ನಾಲಗೆಗಳ ಶೇಷ, ಸಾವಿರ ಕಣ್ಣಿನ ಇಂದ್ರ, ಸಾವಿರ ಕೈಗಳ ವಿಷ್ಣು ಸರ್ವೋತ್ತಮ! ಅಹುದೋ ಅಲ್ಲವೋ ಎಂಬುದನ್ನು ಅವರ ಅನುಭವಸಿದ್ಧ ಮಾತುಗಳಿಂದಲೆ ಮನದಟ್ಟು ಮಾಡಿಕೊಳ್ಳಿ!

★

ನಮ್ಮ ಕನಕಾಚಾರ್ಯರ ಮಾತಿನ ರೀತಿಯನ್ನು ನಿಮಗೆ ತಿಳಿಪಡಿಸುವೆನಷ್ಟೆ: ಅವರ ಹೆಸರಿನದೂ ಒಂದು ರೀತಿ ಇದೆ. ಮೊನ್ನೆ ಬಳ್ಳಿಯ ಮೋಜಿನಿಂದ ಆಚಾರ್ಯರು ಅದನ್ನು ಪ್ರಸ್ತಾವಿಸಿದರು. ಒಮ್ಮೆಲೆ ೧೫–೨೦ ದಿವಸಗಳ ವರೆಗೆ ಆಚಾರ್ಯರ ದರ್ಶನವೇ ನಮಗಿರಲಿಲ್ಲ. ತರುವಾಯ ಅಕಸ್ಮಾತ್ ಅಂಗಡಿಯಲ್ಲಿ ಸೇರಿದ ನಮ್ಮ ಸಭೆಗೆ ಸ್ವಾರಿ ಬಿಜಯಂಗೈಸಿತು. 'ಏನು, ಆಚಾರ್ಯರೆ, ಇಷ್ಟು ದಿವಸ ತಮ್ಮ ಭೆಟ್ಟಿ ಇಲ್ಲ; ತಮ್ಮ ಅಧ್ಯಕ್ಷತೆಯ ಅಲಂಕಾರವಿಲ್ಲದೆ ನಮ್ಮ ಸಭೆ ವಿಧವೆಯ ಹಣೆಯಂತಾಗಿತ್ತು' ಎಂದು ನಮ್ಮಲ್ಲಿ ಒಬ್ಬ ಕಿಡಿಗೇಡಿ ನುಡಿದ. ಆಚಾರ್ಯರು ಕೂಡಲೆ ಹಿರಿಯತನದಿಂದ 'ಹೆ, ಅವಲಕ್ಷಣಾ! ಅಲಂಕಾರಕ್ಕಾದರೂ ಮುತ್ತೈದೆಯನ್ನು ಕರೆಯಬಾರದೆ?' ಎಂದರು .. ಪ್ರಾರಂಭವಾಯಿತು ನಗೆಗಡಲಿನ ಅಲ್ಲೋಲಕಲ್ಲೋಲ .. 'ದಿನಾಲು ಭೆಟ್ಟಿ ಕೊಡುತ್ತಿದ್ದೆನಲ್ಲೊ ಎಲ್ಲಾರಿಗೂ!' ಎಂದರು .. ನಮಗೆ ಯಾರಿಗೂ ಅರ್ಥವಾಗಲಿಲ್ಲ .. ಆಗ ಬಂದಿತು ಮುಂದಿನ ವಾಗ್ಬಾಣ: 'ನಿಮ್ಮ ಬ್ರಾಹ್ಮಣ್ಯ ನಷ್ಟ ಆಗಿದೆ ಎಂಬುದು ಸ್ಪಷ್ಟ ಇದೆ. ನನ್ನ ಮಾತಿನ ಅರ್ಥ ನಿಮಗಾಗೋದಿಲ್ಲವಲ್ಲ! ನವರಾತ್ರಿ, ದಿನಾಲು ಭೆಟ್ಟಿ ಕೊಡುತ್ತಿದ್ದಿಲ್ಲವೆ ಊಟದ ಹೊತ್ತಿಗೆ ಹಯಗ್ರೀವ? — ಕುದುರೆ ಮೋತಿ?' ಎಂದರು .. ಆಚಾರ್ಯರ ಮಾತಿನಲ್ಲಿ ಇಂತಹ ಬ್ರಾಹ್ಮಣ್ಯದ ವರ್ಚಸ್ಸಿದೆ .. ಒಮ್ಮೆ "ನಿಮಗೆ 'ಕುದುರೆ ಮೋತಿ' ಎಂಬ ಹೆಸರು ಹೇಗೆ ಬಂದಿತು?" ಎಂದು ಕೇಳಿದ್ದಕ್ಕೆ 'ನನ್ನನ್ನು ಸಂಸಾರಟಾಂಗಾಕ್ಕೆ ಹೂಡಿದೆ' ಎಂದಿದ್ದರು!

ರೂಢಿಯಂತೆ ಮಾತಿಗೆ ಮಾತು ಬೆಳೆದು ಮತ್ತೆ ಯುದ್ಧದ ಮಾತಿಗೆ ಪ್ರಾರಂಭವಾಯಿತು. 'ಅಂತೂ ಚೇಂಬರಲೇನರು ಎಷ್ಟೊಂದು ಅಬ್ಬರಿಸಿದರೂ ಪೋಲಂಡದೇಶ ಹಾಳಾಯಿತಲ್ಲ?' ಎಂದ ಒಬ್ಬ. 'ಅದಕ್ಕೇ ಸಂಸಾರ ಅನ್ನೋದು, ಮಗೂ' ಎಂದು ಆಚಾರ್ಯರು ದನಿ ಎಳೆದರು. ನಮಗೆಲ್ಲರಿಗೂ ಆಶ್ಚರ್ಯ. ಪೋಲಂಡ ಹಾಳಾಗುವುದು ಆಚಾರ್ಯರ ಸಂಸಾರಶಾಸ್ತ್ರಕ್ಕೆ ಹೇಗೆ ಅನ್ವಯಿಸಿತು? .. ಆಚಾರ್ಯರೆ ಮುಂದುವರಿಸಿದರು — 'ಘಟಸ್ಥಾಪನದ ದಿವಸ ಹೋಳಿಗೆ ಮಾಡಬೇಕೊ, ಕರಿಗಡಬು ಮಾಡಬೇಕೊ ಅಂತ ವಾದಕ್ಕೆ ಬಿದ್ದಿತು ನಮ್ಮಲ್ಲಿ; ಆಗ ನಾನು ಸಂಧ್ಯಾವಂದನೆ ಮಾಡತಿದ್ದೆ, ಆಕೆ ಗಡಿಗೆಯಲ್ಲಿ ಮೊಸರು ಕಡೆಯುತ್ತಿದ್ದಳು. ವಿಷಯ ವಾದಕ್ಕೆ ಬಿದ್ದರೂ ಕೊನೆಗೆ ಪೆಟ್ಟು ಗಡಿಗೆಗೆ ಬಿದ್ದಿತು, ಗಡಿಗೆ ಹಾಳಾಯಿತು. ಸಂಸಾರ ಅಂದರೆ ನಡೆಯೋದೇ ಇದೆಲ್ಲ. ಗಡಿಗೆ ಹಾಳಾಯಿತಲ್ಲ — ಅಂದರೆ? ವಾದ ಮುಗಿದು ಮರುದಿವಸ ಮುಂಜಾವಿಗೆ ಬಂದಿತು ಮತ್ತೊಂದು ಗಡಿಗೆ. ಈಶ್ವರನ ಇಚ್ಛಾ ಇಲ್ಲದೆ ಯಾವುದನ್ನು ಯಾರು ಹಾಳು ಮಾಡುವರು?' ಎಂದು ಒಮ್ಮೆಲೆ ಭಕ್ತಿವಿನೀತರಾಗಿ ಆಕಾಶದಲ್ಲಿ ದೃಷ್ಟಿಯನ್ನಿಟ್ಟರು ಆಚಾರ್ಯರು. ನಾವೂ ಅವರ ಮಾತಿನ ಚಾತುರ್ಯದಿಂದ ಪರವಶರಾಗಿ ಮೇಲೆಯೆ ನೋಡಿದೆವು ....

'ಯುದ್ಧ-ಯುದ್ಧ ಅಂತ ಸಂದು ಆಗೋದರೊಳಗ ಸಂತೇ ಹೋಯಿತಲ್ಲರೀ ಆಚಾರ್ರೆ!' ಎಂದು ಶಿಷ್ಯನಂತೆ ಯಾವನೋ ಪ್ರಶ್ನೆ ಮಾಡಿದನು. ಆಚಾರ್ಯರ ಮುಖ ಆಕಾಶದಿಂದ ಕೆಳಗಿಳಿಯಿತು. ಕೆಲಹೊತ್ತು ಭಕ್ತಿಸಾಯುಜ್ಯದಿಂದ ಪ್ರಪಂಚವನ್ನೆ

ಮತಿಶವರಂತೆ ಶೂನ್ಯದೃಷ್ಟಿಯಿಂದ ನೋಡಿ.. ಆ ಮೇಲೆ ಒಮ್ಮೆಲೆ ಎಚ್ಚತ್ತವರಂತೆ — 'ಯುದ್ಧ? ಯುದ್ಧ ಮುಗಿಯಿತು? ಯಾರು ಹೇಳಿದರು? ನಮಗೂ ನಿಮಗೂ ಹಾಗೆ ಅನಿಸಬಹುದು; ಆದರೆ ನೆರೆಮನೆಯವರಿಗೆ ಕೇಳಿರಿ — ಯುದ್ಧ ಮುಗಿದಿದೆ ಏನು?' ಎಂದರು.

ಕನಕಾಚಾರ್ಯರ ಕಣ್ಣಿಗೆ ಜಗತ್ತೆಲ್ಲ ಗಂಡ-ಹೆಂಡಂದಿರ ಸಂಸಾರದಷ್ಟು ಸಂಕುಚಿತವಾಗಿ ಕಾಣುವುದು ಎಂದು ಯಾರಾದರೂ ಟೀಕಿಸಬಹುದು. ಇಂದು ಜಗತ್ತನ್ನೆ ಸುಡಬಹುದಾದ ಈ ಕೊಲೆಗಡಕ ಯುದ್ಧದ ಸ್ವರೂಪ ಇಂತಹ 'ಮನೆಮೂಲೆ-ಬಾಕ'ರಿಗೆ ತಿಳಿಯಬಹುದೆ — ಎಂದು ಕಲಿತವರೂ ತಿರಸ್ಕಾರದಿಂದ ಮೂಗು ಏರಿಸಬಹುದು. ಅಂತಹ ಮಾತುಗಳಿಗೆ ನಾನಾದರೂ ಯಾವ ಉತ್ತರವನ್ನು ಕೊಡಲಿ? ಬೇಕಾದವರು ಸಾಕ್ಷಾತ್ತಾಗಿ ಕನಕಾಚಾರ್ಯರ ಸನ್ನಿಧಿಯ ಅನುಭವವನ್ನು ಪಡೆಯಲಿ, ಆ ಮೇಲೆ ಮಾತನಾಡಲಿ—ಎಂದಿಷ್ಟೆ ನಾನು ಹೇಳಬಲ್ಲೆ. ಆಷ್ಟೊಂದು ಅಭಿಮಾನ ನಮ್ಮೆಲ್ಲರಿಗೂ ಇದೆ ಆಚಾರ್ಯರಿಗಾಗಿ. ನಮ್ಮ ಪಾಲಿಗಂತೂ ಅವರು ಸಾವಿರ ನಾಲಗೆಗಳ ಶೇಷ, ಸಾವಿರ ಕಣ್ಣುಗಳ ಇಂದ್ರ, ಸಾವಿರ ಕೈಗಳ ವಿಷ್ಣುಸರ್ವೋತ್ತಮ. ವಿಮಾನಗಳಿಂದ ಬಾಂಬುಗಳನ್ನು ಒಗೆಯುವರೆಂದು ನಾವೂ ನೀವೂ ದಿನಾಲು ಓದುವುದಿಲ್ಲವೆ? ಅವುಗಳ ಪರಿಣಾಮವೇನೊ ಅನರ್ಥ ಎಂದು ಸ್ಥೂಲವಾಗಿ ನಮಗೆ ಗೊತ್ತು. ಆದರೆ ಹೆಚ್ಚಿನ ಸೂಕ್ಷ್ಮ ಕಲ್ಪನೆ ನಮಗಾಗಲಿ ನಿಮಗಾಗಲಿ ಇದೆಯೆ? ಒಂದು ದಿವಸ ಇದೇ ಮಾತು ಆಚಾರ್ಯರಿದ್ದಾಗ ನಡೆಯಿತು. ತಟ್ಟನೆ ಹೇಳಿದರು — 'ಬಾಂಬು-ಬಾಂಬು ಎಂದರೇನು? ಅದಕೇಕಿಷ್ಟು ಹೆದರಿಕೆ? ತಲೆಯಮೇಲೆ ಅಕ್ಕಿಕಾಳುಗಳನ್ನು ಒಗೆಸಿಕೊಂಡ ವೀರರು ನಾವು' ಎಂದರು! ನಮಗೂ ತಾತ್ಕಾಲಿಕವಾಗಿ ಆಚಾರ್ಯರಿಗಿರಬಹುದಾದ ಅಜ್ಞಾನಕ್ಕಾಗಿ ಕನಿಕರಹುಟ್ಟಿತು. ಬಾಂಬುಗಳ ಘಾತುಕ ಸ್ವರೂಪವೆತ್ತ? ಅಕ್ಕಿಕಾಳುಗಳ — ಇಷ್ಟರಲ್ಲಿ ಆಚಾರ್ಯರೆ ಮಾತನಾಡಿದರು– 'ಅಕ್ಕಿಕಾಳುಗಳ ಹೊಡೆತದಿಂದ ಸಂಸಾರಕ್ಕೆ ಪ್ರಾರಂಭವಾಗುವುದು. ಹೊಟ್ಟೆ-ಬಟ್ಟೆ- ಮಕ್ಕಳು-ಮರಿ-ಬೇನೆ-ಬೇಸರಿಕೆ-ಬಡತನ — ಇವುಗಳನ್ನೆಲ್ಲಾ ಪ್ರಜ್ವಲಿಸುವ ಅಕ್ಕಿಕಾಳುಗಳ ಮುಂದೆ, ನೀರಿನಿಂದ ಆರಿಸಬಹುದಾದ ಬೆಂಕಿಯನ್ನು ಹೊತ್ತಿಸುವ ಬಾಂಬುಗಳೆಂದರೆ, ಹನುಮಂತನ ಮುಂದೆ ಹಾರುಗುಬ್ಬಿ' ಎಂದರು! ಸತ್ಯವಾದ ಮಾತು ಎಂದರೂ ಅಹುದು, ಅತಿಶಯೋಕ್ತಿ ಎಂದರೂ ಅಹುದು. ಅದಕ್ಕಲ್ಲವೆ ನಾವು ಕನಕಾಚಾರ್ಯರ ಕೈಗೊಂಬೆಗಳಾದದ್ದು?

'ಈ ಸಲದ ನವರಾತ್ರಿ–ದೀಪಾವಳಿಗಾಗಿ ಯುದ್ಧ ತಡೆಯಲ್ಪಟ್ಟಿದೆ' ಎಂದರು ಆಚಾರ್ಯರು. 'ಜಗತ್ತಿನಲ್ಲಿ ಇಂತಹ ಅನಾಹುತ ನಡೆದಾಗ ನೀವು ಹಬ್ಬವನ್ನು ಹೇಗೆ ಆಚರಿಸಿದಿರಿ?' ಎಂದು ಯಾರೊ ಕೇಳಿದ್ದಕ್ಕೆ 'ಸೆಂಟ್ರಲ್ ಗವರ್ನ್ಮೆಂಟಿಗೆ ಕೇಳಿರಿ' ಎಂದು ಉತ್ತರ ಕೊಟ್ಟಿದ್ದರು ಆಚಾರ್ಯರು. ಅವರು ತಮ್ಮ ಮನೆಯವರಿಗೆ ಸೆಂಟ್ರಲ್ ಗವರ್ನ್ಮೆಂಟ್ ಎನ್ನೋದರಲ್ಲೂ ಒಂದು ಮೋಜು ಇದೆ. 'ಅರ್ಧದಿವಸ ಆ ಹುಗೆಯ ಒಲೆಯ ಮುಂದೆ, ಅರ್ಧದಿವಸ ಕತ್ತಲೆಯ ಮನಕಿನೊಳಗೆ–ಹೀಗೇ ದಿಲ್ಲಿ-ಸಿಮ್ಲಾಗಳ ವ್ಯವಸ್ಥೆ ಇರೋದರಿಂದ 'ಸೆಂಟ್ರಲ್ ಗವರ್ನ್ಮೆಂಟ್' ಎಂದು ಹೇಳುವರು! ಆದೂ ಹೋಗಲಿ; ಕಾಂಗ್ರೆಸ್ ಸರಕಾರಗಳು ರಾಜೀನಾಮೆ ಕೊಟ್ಟ ದಿವಸ ಆಚಾರ್ಯರ ಮುಖದಲ್ಲಿ ಉದ್ವಿಗ್ನತೆಯ ಕಳೆ ಇದ್ದಿತು. ಅವರಿಗೂ ರಾಜಕಾರಣಕ್ಕೂ ಎಂದಿಗೂ ಸಂಬಂಧವಿದ್ದಿರಲಿಲ್ಲ, ಆದರೂ ಈ ದಿವಸ ಇವರು ರಾಜೀನಾಮೆಗೆ ಕಳೆಗುಂದಿದರಲ್ಲ–ಎಂದು ನಮಗೆ ಆಶ್ಚರ್ಯವಾಯಿತು. ಅಷ್ಟರಲ್ಲಿ 'ಈ ಹೊತ್ತು ರಾತ್ರಿ ಇಲ್ಲಿಯೆ ಆಟವಾಡೋಣ, ನಾನು ಮನೆಗೆ ಹೋಗೋದಿಲ್ಲ' ಎಂದರು. ನಮಗೆ ಇನ್ನಿಷ್ಟು ಕುತೂಹಲ– ಮನೆಯಲ್ಲಿ ಹೊಸ ತೇನೊ ಪ್ರಕರಣವಾಗಿದೆ ಎಂದು. ಮುಂದೆ ಕೆಲಹೊತ್ತಿನಲ್ಲಿ 'ಛೆ! ಇದೇನು ಹುಚ್ಚು? ನಾನು ಮನೆಗೆ ಹೋಗಲೇಬೇಕು' ಎಂದರು. ನಮಗೆ ತಡೆಯದಂತಾಯಿತು. 'ಯಾಕೆ, ಆಚಾರ್ಯರೆ, ರಾಜೀನಾಮೆಗಳಿಂದ ಇಷ್ಟು ಉದ್ವಿಗ್ನರಾಗಿರುವಿರಾ?' ಎಂದರು ನಮ್ಮಲ್ಲೊಬ್ಬರು. ಬೆದರಿದ ಕುದುರೆಯಂತೆ ಕಾಲುಜಾಡಿಸಿದರು ಆಚಾರ್ಯರು: 'ರಾಜೀನಾಮೆ? ಎಲ್ಲಿಯ ರಾಜೀನಾಮೆ? ನಿಮಗೆ ಯಾರು ಹೇಳಿದರು?' ಎಂದರು. 'ಯಾರು ಹೇಳುವುದು? ಎಲ್ಲ ಪತ್ರಿಕೆಗಳಲ್ಲೂ ಪ್ರಕಟವಾದ ಸುದ್ದಿಯದು.' ಇಷ್ಟೆಂದ ಕೂಡಲೆ ಘೊಳ್ಳನೆ ನಕ್ಕರು– 'ಅಯ್ಯೊ, ಹುಚ್ಚಗಳಿರಾ, ಆ ರಾಜೀನಾಮೆ? ಅದರದೇನು ಸಂಬಂಧ? ನನ್ನ ಮಾತು ಹೇಳಿದೆ. ನನ್ನ ಮನೆಯಲ್ಲಿ ನಾನು ಸ್ವತಂತ್ರ ಅಂತ ನೀ ಒಪ್ಪಿಕೊಳ್ಳದಿದ್ದರೆ ನಾ ಮನೆ ಬಿಟ್ಟು ಹೋಗ್ತೀನಿ– ಅಂದು ಆಕೆಯಮೇಲೆ ಸಿಟ್ಟಾಗಿ ಹೊರಬಿದ್ದಿದ್ದೆ. ಅದು ಹುಚ್ಚು-ಎಂದೆ; ಹಾಗಾದರೆ– ನಿಮಗೆ ಗೊತ್ತಿರಲಿಲ್ಲ–ಹಹ' ಎಂದು ನಗೆಯಿಂದ ಸಾದ್ಯಂತವಾಗಿ ಅಂದು ಮನೆಯಲ್ಲಿ ನಡೆದುದೆಲ್ಲವನ್ನೂ ಬಣ್ಣಿಸಿದರು.

ಆಚಾರ್ಯರ ಮಾತುಗಳಿಂದ ಮನೆಯ ಹೆಂಡತಿಗಾಗಿ ಅವರಿಗೆ ತಿರಸ್ಕಾರ ಅಥವಾ ಅಸಹ್ಯ ಇದ್ದಿತು ಎಂದು ಯಾರೂ ತಿಳಿಯಬಾರದು. ಅವರು ಹಳೆಯ ಪದ್ಧತಿಯವರಾದರೂ ಕಳಕಳಿಯ ಹೃದಯದವರು– ಎಂಬುದನ್ನು ನಾವೇ ಎಷ್ಟೋ ಸಲ ಮರೆಯುತ್ತಿದ್ದೆವು. ಒಂದು ದಿವಸ ತಾವೇ ಹೇಳಿದರು:– 'ನಿಂ ಜೇಂಬರೀ-

ಎಲ್ಲಕ್ಕಿಂತ ಅಗ್ಗ! ಎಲ್ಲಕ್ಕಿಂತ ಉತ್ತಮ!
ಮಿಕ್ಕ ಬ್ಲೇಡುಗಳಿಂದ ಅಚ್ಚುಕಟ್ಟಾದ ಹೆಚ್ಚಿನ ಕೆಲಸ!



೪ ಆಣೆಗೆ ೧೦ ಬ್ಲೇಡು!

ಲೀನಾನಲ್ಲಿ ಒಂದು ತಪ್ಪು ಇದೆ ನೋಡಿರಿ. ಅವಶ್ಯ ಬಿದ್ದಾಗ ನಾಲ್ಕು ಏಟು ಕೊಟ್ಟರೆ ಏನು ತಪ್ಪು? ನಿನ್ನೆ ನಮ್ಮ ಮನೆಯೊಳಗೆ ಆ ಪ್ರಸಂಗ ಬಂದಿತು, ಅನಿವಾರ್ಯ. ಹೆಂಗಸರ ಜೋಡಿ ವಾದಕ್ಕೆ ಬೀಳಬಾರದು. ಈಗ ನೋಡಿರಿ, ಈಗ; ತಾವೊಂದು ಮಾತಾಡಿದರ ಹಿಟ್ಲರನೂ ಒಂದು ಮಾತಾಡತಾನ. ಯುದ್ಧ ಅಂದರೆ ಯುದ್ಧ. ನಿನ್ನೆ ನಾಲ್ಕು ಏಟು ಕೊಟ್ಟೆ; ಮುಗಿಯಿತು ವಾದ; ಈವತ್ತು ನಡೆಯಿತು ಮತ್ತೆ ಮುಂದಿನ ಸಂಸಾರ ' ಎಂದು ಎರಡೂ ಸುದ್ದಿಗಳನ್ನು ಒಂದೇ ಉಸಿರಿನಲ್ಲಿಯೆ ಬಣ್ಣಿಸಿದರು. ಹೆಂಡತಿಗಾಗಿ ಪ್ರೇಮವಿದೆ, ಸಾಕಷ್ಟಿದೆ. ' ಆದರೂ ಒಮ್ಮೊಮ್ಮೆ ಮನೆಯೊಳಗೆ ಹುಡುಗರ ಸಲುವಾಗಿ ಆದ್ರೂ ಹೆಂಡತೀನ್ನ ಹೊಡೆಯಬೇಕಾಗತದಲ್ಲ? ಹೆಂಡತಿಗೆ ನಾ ಹೆದರಿದರೆ, ನನಗೆ ಹುಡುಗರು ಹೇಗೆ ಹೆದರಬೇಕು? ವ್ಯವಹಾರ ಅದು. ಅದಕೇ ಅನಿವಾರ್ಯ ಅಂದೆ.' ಎಂದರು ಮತ್ತೊಮ್ಮೆ.

' ಜರ್ಮನರಂತಹ ಪ್ರತಿಭಾಸಂಪನ್ನ ಜನರು ಹಿಟ್ಲರನಂತಹ ಅಸಂಸ್ಕೃತನನ್ನು ಹೇಗೆ ಮುಂದಾಳು ಮಾಡಿಕೊಂಡರೊ! ' ಎಂದು ಅನೇಕರು ಆಶ್ಚರ್ಯಪಡುವರು. ಆದರೆ ಕನಕಾಚಾರ್ಯರಿಗೆ ಅದರಲ್ಲಿ ಎಳ್ಳಷ್ಟೂ ಆಶ್ಚರ್ಯವಿಲ್ಲ. ನನ್ನಂತಹ ನಾಸ್ತಿಕರನ್ನು ಭಗವಂತನೇ ನನಗೆ ಹೆಂಡತಿಯಾಗಿ ಕೊಟ್ಟ ಹಾಗೆ- ಇಂತಹಾದ್ದನ್ನ (ಹೆಂಡತಿಗಾಗಿ ಅವರು ಹೇಳುವ ರೀತಿ) ಹ್ಯಾಗೆ ಮದುವೆಯಾದೆ? ಆಶ್ಚರ್ಯದ ವಿಷಯ ಅಲ್ಲ ಇದು, ಈಶ್ವರೀ ಸಂಕೇತ ಇದು ' ಎನ್ನುವರು. ಪರಮಾತ್ಮನಲ್ಲೂ ಆಚಾರ್ಯರಿಗೆ ಅತ್ಯಂತ ಶ್ರದ್ಧೆ; ' ಯುದ್ಧ ಸುರುವಾಯಿತು, ಆಚಾರ್ಯರೆ ' ಎಂದು ಮೊದಲನೆಯ ಸಲ ನಾವು ನುಡಿದಾಗ ' ಈಶ್ವರೀಸಂಕೇತ ಅದು ' ಎಂದೇ ಉತ್ತರ ಕೊಟ್ಟಿದ್ದರು. ಆಗ ನಮಗೆ ಅದರ ಅರ್ಥವಾಗಿರಲಿಲ್ಲ. ಮೊನ್ನೆ ಸಂದರ್ಭಾನುಸಾರ ಆ ವಿಷಯವನ್ನು ಅವರೇ ಪ್ರಸ್ತಾವಿಸಿದರು. ' ತನಗೆ ಮಕ್ಕಳೆಷ್ಟು ಅಂತ ನಮ್ಮಾಕೆ ಒಬ್ಬ ಭಿಕ್ಷುಕನಿಗೆ ಭವಿಷ್ಯ ಕೇಳತಿದ್ದಳು. ಅದನ್ನು ನೋಡಿ ನಿಮ್ಮ ಜರ್ಮನಿಯವರು ರಶಿಯಾದವರ ಕೈಹಿಡಿದರು ಅಂತ ಹೇಳತಿದ್ದಿರಲ್ಲ, ಅದರ ನೆನಪಾಯಿತು. ಯಾಕಂದರೆ, ಮುಟ್ಟಿದರೆ ಮೈಲಿಗೆ ಅಂತ ನಮ್ಮಾಕೆ ಧೋತರಾ ಸುತ್ತಿಕೊಂಡು ಕೈಯೊಳಗ ಕೈ ಕೊಟ್ಟಿದ್ದಳು. ಆಶ್ಚರ್ಯ ಏನು ಇದರಲ್ಲಿ? ಯಾರ ಮನಸ್ಸು ಯಾರಿಗೆ ತಿಳಿಯೋದು? ಅದೆಲ್ಲಾ ಈಶ್ವರೀ ಸಂಕೇತ. ಅಷ್ಟ್ಯಾಕೆ? ಹಿಂದಕೊಮ್ಮೆ ಯುದ್ಧ ಸುರುವಾಯಿತು ಅಂದಿದ್ದಿರಲ್ಲ- ನೀವು? ಚೇಂಬರ್ಲೀನಾಗ ಪಾಪವಾತ್ವ ಅಂದೆವಲ್ಲ ನಾವು? ಈಗ ನಿಜವಾಗಿಯೆ ಯುದ್ಧ ಸುರುವಾಯಿತೂ ಅಂತೆ ಅದೇ ಚೇಂಬರ್ಲೀನಾರು ಕೈಕಾಲು ಸತ್ತು ಹಾಸಿಗೀನೆ ಹಿಡಿದಾರಂತೆ— '

' ಅವರಿಗೆ ಸಂಧಿವಾತ (rheumatism) ಅಂತೆ. ಪಾಪ! ' ಎಂದು ಯಾರೋ ನಾಲಗೆ ಲೊಚಕರಿಸಿದರು. ' ಆದರೇನಾಯಿತು? ಹಾಸಿಗೆ ಮ್ಯಾಲಿಂದ ಬೈದಾಡೋದೇ ಯುದ್ಧ ಅಂತ ಯಾರಿಗೆ ಗೊತ್ತಿತ್ತು! ಅದಕೇ ಹೇಳಿದೆ ಅದೆಲ್ಲಾ ಈಶ್ವರೀಸಂಕೇತ ' ಎಂದವರೇ ನಸ್ಯ ಏರಿಸುವ ಘರ್ಘರ ಸದ್ದಿನಲ್ಲಿ ವಿಮಾನದಂತೆ ಎದ್ದು ಲಗುಬಗೆಯಿಂದ ಹೋದರು ಆಚಾರ್ಯರು.

ಹುಳು

ಶ್ರೀ. ಸಾಲಿ ರಾಮಚಂದ್ರರಾಯರು

೧

ಹುಳು ಕುತಂತ್ರದ ರಚನೆ-
ಯೊಳು ಮನವನಿರಿಸಿ ತ-
ನ್ನಳವಿನೊಳು ವಿಶ್ವವನೆ
ಎಳೆಯಲೆಳಸಿತು, ನೋಡ!

೨

ಒಂದಿಂತು ಬಗೆಯಲಿ-
ನ್ನೊಂದು ಹುಳು ಕುದಿದು ಬೇ-
ರೊಂದು ತಂತ್ರವನೆಸಗ-
ಲೆಂದು ಬಂದುದು ಮುಂದೆ!

೩

ಎಳಸಿ ಜಗದೊಡೆತನಕೆ-
ಹುಳುಗಳಿಂತೆನಿತೊ ಮ-
ಣ್ಣೊಳಗಿಂದ ಮೇಲೆದ್ದು
ಬಳಸಿದುವು ಭೂಮಿಯನು!

೪

ಹೊರಗೆ ಬಂದಿಂತು ಮ-
ತ್ಸರದೆ ಮೆಯ್ಮರೆತು ಹ-
ಲ್ಗಿರಿದರಿಚುತೊಂದನೊಂ-
ದಿರದಿಕ್ಕಲೆಸಗಿದುವು!

೫

ಅಳಿದುವೆನಿತೆನಿತೊ ಹುಳು-
ಗಳು ಕಾದುತುರುಳಿ ಮ-
ಣ್ಣೊಳಗೆ ನರಳಿದುವಳಿಯ-
ದುಳಿದ ಹುಳುಗಳು ನೊಂದು!

೬

ಮರೆಯಲಾಗುವುದೆ ಜಗ-
ದೆರೆಯನನು ಕಡೆಗಣ್ಚಿ?
ಅರಿವು ಕಿಡುವುದು ಮೊದಲು;
ಮರಣವಪ್ಪುದು ಬಳಿಕ!

ದುರ್ದೈವಿ ಕರ್ಣಾಟಕ!

ಶ್ರೀ. ಮತ್ತಿಹಳ್ಳಿ ರಾಘವೇಂದ್ರರಾವ್
ಬಿ. ಎ., ಬಿ. ಎಲ್.

ಅವರಿಂದ

(ನನ್ನ ಕನಸು)

**ಹದಿನೇಳು ಹ ... ದಿನೆಂಟು ವರ್ಷಗಳಿಂದ ನಡೆದು ಬಂದು, ಒಂದು ಹದಕ್ಕೆ ಬಂದಿದ್ದ ಏಕೀ-
ಕರಣ ಚಳವ ... ಳಿಯನ್ನು, ಯಾವುಯಾವುವೋ ಸ್ವಾರ್ಥದಿಂದ ಪ್ರೇರಿತರಾದ ಕನ್ನಡಜನರೇ
ಇಂದು ತುಳಿ ... ದು ಹುಡಿಗೂಡಿಸಲು ನಿಂತಿದ್ದಾರೆ. ಇಂತಹ ಸಮಯದಲ್ಲಿ ನಿಜವಾದ
ಕರ್ಣಾಟ ... ಕಲಭಿಮಾನಿ, ತನ್ನ ಹಾರಯಿಕೆಯ ಹಳವಂಡಗಳನ್ನೇ ಕಾಣುವನಲ್ಲದೆ
ಇನ್ನೇತರ ಕನಸನ್ನು ಕಾಣುವನು ?**

★

ಏಕೀಕೃತ ಕರ್ಣಾ
ಾತು..! ಮುಂದಿಟ್ಟ
ಪ್ರಸಂಗವು ದಗಿದೆಯ
ಟ್ಟ ಬೇಲಿಯೇ ಎದ್ದು
ನೆಯ ಕಳ್ಳನನ್ನು ಹಿಡಿ
ಲ್ಲ..! ಜಾತಿ-ಮತ-ಪ
ಕೀಕರಣ ಚಳವಳಿಗಾ
ಂದು ಜಾಹೀರ್ ವ್ಯಾ
ರಿದುಂಬಿಸುವವರು
ಂಜಿ, ಆದರ ವಶವಾದರೆ
ಾತೆಯನ್ನು ಯಾವುದಾ
ಂಡೇ ಇರುತ್ತದಲ್ಲಾ
ನ್ನಡಿಯೊಳಗಿನ ಗಂಟಿನಂ
ಾದ ವಿಚಾರತರಂಗಗಳು ನ
ದ್ದವು; ಸ್ವಲ್ಪ ಹೊತ್ತಿನ
ಲ್ಲಿ ಕನಸೊಂದನ್ನು ಕಂಡೆ

*

ನಾನು, ನನ್ನ ತಾಯಿ ಒ
ನಘೋರವಾದೊಂದು ಒ
ದು, ಕಾಲುಗಳಿಗೆ ಭಾರವಾ
ತು. ಉದಯದಿಂದ ಸಾ
ಡೆಯುವ ಕೆಲಸವನ್ನು ಮಾಡಿ
ಒ ಅನ್ನವು ದೊರೆಯುತ್ತಿರ.
ಇಬ್ಬರೂ ಸೊರಗಿದೆವು.
ಅಯ್ಯೋ, ನಮ್ಮ ಅವಸ್ಥೆ
ವನ ಹೀಗೆ ಈ ಬಂಧನದಲ್ಲಿರ
ನ್ನರೇನು ? ಎಷ್ಟು ಐಶ್ವರ್ಯ
ಾದೂ ಆಗಲಿಲ್ಲವೇ ! " ಎ

ರ್ಣಾಟಕದ ಧ್ಯೇಯವು ಸಾಧ್ಯವಾಗುವ
ಹೆಜ್ಜೆಯನ್ನು ಹಿಂದಕ್ಕೆ ತೆಗೆಯುವ
ವೇ..? ಹೊಲವನ್ನು ಕಾಯಲಿಕ್ಕೆಂದು
ಫಲವನ್ನು ಮೆಯ್ದರೆ ಗತಿಯೇನು. ?
ಯುವುದೆಂದರೆ ಮಹದೇವನಿಗೂ ಸಾಧ್ಯ
ಂಧಗಳನ್ನು ಲೆಕ್ಕಿಸದೆ ಒಮ್ಮನಸ್ಸಿನಿಂದ
ತನು-ಮನ-ಧನಗಳನ್ನು ಅರ್ಪಿಸೋಣ
ವ್ಯಾನದಲ್ಲಿ ಎದೆತಟ್ಟಿಕೊಂಡು ಜನರನ್ನು
ೂಡ, ಮತಾಭಿಮಾನವೆಂಬ ಪಿಶಾಚಿಗೆ
ಉಪಾಯವೇನು...? ಕರ್ಣಾಟಕ-
ಾದರೊಂದು ರೋಗವು ಮನೆ ಮಾಡಿ
..! ಒಂದುಗೂಡಿಸ ಕರ್ಣಾಟಕವು
ಾಯಿತಲ್ಲಾ..! " ಎಂಬಿವೇ ಮೊದ
ನನ್ನ ಮನಸ್ಸಿನಲ್ಲಿ ಬಂದು ಹೋಗುತ್ತಿ
ಮೇಲೆ ನನಗೆ ನಿದ್ರೆ ಬಂದಿತು. ನಿದ್ರೆ
ನು :

* *

ಂದು ಸೆರೆಮನೆಯಲ್ಲಿ ಇದ್ದೆವು. ನಾವು
ಪಾದನೆಯ ಮೇಲೆ ಶಿಕ್ಷೆ ಹೊಂದಿದವ
ವ ಸಂಕೋಲೆಗಳನ್ನು ಹಾಕಲಾಗಿ
ಸಂಕಾಲದ ವರೆಗೆ ನಾವು ಕಲ್ಲು
ಇವನ್ನ ಮಾಡುತ್ತಿದ್ದೆವು. ಹೊಟ್ಟೆ
ಲ್ಲಿ ಪರ ದುಡಿತ ಹೆಚ್ಚಾದುದರಿಂದ
ಇಂದಿನ ವ್ಯಾಯಿ ನಡುನಡುವೆ
ಂಡವು ಬಿಟ್ಟಾಯಿತಲ್ಲ! ನಾವೆಷ್ಟು
ಗೆ ಎಷ್ಟು ಒಳಗ
ಆಪತ್ತಿಗೆ
ನನಗೆ

ಆಕೆಯ ಹಂಬಲದ ಮರ್ಮವೇ ಗೊತ್ತಾಗಿರಲಿಲ್ಲ. ಸೆರೆಮನೆಯ ಜೀವನವೇ ಸ್ವಾಭಾವಿಕವೆಂದು ನನಗೆನಿಸುತ್ತಿತ್ತು. ಒಂದಾನೊಂದು ದಿವಸ ಸೆರೆಮನೆಯ ಸಂದರ್ಶಕನಾದ ಒಬ್ಬ ಅಧಿಕಾರೇತರ ಮುದುಕನು ಬಂದು " ಅಯ್ಯೋ, ಮಗುವೇ! ಇನ್ನೂ ನಿನ್ನ ಹೆತ್ತಮ್ಮನನ್ನು ಸೆರೆಮನೆಯಿಂದ ಬಿಡುಗಡೆ ಮಾಡಿಲ್ಲವೇ ? ನಿಮ್ಮ ಮನೆತನದ ಹಿರಿಮೆಯನ್ನು ಮರೆತುಬಿಟ್ಟೆಯೇ ? " ಎಂದು ನನ್ನ ತಲೆಯ ಹೊಸಕಲ್ಪನೆಯನ್ನು ಹಾಕಿದನು. ನನಗೆ ಏನೋ ಒಂದು ಧೈರ್ಯ ಬಂದಿತು. ಏನೋ ಒಂದು ಉಪಾಯದಿಂದ ನಾನು ನನ್ನ ಶೃಂಖಲೆಗಳನ್ನು ಕಡಿದು ಹಾಕಿ, ನನ್ನ ತಾಯಿಯನ್ನು ಸೆರೆಮನೆಯಲ್ಲಿಯೆ ಬಿಟ್ಟು, ನಾನೊಬ್ಬನೆ ಮುಂದಕ್ಕೆ ಓಡಿದೆನು; ಜೈಲಿನ ಒಂದು ಭಾಗವನ್ನು ಬಿಟ್ಟು ಇನ್ನೊಂದು ಭಾಗಕ್ಕೆ ಹೋದೆನು; ಅಲ್ಲಿ ಇಬ್ಬರು ಮುದುಕರೂ ಒಬ್ಬ ನಡುವಯಸ್ಸಿನ ಗೃಹಸ್ಥನೂ ನನ್ನನ್ನು ಕಂಡು ' ಸಂಘಟನೆಯಾಗಲಿ! ಚಳವಳಿಯು ಅಳಿಯಲಿ ! ' ಎಂದು ಸಿಂಹಗರ್ಜನೆ ಮಾಡಿದರು. ನನಗೆ ಮತ್ತಿಷ್ಟು ಹುರುಪು ತುಂಬಿತು. ಮುಂದುಮುಂದಕ್ಕೆ ಅಡಿಯಿಡುತ್ತ ಎಡ ಹುತ್ತ ಸಾಗಿದೆನು. ಮೊದಲಿಗಿಂತ ವಿಸ್ತಾರಪ್ರದೇಶವು ಕಾಣುತ್ತ ಬಂದಿತು. ಆದರೆ ಬಂಧನದಿಂದ ಪಾರಾಗುವ ಮಾರ್ಗವೇ ಕಾಣಲಿಲ್ಲ. ಆಶೆ-ನಿರಾಶೆ, ಆಸ್ಥೆ-ಅನಾಸ್ಥೆ ಇವು ನನ್ನಲ್ಲಿ ಮೂಡಿ ಮುಳುಗಲಿಕ್ಕೆ ಪ್ರಾರಂಭ ಮಾಡಿದುವು. ಹೀಗೆಯೆ ೧೯ ವರ್ಷಗಳು ಆಗಿ ಹೋದುವು. ಇನ್ನೂ ನನಗೆ ಹೆದ್ದಾರಿಯೇ ಕಾಣಲಿಲ್ಲ. ಬಂಡಿಯ ಜಾಡನ್ನು ಹಿಡಿದು ಹೋದೆನು. ಸ್ವಲ್ಪ ದೂರ ಹೋದ ನಂತರ ಪ್ರವಾಹವೊಂದು ಬಂದಿತು. ಅದರ ಹೆಸರೇನೆಂದು ಕೇಳಿದೆನು. ಇದಕ್ಕೆ ' **ಜಾತ್ಯಂಧತೆ ಅಥವಾ ಮತಾಭಿಮಾನದ ಹೊಳೆ** ' ಎಂದು ಹೇಳಿದರು. ದಿಟ್ಟತನದಿಂದ ದಾಟುವುದಕ್ಕೆ ಸಾಹಸ ಮಾಡಿದೆನು; ನೆಳವು ಬಹಳವಾಗಿದ್ದುದರಿಂದ ದಾರಿಯನ್ನು ತಪ್ಪಿ ಬೇರೆ ದಾರಿಯನ್ನು ಹಿಡಿದು ದಂಡೆಗೆ ಸೇರಿದೆನು. ಕಣ್ಣು ಕುರುಡಾದರೂ ಬಾಯಿ ಕುರುಡಲ್ಲವೆಂದು ಮಾರ್ಗವನ್ನು ಕೇಳುತ್ತಾ ಮುಂದಕ್ಕೆ ಸಾಗಿದೆನು; ನಮ್ಮ ಊರು ಬಹಳ ರಮ್ಯವಾಗಿದೆ; ಅಲ್ಲಿ ನಾವು

ಪಟ್ಟಣಿರೊಟ್ಟಿಯನ್ನು ತಿಂದುಕೊಂಡಿದ್ದರೂ ಸುಖವಾಗಿರುತ್ತೇವೆ ಯೆಂದು ನನ್ನ ತಾಯಿ ಆಗಾಗ ಎನ್ನುತ್ತಿರುವ ಮಾತುಗಳು ನನಗೆ ಕಿವಿಗೆ ಕಟ್ಟಿದಂತೆ ಆಗಿದ್ದುವು. ಅಲ್ಲಲ್ಲಿ ಹಳ್ಳಿಗಳನ್ನು ಹಾಯ್ದು ಹೋಗುವಾಗ ಜನರು 'ಅಯ್ಯೋ ಇವನು ಹುಚ್ಚನು; ಇವನ ಊರು ಎಲ್ಲಿಯೋ ಇದೆಯಂತೆ. ಇದುವರೆಗಾಗಿ ನಾವಂತೂ ಅಂತಹ ಊರಿನ ಹೆಸರನ್ನು ಕೂಡ ಕೇಳಿಲ್ಲ' ಎಂದು ಅನ್ನುತ್ತಿದ್ದರು. ಇನ್ನು ಕೆಲವು ಹಳ್ಳಿಗರು 'ಅಪ್ಪಾ, ಇಷ್ಟು ಮೆಲ್ಲನೆ ನೀನು ಕಾಲುನಡಿಗೆಯಿಂದ ಹೋದರೆ ಎಂದಿಗೆ ನಿಮ್ಮ ಊರನ್ನು ಸೇರುತ್ತೀಯೆ?' ಎಂದು ಕೇಳುತ್ತಿದ್ದರು. ಹಾಗೆಯೆ ಒಂದು ಪಟ್ಟಣಕ್ಕೆ ಬಂದೆ. ಅಲ್ಲಿ ಒಬ್ಬ ಪ್ರತಿಷ್ಠಿತ ಗೃಹಸ್ಥರು ಭೆಟ್ಟಿಯಾದರು. ಅವರು ಕೆಲವು ದಿವಸ ದಿವಾನರಾಗಿದ್ದು ಈಗ ದೊಡ್ಡ ಪ್ರಾಂತಕ್ಕೆ ಮಂತ್ರಿಗಳಾಗಿರುವರೆಂದು ತಿಳಿದುಬಂದಿತು. ಅವರು ನನ್ನನ್ನು ಕಂಡು, ನೀನು ನಿಮ್ಮ ಊರಿಗೆ ಹೋಗುವುದೇ ಸಾಧ್ಯವಿಲ್ಲ. ನಿನ್ನ ಕೈಯಲ್ಲಿ ಕಾಸು ಇಲ್ಲ; ಮೈಯಲ್ಲಿ ಶಕ್ತಿಯಿಲ್ಲ. ನಿನ್ನ ಸಾಹಸವನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ಹೋಗಯ್ಯ ಹೋಗು!' ಎಂದು ಜರಿದರು. ಮುಂದಕ್ಕೆ ಹೋದ ಹಾಗೆಲ್ಲ ಇದೇ ಒಕ್ಕಣಿಕೆಯ ಮಾತುಗಳು ಜನರಿಂದ ಹೊರಟುವು. 'ನಿಮ್ಮ ಊರಿಗೆ ಹೋಗುವ ಹಂಬಲವನ್ನು ಸದ್ಯಕ್ಕೆ ಬಿಟ್ಟು ನಿಮ್ಮ ಅಜ್ಜಿಗೆ ಬಂದಿರುವ ವಿಪತ್ತನ್ನು ಒಗೆ ಹರಿಸು!' ಎಂದು ಲೋಕಪ್ರಿಯ ಪ್ರಾತಿನಿಧಿಕ ಸಂಸ್ಥೆಯವರು ಹೇಳಿದರು. ನನಗೆ ಮುಂಗೂದಾಣವನ್ನು ಹಾಕಿದಂತಾಯಿತು. ನನ್ನಂತೆಯೇ ಇನ್ನೊಬ್ಬ ದೇಶಿಗನು ತನ್ನ ತಾಯಿನಾಡನ್ನು ಹುಡುಕುತ್ತಿರುವುದನ್ನು ಕೇಳಿದೆನು.

ಆತನಿಗೆ ಆ ಭಾಗದ ಮುಖ್ಯಾಧಿ[...] ಕೊಟ್ಟಿದ್ದರಂತೆ. ಆದರೆ ಆ ಶಿಫಾರಸು[...]ನಕ್ಕೆ ಬರಲಿಲ್ಲವಂತೆ. ನಾನು ಕೂಡ [...] ಕೇಳಿದೆ, ಆತನು ಕೊಡಲಿಲ್ಲ. ಶಿಫಾರಸ[...] ನನ್ನ ಗತಿಯೂ ಒಂದೇ ಆಯಿತು. [...] ಮಾತನಾಡಿಸುವವರಿಲ್ಲ. ಆದರೂ ನ[...]ತ್ತಲೇ ಇದ್ದೇನೆ. ವಾತಾವರಣವು ಒ[...] ಒಡೆದು ಕಾಣುತ್ತದೆ. ಸ್ವೈರವೃತ್ತಿ[...] ಪರಸ್ಪರ ಅನುಮಾನವೆಂಬುವ ಸಿಡಿ[...] **ಕಾರ್ಮೋಡಗಳು**, ವೈಯಕ್ತಿಕ [...] **ಗುಡುಗು-ಮಿಂಚುಗಳು** ಇರುವುದರಿ[...] ಸಾಗದಂತೆ ಆಗಿರುತ್ತದೆ. ಇದರ ಮೇ[...] ಹೊಳೆಗಳು ದಾರಿಯಲ್ಲಿ ಎಷ್ಟೋ ಬ[...] ನಾನು ನನ್ನ ಸ್ವಗ್ರಾಮವನ್ನು ಸೇರು[...]ಯನ್ನು ಬಂಧಮುಕ್ತಳನ್ನಾಗಿ ಮಾಡು[...]

[...]ರಾರಿ ಶಿಫಾರಸುಪತ್ರವ[...] ಪತ್ರವು ಏನೂ ಪ್ರಯೋ[...] ಆ ಮುಖ್ಯಾಧಿಕಾರಿಯನ್ನ[...] ಪತ್ರ ಸಿಕ್ಕವರ ಗತಿಯ[...] ಈ ಭಾಗದಲ್ಲಿ ನನ್ನ[...] ನಾನು ಮುಂದೆ ಹೆಜ್ಜೆಯಿ[...]ಕಿಂತಾಜನಕವಾಗಿದೆಯೆಂ[...]ಯೆಂಬುವ **ಸುಂಟರಗಾ**[...]ಲು ಅನಾಸ್ಥೆ ಎಂಬು[...] ವೈಷಮ್ಯ-ಈರ್ಷೆಗಳೆಂಬು[...]ಂದ, ಮುಂದಿನ ದಾರಿ[...]ಲೆ ಜಾತ್ಯಂಧತೆಯೆಂಬು[...]ತ್ತಲಿವೆ. ಎಂದಮೇ[...]ದೆಂತು? ನಮ್ಮ ತಾ[...]ವುದೆಂತು?

* * *

ಎಂದು ಚಿಂತಿಸ ತೊಡಗಿದೆನು. ಅ[...]ಯಿಂದ ಎಚ್ಚರವಾಯಿತು. ಕನಸಿನಲ್ಲಿ [...] ನೆನಪಿಗೆ ತಂದುಕೊಂಡೆ. ಕರ್ನಾಟಕ [...] ಇತಿಹಾಸಕ್ಕೂ ಕನಸಿನಲ್ಲಿ ನಡೆದ ಸಂ[...]ಸವು ನನಗೆ ಕಂಡು ಬರಲಿಲ್ಲ. ಅಂತೂ [...] ರಾಜ್ಯವಿಲ್ಲ, ದುರ್ದೈವಿ ಕರ್ನಾಟಕ!

[...]ಷ್ಟರಲ್ಲಿ ನನಗೆ ಥಟ್ಟನೆ [...] ಜರುಗಿದ ಸಂಗತಿಗಳ[...] ಏಕೀಕರಣದ ಚಳವ[...]ತಿಗಳಿಗೂ ಏನೂ ವ್ಯ[...] ಇಂತೂ ಕುಂತಿಮಕ್ಕ[...]

ವೀರಪ್ಪ ಶಿವಪ್ಪ ಅರಬಳ್ಳಿ, ರಬಕವಿ

ಬಣ್ಣದ ನೂಲು ಮತ್ತು ಇರಕಲ್

ನಮೂನೆಯ ರಬಕವಿ ಸೀರೆಯ ವ್ಯಾಪಾರಿಗಳು.

ನಮ್ಮಲ್ಲಿ ಕೈಮಗ್ಗಗಳ ಮೇಲೆ ಇರಕಲಾ ಧನವಡೀ
ಮತ್ತು ನಾರಾಯಣಪೇಟೆ ಅಂಚಿನ ಉತ್ತಮ
ಮತ್ತು ಬಣ್ಣದ ಖಾತ್ರಿಯ ಸೀರೆಗಳು
ಯೋಗ್ಯಬೆಲೆಗೆ ಸಿಕ್ಕುತ್ತವೆ.

ಆರೋಗ್ಯಮ[...]ಂದಿರ

ಆಯುರ್ವೇದ ವಿಷಯಕ ಸ[...]ಚಿತ್ರ ಮಾಸಪತ್ರಿಕೆ

ವನವೇಲದ ಧೂತಪಾಪೇಶ್ವರ [...] ಕಂಪನಿಯ ಕನ್ನಡ ಮುಖ[...] ಪತ್ರಿಕೆಯಾಗಿ ಇದು ಹೊರಡುತ್ತ[...]ಿದೆ. ತಜ್ಞರಾದ ಲೇಖಕ[...]ರಿಂದ ಬರೆಯಲಾದ ಆಯುರ್ವೇ[...]ದ ವಿಷಯಕ ಲೇಖನಗಳೂ, ಆರೋಗ್ಯವಿಷಯಕ ಲೇಖನಗಳ[...], ಬೇರೆ ಬೇರೆ ವೈದ್ಯರ ಅನುಭವಪೂರ್ಣವಾದ ನಿದಾನ-[...]ಯ ಚಿಕಿತ್ಸಾ ವಿಚಾರಗಳೂ ಬರುವುವು. ಪ್ರತಿಯೊಬ್ಬ ಕುಟು[...] ನಂಬಿಯೂ ಇದನ್ನು ಓದುತ್ತ[...]ಲಿದ್ದರೆ ಮನೆಯಲ್ಲಿ ಸ್ವಾಸ್ಥ್ಯ[...] ನೆಲೆಯಾಗಿ ನಿಲ್ಲದೆ ಇರದು.

ವಾರ್ಷಿಕ ೨ ೧—೮—೦

ಬಿಡಿ ಸಂಗುವುದ [...] ೦—೨—೦

[...]ನನು ಕಡೆಗಣ್ಣ[...]

[...]ವು ಕಿಡುವುದು [...]ದಿರ ಕಾರ್ಯಾಲಯ,

ಮರಣವಪ್ಪುದು ಬಳಿ[...]ಡ್ ಎಜೆನ್ಸೀಜ್, ಹುಬ್ಬಳ್ಳಿ

ಒಳಕುಪ್ಪಸ

(ಬಾಡಿ)

ಶ್ರೀ. ಹಳಪೇಟೆ ಚಿಂತಾಮಣಿರಾಯರು, ಟಿ.ಸಿ.ಡಿ.

★

ಇಂದು ಹೆಚ್ಚಾಗಿ ಬಳಕೆಯಲ್ಲಿರುವ, ...ುವಾದ ರೇಶಿಮೆಯ ...—ಜಾರ್ಜೆಟ್ಟಿನ ...ಸ್—ಜಂಪರ್‌ಗಳನ್ನು ತೊಡುವವರಿಗೆ ...ಕುಪ್ಪಸಗಳು ಅತ್ಯವ...ಶ್ಯವಾಗಿ ಬೇಕು. ಒಳಕುಪ್ಪಸಗಳಲ್ಲಿ ಅ...ೇಕ ಪ್ರಕಾರ ...ವೆ. ಆದರೂ ವಿಶೇಷ...ವಾಗಿ ಬಳಕೆ...ಲ್ಲಿರುವ ಒಂದೆರಡುವ ...ಾದರಿಗಳನ್ನು ...ಲ್ಲಿ ಕೊಡಲಾಗಿದೆ. ಇವುಗಳನ್ನು ...ಯ ತೆಳುವಾದ ರೇಶಿಮೆ...ಯ ಅಥವಾ ...ಲಿನ ಬಟ್ಟೆಗಳಿಂದಲೆ ... ತಯಾರಿಸಿ ...ಡುವುದು ಹೆಚ್ಚಾಗಿ ರು...ಢಿಯಲ್ಲಿದೆ.

ಅಳತೆ:—೩೬ ಇಂಚು ...ದ್ದಿ ಎದೆ. ... ...ಂಚು ಪಕ್ಕೆ (ಎದೆ ಹಾಗು ... ಹೊಟ್ಟೆಗಳ ...ುವಿನ ಭಾಗದ ಸುತ್ತಳತೆ).

ಮುಂಭಾಗ

ಚಿತ್ರಿಸುವುದು :— ಬ, ... ಅ, ಕ ...ಟಕೋನ ಮಾಡು.

ರ = ೭″ ಎಂದರೆ ಎದೆಯ ...

ಕ = ೧೨″ ಎಂದರೆ ಎದೆಯ ...

ರ, ಕ ಬಿಂದುಗಳನ್ನು ... ಎಂದೆ ಬೆಳೆ...ಯಿಸು!

ಇ = ೩೪″ ಎಂದರೆ ಎದೆ... +೪″.

ಫ = ೬″ ಎದೆಯ ...

ಫ ಕೂಡಿಸು (ಚಿತ್ರದಂತೆ ...

ಇ, ಬ = ೨″.

ಬ ಬಿಂದುವನ್ನು ಸರಳವಾಗಿ ಕೆಳಕ್ಕೆ ಇಳಿಸು!

ರ, ಯ = ೧೦″ ಎಂದರೆ ಎದೆಯ ೪+೧″

ನ, ಕೋನದಿಂದ ೧೩″

ಬ, ನ, ಯ ಚಿತ್ರದಂತೆ ಕೂಡಿಸು!

ನ, ಮ = ೨೪″

ನ, ದ ಎರಡೂ ಬದಿಗೆ ೪″ ಡಾಚಿನ ಗೆರೆ ಎಳೆ!

ಕ, ಜ = ೯″ ಎಂದರೆ ಪಕ್ಕೆಯ ೪+೭೪″

ಜ, ಯ ಕೂಡಿಸು!

ಕ, ಪ = ೩″



ಕ, ಟ = ೫″

ಪ, ದ = ೨″

ಟ, ಗ = ೨″

ಪ, ಟ ಗಳ ಎರಡೂ ಬದಿಗೆ ೪″ ನ ಡಾಚಿನ ಗೆರೆ ಹೊಡೆ!

ಹಿಂಭಾಗ

... ಇದಕ್ಕೂ ... ತಕ್ಕಂತೆ ...

ನ, ದ ಮುಂದೆ ೩″ ತೆಗೆದುಕೊಂಡು ಚಿತ್ರದಂತೆ ಬ, ಯ ಕೂಡಿಸು!

ಕತ್ತರಿಸುವುದು :— ಉದ್ದ ೧೨+೩″ ಹೊಲಿಗೆಗೆ ಇದರ ಇಮ್ಮಡಿ ಎಂದರೆ ೨೫″ ಉದ್ದ ೨೦″ ಅಗಲು ಉಳ್ಳ ಒಂದು ಬಟ್ಟೆಯ ತುಂಡನ್ನು ತೆಗೆದುಕೊಂಡು, ಮೊದಲು ಅಗಲದಲ್ಲಿ ಆನಂತರ ಉದ್ದದಲ್ಲಿ ಮಡಿಕೆ ಮಾಡು. ಎಂದರೆ ೧೦″ (ರ, ಯ,) ಅಗಲ ೧೨೩″ (ಅ, ಕ) ಉದ್ದವಾಗುವುದು. ಎರಡೂ ಮಡಿಕೆಗಳು ಅ, ಕ ದ ಬದಿಗೆ ಬರುವಂತೆ ಇಡು!

ಮೇಲಿನ ಮಡಿಕೆಯನ್ನು ಫ, ಇ ಕತ್ತರಿಸು; ಮತ್ತು ಬಗಲಿನ ಬ, ನ, ಯ ಕತ್ತರಿಸು! ಕೆಳಮಡಿಕೆಯನ್ನು ಡ, ಇ ಕತ್ತರಿಸು; ಮತ್ತು ಬ, ಯ ಕತ್ತರಿಸು!

ಇದರಲ್ಲಿಯೇ ಎರಡು ಪ್ರಕಾರಗಳು. ಒಂದು ಗುಂಡಿ ಇಲ್ಲದ್ದು, ಇನ್ನೊಂದು ಗುಂಡಿ ಇದ್ದದ್ದು.

ಗುಂಡಿ ಇಲ್ಲದ್ದಕ್ಕೆ :- ನ, ಫ, ಗ, ಟ ಡಾಚುಗಳನ್ನು ಹಿಡಿಯುವ ಅವಶ್ಯಕತೆ ಇಲ್ಲ. ಕ, ಜ ದ ಭಾಗಕ್ಕೆ ... ಇಂಚಿನ (ಪಕ್ಕೆ—೪″) ಇಲ್ಯಾಸ್ಟಿಕ್ (ರಬ...ಪಟ್ಟಿ) ನ್ನು ಹಚ್ಚಬೇಕು. ಹಾಗೂ ...ಸು. ರೇಷೆಯಲ್ಲಿ ಮಧ್ಯಕ್ಕೆ ೩೩″ ಕೊಂಚ ...ದಕ್ಷಿಣ ಮಾಡಬೇಕು.

ಟೇಪು

ಗುಂಡಿಯುದಕ್ಕೆ :- ದ, ಪ, ...ರಂಜ ಡಾಚುಗಳನ್ನು ಹಿಡಿಯಬೇಕು. ಮೇ...ನರಿಂದ ...ಯನ್ನು ಫ, ಕ ಕತ್ತರಿಸಿ, ಅಲ್ಲಿ ೩ ...ಗಳನ್ನು ಹಚ್ಚು...ಂತೆ ಮಾಡಬೇಕು.

೪೯. ಕಾರಣಪುರುಷ

ಧಾರವಾಡದ ಮನೋಹರ ಗ್ರಂಥಮಾಲೆಯ
೬೬ನೆಯ ಕುಸುಮ;
ಪ್ರೊ. ರಂ. ಶ್ರೀ. ಮುಗಳಿ ಎಂ.ಎ., ಬಿ. ಟಿ.
ಅವರು ಬರೆದುದು.

ಇದೊಂದು ಸಾಮಾಜಿಕ ಕಾದಂಬರಿ. ಪ್ರಚಾರಕ ಕಾದಂಬರಿ ಎನ್ನಲು ಬರುವಂತಿರದಿದ್ದರೂ, ಇಂದಿನ ಕನ್ನಡದ ಕೆಲವು ಸಮಸ್ಯೆಗಳನ್ನು ಮಾರ್ಮಿಕವಾಗಿ ಎತ್ತಿ ತೋರಿಸಿದ ಉತ್ಕೃಷ್ಟವಾದ ಕಾದಂಬರಿ ಎಂದು ನಿರ್ವಿವಾದವಾಗಿ ಹೇಳಬಹುದು. ವಾಮಣ್ಣನೆಂಬೊಬ್ಬ ಕನ್ನಡ ತರುಣನ ಸಂಸಾರಚಿತ್ರದೊಂದಿಗೆ, ಪ್ರೊ. ಮುಗಳಿಯವರು ಇಂದಿನ ಕನ್ನಡದ, ಅದೇಕೆ ಇಂದಿನ ಭಾರತದ ಕೆಲವು ರೋಗಗಳನ್ನು ಬಹು ಸರಸವಾಗಿ ನಿದಾನಿಸಿರುವರು. ವಾಮಣ್ಣನೊಬ್ಬ ಆದರ್ಶಜೀವಿ; ಅಂತಹರ ಗುತ್ತಿಗೆಯಂತಿದ್ದ ಬಡತನವನ್ನು ಹೋಗಲಾಡಿಸಲು ಅವನು ಶ್ರೀಮಂತರೊಬ್ಬರ ಮಗಳನ್ನು ಮದುವೆಯಾಗುವ. ಆದರೆ ಹಾಕಿದ ಹಂಚಿಕೆಯಿಂದ ಅವನ ಮನಸ್ಸಿಗೂ ಶಾಂತಿ-ಸಮಾಧಾನಗಳು ಸಿಕ್ಕುವುದಿಲ್ಲ; ಮತ್ತು ಹೂಡಿದ ಸಂಸಾರದಲ್ಲಿ ಅವನಿಗೆ ಪ್ರೀತಿ-ಅಭಿಮಾನಗಳೂ ಉಂಟಾಗುವುದಿಲ್ಲ. ದರಿಂದ ಅವನು ಕಳವಳಗೊಂಡು, ರುಮಕ್ಕಳಿಗಾಗಿ ಬೇಸತ್ತು, ಸುತ್ತ ನಿರಾಶಾಮಯ ವಾತಾವರಣವನ್ನು ಪತಿಗೊಂಡು, ಕಡೆಗೊಂದು ದಿನ ಮಡದಿಯೊಂದಿಗೆ ಅವನು ಮನೆ ಹೊರಬಿದ್ದು, ತನ್ನ ಗುರುವೆಂದು ಕೊಂಡಿದ್ದ ಆನಂದಮೂರ್ತಿಯ ಯೋಗ್ಯ ಹೊಂದುವ.

ಇದರಲ್ಲಿ 'ಕಾರಣಪುರುಷ'ನಾರು ಎಂದು ಹುಡುಕುವ ತೊಂದರೆಯೇನು ಇಲ್ಲ. ಯಾಕೆಂದರೆ ಇದು ಆ ಮಹಾಪುರುಷನ ಬರವಿಗಾಗಿ ಹಾರೈಸುವ ಉಷಃಸ್ವಪ್ನ. ಸ್ವಪ್ನಗಳಲ್ಲಿ ಹಲಕೆಲವು ಮನೋಹರವಾಗಿದ್ದರೆ, ಬೇರೆ ಕೆಲವು ಭಯಾನಕವಾದುವೂ ಇರುವುವು. ಆದರೆ ಈ ಕಾದಂಬರಿಯು ಮಾತ್ರ ಮನೋಹರವಾದ ಶೈಲಿಯಲ್ಲಿ ತೆಗೆದ ಹೃದಯಭೇದಕ ಚಿತ್ರ. ಇದರಲ್ಲಿ ಮೊದಲು ಮೊದಲು ಕನ್ನಡತನದಿಂದ ಕರಗಿ ಕಳವಳಪಡುತ್ತಿರುವ ಒಂದು ಹೃದಯವನ್ನು ಕಂಡರೆ, ಮುಂದಿನ ಕ್ಷಣ ಭಾರತದ ಹಿರಿಬೇನೆಯಾದ ನಿರುದ್ಯೋಗದ ಭೀಕರವಾದ ಬವಣೆಯನ್ನು ಕಾಣುವೆವು. ಆದರೆ ವಾಮಣ್ಣನು ತನ್ನ ಹಿರಿಯಣ್ಣನೆಂದು ತಿಳಿದ ಆನಂದಮೂರ್ತಿಯ ವಿಷಯವಾಗಿ ಮಾತ್ರ ಓದುಗರಿಗೆ ಗುಂಭವೇ ಬೀಳುವುದು. ಕೆಲವು ಪಾತ್ರಗಳ ಬಾಯಿಂದ ಕೇಳಿದ ನಾಲ್ಕು ಮಾತುಗಳನ್ನು ಬಿಟ್ಟರೆ, ಆ ಪಾತ್ರದ ವಿಷಯವಾಗಿ ನಿಜವಾದ ಸಂಪೂರ್ಣವಾದ ಕಲ್ಪನೆಯು ಓದುಗರಿಗೆ ದೊರೆವಂತೆ, ಇದರಲ್ಲಿ ಆನಂದಮೂರ್ತಿಯ ಕವನಗಳಾಗಲಿ, ಕಾರ್ಯಗಳಾಗಲಿ, ಅವುಗಳ ಪರಿಣಾಮಗಳಾಗಲಿ ಕಾಣುವುದಿಲ್ಲ; ಅದು ಕಾರಣವೆ ಆ ಪಾತ್ರವು ಓದುಗರ ಮನಸ್ಸಿನಲ್ಲಿ ಮಸಕುಮಸಕಾಗಿ ಉಳಿಯುವುದು. ಆದರಲ್ಲಿ ನಡುನಡುವೆ ಸತ್ಯಾನ್ವೇಷಣದಲ್ಲಿ ತೊಡಗಿದ ಶ್ರೀ. ಸತ್ಯಕಾಮರೂ, ಏಕೀಕರಣದ ಕಾರ್ಯದಲ್ಲಿ ನಿರತರಾದ ಶ್ರೀ. ಕಲ್ಯಾಣರಾಯರೂ ರಾಹು-ಕೇತುಗಳಂತೆ ಲೇಖಕರ ಮನೋಮಂಡಲದ ಈ ಚಂದನನ್ನು ಮರೆಯಿಸುವರು.

ತಿಳಿ

ಪ್ರಕಾಶಕರು ಸಂವಾದಗಳನ್ನಿಷ್ಟು ಬಿಡಿಯಾಗಿ ಅಚ್ಚಿಸಿದ್ದಾಗಿದ್ದರೆ, ಇನ್ನಿಷ್ಟು ಮನೋರಮವಾಗಬಹುದಿತ್ತು; ಹತ್ತೆಂಟು ಪುಟಗಳು ಮಾತ್ರ ಹೆಚ್ಚಾಗುತ್ತಿದ್ದುವು ಇಷ್ಟೇ! 'ಕನ್ನಡಿಗರ ಅಂತಃಕರಣವನ್ನ' ಕನ್ನಡಿಸುವ ವಿಷಯ; ಕನ್ನಡಿಗರ ಒಕ್ಕಟ್ಟು, ಏಳ್ಗೆಗಳಿಗಾಗಿ ಹಲುಬುವ ಹೃದಯ, ಇವನ್ನು ಕಂಡು ಚಿತ್ರಿಸಿದ್ದು ಎಂದಮೇಲೆ ಹೇಳುವುದೇನು? ಇಂದಿನ ವಾತಾವರಣದಲ್ಲಿ ಅತ್ಯಾವಶ್ಯಕವಾದ ಕಾದಂಬರಿಯೆಂದು ಓದಿಯಾದ ಮೇಲೆ ಖಂಡಿತವಾಗಿ ಹೇಳಬಹುದು.

೫೦. ಬೆಳುದಿಂಗಳು

(ಕಥಾಸಂಗ್ರಹ)

ಶ್ರೀಮಾನ್ ಜಿ. ಪಿ. ರಾಜರತ್ನಂ ಅವರು ಬರೆದು
ಹುಬ್ಬಳ್ಳಿಯ ಸಾಹಿತ್ಯ ಭಾಂಡಾರದವರು
ಪ್ರಕಟಿಸಿದುದು.

ಇದರಲ್ಲಿ ಎಂಟು ಕತೆಗಳು ಸಂಗ್ರಹವಾಗಿರುವುವು. ಮೊದಲನೆಯ 'ಬೆಳುದಿಂಗಳು' ಎಂಬ ಕತೆಯಲ್ಲಿ ಒಬ್ಬ ತಾನು ಒಲ್ಲೆ ಒಲ್ಲೆನೆನ್ನುತ್ತ, ವಿಲಾಸಿಯನ್ನು ಹೇಗೆ ಮದುವೆಯಾಗ ಲೊಪ್ಪಿದೆನೆಂಬುದನ್ನು ಪ್ರಾಮಾಣಿಕ ಬುದ್ಧಿಯಿಂದ ವಿವರಿಸಿದ್ದಾನೆ. ಎರಡನೆಯ 'ಕಾರ್ತಿಕೆ' ಎಂಬುದರಲ್ಲಿ ಮೊದಲನೆಯದರಲ್ಲಿಯ ವನೆ, ವಿಲಾಸಿನಿಯ ಸಾವಿನಾಪ್ಯಕ್ಕಾಗಿ — ಮದುವೆಯಾದ ಮೇಲೆ — ಹೇಗೆ ಹೇಗೆ ಧಡಪಡಿಸಿದೆನೆಂಬುದನ್ನು ಬಿತ್ತರಿಸಿದ್ದಾನೆ. ಮೂರನೆಯ 'ಕರಿಯ ಕಂಬಳಿ' ಎಂಬ ಕತೆಯಲ್ಲಿ ಮೋಸಗಾರನೊಬ್ಬನ, ಸಹಜಚಿತ್ರವಿದ್ದು, ಅವನ ಜೀವನವೂ ಒಂದು ಭಗವಂತನ ಲೀಲೆಯು ಬಹುದೇ ಗಳ ಎಂಬ ಸಾಕ್ಷಾತ್ಕಾರಾಭಾಸವನ್ನು ಕತೆಗಾರರಲ್ಲಿ ಹುಟ್ಟಿಸಿದುದರ ಬಣ್ಣನೆಯಿದೆ. 'ಬಿಟ್ಟವೊ ಕುಲವೊ?' ಎಂಬುದರಲ್ಲಿ ಅಂತರ್ಜಾತೀಯ ವಿವಾಹಸಮಸ್ಯೆಯ ವಿಷಯಕವಾದ ಕತೆಗಾರರ ಕನಸೊಂದು ಚಿತ್ರಿತವಾಗಿದೆ. ಕೆಸರಿನ ಕಮಲ ಎಂಬುದರಲ್ಲಿ ಜೆನ್ನಿಯ ಪಾವಿತ್ರ್ಯಾಪೇಕ್ಷೆ ವು ಕಾಜವುದು ವೈವಿಷಯಪ್ರವೃತ್ತಿ ಚೆನ್ನಾ ಮರಣವಪ್ಪುದು ಬಳಿವೆ. ಅನಿಷ್ಟಕ್ಕೆ ಶನೀಶ್ವ ಪತ್ರ ಪರಿಪೋಷಿತ ಕತೆಯ

ಜಯ

ಹುಡುಗಿ ನಿಂತ 'ಇ.ಟಿ. ಶ ...ಯರ' ಚಾರಿತ್ರ್ಯ
ಎದೆ ನಡುಗಿಸುವಂತಹ ...ದೆ. '೨೪-೨.೩೦'
ಎಂಬ ಕತೆಯಲ್ಲಿ ಕುರು... ...ಪಿ ಹೆಂಡತಿಯೊಬ್ಬ
ಳನ್ನು ಪಡೆದ ಕಳವಳದಿ... ...ಗ್ಗಾದ ಹುಚ್ಚು ಹಿಡಿದು
ಆಸ್ಪತ್ರೆಗೆ ಸೇರಿ ಅಲ್ಲಿಯೆ ಸತ್ತ ಒಬ್ಬನ ಕತೆ
ದಿನಚರಿ (ಡೈರಿ) ಯ... ...ರೂಪದಲ್ಲಿ ಬಳೆದು
ಬಂದಿದೆ. ಕೊನೆಯದಾದ 'ಮೂಲಪೆಲ್ಲಿಕ್ಕೊ
ಮನಸು' ಎಂಬ ಕತೆ ಬೌದ್ಧ ವಾಙ್ಮಯ
ದೊಳಗಿನದೊಂದಿದ್ದು, ...ನಿವೆಲ್ಲ ಕತೆಗಳಲ್ಲಡ
ಗಿದ ರಹಸ್ಯಕ್ಕೆ ಹಿನ್ನೆ... ...ಲೆಯಂತಿದೆ. ಏಕೆಂ
ದರೆ ಇಲ್ಲಿಯ ಎಲ್ಲ ಕತೆಗಳೂ ಬೇರೆ ಬೇರೆ
ವ್ಯಕ್ತಿಗಳ ಮನಸ್ಸುಗಳನ್ನು ಹಿಂಜುತ್ತಿದ್ದು,
ಅಲ್ಲಲ್ಲಿಯ ಪರಿಣಾಮಗ... ...ಳಿಗೆಲ್ಲ ಆ ಆ ವ್ಯಕ್ತಿ
ಗಳ ಮನಸ್ಸಿನ ಹಾರಾ... ...ಟ-ಹೋರಾಟಗಳೇ
ಹೇಗೆ ಕಾರಣವಾದುವೆಂಬುದನ್ನು ತೋರಿ
ಸುವುದೇ ಕತೆಗಳಲ್ಲಿಯ... ...ಮುಖ್ಯ ಕೌಶಲ
ವಾಗಿದೆ. ಕನ್ನಡ ಸಾಹಿತ್ಯದಲ್ಲಿ ಶ್ರೀ
ರಾಜರತ್ನಂ ಅವರು ವಿವಿಧಮುಖವಾಗಿ
ಕಾರ್ಯವನ್ನು—ಬರಿ... ...ಯೆ ಮಾಡಿದ್ದಾರೆಂಬು
ದಿಷ್ಟೇ ಅಲ್ಲ—ಯಶಸ್ವಿಯಾಗಿ ಮಾಡಿದ್ದಾರೆ.
ಓದುಬಲ್ಲವರೆಲ್ಲ ಈ 'ಬೆಳುದಿಂಗಳ'ನ್ನು
ಓದಲೇಬೇಕು.

—ಕುಂ. ವಿ.

೨೦. ತೊಗಲು ಹದಮಾಡುವುದು

ಶ್ರೀಮಾನ್ ಸತೀಶಚಂದ್ರ ದಾಸಗುಪ್ತರವರು ಇಂಗ್ಲಿಷಿನಲ್ಲಿ ಬರೆದುದ... ...ಕನ್ನಡ ಭಾಷಾಂತರ.

ಹಿಂದುಸ್ಥಾನದಲ್ಲಿ ಕಚ್ಚಾ ಮಾಲಿನ ಹುಟ್ಟುವಳಿಗೇನೂ ಕೊ...ರತೆಯಿಲ್ಲ. ಆದರೆ ಇಂದಿನ ಪರಾಧೀನ ಜೀವನದ ಮೂಲಕ ನಾಡಿನಲ್ಲಿ ಬಂಡವಾಳಕ್ಕೆ ಬಡತನವಿದ್ದುದ ರಿಂದಲೂ, ಪೇಟೆಯ ಸಂರಕ್ಷಣಾಸೂತ್ರ ನಮ್ಮ ಜನರ ಕಡೆ ...ರದುದರಿಂದಲೂ, ನಮ್ಮಲ್ಲಿಯ ಕಚ್ಚಾ ಮಾಲೆಲ್ಲ ಅಲ್ಪ ಬೆಲೆ ಯನ್ನು ಪಡೆದು ವಿದೇಶಗಳಿಗೆ ಹೋಗಿ, ಅಲ್ಲಿ ಪಕ್ಕಾ ಮಾಲಾಗಿ ನಮ್ಮಲ್ಲಿಯ ಸಂಪತ್ತನ್ನು ಸೂರೆ ಮಾಡಿಕೊಂಡು ಹೋಗಲು ಇಲ್ಲಿಗೆ ಬರುತ್ತದೆ. ಕಚ್ಚಾ-ಮಾಲು ಪಕ್ಕಾ ಮಾಲಾಗಲು ಬೇಕಾಗುವ ಉಪಕರಣಗಳ ಬೆಲೆ, ಕೂಲಿ, ವರ್ತಕರ ಲಾಭ, ವಾಹನದ ವೆಚ್ಚ ಇವೆಲ್ಲ ಇಂದು ನಮಗೆ ಸಿಕ್ಕುವಂತಿಲ್ಲ. ಅವೆಲ್ಲ ಪರಕೀಯರ ಪಾಲು. ಆದುದರಿಂದಲೆ ಇಂದಿನ ವೈಶ್ಯ-ಯುಗದಲ್ಲಿ ನಮ್ಮ ಭರತಖಂಡವು ಬಡ ತನಕ್ಕೆ ಒಳಿಯಾಗುತ್ತ ನಡೆದಿದೆ. ಹೀಗಾಗ ದಂತೆ ತಡೆಯನ್ನೊಡ್ಡುವುದೆಂದರೆ ನಮಗೆ ಬೇಕಾಗುವ ಪಕ್ಕಾಮಾಲುಗಳನ್ನೆಲ್ಲ ನಮ್ಮಲ್ಲಿಯೆ ಶ್ರಮವಿಭಾಗದ ತತ್ತ್ವದಿಂದ ಸಿದ್ಧಗೊಳಿಸಿಕೊಳ್ಳುವುದು. ಹದಗೊಳಿಸಿದ ಚರ್ಮಕ್ಕಾಗಿಯೂ ನಮ್ಮ ದೇಶದಿಂದ ಕೋಟಿಗಟ್ಟಲೆಯಾಗಿ ಹಣದ ರಾಶಿ ಹರಿದು ಹೋಗುತ್ತಲಿದೆ. ನಾವು ಮನೆಯ ಕೈಗಾರಿಕೆಯನ್ನಾಗಿ ಈ ಚರ್ಮ ಹದಗೊಳಿಸುವ ಕೆಲಸ ಮಾಡತೊಡಗಿದರೆ ಅನೇಕರ ಮಧ್ಯಾಹ್ನದ ಚಿಂತೆ ತಪ್ಪಬಹುದಾಗಿದೆ. ಅಂತಹರಿಗೆ ಸುಲಭವಾಗಿ ತಿಳಿಯುವಂತೆ ಈ ಪುಸ್ತಕವನ್ನು ಬರೆದು ಒದಗಿಸಿ ಕೊಟ್ಟ ಮೂಲಲೇಖಕರೂ, ಅದನ್ನು ಕನ್ನಡಿಗರಿಗೆ ಅನುವಾದಿಸಿ ಕೊಟ್ಟ ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ಕರ್ನಾಟಕ ಶಾಖೆಯವರೂ ಖಂಡಿತವಾಗಿ ಅಭಿನಂದನೆಗೆ ಪಾತ್ರರಾಗಿದ್ದಾರೆ. ನಿರುದ್ಯೋಗದಿಂದ ತಳಮಳಿಸುವ ತರುಣರು ಈ ಪುಸ್ತಕದಿಂದ ಪ್ರಯೋಜನ ಪಡೆಯಬೇಕು.

—ಸಂ. ಕ.

೨೬. ಕನ್ನಡಸಾಹಿತ್ಯ ಚರಿತ್ರೆಯ ಟಿಪ್ಪಣಿ

ಶ್ರೀಮಾನ್ ಎಂ. ಜಿ. ವೆಂಕಟೇಶಯ್ಯ, ಎಂ. ಎ. ಅವರು ಬರೆದು ಪ್ರಕಟಿಸಿದುದು.

ಕನ್ನಡ ಜನಸಾಮಾನ್ಯರಲ್ಲಿಯ ಸಂಸ್ಕೃತಿ ವಿಚ್ಛಿತ್ತಿಯ ಮೂಲಕ ಎಂತೆಂತಹ ಕಲಿತ ಜನರಿಗೂ ಕನ್ನಡ ಪುರಾತನ ಸಾಹಿತ್ಯದ ವಿಷಯ ಏನೂ ಗೊತ್ತಿರುವುದಿಲ್ಲ. ಈ ಚಿಕ್ಕ ಪುಸ್ತಕ, ಕನ್ನಡಭಾಷೆಯ ಪುರಾತನತೆ, ಕನ್ನಡ ಸಾಹಿತ್ಯದ ಪುರಾತನತೆ, ಪ್ರಾಚೀನಸಾಹಿತ್ಯದಲ್ಲಿಯ ವಿಭಾಗಗಳು, ಬೇರೆ ಬೇರೆ ವಿಭಾಗದಲ್ಲಿಯ ಹೆಸರು ಹೊಂದಿದ ಕವಿಗಳು, ಅವರಿಗೆ ಆಶ್ರಯ ಕೊಟ್ಟ ದೊರೆಗಳು, ಕವಿಗಳ ಕೃತಿಗಳು ಇವುಗಳನ್ನೆಲ್ಲ—ಕನ್ನಡಸಾಹಿತ್ಯಕ್ಕೆ ಅಪರಿಚಿತರಾದವರಿಗೆ ಪರಿಚಯವನ್ನು ಮಾಡಿ ಕೊಡುವಂತಿದೆ. ಪರೀಕ್ಷೆಗೆ ಓದುತ್ತಿರುವ ವಿದ್ಯಾರ್ಥಿಗಳಿಗೂ ಉಪಯುಕ್ತವಾಗುವಂತಿದೆ. ಇದರಲ್ಲಿ ಕೊಟ್ಟಿರುವ ಬೇರೆ ಬೇರೆಯ ಸೂಚಿಗಳು ಎಲ್ಲ ಸಾಹಿತ್ಯಾಭ್ಯಾಸಿಗಳಿಗೂ ತಕ್ಕಮಟ್ಟಿಗೆ ಅನುಕೂಲವಾಗುವಂತಿವೆ.

ಜಯಂತಿಯ ತರುಣ ಬರೆಹಗಾರರೊಬ್ಬರು

ಶ್ರೀಮಾನ್ ಬೆಂಗೇರಿ ಪ್ರಲ್ಹಾದರಾಯರು.

ಇವರು ಹುಬ್ಬಳ್ಳಿಯ ಬಳಿಯಲ್ಲಿರುವ ಬೆಂಗೇರಿಯ ಪಾಟೀಲರ ಮನೆತನಕ್ಕೆ ಸೇರಿದವರು. ಚಿಕ್ಕತನವೂ ವಿದ್ಯಾರ್ಥಿ ಜೀವನವೂ ಹುಬ್ಬಳ್ಳಿಯಲ್ಲಿಯೆ ಕಳೆಯಿತು. ಪ್ರವೇಶಪರೀಕ್ಷೆ ಪಾಸಾದ ನಂತರ ಮುಂಬಯಿಯ ಗ್ರ್ಯಾಂಟ್ ಮೆಡಿಕಲ್ ಕಾಲೇಜನ್ನು ಸೇರಿ ಅಭ್ಯಾಸ ಮಾಡುತ್ತಿದ್ದರು. ಅಷ್ಟರಲ್ಲಿಯೆ ಸಂಸಾರದ ಹೊಣೆಗಾರಿಕೆ ಸಂಪೂರ್ಣವಾಗಿ ಇವರ ತಲೆಯಮೇಲೆ ಬಿದ್ದುದರಿಂದ, ಕಾಲೇಜಿಗೆ ಶರಣು ಹೊಡೆದು ಊರಿಗೆ ಬರಬೇಕಾಯಿತು. ವಿಜಯನಗರ ಸಾಮ್ರಾಜ್ಯದ ೬೦೦ ವರ್ಷದ ಉತ್ಸವದ ಮೂಲಕಲ್ಪಕರಲ್ಲಿ ಇವರೊಬ್ಬರು.

ಶ್ರೀನಿವಾಸ ಮತ್ತು ಕಂಪನಿಯವರು ಇವರ ಸಂಪೂರ್ಣ ಸಹಕಾರದಿಂದಲೆ 'ಸಚಿತ್ರವಿಜಯನಗರ' ಎಂಬ ಉಪಯುಕ್ತ ಪುಸ್ತಕವನ್ನು ಸಿದ್ಧಗೊಳಿಸಿ ಪ್ರಕಟಿಸಿದರು. ಅಂದವಾಗಿ ಕಂಡ ದೃಶ್ಯವನ್ನೆಲ್ಲ ಕಿರಣಚಿತ್ರಯಂತ್ರದಲ್ಲಿ ಹಿಡಿದಿಡುವುದು ಇವರದೊಂದು ಹವ್ಯಾಸ. ಜಯಂತಿಯಲ್ಲಿ ಬಂದ ಇವರ 'ದಕ್ಷಿಣ ಹಿಂದುಸ್ಥಾನದ ಯಾತ್ರೆ' ಎಂಬ ಲೇಖನವು ಉಪಯುಕ್ತವೂ ಮನೋರಂಜಕವೂ ಆಗಿದೆಯೆಂದು ಬಹುಜನರಿಂದ ಮೆಚ್ಚಿಕೆಯನ್ನೂ ಪಡೆದಿದೆ.

ನಗೀಗೆ ನೇವಿದ್ಯ

ಮಾಮಲೇದಾರರ ಮಗ

ಆಕೆ:—ನೋಡಿದರೇನು? ನಮ್ಮ ಪುಟ್ಯಾ ನಿಮ್ಹಾಂಗs ಮುಂದ ಮಾಮಲೇದಾರನs ಆಗತಾನ ನೋಡ್ರಿ!

ಆತ:—ಇದೇನು, ಈಗ ಭವಿಷ್ಯ ಯಾರು ಹೇಳಿದರು ನಿನಗ? ಎಲ್ಲೀ ಜ್ಯೋತಿಷಿ ಬಂದಿದ್ದ?

ಆಕೆ:—ಜ್ಯೋತಿಷಿ ಯಾತಕ್ಕ ಬರಬೇಕು ಇದನ್ನ ಹೇಳಲಿಕ್ಕೆ? ತೊಟ್ಟಿಲಾಗ ತೋರಿಸಿದ ಗುಣಾ ಕಟ್ಟಕಡಿತನಕಾ ಇದ್ದs ಇರೂದು ಅಲ್ಲs! ಇದೇ ಈಗ ಏನಾತಂದಿರಿ! ನಾನು ಆಟಕ್ಕಂತ ಒಂದು ರೂಪಾಯಿ ಅವನ ಕೈಯಾಗ ಕೊಟ್ಟೆ; ಪುಟ್ಯಾ ಅದನ್ನ ಇನ್ನೇನೂ ಮಾಡಲಿಲ್ಲ; ತಿನಬೇಕಂತ ಬಾಯಾಗs ಹಾಕಿಕೊಂಡು ಬಿಟ್ಟ, ತುಂಟ ಹುಡುಗ!

* * *

ಸಂಸಾರದ ಶಿಸ್ತಿನ ಶಿಕ್ಷಣ

“ ರಮಾಬಾಯಿ! ಒಂದು ಬಟ್ಟಲ ತುಂಬೇ ಎಣ್ಣಿ ಅಡಗಾಣಿಸೇದ ಕೈಗಡಾ ಕೊಡs! ”

“ ಅಯ್ಯs ಇಲ್ಲರೇ ತುಂಗಾಬಾಯಿ, ನಮ್ಮಲ್ಲೀದೂ ತೀರೇದ; ಬೇಕಾದರ ನೋಡ್ರಿ ನೀವs! ”

“ ಅಲ್ಲs ರಮಾಬಾಯಿ, ಮನೀಯೊಳಗ ಯಾವುದಿಲ್ಲಾ—ಯಾವುದವs ಇದರ ಕಡೆ ನಿನ್ನ ಲಕ್ಷ ಹ್ಯಾಂಗಿರೂದಿಲ್ಲಾ ಅಂತೀನಿ! ನಾ ಯಾವಾಗ ಕೈಗಡಾ ಬೇಡಲಿ, ಆವಾಗೆಲ್ಲಾ ಹೇಳತಿರತೀ ‘ ಮನ್ಯಾಗ ಇಲ್ಲಾ’ ಅಂತ. ಸಾವಿರ ಸಲಾ ನೋಡೀನಿ, ಇದೇ ನಿನ್ನ ಉತ್ತರ! ಹ್ಯಾಂಗಾರೇ ಸಂಸಾರಾ ಮಾಡತೀರೋ ಏನೋ ತಾಯಿ! ”

ಕನಸಿನ ಖಾನಾವಳಿ

“ ಏನ್ರೀ .. ಬರೇ ಅಂದರ ಏನಾತು! ಕಲ್ಪನಾಮಾಡಿ ನೋಡ್ರಿ! ಕೇವಲ ನಾಲ್ಕಾಣೆಯೊಳಗ ಸೊಗಸಾದ ಸವಿಯೂಟ! ಎರಡು ಪಲ್ಲ್ಯ, ಎನ್ರೆಪಾ, ಮೂರು ಕೋಸುಂಬರಿ, ಸಾಕಷ್ಟು ಕಾಸಿದ ತುಪ್ಪ, ಗಟ್ಟಿಗಟ್ಟಿ ಕೆನಿ-ಮೊಸರು, ಕುಡದಷ್ಟು ನೀರ್ಮಜ್ಜಿಗಿ, ಪೂರಿ, ಬಾಸುಂದೀ, ಖೀರು...... ”

“ ಭಲೇ! ಶಾಬಾಸ್! ಒಳ್ಳೇದಾತು, ದಿನಾ ದೀಪಾವಳೀ ಹಬ್ಬ ಅನ್ರಿ! ಎಲ್ಲಿ ಅದರೀ ಇಂಥಾ ಖಾನಾವಳಿ? ”

“ ಖಾನಾವಳೀನs! ಖಾನಾವಳೀ ಎಲ್ಲ್ಯೂ ಇಲ್ಲ! ನಾ ನಿಮಗ ಮೊದಲs ಹೇಳಲಿಲ್ಲs ಕಲ್ಪನಾಮಾಡಿ ನೋಡ್ರೀ .. ಅಂತ! ”

* * *

ಭಾಳ ಮರೆವುಗೇಡಿ!

“ ಏನೋ ಇದು? ಹಾಲಂತ ಬರೇ ನೀರನs ಅಳೆದು ಹಾಕಲಿಕ್ಕೆ ಹತ್ತೀದಿಯಲಾ-ಇಂದ! ”

ಗವಳಿಗನು ಚೆನ್ನಾಗಿ ನೋಡಿ ಬೆರಗುದನಿಯಲ್ಲಿ ಹೇಳಿದ:

“ ಎಲೆಲೇ, ಹೌದರೀ ರಾವ್‌ಸಾಬ! ದಿನಾ ಇದರೊಳಗ ನನ್ನ ಹೇಣ್ತೀನs ಹಾಲು ಕೂಡಿಸಿ ಇಡತಿರತಾಳು; ಇಂದೆಲ್ಲ್ಯೋ ಮರತ್ಹಾಂಗ ಕಾಣತೈತಿ! ಭಾಳ ಮರೆವುಗೇಡಿ ಹೆಂಗಸರಿ ಅಕಿ! ”

* * *

ಸಂಪಾದಕರ ಸಲಹೆ

ತರುಣ ಲೇಖಕ:-ನೋಡ್ರಿ, ಇಂವೆಲ್ಲ್ಯೋ ಜಂಭಾಕೊಚಿಗೋತಾನs ಅಂತ ಅನಬ್ಯಾಡ್ರಿ! ಇದುವರಿಗೂ ಒಬ್ಬ ಸಂಪಾದಕ ಸುದ್ಧಾ ನನ್ನ ಬರೆಹ ಅಂಬೂವನ್ನ ಮರಳಿ ಕಳಿಸಿಲ್ಲ!

—ಅಯ್ಯೋ ಪಾಪ!

ಸಂಪಾದಕ:- ನ್ನು ನೋಡಿ ನನಗ ಕೆಟ್ಟ ನಿಮಗಾದ ಹಾನಿಯ ಕ—ನೀವು ನಿಮ್ಮ ಬರೆಹ ಅನಿಸತsದ. ಯಾ ಕೀಟು ಕಳಿಸಿರತಿದ್ದಿಲ್ಲ ಗಳ ಜೊತೆಗೆ ಟ ವ್ಯಾಲ ಟಿಕೀಟು ಇಡವಿ ಕಾಣತsದ! ಇನ್ನ ತಿಳೀತೇನು? ದನ್ನ ಮರೀಬ್ಯಾಡ್ರಿ

* * *

...ಕ್ಕೆ ಕಾರಣ

ಮಾ... ಮದಿವಿ ಆದ ಹೊಸದ

ಆಕೆ:—ಅಲ್ಲಾ ... ಎಷ್ಟು ಕತೀ ನಡೀತಿತ್ತು! ರಲ್ಲಿ ಎಷ್ಟು ಮಾತೂ-...ತೀ ಎರಡು ಮಾಡವ್ರೊಲ್ಲ ಈಗ ಒಂದಾದ ತು...ು? ರೆಲಾ; ಹೀಂಗ್ಯಾಕ...ು, ಇದಕ್ಕಾಗಿ ನೀ ಕೆಟ್ಟ

ಆತ:— ನೋಡ...ತಾ ನನ್ನ ಸಹನಶಕ್ತಿ ಅನಿಸಿಕೊಳುವುದಕ್ಕೆ ...ಡಬೇಕಾಗಿತ್ತು ನೀನು! ನೋಡಿ ಹೊಗಳಿ ಹಾ... ಕೆಲಸದ ಸಲುವಾಗs ನಿನ್ನ ಪ್ರತಿಯೊಂದು ...ಡೀ ಹಗಲು ಹನ್ನೆರಡು ಮಾತಾಡಬೇಕಂದರ ...ರೆದುಕೊಂಡs ತಿರುಗ ತಾಸೂ ಬಾಯಿ ತೆ... ಬೇಕಾದೀತು ನನಗ!

* * *

...ವಿಮರ್ಶೆ

ಕವಿತೆಯ...ವ್ರೊಲ್ಲ್ಯಕs ಚೆನ್ನೀ!

“ ನನ್ನದು ಆ ‘ನಗ...ಾಂಗ ಅನಿಸತೇನ್ರೆಪಾ ಅಂಬೂ ಕವಿತಾ ಹ... ನಿಮಗ? ” ...ದಲು ನೀವು ಆ ಕವಿತಾ

“ ಏನ್ರೀ! ನನ್ನ ...ಸ್ಯಂದs ಹಾಡಿ ತೋರಿಸಿ ನಿಮ್ಮ ಆ ಚೆನ್ನೀ ಮ... ನಕ್ಕು ಅಳೂ ಸಂದರ್ಭs ...ದ್ದರ, ಆಕಿಗೆ ನಕ್ಕು ... ಬರತಿತ್ತೇನ್ರೆಪಾ! ”

* * *

... ಗೊತ್ತಾದs!

ಹುಂ...ಮ್ಮದೂ ಮದಿವಿ ಆಗಬೇಕೂ

“ ನನ್ನದೂ ನಿ...ದ್ದರ ನೀವು ಈ ತಂಬಾಕು ...ಬಿಡಬೇಕು! ” ಅಂತ ಅನಸ... ಸೇದೂದನ್ನ ಬಿ...ಾದು! ”

“ ಆಗಬಹು...ೀನs ಟೆನಿಸ್ ಆಡೂದನ್ನ

“ ಅದರಂ... ಕ್ಲಬ್ಬಿಗೆ ಹೋಗೂದನ್ನೂ ಬಿಡ ಬಿಡಬೇಕು! ... ಬೇಕು! ”

“ ಸರಿ! ” ...ನೀನು ಬಿಡಬೇಕು ಗೊತ್ತದ?

“ ಇನ್ನೂ ... ಏನು? ”

ಜಯಂತಿ.

“ ಹುಂ, ಗೊತ್ತದ .

“ ಏನು ಹೇಳ್ರಿ ಹಾಂಗಾದರ ! ”

“ ನಿನ್ನ ಮದಿವೀ ಮಾಡ್ಕೊಳ್ಳಬೇಕಂಬೂ ವಿಚಾರ ! ”

*   *   *

ಇಂದಿನದಲ್ಲ, ನಿನ್ನಿನದು !

“ ಇಂದ ತಾರೀಖು ಎಷ್ಟರೀ ”

“ ತಾರೀಖು. . . ಗೂಂ. . ಏನೋರೆಪಾ ನೆನಪಿಗೆ ಬರವಲ್ಲೊಲ್ದು ! ಅಲ್ಲಾ, ನಿಮ್ಮ ಕೈಯೊಳಗs ‘ ಸಂಯುಕ್ತ ಕರ್ನಾಟಕ ’ ದ ಸಂಚಿಕೆ ಕಾಣಸ್ತದಲ್ಲಾ ! ಅದರ ಮ್ಯಾಲಿಂದs ಗೊತ್ತಾಗೂದಿಲ್ಲೇನು ?”

“ ಅದ್ಹ್ಯಾಂಗರೀ ಈ ಸಂಚಿಕಿ ಇಂದಿನದಲ್ಲ, ನಿನ್ನಿನದು ! ”

*   *   *

ಯುಕ್ತಿಯೊಂದು ಸಿಕ್ಕಿತು

“ ನನ್ನ ಚದುರಂಗ ಆಡೂ ಹುಚ್ಚು ನೋಡಿ ನೋಡಿ ನನ್ನ ಹೆಂಡತಿ ಬ್ಯಾಸತ್ತು ಹೋಗ್ಯಾಳ ! ‘ ಇನ್ನು ನೀವು ಚದುರಂಗ ಕೈಲೆ ಹಿಡಿದದ್ದು ನೋಡಿದರ ನಾ ಜೀವಾನs ಕೊಡತೀನಿ ’ ಅಂತ ಹೇಳಿಬಿಟ್ಟಳು ನಿನ್ನೆ ! ”

“ ಅಬ್ಬಬ್ಬಾ, ಹೀಂಗ್ಯೇನು ? ಚದುರಂಗ ಆಡೂದರೊಳಗ ಇಂಥಾ ಗುಣಾ ಅದs ಏನು ? ಹಾಂಗಿದ್ದರ ನನಗೂ ಕಲಿಸರೆಪಾ, ನಾಳಿನಿಂದs ಬರತೀನಿ ! ಉಪಕಾರಾ ಮಾಡ್ರಿ ಕಲಿಸಿ ! ”

*   *   *

ಮೊಮ್ಮಗನ ಉಪಕಾರ

“ ಅಜ್ಜಾ, ನೀ ಅಜ್ಜ ಆದದ್ದು ಯಾವಾಗ ಹೇಳು ! ”

ನೀ ಎಂದ ಹುಟ್ಟಿದಿ ನೋಡು, ಅಂದೇ ನಾ ಅಜ್ಜ ಆದೆ ! ”

“ ಹಾಂಗಾದರ ನೋಡು ಅಜ್ಜಾ, ನಾ ಹುಟ್ಟದಿದ್ದರ ನೀ ಅಜ್ಜ ಆಗತಿದ್ದಿಲ್ಲ ಇದಲ್ಲೊ ? ”

“ ಹೌದಪಾ ಆಗತಿದ್ದಿಲ್ಲ ! ”

“ ನೋಡು ನಾ ಎಂಥಾ ದೊಡ್ಡ ಕೆಲಸಾ ಮಾಡಿಕೊಟ್ಟೇನಿ ನಿನಗ ! ಇದಕ್ಕಾಗಿ ನೀ ನನಗ ಏನು ಕೊಟ್ಟೇದಿಯಪ್ಪಾ, ಏನೇನೂ ಕೊಟ್ಟಿಲ್ಲ ನೀನು ! ”

*   *   *

ವಿಶೇಷ ಸಂದರ್ಭದ ವ್ಯಾಖ್ಯೆ

“ ಏನಾದರೂ ವಿಶೇಷಸಂದರ್ಭ ಇದ್ದ ಹೊರತು ನಾನು ಇನ್ನಮ್ಯಾಲ ಎಂದೂ ಚಹಾ ಕುಡಿಯೂ ಹಾಂಗಿಲ್ಲಾಂತ ಶಪಥ ಮಾಡೇನಿ!”

“ ಹೀಂಗೇನು ? ಆ ವಿಶೇಷ ಸಂದರ್ಭ ಇರೂದು ಅಂದರ ಯಾವಾಗ ಅಂತೀರಿ ? ”

“ ಯಾವಾಗ ಅಂದರೇನ್ರಿ ! ಯಾವಾಗ ನಾ ಕುಡಿತೀರತೀನಿ ಆವಾಗೆಲ್ಲಾ ವಿಶೇಷ ಸಂದರ್ಭ ಇದ್ದೇ ಇರಲಿಕ್ಕೆ ಬೇಕು ! ”

*   *   *

ಮುಟ್ಟತದ ಹ್ಯಾಂಗ ?

“ ಹಣೇಗೆ ಏನಾಗೇದೋ ಗುಂಡ್ಯಾ ! ”

“ ಕಡಕೊಂಡೇನ್ರಿ ನಾನs ! ”

“ ಅದ್ಹ್ಯಾಂಗಲೇ, ಸುಮ್ಮ ಸುಮ್ಮನs ಬುರುಡೀ ಉಳ್ಳಸಬ್ಯಾಡ ! ಹಣೇ ಅದs ಮ್ಯಾಲ; ಅದನ್ನ ಹ್ಯಾಂಗಪಾ ಕಡಕೊಂಡಿ ? ಬಾಯಿ ಹಣೇಗೆ ಮುಟ್ಟತದ ಹ್ಯಾಂಗ ? ”

“ ಮೆಜಿನ ಮ್ಯಾಲ ಹತ್ತಿ ನಿಂತಿದ್ದೆ; ಮ್ಯಾಲ ಹತ್ತಿ ನಿಂತಮ್ಯಾಲ ಮುಟ್ಟದ ಏನ ಮಾಡತದ ದರೀ ಹಣೇಗೆ ! ”

*   *   *

ಆಣೀಮಾಡತೀರಾ ?

ಜೈಲಿನ ಅಧಿಕಾರಿ ಕೈದಿಯೊಬ್ಬನನ್ನು ಕೇಳಿದ :

“ ಇನ್ನ ಮ್ಯಾಲ ಇಲ್ಲಿಂದs ನಿನ್ನ ಬಿಡುಗಡೀ ಆಗೂದದs ! ಹೊರಗ ಹೋದ ಮ್ಯಾಲ ಏನ ಮಾಡಬೇಕಂತ ಗೊತ್ತಮಾಡಿ ಕೊಂಡೀದೀ ನೀನು ? ”

“ ನೋಡ್ರಿ, ನಾ ಏನೇನೋ ಗೊತ್ತುಮಾಡಿ ಕೊಂಡೀನಿ; ನೀವೂ ಇಷವಾಸ ಕೊಟ್ಟು ನನ್ನ ಕೇಳಲಾಕ ಹತ್ತಿದೀರಿ ! ಆದರ ರಾವ್‌ಸಾಬ್, ನಾ ಗೊತ್ತುಮಾಡಿಕೊಂಡದ್ದನ್ನ ಎಂದೂ ಹೊರಗ ಹಾಕೂದಿಲ್ಲಾ ಅಂತ ಆಣೀ ಮಾಡತೀರಾ ನೀವು ? ”

ಮಗನ ಹಟ



ಆಕೆ :— ಅಯ್ಯ್ಯ, ಕೇಳಸೂದಿಲ್ಲೇನು. . ? ಕೋಣಿನ ಮ್ಯಾಲ ಕೂಡತೀನಂತ ಅಳ್ಳಿಕ್ಕೆ ಹತ್ತಿ ಎಷ್ಟೊತ್ತಾತು ಕೂಸು ! ಸ್ವಲ್ಪ ಹೊತ್ತು ನಿಮ್ಮ ಬೆನ್ನಮ್ಯಾಲ ಕೂಡಿಸಿ ಕೊಳ್ಳಬಾರದ್ಯಾ !

ಆತ :— ಅಂ. . ? ಬಾ, ಬಾರೋ ಇಲ್ಲೆ !

ಸಾದರ ಸ್ವೀಕಾರ

೫೫. **The Eighth Annual Report of the United Karnatak Insurance Co., Ltd. Dharwar.**

ಅಖಿಲಕರ್ಣಾಟಕವೂ ಅಭಿಮಾನದಿಂದ ಪೋಷಿಸಿ ಬೆಳೆಯಿಸಬೇಕಾದ ಸಂಸ್ಥೆ ಇದೊಂದು. ಈ ಎಂಟನೆಯ ವರ್ಷದ ರಿಪೋರ್ಟಿನಲ್ಲಿ ಪ್ರಕಟವಾಗಿರುವ ಡೈರೆಕ್ಟರ್ ಮಂಡಲದ ವರದಿಯನ್ನೂ ಆದಾಯ-ವ್ಯಯಗಳ ಅಂಕೆ-ಸಂಖ್ಯೆಗಳನ್ನೂ ನೋಡಿದರೆ ಕಂಪನಿಯ ಆಡಳಿತವು ಸಮಾಧಾನಕರವಾಗಿ ನಡೆದಿದೆಯೆಂಬುದನ್ನು ಯಾರೂ ಒಪ್ಪಬಹುದಾಗಿದೆ. ವಿಮಾಕಂಪನಿಯ ಬೆಳವಣಿಗೆಯಿಂದ ರಾಷ್ಟ್ರೀಯ ಬಂಡವಾಳ ಬೆಳೆದು, ರಾಷ್ಟ್ರದ ಉದ್ಯಮಾಭಿವೃದ್ಧಿಗೆ ಸಹಕಾರಿಯಾಗುವುದು. ಇದುವರೆಗೂ ಕನ್ನಡನಾಡಿನ ದುಡ್ಡು ಕರ್ನಾಟಕಕ್ಕೆ ಸಂಬಂಧಿಸಿರದ ವಿಮಾಕಂಪನಿಗಳಿಗೆ ಹರಿದುಹೋಗಿ, ಆ ಬಂಡವಾಳದ ಉಪಯೋಗ ಪ್ರತ್ಯಕ್ಷವಾಗಿ ನಮ್ಮ ನಾಡಿಗೆ ಏನೂ ಆಗುತ್ತಿರಲಿಲ್ಲ. ಆ ಹಣದ ಹೊಳೆಯನ್ನು ನಮ್ಮಲ್ಲಿ ತಡೆದು ಹಿಡಿಯಲೆಂದೆ ಯು. ಕ. ಇ. ಕಂಪನಿ ಮುಂದೆ ಬಂದಿದೆ. ಕನ್ನಡಿಗರೆಲ್ಲ ಇದರ ಯೋಗಕ್ಷೇಮ ನೋಡಿಕೊಂಡರೆ ಭವಿಷ್ಯಕಾಲದಲ್ಲಿ ಈ ಕಂಪನಿಯಿಂದ ಕರ್ನಾಟಕಕ್ಕೆ ಸಾಕಷ್ಟು ಲಾಭವುಂಟು.

೫೬. **ವೀರಶೈವ ಸಮಾಜಸೇವಾ ಸಂಘ ಬೆಂಗಳೂರು ನಗರ.** ಈ ಸಂಸ್ಥೆಯ ೧೭-೬-೧೯೩೭ ರಿಂದ ೧೬-೬ ೧೯೩೮ ರ ವರೆಗಿನ ದ್ವಿತೀಯ ಮತ್ತು ತೃತೀಯ ವರ್ಷಗಳ ವರದಿ.

ಈಗ ನಮ್ಮಲ್ಲಿಯ ಒಂದೊಂದು ಸಮಾಜದಲ್ಲಿಯೂ ಉಚ್ಚವಾದ ರಾಷ್ಟ್ರೀಯ ಆದರ್ಶದಿಂದ ಸಂಘಟನೆಯಾಗಬೇಕಾಗಿದೆ. ಈ ಸಂಸ್ಥೆ ಅಂತಹ ಆದರ್ಶದಿಂದ, ವೀರಶೈವ ಸಮಾಜದ ಸಂಘಟನೆಗೂ ಅದರ ತನು-ಮನೋ-ಧನಗಳ ವಿಕಾಸಕ್ಕೂ ಕಾರಣವಾಗುವಂತಹ ಅನೇಕ ಕಾರ್ಯಕಲಾಪಗಳನ್ನು ನಡೆಯಿಸಿಕೊಂಡು ಹೋಗುತ್ತಿರುವುದು ತುಂಬ ಸಂತೋಷದ ಸಂಗತಿ.

೫೭. **ಆರ್ಯಕಂಕಣ** (ಮಾಸಪತ್ರಿಕೆ) ಸಂಪಾದಕರು ಶ್ರೀ. ಎಸ್. ಆರ್. ನಂದವರಿಕ ವಿಜಾಪುರ. ಕ್ರೌ. ೧೬ ದ ೩೨ ಪುಟ. ವಾ. ವ. ೧-೦-೦, ಬಿಡಿ ಸಂಚಿಕೆಗೆ ೦-೧-೩.

ನಮ್ಮ ಕಡೆಗೆ ೧ನೆಯ ವರ್ಷದ ೮-೯-೧೦ ಸಂಚಿಕೆಗಳು ಬಂದಿವೆ. ನಮ್ಮಲ್ಲಿ ಹೊರಟ ಪತ್ರಿಕೆಗಳಿಗೆ ೧೦೦ಕ್ಕೆ ೯೯ರಂತೆ ಬಾಲಗ್ರಹ ರೋಗವಿರುವುದು. ಈ ರೋಗದಿಂದ ಮುಕ್ತವಾಗಿ ನಿಂತಾಗಲೆ ಪತ್ರಿಕೆಗಳ ಗುಣ-ಪ್ರಕಟನೆಗೆ ಅನುಕೂಲವಾಗುವುದು.

೫೮. **ನವಯುಗ** (ವಿಶೇಷ ಸಂಚಿಕೆ) ಸಂಪಾದಕರು ಶ್ರೀ. ಕೆ. ಕೆ. ಸೆಟ್ಟಿ ಉಡುಪಿ ಕ್ರೌ. ಫೋ. ೪೦ ಪುಟ. ಬೆಲೆ ೦-೧-೦. ಪ್ರಕಾಶಕರು ಶ್ರೀ. ಕೆ. ಎಚ್. ಸೆಟ್ಟಿ ಉಡುಪಿ (ದ. ಕ. ಜಿಲ್ಲೆ.)

ಉಡುಪಿಯ ಕ್ಷೇತ್ರಕ್ಕೆ ಸಂಬಂಧಿಸಿದ ಅನೇಕ ಸುಂದರ ಚಿತ್ರಗಳೂ, ಶ್ರೀಕೃಷ್ಣನ ಚರಿತ್ರೆ-ಗುಣಗಳಿಗೆ ಸಂಬಂಧಿಸಿದ ಅನೇಕ ವಿಷಯಗಳೂ ಇದರಲ್ಲಿ ಪ್ರಕಟವಾಗಿವೆ. ಮುದ್ದಾದ ಮುದ್ರಣ, ಆಕರ್ಷಕವಾದ ಮೇಲ್ಮೋಲೆ. ಬೆಲೆ ತೀರ ಸುಲಭ.

೫೯. **ಮಹಿಷಾಸುರ ಸಂಹಾರ ಲೀಲಾ ವಿಲಾಸಂ** (ಪದ್ಯಗ್ರಂಥ) ಲೇ. ಶ್ರೀ. ಎಸ್. ವಿ. ವೆಂಕಟಸುಬ್ಬಯ್ಯನವರು ಸೀನಿಯರ್ ಕನ್ನಡ ಪಂಡಿತರು ಬೋರ್ಡ್ ಹೈಸ್ಕೂಲ್ ಹರಪನಹಳ್ಳಿ. ಕ್ರೌ. ೮. ೧೬ ಪುಟ, ಬೆಲೆ ೦-೧-೦.

೩೮ ಕಂದಪದ್ಯಗಳನ್ನೊಳಗೊಂಡ ಗ್ರಂಥವಿದೊಂದು. ಮನೋಹರವಾದ ಮುದ್ರಣ. ಪುಸ್ತಕದ ಒಳಗೂ ಹೊರಗೂ ರಾಷ್ಟ್ರೀಯ ಭಾವನೆಯಿಂದ ಬರೆದ ಮಹಿಷಾಸುರಮರ್ದಿನಿಯ ತ್ರಿವರ್ಣ ಚಿತ್ರವೊಂದುಂಟು.

೬೦. **ನಮ್ಮ ಬದುಕು** (ಕಥಾಸಂಗ್ರಹ) ಶ್ರೀಮಾನ್ 'ಆನಂದಕಂದ' ರು ಬರೆದುದು. ದೊರೆಯುವ ಸ್ಥಳ ಮನೋಹರ ಗ್ರಂಥಭಾಂಡಾರ ಧಾರವಾಡ. ಕ್ರೌ. ೮. ೧೧೨ ಪುಟಗಳು. ಬೆಲೆ ೦-೪-೦.

೬೧. **ನಾಡಹಬ್ಬ ಉತ್ಸವದ ವರದಿಯು** (ಗದಗ) ಕಳುಹಿದವರು ಶ್ರೀ. ಗೋಪಾಳರಾವ ನವಲೀ ವಕೀಲರು ಗದಗ.

೬೨. **ಕರ್ನಾಟಕದೇಶವೂ ವೀರಶೈವರೂ** (ಲೇಖನದ ಪುನರ್ಮುದ್ರಿತ ಪ್ರತಿ) ಲೇ. ಶ್ರೀಮಾನ್ ಬೆನೆಗಲ್ಲ ರಾಮರಾಯರು ಬಿ.ಎ., ಎಲ್‌ಎಲ್.ಬಿ. ಮಲ್ಲೇಶ್ವರ. ಶಿವಾನುಭವ ಪತ್ರಿಕೆಯಲ್ಲಿ ಮುದ್ರಿತವಾಗಿದ್ದಿತು.

೬೩. **ಹಿಂದೂ ಜಾಗೃತಿ ಅವಶ್ಯಕವೇ?** (ಪ್ರಬಂಧ) ಲೇ. ಶ್ರೀಮಾನ್ ಹರ್ಡೀಕರ್ ಮಂಜಪ್ಪನವರು. ಗದುಗಿನ ಹಿಂದೂಸೇವಾ ಗ್ರಂಥಮಾಲೆಯ ೧ನೆಯ ಪುಷ್ಪವಿದು. ಡೆ. ೧⁄₁₆ ದ ೨೨ ಪುಟಗಳು. ಬೆಲೆ ಇಲ್ಲ.

೬೪. **ಕಲಿಯುಗ** (ಮಾಸಪತ್ರಿಕೆ) ಸಂಪಾದಕರು ಶ್ರೀಮಾನ್ ಡಾ. ಎ. ಗೋಪಾಲಕೃಷ್ಣರಾಯರು. ಸಂಚಾಲಕರು ಶ್ರೀ. ಎಚ್. ಬಿ. ನವಲೂರ; ಕಲಿಯುಗ ಕಾರ್ಯಾಲಯ; ಜಕಣೀಪೇಟೆ, ಧಾರವಾಡ. ಡೆ. ೧⁄₈ ದ ೩೬ ಪುಟ. ಬಿಡಿಸಂಚಿಕೆಗೆ ೦-೧-೦.

೬೫. **ಮದ್ಯಪಾನ ನಿರೋಧಕ** (ಮಾಸಪತ್ರಿಕೆ) ಸಂಪಾದಕರು ಪ್ರೊ. ಡಿ. ಕೆ. ಭೀಮಸೇನರಾವ್ ಎಂ.ಎ. ಹೈದರಾಬಾದ್. ನಿಜಾಮ್ ಹೈದರಾಬಾದಿನ ಮದ್ಯಪಾನ ನಿರೋಧಕ ಕೇಂದ್ರದಿಂದ ಪ್ರಕಟವಾಗುವುದು. ಕ್ರೌ. ೧⁄₈ ದ ೨೮ ಪುಟ. ವಾ. ವ. ೨-೪-೦.

ನೈಝಾಮ ಪ್ರಾಂತ್ಯದಲ್ಲಿ ಮೊಟ್ಟಮೊದಲನೆಯದಾಗಿ ಹೊರಟ ಒಂದೇ ಒಂದು ಕನ್ನಡ ಪತ್ರಿಕೆಯಿದು. ಮದ್ಯಪಾನ ನಿರೋಧಕ ಲೇಖನಗಳಲ್ಲದೆ ಕನ್ನಡ ಸಾಹಿತ್ಯ-ಸಂಸ್ಕೃತಿಗಳಿಗೆ ಸಂಬಂಧಿಸಿದ ಲೇಖನಗಳೂ ಕತೆ-ಕಾದಂಬರಿ-ಲಲಿತಪ್ರಬಂಧಗಳೂ ಇದರಲ್ಲಿ ಪ್ರಕಟವಾಗಲಿವೆ.



ಇಭ್ರತ್ತು ಇಳಿಯುತ್ತಲಿದೆ!

ಕಳೆದ ತಿಂಗಳ ರಾಜಕೀಯ ವಾತಾವರಣವು ಬಂಜೆಹೋದ ಳಿಂದ ಕವಿದು ಕತ್ತಲೆಯಾಗಿತ್ತು. ಆಗಾಗ ಮಿಂಚಿನ ಸೆಳಕುಗಳು ಶೆಯನ್ನು ಸೂಚಿಸುತ್ತಿದ್ದುವೇನೋ ನಿಜ; ಆದರೂ ಕೊನೆಗೆ ಅಕಾರಿಯಾಗಲಿಲ್ಲ. ಒಂವೆಡೆ ಕಳೆದ ಒಂದೂವರೆ ವರ್ಷದಿಂದ ಎದಿಗಿಂತ ಪ್ರಗತಿಪರವಾದ ಆಳಿಕೆಯನ್ನು ನಡೆಯಿಸಿದ ಕಾಂಗ್ರೆಸ್ ಮಂತ್ರಿಮಂಡಳಗಳು ಅಧಿಕಾರವನ್ನು ಬಿಟ್ಟುಕೊಟ್ಟುವೆಂಬ ಸಮಾಧಾನ; ಇನ್ನೊಂದೆಡೆ ಅಲ್ಲಲ್ಲಿ ಬ್ರಿಟಿಶರ ಸದಿಚ್ಛೆಯಲ್ಲಿ ಶ್ವಾಸವನ್ನಿಟ್ಟ ಮುಂದಾಳುಗಳಿದ್ದುದಾದರೆ ಕೊನೆಗೊಮ್ಮೆ ವರ ಭ್ರಮನಿರಸನೆಯಾಯಿತಲ್ಲ ಎಂಬ ಸಮಾಧಾನ. ಇನ್ನೊಂದು ಷ್ಟಿಯಿಂದ ನೋಡಿದರೆ ಪರಿಸ್ಥಿತಿ ತೀರ ನಿರಾಶಾಜನಕವಾಗಿದೆ; ಕಾಂಗ್ರೆಸಿನ ಮುಂದಿನ ಕಾರ್ಯಕ್ರಮವೇನು? ಇತ್ತ ವಾರ ಒಂದು ಕಾರಣವನ್ನು ತೋರಿಸುತ್ತ ಕಾಯಿದೆಭಂಗದ ಚಳವಳವು ಪರಿಹಾರ್ಯ, ಅಶಕ್ಯ ಎಂದು ಮಹಾತ್ಮರ ಅಭಿಪ್ರಾಯ; ಇತ್ತ ತ್ತ್ವದ ಹಟವನ್ನು ಸಾಧಿಸಿದೆವಲ್ಲ ಎಂದು ಕೆಲ ಕಾಂಗ್ರೆಸಿಗರ ನ್ನು ಚಪ್ಪರಿಕೆ; ಇನ್ನೊಂದೆಡೆ—ಇಂದಿಲ್ಲ ನಾಳೆ—ಅದಷ್ಟು ತೀವ್ರ ವಾದರೆ ಒಳಿತು—ನಾವೇ ಮತ್ತೆ ಅಧಿಕಾರಾರೂಢರಾಗುವೆವೆಂದು ನೇಕ ಕಾಂಗ್ರೆಸಿಗರ ಅಂತರಂಗ. ಆದರೆ ದೇಶದ ಸ್ವಾತಂತ್ರ್ಯ ಕ್ಕಾಗಿ ಹೆಣಗುವ ದೊಡ್ಡದೊಂದು ಸಂಸ್ಥೆಗೆ ಇದು ಕಾರ್ಯ ಕ್ರಮವೆ? ಇಲ್ಲವೆ ಕಾರ್ಯವಿಲ್ಲದೆ ಕ್ರಮ ತಪ್ಪಿದ ಭ್ರಮೆಯೆ? ನ್ನು ಕಾಂಗ್ರೆಸಿಗೆ ವಿರುದ್ಧವಾದ ದೃಷ್ಟಿಯಿಂದ ನೋಡಿದರೆ, ಕಾಂಗ್ರೆಸ್ ಸಂಸ್ಥೆಯು ಇಭ್ರತ್ತು ಇಳಿದಂತಾಗಿದೆ. ನೂರಾರು ಪಕ್ಷಗಳವರು ಒಂದೇ ಉಸಿರಿನಿಂದ ಕಾಂಗ್ರೆಸು ನಮ್ಮ ಪ್ರತಿನಿಧಿ- ಯಲ್ಲ ಎಂದು ಕೂಗಿದ್ದಾರೆ, ಅದಕ್ಕೆ ಬ್ರಿಟಿಶರಿಂದ ಮನ್ನಣೆಯೂ ದೊರೆತಿದೆ. 'ಬಹುಸಂಖ್ಯಾಕರು ನಾವು, ಅಲ್ಪಸಂಖ್ಯಾಕರನ್ನು ರಕ್ಷಿಸುವುದು ನಮ್ಮ ಕರ್ತವ್ಯ' ಎಂಬ ಕಾಂಗ್ರೆಸಿನ ಪಕ್ಷನ್ನು ಬ್ರಿಟಿಶ್ ಸರಕಾರವು ಸ್ಪಷ್ಟವಾಗಿ ಅಲ್ಲಗಳೆದಿದೆ. '೧೫೦ ವರ್ಷ ಗಳಿಂದ ಹಿಂದುಸ್ಥಾನವು ನಮಗೆ ದೇವನಿಧಿ (sacred trust) ಯಾಗಿದೆ. ಅಲ್ಲಿ ಎಲ್ಲರ, ವಿಶೇಷವಾಗಿ ಅಲ್ಪಸಂಖ್ಯಾಕರ, ಸಂರಕ್ಷಣೆ ಯನ್ನು ಮಾಡುವುದು **ನಮ್ಮ** ಧರ್ಮವಾಗಿದೆ' ಎಂದು ಬ್ರಿಟಿಶ ಸರಕಾರವು ನಿಃಸಂದಿಗ್ಧ ಶಬ್ದಗಳಲ್ಲಿ ಸಾರಿದೆ. ಇಂಥ ಪರಿಸ್ಥಿತಿ ಯಲ್ಲಿಯೂ ಕಾಂಗ್ರೆಸು ಕುರುಡನಂತೆ ಕೋಲನೂರುತ್ತ ನಡೆದಿರಲು, ದೇಶದ ರಾಜಕಾರಣದ ದೃಷ್ಟಿಯಿಂದ ಈ ಮಹಾಸಂಸ್ಥೆಯ ಇಭ್ರತ್ತು ಇಳಿಯುತ್ತಲಿದೆ ಎಂದು ಯಾಕೆ ಹೇಳಬಾರದು?

ಸಿಂಹನಂತಹ ಮಾತು, ನರಿಯಂತಹ ಕೃತಿ!

ಆದರೆ ಆ ಮಾತನ್ನು ನಾವು ಹೇಗೆ ಹೇಳೋಣ? ಯಾಕೆಂದರೆ, ನಮ್ಮ ದೇಶದಲ್ಲಿ ರಾಜಕೀಯ ಪಕ್ಷವೆಂದರೆ ಕಾಂಗ್ರೆಸು ಒಂದೇ! ಮಿಕ್ಕವುಗಳೆಲ್ಲ ಜಾತಿ—ವ್ಯಕ್ತಿ—ಸ್ವಾರ್ಥ ಮೊದಲಾದ ಸಂಕುಚಿತ ಇಲ್ಲವೆ ಕಲುಷಿತ ಧ್ಯೇಯಗಳಿಂದಲೆ ಪ್ರೇರಿತವಾಗಿವೆ. **ಕಾಂಗ್ರೆಸು ಉಳಿದರೆ ಮಾತ್ರ ದೇಶ ಬೆಳೆಯುವುದು** ಎಂದೇ ಹೇಳಬೇಕಾ ಗಿದೆ. ಹೀಗಿದ್ದುದರಿಂದಾಗ ಕಾಂಗ್ರೆಸಿನ ಮುಂದಾಳುಗಳ ಮೇಲೆ ಅತ್ಯಂತ ಭಾರವಾದ ಹೊಣೆಗಾರಿಕೆ ಇದೆ. ಯಾವುದೇ ಪರಿಸ್ಥಿತಿ ಒದಗಲಿ, ಮೊದಲು ಈ ಮಹಾಸಂಸ್ಥೆಯ ಇಭ್ರತ್ತು ಅಳಿಯದಂತೆ ನೋಡ ಬೇಕಾಗಿದೆ. ಅಧಿಕಾರಸ್ವೀಕಾರವಾದಂದಿನಿಂದ ಕಾಂಗ್ರೆಸ್ಸಿಗೆ ಸಾವಿರಾರು ಹೊಸ ಸದಸ್ಯರು, ಸಹಾನುಭೂತಿಗರು ದೊರೆತರು. ಇಂದು ಕಾಂಗ್ರೆಸಿನಲ್ಲಿ ಈ ಹೊಸತಂಡವೇ ಬಹುಮತದಲ್ಲಿದೆ ಎಂದು ಹಿಂದೆ ಅನೇಕಸಲ ನಾವು ಅಭಿಪ್ರಾಯಪಟ್ಟಿದ್ದೇವೆ. ಇತ್ತಿತ್ತಲಾಗಿ ಈ ಹೊಸಬರ ಅನುಕೂಲತೆಯನ್ನೆ ಕಾಂಗ್ರೆಸು ತನ್ನ ಕಾರ್ಯ- ಕ್ರಮವನ್ನಾಗಿ ಇರಿಸುತ್ತಲಿದೆ ಎಂದು ಅನೇಕ ಕಾಂಗ್ರೆಸಿಗರೆ ದೂರಿಕೊಂಡಿದ್ದಾರೆ. ಸದ್ಯದ ಪ್ರಸಂಗದಲ್ಲಿ ಕಾಂಗ್ರೆಸು ಇಂತಹ ದೊಂದು ನಿಶ್ಚಿತಮಾರ್ಗವನ್ನು ಕೈಕೊಳ್ಳಬೇಕಾಗಿದೆ. ಹಳಬರ ಸಮಾಧಾನಕ್ಕಾಗಿ ಮಾತಿನಲ್ಲಿ ಸಿಂಹ, ಹೊಸಬರ ಸಮಾಧಾನ ಕ್ಕಾಗಿ ಕಾರ್ಯದಲ್ಲಿ ನರಿ—ಈ ಕಪ್ಪೆಯ ತೂಕದ ಧೋರಣೆಯನ್ನು ಬಿಟ್ಟುಕೊಡಬೇಕಾದ ಪರಿಸ್ಥಿತಿ ಇಂದು ಬಂದಿದೆ. ಬ್ರಿಟಿಶರ ಧೋರಣೆಯು ಸ್ಪಷ್ಟವಾಗಿದೆ, ಎಂದಿನಿಂದಲೂ ಸ್ಪಷ್ಟವಾಗಿಯೆ ಇದೆ, ಇಂದು ಕಾಂಗ್ರೆಸಿಗೆ ಅವಾಸ್ತವವಾಗಿದೆ; ಸದ್ಯಕ್ಕೆ ಇನ್ನಿಷ್ಟು ಸ್ಪಷ್ಟವಾಗಬೇಕಾದದ್ದು ಕಾಂಗ್ರೆಸಿನ ಧೋರಣೆ. ಅಧಿಕಾರವೂ ಬೇಡ, ಅಸಹಕಾರವೂ ಬೇಡ ಎಂಬರೇನು? ಇದರಲ್ಲಿ ಇಂತಹವೇ ಯೋಗ್ಯವಾದುದು ಎಂದು ಸಾಧಿಸುವ ಹಟ ನಮಗಿಲ್ಲ. ಪರಿಸ್ಥಿತಿ ಯನ್ನೂ ಪ್ರತಿಸ್ಪರ್ಧಿಯನ್ನೂ ಲಕ್ಷ್ಯದಲ್ಲಿಟ್ಟುಕೊಂಡು ಕಾಲಕ್ಕೆ ತಕ್ಕ ಮಾರ್ಗವನ್ನು ಸ್ವೀಕರಿಸಬಹುದು. ಸದ್ಯಕ್ಕೆ ಯಾವುದೇ ಒಂದು ಮಾರ್ಗವನ್ನು ಸ್ವೀಕರಿಸುವುದಗತ್ಯವಾಗಿದೆ. ಹಾಗೆ ಮಾಡದಿದ್ದರೆ ಮತ್ತೆ ದೇಶ ಕಗ್ಗತ್ತಲೆಯಲ್ಲಿಯೆ!

ನಡೆದುದೊಂದು ನುಡಿದುದು ಮತ್ತೊಂದು !

ಕಾಂಗ್ರೆಸು ನಿಶ್ಚಿತಧೋರಣೆಯನ್ನು ಕೈಕೊಳ್ಳಲು ಅಶಕ್ತವಾದರೆ ಇಲ್ಲವೆ ವಿಲಂಬವಾದರೆ ನಮ್ಮ ರಾಜಕೀಯ ಪರಿಸ್ಥಿತಿ ಕಂಗಾಲಾಗುವುದರಲ್ಲಿ ಸಂದೇಹವಿಲ್ಲ. ಬೆಕ್ಕು ಇಲ್ಲದಲ್ಲಿ ಇಲಿಗಳ ಚೆಲ್ಲಾಟವೆಂಬಂತೆ, ಕಾಂಗ್ರೆಸು ಕಿಂಕರ್ತವ್ಯತಾಮೂಢವಾದರೆ ಬಿಕ್ಕ ಪಕ್ಷ-ಪಂಗಡಗಳ ಪುಂಡಾಟಿಕೆಗೆ ಪ್ರಾರಂಭವಾಗುವುದು. ಬಿಕ್ಕ ಪಕ್ಷ-ಪಂಗಡಗಳ ಸ್ವರೂಪ ಎಂತಹದೆಂಬುದನ್ನು ಮೇಲೆಯೆ ಸೂಚಿಸಿದ್ದೇವೆ. ಇಷ್ಟೇಕೆ ! ಈಗಾಗಲೆ ಮುಸ್ಲಿಂ ಲೀಗ, ಹಿಂದು-ಮಹಾಸಭೆ ಮೊದಲಾದ ಜಾತೀಯಸಂಸ್ಥೆಗಳ ಪ್ರಚಾರದ ತೆರೆಗಳ ಹೊಡೆದಾಟಕ್ಕೆ ಬಾಯಿಬುಡುಗು ದಂಡೆಗಟ್ಟಿ ನಿಲ್ಲುತ್ತಲಿದೆ. ಇದಕ್ಕೆ ಪರಕೀಯರಿಂದ ಪ್ರೋತ್ಸಾಹನಕ್ಕೂ ಕೊರತೆ ಇಲ್ಲ. ಪರಕೀಯರ ಅಪಪ್ರಚಾರದ ಒಂದು ಮಾದರಿಯನ್ನು ನೋಡಿದರೆ ಅದರ ಮಹತ್ತ್ವವು ತಿಳಿಯುವುದು. ದಿಲ್ಲಿಯಲ್ಲಿ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ ಸಂಸ್ಥೆಗಳ ಪ್ರತಿನಿಧಿಗಳಲ್ಲಿ ಐಕ್ಯವಾಗಲಿಲ್ಲ ಎಂದು ವ್ಹಾಯಿಸ್‌ರಾಯರು ತಮ್ಮ ಅಧಿಕೃತ ಪ್ರಕಟನೆಯಲ್ಲಿ ಅಭಿಪ್ರಾಯಪಟ್ಟರು; ಅದನ್ನೇ ಲಂಡನಿನಲ್ಲಿ ಸ್ಟೇಟ್ ಸೆಕ್ರೆಟರಿಗಳು 'ಗಟ್ಟಿಗೊಳಿಸಿ' ದರು. ಆದರೆ ನಿಜವಾಗಿ ದಿಲ್ಲಿಯಲ್ಲಿ ನಡೆದದ್ದೇನು? ಹಿಂದು-ಮುಸ್ಲಿಂ ಐಕ್ಯಸಂಧಾನವೆ? ಆ ವಿಷಯವಾಗಿ ಮಾತೇ ಹೊರಡಲಿಲ್ಲವೆಂದು ಜನಾಬ ಜಿನ್ನಾ ಅವರೂ ಹೇಳಿದ್ದಾರೆ, ಪಂಡಿತ ಜವಾಹರರೂ ಹೇಳಿದ್ದಾರೆ ! 'ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವನ್ನು ಧ್ಯೇಯವಾಗಿ ಸಾರುವವರೆಗೆ ನಾವು ಯಾವ ಮಾತುಕತೆಗಳನ್ನೂ ಆಡುವುದಿಲ್ಲ' ಎಂದು ಕಾಂಗ್ರೆಸು ಹೇಳಿದ್ದು, ಆ ಮೇರೆಗೆ ವ್ಹಾಯಿಸರಾಯರು ಆ ಧ್ಯೇಯವನ್ನು ಒಪ್ಪದೆ ಇದ್ದು, ಮಾತಿಗೆ ತಕ್ಕಂತೆ ಕಾಂಗ್ರೆಸು ಸ್ವಾತಂತ್ರ್ಯವನ್ನು ಬಿಟ್ಟು ಬೇರೆ ವಿಷಯಗಳನ್ನು ಚರ್ಚಿಸಲಿಚ್ಛಿಸಲಿಲ್ಲ; ಅದಕಾಗಿ ಜನಾಬಜಿನ್ನಾ ಅವರೊಡನೆ ಜಾತೀಯ ಐಕ್ಯಕ್ಕಾಗಿ ಮಾತನಾಡುವ ಪ್ರಸಂಗವೂ ಒದಗಲಿಲ್ಲ. ಹೀಗಿರುವಾಗಲೂ 'ಹಿಂದು-ಮುಸ್ಲಿಂ ಐಕ್ಯ-ಸಂಧಾನವಾಗಲಿಲ್ಲ' ಎನ್ನಬಹುದೆ ! ಆ ಮಾತನ್ನು ನಂಬಿ ಹಿಂದು-ಮಹಾಸಭೆಯವರು ತಮ್ಮನ್ನು ಕೇಳದೆ ಯಾವ ಜಾತೀಯ ನಿರ್ಣಯವನ್ನೂ ಒಪ್ಪತಕ್ಕದ್ದಲ್ಲ ಎಂದು ವ್ಹಾಯಿಸ್‌ರಾಯರಿಗೆ ವಿನಂತಿಯನ್ನೆ ಕಳುಹಿಸಿದ್ದಾರೆ! ಹಿಂದೊಮ್ಮೆ ರಾವುಂಡ್ ಟೇಬಲ್ ಪರಿಷತ್ತಿನಲ್ಲಿ ಹೂಡಿದ ಜಾತಿ-ಜಗಳದ ಪ್ರದರ್ಶನವು ಮುಂದಾಗದಂತೆ ನೋಡಬೇಕಾದರೆ ನಾವು ಮೊದಲು ಹೇಳಿದಂತೆ ಕಾಂಗ್ರೆಸು ಕೂಡಲೆ ನಿಶ್ಚಿತವಾದ ಧೋರಣೆಯನ್ನೂ, ಧ್ಯೇಯಸಾಧಕ ಕಾರ್ಯಕ್ರಮವನ್ನೂ ಕೈಕೊಳ್ಳುವುದಗತ್ಯವಾಗಿದೆ.

ದಿಕ್ಕು-ದೆಸೆಯಿಲ್ಲದ ಕ. ಏಕೀಕರಣ

ಇದೇ ಸಂದರ್ಭದಲ್ಲಿ ಕರ್ನಾಟಕದ ಪರಿಸ್ಥಿತಿಯ ವಿಷಯವಾಗಿಯೂ ನಾಲ್ಕು ಮಾತುಗಳನ್ನು ಹೇಳಬಹುದಾಗಿದೆ. ಕರ್ನಾಟಕವು ಜಾತಿ ಸಮಸ್ಯೆಯಲ್ಲಿ ಭಾರತದ ಪುಟ್ಟಪಡಿ(pocket edition) ಯಾದಂತಿದೆ. ಮಾಂಟೆಗ್ಯೂ ಚೆಮ್ಸ್‌ಫರ್ಡ ಸುಧಾರಣೆಗಳ ಕಾಲದಿಂದ ಜಾತೀಯತಾಭಾವನೆಗೆ ನಮ್ಮಲ್ಲಿ ಕಳೆ ಏರುತ್ತಲಿದೆ. ಮೊದಲು ತಮ್ಮತಮ್ಮೊಳಗೆ ಸಂಘಟನೆಯನ್ನು ಮಾಡಿಕೊಳ್ಳುವ ಧ್ಯೇಯದಿಂದ ಕಾರ್ಯಪ್ರವೃತ್ತವಾದ ಬ್ರಾಹ್ಮಣೇತರ ಚಳವಳವು, ನಗದು-ನೌಕರಿಗಳಿಗಾಗಿ ಬ್ರಿಟಿಶ್ ಸರಕಾರವು ತಾಳಿದ ಧೋರಣೆಯಿಂದ ಬ್ರಾಹ್ಮಣದ್ವೇಷಕ ಚಳವಳದ ಸ್ವರೂಪವನ್ನು ತಾಳಿತು. ಆ ಮೇಲೇ ಏಕೀಕರಣದ ಧ್ಯೇಯಕ್ಕಾಗಿ ಎಲ್ಲ ಜಾತಿಗಳೂ ಒಂದಾಗುವ ಪ್ರಸಂಗ ಒದಗಿತು ; ತರುವಾಯ ಅಖಿಲ ಭಾರತೀಯ ಪಕ್ಷವಾದ ಕಾಂಗ್ರೆಸಿನ ಚಟುವಟಿಕೆಗಳಿಂದ ಜಾತೀಯತೆಯ ಅಸೂಯೆ-ಅಸಹ್ಯಗಳು ಅಳಿಯಬಹುದಾಗಿತ್ತು. ಆದರೆ ಪ್ರಾಂತದ ವಿಶಿಷ್ಟದುರ್ದೈವದಿಂದ ಇದುವರೆಗೂ ಹಾಗಾಗಿಲ್ಲ. ಇದರಿಂದ ನಮ್ಮಲ್ಲಿ ಪ್ರಾಂತಾಭಿಮಾನ-ದೇಶಾಭಿಮಾನಗಳಿಗಿಂತ ಜಾತ್ಯಭಿ-ಮಾನವೆ ತೀವ್ರವಾಗಿದೆ ಎಂದು ಸಿದ್ಧಾಂತ ಹೊರಡಿಸಿ ನಿರಾಶೆಗೊಳ್ಳುವ ಪಂಥಕ್ಕೆ ನಾವು ಸೇರಬಯಸುವುದಿಲ್ಲ. **ಒಂದು ಕಡೆ ಏಕೀಕರಣದ ಅಲಕ್ಷ್ಯ, ಇನ್ನೊಂದು ಕಡೆ ಕಾಂಗ್ರೆಸಿಗರ ಅರ್ಧವಿಶ್ವಾಸ—ಇವುಗಳಿಗಾಗಿ ನಮ್ಮ ಪ್ರಾಂತಾಭಿಮಾನ-ದೇಶಾಭಿಮಾನಗಳು ತೀವ್ರವಾಗದೆ ಜಾತ್ಯಭಿಮಾನಕ್ಕೆ ಅವಕಾಶ ಉಳಿದಿದೆ ಎಂದು ನಮ್ಮ ಅಭಿಪ್ರಾಯ.** ಏಕೀಕರಣದ ಚಳವಳವು ತೋರಿಸಬೇಕಾದಷ್ಟು ಹಟದ, ಉತ್ಸಾಹದ ಕಾರ್ಯ-ಧೋರಣೆಯನ್ನು ಇದುವರೆಗೂ ತೋರಿಸಿಲ್ಲ. ಬೀದಿಗೆ ಬಿಸಾಡಿದ ಅನಾಥ ಕೂಸಿನಂತಾಗಿದೆ ಈ ಚಳವಳ. ಯಾರೂ ಅದನ್ನು ಸ್ವೀಕರಿಸಲೊಲ್ಲರು ; ಎತ್ತಿದವರು ಕೂಡ ಸುತ್ತುಮುತ್ತಲಿನವರು ಏನೆಂದಾರೆಂಬ ವ್ಯವಹಾರದ ಅನುಕೂಲತೆಯ ದೃಷ್ಟಿಯಿಂದಲೆ ಅದನ್ನು ಎತ್ತಿಕೊಂಡಂತೆ ಮಾಡುವರು. ಇಂತಹ ಅಸಡ್ಡೆಯಿಂದ ಪ್ರಾಂತಾಭಿಮಾನವು ನಮ್ಮನ್ನು ಒಂದುಗೂಡಿಸುವುದಾದರೂ ಹೇಗೆ?

ಇದಕ್ಕೆ ಯಾರು ಹೊಣೆ?

ಇನ್ನು ನಮ್ಮಲ್ಲಿಯ ಕಾಂಗ್ರೆಸಿಗರ ಮನೋವೃತ್ತಿಯನ್ನು ಬಣ್ಣಿಸಬೇಕೆ? ಅಖಿಲಭಾರತೀಯ ರಾಜಕಾರಣದಲ್ಲಿ ಮುಂದಾಳುತನವನ್ನು ಬಯಸುವ ಬಂಟರೆ ಬಹಳ; ಪರಪ್ರಾಂತದವರೆದುರು ಹಿರಿಯತನವನ್ನು ತೋರಿಸುವ ತತ್ತ್ವಜ್ಞಾನಿಗಳೂ ಬಹುಜನ. ಆದರೆ ಇದುವರೆಗೂ ಅಖಿಲಭಾರತೀಯ ರಾಜಕಾರಣದಲ್ಲಿ ನಮ್ಮವರು ಮುಂದಾಳು ಎನಿಸಲಿಲ್ಲ; ಪರರಿಗಾಗಿ ಸಾರಿದ ತತ್ತ್ವದಿಂದ ತನ್ನವರನ್ನು ಉಳಿಸಲಿಲ್ಲ ! ಯಾಕೆ ? ಬುದ್ಧಿಶಕ್ತಿ ಇದೆ, ಯೋಗ್ಯತೆ ಇದೆ, ಪ್ರಾಮಾಣಿಕತೆ ಇದೆ, ಆದರೂ ಇಂತಹ ಪರಿಸ್ಥಿತಿ ಯಾಕೆ? ನಮಗಂತೂ ಒಂದೇ ರೀತಿಯ ಉತ್ತರ ತೋರು-ವುದು. ಹೊರಗೆ ಮುಂದಾಳುತನವನ್ನು ಬಯಸುವ ಹಂಬಲದಲ್ಲಿ ಮನೆಯನ್ನು ಮರೆತಿದ್ದಾರೆ; ಮಂದಿಗಾಗಿ ಮಿಡಿದ, ಮೈಗೂಡಿದ ತತ್ತ್ವಗಳಿವೆ. ಮೊದಲನೆಯದಕ್ಕಾಗಿ ಏಕೀಕರಣವನ್ನು ಅಲಕ್ಷ್ಯ ಮಾಡಿದ್ದಾರೆ; ಎರಡನೆಯದಕ್ಕಾಗಿ ದೇಶಾಭಿಮಾನವು ತಮ್ಮದೆ ಸೊತ್ತು (monopoly) ಎಂಬ ತಪ್ಪುತಿಳವಳಿಕೆಗೆ ತುತ್ತಾಗಿದ್ದಾರೆ. ಉದಾಹರಣೆಗಾಗಿ ಕಾಂಗ್ರೆಸಿಗರ ನೇತೃತ್ವದಲ್ಲಿ ನಡೆಯಿಸಲ್ಪಡುವ ಪತ್ರಿಕೆಗಳನ್ನು ನೋಡಬಹುದು. ಇಂದಿಗೂ ಜಾತಿ-

ಭಾವನೆಗೆ ಎಡೆಗೊಡುವ, ಜಾತೀಯತೆಯ ದುರಭಿಮಾನದಿಂದಲ ಪ್ರೇರಿತವಾಗಿರುವ ಧೋರಣೆ, ವೃತ್ತಿ, ಲೇಖ ಕಂಡುಬರುವುವು! ಕೇವಲ ಏಕೀಕರಣ ಚಳವಳಕ್ಕೆಂದೇ ಮೀಸಲಾದ ಪತ್ರಿಕೆ ಕೂಡ ಕರ್ನಾಟಕ ಕಾಂಗ್ರೆಸಿಗರ ಮುಂದೋಪಮುಂದತೆಯ ಸುದ್ದಿಯೋಲೆಯಾಗಿಬಿಟ್ಟಿದೆ! ಮುಂದಾಳುಗಳೆನಿಸಿಕೊಳ್ಳುವವರ ನೇತೃತ್ವದಲ್ಲಿಯೆ ಇಂತಹ ಚಟುವಟಿಕೆಗಳು ನಡೆಯುವುದರಿಂದ, ವೈಯಕ್ತಿಕ ಅಭಿಮಾನದಿಂದ ಅನೇಕ ಹಿಂದಾಳುಗಳು ಅದೇ ಸರಿಯಾದ ಮಾರ್ಗವೆಂದು ನಂಬತೊಡಗಿದ್ದಾರೆ!

ಕನ್ನಡದ ಇಂದಿನ ಮುಂದಾಳಿಕೆ!

ಕೊನೆಗೆ ನಮ್ಮ ಕೃತಾಕೃತಗಳ ಪ್ರಾಯಶ್ಚಿತ್ತವನ್ನು ನಾಮದುರ್ಗದ ಪ್ರಕರಣದಿಂದ ನಮಗೆ ಭೋಗಿಸಲೇಬೇಕಾದ ಅನಿವಾರ್ಯ ಪ್ರಸಂಗಬಂದಿತು. ಕೇವಲ ಆ ಪ್ರಕರಣದಿಂದುದ್ಭವಿಸಿದ ಪರಿಸ್ಥಿತಿಯನ್ನು ಪರ್ಯಾಲೋಚಿಸಲು, ಪರಸ್ಪರ ಸಹಕಾರವನ್ನು ಹುಟ್ಟಿಸಲು, ಕರ್ನಾಟಕ ಕಾಂಗ್ರೆಸ್ ಕಾರ್ಯಕರ್ತರ ಸಭೆಯೊಂದು ಬೆಳಗಾಂವಿಯಲ್ಲಿ ಸೇರಿತ್ತೆಂಬುದರಿಂದ ಅದರ ಮಹತ್ತ್ವವನ್ನು ವಾಚಕರು ಊಹಿಸಬಹುದು. ಆ ಸಭೆಯಲ್ಲಿ ನಡೆದದ್ದೆಲ್ಲ ಬೆಳಕಿಗೆ ಬಂದಿಲ್ಲ; ಅಲ್ಲಿ ಬಂದವರು ಯಾರು, ಎಂತಹರು ಎಂಬುದರ ವಿವರಗಳೂ ಸಾಕಷ್ಟಾಗಿ ಪ್ರಕಟವಾಗಿಲ್ಲ. ಅಲ್ಲಿ ಸ್ವೀಕೃತವಾದ ಗೊತ್ತುವಳಿಯಿಂದ ಅದಕ್ಕೆ ಹಿಂದಿದ್ದ ಮನೋಭಾವನೆಯ ನಿಜವಾದ ಚಿತ್ರವೂ ಕಂಡುಬರುವುದಿಲ್ಲ. ಈ ಕಾರಣಗಳಿಗಾಗಿ ಅದರ ವಿಷಯ ಹೆಚ್ಚಾಗಿ ಬರೆಯುವುದು ಸಮಂಜಸವೆನಿಸುವುದಿಲ್ಲ. ಆದರೂ ಒಂದು ಮಾತನ್ನು ಹೇಳಬಹುದು. ಮನೆಗೊಬ್ಬ ಮುಂದಾಳು ಎಂಬ ಪರಿಸ್ಥಿತಿಯು ಬದಲಾಗಿ ಒಬ್ಬನೇ ಮುಂದಾಳಾಗಿರಬೇಕೆಂಬ ಕಾರ್ಯಸಾಧಕ ತತ್ತ್ವವನ್ನು ನಮ್ಮ 'ಹಿರಿಯ'ರು ಕೊನೆಗೊಮ್ಮೆ ಒಪ್ಪಿಕೊಂಡಂತಾಗಿದೆ; ಅದರ ಜೊತೆಯಲ್ಲಿಯೆ ಮುಂದಾಳುತನದ ಸೊತ್ತುಗಾರಿಕೆ (monopoly) ಯನ್ನೂ ಬಿಟ್ಟಂತೆ ಕಾಣುತ್ತಿದೆ. ಈ ಎರಡು ಸಂಗತಿಗಳು ನಿಜವಿದ್ದಲ್ಲಿ, ಕರ್ನಾಟಕದ ಚಟುವಟಿಕೆಗಳಿಗೆ ಏಕಾಗ್ರತೆಯೂ ಮಹತ್ತ್ವವೂ ದೊರೆಯುವುದರಲ್ಲಿ ಸಂದೇಹವಿಲ್ಲ. ಒಂದೇ ಒಂದು ಎಚ್ಚರಿಕೆಯನ್ನು ಈ ಸಂದರ್ಭದಲ್ಲಿ ಕೊಡುವುದಗತ್ಯವಾಗಿದೆ. ಯಾರೇ ಮುಂದಾಳಾಗಲಿ, ಅವರು ಏಕೀಕರಣದ ಆವಶ್ಯಕತೆಯನ್ನೂ ಶೀಘ್ರಸಂಪಾದನೆಯನ್ನೂ ಒಪ್ಪಲೇಬೇಕಾಗುವುದು. ಇಲ್ಲವಾದರೆ – ಮಿಕ್ಕ ಯಾವುದೆ ಟೀಕೆಯನ್ನು ಮಾಡದೆ – ಅಂತಹ ಮುಂದಾಳಿಗೆ ರಾಜಕಾರಣದಕ್ಷತೆಯೂ ದೂರದರ್ಶಿತ್ವವೂ ಇಲ್ಲವೆಂದೇ ಹೇಳಬೇಕಾಗುವುದು.

ವರ್ಕಿಂಗ್ ಕಮಿಟಿ

ಕಳೆದ ತಿಂಗಳು ಅಲಹಾಬಾದಿನಲ್ಲಿ ಸೇರಿದ ವರ್ಕಿಂಗ್ ಕಮಿಟಿಯು ಸದ್ಯದ ರಾಜಕೀಯ ಪರಿಸ್ಥಿತಿಯ ವಿಷಯವಾಗಿ ಸುದೀರ್ಘವಾದೊಂದು ಗೊತ್ತುವಳಿಯನ್ನು ಸ್ವೀಕರಿಸಿದೆ. ಹಿಂದಿನ ಗೊತ್ತುವಳಿಗಳಲ್ಲಿ ಕೈಕೊಂಡ ಧೋರಣೆಯು ಇದರಲ್ಲಿದ್ದು ಪರಿಸ್ಥಿತಿಯು ವಿಶೇಷವಾಗಿ ಬದಲಾಯಿಸುವಂತಿಲ್ಲ ಎಂದೇ ಹೇಳಬಹುದು. ಆದರೂ ಗೊತ್ತುವಳಿಯಲ್ಲಿಯ ಕೆಳಗಿನ ನಾಲ್ಕು ಮಾತುಗಳ ಕಡೆಗೆ ವಾಚಕರ ಲಕ್ಷ್ಯವನ್ನೆಳೆಯಬಯಸುತ್ತೇವೆ.

೧. ಸದ್ಯದ ಯುದ್ಧವು ಕಳೆದ ಯುದ್ಧದಂತೆ ಸಾಮ್ರಾಜ್ಯವಾದದ ಧ್ಯೇಯಕ್ಕಾಗಿಯೆ ಇದೆ ಎಂದೂ, ಬ್ರಿಟಿಶ ಸತ್ತೆಯು ಭಾರತದಲ್ಲಿಯೆ ನೆಲೆಗೊಳಿಸಲು ಹಟತೊಟ್ಟಿದೆ ಎಂದೂ.... ದೇಶದ ಪ್ರಗತಿವಿರೋಧಕ ಪಕ್ಷಗಳ ಸಹಕಾರ ದೊರಕಿಸಿ ಭಾರತದಲ್ಲಿ ಬ್ರಿಟಿಶ ಸಾಮ್ರಾಜ್ಯಾಧಿಕಾರವನ್ನು ನಡೆಯಿಸುವ ಧೋರಣೆಯು ಪಾರ್ಲಮೆಂಟಿಗಿದೆ ಎಂದೂ ವರ್ಕಿಂಗ್ ಕಮಿಟಿಗೆ ಪೂರ್ತಿಯಾಗಿ ಮನವರಿಕೆಯಾಗಿದೆ.

೨. ಯುದ್ಧದ ಪರಿಸ್ಥಿತಿಯನ್ನೂ ಅದರಿಂದುದ್ಭವಿಸಿದ ಸಮಸ್ಯೆಯನ್ನೂ ಕಾಂಗ್ರೆಸ್ಸು ನೈತಿಕದೃಷ್ಟಿಯಿಂದ ನೋಡುತ್ತಿದ್ದು, ಇನ್ನೊಬ್ಬರ ದುರವಸ್ಥೆಯ ಲಾಭಪಡೆದುಕೊಳ್ಳುವ ಇಚ್ಛೆ ಕಾಂಗ್ರೆಸಿಗಿಲ್ಲ.

೩. ಎದುರಾಳಿಯೊಡನೆ ಸನ್ಮಾನ್ಯ ಸಂಧಾನವನ್ನು ಮಾಡಿಕೊಳ್ಳಲು ಎಲ್ಲ ಯೋಗ್ಯ ಉಪಾಯಗಳಿಂದ ಯತ್ನಿಸುವುದು ಸತ್ಯಾಗ್ರಹಿಯ ಧರ್ಮವಾದ್ದರಿಂದ, ಬ್ರಿಟಿಶರು ನಮಗೆ ಖಂಡತುಂಡಾಗಿ ನಿರಾಕರಣೆಯನ್ನು ತೋರಿಸಿದ್ದರೂ ಕಾಂಗ್ರೆಸು ಇನ್ನೂ ಸಂಧಾನಕ್ಕಾಗಿ ಪ್ರಯತ್ನಿಸುವುದು.

೪. ಖಾದಿಯ ಪ್ರಚಾರ ಮತ್ತು ಉಪಯೋಗ ಇವುಗಳಿಂದಲೂ, ಅಸ್ಪೃಶ್ಯತಾನಿವಾರಣೆಯಿಂದಲೂ ಶಾಸನಭಂಗ ಚಳವಳದ ವಾತಾವರಣವನ್ನು ಉಂಟುಮಾಡಬಹುದೆಂದು ವರ್ಕಿಂಗ್ ಕಮೀಟಿಯ ಅಭಿಪ್ರಾಯವಿದೆ.

ಮನುವಿನ ನೀತಿಮಾಹಾತ್ಮ್ಯವನ್ನೂ ಚಾಣಕ್ಯನ ರಾಜತಂತ್ರವನ್ನೂ ಸೇರಿಸಬೆಳಸುವ ಈ ಧೋರಣೆಗಾಗಿ ಹೆಚ್ಚಿಗೆ ಬರೆಯಬೇಕಾಗಿಲ್ಲ. ನಮ್ಮ ಅಭಿಪ್ರಾಯವನ್ನು ಒಲ್ಲ ಓದುಗರು ಮೇಲಿನ ಮಾತುಗಳನ್ನು ತರ್ಕದ ಒರೆಗೆ ಹಚ್ಚಿ ತಾವೇ ನೋಡಬೇಕೆಂದು ಬೇಡುವೆವು ಮಾತ್ರ.

ಸಿರಹಟ್ಟಿಯ ಕನ್ನಡಿಗರಿಗೆ ಜಯ!

ಸಿರಹಟ್ಟಿಯ ತಾಲ್ಲೂಕಿನ ಕನ್ನಡಿಗರು ಮಾತೃಭಾಷೆಯ ವಿಷಯಕವಾದ ತಮ್ಮ ಹಕ್ಕುಗಳನ್ನು ಸಾಧಿಸಿಕೊಳ್ಳಲು ಮಾಡಿದ ಚಟುವಟಿಕೆಯಲ್ಲಿ ಸಂಪೂರ್ಣವಾದ ಯಶಸ್ಸನ್ನು ಪಡೆದರು. ಮೊನ್ನೆಯ ತಾ. ೧೯–೧೦–೪೧ನೆಯ ದಿನ ಸಾಂಗಲಿಯ ಸರಕಾರದವರು ವಿಶೇಷ ಗ್ಯಾಝೆಟು ಹೊರಡಿಸಿ, ಸಿರಹಟ್ಟಿಯ ದಿವಾಣಿ ಕೋರ್ಟುಗಳಲ್ಲಿಯ ಎಲ್ಲ ವ್ಯವಹಾರವೂ ಕನ್ನಡದಲ್ಲಿಯೆ ನಡೆಯಬೇಕೆಂದು ಪ್ರಕಟಗೊಳಿಸಿರುವರು. ಮುಂದಾಳುಗಳು ಚಳವಳಿಮಾಡಿ ಕಾರ್ಯಸಾಧಿಸಿ ತಮ್ಮ ಕರ್ತವ್ಯವನ್ನು ಕೊನೆಗಾಣಿಸಿದರು. ವಿಚಾರಿಯಾದ ಸಾಂಗಲಿಯ ಸರಕಾರವೂ ಚಳವಳಿಯ ಬಿಸಿಯನ್ನರಿತು ತನ್ನ ಕರ್ತವ್ಯಪರಿಪಾಲನೆಗೆ ಸಿದ್ಧವಾಯಿತು. ಇನ್ನಿದೆ ಜನಸಾಮಾನ್ಯರ ಕರ್ತವ್ಯಭಾರ. ದೇವರು ವರಕೊಟ್ಟರೂ ಅದನ್ನು ಪಡೆದು

ಹಹಿಡಿಯಲಿಕ್ಕೆ ವಣಿಸುವ ಪೂಜಾರಿಗಳು ಜಗತ್ತಿನಲ್ಲಿ ಒಲ್ಲನೆಂದಿ. ಸಿರಹಟ್ಟಿ ತಾಲ್ಲೂಕಿನ ಕನ್ನಡಿಗರು ಕನ್ನಡದ ವಿಷಯದಲ್ಲೀಗ ಕರ್ತವ್ಯಚ್ಯುತರಾದರೆ ಸಾಕು; ಕೈಗೆ ಬಂದು ತುತ್ತನ್ನು ಕಳೆದುಕೊಳ್ಳುವ ಸಂದರ್ಭವಿರುವುದು. ಜನಸಾಮಾನ್ಯರನ್ನು ಯಾವ ಭಾಷೆಯೇನೆಂಬ ಹುಚ್ಚು ಔದಾರ್ಯದಿಂದ— ಮತ್ತೆ ಪರಭಾಷೆಯಲ್ಲಿಯೆ ವ್ಯವಹಾರ ನಡೆಯಿಸಲು ಇಚ್ಛಿಸುವ ಮುಂದಾಳುಗಳಿಗೇನು ನಮ್ಮಲ್ಲಿ ಕಡಿಮೆಯಿಲ್ಲ. ಅಂತಹರಿಂದ ಜಾಗ್ರತರಾಗಿರಬೇಕೆಂಬ ಒಳ್ಳೆಯ ಭಾವನೆಯಿಂದಲೆ ಸಿರಹಟ್ಟಿಯ ಕನ್ನಡ ಅಭಿಮಾನಿಗಳೊಬ್ಬರೂ ಸಾಂಗಲಿಯ ಪೈತ ಅಸೆಂಬ್ಲಿಯ ಸದಸ್ಯರೂ ಆದ ಶ್ರೀಮಾನ್ ಫಕೀರಪ್ಪಾ ಸಿದ್ದಪ್ಪಾ ಭೋರಸೆಟ್ಟಿಯವರು 'ಜಾಹೀರ ವಿನಂತಿ'ಯೊಂದನ್ನು ತೆಗೆದು ಜನಸಾಮಾನ್ಯರಿಗೆ ಮುನ್ನೆಚ್ಚರಿಕೆ ಕೊಟ್ಟಿದ್ದಾರೆ. ಆ ಮುನ್ನೆಚ್ಚರಿಕೆಯ ಕಡೆಗೆ ಎಲ್ಲರೂ ಲಕ್ಷ್ಯವನ್ನಿತ್ತು ತಂತಮ್ಮ ಕೋರ್ಟಿನ ವ್ಯವಹಾರವೆಲ್ಲ ಕನ್ನಡದಲ್ಲಿಯೆ ನಡೆಯುವಂತೆ ಜಾಗರೂಕರಾಗಿರಬೇಕು. ಸಂಸ್ಥಾನಗಳಲ್ಲಿಯ ಅನೇಕ ವಕೀಲರು, ಆವಶ್ಯಕವಿಲ್ಲವೆಂದು ಇದುವರೆಗೂ ಕನ್ನಡ ಕಲಿಯದವರೇ ಬಹು ಜನರಿರುವರು. ಅಂತಹರು ಸಿರಹಟ್ಟಿಯಲ್ಲಿಯೂ ಇಲ್ಲದಿಲ್ಲ. ಅಂತಹ ವಕೀಲರು ತಮ್ಮ ಅನುಕೂಲತೆಗಾಗಿ ಕೈಯಲ್ಲಿ ಸಿಕ್ಕ ಅಜ್ಞಾನಿ ಪಕ್ಷಕಾರರನ್ನು ವಂಚಿಸಿ, ಇದುವರೆಗಿನಂತೆ ಪರಭಾಷೆಯ ಕುದುರೆಯನ್ನೇ ಮುಂದೆ ದೂಡುವ ಸಂಭವವಿದೆ. ಇಂತಹ ಸೂಜಿಯನ್ನು ಮೂಲದಲ್ಲಿಯೆ ಮುರಿದು ಹಾಕುವದು ಒಳ್ಳೆಯದು; ಇಲ್ಲದಿದ್ದರೆ ಕನ್ನಡಿಗರ ಮನದ ಮೈಯಲ್ಲಿ ಹೊಕ್ಕ ಸೂಜಿಯಿದು ಯಾವಾಗ ಡಬ್ಬಣವಾಗಿ ಮೇಲಕ್ಕೆದ್ದೀತೆಂಬುದನ್ನು ಹೇಳಲಿಕ್ಕೆ ಬಾರದು. ಕನ್ನಡಿಗರ ಔದಾಸೀನ್ಯವೇ ಅವರ ಇಂದಿನ ಬೆಳಿಗೆಗೆ ಮುಳುವಾಗಿದೆಯೆಂಬುದು ಎಲ್ಲರ ಲಕ್ಷ್ಯದಲ್ಲಿರಲಿ!

ಸಂಪೂರ್ಣ ಶಹಪೂರ ತಾಲ್ಲೂಕೂ ತೇರದಾಳಮಹಲೂ ಅಚ್ಚ ಕನ್ನಡ ಪ್ರದೇಶವೆಂಬುದು ಸಾಂಗಲಿಯ ಸರಕಾರಕ್ಕೆ ಗೊತ್ತಿಲ್ಲದಿಲ್ಲ. ಜನಪಳಿ ಮಾಡಿದಾಗಲೇ ವಿಚಾರಮಾಡಬೇಕೆಂಬ ದೀರ್ಘಸೂತ್ರವೃತ್ತಿಯನ್ನು ಬಿಟ್ಟು ಸಾಂಗಲಿಯ ಸರಕಾರವು, ಸಿರಹಟ್ಟಿಯಲ್ಲಿಯಂತೆ ಇತರ ಭಾಗದ ಕನ್ನಡಿಗರ ಮಾತೃಭಾಷೆಯ ಹಕ್ಕನ್ನು ಸಮ್ಮತಿಸಿ, ತನ್ನ ಕರ್ತವ್ಯ ಭಾರವನ್ನಿಳುಹಬೇಕು. ಅಲ್ಲಿಯ ಜನರೂ ಸಿರಹಟ್ಟಿಯವರಂತೆ ಜಾಗ್ರತರಾಗಿ ತಮ್ಮ ಕಾರ್ಯಸಾಧಿಸಿಕೊಳ್ಳಬೇಕು.

ಬೋರ್ಡ್ ಆಫ್ ಇಂಡಿಯನ್ ಮೆಡಿಸಿನ್

ಎಂದರೇನು ಗೊತ್ತೇ? ಆಯುರ್ವೇದ, ಯುನಾನಿ ವೈದ್ಯಕ ಮೊದಲಾದುವುಗಳ ಪ್ರಚಾರಕ್ಕಾಗಿ—ಕಳೆದ ನವ್ಹಂಬರ್ ತಿಂಗಳಲ್ಲಿ—ಮುಂಬಯಿಯ ಕಾಂಗ್ರೆಸ್ ಮಂತ್ರಿಮಂಡಲವು ನಿಯಮಿಸಿದ ಸಮಿತಿಯೊಂದಿದು. ಈ ಬೋರ್ಡಿನಲ್ಲಿ, ಗುಜರಾತ, ಮಹಾರಾಷ್ಟ್ರ ಪ್ರಾಂತಗಳಿಂದ ಆರಿಸಿದ ಆಯುರ್ವೇದ ವೈದ್ಯರೂ ಹಕೀಮರೂ ಸಾಕಷ್ಟು ಪ್ರಾತಿನಿಧ್ಯಗಳನ್ನು ದೊರಕಿಸಿದ್ದಾರೆ. ಕರ್ನಾಟಕದ ಪಾಲಿಗೆ ಒಂದೇ ಒಂದು ಸ್ಥಳ ಬಂದಿದೆ. ಆ ಒಂದೇ ಒಂದು ಸ್ಥಳಕ್ಕೆ ನಿಯಮಿತರಾದವರೂ ಮಿಕ್ಕ ಪ್ರಾಂತ್ಯದ ಸದಸ್ಯರ ತೂಕಕ್ಕೆ ಇಳಿಯುವಂತಹರಲ್ಲವೆಂಬ ಮಾತೂ ಅಲ್ಲಲ್ಲಿ ಕಿವಿಗೆ ಕೇಳುತ್ತಲಿದೆ. ನಿಜವಾಗಿ ನೋಡಿದರೆ ಸದ್ಯ ಈ ಬೋರ್ಡಿನಲ್ಲಿ ಆರಿಸಿ ಬಂದಿರುವ ಶ್ರೀಮಾನ್ ಜಯದೇವ ಕುಲಕರ್ಣಿಯವರು ಆಯುರ್ವೇದದ ಅನುಭವದ ಪ್ರಾಶಸ್ತ್ಯಕ್ಕಿಂತಲೂ ರಾಷ್ಟ್ರೀಯ ಸಭೆಯ ಚಳವಳಿಯಲ್ಲಿ ಸೇರಿ ಶಿಕ್ಷೆ ಬಿಕ್ಷೆ ಅನುಭವಿಸಿದ ಪ್ರಾಶಸ್ತ್ಯದ ಮೇಲೆಯೆ ಆರಿಸಿಬಂದಿರುವರೆಂದು ನಮಗೆ ಎನಿಸುವುದು. ಇಲ್ಲದಿದ್ದರೆ ಕರ್ನಾಟಕದಲ್ಲಿ ಶ್ರೀ. ಜಯದೇವ ಕುಲಕರ್ಣಿಯವರ ಆಯುರ್ವೇದದ ಅನುಭವದ ಜ್ಞಾನ ಎಲ್ಲಿ ಪ್ರಕಟವಾಗಿದೆ? ಅವರು ಮಾಡಿದ ಪ್ರಯೋಗಗಳೇನು? ಕಂಡುಹಿಡಿದ ಸಂಶೋಧನೆಗಳಾವುವು ಬರೆದಿರುವ ಗ್ರಂಥಗಳೇನಾದರೂ ಇವೆಯೆ? ಶ್ರೀ. ಜಯದೇವ ಕುಲಕರ್ಣಿಯವರ ಹೆಸರು ಉತ್ತರಕರ್ನಾಟಕದಲ್ಲಿ ಕೆಲವು ಜನರಿಗೊತ್ತಿದ್ದರೆ ಅವರು ದೇಶಭಕ್ತರೊಬ್ಬರೆಂದೇ ಗೊತ್ತು. ವೈದ್ಯರು ಆಹುದೆಂಬುದು ಮೊನ್ನೆ ಮೊನ್ನೆ ಬೋರ್ಡಿನಲ್ಲಿ ಅವರ ಹೆಸರು ಹೊಳೆದಾಗಲೆ ಗೊತ್ತಾದುದು. ಬೋರ್ಡಿನಲ್ಲಿರುವ ಮಿಕ್ಕವರ ಪ್ರಾಂತ್ಯಗಳ ಆಯುರ್ವೇದ ವೈದ್ಯರನ್ನು ನೋಡಿದರೆ ಇಂದ ಗುಜರಾತ್-ಮಹಾರಾಷ್ಟ್ರ ಪ್ರಾಂತ್ಯಗಳಲ್ಲಿ ಒಂದೊಂದು ಗಣ್ಯವಾದ ಸ್ಥಾನವನ್ನು ಪಡೆದವರವರು. ಏಕೆ? ಕರ್ನಾಟಕದಲ್ಲಿ ಅವರನ್ನು ಸರಿತೂಗುವ ಆಯುರ್ವೇದಾಭ್ಯಾಸಿಗಳೂ ವೈದ್ಯರು ಇಲ್ಲವೇ ಇಲ್ಲವೋ? ಇದ್ದಾರೆ, ಆದರೆ ಅವರನ್ನಾರು ಕೇಳಬೇಕು. ಕರ್ನಾಟಕದಿಂದ ಆಯ್ದುಕೊಡುವುದಕ್ಕೆ ಸಲಹೆಕೊಡುವವರ ಪರೀಕ್ಷೆಯಲ್ಲಿ ಅವರು ಇಳಿಯಬೇಕಲ್ಲ! ಅವರು ಅಪೇಕ್ಷಿಸುವ ಪ್ರಶಸ್ತಿ ಇವರಿಗಿರದಿದ್ದರೆ ಇವರ ಆಯುರ್ವೇದ ಪಾಂಡಿತ್ಯವನ್ನು ತೆಗೆದುಕೊಂಡೇನು ಮಾಡುವುದು? ಆ ಸಲಹೆಗಾರರು ಅಪೇಕ್ಷಿಸುವ ಪ್ರಾಶಸ್ತ್ಯವಿದ್ದರೆ ಮಾತ್ರ ಆಯುರ್ವೇದಸ್ಕೂಲಿನ ವಿದ್ಯಾರ್ಥಿಯೊಬ್ಬನೂ ಆ ಶಾಸ್ತ್ರದ ಪೂರ್ಣಪಾಂಡಿತ್ಯಪಡೆ ನಿಲ್ಲುವ. ಕಾಂಗ್ರೆಸ್ ಮಂತ್ರಿಮಂಡಲ ಕರ್ನಾಟಕಕ್ಕೆ ಸಲ್ಲಿಸ ಆಡಳಿತದ ಯಾವ ಪ್ರಾತಿನಿಧ್ಯದಲ್ಲಿಯೂ ಇದೇ ರೀತಿಯನ್ನು ನಾವು ನೋಡಬಹುದಾಗಿದೆ. ಹೀಗಾದುದು ಕಾಂಗ್ರೆಸ್ ಮಂತ್ರಿಮಂಡಲದವರ ತಪ್ಪಲ್ಲ; ಅದಕ್ಕೆ ಸಲಹೆಕೊಡುವ ನಮ್ಮ ನಾಡನಾಯಕ ಸಿಂಹಗಳ ತಪ್ಪು. ಈ ತಪ್ಪಿನ ಫಲವನ್ನು ನಾವಿಂದು ಅನುಭವಿಸಿಯೇ ತೀರಬೇಕು.

ಲಕ್ಷ್ಮೀ ವಸ್ತ್ರಭಾಂಡಾರ ಧಾರವಾಡ

(ಮೋಟಾರ್ ಸ್ಟ್ಯಾಂಡಿನ ಬಳಿಯಲ್ಲಿ)

ನಮ್ಮಲ್ಲಿ ಎಂತಹ ಬಟ್ಟೆ ಬೇಕೋ ಅಂತಹ ಬಟ್ಟೆ ಯೋಗ್ಯವಾದ ಬೆಲೆಗೆ ಸಿಕ್ಕುವುದು. ಹೊಸ ಹೊಸ ಫ್ಯಾಶನೇಬಲ್ ಬಟ್ಟೆ ಬೇಕಾದವರು ಇಲ್ಲಿಗೇ ಬರಬೇಕು.

ಪ್ರಾಮಾಣಿಕತನವೇ ನಮ್ಮ ಶೀಲ!

ಕರ್ನಾಟಕದಲ್ಲಿ ಹೊಸ ಕೈಗಾರಿಕೆ !

ಚೌಕಟ್ಟು ಕಂಬಿಗಳು ★ ★ ★ **ಪದರದ ಹಲಗೆಗಳು**

Picture Mouldings **Plywood**

ಈ ಕೈಗಾರಿಕೆಯನ್ನು ಕೂಡಲೆ ಆರಂಭಿಸಲು, ಅಖಿಲಕರ್ನಾಟಕದಲ್ಲಿ ಕಾರ್ಯಮಾಡುವ ಹಂಚಿಕೆಯಿಂದ ಅವಶ್ಯವಾದ, ಜನಬಲ, ಧನಬಲ, ಶಾಸ್ತ್ರೀಯ ಬಲಸಂಗ್ರಹ ಪಡೆದು ಆರಂಭವಾಗಿರುವ ಕಂಪನಿ. !

ಮೈಸೂರು ಆರ್ಟ್ಸ್ ಫ್ರೇಂ ಆ್ಯಂಡ್ ಉಡ್- ಇಂಡಸ್ಟ್ರೀಸ್ ಲಿಮಿಟೆಡ್.

(ಕಂಪನಿಯು ೨೫-೯-೧೯೪೭ ರಲ್ಲಿ ಮೈಸೂರು ಸರಕಾರದಲ್ಲಿ ಸನದು ಪಡೆದಿದೆ.)

ಅಲ್ಲದೆ ಪ್ರಾಸ್‌ಪೆಕ್ಟಸ್ಸನ್ನು ಬೊಂಬಾಯಿ ಮತ್ತು ಮದರಾಸು ಸರಕಾರದ ಜಾಯಿಂಟ್ ಸ್ಟಾಕ್ ಕಂಪನಿ ರಿಜಿಷ್ಟ್ರಾರ್ರವರಲ್ಲಿ ಫೈಲು ಮಾಡಿದೆ.

ಬಂಡವಾಳ ೩,೦೦,೦೦೦ ರೂಪಾಯಿಗಳು. ಈ ಬಂಡವಾಳವನ್ನು (ನಿಯಮಕ್ಕನುಸಾರ), ಶೇಕಡ ೫ ರಂತೆ ಡಿವ್ಹಿಡೆಂಡ್ ಭರವಸೆಯುಳ್ಳ ೧೦ ರೂಪಾಯಿನ ೧೦,೦೦೦ ವಿಶೇಷ ಷೇರುಗಳಾಗಿಯೂ ೧೦ ರೂಪಾಯಿನ ೨೦,೦೦೦ ಸಾಮಾನ್ಯ ಷೇರುಗಳಾಗಿಯೂ ವಿಂಗಡಿಸಲಾಗಿದೆ.

ವಿಶೇಷ ಷೇರುಗಳ ಪೂರ್ತಾ ಹಣ ಅರ್ಜಿಯೊಡನೆ ಕೊಡತಕ್ಕದ್ದು. ಸಾಮಾನ್ಯ ಷೇರುಗಳಿಗೆ ಅರ್ಜಿಯೊಡನೆ ೩ ರೂಪಾಯಿ, ವಿಂಗಡವಾದನಂತರ ೨ ರೂಪಾಯಿ; ಉಳಿದ ೫ ರೂಪಾಯಿಗಳನ್ನು ಎರಡು ಕಂತುಗಳಲ್ಲಿ ಕೊಡತಕ್ಕದ್ದು.

೧. **ಎಲ್ಲಬಗೆಯ ಚೌಕಟ್ಟುಕಂಬಿಗಳ ತಯಾರಿಕೆ ಹಿಂದುಸ್ಥಾನಕ್ಕೆ ಮೊದಲನೆಯದು.** ಸುಮಾರು ಐದು ಲಕ್ಷ ರೂಪಾಯಿನ ಚೌಕಟ್ಟುಕಂಬಿಗಳು ಪ್ರತಿ ವರುಷ ಹೊರಗಿನಿಂದ ಬರುತ್ತಿತ್ತು.

೨. **ಪದರದ ಹಲಗೆಗಳೂ** ಇದರಿಂದಾದ ಟೀಪೆಟ್ಟಿಗೆಗಳೂ ಸುಮಾರು ಎಂಭತ್ತು ಲಕ್ಷದಷ್ಟು ಹಿಂದು-ಸ್ಥಾನಕ್ಕೆ ಪರರಾಷ್ಟ್ರಗಳಿಂದ ಬರುತ್ತಿತ್ತು

ಈ ಎರಡು ಕೈಗಾರಿಕೆಗಳಿಗೂ ಬೇಕಾದ ತರಹೆಯ ಮರಗಳು ಕನ್ನಡನಾಡಿನಲ್ಲಿ ಅಪಾರವಾಗಿವೆ.

ಚೌಕಟ್ಟುಕಂಬಿಗಳ ಕೈಗಾರಿಕೆಯನ್ನು ಈ ಕೂಡಲೇ ಬೆಂಗಳೂರಿನಲ್ಲಿ ಆರಂಭಿಸಿ, ಕ್ರಮೇಣ ಈ ಕೈಗಾರಿಕೆಯನ್ನು ಕನ್ನಡನಾಡಿನ ಹಳ್ಳಿಯ ಕೈಗಾರಿಕೆಯನ್ನಾಗಿ ಮಾಡುವ ಆಶಯವು ವ್ಯವಸ್ಥಾಪಕರಿಗುಂಟು !

ಪದರದ ಹಲಗೆಗಳನ್ನು ಕಾರವಾರಜಿಲ್ಲೆಯ ಹೊನ್ನಾವರದ ತಾಲ್ಲೂಕು ಗೇರುಸೊಪ್ಪೆಯ ಬಳಿ ಸ್ಥಾಪಿಸಲಾಗುವುದು. ಮೂಲ ಕಂಪನಿಯಲ್ಲಿ ಈ ಕೈಗಾರಿಕೆಗೆ ಒಂದೂವರೆ ಲಕ್ಷ ರೂಪಾಯಿ ಮುಡುಪಾಗಿ ಇಟ್ಟು, ಅವಶ್ಯಕ ಕಂಡುಬಂದಲ್ಲಿ ಒಂದು ಆಧೀನ ಕಂಪನಿಯನ್ನಾರಂಭಿಸಿ, ಅದರ ಸಹಾಯದಿಂದ ಕೈಗಾರಿಕೆಯನ್ನು ನಡೆಯಿಸಲಾಗುವುದು.

ಮೈಸೂರು ಸಕ್ಕರೆಯ ಕಾರ್ಖಾನೆಯ ಷೇರು ಒಂದಕ್ಕೆ ಮೂರರಷ್ಟು ಬೆಲೆ ಏರಿರುವುದು ನಿಮ್ಮ ನೆನಪಿನಲ್ಲಿರಲಿ !

★ ಅಖಿಲಕರ್ನಾಟಕದ ಬೆಂಬಲ !

★ ಅನುಭವಿಗಳೂ ಗಣ್ಯರೂ ಆದ ಡೈರೆಕ್ಟರುಗಳು, ಸಮರ್ಥರಾದ ಶಾಸ್ತ್ರಜ್ಞರ ಸಲಹೆ.

★ ಮಿತವ್ಯಯದ ಆಡಳಿತ ಇವೆಲ್ಲ ಕಂಪನಿಗೆ ಉಂಟು !

ಹೆಚ್ಚು ವಿವರವನ್ನರಿಯಲು ಪ್ರಾಸ್‌ಪೆಕ್ಟಸ್ಸಿಗೆ ಬರೆಯಿರಿ.

ಕೂಡಲೇ ಬರುವ ದರಖಾಸ್ತುಗಳಿಗೆ ಮಾತ್ರ ಭರವಸೆ ಕೊಡಬಹುದು.

ಮ್ಯಾನೇಜಿಂಗ್ ಏಜಂಟರು :

ಶ್ರೀನಿವಾಸ ಆ್ಯಂಡ್ ಕಂಪನಿ,

ಕಲಾಮಂದಿರ, ಹಲಸೂರು ಗೇಟು ಬೆಂಗಳೂರು ನಗರ.

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾ ರ ವಾ ಡ.

◆ ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

◆ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕರೀತಿ ನಡೆದು ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

◆ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಳಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸುವುದರಿಂದ ಎಲ್ಲರ ಮೆಚ್ಚುಗೆಗೂ ತಕ್ಕುದಾಗಿದೆ.

◆ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೆ ಬೇಕು

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು :—

ಎಮ್. ಗೋವರ್ಧನರಾವ್ ಮ್ಯಾನೇಜರ್

The United Karnatak Insurance Co Ltd., DHARWAR.

ಪಂಚಗಣಿ ಹಿಂದೂ ಹೈಸ್ಕೂಲ್

ಪಂಚಗಣಿ, ಸಾತಾರಾ ಜಿಲ್ಲೆ

ಹಿಂದೂ ಬಾಲಕರಿಗಾಗಿ ವಸತಿಗೃಹವುಳ್ಳ, ಮಾದರಿಯ ಮಾಧ್ಯಮಿಕ ಶಾಲೆಯಿದು. ಮಹಾಬಳೇಶ್ವರದ ಬಳಿಯಲ್ಲಿ ಸಮುದ್ರಮಟ್ಟದಿಂದ ೪೭೦೦ ಅಡಿ ಎತ್ತರದ ಮೇಲೆ- ಆಹ್ಲಾದಕರವಾದ ಹವೆಯಲ್ಲಿಯೂ, ಚಿತ್ತಾಕರ್ಷಕವಾದ ಪ್ರದೇಶದಲ್ಲಿಯೂ ಈ ಶಾಲೆಯು ಸ್ವತಂತ್ರ ಕಟ್ಟಡವಿದೆ. ಪ್ರಾಥಮಿಕ ಶಿಕ್ಷಣದಿಂದ ಮ್ಯಾಟ್ರಿಕಿನ ವರೆಗೆ ಇಲ್ಲಿ ಶಿಕ್ಷಣವು ದೊರೆಯುವುದು. ಹೊಸ ಟರ್ಮು ಮೇ ತಿಂಗಳ ೧ನೆಯ ತಾರೀಖಿನಿಂದ ಪ್ರಾರಂಭವಾಗುವುದು. ಕನ್ನಡ ಕಲಿಸುವ ಏರ್ಪಾಡೂ ಇದೆ. ಮಕ್ಕಳನ್ನು ಬೇಕಾದಾಗ ಕಳುಹಿದರೂ ಪ್ರವೇಶ ದೊರೆಯುವದು. ವಿವರಗಳಿಗಾಗಿಯೂ ಪ್ರಾಸ್ಪೆಕ್ಟಸ್ಸಿಗಾಗಿಯೂ ಸಂಸ್ಥೆಯ ಸುಪರಿಂಟೆಂಡೆಂಟರಿಗೆ ಬರೆದುಕೊಳ್ಳಿರಿ.

ಹೆಣಿಗೆ-ಕಸೀದೆ ಕಲಿಯಿರಿ!

ಹೆಣ್ಣುಮಕ್ಕಳಲ್ಲಿ ಹೆಣಿಗೆ-ಕಸೀದೆಗಳ ಅಭಿರುಚಿ ಹೆಚ್ಚುವುದರಿಂದ, ಅವರಲ್ಲಿ ಅಚ್ಚುಕಟ್ಟುತನವು ಬೆಳೆಯುವುದು!
ಅಚ್ಚುಕಟ್ಟುತನದಿಂದ ಅವರ ಚೆಲುವು-ಚೆದುರು ಇಮ್ಮಡಿಗೊಳ್ಳುವವು!!

ಹೆಣಿಗೆ-ಕಸೀದೆ-ಎಂಬ್ರಾಯಿಡರಿ ಕೆಲಸಗಳ ಎಲ್ಲ ಸಲಕರಣೆಗಳೂ, ಬೇರೆ ಸ್ಟೇಶನರಿ ಮತ್ತು
ಪರಫ್ಯೂಮರಿ ವಸ್ತುಗಳೂ ಬೇಕಾದರೆ ಇಲ್ಲಿಗೇ ಬನ್ನಿರಿ!

ಸಿಟಿ ಸ್ಟೋರ್ಸ್, ಮಾರ್ಕೆಟ್ ರೋಡ್-ಧಾರವಾಡ.

Printer K. R. Bhise Karnatak Printing Works, Dharwar. Edited and published by M. G. Patil at the Jayanti Office, Dharwar.